ರಿ. ನಂ. No M 3618 — Estd 1921 ಸ್ಥಾಪನ — 31ನೇ ವರ್ಷ — 5-10-1950
LICENCE No. 31
Licensed to Post without Prepayment
Founder, Sri A. B. Shetty,
Minister for Agriculture & Veterinary

ವರ್ಷ ೩೧ ವಾರ ೫
NAVAYUGA WEEKLY
POST BOX NO. 22
UDIPI, S. K.
Vol 31 No 5

ಗಾಂಧಿಜಿ ಈಗ ಇರುತ್ತಿದ್ದರೆ-

ಇದೇ ತಾ. 2ನೇ ಸೋಮವಾರಕ್ಕೆ ಎಂಭತ್ತೊಂದು ವರುಷ ತುಂಬಿ ಎಂಭತ್ತೆರಡನೆ ವರುಷ ಹಿಡಿಯುವ ಹಣ್ಣು ಮುದುಕನಾಗುತ್ತಿದ್ದರು, ಆದರೆ ತನ್ನ ಪ್ರಾಯದಲ್ಲಿ ದಶಮಾನಗಳು ಹೆಚ್ಚಿದಂತೆ ತನ್ನ ಉತ್ಸಾಹ, ಚಟುವಟಿಕೆಗಳೂ ದಶಪಾಲು ಹೆಚ್ಚುವ ಸಂಪ್ರದಾಯಾನುಸಾರವಾಗಿ ಸದಾ ಕಾಲವೂ ಕಾರ್ಯ ಪ್ರವೃತ್ತರಾಗುತ್ತಿದ್ದರು.

ಕಾಂಗ್ರೆಸನ್ನೇ 'ಲೋಕ ಸೇವಾ ಸಂಘ'ವಾಗಿ ಮಾರ್ಪಡಿಸುತ್ತಿದ್ದರು, ಅದು ಅಸಾಧ್ಯವಾಗುತ್ತಿದ್ದರೆ ಕಾಂಗ್ರೆಸಿನ ಗೊಡವೆಯನ್ನು ಬಿಟ್ಟು ಯಾವುದಾದರೊಂದು ಹಳ್ಳಿಯಲ್ಲಿ ತನ್ನ ಸ್ವಂತ ಲೋಕಸೇವಾಸಂಘವನ್ನು ಸ್ಥಾಪಿಸಿಕೊಳ್ಳುತ್ತಿದ್ದರು.

ಋಜು ಸ್ವಭಾವ, ಸದ್ವರ್ತನೆ, ಮತ್ತು ಸದಾ ಶ್ರಮಕ್ಕೆ ಹೆಸರಾದ ಸಾಗುವಳ್ಳಿಗಾರ ರೈತನೊಬ್ಬನಿಗೆ ಭಾರತದ ಪ್ರಧಾನ ಮಂತ್ರಿ ಪಟ್ಟವನ್ನು ಬಿಟ್ಟುಕೊಟ್ಟು, ಆತನ ಕಾರ್ಯದರ್ಶಿ ಕಾರ್ಯಭಾರ ನಿರ್ವಹಿಸುವಂತೆ ಪಂಡಿತ ನೆಹರುಗಳನ್ನು ಕೇಳಿಕೊಳ್ಳುತ್ತಿದ್ದರು.

ಅಸ್ಸಾಮ್ ಭೂಕಂಪ ಮತ್ತು ಉತ್ತರ ಭಾಗದ ಇತರ ಕಡೆಗಳಲ್ಲಾದ ನೆರೆಹಾವಳಿಯಂತಹ ಪೀಡಿತ ಸ್ಥಳಗಳಿಗೆ ಇಂದಿನಂತೆ ಸೇನೆಗಳು ಹೋಗುವ ಬದಲಿಗೆ ತನ್ನ ಲೋಕ ಸೇವಾಸಂಘದ ಸದಸ್ಯರು ಮತ್ತು ಸ್ವಯಂಸೇವಕರು ಹೋಗುವಂತೆ ನಿರ್ದೇಶಿಸುತ್ತಿದ್ದರು.

ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ಹಠ ಹಿಡಿದು ರದ್ದುಪಡಿಸಿ, ಎಲ್ಲೆಲ್ಲಿ ಅವುಗಳ ಕಳ್ಳಸಂತೆ ನಡೆಯುವುದೋ ಅಲ್ಲಲ್ಲಾ ತನ್ನ ಲೋಕಸೇವಾಸಂಘದ ಸ್ವಯಂಸೇವಕರು ಅನ್ನ ಸತ್ಯಾಗ್ರಹವನ್ನು ಕೈಕೊಂಡಾದರೂ ಅದನ್ನು ನಿಲ್ಲಿಸುವಂತೆ ಮಾಡುತ್ತಿದ್ದರು

ಸಂಯುಕ್ತ ರಾಷ್ಟ್ರಸಂಘದ ಈಬಾರಿಯ ಜನರಲ್ ಎಸೆಂಬ್ಲಿಗೆ ಒಂದೋ ಆಮಂತ್ರಿಸಲ್ಪಟ್ಟು, ಇಲ್ಲವೇ ತಾನಾಗಿ ಅಪೇಕ್ಷಿಸಿ ತೆರಳಿ, ಹೃದಯ ಪರಿವರ್ತನಾ ತತ್ವದ ಮೇಲೆ ಅಲ್ಲಿ ಅಮೋಘಭಾಷಣ ಕೊಟ್ಟು ಬರುತ್ತಿದ್ದರು

ಕೊರಿಯಾ ಯುದ್ಧಾರಂಭ ಪೂರ್ವದಲ್ಲಿ ಕಾಲದಲ್ಲಿ ತಿಳಿದು ಬರುತ್ತಿದ್ದರೆ, ತಾನು ಸ್ವತಃ ತನ್ನ 'ಲೋಕ ಸೇವಾಸಂಘ'ದ ಸ್ವಯಂಸೇವಕ ದಳದ ಮುಂದಾಳಾಗಿ ನಡೆಯಿಸಿಕೊಂಡು ಹೋಗಿ, ಗೆರೆ ದಾಟಿ ದಕ್ಷಿಣಕ್ಕೆ ಹೆಜ್ಜೆಯಿಡದಂತೆ 38ನೇ ಮಧ್ಯಾಂತರ ಗೆರೆಯಲ್ಲಿ ಉತ್ತರ ಕೊರಿಯದ ಸೇನೆಗಳೆದುರು ಸತ್ಯಾಗ್ರಹ ಹೂಡುತ್ತಿದ್ದರು. ಯುದ್ಧದ ಈಗಿನ ಸ್ಥಿತಿಯಲ್ಲಿ, ಅದೇ 38ನೇ ಗಡಿಗೆರೆಯ ಒಳಿಯಲ್ಲಿ ಸಂಯುಕ್ತ ರಾಷ್ಟ್ರ ಸೇನೆಗಳು ಉತ್ತರಕ್ಕೆ ಹೆಜ್ಜೆಯಿಡದಂತೆ ತಡೆಯಲು ಸತ್ಯಾಗ್ರಹ ಮಾಡುತ್ತಿದ್ದರು.

ಚರಕಾ ತಿರುಗಿಸುವ ಗಾಂಧಿ, ದಂಡೀಯಾತ್ರೆಯ ಗಾಂಧಿ, ಬರೆಯುವ ಗಾಂಧಿ, ಉಪ್ಪು ಹೆಕ್ಕುವ ಗಾಂಧಿ ನೆಹರುಗಳೊಡನೆ ನಗೆಯಾಡುವ ಗಾಂಧಿ, ಈ ಭಾವ ಚಿತ್ರಗಳಿಗಿಂತ ಹೆಚ್ಚಾಗಿ ಗೋಪ್ಪರದ ಟುಕ್ಕ ಹೊತ್ತ ಗಾಂಧಿ, ನೇಗಿಲು ಹಿಡಿದಿರುವ ರೈತನೊಡನೆ ನಗುತ್ತಾ, ಹೆಜ್ಜೆಯಿಡುವ ಗಾಂಧೀ ಭಾವ ಚಿತ್ರಗಳು ಈ ಕಾಲದಲ್ಲಿ ಮನೆಮನೆಯಲ್ಲಿ ನೇತಾಡುತ್ತಿದ್ದವು. 'ಅಧಿಕ ಆಹಾರ ಬೆಳವಣಿಗೆಗೆ' ಬೇರೆಲ್ಲಾ ಪ್ರಚಾರಕ್ಕಿಂತ ಹೆಚ್ಚಿನ ಉತ್ತೇಜನಗಳನ್ನು ಈ ಭಾವ ಚಿತ್ರಗಳೇ ಈಯುತ್ತಿದ್ದವು

ಈಗ ಢಂಬಾಚಾರಿಗಳು, ಕಳ್ಳಸಂತೆವಾಲರು ಮತ್ತು ವಿವಿಧ ವರ್ಗದ ಸ್ವಾರ್ಥಿಗಳು ಸ್ವಕಾರ್ಯ ಸಾಧನೆಗಾಗಿ ಉಚ್ಚರಿಸುತ್ತಿರುವ ಗಾಂಧೀ ನಾಮವು ಹೆಚ್ಚಾಗಿ ರೈತರುಗಳಿಂದಲೇ ಈ ಕಾಲದಲ್ಲಿ ಜಪಿಸಲ್ಪಡುತ್ತಿದ್ದಿತು; ಗಾಂಧೀಜಿ ತಮ್ಮವರೆಂಬ ಒಂದೇ ಕಾರಣದಿಂದ ಮಿಕ್ಕೆಲ್ಲವನ್ನೂ ಬಹುಮಟ್ಟಿಗೆ ಮರೆತು ರೈತರು ಸ್ವಂತ ಪ್ರೇರಣೆಯಿಂದ ಆಹಾರೋತ್ಪತ್ತಿಯನ್ನು ಹೆಚ್ಚಿಸುವಂತಾಗುತ್ತಿತ್ತು

ಕಾಂಗ್ರೆಸು ಲೋಕ ಸೇವಾ ಸಂಘವಾಗಿ ಮಾರ್ಪಡುತ್ತಿದ್ದರೂ, ಕಾಂಗ್ರೆಸನ್ನು ಬಿಟ್ಟೇ ಗಾಂಧಿಜೀಯ ಲೋಕ ಸೇವಾ ಸಂಘ ಬೇರೆ ಇರುತ್ತಿದ್ದರೂ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧೆಯೆಂಬುದಿರುತ್ತಿರಲಿಲ್ಲ; ಮೊದಲನೆಯದಾಗುತ್ತಿದ್ದರೆ ಗಾಂಧಿಜೀ ಸೂಚಿಸಿದ ನಿಷ್ಕಾಮಕರ್ಮ ವೀರರು ಅವಿರೋಧವಾಗಿ ಆರಿಸಲ್ಪಡುತ್ತಿದ್ದರು ; ಎರಡನೆಯದಾಗುತ್ತಿದ್ದರೆ, ಕಾಂಗ್ರೆಸ್ ಅಧ್ಯಕ್ಷಸ್ಥಾನದ ಆಕರ್ಷಣವೇ ಕಳೆದು ಹೋಗಿ ಯಾರೂ ಮೇಲಾಡದಂತಾಗುತ್ತಿದ್ದಿತು ನೆಹರೂ-ಟಂಡನ್ ಸಮಸ್ಯೆಯಂತಹದೆಂದಿಗೂ ಹುಟ್ಟಿಕೊಳ್ಳುತ್ತಿದ್ದಿಲ್ಲ.

ತನ್ನ ಅಂಗಿಯನ್ನು ತಾನೇ ಹೊಲಿದುಕೊಳ್ಳುವ ಅಭ್ಯಾಸವಿರುವ ಹೈದರಾಬಾದ್ ನಿಜಾಮರಿಂದಾರಂಭಿಸಿ, ಅಧಿಕಾರರಹಿತ ಆಶ್ರಿತ ರಾಜಲ್ಲರೆಲ್ಲರೂ ಇಷ್ಟರಲ್ಲೇ ಚರಕ ಅಥವಾ ತಕ್ಲೀ ಪ್ರವೀಣರಾಗುತ್ತಿದ್ದರು, ಕೆಲವು ರಾಜರು ಗಾಂಧೀಜೀಯ ಆಶ್ರಮವಾಸಿಗಳೇ ಆಗುತ್ತಿದ್ದರು.

ರಾಷ್ಟ್ರ-ರಾಷ್ಟ್ರಗಳೊಳಗಿನ ವಿವಾದಗಳಿಂದಾರಂಭಿಸಿ, ನೆರೆಮನೆ ಕಾಳಗಗಳ ವರೆಗಿನ ಮತ್ತು ಶಸ್ತ್ರಾಸ್ತ್ರ ಸಂಗ್ರಹಗಳಿಂದಾರಂಭಿಸಿ ಹುಲ್ಲು ಸಂಗ್ರಹದ ವರೆಗಿನ ಸಮಸ್ಯೆಗಳಿಗುತ್ತರವನ್ನಪೇಕ್ಷಿಸಿ ಈ ಕಾಲದಲ್ಲಿ ಗಾಂಧಿಜೀಯ ಹಳ್ಳೀ ಆಶ್ರಮಕ್ಕೆ ದಿನಕ್ಕೆಷ್ಟು ಸಹಸ್ರ ಪತ್ರ ಮತ್ತು ತಂತಿಗಳು ಬರುತ್ತಿದ್ದುವೋ! ಲೋಕ ಮತದ ಒತ್ತಾಯಕ್ಕೋಸ್ಕರಗಾಗಿ ಒಂದು ಬಾರಿಯಾದರೂ ಟ್ರುಮೆನ್, ಅಟ್ಲಿ, ಸ್ಟಾಲಿನ್ ತ್ರಿಮೂರ್ತಿ ಸಮ್ಮೇಳನವು ಗಾಂಧಿಜೀಯ ಗ್ರಾಮಾಶ್ರಮದಲ್ಲಿ ಸೇರುತ್ತಿದ್ದಿತು

ಅಮೆರಿಕ, ಬ್ರಿಟನ್, ಇಂಡೋನೇಶಿಯಾ ಮೊದಲಾದ ದೇಶಗಳಿಗೆ ಮುಂದಾಗಿ ನೆಹರು, ಆ ಮೇಲೆ ಲಿಯಾಕತ್ ಸಂಚಾರ ಹೋಗುವ ಬದಲಿಗೆ ನೆಹರು ಲಿಯಾಕತರು ಜತೆಯಾಗಿಯೇ ತಂತಮ್ಮ ದೇಶ ಬಿಡಬೇಕಲ್ಲದೆ ಒಬ್ಬೊಬ್ಬರೊಂದೊಂದು ಬಾರಿ ಹೊರಡಲೇಬಾರದೆಂದು ಗಾಂಧಿಜೀ ಹಠ ಹಿಡಿದು ಸಾಧಿಸುತ್ತಿದ್ದರು

ಅರ್ಜುನನನ್ನು ಯುದ್ಧಕ್ಕೆ ಪ್ರೇರೇಪಿಸಿದ-ಗೀತಾವಚನಗಳನ್ನು ಭಾರತದ ಸೈನಿಕರಿಗೆ ಬೌದ್ಧಿಕ ಶಿಕ್ಷಣಕ್ಕಾಗಿಯೂ, ಹೊಲ ಸಾಗುವಳ್ಳೀ ದುಡಿತವನ್ನು ಅವರ ದೈಹಿಕ ತರಬೇತಿಗಾಗಿಯೂ ಇಡಿಸುತ್ತಿದ್ದರು.

ಉಚ್ಚಾಧಿಕಾರಿಗಳಾರೂ ನೂರು ಹಳ್ಳಿಗಳಲ್ಲಿ ಸುತ್ತಾಡಿದ ವಿನಹ ಒಂದು ಪಟ್ಟಣದೊಳಗೆ ಕಾಲಿಡಬಾರದೆಂಬ ನಿರ್ಬಂಧ ಹಾಕಿಸುತ್ತಿದ್ದರು.

ಸರಕಾರದಿಂದ ಜನತೆಯೀಗ ಅಪೇಕ್ಷಿಸುತ್ತಿರುವ ನ್ಯಾಯಬದ್ಧ ಕಾರ್ಯಗಳಿಗಾಗಿ ಯಾವುದೇ ಚಳವಳಿ ಅಥವಾ ಅತೃಪ್ತಿಯೂ ಏಳದಂತೆ, ಸರಕಾರದೆದುರು ತಾನೇ ಪ್ರಾಣಾವಧಿ ಉಪವಾಸ ಕೈಕೊಂಡು ಗೆದ್ದು ಕೊಡುತ್ತಿದ್ದರು.

ಗೋಡ್ಸೆಯು ಪಾಪಿಗೇರದಂತಾಗುತ್ತಿತ್ತು!

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ
ಇಂಗ್ಲಿಷ್
English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ ಪಿ ದ್ವಾರ ರೂ. 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

ಗಾಲಾ ಮಾರಾಟ

ತಾಜಾ ಸ್ವಿಸ್ ರಿಸ್ಟ್‌ವಾಚುಗಳು ಆಶ್ಚರ್ಯಕರ ಅಲ್ಪ ಬೆಲೆಯಲ್ಲಿ ಮಾರಾಟ ಮಾಡಲಾಗುವುವು. ಚಿಲ್ಲರೆ ವ್ಯಾಪಾರಿಗಳಿಗೆ ಅಪೂರ್ವ ಸುಸಂದಿ!

ಆರ್ಡರುಗಳನ್ನು ಕೊಟ್ಟ ಗಿರಾಕಿಗಳಿಗೆ ಜಲೋ ಬಹುಮಾನಗಳನ್ನು ಧರ್ಮಾರ್ಥ ಕೊಡಲಾಗುವುದು ವಿವಿಧ ಜಾತಿಯ ಫೌಂಟನ್ ಪೇನುಗಳು ಸಹಾ ಮಾರಾಟಕ್ಕೆ ಸಿಗುತ್ತವೆ.

ಸವಿವರ ಕ್ಯಾಟಲಾಗಿಗೆ ಇಂದೇ ಬರೆಯಿರಿ.
Swiss Agencies (India)
Post Box No 6626,
BOMBAY, 19.

ವಿಷದ ಹಾವುಗಳ ಕಡಿತ

ಲೇಖಕ. ಶ್ರೀ ಕೆ ಗುರುರಾಜ ಉಡುಪ, ಬಿ. ಎಸ್. ಸಿ., ಕೆನ್ನಿಗೋಳಿ

ವಿಷದ ಹಾವು ಕಡಿತದಿಂದ ಹಳ್ಳಿಗಳಲ್ಲಿ ಸಾಯುವವರು ಎಷ್ಟೋ ಮಂದಿ ಇದ್ದಾರೆ. ಅದಕ್ಕೆ ಸರಿಯಾದ ಚಿಕಿತ್ಸೆ ತಕ್ಕ ಸಮಯದಲ್ಲಿ ಆಗದಿರುವುದೇ ಇದಕ್ಕೆ ಕಾರಣ. ಆಧುನಿಕ ವೈದ್ಯಕೀಯ ವಿದ್ಯೆಯು ಆವಿಷ್ಕಾರವಾದ ಮೇಲೂ ಸಹ ಇಂತಹ ವಿಷದ ಹಾವುಗಳ ಕಡಿತದಿಂದ ಆಗುವ ಮರಣವನ್ನು ನೆನಪಿಗೆ ತರುವಾಗ ಆ ವಿದ್ಯೆಯು ಸಂಪೂರ್ಣ ಸಹಾಯ ನಮ್ಮ ಹಳ್ಳಿಗರಿಗೆ ಸಿಗುವುದಿಲ್ಲವೆಂದೇ ಅರ್ಥ ಮಾಡಿಕೊಳ್ಳಬೇಕಾಗುವುದು. ಏಳೆಂಟು ಮೈಲು ದೂರದ ಪಟ್ಟಣಗಳಿಗೆ ಹೋಗಿ ಅಲ್ಲಿನ ವೈದ್ಯರ ಸಹಾಯವನ್ನು ಪಡೆಯುವಷ್ಟರೊಳಗೆ ಹಾವು ಕಚ್ಚಿದಾತ ವಿಷವೇರಿ ಸಾಯುವ ಸಂದರ್ಭಗಳು ಎಷ್ಟೋ ಇವೆ. ಹಾವುಗಳೇ ತಮ್ಮ ದೇಶದ ಕಡು ಚಳಿಗೆ ವಾಸಿಸಲು ಅಯೋಗ್ಯವಾದ ಯುರೋಪ್ಯರಿಗಂತೂ ಈ ವಿಷದ ಹಾವುಗಳು, ಅವುಗಳ ಕಡಿತದಿಂದಾಗುವ ಮರಣ ಇದರ ಅರ್ಥವೇ ತಿಳಿಯುವುದಿಲ್ಲ. ನಮ್ಮ ಭಾರತದಲ್ಲಿ ಹಿಂದಿನ ಕಾಲದಿಂದಲೂ ಪ್ರಚಲಿತವಿರುವ ಆಯುರ್ವೇದದಲ್ಲಂತೂ ಈ ಹಾವುಗಳ ಕಡಿತಕ್ಕೆ ಉತ್ತಮ ಚಿಕಿತ್ಸಾಕ್ರಮಗಳು ಹೇಳಲ್ಪಟ್ಟಿವೆ. ಅದೂ ಅಲ್ಲದೆ ಹಲವು ಮಂತ್ರಶಕ್ತಿಯಿಂದ ಈ ವಿಷದ ಹಾವುಗಳ ಕಡಿತದಿಂದ ದೇಹದಲ್ಲಿರುವ ವಿಷವನ್ನು ಹೊರತೆಗೆಯುವ ವಿಧಾನಗಳೂ ನಮ್ಮ ಹಳ್ಳಿಗಳಲ್ಲಿನ ಹಲವು ತಾಂತ್ರಿಕರಿಗೆ, ಹಲವು ಹಳೆಯ ವೈದ್ಯರಿಗೆ ಗೊತ್ತು. ಆದರೆ ಇಂತಹ ಅದ್ಭುತ ಮಂತ್ರಶಕ್ತಿಯನ್ನು ಅಂತಹ ತಾಂತ್ರಿಕರು ತಮ್ಮ ಉತ್ತರಾಧಿಕಾರಿಗಳಿಗೆ ಹೇಳಿ ಕೊಡದಿದ್ದಲ್ಲಿ ಅದು ಅವರ ಬೆನ್ನ ಹಿಂದೆಯೇ ನಾಶವಾಗುವುದು. ಹೀಗೆ ನಮ್ಮ ಸುತ್ತ ಮುತ್ತಲ ಹಳ್ಳಿಗಳಲ್ಲಿ ಪ್ರಚಲಿತವಿರುವ ಇಂತಹ ವಿಷದ ಹಾವುಗಳ ಕಡಿತದ ಚಿಕಿತ್ಸಾಕ್ರಮವನ್ನು ವಿವರಿಸಿ ಹೇಳುವುದು ಈ ಲೇಖನದ ಉದ್ದೇಶವಾಗಿದೆ.

ಈ ವಿಷದ ಹಾವು ಕಡಿತಕ್ಕೆ ನಾವು ಮಾಡುವ ಪ್ರಥಮ ಚಿಕಿತ್ಸೆಯಂತೂ ಬಹು ಸುಲಭವಾದುದು ಮತ್ತು ಎಲ್ಲರೂ ಅಗತ್ಯ ತಿಳಿದುಕೊಳ್ಳಬೇಕಾಗುವುದು. ಕಡಿದೊಡನೆಯೇ ಗಾಯದ ಮೇಲ್ಭಾಗದಲ್ಲೂ ಕೆಳಭಾಗದಲ್ಲೂ ಗಾಯದಿಂದ ಮೂರು ನಾಲ್ಕು ಇಂಚು ದೂರದಲ್ಲಿ ಗಟ್ಟಿಯಾದ ಟ್ವೈನ್ ನೂಲಿನಿಂದಾಗಲೀ, ಸಪುರವಾದ ಹುರಿಹಗ್ಗದಿಂದಾಗಲೀ ಗಟ್ಟಿಯಾದ ಕಟ್ಟನ್ನು ಹಾಕಬೇಕು. ಆ ಮೇಲೆ ಚೂರಿಯ ಸಹಾಯದಿಂದ ಗಾಯವನ್ನು ದೊಡ್ಡದು ಮಾಡಿ ಅದರಿಂದ ಆದಷ್ಟು ವಿಷಯುಕ್ತ ರಕ್ತವನ್ನು ಹೊರ ಹರಿಯಗೊಡಬೇಕು. ಆ ಮೇಲೆ ಪೊಟೇಶಿಯಮ್ ಪರ್ಮಾಂಗನೇಟ್ ಎಂಬ ರಾಸಾಯನಿಕ ವಸ್ತುವಿನ ದಪ್ಪವಾದ ದ್ರಾವಣವನ್ನು ಮಾಡಿ ಅದರಿಂದ ಆ ಗಾಯವನ್ನು ಚೆನ್ನಾಗಿ ತೊಳೆಯಬೇಕು. ಇಷ್ಟು ಚಿಕಿತ್ಸೆ ಮಾಡಿದ ಮೇಲೆ ವೈದ್ಯಕೀಯ ಸಹಾಯವನ್ನು ಪಡೆಯಲು ಹೋಗಬೇಕು.

ನಮ್ಮೂರಲ್ಲಿ ಒಂದು ಭೂತದ ಗುಡಿಯಿದೆ. ಆ ಗುಡಿಯ ಹತ್ತಿರವಿರುವ ಬಾವಿಯೊಂದರಲ್ಲಿರುವ ನೀರು ಈ ವಿಷದ ಹಾವು ಕಡಿತಕ್ಕೆ ಒಂದು ಉತ್ತಮ ಮದ್ದಾಗಿದೆ. ಊರ ಸುತ್ತಲಲ್ಲಿ ಎಲ್ಲಿ ಇಂತಹ ಹಾವು ಕಡಿದ ಕೂಡಲೇ ಅಂತಹ ವ್ಯಕ್ತಿ ಈ ಗುಡಿಯ 'ಕೊಡಮಂತಾಯ' ಎಂಬ ಭೂತದ ಸ್ಮರಣೆ ಮಾಡಿಕೊಂಡು ಹತ್ತಿರವಿದ್ದ ಜಾಗದಲ್ಲಿರುವ ಸ್ವಲ್ಪ ಮಣ್ಣನ್ನು ಹಾಕಿಕೊಳ್ಳಬೇಕು. ಕೂಡಲೇ ಅಂತಹ ವ್ಯಕ್ತಿಯನ್ನು ಈ ಗುಡಿಗೆ ತರಬೇಕು. ಅಲ್ಲಿನ ಪೂಜಾರಿಗಳು ಇದೇ ಬಾವಿಯ ನೀರಿನಲ್ಲಿ ಗಂಧವನ್ನು ಅರೆದು ಅವನಿಗೆ ಕುಡಿಯಲು ಕೊಡುವರು. ಆತನು ವಿಷವನ್ನು ಕಾರುವನು. ಆ ಮೇಲೆ ಏಳು ದಿನಗಳ ವರೆಗೆ ಅವನು ಅಲ್ಲಿಯೇ ಇದ್ದು ಪ್ರತಿ ದಿನವೂ ಮೂರು ಹೊತ್ತು ಆ ಗಂಧವನ್ನು ಹೊಟ್ಟೆಗೆ ತೆಗೆದುಕೊಂಡು ಆ ಗಾಯಕ್ಕೂ ಹಚ್ಚಬೇಕು. ಹೀಗೆ ಮಾಡಿದಲ್ಲಿ ಎಂತಹ ವಿಷ ಜಂತುಗಳ ಕಡಿತವೂ ಗುಣವಾಗುವುದು. ನೂರಾರು ಮಂದಿ ಹೀಗೆ ಗುಣ ಹೊಂದಿ ಈ 'ಕೊಡಮಂತಾಯ'ನ ಭಕ್ತ ವರ್ಗದಲ್ಲಿ ಸೇರಿದ್ದಾರೆ. ಆದರೆ ಹೀಗೆ ಈ ಚಿಕಿತ್ಸೆಯನ್ನು ಮಾಡುತ್ತಿದ್ದಂತೆ ಅಂತಹವನು ಬೇರೆ ಮದ್ದನ್ನು ತೆಗೆದು ಕೊಂಡರೆ ಮಾತ್ರ ಈ ವ್ಯಕ್ತಿಯ ಕತೆ ಮುಗಿದಂತೆಯೇ. ಹೀಗೆ ಈ ಚಿಕಿತ್ಸೆಯನ್ನು ಮಾಡುತ್ತಿದ್ದಂತೆ 'ಕೊಡಮಂತಾಯ'ನಲ್ಲಿ ಅಚಲ ಶ್ರದ್ಧೆ, ಭಕ್ತಿ ಹಾಗೂ ಚಿಕಿತ್ಸೆಯಲ್ಲಿ ಅಪೂರ್ವ ವಿಶ್ವಾಸವೂ ಅತ್ಯಗತ್ಯವಾಗಿದೆ. ಹೀಗೆ ಈ ಬಾವಿಯ ನೀರಿನಲ್ಲಿ ಯಾವುದೋ ಒಂದು ವಿಷಹಾರಿಕ ಶಕ್ತಿ ಇದೆ ಎಂದು ವ್ಯಕ್ತವಾಗುವುದು.

ನಮ್ಮಲ್ಲಿ ಇನ್ನು ಹಲವು ತಾಂತ್ರಿಕರು ಮಾಡುವ ಈ ವಿಷ ಕಡಿತಕ್ಕೆ ಚಿಕಿತ್ಸೆಯಂತೂ ತುಂಬಾ ವಿಚಿತ್ರವಾಗಿದೆ. ಒಬ್ಬನಲ್ಲಿ ಒಂದು ಮಂತ್ರದ ಕೋಲು ಇನ್ನೊಂದು ಮಂತ್ರದ ಕಲ್ಲು. ವಿಷದ ಹಾವು ಕಡಿದಲ್ಲಿಗೆ ಹೋಗಿ ಅತ ತನ್ನ ಮಂತ್ರಶಕ್ತಿಯ ಸಹಾಯದಿಂದ ಅದೇ ಹಾವನ್ನು ಹಿಂದೆ ಕರೆಸುವನು. ಅದು ಈತನ ಮಂತ್ರ ಶಕ್ತಿಯ ಪರಿಣಾಮವಾಗಿ ಅದೇ ಹಿಂದಿನ ಗಾಯಕ್ಕೆ ಕಚ್ಚಿ ವಿಷವನ್ನು ಹೀರಿಕೊಳ್ಳುವುದು. ಆ ಮೇಲೆ ಬಿಟ್ಟು ಹೋಗುವುದು. ವಿಷದ ಪರಿಣಾಮವು ಸಂಪೂರ್ಣವಾಗಿ ಈ ರೀತಿ ಹಿಂದೆ ತೆಗೆದುಕೊಳ್ಳಲ್ಪಡುವುದು. ಆ ಹಾವಿನಿಂದ, ಹೀಗಿನ ಮಂತ್ರ ಶಕ್ತಿಯಿಂದ ಕಾಷ್ಠದಲ್ಲಿಟ್ಟ ಹಲವು ಹೆಣಗಳನ್ನು ಹಿಂದೆ ತೆಗೆದು ಗುಣ ಪಡಿಸಿದ ಕತೆಯನ್ನು ನಮ್ಮ ಹಳ್ಳಿಗರು ಇಂದೂ ಹೇಳುತ್ತಿದ್ದಾರೆ. ಇದೇನು ಕಟ್ಟುಕತೆಯಲ್ಲ. ಹಳೆಯವರು ಕಣ್ಣಾರೆ ಕಂಡ ಸಂಗತಿ. ಆದರೆ ಈ ರೀತಿಯ ಶಕ್ತಿಯು ನಮ್ಮ ಹಳ್ಳಿಗಳಲ್ಲಿ ಈಗ ತೀವ್ರವಾಗಿ ಮಾಯವಾಗುತ್ತಿದೆ. ಕಾರಣ ಅಂತಹವರು ತಮ್ಮ ನಂತರದವರಿಗೆ ಇಂತಹ ಮಂತ್ರಗಳನ್ನು ಉಪದೇಶಿಸದುದರಿಂದ. ಅಪರೆ ಇನ್ನೊಂದು ವಿಚಾರ, ಇಂತಹ ಮಾಂತ್ರಿಕರು ತಮ್ಮ ಲಾಭಕ್ಕಾಗಿ ಹಣವನ್ನು ಗಳಿಸುವ ಉದ್ದೇಶದಿಂದ, ಲೋಭದಿಂದ ಇದನ್ನು ಪ್ರಯೋಗಿಸಿದರೆ ಮಾತ್ರ ಪರಿಣಾಮವು ಶೂನ್ಯ. ಬದಲು ಅದನ್ನು ಅವರು ಲೋಕ ಕಲ್ಯಾಣದ ದೃಷ್ಟಿಯಿಂದ, ಪರೋಪಕಾರ ಬುದ್ಧಿಯಿಂದ ಮಾಡಿದರೆ ಮಾತ್ರ ಆ ಚಿಕಿತ್ಸೆ ಫಲಿಸುತ್ತದೆ.

ಇನ್ನು ಹಲವು ವೈದ್ಯರು ಮಾಡುವ ಚಿಕಿತ್ಸೆಯಂತೂ ತುಂಬಾ ಭಯಂಕರವಾಗಿ ತೋರುವುದು. ವಿಷಹಾರಕವಾದ ಒಂದು ತೆರನ ಮದ್ದನ್ನು ತನ್ನ ಬಾಯಲ್ಲಿಟ್ಟುಕೊಂಡು ಅವರು ಆ ಗಾಯವನ್ನು ದೊಡ್ಡದು ಮಾಡಿ ಅದರಿಂದ ವಿಷಯುಕ್ತ ರಕ್ತವನ್ನು ಹೀರಿ ಹೊರಗೆ ಉಗುಳುವರು. ಹೀಗೆ ಸಂಪೂರ್ಣವಾಗಿ ಆ ವ್ಯಕ್ತಿಯ ಗಾಯದಿಂದ ಹೀರಲ್ಪಟ್ಟ ವಿಷಪೂರಿತ ರಕ್ತವನ್ನು ತೆಗೆದ ನಂತರ ವೈದ್ಯನು ತನ್ನ ಬಾಯಿಯನ್ನು ಹಾಲಿನಲ್ಲಿ ಮುಕ್ಕುಳಿಸುವನು. ಹೀಗೆ ಅವನ ಬಾಯಿಯನ್ನು ಸ್ವಚ್ಛ ಮಾಡಿಕೊಳ್ಳುವನು. ಈ ವಿಷಯುಕ್ತ ರಕ್ತದ ರುಚಿ ಆತನಿಗೆ ಗೊತ್ತು. ಅಂತಹ ರಕ್ತವು ಬರುವುದು ಮುಗಿಯುವ ವರೆಗೆ ಅವನು ಹೀರುವನು. ಇಂತಹ ವೈದ್ಯರು ಸಹ ಹೀಗೆ ರಕ್ತವನ್ನು ಹೀರುವಾಗ ಗರುಡ ಮಂತ್ರವೆಂಬ ಒಂದು ಮಂತ್ರವನ್ನು ಜಪಿಸುತ್ತಿರುತ್ತಾರೆ.

ಹೀಗಿರುವ ವಿಷವುಳ್ಳ ಹಾವುಗಳು ಮುಖ್ಯವಾಗಿ ನಾಗರ ಹಾವು, ಕನ್ನಡಿ ಹಾವು ಮತ್ತು ಕಟ್ಟಿನ ಹಾವು. ಈ ಕಟ್ಟಿನ ಹಾವಿನ ಕಡಿತಕ್ಕೆ ಒಂದು ರೀತಿಯ ವಿಶೇಷ ಚಿಕಿತ್ಸೆಯು ನಮ್ಮ ಹಳ್ಳಿಗರಲ್ಲಿ ಪ್ರಚಾರದಲ್ಲಿದೆ. ಹಾವು ಕಡಿದ ಕೂಡಲೇ ಮಾಡಿನ ಯಾವುದಾದರೊಂದು ಬೀಮು ಅಥವಾ ಕೊಳೆಗೆ ಬೈಹುಲ್ಲಿನ ಏಳು ಕಟ್ಟುಗಳನ್ನು ಹಾಕಿ ಅದನ್ನು ಪರಿಣತವಾದ ಕತ್ತಿಯ ಸಹಾಯದಿಂದ ಎಲ್ಲ ಕಟ್ಟನ್ನು ಒಮ್ಮೆಲೇ ಕಡಿದು ಹಾಕಿದ ಮೇಲೆ ವ್ಯಕ್ತಿಗೆ ವಿಷವನ್ನು ಕಾರಲಿಕ್ಕಾಗಿ ಸಾಸಿವೆಯನ್ನು ಹುಡಿಮಾಡಿ ಬಿಸಿನೀರಿಗೆ ಹಾಕಿ ಕೊಡಬೇಕು. ಅದನ್ನು ಕುಡಿದ ಕೂಡಲೇ ವಿಷವು ಕಾರಿ ಹೋಗುವುದು; ವ್ಯಕ್ತಿಯು ಸುಖಿಯಾಗುವನು.

ಇನ್ನೊಂದು ಬಹು ಸುಲಭವಾದ ಉಪಾಯವನ್ನು ಈ ವಿಷಕ್ಕೆ ಹೇಳುತ್ತಾರೆ. ಯಾವ ವಿಷದ ಹಾವು ನಮಗೆ ಕಚ್ಚಿತೋ ಅದನು ತಿರುಗಿ ಕೂಡಲೇ ನಾವು ಕಚ್ಚಿದರೆ ವಿಷದ ಪರಿಣಾಮವೇ ಇಲ್ಲದಂತಾಗುವುದು. ಆದರೆ ಇದನ್ನು ಸಾಧಿಸಿದವರು ಮಾತ್ರ ಕಡಿಮೆ. ಕಾರಣ ಹೀಗೆ ಕಚ್ಚುವುದು ತೀರ ಅಸಹ್ಯವು ಮಾತ್ರವಲ್ಲದೆ ಆ ಹಾವು ಸಿಗುವುದೂ ದುರ್ಲಭ.

ಮೇಲೆ ಹೇಳಿದ ಪ್ರಯೋಗಗಳು ನಮ್ಮ ಹಳ್ಳಿಗಳಲ್ಲಿ ಪ್ರಚಾರವಿದ್ದು ಅದರಿಂದ ಜನರು ತುಂಬಾ ಪ್ರಯೋಜನವನ್ನು ಪಡೆಯುತ್ತಾ ಇದ್ದಾರೆ ಮತ್ತು ವಿಷದ ಹಾವುಗಳ ಹಾವಳಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳು ಸಾಮಾನ್ಯ ಕ್ರಯಕ್ಕೆ ದೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್.
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂಡಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ಸಹ ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ಕೀವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

App oved form by the Gov of Mysore Certificated by the Agent of the Govt of Ceylone & Indian

ಋತುಸ್ರಾವ ನಿಂತಿತು

'ಋತುಪಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಹಣ್ಣೆರಡಾಣೆ ಪ್ರತ್ಯೇಕ.]

Mrs D. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

ರಿಜಿ. No. M 3618
LICENCE No. 31
Licensed to Post without Prepayment

Estd 1921 ಸ್ಥಾಪನೆ.
31ನೇ ವರ್ಷ

5-10-1950

Founder Sri A. B Shetty,
Minister for Agriculture & Veterinary

ವರ್ಷ ೩೧
ವಾರ ೫

NAVAYUGA
WEEKLY

POST BOX NO. 22
UDIPI, S. K.

Vol 31
No 5

ಗಾಂಧಿಜಿ ಈಗ ಇರುತ್ತಿದ್ದರೆ-

ಇದೇ ತಾ. 2ನೇ ಸೋಮವಾರಕ್ಕೆ ಎಂಭತ್ತೊಂದು ವರುಷ ತುಂಬಿ ಎಂಭತ್ತೆರಡನೆ ವರುಷ ಹಿಡಿಯುವ ಹಣ್ಣು ಮುದುಕನಾಗುತಿದ್ದರು; ಆದರೆ ತನ್ನ ಪ್ರಾಯದಲ್ಲಿ ದಶಮಾನಗಳು ಹೆಚ್ಚಿದಂತೆ ತನ್ನ ಉತ್ಸಾಹ, ಚಟುವಟಿಕೆಗಳೂ ದಶಪಾಲು ಹೆಚ್ಚುವ ಸಂಪ್ರದಾಯಾನುಸಾರವಾಗಿ ಸದಾಕಾಲವೂ ಕಾರ್ಯ ಪ್ರವೃತ್ತರಾಗುತಿದ್ದರು.

ಕಾಂಗ್ರೆಸನ್ನೇ 'ಲೋಕ ಸೇವಾ ಸಂಘ'ವಾಗಿ ಮಾರ್ಪಡಿಸುತಿದ್ದರು, ಅದು ಅಸಾಧ್ಯವಾಗುತಿದ್ದರೆ ಕಾಂಗ್ರೆಸಿನ ಗೊಡವೆಯನ್ನು ಬಿಟ್ಟು ಯಾವುದಾದರೊಂದು ಹಳ್ಳಿಯಲ್ಲಿ ತನ್ನ ಸ್ವಂತ ಲೋಕಸೇವಾಸಂಘವನ್ನು ಸ್ಥಾಪಿಸಿಕೊಳ್ಳುತಿದ್ದರು.

ಋಜು ಸ್ವಭಾವ, ಸದ್ವರ್ತನೆ, ಮತ್ತು ಸದಾ ಶ್ರಮಕ್ಕೆ ಹೆಸರಾದ ಸಾಗುವಳೀಗಾರ ರೈತನೊಬ್ಬನಿಗೆ ಭಾರತದ ಪ್ರಧಾನ ಮಂತ್ರಿ ಪಟ್ಟವನ್ನು ಬಿಟ್ಟುಕೊಟ್ಟು, ಆತನ ಕಾರ್ಯದರ್ಶಿ ಕಾರ್ಯಭಾರ ನಿರ್ವಹಿಸುವಂತೆ ಪಂಡಿತ ನೆಹರುಗಳನ್ನು ಕೇಳಿಕೊಳ್ಳುತಿದ್ದರು.

ಅಸ್ಸಾಮ್ ಭೂಕಂಪ ಮತ್ತು ಉತ್ತರ ಭಾರತದ ಇತರ ಕಡೆಗಳಲ್ಲಾದ ನೆರೆಹಾವಳಿಯಂತಹ ಪೀಡಿತ ಸ್ಥಳಗಳಿಗೆ ಇಂದಿನಂತೆ ಸೇನೆಗಳು ಹೋಗುವ ಬದಲಿಗೆ ತನ್ನ ಲೋಕ ಸೇವಾಸಂಘದ ಸದಸ್ಯರು ಮತ್ತು ಸ್ವಯಂಸೇವಕರು ಹೋಗುವಂತೆ ನಿರ್ದೇಶಿಸುತಿದ್ದರು.

ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ಕರ ಹಿಡಿದು ರದ್ದುಪಡಿಸಿ, ಎಲ್ಲೆಲ್ಲಿ ಅವುಗಳ ಕಳ್ಳಸಂತೆ ನಡೆಯುವುದೋ ಅಲ್ಲೆಲ್ಲಾ ತನ್ನ ಲೋಕಸೇವಾಸಂಘದ ಸ್ವಯಂಸೇವಕರು ಅನ್ನ ಸತ್ಯಾಗ್ರಹವನ್ನು ಕೈಕೊಂಡಾದರೂ ಅದನ್ನು ನಿಲ್ಲಿಸುವಂತೆ ಮಾಡುತಿದ್ದರು

ಸಂಯುಕ್ತ ರಾಷ್ಟ್ರಸಂಘದ ಈಬಾರಿಯ ಜನರಲ್ ಎಸೆಂಬ್ಲಿಗೆ ಒಂದೋ ಆಮಂತ್ರಿಸಲ್ಪಟ್ಟು, ಇಲ್ಲವೇ ತಾನಾಗಿ ಅಪೇಕ್ಷಿಸಿ ತೆರಳಿ, ಹೃದಯ ಪರಿವರ್ತನಾ ತತ್ವದ ಮೇಲೆ ಅಲ್ಲಿ ಅಮೋಘಭಾಷಣ ಕೊಟ್ಟು ಬರುತಿದ್ದರು

ಕೊರಿಯಾ ಯುದ್ಧಾರಂಭ ಪೂರ್ವದಲ್ಲಿ ಕಾಲದಲ್ಲಿ ತಿಳಿದು ಬರುತ್ತಿದ್ದರೆ, ತಾನು ಸ್ವತಃ ತನ್ನ 'ಲೋಕ ಸೇವಾಸಂಘ'ದ ಸ್ವಯಂಸೇವಕ ದಳದ ಮುಂದಾಳಾಗಿ ನಡೆಯಿಸಿಕೊಂಡು ಹೋಗಿ, ಗೆರೆ ದಾಟಿ ದಕ್ಷಿಣಕ್ಕೆ ಹೆಜ್ಜೆಯಿಡದಂತೆ 38ನೇ ಮಧ್ಯಾಂತರ ಗೆರೆಯಲ್ಲಿ ಉತ್ತರ ಕೊರಿಯಾದ ಸೇನೆಗಳೆದುರು ಸತ್ಯಾಗ್ರಹ ಹೂಡುತಿದ್ದರು. ಯುದ್ಧದ ಈಗಿನ ಸ್ಥಿತಿಯಲ್ಲಿ, ಅದೇ 38ನೇ ಗಡಿಗೆರೆಯ ಬಳಿಯಲ್ಲಿ ಸಂಯುಕ್ತ ರಾಷ್ಟ್ರ ಸೇನೆಗಳು ಉತ್ತರಕ್ಕೆ ಹೆಜ್ಜೆಯಿಡದಂತೆ ತಡೆಯಲು ಸತ್ಯಾಗ್ರಹ ಮಾಡುತಿದ್ದರು.

ಚರಕಾ ತಿರುಗಿಸುವ ಗಾಂಧಿ, ದಂಡೀಯಾತ್ರೆಯ ಗಾಂಧಿ, ಬರೆಯುವ ಗಾಂಧಿ, ಉಪ್ಪು ಹೆಕ್ಕುವ ಗಾಂಧಿ, ನೆಹರೂರೊಡನೆ ನಗೆಯಾಡುವ ಗಾಂಧಿ, ಈ ಭಾವ ಚಿತ್ರಗಳಿಗಿಂತ ಹೆಚ್ಚಾಗಿ ಗೊಬ್ಬರದ ಕುಕ್ಕೆ ಹೊತ್ತ ಗಾಂಧಿ, ನೇಗಿಲು ಹಿಡಿದಿರುವ ರೈತನೊಡನೆ ನಗುತ್ತಾ ಹೆಜ್ಜೆಯಿಡುವ ಗಾಂಧೀ ಭಾವ ಚಿತ್ರಗಳು ಈ ಕಾಲದಲ್ಲಿ ಮನೆಮನೆಯಲ್ಲಿ ನೇತಾಡುತಿದ್ದುವು. 'ಅಧಿಕ ಆಹಾರ ಬೆಳವಣಿಗೆಗಾಗಿ ಬೇರೆಲ್ಲಾ ಪ್ರಚಾರಕ್ಕಿಂತ ಹೆಚ್ಚಿನ ಉತ್ತೇಜನಗಳನ್ನು ಈ ಭಾವ ಚಿತ್ರಗಳೇ ಯಿರುತ್ತಿದ್ದವು

ಈಗ ಢಂಬಾಚಾರಿಗಳು, ಕಳ್ಳಸಂತೆವಾಲರು ಮತ್ತು ವಿವಿಧ ವರ್ಗದ ಸ್ವಾರ್ಥಿಗಳು ಸ್ವಕಾರ್ಯ ಸಾಧನೆಗಾಗಿ ಉಚ್ಚರಿಸುತ್ತಿರುವ ಗಾಂಧೀ ನಾಮವು ಹೆಚ್ಚಾಗಿ ರೈತರುಗಳಿಂದಲೇ ಈ ಕಾಲದಲ್ಲಿ ಪಠಿಸಲ್ಪಡುತಿದ್ದಿತು, ಗಾಂಧೀಜಿ ತಮ್ಮವರೆಂಬ ಒಂದೇ ಕಾರಣದಿಂದ ಮಿಕ್ಕೆಲ್ಲವನ್ನೂ ಬದಿಗೊಟ್ಟಿಗೆ ಮರೆತು ರೈತರು ಸ್ವಂತ ಪ್ರೇರಣೆಯಿಂದ ಆಹಾರೋತ್ಪತ್ತಿಯನ್ನು ಹೆಚ್ಚಿಸುವಂತಾಗುತಿತ್ತು.

ಕಾಂಗ್ರೆಸು ಲೋಕ ಸೇವಾ ಸಂಘವಾಗಿ ಮಾರ್ಪಡುತಿದ್ದರೂ, ಕಾಂಗ್ರೆಸನ್ನು ಬಿಟ್ಟೇ ಗಾಂಧಿಜೀಯ ಲೋಕ ಸೇವಾ ಸಂಘ ಬೇರೆ ಇರುತಿದ್ದರೂ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧೆಯೆಂಬುದಿರುತ್ತಿರಲಿಲ್ಲ; ಮೊದಲನೆಯದಾಗುತಿದ್ದರೆ ಗಾಂಧಿಜೀ ಸೂಚಿಸಿದ ನಿಷ್ಕಾಮಕರ್ಮ ವೀರರು ಅವಿರೋಧವಾಗಿ ಆರಿಸಲ್ಪಡುತಿದ್ದರು ; ಎರಡನೆಯದಾಗುತಿದ್ದರೆ, ಕಾಂಗ್ರೆಸ್ ಅಧ್ಯಕ್ಷಸ್ಥಾನದ ಆಕರ್ಷಣವೇ ಕಳೆದು ಹೋಗಿ ಯಾರೂ ಮೋಹಪಡದಂತಾಗುತಿದ್ದಿತು. ನೆಹರೂ-ಟಂಡನ್ ಸಮಸ್ಯೆಯಂತಹದೆಂದಿಗೂ ಹುಟ್ಟಿಕೊಳ್ಳುತಿದ್ದಿಲ್ಲ.

ತನ್ನ ಅಂಗಿಯನ್ನು ತಾನೇ ಹೊಲಿದುಕೊಳ್ಳುವ ಅಭ್ಯಾಸವಿರುವ ಹೈದರಾಬಾದ್ ನಿಜಾಮರಿಂದಾರಂಭಿಸಿ, ಅಧಿಕಾರ ರಹಿತ ಆಶ್ರಿತ ರಾಜಲ್ಲರೆಲ್ಲರೂ ಇನ್ನರಲ್ಲೇ ಚರಕ ಅದವಾ ತಕ್ಲೀ ಪ್ರವೀಣರಾಗುತಿದ್ದರು, ಕೆಲವು ರಾಜರು ಗಾಂಧೀಜೀಯ ಆಶ್ರಮವಾಸಿಗಳೇ ಆಗುತಿದ್ದರು.

ರಾಷ್ಟ್ರ-ರಾಷ್ಟ್ರಗಳೊಳಗಿನ ವಿವಾದಗಳೆಂದಾರಂಭಿಸಿ, ನೆರೆಮನೆ ಕಾಗಗಳ ವರೆಗಿನ ಮತ್ತು ಶಿಸ್ತ್ರಸ್ತ್ರ ಸಂಗ್ರಹಣೆಯಿಂದಾರಂಭಿಸಿ ಹಲ್ಲು ಸಿಂಗ್ರಿಸುವವರೆಗಿನ ಸಮಸ್ಯೆಗಳಗುತ್ತರವನ್ನಪೇಕ್ಷಿಸಿ ಈ ಕಾಲದಲ್ಲಿ ಗಾಂಧಿಜೀಯ ಸೇವಾಶ್ರಮಕ್ಕೆ ದಿನಕ್ಕೆ ಹಲವು ಸಹಸ್ರ ಪತ್ರ ಮತ್ತು ತಂತಿಗಳು ಬರುತಿದ್ದುವೋ! ಲೋಕ ಮತದ ಒತ್ತಾಯಕ್ಕೊಳಗಾಗಿ ಒದಗಿ ಬಾರಿಯಾದರೂ ಟ್ರೂಮೆನ್, ಆಟ್ಲಿ, ಸ್ಟಾಲಿನ್ ತ್ರಿಮೂರ್ತಿ ಸನ್ಮೇಳನವು ಗಾಂಧೀಜೀಯ ಗ್ರಾಮಾಶ್ರಮದಲ್ಲಿ ಸೇರುತಿದ್ದಿತು

ಅಮೆರಿಕ, ಬ್ರಿಟನ್, ಇಂಡೋನೇಶಿಯ ಮೊದಲಾದ ದೇಶಗಳಿಗೆ ಮುಂದಾಗಿ ನೆಹರು. ಆ ಮೇಲೆ ಲಿಯಾಖತ್ ಸಂಚಾರ ಹೋಗುವ ಬದಲಿಗೆ ನೆಹರು ಲಿಯಾಖತರು ಜತೆಯಾಗಿಯೇ ತಂತಮ್ಮ ದೇಶ ಬಿಡಬೇಕಿಲ್ಲದೆ ಒಬ್ಬೊಬ್ಬರೊಂದೊಂದು ಬಾರಿ ಹೊರಡಬೇಕಾದೆಂದು ಗಾಂಧಿಜೀ ಹಠ ಹಿಡಿದು ಸಾಧಿಸುತಿದ್ದರು

ಅರ್ಜುನನನ್ನು ಯುದ್ಧಕ್ಕೆ ಪ್ರೇರೇಪಿಸಿದ-ಗೀತಾವಚನಗಳನ್ನು ಭಾರತದ ಸೈನಿಕರಿಗೆ ಬೌದ್ಧಿಕ ಶಿಕ್ಷಣಕ್ಕಾಗಿಯೂ, ಹೊಲ ಸಾಗುವಳೀ ದುಡಿತವನ್ನು ಅವರ ದೈಹಿಕ ತರಬೇತಿಗಾಗಿಯೂ ಇಡಿಸುತಿದ್ದರು.

ಉಚ್ಚಾಧಿಕಾರಿಗಳಾರೂ ನೂರು ಹಳ್ಳಿಗಳಲ್ಲಿ ಸುತ್ತಾಡಿದ ವಿನಹ ಒಂದು ಪಟ್ಟಣದೊಳಗೆ ಕಾಲಿಡಬಾರದೆಂಬ ನಿರ್ಬಂಧ ಹಾಕಿಸುತಿದ್ದರು.

ಸರಕಾರದಿಂದ ಜನತೆಯೀಗ ಅಪೇಕ್ಷಿಸುತ್ತಿರುವ ನ್ಯಾಯ ಬದ್ಧ ಕಾರ್ಯಗಳಿಗಾಗಿ ಯಾವುದೇ ಚಳವಳ ಅಥವಾ ಆಕ್ಷೇಪಿಯೂ ಏಳದಂತೆ, ಸರಕಾರದಿದಿರು ತಾನೇ ಪ್ರಾಣಾವಧಿ ಉಪವಾಸ ಕೈಕೊಂಡು ಗೆದ್ದು ಕೊಡುತಿದ್ದರು

ಗೋಡ್ಸೆಯು ಪಾಶಿಗೇರದಂತಾಗುತಿತ್ತು!

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ
ಇಂಗ್ಲಿಷ್

English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0
ವಿ ಪಿ ದ್ವಾರ ರೂ. 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

ಗಾಲಾ ಮಾರಾಟ

ತಾಜಾ ಸ್ವಿಸ್ ರಿಸ್ಟ್‌ವಾಚುಗಳು ಆಕರ್ಷಕರ ಅಲ್ಪ ಬೆಲೆಯಲ್ಲಿ ಮಾರಾಟ ಮಾಡಲಾಗುವುವು. ಚಿಲ್ಲರೆ ವ್ಯಾಪಾರಿಗಳಿಗೆ ಅಪೂರ್ವ ಸುಸಂಧಿ!

ಆರ್ಡರುಗಳನ್ನು ಕೊಟ್ಟ ಗಿರಾಕಿಗಳಿಗೆ ಚಕಿತೋ ಬಹುಮಾನಗಳನ್ನು ಧರ್ಮಾರ್ಥ ಕೊಡಲಾಗುವುದು ವಿವಿಧ ಜಾತಿಯ ಫೌಂಟನ್ ಪೇನುಗಳು ಸಹಾ ಮಾರಾಟಕ್ಕೆ ಸಿಗುತ್ತವೆ.

ಸವಿವರ ಕ್ಯಾಟಲಾಗಿಗ ಇಂದೇ ಬರೆಯಿರಿ.

Swiss Agencies (India)
Post Box No 6626,
BOMBAY, 19.

ಕಾಶ್ಮೀರದ ಕಲಹ—ತೀರ್ಮಾನಾತೀತವೇ?

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಮುಖ್ಯವಿವಾದವಾಗಿ ಕಾಶ್ಮೀರದ ಪ್ರಶ್ನೆಯೀಗಲೂ ಹಾಗೆಯೇ ಉಳಿದುಕೊಂಡಿದೆ. ಕಟ್ಟಕಡೆಯದಾಗಿ ನಡೆದ ಸರ್ ಓವೆನ್ ಡಿಕ್ಸನರ ರಾಜೀ ಪ್ರಯತ್ನವೂ ನಿಷ್ಫಲಗೊಂಡಿತು. "ಇನ್ನು ಈ ಕುರಿತು ಭದ್ರತಾ ಕೌನ್ಸಿಲು ಬೇರಾವ ಕಾರ್ಯಕ್ರಮವನ್ನೂ ಕೈಕೊಳ್ಳದೆ ಸಂಬಂಧಪಟ್ಟ ಪಕ್ಷಗಳು ತಮ್ಮೊಳಗೇನೇ ಅದನ್ನು ಇತ್ಯರ್ಥಿಸಿಕೊಳ್ಳುವಂತೆ ಬಿಟ್ಟು ದೂರನಿಲ್ಲುವುದು ವಾಸಿ" ಎಂದು ಸರ್. ಡಿಕ್ಸನರು ಕೊನೆಗೆ ಶಿಫಾರಸು ಮಾಡಿದ್ದಾರೆ. ಮುಂದೆ ಹೇಗಾದರೂ ಯಾವ ವಿಧದ ಮಧ್ಯಸ್ಥಿಕೆಯೂ ಹಿಡಿಯಲೊಲ್ಲದ ಬಿಗುಸಮಸ್ಯೆಯಿದು, ಎಂಬುದು ಈ ಮೂಲಕ ಖಚಿತವಾಗಿದೆ. ಕಾಶ್ಮೀರ ವಿವಾದವು ಹೀಗೆಯೇ ಉಳಿದಿರುವ ವರೆಗೆ ಭಾರತ ಪಾಕಿಸ್ತಾನಗಳೊಳಗೆ ಶಾಶ್ವತ ಸ್ನೇಹಾಚಾರ ಅಸಾಧ್ಯ; ಭಾರತವಾಗಲೀ ಪಾಕಿಸ್ತಾನವಾಗಲೀ ನಿಶ್ಚಿಂತೆಯಿಂದ ಗೃಹಕಾರ್ಯಗಳಲ್ಲಿ ಲಕ್ಷ್ಯ ಹರಿಸುವುದು ಅಸದಳ; ಲೋಕದ ಪಾಳಯ ಕಚ್ಚಾಟಗಳು ಸ್ವತಃ ತಮ್ಮೊಳಗಡೆಯಲ್ಲಿ ಪ್ರತಿಬಿಂಬಿಸಲಾರವು ಎಂದು ಇವೆರಡು ರಾಷ್ಟ್ರಗಳು ಭರವಸೆಯಿಂದಿರಲೂ ಸಾಧ್ಯವಿಲ್ಲ. ಆದರೆ ಇವೆಲ್ಲವನ್ನೂ ಸಾಧ್ಯಗೊಳಿಸಿಕೊಡುವ, ಕಾಶ್ಮೀರ ವಿವಾದದ ತೀರ್ಮಾನವೆಂಬುದು ಇವೆಲ್ಲಕ್ಕಿಂತಲೂ ಹೆಚ್ಚು ಅಸಾಧ್ಯವನ್ನಿಸಿದೆ!

ಹಿನ್ನೆಲೆ ನೋಟ

ಕಾಶ್ಮೀರ ಕಲಹದ ಮೂಲವು ಸ್ವತಂತ್ರ ಭಾರತ ಮತ್ತು ಪಾಕಿಸ್ತಾನಗಳ ಸ್ಥಾಪನೆಯಲ್ಲೇ ಇದೆ. ಆಶ್ರಿತ ಸಂಸ್ಥಾನಗಳ ಕುರಿತು ಯಾವ ವ್ಯವಸ್ಥೆಯನ್ನೂ ಸೂಚಿಸದೆ ಬ್ರಿಟಿಷರು ಅವುಗಳನ್ನು ಇದ್ದ ಸ್ಥಿತಿಯಲ್ಲೇ ಬಿಟ್ಟು ಇಲ್ಲಿಂದ ಹೊರಟುಹೋದೊಡನೆಯೇ ಅವುಗಳ ಸ್ಥಾನ ಸಂಬಂಧದ ಸಮಸ್ಯೆಯೆದ್ದಿದ್ದಿತು. ಸ್ವತಂತ್ರ ಭಾರತ ಸರಕಾರವು, ತನ್ನೊಳಗಡೆಯ ಆಶ್ರಿತ ರಾಜ್ಯಗಳೊಡನೆ ಸತ್ಪರಿಣಾಮಕಾರೀ ಸಂಬಂಧ ವ್ಯವಹಾರಗಳನ್ನು ಆರಂಭಿಸ ಹತ್ತಿದಾಗಲೇ, ಉತ್ತರ ಮೂಲೆಯ ಸಂಸ್ಥಾನವಾಗಿರುವ ಮತ್ತು ಒಂದು ದಿಕ್ಕಿನಿಂದ ಹೊರತು ಮಿಕ್ಕೆಲ್ಲಾ ದಿಕ್ಕುಗಳಿಂದಲೂ ಪಾಕಿಸ್ತಾನದಿಂದಾವರಿಸಲ್ಪಟ್ಟಿರುವ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಸಂಬಂಧವಾಗಿ ಪಾಕಿಸ್ತಾನದ ಮಾರಣ ಹೋಮ ತಯಾರಾಗುತಿದ್ದಿತು. ಸ್ವಾತಂತ್ರ್ಯ ದೊರೆತ 1947ನೇ ಇಸವಿಯ ಒಕ್ಟೋಬರ್ 20ರಲ್ಲಿ ಪಾಕಿಸ್ತಾನದ ಪ್ರೇರಣೆ ಮತ್ತು ಸಹಾಯ ಪಡಕೊಂಡ ಗುಡ್ಡಗಾಡು ಜನರು ಕಾಶ್ಮೀರದೊಳಗೆ ನುಗ್ಗಿಬಂದುದು—ಕೂಡಲೇ ಕಾಶ್ಮೀರದ ಮಹಾರಾಜರು ಭಾರತಕ್ಕೆ ಮೊರೆಯಿಟ್ಟುದು—ಭಾರತ ಸರಕಾರವು ನ್ಯಾಯ ನಿಷ್ಠುರತೆಯನ್ನು ಪ್ರದರ್ಶಿಸಿ ಜನಪ್ರತಿನಿಧಿ ನಾಯಕ ಶೇಖ್ ಅಬ್ದುಲ್ಲರ ಮೂಲಕವೇ ಕಾಶ್ಮೀರ ಸಂಸ್ಥಾನವನ್ನು ಭಾರತದೊಂದಿಗೆ ಜೋಡಣೆ ಪಡೆಸಿಕೊಂಡುದು—ಅನ್ಯೋಪಾಯವಿಲ್ಲದೆ ವಿಮಾನ ಮೂಲಕ ಭಾರತ ಸರಕಾರವು ತನ್ನ ಸೇನೆಗಳನ್ನಿಳಿಸಿ ಧಾಳಿ ದವಡೆಯೊಳಗೆ ಸಿಕ್ಕಿದ್ದ ರಾಜಧಾನಿ ಶ್ರೀನಗರವನ್ನು ರಕ್ಷಿಸಿಕೊಂಡುದು—ಆದಿಭಾಗದಿಂದಲೂ ಕಾಶ್ಮೀರದ ಬಂಡುಗಾರರಿಗೆ ಬೆಂಬಲವಿತ್ತಿದ್ದ, ಪಾಕಿಸ್ತಾನವು ಕೊನೆಗೆ ತಾನೇ ಒಪ್ಪಿಕೊಂಡಂತೆ 1948ನೇ ಮೇ ತಿಂಗಳಲ್ಲಿ ತನ್ನ ಕ್ರಮಬದ್ಧ ಸೇನೆಗಳನ್ನೇ ಜಮ್ಮು ಕಾಶ್ಮೀರದೊಳಗೆ ಹೊಗಿಸಿದುದು—1948ನೇ ಜನವರಿಯಲ್ಲಿ 'ಆಕ್ರಮಣಗಾರರಿಗೆ ಬೆಂಬಲವಿತ್ತಿರುವ ಪಾಕಿಸ್ತಾನದ ಆಕ್ರಮ ವರ್ತನೆ'ಯ ವಿರುದ್ಧವಾಗಿ ಭಾರತ ಸರಕಾರವು ಭದ್ರತಾ ಸಮಿತಿಗೆ ದೂರು ಕೊಟ್ಟುದು ಮತ್ತಲ್ಲಿ ದೀರ್ಘಾವಧಿ ನಡೆದ ಚರ್ಚೆ—ಪಾಕಿಸ್ತಾನವು ಪ್ರಥಮತಃ ತನಗೂ ಆ ಹೋರಾಟಕ್ಕೂ ಸಂಬಂಧವೇ ಇಲ್ಲವೆಂದು ವಾದಿಸುತ್ತಾ ಕೊನೆಗೆ ತನ್ನ ಮೇಲಿನ ಆರೋಪವನ್ನು ಒಪ್ಪಿಕೊಂಡುದು—ಈ ವಿವಾದ ತೀರ್ಮಾನಕ್ಕಾಗಿ ಭದ್ರತಾ ಕೌನ್ಸಿಲು ನಿರ್ಣಯಗಳನ್ನು ಮಾಡಿ, ಅದಕ್ಕನುಸಾರವಾಗಿ 'ಕಾಶ್ಮೀರ ಕಮಿಶನ'ನ್ನು ನೇಮಿಸಿದುದು-ಕಾಶ್ಮೀರ ಕಮಿಶನು ತನ್ನ ಕಾರ್ಯದಲ್ಲಿ ಅಪಜಯಗೊಂಡ ಮೇಲೆ ಸರ್. ಓವೆನ್ ಡಿಕ್ಸನರ ನೇಮಕ-ಡಿಕ್ಸನರೂ ಪರಾಭವಗೊಂಡು ವರದಿಯೊಪ್ಪಿಸಿದುದು-ಇವೆಲ್ಲಾ ಘಟನೆಗಳ ಚಕ್ರಸುತ್ತು ಸರ್ವವಿದಿತವಿದೆ. ಅಂತೂ ಮೂರು ವರುಷಗಳಿಂದ ಏಕಪ್ರಕಾರ ಕೊಳೆಯುತ್ತಾ ಇರುವ ಪ್ರಶ್ನೆಯಿದು.

ಡಿಕ್ಸನ್ ಸೂಚನೆಗಳು

ಆಸ್ಟ್ರೇಲಿಯದ ಪ್ರಸಿದ್ಧ ನ್ಯಾಯಾಧೀಶರಿದ್ದು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳ ಸಮ್ಮತಿಯಿಂದ ಏಕಮಾತ್ರ ಮಧ್ಯಸ್ಥಗಾರನಾಗಿ ಭದ್ರತಾ ಕೌನ್ಸಿಲಿನಿಂದ ನೇಮಿಸಲ್ಪಟ್ಟು, ಇಲ್ಲಿ ಬಂದು ಎರಡು ತಿಂಗಳುಗಳಿಗೂ ಮಿಕ್ಕಿ ಶಾಂತಿಪ್ರಯತ್ನ ಮಾಡಿ ಪರಾಭವಗೊಂಡ ಸರ್. ಓವೆನ್ ಡಿಕ್ಸನರು ಕೊನೆಗೆ ಭದ್ರತಾ ಕೌನ್ಸಿಲಿಗೊಪ್ಪಿಸಿದ 12,000 ಪದಗಳುಳ್ಳ ನಿರಾಶಾ ವರದಿಯ ಸೂತ್ರಸಾರಾಂಗಳು ಹೀಗಿವೆ:—

"ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದೊಳಗೆ ಗುಡ್ಡಗಾಡು ಬಂಡಾಯಗಾರರು ನುಗ್ಗಿದುದು ಮತ್ತು ಮೇಲೆ ಪಾಕಿಸ್ತಾನದ ಕ್ರಮಬದ್ಧ ಸೇನೆಗಳು ಪ್ರವೇಶಿಸಿದುದು ಅಂತರ್ರಾಷ್ಟ್ರೀಯ ಶಾಸನಕ್ಕೆ ವಿರೋಧ. ಆದರೆ ಇಲ್ಲಿ ನನ್ನ ಸ್ಥಾನವಾವುದೆಂಬುದನ್ನು ಸ್ಪಷ್ಟ ಪಡಿಸಬೇಕಾಗಿದೆ. ಮೊದಲನೆಯದಾಗಿ ಭದ್ರತಾ ಸಮಿತಿಯು ಅಂತಹ ಶಾಸನವಿರುದ್ಧ ವರ್ತನೆಯ ಕುರಿತು ಘೋಷಿಸಿಲ್ಲ; ಎರಡನೆಯದಾಗಿ ಈ ಪ್ರಶ್ನೆಯ ಕಾನೂನು ಬದ್ಧ ಶೋಧನೆ ನಡೆಸಲು ನಾನು ಅಧಿಕೃತನಾಗಿಲ್ಲ; ಮತ್ತದನ್ನು ಮಾಡಿದ್ದೂ ಇಲ್ಲ. ಮೂರನೆಯದಾಗಿ ಹೀಗೇಕಾಯಿತು ಎಂಬ ಕಾರಣವನ್ನು ಶೋಧಿಸಲು ಹೋಗದೆ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಗಡಿಯನ್ನು ಗುಡ್ಡಗಾಡು ಜನರು ಮತ್ತು ಪಾಕಿಸ್ತಾನ್ ಸೇನೆಗಳು ದಾಟಿ ಹೋದುದು ಅಂತರ್ರಾಷ್ಟ್ರೀಯ ಕಾಯಿದೆಗೆ ವಿರುದ್ಧವೆಂಬುದನ್ನು ಒಪ್ಪಲು ಸಿದ್ಧನಿದ್ದೇನೆ.

ಆದ್ದರಿಂದಲೇ ಸೇನಾ ವಿಸರ್ಜನೆಯ ಮೊದಲ ಹೆಜ್ಜೆಯಾಗಿ ನಿಶ್ಚಿತ ದಿನದಲ್ಲಿ ಪಾಕಿಸ್ತಾನದ ಕ್ರಮಬದ್ಧ ಸೇನೆಗಳು ಅಲ್ಲಿಂದ ಹಿಂದೆಗೆಯಬೇಕು; ಆದಾಗ ಸಾಕಷ್ಟು ದಿನಗಳು ಕಳೆದಮೇಲೆ ಯುದ್ಧ ಹೋರಾಟ ನಿಂತಗಡಿಗಳ ಎರಡೂ ಕಡೆಯ ಸೇನೆಗಳು ನಿಶ್ಚಿತ ಪರಿಮಾಣದಲ್ಲಿ ಹಿಂದೆಗೆಯಬೇಕು ಎಂದು ನಾನು ಸೂಚಿಸಿದ್ದೆ. ತಮ್ಮ ವರ್ತನೆಯು ಅಂತರ್ರಾಷ್ಟ್ರೀಯ ಶಾಸನಕ್ಕೆ ವಿರುದ್ಧವೆಂಬ ನನ್ನ ಅಭಿಪ್ರಾಯವನ್ನು ಪಾಕಿಸ್ತಾನದ ಪ್ರಧಾನಿಗಳು ಬಲವಾಗಿ ಪ್ರತಿಭಟಿಸಿದರೂ ಸೇನಾ ವಿಸರ್ಜನಾ ಸಂಬಂಧದ ನನ್ನ ಸೂಚನೆಗಳಿಗೆ ಒಪ್ಪಿದ್ದರು.

ಭದ್ರತಾ ಕೌನ್ಸಿಲಿನ ನಿರ್ಣಯಗಳ ವ್ಯವಹಾರಬದ್ಧ ವಿಭಾಗಗಳ ಜಾರಿಗೆ ಅರ್ಥಾತ್ ಕಾಶ್ಮೀರದ ಜನಮತ ಸಂಗ್ರಹ ವ್ಯವಸ್ಥೆಗೆ ಭಾರತವು ಉದ್ದೇಶಪೂರ್ವಕ ಆತಂಕವೊಡ್ಡಿತೆಂದು ಪಾಕಿಸ್ತಾನದ ದೂರು. ಆದರೆ ಈ ವ್ಯವಸ್ಥೆಯು ಪೂರ್ವ ಶರ್ತವಾಗಿ ಭಾರತದ ಸಮ್ಮತಿಯು ಅವಶ್ಯಕತೆಯಿದ್ದು, ಆ ಸಮ್ಮತಿಯು ದೊರೆತಿಲ್ಲವೆಂಬ ವಸ್ತುಸ್ಥಿತಿಯುಳಿದುಕೊಂಡಿದೆ. ಅಂತಹ ಒಂದು ಒಪ್ಪಂದವನ್ನು ಸಾಧಿಸುವ ಪ್ರಯತ್ನದಲ್ಲಿ ಕಾಶ್ಮೀರ ಕಮಿಶನಿನವರು ಪರಾಭವಗೊಂಡಿದ್ದರು; ನನ್ನ ಪ್ರಯತ್ನದಲ್ಲಿ ನಾನೂ ಅಪಜಯಗೊಂಡೆ.

ಅಖಿಲ ಕಾಶ್ಮೀರದ ಜನಮತ ಸಂಗ್ರಹದ ವ್ಯವಸ್ಥೆಯು ಕಾರ್ಯಕಾರಿಯಾಗದಿದ್ದಲ್ಲಿ ಬೇರೆ ವಿಧಾನಗಳನ್ನು ಮುಂದೊಡ್ಡಬಹುದೆಂದು ಭದ್ರತಾ ಕೌನ್ಸಿಲು ನನಗೆ ಅಧಿಕಾರ ಕೊಟ್ಟಿದ್ದಂತೆ ನಾನು ಭಿನ್ನೋಪಾಯವನ್ನು ಸೂಚಿಸಿದೆ. ಕಾಶ್ಮೀರ ವಿಭಜನೆಯೇ ಇಲ್ಲಿರುವ ಬದಲು ವಿಧಾನ. ಭಾರತ ಮತ್ತು ಪಾಕಿಸ್ತಾನಗಳೆರಡೂ ಕಾಶ್ಮೀರ ಕಂದರವನ್ನು ಬಯಸುತ್ತಿರುವುದರಿಂದ ಯಾವುದೇ ವಿಭಜನಾಯೋಜನೆಗಾದರೂ ಕಂದರವನ್ನು ಒಂದಲ್ಲೊಂದು ಕಡೆಗೆ ಒಪ್ಪಿಸಿಕೊಡುವ ಒಂದು ಕ್ರಮವನ್ನು ಕಂಡುಹಿಡಿಯಬೇಕಾದುದು ಅಗತ್ಯ. ಭಾರತ ಪಾಕಿಸ್ತಾನಗಳ ನಡುವಿನ ಈ ಜಗಳವನ್ನು ಇತ್ಯರ್ಥಿಸುವ ಯಾವುದಾದರೊಂದು ಸುಯೋಗವಿರುವುದಾದರೆ ಅದು ಕಾಶ್ಮೀರವನ್ನು ವಿಭಜಿಸುವ ಮೂಲಕ ಮತ್ತು ಕಾಶ್ಮೀರ ಕಣಿವೆಯನ್ನು ಯಾವುದಾದರೊಂದು ಕಡೆಗೆ ಒಪ್ಪಿಸಿಕೊಡುವ ಹಂಚಿಕೆಯೊಂದನ್ನು ಕಂಡುಹಿಡಿಯುವ ಮೂಲಕವೇ ಹೊರತು ಅಖಿಲ ಕಾಶ್ಮೀರದ ಮತ ಸಂಗ್ರಹದಿಂದಲ್ಲವೆಂಬುದು ಎಲ್ಲಾ ಘಟನೆಗಳ ಮೇಲಿಂದ ನನಗೆ ಮನವರಿಕೆಯಾ

The Canara Mutual Assurance Co., Ltd.

ESTD: 1935. H. O. **UDIPI.**

Some Salient Straws.

1. A purely mutual Company where the policyholders are the only shareholders and receive the entire profits.
2. Economic management, Low Expense Ratio.
3. Bonus declared right from the inception of the Company
4. Life Fund exceeds Rs. 52 lakhs
5. Steady growth in business and popularity

T. R. A Pai,
Managing Director.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

ಗಿದೆ. ಭೌಗೋಳಿಕವಾಗಿ, ಅಂತರ್ವಸತಿಯ ಮೇಲಿಂದ ಅಥವಾ ಆರ್ಥಿಕ ದೃಷ್ಟಿಯಿಂದ ಕಾಶ್ಮೀರವು ನಿಜಕ್ಕೂ ಏಕರೂಪೀ ಸಂಸ್ಥಾನವಲ್ಲ. ವಿವಿಧ ವಿಭಾಗಗಳನ್ನು ಕೂಡಿಕಟ್ಟಿ ಮಹಾರಾಜರ ರಾಜಕೀಯಾಧಿಕಾರದ ಕೆಳಗೆ ತಂದಿಟ್ಟಿರುವ ಒಂದು ಗುಂಪದು; ಅಲ್ಲಿರುವ ಏಕರೂಪವಿಷ್ಟೆ.

ಜಮ್ಮು ಕಾಶ್ಮೀರಗಳ ಅಮೂಲಾಗ್ರ ಜನಮತ ಸಂಗ್ರಹ ನಡಿಸಿ, ತತ್ಪರಿಣಾಮವಾಗಿ ಇಡೀ ಸಂಸ್ಥಾನವು ಭಾರತ ಅಥವಾ ಪಾಕಿಸ್ತಾನದ ಪಾಲಿಗೆ ಹೋದಲ್ಲಿ ಪ್ರತಿಯೊಂದು ರಾಷ್ಟ್ರದ ಪಾಲಿಗೂ ವಿವಿಧ ರೀತಿಯ ನಿರಾಶ್ರಿತ ಸಮಸ್ಯೆಗಳೊದಗಬಹುದು. ಪಾಕಿಸ್ತಾನದ ಮಟ್ಟಿಗದು ಮತ್ತಷ್ಟು ಹೆಚ್ಚಿನದಾಗುವದು. ಆದ್ದರಿಂದ ಜನತೆಯ ದೃಷ್ಟಿಯಿಂದ ಮತ್ತು ಶಾಶ್ವತ ವ್ಯವಸ್ಥೆಗಾಗಿ ಹಾಗೂ ಮತ್ತೊಂದು ನಿರಾಶ್ರಿತ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದಕ್ಕಾಗಿ ಅಖಿಲ ಕಾಶ್ಮೀರದ ಮತಗಣನೆಯನ್ನು ಬಿಟ್ಟು ಕಾಶ್ಮೀರ ವಿಭಜನೆ ಮಾಡತಕ್ಕದ್ದೆಂದು ಸೂಚಿಸುತ್ತೇನೆ.

ಕಾಶ್ಮೀರ ಕಂದರದ ಮತಸಂಗ್ರಹವು ನಿಷ್ಪಕ್ಷಪಾತತೆಯಿಂದ ಮತ್ತು ಸುವ್ಯವಸ್ಥೆಯಿಂದ ನಡೆಯುವಂತೆ ಮಾಡಲು, ಭದ್ರತಾ ಕೌನ್ಸಿಲಿನಿಂದ ಜನಮತ ಸಂಗ್ರಹಾಧಿಕಾರಿಯಾಗಿ ನೇಮಿಸಲ್ಪಟ್ಟಿರುವ ನಿಮಿಟ್ಸರ, ಅಥವಾ ಇತರ ಸಂಯುಕ್ತ ರಾಷ್ಟ್ರಗಳ ಅಧಿಕಾರಿಗಳಿಂದ ಸಹಾಯ ಪಡೆಯುವ ಅವರ ಪ್ರತಿನಿಧಿಗಳ ಸರಕಾರವು ಅಲ್ಲಿ ತಾತ್ಕಾಲಿಕವಾಗಿ ಸ್ಥಾಪನೆಗೊಳ್ಳಬೇಕು, ತಮ್ಮ ನಿಶ್ಚಿತಗಡಿಯೊಳಗಿನ ಎಲ್ಲಾ ಸೇನೆಗಳನ್ನೂ ಹೊರಹಾಕುವ ಅಧಿಕಾರವು ಈ ಆಡಳಿತೆಗಿರಬೇಕು. ಯಾವುದೇ ಉದ್ದೇಶಕ್ಕಾಗಿ ಈ ಆಡಳಿತೆಯು ವಿಜ್ಞಾಪಿಸಿಕೊಂಡರೆ ತಮ್ಮ ಸೇನೆಗಳನ್ನು ಅಲ್ಲಿಗೆ ಕಳುಹಲು ಭಾರತ ಮತ್ತು ಪಾಕಿಸ್ತಾನಗಳೆರಡೂ ಬದ್ಧವಿರತಕ್ಕದ್ದು. ಜನತೆಯು ಮುಂದೆ ತಮ್ಮ ಅಭಿಪ್ರಾಯಗಳನ್ನಿಡುವ ಮಟ್ಟಿಗೆ ಮತ್ತಿತರ ವಿಷಯಗಳಲ್ಲಿ ಭಾರತ, ಪಾಕಿಸ್ತಾನಗಳಿಗೆ ಸಮಾನಾಧಿಕಾರವಿರತಕ್ಕದ್ದು, ಎಂಬ ಸೂಚನೆಯನ್ನು ಮುಂದಿಟ್ಟಿದ್ದೆ.

ಈ ಸೂಚನೆಯಂತೆ ಪಾಕಿಸ್ತಾನವು ಜನಮತ ಸಂಗ್ರಹದಲ್ಲಿ ಭಾಗಿಯಾಗುವದೆಂದರೆ ಮತ್ತು ಪಾಕಿಸ್ತಾನದ ಸೇನೆಗಳನ್ನು ಕರೆಯಿಸುವದೆಂದರೆ, ಆಕ್ರಮಣಕ್ಕೆ ಶರಣು ಬಂದಂತೆಯೇ ಸರಿ, ಎನ್ನುತ್ತಾ ಭಾರತದ ಪ್ರಧಾನಿಗಳು ಈ ಸೂಚನೆಯನ್ನು ತಿರಸ್ಕರಿಸಿದುದಲ್ಲದೆ, ಈ ನೂತನ ಸೂಚನೆ ಮುಂದೆ ಬಂದುದಕ್ಕಾಗಿ ತನ್ನ ಆಶ್ಚರ್ಯವನ್ನೂ ವ್ಯಕ್ತಪಡಿಸಿದ್ದರು. ಕಾಶ್ಮೀರದ ರಕ್ಷಣೆಯನ್ನು ಸಡಿಲುಗೊಳಿಸುವ ಅಪಾಯಕರ ವರ್ತನೆಯನ್ನು ಕೈಕೊಳ್ಳಲು ಭಾರತವು ತಯಾರಿಲ್ಲ. ಮತ್ತು ಯಾವ ಕಾರಣಕ್ಕಾಗಿಯಾದರೂ ಮತಸಂಗ್ರಹ ಕ್ಷೇತ್ರದೊಳಗೆ ಪಾಕಿಸ್ತಾನದ ಸೇನೆಗಳನ್ನು ಪ್ರವೇಶಿಸಲು ಅದು ಬಿಡುವಂತಿಲ್ಲ.

ಜನಮತ ಸಂಗ್ರಹವು ಸ್ವತಂತ್ರವಾಗಿ ಮತ್ತು ಯೋಗ್ಯ ರೀತಿಯಿಂದ ನಡೆಯಲಾಗುವಂತೆ, ಜುಲುಮೆ ಅಥವಾ ಯಾವುದೇ ವಿಧದ ಪ್ರಭಾವಕ್ಕೊಳಗಾಗದ ಪರಿಸ್ಥಿತಿ ನಿರ್ಮಾಣಗೊಳ್ಳುವಂತಹ ಸೇನಾ ವಿಸರ್ಜನೆಗೆ ಭಾರತದ ಒಪ್ಪಿಗೆಯೆಂದಿಗೂ ದೊರೆಯಲಾರದೆಂಬುದು ಕಟ್ಟಕಡೆಗೆ ನನಗೆ ಮನವರಿಕೆಯಾಯಿತು.

ಪ್ರತ್ಯಕ್ಷ ಹೋರಾಟ ನಡೆಯುತ್ತಿದ್ದಾಗ, ಅದನ್ನು ನಿಲ್ಲಿಸಲು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲು ಮತ್ತು ಅದರ ಕಮಿಶನು ಮಧ್ಯ ಪ್ರವೇಶಿಸಬೇಕಾಗಿದ್ದುದೇನೋ ಸ್ವಾಭಾವಿಕ. ಆ ಕೆಲಸ ಮುಗಿದ ಮೇಲೆ ಕೂಡಾ ಕಾಶ್ಮೀರ ಸಂಬಂಧದ ಪರಸ್ಪರ ವಿರುದ್ಧ ವಾದಗಳನ್ನು ತೀರ್ಮಾನಿಸುವುದು ಹೇಗೆ ಎಂಬ ಪ್ರಶ್ನೆಯು ಭದ್ರತಾ ಕೌನ್ಸಿಲು ಮತ್ತು ಕಮಿಶನಿನ ಪಾಲಿಗೇನೇ ಉಳಿಯುತ್ತದೆ.

ಈಗ ಆ ಇಡೀ ಪ್ರಶ್ನೆಯು ಸಮೂಲಾಗ್ರವಾಗಿ ಚರ್ಚಿಸಲ್ಪಟ್ಟಿದೆಯಲ್ಲದೆ, ಇತ್ಯರ್ಥ ಸಾಧ್ಯವಾದ ಎಲ್ಲಾ ವಿಧಾನಗಳ ಕೂಲಂಕಷ ಶೋಧನೆಯೂ ನಡೆಯಿತೆನ್ನಬಹುದು. ಇನ್ನು ಸಂಬಂಧಪಟ್ಟ ಪಕ್ಷಗಳವರ ಪಾಲಿಗೇನೇ ಈ ವಿವಾದದ ಪೂರ್ಣಾಧಿಕಾರವನ್ನು ಮರಳಿ ಒಪ್ಪಿಸಿ ಕೊಡುವುದೇ ಪ್ರಾಯಶಃ ಉತ್ತಮೋಪಾಯ. ಇವೆಲ್ಲಾ ಸನ್ನಿವೇಶಗಳ ಮೇಲಿಂದ, ಈ ಸಂಬಂಧವಾಗಿ ಇನ್ನಾವುದೇ ಹೆಜ್ಜೆಯನ್ನಿಡುವಂತೆ ಭದ್ರತಾ ಕೌನ್ಸಿಲಿಗೆ ಶಿಫಾರಸು ಮಾಡಲು ನನ್ನ ಮಟ್ಟಿಗೆ ನಾನಂತೂ ತಯಾರಿಲ್ಲ."

ಇದರ ಪ್ರತಿಕ್ರಿಯೆ

ಮೇಲಿನ ತನ್ನ ವಾದ ಸರಣಿಯನ್ನು ಸ್ಪಷ್ಟೀಕರಿಸಿ ಮಂದಟ್ಟು ಪಡಿಸಲು ಭದ್ರತಾ ಕೌನ್ಸಿಲಿನ ಮುಂದೆ ಸ್ವತಃ ವಾದಿಸಲು ತಯಾರಿರುವೆನೆಂದು ಆಸ್ಟ್ರೇಲಿಯಾದ ಈ ಪ್ರಸಿದ್ಧ ನ್ಯಾಯಾಧೀಶರು ವಕೀಲೀ ಸ್ಫೂರ್ತಿಯನ್ನು ತೋರಿಸಿದ್ದರೂ ಭದ್ರತಾ ಕೌನ್ಸಿಲು ಇವರಿಗಾ ಕೆಲಸವನ್ನು ಇಷ್ಟರ ವರೆಗೆ ಕೊಟ್ಟಿಲ್ಲ; ಕಾಶ್ಮೀರದ ಪ್ರಶ್ನೆಯು ಪ್ರಕೃತ ಭದ್ರತಾ ಕೌನ್ಸಿಲಿನ ಮುಂದೆ ಬರುವ ಸಂಭವವೂ ಕಾಣುವದಿಲ್ಲ. ಭಾರತ, ಪಾಕಿಸ್ತಾನ, ಎರಡಕ್ಕೂ ಅಂತಹ ಚರ್ಚೆಯ ಆಶೆಯಿಲ್ಲವೆಂದು ಖಚಿತವಾಗಿದೆ. ಡಿಕ್ಸನರ ತೀರ್ಮಾನವೆಂಬುದು ಅಮೃತ ಬೀಜದಲ್ಲಿ ವಿಷವೃಕ್ಷ ಹುಟ್ಟಿದಷ್ಟು ವಿಲಕ್ಷಣವಾಗಿ ಕಾಣುತ್ತಿದೆ. ಪಾಕಿಸ್ತಾನದ ಆಕ್ರಮ ವರ್ತನೆಯ ಕುರಿತು ಭಾರತವು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟು ಎರಡೂ ಮುಕ್ಕಾಲು ವರುಷಗಳಾದ ಈ ದೀರ್ಘಾವಧಿಯಲ್ಲಿ 'ಪಾಕಿಸ್ತಾನದ ವರ್ತನೆಯು ಅಂತರರಾಷ್ಟ್ರೀಯ ಶಾಸನಕ್ಕೆ ವಿರುದ್ಧ' ಎಂಬುದು ಮೃದು ಮಾತುಗಳಿಂದಾದರೂ, ಆ ಸಮಿತಿಯ ಪರವಾಗಿ ಕೇಳಿಬಂದುದು ಇದೇ ಮೊದಲ ಬಾರಿ. ಕಾಶ್ಮೀರ ಕಲಹದ ಮೂಲವೇ ಅದಾಗಿದ್ದರೂ, ಅಲ್ಲಿಂದಾ ಮೇಲೆ ಸರ್. ಡಿಕ್ಸನರು ತನ್ನ ವಾದವನ್ನು ವಿರುದ್ಧ ದಿಕ್ಕಿಗೇನೇ ಬೆಳೆಯಿಸಿಕೊಂಡು ಹೋಗಿದ್ದಾರೆ. "ಜನಮತ ಸಂಗ್ರಹವು ಯೋಗ್ಯ ರೀತಿಯಲ್ಲಾಗುವಂತೆ ಸೇನಾ ಬರ್ಖಾಸ್ತು ಮಾಡಿಕೊಳ್ಳುವ ಒಪ್ಪಂದಕ್ಕೆ ಸರ್ವಥಾ ಬರಲೊಪ್ಪದ" ಅಪರಾಧಿ ಸ್ಥಾನವನ್ನು ಭಾರತಕ್ಕೆ ಕೊಡುವಾಗ ಸರ್. ಡಿಕ್ಸನರು ಆ ಜನಮತ ಸಂಗ್ರಹಕ್ಕಾಗಿ ಒಪ್ಪಂದವಾದೊಡನೆ, ಎಂಬುದನ್ನು ಮರೆತಿದ್ದಾರೆ ಅದು ಅವರೇ ಹೇಳಿರುವ 'ಅಂತರರಾಷ್ಟ್ರೀಯ ಕಾಯಿದೇ ಭಂಜಕರೊಡನೆ; ಕಾಶ್ಮೀರದ ಮೂಲಾಪರಾಧಿಗಳೊಡನೆ; ಆ ಅಪರಾಧದ ಪತ್ತೆ ಹಚ್ಚಿ ಶಿಕ್ಷೆ ವಿಧಿಸುವ ಅಧಿಕಾರವನ್ನು ಪಡೆಯದೆ, ಯಾರು ಎಂಥವರೆಂಬ ಗೊಡವೆಯಿಲ್ಲದೆ ಇಕ್ಕಡೆಯವರೊಳಗೆ "ರಾಜೀ ಯತ್ನ"ವನ್ನಷ್ಟೇ ಮಾಡುವ ಹೊಣೆ ಹೊತ್ತು ಬಂದ ಸರ್. ಡಿಕ್ಸನರು ತನ್ನ ಸ್ಥಾನಕ್ಕನುಗುಣವಾಗಿ



ಕಾಶ್ಮೀರದ ಕಲಹ—ತೀರ್ಮಾನಾತೀತವೇ?

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಮುಖ್ಯವಿವಾದವಾಗಿ ಕಾಶ್ಮೀರದ ಪ್ರಶ್ನೆಯೀಗಲೂ ಹಾಗೆಯೇ ಉಳಿದುಕೊಂಡಿದೆ. ಕಟ್ಟಕಡೆಯದಾಗಿ ನಡೆದ ಸರ್ ಓವೆನ್ ಡಿಕ್ಸನರ ರಾಜೀ ಪ್ರಯತ್ನವೂ ನಿಷ್ಫಲಗೊಂಡಿತು. "ಇನ್ನು ಈ ಕುರಿತು ಭದ್ರತಾ ಕೌನ್ಸಿಲು ಬೇರಾವ ಕಾರ್ಯಕ್ರಮವನ್ನೂ ಕೈಕೊಳ್ಳದೆ ಸಂಬಂಧಪಟ್ಟ ಪಕ್ಷಗಳು ತಮ್ಮೊಳಗೇನೇ ಅದನ್ನು ಇತ್ಯರ್ಥಿಸಿಕೊಳ್ಳುವಂತೆ ಬಿಟ್ಟು ದೂರನಿಲ್ಲುವುದು ವಾಸಿ" ಎಂದು ಸರ್. ಡಿಕ್ಸನರು ಕೊನೆಗೆ ಶಿಫಾರಸು ಮಾಡಿದ್ದಾರೆ. ಮುಂದೆ ಹೇಗಾದರೂ ಯಾವ ವಿಧದ ಮಧ್ಯಸ್ಥಿಕೆಯೂ ಹಿಡಿಯಲೊಲ್ಲದ ಬಿಗುಸಮಸ್ಯೆಯಿದು, ಎಂಬುದು ಈ ಮೂಲಕ ಖಚಿತವಾಗಿದೆ. ಕಾಶ್ಮೀರ ವಿವಾದವು ಹೀಗೆಯೇ ಉಳಿದಿರುವ ವರೆಗೆ ಭಾರತ ಪಾಕಿಸ್ತಾನಗಳೊಳಗೆ ಶಾಶ್ವತ ಸ್ನೇಹಾಚಾರ ಅಸಾಧ್ಯ; ಭಾರತವಾಗಲೀ ಪಾಕಿಸ್ತಾನವಾಗಲೀ ನಿಶ್ಚಿಂತೆಯಿಂದ ಗೃಹಕಾರ್ಯಗಳಲ್ಲಿ ಲಕ್ಷ್ಯಹರಿಸುವುದು ಅಸದಳ; ಲೋಕದ ಪಾಳಯ ಕಚ್ಚಾಟಗಳು ಸ್ವತಃ ತಮ್ಮೊಳಗಡೆಯಲ್ಲಿ ಪ್ರತಿಬಿಂಬಿಸಲಾರವು ಎಂದು ಇವೆರಡು ರಾಷ್ಟ್ರಗಳು ಭರವಸೆಯಿಂದಿರಲೂ ಸಾಧ್ಯವಿಲ್ಲ. ಆದರೆ ಇವೆಲ್ಲವನ್ನೂ ಸಾಧ್ಯಗೊಳಿಸಿಕೊಡುವ, ಕಾಶ್ಮೀರ ವಿವಾದದ ತೀರ್ಮಾನವೆಂಬುದು ಇವೆಲ್ಲಕ್ಕಿಂತಲೂ ಹೆಚ್ಚು ಅಸಾಧ್ಯವೆನ್ನಿಸಿದೆ!

ಹಿನ್ನೆಲೆ ನೋಟ

ಕಾಶ್ಮೀರ ಕಲಹದ ಮೂಲವು ಸ್ವತಂತ್ರ ಭಾರತ ಮತ್ತು ಪಾಕಿಸ್ತಾನಗಳ ಸ್ಥಾಪನೆಯಲ್ಲೇ ಇದೆ. ಆಶ್ರಿತ ಸಂಸ್ಥಾನಗಳ ಕುರಿತು ಯಾವ ವ್ಯವಸ್ಥೆಯನ್ನೂ ಸೂಚಿಸದೆ ಬ್ರಿಟಿಷರು ಅವುಗಳನ್ನು ಇದ್ದ ಸ್ಥಿತಿಯಲ್ಲೇ ಬಿಟ್ಟು ಇಲ್ಲಿಂದ ಹೊರಟು ಹೋದೊಡನೆಯೇ ಅವುಗಳ ಸ್ಥಾನ ಸಂಬಂಧದ ಸಮಸ್ಯೆಯೆದ್ದಿದ್ದಿತು. ಸ್ವತಂತ್ರ ಭಾರತ ಸರಕಾರವು, ತನ್ನೊಳಗಡೆಯ ಆಶ್ರಿತ ರಾಜ್ಯಗಳೊಡನೆ ಸತ್ಪರಿಣಾಮಕಾರೀ ಸಂಬಂಧ ವ್ಯವಹಾರಗಳನ್ನು ಆರಂಭಿಸಹತ್ತಾಗಲೇ, ಉತ್ತರ ಮೂಲೆಯ ಸಂಸ್ಥಾನವಾಗಿರುವ ಮತ್ತು ಒಂದು ದಿಕ್ಕಿನಿಂದ ಹೊರತು ಮಿಕ್ಕೆಲ್ಲ ದಿಕ್ಕುಗಳಿಂದಲೂ ಪಾಕಿಸ್ತಾನದಿಂದಾವರಿಸಲ್ಪಟ್ಟಿರುವ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಸಂಬಂಧವಾಗಿ ಪಾಕಿಸ್ತಾನದ ಮಾರಣ ಹೋಮ ತಯಾರಾಗುತಿದ್ದಿತು. ಸ್ವಾತಂತ್ರ್ಯ ದೊರೆತ 1947ನೇ ಇಸವಿಯ ಒಕ್ಟೋಬರ್ 20ರಲ್ಲಿ ಪಾಕಿಸ್ತಾನದ ಪ್ರೇರಣೆ ಮತ್ತು ಸಹಾಯ ಪಡೆಕೊಂಡ ಗುಡ್ಡಗಾಡು ಜನರು ಕಾಶ್ಮೀರದೊಳಗೆ ನುಗ್ಗಿ ಬಂದುದು—ಕೂಡಲೇ ಕಾಶ್ಮೀರದ ಮಹಾರಾಜರು ಭಾರತಕ್ಕೆ ಮೊರೆಯಿಟ್ಟುದು—ಭಾರತ ಸರಕಾರವು ನ್ಯಾಯನಿಷ್ಠುರತೆಯನ್ನು ಪ್ರದರ್ಶಿಸಿ ಜನಪ್ರತಿನಿಧಿ ನಾಯಕ ಶೇಖ್ ಅಬ್ದುಲ್ಲಾರ ಮೂಲಕವೇ ಕಾಶ್ಮೀರ ಸಂಸ್ಥಾನವನ್ನು ಭಾರತದೊಂದಿಗೆ ಜೋಡಣೆ ಪಡಿಸಿಕೊಂಡುದು—ಅನ್ಯೋಪಾಯವಿಲ್ಲದೆ ವಿಮಾನ ಮೂಲಕ ಭಾರತ ಸರಕಾರವು ತನ್ನ ಸೇನೆಗಳನ್ನಿಳಿಸಿ ಧಾಳಿ ದವಡೆಯೊಳಗೆ ಸಿಕ್ಕಿದ್ದ ರಾಜಧಾನಿ ಶ್ರೀನಗರವನ್ನು ರಕ್ಷಿಸಿ ಕೊಂಡುದು—ಆದಿಭಾಗದಿಂದಲೂ ಕಾಶ್ಮೀರದ ಬಂಡುಗಾರರಿಗೆ ಬೆಂಬಲವಿತ್ತಿದ್ದ ಪಾಕಿಸ್ತಾನವು ಕೊನೆಗೆ ತಾನೇ ಒಪ್ಪಿಕೊಂಡಂತೆ 1948ನೇ ಮೇ ತಿಂಗಳಲ್ಲಿ ತನ್ನ ಕ್ರಮಬದ್ಧ ಸೇನೆಗಳನ್ನೇ ಜಮ್ಮು ಕಾಶ್ಮೀರದೊಳಗೆ ಹೊಗಿಸಿದುದು—1948ನೇ ಜನವರಿಯಲ್ಲಿ 'ಆಕ್ರಮಣಗಾರರಿಗೆ ಬೆಂಬಲವಿತ್ತಿರುವ ಪಾಕಿಸ್ತಾನದ ಆಕ್ರಮ ವರ್ತನೆ'ಯ ವಿರುದ್ಧವಾಗಿ ಭಾರತ ಸರಕಾರವು ಭದ್ರತಾ ಸಮಿತಿಗೆ ದೂರು ಕೊಟ್ಟುದು ಮತ್ತಲ್ಲಿ ದೀರ್ಘಾವಧಿ ನಡೆದ ಚರ್ಚೆ—ಪಾಕಿಸ್ತಾನವು ಪ್ರಥಮತಃ ತನಗೂ ಆ ಹೋರಾಟಕ್ಕೂ ಸಂಬಂಧವೇ ಇಲ್ಲವೆಂದು ವಾದಿಸುತ್ತಾ ಕೊನೆಗೆ ತನ್ನ ಮೇಲಿನ ಆರೋಪವನ್ನು ಒಪ್ಪಿಕೊಂಡುದು—ಈ ವಿವಾದ ತೀರ್ಮಾನಕ್ಕಾಗಿ ಭದ್ರತಾ ಕೌನ್ಸಿಲು ನಿರ್ಣಯಗಳನ್ನು ಮಾಡಿ, ಅದಕ್ಕನುಸಾರವಾಗಿ 'ಕಾಶ್ಮೀರ ಕಮಿಶನ್'ನ್ನು ನೇಮಿಸಿದುದು-ಕಾಶ್ಮೀರ ಕಮಿಶನು ತನ್ನ ಕಾರ್ಯದಲ್ಲಿ ಅಪಜಯಗೊಂಡ ಮೇಲೆ ಸರ್. ಓವೆನ್ ಡಿಕ್ಸನರ ನೇಮಕ—ಡಿಕ್ಸನರೂ ಪರಾಭವಗೊಂಡು ವರದಿಯೊಪ್ಪಿಸಿದುದು—ಇವೆಲ್ಲಾ ಘಟನೆಗಳ ಚಕ್ರಸುತ್ತು ಸರ್ವವಿದಿತವಿದೆ. ಅಂತೂ ಮೂರು ವರುಷಗಳಿಂದ ಏಕಪ್ರಕಾರ ಕೊಳೆಯುತ್ತಾ ಇರುವ ಪ್ರಶ್ನೆಯಿದು.

ಡಿಕ್ಸನ್ ಸೂಚನೆಗಳು

ಆಸ್ಟ್ರೇಲಿಯದ ಪ್ರಸಿದ್ಧ ನ್ಯಾಯಾಧೀಶನಿದ್ದು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳ ಸಮ್ಮತಿಯಿಂದ ಏಕಮಾತ್ರ ಮಧ್ಯಸ್ಥಗಾರನಾಗಿ ಭದ್ರತಾ ಕೌನ್ಸಿಲಿನಿಂದ ನೇಮಿಸಲ್ಪಟ್ಟು, ಇಲ್ಲಿ ಬಂದು ಎರಡು ತಿಂಗಳುಗಳಿಗೂ ಮಿಕ್ಕಿ ಶಾಂತಿಪ್ರಯತ್ನ ಮಾಡಿ ಪರಾಭವಗೊಂಡ ಸರ್. ಓವೆನ್ ಡಿಕ್ಸನರು ಕೊನೆಗೆ ಭದ್ರತಾ ಕೌನ್ಸಿಲಿಗೊಪ್ಪಿಸಿದ 12,000 ಪದಗಳುಳ್ಳ ನಿರಾಶಾ ವರದಿಯ ಸೂತ್ರಸಾರಗಳು ಹೀಗಿವೆ:—

"ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದೊಳಗೆ ಗುಡ್ಡಗಾಡು ಬಂಡಾಯಗಾರರು ನುಗ್ಗಿದುದು ಮತ್ತಾ ಮೇಲೆ ಪಾಕಿಸ್ತಾನದ ಕ್ರಮಬದ್ಧ ಸೇನೆಗಳೂ ಪ್ರವೇಶಿಸಿದುದು ಅಂತರ್ರಾಷ್ಟ್ರೀಯ ಶಾಸನಕ್ಕೆ ವಿರೋಧ. ಆದರೆ ಇಲ್ಲಿ ನನ್ನ ಸ್ಥಾನವಾವುದೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಮೊದಲನೆಯದಾಗಿ ಭದ್ರತಾ ಸಮಿತಿಯು ಅಂತಹ ಶಾಸನವಿರುದ್ಧ ವರ್ತನೆಯ ಕುರಿತು ಘೋಷಿಸಿಲ್ಲ; ಎರಡನೆಯದಾಗಿ ಈ ಪ್ರಶ್ನೆಯು ಶಾಸನಬದ್ಧ ತೀರ್ಪನ್ನೀಡಿಸಲು ನಾನು ಅಧಿಕೃತನಾಗಿಲ್ಲ; ಮತ್ತದನ್ನು ಮಾಡಿದ್ದೂ ಇಲ್ಲ. ಮೂರನೆಯದಾಗಿ ಹೀಗೇಕಾಯಿತು ಎಂಬ ಕಾರಣವನ್ನು ಶೋಧಿಸಲು ಹೋಗದೆ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಗಡಿಯನ್ನು ಗುಡ್ಡಗಾಡು ಜನರು ಮತ್ತು ಪಾಕಿಸ್ತಾನ್ ಸೇನೆಗಳು ದಾಟಿ ಹೋದುದು ಅಂತರ್ರಾಷ್ಟ್ರೀಯ ಕಾಯಿದೆಗೆ ವಿರುದ್ಧವೆಂಬುದನ್ನು ಒಪ್ಪಲು ಸಿದ್ಧನಿದ್ದೇನೆ.

ಆದ್ದರಿಂದಲೇ ಸೇನಾ ವಿಸರ್ಜನೆಯ ಮೊದಲ ಹೆಜ್ಜೆಯಾಗಿ ನಿಶ್ಚಿತ ದಿನದಲ್ಲಿ ಪಾಕಿಸ್ತಾನದ ಕ್ರಮಬದ್ಧ ಸೇನೆಗಳು ಅಲ್ಲಿಂದ ಹಿಂದೆಗೆಯಬೇಕು; ಆದಾಗಿ ಸಾಕಷ್ಟು ದಿನಗಳು ಕಳೆದಮೇಲೆ ಗುಂಡು ಹಾರಾಟ ನಿಂತಗಡಿಗಳ ಎರಡೂ ಕಡೆಯ ಸೇನೆಗಳು ನಿಶ್ಚಿತ ಪರಿಮಾಣದಲ್ಲಿ ಹಿಂದೆಗೆಯಬೇಕು ಎಂದೂ ನಾನು ಸೂಚಿಸಿದ್ದೆ. ತಮ್ಮ ವರ್ತನೆಯು ಅಂತರ್ರಾಷ್ಟ್ರೀಯ ಶಾಸನಕ್ಕೆ ವಿರುದ್ಧವೆಂಬ ನನ್ನ ಅಭಿಪ್ರಾಯವನ್ನು ಪಾಕಿಸ್ತಾನದ ಪ್ರಧಾನಿಗಳು ಬಲವಾಗಿ ಪ್ರತಿಭಟಿಸಿದರೂ ಸೇನಾ ವಿಸರ್ಜನಾ ಸಂಬಂಧದ ನನ್ನ ಸೂಚನೆಗಳಿಗೆ ಒಪ್ಪಿದ್ದರು.

ಭದ್ರತಾ ಕೌನ್ಸಿಲಿನ ನಿರ್ಣಯಗಳ ವ್ಯವಹಾರಬದ್ಧ ವಿಭಾಗಗಳ ಜಾರಿಗೆ ಅರ್ಥಾತ್ ಕಾಶ್ಮೀರದ ಜನಮತ ಸಂಗ್ರಹ ವ್ಯವಸ್ಥೆಗೆ ಭಾರತವು ಉದ್ದೇಶಪೂರ್ವಕ ಆತಂಕವೊಡ್ಡಿತೆಂದು ಪಾಕಿಸ್ತಾನದ ದೂರು. ಆದರೆ ಈ ವ್ಯವಸ್ಥೆಯು ಪೂರ್ವ ಶರ್ತವಾಗಿ ಭಾರತದ ಸಮ್ಮತಿಯು ಆವಶ್ಯಕತೆಯಿದ್ದು, ಆ ಸಮ್ಮತಿಯು ದೊರೆತಿಲ್ಲವೆಂಬ ವಸ್ತುಸ್ಥಿತಿಯುಳಿದುಕೊಂಡಿದೆ. ಇಂತಹ ಒಂದು ಒಪ್ಪಂದವನ್ನು ಸಾಧಿಸುವ ಪ್ರಯತ್ನದಲ್ಲಿ ಕಾಶ್ಮೀರ ಕಮಿಶನಿನವರು ಪರಾಭವಗೊಂಡಿದ್ದರು; ನನ್ನ ಪ್ರಯತ್ನದಲ್ಲಿ ನಾನೂ ಅಪಜಯಗೊಂಡೆ.

ಅಖಿಲ ಕಾಶ್ಮೀರದ ಜನಮತ ಸಂಗ್ರಹದ ವ್ಯವಸ್ಥೆಯು ಕಾರ್ಯಕಾರಿಯಾಗದಿದ್ದಲ್ಲಿ ಬೇರೆ ವಿಧಾನಗಳನ್ನು ಮುಂದೊಡ್ಡಬಹುದೆಂದು ಭದ್ರತಾ ಕೌನ್ಸಿಲು ನನಗೆ ಅಧಿಕಾರ ಕೊಟ್ಟಿದ್ದಂತೆ ನಾನು ಭಿನ್ನೋಪಾಯವನ್ನು ಸೂಚಿಸಿದೆ. ಕಾಶ್ಮೀರ ವಿಭಜನೆಯೇ ಇಲ್ಲಿರುವ ಬದಲು ವಿಧಾನ. ಭಾರತ ಮತ್ತು ಪಾಕಿಸ್ತಾನಗಳೆರಡೂ ಕಾಶ್ಮೀರ ಕಂದರವನ್ನು ಬಯಸುತ್ತಿರುವುದರಿಂದ ಯಾವುದೇ ವಿಭಜನಾಯೋಜನೆಗಾದರೂ ಕಂದರವನ್ನು ಒಂದಲ್ಲೊಂದು ಕಡೆಗೆ ಒಪ್ಪಿಸಿಕೊಡುವ ಒಂದು ಕ್ರಮವನ್ನು ಕಂಡುಹಿಡಿಯಬೇಕಾದುದು ಆಗತ್ಯ. ಭಾರತ ಪಾಕಿಸ್ತಾನಗಳ ನಡುವಿನ ಈ ಜಗಳವನ್ನು ಇತ್ಯರ್ಥಿಸುವ ಯಾವುದಾದರೊಂದು ಸುಯೋಗವಿರುವುದಾದರೆ ಅದು ಕಾಶ್ಮೀರವನ್ನು ವಿಭಜಿಸುವ ಮೂಲಕ ಮತ್ತು ಕಾಶ್ಮೀರ ಕಣಿವೆಯನ್ನು ಯಾವುದಾದರೊಂದು ಕಡೆಗೆ ಒಪ್ಪಿಸಿಕೊಡುವ ಹಂಚಿಕೆಯೊಂದನ್ನು ಕಂಡುಹಿಡಿಯುವ ಮೂಲಕವೇ ಹೊರತು ಅಖಿಲ ಕಾಶ್ಮೀರದ ಮತಸಂಗ್ರಹದಿಂದಲ್ಲವೆಂಬುದು ಎಲ್ಲಾ ಘಟನೆಗಳ ಮೇಲಿಂದ ನನಗೆ ಮನವರಿಕೆಯಾ

The Canara Mutual Assurance Co., Ltd.

ESTD: 1935. H. O. UDIPI.

Some Salient Straws.

1. A purely mutual Company where the policyholders are the only shareholders and receive the entire profits
2. Economic management, Low Expense Ratio.
3. Bonus declared right from the inception of the Company
4. Life Fund exceeds Rs. 52 lakhs.
5. Steady growth in business and popularity.

T. R. A Pai,
Managing Director.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4¼%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanbangad & Mercara.

B. Manjaya Hegde.
Advocate & President, District Board, S. Kanara.
CHAIRMAN

ಸಿದೆ ,ಭೌಗೋಳಿಕವಾಗಿ, ಅಂತರ್ವಸತಿಯು ಮೇಲಿಂದ ಅಥವಾ ಆರ್ಥಿಕ ದೃಷ್ಟಿಯಿಂದ ಕಾಶ್ಮೀರವು ನಿಜಕ್ಕೂ ಏಕರೂಪೀ ಸಂಸ್ಥಾನವಲ್ಲ. ವಿವಿಧ ವಿಭಾಗಗಳನ್ನು ಕೂಡಿಕಟ್ಟಿ ಮಹಾರಾಜರ ರಾಜಕೀಯಾಧಿಕಾರದ ಕೆಳಗೆ ತಂದಿಟ್ಟಿರುವ ಒಂದು ಗುಂಪಿದು; ಅಲ್ಲಿರುವ ಏಕರೂಪವಿಷ್ಟೆ.

ಜಮ್ಮು ಕಾಶ್ಮೀರಗಳ ಅಮೂಲಾಗ್ರ ಜನಮತ ಸಂಗ್ರಹ ನಡಿಸಿ, ತತ್ಪರಿಣಾಮವಾಗಿ ಇಡೀ ಸಂಸ್ಥಾನವು ಭಾರತ ಅಥವಾ ಪಾಕಿಸ್ತಾನದ ಪಾಲಿಗೆ ಹೋದಲ್ಲಿ ಪ್ರತಿಯೊಂದು ರಾಷ್ಟ್ರದ ಪಾಲಿಗೂ ವಿವಿಧ ರೀತಿಯ ನಿರಾಶ್ರಿತ ಸಮಸ್ಯೆಗಳೇಳಬಹುದು. ಪಾಕಿಸ್ತಾನದ ಮಟ್ಟಿಗದು ಮತ್ತಷ್ಟು ಹೆಚ್ಚಿನದಾಗುವದು. ಆದ್ದರಿಂದ ಜನತೆಯ ದೃಷ್ಟಿಯಿಂದ ಮತ್ತು ಶಾಶ್ವತ ವ್ಯವಸ್ಥೆಗಾಗಿ ಹಾಗೂ ಮತ್ತೊಂದು ನಿರಾಶ್ರಿತ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದಕ್ಕಾಗಿ ಅಖಿಲಕಾಶ್ಮೀರದ ಮತಗಣನೆಯನ್ನು ಬಿಟ್ಟು ಕಾಶ್ಮೀರ ವಿಭಜನೆ ಮಾಡತಕ್ಕದ್ದೆಂದು ಸೂಚಿಸುತ್ತೇನೆ.

ಕಾಶ್ಮೀರ ಕಂದರದ ಮತಸಂಗ್ರಹವು ನಿಷ್ಪಕ್ಷಪಾತತೆಯಿಂದ ಮತ್ತು ಸುವ್ಯವಸ್ಥೆಯಿಂದ ನಡೆಯುವಂತೆ ಮಾಡಲು, ಭದ್ರತಾ ಕೌನ್ಸಿಲಿನಿಂದ ಜನಮತ ಸಂಗ್ರಹಾಧಿಕಾರಿಯಾಗಿ ನೇಮಿಸಲ್ಪಟ್ಟಿರುವ ನಿಮಿಟ್ಸರ, ಅಥವಾ ಇತರ ಸಂಯುಕ್ತ ರಾಷ್ಟ್ರಗಳ ಅಧಿಕಾರಿಗಳಿಂದ ಸಹಾಯ ಪಡೆಯುವ ಅವರ ಪ್ರತಿನಿಧಿಗಳ ಸರಕಾರವು ಅಲ್ಲಿ ತಾತ್ಕಾಲಿಕವಾಗಿ ಸ್ಥಾಪನೆಗೊಳ್ಳಬೇಕು. ತಮ್ಮ ನಿಶ್ಚಿತಗಡಿಯೊಳಗಿನ ಎಲ್ಲಾ ಸೇನೆಗಳನ್ನೂ ಹೊರಹಾಕುವ ಅಧಿಕಾರವು ಈ ಆಡಳಿತೆಗಿರಬೇಕು. ಯಾವುದೇ ಉದ್ದೇಶಕ್ಕಾಗಿ ಈ ಆಡಳಿತೆಯು ವಿಜ್ಞಾಪಿಸಿಕೊಂಡರೆ ತಮ್ಮ ಸೇನೆಗಳನ್ನು ಅಲ್ಲಿಗೆ ಕಳುಹಲು ಭಾರತ ಮತ್ತು ಪಾಕಿಸ್ತಾನಗಳೆರಡೂ ಬದ್ಧವಿರತಕ್ಕದ್ದು. ಜನತೆಯು ಮುಂದೆ ತಮ್ಮ ಅಭಿಪ್ರಾಯಗಳನ್ನಿಡುವ ಮಟ್ಟಿಗೆ ಮತ್ತಿತರ ವಿಷಯಗಳಲ್ಲಿ ಭಾರತ, ಪಾಕಿಸ್ತಾನಗಳಿಗೆ ಸಮಾನಾಧಿಕಾರವಿರತಕ್ಕದ್ದು, ಎಂಬ ಸೂಚನೆಯನ್ನು ಮುಂದಿಟ್ಟಿದ್ದೆ.

ಈ ಸೂಚನೆಯಂತೆ ಪಾಕಿಸ್ತಾನವು ಜನಮತ ಸಂಗ್ರಹದಲ್ಲಿ ಭಾಗಿಯಾಗುವದೆಂದರೆ ಮತ್ತೆ ಪಾಕಿಸ್ತಾನದ ಸೇನೆಗಳನ್ನು ಕರೆಯುವದೆಂದರೆ, ಆಕ್ರಮಣಕ್ಕೆ ತಣಾ ಬಂದಂತೆಯೇ ಸರಿ, ಎನ್ನುತ್ತಾ ಭಾರತದ ಪ್ರಧಾನಿಗಳು ಈ ಸೂಚನೆಯನ್ನು ತಿರಸ್ಕರಿಸಿದುದಲ್ಲದೆ, ಈ ನೂತನ ಸೂಚನೆ ಮುಂದೆ ಬಂದುದಕ್ಕಾಗಿ ತನ್ನ ಆಶ್ಚರ್ಯವನ್ನೂ ವ್ಯಕ್ತಪಡಿಸಿದ್ದರು. ಕಾಶ್ಮೀರದ ರಕ್ಷಣೆಯನ್ನು ಸಡಿಲುಗೊಳಿಸುವ ಅಪಾಯಕರ ವರ್ತನೆಯನ್ನು ಕೈಕೊಳ್ಳಲು ಭಾರತವು ತಯಾರಿಲ್ಲ. ಮತ್ತು ಯಾವ ಕಾರಣಕ್ಕಾಗಿಯಾದರೂ ಮತಸಂಗ್ರಹ ಕ್ಷೇತ್ರದೊಳಗೆ ಪಾಕಿಸ್ತಾನದ ಸೇನೆಗಳನ್ನು ಪ್ರವೇಶಿಸಲು ಅದು ಬಿಡುವಂತಿಲ್ಲ.

ಜನಮತ ಸಂಗ್ರಹವು ಸ್ವತಂತ್ರವಾಗಿ ಮತ್ತು ಯೋಗ್ಯ ರೀತಿಯಿಂದ ನಡೆಯಲಾಗುವಂತೆ, ಜುಲುಮೆ ಅಥವಾ ಯಾವುದೇ ವಿಧದ ಪ್ರಭಾವಕ್ಕೊಳಗಾಗದ ಪರಿಸ್ಥಿತಿ ನಿರ್ಮಾಣಗೊಳ್ಳುವಂತಹ ಸೇನಾ ವಿಸರ್ಜನೆಗೆ ಭಾರತದ ಒಪ್ಪಿಗೆಯೆಂದಿಗೂ ದೊರೆಯಲಾರದೆಂಬುದು ಕಟ್ಟಕಡೆಗೆ ನನಗೆ ಮನವರಿಕೆಯಾಯಿತು.

ಪ್ರತ್ಯಕ್ಷ ಹೋರಾಟ ನಡೆಯುತ್ತಿದ್ದಾಗ, ಅದನ್ನು ನಿಲ್ಲಿಸಲು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲು ಮತ್ತು ಅದರ ಕಮಿಶನು ಮಧ್ಯ ಪ್ರವೇಶಿಸಬೇಕಾಗಿದ್ದುದೇನೋ ಸ್ವಾಭಾವಿಕ. ಆ ಕೆಲಸ ಮುಗಿದ ಮೇಲೆ ಕೂಡಾ ಕಾಶ್ಮೀರ ಸಂಬಂಧದ ಪರಸ್ಪರ ವಿರುದ್ಧ ವಾದಗಳನ್ನು ತೀರ್ಮಾನಿಸುವುದು ಹೇಗೆ ಎಂಬ ಪ್ರಶ್ನೆಯು ಭದ್ರತಾ ಕೌನ್ಸಿಲು ಮತ್ತು ಕಮಿಶನಿನ ಪಾಲಿಗೇನೇ ಉಳಿಯುತ್ತದೆ.

ಈಗ ಆ ಇಡೀ ಪ್ರಶ್ನೆಯು ಸಮೂಲಾಗ್ರವಾಗಿ ಚರ್ಚಿಸಲ್ಪಟ್ಟಿದೆಯಲ್ಲದೆ, ಇತ್ಯರ್ಥ ಸಾಧ್ಯವಾದ ಎಲ್ಲಾ ವಿಧಾನಗಳ ಕೂಲಂಕುಶ ಶೋಧನೆಯೂ ನಡೆಯಿತೆನ್ನಬಹುದು. ಇನ್ನು ಸಂಬಂಧಪಟ್ಟ ಪಕ್ಷಗಳವರ ಪಾಲಿಗೇನೇ ಈ ವಿವಾದದ ಪೂರ್ಣಾಧಿಕಾರವನ್ನು ಮರಳಿ ಒಪ್ಪಿಸಿ ಕೊಡುವುದೇ ಪ್ರಾಯಶಃ ಉತ್ತಮೋಪಾಯ. ಇವೆಲ್ಲಾ ಸನ್ನಿವೇಶಗಳ ಮೇಲಿಂದ, ಈ ಸಂಬಂಧವಾಗಿ ಇನ್ನಾವುದೇ ಹೆಜ್ಜೆಯನ್ನಿಡುವಂತೆ ಭದ್ರತಾ ಕೌನ್ಸಿಲಿಗೆ ಶಿಫಾರಸು ಮಾಡಲು ನನ್ನ ಮಟ್ಟಿಗೆ ನಾನಂತೂ ತಯಾರಿಲ್ಲ."

ಇದರ ಪ್ರತಿಕ್ರಿಯೆ

ಮೇಲಿನ ತನ್ನ ವಾದ ಸರಣಿಯನ್ನು ಸ್ಪಷ್ಟೀಕರಿಸಿ ಮಂದಟ್ಟು ಪಡಿಸಲು ಭದ್ರತಾ ಕೌನ್ಸಿಲಿನ ಮುಂದೆ ಸ್ವತಃ ವಾದಿಸಲು ತಯಾರಿರುವೆನೆಂದು ಆಸ್ಟ್ರೇಲಿಯದ ಈ ಪ್ರಸಿದ್ಧ ನ್ಯಾಯಾಧೀಶರು ವಕೀಲೀ ಸ್ಫೂರ್ತಿಯನ್ನು ತೋರಿಸಿದ್ದರೂ ಭದ್ರತಾ ಕೌನ್ಸಿಲು ಅವರಿಗಾ ಕೆಲಸವನ್ನು ಇಷ್ಟರ ವರೆಗೆ ಕೊಟ್ಟಿಲ್ಲ; ಕಾಶ್ಮೀರದ ಪ್ರಶ್ನೆಯು ಪ್ರತ್ಯಕ್ಷ ಭದ್ರತಾ ಕೌನ್ಸಿಲಿನ ಮುಂದೆ ಬರುವ ಸಂಭವವೂ ಕಾಣುವದಿಲ್ಲ. ಭಾರತ, ಪಾಕಿಸ್ತಾನ, ಎರಡಕ್ಕೂ ಅಂತಹ ಚರ್ಚೆಯ ಆಶೆಯಿಲ್ಲವೆಂದು ಖಚಿತವಾಗಿದೆ. ಡಿಕ್ಸನರ ತೀರ್ಮಾನವೆಂಬುದು ಅಮೃತ ಬೀಜದಲ್ಲಿ ವಿಷವೃಕ್ಷ ಹುಟ್ಟಿದಷ್ಟು ವಿಲಕ್ಷಣವಾಗಿ ಕಾಣುತ್ತಿದೆ. ಪಾಕಿಸ್ತಾನದ ಆಕ್ರಮ ವರ್ತನೆಯ ಕುರಿತು ಭಾರತವು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟು ಎರಡೂ ಮುಕ್ಕಾಲು ವರುಷಗಳಾದ ಈ ದೀರ್ಘಾವಧಿಯಲ್ಲಿ ‘ಪಾಕಿಸ್ತಾನದ ವರ್ತನೆಯು

ಅಂತರಾಷ್ಟ್ರೀಯ ಶಾಸನಕ್ಕೆ
ದ್ಧ’ ಎಂಬುದು ಮೃದು ಮಾತುಗಳ
ದರೂ, ಆ ಸಮಿತಿಯ ಪರವಾಗಿ
ಬಂದುದು ಇದೇ ಮೊದಲ ಬಾರಿ.
ಶ್ಮೀರ ಕಲಹದ ಮೂಲವೇ ಆದಾಗಿದ್ದ
ಅಲ್ಲಿಂದಾ ಮೇಲೆ ಸರ್. ಡಿಕ್ಸನರು
ವಾದವನ್ನು ವಿರುದ್ಧ ದಿಕ್ಕಿಗೇನೇ
ಯಿಸಿಕೊಂಡು ಹೋಗಿದ್ದಾರೆ. “ಜನ
ಸಂಗ್ರಹವು ಯೋಗ್ಯ ರೀತಿಯಲ್ಲಾಗು
ತೆ ಸೇನಾ ಬರ್ಖಾಸ್ತು ಮಾಡಿಕೊಳ್ಳ
ಒಪ್ಪಂದಕ್ಕೆ ಸರ್ವಥಾ ಬರಲೊಪ್ಪದ”
ರಾಧಿ ಸ್ಥಾನವನ್ನು ಭಾರತಕ್ಕೆ ಕೊಡ
ಗ ಸರ್. ಡಿಕ್ಸನರು ಆ ಜನಮತ ಸ
ಹಕ್ಕಾಗಿ ಒಪ್ಪಂದವಾರೊಡನೆ, ಎಂಬ
ನ್ನು ಮರೆತಿದ್ದಾರೆ. ಅದು ಅವರೇ ಹೆ
ರುವ ‘ಅಂತರಾಷ್ಟ್ರೀಯ ಕಾಯಿದೇ ಭ
ಕ’ರೊಡನೆ; ಕಾಶ್ಮೀರದ ಮೂಲಾಪರಾ
ಗಳೊಡನೆ; ಆ ಅಪರಾಧದ ಪತ್ತೆ ಹ
ಶಿಕ್ಷೆ ವಿಧಿಸುವ ಅಧಿಕಾರವನ್ನು
ಯದೆ, ಯಾರು ಎಂಥವರೆಂ
ಗೊಡವೆಯಿಲ್ಲದೆ ಇಕ್ಕಡೆಯ
ರೊಳಗೆ ‘ರಾಜೀ ಯತ್ನ’ವನ್ನ
ಮಾಡುವ ಹೊಣೆ ಹೊತ್ತು ಬಂದ ಸ
ಡಿಕ್ಸನರು ತನ್ನ ಸ್ಥಾನಕ್ಕನುಗುಣವ

ಹೀಗೆ ವಾದಿಸಬಲ್ಲರು, ಆದರೆ ಭಾರತದ ಪಾಲಿಗೆ ಭದ್ರತಾ ಕೌನ್ಸಿಲು, ಕಾಶ್ಮೀರ ಕಮಿಶನು, ಸರ್ ಓವೆನ್ ಡಿಕ್ಸನ್ ಇವೆಲ್ಲಾ ಪೂರ್ವೋತ್ತರ ಅವತಾರಗಳ ಕಡೆಗೆ ಭಿನ್ನಧೋರಣೆ ಅಥವಾ ಅನುಕ್ರಮವಾಗಿ ಅರ್ಥಾರ್ಥ ಪರಿಶೀಲನೆ ಎಂಬುದಿಲ್ಲವೇ ಇಲ್ಲ. ಪಾಕಿಸ್ತಾನವು ತನ್ನ ಪಾಲಿನ ಕಾಶ್ಮೀರದಲ್ಲಿ ಅಕ್ರಮ ಪ್ರವೇಶ ಮಾಡಿದೆ ಎಂದು 1948ನೇ ಇಸವಿಯ ಪ್ರಥಮ ದಿನದಲ್ಲಿ ಭಾರತ ಕೊಟ್ಟಿದ್ದ ದೂರು ಇಂದಿನ ವರೆಗೂ ಹಾಗೆಯೇ ಇದೆ. ಭಾರತವಂದಂತೆ 'ಪಾಕಿಸ್ತಾನದ ವರ್ತನೆ ಅಕ್ರಮ'ವೆಂಬುದನ್ನು ಸರ್. ಡಿಕ್ಸನರೂ ಒಪ್ಪಿದ್ದಾರೆ. ಆದರೆ ತನಗಿರುವುದು ರಾಜೀ ಸಂಬಂಧದ ವ್ಯವಹಾರಾಧಿಕಾರ ಮಾತ್ರವಾದ್ದರಿಂದ ಅಪರಾಧಿ ಮತ್ತು ಅಪರಾಧಕ್ಕೊಳಗಾದವರನ್ನು ಸಮಾನತೆಯಿಂದ ಕಾಣಬೇಕೆಂದರೆ, ಸರ್. ಡಿಕ್ಸನರ ಈ ಕೊನೆಯ ಅಂಕದ ಪಾತ್ರವೊಂದಕ್ಕಾಗಿ ಇಡೀ ನಾಟಕದ ಮೂಲವನ್ನೇ ಬಿಟ್ಟುಬಿಡಬೇಕೆಂದರಾಗುವುದೆ? ಭಾರತ ಸರಕಾರವೊಪ್ಪದ ಸರ್. ಡಿಕ್ಸನರ ಸೂಚನೆಯಾದರೂ ಎಂತಹದು? ಭಾರತ ಮತ್ತು ಪಾಕಿಸ್ತಾನಗಳ ವಶದಲ್ಲಿರುವ ಮುಕ್ಕಾಲು ಭಾಗಗಳನ್ನೂ ಇದ್ದಂತಿರಗೊಡಿಸಿ, ಭಾರತದ ವಶವಿರುವ ಕಾಶ್ಮೀರ ಕಂದರದಲ್ಲಿ ಮಾತ್ರ ಜನಮತ ಸಂಗ್ರಹಕ್ಕಾಗಿ, ಅಲ್ಲಿಯ ಶೇಕ್ ಅಬ್ದುಲ್ಲಾ ಸರಕಾರವನ್ನು ಕೆಳಗಿಳಿಸಿ, ನಿಮಿಟ್ಸ್ ಸರಕಾರವನ್ನು ಸ್ಥಾಪಿಸಬೇಕೆಂಬ ಸೂಚನೆ ತಾನೆ? ಅಪರಾಧಿಯೆಂದು ಸಿದ್ಧವಾದ ಆಕ್ರಮಣಗಾರನನ್ನು, ಆತ ಇದುವರೆಗೆ ಹೋಗದಿರುವ ಕಂದರದೊಳಗಡೆಗೂ ಕರೆಯಿಸಿಕೊಳ್ಳುವ ಕೆಲಸವಿದು ಹೊರತು ಅನ್ಯಾರ್ಥ ಇದಕ್ಕಿಲ್ಲ. ಭಾರತ ಪಾಕಿಸ್ತಾನಗಳೆರಡೂ ಕಾಶ್ಮೀರ ವಿಭಜನೆಗೆ ವಿರೋಧ ಸೂಚಿಸುತ್ತಾ ಬಂದಿರುವವಾದರೂ ಸದ್ಯ ಸ್ಥಿತಿಯಲ್ಲಿ ಮಧ್ಯಸ್ಥಗಾರನ ದೃಷ್ಟಿಯಿಂದ ಸರ್. ಓವೆನ್ ಡಿಕ್ಸನರು ಕಾಶ್ಮೀರ ವಿಭಜನೆಯನ್ನು ಸೂಚಿಸಿರುವುದು ತಪ್ಪಲ್ಲ. ಆದರೆ, ಅವರು ಹಿಡಿದ ಹಾದಿಗನುಸಾರವಾಗಿಯೇ, ಕಂದರದ ಆಡಳಿತೆಯನ್ನೂ ಇದ್ದಂತಿರಗೊಡಿಸಿ, ಅದರ ಆಶ್ರಯದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳ ಮೇಲ್ವಿಚಾರಣೆಯಲ್ಲಿ ಜನಮತ ಸಂಗ್ರಹಿಸುವ ವ್ಯವಸ್ಥೆಯನ್ನವರು ಸೂಚಿಸಬೇಕಿತ್ತು. ಆ ರೀತಿ ನ್ಯಾಯದಂಡವನ್ನು ತ ದಿವರೆಗೂ ನೇರಾಗಿ ಹಿಡಿಯಲು ಅವರಿಂದಾಗಲಿಲ್ಲ. ಕೊನೆಗೆ ಈ ವಿವಾದದ ವಿಚಾರವನ್ನೇ ಬಿಟ್ಟು ಬಿಡುವ ಪ್ರೇರಣೆಯು ಸರ್. ಡಿಕ್ಸನರಿಂದ ಭದ್ರತಾ ಕೌನ್ಸಿಲಿಗೆ ದೊರಕಿದೆ. "ನಮ್ಮೊಳಗಿದು ಇತ್ಯರ್ಥ ಹೊಂದುವಂತಿಲ್ಲ; ಸಂಯುಕ್ತ ರಾಷ್ಟ್ರಸಂಘವೇ ಪ್ರಯತ್ನಿಸಬೇಕು" ಎಂದು ಮಿ. ಲಿಯಾಖತ್ ಆಲೀ ಖಾನ್, ಸರ್. ಝಫರುಲ್ಲಾ ಖಾನರಂತಹ ಪಾಕಿಸ್ತಾನ್ ನಾಯಕರೇ ಹೇಳುತ್ತಿದ್ದಾರೆ.

"ಕಾಶ್ಮೀರ ಕಲಹವು ಶಾಂತ ರೀತಿಯಿಂದ ಮತ್ತು ಗೌರವಾರ್ಹವಾಗಿ ತೀರ್ಮಾನ ಹೊಂದಬೇಕಾದರೆ ಪಾಕಿಸ್ತಾನವು ತನ್ನ ಧೋರಣೆ ಬದಲಾಯಿಸಬೇಕು. ಮತ್ತು ಉಭಯ ಗತಿಯು ನ್ಯಾಯಕ್ಕೆ ತನ್ನ ಸ್ಥಾನ ಬಿಟ್ಟು ಕೊಡಬೇಕು." ಎಂದು ಪಂಡಿತ ನೆಹರೂಗಳಂದಿದ್ದಾರೆ. ಇಂತಹ ಸ್ಥಿತಿಯಲ್ಲಿ ಮುಂದೇನು?

ಕೊರಿಯಾ ಯುದ್ಧ ಎಲ್ಲಿ ವರೆಗೆ?—

ಕೆಲವು ವಿಶೇಷ ಅಪಾಯಗಳನ್ನು ಗರ್ಭದಲ್ಲಿಟ್ಟುಕೊಂಡಿದ್ದರೂ, ಪ್ರಕೃತ ಭಾರತ ಮತ್ತು ಪಾಕಿಸ್ತಾನಗಳೊಳಗಿನ ವಿವಾದ ಮಾತ್ರವಾಗಿರುವ ಕಾಶ್ಮೀರದ ಕಲಹವು ಸಂಧಾನಾತೀತವೆಂಬುದು ಸ್ಪಷ್ಟವಾಗಿರುವಾಗಲೇ, ಮೂರನೇ ಮಹಾಯುದ್ಧದ ಪೂರ್ವ ಪೀಠಿಕೆಯಾಗುವುದೋ ಎಂಬ ಭೀತಿಗೆ ಆದಿಭಾಗದಿಂದಲೂ ಅವಕಾಶವಿತ್ತಿದ್ದ ಕೊರಿಯಾ ರಣರಂಗದಲ್ಲಿ ಮುಂದೇನು ಎಂಬ ದೊಡ್ಡ ಪ್ರಶ್ನೆಯೆದ್ದಿದೆ. ಕಾಶ್ಮೀರ ಮತ್ತು ಕೊರಿಯಾ ಯುದ್ಧಗಳೊಳಗೆ ಹೆಚ್ಚಿನ ಸಾಮ್ಯತೆಯಿದೆ; ಆದರೂ ಆವೆರಡರ ಯುದ್ಧ ಮತ್ತು ಸಂಧಾನ ವ್ಯವಹಾರಗಳಲ್ಲಿ ಮಹದಂತರವಿದೆ. ಅಖಂಡ ರಾಷ್ಟ್ರವಾಗಿದ್ದ ಕೊರಿಯವು ಕಮ್ಯೂನಿಸ್ಟ್ ಉತ್ತರ ಕೊರಿಯಾ, ಅಮೇರಿಕದ ಪಕ್ಷಪಾತಿ ದಕ್ಷಿಣ ಕೊರಿಯವಾಗಿ ಇಬ್ಭಾಗವಾದುದೇ ಅಲ್ಲಿಯ ಹೋರಾಟಕ್ಕೆ ಮೂಲ; ಅಂತೆಯೇ ಅಖಂಡ ಭಾರತವು ಭಾರತ ಮತ್ತು ಪಾಕಿಸ್ತಾನವಾಗಿ ಎರಡು ಹೋಳುಗಳಾಗಿರುವುದೇ ಕಾಶ್ಮೀರ ಸಮರಕ್ಕೆ ಹೇತು. ಕೊರಿಯದ ದಕ್ಷಿಣ ಭಾಗಗಳವರಿಗೆ ಅಮೇರಿಕ ಮತ್ತಿತರ ಮಿತ್ರ ರಾಷ್ಟ್ರಗಳ ಪ್ರತ್ಯಕ್ಷ ಬೆಂಬಲವಿದ್ದರೆ, ಉತ್ತರ ಕೊರಿಯನರಿಗೆ ರಶ್ಯಾ ಮತ್ತು ಚೈನಗಳ ಅವ್ಯಕ್ತ ಬೆಂಬಲವಿರುವುದರಿಂದಲೇ ಕೊರಿಯದ ಕಲಹಕ್ಕೆ ಇಂತಹ ಪ್ರಾಮುಖ್ಯತೆ ದೊರೆತಿದೆ. ಕಾಶ್ಮೀರದಲ್ಲಿ ಶೇಕ್ ಅಬ್ದುಲ್ಲರ ಸರಕಾರಕ್ಕೆ ಭಾರತದ ಪ್ರತ್ಯಕ್ಷ ಬೆಂಬಲವಿರುವಂತೆಯೇ, ದಂಡಾಯಗಾರರಿಗೆ ಪಾಕಿಸ್ತಾನದ ಬೆಂಬಲವಿರುವುದರಿಂದಲೇ ಇಲ್ಲಿಯ ಕಲಹಕ್ಕೆ ಇಂದಿನ ಸ್ಥಾನ ಸಿಕ್ಕಿದೆ. ಉತ್ತರ ಕೊರಿಯವು ಆಕ್ರಮಣವನ್ನಾರಂಭಿಸಿದ ಮರುದಿನವೇ ದಕ್ಷಿಣ ಕೊರಿಯಾ ಸರಕಾರವು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಿದ್ದರೆ, ಕಾಶ್ಮೀರದಲ್ಲಿ ದಂಡಾಯಗಾರರ ಆಕ್ರಮಣವಾರಂಭಿಸಿದ ಮೂರು ತಿಂಗಳ ನಂತರವಾದರೂ ಭಾರತ ಸರಕಾರವು ಪಾಕಿಸ್ತಾನದ ಮೇಲೆ ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಿದ್ದಿತು. ಕೊರಿಯ ಮತ್ತು ಕಾಶ್ಮೀರದ ಪ್ರಶ್ನೆಗಳಲ್ಲಿ ಇಂತಹ ಸಾಮ್ಯತೆಯಿದ್ದರೂ ಇವೆರಡರ ಸಂಬಂಧದ ವ್ಯವಹಾರಗಳಲ್ಲಿ ಎಂತಹ ಭಿನ್ನತೆಗಳಿವೆ, ಎಂಬುದು ಕೂಡಾ ಸ್ಪಷ್ಟವಾಗಿದೆ. ದಕ್ಷಿಣ ಕೊರಿಯದ ದೂರು ಬಂದ ಕೂಡಲೆ—ಆಕ್ರಮಣ ವಾರ್ತೆ ಕಿವಿಗೆ ಬಿದ್ದೊಡನೆಯೇ ಎನ್ನಬಹುದು—ಅಮೇರಿಕದ ಮುಂದಾಳುತ್ವದಲ್ಲಿ ಭದ್ರತಾ ಕೌನ್ಸಿಲು ಉತ್ತರ ಕೊರಿಯವನ್ನು ಆಕ್ರಮಣಾಪರಾಧಿಯೆಂದು ತೀರ್ಮಾನಿಸಿದ್ದಿತು; ಈ ತೀರ್ಪು ಕೊಡುವ ಮೊದಲಾಗಲೀ ಆ ಮೇಲಾಗಲಿ ಪ್ರತಿವಾದಿಗಳ ಹೇಳಿಕೆಯನ್ನೇನೂ ಪಡೆಕೊಂಡುದಿಲ್ಲ; ಜತೆಯಲ್ಲೇ ಅಪರಾಧಿಯನ್ನು ದಂಡಿಸುವ ನಿರ್ಣಯವನ್ನೂ ಮಾಡಿ ಅಮೇರಿಕ ಮತ್ತಿತರ ರಾಷ್ಟ್ರಗಳು ಕೊರಿಯಾ ರಣರಂಗವನ್ನು ಪ್ರವೇಶಿಸಿದ್ದುವು. ಆದರೆ ಕಾಶ್ಮೀರ ಸಂಬಂಧವಾಗಿ ಭಾರತದ ದೂರು ಬಂದು ಮೂರು ವರುಷಗಳು ಕಳೆದು ಹೋದವಾದರೂ ಕಾಶ್ಮೀರದಲ್ಲಿ ಆಕ್ರಮಣಾಪರಾಧಿಯೆಂಥವನೇ ಎಂದು ಸಾರಲು ಭದ್ರತಾ ಕೌನ್ಸಿಲಿಗೆ ಮನಸ್ಸು ಬಂದಿಲ್ಲ; ಈ ವಿವಾದದ ಪ್ರತಿವಾದಿಯ ಹೇಳಿಕೆಯ ಮೇಲಿಂದ ಮತ್ತೀಗಿನ ಸರ್. ಡಿಕ್ಸನರ ವರದಿಯ ಮೇಲಿಂದ ಪ್ರತಿವಾದಿಯ ಅರ್ಥಾತ್ ಪಾಕಿಸ್ತಾನದ ಅಪರಾಧವು ಸಿದ್ಧವಾಗಿದೆಯಾದರೂ ಭದ್ರತಾ ಕೌನ್ಸಿಲು ಇನ್ನೂ ಹಾಗೆಂದುದಿಲ್ಲ. ಈ ಪಕ್ಷಪಾತಿ ಧೋರಣೆಯ ಪರಿಣಾಮವಾಗಿ ಕೊರಿಯ ಆಕ್ರಮಣ ಮೂರು ತಿಂಗಳುಗಳೊಳಗೆ ಅರ್ಧಾಂಶ ಪರಾಭವಗೊಂಡು, ಅದನ್ನಿನ್ನು ಪೂರ್ಣಗೊಳಿಸಬೇಕೋ ಬೇಡವೋ ಎಂಬ ಪ್ರಶ್ನೆಯು ಅಲ್ಲಿ ಎದ್ದಿದೆಯಾದರೆ, ಕಾಶ್ಮೀರದ ಕಲಹವು ಮೂರು ವರುಷಗಳಿಂದಲೂ ಅಲ್ಲೇ ಯಥಾ ಪ್ರಕಾರ ಕೊಳೆಯುತ್ತಿದೆ. ಕೊರಿಯ ಮತ್ತು ಕಾಶ್ಮೀರಗಳ ಭವಿಷ್ಯ ಕೂಡಾ ಪರಸ್ಪರ ವಿರೋಧವಿವೆ; ಕಾಶ್ಮೀರದಲ್ಲಿ ಶಾಂತಿ ನೆಲೆಸಬೇಕಾದರೆ ಅದನ್ನು ವಿಭಜಿಸುವುದೊಂದೇ ಹಾದಿಯೆಂಬ ಸೂಚನೆ ಮುಂದೆ ಬಂದಿದೆಯಾದರೆ, ತದ್ವಿರುದ್ಧವಾಗಿ ಕೊರಿಯದಲ್ಲಿ ಶಾಂತಿ ಸ್ಥಾಪನೆಮಾಡಬೇಕ, ಕೊರಿಯದೆರಡು ಹೋಳುಗಳನ್ನು ಜೋಡಿಸುವ ಮೂಲಕವೇ ಎಂಬುದು ಖಚಿತವಾಗಿದೆ. ಇವೆಲ್ಲಾ ತುಲನೆಗಳ ಮೇಲಿಂದ ಸ್ಪಷ್ಟವಾಗುವುದಿಷ್ಟೇ—ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಸಮಿತಿಯೂ ಸಹ ಮಧ್ಯಸ್ಥಗಾರ ಮಂಡಲಕ್ಕೂ ಸ್ವಪರ ವಂಚನೆಯ ರೋಗ ತಪ್ಪಿದ್ದಲ್ಲವಾದ್ದರಿಂದಲೇ ಬಹುಮಟ್ಟಿಗೆ ಒಂದೇ ತೆರವಿದ್ದರೂ ಕೊರಿಯಾ ಕಾಶ್ಮೀರಗಳ ಸಂಬಂಧದ ವ್ಯವಹಾರ ನೀತಿ ಮಾತ್ರ ಪರಸ್ಪರ ಭಿನ್ನವಾಗಿವೆ.

ಕೊರಿಯಾ ರಣರಂಗ

ಕೊರಿಯದ 38ನೇ ಮಧ್ಯಾಂತರ ಗೆರೆಯೇ ಈಗ 'ಮುಂದೇನು?' ಎಂಬ ದೊಡ್ಡ ಪ್ರಶ್ನೆಯ ಆಕಾರ ತಾಳಿದೆ; ಅಲ್ಲಿಯ ಯುದ್ಧವು ಪ್ರಕೃತ ಆ ಗಡಿಗೆ ಬಂದಿದೆ. ಉತ್ತರ—ದಕ್ಷಿಣ ಕೊರಿಯಗಳ ನಡು ಬೇಲಿಯಾಗಿದ್ದ 38ನೇ ಗೆರೆಯನ್ನು ಉತ್ತರ ಕೊರಿಯದ ಕಮ್ಯೂನಿಸ್ಟ್ ಸೇನೆಗಳು ದಾಟಿ, ಮೂರು ತಿಂಗಳು ಕಳೆಯುವಾಗ ಅದೇ

ಬಲಿಷ್ಠರೂ ತೇಜಸ್ವಿಗಳೂ ಆಗಬೇಕೆನ್ನುವವರಿಗೆ
ಶ್ರೀ ಶಿವಾನಂದ ಸ್ವಾಮೀಜಿ ಬರೆದ ಗ್ರಂಥ
ಬ್ರಹ್ಮಚರ್ಯವೇ ಜೀವನ
ಅರ್ಥಾತ್ ವೀರ್ಯನಾಶವೇ ಮೃತ್ಯು!
ವೀರ್ಯನಾಶದ ಕಾರಣ ಲಕ್ಷಣ ಮತ್ತು ರಕ್ಷಣೆಗಾಗಿ
ರಾಮಬಾಣ ಉಪಾಯಗಳು.
೨೬೦ ಪುಟ, ೩೬ ಚಿತ್ರ ಬೆಲೆ: ಅಂಚೆವೆಚ್ಚ ಸೇರಿ ರೂ ೩-೮-೦
ಸಮಾಜ ಪುಸ್ತಕಾಲಯ, ಸುಭಾಸ ಬೀದಿ, ಧಾರವಾಡ.

BUY INDIAN! ENCOURAGE INDIAN INDUSTRY
ಆಮಲಕೀ ತೈಲ AMALAKI HAIR OIL
ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.
REGD.



Highly perfumed and medicated, worth using daily by one and all keeps hair black and relieves head. ache etc.
TRADE MARK
Manufactured by:-
Swadeshi Oushadhi Bhandara (Regd-)
KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈರಸ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara.

—ಉತ್ತರ ಗಡಿಗೂ ನುಗ್ಗಬಹುದೆ?

ಗೆರೆಯನ್ನು ಮತ್ತೊಮ್ಮೆ ದಾಟಲ್ಪಡುವ ಪರಿಸ್ಥಿತಿಯೊದಗಿದೆ. ಈ ಮೂರು ತಿಂಗಳ ಆರಂಭದಲ್ಲಿ ಉತ್ತರ ಕೊರಿಯದವರಿಂದಾದುದೇ, ಅದರ ಅಂತ್ಯದಲ್ಲಿ ದಕ್ಷಿಣ ಕೊರಿಯದವರಿಂದಾಗುವದು ಸಂಭವನೀಯ. ಆದಿಭಾಗದಲ್ಲಿ ಉತ್ತರ ಕೊರಿಯದವರು ಈ ಮಧ್ಯಗಡಿಯಿಂದೀಚೆಗೆ ಹೆಜ್ಜೆಯಿಟ್ಟಾಗ, ಅದು ಲೋಕಯುದ್ಧಕ್ಕೆ ಹೇತುವಾಗಬಹುದೇ ಎಂದು ಎದ್ದಿದ್ದ ಭೀತಿಯೇ ಈಗ, ದಕ್ಷಿಣ ಕೊರಿಯದವರು ಆ ಗಡಿಯಿಂದಾಚೆ ಹೆಜ್ಜೆಯಿಟ್ಟು ಜಾಗತಿಕ ಯುದ್ಧವನ್ನು ನಿರ್ಮಿಸುವರೋ ಎಂಬ ಮಟ್ಟಿಗೂ ಎದ್ದಿದೆ. ಸಿಯೋಲ್ ನಗರದ ಬಳಿ ಮಿಂಚು ಇಳಿತ ನಡೆಸಿದ್ದ ಸಂಯುಕ್ತ ರಾಷ್ಟ್ರಗಳ ನೌಕಾ ಸೇನೆಗಳು ಅತಿಪ್ರಯಾಸ ಹಾಗೂ ಪರಮಾವಧಿ ಸಾಹಸದಿಂದ ಹತ್ತು ದಿನಗಳ ಒಳಗೆ ಸಿಯೋಲ್ ನಗರವನ್ನು ವಶಪಡಿಸಿಕೊಂಡವು. ಆ ನಗರದೊಳಗೆ ಬೀದಿ ಬೀದಿ, ಮನೆ ಮನೆ, ಹೋರಾಟಕೊಟ್ಟಿದ್ದ ಕಮ್ಯೂನಿಸ್ಟ್ ಪ್ರಾರ್ಣಾ ದಳಗಳ ಅಂತಿಮ ಹೋರಾಟವು ಚರಿತ್ರಾರ್ಹವಾದದು. ಕಮ್ಯೂನಿಸ್ಟರ ಧೈರ್ಯ ಸಾಹಸಗಳಂತೆಯೇ ಅವರಿಗೆ ಅಲ್ಲಿರುವ ಜನತಾ ಬೆಂಬಲವೆಂತಹದೆಂಬುದನ್ನೂ ಸಿಯೋಲ್ ನಗರದ ಕೊನೆಯ ಹೋರಾಟವು ಪ್ರದರ್ಶಿಸಿದ್ದಿತು. ಈಗಲೂ ಡಾ ಅಲ್ಲಿಯ ಕಾಳಗ ನಿಂತಿಲ್ಲವೆಂದು ತಿಳಿದು ಬರುತ್ತದೆ; ಆದರೂ ಸಿಯೋಲ್ ಕಮ್ಯೂನಿಸ್ಟರ ಕೈಬಿಟ್ಟಿತೆಂಬುದು ಸ್ಪಷ್ಟ; ಈಗ ಅದರೊಳಗಡೆ ನಡೆದಿರುವ ಪ್ರತಿಭಟನೆಯೆಂಬುದು ಬಂಡಾಯ ಸ್ವರೂಪದ್ದಿದೆ. ಹೊರತು ಪ್ರತ್ಯಕ್ಷ ಸಂಗ್ರಾಮವಾಗಿಲ್ಲ. ಅತ್ತ ಸಿಯೋಲ್ ನಗರದ ಪತನವಾಗುವಾಗ ಇತ್ತ ದಕ್ಷಿಣ ರಣರಂಗಗಳ ಕಮ್ಯೂನಿಸ್ಟ್ ಸೇನೆಗಳೂ ಒಂದೇ ಸವನೆ ಹಿಂತೆಗೆಯಹತ್ತಿವೆ; ಒಟ್ಟಿನ ಮೇಲೆ ಇಡೀ ದಕ್ಷಿಣ ಕೊರಿಯವನ್ನು ಕಮ್ಯೂನಿಸ್ಟರೀಗ ಖಾಲಿ ಮಾಡಲಾರಂಭಿಸಿದ್ದಾರೆ. ಮೂಲ ದಳಗಳು ಸುರಕ್ಷಿತವಾಗಿ ಹಿಂದೆಗೆಯಲಾಗುವ ವರೆಗೆ ಮಂಗಡೆಯಲ್ಲಿ ವಿರೋಧಿಗಳಿಗೆ ಅಡಚಣೆಯನ್ನೊಡ್ಡುವ ಉದ್ದೇಶಕ್ಕಾಗಿ ಉತ್ತರ ಕೊರಿಯದ ಸೇನಾ ತುಕುಡಿಗಳು ತಡೆ ಕೆಲಸವನ್ನಷ್ಟೇ ಎಲ್ಲಾ ರಣರಂಗಗಳಲ್ಲೂ ಮಾಡುತ್ತಿವೆ; ಸಿಯೋಲ್ ನಗರದ ರಕ್ಷಣೆಯ ಹೆಸರಿನಿಂದಾದರೂ ಕಮ್ಯೂನಿಸ್ಟರು ಅಲ್ಲಿ ಇಟ್ಟಿದ್ದುದು ಮಿತ ಸಂಖ್ಯೆಯ ಸೇನೆಗಳನ್ನೇ; ವೈರಿಗಳಿಗೆ ವಿಶೇಷ ಹಾನಿಯನ್ನು ಉಂಟು ಮಾಡಿ ಪ್ರಾಣ ಕೊಡುವ ಉದ್ದೇಶವೇ ಆ ಸೇನೆಗಳದ್ದಿತ್ತು ಹೊರತು ಸಿಯೋಲ್ ನಗರವನ್ನು ಉಳಿಸಿಕೊಳ್ಳುವ ಬಯಕೆಯಿರಲಿಲ್ಲ. ರಕ್ತದಿಂದ ತೋಯಿಸದೆ, ಸಿಯೋಲಿನ ಒಂದಿಂಚು ನೆಲವನ್ನಾದರೂ ವೈರಿಯ ವಶವಾಗಲು ಕಮ್ಯೂನಿಸ್ಟರು ಬಿಟ್ಟಿದಿಲ್ಲ. ಸಂಯುಕ್ತ ರಾಷ್ಟ್ರದ ಸೇನೆಗಳು ಅತ್ಯಧಿಕ ಸಂಖ್ಯೆಯಲ್ಲಿ ಅತ್ತ ಸಿಯೋಲಿನ ಬಳಿಯಲ್ಲೂ ಇತ್ತ ದಕ್ಷಿಣ ರಣರಂಗಗಳಲ್ಲೂ ಬಂದಿಳಿದು ತಮ್ಮ ಅದುವರೆಗಿನ ವಿಜಯದ ಅಳ್ಳೆಗೇನೇ ತಿವಿದೊಡನೆ ಕಮ್ಯೂನಿಸ್ಟ್ ಸೇನೆಗಳು ಆ ನೂತನ ಗಂಡಾಂತರ ಸ್ಥಿತಿಯಲ್ಲಿ ಸಾಧ್ಯವಿದ್ದಷ್ಟನ್ನು ಸಾಧಿಸಿ, ದಕ್ಷಿಣ ಕೊರಿಯದಿಂದಲೇ ವ್ಯವಸ್ಥೆಯಿಂದ ಹಿಂದೆಗೆಯುವ ಹಂಚಿಕೆ ಹಾಕಿದಂತೆ ತೋರುತ್ತದೆ. ಈ ಹಂಚಿಕೆಯಂತೂ ಜಯಶೀಲವಾಗಿ ನಡೆದಿದೆ; ಮಾತ್ರವಲ್ಲ, ಗಣ್ಯಸಂಖ್ಯೆಯ ಕಮ್ಯೂನಿಸ್ಟ್ ಯೋಧರು ದಕ್ಷಿಣ ಕೊರಿಯದ ಗುಡ್ಡಗಾಡುವಲಯಗಳಲ್ಲಿ ಅಡಗಿಕೊಂಡಿದ್ದು ಗೊರಿಲ್ಲಾ ಯುದ್ಧ ಹೂಡುವ ಸಿದ್ಧತೆಯಲ್ಲಿರುವರೆಂದು ನಂಬಲಾಗಿದೆ. ಅಂತೂ ದಕ್ಷಿಣ ಕೊರಿಯ ರಂಗದಲ್ಲಿ ಖಾಡಾಖಾಡಿ ಸಮರದ ಮಟ್ಟಿಗೆ ಕಮ್ಯೂನಿಸ್ಟರೀಗ ಸೋತಿದ್ದಾರೆ; ಅವರ ಆಕ್ರಮಣಾವತಾರ ಸಮಾಪ್ತಿಗೊಂಡು ಆತಂಕವೊಡ್ಡುವ ಕಂಟಿಕೋರತನ ಮಾತ್ರ ಉಳಿದುಕೊಂಡಿದೆ. ಕಳೆದ ಮೂರು ತಿಂಗಳುಗಳನ್ನೇ ಉಜ್ಜಿ ತೆಗೆದರೆ ಹೇಗೋ; ಹಾಗೆ ದಕ್ಷಿಣ ಕೊರಿಯವು ಆ ಮೊದಲು ಯಾರದಾಗಿತ್ತೋ ಈಗಲೂ ಅವರದೇ ಆಗಿದೆ; ದಕ್ಷಿಣ ಕೊರಿಯದ ಸರಕಾರದ್ದೇ ಆಗಿದೆ ಸದ್ಯ ಹೆಚ್ಚಿಗಿರುವುದೆಂದರೆ ಎಲ್ಲವೂ ಹಾಳುಬಿದ್ದಿರುವುದು, ಅನ್ಯರಾಷ್ಟ್ರಗಳ ಸೇನೆಗಳು ಅಲ್ಲಿರುವುದು, ಭಯಗೊಂದಲಗಳು ವ್ಯಾಪಿಸಿರುವುದು, ಇಷ್ಟೆ!

ಇನ್ನು ಮುಂದೇನು?

ಅಂತೂ, ಕೊರಿಯ ಸಮರದ ರುದ್ರನಾಟಕವೀಗ ಅರ್ಧಾಂಕ ಮುಗಿದಿದೆ; "ಮಧ್ಯ ವಿರಾಮ" ದೊರೆತಿದೆ; ಇನ್ನು ಮುಂದಿನ ದೃಶ್ಯವಾವುದು, ಎಂಬುದೇ ಸದ್ಯ ಎಲ್ಲರ ಆತುರದ ಪ್ರಶ್ನೆ. ಅಖಂಡ ಕೊರಿಯವನ್ನು ದಕ್ಷಿಣೋತ್ತರ ಎರಡು ಹೋಳುಗಳಾಗಿ ಪ್ರತ್ಯೇಕಿಸಿದ್ದ ಮಧ್ಯ ಸರಹದ್ದು 38ನೇ ರೇಖೆಯನ್ನು ದಾಟುವ ಮೂಲಕ ಅಂದು ಯುದ್ಧವನ್ನಾರಂಭಿಸಿದ್ದ ಉತ್ತರ ಕೊರಿಯದವರನ್ನು ಹಿಂತಳ್ಳಿಕೊಂಡು ಸಂಯುಕ್ತರಾಷ್ಟ್ರಗಳ ಸೇನೆಗಳು ಈಗ ಅದೇ ರೇಖೆಯ ಬಳಿಗೆ ಬಂದಿವೆ; ದಕ್ಷಿಣ ಕೊರಿಯದ ವಿವಿಧ ರಂಗಗಳಲ್ಲಿದ್ದ ಸಂಯುಕ್ತ ರಾಷ್ಟ್ರಗಳ ಆರು ಸೇನಾಭಾಗಗಳೂ ಒಂದೇ ಸವನೆ 38ನೇ ಗಡಿ ಗೆರೆಯತ್ತ ಧಾವಿಸಿದ್ದು ಅವೆಲ್ಲವೂ ಇಷ್ಟರಲ್ಲೇ ಆ ಸರಹದ್ದನ್ನು ಸೇರಬಹುದು; ಅಲ್ಲಿ ಸೇನಾ ಪುನರ್ವ್ಯವಸ್ಥೆಗಳಾಗಿ, ಗಡಿದಾಟುವುದೆಂದಾದರೆ ಇವೆಲ್ಲಾ ಸೇನೆಗಳು ಮಹಾಪೂರದಂತೆ ಉತ್ತರಕ್ಕೆ ನುಗ್ಗಬಹುದು. ಸಂಯುಕ್ತ ರಾಷ್ಟ್ರಸಂಘದಿಂದ ಕೊರಿಯದ ಸರ್ವ ಸೇನಾನಿಯಾಗಿ ನೇಮಕಗೊಂಡಿರುವ ವಿಜಯೀ ಜನರಲ್ ಮೆಕಾರ್ಥರರಿಗೆ ಈಗ ದೊರೆತಿರುವ ಅಧಿಕಾರದ ಮೇಲಿಂದಲೇ ಅವರು ಉತ್ತರ ಕೊರಿಯದೊಳಗೆ ನುಗ್ಗಿ ಹೋಗಬಹುದೆಂದು ಕೆಲವರ ವಾದವಿದೆ; ಆದರೆ ಅಮೆರಿಕದ ಅಧ್ಯಕ್ಷ ಟ್ರೂಮೇನರು 'ಸಂಯುಕ್ತ ರಾಷ್ಟ್ರಸಂಘದ ಅಭಿಪ್ರಾಯ ಕೇಳಿದಿಯೋ ಹಾಗೆ' ಎಂದಿರುವುದರಿಂದ ಜನರಲ್ ಮೆಕಾರ್ಥರರಿಗೆ ಸ್ವೇಚ್ಛೆಯಿಂದ ಮುನ್ನುಗ್ಗುವ ಅವಕಾಶವಿಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಅಖಿಲ ಕೊರಿಯದಲ್ಲಿ ಶಾಂತಿ ಸ್ಥಾಪಿಸಬೇಕಾದರೆ 38ನೇ ಗೆರೆ ದಾಟಿ ಉತ್ತರಕ್ಕೂ ಸಂ. ರಾ. ಸೇನೆಗಳು ಮುನ್ನುಗ್ಗುವುದಗತ್ಯವೆಂದು ಬ್ರಿಟನು ದೃಢಾಭಿಪ್ರಾಯವಿತ್ತಿದೆ, ಎಂ

ದು ತಿಳಿದುಬಂದಿದೆ. ಸದ್ಯಸ್ಥಿತಿಯಲ್ಲಿ ಸ
ಯುಕ್ತ ರಾಷ್ಟ್ರಸೇನೆಗಳು ಗಡಿಗೆರೆ ದಾ
ಅಚೆ ಹೋಗಬಾರದೆಂಬ ತನ್ನ ಅಭಿಪ್ರಾ
ಯವನ್ನು ಭಾರತ ಸರಕಾರವು ಬ್ರಿ
ನು ಮತ್ತು ಅಮೆರಿಕಗಳಿಗೆ ತಿಳಿಸಿ
"ಸಂಧಾನ ತೀರ್ಮಾನದ ಇತರ ಎಲ
ವಿಧಾನಗಳನ್ನು ಪ್ರಯೋಗಿಸಿಕೊಳ್ಳದೆ, ಸಂ
ರಾ. ಸೇನೆಗಳು 38ನೇ ಗೆರೆಯೊಳಗಡೆ
ಕಾಲಿಡಬಾರದೆಂದು ನಾವು ನೆನಪಿಕ್ಕೇವೆ
ಎಂದು ಪಂಡಿತ ನೆಹರೂಗಳು ಜಾಹೀ
ಮಾಡಿದ್ದಾರೆ. ಕೊರಿಯದ ಎರಡು ವಿಭಾ
ಗಗಳನ್ನೂ ಏಕೀಕರಣಗೊಳಿಸಿ, ಅಲ್ಲಿಂ
ಜನಮತವನ್ನಾಧರಿಸಿ ಸಾರ್ವಭೌಮ
ಧಿಕಾರೀ ಸರಕಾರವನ್ನು ಸ್ಥಾಪಿಸಬೇಕ
ಈ ಗುರಿ ಸಿದ್ಧಿಸುವ ವರೆಗೆ ಸಂಯುಕ್ತ
ಷ್ಟ್ರಸಂಘದ ಕೊರಿಯಾ ಕಮಿಷನಿನ ಅ
ಳತೆಯೊಳಗೆ ಕೊರಿಯವಿರತಕ್ಕದ್ದು,
ಬ ಯೋಜನೆಯು ಅಮೆರಿಕ ಮತ್ತು
ಟನುಗಳದಿದೆ. ಕೊರಿಯದ ಭವಿಷ್ಯದ
ಶ್ನೆಯು ಸಂಯುಕ್ತ ರಾಷ್ಟ್ರಸಂಘದ 'ರಾ
ಕೀಯ ಸಮಿತಿ'ಯ ಮುಂದೆಬಂದ
ರಶ್ಯಾ ಅಮೇರಿಕಗಳೊಳಗಿನ ಘರ್ಷಣೆ
ದೆಸೆಯಿಂದ ಅದು ಮುಂದುವರಿಸಲ್ಪಟ್ಟ
ಇತ್ತ ರಣರಂಗದಲ್ಲಿ ಉತ್ತರ ಕೊರಿಯ
ಸೇನೆಗಳು ಎಲ್ಲಿದ್ದರೂ ಶರಣು ಬರಬೇ
ದು ಜನರಲ್ ಮೇಕರ್ಥರರು ಕೊನೆ
ಎಚ್ಚರಿಕೆ ಕೊಟ್ಟಿದ್ದು ಅವರ ಸೇ
ತುಕಡಿಗಳು ಕೆಲವೆಡೆ 38ನೇ ಗೆರೆ ದಾ
ರುವವೆಂಬ ವಾರ್ತೆ ಕೂಡಾ ಇದೆ. ಸಂಯು
ಕ್ತ ರಾಷ್ಟ್ರಸೇನೆಗಳು ತೀರಾ ಉತ
ಮೂಲೆಯ ರಶ್ಯ ಮತ್ತು ಚೈ
ಗಳ ಸರಹದ್ದನ್ನು ಯಾವ
ಯಿಂದಲೂ ಕೆಣಕದೆ ಅಖಿಲ ಕೊರಿ
ದ ಸ್ವಾಧೀನತೆಯನ್ನು ಸಾಧಿಸಲು ಮ
ದೊತ್ತುವುದೇ ಸಂಭವನೀಯವಾಗಿ
ಣುತ್ತಿದೆ. ಆದರೆ ಈ ಮುಂಧಾಳಿಯ
ಕೆಂಪು ಚೈನಾ ಮತ್ತು ಸೋವಿಯೆ
ರಶ್ಯಾ ಶಾಂತ ದೃಷ್ಟಿಯಿಂದ ನೋಡುವ
ಲ್ಲವೆಂಬುದು ಖಂಡಿತ. ಸಂ. ರಾ. ಸಂಘ
'ಕಾಶ್ಮೀರ ಕಮಿಷನ್' ಎಂಬ ಹೆಸ
ಅಮೆರಿಕದ ಹಸ್ತಕ ಮಂಡಲಕ್ಕೆ ಅ
ಕೊರಿಯವು ಒಪ್ಪಿಸಲ್ಪಡುವುದೂ ಕೆ
ಯನ್ ಜನತೆಗಾಗಲೀ ರಶ್ಯಾ ಚೈನ
ಗಾಗಲೀ ಸಮ್ಮತವಾಗದು. ಇಂತಹ
ಗಳ ಬದಲಿಗೆ ಪಂಡಿತ ನೆಹರುಗಳಿಂದ
ಕೊರಿಯದ ಭವಿಷ್ಯದ ಕುರಿತು ಸಂಬ
ಪಟ್ಟ ಪಕ್ಷಗಳೊಳಗೆ ರಾಜೀಯತ್ನ
ಯಬಾರದೇಕೆ? ಕಲ್ಪಿತ 'ಕಾಶ್ಮೀರ ಕ
ನಿ'ನಲ್ಲಿ ಅಖಿಲ ಕೊರಿಯದ ಜನತೆ
ವಿಶ್ವಾಸಕ್ಕಾರ್ಹರಾದವರನ್ನೇ ಸೇರಿಸಿ
ಳ್ಳುವ ಭರವಸೆಯನ್ನಾದರೂ ಆಂಗ್ಲ
ಅಮೆರಿಕಾನರು ಕೊಡಬಲ್ಲರೆ?

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

"ಗೋಪಾಲ ಭೇಷಜಾಶ್ರಮ" ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

For Life Assurance
CUNSULT
THE NEW GUARDIAN OF INDIA
LIFE ASSURANCE Co. LTD.,
(Established: 1934)
Chairman: **Sri. M. C. T. M. Chidambaram Chattiya**
A Policy in this progressive Life Office is a good investment; its Agency is a valuable business connection.
MANGALORE BRANCH:
K. S. R. Road,
Hampankatta, Mangalore.
HEAD OFFICE:
United India Life Buildng
B. No. 142 MADRAS.

THE

Canara Banking Corporation Ltd.

(Incorporated in India)

Estd: 1906

Head Office . UDIPI, (S. I)

Capital Authorised	Rs 25,00,000
Capital Issued, Subscribed & Paid up	Rs. 20,00,000
Reserves	Rs. 9,44,765

ಗುರುವಾರ, ಉಡುಪಿ, ೫-೧೦-೧೯೫೦

ದಿನಾಚರಣೆಗಳು

ಪದ್ಧತಿಪ್ರಕಾರ ಇದೇ ತಾ. 2ರಂದು 'ಗಾಂಧೀ ಜಯಂತಿ'ಯು ಅಖಿಲಭಾರತದ ಎಲ್ಲೆಡೆಯಲ್ಲೂ ಆಚರಿಸಲ್ಪಟ್ಟಿದೆ. ತಾ. 2ರಿಂದ 8ರ ವರೆಗಿನ ವಾರವು 'ಗಾಂಧೀ ಜಯಂತಿ ಸಪ್ತಾಹ'ವಾಗಿ ಅಥವಾ ಗಾಂಧೀಜೀ ನಾಮಕರಣ ಮಾಡಿದ್ದಂತೆ ಚರಕಾ ಸಪ್ತಾಹವಾಗಿ ಆಚರಣೆಯಲ್ಲಿದೆ. ಮದ್ರಾಸ್ ಸಂಸ್ಥಾನದಲ್ಲಂತೂ ಈ ಬಾರಿಯ 'ಗಾಂಧೀ ಸಪ್ತಾಹ'ದಲ್ಲೇ ಗೊಬ್ಬರ ಸಪ್ತಾಹ ಕಾರ್ಯಕ್ರಮಗಳೂ ಆಚರಿಸಲ್ಪಡುತ್ತಿವೆ. ಮರ ಗಿಡಗಳನ್ನು ನೆಡುವ 'ವನಮಹೋತ್ಸವ'ವನ್ನಾಚರಿಸಿ ದೀರ್ಘಾವಧಿ ಕಳೆದಿಲ್ಲ; 'ಗೊಬ್ಬರ ಸಪ್ತಾಹ'ವನ್ನು ಆಚರಿಸುವ ಸುಯೋಗವೊದಗಿತು. ಸದ್ಯಸ್ಥಿತಿಯಲ್ಲಿ ಇಂತಹ ದಿನಾಚರಣೆಗಳು ಹಲವು ವಿಧದ ಟೀಕೆಗಳಿಗಾಸ್ಪದವಿತ್ತಿವೆ; ಪರಿಹಾಸ್ಯಕ್ಕೊಳಗಾಗಿವೆ. ಇನ್ನು 'ನೀರೆರೆಯುವ ಸಪ್ತಾಹ' 'ಬೇಲಿಹಾಕುವ ಸಪ್ತಾಹ'ಗಳಾಗುವುದು ಬೇಡವೇ? ಎಂಬ ವ್ಯಂಗ್ಯ ಟೀಕೆಗಳನ್ನು ಕೇಳುತಿದ್ದೇವೆ. ಇವೆಲ್ಲವೂ ಪ್ರದರ್ಶನಕ್ಕಾಗಿ ಹೊರತು ಪರಿಣಾಮಕಾರಿಯಲ್ಲ, ಎಂಬ ವಿಮರ್ಶೆಗಳಾಗುತ್ತಿವೆ. ಸರ್ದಾರ್ ವಲ್ಲಭಾಯಿಗಳು ಗಾಂಧಿಜಯಂತಿಗಾಗಿ ಕೊಟ್ಟ ಸಂದೇಶದಲ್ಲಂದಿದ್ದರು:— "ಈ ಮಹಾ ಸಂದರ್ಭದ ಉತ್ಸವಾಚರಣೆಯನ್ನು ನಾವು ನಿಜಕ್ಕೂ ಅಂತಃಕರಣ ಪೂರ್ವಕ ಆಚರಿಸುತ್ತಿರುವೆವೋ ಎಂದು ನನ್ನಲ್ಲಿ ಒಮ್ಮೊಮ್ಮೆ ದಿಗಿಲೇಳುತ್ತಿದೆ. ಗಾಂಧೀಜಿ ನಮಗೆ ಕಲಿಸಿದ್ದ ಪಾಠಗಳಲ್ಲಿ ಹೆಚ್ಚಿನವು ಈಗಾಗಲೇ ಗತವೈಭವಗಳಂತೆ ಕಾಣಿಸಹತ್ತಿವೆ. ಗಾಂಧೀಜಿಯ ಹೆಸರು ಮತ್ತು ವ್ಯಕ್ತಿತ್ವಕ್ಕಿರುವ ಘನತೆ ಹಾಗೂ ಪಾವಿತ್ರ್ಯವನ್ನು ಸ್ವಸಮರ್ಥನೆಗಾಗಿ ಉಪಯೋಗಿಸಿಕೊಳ್ಳಬೇಕೆನಿಸಿದಾಗ ಮಾತ್ರ ನಾವು ಅವರನ್ನು ನೆನಪು ಮಾಡುವಂತೆ ಕಾಣುತ್ತಿದೆ. ನ್ಯಾಯಾವಲಂಬನೆಗಾಗಿ ಅವರ ಬೋಧನೆಗಳ ಕಡೆಗೆ ನೋಡುವುದನ್ನು ಮತ್ತು ಅವುಗಳಲ್ಲಿರುವ ಈ ಕಾಲಾನುಗುಣವಾದ ಔಚಿತ್ಯ ಮತ್ತು ಸಮರ್ಪಕತೆಯನ್ನರಿಯುವುದನ್ನು ನಾವು ಮಾಡುವುದು ಅತ್ಯಪರೂಪ" ಹೀಗಿರುವ ಬದಲಿಗೆ, ಗಾಂಧೀ ಬೋಧನೆಯ ಖಾದಿ, ಚರಕ ಮತ್ತು ಸ್ವಯಂಪೂರ್ಣತಾ ತತ್ವಗಳನ್ನು ನಿಷ್ಠೆಯಿಂದನುಸರಿಸುತಿದ್ದರೆ ನಮ್ಮ ಇಂದಿನ ಸಂಕಟ, ಸಮಸ್ಯೆಗಳು ಇಷ್ಟರಲ್ಲೇ ನಿವಾರಣೆಗೊಳ್ಳುತಿದ್ದುವು ಎಂದು ಸರ್ದಾರರಂದಿದ್ದಾರೆ. ಸದ್ಯಸ್ಥಿತಿಯಲ್ಲಿ ಈ ಮಾತು ಎಲ್ಲರಿಗೂ ಮನದಟ್ಟಾಗುವಂತಹದೇ. ಗಾಂಧೀತತ್ವಗಳ ಹಂಗಿಲ್ಲದೆ, ಗಾಂಧೀ ನಾಮದ ಬಲವೊಂದನ್ನೇ ಆಧರಿಸುವ ಚಟವು ಇಂದು ಎಲ್ಲೆಲ್ಲೂ ಕಾಣಿಸುತ್ತಿದೆ; ಮಹಾತ್ಮಾ ಗಾಂಧಿಯವರು, ತ್ರೇತಾ, ದ್ವಾಪರ ಯುಗಗಳ ರಾಮ, ಕೃಷ್ಣರ ಪಂಕ್ತಿಗೆ ಸೇರಿದರೋ ಎಂಬಂತೆ ವಾಸ್ತವಿಕರಂಗದಿಂದೀಗ ದೂರವಾಗಿದ್ದಾರೆ. ಹೀಗಾಗಿ ಇಂದಿನ ಗಾಂಧೀ ಜಯಂತಿಯೂ, ಕೃಷ್ಣಜಯಂತಿಯಂತೆ ಸಂಪ್ರದಾಯ ಪಾಲನೆ ಮಾತ್ರವೆಂದಾಗಿರುವುದು ಸ್ವಾಭಾವಿಕ. ಅದೇ ರೀತಿ, ವನಮಹೋತ್ಸವ, ಗೊಬ್ಬರ ಸಪ್ತಾಹದಂತಹ ಆಚರಣೆಗಳು ಕೂಡಾ ಆಜ್ಞಾಪಾಲನೆಯ ಅಥವಾ ಅನುಕರಣೆಯ ದ್ಯೋತಕಗಳಾಗಿಯೇ ತೋರುತ್ತಿವೆ. ಇವು ಜನತೆಯಲ್ಲಿ ಕೆಲವಂಶ ಆಸಕ್ತಿಯನ್ನು ಹುಟ್ಟಿಸಿದರೆ, ಇನ್ನು ಕೆಲವಂಶ ಆಕ್ಷೇಪಗಳನ್ನೂ ಎಬ್ಬಿಸಿವೆ.

ನಾವು ಕಳೆದವಾರದಲ್ಲೇ ಹೇಳಿರುವಂತೆ ಪ್ರಚಾರ ಪ್ರಾಮುಖ್ಯತೆಯಿರುವ ಇಂತಹ ದಿನಾಚರಣೆಗಳಿಂದಲೇ ತೃಪ್ತರಾಗದೆ, ಜನತೆಗೆ ಕಾರ್ಯಪ್ರೇರಣೆಯೀಯುವ ಪ್ರತ್ಯಕ್ಷ ವಿಧಾನಗಳನ್ನು ಕೈಕೊಳ್ಳಬೇಕಾದುದು ಅಗತ್ಯವಾದರೂ ಈ ದಿನಾಚರಣೆಗಳು ತೀರಾ ಅಪ್ರಯೋಜಕವೆನ್ನುವುದು ತಪ್ಪು. ನಿದರ್ಶನಕ್ಕಾಗಿ, ವ್ಯಂಗ್ಯಟೀಕೆಗಳಿಗೆ ಬೇಕಾದಷ್ಟು ವಿಷಯಗಳನ್ನು ದೊರಕಿಸಿಕೊಟ್ಟ 'ವನ ಮಹೋತ್ಸವ'ದ ಪರಿಣಾಮಗಳನ್ನು ಅವಲೋಕಿಸಬಹುದು. ಅಖಿಲ ಭಾರತದಲ್ಲಿ ಆ ಸಂಬಂಧವಾಗಿ ಕೇಳಬಂದಿದ್ದ ಡಂಗುರ ದೊಡ್ಡದಿದ್ದಿತು; ಅದೇ ಪರಿಮಾಣದಲ್ಲಿ ಆ ಉತ್ಸವಾಚರಣೆಯಿಂದ ಮರಗಿಡಗಳ ಸಂಖ್ಯೆ ಬೆಳೆದಿರಲಾರದೆಂಬುದು ನಿಜವಿರಬಹುದು. ಹೀಗಿದ್ದರೂ ಕೇವಲ ಪ್ರದರ್ಶನ ಮನೋವೃತ್ತಿಯಿಂದಾದರೂ ಆ ಅವಧಿಯಲ್ಲಿ ರಾಷ್ಟ್ರದ ಉದ್ದಗಲದಲ್ಲೂ ಕೆಲವು ಲಕ್ಷಸಸಿಗಳು ನೆಡಲ್ಪಟ್ಟುವೆಂಬುದು ಸತ್ಯ. ಮರಮಟ್ಟುಗಳಿಗೆ ವಿಶೇಷ ಬೇಡಿಕೆಯಿದ್ದ ಯುದ್ಧಾವಧಿಯಲ್ಲಿ ಸ್ವಯಂಪ್ರೇರಣೆಯಿಂದ ಪರಶುರಾಮಾವತಾರ ಧರಿಸಿದವರಿದ್ದಂತೆ, ಕಾಡು ಮರಗಳನ್ನು ನೆಡುವ ಸ್ವಯಂಸ್ಫೂರ್ತಿಗೊಳ್ಳುವವರು ಬಹಳ ಮಂದಿ ಇರಲಾರರು. ಇಂಥವರಲ್ಲಿ ಒಂದು ಉತ್ಸಾಹಾವೇಶವನ್ನಾದರೂ ನಿರ್ಮಿಸಿ, ಸಾಧ್ಯವಿದ್ದಷ್ಟು ಸಸಿಗಿಡಗಳನ್ನು ನೆಡಿಸಿದುದು ತಪ್ಪಲ್ಲ. ವನ ಮಹೋತ್ಸವಕ್ಕಾಗಿ ನೆಡಲ್ಪಟ್ಟ ಸಸಿಗಳು, ಸ್ವಾಭಾವಿಕವಾಗಿ ಆ ಸ್ಥಾನಗಳಿಗೇರುತ್ತಿರಲಿಲ್ಲ; 'ಮಿಶ್ರಿತ ಗೊಬ್ಬರ ಸಪ್ತಾಹ'ದ ಮಟ್ಟಿಗೂ ಇದೇ ಮಾತು. ಏನಿಲ್ಲೆಂದರೂ ಸಂಸ್ಥಾನದಲ್ಲಿ ಕೆಲವು ಸಹಸ್ರ ಗೊಬ್ಬರ ಹೊಂಡಗಳಾದರೂ ಈ ಸಪ್ತಾಹದಲ್ಲಿ ಹೊಸತಾಗಿ ನಿರ್ಮಾಣಗೊಂಡಿರಬಹುದು; ಅನ್ಯಥಾ ಆಗಲಾರದಂತಹ ಕೆಲಸ ಈ ದೆಸೆಯಿಂದಾಗಿರಬಹುದು. ಇದು 'ಕೇವಲ ಪ್ರದರ್ಶನಕ್ಕಾಗಿ' ಎಂದರೂ ಈ ಪ್ರಚಾರ ಮಹತ್ವವೇನೂ ಅಲ್ಪವಲ್ಲ. ತೀರಾ ನಿಷ್ಪ್ರಯೋಜಕನಾದವನಿಗೆ 'ಗೊಬ್ಬರ ಹೊರಲಿಕ್ಕಾಗುವವ' ಎಂಬ ಬಿರುದುದಾನವು ವಾಡಿಕೆಯಾಗಿದೆ; ಗೊಬ್ಬರದ ಕಡೆಗಿರುವ ತಾತ್ಸಾರ ಭಾವನೆಯೆಂತಹದೆಂಬುದನ್ನು ಇದರಿಂದ ಅರಿಯಬಹುದು. ಆಹಾರ ಸ್ವಾವಲಂಬನಾ ಗುರಿಯಿಟ್ಟುಕೊಂಡಿರುವ ಈ ಕಾಲದಲ್ಲಿ ಆಹಾರ ಬೆಳವಣಿಗೆಗೆ ಅವಶ್ಯವಿರುವ ಗೊಬ್ಬರವನ್ನು ಈರೀತಿ ಅವಮಾನಿಸುವುದು ಅಪಾಯಕರ; ಆದ್ದರಿಂದ ರಾಷ್ಟ್ರೀಯ ಆಚರಣೆಯ ಪ್ರಾಮುಖ್ಯ ಸ್ಥಾನವು ಈ ವಾರದಲ್ಲಿ ಗೊಬ್ಬರಕ್ಕೆ ದೊರೆತುದು ಸಕಾಲೋಚಿತವಿದೆ. ಸರ್ವಸಾಮಾನ್ಯವಾಗಿ ಅಲ್ಪ ಸಂಗತಿಯಾಗಿ ತೋರುವ ಮೂಲ ವಿಷಯಗಳಿಗೇನೇ ಪ್ರಾಮುಖ್ಯತೆಕೊಟ್ಟು ಆ ಮೂಲಕ ಮಹತ್ವನ್ನು ಸಾಧಿಸುವ ವೈಶಿಷ್ಟ್ಯವು ಮಹಾತ್ಮಾ ಗಾಂಧಿಯವರದಾಗಿದ್ದಿತು. ಉಪ್ಪು ತಯಾರಿಸುವ ಮೂಲಕ ಅದ್ವಿತೀಯ ಬ್ರಿಟಿಷ್ ಸಾಮ್ರಾಜ್ಯದ ಅಭೇದ್ಯ ಕಾನೂನುಕೋಟೆಯನ್ನು ಮುರಿಯಲು ಗಾಂಧೀಜೀ ಹವಣಿಸಿದಾಗ ಅದು ಅಪಹಾಸ್ಯಕರ, ಅವ್ಯವಹಾರ್ಯವೆಂದು ಟೀಕಿಸಿದವರಿದ್ದರಾದರೂ ಕೊನೆಗದು ಎಂತಹ ಪರಿಣಾಮವನ್ನುಂಟು ಮಾಡಿತೆಂಬುದು ಸರ್ವವೇದ್ಯ ವಿಷಯ. ಆದರೆ ಇಂತಹ ಅಲ್ಪೋಪಕರಣಗಳನ್ನು ಉಪಯೋಗಿಸಿಯಾದರೂ ಧ್ಯೇಯಸಾಧಿಸಲೇಬೇಕೆಂಬ ಅಚಲ ಧೋರಣೆಯಿರಬೇಕಾದುದು ಆಗತ್ಯ. ಆದ್ದರಿಂದ ಇಂತಹ ದಿನಾಚರಣೆಗಳ ಮಟ್ಟಿಗೆ ಸಂದೇಹ, ಸಂಕೋಚಗಳನ್ನು ಕಟ್ಟಿಕೊಳ್ಳುವ ಬದಲಿಗೆ, ಅಂತಃಕರಣಪೂರ್ವಕ ಶ್ರಮಿಸುವ ಮೂಲಕ ಈ ಸಂದರ್ಭಗಳನ್ನು ಸಾರ್ಥಕಪಡಿಸಿಕೊಳ್ಳುವುದೇ ಮುಖ್ಯವೆನ್ನುತ್ತೇವೆ.

WANTED

Applications are invited for the following posts for appointment in the Harijan Hostel Coondapur.

(1) Tutor-cum-warden in the scale of Rs 45-3-60-2-90 Pluss D. A. at Government rates Minimum qualification Secondary Grade Trained.

(2) Peon on Rs 18-25 plus D. A.

(3) Cook on Rs 10 P. M. (with food)

Applications should reach the Collectors Office, Mangalore by 10-10-1950, with proof showing date of birth and the testimonials and certificates if any.

BY ORDER

Sd/- **K. Venkappa**

Dt. Welfare Officer.

ಉಡುಪಿ

ಗಾಂಧೀಜಯಂತಿ ಮತ್ತು ಗೊಬ್ಬರ ಸಪ್ತಾಹವು— ಇದೇ ತಾ. 2ರಂದು ಆರಂಭಿಸಿದೆ. ಅಂದು ಪೂರ್ವಾಹ್ನ ಬ್ಯಾಂಡ್, ಪತಾಕೆಗಳು ಮತ್ತು ರಾಷ್ಟ್ರಗೀತೆ, ಜಯಘೋಷಗಳ ಸಹ ಮೆರವಣಿಗೆಯು ರಥಬೀದಿಯಿಂದ ಹೊರಟು ಗಾಂಧಿ ಮೈದಾನಿಗೆ ತಲುಪಿ, ಅಲ್ಲಿ ಸ್ವಯಂಸೇವಿಕೆಯರಿಂದ ರಾಷ್ಟ್ರಗೀತೆಯಾಗಿ ನಗರಸಭೆಯ ಉಪಾಧ್ಯಕ್ಷ ಶ್ರೀ ಎ. ಬಿ. ಕೃಷ್ಣರಾಜರ ಹಸ್ತದಿಂದ ಧ್ವಜಾರೋಹಣವಾಯಿತು. ಶ್ರೀ ಎಂ. ಬಿ ಹೆಗ್ಡೆಯವರು ಸಂದರ್ಭೋಚಿತ ಭಾಷಣವಿತ್ತರು. ಆ ಮೇಲೆ ತಹಶೀಲ್ದಾರ್ ಶ್ರೀ ಎಚ್. ಜಿ ಕೆದ್ಲಾಯರ ನೇತೃತ್ವದಲ್ಲಿ ತಾಲೂಕು ಕಚೇರಿ ಮಠಾರದಲ್ಲಿ ಮಿಶ್ರಿತ ಗೊಬ್ಬರ ತಯಾರೀ ಪ್ರಯೋಗ ನಡೆಯಿತು. ಅಪರಾಹ್ನ ಬೋರ್ಡ್ ಹೈಸ್ಕೂಲಿನ 'ಜನತಾ ಭವನ'ದಲ್ಲಿ ಸಾಮೂಹಿಕ ಸೂತ್ರಯಜ್ಞ ನಡೆದು ಅಧಮಾರು ಮಠದ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಗೀತೆಗಳೂ ತಹಶೀಲ್ದಾರ್ ಶ್ರೀ ಎಚ್. ಜಿ. ಕೆದ್ಲಾಯ, ಡಾ. ಸುಂದರರಾವ್ ಪೈ, ಶ್ರೀ ಕೆ ಶಂಕರನಾರಾಯಣ ಉಪಾಧ್ಯಾಯ ಮತ್ತು ಅಧ್ಯಕ್ಷರ ಭಾಷಣಗಳೂ ಆದುವು. ಡಾ. ಯಸ್. ಆರ್. ಪೈಗಳು ಧನ್ಯವಾದಗಳನ್ನಿತ್ತರು. ತಾ. 3ರಿಂದ 7ರ ವರೆಗೆ ಪ್ರತಿದಿನ ಅಪರಾಹ್ನ ನಗರದ ವಿವಿಧ ವಿಭಾಗಗಳ ಬೇರೆ ಬೇರೆ ಮಠಾರಗಳಲ್ಲಿ ಮಿಶ್ರಗೊಬ್ಬರ ತಯಾರೀ ಪ್ರದರ್ಶನಗಳಿವೆ. ತಾ. 8ನೇ ಅಪರಾಹ್ನ ಬೋ. ಹೈಸ್ಕೂಲಿನ ಜನತಾ ಭವನದಲ್ಲಿ ಸಾರ್ವಜನಿಕ ಸಭೆ, ಭಾಷಣ ಹಾಗೂ ವಿನೋದಾವಳಿಗಳಿವೆ.

ಎಮ್ ಜಿ ಎಮ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಶ್ರೀ ಯಚ್ ಸುಂದರರಾಯರ ನೇತೃತ್ವದಲ್ಲಿ ಮತ್ತವರ ಮೊದಲ ಭಾಷಣದೊಂದಿಗೆ ಗಾಂಧೀ ಜಯಂತಿ ಸಭೆಯು ತಾ. 2ನೇ ಪೂರ್ವಾಹ್ನ ಜರಗಿತು. ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ, ಕೆ. ಎಸ್. ಕಾಮತ್, ಪನಿಕ್ಕರ್, ಬಿ ಮೋಹನದಾಸ ಶೆಟ್ಟಿ ಮತ್ತು ಡಾ ಟಿ. ಮಾಧವ ಪೈಗಳ ಭಾಷಣಗಳಾದುವು. ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಾರ್ಥನೆ ಮತ್ತು ಗೀತೆಗಳಿದ್ದುವು.

ಕರ್ನಾಟಕ ಸಂಘ—ನವರಾತ್ರಿ ಮಹೋತ್ಸವ ಕಾಲದಲ್ಲಿ ನಡೆಯುವ ಪಂಡಿತ ವೆಂಕಟರಮಣಾಚಾರ್ಯರ ಸ್ಮಾರಕ ಕನ್ನಡ ಭಾಷಣ ಸ್ಪರ್ಧೆಯ ನಿಯಮಾವಳಿ: ೧ ಜಿಲ್ಲೆಯ ಯಾವತ್ತೂ ಹೈಸ್ಕೂಲು, ಹಾಯರ್ ಎಲಿಮೆಂಟರಿ ಮತ್ತು ಸಂಸ್ಕೃತ ಪ್ರವೇಶಿಕಾ ವಿದ್ಯಾರ್ಥಿಗಳಿಗೆ ತೆರವಾಗಿದೆ. ೨. ಪ್ರಥಮ ಮತ್ತು ದ್ವಿತೀಯ ಬಹುಮಾನಗಳಾಗಿ ಎರಡು ಬೆಳ್ಳಿಯ ರೋಲಿಂಗ್ ಕಪ್‌ಗಳನ್ನು ಗೆದ್ದ ಶಾಲಾ ಮೇಳಗಳಿಗೆ ಕೊಡಲಾಗುವುದು. ಮಂಳಿ ಕೊಡಬೇಕಾಗಿರುವ ಬೇರೆ ಮೂರು ರಜತ ಪದಕಗಳೂ ಇವೆ. ೩. ಶಾಲಾ ಮೇಳದಲ್ಲಿ ಮುಖ್ಯೋಪಾಧ್ಯಾಯರಿಂದ ಅಧಿಕೃತಿ ಪಡೆದ ನಾಲ್ಕು ಜನರಿದ್ದು, ಅವರಲ್ಲಿ ಮೂವರು ಭಾಷಣಕ್ಕೆ ಅರ್ಹರಾಗಿರುತ್ತಾರೆ. ಪ್ರವೇಶ ದರ, ಒಂದು ರೂಪಾಯಿ ಜತೆಗೆ ಅಪೇಕ್ಷಾ ಪತ್ರವನ್ನು ಅಕ್ಟೋಬರ ಎಂಟನೆಯ ದಿನಾಂಕದ ಮುನ್ನ ಸಂಘದ ಪ್ರಧಾನ ಕಾರ್ಯದರ್ಶಿಗಳಿಗೆ ತಲುಪಿಸುವುದು. ಬೆಳ್ಳಿಯ ಪದಕಕ್ಕಾಗಿ ಸ್ಪರ್ಧಿಸುವ ವೈಯಕ್ತಿಕ ಸ್ಪರ್ಧಿಗಳು ೪ ಆಣೆಯ ಅಂಚೆಚೀಟನ್ನೂ ತಮ್ಮ ಮುಖ್ಯೋಪಾಧ್ಯಾಯರ ದೃಢ ಪತ್ರವನ್ನೂ ಕಳಿಸತಕ್ಕದ್ದು.

ಈ ಬಾರಿಯ ಸ್ಪರ್ಧೆಯ ವಿಷಯಗಳು:—

೧. ಜಾತ್ಯಾತೀತ ಧೋರಣೆಯ ಏಕೆಬೇಕು? ೨ ಜಗತ್ತಿನ ಜೀವನದಲ್ಲಿ ಧರ್ಮದ ಸ್ಥಾನ. ೩ ರಾಷ್ಟ್ರದ ಅಭ್ಯುದಯಕ್ಕಾಗಿ ನೀವೇನು ಪರಿಹಾರ ಸೂಚಿಸುವಿರಿ? ೪. ಶಾಲೆಗಳಲ್ಲಿ ಪರೀಕ್ಷೆಗಳೇ ಇಲ್ಲದಿರುತ್ತಿದ್ದರೆ? ಭಾಷಣದ ಅವಧಿ—ಹತ್ತು ನಿಮಿಷ. ಸ್ಪರ್ಧೆಯು ಅಕ್ಟೋಬರ ತಿಂಗಳಲ್ಲಿ ನಡೆಯಲಿದ್ದು ನಿರ್ದಿಷ್ಟದಿನಗಳನ್ನು ಮುಂದೆ ತಿಳಿಸಲಾಗುವುದು. ಎಂದು ಪ್ರಧಾನ ಕಾರ್ಯದರ್ಶಿ ತಿಳಿಸುತ್ತಾರೆ.

ಭ್ರಮನಿರಸನ

ಕಲಹಾಸಕ್ತಿಯು ಸಾಮಾನ್ಯ ಮನುಷ್ಯರ ಹುಟ್ಟುಸ್ವಭಾವ; ಇಬ್ಬರ ಜಗಳದ ಕುರಿತು ಜನರು ಪ್ರದರ್ಶಿಸುವ ಆಸಕ್ತಿಯನ್ನು ಇಬ್ಬರ ಮೈತ್ರೀ ಸಂಬಂಧದ ಕುರಿತು ತೋರಿಸುವುದಿಲ್ಲ. ಬೈದಾಡಿಕೊಳ್ಳುವಲ್ಲಿ ಸೇರುವಷ್ಟು ಜನರು ಹಿತೋಪದೇಶ ನಡೆಯುವಲ್ಲಿ ಕೂಡುವುದಿಲ್ಲ; ಕ್ಷುದ್ರಟೀಕೆಗಳ ಕಡೆಗೆ ಕಿವಿಯರಳಿಸುವಂತೆ ಸುವಿಚಾರಗಳ ಕಡೆಗೆ ಗಮನ ಹೋಗುವುದಿಲ್ಲ. ಈ ಮನೋಧರ್ಮಕ್ಕನುಸಾರವಾಗಿ ಎಂಥವರಲ್ಲೂ ದೋಷವನ್ನೇ ಕಾಣುವ—ಎಂತಹ ಸಂಬಂಧಗಳೊಳಗೂ ಕಲಹವನ್ನೇ ನಿರೀಕ್ಷಿಸುವ—ಹವ್ಯಾಸವು ಜನತೆಯಲ್ಲಿದೆ. ಇದಕ್ಕನುಗುಣವಾಗಿ ನೆಹರೂ ವಲ್ಲಭಭಾಯಿಗಳ ನಡುವೆ ದ್ವೇಷ ಬೆಳೆದಿರುವ ಸಂಬಂಧದ ಹಲವು ಕಟ್ಟುಕಥೆಗಳು ಇಂದು ಪ್ರಚಾರದಲ್ಲಿವೆ. ದೋಷ, ದೌರ್ಬಲ್ಯಗಳ ಮಟ್ಟಿಗೆ 'ಎಲ್ಲರೂ ತಮ್ಮ ಹಾಗೆಯೇ' ಎಂದು ಭಾವಿಸಿಕೊಳ್ಳುವ ಸ್ವಭಾವ ಸಾಮ್ಯವೊಂದು ಸಣ್ಣ ಬುದ್ಧಿಯ ಜನರಲ್ಲಿದ್ದೇ ಇವೆ.

೦೦ ೦೦ ೦೦

ಗಾಂಧೀ ಜಯಂತಿ ದಿನ, ಓಕ್ಟೋಬರ್ ತಾ. 2ರಲ್ಲಿ ಇಂದೂರಿನಲ್ಲಿ ಸರ್ದಾರ್ ವಲ್ಲಭಾಯಿಗಳು ಅಂತಃಕರಣಪೂರ್ವಕ ಆಡಿದ ಈ ಕೆಳಗಿನ ಮಾತುಗಳು ಹುಳುಕು ಪ್ರೇಮಿಗಳೆಲ್ಲರ ಮನೋರೋಗಕ್ಕೆ ರಾಮಬಾಣ ಸದೃಶ ಔಷಧಿಗಳಿವೆ: "ನಾವೆಲ್ಲರೂ ಗಾಂಧಿಜೀಯ ಸ್ವಾತಂತ್ರ್ಯ ಸೇನೆಯ ಸೋಲ್ಜರರಿದ್ದೇವೆ. ಉಪಪ್ರಧಾನ ಮಂತ್ರಿ ನಾನು ಎಂಬುದರ ಕಡೆಗೆ ಯಾವುದೇ ಗಣ್ಯತೆಯನ್ನು ನಾನೆಂದಿಗೂ ಕೊಟ್ಟವನಲ್ಲ. ರಾಜಕೀಯ ರಂಗದಲ್ಲಿ ಅವಿರೋಧಿ ಮುಖಂಡನೆಂದರೆ, ಅದು ಪ್ರಧಾನ ಮಂತ್ರಿ ನೆಹರುಗಳೇ. ಬಾಪು, ತನ್ನ ಜೀವಾವಧಿಯಲ್ಲೇ ಪಂಡಿತ ನೆಹರುಗಳನ್ನು ತನ್ನ ವಾರೀಸುದಾರನಾಗಿ ಆರಿಸಿದ್ದರು. ತನ್ನ ಕವಚವು ಪಂಡಿತ ನೆಹರುಗಳ ಭುಜಗಳಿಗೆ ಜಾರತಕ್ಕದ್ದೆಂದು ಬಾಪು ಮೇಲಿಂದ ಮೇಲೆ ಸಾರಿದ್ದರು. ಮಹಾತ್ಮಾ ಗಾಂಧಿಯವರ ಈ ಭಾವನೆಯನ್ನು ಮನ್ನಿಸುವುದು ನನ್ನ ಧರ್ಮಬದ್ಧ ಕರ್ತವ್ಯವಾಗಿದೆ. ಯಾರು ತನ್ನ ಹೃದಯಾಂತರಾಳದಿಂದ ಈ ಪವಿತ್ರಭಾವನೆಯನ್ನು ಗೌರವಿಸುವುದಿಲ್ಲವೋ ಅಂಥವನು ದೇವರ ಇದಿರಲ್ಲಿ ಅಪರಾಧಿಯಾಗುತ್ತಾನೆ. ಈ ಭಾವನೆಯನ್ನು ಮುರಿತು ಬಿಡಲು ನಾನು ಗಾಂಧೀಜೀ ಸೇನೆಯ ದಗಾಖೋರ ಸೋಲ್ಜರನೇನೂ ಅಲ್ಲ. ನನಗೊಂದು ದೊಡ್ಡ ಸ್ಥಾನವಿದೆ, ಎಂಬ ಆಲೋಚನೆಯೇ ವಾಸ್ತವಿಕವಾಗಿ ನನ್ನಲ್ಲಿಲ್ಲ. ರಾಜಕೀಯ ರಂಗದಲ್ಲಿ ನನಗೊಂದು ಸ್ಥಾನವೇನೋ ಇದೆ; ಆದಾದರೋ ರಾಷ್ಟ್ರಸೇವೆಯಲ್ಲಿ ಮಹಾತ್ಮಾ ಗಾಂಧಿಯವರ ನಿಷ್ಠಾವಂತ ಅನುಯಾಯಿಯಾದ್ದರಿಂದಲೇ; ನನಗೆ ದೊರೆತಿದೆ; ಮತ್ತು ನನಗಿದು ಮೆಚ್ಚುಗೆಯುದಾಗಿದೆ".

೦೦ ೦೦ ೦೦

ಈಗಿನ ಕಾಂಗ್ರೆಸ್ ಅಧ್ಯಕ್ಷರು ಹಿಂದೂ—ಮುಸ್ಲಿಂ ಜಾತೀಯತಾ ಸ್ಫೂರ್ತಿಯ ಪಟ್ಟಿಗೆ ತಮ್ಮ ಸಾಲಿಗೆ ಸೇರಿದವರೆಂಬ ಭ್ರಾಂತಿ ಕಟ್ಟಿಕೊಂಡಿರುವ ಹಿಂದೂ ಮಹಾಸಭಾ ವಾದಿಗಳ ಮತ್ತು ಥಂಡನರ ಅಧ್ಯಕ್ಷತೆಯು ತಮಗೆ ಅಹಿತಕಾರಿಯಾಗಬಹುದೇ ಎಂಬ ಭೀತಿಕಟ್ಟಿಕೊಂಡಿರುವ ಮುಸ್ಲಿಮರ ಮನೋರೋಗಗಳನ್ನು ವಾಸಿಮಾಡುವ ಮಾತುಗಳು ಕಳೆದ ತಾ. 30ರಲ್ಲಿ ಕಲ್ಕತ್ತದಲ್ಲಿ ಅಧ್ಯಕ್ಷ ಥಂಡನರ ಬಾಯಿಯಿಂದ ಬಂದಿವೆ; ಪಶ್ಚಿಮ ಬಂಗಾಳದ ಮುಸ್ಲಿಮರು ತನಗಿತ್ತ ಸತ್ಕಾರಕೂಟವೊಂದರಲ್ಲಿ ಮಾತಾಡುತ್ತಾ ಶ್ರೀ ಥಂಡನರೆಂದರು: "ಭಾರತದಲ್ಲಿ ಒಬ್ಬನೇ ಒಬ್ಬ ಮುಸ್ಲಿಮನನ್ನಾದರೂ ಕೆಟ್ಟ ರೀತಿಯಿಂದ ನಡೆಯಿಸಿಕೊಳ್ಳಲು ಆಸ್ಪದಕೊಡಲಾರೆವು. ತನ್ನೊಳಗಿನ ಅಲ್ಪ ಸಂಖ್ಯಾತ ಸಮಾಜಗಳವರನ್ನು ನಡೆಯಿಸಿಕೊಳ್ಳುವ ಮಟ್ಟಿಗೆ ಭಾರತವು ಪಾಕಿಸ್ತಾನವನ್ನು ಅನುಕರಿಸುವಂತಿಲ್ಲ. ಮುಸಲ್ಮಾನರ ರಕ್ಷಣೆ ಮಾಡುವುದರಲ್ಲಿ ತಪ್ಪಿದರೆ ಅದು ನಿಮಗೆ ದೊಡ್ಡ ನಾಚಿಕೆಯ ವಿಷಯವೆಂದು ನಾನು ಹಿಂದುಗಳಿಗೆ ಪದೇ ಪದೇ ಹೇಳಿದ್ದೇನೆ. ಕಾಂಗ್ರೆಸ್ ಹಿಂದೂ ಮುಸ್ಲಿಂ ಐಕ್ಯತೆಯನ್ನು ಸದಾ ಸಮರ್ಥಿಸಿದೆ. ಹಿಂದೂ ಮುಸ್ಲಿಮರೊಟ್ಟಾಗಿ ದುಡಿದಿದ್ದ ಖಿಲಾಫತ್ ಚಳವಳವು ಸರ್ವರಿಗೂ ಗೊತ್ತಿದ್ದದ್ದೆ. ಆದರೆ ಮುಖ್ಯತಃ ಮುಸ್ಲಿಂ ಲೀಗಿನಿಂದ ಕೆಲವು ತಪ್ಪುಗಳು ನಡೆದುವೆಂದು ವಿಷಾದಿಸುತ್ತೇನೆ. ಪ್ರತ್ಯೇಕ ಮತದಾನ ತತ್ವಗಳನ್ನು ಅಂಗೀಕರಿಸಿದ ದೊಡ್ಡ ಅಪರಾಧ ಕಾಂಗ್ರೆಸ್ ನಾಯಕರಿಂದಾಯಿತು. ಬಂಗಾಳ ಮತ್ತು ಮಹಾ ರಾಷ್ಟ್ರಗಳವರ ಸಮೇತ ಹಲವು ನಾಯಕರು ಈ ಪ್ರಮಾದವನ್ನು ಮಾಡಿಬಿಟ್ಟರು. ಹಿಂದೂ ಮುಸ್ಲಿಂ ಸಮಸ್ಯೆಗೆ ದೇಶ ವಿಭಜನೆಯು ಒಂದು ಪರಿಹಾರವಲ್ಲ. ಸ್ವಾತಂತ್ರ್ಯ ಪ್ರಾಪ್ತಿಗೆ ತಡವಾದರೂ ಚಿಂತಿಲ್ಲ, ದೇಶವಿಭಜನೆಯಾಗಬಾರದೆಂದು ನಾನು ಜಾಹೀರಾಗಿ ಸಾರಿದ್ದೆ. ಬಹಳವಾಗಿ ಶಂಕಿಸಿಯೇ ಗಾಂಧಿಜೀ ವಿಭಜನೆಗೊಪ್ಪಿದ್ದರೆಂಬುದು ಸುವಿದಿತವಿದೆ. ಮುಸ್ಲಿಂ ಸಂಸ್ಕೃತಿಯು ಹಿಂದೂ ಸಂಸ್ಕೃತಿಗಿಂತ ಭಿನ್ನವಾದುದೆಂದು ಮಿ. ಜಿನ್ನಾ ಮತ್ತವರ ಅನುಯಾಯಿಗಳು ಎಡೆ ಬಿಡದೆ ಸಾರಿದ್ದರು. ವಿಭಜನೆಯಾದುದು ಈ ತತ್ವವನ್ನಾಧರಿಸಿಯೇ. ಆದರೆ ಚರಿತ್ರೆಯಿಂದ ದೊರೆಯುವ ಆಧಾರಗಳು ಈ ತತ್ವವು ಸುಳ್ಳೆಂದು ಖಚಿತಪಡಿಸುತ್ತಿವೆ. ಧರ್ಮವೆಂಬುದು ಸಂಸ್ಕೃತಿಗಿಂತ ಭಿನ್ನವಾದುದು. ಭಾರತದ ಸಂಸ್ಕೃತಿಯೊಂದೇ ಎನ್ನುವಾಗ ಭಾರತೀಯ ಮುಸ್ಲಿಮರೆಲ್ಲರೂ ಹಿಂದುಗಳಾಗಬೇಕೆಂದು ನನ್ನ ಅರ್ಥವಲ್ಲ. ಅವರು ಮುಸ್ಲಿಮರಾಗಿಯೇ ಉಳಿಯಬಹುದು. ಹಿಂದುತ್ವ ಮತ್ತು ಇಸ್ಲಾಮಿನ ತಿರುಳು ಒಂದೇ. ಭಾರತದ ಸಂಸ್ಕೃತಿಯು ಗತಯುಗಗಳಿಂದ ಬಂದುದಿದೆ. ಅದು ಕಾಲಕಾಲಕ್ಕೆ ಹಿಂದೂ, ಮುಸ್ಲಿಂ, ಮತ್ತಿತರರಿಂದ ಪುಷ್ಟಿಗೊಳ್ಳುತ್ತಾ ಬೆಳೆದಿದೆ. ಭಾರತದ ಹಿಂದುಗಳೂ ಮುಸ್ಲಿಮರೂ ಪ್ರಥಮತಃ ತಾವು ಮನುಷ್ಯರೆಂಬುದನ್ನು ಜ್ಞಾಪಿಸಿಕೊಳ್ಳಲಿ; ಅವರು ಬಿಚ್ಚು ಮನಸ್ಸು ಮತ್ತು ಬಿಚ್ಚು ಹೃದಯದಿಂದ ಒಂದುಗೂಡಿ ರಾಷ್ಟ್ರಸೇವೆಗೆ ಮುಂದೊತ್ತಲಿ"

ಅಂತರಂಗಮಾಸಪತ್ರಿಕೆಯನ್ನು ತಪ್ಪದೆ ಓದಿರಿ

ಉಡುಪಿ ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ ತಾ. 1–10–50ರಿಂದ ಮಧ್ಯಮ ಮತ್ತು ರಾಷ್ಟ್ರಭಾಷಾ ತರಗತಿಗಳು ಹೊಸತಾಗಿ ತೆರೆಯಲಾಗುತ್ತವೆ. ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ. ಕಳೆದ ತಾ 24ರಲ್ಲಿ ಈ ಶಿಬಿರದ ವಾರ್ಷಿಕ ವಿಶೇಷ ಸಭೆ ಜರಗಿ ವಿವಿಧ ಕಾರ್ಯಕ್ರಮಗಳಾಗಿದ್ದುವು.

ಶ್ರೀ ಎ ಬಿ ಶೆಟ್ಟರ ಆಗಮನ— ಕೃಷಿಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ತಾ. 4ನೇ ಸಂಜೆ ಮಂಗಳೂರಿಗೆ ಬಂದು ತಾ. 7ರ ತನಕ ಮಂಗಳೂರಲ್ಲಿದ್ದು 8ನೇ ಬೆಳಿಗ್ಗೆ ಮದ್ರಾಸಿಗೆ ಹೊರಡುವರು.

ಮಂಗಳೂರಲ್ಲಿ ಭೀಕರಕೊಲೆ— ಮಂಗಳೂರಿನ ಕಾಪೂಡು ದೇವಸ್ಥಾನದ ಸಮೀಪದ ಮನೆಯೊಂದರಲ್ಲಿ ತಾ. 23ನೇ ರಾತ್ರಿ ಭೀಕರ ಕೊಲೆಯೊಂದು ನಡೆದು ದಿಗಿಲುಂಟಾಗಿದೆ. ಕೊಲೆಗಡುಕನು ಮಾಡಿನ ಹಂಚು ತೆತ್ತು ಮನೆಯೊಳಗೆ ಇಳಿದು ಶ್ರೀ ಪದ್ಮನಾಭ ಪ್ರಭು, ಅವರ ಪತ್ನಿ ಮತ್ತು ಪುತ್ರಿ ಹೀಗೆ 3ಜನರನ್ನು ಉಳಿಯಿಂದ ತಿವಿದು ಪಲಾಯನ ಮಾಡಿರುವನು. ಶ್ರೀ ಪ್ರಭುಗಳು ಆಸ್ಪತ್ರೆಗೆ ತರುವಾಗಲೇ ಮೃತರಾಗಿದ್ದಾರೆ. ಪತ್ನಿ ಮತ್ತು ಪುತ್ರಿ ಇವರು ಲೇಡಿಗೋಷನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಕೊಲೆಯ ಸಂಬಂಧವಾಗಿ ಬಂಗ್ರಕೂಳೂರಿನ ವೆಂಕಪ್ಪ ಪೂಜಾರಿ ಎಂಬವನನ್ನು ಪೋಲೀಸರು ತಾ. 24ನೇ ರಾತ್ರಿ ಬಂಧಿಸಿದ್ದಾರೆ.

ನಿಧನ ವಾರ್ತೆಗಳು

ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲಿನ ಅಧ್ಯಾಪಕರಾಗಿದ್ದ ಶ್ರೀ ಕಜ್ಜನಾರಾಯಣ ಕಮ್ತಿರು ತಾ. 1ರಲ್ಲಿ ಕೆಲವೇ ದಿನಗಳ ಕಾಯಿಲೆಯಿಂದ ಮೃತರಾದರೆನ್ನಲು ವಿಷಾದವಾಗುತ್ತದೆ. ದಿವಂಗತರು ಸರಳ ಸಾಧು ಸ್ವಭಾವದವರಿದ್ದು ತನ್ನ ಶಾಲೆಯ ಉನ್ನತಿಗಾಗಿ ತುಂಬಾ ದುಡಿದಿದ್ದರು. ಮೃತರ ಆತ್ಮಕ್ಕೆ ಚಿರ ಶಾಂತಿ ಕೋರುತ್ತೇವೆ.

ಕುಂದಾಪುರ ತಾಲೂಕಿನ ಪ್ರಸಿದ್ಧ ಬಂಟ ಮನೆತನಗಳಲ್ಲಿ ಒಂದಾದ ನಾಕೂರು ಕುಟುಂಬದ ಆದರ್ಶ ಯಜಮಾನರಾದ ಶ್ರೀ ಮಂಜಯ್ಯ ಸೇರ್ವೆಗಾರರು ತನ್ನ 99ನೇ ವಯಸ್ಸಿನಲ್ಲಿ ತಾ. 1–10–50ರಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ದಿವಂಗತರು ನಿಷ್ಠಾವಂತರಿದ್ದು ದಾನ ಧರ್ಮಗಳನ್ನು ಮಾಡಿ ಕೀರ್ತಿಗಳಿಸಿದವರು. ಕಾಂಗ್ರೆಸಿನಲ್ಲೂ ಮಹಾತ್ಮಾ ಗಾಂಧಿಯವರಲ್ಲೂ ವಿಶೇಷ ಭಕ್ತಿ. ವಿ ಶ್ವಾ ಸ ವಿ ದ್ದ ವ ರು. ಅಸ್ಪೃಶ್ಯತಾ ನಿವಾರಣೆಯ ಪ್ರಚಾರಕ್ಕಾಗಿ ಮ. ಗಾಂಧಿಯವರು ಕುಂದಾಪುರಕ್ಕೆ ಆಗಮಿಸಿದಾಗ ಸ್ವಾಗತಾಧ್ಯಕ್ಷರಾಗಿದ್ದರು. ಕುಟುಂಬದ ನೂರಕ್ಕೂ ಮಿಕ್ಕಿದ ಮೆಂಬರರೆಲ್ಲರ ಪ್ರೀತಿ, ಆದರ ಗೌರವಕ್ಕೆ ಪಾತ್ರರಾಗಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ.

ಸುಪ್ರಸಿದ್ಧ ಹಾಲಾಡಿ ಮನೆತನದ ಶ್ರೀ ರಘುರಾಮ ಶೆಟ್ರು, ರಕ್ತವಿತ್ತದಿಂದ ತಾ. 22–9–50ರಂದು 36ನೇ ವಯಸ್ಸಿನಲ್ಲಿ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ಮೃತರು ಸಮಾಜದ ಮುಂದಾಳುಗಳಲ್ಲೊಬ್ಬರಾಗಿದ್ದು ಪರೋಪಕಾರೀ ಮನೋವೃತ್ತಿಯುಳ್ಳವರಾಗಿದ್ದರು.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 36/195

1 M. ಹರಿಯಪ್ಪ ಭಾಗವತ, 2 M ಸುಂದರ ಭಾಗವತ, 3 ಕಲ್ಯಾಣಿ ಯಾ ಸರಸ್ವತಿ ಅಂಮ್ಮ. — ಅರ್ಜಿದಾರರ

ಯಿವರೊಳಗೆ

ಅರ್ಜಿದಾರರ ಕುಟುಂಬದ ಯಜಮಾ ರಾಗಿದ್ದ 1–2ನೇ ಅರ್ಜಿದಾರರ ತಂದೆ 3ನೇ ಅರ್ಜಿದಾರಳ ಗಂಡ ತಾ. 6–10– ರಲ್ಲಿ ಮೃತಪಟ್ಟ ಮೂಲ್ಕಿ ನರಸಿಂಹ ಭಾ ಪತಮೀಗೆ ಹೊರಗಿನಿಂದ ಬರತಕ್ಕ ಅರ್ಜಿ ಲ್ಲಿ ಕಾಣ್ಸಿದ ಯಾಸತ್ತು ಸಾಲಗಳನ್ನು ವಸ ಮಾಡುವರೇ ಕುಟುಂಬದ ಯಿಾಗಿನ ಯ ಮಾನನಾದ 1ನೇ ಅರ್ಜಿದಾರನ ಹೆಸರಲ್ಲಿ ಸ ಕಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅ ದಾರರು ಕೊಟ್ಟ ಮೇಲ್ಕಂಡ ಅರ್ಜಿಯು 25-10-1950ಕ್ಕೆ ಮೇಲ್ಕಂಡ ಕೋರ್ಟಿನ ತನ್ಕಿಗೆ ಯಿಟ್ಟಿರುತ್ತದಾಗಿಯೂ, ಆ ಕುರಿ ಆಕ್ಷೇಪ ಹೇಳತಕ್ಕವರು ಯಿಾಪ್ರ, ಸದ್ರಿ ದಿ ಸದ್ರಿ ಕೋರ್ಟಿನ ಮುಂದೆ ಹಗಲು 10ಗಂ ಹಾಜರಾಗಿ ಜ್ಯಾಹೀರುಪಡಿಸಿಕೊಳ್ಳತಕ್ಕದ್ದ ಲ್ಲಾ ಸರಾ ಯಿಾ ಮೂಲ್ಕ ಯಾವತ್ತಾ ರಿಗೆ ತಿಳಿಸೋಣಾಗುತ್ತದೆ.

P. N. Krishnamoorthy Ra
Advocate for Petitioner.
Udipi, Dated 30–9–50

Notice

ಕುಂದಾಪುರ ಡಿ. ಮು . ಕೋರ್ಟಿನ

S. C 539/1950

D. R. ಜೋಸೆಫ್ ಅಂದ್ರಾದ—ವಾ
ತಂಡೇಲ್ ಟಿ ಮಹಮ್ಮದ್ —ಪ್ರತಿವಾ

ಮಂಗಳೂರು ತಾಲೂಕು ಕಣ್ಣನ್ ಬ ಗ್ರಾಮದಲ್ಲಿರುವ ಅಬ್ದುಲ್ ಬ್ಯಾರಿಗಳ ಗ ತಂಡೇಲ್ ಟಿ. ಮುಹಮ್ಮದ್ ಇವರಿಗೆ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯಿಂದ ವಾದಿಗೆ ಬರಬೇ ರೂ- 250–4–0 ನ ಬಡ್ಡಿ ಕೂಡಾ ಹ ಳನ್ನು ಬರಮಾಡಿಕೊಳ್ಳುವರೆ ವಾದಿಯು ತಿವಾದಿಯ ಮೇಲೆ ದಾಖಲು ಮಾಡಿದ ಮ ನ ದಾವೆಯು ತಾ. 24-10-50ಕ್ಕೆ ಮೇ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತದೆ. ಆ ರಿತು ಏನಾದರೂ ಆಕ್ಷೇಪಣೆಗಳಿದ್ದರೆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಲು 11 ಗಂಟೆಗೆ ಹಾಜರಾಗಿ ಜಾಹೀರು ಮ ಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂ ತಿಳಿಯಪಡಿಸಿರುತ್ತದೆ.

N. S. Parameshwaria
Advocate for Pltff.
COONDAPOOR, DATE 30-9-5

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತದಾರರಿಗೆ—ಶಾಲೆಗಳಿಗೆ–
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ,
ನವಯುಗ ಪ್ರೆಸ್, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಭಗವದ್ಭಕ್ತನು ಭಕ್ತಿಪರವಶನಾದಾಗ ತನ್ನ ಬಾಲಕನನ್ನು ಮಣ್ಣಲ್ಲಿ ಹಾಕಿ ತುಳಿದು ಕೊಂದರೂ ಕೊಲೆಗಾರನೆಂದಾಗದು. ಅಂತಹ ಕೊಲೆ ಕಣ್ಣಾರೆ ಕಂಡರೂ ಕಂಡ ಜನಗಳು ಪುಣ್ಯಜೀವಿಗಳಾಗಬೇಕಾದರೆ ಇದೊಂದು ಪರಮ ಪವಿತ್ರ ಕಥೆಯಿರಬೇಕು. ಅದೇ ಇದು–

ಚ ಕ್ರ ಧಾ ರಿ ಅಥವಾ
ಗೋ ರ ಕುಂ ಬಾ ರ (ಜೆಮಿನಿ)

ನಾಗಯ್ಯ, ಪುಷ್ಪವಲ್ಲಿ, ಸೂರ್ಯಪ್ರಭಾ, ನಾರಾಯಣ ರಾವ್.

ಬರುವ ಚಿತ್ರಗಳು:– ವಿಜಯ ಕುಮಾರಿ, ಅಂದಾಜ್, ಇತ್ಯಾದಿ.

ಮಂಗಳೂರು

ಗವರ್ನರರ ಆಗಮನ—ಮದ್ರಾಸ್ ಗವರ್ನರರಾದ ಭಾವನಗರದ ಮಹಾರಾಜರೂ ಅವರ ಪತ್ನಿ ಮಹಾರಾಣಿಯವರೂ ತಾ. 5ನೇ ಸಂಜೆ ಸ್ಪೆಶ್ಯಲ್ ಟ್ರೈನಿನಲ್ಲಿ ಮಂಗಳೂರಿಗೆ ಬಂದು ತಾ. 7ರ ತನಕ ಮಂಗಳೂರಿನ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗ ವಹಿಸುವರು.

ಆಗಮಿಸಿದ ದಿನವೇ ಸಂಜೆ 5 ಗಂಟೆಗೆ ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಬೋರ್ಡಿನ ಮತ್ತು ನಗರಸಭೆಯ ಮಾನಪತ್ರ ಸ್ವೀಕರಿಸಿ, ಮಹಾರಾಜರು ಕೆನರಾ ಕ್ಲಬ್ಬಿಗೂ, ಮಹಾರಾಣಿಯವರು ಮಹಿಳಾ ಸಭೆಗೂ ಸಂದರ್ಶನೆ ಕೊಡುವರು. ತಾ. 6ಕ್ಕೆ ಮಹಾರಾಜರು ಧರ್ಮಸ್ಥಳಕ್ಕೆ ಹೋಗಿಬರುವರು. ಮಹಾರಾಣಿಯವರು ವೆನ್‌ಲಾಕ್ ಆಸ್ಪತ್ರೆ, ಲೇಡಿ ಗೋಷನ್ ಆಸ್ಪತ್ರೆ, ಬೋಳಾರ ನರ್ಸರಿ ಶಾಲೆ, ಜೆಪ್ಪಿನ ಶಿಶುವಿಹಾರ ಕೇಂದ್ರಗಳನ್ನು ಸಂದರ್ಶಿಸುವರು. ಸಂಜೆ ಗವರ್ನರರು ಕೊಳೂರಿಗೆ ತೆರಳಿ ಕಂಬಳ ನೋಡಿ ಬಂದು, ಕೊಡಿಯಾಲಗುತ್ತನ್ನು ಸಂದರ್ಶಿಸಿ ಮಿತ್ರರೊಬ್ಬರ ಸತ್ಕಾರದಲ್ಲಿ ಭಾಗವಹಿಸುವರು. ಸಂಜೆ 5-30ಕ್ಕೆ ಇಬ್ಬರೂ ಜಿಲ್ಲಾ ಕಲೆಕ್ಟರರ ಚಾ ಸತ್ಕಾರ ಸ್ವೀಕರಿಸಿ ಬಂಟರ ವಿದ್ಯಾರ್ಥಿ ಭವನದ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ತಾ. 7ರಲ್ಲಿ ಗವರ್ನರರು ಮೂಡಬಿದ್ರೆ ಜೈನಬಸದಿ, ಕಾರ್ಕಳ ಗೋಮಟೇಶ್ವರ ಮೊದಲಾದುವನ್ನು ನೋಡಿ ಮಧ್ಯಾಹ್ನ ಹಿಂದಿರುಗುವರು. ಮಹಾರಾಣಿಯವರು ಗವರ್ನಮೆಂಟ್ ಕಾಲೇಜಿನಲ್ಲಿ ಸೇವಾಸಮಾಜದ ಪ್ರದರ್ಶನದ ಉದ್ಘಾಟನೆ ಮಾಡಿ, ಅನಾಥ ಬಾಲಿಕಾಶ್ರಮ, ಬೆಸೆಂಟ್ ಶಾಲೆ, ಶ್ರೀರಾಮಕೃಷ್ಣ ವಿದ್ಯಾರ್ಥಿನಿ ಭವನಗಳಿಗೆ ಭೇಟಿಕೊಡುವರು. ಸಂಜೆ ಗವರ್ನರ್ ದಂಪತಿಗಳು ಸಮುದ್ರದಲ್ಲಿ ಮೀನು ಹಿಡಿಯುವುದನ್ನು ಪರಿಶೀಲಿಸಿ ಗಣಪತಿ ಹೈಸ್ಕೂಲಿನಲ್ಲಿ ಜರಗುವ ವಿನೋದಾವಳಿಗಳನ್ನು ನೋಡಿ ವಿಶೇಷ ರೈಲುಗಾಡಿಯಲ್ಲಿ ಮಲಬಾರಿಗೆ ಹೊರಡುವರು.

ಗವರ್ನರ ದಂಪತಿಗಳ ನೇತೃತ್ವದಲ್ಲಿ ವಿವಿಧ ವಿನೋದಾವಳಿಗಳು— ಮದ್ರಾಸು ಪ್ರಾಂತಿಕ ಕ್ಷೇಮಚಿಂತನಾ ಸಂಸ್ಥೆಯ ದ. ಕ. ಜಿಲ್ಲಾ ಶಾಖೆಯ ಆಶ್ರಯದಲ್ಲಿ ಮಂಗಳೂರು ಗಣಪತಿ ಹೈಸ್ಕೂಲ್ ಭವನದಲ್ಲಿ ತಾ. 7-10-50ನೇ ಶನಿವಾರ ಸಂಜೆ ಏಳು ಗಂಟೆಗೆ ಮದ್ರಾಸು ಗವರ್ನರ ದಂಪತಿಗಳ ನೇತೃತ್ವದಲ್ಲಿ ವಿವಿಧ ವಿನೋದಾವಳಿಗಳ ದೇಖಾವೆ ನಡೆಯಲಿರುವುದು. ಪ್ರವೇಶ ದರವು ರೂಪಾಯಿ 10, 5, 3 ಮತ್ತು 2ರಂತೆ ನಿರ್ಧರಿಸಲಾಗಿದೆ. ರೂ 250 ಅಥವಾ ಅದಕ್ಕೆ ಮೇಲ್ಪಟ್ಟ ಧನ ಸಹಾಯ ನೀಡುವವರಿಗೆ ಪ್ರದರ್ಶನದಲ್ಲಿ ಸೀಟು ಕಾದಿರಿಸಲಾಗುವುದು. ಈ ದೇಖಾವೆಯ ಉತ್ಪತ್ತಿಯು ಸರ್ವಜನೋಪಯೋಗಿ ಕ್ಷಯರೋಗ ನಿವಾರಣಾ ಕಟ್ಟಡ ನಿರ್ಮಾಣದ ಪುಣ್ಯಕಾರ್ಯಕ್ಕೆ ಉಪಯೋಗಿಸಲಾಗುವುದು. ಮಂಗಳೂರಿನವರೆಲ್ಲರೂ ಉದಾರ ಮನಸ್ಸಿನಿಂದ ಸಹಕರಿಸಬೇಕಾಗಿ ಸಮಿತಿ ಕಾರ್ಯದರ್ಶಿಯವರಾದ ಶ್ರೀ ಡಿ. ಮೋಹನರಾಯರು ವಿನಂತಿಸುತ್ತಾರೆ.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಕಳೆದ ತಾ 24ರಲ್ಲಿ ಉಡುಪಿಗೆ ಪ್ರಯಾಣ ಬೆಳೆಸಿ ಅಲ್ಲಿಯ ಆಸ್ಪತ್ರೆ ಕಟ್ಟುವ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ ಮೊದಲಾದವರೊಡನೆ ವಿಚಾರ ವಿನಿಮಯ ನಡೆಸಿದರು. ಸಾಧಾರಣ ಹತ್ತು ಸಾವಿರ ರೂಪಾಯಿ ವೆಚ್ಚಮಾಡಿ ಆಸ್ಪತ್ರೆ ಕಟ್ಟಡ ಪ್ಲಾನನ್ನು ತಯಾರಿಸುವ ನಿರ್ಧಾರವಾಯಿತು. ಈಗಾಗಲೇ ಇಬ್ಬರು ಮಹನೀಯರು ಈ ಕಾರ್ಯಕ್ಕೆ ಧನ ಸಹಾಯವನ್ನಿತ್ತಿರುವರು.

ಸ್ಮಾರಕ ಯೋಜನೆ— ತಾರೀಕು 24-9-50ರಲ್ಲಿ ಆಯುರ್ವೇದ ಭೂಷಣ ಯಮ್. ವಿ. ಶಾಸ್ತ್ರಿ ಸ್ಮಾರಕ ಯೋಜನೆಗಳನ್ನು ನೆರವೇರಿಸುವ ಕುರಿತು ಈ ಮೊದಲು ರಚಿಸಿದ ಸ್ಮಾರಕ ಸಮಿತಿಯ ಪ್ರಥಮಾಧಿವೇಶನವು ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದಲ್ಲಿ ವೈದ್ಯಗುರು ಡಾ. ಎಮ್. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿ ಶೀಘ್ರ ಕಾರ್ಯಕ್ರಮವನ್ನು ಕೈಕೊಳ್ಳುವರೆ ಒಂದು ಕಾರ್ಯಕಾರಿ ಮಂಡಲಿಯನ್ನು ರಚಿಸಲಾಯಿತು. ಇದಕ್ಕೆ ಡಾ. ಪಿ. ಎನ್. ಭಟ್ L. I. M. ಕಾಸರಗೋಡು, ಇವರು ಅಧ್ಯಕ್ಷರು. ಡಾ. ಎಮ್. ಆರ್. ಭಟ್ಟರು ಸ್ಥಾಪಕರು. ಕೊಂಚಾಡಿ ಶ್ರೀ ಕೇಶವ ಶೆಣೈಯವರು ಕೋಶಾಧಿಕಾರಿ. ಶ್ರೀಗಳಾದ ಎಮ್. ಆರ್. ಬೋಸ್ ಮತ್ತು ಕೆ. ಬಿ. ಜ್ಯೋತಿಯವರು ಜತೆ ಕಾರ್ಯದರ್ಶಿಗಳು. ಇತರ 4 ಜನರು ಕೂಡಾ 9 ಜನ ಕಾರ್ಯಕರ್ತರುಗಳನ್ನು ನೇಮಿಸಲಾಯಿತು. ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ಮಂದಿರದಲ್ಲಿ ಬಡರೋಗಿಗಳಿಗೆ ಚಿಕಿತ್ಸೆ ಕೊಡುವ ರುಗ್ಣಾಲಯ ಶಯ್ಯೆಗಳಿರುವ Inpatient ward ಕೂಡಾ ಈ 3 ಸ್ಮಾರಕ ಯೋಜನೆಗಳನ್ನು ಒಟ್ಟೊಟ್ಟಿಗೆ ಕಾರ್ಯರೂಪಕ್ಕೆ ತರುವರೆ ಸರ್ವಾನುಮತದಿಂದ ನಿರ್ಧರಿಸಲಾಯಿತು. ಆಯುರ್ವೇದ ಶಾಸ್ತ್ರಾಭಿವೃದ್ಧಿಯಲ್ಲಿ ಅಭಿಮಾನವುಳ್ಳ ಮತ್ತು ಕೀರ್ತಿಶೇಷ ಶಾಸ್ತ್ರಿಗಳವರಲ್ಲಿ ಗೌರವ ಇರುವ ಸಮಸ್ತ ಮಹಾಜನರು ಈ ಕಾರ್ಯದಲ್ಲಿ ಸಹಕಾರ ಸಹಾನುಭೂತಿ ಕೊಟ್ಟು ಯಶಸ್ವಿಗೊಳಿಸುವಂತೆ ನಿರೀಕ್ಷಿಸಲಾಗಿದೆ.

ಜಿಲ್ಲಾ ಕಲೆಕ್ಟರರು ಮನವಿಯೊಂದರಲ್ಲಿ ಜಿಲ್ಲೆಯ ನಾಗರಿಕರೆಲ್ಲರೂ ತಾ. 2ರಿಂದ 8ರ ವರೆಗಿನ ಮಿತ್ರರೊಬ್ಬರ ಸಪ್ತಾಹವನ್ನು ಜಯಶೀಲವಾಗಿ ಆಚರಿಸಬೇಕೆಂದೂ ತನ್ಮೂಲಕ ಆಹಾರ ಕೊರತೆಯನ್ನು ನಿವಾರಿಸಬೇಕೆಂದೂ ಕೇಳಿಕೊಂಡಿರುವರು.

ಕಳೆದ ೨೮ ವರ್ಷದಿಂದ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ

ಪುರೋಹಿತ-ಶ್ವಾಸಹಾರಿ

೩, ೬, ೧೨, ಔಂ. ಪ್ಯಾಕಿಂಗದಲ್ಲಿ ೩॥, ೬, ೧೦, ರೂ ಕಿಮ್ಮತ್ತು. ಭಾರತದಲ್ಲಿ ಎಲ್ಲಾ ಕಡೆ ಮಾರಾಟಕ್ಕೆ ಸಿಗುತ್ತದೆ ಇಲ್ಲವೆ ನಮ್ಮವರಿಂದ

ಡಾ. ಪುರೋಹಿತ ... [illegible]

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಶೆಲ್ಪಂಜೆ ಪ್ರಾಸ್ವಾಚಾರ್ಯರ್,
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠಹಿಡಿದ ಋತುಸ್ರಾವವಾಗದಿದ್ದರೂ ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಸಂದಿಗ್ಧಕ್ಕೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಟ್ರಾಂಗ್ ರೂ. 5 ಅಧಿಕಶಾಳಿ ಸ್ಪೆಶ್ಯಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

MRS D. DEVEE, F. D8 (N. J.)
Tollygunge CALCUTTA
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

Asthma Sufferers may Note

The most powerful medicine for
ASTHMA.
(Registered and Genuine)
CHITRAKOT
ASTHMA-SPECIFIC

Hundred years fame to cure the dreaded disease permanently only by one dose to be taken on Sharadpurnima (full moon) dated 25—10—50.

Apply atonce:—
Kr. Badri Nath Singh,
ShubhChintak Karyalaya,
CHITRAKOT, Dist Banda (U. P.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

WANTED

ಹಾಯರ್‌ಗ್ರೇಡ್ ತರಬೇತಾದ
2 ಜನ ಉಪಾಧ್ಯಾಯರು ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

Manager
Sri Anantha Padmanabha Temple School, PERDOOR S K.

Notice as to Lost Policy

Paid up Policy No. 114330/31 in National Insurance Co, Ltd, on the life of Sri Kote Narayanayya, Landlord, Kote, Katapadi, Udipi Tq. (S. K.) having been lost, notice is hereby given that failing any objections to reach the Company within one month from any interested party with production of the policy and proof of title, the Company will proceed in pending matter concerning the policy.

S. D. Srinivasan,
Manager,
National Insurance Co, Ltd.

7, Council House Street,
Calcutta 1—10—1950.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಶಿವಯೋಗಿ, ಶಿಮೊಗ್ಗ, ಹಾವೇರಿ, ಬ್ಯಾಡಗಿ

ಕೆಲವೇ ಪ್ರತಿಗಳು ಉಳಿದಿದೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್. ಐ. ಎಮ್., ಉಡುಪಿ.

ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು, ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

ದಕ್ಷಿಣ ಕನ್ನಡ

ಫಲಿಮಾರು—ಈ ಕೇಂದ್ರದ ಉಪಾಧ್ಯಾಯರ ಸಭೆಯಲ್ಲಿ ಈ ಸಂಘದ ವತಿಯಿಂದ ಆಸ್ಪಾಮ ಭೂಕಂಪದ ಫಂಡಿಗೆ ದ್ರವ್ಯಸಹಾಯವನ್ನು ಕಳುಹಿಸ ಬೇಕಾಗಿ ನಿರ್ಣಯಿಸಲ್ಪಟ್ಟಿತು.

ಫಲಿಮಾರು ಬೊ. ಹಾ. ಎಲಿಮೆಂಟರಿ ಶಾಲೆಯಲ್ಲಿ ತಾ. 11-10 50ರಂದ ಉಪಾಧ್ಯಾಯರಿಗೆ-ಪ್ರಥಮ ಚಿಕಿತ್ಸಾ ಪಾಠಗಳು ಡಾ। ಕೃಷ್ಣ ಶ್ಯಾಮ ಸೆಟ್ರ ನೇತೃತ್ವದಲ್ಲಿ ಜರುಗುವವು.

ಜಿಲ್ಲಾ ಬೋರ್ಡಿನ ಫಲಿಮಾರು ಶಾಲೆಯಲ್ಲಿ 1026 ಮಕ್ಕಳು ವಿದ್ಯಾರ್ಜನೆಯನ್ನು ಪಡೆಯುತ್ತಾರೆ. ನಾಲ್ಕನೇ ಕಟ್ಟಡವು ಉಪಯೋಗಕ್ಕೆ ಸಿದ್ಧವಾಗುತ್ತಲಿದೆ.

ಕಟಪಾಡಿ—ಕಳೆದ ತಾ 26ರಲ್ಲಿ ಶ್ರೀ ಬೂಬ ಪೂಜಾರಿಯವರು(ಶ್ರೀ ಕೆ. ರಂಗ ಪೂಜಾರಿಯರ ಸೋದರ ಮಾವ) ದೈವಾಧೀನರಾದುದು ವಿಷಾದಕರವಿದೆ. ಇವರು ದಯಾಳು ಮತ್ತು ಬಡವರ ಬಂಧುವಾಗಿದ್ದರು.



Approved from by the Govt of Mysore Certificated by the Agent of the Govt of Cylone & Indian.

ಬೆಳ್ಳೆ—ಕಳೆದ ತಾ 24ರಲ್ಲಿ ಬೆಳಗ್ಗೆ ಉಡುಪಿ ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ಎಸ್ ವಿಠಲದಾಸ್ ಮತ್ತು ಸದಸ್ಯ ಶ್ರೀಎಮ್. ಮಂಜಪ್ಪರು ಬೆಳ್ಳೆಯ ರೈತರ ಸಭೆಯಲ್ಲಿ ಭಾಷಣಮಾಡುತ್ತಾ ಚಾಲಗೇಣಿ ರೈತರ ಶೋಚನೀಯ ಸ್ಥಿತಿಯನ್ನು ವಿವರಿಸಿದರು.ರೈತರು ಸಂಘಟಿತರಾಗಬೇಕೆಂದು ವಿನಂತಿಸಿದರು

ಮೂಡುಬಿದಿರೆ—ತಾ 23-9-50 ರಂದು ಇಲ್ಲಿಯ ಶ್ರೀ ಸರಸ್ವತಿ ಸೇವಾ ಸಂಘದ ಆಶ್ರಯದಲ್ಲಿ ಮಂಗಳೂರಿನ ಲಲಿತ ಕಲಾ ಕೇಂದ್ರ ಇವರ ಕೃಪೆಯಿಂದ ದಕ್ಷಿಣ ಭಾರತದ ವಿಖ್ಯಾತ, ನೃತ್ಯ ಕಲಾ ನಿಪುಣ ಶ್ರೀ ರಾಜನ್ ಅಯ್ಯರ್, ಎರ್ನಾಕುಲಂ ಇವರ ಮತ್ತು ಶ್ರೀ ರಜನಿ ದೇವಿ ಇವರ ಅಮೋಘ ನೃತ್ಯ ಪ್ರದರ್ಶನವೂ ಅಲ್ಲದೆ ಸಂಘದ ಕಲಾ ಬಳಗದವರಿಂದ ನಾಟಕ ವಿಶಾರದ ಶ್ರೀ ಅಪ್ಪಯ ವಿದ್ವಾನ್, ಬೇಲಗದ್ದೆ ಇವರು ಬರೆದ 'ರಾಧಾಕೃಷ್ಣ' ಎಂಬ ಸುರಸ ಹಾಸ್ಯರಸಭರಿತ ಸಂಗೀತ ಸಾಮಾಜಿಕ ನಾಟಕವೂ ಸ್ಥಳೀಯ ಮಹಾವೀರ ಥಿಯೇಟರಿನಲ್ಲಿ ಯಶಸ್ವಿಯಾಗಿ ಜರಗಿಸಲ್ಪಟ್ಟಿತು. ಕೊನೆಯಲ್ಲಿ ರಾಜನ್ ಐಯ್ಯರರೂ ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣ ಗೋಪಾಲರೂ ಸಂದರ್ಭೋಚಿತ ಭಾಷಣಗಳನ್ನಿತ್ತರು.

ಮುಂಬಯಿ

ತಾ. 20-9-50ರಲ್ಲಿ "ನೇಶನಲ್ ಕಾಲೇಜ್" ಬೊಂಬೆ, ಇದರ ಹೊಸದಾಗಿ ಸ್ಥಾಪಿಸಲ್ಪಟ್ಟ ಕರ್ನಾಟಕ ಸಂಘವು ಸಭೆ ಸೇರಿ, ಶ್ರೀಗಳಾದ ಪಂಜೆತ್ತೂರು ಶಂಕರ ಶೆಟ್ಟಿರನ್ನು ಅಧ್ಯಕ್ಷ, ಯಸ್. ರಾಜಾರಾಮ್ ರಾಯರನ್ನು ಕಾರ್ಯದರ್ಶಿ, ಯಸ್ ವಿಠಲದಾಸರನ್ನು ಉಪಕಾರ್ಯದರ್ಶಿ, ಯಚ್. ವಾಸುದೇವ ಶೆಣೈಯವರನ್ನು ಕೋಶಾಧ್ಯಕ್ಷ, ಮತ್ತು ಸಂಜೀವ ಬಸ್ರೂರು, ಇವರನ್ನು ಕಲಾ ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು.

ಸ್ವೀಕಾರ

ಮುಂಜಾವಿನಿಂದ ಮುಂಜಾವು—(ತ ರಾ. ಸು.) ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು, ಬೆಲೆ 2 12-0

ಅಮರ ಅಗಸ್ಟ—(ಅ ನ. ಕೃಷ್ಣರಾವ್) ಪ್ರಕಾಶಕರು- ಆನಂದ ಬ್ರದರ್ಸ್, ಬೆಂಗಳೂರು, ಬೆಲೆ 2-0-0

ಬೀಳದ ತೆರೆ—(ಕು. ಸೌ। ಸ.ಶೀಲಾ ಜೋಶಿ) ಪ್ರಕಾಶಕರು- ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ, ಬೆಲೆ 3-8-0

ಬ್ರಹ್ಮಚರ್ಯವೇ ಜೀವನ—(ಶ್ರೀ ಶಿವಾನಂದ ಸ್ವಾಮಿ, ಹರಿದ್ವಾರ; ಅನುವಾದ—ಶ್ರೀ ಈಶ್ವರ ಸಣಕಲ್ಲ, ರಬಕವಿ) ಪ್ರಕಾಶಕರು-ಸಮಾಜ ಪುಸ್ತಕಾಲಯ, ಧಾರವಾಡ, ಬೆಲೆ 3-0 0

ಎರಡು ಮುಷ್ಟಿ ಕತೆಗಳು—(ನವಗಿರಿ ನಂದ) ಪ್ರಕಾಶಕರು—ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು. ಬೆಲೆ 0-8-0

ಕಿರಿ ಸಾಹಿತಿಯ ಹಿರಿಯಾಸೆ-(ಶ್ರೀ ಎಸ್. ಎಸ್. ಉಳ್ಳಾಲ) ಪ್ರಕಾಶಕರು ಹಿಂದೀ ಪುಸ್ತಕ ಭಂಡಾರ ಉಡುಪಿ. ಬೆಲೆ 0-8-0

ಬದುಕಿನ ಆದರ್ಶ—(ಶ್ರೀ ವ್ಯಾಸರಾಯ ಬಲ್ಲಾಳ) ಪ್ರಕಾಶಕರು ಹಂಸ ಸಾಹಿತ್ಯಮಾಲಾ, ಬೊಂಬಾಯಿ. ಬೆಲೆ 1-8 0

ಶೋಚನೀಯ ನಿಧನ—(ರಾ.ಪ . ಶಿರೋಳ) ಪ್ರಕಾಶಕರು. ಶಾಂತಿ ಸಾಹಿತ್ಯ ಮಾಲೆ, ಬಾದಾಮಿ. ಬೆಲೆ 1-0-0

ಅರೆಯಾಳು—(ಕುಲಕರ್ಣಿ ಬಿಂದು ಮಾಧವ) ಪ್ರಕಾಶಕರು—ಶಾಂತಿ ಸಾಹಿತ್ಯ ಮಾಲೆ, ಬಾದಾಮಿ ಬೆಲೆ 1-8-0

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ-(ಅ. ನ. ಕೃಷ್ಣರಾಯರು) ಪ್ರಕಾಶಕರು—ಆನಂದ ಬ್ರದರ್ಸ್, ಬೆಂಗಳೂರು. ಬೆಲೆ 1-8-0

ಎರಡನೆಯ ಬುದ್ಧ

(ಅ. ರಾ. ಶೆಟ್ಟಿ, ಧರ್ಮಸ್ಥಳ.)

ಹಿಂದು, ಮುಸಲರು, ಕ್ರಿಸ್ತ, ಸೀಕರಿಂವರೆಲ್ಲ,
ಒಂದೆ ತಾಯ್ಮಕ್ಕಳವರಲಿ ಭೇದವಿಲ್ಲ;
ಹೀನದೀನರನು ಹರಿಜನರೆಂದು ಎತ್ತಿ,
ಧನ್ಯ ಬಾಪೂಜಿ ಭಾರತದಮಲಶಕ್ತಿ
ಓದು ಬರೆಹಕೆ ಮಾತುಕತೆಗೆ ಐಕ್ಯತೆಗೆ,
ಸಾಧನೋನ್ನತಿಯ ಸತ್ಯಕ್ಕೆ ಸಂಗತಿಗೆ,
ಭೇದತಂತ್ರದಿ ಪರರು ಹಾದಿ ತಪ್ಪಿಸಲು
ಹಾದಿತೋರಿತು ಧನ್ಯ ಬಾಪೂಜಿಯುಳಲು
ಪರತಂತ್ರಪಡಸೇರಿ ಪರರ ಬಂಧನದಿ
ಮೆರೆವ ಭಾರತ ಜೀವನಾವೆಯನು ಮುದದಿ
ಅರ್ಧರಾತ್ರಿಯಿಂ ಸ್ವಾತಂತ್ರ್ಯ ದಡಕೇ,
ಧನ್ಯ ಬಾಪೂಜಿ ತಂದೊಯ್ದ ಯುವಸರಕೇ,
ಧರ್ಮದೇವರನೆವದಿ ಸ್ವಾರ್ಥಸಾಧನೆಯ
ದುರ್ಮದರನಸ್ಪೃಶ್ಯತೆಯಲಿ ಭಂಜನೆಯ
ಗೈದೆ, ನವಯುಗಧರ್ಮ ಸ್ಥಾಪನಾಚಾರ್ಯ
ಧನ್ಯ ಬಾಪೂಜಿ ಭಾರತದಮಲ ಸೂರ್ಯ
ಸಿರಿಸುರಿಗೆ ಸೆರೆಯಾಗಿ ಆತ್ಮೋನ್ನತಿಯನು
ಮರೆತ ಸೋದರರ ಪರಿಭವದ ಮರುಕವನು
ಅರುಹುತೆಲ್ಲರ ಕಣ್ಣು ತೆರೆದು ಬೋಧಿಸಿದಾ
ಧನ್ಯ ಬಾಪೂಜಿ ಎರಡನೆಯ ಬುದ್ಧಾ!

ಬೆಳೆ ಬಾಗಾಯಿತುಗಳ ಬಗ್ಗೆ
ನೀರಿನ ಇಂಜಿನ್ ಪಂಪು

ಉತ್ಕೃಷ್ಟ ತರಗತಿ!
ಯೋಗ್ಯವಾದ ಬೆಲೆ!!

ಮಾಹಿತಿ ಬಗ್ಗೆ ಬರೆಯಿರಿ.

G. N. Hemmady,
Goldville Engg: Works,
P B 6204, Bombay 10

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟು, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ
ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಶಾಸ್ತ್ರಿ ಟಾನಿಕುಗಳೂ ವಿಟೆಮಿನ್ ಆಹಾರ ವಸ್ತುಗಳೂ,
ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ

ಎಂ. ಮೆಂಡೋಸ,
ಮ್ಯಾನೇಜರ್.

M. Mendosa,
Proprietor.

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp: His Master's Voice,
Sir Phirozshah Mehta Road, FORT, BOMBAY

ಪ್ರಕಟಣೆ

ತಾ. 14-9-50ನೇ 'ನವಯುಗ'ದಲ್ಲಿ ಪ್ರಚಾರವಾದ ನೋಟೀಸಿನ ಸತ್ಯಾರ್ಥ.

ಮೇಲೆ ಹೇಳಿದ ನೋಟೀಸನ್ನು ಪ್ರಚುರಪಡಿಸಿದವನು ನನ್ನ 5ನೇ ಮಗನಾದ ಜೋಸೇಫ್ ಡಿ'ಸಿಲ್ವಾ ಎಂಬವನು. ಇವನಿಗೆ 1922ನೇ ಇಸವಿಯಿಂದ 1935ನೇ ಇಸವಿಯವರೆಗೆ ಬ್ರಹ್ಮಾವರದ ಸೀರಿಯನ್ ಇಗರ್ಜಿಯ ಕೊಸ್ಮೊಪೊಲಿಟನ್ ಹೈಯರ್ ಎಲಿಮೆಂಟರೀ ಶಾಲೆಯಲ್ಲಿ ವಿದ್ಯೆ ಕಲಿಸಿದೆನು. ಆ ಶಾಲೆಯ ಅಭ್ಯಾಸ ಮುಗಿಸಿದ ನಂತರ ಫಾದರ್ ಜೋಜೆಫರ ಸಂಗಡ ವಿದ್ಯೆಯನ್ನು ಮುಂದರಿಸಲಿಕ್ಕಾಗಿ ಹೊನ್ನಾವರಕ್ಕೆ ಕಳುಹಿಸಿಕೊಟ್ಟೆನು. ಅವರು ಇವನನ್ನು ಕರೆದುಕೊಂಡು ಮುಂಬಾಯಿಗೆ ಹೋದರು. ಅಲ್ಲಿಂದ ಉದ್ಯಾವರದ ಸೈಮನ್ ಲೂಯಿಸರ ಸಂಗಡ ಗುರುತನ ಕಲಿಯಲಿಕ್ಕೆಂದು ತಿರುವಾಂಕೂರಿನ ಸೆಮಿನೆರಿಗೆ ಕಳುಹಿಸಿಕೊಟ್ಟರು. ಇವನು ತಿರುವಾಂಕೂರಿನ ಸೆಮಿನೆರಿಯಲ್ಲಿದ್ದ ನಾಲ್ಕು ವರ್ಷಗಳಲ್ಲಿ ಇವನ ಸರ್ವ ಖರ್ಚುವೆಚ್ಚಗಳನ್ನು ನಾನು ನೋಡುತ್ತಾ ಬಂದರೂ ಗುರುತನಕ್ಕೆ ಇವನು ಅಯೋಗ್ಯನೆಂದು ತಿರಸ್ಕರಿಸಲ್ಪಟ್ಟದ್ದರಿಂದ ಇವನು ಬರೆದು ತಿಳಿಸಿದಂತೆ ಬರುವ ಖರ್ಚಿಗೆ ನಾನು ಹಣ ಕಳುಹಿಸಿಕೊಟ್ಟು ಮನೆಗೆ ತರಿಸಿಕೊಳ್ಳಬೇಕಾಯ್ತು. ತಿರುವಾಂಕೂರಿನಿಂದ ವಾಪಾಸು ಬಂದವನು ಪುನಃ ಮುಂಬಾಯಿಗೆ ಹೋಗಿ ಎರಡು ವರ್ಷಗಳವರೆಗೆ ಏನೂ ಕೆಲಸವಿಲ್ಲದಿದ್ದು ಬೇರೆ ಏನೂ ಉಪಾಯಕಾಣದೆ ಮಿಲಿಟರಿಗೆ ಸೇರಿಕೊಂಡನು. ಬೊಂಬಾಯಿಯಲ್ಲಿರುವಾಗಲೂ ತುಂಬಾ ಹಣ ಖರ್ಚಿಗೆ ಕಳುಹಿಸಿದ್ದೆನು. ಯುದ್ಧ ಮುಗಿದ ನಂತರ ಮಿಲಿಟರಿಯಿಂದ ವಾಪಾಸು ಬಂದು ಸಿ. ಪಿ. ಸಿ. ಮೋಟರ್ ಕಂಪೆನಿಯಲ್ಲಿ ಟಿಕೆಟು ಕೊಡುವ ಕೆಲಸಕ್ಕೆ ನಿಂತನು. ಆ ಬಗ್ಗೆ ಜಾಮೀನಾಗಿ ಇನ್ನೂರು ರೂಪಾಯಿಗಳನ್ನು ನಾನೇ ತೆರಬೇಕಾಯ್ತು. ಆ ಕೆಲಸವನ್ನು ಕೂಡಾ ಬಿಟ್ಟು ಮನೆಗೇನೇ ಬಂದು ಸೇರಿಕೊಂಡನು. ಅನಂತರ ಯಾವ ವಿಚಾರವನ್ನೂ ನನಗೆ ತಿಳಿಸದೆ ತನ್ನ ಸ್ವಂತ ಖುಷಿಯಿಂದ ಗುಟ್ಟಿನಲ್ಲಿ ಪತ್ರ ವ್ಯವಹಾರ ನಡಿಸಿ ಮಡಪಾಡಿ ಜಾಕಿ ಮನ್ವೆಲ್ ಲೂಯಿಸರ ಮಗ ಪೌಲು ನಕಿದಾದ್ ಲೋರೆನ್ ಲೂಯಿಸರ ಮಗಳಾದ ಅಸ್ಲೀಯೆಂಬ ಹೆಸರಿನ ತನಗಿಂತಲೂ ದೊಡ್ಡವಳಾದ ಉಪಾಧ್ಯಾಯಿನಿಯೊಬ್ಬಳನ್ನು ಮದುವೆಯಾಗುತ್ತೇನೆಂದು ಹಟಹಿಡಿದ ಕಾರಣ ನನಗೆ ಮನಸ್ಸಿಲ್ಲದಿದ್ದರೂ ಏನೂ ಆಕ್ಷೇಪಿಸದೆ ನಮ್ಮ ಮತದ ರೀತಿ ನೀತಿಗನುಸಾರವಾಗಿ ನನ್ನ ಹಣದಿಂದ ಒಂದು ಸಾವಿರದ ಐನೂರು ರೂಪಾಯಿ ನಾನೇ ಖರ್ಚುಮಾಡಿ ಒಳ್ಳೇ ಸಂಭ್ರಮದಿಂದ ನಮ್ಮ ಮನೆಯಲ್ಲಿ ಮದುವೆಯ ಕಾರ್ಯವನ್ನು ಪೂರೈಸಿದೆನು. ಮದುವೆಯಾದ ನಂತರ ಸಹಾ ಇವನ ಹೆಂಡತಿಯು ಉಪಾಧ್ಯಾಯಿನಿ ವೃತ್ತಿಯಲ್ಲಿ ನೆರೆಗ್ರಾಮಗಳ ಬೋರ್ಡ್ ಶಾಲೆಗಳಿಗೆ ಹೋಗುತ್ತಿದ್ದು ಮನೆಗೇನೇ ಬರುತ್ತಿದ್ದಳು. ಇವಳ ಗಂಡನು ಬ್ರಹ್ಮಾವರದ ಪ್ಲ. ವೇ. ಸುಪರ್‌ವೈಸರರ ಆಫೀಸಿನಲ್ಲಿ ಎರಡು ತಿಂಗಳು ಬದಲೀ ಗುಮಾಸ್ತನಾಗಿ ಕೆಲಸಮಾಡಿ ಮನೆಗೇನೇ ಬರುತ್ತಿದ್ದನು. ಅಷ್ಟರೊಳಗೆ ಇವನ ಬದಲೀ ಕೆಲಸ ಮುಗಿದು ರಸ್ತೆಯ ಮೇಸ್ತ್ರಿ ಕೆಲಸಕ್ಕೆ ಸೇರಿಕೊಂಡನು. ಇವನ ಹೆಂಡತಿಗೆ ಬಸುರು ಬಂದಲ್ಲಿ ನಮ್ಮ ಜಾತಿಕ್ರಮಗಳಿಗನುಸಾರವಾಗಿ ಬಯಕೆ ಇತ್ಯಾದಿ ಹಾಕುವ ಬಗ್ಗೆ ತಗಲುವ ಖರ್ಚು ಮುನ್ನೂರೈವತ್ತು ರೂಪಾಯಿಗಳನ್ನು ನಾನೇ ಖರ್ಚುಮಾಡಿ ಸಂಭ್ರಮದಿಂದ ಪೂರೈಸಿದೆನು. ನನ್ನ ಆರು ಮಂದಿ ಗಂಡುಮಕ್ಕಳ ಪೈಕಿ ಇವನೊಬ್ಬನು ಮಾತ್ರ ಸಂಬಂಧಿಸಿದ ಮನೆಯಲ್ಲಿ ಯಾವುದೊಂದು ಕೆಲಸ ವಗೈರೆ ಮಾಡಿದವನೇ ಅಲ್ಲ. ನನ್ನ ಇತರ ಮಕ್ಕಳೂ ಮೊಮ್ಮಕ್ಕಳೂ ಕೂಲಿಯವರೊಂದಿಗೆ ಕೆಲಸಮಾಡಿಕೊಂಡಿರುವಾಗ್ಯೂ ಇವನು ಅವರ ಸಂಗಡ ಕೆಲಸಮಾಡಿದ್ದಾಗಲೀ ಕೂಲಿಯವರಿಗೆ ಹೇಳಿ ಮಾಡಿಸಿದ್ದಾಗಲೀ ಇಲ್ಲ. ಮಾತ್ರವಲ್ಲದೆ ಹೊರಗಿನ ಇವನ ಮತ್ತು ಇವನ ಹೆಂಡತಿಯ ಸಂಪಾದನೆಯಿಂದ ಒಂದು ಪೈಯನ್ನಾದರೂ ಮನೆವಾರ್ತೆಗೆ ಇವನು ಕೊಟ್ಟವನಲ್ಲ. ನನ್ನ ಮಕ್ಕಳ ಪೈಕಿ ಇವನಿಗಾಗಿ ನಾನು ಖರ್ಚು ಮಾಡಿದಷ್ಟು ಹಣ ಇತರ ಯಾವ ಮಗನಿಗೂ ಖರ್ಚು ಮಾಡಿದ್ದಿಲ್ಲ. ಈ ರೀತಿ ಇವನ ಬಾಲ್ಯ ಮತ್ತು ಯವ್ವನ ಪ್ರಾಯವೆಲ್ಲಾ ವಿದ್ಯಾಭ್ಯಾಸದಲ್ಲಿಯೂ, ಮನೆವಾರ್ತೆಯ ಹುಟ್ಟುವಳಿಯ ವೆಚ್ಚದಲ್ಲಿಯೂ, ದೇಶ ಸಂಚಾರದಲ್ಲಿಯೂ ಕಳೆದುಹೋಗಿರಲಾಗಿ ಸದ್ರಿಯವನು ನೋಟೀಸಿನಲ್ಲಿ **"ಮಕ್ಕಳಾದ ನಾವು ನಮ್ಮ ಮಿಕ್ಕ ಸಹೋದರರು ಕೂಡಾ ಒಟ್ಟು ಕಾಯಕಷ್ಟಗಳಿಂದ ವೃದ್ಧಿಸಿ, ಅವುಗಳಿಂದ ಉಳಿಕೆಯಾದ ಉತ್ಪತ್ತಿ"** ಯೆಂಬ ಸುಳ್ಳು ಪ್ರಚಾರ ಮಾಡಲಿಕ್ಕೆ ಇವನಿಗೆ ಧೈರ್ಯ ಹುಟ್ಟಿದ್ದು ದೊಡ್ಡ ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ. ಇವನಿಗೂ ಇವನ ಹೆಂಡತಿಗೂ ಮನೆಯಲ್ಲಿ ಕೆಲಸ ಮಾಡಲಿಕ್ಕೆ ಮನಸ್ಸಿಲ್ಲದ್ದರಿಂದ ಯೊಮ್ಮುಂಚೆ ಆಸ್ತಿಯಲ್ಲಿ ಪಾಲು ಕೊಡಬೇಕೆಂದು ಹಟಹಿಡಿದು ಮನೆಯಿಂದ ಹೊರಗೆ ಹೋಗಿದ್ದ ಮೇಲಿನ ನೋಟೀಸಿಗೆ ದಸ್ಕತು ಕೊಟ್ಟಿರುವ ಮಾರ್ಸೆಲ್ ಡಿ'ಸಿಲ್ವ ಮತ್ತು ಪೇದ್ರು ಡಿ' ಸಿಲ್ವ ಎಂಬ ತನ್ನ ಇಬ್ಬರು ಅಣ್ಣಂದಿರ ಮತ್ತು ಇತರ ನನ್ನ ದ್ವೇಷಿಕರ ದುರ್ಪ್ರೇರಣೆಯಿಂದ ತನಗೆ ಪಾಲು ಕೊಡಬೇಕೆಂದು ಹಟಹಿಡಿದು ಈ ನೋಟೀಸನ್ನು ಪ್ರಚುರಪಡಿಸಿರುತ್ತಾನೆ. ನಾನು ಇಂದಿಗೆ ಎಪ್ಪತ್ತು ವರುಷ ಪ್ರಾಯದಾಟಿದ ವಯೋವೃದ್ಧನಲ್ಲ. ದೇವರ ದಯೆಯಿಂದ ನನ್ನ ಸ್ವಬುದ್ಧಿಯನ್ನು ಉಪಯೋಗಿಸಿಕೊಳ್ಳುವಷ್ಟು ಶಕ್ತನಾಗಿರುತ್ತೇನೆ. ಆದರೆ ಮೇಲಿನ ಅಸತ್ಯವಾದ ನೋಟೀಸನ್ನು ಪ್ರಚುರಪಡಿಸಿದವನು ಕೇವಲ ತಿಳಿಗೇಡಿಯಾಗಿರುತ್ತಾನೆ. ಇಲ್ಲವಾದರೆ ನನ್ನ ತಂದೆಯ ನಿಜವಾದ ಹೆಸರು ಸಾಕ್ಷಿ ಯೂಸೆ ಅಂತೋನ್ ಸಿಲ್ವ ಎಂಬದಾಗಿರುತ್ತಾ ನನ್ನ ಮಗನ ಹೆಸರನ್ನು ನನ್ನ ತಂದೆಗೆ ಕೊಡಲಿಕ್ಕೆ ಕಾರಣವಿರುತ್ತಿದ್ದಿಲ್ಲ. ನಿಜ ಸಂಗತಿಯು ಹೀಗಿರುತ್ತಾ ಇವನು ಪ್ರಚುರಪಡಿಸಿದ ನೋಟೀಸಿನ ಉದ್ದೇಶ್ಯವನ್ನು ವಾಚಕರೇ ತಿಳಿದುಕೊಳ್ಳಬಹುದಲ್ಲದೆ, ತನ್ನ ಸ್ವಂತ ತಂದೆಯ ಮೇಲೆ ಇವನು ಬಹಿರಂಗವಾಗಿ ಈ ಅಪಪ್ರಚಾರ ಮಾಡಿದ್ದರಿಂದ ಇವನ ಉಗ್ರ ಸ್ವಭಾವವೂ ದುರ್ವರ್ತಿಯುವ ಸ್ವಭಾವವೂ ಪ್ರತ್ಯಕ್ಷ-ತೋರಿಬರುತ್ತವೆ. ಮೇಲೆ ಹೇಳಿದ ನೋಟೀಸಿಗೆ ದಸ್ಕತು ಕೊಟ್ಟಿರುವ ಮಾರ್ಸೆಲ್ ಡಿ' ಸಿಲ್ವ, ಪೇದ್ರು ಡಿ' ಸಿಲ್ವ, ಮತ್ತು ಈ ಜೋಸೆಫ್ ಡಿ' ಸಿಲ್ವ, ಯೆಂಬ ಮೂವರೂ ಒಂದೇ ಕುಟುಂಬದ ಹೆಣ್ಣುಗಳನ್ನು ಮದುವೆ ಮಾಡಿಕೊಂಡವರಾಗಿದ್ದು ತಮ್ಮ ನೆಂಟರ ಮತ್ತು ಇತರ ದ್ವೇಷಿಕರ ಪ್ರೇರಣೆಯಿಂದ ನನ್ನ ಮೇಲೆ ಸಾಧನೆ ನಡಿಸಿ ನನ್ನ ಮನೆಯನ್ನು ಹಾಳುಮಾಡಲಿಕ್ಕೆ ಹೊಂಚಿರುತ್ತಾರೆಂಬದು ಪ್ರತ್ಯಕ್ಷವಾಗಿ ತಿಳಿದುಬರುತ್ತದೆ, ವಿದ್ಯೆ ಕಲ್ತವರು ತಮ್ಮ ಮನೆಗಳನ್ನು ಉದ್ಧರಿಸುವರುಯೆಂಬ ನಿರೀಕ್ಷೆಯು ಆವರ ಹೆತ್ತವರಲ್ಲಿರುವದು ಸಹಜವಾದರೂ ನನ್ನ ವಿಷಯದಲ್ಲಿ ಮಾತ್ರ ಯೀ ಮಾತು ಪ್ರತಿಕೂಲವಾದ್ದರಿಂದ ಯೀ ಜೋಸೇಫ್ ಡಿ' ಸಿಲ್ವರಿಗೆ ವಿದ್ಯೆ ಕಲಿಸಿದ್ದರಿಂದ ನನ್ನ ಮನೆಯ ನಾಶನಕ್ಕೆ ನಾನೇ ಕಾರಣನಾದೆನಲ್ಲಾ ಯೆಂಬದಾಗಿ ಪಶ್ಚಾತ್ತಾಪ ಪಡಬೇಕಾಗಿರುತ್ತದೆ. ಸದ್ರಿ ನನ್ನ ಮಗನು ಮಿಲಿಟರಿಯಲ್ಲಿದ್ದಾಗ ಅವನು ನನಗೇನೂ ಹಣ ಕಳಿಸಿಕೊಟ್ಟದ್ದಿಲ್ಲ. ಗವರ್ನಮೆಂಟಿನವರೇ ಕಾನೂನು ಪ್ರಕಾರ ತಂದೆತಾಯಿಗಳಿಗೆಂತ ಅಲ್ಪಸ್ವಲ್ಪ ಹಣ ಕಳುಹಿಸಿಕೊಟ್ಟದ್ದು ನಮ್ಮ ಖರ್ಚಿಗೆ ಉಪಯೋಗಿಸದೆ ಈ ಜೋಸೇಫ್ ಸಿಲ್ವನ ಇನ್ಸೂರ್ ಫಂಡಿಗೂ ಕಟ್ಟಿದ್ದೇನೆ. ಸದ್ರಿ ನೋಟೀಸಿನಲ್ಲಿ ಪ್ರಸ್ತಾಪಿಸಿದಂತೆ ನನ್ನ ಆಸ್ತಿಗಳು ಜೊಯಿಂಟ್ ಹಕ್ಕಿನದ್ದಲ್ಲ. ಅವೆಲ್ಲಾ ನನ್ನ ಸ್ವಂತ ವ ಸಂಪೂರ್ಣ ಹಕ್ಕಿನವುಗಳಾಗಿದ್ದು ನನ್ನ ಇಷ್ಟದಂತೆ ಅನುಭವಿಸಲೂ ಪರಾಧೀನ ಮಾಡಲೂ ನಾನೇ ಪೂರ್ಣ ಸ್ವತಂತ್ರಿಕನಾಗಿರುತ್ತೇನೆ. ಅವುಗಳಲ್ಲಿ ನನ್ನ ಮಕ್ಕಳಿಗೇನೂ ಹಕ್ಕಿರುವುದಿಲ್ಲ. ಪ್ರತ್ಯೇಕ ವಾಸ್ತವ್ಯಿಕೊಂಡು ಬರುತ್ತಿರುವ ಸದ್ರಿ ನನ್ನ ಮೂರು ಜನ ಮಕ್ಕಳು ನನ್ನ ಮನೆಗೂ ಆಸ್ತಿಗೂ ಅಕ್ರಮ ಪ್ರವೇಶ ಮಾಡುವರೆಯೂ ದೊಂಬಿ ನಡಿಸುವರೆಯೂ ಉದ್ಯುಕ್ತರಾದ್ದರಿಂದ ನಾನು ಆಬಗ್ಗೆ ಉಡುಪಿ ಸಬ್ ಮೇಜಿಸ್ಟ್ರೇಟ್ರ ಕೋರ್ಟಿನಲ್ಲಿ ಒಂದು ಅರ್ಜಿ ದಾಖಲ್ಲು ಮಾಡಿರುವ ಕಾರಣದಿಂದ ಸದ್ರಿ ಅರ್ಜಿಯಲ್ಲಿ ಸುಳ್ಳು ಸಂಗ್ತಿಗಳನ್ನು ಕಾಣಿಸಿದ ಉದಾಹರಣೆ ಕೊಟ್ಟದ್ದಲ್ಲದೆ ಪತ್ರಿಕೆಯಲ್ಲಿ ಕೂಡಾ ಈತರದ ಸುಳ್ಳು ಪ್ರಚಾರ ಮಾಡಿದ್ದಾಗಿರುತ್ತದೆ.

ಮಾನುವೆಲ್ ಸಿಲ್ವನ ರುಜು

ರಸನಿಮಿಷ

ಈ ಸಲ ಗಾಂಧೀ ಜಯಂತಿಯನ್ನು ಗೊಬ್ಬರ ಸಪ್ತಾಹವಾಗಿ ಸರಕಾರವು ಮಾರ್ಪಡಿಸಿದೆ.

—ನ್ಯಾಯ, ಕಾಲೋಚಿತ, ಧರ್ಮಸಮ್ಮತ ಎನ್ನಬಹುದು. ವನಮಹೋತ್ಸವದಲ್ಲಿ ನೆಟ್ಟ ಮರಗಳಿಗೆ ಗೊಬ್ಬರ ಬೇಡವೇ? ಸಾಧು, ಸಾಧು. ನಡುವೆ ನೀರೆರೆಯುವ ಸಪ್ತಾಹವೊಂದು ಸುಬಾನ್ನಿರಿ, ಕಾಶ್ಮೀರ ನೆರೆ ಹಾವಳಿ ಬಂದು ಬಿಟ್ಟು ಮರೆತು ಹೋದಂತಿದೆ. ನಾನು ಹುಟ್ಟಿದ ದಿವಸ ಈ ಸಪ್ತಾಹವನ್ನು ಆರಂಭಿಸಬೇಕು ಎಂಬ ಕೆಲವು ಅಮೋಘ ಸೂಚನೆಗಳನ್ನು ನಾನು ದುಃಖದಿಂದ ನಿವಾರಿಸಿದ್ದೇನೆ.

೦೦೦

ಮುಂಬಯಿಯ 'ಟೈಮ್ಸ್' ಪತ್ರಿಕೆಯಲ್ಲಿ ಶ್ರೀ ಎಂ. ಆರ್. ಮಸಾನಿಯವರು "ಕೊರಿಯಾ ಕಲಿಸುವ ಏಳು ಪಾಠಗಳು" ಎಂಬ ಒಂದು ಲೇಖ ಬರೆದಿದ್ದಾರೆ.

—ಮಸಾನಿಯವರು ಕಲಿಯುವ ಪಾಠ **ನಮ್ಮ ಹಿಂದುಸ್ತಾನದಲ್ಲೇ ಹೇರಳ** ಇರುವಾಗ ಇತರರ ಚಿಂತೆ ನೈಗೆ ಹಚ್ಚಿಕೊಂಡುದರ ಬಗ್ಗೆ ಕೆಲವರಿಗೆ ಸಂದೇಹ ಉಂಟು.

೦೦೦

ಅಮೇರಿಕನ್ನರು ಸಿವುಲ್ ನಗರ ನುಗ್ಗುವ ರಭಸದಲ್ಲಿ 'ಸೇಗು' ಎಲ್ಲಿ ಬಿಟ್ಟರೆಂಬುದನ್ನು ಎಂಥ ದೃಷ್ಟಿಚಕ್ರದ ಮುಖಾಂತರವೂ ನೋಡಲಸಾಧ್ಯ.

—ಕೈ ಬಿಟ್ಟಿರಬೇಕು

೦೦೦

"ಸಂಯುಕ್ತ ರಾಷ್ಟ್ರ ಅಮೇರಿಕದ ಧೋರಣೆ ಕಮ್ಯೂನಿಸ್ಟ್ ವಿರೋಧ ಎಂಬ ನಿಷೇಧಾತ್ಮಕ ಅವಸ್ಥೆಯಲ್ಲೇ ಉಳಿಯಬಾರದು. ರಚನಾತ್ಮಕವಾದ ವಿದೇಶಾಂಗ ನೀತಿ ಬೇಕು" (ಲೂಯಿ ಫಿಶರ್)

—ಈ ಅತಿ ಸೂಕ್ಷ್ಮವಾದ ಶಾಸ್ತ್ರೀಯ ಭೇದ ಎಲ್ಲರಿಗೂ ಅರಿವಾಗುವುದು ಕಷ್ಟ. ಮುಂದಿನ ಯುದ್ಧದಲ್ಲಿ ವಿರೋಧಿಸಬಹುದಾದ ಉತ್ತರ ಕೊರಿಯದ ಔದ್ಯೋಗಿಕ ಕೇಂದ್ರಗಳ ಮೇಲೆ ಪ್ರಳಯದ ಬಾಂಬು ಕರೆಯುವುದು ವಿದೇಶಾಂಗ ನೀತಿಯ "ರಚನಾತ್ಮಕ" ಅಂಗ ಅಲ್ಲವೇನು?

೦೦೦

ಅಸ್ಸಾಮಿನ ದುರಂತಕ್ಕೆ ಶೇಖ್ ಅಬ್ದುಲ್ಲರು ಸಹತಾಪ ಸೂಚಿಸಿದುದೇ ತಡ.

— ಆ ದುರಂತ ಅವರನ್ನು ಅರಸಿಕೊಂಡು ಬಂತಂತೆ. ಈ ಕಾಲದಲ್ಲಿ ಉಪಕಾರವೂ ಕಷ್ಟವೇ!

೦೦೦

ನಿಯಂತ್ರಣವನ್ನು ಸುಸೂತ್ರವಾಗಿ ಸಾಗಿಸಲು ಸಾರ್ವಜನಿಕರು ಸಹಕಾರ ನೀಡಬೇಕು

—ಅಗತ್ಯವಾಗಿ. ನಿಯಂತ್ರಣ ಖಾತೆಯವರಿಗೆ ಹೆಚ್ಚು ಭಾರವಾಗದ ಹಾಗೆ ನಿಯಂತ್ರಿತ ಸಾಮಾನುಗಳನ್ನು ಕಳ್ಳಪೇಟೆಯಿಂದಲೇ ಬೇಕಾದಾಗ —ಅನಿವಾರ್ಯವಾಗಿಯೇ ಅದರೂ—ಕೊಂಡರು. ಇಷ್ಟು ಸಹಕಾರ ಸಾಲದೆ?

೦೦೦

ನೆರೆ, ಭೂಕಂಪ, ನಿರಾಶ್ರಯ-ಈ ಮುಂತಾದ ಸಂದರ್ಭಗಳಲ್ಲಿ ಹಿಂದೀ ಫೌಜಿನವರು ಬಹಳವಾದ ಸಹಾಯ ನೀಡಿದ್ದಾರೆ.

—ನಿಜವಾಗಿಯೂ ಒಂದು ದೇಶದ ಸೈನ್ಯಕ್ಕೆ ಇಂಥ ಕಲ್ಯಾಣಮಯ ಕಾರ್ಯಗಳೇ ಒದಗಿದರೆ ಎಷ್ಟು ಚೆನ್ನಾಗುತ್ತಿತ್ತು?

೦೦೦

ಆಗಿನ ಕಾಲಕ್ಕೆ ಇದ್ದ ಪರಿಸ್ಥಿತಿಯ ಪ್ರಕಾರ ಸ್ವೀಡನ್ನಿನಿಂದ ಪೂರ್ವ ಬಂಧಿತ (ಪ್ರೀ-ಫೇಬ್) ಗೃಹಗಳನ್ನು ತರಿಸುದುದು ಸಮುಚಿತವಾಗಿದೆ" (ಕೃಷ್ಣಮಾಚಾರಿ ವರದಿ).

—ಈ ಸ್ವೀಡನ್ ಗೃಹಗಳು ಸೋರುವುದಕ್ಕೆ ಹಿಡಿದಾಗಲೇ ತಿಳಿಯಬೇಕಾಗಿತ್ತು. ಪ್ರಪಂಚದ ವ್ಯವಹಾರದಲ್ಲಿ ಯಾವುದೂ ತ್ರಿಕಾಲಾಬಾಧಿತ ಸತ್ಯ- ಇಲ್ಲವೆಂದು. ಕಾಲಕ್ಕೆ ತಕ್ಕ ಕೋಲ.

೦೦೦

ನ್ಯೂಯಾರ್ಕಿನ ನಗರಾಧೀಶ ಡ್ವಾಯು ಮಹಾಶಯ ಒಂದು ಸತ್ಕಾರ ಕೂಟದಲ್ಲಿ ವಿಶಿನಸ್ಕಿಯ ಇದಿರೇ ರಶಿಯವನ್ನು ಪ್ರತ್ಯಕ್ಷವಾಗಿ ಜರೆದರಂತೆ.

—ಅಮೇರಿಕನ್ನರಿಗೆ ಈಗ ತಾವು ನಿಂತ ನೆಲವೆಲ್ಲ ಯು. ಎನ್. ಓ. ಎಂಬ ಭ್ರಮೆ ಆರಂಭವಾಗಿರಬಹುದೆ?

೦೦೦

ಕಾಶ್ಮೀರದ ತೀರ್ಮಾನ ಅವರವರೇ ಮಾಡಲಿ (ಡಿಕ್ಸನ್ ವರದಿ)

—ಇಷ್ಟನ್ನು ಹೇಳಲು ಜಡ್ಜನ ಅವಶ್ಯವಾಗಿಲ್ಲ.

೦೦೦

ಟಾಂಡನ್ ಅವರ ಭಾಷಣದಲ್ಲಿ ಜಾತೀಯತೆಯ ಅಂಶವನ್ನು ಅರಿಸಿ ತೆಗೆಯಲು ಕೆಲವು ವಿಜ್ಞಾನಿಗಳು ನೇಮಿಸಲ್ಪಟ್ಟಿದ್ದಾರಂತೆ.

—ಜಾತ್ಯಾತೀತ ರಾಷ್ಟ್ರವನ್ನು ಸಮರ್ಥಿಸುವಾಗ ಗೀರ್ವಾಣದಿಂದಲೇ ಶ್ಲೋಕಗಳನ್ನು ಆಯ್ದುದು ಒಂದು, ಹಿಂದಿಗೆ ಹೆಚ್ಚು ನಿಗಾ ಕೊಡಬೇಕು, ಸಾಧ್ಯ ಇದ್ದರೆ ಇಂಗ್ಲಿಷನ್ನು ಅದರ ಅವಧಿಗೆ ಮುನ್ನವೇ ತಳ್ಳಬೇಕು ಎಂಬುದೆರಡು ಈ ಹೊತ್ತಿನ ವರೆಗೆ ಶೋಧಿತವಾಗಿವೆ.

೦೦೦

ಉರುಟಿಯ ಕರ್ಟಿನ ಚಳವಳಿ ಅಭೂತಪೂರ್ವವಾಗಿ ನಡೆಯುತ್ತಿದೆ (ಪತ್ರಿಕೆಗಳಲ್ಲಿ ವರದಿ).

—ದರ್ಜಿಗಳೆಲ್ಲ ಸಭೆ ಸೇರಿ ಒಂದು ಪ್ರಶಂಸಾತ್ಮಕ ಠರಾವನ್ನು ಮಂಡಿಸಿದರೆಂಬ ಮತ್ತು ರೆಡಿಮೇಡ್ ಬಟ್ಟೆಗಳು ಲಾರಿ ತುಂಬ ಬರುತ್ತಿವೆ ಎಂಬ ಎರಡೂ ಸುದ್ದಿ ನಿರಾಧಾರವಾದುವಂತೆ.

೦೦೦

(ಇಬ್ಬರು ಅಮೇರಿಕನ್ ಸೈನಿಕರೊಳಗೆ ನಡೆದ ಸಂವಾದ:)

೧ನೇಯವ—ರಾಬರ್ಟ್, ನಾವು ಕಾದಾಡುವುದರ ಕಾರಣ ಏನೆಂಬುದೆಂದು ನಿನಗೆ ಒಮ್ಮೆಯಾದರೂ ಹೊಳೆದಿದೆಯೆ?

೨ನೇಯವ—ಅರ್ಥಪೂರ್ಣ ಉತ್ತರ ಬೇಕೆ?

೧ನೇ—ಹೌದು

೨ನೇ—ನನಗೆ ಗೊತ್ತಿಲ್ಲ. ನಿಶ್ಚಿತವಾಗಿ ಹೇಳಲಾರೆ. ಆದರೆ ಏನಾದರೂ ಕಾರಣ, ಉದ್ದೇಶ ಇರಲೇ ಬೇಕೆಂತ ಎನಿಸುತ್ತದೆ, ಒಂದೋ ಏಶಿಯವನ್ನು ನಾವು ನುಂಗಬೇಕು; ಇಲ್ಲವೇ ಜಪಾನರು ನುಂಗಿಬಿಡುತ್ತಾರೆ.

೧ನೇ—ಇಷ್ಟೆಯೋ ನಿನಗೆ ಗೋಚರ?

೨ನೇ— ಇತಿಹಾಸವನ್ನು ಮುಂದಾಗಿ ಓದುವ ಅಭ್ಯಾಸ ನನಗಿಲ್ಲ. ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬೇಕಾದರೆ ಇನ್ನೊಂದು ನೂರು ವರ್ಷ ತಡೆಯಬೇಕಾದೀತು.

೧ನೇ—ಈಗ ನೀನು ಹೇಳಿದ್ದಕ್ಕಿಂತ ಕೊಂಚ ಉತ್ತಮ ಜವಾಬು ನಿನ್ನ ಬಾಯಿಂದ ಬರಲಾರದೆ?

೨ನೇ—ಓಹೋ, ಕೇಳು. ಈ ಯುದ್ಧ ಪ್ರಸಂಗದಲ್ಲಿ ಸೂಕ್ಷ್ಮಾಭಿಸರಣ (Osmosis) ನಡೆಯುವುದುಂಟು. ವಿಜಯಿಗಳು ಸೋತವರ ರೂಪಧಾರಣೆ ಮಾಡುವರು, ನಾವು ಗೆದ್ದ ಮೇಲೆ ಬಹುತೇಕ ಫಾಸಿಸ್ಟರಾಗಿ ಮಾರ್ಪಡಬಹುದು, ಆಗ ಬರುವ ಉತ್ತರವೇ ನಮ್ಮ ಸಮಸ್ಯೆ ಆದೀತು.

('ನಗ್ನ ಮತ್ತು ಮೃತ' ಎಂಬ ಪುಸ್ತಕದಲ್ಲಿ ನಾರ್ಮನ್ ಮೇಲರ್)

—ಕಪಿ

ತಮ್ಮ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್
ಸ್ಥಾಪಿತ 1906
ಭಾರತದೊಳಗೆ **40**ಕ್ಕಿಂತಲೂ ಹೆಚ್ಚು ಶಾಖೆಗಳು
ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು
ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ಜನಮತ

ರಾಜಕೀಯ ಸಂತ್ರಸ್ತರ ಭೂದಾನದ ವಿಧಾನ

ಮದ್ರಾಸು ಸರಕಾರದವರು ಸ್ವರಾಜ್ಯಕ್ಕಾಗಿ ಸೆರೆಮನೆಗೆ ಹೋಗಿ ನಷ್ಟ ಕಷ್ಟಗಳನ್ನು ಅನುಭವಿಸಿದ ಸತ್ಯಾಗ್ರಹಿಗಳಿಗೆ 5 ಎಕ್ರೆ ನಂಜ ಭೂಮಿ ಅಥವಾ 10 ಎಕ್ರೆ ಪುಂಜ ಸ್ಥಳ, ಇನ್ನು ಸಲಹ ಸಮಿಯವರು, ನಂಜಕ್ಕೆ ಸರಿಯಾಗುವಷ್ಟು ದಾಮಾಶಾಯಿಯಲ್ಲಿ ಪುಂಜ ಸ್ಥಳವನ್ನು ಭೂದಾನವಾಗಿ ಕೊಡುತ್ತಾರೆ, ಎಂತ ಕಳೆದ 1948ರಲ್ಲಿ ಪ್ರಕಟಿಸಿದರು.

ಭೂದಾನ ಎಂಬ ಶಬ್ದ ಕೇಳಿದ ಕೂಡಲೇ ಮೂಲೆಪಾಲಾಗಿ ಹೋಗಿದ್ದ ಸತ್ಯಾಗ್ರಹಿಗಳು ಬೊಂಬಾಯಿ, ಮದ್ರಾಸು, ಬೆಂಗಳೂರು-ಮೈಸೂರು ಕೊಡಗು ಅತ್ತಕಡೆ ಹೋಗಿ ದಿನ ಪರಣೆ ಮಾಡುತ್ತಿದ್ದವರು ತಮ್ಮ ಉದರ ಪೋಷಣೆಯ ನೌಕರಿಗೆ ತಿಲಾಂಜಲಿ ಕೊಟ್ಟು ತಮ್ಮ ಮಕ್ಕಳು ಮರಿಗಳೊಡನೆ ಅಲ್ಪ ಸಂಪಾದನೆಯ ಉತ್ಪತ್ತಿಯನ್ನು ಕಟ್ಟಿಕೊಂಡು ತಮ್ಮ ಊರಿಗೆ ಬಂದು ಭೂದಾನ ಸ್ಥಳದಲ್ಲಿ ಮನೆಕಟ್ಟಿ-ಬಾವಿತೋಡಿ; ಸಸಿನೆಟ್ಟು, ತೋಟಮಾಡಿ, ಗದ್ದೆ ಅಗೆದು ಬೆಳೆಮಾಡಿ, ತೆಂಗು ಬಾಳೆ, ಅಡಕೆ, ಮಾವು ಹಲಸು ಮರನೆಟ್ಟು ಫಲ ಪಡೆಯಬೇಕೆಂಬ ಬಯಲಾಸೆಯಲ್ಲಿ ಸರಕಾರಕ್ಕೆ ಅರ್ಜಿಮಾಡಿ 2 ವರ್ಷಕಳೆದರೂ ಈವರೆಗೂ ಭೂದಾನವೆಂಬ ಶಬ್ದವಲ್ಲದೆ, ಭೂಮಿ ಸ್ವಾಧೀನವಾದದ್ದು ತೋರುವುದಿಲ್ಲ.

ಇದರಿಂದ ಬಡಸತ್ಯಾಗ್ರಹಿಗಳಿಗಾದ ನಷ್ಟ, ಕಷ್ಟ, ಸಂಕಷ್ಟಗಳನ್ನು ಹೇಳಿ ತೀರದು.

ಮನೆ ಕಟ್ಟಿ ಕೃಷಿ ಮಾಡಬೇಕೆಂತ ಸಂಪಾದನೆ ಮಾಡಿದ ಹಣವೂ ರೆವಿನ್ಯು ಇಲಾಖೆಯ ಕೆಲವು ಆಫೀಸರರ ಪರಿಚಯಕ್ಕೂ ಸ್ನೇಹಿತರ ಖರ್ಚಿಗೂ ಮುಗಿಯಿತು. ಅವರ ಬೆನ್ನಹಿಂದೆ ಓಡಾಡುವುದು, ಮಾತ್ರವಲ್ಲ ಅವರಿಗೆ ಬೇಕಾದ ಹಾಗೆ ನಡೆಯುವುದು, ಬಹಳ ಕಷ್ಟ.

ಬಡ ಸತ್ಯಾಗ್ರಹಿಗಳಿಗೆ ಭೂದಾನ ಸಿಕ್ಕುವದೆಂದರೆ, ಶ್ರೀಮಂತ ಜಮೀನ್ದಾರರಿಗೆ, ಸಮಾಧಾನವಿಲ್ಲದೆ ಬೇಕಾದಷ್ಟು ಅಡ್ಡಿ, ಆತಂಕಗಳನ್ನು ಮಾಡುತ್ತಾರೆ. ದೊಡ್ಡ ಶ್ರೀಮಂತ ಭೂಮಾಲಿಕರ ಮಾತಿಗೆ ರೆವೆನ್ಯು ಆಫೀಸರರೂ ಒಳಗಾಗುವುದು ಆಶ್ಚರ್ಯವಲ್ಲ, ಭೂದಾನ ಕೇಳಿದ ಸ್ಥಳಗಳೆಲ್ಲಾ ಸಾರ್ವಜನಿಕ-ಹರಿಜನರಿಗೆ ಬೇಕಾದೀತು. ಹೊಳೆ ಬದಿಯಾ ನಡು ಸ್ಥಳ ಎಲ್ಲರಿಗೂ ಬೇಕು. ಅದ್ಭುಸೀರಾವರಿ, ಇದು ಪರಂಬೋಕು, ಈ ಸ್ಥಳ ತಮಗೆ ಕ್ರಯ ದರ್ಖಾಸ್ತಿಗೆ ಕೊಡಬೇಕು ಕೆಲವು ಕುಮ್ಕಿ ಸರಹದ್ದು, ಗೋಚರಾವು, ಇದು ನನ್ನ ಅನುಭವದ ಹಕ್ಕು ಎಂತ ಸಿವಿಲ್ ಕ್ರಿಮಿನಲ್ ರೆವೆನ್ಯು ವ್ಯವಹರಣೆ ಮಾಡಿ ಇವರಿಗೆ ಸಿಕ್ಕಬಾರದೆಂತ ಸಾವಿರಾರು ರೂಪಾಯಿ ಖರ್ಚುಮಾಡಿದ ಭೂಮಾಲಿಕರು ಇದ್ದಾರೆ. ರೆವಿನ್ಯು ಬೋರ್ಡಿಗೆ ಹೋಗಿ ವ್ಯವಹರಿಸುವವರು ಇದ್ದಾರೆ, ಮಂತ್ರಿಗಳ ಕೂಡೆ ಮಾತಾಡುವವರು ಇದ್ದಾರೆ. ಅಧಿಕಾರಿಗಳೂ ಅದಕ್ಕೆ ಸರಿಯಾಗಿ ನಡೆಯುತ್ತಾರೆ! ಇಲ್ಲದಿದ್ದರೆ 2 ವರ್ಷಗಳಲ್ಲಿ ಭೂದಾನಕ್ಕೆ ಅರ್ಜಿಮಾಡಿದ ಸುಮಾರು 800 ಜನರಲ್ಲಿ 8 ಜನರಿಗಾದರೂ ಈ ವರೆಗೆ ಭೂದಾನದ ಭೂಮಿ ಸ್ವಾಧೀನವಾದದ್ದು ಇದೆಯೆ?

ಸಲಹ ಸಮಿತಿಯವರು, ರೆವಿನ್ಯೂ ಇಲಾಖೆಯವರು ಬರೆದ ರಿಪೋರ್ಟಿನನುಸಾರವಾಗಿ ತಲೆ ಆಡಿಸುವದಲ್ಲದೆ, ಆ ರಿಪೋರ್ಟಿನ ನಿಜಾಂಶ ಯಾವದೆಂದು ಸ್ಥಳ ತನಿಖೆಮಾಡಿ, ಇದು ಕೃಷಿಗೆ ಯೋಗ್ಯವೋ ಯಾರಿಗೆ ಅನುಕೂಲ ಎಂಬದನ್ನು ವಿಚಾರಿಸಿ ಕೃಷಿಗೆಯೋಗ್ಯವಾದ ಸ್ಥಳಗಳನ್ನು ಶ್ರೀಮಂತರ ನೆವನಕ್ಕಾಗಿ ಖಾಲಿ ಇಡುವುದು ಸರಿಯಲ್ಲವೆಂಬ ಸಂಗ್ತಿ ಹೇಳಿದ್ದು, ಇಬಹುದೋ?

ತಿಂಗಳಿಗೊಮ್ಮೆ ಜಿಲ್ಲಾ ಕಲೆಕ್ಟರರ ಆಫೀಸಿಗೆಹೋಗಿ ಕೆಲವು ಮುರಕಲ್ಲಿರುವ ಗುಡ್ಡೆ ಸ್ಥಳಗಳನ್ನು ಒಮ್ಮೆ ಸೆಂಕ್ಷನ್ ಮಾಡುವುದು, ಮತ್ತೊಂದು ತಿಂಗಳಲ್ಲಿ ಇನ್ನು ಕೆಲವು ಸೆಂಕ್ಷನ್ ಮಾಡಿ ಪತ್ರಿಕೆಗಳಲ್ಲಿ ಪ್ರಕಟಿಸುವುದು, ಕೆಲವು ತಿಂಗಳ ನಂತರ ಒಳ್ಳೇ ಸ್ಥಳವಾದರೆ ಅದರಿಂದ ಅರ್ಧಾಂಶ ಇನ್ನೊಬ್ಬನಿಗೆ ಕೊಡುವುದು, ಅರ್ಜಿದಾರನು ಕೇಳಿದ ಸ್ಥಳವನ್ನು ಕೊಡದೆ ಅವನಿಗೆ 18-20ಮೈಲು ದೂರದ ಸ್ಥಳವನ್ನು ಕೊಡುವುದು, ಇದೆಲ್ಲಾ ನೋಡುವಾಗ ನಮ್ಮ ಜಿಲ್ಲೆಯಲ್ಲಿ ಇದೊಂದು ಭೂದಾನದ ಪ್ರಹಸನವೆಂಬುದಕ್ಕೆ ನನ್ನ ಸ್ವಂತ ಅನುಭವವನ್ನು ವಾಚಕರ ಮುಂದೆ ನಿಜ್ಞಾಪಿಸಿಕೊಳ್ಳುವೆನು. ನ್ಯಾಯಾನ್ಯಾಯವನ್ನು ವಾಚಕರೇ ತೀರ್ಮಾನಿಸಲಿ.

ಕಳೆದ 1930ರಲ್ಲಿ ಹಂಪನಕಟ್ಟೆಯ ಪ್ರಥಮ ಲಾಠಿ ಚಾರ್ಜಿನಲ್ಲಿ 3 ತಿಂಗಳ ಕಠಿಣ ಸಜೆ ಮತ್ತು 200 ರೂಪಾಯಿ ಜುಲುಮಾನೆ, ಕೊಡದಿದ್ದರೆ 1½ ತಿಂಗಳು ಸಜೆ ಮತ್ತು 1931ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಪರಿಷತ್ತಿನ ಅಧ್ಯಕ್ಷನಾಗಿ ಬಂಟ್ವಾಳದ ಹೊಸತಾಗಿ ಕಟ್ಟಿದ ತಾಲೂಕುಕಚೇರಿಯಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿದ ತಪ್ಪಿಗೆ 3 ತಿಂಗಳು ಕಠಿಣ ಸಜೆ, ಮಾತ್ರವಲ್ಲ ಪೊಳಲಿ ದೇವಸ್ಥಾನದ ಪರಂಬೋಕಿನಲ್ಲಿ ಸುಮಾರು 2 ಸಾವಿರ ರೂಪಾಯಿ ಖರ್ಚು ಮಾಡಿ ಕಟ್ಟಿಸಿ ದೇವಸ್ಥಾನಕ್ಕೆ ಒಪ್ಪಿಸಿದ ಕಟ್ಟೋಣದಲ್ಲಿ ರಾಷ್ಟ್ರೀಯಧ್ವಜ ಇಟ್ಟದ್ದಕ್ಕೆ ಸರಕಾರ ಕಟ್ಟೋಣವನ್ನು ಸ್ವಾಧೀನಮಾಡಿಕೊಂಡು ದೇವಸ್ಥಾನದ ಆಡಳಿತೆಯವರು ಕಟ್ಟೋಣವನ್ನು ನಾಶಮಾಡಿದುತ್ತಾರೆ. ಇದನ್ನೆಲ್ಲಾ ನೋಡಿ ನನ್ನ ಹಿರಿಯರು, ತಲೆ ಸಮವಿಲ್ಲದ ಅರೆಹುಚ್ಚನೆಂದು ಹೇಳುತ್ತಿದ್ದರು. ಆದರೂ 1941ರಲ್ಲಿ ಡಿಲ್ಲಿ ಸತ್ಯಾಗ್ರಹಕ್ಕೆ ಹೊರಟೆನು—

ಭೂದಾನದ ಸಮಾಚಾರ ಕೇಳಿ ತಾರೀಖು 9-2-48ರಲ್ಲು ಕಲೆಕ್ಟರರಿಗೆ 77/48ನೇ ಅರ್ಜಿ ಬರಕೊಂಡೆನು. ಅದಕ್ಕೆ ತಾ.5-5 48 ಕ್ಕೆ ಸರ್ವೆ ನಂಬ್ರ ತಿಳಿಸಬೇಕೆಂತ ಮೆಮೋ ಬಂತು. ಕೂಡಲೇ ನಂಬ್ರ 111ನೇ ಕರಿಯಂಗಳ ಗ್ರಾಮದ ಸರ್ವೆ ನಂಬ್ರ 125 ಮತ್ತು 137ರ ಸ್ಥಳಗಳಲ್ಲಿ ಕೊಡಬೇಕೆಂತ ಬರಕೊಂಡೆನು. ನಂಬ್ರ 137ನೇ ಸ್ಥಳವು ಹರಿಜನರಿಗೆ ಕೊಟ್ಟು ಅವರು ಸರಕಾರಕ್ಕೆ ವಾಪಸು ಬಿಟ್ಟದ್ದೆಂತ ಹೇಳಿದ್ದಕ್ಕೆ ನಂಬ್ರ 40ನೇ ಚೆಳ್ಯಾರು ಗ್ರಾಮದ ಸರ್ವೆ ನಂಬ್ರ 14/1ರಲ್ಲಿ ಬಾಕಿ ಸ್ಥಳ ಕೊಡಬೇಕೆಂತ ತಾ. 20-9-49ರಲ್ಲು ಬರಕೊಂಡೆನು. ಅದಕ್ಕೆಲ್ಲಾ ಕಳೆದ ತಾ. 30-12-49ರಲ್ಲು ಒಪ್ಪಿ ನಂಬ್ರ 1887/49ನೇ ಹುಕುಂ ಪ್ರಕಾರ ನನಗೆ ನಂಬ್ರ 111ನೇ ಕರಿಯಂಗಳ ಗ್ರಾಮದ ಸರ್ವೆ ನಂಬ್ರ 125/1 ಸ್ಥಳ 6 ಎಕ್ರೆ 54 ಸೆಂಟ್ಸ್ ಸೆಂಕ್ಷನ್ ಮಾಡಿರುತ್ತದೆ. 10 ಎಕ್ರೆ ಭರ್ತಿಗೆ ಬೇರೆ ಸ್ಥಳ ಕೇಳಬೇಕೆಂತ ಹುಕುಂ ತಲ್ಪಿತು. ಅದಕ್ಕೆ ನಂಬ್ರ 111ನೇ ಕರಿಯಂಗಳ ಗ್ರಾಮದ ಸರ್ವೆ ನಂಬ್ರ 62ರಲ್ಲಿ ಖಾಲಿ ಇರುವ ಅಂಶವನ್ನು ಭರ್ತಿಗೆ ಕೊಡಬೇಕೆಂತ ಬರೆದೆನು. ಅದನ್ನು ಸ್ಪೆಷಲ್ ರೆವಿನ್ಯೂ ಇನ್ಸಪೆಕ್ಟರ್ ಮತ್ತು ರೆವಿನ್ಯೂ ಇನ್ಸಪೆಕ್ಟರ್ ಕೂಡಾ ತನಿಖೆ ಮಾಡಿ ಹೋಗಿದ್ದಾರೆ.

ಕಳೆದ ತಾ. 10-8-50ರಲ್ಲು R. Dis P. S. R. II/56ನೇ ಆರ್ಡರ್ ಪ್ರಕಾರ ನನಗೆ 8 ತಿಂಗಳ ಹಿಂದೆ ಸೆಂಕ್ಷನ್ ಮಾಡಿದ 6 ಎಕ್ರೆ 54 ಸೆಂಟ್ಸ್ ಸ್ಥಳದಿಂದ 3 ಎಕ್ರೆ 27 ಸೆಂಟ್ಸ್ ಸ್ಥಳವನ್ನು ತಲಪಾಡಿ ಶ್ರೀ ತಿಮ್ಮಪ್ಪ ಮಲ್ಲಿಯವರಿಗೆ ಕೊಟ್ಟಿದೆ. ಅದರ ಬದಲಿಗೆ 18 ಮೈಲು ದೂರವಿರುವ ನಂಬ್ರ 174ನೇ ಕೈರಂಗಳ ಗ್ರಾಮದಲ್ಲಿ ಯಾರ ಆತಂಕವೂ ಇಲ್ಲದ ಪಡವು ಸ್ಥಳ ಕೊಟ್ಟದೆಂತ ಹುಕುಂ ಬಂತು.

ಈ ಕುರಿತು ಜಿಲ್ಲಾ ಕಲೆಕ್ಟರರಿಗೂ ಕಾಂಗ್ರೆಸು ಸೆಕ್ರಟರಿಯವರಿಗೂ ವಿವರವಾಗಿ ಬರಕೊಂಡೆ. ಅದಕ್ಕೆ ಬಂಟ್ವಾಳ ಡಿಪ್ಟಿತಹಶಿಲ್ದಾರರು ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರ ಅಭಿಪ್ರಾಯದಂತೆ ಮಾಡಿದ್ದೆಂತ ಕಾಂಗ್ರೆಸು ಸೆಕ್ರಟರಿಯವರು ಹೇಳಿದರು.

ಮೊದಲು ಬ್ರಿಟಿಷರ ಕಾಲದಲ್ಲಿ ರೆವಿನ್ಯು ಇಲಾಖೆಯವರು ಸರ್ಕಾರಿ ಸ್ಥಳವನ್ನು ದರ್ಖಾಸ್ತಿಗೆ ಕೊಡುವಾಗ ಅಗ್ರಿವರ್ಗದಾರನು ಉತ್ತಮ ಹುಕ್ಕುದಾರನೆಂದು ಅವನನ್ನು ವಿಚಾರಿಸಿ ಅವನಿಗೆ ಬೇಡವಾದರೆ ಬೇರೆಯವರಿಗೆ ಕೊಡುತ್ತಿದ್ದರು. ಈಗ ಸ್ವರಾಜ್ಯ ಸರಕಾರದ ರೆವಿನ್ಯೂ ಇಲಾಖೆಯಲ್ಲಿ ರಾಜಕೀಯ ಸಂತ್ರಸ್ತನಿಗೆ ಅವನು ಹೇಳದೆ-ಕೇಳದೆ ನೋಡದೆ, ಪ್ರಯೋಜನವಿಲ್ಲದೆ ಇರುವ 18-20 ಮೈಲು ದೂರದಲ್ಲಿ ಕೊಡಬೇಕೆಂಬ ನಿಯಮವಿರಬಹುದೇ?

ರಾಜಕೀಯ ಸಂತ್ರಸ್ತರು ಒಂದೇ ಸ್ಥಳಕ್ಕೆ ಹಲವು ಅರ್ಜಿಗಳನ್ನು ಹಾಕಿದರೂ, ಆ ಸ್ಥಳವಿರುವ ಗ್ರಾಮದಲ್ಲಿ ರಾಜಕೀಯ ಸಂತ್ರಸ್ತರು ಇದ್ದಾರೋ? ಅವರಿಗೆ ಭೂಮಿಕೊಟ್ಟದೋ? ಎಂಬುದನ್ನು ಪ್ರಥಮ ವಿಚಾರಿಸಬೇಕಿತ್ತು-ಅನಂತ್ರ ಅವರಿಗೆಕೊಟ್ಟು ಹೆಚ್ಚಿಗೆ ಇರುವ ಸ್ಥಳವನ್ನು ಮೊದಲು ಅರ್ಜಿಮಾಡಿದವರಿಗೆ ಕೊಡಬೇಕಲ್ಲದೆ, ಅದೇ ಗ್ರಾಮದವನಿಗೆ ಒಮ್ಮೆ ಭೂದಾನಮಾಡಿ 8 ತಿಂಗಳ ನಂತರ ಅವರಿಂದ ಅರ್ಧಾಂಶ ಸ್ಥಳವನ್ನು ಅಧಿಕಾರಿ



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರ ಮಾಡ್ಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ. ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಶಾಂತಿಗುಣವಾಗುವುದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸಾರ್ತಿದೆ. ಕಿಮ್ಮತ್ತು-ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ.ಪಿ.-ಬೇರೆ. ಡಜನ್ ಕೆಪ್ಸೂಲಗಳಿಗೆ ರೂ. 42-0-0 ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಡ್ರಪಲ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪಲ್ ಬಾಟ್ಲಿಗಳಿಗೆ ರೂ. 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ. ಮಾಫಿ.

ಪ್ರಶಂಸನಾ ಪತ್ರ-ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ; ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆ ಎಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.
ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ. ಐ. ರೈಲ್ವೆ.

The Eclipse Distributing Agency.
Dahanu Road, B. B. & C I. Rly,

ಬೊಂಬಾಯಿ ಸ್ಟಾಕಿಸ್ಟರು:—ಲಕ್ಡವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2.

[೧೧ನೇ ಪುಟದಿಂದ]

ಗಳು ಶ್ರೀಮಂತರ ಮಾತಿಗಾಗಿ ಬೇಕಾದವರಿಗೆ ಕೊಡಬಹುದೋ?

ಆದರೆ ಸಲಹ ಸಮಿತಿಯವರು ಅರ್ಜಿದಾರನ ಸ್ವಂತ ಗ್ರಾಮದಲ್ಲಿರುವ ಸ್ಥಳವನ್ನು ಅವನಿಗೆ ಕೊಟ್ಟು ಕಡಿಮೆಯಾದರೆ ನೆರೆ ಗ್ರಾಮಗಳಲ್ಲಿ ಕೇಳಿದರೆ ಕೊಡುವಂತೆ ಸಲಹೆ ಕೊಡಬಾರದೆ?

ಶ್ರೀ ತಲಬಾಡಿ ತಿಮ್ಮಪ್ಪ ಮಲ್ಲಿಯವರು ಕಾಂಗ್ರೆಸಿನವರಾದರೆ ಕಳೆದ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸಿನವರು ಆರಿಸಿದ ಶ್ರೀ ಬಿ. ಅನಂತ ರೈಗಳ ಎದುರಿಗೆ ಕಾಂಗ್ರೆಸು ಬಿಟ್ಟು ಸ್ವತಂತ್ರ ಪಾರ್ಟಿಯಿಂದ ಚುನಾವಣೆಗೆ ನಿಂತು ಸೋತು ಹೋದವರು. ಮಾತ್ರವಲ್ಲ ಕರಿಯಂಗಳ ಗ್ರಾಮದಲ್ಲಿ ತನಗೆ ಸ್ಥಳ ಬೇಡವೆಂತ ಸಹ ಹೇಳಿಕೆ ಕೊಟ್ಟವರು ಆದರೂ ಸಲಹ ಸಮಿತಿಯವರು ವಿಚಾರಿಸದೆ ಅಧಿಕಾರಿಗಳ ಮಾತಿಗೆ ತಲೆ ಆಡಿಸುವುದು ನ್ಯಾಯವೋ? ಕಾಂಗ್ರೆಸಿಗೆ ಸೇರದೆಯೂ- ಜೈಲಿಗೆ ಹೋಗದೆಯೂ, ಇರುವ ಕೆಲವು ಸಂತ್ರಸ್ತರಿಗೆ ಭೂದಾನ ಸಿಕ್ಕಿರುವಾಗ ನಿಜವಾಗಿ ಸೆರೆಮನೆಗೆ ಹೋಗಿ ನಷ್ಟ ಕಷ್ಟಗಳಿಂದ ಸಂಕಷ್ಟಕ್ಕೊಳಗಾದವರಿಗೆ ಆಸೆ ತೋರಿಸಿ ಬಿನಹರಿಕೆ ಮಾಡುವುದು ಅಧಿಕಾರಿಗಳೋ? ಸಲಹ ಸಮಿತಿಯವರೋ? ಸಮಿತಿ ಇಲ್ಲದಿರುತಿದ್ದರೆ ಅಧಿಕಾರಿಗಳ ವರ್ತನೆಯನ್ನು ಸರಕಾರಕ್ಕಾದರೂ ತಿಳಿಸಬಹುದಿತ್ತು. ಇನ್ನಾದರೂ ಕೊಟ್ಟಿದೆಂತ ಹೇಳುವ ಭೂಮಿಯನ್ನು ಅವರಿಗೆ ಅದಷ್ಟು ಬೇಗನೆ ಬಿಟ್ಟುಕೊಡಬೇಕು. ನಿಜವಾಗಿ ಆಕ್ಷೇಪವಿರುವ ಸ್ಥಳಗಳನ್ನು ಸಮಿತಿಯವರು ನೋಡಿ ಅದರಲ್ಲಿ ಕೃಷಿ ಮಾಡಲಿಕ್ಕೂ ಬೆಳೆ ಮಾಡಲಿಕ್ಕೂ ಅನುಕೂಲವಿರುವ ಸ್ಥಳಗಳನ್ನು ಅನುಕೂಲವಿದ್ದವರಿಗೆ ಕೊಡುವಂತೆ ಸರಕಾರಕ್ಕೆ ಸೂಚಿಸಬೇಕು ಅಥವಾ ಸ್ಪೆಶಲ್ ಆಫೀಸರರನ್ನು ನೇಮಕ ಮಾಡುವಂತೆ ಸಲಹೆ ಕೊಡಬೇಕು. ಅಲ್ಲದೆ ಈಗಿನಂತೆ, ಸೆರೆಮನೆಗೆ ಹೋಗದವರಿಗೆ ಭೂದಾನ ಕೊಡುವುದು, ಹೋದವನಿಗೆ ಕೊಟ್ಟದ್ದನ್ನು ಅಪಹರಿಸಿ ಕಾಂಗ್ರೆಸಿನ ಎದುರಾಳಿಗೆ ಕೊಡುವುದು ಇದೆಲ್ಲಾ ಅಧಿಕಾರಿಗಳ ಪಕ್ಷಪಾತವೋ ಸಲಹ ಸಮಿತಿಯವರ ಸಲಹೆಗಳೋ? ಸತ್ಯಾಗ್ರಹಿಗಳ ದುರಾದೃಷ್ಟವೋ? ಅಥವಾ ಜನತಾ ಸ್ವರಾಜ್ಯದ ನ್ಯಾಯಪಾಲನೆಯೋ? ಎಂಬದನ್ನು ವಾಚಕರೇ ತೀರ್ಮಾನಿಸಲಿ.

ಎಸ್. ಎ. ಶೀನಪ್ಪ ಹೆಗ್ಡೆ, ಪೊಳಲಿ,
ರಾಜಕೀಯ ಸಂತ್ರಸ್ತರಲ್ಲೊಬ್ಬ

ವಾರ ಭವಿಷ್ಯ

ತಾರೀಕು 5-10-1950ರಿಂದ ತಾ. 11-10-1950ರ ವರೆಗೆ

ಮೇಷ—ಇಂದೀಗ ನಿಮ್ಮ ಅದೃಷ್ಟವು ಉತ್ತಮವಾಗಿದೆ ನಿಮ್ಮ ಮೇಲ್ಮೆಯನ್ನು ನೋಡಿ ಸಹಿಸಲಾರದೆಯೋ ಎಂಬಂತೆ ಶತ್ರು ಜನರು ಶಕ್ತಿಮೀರಿ ಪೀಡಿಸಬೆತ್ನಿಸುವರು. ಆದರದು ಹನುಮಂತನ ಮುಂದೆ ಕೂರಾಟವೆಂಬಂತೆ ಫಲಕಾರಿಯಾಗದು. ಉದ್ಯೋಗದಲ್ಲಿ ಪ್ರಗತಿ ಹೊಂದುವಿರಿ. ನೌಕರಿ ಜನರಿಗೂ ಸೇವಕ ವರ್ಗಕ್ಕೂ ಈ ವಾರವು ಶ್ರೇಯೋದಾಯಿಯಾಗಿದೆ. ವಾರಾಂತ್ಯದ 2 ದಿನಗಳಲ್ಲಿ ಧನ ಲಾಭ ಸುಖ ಭೋಗಗಳು ಲಭಿಸುವವು.

ವೃಷಭ—ಶುಕ್ರಾಚಾರ್ಯರನ್ನು ಬಿಟ್ಟು ಎಲ್ಲಾ ಗ್ರಹರೂ ಪ್ರತಿಕೂಲರಾಗಿ ನಿಂತಿರುವ ಕಾರಣ ದಿನಯೂಪನೆಯು ಬಹಳ ಕಷ್ಟಕ್ಕೆ ನಿಲ್ಲುವುದು. ಗೃಹಕೃತ್ಯದಲ್ಲಿ ಸುಖವಿರದು. ಕೈ ಹಿಡಿದ ಹೆಂಡತಿಯು ಅಪರಾವತಾರವನ್ನೇ ತಾಳುವಳು ಧನಾಗಮದ ಮಾರ್ಗಗಳು ಕಟ್ಟಾಗುತ್ತಾ ಬರುವದಲ್ಲದೆ ಖರ್ಚಿಗಾಗಿ ಸಾಲ ತೆಗೆಯಬೇಕಾಗುವದು. ಸಮಾಜದಲ್ಲಿ ಸ್ಥಾನಮಾನಗಳಿಗೆ ಹಾನಿ ಸಂಭವಿಸಲಿದೆ ಆದರೂ ವಾರಾದಿಯ 3 ದಿನಗಳಲ್ಲಿ ಹೆಚ್ಚಿನ ಆಪತ್ತುಗಳಿಗೆ ಸಿಗಲಾರಿರಿ.

ಮಿಥುನ—ಸಾಧಿಸಿದರೆ ಸಬಳ ನುಂಗಬಹುವೆಂಬ ಗಾದೆಯಂತೆ ಈ ವಾರದಲ್ಲಿ ನೀವು ಯತ್ನಿಸಿದರೆ ಯಾವ ಕಾರ್ಯವನ್ನೂ ಕೂಡ ಕೊನೆಗಾಣಿಸಲು ಶಕ್ತರಿರುವಿರಿ. ದೈವವು ಅನುಕೂಲ ಸ್ಥಿತಿಯಲ್ಲಿದೆ. ಪ್ರತಿಯೊಂದು ಕಾರ್ಯದಲ್ಲೂ ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚಿನದಾದ ಫಲವು ತಾನಾಗಿ ಲಭಿಸಲಿದೆ. ವಿದ್ಯಾರ್ಥಿಗಳಿಗೆ ವ್ಯಾಪಾರಿ ಜನರಿಗೆ ಈ ಸಮಯವು ಉತ್ತಮವಿರುವುದು. ತಾ. 5, 6, 7, 10, 11 ಈ ದಿನಗಳಲ್ಲಿ ನೀವು ಚಿತ್ತಚಾಂಚಲ್ಯದಿಂದ ಅವಿವೇಕಕ್ಕೆ ಮನಗೊಟ್ಟು ಮಿತ್ರಜನರ ಮುನಿಸಿಗೆ ಪಾತ್ರರಾದೀರಿ ಜಾಗ್ರತೆ

ಕರ್ಕಟ—ಸುಖ ಲಾಭ ಪತಿಯಾದ ಶುಕ್ರನು ನೀಚನಾದ್ದರಿಂದ ನೀವೆಷ್ಟೇ ಸಂಪಾದಿಸಿರಿ ವ ಅವ್ಯೇಷ್ಪರ ಚೆಂಬಲವಿರಲಿ, ಮನಸ್ಸಿಗೆ ನೆಮ್ಮದಿಯಿರದು ಕೈಯಲ್ಲಿ ಕಾಸೂ ಉಳಿಯದು. ಜನತೆಯನ್ನು ವಂಚಿಸುವುದಕ್ಕಾಗಿ ಅಂತರಂಗ ಬಹಿರಂಗಗಳಲ್ಲಿ ವಿವಿಧ ವ್ಯಕ್ತಿತ್ವ ತಾಳುವ ಪ್ರಸಂಗ ಬರಬಹುದು. ಇದರಿಂದ ಮುಂದೆ ಕೆಡುಕು ತಪ್ಪಿದ್ದಲ್ಲ. ನಿಮ್ಮ ದೇಹಾರೋಗ್ಯದ ಮಟ್ಟಿಗೆ ಸ್ವಲ್ಪ ಜಾಗ್ರತೆ ವಹಿಸುವದೊಳ್ಳಿತು. ತಾ. 8, 9 ಒಳ್ಳೆಯದಲ್ಲ.

ಸಿಂಹ—ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಸಿಕ್ಕಿಯೇ ತೀರುವದು. ಆದರೆ ಆಲಸ್ಯವು ನಿಮ್ಮನ್ನು ಸೇರಿರುವುದರಿಂದ ಯಾವ ಕಾರ್ಯವನ್ನು ಮುಂದಾಗಿ ಮಾಡಲು ಹಿಂಜರಿವಿರಿ. ಖರ್ಚಿಗೆ ತಕ್ಕ ಫಲ ಪ್ರಾಪ್ತಿಯಿರುವುದರಿಂದ ಹಣದ ಬಿಕ್ಕಟ್ಟು ನಿಮಗೊದಗದು. ನೀಚ ಜನರ ದೆಸೆಯಿಂದಾಗಿ ಜನಾಪವಾದಕ್ಕೆ ಸಿಲುಕುವ ಸಂಭವವಿದೆ. ತಾ. 8, 9 ಸುಖ ಲಾಭದಾಯೀ ದಿನಗಳು.

ಕನ್ಯಾ—ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರುತ್ತಿವೆ. ಧೈರ್ಯವು ಕುಗ್ಗುವುದು ಜನತೆಯೊಡನೆ ನಿಷ್ಠುರ ಕಲಹ ತಿರಸ್ಕಾರಗಳುಂಟಾಗುವವು. ಆತ್ಮೀಯರ ವಿಯೋಗವಾಗಲಿದೆ. ಆದರೂ ತನ್ನ ಕುದುರೆಗೆ ಮೂರೇ ಕಾಲೆಂಬ ಹಠವಾದಿಗಳಾದ ನಿಮಗೆ ಸಾಹಸ ಸಾಧ್ಯವಾದ ಕಾರ್ಯಗಳಲ್ಲಿ ವಿಜಯವಿದೆ. ತಾ. 8, 9 ಬಿಟ್ಟುಳಿದ ದಿನಗಳು ನಿಮಗನುಕೂಲವಾಗಿವೆ

ತುಲಾ—ಕಾಲವು ಪ್ರತಿಕೂಲವಾಗಿರುವುದರಿಂದ ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗಲಾರಂಭವಾಗಿದೆ. ರಾಜಕೀಯ ರಂಗದಲ್ಲಿ ಶತ್ರುಗಳಿಂದ ಪರಾಭವವುಂಟಾದೀತು. ದೇಹಾರೋಗ್ಯವು ಕೆಡುವ ಸಂಭವವಿದೆ. ಆದರೂ ಬೃಹಸ್ಪತ್ಯಾಚಾರ್ಯರ ಪುಣ್ಯ ದೃಷ್ಟಿಯು ನಿಮ್ಮ ಮೇಲಿರುವುದರಿಂದ ಹೆಚ್ಚಿನ ಆಪತ್ತಿಯಕ್ಕೆ ಸಿಗಲಾರಿರಿ ವಾರಾದಿಯ 5 ದಿನಗಳಲ್ಲಿ ಹೊಸ ಮಿತ್ರರ ಭೆಟ್ಟಿ, ಇಷ್ಟ ಪ್ರಾಪ್ತಿ, ಲಾಭಗಳಿವೆ.

ವೃಶ್ಚಿಕ—ನಿಮ್ಮ ಲಾಭಸ್ಥಾನದಲ್ಲಿ ಪಂಚಕ ಗ್ರಹರ ಯೋಗವಿದೆ. ಕುಜ ಗುರುಗಳು ಪ್ರತಿಕೂಲರಾಗಿದ್ದರೂ ನಿಮಗಾವ ತೆರನಾದ ಭಯವು ಇರಲಾರದು. ದುಡ್ಡಿದ್ದವನೇ ದೊಡ್ಡಪ್ಪನೆಂಬ ಗಾದೆಯಂತೆ ಎಲ್ಲರೂ ನಿಮ್ಮನ್ನಾದರಿಸುವರು. ಆದರೂ ನಿಮ್ಮ ಬಂಧುವರ್ಗದವರು ನಿಮ್ಮೊಡನೆ ಸಹಕರಿಸಲಾರರು. ವಾರಾಂತ್ಯದ 4 ದಿನಗಳು ಸಂತೋಷಪ್ರದಗಳಿವೆ.

ಧನು—ವಿಶೇಷವಾಗಿ ಕೆಲಸ ಮಾಡುವಿರಿ. ಆದರೆ ನಿಮ್ಮ ಕೆಲಸಕ್ಕೆ ತಕ್ಕ ಫಲ ಲಭಿಸುವದಿಲ್ಲವು. ಜಲವರೊಡನೆ ವ್ಯರ್ಥ ಕಲಹವಾಗುವದು. ಪಿತ್ಥ ದೋಷದಿಂದಾಗಿ ದುಃಸ್ವಪ್ನ, ನಿದ್ರಾಭಂಗ ಇತ್ಯಾದಿಗಳು ಕಾಣಿಸುವವು. ಸಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುವವು. ಆದರೂ ಹಿಡಿದ ಕಾರ್ಯವನ್ನು ಕೊನೆ ಹೊಂದಿಸುವ ಶಕ್ತಿ ನಿಮಗಿದೆ. ವಾರಾಂತ್ಯದ 2 ದಿನಗಳು ಸುಖ ಲಾಭಕಾರಿಗಳಾಗಿರುವವು.

ಮಕರ—ಸಾಹಸಿಗಳೂ ಚತುರರೂ ಆದ ನಿಮಗೆ ಈ ವಾರದಲ್ಲಿ ಬಹು ಮಟ್ಟಿಗೆ ಉತ್ತಮ ಫಲಗಳೇ ಕಾಣಸುತ್ತಿವೆ. ನಿಮ್ಮ ಬಯಕೆಗಳೆಲ್ಲವೂ ಕೈಗೂಡುವವು. ಜನಬೆಂಬಲವು ಬೇಕಾದಷ್ಟಿರುವುದರಿಂದ ಸಮಾಜದಲ್ಲಿ ಒಳ್ಳೇ ಹೆಸರನ್ನು ಪಡೆವಿರಿ. ಕೆಲವೊಮ್ಮೆ ಹಣದ ನಿಮಿತ್ತ ನಿಷ್ಠುರ ಕಲಹಗಳೂ ಉಂಟಾದೀತು. ಧರ್ಮ ಕರ್ಮಗಳಲ್ಲಿ ಅನಾದರವೂ ಹೆಚ್ಚಲಿದೆ. ವಾರಾದಿಯ 3 ದಿನಗಳು ಅನುಕೂಲವಿವೆ.

ಕುಂಭ—ನಿರಾಶೆಯ ಕಾರ್ಮೋಡಗಳೇ ಕಣ್ಣ ಮುಂದೆ ಬಂದು ನಿಲ್ಲುವವು. ಹೆಂಡತಿ ಮಕ್ಕಳೇ ನಿಮಗೆ ಪ್ರತಿಕೂಲರಾಗುವರಿಂದ ಮೇಲೆ ಹೆರವರ ಪಾಡೇನು. ಆರ್ಥಿಕ ಬಿಕ್ಕಟ್ಟಿನಿಂದ ನಿಮ್ಮ ಮನೋಧೈರ್ಯವು ಮಾಯವಾಗುವದು. ಆದರೂ ಒಂದು ಆಶೆಯೇನೆಂದರೆ ಅನಿರೀಕ್ಷಿತವಾಗಿ ಸ್ತ್ರೀಧನ ವ ಇತರ ಹಣ ಲಭಿಸುವ ಒಂದು ಸುಯೋಗವಿದೆ. ವಾರಾದಿಯ 5 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

ಮೀನ—ಇಂದಿನ ಗ್ರಹಮಾನ ರೀತ್ಯಾ ನಿಮ್ಮಷ್ಟು ದುರ್ದೈವಿಗಳು ಬೇರೆ ಯಾರೂ ಇಲ್ಲವೆಂದರೂ ತಪ್ಪಾಗದು. ಯಾವ ಕೆಲಸ ಮಾಡಿದರೂ ನೀರಿನಲ್ಲಿಟ್ಟ ಹೋಮದಂತೆ ವಿಫಲವಾಗುವದು. ಶತ್ರುಪೀಡೆ, ಜನ ನಿಂದೆ, ಆರ್ಥಿಕ ಅಡಚಣೆ, ದೇಹಾಲಸ್ಯ ಇತ್ಯಾದಿ ಅನಿಷ್ಟ ಪರಂಪರೆಗಳಿಂದ ಪೀಡಿತರಾದ ನಿಮಗೆ ಸುಖವು ಸ್ವಪ್ನದಲ್ಲೂ ದುರ್ಲಭವೆಂದರೆ ತಪ್ಪಾಗದು. ತತ್ರಾಪಿ ವಾರಾದಿಯ 3 ದಿನಗಳು ಅತ್ಯಾನಿಷ್ಟಕಾರಿಗಳಾಗಿವೆ. ಜಾಗರೂಕರಿರಿ.

ಪ್ರಕಟಣೆ

ಶೀರೂರು ಮಠದ ಶ್ರೀ. ಶ್ರೀ. ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು ಸರ್ವರಿಗೂ ತಿಳಿಸುವದೇನೆಂದರೆ—

ನಾವು ತಾ. 24-12-48ರಲ್ಲಿ ಶ್ರೀ ಸೋದೇ ಮಠದ ಮಧ್ಯಕಾಲದ ಆಡಳ್ತೆದಾರರಾದ ಶ್ರೀ. ಪಿ. ಶ್ರೀಪತಿ ಆಚಾರ್ಯರಿಗೆ ಆಡಳ್ತೆಯ ಬಗ್ಗೆ ಕೊಟ್ಟ ಪವರ್ ಒಫ್ ಎಟರ್ನಿಯನ್ನು ತಾ. 26-9-50ರಲ್ಲಿ ರದ್ದುಪಡಿಸಿರುವದರಿಂದ ಸದ್ರಿ ಮಠಕ್ಕೆ ಸಲತಕ್ಕ ಯಾವತ್ತು ಗೇಣಿ ವಗೈರೆ ಸಕಲ ವಸೂಲಾತಿಗಳನ್ನು ನಮಗೆಯಾ ನಮ್ಮಿಂದ ಅಧಿಕಾರ ಹೊಂದುವವರಿಗೆ ಕೊಟ್ಟು ಕ್ರಮವಾದ ರಶೀದಿ ಪಡೆಯತಕ್ಕದ್ದು ಹೊರತು ಸದರೀ ಶ್ರೀಪತಿ ಆಚಾರ್ಯರಿಗೆ ಕೊಡ ಕೂಡದಾಗಿ ಈ ಮಠಕ್ಕೆ ಸಂಬಂಧಪಟ್ಟ ಎಲ್ಲರಿಗೂ ಈ ಮೂಲಕ ತಿಳಿಸುತ್ತದೆ.

ಶ್ರೀ ಲಕ್ಷ್ಮೀಂದ್ರತೀರ್ಥ
ಶ್ರೀ ಪಾದಂಗಳವರು.
ಶೀರೂರು ಮಠ, ಉಡುಪಿ ತಾ. 28-9-50

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದಲ್ಲಿ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಶೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೦ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆನೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಮುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M 3618
Estd 1921 ಸ್ಥಾಪನ.
31ನೇ ವರ್ಷ
12—10—195
LICENCE No. 31
Licensed to Post without Prepayment
Founder: Sri A. B. Shetty,
Minister for Agriculture & Veterina

ವರ್ಷ ೩೧
ವಾರ ೬
NAVAYUGA
WEEKLY
POST BOX NO. 22
UDIPI, S. K.
Vol. 31
No. 6

ಉತ್ತಮಾಧಮ ವ್ಯತ್ಯಾಸ

ನೆಹರು ವಲ್ಲಭಾಯಿಗಳ ನಡುವೆ ಕೆಲವು ಕಾರ್ಯಕ್ರಮಗಳ ವಿಷಯಗಳಿಗೆ ಮತಭೇದ ಬಂದಿರಬಹುದಾದರೂ, ತಾವಿಬ್ಬರು ಎರಡು ದಿಕ್ಕುಗಳಿಗೆ ಮುಖ ತಿರುಗಿಸಿದರೆ ರಾಷ್ಟ್ರದ ಭವಿಷ್ಯ ಹಾಳಾಗಬಹುದೆಂಬ ಭೀತಿ ಮತ್ತು ತದನುಗುಣವಾದ ಜಾಗರೂಕತೆ ಅವರಿಬ್ಬರಲ್ಲೂ ಇದೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ ಥಂಡನರು ದೇಶವಿಭಜನಾ ಸೂತ್ರಕ್ಕೆ ಇಂದು ಕೂಡಾ ಬದ್ಧ ವಿರೋಧಿಯಾದರೂ, ಕಾಂಗ್ರೆಸು ಈ ಮೊದಲೇ ಅದಕ್ಕೊಪ್ಪಿಗೆ ಕೊಟ್ಟಿದೆಯೆಂಬುದೂ ಜಾತ್ಯಾತೀತ ಭಾವನೆಯು ಕಾಂಗ್ರೆಸಿನ ವೈಶಿಷ್ಟ್ಯವೆಂಬುದೂ ಅವರ ಜ್ಞಾಪಕದಲ್ಲಿ ಇದ್ದೇ ಇದೆ. ಜಾತ್ಯಾತೀತ ಜನತಾರಾಜ್ಯ ಭಾರತದಲ್ಲಿ ಜಾತಿಭೇದರಹಿತ ಕಾಂಗ್ರೆಸಿನ ಅಧ್ಯಕ್ಷನಾಗಿರುವ ತನ್ನ ಅಧಿಕಾರ ಕ್ಷೇತ್ರದ ಗಡಿ ಮೀರಬಾರದೆಂಬುದು ಅವರಿಗೆ ತಿಳಿದೇ ಇದೆ.

ಜಾತೀಯತೆಯನ್ನು ಆಧರಿಸಿ ದೇಶವಿಭಜನೆಯಾದುದರ ಕುರಿತು ಅಸಮಾಧಾನ ಮತ್ತು ಅಪ್ರಕೃತ ಸ್ವರಾಜ್ಯದ ಕುರಿತು ಅತೃಪ್ತಿ ಮಹಾತ್ಮಾ ಗಾಂಧಿಯವರಲ್ಲಿದ್ದರೂ, ಸದ್ಯಸ್ಥಿತಿಯಲ್ಲಿ ಅನಿವಾರ್ಯವೆಂಬ ಕಾರಣದಿಂದಲೇ ಅವರು ಆ ಕಾಲದಲ್ಲಿ ಇವುಗಳಿಗೊಪ್ಪಿಗೆ ಕೊಟ್ಟಿದ್ದರು.

ಭಾರತ ರಾಜಕೀಯ ರಂಗದಲ್ಲಿ ಸಮತಾವಾದಕ್ಕೊಂದು ಗಣ್ಯಸ್ಥಾನ ದೊರಕಿಸಿಕೊಟ್ಟವರಾದ ಮತ್ತು ಇಂದೂ ಸಮತಾವಾದಿಯಾಗಿರುವ ಪಂಡಿತ ನೆಹರುಗಳಿಗೆ ಇಂದಿನ ಸಾಮಾಜಿಕಾರ್ಥಿಕ ಸ್ಥಿತಿಗತಿಗಳ ಕುರಿತು ನಿಜಕ್ಕೂ ಸಮಾಧಾನವಿಲ್ಲವಾದರೂ ಸದ್ಯಸ್ಥಿತಿಯಲ್ಲಿ ಒಮ್ಮೆಗೇ ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದು ಅಸಾಧ್ಯ ಮತ್ತು ಅಪಾಯಕರವೆಂಬುದರಿಂದಲೇ ಅವರೀ ಕುರಿತು ಇಷ್ಟು ನಿಧಾನಿಯಾಗಿದ್ದಾರೆ.

ಇಂದಿನ ಆಹಾರಾಭಾವ, ಜೀವನಾವಶ್ಯಕ ಸಾಮಗ್ರಿಗಳ ಅಧಿಕ ಧಾರಣೆ ಮತ್ತಿತರ ಅಡ್ಡಿ ಆತಂಕಗಳ ಮೇಲಿಂದ ಮೇಲುಪ್ಪರ ಕೂಡುವರೆ ಅಥವಾಗೊಂದಲವೆಬ್ಬಿಸುವರೆ ಕಾರಣಗಳು ಜನತೆಯ ಎಷ್ಟೋ ವರ್ಗಗಳಿಗಿವೆಯಾದರೂ ಆಡಳಿತೆ ನಮ್ಮದು ಮತ್ತು ಕಾಲಸ್ಥಿತಿ ಕಷ್ಟಕರವಾದುದೆಂಬುದರಿಂದ ಅಂಥವರೆಲ್ಲರೂ ಸಹಿಸಿಕೊಂಡಿದ್ದಾರೆ.

ಇಂದು ನಾಯಕತ್ವ ಅಥವಾ ಹಣಮಾನಗಳ ಸಂಪಾದನೆಗಾಗಿ ನಟನೆ ಮತ್ತು ದುರ್ವ್ಯಾಪಾರ, ದುರ್ವ್ಯವಹಾರಗಳನ್ನು ಮಾಡುವ ಅವಕಾಶವಿರುವ ಎಷ್ಟೋ ಮಂದಿ, ಅಂತಹ ಕಪಟ ಮತ್ತು ವಂಚಕಾಚರಣೆ ತಮ್ಮ ಮನಸ್ಸಾಕ್ಷಿಗೊಗ್ಗದುದರಿಂದಲೇ ಅಜ್ಞಾತರಾಗಿ ಮತ್ತು ಸಾಧಾ ಮನುಷ್ಯರಾಗಿ ಉಳಿದುಕೊಂಡಿದ್ದಾರೆ.

ಸಾಕಷ್ಟು ಶಕ್ತಿ ಪ್ರಭಾವವಿದ್ದರೂ ಸಾತ್ವಿಕ ಬುದ್ಧಿಯಿರುವ ದೆಸೆಯಿಂದಲೇ ಅನ್ಯರ ಮೇಲೆ ಒತ್ತಾಯ ಅಥವಾ ಆಕ್ರಮಣ ಮಾಡಲು ಹೇಸುವವರು-ವಿಶೇಷ ಶ್ರೀಮಂತಿಕೆಯಿದ್ದರೂ ಒಣಾಡಂಬರ ಸಲ್ಲದೆಂದೇ ಸಾದಾ ಸರಳ ಜೀವನ ನಡಿಸುವವರು, ಪಾಂಡಿತ್ಯ ಪ್ರೌಢಿಮೆಯಿದ್ದರೂ ಸರ್ವರಿಗೂ ಮಂದಟ್ಟಾಗಬೇಕೆಂಬುದಕ್ಕಾಗಿ ಸರಳವಾಣಿಯಲ್ಲಿ ಆಡುವವರು ಬರೆಯುವವರು—ಬರೆಯುವವರು—ಇದ್ದಾರೆ

ಉತ್ತಮರ ಭಾವನೆ ವರ್ತನೆಗಳು ಹೀಗಿದ್ದರೆ ಅಧಮರದು ತದ್ವಿರುದ್ಧ:—

ನೆಹರೂ ವಲ್ಲಭಾಯಿಗಳೊಳಗೆ ಸೇಕಡಾ 99ರಷ್ಟಿರುವ ಸಾಮ್ಯತೆಯನ್ನು ಮರೆತು, ಕೇವಲ ಒಂದಂಶದಷ್ಟಿರುವ ಮತಭೇದವನ್ನೇ ಮಹತ್ತಾಗಿ ಗಣಿಸಿ ಅಪಪ್ರಚಾರ ಮಾಡುವವರಿದ್ದಾರೆ; ಮುಖ್ಯ ಹಾಗೂ ಮೂಲಭೂತ ವಿಷಯಗಳನ್ನು ಕಡೆಗಣಿಸಿ ಅಲ್ಪ ಸಂಗತಿಗಳಿಗಾಗಿ ಜಗಳವಾಡಿಕೊಂಡು ಬೇರೆ ಬೇರೆ ಆಗುವವರು ಬಹಳ ಮಂದಿ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ಥಂಡನರು ತತ್ವದೃಷ್ಟಿಯಿಂದ ರಾಷ್ಟ್ರವಿಭಜನೆಗೆ ವಿರೋಧವಿದ್ದರೆ ಜಾತೀಯತಾ ದೃಷ್ಟಿಯಿಂದ ವಿಭಜನೆಯಂತೆಯೇ ಪರಧರ್ಮೀಯರನ್ನೂ ದ್ವೇಷಿಸುವವರು ಬೇರಿದ್ದಾರೆ. ಜಾತ್ಯಾತೀತ ಭಾರತವು 'ಹಿಂದೂ ರಾಜ್ಯ'ವಾಗಿ ಮಾರ್ಪಡಬೇಕೆಂದು ಆತುರಿಸುವವರಿದ್ದಾರೆ.

ಮಹಾತ್ಮಾ ಗಾಂಧಿಯವರು ಮಾನವ ಜನಾಂಗದ ಇದಿರಪಥವನ್ನು, ಅಖಿಲ ಭಾರತೀಯರ ಅಂತರ್ಯವನ್ನು ಅಂತೆಯೇ ಹಿಂದೂ ಧರ್ಮವನ್ನು, ಶುದ್ಧೀಕರಿಸಿದ ... ರೆಂಬುದನ್ನು ಮರೆತು, ಅವರನ್ನು ರಾಷ್ಟ್ರದ್ರೋಹಿ, ಧರ್ಮ ದ್ರೋಹಿ ಎಂದು ಭಾವಿಸಿ, ಅವರ ಕೊಲೆಗೆ ಕಾರಣರಾದವರಿದ್ದಾರೆ.

ಸಮತಾವಾದದ ಹೆಸರಿನಿಂದ, ಸಮ... ಸಮತೆಯನ್ನು ಸುಗಮವಾಗಿ ಸ್ಥಾಪಿ... ಕೊಳ್ಳಬಲ್ಲ ಇಂದಿನ ಅಧಿಕಾರವನ್ನೇ ... ಡಮೇಲು ಮಾಡುವ ಅಸಹನೆ ಪ್ರದರ್ಶಿಸುವವರೆಷ್ಟೋ ಮಂದಿ.

ತಮ್ಮಂತಹ ಇತರ ಶ್ರಮಜೀವಿ ವರ್ಗ ... ತಮಗಿಂತ ಎಷ್ಟೋ ಪಾಲು ಹೆಚ್ಚಿನ ಕಷ್ಟನಷ್ಟಗಳನ್ನನುಭವಿಸಿಕೊಂಡಿದ್ದರೂ ... ಅಲ್ಪಕಾರಣಗಳಿಗಾಗಿ, ಅಥವಾ ನೆವನ... ಳನ್ನು ಮುಂದೊಡ್ಡಿ ಕೆಲವರು ಮುಷ್ಕರ ಮತ್ತು ಗಲಭೆಗಳನ್ನೆಬ್ಬಿಸುವದಿದೆ.

ವಿಧಾಯಕ ಶಕ್ತಿ ಸಾಮರ್ಥ್ಯಗಳೇನ... ಇರದಿದ್ದರೂ ವಿನಾಶಕ ಚಟುವಟಿಕೆ... ಳಿಂದ ಮುಂದಾಳುಗಳಾಗಿ ಮೆರೆದಾಡ... ವವರಿದ್ದಾರೆ; ನ್ಯಾಯಬದ್ಧ ವ್ಯಾಪಾರ ... ವಹಾರಗಳ ಬದಲಿಗೆ ಕಳ್ಳವಹಿವಾಟು... ಳನ್ನೇ ಅವಲಂಬಿಸುವವರು ಬಹಳ ಮಂ...

ಶಕ್ತಿ, ಸಾಮರ್ಥ್ಯವಿರದಿದ್ದರೂ ... ಮಸ ಬುದ್ಧಿಯಿರುವ ದೆಸೆಯಿಂದ ರಂ... ಟ ಹೂಡುವ ಗೂಂಡಾ ಮನೋವೃ... ಯವರು—ಬೇರೇನಿಲ್ಲದಿದ್ದರೂ ಕೃತ... ವೇಶ ಭೂಷಣ, ಒಣಾಡಂಬರಗಳ... ಪ್ರದರ್ಶಿಸುವವರು—ಅರೆಪಕ್ವ ಬುದ್ಧಿ... ಅರ್ಥತುಂಬಿದ ಕೊಡದಿಂದ ದೊಡ್ಡ ... ಡ್ಡ ಶಬ್ದಗಳನ್ನು ದೊಡ್ಡಸ್ತಿಕೆಯನ್ನು ... ಳುಕಿಸುವವರು—ಬಹಳ ಮಂದಿ.

ಉತ್ತಮನು, ತಾನು ಆಚರಿಸಿ ಕಲಿ... ತ್ತಾನಾದರೆ ಅಧಮನು ತನ್ನಲ್ಲಿ ಇಲ್ಲ... ದನ್ನು ಆಡಿ ತೋರಿಸುತ್ತಾನೆ.

ಲೋಪದೋಷಗಳನ್ನು ನಿ... ರಿಸುವುದು ಹೇಗೆಂಬುದೇ ಉತ್ತಮ... ಚಿಂತನೆಯಾದರೆ ಆ ಲೋಪದೋಷ... ಳನ್ನಾಧರಿಸಿ ಸ್ವಕಾರ್ಯ ಸಾಧಿಸುವು... ಹೇಗೆಂಬುದೇ ಅಧಮನ ಯೋಚನೆ.

ಉತ್ತಮನು ಮಾಡಿಕೊಳ್ಳುವದು ಆ... ವಿಮರ್ಶೆ; ಅಧಮನಲ್ಲಿರುವುದು ಪರನಿಂ... ಉತ್ತಮ ಎಲ್ಲದರಲ್ಲೂ ಸ್ವಾವಲಂಬಿ; ... ಮ ಪರಾವಲಂಬಿ. ಮೊದಲನೆಯವ ... ತ್ವಿಕ, ವಿಧಾಯಕ; ಕೊನೆಯವ ತಾ... ಮಸಿಕ, ವಿನಾಶಕ.

ಕೆಲವೇ ಪ್ರತಿಗಳು ಉಳಿದಿದೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೋಡ್ಕರ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

THE UNITED KARNATAK INSURANCE COMPANY, LTD., DHARWAR.

Established 1929.

Offers their valuable service to the public of India in making their sweet home, always happy.
For good investments and valuable connections, please consult us

ಗಾಂಧೀ ಸಾಧನಗಳ ಇಂದಿನ ರೂಪ

ಮಹಾತ್ಮಾ ಗಾಂಧಿಯವರ ರಾಜಕೀಯ ರಂಗದೊಳಗೆ ಕೆಲವು ಹೊಸ ಪ್ರಯೋಗಗಳೊಂದಿಗೇನೇ ಪ್ರವೇಶಿಸಿದ್ದರು; ಅಹಿಂಸಾತ್ಮಕ ಅಸಹಕಾರ, ಕಾಯಿದೇ ಭಂಗದಂತಹ ಚಳವಳಗಳು ನವೀನವಾಗಿದ್ದಂತೆಯೇ ಅವುಗಳ ಉಪಕರಣಗಳಾಗಿರುವ ಅನಶನವ್ರತ, ಹರತಾಳ, ದಿನಾಚರಣೆಗಳಂತಹವೂ ರಾಜಕೀಯ ರಂಗದಲ್ಲಿ ನವೀನ ಪ್ರಯೋಗಗಳೇ. ಸ್ವಾತಂತ್ರ್ಯ ಹೋರಾಟದ ಮಟ್ಟಿಗೆ ಭಾರತೀಯರ ಅಂದಿನ ಸ್ಥಿತಿ, ಮತಿ, ಎರಡಕ್ಕೂ ಈ ಆಂದೋಲನಗಳು ಮತ್ತು ಸಾಧನಗಳು ಹೇಳಿಸಿದವುಗಳಾಗಿದ್ದುದರಿಂದ, ಅವು ಸಾಕಷ್ಟು ಪರಿಣಾಮಕಾರಿಯಾಗಿದ್ದುವು. ಅವುಗಳನ್ನು ಅಸ್ತಿತ್ವಕ್ಕೆ ತಂದ ಮಹಾತ್ಮಾ ಗಾಂಧಿಯವರೇ, ಚಾಲಕನಾಗಿಯೂ ಆ ಕಾಲದಲ್ಲಿದ್ದುದರಿಂದ, ಅವು ಪ್ರಭಾವ ಬೀರಲು ಶಕ್ತವಾಗಿದ್ದುವು. ಆದರೀಗ ಕಾಲಗತಿ ಮತ್ತು ಪರಿಸ್ಥಿತಿ ಬದಲಾಗಿದೆ; ಮೂಲಕರ್ತ ಅದೃಶ್ಯನಾಗಿದ್ದಾನೆ. ಈ ದೆಸೆಯಿಂದ, ಆವಶ್ಯಕತೆ ಮತ್ತು ಪ್ರಭಾವ ಹೆಚ್ಚಿನಂಶ ಕಳೆದು ಹೋದರೂ ಸತ್ಯಾಗ್ರಹ, ಆಹಾರ ತ್ಯಾಗ, ದಿನಾಚರಣೆಗಳಂತಹವು ಇನ್ನೂ ಉಳಿದುಕೊಂಡಿವೆ; ಪ್ರಕೃತ ಇವೆಲ್ಲವೂ ಜೀವಹೋದ ಮೇಲೂ ಉಳಿದುಕೊಂಡಂತಿವೆ.

ಗಾಂಧಿಜಿ ಕಲಿಸಿದ ಪಾಠ

ಇಂದು ಈ ರೀತಿ ಅನಪೇಕ್ಷಿತವಾಗಿ ಉಳಿದುಕೊಂಡಿರುವ ಕೆಲವು ಅಭ್ಯಾಸಗಳನ್ನು ಮಹಾತ್ಮಾಜೀ ಆ ಕಾಲದಲ್ಲಿ ರಾಷ್ಟ್ರದ ಕಾರ್ಯ ಸಾಧನೆಗಾಗಿಯೇ ಕಲಿಸಿದ್ದರು; ಅಸಹಕಾರ, ಹರತಾಳ ಮತ್ತು ದಿನಾಚರಣೆಗಳು ಜಾಲಿಯನ್‌ವಾಲಾಬಾಗ್ ಅತ್ಯಾಚಾರದ ನಂತರ ಭಾರತದಲ್ಲಿ ಸಾರ್ವತ್ರಿಕವಾಗಿ ಅಸ್ತಿತ್ವಕ್ಕೆ ಬಂದುವೆನ್ನಬಹುದು. ಎಪ್ರಿಲ್ 6ರಿಂದ 13ರ ವರೆಗಿನ ಒಂದು ವಾರವನ್ನು, ಜಾಲಿಯನ್ ವಾಲ್‌ಬಾಗ್ ಅತ್ಯಾಚಾರವನ್ನು ಸ್ಮರಿಸಿ ರಾಷ್ಟ್ರೀಯ ಸ್ಫೂರ್ತಿಗೊಳ್ಳುವುದಕ್ಕಾಗಿ 'ರಾಷ್ಟ್ರೀಯವಾರ'ವಾಗಿ ಆಚರಿಸುವ ಕ್ರಮ ಬಂತು ಅಂತೆಯೇ ಧುರೀಣರ ಜನ್ಮ ದಿನಾಚರಣೆಗಳು ಮತ್ತಿತರ ಗಣ್ಯ ಸಂದರ್ಭಗಳು ವಿಶೇಷ ರೀತಿಯಿಂದ ಅಸ್ತಿತ್ವದಲ್ಲಿ ಬಂದುವು. ದೀರ್ಘಾವಧಿಯ ಗುಲಾಮಗಿರಿಯಿಂದ ಜಡವಾಗಿದ್ದ ಭಾರತೀಯರ ಮನಸ್ಸನ್ನು ಕಾಲಕಾಲಕ್ಕೆ ಜಾಗೃತಿಗೊಳಿಸಿ ದೇಶಭಕ್ತಿಯನ್ನು ಪ್ರಚೋದಿಸುತಿದ್ದುದು ಈ ದಿನಾಚರಣೆಗಳೇ. 1929ರ ಲಾಹೋರು ಕಾಂಗ್ರೆಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಗುರಿ ನಿರ್ಣಯವಾದ ಮೇಲೆ ಪ್ರತಿ ಜನವರಿ 26 'ಸ್ವಾತಂತ್ರ್ಯದಿನ'ವಾಗಿ ಆಚರಿಸಲ್ಪಡುತ್ತಾ ಬಂದಿದ್ದಿತು; ಪೂರ್ಣ ಸ್ವಾತಂತ್ರ್ಯದ ನೆನಪನ್ನು ತರುತಿದ್ದ ಆ ದಿನವು ಇಂದು ಪೂರ್ಣ ಸ್ವಾತಂತ್ರ್ಯವನ್ನು ತಂದ ದಿನವಾಗಿ ಆಚರಣೆಯಲ್ಲಿದೆ. ಜಾಲಿಯನ್‌ವಾಲಾಬಾಗಿನ ಸ್ಮಾರಕ ಸಪ್ತಾಹವಾದ 'ರಾಷ್ಟ್ರೀಯ ವಾರ' ಕೂಡಾ ವಿಧಾಯಕ ಕಾರ್ಯಾಚರಣೆಗಳ ಬಗ್ಗೆ ಆಚರಣೆಯಲ್ಲಿದೆ. ಸ್ಮಾರಕ ದಿನಗಳಿಗಾದರೂ ಇಂತಹ ಕಾಲೋಚಿತ ರೂಪವನ್ನು ಕೊಡಬಹುದು. ಆದರೆ ನಿಷೇಧ ಪ್ರದರ್ಶನಕ್ಕಾಗಿ ಇರತಕ್ಕ 'ಹರತಾಳ', ಸಾತ್ವಿಕ ಪ್ರತಿಭಟನೆಯಾಗಿ ಇರುವ 'ಅಸಹಕಾರ' 'ಅನ್ನ ಸತ್ಯಾಗ್ರಹ'ದಂಥವುಗಳು ಹೇಗೆ ಮಾರ್ಪಾಟಗೊಂಡರೂ ಸದಾಕಾಲ ಪ್ರಯೋಗಿಸಲ್ಪಡುವಂಥವುಗಳಲ್ಲ. ರಾಜಕೀಯ ರಂಗದಲ್ಲಿ 'ಅನಶನ ವ್ರತ'ದಂತಹ ಆಯುಧವನ್ನು ಪರಿಣಾಮಕಾರಿಯಾಗುವಂತೆ ಪ್ರಯೋಗಿಸಿದ ಸತ್ಯಾಗ್ರಹ ಗುರು ಗಾಂಧಿಜೀ ತನ್ನ ಜೀವಮಾನದಲ್ಲಿ ಮಿಕ್ಕಯಾರಿಗೂ ಈ ಅಸ್ತ್ರ ಪ್ರಯೋಗಕ್ಕೆ ಅನುಮತಿಕೊಟ್ಟದಿಲ್ಲ. ಈ ಶಸ್ತ್ರವು ಇದನ್ನು ಉಪಯೋಗಿಸುವ ವ್ಯಕ್ತಿಯ ಪ್ರಭಾವದ ಮೇಲಿಂದಲೇ ಪರಿಣಾಮ ಬೀರಬೇಕು ಹೊರತು, ಅನ್ಯಥಾ ಅಲ್ಲ. ಆಹಾರ ಸತ್ಯಾಗ್ರಹವೆಂದರೆ ಕೇವಲ ಸ್ವದಮನ. ತನ್ನನ್ನೇ ತಾನು ಶಿಕ್ಷಿಸಿಕೊಳ್ಳುವ ಮೂಲಕ ಅನ್ಯರ ಮನಸ್ಸನ್ನು ಕರಗಿಸುವ ವಿಧಾನವದು; ಅದೊಂದು ತಪಸ್ಸು. ತನ್ನ ಬೆರಳನ್ನೇ ಬತ್ತಿಯಾಗಿ ಉರಿಸಿ, ಅನ್ಯರ ಕಣ್ಣೆದಿರಿನ ಕತ್ತಲೆಯನ್ನು ನಿವಾರಿಸುವಂತಹ ಮಹಾಸಾಧನೆಯದು. ಇಂತಹ ದೀಪಧಾರಿಗೆ ಅದನ್ನು ಉರಿಸುವ ಕೆಲಸ ಮಾತ್ರವಲ್ಲ, ಉರಿಯನ್ನು ಅನುಭವಿಸುವ ಯಾತನೆಯಿದೆ. ಸಂಬಂಧ ಪಟ್ಟ ವ್ಯಕ್ತಿಯಲ್ಲಿ ಈ ನೋವನ್ನು ಸಹಿಸಿಕೊಳ್ಳುವ ಮನೋಬಲವಿರಬೇಕಾದುದು ಅಗತ್ಯ; ತಾನು ಈ ಉರಿಯನ್ನು ಅನುಭವಿಸುತಿದ್ದೇನೆಂಬುದಕ್ಕಾಗಿ ತನಗಿಂತ ಹೆಚ್ಚಿನ ಯಾತನೆಯನ್ನು ಇತರರು ಅನುಭವಿಸುವಂತಾಗುವ ಮಹಾ ವ್ಯಕ್ತಿಯಾಗಿ ಅವನಿರಬೇಕಾದುದೂ ಅಗತ್ಯವೇ. ಹೀಗಿಲ್ಲದೆ ಹೋದರೆ—ಅನ್ಯರ ಮೇಲೆ ಕ್ಷಿಪ್ರ ಹಾಗೂ ಮಹತ್ವಾದ ಪರಿಣಾಮವನ್ನು ಬೀರುವ ಘಟನೆ ಅದಲ್ಲವಾಗಿದ್ದರೆ—ಉಪವಾಸ ವ್ರತದಿಂದ ವ್ರತಧಾರಿಯು ಕರಗುತ್ತಾ ಹೋಗುವದೊಂದೇ ನಡೆದೀತು; ಅದು ಆತ್ಮಹತ್ಯೆಗೆ ಸಮಾನವಾದೀತು. ಆದ್ದರಿಂದಲೇ ಗಾಂಧಿಜೀ ಉಪವಾಸ ಸತ್ಯಾಗ್ರಹಕ್ಕೆ ತನ್ನ ಹತ್ತಿರದ ಅನುಯಾಯಿಗಳಿಗೆ ಕೂಡಾ ಅನುಮತಿ ಕೊಟ್ಟದಿಲ್ಲ. ಇದು ಕೇವಲ ತನ್ನ ಕೈಯ ಅಸ್ತ್ರವೆಂದೇ ಅವರು ಭಾವಿಸಿದ್ದರೆನ್ನಬಹುದು. ಅಂತೆಯೇ ಕಾಯಿದೇಭಂಗ, ಅಸಹಕಾರ, ಸತ್ಯಾಗ್ರಹದಂತಹವುಗಳನ್ನು ಕೂಡಾ ಸ್ಥಿತಿ ಮತ್ತು ಸಂದರ್ಭವನ್ನು ನೋಡಿಕೊಳ್ಳದೆ, ಪರಿಣಾಮ ಹೇಗಾದರೂ ನಷ್ಟಕ್ಕಿಂತ ಹೆಚ್ಚಿನ ಲಾಭವಿದ್ದೇ ಇದೆಎಂಬುದು ಖಚಿತವಾಗದೆ, ಉಚ್ಚಧ್ಯೇಯಸಾಧನೆಗಾಗಿ ಅಲ್ಲದೆ, ಗಾಂಧಿಜೀ ಉಪಯೋಗಿಸಿದ್ದಿಲ್ಲ. ಅಂತಹ ಹೊಸ ಉಪಕರಣಗಳನ್ನು ಮುಂದೊಡ್ಡಿದ್ದ ಗಾಂಧಿಜೀ, ಅವುಗಳ ಪ್ರಯೋಗಕ್ಕಾಗಿ ಆತ್ಮಬಲವನ್ನು ಅಪೇಕ್ಷಿಸಿದ್ದರು; ಅನುಯಾಯಿತ್ವವನ್ನು ಅಭ್ಯಾಸಿಸಿದ್ದರು. ಅಂತಹ ಆತ್ಮಬಲವಿಲ್ಲದಿದ್ದರೆ, ಮತ್ತೀ ಮಟ್ಟಿಗೆ ತನ್ನನ್ನು ಅನುಸರಿಸುವುದು ಅಸಾಧ್ಯವಾದರೆ, ಈ ಆಯುಧಗಳನ್ನು ಉಪಯೋಗಿಸಿದರದು ದುರ್ವಿನಿಯೋಗವೇ ಸರಿ, ಎಂದು ಅವರು ಸಾರಿದ್ದರು.

ಇಂದಿನ ದುರ್ವಿನಿಯೋಗ

ಗಾಂಧಿಜೀ ಯಿಲ್ಲದ ಸ್ವತಂತ್ರ ಭಾರತ ರಂಗದಲ್ಲಿ ಮಹಾತ್ಮಾಜಿ ಕಲಿಸಿದ್ದ ಪಾಠಗಳು ದುರ್ವಿನಿಯೋಗವಾಗುತ್ತಿರುವುದು ಎಲ್ಲೆಲ್ಲೂ ಕಂಡು ಬರುತ್ತಿದೆ. ಗಾಂಧಿಜೀಯದಾಗಿರುವುದೆಲ್ಲವೂ ಈಗ ಸೂರೆಗೆ ಸಿಲುಕಿವೆಯೋ ಎಂಬಂತೆ ಭಾಸವಾಗುತ್ತಿದೆ. ಅವರ ಹೆಸರನ್ನು ಅಡ್ಡಿವಿನಹ ಈಗ ಎಲ್ಲರೂ ಉಪಯೋಗಿಸಹತ್ತಿದ್ದಾರೆ; ಅವರು ನಿರ್ಮಿಸಿಟ್ಟಿದ್ದ ಉಪಕರಣಗಳೀಗ ಹಿಡಿಕಳಚಿ ಹೋಗಿ, ಬಾಯಿ ಕಳಕೊಂಡು ಯದ್ವಾ ತದ್ವಾ ಪ್ರಯೋಗಿಸಲ್ಪಡಹತ್ತಿವೆ. ಅಸಹಕಾರ, ಸತ್ಯಾಗ್ರಹ ಅಥವಾ ಅಹಿಂಸಾತ್ಮಕ ಮುಷ್ಕರಗಳಿಗೆ ಗಾಂಧಿಜೀ ಹಾಕಿದ್ದ ಶರ್ತಗಳನ್ನು ಮರೆತು, ದುರುದ್ದೇಶಗಳ ಸಾಧನೆಗಾಗಿ ಅವುಗಳನ್ನು ಉಪಯೋಗಿಸುತ್ತಿರುವವರೀಗ ಕಂಡು ಬರುತ್ತಿದ್ದಾರೆ. ಖಾಸಗೀ ವ್ಯವಹಾರಗಳ ಮೂಲಕ ತೀರ್ಮಾನ ಹೊಂದತಕ್ಕಂತಹ ಸಣ್ಣ ಪುಟ್ಟ ವಿವಾದಗಳಿಗಾಗಿ ಗಾಂಧಿಜೀಯ ಆಹಾರ ಸತ್ಯಾಗ್ರಹವನ್ನೋ, ಅಸಹಕಾರವನ್ನೋ ಕೈಕೊಳ್ಳುವರು ಕಂಡು ಬರುತ್ತಿದ್ದಾರೆ. ಗಾಂಧೀತತ್ವ ಮತ್ತು ಕಾರ್ಯಕ್ರಮಗಳಿಗೆ ಬದ್ಧವಿರೋಧವಿರುವವರಿಗಾದರೂ, ಇಂದು ಸ್ವಕಾರ್ಯ ಸಾಧನೆಗಾಗಿ ಬೇಕಾಗಿರುವುದು ಗಾಂಧಿಜೀ ಮಾಡಿಸಿದ್ದ ಅಭ್ಯಾಸಗಳೇ; ಸಂಪು, ಸತ್ಯಾಗ್ರಹಗಳೇ. ಗಾಂಧಿಜೀ ರಾಕ್ಷಸಿ ಬಲಕ್ಕೆ ತವಿದಿದ್ದರೆ, ದೈವಿಕತೆಯ ಮುಂದೆ ಚಾಚುವಂತಹ ವಿರುದ್ಧ ಗತಿ—ಮಹಾತ್ಮಾಜೀ ಹಿಡಿಯಲ್ಲಿ ಹಿಡಿದಿದ್ದರೆ ತಾದಿಯನ್ನೇ ಹಿಡಿದುಕೊಳ್ಳುವಂತಹ ಅಪಾಯಕರ ಸ್ಥಿತಿ—ಕಾಣಿಸುತ್ತವೆಯಾದರೂ ಇಂದಿನವರ ಆಯುಧಗಳೇನೋ ಗಾಂಧಿಜಿಯವುಗಳೇ. ಗಾಂಧಿತ್ವದ ವಿರೋಧಿಗಳ ಕೈಯಲ್ಲಿ ಗಾಂಧೀ ವಿಧಾನಗಳು ಇಂತಹ ಅವಸ್ಥೆಗೀಡಾಗಿದ್ದರೆ ಗಾಂಧಿಜೀಯ ಅನುಯಾಯಿಗಳ ಕೈಯಲ್ಲಾದರೂ ಅವು ಸದ್ವಿನಿಯೋಗವಾಗುತ್ತಿರುವುದು ಕಾಣಿಸುತ್ತಿಲ್ಲ. ಒಂದು ಪಾತ್ರವನ್ನು ಮೆಚ್ಚುವವರೆಲ್ಲರಿಗೂ ಆ ಪಾತ್ರಧಾರಿಗಳಾಗಲು ಸಾಧ್ಯವಿಲ್ಲ; ಒಬ್ಬನ ಮರ್ಜಿ ಮೆಚ್ಚುಗೆಯಾದವರೆಲ್ಲಾ ಅದೇ ಮರ್ಜಿಯವರೆನ್ನುವುದು ಅಸಾಧ್ಯ; ಗಾಂಧಿಜೀಯ ಅನುಯಾಯಿಗಳೆನಿಸಿಕೊಳ್ಳುವವರೆಲ್ಲರೂ ಗಾಂಧೀ ತತ್ವಾನುಕರಣೆ ಮಾಡಲಾರರು; ಮಾಡುತ್ತಿಲ್ಲ. ಈ ಮಟ್ಟಿಗೆ ತತ್ವಾನುಯಾಯಿಗಳು ಮತ್ತು ತತ್ವಾನ್ಯಾಯಿಗಳು ಎನ್ನಿಸಿಕೊಳ್ಳುವವರಲ್ಲಿ ವಿಶೇಷ ವ್ಯತ್ಯಾಸವೇನೂ ಇಲ್ಲ. ಬಲವು ಮತ್ತು ವಿರೋಧವೆಂಬುದು ಕೇವಲ ಭಾವನೆ ಯೋಚನೆಗಳಿಗೆ ಸಂಬಂಧಿಸಿದ್ದರೆ, ಗಾಂಧೀ ತತ್ವವನ್ನು ನಿಷ್ಠೆಯಿಂದ ಅನುಕರಿಸುವ ವಿಷಯವು ಅವರವರ ಶಕ್ತಿ ಯೋಗ್ಯತೆಗೆ ಸಂಬಂಧಿಸಿದುದು. ಈ ಯೋ

Parent's Proud Privilege.

Is there a better shrine before which a father and mother may kneel than that of a sleeping child? To grow up sympathetically with a child, to hold its love and confidence, to be a companion and playmate and to guarantee his future with plans ensuring that he will have every chance of a happy and prosperous life. This is a goal towards which every parent can strive with the greatest happiness

We have various plans that will Ensure Your Children's Happiness.

The Canara Mutual Assurance Co. Ltd.

ESTD: 1935. H. O. UDIPI.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.

Advocate & President, District Board, S. Kanara.

CHAIRMAN

ಸ್ಯಾತಿಯಾದರೋ ಆತ ಕೇವ ಸಂಸ್ಥೆ ಹಿಡಿಸಿದ್ದಾರೆಂದಾಗಲೀ ಧರಿಸಿರುವಂಥಹುದಲ್ಲವಾದ್ದರಿಂದ ಯಾವಾಗ ಕಡೆಯುವೆರಲ್ಲೂ ಅಸ್ಪಷ್ಟವೇ ಹೋಗಬಹುದು. ಹೀಗಾಗುವುದರಿಂದಾಗಿಯೇ ಇಂದು ಗಾಂಧಿಜೀಯನ್ನು ವಸ್ತುತಃ ಅನುಕರಿಸುವವರ ಸಂಖ್ಯೆ ತೀರಾ ತಗ್ಗಿದೆ; ಗಾಂಧಿಜೀ ಹಿಂದಿನ ಯುಗಗಳ ಅವತಾರ ಪುರುಷರ ಪಂಕ್ತಿಗೆ ಇಷ್ಟರಲ್ಲೇ ಸೇರಿ ಹೋದಂತಾಗಿದ್ದಾರೆ, ಮಹಾತ್ಮರು ಮಾಡಿಸಿದ್ದ ಕೆಲವು ಅಭ್ಯಾಸಗಳು ಮಾತ್ರ ಸುಲಭದಲ್ಲಿ ಬಿಟ್ಟು ಹೋಗುವಂತಹವಲ್ಲವಾದ್ದರಿಂದ ಉಳಿದುಕೊಂಡಿವೆ. ನಿದರ್ಶನಕ್ಕಾಗಿ ಕಾಂಗ್ರೆಸ್ ಸರಕಾರಗಳ ಇಂತಹ ಕೆಲವು ಆಚರಣೆಗಳನ್ನೇ ತೋರಿಸಬಹುದು, ವಿಶ್ವವಂಗಿಂತ ಹೆಚ್ಚಾಗಿ ಗಾಂಧಿಜೀಯ ಹೆಸರನ್ನು ಉಪಯೋಗಿಸುವ ಅಧಿಕಾರವಿರುವುದು ಕಾಂಗ್ರೆಸಿಗರಿಗೆ. ಕಾಂಗ್ರೆಸ್ ಸರಕಾರಗಳ ಗೌರವವನ್ನು ಉಳಿಸುವುದರಲ್ಲಿ ಈ ನಾಮ ಮಹಾತ್ಮೆಗೆ ದೊಡ್ಡ ಪಾಲಿದೆ. ಈ ಸರಕಾರಗಳಾದರೋ ಗಾಂಧಿಜೀ ಕಲಿಸಿಕೊಟ್ಟ ಪಾಠಗಳನ್ನು ಹಲವು ವಿಧಾನಗಳಿಂದ ನೆನಪಿಗೆ ತರುತ್ತಿವೆ. 'ವನಮಹೋತ್ಸವ' 'ಗೊಬ್ಬರ ದಿನಾಚರಣೆ' ಯಂತಹ ಆಚರಣೆಗಳ ನಿದರ್ಶನಗಳಿವೆ. ಸ್ವಾತಂತ್ರ್ಯ ಹೋರಾಟದ ವೇಳೆ ಗಾಂಧಿಜೀ ಆ ರಂಗಕ್ಕಿಳಿಸಿದ್ದ "ದಿನಾಚರಣೆ"ಗಳ ನಕಲಿಗಳಿವು ಎಂಬುದು ಸ್ಪಷ್ಟ. ಗಾಂಧಿಜೀಯ ಕಾಲದಲ್ಲಿ 'ಸ್ವಾತಂತ್ರ್ಯ ದಿನಾಚರಣೆ' 'ರಾಷ್ಟ್ರೀಯ ಸಪ್ತಾಹ' ದಂತಹವುಗಳಿಂದಾಗುವ ಜನಜಾಗ್ರತಿಯು ಮರೆತು ಹೋಗುವಂತಹುದಲ್ಲ. ಅಖಿಲ ರಾಷ್ಟ್ರದ ಜನತೆಯ ಮನಸ್ಸಿನ ಮೇಲೆ ಇಷ್ಟೊಂದು ಗಾಢ ಪರಿಣಾಮ ಮಾಡಬಲ್ಲ ಬೇರಾವ ವಿಧಾನವೂ ಈ ವರೆಗೆ ಕಂಡು ಹಿಡಿಯಲ್ಪಟ್ಟಿಲ್ಲ. ಆದ್ದರಿಂದ ಕಾಂಗ್ರೆಸ್ ಸರಕಾರಗಳಿಗೆ, ಏನಾದರೂ ಸಾರ್ವಜನಿಕ ಕೆಲಸವಾಗಬೇಕು, ಎಂದು ತೋರಿದೊಡನೆ ಜಪ್ತ ಗಾಂಧಿ ವಿಧಾನಗಳಿಗೇನೇ ಶರಣು ಹೋಗುತ್ತಿವೆ.

ಇದರ ಪರಿಣಾಮವೇನು?

ಗಾಂಧಿಜೀಯ ನಿರ್ದೇಶಕತ್ವದಲ್ಲಿ ಆ ಕಾಲದಲ್ಲಿ ನಡೆಯುತಿದ್ದ 'ದಿನಾಚರಣೆ'ಗಳಿಗೂ ಗಾಂಧಿಜೀಯಿಲ್ಲದ ಈ ಹೊಸ ಯುಗದಲ್ಲಾಗುತ್ತಿರುವ ಅಂತಹ ಆಚರಣೆಗಳಿಗೂ ಮಹದಂತರವಿದೆ, ಎಂಬುದನ್ನು ಹೇಳಬೇಕೆಂದಿಲ್ಲ. 1920-21ರ ಸುಮಾರಿಗೆ, ಗಾಂಧಿಜೀ 'ವಿದೇಶೀ ವಸ್ತ್ರ ಹೋಳಿ' ದಿನವನ್ನು ಸೂಚಿಸಿದ್ದಾಗ ರಾಷ್ಟ್ರದಲ್ಲೆದ್ದಿದ್ದ ಉತ್ಸಾಹಾವೇಶಗಳ ಸಾವಿರದೊಂದಂಶದಷ್ಟು ದಿವಸ ಗೊಬ್ಬರ ಸಪ್ತಾಹಾಚರಣೆಯ ಸೂಚನೆ ಬಂದಾಗ ಏಳಲಿಲ್ಲ. ಬಾರ್ಡೋಲಿ ತಾಲೂಕೊಂದರಲ್ಲಿ ಗಾಂಧಿಜೀ ಕರನಿರಾಕರಣೆ ಮಾಡಿಸುವರೆಂದು ತಿಳಿದು ಬಂದೊಡನೆ, ಅಖಿಲ ರಾಷ್ಟ್ರವು ಆ ಕಡೆಗೆ ಆತುರಾಸಕ್ತಿಯಿಂದ ಕತ್ತು ನೀಡಿದ್ದಂತೆ, ಅಖಿಲ ಭಾರತ ಸ್ವರೂಪದ ಹಲವು ಮುಷ್ಕರಗಳೆದ್ದರೂ ಒಮ್ಮೆ ಕೂಡಾ ರಾಷ್ಟ್ರವಾ ಕಡೆಗೆ ಆಕರ್ಷಿಸಲ್ಪಟ್ಟುದಿಲ್ಲ. ಈ ಭರತ—ಇಳಿತಕ್ಕೆ ಕಾರಣಗಳೇನೆಂಬುದು ಮೇಲ್ಗಡೆ ಬಂದಿವೆ. ಗಾಂಧಿಜೀಯಿಲ್ಲದಿರುವಂತೆಯೇ ಗಾಂಧಿಜಿಯದಾಗಿದ್ದ ಕಾಲ ಮತ್ತು ಸ್ಥಿತಿಗಳು ಕೂಡಾ ಈಗ ಇಲ್ಲದಿರುವುದೇ ಕಾರಣ. ಮಹಾತ್ಮರ ಶರ್ತ ಪ್ರಕಾರ ಆ ಸ್ವೀಕರಿಸುವ ಅನ್ಯಾಯದ ಮೇಲೆಯೇ ನಿಲ್ಲಬೇಕಾದ ಈ ಆಚರಣಾ ಮಂದಿರಗಳು ಈಗ ಆ ಕಳಕಟ್ಟನಲ್ಲೇಯುತ್ತಿಲ್ಲ; ಸಂದರ್ಭ ನೋಡಿ ಅವುಗಳನ್ನು ಸ್ವತಃ ಬೆನ್ನಲ್ಲಿ ಹೊತ್ತು ನಿಲ್ಲುವ ಮೂಲಪುರುಷ ಗಾಂಧಿಜೀ ಈಗ ಇಲ್ಲ. ಸ್ವಾತಂತ್ರ್ಯ ಸಂಪಾದನೆ, ಪರರಾಷ್ಟ್ರೀಯರೆದಿರಲ್ಲಿ ರಾಷ್ಟ್ರೀಯ ಭಾವನೆಯ ಪ್ರದರ್ಶನದಂತಹ ಆಕರ್ಷಣೆಗಳು ಕೂಡಾ ಈಗಿನ ಆಚರಣೆಗಳ ಮಟ್ಟಿಗಿಲ್ಲ. ಆತ್ಮಬಲದ ಸ್ಥಾನದಲ್ಲಿ ದೈಹಿಕ ವ್ಯಾಯಾಮವನ್ನಿಡುವಂತಹ— ದೇಶಸೇನಾ ಕಲ್ಪತರುವಿನ ಬದಲಿಗೆ ಕಾಡು ಮರಗಿಡಗಳನ್ನು ನೆಡುವಂತಹ—ದಾಸ್ಯಕ್ಕೆ ಕುಳಿ ತೋಡುವ ಬದಲಿಗೆ ಗೊಬ್ಬರ ಹೊಂಡಗಳನ್ನು ಅಗೆಯುವಂತಹ—ಮಟ್ಟಕ್ಕೆ ಈ ಆಚರಣೆಗಳೀಗ ಇಳಿದಿವೆ. ಪ್ರೇರಣೆ ಕೊಡುವ ಬದಲಿಗೆ ಆಜ್ಞೆ ಹೊರಡಿಸಿ ಇವುಗಳನ್ನು ಆಚರಣೆಯಲ್ಲಿ ಇಡಲಾಗುತ್ತಿದೆ. ತದನುಗುಣವಾಗಿ ಸ್ವಯಂಚೇತನ ಮತ್ತು ಸ್ಫೂರ್ತಿಯಿಂದ ಇವುಗಳಾಚರಿಸಲ್ಪಡುವ ಬದಲಿಗೆ ಯಾಂತ್ರಿಕವಾಗಿ, ನಾಮ ಮಾತ್ರಕ್ಕಾಗಿ ಆಚರಣೆಯುಳ್ಳಿವೆ ಅಂತೂ ದಿನಾಚರಣೆಗಳ ಪ್ರಭಾವ ಮತ್ತು ಪರಿಣಾಮ, ಎರಡೂ ಈ ಕಾಲದಲ್ಲಿ ಕಳೆದುಹೋಗಿವೆ, ಎಂಬುದು ಸ್ಪಷ್ಟ. ಹೀಗಾದುದರ ಕಾರಣಗಳನ್ನು ಕಂಡು ಹಿಡಿದ ಮೇಲೆ ಇನ್ನೂ ಹೀಗೇಕೆ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತಿದೆ. ಅಧಿಕಾಧಿಕ ಗೊಬ್ಬರ ಮತ್ತು ಮರಗಿಡಗಳಾಗಬೇಕಾದರೂ ಗಾಂಧಿಜೀ ರಾಷ್ಟ್ರೀಯತಾ ಭಾವನಾ ನಿರ್ಮಾಣಕ್ಕಾಗಿ ಕಲಿಸಿದ್ದ ವಿಧಾನಗಳನ್ನೇ ಅನುಸರಿಸಬೇಕೆ? ಅದೂ ಸರಕಾರೀ ಆಜ್ಞೆ, ಸೂಚನೆಗಳ ಮೂಲಕ ಈ ಅನುಕರಣೆಯೆಂದರೆ? ಇದಕ್ಕೂ ಕಾರಣಗಳಿವೆ. ಮೊದಲನೆಯದಾಗಿ ಭಾರತದ ಅಂದಿನ ಸ್ಥಿತಿಗತಿಗಳಂತೆಯೇ ಭಾರತೀಯರ ಹುಟ್ಟು ಸ್ವಭಾವವೆಂತಹದೆಂಬುದನ್ನು ನೋಡಿಕೊಂಡೇ ಗಾಂಧಿಜೀ ಈ ಹೊಸ ವಿಧಾನಗಳನ್ನು ಜಾರಿಯಲ್ಲಿ ತಂದಿದ್ದರು; ಆದ್ದರಿಂದ ಕಾಲಸ್ಥಿತಿ ಬದಲಾದರೂ ಭಾರತೀಯರ ಮನೋಸ್ಥಿತಿ ಅಷ್ಟೊಂದು ಬದಲಾಯಿಸಿಲ್ಲವಾದುದರಿಂದ ಈಗಲೂ ಈ ವಿಧಾನಗಳಲ್ಲೊಂದು ಮೋಹಕತೆಯಿದ್ದೇ ಇದೆ. ಅಂದಿನಿಂದಿರುವ ಅಭ್ಯಾಸ ಮತ್ತೀಗಿನ ಆಜ್ಞೆಗಳ ಬಲದಿಂದ ಇಂತಹ 'ದಿನಾಚರಣೆ'ಗಳು ಹೇಗೂ ಜರಗದೆ ನಿಲ್ಲುವುದಿಲ್ಲ. ರಾಷ್ಟ್ರೀಯತಾ ಉಬ್ಬರಕ್ಕಾಗಿ ಮಾಡಿದುದನ್ನೇ ಮರ, ಗೊಬ್ಬರಕ್ಕಾಗಿಯೂ ಮಾಡದೆ, ಭಿನ್ನ ವಿಧಾನಗಳನ್ನು ಮುಂದಿಡಬಹುದೆಂದರೆ, ಅಂತಹ ಹೊಸ ಪ್ರಯೋಗಕ್ಕೆ ಪ್ರಾಮುಖ್ಯತೆ ದೊರಕಿಸಿ ಕೊಡಬಲ್ಲ ಪ್ರಭಾವಶಾಲಿ ವ್ಯಕ್ತಿತ್ವವುಳ್ಳವರು—ಗಾಂಧಿಜೀಯಂಥವರು—ಈಗ ಇಲ್ಲ. ಎಲ್ಲರೂ ತಮ್ಮ ಸ್ಥಿತಿಮತಿ ಯೋಗ್ಯತಾನುಸಾರವಾಗಿ ನಡೆ, ನುಡಿಗಳನ್ನು ಪ್ರದರ್ಶಿಸುತ್ತಿರುವಾಗಲೇ ಗಾಂಧಿಜೀಯ ಹೆಸರು ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳಲು ಆತುರಿಸುವವರು. ಹೀಗಾಗಿ ಇಂದಿನ ಚಟುವಟಿಕೆಗಳು ಅವುಗಳ ಸ್ವರೂಪ ಮತ್ತು ಸ್ವಭಾವದ ಮೇಲಿನಿಂದ ಗಾಂಧೀ ವಿಧಾನಗಳನ್ನು ಅಣಕಿಸುತ್ತಿವೆ ಮಾತ್ರ. "ವನಮಹೋತ್ಸವ" "ಗೊಬ್ಬರ ಸಪ್ತಾಹ"ದಂತಹ ಆಚರಣೆಗಳಿಂದ ಹೆಚ್ಚಿಸಿದ ಮರಗಿಡಗಳನ್ನು ಮತ್ತು ಗೊಬ್ಬರ ಹೊಂಡಗಳನ್ನು ಯಾವ 'ಉತ್ಸವ ಗದ್ದಲ'ವೂ ಇಲ್ಲದೆ ಸ್ವಯಂಪ್ರೇರಣೆಯಿಂದ ಜನರು ತಾವಾಗಿ ನಿರ್ಮಿಸಿಕೊಳ್ಳುವಂತೆ ಮಾಡುವ ಅನ್ಯ ವಿಧಾನಗಳು ಸರಕಾರದ ಮುಂದಿರಬಾರದೆಂದಿಲ್ಲ. ಸ್ವಯಂಬುದ್ಧಿಯಿಂದಾಗುವ ಆ ಕಾರ್ಯಗಳು ಒಂದು ರೀತಿಯ ಒತ್ತಾಯಕ್ಕೊಳಗಾಗಿ ನಡೆಯುವ ಈಗಿನ ಕೆಲಸಗಳಿಗಿಂತ

ಹೆಚ್ಚು ಶಾಶ್ವತವಾಗಬಹುದು; ಸುರಕ್ಷಿತವಾಗಬಹುದು. ಆದರೆ ಜನಸಾಮಾನ್ಯರಲ್ಲಿ ಅಂತಹ ಸ್ವಯಂಸ್ಫೂರ್ತಿಯನ್ನು ನಿರ್ಮಿಸುವುದು 'ಸಪ್ತಾಹ'ಗಳನ್ನು ಜರಗಿಸುವಷ್ಟು ಸುಲಭವಲ್ಲ. ಕಾಂಗ್ರೆಸ್ ಸರಕಾರಗಳಲ್ಲಿರುವವರೂ ಗಾಂಧೀ ವಿಧಾನಗಳ ಅಭ್ಯಾಸವಾದವರೇ. ತಮ್ಮ ಸ್ವಭಾವಾನುಸಾರವಾಗಿ ಅವರು ಆ ವಿಧಾನಗಳನ್ನೇ ಅನುಕರಿಸುವ—ಅಥವಾ ಸದ್ಯಸ್ಥಿತಿಯಲ್ಲಿ ಕೇವಲ ಅಣಕಿಸುವ—ಹವ್ಯಾಸ ಕೈಕೊಳ್ಳುತ್ತಾರೆ. ಹೀಗಾಗುವುದರಿಂದ ಪ್ರಚಾರ ದೃಷ್ಟಿಯಿಂದ ಸಾಕಷ್ಟು ಕೆಲಸವಾಗುತ್ತದೆ; ಕಾರ್ಯದೃಷ್ಟಿಯಿಂದ ಅಲ್ಪಾಂಶ ನೆರವೇರುತ್ತದೆ; ಏನೂ ಇಲ್ಲದಿರುವುದಕ್ಕಿಂತ ಇಷ್ಟಾದರೂ ಇರುವುದು ವಾಸಿಯೆನ್ನುವಾಗಲೇ, ಜನಸಾಮಾನ್ಯರಲ್ಲಿ ಸ್ವಯಂ ಕಾರ್ಯಪ್ರೇರಣೆ ಹುಟ್ಟಿಸುವ ಕೆಲಸಗಳೂ ಜತೆಯಲ್ಲೇ ಆಗಬೇಕಾದುದು ಅಗತ್ಯವೆನ್ನದೆ ನಿರ್ವಾಹವಿಲ್ಲ. ಕೇವಲ ದಿನಾಚರಣೆಗಳ ಮಟ್ಟಿಗೆ ಗಾಂಧೀ ವಿಧಾನಗಳ ನಕಲಿ ತೆಗೆಯುವುದರಿಂದ ತೃಪ್ತರಾಗದೆ ಗಾಂಧೀ ಭೋಧೆಯ ತಿರುಳಾಗಿರುವ ಕರ್ತವ್ಯನಿಷ್ಠೆ, ಸ್ವಾವಲಂಬನೆ, ಸ್ವಯಂಸಿದ್ಧಿ ತತ್ವಗಳನ್ನು ಜನತೆಯ ಹೃದಯದಲ್ಲಿ ಬೇರೂರಿಸಿ ಅವು ನಿತ್ಯಸ್ಥಿತಿಯಾಗಿ ಅಸ್ತಿತ್ವದಲ್ಲಿರುವಂತೆ ಮಾಡಬೇಕಾದುದು ಮುಖ್ಯ.

ನೋಟೀಸು

ಉಡುಪಿ ಶುಗರ್‌ಕೇನ್ ಗ್ರೋವರ್ಸ್ ಯೂನಿಯನ್ ಲಿಮಿಟೆಡ್.

ಇದರ, ಎಲ್ಲಾ ಮೆಂಬರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—ಸದ್ರಿ ಯೂನಿಯನನ್ನು ಬರ್ಖಾಸ್ತು (Wind up) ಮಾಡುವದು ಉತ್ತಮವೆಂತ ತಾರೀಕು 3-9-1950 ಮತ್ತು ತಾ 6-10-1950ರಲ್ಲಿ ನಡೆದ ಡೈರೆಕ್ಟರರ ಸಭೆಯಲ್ಲಿ ಅಭಿಪ್ರಾಯವಾಗಿದೆ. ಸದ್ರಿ ಅಭಿಪ್ರಾಯವನ್ನು ಆಲೋಚಿಸಿ ತೀರ್ಮಾನಿಸಲಿಕ್ಕೆ ಎಲ್ಲಾ ಮೆಂಬರರ ಒಂದು ಮಹಾಸಭೆಯು ತಾರೀಕು 5-11-1950ನೇ ಆದಿತ್ಯವಾರದ ದಿನ ಜರಗಬೇಕಾಗಿ ನಿಶ್ಚೈಸಿದೆ. ಸದ್ರಿ ಸಭೆಗೆ ಎಲ್ಲಾ ಮೆಂಬರರು ತಪ್ಪದೆ ಹಾಜರಾಗಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ

ಸಭೆ ಸೇರುವ ಸ್ಥಳ ದಿ ಎಗ್ರಿಕಲ್ಚರಿಸ್ಟ್ ಕೋಪರೇಟಿವ್ ಕ್ರೆಡಿಟ್ ಸೊಸೈಟಿ ಆಫೀಸು, ಕಲ್ಯಾಣಪುರ.

ಸಮಯ ಅಪರಾಹ್ನ ಗಂಟೆ 4

Bailur Vasudeva Rao,
President of the Union.

ಉಡುಪಿ, ತಾ. 7-10-1950.

ಉತ್ತರ ಕೊರಿಯದೊಳಗೆ ಧಾಳಿ —

ಜಾಗತಿಕ ರಂಗದಲ್ಲಿ ದ್ವಿಪಾಳಯ ಸ್ಪರ್ಧೆ ಮತ್ತು ಸಂಘರ್ಷ ಸಮರಗಳು ಕಳೆದ ದಿನಗಳಲ್ಲಿ ವಿಶೇಷ ಸ್ಫುಟಗೊಂಡು ತೋರಿವೆ. ಮೂರು ನಾಲ್ಕು ತಿಂಗಳುಗಳಿಂದ ಲೋಕದ ವಿಶೇಷಾಸಕ್ತಿಯ ಪ್ರಶ್ನೆಯಾಗಿರುವ ಕೊರಿಯ ಯುದ್ಧದ ಆದೃಷ್ಟವೀಗ ಬದಲಾಯಿಸಿದೆ; ಕಮ್ಯೂನಿಸ್ಟರ ಮೇಲಿನ ಸಂಯುಕ್ತ ರಾಷ್ಟ್ರಗಳ ಸೇನೆಗಳ ಯುದ್ಧ ಡಂಗುರದಲ್ಲೀಗ ವಿಜಯ ದುಂದುಭಿನಾದವೂ ಸೇರಿಕೊಂಡು ಕೇಳಿಸುತ್ತಿದೆ. ಇಂಡೋನೇಶಿಯ, ಇಂಡೋ ಚೈನಾ, ಪಾಕಿಸ್ತಾನ್—ಅಫ್ಘಾನ್ ಮುಂತಾದ ಸರಹದ್ದುಗಳ ಘರ್ಷಣೆಗಳೀಗ ಬಿರುಸುಗೊಂಡಿವೆ. ಒಟ್ಟಿನ ಮೇಲೆ ಅಂತರ್ರಾಷ್ಟ್ರೀಯ ರಂಗದಲ್ಲಿ ಈ ಬಾರಿ ಎಲ್ಲಕ್ಕಿಂತ ವಿಶೇಷವಾಗಿ ಕಂಡು ಬಂದಿರುವುದು ಗಡಿ ಸಂಬಂಧದ ಮೇಲಾಟಗಳೇ.

ಕೊರಿಯಾ ಸ್ಥಿತಿಗತಿ

ಕೊರಿಯ ಯುದ್ಧದ ಹಿಡಿಯು ಉತ್ತರ ಕೊರಿಯದ ಕಮ್ಯೂನಿಸ್ಟರ ಕೈಯಿಂದ ತಪ್ಪಿ, ದಕ್ಷಿಣ ಕೊರಿಯದ ಸಂಯುಕ್ತ ರಾಷ್ಟ್ರಗಳ ಸೇನೆಗಳ ಕೈಗೀಗ ಬಂದಿದೆ ಎಂಬುದು ಸ್ಪಷ್ಟ. ಈಗ ಉತ್ತರ ಕೊರಿಯದ ಆಕ್ರಮಣವನ್ನು ತಡೆಗಟ್ಟುವ ಪ್ರಶ್ನೆಯುಳಿದಿಲ್ಲ; ಉತ್ತರ ಕೊರಿಯವನ್ನು ಆಕ್ರಮಿಸಿಕೊಳ್ಳುವ ಸಾಹಸ ಮುಂದಿದೆ. ಕೊರಿಯದ ಕೃತಕ ವಿಭಜನೆಯನ್ನು ಅಲ್ಲಗಳೆಯುತ್ತ, ಅಖಂಡ ಕೊರಿಯದ ಸ್ಥಾಪನೋದ್ದೇಶದಿಂದ ಕಮ್ಯೂನಿಸ್ಟರು 38ನೇ ಮಧ್ಯಾಂತರ ಗೆರೆಯನ್ನು ದಾಟಿ ಆಗ ದಕ್ಷಿಣಕ್ಕೆ ನುಗ್ಗಿ ಬಂದಿದ್ದರೆ ಈಗ ಸಂಯುಕ್ತ ರಾಷ್ಟ್ರಗಳ ಸೇನೆಗಳು ಅದೇ ಅಖಂಡ ಕೊರಿಯದ ಸ್ಥಾಪನೆಗಾಗಿ, ಅದೇ ಗಡಿ ಗೆರೆಯನ್ನು ದಾಟಿ ಉತ್ತರಕ್ಕೆ ನುಗ್ಗಹತ್ತಿವೆ. ಹೋರಾಟನಿರತ ಪಕ್ಷಗಳೆರಡರ ಉದ್ದೇಶವೂ ಏಕರೂಪಿ; ಈ ಉದ್ದೇಶ ಸಾಧನೆಯಲ್ಲಿ ಕಮ್ಯೂನಿಸ್ಟರು ಗೆಲ್ಲುತ್ತಿದ್ದರೆ ಅಖಿಲ ಕೊರಿಯವು ಕಮ್ಯೂನಿಸ್ಟರ ವಶವಾಗುತ್ತಿತ್ತು. ಈಗ ಸಂಭವನೀಯವಾಗಿ ಕಾಣುತ್ತಿರುವಂತೆ ದಕ್ಷಿಣ ಕೊರಿಯದವರಿನ್ನು ಗೆದ್ದರೆ ಇಡೀ ಕೊರಿಯವು ಅಮೆರಿಕನ್ ಪಕ್ಷಪಾತಿಯಾಗುವುದು. ಅಂತೂ ಕೊರಿಯಾ ವಿಭಜನೆಗೆ ಇಕ್ಕಡೆಯವರೂ ವಿರೋಧವಿರುವುದೆಂದರೆ ಅದರ ಅರ್ಧಭಾಗದ ಬದಲಿಗೆ ಇಡಿಯನ್ನೇ ನುಂಗಬೇಕೆಂಬ ಆಸೆಯಿಂದಲೇ. ಕಮ್ಯೂನಿಸ್ಟ್ ಕೊರಿಯನಂಗಡಿಗಾಗಿ ಸಂಯುಕ್ತರಾಷ್ಟ್ರಗಳ ಸೇನೆಗಳನ್ನು ನಡೆಸುವ ಸರ್ವ ಸೇನಾನಿ ಅಧಿಕಾರವನ್ನು ಜನರಲ್ ಮೆಕಾರ್ಥರರಿಗಿತ್ತಿದ್ದ ಭದ್ರತಾ ಕೌನ್ಸಿಲಿನ ಜೂನ್ 27ನೇ ನಿರ್ಣಯಕ್ಕನುಸಾರವಾಗಿಯೇ ಜನರಲ್ ಮೆಕಾರ್ಥರರಿಗೆ 38ನೇ ಗಡಿಗೆರೆ ದಾಟಿ ಉತ್ತರಕ್ಕೆ ಧಾವಿಸುವ ಹಕ್ಕಿದೆ ಎಂದು ಸಂಯುಕ್ತರಾಷ್ಟ್ರಸಂಘದ ಅಧಿಕಾರಿಗಳ ಅಭಿಮತವಿದ್ದರಾದರೂ ಈ ಕುರಿತು ಭಿನ್ನಾಭಿಪ್ರಾಯಗಳು ಕಂಡುಬಂದಿದ್ದುವು. ಸಂಧಾನ ಸಾಧನೆಯ ಸರ್ವ ಪ್ರಯತ್ನಗಳನ್ನು ಮಾಡಿಕೊಳ್ಳದೆ, ಸಂಯುಕ್ತ ರಾಷ್ಟ್ರ ಸೇನೆಗಳು 38ನೇ ಗೆರೆಯಿಂದ ಉತ್ತರಕ್ಕೆ ಸರ್ವಥಾ ಹೆಜ್ಜೆಯಿಡಕೂಡದೆಂಬ ಸತ್ಸಿದ್ಧಾಭಿಪ್ರಾಯವನ್ನು ಭಾರತವು ವ್ಯಕ್ತಪಡಿಸಿದ್ದಿತು. ಜಗಳದ ಮೂಲ ಹೇತು 38ನೇ ಗೆರೆಯನ್ನು ಉಜ್ಜಿತೆಗೆದು ದಕ್ಷಿಣೋತ್ತರ ಕೊರಿಯಗಳನ್ನು ಒಂದುಗೂಡಿಸುವುದು ಅಗತ್ಯವೆಂಬುದು ನಿರ್ವಿವಾದವಾದರೂ, ಅದು ಬಲಪ್ರಯೋಗದಿಂದಾಗುವುದು ಅಪಾಯಕರವೆಂಬುದು ನಿಸ್ಸಂದೇಹ. ತಪ್ಪೇ ಆದರೂ ನಿಶ್ಚಯವಾಗಿ ಬಿದ್ದಿದ್ದ ಆ ಗಡಿಯನ್ನು ಮೀರಿ ಅಂದು ಕಮ್ಯೂನಿಸ್ಟರು ದಕ್ಷಿಣ ಕಡೆಗೆ ಮುಂದೊತ್ತಿದುದು ಅಪರಾಧವಾದರೆ ಇಂದು ಸಂಯುಕ್ತ ರಾಷ್ಟ್ರ ಸೇನೆಗಳು ಅದನ್ನು ದಾಟಿ ಉತ್ತರ ಕಡೆಗೆ ಮುಂದೊತ್ತುತ್ತಿರುವುದು ಅಪಾಯಕರ. ಈ ಪ್ರಳಯದ ಪರಿಣಾಮವಾಗಿ ಅಸ್ವತಂತ್ರವೊಂದು ರಾಷ್ಟ್ರ ಕೊರಿಯವು ಪತನ ಹೊಂದುವುದು ನಿಶ್ಚಯ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಪ್ರತೀಕಾರ ಭಾವನೆಯ ಪ್ರಯೋಗರಂಗವಾಗಿ ಆ ಸಣ್ಣ ರಂಗವನ್ನೀರೀತಿ ಉಪಯೋಗಿಸುತ್ತಿರುವುದು ಅಸ್ವಾದ ಎಲ್ಲಾ ರಾಷ್ಟ್ರಗಳಿಗೂ ಯಾತನಾತ್ಮಕವಾದುದು; ಮಾತ್ರವಲ್ಲ, ಉತ್ತರ ಕೊರಿಯದೊಳಗೆ ನುಗ್ಗಿದ ಸಂ. ರಾ. ಸೇನೆಗಳು ಆ ತುದಿ ವರೆಗೂ ಮುಂದೊತ್ತದೆ ತಮ್ಮ ಕೆಲಸ ಪೂರ್ಣಗೊಳಿಸಿಕೊಳ್ಳಲಾರವು. ಇತ್ತ ದಕ್ಷಿಣ ಕೊರಿಯದ ಸೇನೆಗಳು 38ನೇ ಗೆರೆಯ ಆಚೆಗೆ ಹೆಜ್ಜೆಯಿತ್ತುವುದರಲ್ಲಿವೆ, ಎನ್ನುವಾಗಲೇ ಅತ್ತ ಕಮ್ಯೂನಿಸ್ಟ್ ಚೈನವು ಉತ್ತರ ಕೊರಿಯಕ್ಕೆ ಸೇನೆಗಳನ್ನು ಕಳುಹಲು ನಿರ್ಧರಿಸಿತೆಂಬ ವಾರ್ತೆ ಬಂದಿದ್ದಿತು. ಏನಿಲ್ಲೆಂದರೂ ಉತ್ತರ ಕೊರಿಯದ ಉತ್ತರ ಮೂಲೆಯಲ್ಲಿರುವ ಚೈನಾ, ಮತ್ತು ರಶ್ಯಾ ತಮ್ಮ ಸರಹದ್ದಿನತ್ತ ಇದಿರು ಪಾಳಯದ ಸೇನೆಗಳು ವಿಜಯ ದುಂದುಭಿ ಬಾರಿಸಿಕೊಂಡು ಬರುವುದನ್ನು ಸಹನೆಯಿಂದ ಕಾಣುವಂತಿಲ್ಲ. ರಶ್ಯಾ ಮತ್ತು ಚೈನಗಳ ಮನಸ್ಸನ್ನು ನೋಯಿಸದಂತಹ ಜಾಗರೂಕತೆಯನ್ನು ವಹಿಸುವಷ್ಟು ನೈತಿಕಭಾವ ಜನರಲ್ ಮೆಕಾರ್ಥರರಿಗಿಲ್ಲ. ಉತ್ತರ ಕೊರಿಯದ ಕಮ್ಯೂನಿಸ್ಟರನ್ನು ಹದಕ್ಕೆ ತರುವುದೊಂದನ್ನಲ್ಲದೆ ಬೇರಾವ ಅತಿರೇಕವನ್ನೂ ಲವಮಾತ್ರವೂ ಮಾಡದಂತಹ ವಿಶೇಷ ಸಂಯಮವನ್ನು ಸಂ. ರಾ. ಸೇನೆಗಳು ಒಂದೊಮ್ಮೆಗೆ ಪ್ರದರ್ಶಿಸಿದರೂ ಅಖಿಲ ಕೊರಿಯವು ಅಮೆರಿಕದ ಬಗಲೊಳಗಾಗುವುದು—ತಮಗೂ ತಮ್ಮ ವೈರಿಗಳಿಗೂ ಸಮಾನ ಸರಹದ್ದು ನಿರ್ಮಾಣಗೊಂಡು ಜರ್ಮನಿಯಲ್ಲಾಗಿರುವ ಸ್ಥಿತಿಯೇ ಇಲ್ಲಿಯೂ ಒದಗುವುದು—ರಶ್ಯಕ್ಕೆ ಎಂದಿಗೂ ಸಹನೆಯಾಗದ ಸಂಗತಿ. ಆದ್ದರಿಂದ ಕೊರಿಯಾ ಯುದ್ಧವು ಉತ್ತರಕ್ಕೆ ಹೊರಳುತ್ತಾ ಹೋದಂತೆ ಲೋಕಾಪಾಯವು ಹೆಚ್ಚುತ್ತಾ ಹೋಗುವುದೆಂಬ ಅರ್ಥ ಕಟ್ಟಲಡ್ಡಿಯಿಲ್ಲ. ಬದಲಿಗೆ 38ನೇ ಗಡಿ ವರೆಗೆ ಕಮ್ಯೂನಿಸ್ಟರನ್ನಟ್ಟಿಕೊಂಡುಬಂದ ಸಂ. ರಾ. ಸೇನೆಗಳನ್ನು ಅಲ್ಲಿಯೇ ತಡೆದು ನಿಲ್ಲುವಂತೆ ವಿಧಿಸಿ, ಅಖಿಲ ಕೊರಿಯದ ಭವಿಷ್ಯ ತೀರ್ಮಾನಕ್ಕಾಗಿ ಉತ್ತರಕೊರಿಯಕ್ಕೂ ಕರೆಕಳುಹಿಸಿ, ರಶ್ಯಾ, ಚೈನಾ ಮತ್ತು ಆಸ್ಯದ ರಾಷ್ಟ್ರಗಳ ಅಭಿಮತಗಳಿಗೆ ವಿಶೇಷ ಪ್ರಾಮುಖ್ಯತೆ ಕೊಟ್ಟು ಶಾಂತ ವ್ಯವಸ್ಥೆಗಳನ್ನು ಸಂಯುಕ್ತರಾಷ್ಟ್ರ ಸಂಘವು ಕೈಕೊಳ್ಳುತಿದ್ದರೆ ಅದು ನಿಜಕ್ಕೂ ಲೋಕಶಾಂತಿ ಪಾಲನೆಯ ತನ್ನ ಕರ್ತವ್ಯಮಾಡಿದಂತಾಗುತಿತ್ತು. ಆದರೀಗ ದಕ್ಷಿಣ ಕೊರಿಯದ ರಕ್ಷಣೆ ಮಾಡಿದುದು ಮಾತ್ರವಲ್ಲ, ಉತ್ತರ ಕೊರಿಯದ ಆಕ್ರಮಣವನ್ನೂ ಸಂ. ರಾ. ಸೇನೆಗಳು ಕೈಕೊಂಡಿರು

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಧ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಂಶಿಕರು:—ಡಾ! ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಜೀವವಿಮೆಗಾಗಿ
ವಿಚಾರಿಸಿರಿ
ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.
(ಸ್ಥಾಪನೆ. 1934)
ಚೆಯರ್‌ಮೆನ್: ಶ್ರೀ. ಎಮ್ ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

— ಸಂ. ರಾ. ಸಂಘದ ನಿರ್ಧಾರ.

ವುದರಿಂದ ತಪ್ಪಿಗೆ ಪ್ರಾಯಶ್ಚಿತ್ತವನ್ನಷ್ಟೇ ಮಾಡಿ ಸುಮ್ಮಗಾಗದೆ, ತಪ್ಪುಗಾರನ ಮೇಲೆ ಪ್ರತೀಕಾರ ಸಾಧಿಸುವುದಕ್ಕೂ ಅಪ್ಪಣೆ ಕೊಟ್ಟಂತಾಗಿದೆ. ವೈರಸಾಧಕನೆಂದಿಗೂ ಶಾಂತಿಸಾಧಕನಾಗಲಾರ; ಕೊರಿಯದಲ್ಲಿ ವೈರ ಸಾಧಿಸಲು ಮನಸ್ಸು ಮಾಡಿರುವ ಜಾಗತಿಕ ಸಂಘಕ್ಕೂ ಹಾಗೆಯೇ. ಯಥಾರ್ಥ ಶಾಂತಿ ಪ್ರೇಮ ಪ್ರದರ್ಶಿಸಿದ ಭಾರತದ ಮಾತಿಗದು ಮನ್ನಣೆ ಕೊಡಲಿಲ್ಲ.

ಧಾಳಿಗೆ ಅನುಮತಿ

ದಕ್ಷಿಣ ಕೊರಿಯ ರಣರಂಗಗಳ ಕೆಲಸಗಳನ್ನು ಜಯಶೀಲವಾಗಿ ಮುಗಿಸಿಕೊಂಡು 38ನೇ ಗಡಿ ವರೆಗೆ ಬಂದೊಡನೆಯೇ ಯಾರ ಸಲಹೆ ಅಥವಾ ಸೂಚನೆಯನ್ನೂ ಕಾಯದೆ, ಜನರಲ್ ಮೆಕರ್ಥರರು ಉತ್ತರ ಕೊರಿಯದ ಸೇನೆಗಳು ಎಲ್ಲಿದ್ದರೂ ಶರಣಾಗಬೇಕೆಂಬ ಎಚ್ಚರಿಕೆ ರವಾನಿಸಿದ್ದರು. ಅದು ಉತ್ತರಕೊರಿಯದಲ್ಲಿರುವ ಕಮ್ಯೂನಿಸ್ಟ್ ಸೇನೆಗಳಿಗೂ ಅನ್ವಯಿಸುತ್ತದಲ್ಲಾ ಎಂಬ ತರ್ಕ ಮಾಡುವಾಗಲೇ ಜನರಲ್ ಮೆಕರ್ಥರರ ಸೇನೆಗಳು ಗಡಿಗೆರೆ ದಾಟಿ ಮುಂಧಾವಿಸಿದ ವಾರ್ತೆಗಳು ಬಂದಿದ್ದುವು. ಉತ್ತರ ದಕ್ಷಿಣಗಳ ನಟ್ಟನಡುವಿನ ಪ್ರಾಕೃತಿಕ ಗಡಿಯಂತಿರುವ ನಿಮ್ಜಿನ್ ಹೊಳೆಯನ್ನು ಮೇಕರ್ಥರ್ ಸೇನೆಗಳು ದಾಟಿದ್ದುವು. 38ನೇ ಲೈನಿಗಾವ ಬೆಲೆಯನ್ನೂ ಕೊಡದೆ, ಯುದ್ಧದ ಒಂದು ಅಧ್ಯಾಯವನ್ನು ಮುಗಿಸಿ ದಾಟಿದವರು, ಎರಡನೇ ಅಧ್ಯಾಯಕ್ಕೆ ಕೈಯಿಕ್ಕುವ ಮೊದಲು ಅನುಭವಿಸಬೇಕಾದ ಸಹಜ ವಿರಾಮಕ್ಕಾಗಿ ಮತ್ತು ಮರುಸಂಘಟನೆಗಾಗಿ ಮಾತ್ರ ಸಂ. ರಾ. ಸೇನೆಗಳು ಆ ಗಡಿಯಲ್ಲಿ ತುಸು ತಡೆದು ಪುನಃ ಮುಂದಡಿಯಿಡಹತ್ತಿವೆ. ಈ ನಡುವೆ 38ನೇ ಗಡಿಗೆರೆಯನ್ನು ದಾಟುವ ಸಂಬಂಧದ ಸ್ಪಷ್ಟೀಕರಣವನ್ನು ಜನರಲ್ ಮೇಕರ್ಥರರು ಭದ್ರತಾ ಕೌನ್ಸಿಲಿನಿಂದ ಯಾಚಿಸಿದ್ದರು. ಅಂತಹ ಅಧಿಕಾರವೀಗ ಸಂಯುಕ್ತರಾಷ್ಟ್ರ ಸಂಘದ ಮಹಾ ಸಭೆಯಿಂದಲೇ ಈ ಸೇನಾನಿಗೆ ಸ್ಪಷ್ಟವಾಗಿ ಕೊಡಲ್ಪಟ್ಟಿದೆ. ಬ್ರಿಟನ್ನಿನ ಮುಂದಾಳುತ್ವದಲ್ಲಿ ಎಂಟು ರಾಷ್ಟ್ರಗಳು ತಯಾರಿಸಿದ ಕೊರಿಯದ ಭವಿಷ್ಯ ಸಂಬಂಧದ ನಿರ್ಣಯವು ಸಂ. ರಾ. ಸಂಘದ ಮಹಾಧಿವೇಶನದಲ್ಲಿ ಮಂಜೂರಾಗಿದೆ: 'ಅಖಿಲ ಕೊರಿಯದಲ್ಲಿ ಭದ್ರತಾ ಸ್ಥಿತಿ ಸ್ಥಾಪನೆಗಗತ್ಯವುಳ್ಳ ಸರ್ವ ಕಾರ್ಯಕ್ರಮಗಳನ್ನು ಕೈಕೊಳ್ಳತಕ್ಕದ್ದು—ಕೊರಿಯದಲ್ಲಿ ಏಕೀಕೃತ, ಸ್ವತಂತ್ರ ಹಾಗೂ ಪ್ರಜಾಸತ್ತಾತ್ಮಕ ಸರಕಾರವನ್ನು ಸ್ಥಾಪಿಸಲು, ಸಂಯುಕ್ತರಾಷ್ಟ್ರಸಂಘದ ವತಿಯಿಂದ ಚುನಾವಣೆಗಳನ್ನು ನಡೆಸುವ ಸಮೇತ ಎಲ್ಲಾ ಶಾಸನಬದ್ಧ ಕಾರ್ಯಗಳನ್ನು ಕೈಕೊಳ್ಳತಕ್ಕದ್ದು—ಕೊರಿಯದಲ್ಲಿ ಶಾಂತಿಸ್ಥಾಪಿಸಲು, ಚುನಾವಣೆಗಳನ್ನು ನಡೆಸಲು ಮತ್ತು ಏಕೀಕೃತ ಕೊರಿಯವನ್ನು ಅಸ್ತಿತ್ವದಲ್ಲಿ ತರಲು ಉತ್ತರ ಮತ್ತು ದಕ್ಷಿಣ ಕೊರಿಯಗಳ ಎಲ್ಲಾ ವಿಭಾಗಗಳವರು ಮತ್ತು ಪ್ರತಿನಿಧಿ ಸಂಘ ಸಂಸ್ಥೆಗಳವರು ಭಾಗವಹಿಸತಕ್ಕದ್ದು—ಈ ಹಂಚಿಕೆಯನ್ನು ಜಾರಿಗೆ ತರುವ ಉದ್ದೇಶ ಫಲಿಸಿದ ಮೇಲೆ ಸಂ. ರಾ. ಸೇನೆಗಳು ಕೊರಿಯದಲ್ಲಿ ನಿಲ್ಲತಕ್ಕದ್ದಲ್ಲ—ಕೊರಿಯದ ಆರ್ಥಿಕ ಪುನಸ್ಸ್ಥಾಪನೆಗಗತ್ಯವುಳ್ಳ ಎಲ್ಲಾ ಹಂಚಿಕೆಗಳನ್ನು ಕೈಕೊಳ್ಳತಕ್ಕದ್ದು—ಆಸ್ಟ್ರೇಲಿಯ, ಚಿಲಿ, ಹೊಲೆಂಡು, ಪಾಕಿಸ್ತಾನ್, ಫಿಲಿಪ್ಪಾಯಿನ್ಸ್, ಟರ್ಕಿ, ಥೈಲೇಂಡು, ಈ ಏಳು ರಾಷ್ಟ್ರಗಳುಳ್ಳ ಸಂ. ರಾ. ಸಂಘದ ಕಮಿಶನೊಂದನ್ನು ಕೊರಿಯದಲ್ಲಿ ಸ್ಥಾಪಿಸತಕ್ಕದ್ದು' ಎಂಬುದೇ ನಿರ್ಣಯದ ಸಾರ. ಈ ನಿರ್ಣಯಕ್ಕೆ ಸಂ. ರಾ. ಸಂಘದ ಮಹಾಸಭೆಯಲ್ಲಿ 47 ಅನುಕೂಲ ಮತಗಳು ದೊರೆತಿದ್ದುವು; ರಶ್ಯ ಮತ್ತು ಅದರ ಹಿಂಬಾಲಕ ರಾಷ್ಟ್ರಗಳ 5 ಪ್ರತಿಕೂಲ ಮತಗಳು ಬಿದ್ದಿದ್ದುವು. ಭಾರತ, ಈಜಿಪ್ಟ್, ಸಾವುದಿ ಅರೇಬಿಯ, ಯೆಮೆನ್, ಯುಗೊಸ್ಲೇವಿಯ, ಇಂಡೊನೇಶಿಯ, ಲೆಬನಾನ್ ಈ 7 ರಾಷ್ಟ್ರಗಳು ತಾಟಸ್ಥ್ಯ ವಹಿಸಿದ್ದುವು. ಉತ್ತರ ಕೊರಿಯ ಮತ್ತು ದಕ್ಷಿಣ ಕೊರಿಯಗಳ ಪ್ರತಿನಿಧಿಗಳನ್ನು ಆಮಂತ್ರಿಸಿ ಅಭಿಪ್ರಾಯ ಕೇಳಬೇಕು—ಕೊರಿಯದಿಂದ ಎಲ್ಲಾ ಪರದೇಶೀ ಸೇನೆಗಳೂ ಹಿಂತೆಗೆಯಬೇಕು—ಮುಂತಾಗಿ ಸೋವಿಯೆಟ್ ರಶ್ಯವು ಮುಂತಂದ ಸೂಚನೆಗಳೆಲ್ಲವೂ ಬಿದ್ದು ಹೋದುವು. ಕೊರಿಯಾ ಸಂಬಂಧದ ಇತ್ತಡೆಯ ನಿರ್ಣಯಗಳಲ್ಲಿ ಯಾವುದಕ್ಕೂ ಮತ ಕೊಡದೆ ಭಾರತವು ತಾಟಸ್ಥ್ಯ ವಹಿಸಿದ್ದಿತು. ಕೊರಿಯಕ್ಕಾಗಿ ನೇಮಿಸುವ ಸಪ್ತ ರಾಷ್ಟ್ರ ಕಮಿಶನಿನಲ್ಲಿ ಪ್ರಥಮತಃ ಭಾರತಕ್ಕೊಂದು ಸ್ಥಾನ ಕೊಡಲಾಗಿದ್ದಿತಾದರೂ ತನ್ನ ಸದ್ಯದ ಶಾಂತಿಸಾಧನಾ ಧೋರಣೆಯನ್ನು ವ್ಯಕ್ತಪಡಿಸಿ, ಭಾರತವದನ್ನು ನಿರಾಕರಿಸಿದುದರಿಂದಲೇ ಕೊನೆಗದನ್ನು ಥೈಲೇಂಡಿಗೆ ಕೊಡಲಾಗಿದೆ. ಆಸ್ಯಾದ ಅಗ್ರಗಣ್ಯ ಕಮ್ಯೂನಿಸ್ಟೇತರ ರಾಷ್ಟ್ರ ಭಾರತವು ಈ ಕಮಿಶನಿನಲ್ಲಿ ಸೇರಿಕೊಳ್ಳಲೊಪ್ಪದುದರಿಂದ ಸಂಯುಕ್ತ ರಾಷ್ಟ್ರ ಸಂಘ ವಲಯದಲ್ಲಿ ನಿರಾಶೆಯೆದ್ದಿದೆ. ಮೇಲಿನ ನಿರ್ಣಯಕ್ಕನುಸಾರವಾಗಿ 38ನೇ ಗಡಿಗೆರೆಯನ್ನು ದಾಟಿ ಉತ್ತರಕ್ಕೆ ಸಾಗುವ ಪ್ರೇರಣೆ ಮತ್ತು ಸ್ವಷ್ಟಾಧಿಕಾರ ಜನರಲ್ ಮೇಕರ್ಥರರಿಗೊದಗಿದೆ. ಉತ್ತರ ಕೊರಿಯದ ಮೇಲೆ ಮಹಾ ಧಾಳಿಯನ್ನು ಹೂಡುವ ಸಿದ್ಧತೆ ಮತ್ತು ಸಂಘಟನೆಗಳೀಗ ಸಂ. ರಾ. ಸೇನೆಗಳಲ್ಲಿ ನಡೆದಿರುವುದರಿಂದ ಅಲ್ಲಿನ್ನು ಘೋರತರ ಕಾಳಗಗಳನ್ನು ನಿರೀಕ್ಷಿಸಬಹುದು. ವಿರೋಧೀ ಮುಂಚೂಣಿ ದಳಗಳನ್ನು ತಡೆಗಟ್ಟಿ ಉತ್ತರ ಕೊರಿಯದವರು ಇಷ್ಟರಲ್ಲೇ ಕಠೋರ ಕಾಳಗ ಕೊಡಹತ್ತಿದ್ದಾರೆ; ಅವರೂ ಈಗ ಪ್ರಬಲ ಪ್ರತಿಭಟನೆಗೆ ತಯಾರಾಗುತ್ತಿರಬೇಕು. ರಶ್ಯಾ, ಚೈನಗಳು ಇದರಲ್ಲಿ ವಹಿಸುವ ಭಾಗವಾವುದೆಂಬುದು ಇನ್ನು ತಾನೇ ತಿಳಿದು ಬರಬೇಕು.

ಇತರ ಘಟನೆಗಳು

ಪಾಕಿಸ್ತಾನ್ ಮತ್ತು ಅಪ್ಘಾನಿಸ್ತಾನಗಳ ನಡುವಿನ ಗಡಿಸಂಬಂಧದ ಕಲಹವೀಗ ವಿಶೇಷ ಬೆಳೆದಿದೆ. ಕಳೆದ ತಿಂಗಳಾಂತ್ಯದಲ್ಲಿ ಅಪ್ಘಾನಿನ ಗುಡ್ಡಗಾಡು ಜನರ ಸಶಸ್ತ್ರ ಲಷ್ಕರ್ ದಳಗಳು ಅಪ್ಘಾನಿನ ಕ್ರಮಬದ್ಧ ಸೈನಿಕರನ್ನು ಕೂಡಿಕೊಂಡೇ ಡೊಬಾಂಡಿ ವಲಯದಲ್ಲಿ ಪಾಕಿಸ್ತಾನದ ಗಡಿದಾಟಿ ನುಗ್ಗಿಬಂದಿದ್ದುವೆಂದೂ, ಚಮಾನ್‌ವಲಯದಲ್ಲಿರುವ ಕ್ವೆಟ್ಟಾ-ಚಮಾನ್ ರೈಲ್ವೆಯನ್ನು ಸ್ವಾಧೀನಪಡಿಸಿಕೊಳ್ಳುವುದೇ ಅವುಗಳ ಪ್ರಥಮೋದ್ದೇಶವಾಗಿತ್ತೆಂದೂ ತಿಳಿದು ಬಂದಿದೆ. ಕೂಡಲೇ ಪಾಕಿಸ್ತಾನದ ನಾಗರಿಕ ಸಶಸ್ತ್ರ ದಳಗಳು, ಅವುಗಳನ್ನನುಸರಿಸಿ ಪಾಕಿಸ್ತಾನ್ ವಿಮಾನದಳದ ಸಹಾಯದೊಂದಿಗೆ ಪಾಕಿಸ್ತಾನ್ ಸೇನೆಗಳು ಧಾಳಿಯಿಟ್ಟು ಅಪ್ಘಾನಿ ಆಕ್ರಮಣಗಾರರನ್ನು ಗಡಿಯಿಂದ ಹಿಂದಕ್ಕಟ್ಟುತ್ತಾ ಹೋದ ವಾರ್ತೆಯಿದೆ. ಕೆಲ ತಿಂಗಳುಗಳಿಗೆ ಮೊದಲೊಮ್ಮೆ ಇದೇ ರೀತಿ ಅಪ್ಘಾನಿಗಳು ಪಾಕಿಸ್ತಾನದ ಗಡಿ ಮೀರಿ ನುಗ್ಗಿ ಬಂದು ಹೋರಾಟವಾಗಿ ಸಾವು ನೋವುಗಳಾಗಿದ್ದುವು. ಅಪ್ಘಾನಿಸ್ತಾನ್ ಸರಕಾರವು ತಮ್ಮ ಮೇಲಿನ ಈ ಆಕ್ರಮಣಾರೋಪಗಳನ್ನು ಅಲ್ಲಗಳೆದಿದೆ. ಈ ಸಂಬಂಧವಾಗಿ ಇದೇ ತಾ. 7ರಲ್ಲಿ ಪಾರ್ಲಿಮೆಂಟಿನ ಮುಂದೆ ಹೇಳಿಕೆ ಕೊಡುತ್ತಾ, ಪ್ರಧಾನಿ ಮಿ. ಲಿಯಾಖತ್ ಆಲೀಖಾನರು "ಪಾಕಿಸ್ತಾನ್-ಅಪ್ಘನಿಸ್ತಾನ್ ಸಂಬಂಧವು ಮತ್ತಷ್ಟು ಹಾಳಾಗಿದೆ"ಯೆನ್ನುತ್ತಾ, ಅಪ್ಘಾನಿಸ್ತಾನದ ಆಕಾಶವಾಣಿ ಮತ್ತು ಪತ್ರಿಕೆಗಳು ಪಾಕಿಸ್ತಾನದ ಕುರಿತು ಮಾಡುತ್ತಿರುವ ಅಪಪ್ರಚಾರಗಳನ್ನೂ ಗಡಿಯಲ್ಲಿ ಆಗಾಗ ನಡೆಯುತ್ತಿರುವ ಆಕ್ರಮಣಗಳನ್ನೂ ಪ್ರಸ್ತಾಪಿಸಿ, ಅಪ್ಘಾನ್ ಸರಕಾರದ ನಕಾರಾತ್ಮಕ ಅಥವಾ ತಿರಸ್ಕಾರ ಭಾವನೆಯನ್ನು ಖಂಡಿಸಿ ಮಾತಾಡಿದ್ದಾರೆ. ಪಾಕಿಸ್ತಾನದ ವಾಯುವ್ಯ ಗಡಿನಾಡು ಪ್ರಾಂತ್ಯವು ಫಕ್ತೂನಿಸ್ಥಾನವಾಗಿ ವಿಂಗಡಿಸಲ್ಪಡಬೇಕೆಂಬ ಚಳವಳವನ್ನಾಧರಿಸಿ ಪಾಕಿಸ್ತಾನ್ ಮತ್ತು ಅಪ್ಘಾನ್ ಸರಕಾರಗಳೊಳಗೆ ಇಂತಹ ವೈಶಮ್ಯ ಮತ್ತು ಘರ್ಷಣೆಗಳೇಳುತ್ತಿವೆ.

ಇತ್ತೀಚಿಗೆ ಸ್ವಾತಂತ್ರ್ಯಗಳಿಸಿಕೊಂಡು ನೊನ್ನೆ ತಾನೇ ಭಾರತದ ಸೂಚನೆಯಂತೆ ಸಂಯುಕ್ತ ರಾಷ್ಟ್ರಸಂಘದ ಸದಸ್ಯತ್ವವನ್ನೂ ಪಡೆದಿರುವ ಇಂಡೋನೇಶಿಯದ ದಕ್ಷಿಣ ಮೊಲಕ್ಕಾಸ್ ದ್ವೀಪಗಳಲ್ಲಿ ಕೇಂದ್ರ ಇಂಡೋನೇಶಿಯಾ ಸರಕಾರಕ್ಕೆ ವಿರುದ್ಧವಾಗಿ ಬಂಡಾಯವೆದ್ದು ಕಳೆದ ಏಪ್ರಿಲಿನಲ್ಲಿ ಪ್ರತ್ಯೇಕ ರಿಪಬ್ಲಿಕ್ ಸರಕಾರವು ಸ್ಥಾಪಿಸಲ್ಪಟ್ಟಿದೆ. ಈ ಪ್ರತ್ಯೇಕಾಡಳಿತೆಯ ವಿರುದ್ಧವಾಗಿ ಈಗ ಕೇಂದ್ರ ಇಂಡೋನೇಶಿಯಾ ಸರಕಾರವು ಸೇನಾ ಕಾರ್ಯಕ್ರಮ ಕೈಕೊಂಡಿದೆ. ತತ್ಸಂಬಂಧದ ಮಧ್ಯಸ್ಥಿಕೆಗಾಗಿ ನೇಮಿಸಲ್ಪಟ್ಟಿರುವ ಸಂಯುಕ್ತ ರಾಷ್ಟ್ರಸಂಘದ ಕಮಿಶನು ಇಂಡೋನೇಶಿಯಾ ರಿಪಬ್ಲಿಕ್ ದಕ್ಷಿಣ ಮೊಲಕ್ಕಸ್ ರಿಪಬ್ಲಿಕಿನ ಮೇಲೆ ಕೈಕೊಂಡಿರುವ ಧಾಳಿಯನ್ನು ನಿಲ್ಲಿಸಬೇಕೆಂದೂ, ವಿಳಂಬವಾದರೂ ಕೂಡಾ ಶಾಂತ ತೀರ್ಮಾನ ವಿಧಾನಗಳಿಂದ ಪ್ರಯುಕ್ತಿಸತಕ್ಕದ್ದೆಂದೂ ವಿಜ್ಞಾಪಿಸಿಕೊಂಡಿದೆ. ಮುಂದೆ ಹೇಗಾಗುವುದೋ ನೋಡಲಿಕ್ಕಿದೆ.

ಇತ್ತ ಫ್ರೆಂಚ್ ಇಂಡೋಚೈನದಲ್ಲೂ ಫ್ರೆಂಚ್ ಆಶ್ರಯದ ಆಡಳಿತೆ ಮತ್ತು ಕಮ್ಯೂನಿಸ್ಟ್ ಆಶ್ರಯದ ಇದಿರುವಾದಿ

(ಅನೇ ಪುಟ ನೋಡಿರಿ)

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

THE

Canara Banking Corporation Ltd.

(Incorporated in India)

Estd: 1906.

Head Office : UDIPI, (S. I)

Capital Authorised	Rs. 25,00,000
Capital Issued, Subscribed & Paid up	Rs. 20,00,000
Reserves	Rs. 9,44,765

ನವಯುಗ

ಗುರುವಾರ, ಉಡುಪಿ, ೧೨-೧೦-೫೦

ಚುನಾವಣಾ ಸಿದ್ಧತೆ

ಸ್ವತಂತ್ರ ಜನತಾರಾಜ್ಯ ಭಾರತದ ಪ್ರಥಮ ಮಹಾಚುನಾವಣೆಯು ಬರುವ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ನಡೆಯುವುದು ನಿಶ್ಚಯವೆಂದು ಈಗ ಹೇಳಬಹುದು. ಮತದಾರ ಯಾದಿಗಳ ತಯಾರೀ ಕಾರ್ಯಗಳು ಹೆಚ್ಚಿನಂತೆ ಮುಗಿದು, ಮತದಾರ ಕ್ಷೇತ್ರಗಳ ರಚನಾವ್ಯವಸ್ಥೆಗಳೀಗ ನಡೆದಿವೆ. "1951ನೇ ಎಪ್ರಿಲಿನಲ್ಲೇ ಸ್ವತಂತ್ರ ಭಾರತದ ಪ್ರಥಮ ಮಹಾ ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗುವಂತೆ ಕೆಲಸಗಳು ಕ್ಷಿಪ್ರಗತಿಯಿಂದ ಸಾಗಲಿ" ಎಂದು ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಎಲ್ಲಾ ಸಂಸ್ಥಾನಗಳ ಮತದಾರ ಕ್ಷೇತ್ರ ಪುನರ್ರಚನಾ ಸಮಿತಿಗಳನ್ನು ವಿಜ್ಞಾಪಿಸಿ ಕೊಂಡಿದ್ದಾರೆ. ಮದ್ರಾಸಿನ ಸಮಿತಿಯು ಕೇಂದ್ರ 'ಜನತಾ ಮಂದಿರ' ಮತ್ತು ಸಂಸ್ಥಾನಿಕ ಶಾಸನ ಸಭೆಯ ಮತದಾರ ಕ್ಷೇತ್ರವಿಭಾಗಗಳ ಕರಡು ಪ್ರತಿಯನ್ನು ತಯಾರಿಸಿದ್ದು, ಕಳೆದ ವಾರ ಮದ್ರಾಸ್ ಎಸೆಂಬ್ಲಿಯಲ್ಲಿ ಆ ಕುರಿತು ಮೂರು ದಿನಗಳ ತುರುಸಿನ ಚರ್ಚೆ ನಡೆಯಿತು. ತತ್ಪರಿಣಾಮವಾಗಿ ಮೂಲ ವಿಧಾನಗಳಲ್ಲಿ ಕೆಲವೊಂದು ಬದಲಾವಣೆಗಳಾಗುವ ಸಂಭವವಿದೆ. ಚುನಾವಣೆಗಳನ್ನು ನಡೆಸುವ ಕ್ರಮನಿಯಮ, ರೀತಿನೀತಿ ಮತ್ತು ಉಮೇದ್ವಾರಿಗಳ ಗುಣಯೋಗ್ಯತೆಗಳನ್ನು ನಮೂದಿಸಿರುವ ಮಸೂದೆಯ ಕರಡು ಪ್ರತಿಯನ್ನು ಭಾರತ ಸರಕಾರವು ಪ್ರತಿಯೊಂದು ಸಂಸ್ಥಾನ ಸರಕಾರಕ್ಕೂ ಕಳುಹಿದ್ದು, ತತ್ಸಂಬಂಧವಾಗಿ ಸೂಚನೆಗಳನ್ನು ಸಂಸ್ಥಾನ ಸರಕಾರಗಳಿಂದ ಆಹ್ವಾನಿಸಿದೆ. ಯಾವುದೇ ಬಾಡಿಗೆ ವಾಹನಗಳನ್ನು ಕಳುಹಿಸಿ ಮತದಾರರನ್ನು ತರಿಸಿಕೊಳ್ಳುವುದು– ರಾಷ್ಟ್ರಧ್ವಜ, ಚರಕ, ಗಾಂಧೀಜೀಯ ಭಾವಚಿತ್ರ ಮುಂತಾದ ರಾಷ್ಟ್ರೀಯ ಅಥವಾ ಧಾರ್ಮಿಕ ಚಿಹ್ನೆಗಳನ್ನು ಉಪಯೋಗಿಸುವುದು– ಮುಂಬರುವ ಚುನಾವಣೆಯಲ್ಲಿ ನಿಷೇಧಿಸಲ್ಪಡುವ ಸಂಭವವಿದೆ. 'ಜನತಾ ಪ್ರಾತಿನಿಧ್ಯ ಶಾಸನ'ದ ಈಗಿನ ನಿಬಂಧನೆಗಳನ್ವಯ ಮತದಾರ ಕ್ಷೇತ್ರಗಳ ಗಡಿ ರಚನೆಯಾಗಿಕೊಳ್ಳದೆ ಮತದಾರಯಾದಿಗಳನ್ನು ಪ್ರಕಟಿಸಲಾಗುವುದಿಲ್ಲ. ಮತದಾರ ಕ್ಷೇತ್ರಗಳ ಗಡಿ ನಿರ್ಣಯಗಳೀವರೆಗೆ ಪೂರ್ಣಗೊಳ್ಳದಿರುವುದರಿಂದ ಈಗ ತಯಾರಾಗುತ್ತಾ ಬಂದಿರುವ ಮತದಾರ ಪಟ್ಟಿಗಳನ್ನು ಕೂಡಲೇ ಪ್ರಕಟಿಸಲು ಈ ದೆಸೆಯಿಂದ ತಡೆಯುಂಟಾಗಿದೆ. 1951ನೇ ಎಪ್ರಿಲ್-ಮೇ ತಿಂಗಳಲ್ಲೇ ಚುನಾವಣೆ ಜರಗಿಸಲಾಗುವಂತೆ ಈ ತೊಡಕನ್ನು ನಿವಾರಿಸಿಕೊಳ್ಳುವುದಕ್ಕಾಗಿ 'ಜನತಾ ಪ್ರಾತಿನಿಧ್ಯ ಕಾನೂನಿ'ನಲ್ಲಿ ಅಗತ್ಯವುಳ್ಳ ತಿದ್ದುಪಡಿಗಳನ್ನು ಮಾಡಿ ಕೊಳ್ಳಲು ಭಾರತ ಸರಕಾರವೀಗ ಮುಂದಾಗಿದೆ. "1950ನೇ ಅಂತ್ಯದೊಳಗೆ ಚುನಾವಣಾ ಸಂಬಂಧದ ಸಿದ್ಧತೆಗಳು ಮುಗಿಯುವದು ಅಸಂಭವ" ಎಂದು ಮೊದಲೊಮ್ಮೆ ಹೇಳಿದ್ದರೂ "ಪೂರ್ವ ತಯಾರಿ ಕಾರ್ಯದಲ್ಲಿ ಹಿಂದೆ ಬೀಳಬಹುದಾದ ಒಂದೆರಡು ಸಂಸ್ಥಾನಗಳ ಚುನಾವಣೆಗಳನ್ನು ಮುಂದರಿಸಬೇಕಾಗಿ ಬಂದರೂ ಕೂಡಾ ಮಿಕ್ಕೆಲ್ಲಾ ಕಡೆಗಳ ಮಹಾ ಚುನಾವಣೆಯು 1951ನೇ ಎಪ್ರಿಲ್ ಅಥವಾ ಮೇ ತಿಂಗಳಲ್ಲಿಯೇ ನಡೆಯ ಬಹುದು" ಎಂದು ಚುನಾವಣಾ ಕಮಿಶನರ್ ಶ್ರೀ ಯಸ್. ಸೆನ್ನರು ಈಗ ಹೇಳಹತ್ತಿದ್ದಾರೆ. ಅಂತೂ ಬರುವ ಎಪ್ರಿಲ್, ಮೇ ತಿಂಗಳಲ್ಲಿ— ಹೆಚ್ಚೆಂದರೆ ಇನ್ನು ಏಳುತಿಂಗಳುಗಳೊಳಗೆ —ಸ್ವತಂತ್ರ ಭಾರತದಲ್ಲಿ ಮಹಾ ಚುನಾವಣೆ ನಡೆಯಲಿವೆ.

ಬರಲಿರುವ ಈ ಚುನಾವಣೆಯು ಪ್ರಾಮುಖ್ಯತೆ, ಪರಿಣಾಮ ಮತ್ತು ಸ್ವರೂಪದ ಮೇಲಿಂದ ಅಸಾಮಾನ್ಯವಾದುದು. ಭಾರತವು ಸ್ವತಂತ್ರವಾದ ಮೇಲೆ, ಪ್ರತ್ಯಕ್ಷ ಜನಮತವನ್ನಾಧರಿಸಿ ಸರಕಾರ ನಿರ್ಮಾಣಗೊಳ್ಳುವ ಮಹಾಸಂದರ್ಭವಿದು. ಅಂದ ಮೇಲೆ ಇದೆಷ್ಟು ಪ್ರಾಮುಖ್ಯವಾದುದೆಂಬುದನ್ನು ಬೇರೆ ವರ್ಣಿಸಬೇಕಾಗಿಲ್ಲ; ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ವಿಶೇಷ ಸಂದರ್ಭವು ಭಾರತೀಯ ಜನಸಾಮಾನ್ಯರಿಗೆ ಈ ಮೂಲಕ ದೊರೆಯುವುದಾದ್ದರಿಂದ ರಾಷ್ಟ್ರದ ಅದೃಷ್ಟವೇ ಈ ಚುನಾವಣೆಯನ್ನು ಅವಲಂಬಿಸಿದೆ; ಹೀಗಾಗಿ ಪರಿಣಾಮದ ದೃಷ್ಟಿಯಿಂದಲೂ ಇದು ಅತಿ ಮಹತ್ವದ್ದಿದೆ. ಅದರ ಸ್ವರೂಪವಾದರೋ ಸರ್ವವ್ಯಾಪಿ. ಇಪ್ಪತ್ತೊಂದು ವರುಷಕ್ಕೆ ಮೇಲ್ಪಟ್ಟವರಿಗೆಲ್ಲರಿಗೂ ಮತಾಧಿಕಾರ ಬಂದಿದೆ; ಇಷ್ಟು ದೊಡ್ಡ ಮತದಾರ ಯಾದಿಯು ಇಡೀ ಲೋಕದಲ್ಲೇ ಬೇರಿಲ್ಲ. ಈ ರೀತಿ ಎಲ್ಲಾ ರೀತಿಯಿಂದಲೂ ಅಸಾಮಾನ್ಯವಾಗಿರುವ ಈ ಮಹಾ ಚುನಾವಣೆಯ ಸಿದ್ಧತೆಯನ್ನು ಕೇಂದ್ರ ಹಾಗೂ ಸಂಸ್ಥಾನಿಕ ಸರಕಾರಗಳು ತಮ್ಮಿಂದ ಸಾಧ್ಯವಿದ್ದಷ್ಟು ತ್ವರಿತದಿಂದ ನಡೆಸುತ್ತಿವೆ. ಈಗ ಸಂಕಲ್ಪಿಸಿರುವ ಅವಧಿಯಲ್ಲೇ ಚುನಾವಣೆಗಳನ್ನು ನಡೆಸಬೇಕಲ್ಲದೆ, ಎಷ್ಟಕ್ಕೂ ಹಿಂದೆ ಹಾಕಬಾರದು ಎಂದು ಪಂಡಿತ ನೆಹರು ಮತ್ತಿತರ ನಾಯಕರು ಛಲ ತೊಟ್ಟಂತಿದೆ. 'ರಾಷ್ಟ್ರದ ಸದ್ಯ ಸ್ಥಿತಿಯಲ್ಲಿ ಮಹಾ ಚುನಾವಣೆಗಳನ್ನು ಜರಗಿಸಲು ಆತುರಿಸಬಾರದು' ಎಂಬ ಅಭಿಪ್ರಾಯವು ಕಾಂಗ್ರೆಸಿನ ಕೆಲವು ವರ್ಗಗಳಲ್ಲಿದೆಯೆಂಬುದು ನಾಸಿಕ ಕಾಂಗ್ರೆಸ್ ಅಧಿವೇಶನದ ವೇಳೆ ತಿಳಿದು ಬಂದಿದ್ದರೂ ಪಂಡಿತ ನೆಹರು ಮೊದಲಾದವರಿಗೆ ಆ ಕುರಿತು ಅತುರವೆಂದೂ ಇಲ್ಲ. ಅಲ್ಲಿಯೇ ವ್ಯಕ್ತವಾಗಿದ್ದಿತು. "ಜನಪ್ರಿಯತೆಯನ್ನು ಕಳಕೊಂಡಿರುವ ಕಾಂಗ್ರೆಸಿಗರಿಗೆ, ಮತದಾರರನ್ನು ಇದಿರಿಸುವ ಧೈರ್ಯವಿಲ್ಲದೆ, ಈಗಿನ ಅಧಿಕಾರವನ್ನು ಉಳಿದಷ್ಟು ಕಾಲ ಅನುಭವಿಸುವ ಆಶೆಯಿಂದ ಅವರು ಚುನಾವಣೆಯನ್ನು ಹಿಂದೂಡುತ್ತಿದ್ದಾರೆ" ಎಂಬ ಆರೋಪವು, ಕಾಂಗ್ರೆಸ್ ವಿರೋಧಿಗಳಿಂದ ಇಷ್ಟರಲ್ಲೇ ಕೇಳಿಬಂದಿದೆ. ಸ್ವಾತಂತ್ರ್ಯ ಸ್ಥಾಪನೆಯಾಗಿ ಮೂರು ವರುಷಗಳಗೂ ಮಿಕ್ಕಿ ಕಳೆದಿರುವಾಗ—ವಿಶೇಷ ರೀತಿಯ ತಡೆತೊಡಕುಗಳೇನೂ ಇಲ್ಲದಿರುವಾಗ—ಹೊಸ ರಾಜ್ಯ ಘಟನೆಯನ್ವಯ ಮಹಾ ಚುನಾವಣೆಗಳನ್ನು ಆದಷ್ಟು ಬೇಗ ನಡೆಸಲು ಸರಕಾರವು ಮನಸ್ಸು ಮಾಡುವುದು ಸ್ವಾಭಾವಿಕ. ಚುನಾವಣೆಗೆ ಸಂಬಂಧಪಟ್ಟ ಸರ್ವವ್ಯವಸ್ಥೆಗಳೂ ಹೊಸತಾಗಿ ನಡೆಯಬೇಕಾಗಿದ್ದುದರಿಂದ ವಿಳಂಬವಾಗುವುದು ಸಹಜವಾದರೂ ಅದನ್ನು ಕಡಿಮೆ ಮಾಡಿಕೊಳ್ಳುವ ಆಗ್ರಹವು ಸರಕಾರೀ ನಾಯಕರಲ್ಲಿ ಕಂಡುಬರುತ್ತಿದೆ. ಆರೋಪ, ಆಕ್ಷೇಪಗಳಿಂದ ತಪ್ಪಿಸಿಕೊಳ್ಳಬಲ್ಲ ಕಾರ್ಯವೊಂದಿಲ್ಲ. "ಕಾಂಗ್ರೆಸಿಗರು ಚುನಾವಣೆಗಂಜುತಿದ್ದಾರೆ" ಎಂದವರೇ "ತಮ್ಮ ಕಾಲಡಿ ಇಷ್ಟರಲ್ಲೇ ಜಾರುತ್ತಿರುವುದನ್ನು ಗಮನಿಸಿ, ಇನ್ನೂ ವಿಳಂಬವಾದರೆ ತಮಗೆ ಇನ್ನಷ್ಟು ಹಾನಿಯೆಂಬುದರಿಂದ, ತಮ್ಮ ಇದಿರುವಾದಿಗಳ ತಯಾರಿಗವಕಾಶಕೊಡದೆ ಕಾಂಗ್ರೆಸಿಗರು ಚುನಾವಣೆಗಾತುರಿಸುತಿದ್ದಾರೆ" ಎಂದೂ ಈಗ ದೂರಬಲ್ಲರು! ಹೇಗಿದ್ದರೂ ಪಕ್ಷಪಂಗಡಗಳ ತುಲನೆಗೆ, ದೂರು ದೂಷಣೆಗಳ ವಿಮರ್ಶೆಗೆ, ಕಾಲ ಮುಂದಿದೆ. ಭಾವೀ ಮಹಾ ಚುನಾವಣೆಯ ಕ್ಷೇತ್ರ ಮತ್ತು ಕ್ರಮ ನಿಯಮಗಳ ತಯಾರಿಯೇ ಇಷ್ಟು ಪ್ರಯಾಸದ ಕೆಲಸವಿರುವಾಗ, ಆ ಚುನಾವಣೆಯ ಮತದಾರರಾಗಿರುವ ಭಾರತೀಯ ಜನಸಾಮಾನ್ಯರನ್ನು, ಅದಕ್ಕನುಗುಣವಾದ ಹೊಣೆಗಾರರನ್ನಾಗಿ ಮಾರ್ಪಡಿಸುವುದು ಎಷ್ಟು ಮಹತ್ವದ ವಿಷಯವೆಂಬುದನ್ನು ಈ ಸಂದರ್ಭದಲ್ಲಿ ಅಗತ್ಯವಾಗಿ ಗಮನಿಸಬೇಕು. ಜನಮತವೇ ಪರಾವಲಂಬನ, ಅರೆಪಕ್ವ ಸ್ಥಿತಿಯಲ್ಲಿರುವಾಗ, ಅಂತಹ ಜನಮತವನ್ನಾಧರಿಸಿ ರಚಿಸಲ್ಪಡುವ ಆಡಳಿತೆಯೂ ದೋಷಪೂರ್ಣವಾಗಲು ಬದ್ಧವಿದೆ. ಆದ್ದರಿಂದ ಭಾವೀ ಮಹಾ ಚುನಾವಣೆಯು ಎಲ್ಲಾ ದೃಷ್ಟಿಯಿಂದಲೂ ಸಾರ್ಥಕವಾಗಬೇಕಾದರೆ, ಮತದಾರರು ಯೋಗ್ಯರಾಗಿರಬೇಕಾದು ದು ಎಲ್ಲಕ್ಕಿಂತ ಮುಖ್ಯ ಮತ್ತು ಎಲ್ಲಕೂ ಮೂಲ. ಮತದಾರ ಜನತೆಯಲ್ಲಿ ರಾಜಕೀಯ ತಿಳುವಳಿಕೆ ಮತ್ತು ವಿಚಾರ ಬುದ್ಧಿ ತುಂಬಬೇಕು— ಹಂಗು, ದಾಕ್ಷಿಣ್ಯ, ಭೀತಿ, ಚಾಪಲ್ಯವಿಲ್ಲದೆ ಮತದಾನ ಮಾಡುವ ಸ್ಥಿತಿಯಲ್ಲಿ ಅವರಿರಬೇಕು. ಹಾಗಾಗಬೇಕಾದರೆ ಒಂದೆಡೆಯಿಂದ ಜನಸಾಮಾನ್ಯರ ಬುದ್ಧಿಯನ್ನು ಶುದ್ಧೀಕರಿಸುವ ಬೌದ್ಧಿಕ ಶಿಕ್ಷಣ ದೊರೆಯಬೇಕಾದಂತೆಯೇ, ಮಾಲಕ, ಧನಿ, ಧನಿಕರ ಹಂಗು ಅಥವಾ ಭೀತಿ ಬಂಧನಗಳಿಂದ ರೈತರನ್ನು, ಮಜೂರರನ್ನು, ಮತ್ತಿತರ ಬಡವರನ್ನು ಬಿಡಿಸಿಕೊಳ್ಳಬೇಕು. ಅತ್ಯಧಿಕ ಸಂಖ್ಯಾಕರಿರುವ ಬಡಜನ ವರ್ಗದಲ್ಲಿ ಇಂತಹ ಸ್ಥಿತಿಮತಿ ಸ್ವಾವಲಂಬನೆಯನ್ನು ಉಂಟು ಮಾಡದೆ ಚುನಾವಣೆ ನಡೆದರೆ, ಅದರಲ್ಲೂ 'ಮೇಲು ವರ್ಗ'ದವರ ಇಚ್ಛೆಯೇ ಹಿಂದಿಗಿಂತಲೂ ಹೆಚ್ಚಾಗಿ ಫಲಿಸುವುದು ಖಂಡಿತ. ಆದ್ದರಿಂದ ಸರಕಾರದ ಮತ್ತು ಜನತಾ ಸೇವಕರ ಲಕ್ಷ್ಯವೀಗ ಜನತಾ ಸ್ಥಿತಿಮತಿ ಸುಧಾರಣೆಯ ಕಡೆಗೆ ಬೀಳಬೇಕು. ಅಗತ್ಯವುಳ್ಳ ಪ್ರಚಾರ ಮತ್ತು ಕಾರ್ಯಗಳಾಗಬೇಕು. ಸ್ವತಂತ್ರ ಜನತಾ ರಾಜ್ಯ ಭಾರತದ ಭವಿಷ್ಯವನ್ನು ಭದ್ರ ಮತ್ತು ಶುಭ್ರಗೊಳಿಸುವ ರೀತಿಯಲ್ಲಿ ಭಾವೀ ಚುನಾವಣೆಗಳು ಜರಗುವಂತೆ ಜನತೆಯಲ್ಲಿ ಸ್ವಾವಲಂಬನಾ ನಿರ್ಮಾಣ ಪ್ರಯತ್ನವು ಈಗಿನಿಂದಲೇ ನಡೆಯುವದೆಂದು ನಿರೀಕ್ಷಿಸಬಹುದೆ?

ಉಡುಪಿ

ಅಸ್ಪೃಶ್ಯ ಭೂಕಂಪ ನಿಧಿಸಂಗ್ರಹ ಕಮಿಟಿಯನ್ನು ಇದೇ ತಾ. 10ರಲ್ಲು ಸಂಜೆ ತಾಲೂಕು ಕಚೇರಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ರಚಿಸಲಾಯಿತು. ಶ್ರೀ ಪಿ ಎಸ್. ತಿಮ್ಮಪ್ಪ ಸೆಟ್ಟಿ, ಸಬ್ ಕಲೆಕ್ಟರ್, ಅವರು ಅಧ್ಯಕ್ಷತೆ ವಹಿಸಿದ್ದರು. ಕಮಿಟಿಗೆ ಸಬ್ ಕಲೆಕ್ಟರರು ಅಧ್ಯಕ್ಷರಾಗಿಯೂ ಶ್ರೀಗಳಾದ ಕೆ. ಜೆ. ಬಲ್ಲಾಳರು ಉಪಾಧ್ಯಕ್ಷರಾಗಿಯೂ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ ಮತ್ತು ಬಿ. ವಾಸುದೇವರಾಯರು ಕಾರ್ಯದರ್ಶಿಯರಾಗಿಯೂ ಶ್ರೀ. ನರಹರಿ ಕಾಮತರು ಖಜಾನ್ಜಿಯಾಗಿಯೂ ಆರಿಸಲ್ಪಟ್ಟರು. ಕಮಿಟಿಯ ಮುಂದಿನ ಸಭೆಯು ಇದೇ ತಾ. 30 ರಲ್ಲು ಕೂಡಲಿರುವುದು.

ರೇಶನ್ ಅಕ್ಕಿ ಉಡುಪಿ ತಾಲೂಕಿನ ಗ್ರಾಮಗಳಲ್ಲಿಯ ಬಹುತೇಕ ಸೀದಾ ಅಂಗಡಿಗಳಲ್ಲಿ ದೊರೆಯುವುದಿಲ್ಲವಾಗಿ ತಿಳಿದುಬರುತ್ತದೆ. ತೀರಾ ಬಡವರೂ ಮಧ್ಯಮ ವರ್ಗದವರೂ ಕಂಗೆಟ್ಟಿರುವರು. ಹೊಸ ಬೆಳೆ ಕಟಾವು ಪ್ರಾರಂಭವಾಗಿರುವುದೇನೋ ನಿಜ, ಆದರೆ ಮಳೆಯ ದೆಸೆಯಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರಲವಕಾಶವಾಗಿಲ್ಲ.

ಗೊಬ್ಬರ ಸಪ್ತಾಹ ಪರಿಸಮಾಪ್ತಿ ಉಡುಪಿಯಲ್ಲಿ ಇದೇ ತಾ 2ರಲ್ಲು ಪ್ರಾರಂಭವಾದ ಗೊಬ್ಬರ ಸಪ್ತಾಹವು ತಾ 8ರಲ್ಲು ಪರಿಸಮಾಪ್ತಿಯನ್ನೈದಿತು. ಅಂದು ಸಂಜೆ ಬೋರ್ಡ್ ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ನಿವೃತ್ತ ಡಿಪ್ಯುಟಿ ಕಲೆಕ್ಟರ್ ಶ್ರೀ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆಜರಗಿ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರ ನಿವೇದನೆ, ವಕೀಲ್ ಶ್ರೀ ಬಿ. ವಾಸುದೇವರಾಯರ ಮತ್ತು ಅಧ್ಯಕ್ಷರ ಭಾಷಣಗಳಾದುವು. ಎಮ್. ಜಿ ಎಮ್. ಕಾಲೇಜಿನ, ಹುಡುಗಿಯರ ಟ್ರೈನಿಂಗ್ ಶಾಲೆಯ, ಮುನಿಸಿಪಲ್ ಸೌತ್ ಹುಡುಗಿಯರ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಮಯೋಚಿತ ಕಲಾ ಚಟುವಟಿಕೆಗಳನ್ನು ಪ್ರದರ್ಶಿಸಿದರು.

ಭಾರತ-ಪಾಕಿಸ್ತಾನ-ವ್ಯತ್ಯಾಸ

ಭಾರತದ ಜಾತ್ಯತೀತ ಧೋರಣೆ ಮತ್ತು ಪಾಕಿಸ್ತಾನದ ಜಾತೀಯತಾ ಧೋರಣೆಯನ್ನು ಎರಕಾಲದಲ್ಲಿ ಸ್ಪಷ್ಟೀಕರಿಸಿ ತೋರಿಸುವ ಹೊಸ ಹೊಸ ಪ್ರಮಾಣಗಳು ದಿನದಿಂದ ದಿನಕ್ಕೆ ಮುಂದೆ ಬರುತ್ತಿವೆ. ವಸ್ತುಸ್ಥಿತಿಯನ್ನು ವಾದ ಬಲವು ಮರೆಮಾಡಿಸಲಾರದು; ಪಾಕಿಸ್ತಾನ್ ನಾಯಕರ ವಾದವೆಂತಹದಿದ್ದರೂ ಅಲ್ಲಿಯ ನಿಜಸ್ಥಿತಿಯು — ಭಾರತದಲ್ಲಿ ಯಾರು ಏನೇ ಅಂದರೂ ಇಲ್ಲಿಯ ವಾಸ್ತವಿಕತೆಯು— ಸಹಜವಾಗಿ ತಿಳಿದು ಬಾರದೆ ಹೋಗುವದಿಲ್ಲ. ನಿದರ್ಶನಕ್ಕಾಗಿ 'ಹಿಂದೂ ವಾದಿ'ಯೆಂಬ ಅಪವಾದ ಕೇಳಿದ್ದ ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ ಟಂಡನರು ಈಗ ಆಡುತ್ತಿರುವ ಮಾತುಗಳನ್ನೂ, 'ಪಾಕಿಸ್ತಾನವು ನ್ಯಾಯವಾದಿ'ಯೆಂದು ವಾದಿಸುತ್ತಿದ್ದು ಪಾಕಿಸ್ತಾನ್ ಕೇಂದ್ರಮಂತ್ರಿಯಾಗಿದ್ದ ಹರಿಜನ ಮುಂದಾಳು ಶ್ರೀ ಜೆ. ಎನ್. ಮಂಡಲರು ತನ್ನ ಸ್ಥಾನಕ್ಕೆ ರಾಜೀನಾಮೆಯೊಪ್ಪಿಸಿ ಆಡಿರುವ ಮಾತುಗಳನ್ನೂ ಕೇಳಬಹುದು.

೦೦ ೦೦ ೦೦

ಅಲಹಾಬಾದಿನಲ್ಲಿ ಇದೇ ತಾ. ೮ರಲ್ಲಿ ೫೦ ಸಾವಿರಕ್ಕೂ ಮಿಕ್ಕಿದ್ದ ಜನಸಂದಣಿಯ ಮುಂದೆ ಭಾಷಣಮಾಡುತ್ತಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಂಡನರೆಂದರು: "ಹಿಂದೂರಾಜ್ಯವೆಂಬ ಅಪಾಯಕರ ಸೊಲ್ಲಿನಿಂದ ಯಾರೂ ಮೋಸಹೋಗಬಾರದೆಂದು ಎಚ್ಚರಿಸುತ್ತೇನೆ. ಜನತೆಯನ್ನು ತಪ್ಪು ದಾರಿ ಹಿಡಿಸಲು ಸತತಪ್ರಯತ್ನ ಮಾಡುತ್ತಿರುವ ಸಮಾಜದ್ರೋಹಿಗಳಿಂದ ದೂರವಿರಬೇಕೆಂದು ಸಾರ್ವಜನಿಕರನ್ನು ಕೇಳಿಕೊಳ್ಳುತ್ತೇನೆ. ಯಾವುದಾದರೊಂದು ಧರ್ಮ ಅಥವಾ ಧರ್ಮ ಗ್ರಂಥದ ಆಸ್ತಿವಾರದಲ್ಲಿರುವ ಸರಕಾರವೊಂದು ಎಂದಿಗೂ ಜಯಶಾಲಿಯಾಗಲಾರದು. ಧರ್ಮ ಗ್ರಂಥವನ್ನಾಧರಿಸಿರುವ ಇಸ್ಲಾಮ್ ರಾಜ್ಯಭಾರವನ್ನು ಸ್ಥಾಪಿಸುವೆನೆಂದು ಘೋಷಿಸಿ, ಪಾಕಿಸ್ತಾನವು ಮಹಾ ಪ್ರಮಾದವನ್ನು ಮಾಡಿದೆ. ಈ ರಾಷ್ಟ್ರದಲ್ಲಿರುವ ಪ್ರತಿಯೊಬ್ಬ ಮುಸ್ಲಿಂ ಬಂಧುವೂ ಯಾವುದೇ ಭೀತಿಯೇನೂ ಇಲ್ಲದೆ ಬಾಳುವಂತೆ ಮಾಡುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಿದೆ. ಯಾವ ಜಾತಿ, ಮತ, ಧರ್ಮ ಬೇಧವೂ ಇಲ್ಲದೆ, ಈ ದೇಶದಲ್ಲಿರುವ ಎಲ್ಲರೂ ಭಾರತೀಯ ಸಂಸ್ಕೃತಿಯನ್ನು ಅನುಸರಿಸಬೇಕಾದುದು ಸದ್ಯದ ಮಾರ್ಗಟಿತ ಸ್ಥಿತಿಯಲ್ಲಿ ಅಗತ್ಯ. ಈ ಸಂಸ್ಕೃತಿಯ ಕೆಳಗೆ ಹಿಂದು ಮುಸ್ಲಿಮರು ಪ್ರತ್ಯೇಕ ಸಮಾಜಗಳಾಗಿ ಗಣಿಸಲ್ಪಡದೆ, ಇಡೀ ಸಂಸ್ಥೆಯ ಸಮ್ಮಿಳಿತ ಸಹಭಾಗಿಗಳಾಗಿ ಇರುವರು".

೦೦ ೦೦ ೦೦

ಲಾರ್ಡ್ ವೇವೆಲರು ವೈಸರಾಯಿಯಾಗಿದ್ದಾಗ ಅಖಿಲ ಭಾರತಕ್ಕಾಗಿ ರಚನೆಗೊಂಡಿದ್ದ ಮಧ್ಯಾವಧಿ ಕೇಂದ್ರ ಮಂತ್ರಿಮಂಡಲದಲ್ಲಿ ಮುಸ್ಲಿಂ ಲೀಗ್ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿದ್ದು, ಆ ಮೇಲೆ ಪಾಕಿಸ್ತಾನ್ ಸ್ಥಾಪನೆಯಾದಂದಿನಿಂದ ಈ ವರೆಗೂ ಪಾಕಿಸ್ತಾನ್ ಕೇಂದ್ರ ಮಂಡಲದಲ್ಲಿ ಕಾನೂನು ಮತ್ತು ಮಜೂರ ಖಾತೆಯ ಮಂತ್ರಿಯಾಗಿರುವ ಹರಿಜನ ಮುಂದಾಳು ಶ್ರೀ ಜೋಗೇಂದ್ರನಾಥ ಮಂಡಲರು ಇದೇ ತಾ. ೮ರಲ್ಲಿ ತನ್ನ ಮಂತ್ರಿಸ್ಥಾನಕ್ಕೆ ರಾಜೀನಾಮೆಯೊಪ್ಪಿಸುತ್ತಾ, ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ: 'ಪಾಕಿಸ್ತಾನದಲ್ಲಿ ನಾಗರಿಕ ಸ್ವಾತಂತ್ರ್ಯವನ್ನ ಬಹುದಾವುದೂ ಕಾಣಿಸುವುದಿಲ್ಲ. ಹಿಂದುಗಳು ಜೀವಿಸಲಾಗುವ ಸ್ಥಾನವೇ ಪಾಕಿಸ್ತಾನದಲ್ಲಿಲ್ಲ, ಮತಾಂತರ ಅಥವಾ ವಿನಾಶದ ಕರಿಛಾಯೆಯು ಇಲ್ಲಿಯ ಹಿಂದುಗಳ ಭವಿಷ್ಯವನ್ನು ಕವಿದುಕೊಂಡಿದೆ, ಎಂಬ ನಿರ್ಧಾರಕ್ಕೆ ಆತ್ಮಕದಿಂದ ದೀರ್ಘಾವಧಿಯ ಒದ್ದಾಟದ ನಂತರವೇ ನಾನು ಬಂದಿದ್ದೇನೆ. ಪಾಕಿಸ್ತಾನ್ ಕೇಂದ್ರ ಸರಕಾರದಲ್ಲಿ ನಾನಿನ್ನೂ ಉಳಿದುಕೊಳ್ಳುವುದರಿಂದ ಹಿಂದುಗಳಿಗಾವ ಪ್ರಯೋಜನವೂ ದೊರೆಯಲಾರದೆಂದು ನನಗೆ ಖಚಿತವಾಗಿ ಮನಾಗ್ಯ, ಇಲ್ಲಿಯೂ ಹಿಂದುಗಳು ತಮ್ಮ ಪ್ರಾಣ, ಸೊತ್ತು ಮತ್ತು ಧರ್ಮದ ಸಂಬಂಧವಾಗಿ ಗೌರವ ಹಾಗೂ ಭರವಸೆಯಿಂದ ಜೀವಿಸಲು ಸಾಧ್ಯವಿದೆಯೆಂಬ ಅಭಿಪ್ರಾಯವನ್ನು ಪಾಕಿಸ್ತಾನದಲ್ಲಿರುವ ಹಿಂದುಗಳ ಮತ್ತು ಹೊರಗಿನವರ ಮನಸ್ಸಿನಲ್ಲಿ ಮೂಡಿಸಲು ನನ್ನ ಶುದ್ಧ ಮನಸ್ಸಾಕ್ಷಿಗೊಪ್ಪಿಗೆಯಾಗುವುದಿಲ್ಲ, ಪೂರ್ವ ಬಂಗಾಳದಲ್ಲಿದ್ದ ಮೇಲುವರ್ಗದ ಹಿಂದುಗಳಲ್ಲಿ ದೊಡ್ಡ ಸಂಖ್ಯೆಯವರು ಮತ್ತು ರಾಜಕೀಯ ತಿಳುವಳಿಕೆಯುಳ್ಳ ದಳಿತ ವರ್ಗಗಳವರು ಇಷ್ಟರಲ್ಲೇ ಅಲ್ಲಿಂದ ಪಲಾಯನ ಮಾಡಿದ್ದಾರೆ ಪಾಕಿಸ್ತಾನದ ಈ ಶಾಪಪೂರಿತ ಪ್ರಾಂತ್ಯದಲ್ಲಿ ಇನ್ನೂ ಉಳಿದುಕೊಂಡಿರುವ ಹಿಂದುಗಳು ಸರದಿ ಪ್ರಕಾರ ಮತ್ತು ಪೂರ್ವತಯಾರೀ ಹಂಚಿಕೆಗಳ ಮೂಲಕ ಒಂದೋ ಇಸ್ಲಾಮಿಗೆ ಮತಾಂತರಿಸಲ್ಪಡಲಿದ್ದಾರೆ, ಇಲ್ಲವೇ ಸಂಪೂರ್ಣವಾಗಿ ನಿರ್ಮೂಲವಾಗಲಿದ್ದಾರೆ ಎಂಬ ಶಂಕೆ ನನ್ನಲ್ಲಿದೆ. ತಮ್ಮಂತಹ ವಿದ್ಯಾವಂತ, ಸುಸಂಸ್ಕೃತ ಹಾಗೂ ಅನುಭವಿ ಮನುಷ್ಯನು, ಮಾನುಷತ್ವಕ್ಕೇನೇ ಅತಿ ದೊಡ್ಡ ಅಪಾಯಗಳನ್ನು ತುಂಬಿಕೊಂಡಿರುವ, ಮತ್ತು ಸಮಾನತೆ ಹಾಗೂ ಸದ್ಬುದ್ಧಿಯ ಎಲ್ಲಾ ತತ್ವಗಳಿಗೂ ಬದ್ಧ ವಿರೋಧವಿರುವ 'ಇಸ್ಲಾಮಿಕ್ ರಾಜ್ಯ'ದಂತಹ ವಿಧಾನದ ಪುರಸ್ಕರ್ತರಾದುದು ನಿಜಕ್ಕೂ ವಿಲಕ್ಷಣವಾಗಿ ಕಾಣಿಸುತ್ತಿದೆ. ಈ ದಿನ ಹಿಂದುಗಳೇನೋ, ಅವರಲ್ಲಿ ಹಲವರೀಗ ನಿಜಕ್ಕೂ ಮಾಡುತ್ತಿರುವಂತೆ, ದುಃಖ ಮತ್ತು ಗೊಂದಲದೊಡನೆ ತಮ್ಮ ಮನೆಗಳನ್ನು ಬಿಡುತ್ತಿರಬಹುದು. ಆದರೆ ನಾಳೆ, ಜೀವನಾರ್ಥಿಕದ ತಮ್ಮ ಹಕ್ಕು ಬದ್ಧ ಸ್ಥಾನಗಳಿಗಾಗಿ ಅವರು ಚಡಪಡಿಸುವರು. ಭವಿಷ್ಯಗರ್ಭದಲ್ಲಿ ಏನಿದೆಯೆಂಬುದು ಯಾರಿಗೆ ಗೊತ್ತು?—"

ಈ ಯುಗದಲ್ಲಿ ಜಾತೀಯತಾ ಅಪಕ್ರತೆಗೆ ಅಸ್ತಿತ್ವವಿಲ್ಲವೆಂಬುದನ್ನು ಪ್ರಜಾವರೆ ಕಾಲವೇ ಪಾಕಿಸ್ತಾನಕ್ಕೆ ಮನದಟ್ಟಾಗಿಸದಿರಲಾರದು.

ಮಂಗಳೂರು

ಕೆನರಾ ಬ್ಯಾಂಕ್—ಕಳೆದ ೪೫ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಜನತೆಯು ಕೆನರಾ ಬೇಂಕಿನೊಡನೆ ನಿಕಟಸಂಬಂಧವನ್ನಿಟ್ಟುಕೊಂಡುದರಿಂದ ಈ ಸಂಸ್ಥೆಯ ಭದ್ರತೆ ಮತ್ತು ಆದರ್ಶ ಆಡಳಿತೆಯು ಭಾರತದ ಇತರ ಬೇಂಕುಗಳಿಗಿಂತ ಎಷ್ಟೋ ಮೇಲೆಂದು ಮನಗಂಡಿರುವರು.

ಆದರೆ ಇತರ ಸಂಸ್ಥಾನಗಳೂ ಜಿಲ್ಲೆಗಳೂ ಈ ಆದರ್ಶ ಬೇಂಕಿನ ಹಿರಿಮೆಯನ್ನು ಮನಗಂಡಿರುವರೆಂಬ ವಿಷಯ ಮಾತ್ರ ನಮ್ಮ ಜಿಲ್ಲೆಯ ಜನತೆಯ ದೃಷ್ಟಿಪಥಕ್ಕೆ ಹೊಳೆಯದ ಸಂಗತಿ.

ನಮ್ಮ ಬೇಂಕಿನ ಚೆಯರ್‌ಮೆನರು ಮೈಸೂರು, ಬೊಂಬಾಯಿ ಮತ್ತಿತರ ಕರ್ನಾಟಕ ಸ್ಥಳಗಳಿಗೆ ಈಚೆಗೆ ಸಂದರ್ಶನವಿತ್ತಾಗ ಅಲ್ಲಿಯ ಜನತೆಯು ನಮ್ಮ ಬೇಂಕಿನ ಕುರಿತು ಕೊಟ್ಟ ಸದಭಿಪ್ರಾಯವೇ ಇದಕ್ಕೆ ನಿದರ್ಶನವಾಗಿದೆ. ಮಾತ್ರವಲ್ಲದೆ ಆ ಕ್ಷೇತ್ರದ 'ಸಂಯುಕ್ತ ಕರ್ನಾಟಕ' ಮತ್ತಿತರ ಪ್ರಮುಖ ಪತ್ರಿಕೆಗಳು ನಮ್ಮ ಬೇಂಕಿನ ಆಡಳಿತ, ವ್ಯವಹಾರ ಚತುರತೆಯ ಕುರಿತು ಮಾಡಿದ ವರದಿಗಳು ಇನ್ನೊಂದು ಹೆಗ್ಗುರುತು.

ಕ್ಷಯರೋಗ—ನಿವಾರಣೆಯ ಬಗ್ಗೆ ನಿಧಿಸಂಗ್ರಹಿಸಲು ೩೫೦ಲಕ್ಷ ಸ್ಟಾಂಪು ತಯಾರಿಸಿ ಅವನ್ನು ಪ್ರತಿಯೊಂದನ್ನೂ ಒಂದಾಣೆಯಂತೆ ಇದೇ ತಾ. ೨ರಿಂದ ವಿಕ್ರಯಿಸಲು ಪಕ್ರಮವಾಗಿದೆ.

ನಿಧನ—ಸೆಂಟ್ರಲ್ ಟಾಕೀಸಿನ ಆಡಳಿತೆ ನಡೆಸುತ್ತಿದ್ದ ಶ್ರೀ ಕೆ. ಪುರುಷೋತ್ತಮ ಕಾಮತರು ತಾ. ೩೦-೯-೫೦ರಲ್ಲಿ ನ್ಯುಮೋನಿಯಾ ಕಾಯಿಲೆಯಿಂದ ನಿಧನಹೊಂದಿರುವರೆನ್ನಲು ವಿಷಾದವಾಗುವುದು. ಮೃತರು ದಯಾಳುವಿದ್ದು ಜನಾನುರಾಗ ಪಡೆದಿದ್ದರು.

ಸ್ಕೌಟು ಕೂಟ—ದ. ಕ. ಹಿಂದುಸ್ಥಾನ್ ಸ್ಕೌಟು ಸಂಘದ ನೇತೃತ್ವದಲ್ಲಿ ಮಂಗಳೂರು ಶಹರಿನ ಎಲ್ಲಾ ಸ್ಕೌಟ್ಸ್ ಮತ್ತು ಗರ್ಲ್ ಗೈಡ್ಸರ ಕೂಟವೊಂದು ಇದೇ ತಾ. ೧ರಲ್ಲು ಜಿಲ್ಲಾ ಜಡ್ಜರಾದ ಶ್ರೀ ಸಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ನಗರ ಸಭೆ—ಈಚೆಗೆ ಜರುಗಿದ ಮುನಿಸಿಪಲ್ ಕೌನ್ಸಿಲು ಸಭೆಯಲ್ಲಿ ಆಸ್ಪತ್ರೆಯ ಕಟ್ಟಡ ನಿಧಿಗೆ ಒಂದುನೂರು ರೂಪಾಯಿ ಸಹಾಯ ನೀಡಬೇಕೆಂದಾಯಿತು ನಗರದ ನೀರಿನ ಸರಬರಾಯಿಗೆ ಮತ್ತು ಚರಂಡಿ ದುರಸ್ತಿಗೆ ಸಾಲವಾಗಿ ರೂ. ೨,೧೧,೬೫೦ ಮತ್ತು ಸರಕಾರ ಗ್ರಾಂಟು ರೂ. ೨,೧೧,೬೫೦ ದೊರಕುವಂತೆ ಅರ್ಜಿಗುಜರಾಯಿಸುವ ನಿರ್ಧಾರವಾಯಿತು. ದಕ್ಷಿಣಭಾರತ ವೈದ್ಯಕೀಯ ಪರಿಷತ್ತಿನ ಚುನಾಯಿತ ಅಧ್ಯಕ್ಷರು ಮಂಗಳೂರಿಗೆ ಬರುವಾಗ ಅವರಿಗೊಂದು ಮಾನಪತ್ರವೀಯುವ ನಿರ್ಧಾರವಾಯಿತು.

ದಕ್ಷಿಣ ಭಾರತ ಪ್ರಾಂತಿಕ ವೈದ್ಯಕೀಯ ಸಮ್ಮೇಳನವು—ಇದೇ ತಾ. ೧೩ರಲ್ಲು ಬೆಳಿಗ್ಗೆ ೮-೩೦ಕ್ಕೆ ಮಂಗಳೂರು ಕೆನರಾ ಹೈಸ್ಕೂಲಿನ ಭವನದಲ್ಲಿ ಮದ್ರಾಸಿನ ಸರ್ಜನ್ ಜನರಲ್ ಡಾ। ಜೆ. ಸಿ. ಡೇವಿಡ್ ಅವರಿಂದ ತೆರೆಯಲ್ಪಡುವುದು. ಮದ್ರಾಸಿನ ಡಾ। ಯು. ಕೃಷ್ಣರಾಯರು ಸಮ್ಮೇಳನದ ಅಧ್ಯಕ್ಷತೆ ವಹಿಸುವರು. ಮುನಿಸಿಪಲ್ ಚೆಯರ್‌ಮೆನ್ ಶ್ರೀ ಎಲ್. ಸಿ. ಪಾಯ್ಸರು ಧ್ವಜಾರೋಹಣ ನಡೆಸುವರು. ಡಾ। ಯು. ಪಿ. ಮಲ್ಯ ಎಮ್. ಎಲ್. ಎ. ಅವರು ಸ್ವಾಗತ ಭಾಷಣ ಮಾಡುವರು. ಮಂಗಳೂರಿನ ಬಿಶೋಪ್ ರೈ। ರೆವ। ವಿ. ಆರ್. ಫೆರ್ನಾಂಡೀಸರು ವಸ್ತು ಪ್ರದರ್ಶನವನ್ನು ತೆರೆಯುವರು.

ಡಾ। ಕೆ. ಎಂ ರೈಗಳ ಆಗಮನ—ಲಂಡನಿನಲ್ಲಿ ಜರಗಿದ ಅಂತರ್‌ರಾಷ್ಟ್ರೀಯ ರೇಡಿಯಾಲಜಿ ಕಾಂಗ್ರೆಸಿಗೆ ಹಿಂದೀ ಪ್ರತಿನಿಧಿಯಾಗಿ ತನ್ನ ಪತ್ನಿ ಲಲಿತಾ ರೈಗಳೊಂದಿಗೆ ತೆರಳಿದ್ದ ಡಾ। ಕೆ. ಎಂ. ರೈ, ಎಂ. ಬಿ. ಬಿ. ಎಸ್ ಎಫ್. ಆರ್. ಸಿ. ಎಸ್. ಡಿ. ಎಂ. ಆರ್. (ಲಂಡನ್) ಇವರು ಇದೇ ತಾ. ೩ರಂದು ಸ್ವರಕ್ಷಿತವಾಗಿ ಮದ್ರಾಸಿಗೆ ಬಂದಿರುವರು. ಲಂಡನ್ ಕಾಂಗ್ರೆಸ್ ಮುಗಿದ ಮೇಲೆ ರೈ ದಂಪತಿಗಳು ಗ್ರೇಟ್ ಬ್ರಿಟನಿನ ಮತ್ತು ಯುರೋಪಿನ ಹಲವು ದರ್ಶನೀಯ ಸ್ಥಳಗಳನ್ನೂ ಆಸ್ಪತ್ರೆಗಳನ್ನೂ ಸಂದರ್ಶಿಸಿರುವರು. ಇವರೀಗ ತಾ. ೧೦ರಂದು ಮದ್ರಾಸಿನಿಂದ ಹೊರಟು, ತಾ. ೧೧ಕ್ಕೆ ದಕ್ಷಿಣ ಕನ್ನಡಕ್ಕೆ ಬಂದಿರುವರು. ತಾ. ೧೪ರ ತನಕ ಬೆಳ್ವಾರೆಯಲ್ಲಿದ್ದು ತಾ. ೧೫ಕ್ಕೆ ಮಂಗಳೂರಿಗೆ ಬರುವರು. ತಾ. ೧೯ಕ್ಕೆ ಮದ್ರಾಸಿಗೆ ಹಿಂತೆರಳುವರು.

ಉಡುಪಿ

ಸ್ಕೌಟು ಸಪ್ತಾಹ ಮುಕ್ತಾಯ ಸಮಾರಂಭ ಸ್ಥಳೀಯ. ಹಿಂದೂಸ್ಥಾನ್ ಸ್ಕೌಟು ಸಂಘದ ಆಶ್ರಯದಲ್ಲಿ ಇದೇ ತಾ. ೭ರಲ್ಲು ಸಂಜೆ ಬೋರ್ಡ್ ಹೈಸ್ಕೂಲು ಪರಿಸರದಲ್ಲಿ ಸ್ಕೌಟು ಸಪ್ತಾಹ ಮುಕ್ತಾಯ ಸಮಾರಂಭವು ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು. ಕೃಷ್ಣರಾವ್, ಡಾ। ಎಮ್. ವಿ. ಕಿಣಿ, ಕೆ. ವಿ. ಶೆಣೈ, ಟಿ. ಆರ್. ಯು. ಪೈಗಳವರ ಮಾತುಗಳಾದ ನಂತರ ತಿಂಡಿಪಾನೀಯ ನಡೆಯಿತು. ಸಂಘದ ಸ್ಕೌಟ್‌ರ್ ಸ್ಕೌಟು ಮಾಸ್ಟರ್ ಶ್ರೀ ಕೆ ಆನಂದ ಸೆಟ್ಟರು ಧನ್ಯವಾದಗಳನರ್ಪಿಸಿದರು. ದಳದ ಸ್ಕೌಟುಗಳ, ಚರಿಯಂಗೆ ಶ್ರೀ. ಕೆ. ವೆಂಕಟ್ರಮಣ ಭಟ್ಟರು (ರಾಯಲ್ ಮಹಲ್ ಮಾಲಕರು) ಧರ್ಮಾರ್ಥವಾಗಿ ಮಿಠಾಯಿ ಬಾಡನ್ನಿತ್ತು ಸತ್ಕರಿಸಿರುವರು.

ಉಡುಪಿ ಕರ್ನಾಟಕ ಸಂಘದ ಸಾಹಿತ್ಯೋತ್ಸವವು ಇದೇ ತಾ. ೧೮, ೧೯, ೨೦ ಈ ಮೂರು ದಿನಗಳಲ್ಲಿ ಬೋರ್ಡ್ ಹೈಸ್ಕೂಲಿನ 'ಸೀಲ್‌ಡ್ಸ್ ಹೋಲ್'ನಲ್ಲಿ ಜರಗಲಿದೆ. ಪ್ರಸಿದ್ಧ ಸಾಹಿತಿಗಳಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀ ಪಡುಕೋಣೆ ರಮಾನಂದ ರಾವ್, ಮೊದಲಾದವರು ಆಗಮಿಸಲಿದ್ದಾರೆ. ಭಾಷಣಗಳು ಮತ್ತು ವಿವಿಧ ವಿನೋದಾವಳಿಗಳಿವೆ, ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಖು 14--10—50ರಿಂದ

ಇದೊಂದು ಅಪೂರ್ವವಾಗಿ ಬಂದ ಅದ್ಭುತ ಚಿತ್ರವು ನೋಡುವವರಿಗೆ ನೂತನವಿದೆ,

ಮೆಟ್ರೊಗೋಲ್ಡ್‌ವಿನ್ ವರ್ಣಚಿತ್ರ

→ ಅನ್‌ಫಿನಿಶ್ಡ್ ಡೇನ್ಸ್

UNFINISHED DANCE ←

ಬರುವ ಚಿತ್ರ- "ವಿಜಯ ಕುಮಾರಿ" (ಟಿ. ಆರ್. ರಾಜಕುಮಾರಿ)

ಮುಂದಕ್ಕೆ: ಮೆಹಬೂಬರ "ಅಂದಾಜ್" [ದಿಲೀಪ್, ರಾಜಕಪೂರ್, ನರ್ಗೀಸ್, ಕುಕ್ಕು]

ವಿವಿಧ ಪಾತ್ರೆಗಳು



ಆಲುಮಿನಿಯಂ, ಹಿತ್ತಾಳೆ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಪುರ ಪಾತ್ರೆ ಸಾಮಾನು ವ್ಯಾಪಾರಸ್ಥರು,

ರಥಬೀದಿ, ಉಡುಪಿ

(೫ನೇ ಪುಟದಿಂದ)

ಒಳಗಿನ ಘರ್ಷಣೆಯು ಬಲಗೊಳ್ಳುತ್ತಾ, ಹೋರಾಟಕೂಟ ಧ್ವಂಸಹತ್ತಿದೆ

ಕಾಶ್ಮೀರದ ವಿವಾದವು ತೀರ್ಮಾನ ಹೊಂದದೆ, ಮಧ್ಯಸ್ಥಗಾರ ಡಿಕ್ಸನರು ಸೂಚಿಸಿದ್ದಂತೆ ಭದ್ರತಾ ಕೌನ್ಸಿಲು 'ಅದರ ಗೊಡವೆಯನ್ನೇ ಬಿಟ್ಟಂತೆ' ಇರುವುದರಿಂದ ಪಾಕಿಸ್ತಾನದಲ್ಲಿ ಆವೇಶವೆದ್ದ ಲಕ್ಷಣಗಳು ಕಾಣಿಸುತ್ತಿವೆ. ಅಲ್ಲಿಯ ಮುಸ್ಲಿಂಲೀಗಿನ ನೇತೃತ್ವದಲ್ಲಿ ಪಾಕಿಸ್ತಾನದಲ್ಲೆಲ್ಲಾ 'ಕಾಶ್ಮೀರ ದಿನಾಚರಣೆ' ನಡೆದು, ಕಾಶ್ಮೀರ ತೀರ್ಮಾನ ಹಿಂದೆ ಹೋದುದರ ಕುರಿತು ತೀವ್ರ ಅಸಹನೆಯನ್ನು ಪ್ರದರ್ಶಿಸಲಾಗಿದೆ. ಇದೇ ತಾ. 8ರಲ್ಲಿ ಪಾಕಿಸ್ತಾನದ ಪಾರ್ಲಿಮೆಂಟಿನ ಮುಂದೆ ಹೇಳಿಕೆ ಕೊಡುತ್ತಾ ಮಿ. ಲಿಯಾಖತ್ ಆಲೀಖಾನರು ಡಿಕ್ಸನ್ ಸಂಧಾನ ನಿರರ್ಥಕವಾದುದಕ್ಕೆ ಭಾರತವೇ ಕಾರಣವೆಂದು ಆರೋಪಿಸಿದ್ದಾರೆ. ವಿಶ್ವಪಲಯದಲ್ಲಿ ಜನಮತ ಸಂಗ್ರಹಿಸುವುದಕ್ಕೆ ಪಾಕಿಸ್ತಾನದ ವಿರೋಧವನ್ನು ವ್ಯಕ್ತಪಡಿಸುತ್ತಾ "ಕಾಶ್ಮೀರದ ಬಿಕ್ಕಟ್ಟು ಕೊಳೆಯುತ್ತಾ ಉಳಿದುಕೊಂಡಿರುವುದು ಏಶ್ಯದ ಶಾಂತಿಯನ್ನು ಕೆಡಿಸಿದೆ; ಮತ್ತು ಭಾರತ-ಪಾಕಿಸ್ತಾನಗಳೊಳಗಿನ ಮೈತ್ರಿಯ ಮೂಲಕ್ಕೇನೇ ಕುಠಾರವನ್ನಿಟ್ಟಿದೆ' ಎಂದಿದ್ದಾರೆ. ಇದಕ್ಕುತ್ತರವೆಂಬಂತೆ ಇದೇ ತಾ. 7ರಲ್ಲಿ ಹೈದರಾಬಾದಿನ ಸಾರ್ವಜನಿಕ ಸಭೆಯಲ್ಲಿ ಸರ್ದಾರ್ ಪಟೇಲರೆಂದರು: "ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವಿರಬಾರದೆಂದು ಭಾರತವು ಹೃತ್ಪೂರ್ವಕ ಅಪೇಕ್ಷಿಸಿತು. ಆದರೂ ಭಾರತವು ತನ್ನ ವೈರಿಯೆಂದು ಪಾಕಿಸ್ತಾನವೇನೋ ಬಹಿರಂಗವಾಗಿ ಘೋಷಿಸಿದೆ. ಪಾಕಿಸ್ತಾನಕ್ಕೆ ನಮ್ಮ ವೈರಿಯಾಗಿ ನಿಲ್ಲಬೇಕೆಂಬ ಮನಸ್ಸಿದ್ದರೆ ಅದು ಹಾಗೆ ಮಾಡಬಹುದು. ಆದರೆ ನಾವು ನಮ್ಮ ಹಾದಿ ಬಿಟ್ಟು ಹೋಗುವಂತಿಲ್ಲ. ಕಾಶ್ಮೀರದ ಕುರಿತು ಭಾರತೀಯ ಮುಸ್ಲಿಮರ ಅಭಿಮತವೇನೆಂಬುದನ್ನು ನನಗೀಗ ತಿಳಿಯಬೇಕಾಗಿದೆ. ಈ ಕುರಿತು ಅವರು ಕ್ಷಿಪ್ರದಲ್ಲೇ ತಮ್ಮ ಅಭಿಮತಗಳನ್ನು ಮುಂದಿಡಬೇಕು. ಕಾಶ್ಮೀರದ ಮುಸ್ಲಿಮರು ಅದನ್ನು ತಿಳಿಯುವಂತಾಗಬೇಕು".

ಭಾರತದೊಳಗೆ ಇನ್ನೂ ಉಳಿದಿರುವ ಗೋವೆಯಂತಹ ವಿದೇಶೀ ವಸಾಹತುಗಳನ್ನು ಭಾರತದೊಂದಿಗೆ ವಿಲೀನಗೊಳಿಸಿಕೊಳ್ಳುವ ಮತ್ತೊಂದು ಸಮಸ್ಯೆಯೂ ಈಗ ಭಾರತದ ಪಾಲಿಗುಳಿದಿದೆ.

ಮೂಲ್ಕಿ ಬ್ಯಾಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ಸ್ವಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolku Bank Ltd..

ಮಂಗಳೂರಲ್ಲಿ ಮದ್ರಾಸ್ ಗವರ್ನರ ದಂಪತಿಗಳು

ಮದ್ರಾಸ ಪ್ರಾಂತದ ಪ್ರಥಮ ಹಿಂದೀ ಗವರ್ನರರಾದ ಕೊಮೊಡೋರ್ ಮಹಾರಾಜ ರಾವ್ ಶ್ರೀ ಸರ್, ಕೃಷ್ಣಕುಮಾರ್ ಸಿಂಗ್ಜಿ ಭಾವ ಸಿಂಗ್ಜಿ, ಕೆ. ಸಿ. ಎಸ್. ಐ, ಭಾವನಗರದ ಮಹಾರಾಜ, ಅವರು ಮಹಾರಾಣಿಯವರೊಡಗೂಡಿ ಇದೇ ತಾ.5ರಲ್ಲು ಸಂಜೆ ನಾಲ್ಕು ತಾಸಿಗೆ ಸ್ಪೆಶಲ್ ರೈಲಿನಲ್ಲಿ ಮಂಗಳೂರಿಗೆ ಚಿತ್ತೈಸಿದರು. ಅವರನ್ನು ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್, ಮಾನ್ಯ ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟಿ ಮೊದಲಾದವರು ಸ್ವಾಗತಿಸಿದರು. ರಿಸರ್ವ್ ದಳದ ಗೌರವ ರಕ್ಷೆಯನ್ನು ನಿರೀಕ್ಷಿಸಿ ವಂದನೆಯನ್ನು ಸ್ವೀಕರಿಸಿದ ಬಳಿಕ ನಗರಸಭೆ ಹಾಗೂ ದ. ಕ. ಜಿಲ್ಲಾ ಬೋರ್ಡುಗಳ ಮಾನಪತ್ರ ಅರ್ಪಣ ಸಮಾರಂಭ ನಡೆಯಿತು.

ಮುನ್ಸಿಪಲ್ ಚೆಯರ್‌ಮೆನ್ ಶ್ರೀ ಎಲ್. ಸಿ. ಪಾಯಿಸರು ನಗರಸಭೆಯ ಮಾನಪತ್ರವನ್ನರ್ಪಿಸಿ, ಮಂಗಳೂರಿನ ಶ್ರೇಷ್ಠತೆಯನ್ನು ವಿವರಿಸಿ, ನಗರದ ಅವಶ್ಯಕತೆಗಳನು ಹೇಳಿದರು.

ನಂತರ ಜಿಲ್ಲಾ ಬೋರ್ಡಿನ ಪರವಾಗಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಮಹಾರಾಜರಿಗೂ, ಶ್ರೀಮತಿ ಶಾರದಾ ತಲ್ವಾರರು ಮಹಾರಾಣಿಯವರಿಗೂ ಹಾರ ಅರ್ಪಿಸಿದರು. ಜಿಲ್ಲಾ ಬೋರ್ಡು ಅರ್ಪಿಸಿದ ಬಿನ್ನವತ್ತಳೆಯಲ್ಲಿ ಜಿಲ್ಲೆಯ ಹಿರಿಮೆಯನ್ನು ವಿವರಿಸಿ, ಮದ್ರಾಸ್ ಸಂಸ್ಥಾನದಲ್ಲಿಯೇ ಅತ್ಯಧಿಕ ಮಳೆ ಸುರಿಯುವ ಸಪ್ಪು ಈ ಜಿಲ್ಲೆಗೆ ಈ ಕಾಲದಲ್ಲಿ ಬರುವವರು ಹಚ್ಚಹಸುರಾಗಿ ಪ್ರಕೃತಿಯ ಬೆಡಗಿನಿಂದ ಕಂಗೊಳಿಸುವ ನಮ್ಮ ಜಿಲ್ಲೆ ಸ್ವಯಂ ಪರಿಪೂರ್ಣವಾಗಿರಬಹುದೆಂದು ಭ್ರಮಿಸಬಹುದು. ಆದರೆ ಈ ವಿಶೇಷ ಮಳೆಯೇ ನಮಗೆ ಮಾರಕವಾಗಿದೆ. ನದಿಗಳು ನೆರೆಯಿಂದ ತುಂಬುತ್ತವೆ. ರಸ್ತೆ ಮತ್ತು ಸೀರಾವರಿ ಕೆಲಸಕ್ಕೆ ತೊಡಕಾಗಿದೆ. ಅಲ್ಲದೆ ಮಲೆನಾಡಿನಲ್ಲಿ ಮಲೇರಿಯಾ ರೋಗ ಹಬ್ಬುವಂತಾಗಿದೆ. ವಿದ್ಯುತ್‌ಶಕ್ತಿಯ ಅಭಾವವು ಈ ಜಿಲ್ಲೆಯಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ತಡೆಯಾಗಿದೆ ಮುಂತಾಗಿ ಹೇಳಲಾಗಿತ್ತು.

ಗವರ್ನರರು ನಗರಸಭೆಯನ್ನೂ ಜಿಲ್ಲಾ ಬೋರ್ಡನ್ನೂ ಅಭಿನಂದಿಸಿ, ನಿಮ್ಮ ಸಂಕಷ್ಟಗಳನ್ನು ಸರಕಾರವು ತಾರತಮ್ಯವಿಲ್ಲದೆ ಪರಿಹರಿಸುವುದೆಂದೂ ಆಹಾರ ಸಮಸ್ಯೆಯ ಕುರಿತು ಎಲ್ಲರೂ ಸಹಕರಿಸಬೇಕೆಂದೂ ಹೇಳಿದರು. ಬಳಿಕ ಗವರ್ನರರು ಮೈದಾನಿನಲ್ಲಿ ಕಟ್ಟಲಿರುವ ನಗರ ಸಭೆಯ ಅಟದ ಮಂದಿರದ ಶಂಕುಸ್ಥಾಪನೆಮಾಡಿ ಕೆನರಾ ಕ್ಲಬ್ಬಿಗೆ ಹೋದರು. ಅಲ್ಲಿ ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಎಸ್. ಶಂಕರ ಆಳ್ವರು ಸ್ವಾಗತಿಸಿದರು. ಲಘು ಫಲಾಹಾರವಾದ ಮೇಲೆ ಜಿಲ್ಲಾ ಕಲೆಕ್ಟರರು ಸಭಿಕರ ಪರಿಚಯ ಮಾಡಿಕೊಟ್ಟರು.

ಈ ಸಮಯದಲ್ಲಿ ಮಹಾರಾಣಿಯವರು ಮಹಿಳಾ ಸಭೆಗೆ ಸಂದರ್ಶನವಿತ್ತು ಅಲ್ಲಿ ಮಂಗಳೂರಿನ ಸ್ತ್ರೀ ಸಂಸ್ಥೆಗಳ ಬಿನ್ನವತ್ತಳೆ ಸ್ವೀಕರಿಸಿ, ಚಟುವಟಿಕೆಗಳನ್ನು ನೋಡಿದರು. ಮಹಿಳಾ ಸಭೆಯ ಪರವಾಗಿ ಶ್ರೀಮತಿ ರಾಜಲಕ್ಷ್ಮಿ ಆಚಾರ್, ಸೇವಾಸಮಾಜದ ಪರವಾಗಿ ಶ್ರೀಮತಿ ಲಕ್ಷ್ಮಿ ಸೆಟ್ಟಿ, ರೆಡ್‌ಕ್ರಾಸ್ ಸಂಘದ ಪರವಾಗಿ ಶ್ರೀಮತಿ ಶಾಂತೇರಿ ಪ್ರಭು ಮತ್ತು ಭಗಿನಿ ಸಮಾಜದ ಪರವಾಗಿ ಶ್ರೀಮತಿ ಕಲ್ಯಾಣಿ ಸೆಟ್ಟಿಯವರೂ ಬಿನ್ನವತ್ತಳೆಗಳನ್ನು ಒಪ್ಪಿಸಿದರು.

ಮಹಾರಾಣಿಯವರು ಈ ಸ್ತ್ರೀಸಂಸ್ಥೆಗಳ ಚಟುವಟಿಕೆಗಳನ್ನು ಶ್ಲಾಘಿಸಿ, ಸ್ತ್ರೀಯರ ಐಕ್ಯಕ್ಕಾಗಿ ಅವರನ್ನು ಅಭಿನಂದಿಸಿದರು.

ದಿನಾಂಕ 6ರಲ್ಲು ಬೆಳಿಗ್ಗೆ ಗವರ್ನರರು ಜಿಲ್ಲಾ ಕಲೆಕ್ಟರ್, ಡಿ. ಎಸ್. ಪಿ. ಮೊದಲಾದವರೊಂದಿಗೆ ಧರ್ಮಸ್ಥಳ ಸಂದರ್ಶಿಸಿ ಮರು ಅಧಿಕ ಸಂಖ್ಯೆಯಿಂದ ಅಲ್ಲಲ್ಲಿ ನೆರೆದಿದ್ದರು. ಗವರ್ನರರು ಧರ್ಮಸ್ಥಳ ತಲ್ಪಿದೊಡನೆ ಅವರಿಗೆ ದೇವಾಲಯದ ಮರ್ಯಾದೆಯಂತೆ ಸ್ವಾಗತ ಮಾಡಲಾಯಿತು. ನಂತರ ಧರ್ಮಸ್ಥಳ ಹಾಲೆಯಲ್ಲಿ ಗವರ್ನರರಿಗೆ ಹೆಗ್ಗಡೆಯವರೊಂದು ಮಾನಪತ್ರವನ್ನು ಅರ್ಪಿಸುತ್ತಾ ದೇವಸ್ಥಾನದ ಧರ್ಮಾದಿಗಳನ್ನು ತಿಳಿಸಿ ಮಲೆನಾಡಿನ 270 ಗ್ರಾಮಗಳ ಸಂಕಷ್ಟಗಳನ್ನು ನಿವೇದಿಸಿದರು. ಮತ್ತು ಅರಣ್ಯಧೋರಣೆಯನ್ನು ಬದಲಾಯಿಸಬೇಕೆಂದರಲ್ಲದೆ ಉಜ್ರೆ ಗುರುಕುಲದ ಮತ್ತು ಇತರ ಶಾಲೆಗಳ ಪರಿಚಯಮಾಡಿ ಸರಕಾರದಿಂದ ಸರಿಯಾದ ಪ್ರೋತ್ಸಾಹಕೋರಿದರು. ಗವರ್ನರರು ತಮ್ಮ ಉತ್ತರದಲ್ಲಿ ದೇವಸ್ಥಾನದದಲ್ಲಿರುವ ವ್ಯವಸ್ಥೆ, ಶುಚಿತ್ವ, ಸೌಂದರ್ಯಾದಿಗಳಿಗೆ ಸಂತೋಷ ವ್ಯಕ್ತಪಡಿಸಿದರು. ವಾರ್ಧಾ ಶಿಕ್ಷಣ ಪದ್ಧತಿಯ ಶಾಲೆಯನ್ನು ನಡೆಸುವುದಕ್ಕಾಗಿಯೂ ಶ್ರೀ ಹೆಗ್ಗಡೆಯವರನ್ನು ಅಭಿವಂದಿಸುತ್ತ, ಆ ಪದ್ಧತಿಯೇ ಉತ್ತಮವೆಂದರು. ಹಿಂತಿರುಗಿ ಬರುವಾಗ ಉಜ್ರೆಯ ಗುರುಕುಲವನ್ನು ಸಂದರ್ಶಿಸಿದರು.

ಮಂಗಳೂರಲ್ಲಿ ಸಂದರ್ಶನೆಗಳಾದ ಮೇಲೆ ಕೂಳೂರಿಗೆ ಹೋಗಿ ಕಂಬಳ ನೋಡಿದರು. ಅಲ್ಲಿಗೆ ಮಹಾರಾಣಿಯವರೂ ಬಂದಿದ್ದು ಬಹುಮಾನ ಹಂಚಿದರು.

ಅಲ್ಲಿಂದ ಗವರ್ನರರು ಕೊಡಿಯಾಲಗುತ್ತಿಗೆ ಹೋಗಿ ಕಂಪೋಸ್ಟು ಪಾರದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕೃಷಿಖಾತೆಯ ಡ್ಯಾರೆಕ್ಟರರು ಶ್ರೀ ಆರ್. ಎಮ್. ಸುಂದರಮ್ ಅವರು ಕಂಪೋಸ್ಟು ತಯಾರಿಯ ಕುರಿತು ವರದಿ ಮಾಡಿದರು. ಸಂಜೆ ಗವರ್ನರರು ತಮ್ಮ ಪತ್ನಿಯೊಂದಿಗೆ ಬಂಟರ ಯಸ್. ಆರ್. ಯಸ್. ಹೋಮಿಗೆ ಹೋಗಿ ಭೂತದ ಕೋಲವನ್ನೂ ಬಯಲಾಟವನ್ನೂ ನೋಡಿದರು. ನಾಡವರ ಸಂಘದವರು ಮಾನಪತ್ರ ಅರ್ಪಿಸಿದರು

ದಿನಾಂಕ 6ರಲ್ಲು ಮಹಾರಾಣಿಯವರು ಶ್ರೀಮತಿ ಶಾಂಭವಿ ಆರ್. ಪೂಂಜರೊಂದಿಗೆ ಲೇಡಿಗೋಷನ್ ಆಸ್ಪತ್ರೆ, ವೆನ್ಲಕ್ ಆಸ್ಪತ್ರೆ, ಬೋಳಾರದ ನರ್ಸರಿ ಶಾಲೆ, ಜಪ್ಪುನಲ್ಲಿರುವ ಭಗಿನೀ ಸಮಾಜದ ಶಿಶುವಿಹಾರವನ್ನು ಸಂದರ್ಶಿಸಿದರು.

ನೋಟೀಸು

ಉಡ್ಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 426/1950

ಅಂಣಯ್ಯ ಪೂಜಾರಿ ಕೂಡಾ 8 ಜನರು —ವಾದಿರು

ವ,ತ್ತು

ಬಿಡುಗು ಮರಕಾಲ್ತಿ ಕೂಡಾ- 2 ಜನರು —ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿಯ ಹಕ್ಕಿನ ಬಾಬ್ತು ಮೂಡುತೋನ್ಸೆ ಗ್ರಾಮದ ಸರ್ವೆ ನಂಬ್ರ 19/2ನೆ ಸ್ಥಳಕ್ಕಾಗಿ ಮುಂದೆ ಪಡುಬದಿಗೆ ಹೋಗುವ ದಾರಿಯು ಅನಾದಿಯಿಂದ ವಾಮೂಲು ಜನಜಾನುವಾರುಗಳು ನಿರಾತಂಕವಾಗಿ ಉಪಯೋಗಿಸುವ ಹಕ್ಕು ಉಂಟೆಂತ ಡಿಕ್ಲೇರು ಮಾಡಿ ಹಾಗೆ ಅದನ್ನು ಉಪಯೋಗಿಸುವಲ್ಲಿ ಪ್ರತಿವಾದಿರು ಮತ್ತು ಅವರ ಕಡೆಯವರು ಆತಂಕಿಸದಂತೆ ಯಿಂಜಕ್ಷನ್ ಕೊಡಿಸಬೇಕಾಗಿ ವಗೈರೆ ವಾದಿರು ದಾಖಲು ಮಾಡಿದ ಮೊಕ್ಕಂಡ ವ್ಯಾಜ್ಯವು ತಾರೀಖು 24-10-1950ಕ್ಕೆ ತನಖಿಗೆ ಯಿಟ್ಟಿದೆ. ಆಕ್ಷೇಪಣೆಯಿದ್ದವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಖುದ್ದಾಗೈ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಯೀ ಮೂಲಕ ತಿಳಿಸಿಯದೆ.

K Laxminarayana Aithal

ಸಂಜೆ ಬೈಂದೂರಿನ ಸೈಂಟ್ ಅಗ್ನೇಸ್ ಕಾಲೇಜು, ಕೊಡಿಯಾಲಬೈಲಿನ ಮಹಿಳಾ ಕ್ಷೇಮ ಚಿಂತನಾ ಕೇಂದ್ರ, ಸಂದರ್ಶಿಸಿದರು. ಮರುದಿನ ಸರಕಾರಿ ಕಾಲೇಜಿನಲ್ಲಿ ಸೇವಾಸಮಾಜದ ಪ್ರದರ್ಶನದ ಉದ್ಘಾಟನೆ ಮಾಡಿ ಬಾಲಿಕಾಶ್ರಮ, ಬೆಸೆಂಟ್ ಶಾಲೆ, ಬಂಟರ ವಿದ್ಯಾರ್ಥಿನಿ ಭವನಗಳನ್ನು ಸಂದರ್ಶಿಸಿದರು.

ಸ್ವೀಕಾರ

ಪೂಜಾ—(ಸಿಂಪಿ ಲಿಂಗಣ್ಣ) ಪ್ರಕಾಶಕರು- ಶಾಂತಿ ಸಾಹಿತ್ಯ ಮಾಲೆ, ಬೆಲೆ 0-12-0

ಮದುವೆಯೋ ಮನೆಹಾಳೋ? (ಅ. ನ. ಕೃಷ್ಣರಾವ್) ಪ್ರಕಾಶಕರು-ಆನಂದ ಬ್ರದರ್ಸ್, ಬೆಂಗಳೂರು, ಬೆಲೆ 1-8-0

ಸೋಲೋ ಗೆಲುವೋ (ದೇವುಡು) ಪ್ರಕಾಶಕರು-ಆನಂದ ಬ್ರದರ್ಸ್, ಬೆಂಗಳೂರು, ಬೆಲೆ 1-8-0

ಮುಯ್ಯಿಗೆ ಮುಯ್ಯಿ (ಅ. ನ. ಕೃಷ್ಣ ರಾವ್) ಪ್ರಕಾಶಕರು-ಆನಂದಬ್ರದರ್ಸ್, ಬೆಂಗಳೂರು, ಬೆಲೆ 2-4-0

ಕಳ್ಳರ ಕೂಟ (ದೇವುಡು) ಪ್ರಕಾಶಕರು-ಆನಂದ ಬ್ರದರ್ಸ್, ಬೆಂಗಳೂರು, ಬೆಲೆ 0-13-0

ಕನ್ನಡ ಪಠ್ಯದ ಟಿಪ್ಪಣಿ (Notes on Kannada Text for VIII Std Public Examination 1951) ಬರೆದವರು- ಶ್ರೀ. ಡಿ. ವಿ. ಹೊಳ್ಳ, ವಿದ್ವಾನ್, ಕುಂದಾಪುರ, ಬೆಲೆ 0-14-0

8ನೇ ತರಗತಿಯ (G. S. L. C.) ವಿದ್ಯಾರ್ಥಿಗಳ ಉಪಯೋಗಾರ್ಥವಾದ ಕನ್ನಡ ಟಿಪ್ಪಣಿ.

(ವಿಮರ್ಶೆ ಯಥಾವಕಾಶ)

ಕಬ್ಬಿನ ಆಲೆಕಣೆ

2 ಹೋರಿಯಿಂದ ಸುಲಭ ತಿರುಗುವಂಥ ಅತಿ ಉತ್ತಮ ದರ್ಜೆಯ ಗಾಣಗಳು. ದರ 1ಕ್ಕೆ ರೂ. 465/- ಗಂಗೊಳ್ಳಿ ಯಾ ಮಲ್ಪೆ ಬಂದರ ಡಲಿವರಿ. ಬರೆಯಿರಿ:

G. N. Hemmady,

Goldville Engg: Works,

P B 6204, Bombay 10

ನಿಮಗೆ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ ಪಿ ದ್ವಾರ ರೂ 1-14-0.

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ, ಉಡುಪಿ

ದಕ್ಷಿಣ ಕನ್ನಡ

ಕಟೀಲು— ತಾ 2-10-50ರಂದು ಮಹಾಗಣಪತಿ ಪ್ರಾಥಮಿಕ ಶಾಲೆಯಲ್ಲಿ ಪಟೇಲ್ ಮುದ್ದಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಮತ್ತು ಗೊಬ್ಬರ ಸಂಗ್ರಹದ ದಿನಾಚರಣೆಯು ಜರಗಿತು. ಶ್ರೀಯುತ ಸಂಜೀವ ಭಂಡಾರಿ, ಎಚ್. ಎಸ್. ಕುಡ್ವ, ಎಸ್. ಎ. ಭಂಡಾರಿ ಇವರು ಸಮಯೋಚಿತ ಭಾಷಣ ಮಾಡಿದರು. ಶಾಲಾ ಬಾಲಕ ಬಾಲಕಿಯರಿಂದ ವಿವಿಧ ಚಟುವಟಿಕೆಗಳಾದುವು.

ಮೂಡುಬಿದ್ರೆ— ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ 61ನೇ ವರ್ಷದ ಷಷ್ಠ್ಯಬ್ದಿ ಪೂರ್ತಿ ಮಹೋತ್ಸವವು ಮೂಡುಬಿದ್ರೆಯಲ್ಲಿ ತಾ. 22-10-50ನೇ ರವಿವಾರ ಜರಗಲಿದೆ. ಪೂಜಾಪ್ರಾರ್ಥನೆ, ಮಹಾಸಭೆ, ಮಾನಪತ್ರ ಸಮರ್ಪಣೆ ಮೊದಲಾದ ಕಾರ್ಯಕ್ರಮಗಳಿವೆ. ಮಹಾಸಭೆಯ ಅಧ್ಯಕ್ಷಸ್ಥಾನವನ್ನು ರಾಷ್ಟ್ರಕವಿ ಮಂಜೇಶ್ವರ ಗೋವಿಂದಪೈಗಳು ವಹಿಸಲಿರುವರು. ಸರ್ವರಿಗೂ ಸ್ವಾಗತವಿದೆ, ಎಂದು ಸ್ವಾಗತ ಸಮಿತಿಯವರು ತಿಳಿಸುತ್ತಾರೆ.

ಸೂಡ—ಇದೇ ತಾ. 2ರಲ್ಲು ಗಾಂಧಿ ಜಯಂತಿಯನ್ನು ಈ ಗ್ರಾಮದ ಮೂರು ಶಾಲೆಗಳ ಅಧ್ಯಾಪಕರೂ ಬಾಲಕರೂ ದೇವಸ್ಥಾನದಬಳಿ ನೆರೆದು ಪಟೇಲ್ ಶ್ರೀ ಎ. ಶೀನಪ್ಪ ಹೆಗ್ಡೆರ ನೇತೃತ್ವದಲ್ಲಿ ಧ್ವಜಾರೋಹಣ ಸಮಾರಂಭವನ್ನು ಪೂರೈಸಿ ಮೆರವಣಿಗೆಯಿಂದ ಬೋರ್ಡು ಶಾಲೆಗೆ ಬಂದು ಅಲ್ಲಿ ಸಿದ್ಧಗೊಳಿಸಿದ ಹೊಂಡಕ್ಕೆ ಕಸಕಡ್ಡಿಯನ್ನು ತುಂಬಿಸಿ ಸಪ್ತಾಹ ವಿಧಿಯನ್ನು ಪೂರೈಸಿದರು. ನಂತರ ದೇವಸ್ಥಾನದ ಮಾಳಿಗೆಯಲ್ಲಿ ಶ್ರೀ ಎಮ್. ಗೋಪಾಲ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ದೇವು ಶೆಟ್ಟಿ, ಗಣಪತಿ ಕಾಮತ್, ಅಣ್ಣಯ್ಯ ಶೆಟ್ಟಿ ಮೊದಲಾದವರ ಭಾಷಣಗಳಾದುವು.

ಹೆಡ್ಡೂರು—ಶಾಲಾ ಮಕ್ಕಳ ಮೆರವಣಿಗೆ, ಶಾಲೆ ಮತ್ತು ಶ್ರೀ ಮದನಂತ ಪದ್ಮನಾಭ ಸ್ವಾಮಿ ದೇವಳದಲ್ಲಿ ಶ್ರೀಗಳಾದ ಪಂಜುನಾಥಾಚಾರ್ಯ ಮತ್ತು ಎ. ಕೃಷ್ಣಯ್ಯ ಹೆಗ್ಡೆಯವರಿಂದ ಧ್ವಜಾರೋಹಣ, ಸಭೆ, ಭಾಷಣ, ಶಾಲಾ ಮಕ್ಕಳಿಗೆ ತಿಂಡಿ ಹಂಚುವಿಕೆ, ನೂಲುವ ಸ್ಪರ್ಧೆ, ಬಹುಮಾನ ವಿತರಣೆ, ರಾತ್ರಿ ಗಾಂಧಿಜೀ ರಚನಾತ್ಮಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಹಸನ ಮೊದಲಾದ ಕಾರ್ಯಕ್ರಮಗಳಿಂದ ಗಾಂಧಿ ಜಯಂತಿ ಮತ್ತು ಗೊಬ್ಬರ ಸಪ್ತಾಹಾರಂಭವು ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಎ. ವೀರಣ್ಣ ಹೆಗ್ಡೆ, ಸೂಡ ಜಗನ್ನಾಥ ಹೆಗ್ಡೆ, ಸದಾನಂದ ಗೋಟ್ಕರ್, ರಮೇಶ ಅಡಿ ಮೊದಲಾದವರ ಭಾಷಣಗಳಿದ್ದುವು.

ಶಂಕರ ನಾರಾಯಣ—ತಾ. 3ರಲ್ಲು ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಮಿಶ್ರಗೊಬ್ಬರ ಸಪ್ತಾಹವು ಸ್ಥಳೀಯ ಸಬ್ ರಿಜಿಸ್ಟ್ರಾರ್ ಶ್ರೀ ... ಎಮ್. ಲೂಯಿಸರ ಅಧ್ಯಕ್ಷತೆಯಲ್ಲಿ ರಂಗವಾಗಿ ಪ್ರಾರಂಭಿಸಲಾಯಿತು. ಶ್ರೀಗಳಾದ ಎಮ್. ಎಮ್. ಜೋಯಿಸ್, ಬಿ. ... ಅಡಿಗ, ಎಸ್ ಕೆ. ಹಸನ್, ನರಸಿಂಹಾಚಾರ್, ಕೆ. ಟಿ. ಹೆಗ್ಡೆ ಮೊದಲಾದವರು ಮಿಶ್ರಗೊಬ್ಬರ ತಯಾರಿಕೆಯ ಕುರಿತು ಮಾತಾಡಿ ಆಹಾರೋತ್ಪಾದನಾ ಕಾರ್ಯದಲ್ಲಿ ಸರ್ವರೂ ಮುಂದಾಗಬೇಕೆಂದು ಹೇಳಿದರು. ನಂತರ ನಾಲ್ಕು ಮಿಶ್ರಗೊಬ್ಬರ ಹೊಂಡಗಳನ್ನು ತೆರೆಯಲಾಯಿತು.

ರಾಮಕುಂಜ— ಇಲ್ಲಿಯ ಎಡ್ಡ್ ಸಂಸ್ಕೃತ ಶಾಲೆಗೆ ಯೋಗ್ಯ ಕಟ್ಟಡವನ್ನು ಕಟ್ಟಿಸುವ ಕಾರ್ಯವು ಭರದಿಂದ ಸಾಗುತ್ತಿದೆ. ಈ ಕಾರ್ಯದ ಸಕಲ ವೆಚ್ಚವನ್ನು ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ... ತೀರ್ಥ ಸ್ವಾಮಿಗಳವರು ವಹಿಸಿದವರು.

ಮೂಲೂರು: ಊರ ಮಹನೀಯರ ಸಮಿತಿಯ ನೇತೃತ್ವದಲ್ಲಿ ಇದೇ ತಾ. 2ರಲ್ಲು ಪ್ರಾರಂಭವಾದ ಮಿಶ್ರಣ ಗೊಬ್ಬರ ಸಪ್ತಾಹವು ಇದೇ ತಾ. 8ರಲ್ಲು ಕೊನೆಗೊಂಡಿತು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರು ಮಿಶ್ರಣ ಗೊಬ್ಬರದ ಹೊಂಡವನ್ನು ತೆರೆದ ನಂತರ ಸಾರ್ವಜನಿಕ ಸಭೆಯು ಶ್ರೀ ಪಿ. ಲಕ್ಷ್ಮಿನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಸೇರಿತು. ಆದರ್ಶ ಗೊಬ್ಬರ ಹೊಂಡಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಶ್ರೀ ಮೂಲೂರು ಕಂಕಣಗುತ್ತು ಜಗನ್ನಾಥ ಸೆಟ್ಟರಿಗೂ ಇತರ ಬಹುಮಾನಗಳು ಶ್ರೀಗಳಾದ ಚಂದು ಪೂಜಾರಿ, ವೈ. ಪಾಲಣ್ಣನವರಿಗೂ ಅಧ್ಯಕ್ಷರಿಂದ ಕೊಡೋಣಾದುವು.

ಕುಂಬಳೆ:— ಈ ಕೇಂದ್ರದಲ್ಲೂ ಗಾಂಧಿ ಜಯಂತಿ ಮತ್ತು ಗೊಬ್ಬರ ಸಪ್ತಾಹವು ಯಶಸ್ವಿಯಾಗಿ ಜರಗಿತು ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸರಕಾರಿ ವಿಕ್ರಿತ ಖಾದಿ ಭಂಡಾರವನ್ನು ತೆರೆದರು.

ಪಡುತೋನ್ಸೆ—ತೋನ್ಸೆ ಪಂಚಾಯತ ಬೋರ್ಡು ಪ್ರೆಸಿಡೆಂಟರ ನೇತೃತ್ವದಲ್ಲಿ ಗ್ರಾಮಾಧಿಕಾರಿಗಳು, ಗ್ರಾಮಸ್ಥರು, ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಕೂಡುವಿಕೆಯಿಂದ ಗಾಂಧಿ ಜಯಂತಿ ದಿನ ಗೊಬ್ಬರ ಸಪ್ತಾಹವನ್ನು ಆಚರಿಸಲಾರಂಭಿಸಿದರು. ಶ್ರೀ ಟಿ. ಶ್ರೀನಿವಾಸರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕೊಕ್ಕರ್ಣೆ— ತಾ 2-10-50ರಲ್ಲಿ ಸ್ಥಳೀಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಗೊಬ್ಬರ ಸಪ್ತಾಹವನ್ನು ಆಚರಿಸಲಾಯಿತು. ಶ್ರೀಗಳಾದ K. ರಾಜು ಬೋಂಟ್ರ, ಕೆಂಜೂರು ಮಹಾಬಲ ಶೆಟ್ರು ಕೃತಕ ಗೊಬ್ಬರದ ಉಪಯೋಗ ಹಾಗೂ ನೈಸರ್ಗಿಕ ಗೊಬ್ಬರದ ಅಭಿವೃದ್ಧಿಯ ಯೋಜನೆಯ ಕುರಿತು ಭಾಷಣವನ್ನಿತ್ತರು.

ನೀಲಾವರ—ವ ಹಿಸಮರ್ದಿನಿ ಶಾಲೆಯ ವರ್ಧಂತಿಯು ತಾ. 16-10-50ಕ್ಕೆ ಜರಗಲಿದೆ. ಸರ್ವರಿಗೂ ಸ್ವಾಗತವಿದೆಯೆಂದು ಮೆನೇಜರ್ ಶ್ರೀ ಅಣ್ಣಪ್ಪ ಭಟ್ಟರು ತಿಳಿಸುತ್ತಾರೆ.

ತೆಕ್ಕಟ್ಟೆ—ಸ್ಥಳೀಯ ಕಾಂಗ್ರೆಸ್ ಪಂಚಾಯತ ಸಮಿತಿಯ ನೇತೃತ್ವದಲ್ಲಿ ಗಾಂಧಿ ಜಯಂತಿ ಮತ್ತು ಗೊಬ್ಬರ ಸಪ್ತಾಹವು ಶ್ರೀ ಕೆ. ಮಹಾಬಲ ಹತ್ವಾರರ ಅಧ್ಯಕ್ಷತೆಯಲ್ಲಿ ಜರಗಿತು. ರೆವಿನ್ಯೂ ಇನ್ಸ್‌ಪೆಕ್ಟರ್, ಡೆಮೋನ್‌ಸ್ಟ್ರೇಟರ್, ಜಿ. ಗೋವಿಂದ ಸೆಟ್ಟರು ಮತ್ತು ವಿ. ಶಿವರಾಮ ಸೆಟ್ಟರ ಭಾಷಣಗಳಾದುವು.

ಫಲಿಮಾರು— ತಾ 5ರಲ್ಲಿ ಗೊಬ್ಬರ ಸಪ್ತಾಹವು ಫಲಿಮಾರು ಶಾಲೆಯ ಕೋಲಿನಲ್ಲಿ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಪಿ. ಎಸ್. ತಿಮ್ಮಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಗೊಬ್ಬರದ ಮಹತಿಕೆಯ ಕುರಿತು ಭಾಷಣಗಳು ಜರಗಿದವು. ಅಧ್ಯಕ್ಷರ ಭಾಷಣವು ಸರ್ವರ ಮೆಚ್ಚುಗೆಗೆ ಪಾತ್ರವಾಗಿತ್ತು.

ಕಟಪಾಡಿ— ತ. 2-10-50ನೇ ಪೂರ್ವಾಹ್ನ ಏಣಗುಡ್ಡೆ ಶ್ರೀ ದ ಗಾ ಪರಮೇಶ್ವರಿ ಪ್ರಾಥಮಿಕ ಶಾಲಾ ಮಕ್ಕಳಿಂದ ಮೆರವಣಿಗೆ ಮತ್ತು ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲ್ ವಠಾರದಲ್ಲಿ ಸಾರ್ವಜನಿಕ ಧ್ವಜವಂದನೆ ನೆರವೇರಿಸಲಾಯಿತು. ನಂತರ ಕಟಪಾಡಿ ಶಾಲೆಯವರು ಏರ್ಪಡಿಸಿದ ಗೊಬ್ಬರದ ಹೊಂಡವನ್ನು ಉದ್ಘಾಟಿಸಲಾಯಿತು. ಅಪರಾಹ್ನ ತಾಸು 5ಕ್ಕೆ ಸರಿಯಾಗಿ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯಕರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿಸಲಾಗಿದೆ. ತಾ. 5ರಲ್ಲಿ ಕುಂದಾಪುರ ಡಿವಿಜನಲ್ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ನೇತೃತ್ವದಲ್ಲಿ 'ಗೊಬ್ಬರ ಸಪ್ತಾಹ' ಕಾರ್ಯಕ್ರಮಗಳಾದುವು.

ಹಿರಿಯಡ್ಕ—ಜ ... ಜಯಂತಿ ಹಾಗೂ, ಮಿಶ್ರ ಗೊಬ್ಬರದ ಪ್ರಚಾರ ಕಾರ್ಯ ಯಶಸ್ವಿಯಾಗಿ ನಡೆಯಿತು. ತಾರೀಕು 2-10-50ರಲ್ಲು ಗಾಂಧಿ ಮೈದಾನದಲ್ಲಿ ಶ್ರೀ ಡಾ. ಬಿ. ಚಂದಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾಷಣಗಳಾದವು. ತಾ. 5ರಲ್ಲು ಯಕ್ಷಗಾನ ಕಾಲಕ್ಷೇಪವೂ, ಶ್ರೀ ಅನಂತಪ್ಪ ಕಿಣಿಯರ ಭಾಷಣ, ತಾ. 8ರಲ್ಲಿ ಕುಂದಾಪುರ ಸಬ್ ಕಲೆಕ್ಟರರ ಭಾಷಣಗಳಿದ್ದುವು.

ನಿಧನ

ಕಲ್ಯಾಣಪುರ—ತಾ. 27-9-50ರಲ್ಲಿ ಮೂಡು ತೋನ್ಸೆ ಶ್ರೀ ರವಿರಾಜ ಹೆಗ್ಡೇರು ತರುಣಪ್ರಾಯದಲ್ಲೇ ಸ್ವರ್ಗಸ್ಥರಾಗಿರುವುದು ವಿಷಾದಕರವಿದೆ. ದಿವಂಗತರು ತರುಣೋತ್ಸಾಹಿಯಾಗಿದ್ದು ಬಡ ಬಗ್ಗರಿಗೆ ತುಂಬಾ ಉಪಕಾರವಿತ್ತವರಾಗಿದ್ದಾರೆ ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

ತಮ್ಮ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್
ಸ್ಥಾಪಿತ 1906
ಕರಾಭದೊಳಗೆ 40 ಕ್ಕಿಂತಲೂ ಹೆಚ್ಚು ಶಾಖೆಗಳು
ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು
ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್, ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದಿರುವ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಬೇಕೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಸರಕಾರಿ ಮರಗಳ ಸಂರಕ್ಷಣೆ— ಸರಕಾರಿ ಸ್ಥಳಗಳಲ್ಲಿರುವ ಮರಮಟ್ಟುಗಳನ್ನು ಕಾಪಾಡುವುದು ಹಾಗೂ ಕಳ್ಳಾಟಿಕೆಯಿಂದ ಕಡಿದುಕೊಂಡು ಹೋಗದಂತೆ ನೋಡಿಕೊಳ್ಳುವುದು ಸರಕಾರಿ ನೌಕರರ ಕರ್ತವ್ಯ ಮಾತ್ರವಲ್ಲದೆ ಪ್ರತಿಯೊಬ್ಬ ಹಳ್ಳಿಯ ನಿವಾಸಿಗಳ ಕರ್ತವ್ಯವೆಂದು ಎಲ್ಲರೂ ತಿಳಿದಿರತಕ್ಕ ವಿಷಯ. ಆದರೆ ಪುತ್ತೂರು, ಕಾಸರಗೋಡು ತಾಲೂಕುಗಳಲ್ಲಿ, ಸರಕಾರಿ ಸ್ಥಳಗಳಲ್ಲಿರುವ ಬೆಲೆ ಬಾಳುವ ಮರಗಳನ್ನು ಹೆಚ್ಚಾಗಿ ಕಡಿದು ಸಾಗಿಸುತ್ತಿದ್ದರೂ ಗ್ರಾಮಸ್ಥರ ಸಹಕಾರವಿಲ್ಲದೆ ಅಂಥಾ ಕಳ್ಳರುಗಳನ್ನು ಕಂಡು ಹಿಡಿಯುವುದು ಕಷ್ಟಸಾಧ್ಯವೆಂದೂ ಕಂಡು ಬಂದಿರುತ್ತದೆ. ಆದುದರಿಂದ ಹಾಗೆ ಹಿಡಿದು ಕೊಟ್ಟು, ಯಾ ಹಿಡಿಯುವರೆ ಸಹಾಯ ಮಾಡಿ, ನಂಬ್ರಗಳನ್ನು ಯಶಸ್ವಿಗೊಳಿಸುವವರಿಗೆ ಹಣದ ರೂಪದಲ್ಲಿ ಬಹುಮಾನಗಳನ್ನು ಕೊಡಿಸುವುದಾಗಿ ಮಾನ್ಯ ಮದರಾಸು ಗವರ್ನಮೆಂಟಿನವರು ಆಜ್ಞೆ ಮಾಡಿರುತ್ತಾರೆ. ಆದುದರಿಂದ ಸಾರ್ವಜನಿಕರು ತಮ್ಮ ಜವಾಬ್ದಾರಿಯನ್ನು ತಿಳಕೊಂಡು, ಕಳ್ಳರುಗಳನ್ನು ಹಿಡಿದು ಕೊಡಬೇಕಾಗಿಯೂ, ಈ ಮೇಲಿನ ರಿಯಾಯತಿಗಳನ್ನು ಉಪಯೋಗಿಸಿಕೊಳ್ಳಬೇಕಾಗಿಯೂ ಮತ್ತು ಸರಕಾರಿ ಮರಗಳನ್ನು ಸಂರಕ್ಷಿಸಬೇಕಾಗಿಯೂ ಮಾನ್ಯ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರು ಅಪೇಕ್ಷಿಸುತ್ತಾರೆ.

ಮುಂಬಾಯಿ

ತಾ. 2-10-50ರಲ್ಲಿ ಪಟೇಲ್ ಕಾಮಗಾರ್ ಧರ್ಮಾರ್ಥ ರಾತ್ರಿಶಾಲೆಯಲ್ಲಿ ಶ್ರೀ ಸತ್ಯಮೂರ್ತಿಯವರ ಅಧ್ಯಕ್ಷತೆಯಲ್ಲಿ 'ಗಾಂಧಿಜಯಂತಿ'ಯನ್ನು ಆಚರಿಸಲಾಯಿತು. ಶ್ರೀಗಳಾದ ಪಡ್ಡನೇ ರಘುರಾಮ ಸೆಟ್ಟಿ, H. N ತಿಂಗಳಾಯರು ಗಾಂಧೀಜೀಯವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಹೇಳಿದರು. ಅಧ್ಯಕ್ಷರು ರಾಷ್ಟ್ರಪಿತನ ದಿವ್ಯ ಸಂದೇಶದ ಮಹತ್ವ ಮತ್ತು ಜನತೆಯು ಗಾಂಧಿ ತತ್ವದ ಅನುಕರಣೆಯನ್ನು ಮಾಡುವುದರ ಅವಶ್ಯಕತೆಯನ್ನು ವಿವರಿಸಿದರು.

ಹೈದರಾಬಾದ್

ಹೈದರಾಬಾದ್ ಸ್ಟೇಟಿನ ರಾಯಚೂರಿನ ಬಳಿ ದೇವದುರ್ಗದಲ್ಲಿ ಡಾಕ್ಟರ್ ಟಿ. ರಘುನಾಥ ಶೆಟ್ಟಿಯವರು ಪ್ರೇಮಾ ಮೆಡಿಕಲ್ ಹಾಲ್‌ಯೆಂಬ ದವಾಖಾನೆಯನ್ನು ತೆರೆದಿರುವರು. ಊರ ಪ್ರಮುಖರೂ, ಕಾಂಗ್ರೆಸ್ ಮುಂದಾಳುಗಳೂ, ಸರಕಾರಿ ಉದ್ಯೋಗಸ್ಥರೂ, ನೆರೆದ ಸಭೆಯಲ್ಲಿ ಸಂದರ್ಭೋಚಿತ ಭಾಷಣಗಳಾದವು. ನಂತರ ಲಘು ಉಪಹಾರದೊಂದಿಗೆ ಸಭೆಯು ಅಂತ್ಯವಾಯಿತು.

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ, ಪುತ್ತೂರು ತಾಲೂಕು, ಸುಬ್ರಹ್ಮಣ್ಯ ಗ್ರಾಮದ ಕುಲ್ಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು 1950ನೇ ಇಸವಿ ನವಂಬ್ರ ತಾರೀಕು 25ರಿಂದ ದಶಂಬ್ರ ತಾರೀಕು 10ರ ವರೇಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಹುಣ್ಣಿಮೆ ದಿವಸ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆ ದಿವಸದ ಯಾ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತ ಜರಗುವುದು

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ ಎರಡಾಣೆ ಮೇರೆಗೆ ಫೀಸು ವಸೂಲು ಮಾಡಲಾಗುವುದು. ಒಂದು ತಿಂಗಳ ಕೆಳಗಿನ ಕರುಗಳನ್ನು ಸದ್ರಿ ಫೀಸುಗಳಿಂದ ವಿರಹಿತ ಪಡಿಸಲಾಗಿಯದೆ. ಸಂದರ್ಭ ಒದಗಿದಲ್ಲಿ ಸದ್ರಿ ಫೀಸನ್ನು ಏರಿಸಲು ಬಹುದು ಯಾ ಅಧಿಕ ಫೀಸನ್ನು ವಸೂಲು ಮಾಡಲು ಬಹುದು. ಪರಂತು ರೆವಿನ್ಯೂ ಡಿವಿಜನಲ್ ಆಫೀಸರರು ಅವಶ್ಯವೆಂದು ತೋರುವ ಯಾವತ್ತು ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿರಹಿತ ಪಡಿಸಬಹುದು.

H Narasimha,
ರೆವಿನ್ಯೂ ಡಿವಿಜನಲ್ ಆಫೀಸರರು.
ಪುತ್ತೂರು, ತಾ 15-9-50.

— ನಿಯಂತ್ರಣಗಳು —

ಲೇಖಕ:– ಶ್ರೀ ಕಾಪೆರ್ಡ ಲಕ್ಷ್ಮೀನಾರಾಯಣ ಆಳ್ವ.

ಲೇಖಾಂಕ ೧.

ಪಂಡಿತ ಜವಾಹಿರಲಾಲ ನೆಹರೂರವರು ಇತ್ತೀಚೆಗೆ ನಿಯಂತ್ರಣಗಳ ಕುರಿತಾಗಿ ಮಾತಾಡುತ್ತಾ “ಸರಕಾರವು ಸದ್ಯಕ್ಕೆ ನಿಯಂತ್ರಣಗಳನ್ನು ತೆಗೆಯುವುದಿಲ್ಲ. ಆದುದರಿಂದ ನಿಯಂತ್ರಣಗಳು ಹೋಗುವವೆಂದು ಯಾರೂ ಭ್ರಮಿಸುವುದು ಬೇಡ. ದೇಶದಲ್ಲಿ ವಸ್ತುಗಳ ಕೊರತೆಯಿರುವ ತನಕ ನಿಯಂತ್ರಣಗಳನ್ನು ಇಟ್ಟೇ ತೀರುವೆವು” ಎಂದು ತಮ್ಮ ಸರಕಾರದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸರಕಾರದ ಈ ಧೋರಣೆಯನ್ನು ನಾಸಿಕ ಅಧಿವೇಶನದಲ್ಲಿ ತುಮುಲಸಿನ ಚರ್ಚೆಯಾದ ನಂತರ ಕಾಂಗ್ರೆಸ್ಸು ಕೂಡಾ ಬಹುಮತಗಳಿಂದ ಸಮರ್ಥಿಸಿತು.

ಇದೇ ವಿಚಾರದ ಕುರಿತು ಕೇಂದ್ರ ಸರಕಾರದ ಪೂರೈಕೆ ಮತ್ತು ಉದ್ದಿಮೆ ಮಂತ್ರಿಗಳಾದ ಹರೇಕೃಷ್ಣ ಮೆಹತಾಬರವರು “ನಾಸಿಕ ಅಧಿವೇಶನದಲ್ಲಿ ನಿಯಂತ್ರಣಗಳು ಬೇಕು ಎಂದು ನಿರ್ಣಯವಾದುದರಿಂದ ಇನ್ನು ಆ ಬಗ್ಗೆ ವಾದವಿವಾದಗಳು ನಿಲ್ಲಬೇಕು. ನಿಯಂತ್ರಣಗಳು ಯಶಸ್ವಿಯಾಗುವಂತೆ ಎಲ್ಲರೂ ಪ್ರಯತ್ನಿಸಬೇಕು ಮತ್ತು ಪ್ರಬಲವಾದ ಜನಾಭಿಪ್ರಾಯವನ್ನು ನಿರ್ಮಾಣ ಮಾಡಬೇಕು” ಎಂಬ ಆಶಯದ ಒಂದು ಸುದೀರ್ಘ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಪರಿಸ್ಥಿತಿ ಹೀಗಿರುವಾಗ ಇನ್ನು ಪುನಃ ನಿಯಂತ್ರಣಗಳ ಕುರಿತಾಗಿ ಏಕೆ ಈ ಬರಹ ಎಂದು ಹಲವಾರು ಮಂದಿ ಭಾವಿಸಬಹುದು. ಆದರೆ ನಿಯಂತ್ರಣಗಳು ಬೇಕೋ ಬೇಡವೋ ಎಂಬ ಕಾಲಕ್ಕಿಂತಲೂ ಇಂದು– ನಿಯಂತ್ರಣಗಳು ಬೇಕು ಎಂದಾದ ಮೇಲೆ ನಾವು ನಿಯಂತ್ರಣಗಳ ಕಡೆಗೆ ಹೆಚ್ಚು ಗಮನವಿಟ್ಟು ನೋಡಬೇಕಾಗಿದೆ. ಈಗ ಅದರೆಡೆಗೆ ವಿಮರ್ಶಾತ್ಮಕ ದೃಷ್ಟಿಯಿಂದ ಕಂಡು ಅದರಲ್ಲಿರುವ ಕುಂದು ಕೊರತೆಗಳನ್ನು ಅರಿತು, ಅವುಗಳನ್ನು ನಿವಾರಿಸಲು ಪ್ರಯತ್ನಿಸಿ, ನಿಯಂತ್ರಣಗಳನ್ನು ಆದಷ್ಟು ದೋಷರಹಿತವಾಗಿ ಮಾಡುವುದು ನಮ್ಮ ಕರ್ತವ್ಯ. ನಾವು ಸ್ವೀಕರಿಸಬೇಕಾದುದನ್ನು ಆದಷ್ಟು ಶುದ್ಧೀಕರಿಸಿ ಸ್ವೀಕರಿಸಿಕೊಳ್ಳುವುದು ನ್ಯಾಯ ಸಮ್ಮತವಷ್ಟೇ? ಆದ್ದರಿಂದ ನಾವು ಈ ಲೇಖನದಲ್ಲಿ ಇಂದಿನ ನಿಯಂತ್ರಣಗಳಲ್ಲಿರುವ ಕೆಲವೊಂದು ಲೋಪದೋಷಗಳನ್ನು ಎತ್ತಿ ತೋರಿಸಿದ್ದೇವೆ. ಅಲ್ಲದೆ ಕೆಲವೆಡೆ ಕೆಲವೊಂದು ಪರಿಹಾರವನ್ನೂ ಸೂಚಿಸಿದ್ದೇವೆ. ಬಲ್ಲ ಜನ ಇದರಲ್ಲಿ ನ್ಯಾಯವಾದುದನ್ನು ಗ್ರಹಿಸಿ, ನಿಯಂತ್ರಣಗಳು, ಸಾಧ್ಯವಿದ್ದಷ್ಟು ದೋಷರಹಿತವಾಗಿರುವಂತೆ ಮಾಡಲು ಪ್ರಯತ್ನಿಸುವರಾಗಿ ನಂಬಿದ್ದೇವೆ.

ಇಂದು ನಿಯಂತ್ರಣಗಳಲ್ಲಿರುವ ಒಂದು ಅತೀ ದೊಡ್ಡ ದೋಷದ ಅರಿವಾಗಿದ್ದ ರಾಜರ್ಷಿ ಬಾಬು ಪುರುಷೋತ್ತಮದಾಸ ಟಂಡನರವರು, ನಾಸಿಕ ಕಾಂಗ್ರೆಸ್ ಅಧ್ಯಕ್ಷಸ್ಥಾನದಿಂದ ಮಾತಾಡುತ್ತಾ “ವಸ್ತುಗಳನ್ನು ಪೂರೈಸುವ ನೆವದಿಂದ ಮಾತ್ರ ನಿಯಂತ್ರಣಗಳನ್ನು ಹೇರಬಾರದು. ಅವಶ್ಯವೆಂದು ಕಂಡಾಗ ಮಾತ್ರ ನಿಯಂತ್ರಣಗಳನ್ನು ಜಾರಿಗೆ ತರಬೇಕು. ಆದರೆ ಆಗ ಕೂಡಾ ಅವು ವ್ಯಕ್ತಿಯ ಆಂತರಿಕ ಬಾಳಿಗೆ ಕೈಹಾಕದಿರಲಿ” ಎಂದರು. ಇಂದು ನಿಯಂತ್ರಣಗಳು ವ್ಯಕ್ತಿಯ ಆಂತರಿಕ ಬಾಳಿನಲ್ಲಿ ಹೇಗೆ ಪರಿಣಾಮ ಮಾಡುತ್ತಿವೆ ಎಂಬುದನ್ನು ಹಳ್ಳಿಯ ಅಥವಾ ಹಳ್ಳಿಯ ನಿಕಟ ಪರಿಚಯ ಉಳ್ಳ ವ್ಯಕ್ತಿ ತಿಳಿದಿರುವ. ಇಂದಿನ ನಿಯಂತ್ರಣಗಳು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಗದಾಘಾತ ಮಾಡಿವೆ. ರೈತ ತಾನು ಬೆಳಸಿದ ಅಕ್ಕಿಯಲ್ಲಿ ತನಗೆ ಊಟಕ್ಕೆ ಮತ್ತು ಸಾಗುವಳಿಗೆ ಬೇಕಾಗುವಷ್ಟನ್ನು ಉಳಿಸಿಕೊಂಡು ಉಳಿದುದನ್ನು ಸರಕಾರಕ್ಕೆ ಕೊಡಬೇಕು ಎಂಬುದು ಇಂದಿನ ಕಾಯಿದೆ. ಆದರೆ ಹಾಗೆ ನಡೆಯುತ್ತಿದೆಯೆ? ರೈತ ಸರಕಾರ ಸೂಚಿಸಿದಷ್ಟನ್ನು ತನಗೆ ಉಳಿಸಿಕೊಂಡು ಉಳಿದುದನ್ನು ಸ್ಟೋರಿಗೆ ಹಾಕಿದ ನಂತರವೂ ಅಧಿಕಾರಿಗಳು ಬಂದು ಮನೆ ನುಗ್ಗಿ ಆತನಲ್ಲಿ ಉಳಿದುದೆಲ್ಲವನ್ನೂ ಗದರಿಸಿಯೋ ಬೆದರಿಸಿಯೋ ಸ್ಟೋರಿಗೆ ಹಾಕಿಸುತ್ತಾರೆ ಮತ್ತು ಅವನಿಗೆ ಕಾರ್ಡು ಕೊಡುತ್ತಾರೆ. ಯಾರು ದಿನವಿಡೀ ಮಳೆಯೆನ್ನದೆ ಬಿಸಿಲೆನ್ನದೆ ಗದ್ದೆಯಲ್ಲಿ ದುಡಿದು ತನ್ನ ಬೆವರು ಹರಿಸಿ ಪೈರನ್ನು ಬೆಳಸಿ ಅಕ್ಕಿಯನ್ನು ಉತ್ಪತ್ತಿ ಮಾಡುತ್ತಾನೋ ಅಂತಹವನಿಗೆ, ತನ್ನ ಊಟಕ್ಕೆ ಮತ್ತು ಸಾಗುವಳಿಗೆ ಬೇಕಾಗುವಷ್ಟು ಅಕ್ಕಿಯನ್ನು ಅದೂ ಸರಕಾರ ನಿಶ್ಚಯಿಸಿದ ಪ್ರಮಾಣದಷ್ಟೇ ಉಳಿಸಿಕೊಳ್ಳುವ ಹಕ್ಕಿಲ್ಲ. ಬೆಳಸಿದ ರೈತನೇ ತನ್ನ ಊಟಕ್ಕೂ ಸ್ಟೋರಿನಿಂದ ಅಕ್ಕಿಯನ್ನು ತರಬೇಕೆನ್ನುವುದರಲ್ಲಿ ಯಾವ ನ್ಯಾಯವಿದೆ? ಆತ ಗೇದು ಬೆಳಸಿದ ಅಕ್ಕಿಯಿಂದಲೇ ಆತನ ಊಟಕ್ಕೆ ಬೇಕಾದಷ್ಟನ್ನು ಸರಕಾರ ನಿರ್ಣಯಿಸಿದ ರೀತಿಯಲ್ಲೇ ಉಳಿಸಿಕೊಳ್ಳಲು ಎಡೆಯಿಲ್ಲದಿದ್ದರೆ ಅದು ಸ್ವಾತಂತ್ರ್ಯವೇ?

ರೈತರಲ್ಲಿ ದೋಷಗಳಿಲ್ಲವೆಂದು ನಮ್ಮ ವಾದವಲ್ಲ. ಅವರು ಕಳ್ಳಸಂತೆ ಮಾಡುತ್ತಿಲ್ಲವೆಂದು ನಾವು ಹೇಳಲಾರೆವು. ಆದರೆ ಅವರು ಬೆಳೆಸಿದುದರಲ್ಲಿ ಅವರಿಗೆ ಊಟಕ್ಕೆ ಮತ್ತು ಸಾಗುವಳಿಗೆ ಬೇಕಾದಷ್ಟನ್ನಾದರೂ ಅವರಲ್ಲಿ ಉಳಿಸಿ ಉಳಿದುದನ್ನು ಸರಕಾರ ಸ್ಟೋರಿಗೆ ಹಾಕಿಸಬೇಕು.

ಅವರು ಬೇಕಾದರೆ ಊಟಕ್ಕೆ ಬಿಟ್ಟುದನ್ನು ಕಳ್ಳಸಂತೆಯಲ್ಲಿ ಮಾರಲಿ ಬಿಡಲಿ, ಅವರಿಗೆ ಕಾರ್ಡು ಕೊಡದಿದ್ದರಾಯಿತು. ಊಟಕ್ಕೆ ಬೇಕಾದಷ್ಟು ಅಕ್ಕಿಯನ್ನು ಬಿಟ್ಟವರಿಗೆ ಸರಕಾರ ಖಂಡಿತವಾಗಿಯೂ ಕಾರ್ಡು ಕೊಡುವುದಿಲ್ಲವೆಂದಾದರೆ ತನ್ನ ಊಟದ ಅಕ್ಕಿಯನ್ನು ಯಾರೂ ಕಳ್ಳಸಂತೆಯಲ್ಲಿ ಮಾರಲಾರರು. ಏಕೆಂದರೆ ಹಾಗೆ ಮಾರಿದರೆ ದಿನದಿನ ಕ್ರಯ ಹೆಚ್ಚುತ್ತಾ ಹೋಗುತ್ತಿರುವ ಕಳ್ಳಸಂತೆಯ ಮಾರ್ಕೆಟಿನಿಂದಲೇ ಅವರು ಮರುದಿನದ ಊಟಕ್ಕೆ ಅಕ್ಕಿಯನ್ನು ಕೊಂಡುಕೊಳ್ಳಬೇಕಷ್ಟೆ. ತನ್ನಲ್ಲಿದ್ದುದನ್ನು ಮೂರು ಕಾಸಿಗೆ ಮಾರಿ ಮರುದಿನ ಬೇರೆಯವರಿಂದ ಆರು ಕಾಸಿಗೆ ತೆಕ್ಕೊಳ್ಳುವ ಮೂರ್ಖತನಕ್ಕೆ ಯಾರೂ ಬಳಿಬೀಳಲಾರರು. ಪರಿಸ್ಥಿತಿಯನ್ನು ಹೀಗೆ ಸರಿಪಡಿಸಲು ಸಾಧ್ಯವಿದ್ದರೂ ಇಂದು ಆಹಾರ ಬೆಳೆಯುವ ರೈತರನ್ನು ಕಳ್ಳರಂತೆ ನಡೆಸಿಕೊಂಡು, ಅಥವಾ ಭಾವಿಸಿಕೊಂಡು ಅವರಲ್ಲಿರುವುದೆಲ್ಲವನ್ನೂ ಸ್ಟೋರಿಗೆ ಹಾಕಿಸಿ ಅವರಿಗೆ ರೇಷನ್ ಕಾರ್ಡು ಕೊಡಿಸುತ್ತಿರುವುದು ವ್ಯಸನಾಸ್ಪದವಾದ ವಿಚಾರ. ಇದಕ್ಕೆ “ಕೆಳಗಿನ” ನೌಕರರು ಕಾರಣವೋ? ಅಥವಾ ಅವರಿಗೆ “ಮೇಲಿನಿಂದ” ದಿನದಿನ ಬರುತ್ತಿರುವ ಆಜ್ಞಾಪತ್ರಗಳು (Circulars) ಕಾರಣವೋ? ಕಾರಣ ಯಾರೇ ಇದ್ದರೂ ಇಂದು ಅಕ್ಕಿ ಬೆಳೆಯುವ ರೈತರನ್ನು ಕಳ್ಳರಂತೆ ಕಾಯಲಾಗುತ್ತದೆ ಎಂಬುದರಲ್ಲಿ ಮಾತ್ರ ಸಂಶಯವಿಲ್ಲ. ಅವರು ಬೆಳಸಿದುದರಲ್ಲಿ ಸರಕಾರ ನಿರ್ಣಯಿಸಿದಷ್ಟನ್ನಾದರೂ ಅವರಿಗೆ ತಮ್ಮಲ್ಲಿ ಉಳಿಸಿಕೊಂಡು ತಿನ್ನುವ ಅಧಿಕಾರ ಉಳಿದಿಲ್ಲ. ಇದರಿಂದಾಗಿ ಆಹಾರ ಬೆಳಸುವ ಮಂದಿಯಲ್ಲಿ ಒಂದು ತೆರನ ಜಿಗುಪ್ಸಾಭಾವ ತಲೆಯೆತ್ತಿದೆ. ಇದು ಪ್ರತ್ಯಕ್ಷ ಸತ್ಯ.

ನಿಯಂತ್ರಣಗಳು ಸಾಧ್ಯವಿದ್ದಷ್ಟು ಬೇಗನೆ ಹೋಗಬೇಕು ಎಂಬ ಬಗ್ಗೆ ಯಾರಲ್ಲೂ ಭಿನ್ನಾಭಿಪ್ರಾಯವಿಲ್ಲ. ನಿಯಂತ್ರಣಗಳು ಹೋಗಬೇಕಾದರೆ ನಮ್ಮಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಸುವುದೊಂದೇ ದಾರಿ. ಇದಕ್ಕಾಗಿ ಆಹಾರ ಬೆಳಸುವ ರೈತರಿಗೆ ಪ್ರೋತ್ಸಾಹ ಸಿಕ್ಕಬೇಕಾಗಿದೆ. ಹಾಗೆ ರೈತರಿಗೆ ಪ್ರೋತ್ಸಾಹ ದೊರಕದಿದ್ದರೆ ಅವರು ಸುಲಭದಲ್ಲಿ ಹಣದೊರಕಿಸುವ ಇತರ ಕಸುಬುಗಳಿಗೆ ಕೈಯಿಕ್ಕುತ್ತಾರೆ. ಭಾರತ ಹಳ್ಳಿಗಳ ದೇಶ. ಇಲ್ಲಿನ ಜನಸಂಖ್ಯೆಯ ಶೇಕಡಾ ಎಪ್ಪತ್ತೈದು ಮಂದಿ ಹಳ್ಳಿಯಲ್ಲಿ ಜೀವಿಸುವವರು. ಕೃಷಿಯಿಂದ ಜೀವನ ನಿರ್ವಹಣೆ ಮಾಡುವವರು. ಗದ್ದೆ ಇಲ್ಲದವರು ಇದ್ದವರಲ್ಲಿ ದುಡಿದು ಜೀವಿಸುತ್ತಾರೆ. ಆ ಮಂದಿಗೆ ಅವರ ಕೆಲಸಕ್ಕಾಗಿ ಅಕ್ಕಿ ರೂಪದಲ್ಲಿ (ಅಕ್ಕಿ ಇದ್ದಲ್ಲಿ ಮಾತ್ರ) ಕೂಲಿ ಸಿಕ್ಕುತ್ತದೆ. ಇಲ್ಲವಾದರೆ ಈಗ ಕೆಲವೆಡೆಗಳಲ್ಲಿ ಅಕ್ಕಿಯ ಬದಲು, ಆ ಅಕ್ಕಿಯ ನಿಯಂತ್ರಿತ ಕ್ರಯವನ್ನು ನೀಡುತ್ತಾರೆ. ಹೀಗೆ ಇಂದು ಎಲ್ಲಾ ಹಳ್ಳಿಗರ ಜೀವನ ಅಕ್ಕಿಯ ಮೇಲೆ ಮತ್ತು ಅದರ ಬೆಲೆಯ ಮೇಲೆ ಹೊಂದಿಕೊಂಡಿದೆ. ಅವರು ತಮ್ಮ ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ಮತ್ತು ಕೃಷಿಗೆ ಬೇಕಾದ ಸಾಮಾಗ್ರಿಗಳನ್ನು ಇದೇ ಅಕ್ಕಿಯನ್ನು ಮಾರಿ ಬಂದ ಹಣದಿಂದ ಪೂರೈಸಿಕೊಳ್ಳಬೇಕಾಗಿದೆ. ಏಕೆಂದರೆ ಈಗ ಹಳ್ಳಿಗಳಲ್ಲಿ ಬೇರೆ ಉಪಕಸುಬುಗಳು ಉಳಿದಿಲ್ಲ. ಆದರೆ ಅಕ್ಕಿಯ ನಿಯಂತ್ರಿತ ಕ್ರಯ ಮತ್ತು ಜೀವನಾವಶ್ಯಕ ವಸ್ತುಗಳಿಗೆ ಪೇಟೆಯಲ್ಲಿರುವ ಕ್ರಯ ಇವುಗಳಿಗೆ ಅಜಗಜಾಂತರ ವ್ಯತ್ಯಾಸವಿದೆ. ಇದರಿಂದಾಗಿ ಹಳ್ಳಿಗರು ತಮ್ಮ ಮೂಲ ಕಸುಬಾದ ಕೃಷಿಗಾರಿಕೆಗೆ ಶರಣು ಹೊಡೆದು ಹೆಚ್ಚು ಹಣ ದೊರಕಿಸುವ ಇತರ ಕಸುಬುಗಳಿಗೆ ಮರೆಹೊಗುತ್ತಿದ್ದಾರೆ. ಪರಿಣಾಮವಾಗಿ ಹಳ್ಳಿಗಳಲ್ಲಿ ಕೃಷಿಗೆ ಜನದ (ಕೂಲಿಗಳ) ಅಭಾವವಾಗತೊಡಗಿದೆ. ಹಳ್ಳಿಯ ಕೆಲವರು ಬೀಡಿ ಇತ್ಯಾದಿ ಕಸುಬುಗಳನ್ನು ಹಳ್ಳಿಯಲ್ಲೇ ಪ್ರಾರಂಭಿಸಿದ್ದಾರೆ. ಇನ್ನು ಕೆಲವರು ಪೇಟೆ ಪಟ್ಟಣ ಸೇರುತ್ತಿದ್ದಾರೆ. ಈಗ ಜನರೊಡನೆ ಹಣವಿದ್ದರೆ ಸಾಕು, ಅಕ್ಕಿಯನ್ನು ಸರಕಾರ ಅವರಿಗೆ ರೈತನಷ್ಟೇ– ಬೆಳಸುವವನಷ್ಟೇ ಒದಗಿಸಿಕೊಡುತ್ತಿದೆಯಲ್ಲಾ. ಆದ್ದರಿಂದ ಹಳ್ಳಿಯಲ್ಲಿ ಬಿಸಿಲು ಮಳೆಯಲ್ಲಿ ದುಡಿದು ಸುಸ್ತಾಗುವುದನ್ನು ಬಿಟ್ಟು ಪೇಟೆಯಲ್ಲಿ ನೆರಳಲ್ಲಿ ದುಡಿದು ಹೆಚ್ಚು ಹಣ ಸಂಪಾದಿಸುವ ಹವ್ಯಾಸಕ್ಕೆ ಜನ ಬಲಿ ಬೀಳುತ್ತಿದೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಳ್ಳಿಗನಿಗಿಂತಲೂ ಪಟ್ಟಣಿಗನಿಗೆ ಹೆಚ್ಚು ಅಕ್ಕಿ ದೊರಕುತ್ತಿದೆ! ಇಂತಿರುವಾಗ ಹಳ್ಳಿಯಲ್ಲಿ ಬಿದ್ದು ಸಾಯುವುದು ನಿಜವಾಗಿಯೂ ಮಡ್ಡತನವೆಂಬ ಭಾವನೆ ಜನರಲ್ಲಿ ಬೆಳೆಯುತ್ತಿದೆ. “ಕಟ್ಟು ಪಟ್ಟಣ ಸೇರು” ಎಂಬು ನಾಣ್ನುಡಿ ಇಂದು ಪ್ರತ್ಯಕ್ಷ ಸತ್ಯವಾಗತೊಡಗಿದೆ.

ಇತ್ತೀಚೆಗೆ ಮದ್ರಾಸು ಎಸೆಂಬ್ಲಿಯಲ್ಲಿ ನಡೆದ ಒಂದು ಚರ್ಚೆಯಿಂದಾಗಿ ಮದ್ರಾಸ್ ಸಂಸ್ಥಾನ ಒಂದರಲ್ಲೇ ಅಕ್ಕಿ ಬೆಳೆಯುವ ಸ್ಥಳ ಹಿಂದಿನ ವರ್ಷಕ್ಕಿಂತ ಸುಮಾರು ಸಾವಿರ ಎಕ್ರೆ ಕಡಿಮೆ ಎಂದು ನಮಗೆ ತಿಳಿಯಿತು. ಇದನ್ನು ತಿಳಿದಾಗ ಪಟ್ಟಣಿಗರು ದಂಗಾಗಿ ಹೋದರು. ಆದರೆ ಹಳ್ಳಿಗರಿಗೆ ಅದನ್ನು ಕೇಳಿ ಏನೂ ಆಶ್ಚರ್ಯವಾಗಲಿಲ್ಲ. ಏಕೆಂದರೆ ಅವರ ಕಣ್ಣ ಮುಂದೆಯೇ ಗದ್ದೆಗಳಲ್ಲಿ ಭತ್ತದ ಸಸಿಯ ಸ್ಥಾನವನ್ನು ಕಬ್ಬು, ಗೆಣಸು, ಮೆಣಸು, ಬಾಳೆ, ಕಂಗುಗಳು ಆಕ್ರಮಿಸುತ್ತಿದ್ದವು. ಹೀಗಾದುದರಲ್ಲಿ ಏನೂ ಆಶ್ಚರ್ಯವಿಲ್ಲ. ಇಂದಿನ ಯುಗದಲ್ಲಿ ವ್ಯಕ್ತಿ ತನ್ನ ಲಾಭವನ್ನಲ್ಲದೆ ಬೇರೆಯವರದನ್ನು ನೋಡುವಷ್ಟು ಉದಾರಿಯಾಗಿಲ್ಲ. ಅದರಲ್ಲೂ ನಮ್ಮ ಅವಿದ್ಯಾವಂತ

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ–ಇದೇ ಆಶ್ವೀಜ ಶುದ್ಧ ದಶಮಿ ಶುಕ್ರವಾರ ಲಾಗಾಯ್ತು ಆಶ್ವೀಜ ಬಹುಳ 2 ಶುಕ್ರವಾರ (ತಾ. 20-10-50ಕ್ಕೆ ಪ್ರಾರಂಭವಾಗಿ 25-10-50) ತನಕ ಏಳು ದಿನಗಳ ಅಹೋರಾತ್ರಿ ಭಜನಾ ಸಪ್ತಾಹವು ಶ್ರೀ ದೇವತಾನುಗ್ರಹದಿಂದಲೂ ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರ ಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವ ವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಆಗತ್ಯವಾಗಿ ಬಂದು, ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ನಡೆಯಬಹುದಾದ ಸದ್ವಿನಿಯೋಗಗಳ ವಿವರ:– ರಾತ್ರಿ ಕಾಲದ ಹೂವಿನ ಪೂಜೆಗೆ ರೂ. 10, ಹೂವಿನ ಪೂಜೆಗೆ ರೂ. 5, ದೀಪಾರಾಧನೆ ರೂ. 2, ಪಟ್ಲ ಪಿಂಡಿ ರೂ. 0-8-0, ಕರ್ಪೂರಾರತಿ ರೂ 0-2-3, ತುಳಸೀಹಾರ ರೂ. 0-1-3, ಅಹೋರಾತ್ರಿಯ ಪೂರ್ಣ ವಿನಿಯೋಗಕ್ಕೆ ರೂ. 25.

ಪಾಂಗಾಳ ಅಣ್ಣಪ್ಪ ನಾಯಕ್,
ಪ್ರಕೃತ ಆಡಳ್ತೆದಾರ

... 17-10-50

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಾಪಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಗಮೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಸ್ಟೋರ್ಸ್ ಆರ್ ಎಲ್ ಕಮಲಾಪುರ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಋತುಸ್ರಾವ ನಿಂತಿತು

‘ಕುಮಾರಿ’ ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MIS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶರ್ಮಾ ಕಂಪನಿ, ಮಂಗಳೂರು

ರೈತರು ತಮ್ಮ ಗ್ರಾಮದ ಒಳಿತು ಕೆಡುಕುಗಳನ್ನು ಅರಿಯಬಲ್ಲರು. ಆದ್ದರಿಂದ ಅದರ ಹಿತಕ್ಕಾಗಿ ಬೇಕಾದರೆ ಒಂದು ವೇಳೆ ದುಡಿದಾರು. ಆದರೆ ಅವರಿಗೆ ಏನೂ ಅರಿವಾಗದ ಖಂಡದ ಹಿತಕ್ಕಾಗಿ ಅವರು ದುಡಿಯಬೇಕೆನ್ನುವವರನ್ನೇ ಅವರು "ಸಕಾರಣವಾಗಿ" ಮೂರ್ಖರೆನ್ನುತ್ತಾರೆ. ಅದು ಅವರ ಅರಿವಿಗೆ ಎಟುಕದ ವಿಚಾರ. ಆದುದರಿಂದ ಅವರು ಮೊತ್ತಮೊದಲು ತಮ್ಮ ಲಾಭ ನಷ್ಟಗಳಿಗೇ ಗಮನ ಕೊಡುತ್ತಾರೆ. ಪರಿಣಾಮವಾಗಿ ಭತ್ತಕ್ಕಿಂತ ಹೆಚ್ಚು ಹಣ ದೋಚಿಕೊಡುವ ಇತರ ಕೃಷಿಗಳನ್ನು ಭತ್ತದ ಸಸಿಯ ಸ್ಥಾನದಲ್ಲಿ ಬೆಳಸುತ್ತಿದ್ದಾರೆ. ಆ ಕೃಷಿಗಳಲ್ಲಿ ಹಣ ಮಾತ್ರ ಹೆಚ್ಚು ಸಿಗದೆ ಇನ್ನೂ ಕೆಲವು ಸೌಲಭ್ಯಗಳಿವೆ. ಅವುಗಳನ್ನು ಬೆಳಸಿದವರು ಕಾಯಿದೆಗಳಿಗೆ ಬೆದರಬೇಕಾಗಿಲ್ಲ; ಅಧಿಕಾರಿಗಳಿಗೆ ಹೆದರಬೇಕಾಗಿಲ್ಲ. ಅವುಗಳನ್ನು ಎಲ್ಲಿ ಬೇಕಾದರೂ, ಎಷ್ಟೇ ಕ್ರಯಕ್ಕಾದರೂ ಮಾರಬಹುದಾಗಿದೆ. ಇಷ್ಟು ಅನುಕೂಲತೆಗಳಿರುವ ಕೃಷಿಯನ್ನು ಬಿಟ್ಟೇ ಕಾಯಿದೆಗಳಿಂದ ಕಟ್ಟು ಪಡೆದ ಅಕ್ಕಿಯನ್ನು ಯಾರು ಬೆಳಸುತ್ತಾರೆ. ಇನ್ನು ಅವರಿಗೆ ಹಾಗೆ ಭತ್ತ ಬೆಳಸದಿದ್ದುದರಿಂದ ಊಟಕ್ಕೆ ಅಕ್ಕಿ ಕಡಿಮೆ ಬಿದ್ದರೆ ಸರಕಾರ ನಿಯಂತ್ರಿತ ಕ್ರಯದಲ್ಲಿ ಒದಗಿಸಿಕೊಡುತ್ತಿದೆಯಲ್ಲಾ! ಇದನ್ನು ಹೋಗಲಾಡಿಸುವ ವಿಧಾನವೆಂದರೆ ಭತ್ತ ಬೆಳೆಯುವ ಪ್ರದೇಶದಲ್ಲಿ ಇತರ ಯಾವುದೇ ಕೃಷಿಗಳನ್ನು ಮಾಡಬಾರದು ಎಂದು ಕಾಯಿದೆ ಮಾಡುವುದು ಅಥವಾ ಅಕ್ಕಿಯ ಕ್ರಯವನ್ನು ಉಳಿದವುಗಳ ಮಟ್ಟಕ್ಕೆ ಏರಿಸುವುದು.

ಇನ್ನು ಅಕ್ಕಿ ವಿತರಣದ ರೀತಿ ನೀತಿಗಳು ಬಹಳ ವ್ಯಸನಾಸ್ಪದವಾಗಿವೆ. ಇಷ್ಟರ ವರೆಗೆ ಹಳ್ಳಿಗರಿಗೆ-ಅಕ್ಕಿ ಉತ್ಪತ್ತಿ ಮಾಡುವವರಿಗೆ ಆರು ಔನ್ಸು ಅಕ್ಕಿ. ಅದೇ ಪಟ್ಟಣಿಗರಿಗೆ ಅಕ್ಕಿ ಬೆಳಸದವರಿಗೆ ಎಂಟು ಔನ್ಸು ಅಕ್ಕಿ. ಮುಂದೆ ಪಟ್ಟಣಿಗರ ಅಕ್ಕಿ ಪ್ರಮಾಣ ಏಳು ಔನ್ಸಿಗೆ ಇಳಿಯಿತು. ಪಟ್ಟಣದ ಅಕ್ಕಿಯ ವಿತರಣೆಯ ಪ್ರಮಾಣದಲ್ಲಿ ಜರಗಿದ ಈ ಬದಲಾವಣೆಗಳು ನಮಗೆ ಮುಖ್ಯವಲ್ಲ. ನಮಗೆ ಬೇಕಾದುದು ಹಳ್ಳಿಗರಲ್ಲಿ ಮತ್ತು ಪಟ್ಟಣಿಗರಲ್ಲಿ ಈ ವ್ಯತ್ಯಾಸವೇಕೆ ಎಂಬುದು. ಯಾರು ರಾತ್ರಿ ಹಗಲೆನ್ನದೆ ದುಡಿದು ತನ್ನ ಬೆವರನ್ನು ಗದ್ದೆಗೆ ಸುರಿಸಿ ಆ ಮೂಲಕ ಅಕ್ಕಿ ಉತ್ಪತ್ತಿ ಮಾಡುತ್ತಾನೊ ಆತನಿಗೆ ಪಟ್ಟಣದಲ್ಲಿ ಕುಳಿತು ಉಣ್ಣುವವನಿಗಿಂತ ಕಡಿಮೆ ಅಕ್ಕಿ! ಈ ವ್ಯವಸ್ಥೆಗೆ ಕಾರಣ ಕರ್ತರಾರೋ ನಮಗೆ ಗೊತ್ತಿಲ್ಲ. ಅವರು ಯಾರಾದರೂ ಅವರ ಅಭಿಪ್ರಾಯವೇನು? ಹಳ್ಳಿಗರಿಗೆ ಅಕ್ಕಿಯನ್ನು ದಿನಾಲೂ ಕಂಡು ಕಂಡು ಜಿಗುಪ್ಸೆ ಹುಟ್ಟಿ ಹೆಚ್ಚು ಉಣ್ಣುವುದಿಲ್ಲವೆಂದೇ? ಅಥವಾ ರೈತರು ಕಳ್ಳರೆಂದೇ? ಇಂತಹ ಪರಿಸ್ಥಿತಿಯಲ್ಲಿ ಹಳ್ಳಿಗಳು ಹಾಳುಬಿದ್ದು ಪೇಟೆಗಳು ಬೆಳೆಯುತ್ತಿರುವುದರಲ್ಲಿ ಆಶ್ಚರ್ಯವೇನು? ಆಹಾರ ಬೆಳೆಯುವ ಸ್ಥಳಗಳು ಕಡಿಮೆಯಾಗುತ್ತಾ ಹೋಗುವುದರಲ್ಲಿ ಬೆರಗುಪಡಬೇಕಾದುದೇನಿದೆ? ಇದನ್ನೆಲ್ಲಾ ಅರಿತೇ "ಹರಿಜನ"ದಲ್ಲಿ ಅಗ್ರಲೇಖ ಬರೆಯುತ್ತಾ ಕಿ. ಘ. ಮಶ್ರೂವಾಲರು "ಬಡರೈತನಿಂದ ಒತ್ತಾಯ ಪೂರ್ವಕವಾಗಿ ಪಡೆದುಕೊಂಡು ಅನುಕೂಲವಂತರಿಗೆ ಸುಲಭವಾಗಿ ದೊರಕಿಸುವಂತಹ ಈ ಸೀದಾ ಪದ್ಧತಿಯು ಅಭದ್ರವಾದುದೆಂದು ನಮ್ಮ ಅಭಿಪ್ರಾಯ" ಎಂದಿದ್ದಾರೆ.

ಕೆಲಸಮಯದ ಹಿಂದೆ ಆಹಾರದ ಪರಿಸ್ಥಿತಿಯು ಸರಕಾರದ ಕೈಮೀರಿ ಹೋಗುವುದೋ ಎಂಬ ಪರಿಸ್ಥಿತಿ ಬಂದಾಗಲೂ ಪೇಟೆಯಲ್ಲಿ ಅಕ್ಕಿ ಕೊಡುವುದು ನಿಂತಿರಲಿಲ್ಲ. ಎಷ್ಟೋ ಹಳ್ಳಿಗಳಲ್ಲಿ ಒಂದೆರಡು ವಾರ ಅಕ್ಕಿ ಇರಲಿಲ್ಲ. ಆದರೆ ಇದು ಸಾಗಟದ ತೊಂದರೆಯಿಂದ ಎಂದು ನಾವು ತಿಳಿಯಲಾರೆವು. ಏಕೆಂದರೆ ಹಳ್ಳಿಗಳಿಗೆ ಆ ಕಾಲದಲ್ಲಿ ಜೋಳವನ್ನು ಸಾಗಿಸಲಾದವರಿಗೆ ಅಕ್ಕಿಯನ್ನು ಸಾಗಿಸಲಾಗಲಿಲ್ಲವೇ? ಹಾಗಾದರೆ ನಿಜಸ್ಥಿತಿಯೇನು? ಪೇಟೆಯವರಿಗೆ "ಬಾಯಿ ಇದೆ", ಅವರಿಗೆ ಅಕ್ಕಿ ನೀಡದಿದ್ದರೆ ಗುಲ್ಲೆಬ್ಬಿಸ್ಯಾರೆಂದೇ? ಇದರ ನಿಜವಾದ ಕಾರಣ ನಮಗೆ ಅರಿಯದು. ಆದರೆ ಆಗ ವಿತರಣ ಮಾಡಿದುದು ಪಟ್ಟಣಿಗರಿಗೆ ಅಕ್ಕಿ, ಹಳ್ಳಿಗರಿಗೆ ಜೋಳ ಎಂಬುದು ಮಾತ್ರ ಸತ್ಯ. ಇದರಿಂದಾಗಿ ಹಳ್ಳಿಯ ಅನೇಕ ಮನೆಗಳಲ್ಲಿ ಒಂದು ವಾರ ಅಕ್ಕಿ ಇಲ್ಲದೆ ಕಳೆದವರನ್ನು ನಾವು ಕಂಡಿದ್ದೇವೆ.

ಅಂತರಂಗಮಾಸಪತ್ರಿಕೆಯನ್ನು
ತಪ್ಪದೆ ಓದಿರಿ

ರಸನಿಮಿಷ

"ಅಕಬರ ಹೈದರಿಯೇ ನನಗೆ ಆಮಂತ್ರಣ ಕೊಟ್ಟಿದ್ದರು. ಈಗಂತೂ ಹೈದರಾಬಾದಿಗೆ ಹೋಗಲು ಆಮಂತ್ರಣದ ಅಗತ್ಯವೇ ನನಗಿಲ್ಲ" (ಸರದಾರ ಪಟೇಲರ ಭಾಷಣ)

—ನಿಜ. ನಾವಲ್ಲಿಗೆ ಆರಂಭದಲ್ಲಿ ಹೋದುದೂ ಅನಾಮಂತ್ರಿತರಾಗಿಯೇ.

೦೦ ೦೦ ೦೦

ಕೇಂದ್ರ ಮಂತ್ರಿಗಳು ಒಂದು ನಿಂತವ್ಯಯದ ಹೋರಾಟದಲ್ಲಿ ಬಿದ್ದಿರುವರು. (ಒಂದು ಕೇಂದ್ರ ಸಮಾಚಾರ)

—ಆದರೆ ಪ್ರಾಂತ್ಯ ಸರಕಾರಗಳಿಗೆ ಇದು ಅನ್ವಯಿಸಲಾರದುದರಿಂದ ಇನ್ನು ಅವರ ಯಾತ್ರೆಗಳು ಅತಿಶಯವಾದಾವು.

ಭೂಮಧ್ಯಸಾಗರದ ರಕ್ಷಣೆ ಮಾಡಲು ಅಟಲಾಂಟಿಕ ರಾಷ್ಟ್ರಗಳು ಬದ್ಧಕಂಕಣವಾಗಿವೆ. (ಪಿ. ಟಿ. ಐ.)

—ಅಂತರರಾಷ್ಟ್ರೀಯ ಜುನೋವೃತ್ತಿ ಎಂದರೆ ಇದು.

೦೦ ೦೦ ೦೦

ಆಗ್ನೇಯ ಏಶಿಯಾಕ್ಕೆ ಧನಸಹಾಯ ಮಾಡಲು ಒಂದುಕಡೆ ಅಮೇರಿಕಾ, ಇನ್ನೊಂದೆಡೆ ಕೆನಡಾ, ಮತ್ತೊಂದೆಡೆ ಕಾಮನ್‌ವೆಲ್ತ್ ರಾಷ್ಟ್ರಗಳು, ಎಲ್ಲವೂ ಉತ್ಸಾಹಭರಿತವಾಗಿವೆಯಂತೆ.

—ಇವೆಲ್ಲ ನಿಸ್ವಾರ್ಥಸೇವೆ ಎಂದೋ ನಿಷ್ಕಾಮ ಕರ್ತವ್ಯವೆಂದೋ ನಂಬಬೇಕಂತೆ

೦೦ ೦೦ ೦೦

ಇಡಿ ಹಿಂದುಸ್ಥಾನದಲ್ಲಿ ಕಳೆದ ವಾರ ಗಾಂಧೀಜಿಯ ಕುರಿತು ಭಾರೀ ಮಾತುಕತೆ ನಡೆಯಿತು.

—ಅದನ್ನೇ ಮೊತ್ತವಾಗಿ ಮಾಡಿದರೆ ವಿಂಧ್ಯ ಪರ್ವತದಷ್ಟು ದೊಡ್ಡ ಗೊಬ್ಬರದ ರಾಶಿ ಆಗಬಹುದೋ? ಎಂದು ಒಬ್ಬರು ಶಂಕಿಸುತ್ತಾರೆ.

೦೦ ೦೦ ೦೦

"ಸಾಮ್ರಾಜ್ಯವಾದಕ್ಕೆ ಇನ್ನು ಅಸ್ಪದವಿಲ್ಲ" (ಬ್ರಿಟನ್ನಿನ ಲೇಬರ್ ನಾಯಕ ಮೊರ್ರಿಸನ್)

—ಆದರೂ ವಸಾಹತುಗಳಲ್ಲಿ ಅಲ್ಪಮತಿಗಳನ್ನು ಸ್ವಾಧಿಕಾರಕ್ಕೆ ಸನ್ನದ್ಧರಾಗಿ ಮಾಡುವುದು ನಿಲ್ಲಲಾರದಂತೆ.

೦೦ ೦೦ ೦೦

ಫ್ರೆಂಚರು ಇಂಡೋಚೀನದ ಒಂದು ಗಡಿ ಪ್ರದೇಶವನ್ನು ಬಿಟ್ಟು ಹಿಂದೆ ಬಂದರು. (ಸುದ್ದಿ)

—ಇಂಡಿಯಾ, ಬರ್ಮಾ, ಇಂಡೋನೇಶಿಯಾ, ...?

೦೦ ೦೦ ೦೦

"ಏಕೀಕೃತ ಕೊರಿಯವೇ ಯುಕ್ತರಾಷ್ಟ್ರ ಸಂಘದ ಧ್ಯೇಯವು"

—ಉತ್ತರ ಕೊರಿಯದವರು ದಕ್ಷಿಣ ಕೊರಿಯಾಕ್ಕೆ ಬಾಂಬು ಹಾಕಿ ಈ ಏಕೀಕರಣಕ್ಕೆ ಬೆಂಬಲನಾಗಿ ಯು. ರಾ. ಸಂಘಕ್ಕೆ ನೆರವಾಗುವುದು ಖಂಡಿತ.

೦೦ ೦೦ ೦೦

ಬ್ರಿಟನ್ನಿನ ಅರ್ಥಮಂತ್ರಿ ಹ್ಯೂ ಗೆಟ್ಸ್‌ಕೆಲ್ "ದೇಶದಲ್ಲಿರುವ ಬಂಗಾರದ ನಿಧಿ (RESERVE) ಆವಶ್ಯಕತೆಗಳ ಪೂರೈಕೆಗೆ ಸಾಲದು" ಎಂದು ಭಾಷಣ ಮಾಡಿದರು.

—ನಮ್ಮಲ್ಲಿ ಎಲ್ಲ ಅನರ್ಥಮಂತ್ರಿಗಳೂ ಇದನ್ನೇ ಹೇಳುತ್ತಾರೆ.

೦೦ ೦೦ ೦೦

"ಈ ಸರಕಾರ ಒಂದು ಮಹಾಮಾರಿ. ರಾಜದ್ರೋಹದ ಹಾರಕಲಿಸುವುದೇ ನನ್ನ ಧರ್ಮ. ನೀವೇನು ಮಾಡಿದರೂ ಸಲ್ಲುವುದು. ಹೋರಾಡಿ ಹೊರಗಟ್ಟುವೆವು" (ಕೃಪಲಾನಿಯವರ ಭಾಷಣದಿಂದ ಉದ್ಧರಣೆ)

—ಎಂದವರು ಪೂಜ್ಯ ಗಾಂಧೀಜಿ. ಸರಕಾರ ಬ್ರಿಟಿಷ ಸರಕಾರ.

೦೦ ೦೦ ೦೦

ಬರ್ನಾರ್ಡ್ ಶಾ ಅವರನ್ನು ಒಬ್ಬ ಚೀನೀಯ ನೋಡಲು ಹೋದನಂತೆ. ಭೇಟಿಯ ಸಮಯ ಚೀನೀ ಪದ್ಧತಿಯ ಪ್ರಕಾರ ಆತ ಶಾನನ್ನು ಅಪಾದಮಸ್ತಕ ಬಣ್ಣಿಸಲು ತೊಡಗಿ ಮೊದಲು ಕೂದಲು, ಅಮೇಲೆ ಹಣೆ, ಬಳಿಕ ಕಣ್ಣುಗಳನ್ನು ರಸವತ್ತಾಗಿ ವರ್ಣಿಸಿ, ಶಾನ ಹಲ್ಲಿಗೆ ಇಳಿದನಂತೆ.

—ಆಗ ಶಾ "ಬೇಕಾದರೆ ಈ ಹಲ್ಲು ಚೆನ್ನಾಗಿ ನೋಡಿ ಹೇಳೋಣಾಗಲಿ" ಎಂದು ತನ್ನ ಕೃತಕ ದಂತಗಳನ್ನು ತೆಗೆದು ಚೀನೀಯನ ಮುಂದಿರಿಸಿದನಂತೆ.

—ಕುಶಿ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟೆಲ್ಲಿ ಆಯಿಲ್
ದೇವಾನುಮೋದಿತ ಔಷಧ ೧೧

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರ ಮಾಡಲ್ಪಟ್ಟಿದೆ



ನಮ್ಮ ವಾನಿಂಗ್ ಟಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದ' ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಳ್ಳಗೊಟ್ಟಿನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು- ವಾನಿಂಗ್ ಟಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0. ವಾನಿಂಗ್ ಟಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ.ಪಿ. ಬೇರೆ. ಡಜನ್ ಕೆಪ್ಸುಲಗಳಿಗೆ ರೂ. 42-0-0 ವಿ. ಪಿ. ಸಹಿತ. ವಾನಿಂಗ್ ಟಲ್ಲಿ ಡ್ರಪರ್ ಬಾಟ್ಲ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ 60-0-0. ವಿ. ಪಿ. ಸಹಿತ. ವಾನಿಂಗ್ ಟಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫ.

ಪ್ರಶಂಸನಾ ಪತ್ರ-ನಾನು ನಿಮ್ಮ ವಾನಿಂಗ್ ಟಲ್ಲಿ ಆಯಿಲನ್ನು ಕಳೆದ ೨೫ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ; ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಯೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ. ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ- ಐ. ರೈಲ್ವೆ-

The Eclipse Distributing Agency.
Dabanu Road. B. B. & C I Rly,

ಬೊಂಬಾಯಿ ಸ್ಟಾಕಿಸ್ಟರು:—ಅಕ್ಸಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2-

ವಾರ ಭವಿಷ್ಯ

ತಾರೀಕು 12-10-1950ರಿಂದ ತಾ. 18-10-1950ರ ವರೆಗೆ.

ಮೇಷ-- ಗ್ರಹಬಲವು ಸಾಕಷ್ಟು ಉತ್ತಮವಿರುವುದರಿಂದ ನಿಮ್ಮ ಇಷ್ಟಾರ್ಥಗಳು ಬಹುಮಟ್ಟಿಗೆ ನೆರವೇರುವವು. ಎಣ್ಣೆ ಬೇಕಷ್ಟಿದೆಯೆಂದು ದೀಪವನ್ನು ಗಾಳಿಗೆ ಇದಿರಾಗಿ ಇಟ್ಟರೆ ಅದು ಹೇಗೆ ನಂದಿಹೋದೀತೋ ಅಂತೆಯೇ ದೈವ ಬಲವಿದೆಯೆಂದು ಎಚ್ಚರತಪ್ಪಿವರ್ತಿಸಿದರೆ ಅಪಾಯ ತಪ್ಪಿದ್ದಲ್ಲ. ಉದ್ಯೋಗ ವ್ಯಾಪಾರಾದಿಗಳಲ್ಲಿ ಒಳ್ಳೆ ಫಲವಿದೆ. ವಿದ್ಯಾರ್ಥಿ ಜನರಿಗೆ ಕಾಲವು ಅನುಕೂಲವಿರುವದು. ಆತ್ಮೀಯರ ಬೆಂಬಲವು ಉತ್ತಮವಾಗಿರುವುದರಿಂದ ಶತ್ರುಗಳ ಬೆದರಿಕೆಯಿಲ್ಲವು. ಆದರೂ ತಾ 14, 15, 16 17 ಈ ದಿನಗಳಲ್ಲಿ ದೇಹಾಲಸ್ಯ, ಪ್ರವಾಸಗಳು ಸಂಭವಿಸುವವು.

ವೃಷಭ—ಕ್ಷಣಕ್ಷಣಕ್ಕೂ ಗಂಡಾಂತರಗಳು ಪ್ರಾಪ್ತವಾಗುವವು. ಕಾರ್ಯಾರಂಭದ ಮುಂಚೆಯೇ ವಿಘ್ನಗಳು ಉಪಸ್ಥಿತಗಳಾಗುವುದರಿಂದ ಕಾರ್ಯ ಪ್ರವೃತ್ತರಾಗದೆ ಅಲಸಿಗರಾಗುವಿರಿ. ಅನಿರೀಕ್ಷಿತವಾದ ಖರ್ಚುಗಳು ಸಾಲಿಂದ ಮೇಲೆ ಸಂಭವಿಸುವವು. ಆರ್ಥಿಕ ಬಿಕ್ಕಟ್ಟಿನಿಂದಲೂ ಆತ್ಮೀಯರ ವಿಯೋಗದಿಂದಲೂ ಚಿಂತಾಕುಲರಾಗಿರತಕ್ಕ ನಿಮಗೆ ವಾರಾದಿಯ 4 ದಿನಗಳಲ್ಲಿ ಕೊಂಚ ಮನಃಶಾಂತಿಯೂ ಇಷ್ಟಾರ್ಥವೂ ಲಭಿಸೀತು

ಮಿಥುನ — ಕಷ್ಟಸಾಧ್ಯವಾದ ಕಾರ್ಯವಾದರೂ ನಿಮ್ಮ ಭಾಗಕ್ಕೆ ತೃಣ ಸಮಾನವೆನಿಸುವದು. ನಿರುದ್ಯೋಗದಿಂದ ಕಾಲವನ್ನು ಹಾಳು ಮಾಡಲಾರಿರಿ. ಶತ್ರುಗಳೂ ಮಿತ್ರರಾಗುವರು. ಕೃಷಿ, ನೌಕರಿ, ವ್ಯಾಪಾರ ಇತ್ಯಾದ್ಯುದ್ಯಮ ಜೀವಿಗಳಿಗೆ ಪ್ರಯತ್ನಕ್ಕಿಂತ ಅಧಿಕವಾದ ಫಲಲಭಿಸುವದು. ಕೆಲವೊಮ್ಮೆ ಮನೋದೌರ್ಬಲ್ಯದಿಂದ ಅಕಾರ್ಯ ಪ್ರವೃತ್ತರಾಗಿ ಅಪವಾದಕ್ಕೆ ಸಿಲುಕಲಿರುವಿರಿ. ತಾ 14, 15, 16, 17 ಈ ದಿನಗಳಲ್ಲಿ ಧನಲಾಭ ಸುಖಾದಿಗಳು ಲಭಿಸುವವು

ಕರ್ಕಟಿ— ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗುವಿರಾದರೂ ಈ ವಾರದಲ್ಲಿ ನಿಮ್ಮ ದೈಹಿಕ ಪ್ರಕೃತಿಯು ಕೆಡಲಿದೆ. ಗೃಹತಾಪತ್ರಯಗಳು ಬಹುವಾಗಿ ಪೀಡಿಸುವುವು. ಪ್ರವಾಸಾದಿಗಳಲ್ಲಿ ಅನಿರೀಕ್ಷಿತ ನಷ್ಟಕಷ್ಟಗಳೊದಗಲಿವೆ. ಆದರೂ ನಿಮ್ಮ ಶಕ್ತಿಸಾಹಸಕ್ಕೆ ಶತ್ರುಗಳೂ ಪಾದಾಕ್ರಾಂತರಾಗಲಿರುವರು. ವೈದ್ಯಜನರಿಗೂ ಶ್ರಮ ಜೀವಿಗಳಿಗೂ ಈ ವಾರವು ಸಾಕಷ್ಟು ತೃಪ್ತಿಕರವಿದೆ. ವಾರಾಂತ್ಯದ 3ದಿನಗಳಲ್ಲಿ ಧನಲಾಭ, ಮಾನ, ಸುಖಾದಿಗಳು ಲಭಿಸುವವು-

ಸಿಂಹ—ಶುಭಗ್ರಹರೆಲ್ಲರ ಅನುಗ್ರಹವನ್ನು ಪಡೆದ ನಿಮಗೆ ಈ ವಾರದಲ್ಲಿ ಸತ್ಕರ್ಮ ಸದುದ್ಯೋಗದಲ್ಲಿ ಒಳ್ಳೇ ವಿಜಯ ಯಶಸ್ಸುಗಳು ಲಭಿಸುವುವು. ನಿಮ್ಮ ವಾಚಾಲತ್ವಕ್ಕೆ ಜನತೆಯು ಮೆಚ್ಚಿ ಸದಾ ನಿಮ್ಮ ಅನುಯಾಯಿಗಳಾಗಲಿರುವರು ಉದರಶೂಲೆ, ನೇತ್ರವೇದನೆಗಳು ನಿಮ್ಮ ಆರೋಗ್ಯವನ್ನು ಕೆಡಿಸಬಹುದು- ವಿದ್ಯೋಪಜೀವಿ ನೌಕರವರ್ಗಕ್ಕೂ ವ್ಯಾಪಾರ ವೃಂದಕ್ಕೂ ವಿದ್ಯಾರ್ಥಿಗಳಿಗೂ ಕಾಲವು ಅನುಕೂಲವಿದೆ. ತಾ. 12, 13, 18ರಲ್ಲಿ ಗೃಹಸುಖ, ಧನಲಾಭಗಳಾಗುವವು.

ಕನ್ಯಾ —ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವದಾದರೂ ನಿಮ್ಮ ಖರ್ಚುವೆಚ್ಚಗಳು ಅಧಿಕವಾಗುವುದರಿಂದ ಹಣದ ಅಡಚಣೆಯಲ್ಲಿ ಸಿಲುಕುವಿರಿ. ಬೇಕಾದ ಸುಖೋಪಭೋಗಗಳನ್ನು ಅನುಭವಿಸುವಿರಿ. ಶತ್ರುಜನರ ಪೀಡೆಯೂ ತತ್ಪರಿಣಾಮದಿಂದುಂಟಾದ ಮನೋರೋಗವೂ ನಿಮ್ಮನ್ನು ಸದಾ ಪೀಡಿಸುತ್ತಲಿರುವುವು. ತಾ. 14, 15, ಈ ದಿನಗಳಲ್ಲಿ ವಿಜಯ, ಸುಖ, ಲಾಭಗಳು ಲಭಿಸುವವು.

ತುಲಾ—ಸದಾಚಾರ ಸಂಪನ್ನರಾದ ಸಜ್ಜನ ವೃಂದಕ್ಕೆ ಈ ವಾರವು ಹೆಚ್ಚಿನ ಅನಿಷ್ಟದಾಯಿಯಾಗಲಾರದು. ಬಂಧುಜನರ ಮತ್ತು ಮಿತ್ರವರ್ಗದವರ ಬೆಂಬಲವು ಸಾಕಷ್ಟಿರುವುದರಿಂದ ದಿನಯಾಪನೆಯು ಕಷ್ಟವಾಗದು. ಶೀತೋಷ್ಣ ವಿಕಾರದಿಂದ ದೇಹಾಲಸ್ಯವೊದಗಲಿದೆ. ಅನಿರೀಕ್ಷಿತವಾಗಿ ಅನರ್ಥ ಪರಂಪರೆಗಳು ಒದಗಬಹುದು. ಹೆಚ್ಚಿನ ಕಾರ್ಯಗಳಲ್ಲಿ ಪರಾಭವ ಹೊಂದಲಿರುವಿರಿ. ತಾ. 12, 13, 16, 17 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ, ಗೃಹಸುಖ, ಲಾಭಗಳು ಲಭಿಸುವವು.

ವೃಶ್ಚಿಕ—ಇಂದೀಗ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರಲು ಅನುಕೂಲವಾದ ಸಮಯ ಬಂದಿದೆ. ನಿರುದ್ಯೋಗದಿಂದ ಕಾಲಯಾಪನೆ ಮಾಡಿ ಪಶ್ಚಾತ್ತಾಪಕ್ಕೆ ಗುರಿಯಾಗದಿರಿ. ವಾಹನಾದಿಗಳ ಪ್ರಯಾಣವನ್ನು ನಿಷೇಧಿಸಿರಿ. ಅಪಘಾತಗಳಾಗಬಹುದು. ಬಂಧುಜನರಿಂದಾಗಿ ಮನಸ್ಸಿಗೆ ನೋವುಂಟಾಗುವ ಪ್ರಸಂಗಗಳು ಜರಗುವವು. ತಾ. 14, 15, 18 ಈ ದಿನಗಳಲ್ಲಿ ಕಾರ್ಯಜಯ, ಮಿತ್ರರ ಸಮಾಗಮ, ಸ್ತ್ರೀಧನ ಲಾಭಾದಿಗಳುಂಟಾಗಲಿವೆ.

ಧನು—ಕ್ಷಣಕ್ಷಣಕ್ಕೂ ಕಷ್ಟ, ನಷ್ಟ, ನಿಷ್ಠೂರಗಳು ನಿಮ್ಮ ಭಾಗಕ್ಕೆ ತಪ್ಪಿದ್ದಲ್ಲವು. ದೇಹ ಮನಸ್ಸುಗಳಿಗೆ ಸುಖಶಾಂತಿಗಳು ದುರ್ಲಭವಾಗುವವು. ಮಿತಭಾಷಿಯಾಗಿದ್ದರೂ ಕೂಡ ಮಾತಿನಿಂದಾಗಿ ಪರರೊಡನೆ ಕಲಹವಾಗುವದು. ಸ್ಥಾನಭ್ರಷ್ಟತೆ, ತಿರುಗಾಟ, ಪಿತ್ತದೋಷದಿಂದಾಗಿ ಅವಯವಗಳಲ್ಲಿ ಪೀಡೆ ಇತ್ಯಾದ್ಯನಿಷ್ಟಗಳ ಯೋಗವಿದೆ. ಆದರೂ ತಾ. 12, 13, 16, 17 ಈ ದಿನಗಳಲ್ಲಿ ಮಿತ್ರಸಮಾಗಮದಿಂದ ಮನಶ್ಶಾಂತಿ ಕಿಂಚಿಲ್ಲಾಭಾದಿಗಳು ಲಭಿಸುವವು.

ಮಕರ—ಸಾಹಸಿಗರಾದ ನಿಮಗೆ ದೈವಾನುಕೂಲವೂ ಉತ್ತಮವಾಗಿರುವುದರಿಂದ ಯಾವ ಕಾರ್ಯವನ್ನು ಕೈಗೊಂಡರೂ ಅಚಿರದಲ್ಲೇ ನಿರ್ವಿಘ್ನದಿಂದ ಕೊನೆಗೊಂಡುವಿರಿ. ನಿರೀಕ್ಷೆಗಿಂತ ಹೆಚ್ಚಿನ ಫಲಪ್ರಾಪ್ತಿಯಾಗುವದು. ಜನತೆಯಲ್ಲಿ ಸ್ಥಾನಮಾನಗಳನ್ನೂ ಹೊಂದುವಿರಿ. ಆದರೆ ಲೇವಾದೇವಿ ನಿಮಿತ್ತ ಕೋರ್ಟು ಕಚೇರಿಗಳಿಗೆ ಹೋಗುವ ಪ್ರಸಂಗ ಬರಬಹುದು. ಜಾಗ್ರತೆಯಿಂದ ವ್ಯವಹಾರ ಮಾಡಿರಿ. ತಾ. 16, 17 ಒಳ್ಳೆಯದಲ್ಲ.

ಕುಂಭ—ಜನ್ಮದಲ್ಲಿ ಗುರುವೂ, ಅಷ್ಟಮದಲ್ಲಿ ರವಿ ಶನಿಗಳೂ ನಿಮ್ಮ ಭಾಗಕ್ಕೆ ವಿಶೇಷ ಅನಿಷ್ಟಕಾರಿಗಳಿರುವರು. ಧನನಾಶ, ಪ್ರವಾಸ, ರೋಗಭಯ, ಇತ್ಯಾದ್ಯನಿಷ್ಟಗಳು ಪ್ರಾಪ್ತವಾಗಲಿವೆ. ಸ್ತ್ರೀಪುತ್ರರ ವಿರಹವುಂಟಾದೀತು. ಮಾತ್ರವಲ್ಲ, ಗೃಹಚ್ಛಿದ್ರದ ದೆಸೆಯಿಂದಾಗಿ ಮನೆಯಲ್ಲಿ ನಿತ್ಯಜಗಳ ತಪ್ಪಿದ್ದಲ್ಲವು. ಸಟ್ಟಾ, ಲಾಟ್ರಿ ಇತ್ಯಾದಿಗಳಿಂದ ಧನ ಲಭಿಸಬಹುದು. ತಾ. 14, 15, 16, 17 ಈ ದಿನಗಳಲ್ಲಿ ಹೆಚ್ಚಿನ ಅಪಾಯಗಳು ಕಾಣಿಸವು.

ಮೀನ—ರಾತ್ರಿಹಗಲುಗಳಂತೆ ಮನುಜರಿಗೆ ಸುಖದುಃಖಗಳೂ ಒಂದರ ಹಿಂದೊಂದು ಪ್ರಾಪ್ತವಾಗುವವು. ಇಂದೀಗ ಎಲ್ಲಾ ಗ್ರಹರೂ ನಿಮಗೆ ಪ್ರತಿಕೂಲರಾಗಿ ನಿಂತಿರುವುದರಿಂದ ನಿಮ್ಮ ಕಾರ್ಯಗಳೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತೆ ನಿಷ್ಫಲವಾಗುವವು. ಮನೆಯವರ ಅನಾದರ, ಆತ್ಮೀಯರ ತಿರಸ್ಕಾರ, ಬಂಧುಗಳ ಅಪಚಾರ ಇತ್ಯಾದಿಗಳಿಂದ ನೊಂದ ನಿಮಗೆ ಸಂಸಾರದಲ್ಲೇ ವಿರಕ್ತಿಹುಟ್ಟೀತು. ಆದರೂ ವಾರಾಂತ್ಯದ 3ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.





Approved from by the Govt. of Mysore Certificated by the Agent of the Govt of Cylone & Indian

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಪುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

-ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಸಹಕಾರಿ ಸಂಘಗಳಿಗೆ—
ಮುನ್ಸಿಪಲ್ ಕೋರ್ಟುಗಳಿಗೆ—
ವರ್ತಕದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Edited, Printed & Published By K. H. Shetty At The Navayuga Press, Udipi, S.India.

LICENSED No. 31
Licensed to Post without Prepayment

Estd 1921 ಸ್ಥಾಪನೆ.
31ನೇ ವರ್ಷ

19—10—1950

Founder: Sri A. B. Shetty,
Minister for Agriculture & Veterinary.

ನವ ಯುಗ

ಸ್ವಾಧೀನ ಭಾರತ

ವರ್ಷ ೩೦ ವಾರ ೭

NAVAYUGA WEEKLY

POST BOX NO. 22
UDIPI, S. K.

Vol. 31
No. 7

ಎಲ್ಲರೂ ನಿರೀಕ್ಷಕರೇ!

ತ್ರಂತಮ್ಮ ಸ್ವೋದ್ದೇಶ ಸಾಧನೆಗಾಗಿ ಸುಸಂದರ್ಭವೊದಗುವದನ್ನು ನಿರೀಕ್ಷಿಸುತ್ತಿರುವ ಕಣ್ಣುಗಳು ಇಂದು ವಿವಿಧ ವರ್ಗದ ಜನತೆಯ ಅಂತರಾಳದಲ್ಲಿ ಅಗಲಕ್ಕೂ ತೆರೆದುಕೊಂಡಿರುವಂತೆ ತೋರುತ್ತಿದೆ.

ಕಳೆದ ಮಹಾಯುದ್ಧಾವಧಿಯಲ್ಲಿ ತಮ್ಮ ಜೀವಾವಧಿ ಶ್ರೀಮಂತಿಕೆಗೆ ಸಾಕಾಗುವಷ್ಟನ್ನು ಕಳ್ಳಸಂತೆಯಿಂದ ಕೂಡಿಸಲು ಶಕ್ತರಾದವರು, ಮತ್ತದರ ಗಳಿಕೆಗಾಗಿ ಬಾಯಿ ನೀರೂರಿಸುತ್ತಾ ತಮ್ಮಿಂದ ಅಂತಹ ಸಂದರ್ಭವನ್ನು ಉಪಯೋಗಿಸಿಕೊಳ್ಳಲಾಗಲಿಲ್ಲವಲ್ಲಾ ಎಂಬ ಪಶ್ಚಾತ್ತಾಪವಿರುವವರು, ಈಗಿನ ಕೊರಿಯಾ ಯುದ್ಧವು ಜಾಗತಿಕ ಯುದ್ಧವಾಗಿ ಬೆಳೆದು ತಮಗೆ ಇನ್ನೊಮ್ಮೆ ಅಂತಹ ಸುಯೋಗವನ್ನು ಒದಗಿಸಬಹುದೆಂಬ ನಿರೀಕ್ಷೆಯಲ್ಲಿದ್ದಾರೆ.

ಲೋಕದ ಅರೆವಾಸಿ ಭಾಗದ ಮೇಲೆ ಮಾತ್ರ ತಮ್ಮ ವರ್ಚಸ್ಸನ್ನು ಬೀರಲಾಗುವಂತೆ ವಿಶ್ವ ಅರ್ಧಭಾಗವನ್ನು ಅಂಕೆಯಲ್ಲಿಟ್ಟುಕೊಂಡಿರುವ ವಿರೋಧಿ ಪಕ್ಷವು ನಾಶವಾಗಿ ಇಡೀ ಜಗತ್ತು ತಮ್ಮದಾಗುವ ಕಾಲ ಬರಬಹುದೆಂದು ಆಕಡೆಯಿಂದ ರಶ್ಯಾ, ಈಕಡೆಯಿಂದ ಅಮೇರಿಕ, ಎರಡೂ ನಿರೀಕ್ಷಿಸುತ್ತಿವೆ.

ಲೋಕಮಹಾಯುದ್ಧವಾರಂಭಿಸಿ, ತಾವು ಪ್ರತಾಪ ತೋರಿಸುವ ಸುಯೋಗವೊದಗಬಹುದೆಂದು ಈಗ ಮೂಲೆಗುಂಪಾಗಿರುವ ಸೇನಾನಿಗಳು, ಯುದ್ಧತಜ್ಞರು, ಯುದ್ಧ ನೌಕರರು, ಯುದ್ಧಲೇಖಕರೇ ಮೊದಲಾದವರು ಭವಿಷ್ಯದತ್ತ ಇಣುಕುತ್ತಿದ್ದಾರೆ.

ಮಹಾ ಚುನಾವಣೆ ಸಮೀಪಿಸುತ್ತಿರುವುದರಿಂದ ತಾವು ಘನಸ್ಥಾನಕ್ಕೆ ನಿಲ್ಲುವ ಸಂದರ್ಭ ಬಂತೆಂದು ಉಮೇದ್ವಾರಿಗಳು—ತಮ್ಮ ಕೈತುಂಬಾ ದುಡ್ಡು ಓಡಾಡುವ ಕಾಲು ಬಂತೆಂದು ವೋಟುದಲ್ಲಾಲಿಗಳೇ ಮೊದಲಾದವರು—ದೊಡ್ಡ ದೊಡ್ಡ ಮನುಷ್ಯರು ತಮ್ಮ ಕಾಲಬುಡಕ್ಕೆ ಬರುವ ದೊಡ್ಡಸ್ಥಿಕೆ ಬರುತ್ತಿದೆಯೆಂದು ವೋಟರರು—ಆಶಿಸುತ್ತಿದ್ದಾರೆ.

ಭಾವೀ ಮಹಾಚುನಾವಣೆಯಲ್ಲಿ ತಾವು ಗೆಲ್ಲಬಹುದು; ಗೆದ್ದಮೇಲೆ ತಮಗೆ ಬೇಕಾಗುವ ಇಂಥಿಂತಹದನ್ನು ಸಾಧಿಸಿಕೊಳ್ಳಬಹುದು—ತಾವು ಗೆಲ್ಲದೆಹೋದರೂ ಭಾವೀ ಆಡಳಿತೆಯ ಮೇಲೆ ಪರಿಣಾಮ ಬೀರಲಾಗುವಷ್ಟು ಬಹುಮತವನ್ನಾದರೂ ಪಡಕೊಳ್ಳಬಹುದು; ಹಾಗಾದಲ್ಲಿ ಇಂಥಿಂತಹ ಅಡ್ಡಿ ಆತಂಕಗಳನ್ನು ಒಡ್ಡಬಹುದು—ಎಂದು ಮುಂತಾಗಿ ವಿವಿಧ ರಾಜಕೀಯ ಪಕ್ಷಗಳೀಗ ನಿರೀಕ್ಷಿಸುತ್ತಿವೆ.

ಇಂದಿನ ಕಾಂಗ್ರೆಸ್ ಆಡಳಿತೆಯ ಕಾಲದ ಆಹಾರ ಬರಗಾಲ ಮತ್ತು ಜೀವನಾವಶ್ಯ ಸಾಮಾಗ್ರಿಗಳ ಅಧಿಕ ಧಾರಣೆ, ಇತ್ಯಾದಿ ಅಡ್ಡಿ ಅಡಚಣೆಗಳ ದೆಸೆಯಿಂದ ಕಾಂಗ್ರೆಸನ್ನು ದೂರಹತ್ತಿರುವ ಜನಸಾಮಾನ್ಯರೆಲ್ಲರೂ ಭಾವೀ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿರುದ್ಧ ಮತಕೊಡಬಹುದೆಂದು ಕಾಂಗ್ರೆಸ್ಸೇತರ ಪಕ್ಷಗಳೆಲ್ಲವುಗಳ ನಿರೀಕ್ಷೆಯೂ ಇರಬಹುದು.

ತಾವು ಏನೇ ಗೈದರೂ ಗತಕಾಲದ ಸೇವೆಗಳಿಂದ ಕಾಂಗ್ರೆಸ್ ಗಳಿಸಿರುವ ಘನತೆಯಿಂದ ಮತ್ತು ಮಹಾತ್ಮಾ ಗಾಂಧಿಯವರ ನಾಮಬಲದಿಂದಲೂ, ಜನತೆಗೆ ತಮ್ಮಷ್ಟು ಸುಪರಿಚಿತವಾದ ಮತ್ತು ಪ್ರಭಾವಶಾಲಿಯಾದ ಬೇರೊಂದು ಪಕ್ಷವು ಪ್ರತ್ಯಕ್ಷ ಕಾಣಿಸುವುದಿಲ್ಲವಾದ್ದರಿಂದಲೂ ಮುಂದಿನ ಚುನಾವಣೆಯಲ್ಲಿ ತಾವೇ ಜಯಿಸುವೆನೆಂಬ ನಿರೀಕ್ಷೆಯು ಕಾಂಗ್ರೆಸಿಗಂದಿರಬಹುದು.

ಯಾರು ಏನೇ ಅಂದರೂ, ಗತಕಾಲದ ಜಾತೀಯತಾ ಗೊಂದಲಗಳ ಸ್ಮರಣೆ ಮತ್ತು ಜಾತೀಯತಾ ಭಾವನೆ ಅಡಗುವಂತಹದಲ್ಲವೆಂದೂ, ಮಂಡಲರ ರಾಜೀನಾಮೆಯಂತಹ ವಿಶೇಷ ಘಟನೆಗಳು ಆಗಾಗ ಜರಗಿ ಜಾತೀಯತಾ ಭಾವನೆಯನ್ನು ಸಾಯಲು ಬಿಡಲಾರವೆಂದೂ, ಹೀಗಾಗಿ ಒಂದಲ್ಲೊಂದು ದಿನ 'ಹಿಂದೂರಾಜ್ಯ' ಸ್ಥಾಪನೆಗೊಳ್ಳುವುದು ಖಂಡಿತವೆಂಬ ನಿರೀಕ್ಷೆ ಕೆಲವು ಹಿಂದುಗಳಿಗಿದ್ದರೆ, ಪಾಕಿಸ್ತಾನವು ತಮ್ಮ ಬೆಂಬಲಕ್ಕೆ ಬರುವ ಕಾಲಬಂದೀತೆಂಬ ಹಾರೈಕೆಯು ಇಲ್ಲಿಯ ಕೆಲವು ಮುಸ್ಲಿಮರಲ್ಲಿಯೂ ಇರಬಹುದು. ಆಶ್ಯಾದಲ್ಲಿ ಹರಡುತ್ತಾ ಬಂದಿರುವ ಕಮ್ಯೂನಿಸ್ಟ್ ಪ್ರಭಾವವು ಭಾರತವನ್ನು ಬಾಕಿಬಿಡಲಾರದೆಂದು ಇಲ್ಲಿಯ ಕಮ್ಯೂನಿಸ್ಟರ ಆಶೆಯಿರಬೇಕು.

ನೆಹರೂ, ವಲ್ಲಭಾಯಿ, ಪ್ರಸಾದರಂತಹ ಅಖಿಲ ಭಾರತ ವರ್ಚಸ್ಸಿನ ಕೆಲ ಮಂದಿ ಧುರೀಣರು ಎಂದು ತೆರವಾಗುವರೋ—ತಮ್ಮ ಬಯಕೆಯ ಸಿಖ್‌ಸ್ಥಾನ, ದ್ರಾವಿಡಸ್ಥಾನ, ಭಾಷಾವಾರು ಸ್ಥಾನದಂತಹ ಪ್ರತ್ಯೇಕತೆಯನ್ನು ಎಂದು ಸ್ಥಾಪಿಸಿಕೊಂಡು ಮೆರೆದಾಡುವೆವೋ, ಎಂದು ನಿರೀಕ್ಷಿಸುತ್ತಿರುವ ಪಕ್ಷಪಂಗಡಗಳು ಹಲವಿವೆ.

ನಾಯಕ ಸ್ಥಾನಾಕಾಂಕ್ಷಿಗಳು ಹಿರಿಯ ಧುರೀಣರ ಮರಣ ಅಥವಾ ಪತನವನ್ನು—ಒಡೆತನಾಕಾಂಕ್ಷಿ ಕಿರಿಯರು ಮನೆಯೊಡೆಯನ ಅವಸಾನವನ್ನು—ಅತಿರೇಕ ಲಾಭಾಕಾಂಕ್ಷಿಗಳು ತಟ್ಟಿ ಮತ್ತು ಬರಗಾಲವನ್ನು—ಟೀಕಾ ಪ್ರೇಮಿಗಳು ಅನ್ಯರ ಪ್ರಮಾದಗಳನ್ನು ನಿರೀಕ್ಷಿಸುತ್ತಿದ್ದಾರೆ.

ಅಕ್ಕಿಯ ಬೆಲೆಯೇರಬಹುದು ಮತ್ತು ಆಹಾರ ನಿಯಂತ್ರಣ ಹೋಗಬಹುದು, ಎಂಬ ಆಶೆಯು ಧಾನ್ಯೋತ್ಪಾದಕರಲ್ಲಿದ್ದರೆ, ಅಕ್ಕಿಯ ಬೆಲೆಯಿಳಿಯಬಹುದು ಮತ್ತು ನಿಯಂತ್ರಣವು ಇನ್ನಷ್ಟು ಬಿಗಿಯಾಗಿ ಧಾನ್ಯ ಸಂಗ್ರಹವಧಿಕವಾಗಬಹುದು, ಎಂದು ಕೊಂಡುಣ್ಣುವವರು ಹಾರೈಸುತ್ತಿದ್ದಾರೆ.

ಆರ್ಥಿಕ ಸಮಾನತಾ ಸ್ಥಾಪನೆಗಾಗಿ ಕಠಿಣ ಕಾನೂನುಗಳನ್ನು ತರಲಾರದ ಈ ಕಾಂಗ್ರೆಸ್ ಆಡಳಿತೆಯು ಅಗ್ನಿ ಪರೀಕ್ಷೆಗೊಳಗಾಗುವದೆಂದು ಸಮಾಜವಾದಿಗಳು ಹಾರೈಸುತ್ತಿದ್ದರೆ, ಜಮೀನ್ದಾರೀ ಬರ್ಖಾಸ್ತು ಮಾಡಿರುವ ಶ್ರೀಮಂತರ ಮೇಲೆ ಕರಭಾರ ಹೇರಿರುವ ಈ ಆಡಳಿತೆಯು ಈ ತಪ್ಪಿನ ದುಷ್ಪರಿಣಾಮಗಳನ್ನು ಅನುಭವಿಸಿ, ಹಾದಿಗೆ ಬರುವದೆಂದು ಧನಿಕವರ್ಗ ನಿರೀಕ್ಷಿಸುತ್ತಿದೆ.

ತಮ್ಮ ತತ್ವ, ವಾಗ್ದಾನಗಳಿಗನುಸಾರವಾಗಿ ವರ್ತಿಸದಿರುವ ಸರಕಾರಗಳು ಇನ್ನಾದರೂ ತಮ್ಮ ಕರ್ತವ್ಯಗಳ ಕಡೆಗೆ ಲಕ್ಷ್ಯ ಕೊಡಬೇಕೆಂದು ಸಾರ್ವಜನಿಕರ ನಿರೀಕ್ಷೆಯಾದರೆ, ತಮ್ಮ ಹೊಣೆಗಾರಿಕೆಗಳನ್ನರಿತುಕೊಳ್ಳದೆ ಪರಕೀಯರಂತೆ ಟೀಕಾಕಾರರಾಗಿ ಅಥವಾ ತಟಸ್ಥರಾಗಿ ಇರುವ ಜನತೆಯು ಇನ್ನಾದರೂ ಸ್ವತಂತ್ರ ಜನತಾರಾಜ್ಯ ಭಾರತದ ಯೋಗ್ಯ ನಾಗರಿಕರೆನ್ನಿಸುವರೆಂದು ಸರಕಾರೀ ನಾಯಕರ ಹಾರೈಕೆ.

ತಮಗಾಗಿ ಏನನ್ನೂ ಹೊಟ್ಟೆಗೆ ಬಯಸದೆ ಶ್ರಮಜೀವಿಗಳು ಯಂತ್ರಗಳಂತೆ ದುಡಿಯಬೇಕೆಂದು ಧನಿಗಳ ಹುಟ್ಟು ಹಾರೈಕೆಯಾದರೆ, ತಾವು ಹೇಗಿದ್ದರೂ ತಮಗೆ ಇನ್ನಷ್ಟನ್ನು ಮಾಲಕರು ಕೊಡುತ್ತಾ ಹೋಗಬೇಕೆಂಬುದೇ ಕೆಲವು ವರ್ಗದ ಮಜೂರರ ನಿರೀಕ್ಷೆ.

ಒಟ್ಟಿನ ಮೇಲೆ, ತಮ್ಮಿಂದ ಯಾರೂ ಏನನ್ನೂ ನಿರೀಕ್ಷಿಸದೆ, ತಾವು ಅನ್ಯರಿಂದ ನಿರೀಕ್ಷಿಸುವಂತಹದೆಲ್ಲವೂ ತಮಗೆ ಅಡ್ಡಿ ವಿನಹ ದೊರೆಯುತ್ತಿರಬೇಕೆಂದು ಅವರಿವರೆನ್ನದೆ ಎಲ್ಲರ ನಿರೀಕ್ಷೆ.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್. ಎಮ್., ಉಡುಪಿ.

ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಶುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆಂಗಿಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

ಭಾರತದ ಸರ್ವಸೇನಾನಿ ಕರಿಯಪ್ಪ

1947ನೇ ಆಗೋಸ್ತು 15ರಲ್ಲಿ ಸ್ವತಂತ್ರ ಭಾರತದ ಪ್ರಧಾನ ಮಂತ್ರಿಯಾಗಿ ಹೊಣೆ ಹೊರಲು ಪಂಡಿತ ನೆಹರುಗಳಂತಹ ಜನನಾಯಕರಿದ್ದರು; 1949ನೇ ಜನವರಿ 15ರಲ್ಲಿ ಸ್ವತಂತ್ರಭಾರತದ ಸರ್ವ ಸೇನಾನೀಹುದ್ದೆ ವಹಿಸಿಕೊಳ್ಳಲು ಜನರಲ್ ಕರ್ಯಪ್ಪನಂತಹ ಸಮರ್ಥ ಸೇನಾತಜ್ಞರಿದ್ದರು; ದೋಷ, ದೌರ್ಬಲ್ಯಗಳಿಂದಾಗುವ ದುಷ್ಪರಿಣಾಮಗಳೊಳಗೆ ತನ್ನವನದು, ಪರಕೀಯನದು ಎಂಬ ತಾರತಮ್ಯವಿರುವದಿಲ್ಲ; ಸ್ವಾಭಿಮಾನ ಮಾತ್ರದಿಂದ ಆಗಬೇಕಾದುದೆಲ್ಲವೂ ಆಗುವಂತಿಲ್ಲ; ರಾಷ್ಟ್ರದ ಜವಾಬ್ದಾರಿಗಳನ್ನು ನಿರ್ವಹಿಸಲು ಸ್ವಕೀಯನೆಂಬೊಂದೇ ಯೋಗ್ಯತೆಯಿದ್ದರೆ ಸಾಲದು—ಆ ಹೊಣೆಗಾರಿಕೆಗನುಗುಣವಾದ ಅನುಭವ, ಜ್ಞಾನ, ಗುಣ, ಲಕ್ಷಣಗಳೆಲ್ಲವೂ ಆತನಲ್ಲಿರಬೇಕು. ರಾಷ್ಟ್ರನಾಯಕ ಸ್ಥಾನದ ಮಟ್ಟಿಗೆ ಅವೆಲ್ಲವೂ ಇರುವ ಪಂಡಿತ ನೆಹರುಗಳು ನಮಗಿದ್ದಾರೆ; ಸೇನಾ ನಾಯಕ ಹುದ್ದೆಯ ಮಟ್ಟಿಗೆ, ಅದಕ್ಕನುಗುಣವಾದ ಸರ್ವ ಯೋಗ್ಯತೆಗಳೂ ಇರುವ ಜನರಲ್ ಕರ್ಯಪ್ಪನವರಿದ್ದಾರೆ. ಒಂದೊಮ್ಮೆಗೆ ರಾಜಕೀಯ ನಾಯಕತ್ವವನ್ನಾದರೂ ಕೇವಲ 'ಜನಪ್ರಿಯತೆ'ಯನ್ನಾಧರಿಸಿ ಒಪ್ಪಿಸಿಕೊಡಬಹುದು; ಬೇರಾವ ಯೋಗ್ಯತಾ ಪರೀಕ್ಷೆಗೂ ಒಳಗಾಗದೆ ಜನತಾ ಬೆಂಬಲ ಮಾತ್ರದಿಂದಲೇ ರಾಜಕೀಯ ಪ್ರತಿನಿಧಿ ಸ್ಥಾನಗಳು ಆರಿಸಲ್ಪಡುತ್ತಿವೆ. ಆದರೆ ಸೇನಾನಾಯಕತ್ವವು ಕೇವಲ ಶಕ್ತಿ,ಸಾಮರ್ಥ್ಯಗಳನ್ನಾಧರಿಸಿ ನೇಮಿಸಲ್ಪಡುವಂತಹದಿದೆ. ರಾಜಕೀಯ ಪ್ರಮಾದಗಳಿಗಾದರೂ ತಿದ್ದುಪಡಿ ಮತ್ತು ಕ್ಷಮಾಪಣೆಗಳಿವೆ; ಆದರೆ ಸೇನಾ ಪ್ರಮಾದಗಳನ್ನು ಸರಿಪಡಿಸುವುದು ಕಷ್ಟ; ಅವು ಅಕ್ಷಮ್ಯ. ಆದ್ದರಿಂದಲೇ, ಸಂಬಂಧಪಟ್ಟ ವ್ಯಕ್ತಿಯ ಅರ್ಹತೆಯು ಸಂಪೂರ್ಣಗೊಂಡಾಗ ಮಾತ್ರ ಸೇನಾನಿ ಹೊಣೆಗಾರಿಕೆ. ರಾಜಕೀಯ ಹಕ್ಕು ಬಾಧ್ಯತೆಗಳೆಲ್ಲವನ್ನೂ 1947ರಲ್ಲೇ ಭಾರತೀಯರು ವಹಿಸಿಕೊಂಡಿದ್ದರೂ ಭಾರತದ ಸರ್ವ ಸೇನಾನಿತ್ವವನ್ನು ಓರ್ವ ಭಾರತೀಯ ವಹಿಸಿಕೊಂಡುದು 1949ರಲ್ಲಿ. ಜನರಲ್ ಕರ್ಯಪ್ಪನವರು ಸ್ವತಂತ್ರ ಭಾರತದ 'ಕಮಾಂಡರ್–ಇನ್–ಚೀಫ್'' ಆದ ಮೇಲೆಯೇ ಭಾರತದ ಯಾವ ಅಂಶವೂ ಬಾಕಿಯಿರದೆ 'ಭಾರತೀಯ'ವಾಯಿತೆಂಬುದು ಸ್ಪಷ್ಟ.

ಕೂರ್ಗಿ ಕರಿಯಪ್ಪ

ಶ್ರೀ. ಕರಿಯಪ್ಪನವರು ಕೂರ್ಗಿನ ಪುತ್ರ. 'ಬೆಳ್ಳಿಯ ಚಮಚವನ್ನು ಬಾಯಿಯಲ್ಲಿಟ್ಟುಕೊಂಡೇ ಹುಟ್ಟಿದವರು' ಎಂದು ಹುಟ್ಟುಶ್ರೀಮಂತರಿಗೆನ್ನುತ್ತೇವೆ. ಭಾರತದ ಸರ್ವ ಸೇನಾನಿ ಬಿಲ್ಲುಬಾಣಗಳನ್ನು ಕೈಗಳಲ್ಲಿ ತೊಟ್ಟುಕೊಂಡೇ ಭೂಮಿಗಿಳಿದವರು. ಪ್ರತಿಯೊಬ್ಬ ಕೂರ್ಗಿನವನ ನಾಡಿಗಳಲ್ಲೂ ಯೋಧ ರಕ್ತ ಪ್ರವಹಿಸುತ್ತಿದೆ. ಹುಟ್ಟಿದ ಪ್ರತಿಯೊಂದು ಮಗುವಿನ ಬಳಿಯಲ್ಲೂ 11ನೇ ದಿನದಲ್ಲಿ ಸಣ್ಣ ಬಿಲ್ಲುಬಾಣಗಳನ್ನು ಇಡುವುದು ಕೂರ್ಗಿನಲ್ಲಿ ಮೊದಲಿನಿಂದಲೂ ಇರುವ ಸಂಪ್ರದಾಯ,—ಇದು ಯೋಧಕುಲದ ದ್ಯೋತಕವಾಗಿ. ದಕ್ಷಿಣ ಕನ್ನಡದಲ್ಲಿ ತೊಟ್ಟಿಲಿಗೆ ಹಾಕಿದ ಕೂಸಿನ ಪಕ್ಕದಲ್ಲಿ ಕೂಸುಕತ್ತಿಯೊಂದನ್ನಿಡುವ ಕ್ರಮವಿದ್ದರೆ ಕೂರ್ಗಿನ ಕೂಸು ಬಿಲ್ಲುಬಾಣಗಳನ್ನಿಟ್ಟುಕೊಂಡೇ ಮಲಗುತ್ತದೆ. ಹದಿನೆಂಟು ವರುಷವಾಗುವಾಗ 'ಕೀಲ್‌ಮಾರ್ಟ್' ಹಬ್ಬದ ಮೂಲಕ ಕೂರ್ಗಿನವನಿಗೆ ಅಸ್ತ್ರವಿದ್ಯೆ ದೊರೆಯಲಾರಂಭವಾಗುತ್ತದೆ; ಅಂದು ಅವನ ಕೈಗೊಂದು ಕೋವಿ ಬರುತ್ತದೆ. ಮಿಕ್ಕಡೆಗಳಲ್ಲಿ ಹೆಚ್ಚುಕಡಿಮೆ ಇದೇ ಅವಧಿಯಲ್ಲಿ 'ಉಪನಯನ'ದಂತಹ ಕ್ರಮಗಳಿದ್ದರೆ ಯೋಧಸಮಾಜ ಕೂರ್ಗಿಗಳಲ್ಲಿ ಈ 'ಕೋವಿಧಾರಣಾ' ಸಮಾರಂಭವಿದೆ. ಶಸ್ತ್ರಪ್ರಯೋಗ ತರಬೇತಿ ಮುಗಿದಮೇಲೆ ಸಾಮಾನ್ಯ ಕೂರ್ಗಿನ ಯುವಕ ಕೋವಿಯನ್ನು ಕೆಳಗಿಟ್ಟು ಜೀವನ ನಿರ್ವಹಣಕ್ಕಾಗಿ ತೋಟ ಅಥವಾ ಗದ್ದೆಗಳಲ್ಲಿ ಹಾರೆ, ಇಲ್ಲವೇ ನೇಗಿಲು ಹಿಡಿಯುವ ಕ್ರಮ. ಆದರೆ ಶ್ರೀ ಕೆ. ಎಮ್. ಕರಿಯಪ್ಪನವರಿಗೆ ಸೇನಾ ಜೀವನದಲ್ಲಿಯೇ ಹುಟ್ಟು ಅಭಿರುಚಿಯಿದ್ದಿತು; ಬೇರಾವುದೂ ಅವರ ಮನಸ್ಸಿಗೆ ಹಿಡಿಸುತ್ತಿರಲಿಲ್ಲ "ಸೇನೆಯಲ್ಲಿ ಹೊರತು ಬೇರೆಲ್ಲಿಯೇ ಆಗಿದ್ದರೂ ನಾನು ಅಯೋಗ್ಯನಾಗುತಿದ್ದೆ" ಎಂದು ಅವರು ಹೇಳಿದುದಿದೆ. ಹುಟ್ಟು ಸ್ವಭಾವ ಮತ್ತು ತದನುಗುಣವಾದ ಚಾತುರ್ಯ, ಪ್ರತಿಭೆ, ಧೈರ್ಯ ಸಾಹಸಗಳ ದೆಸೆಯಿಂದ ಶ್ರೀ ಕರಿಯಪ್ಪನವರು ಸೇನಾ ಜೀವನದಲ್ಲಿ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಮುಂದೆಹೋದುದಲ್ಲ. ರೈಲು ವೇಗದಿಂದಲೇ ಮುಂಧಾವಿಸಿ ಕೊನೆಯ ಗುರಿ ಮುಟ್ಟಿದ್ದಾರೆ. ಸ್ವತಂತ್ರ ಭಾರತದ ಸರ್ವ ಪ್ರಥಮ ಭಾರತೀಯ ಮಹಾ ಸೇನಾನಿಯಾಗಿದ್ದಾರೆ.

ಅವರ ಸೇನಾ ಜೀವನ

ಸಾಮಾನ್ಯಯೋಧನಾಗಿಯೇ ಶ್ರೀ ಕರಿಯಪ್ಪನವರು ತಮ್ಮ ಸೇನಾ ಜೀವನವಾರಂಭಿಸಿದ್ದರು. 'ಕಮಿಷನ್ ಪೂರ್ವ ತರಬೇತಿ'ಗಾಗಿ ಇಂದೋರಿನ ಮಿಲಿಟರಿ ಕಾಲೇಜಿಗೆ ಆಗ ಆರಿಸಲ್ಪಟ್ಟ ಪ್ರಥಮ ಹಿಂದೀ ಯೋಧ ದಳದಲ್ಲಿ ಶ್ರೀ ಕೆ.ಎಮ್. ಕರಿಯಪ್ಪನವರೂ ಒಬ್ಬರಾಗಿದ್ದರು. ಅವರು 'ಲೆಫ್ಟಿನೆಂಟ್'' ಆಗಿ ನೇಮಕಗೊಂಡು 1920ರಲ್ಲಿ ಬೊಂಬಾಯಿಯಲ್ಲಿದ್ದ 'ಕರ್ನಾಟಿಕ್ ಸೇನ'ಗೆ ಜೋಡಿಸಲ್ಪಟ್ಟರು. ಪರದೇಶದಲ್ಲಿ ಸೇನಾ ಕರ್ತವ್ಯವನ್ನವರು ಪ್ರಥಮತಃ ನಿರ್ವಹಿಸಿದುದೆಂದರೆ 'ನೇಪಿಯರ್'ದಳ 2/125' ಇದರಲ್ಲಿ ಸೇರಿಕೊಂಡು ಇರಾಖಿಗೆ ಹೋಗಿ, ಎರಡು ವರುಷಗಳ ತನಕ ಲೆಫ್ಟಿನೆಂಟ್ ಕರಿಯಪ್ಪನವರು ಈ ಸೇನಾ ವಿಭಾಗದಲ್ಲಿ ಕೆಲಸಮಾಡಿದ್ದರು. ಆಮೇಲಿನ ಅವರ ಸೇವಾರಂಗ ವಝೀರಿಸ್ಥಾನ. 37ನೇ ಡೋಗ್ರಾದಳದೊಂದಿಗೆ ಸೇರಿ ಅವರಲ್ಲಿಗೆ ಹೋಗಿದ್ದರು. ಆಗಿನ ಸ್ಥಿತಿಯಲ್ಲಿ 'ವಝೀರಿಸ್ಥಾನ'ವೆಂದೊಡನೆ ಪರಿಣತ ಯೋಧನ ರಕ್ತವಾದರೂ ಒಮ್ಮೆ ತಣ್ಣಗಾಗುತಿತ್ತು. ಆದರೆ ಕರಿಯಪ್ಪನವರು, ಇಲ್ಲಿ ಸೇನಾ ಪದ್ಧತಿಯ ರಕ್ಷಣಾ ವ್ಯವಸ್ಥೆಗಳನ್ನು ಅವಲಂಬಿಸಿ ನಿಲ್ಲದೆ, ನೆಟ್ಟಗೆ ಅಲ್ಲಿಯ ಜನರ ಮಧ್ಯಕ್ಕೆ ನುಗ್ಗಿ ಅವರ ಗುಣ ನಡತೆಗಳ ಗಾಢಪರಿಚಯ ಮಾಡಿಕೊಂಡರು. ಈ ವಿಧಾನದಿಂದ ಅಲ್ಲಿಯ ಉಗ್ರ ಹಾಗೂ ಕಠಿಣ ವಝೀರಿಗಳ ಮನಸೂರೆಗೊಂಡರು. ಇವರ ದಳವು ಅಲ್ಲಿ ಜನಪ್ರಿಯವಾಯಿತು. ವಝೀರಿಸ್ಥಾನದಲ್ಲಿ ಲೆಫ್ಟಿನೆಂಟ್ ಕರಿಯಪ್ಪನವರಿಂದಾದ ಕಾರ್ಯವು ಬ್ರಿಟಿಷ್ ಅಧಿಕಾರಿಗಳ ಮನಮುಟ್ಟುವಷ್ಟು ಆಕರ್ಷಣೀಯವಿದ್ದುದರಿಂದ ಕ್ವೆಟ್ಟಾದ ಸ್ಟಾಫ್ ಕಾಲೇಜಿಗೆ ತರಬೇತಿಗಾಗಿ 1933ರಲ್ಲಿ ಇವರು ಕಳುಹಲ್ಪಟ್ಟರು. ಬ್ರಿಟಿಷ್ ಆಡಳಿತೆಯಲ್ಲಿ ಓರ್ವ ಭಾರತೀಯನಿಗೆ ಈ ತರಬೇತಿ ಗೌರವ ದೊರೆತುದು ಇದೇ ಮೊದಲು. ಎರಡು ವರುಷಗಳ ನಂತರ, ಪ್ರಸಿದ್ಧ ಖೋಜಕ್ ಸೇನಾ ವಿಭಾಗದ ಸೇನಾನಿಯಾಗಿ ಇವರ ನೇಮಕವಾಯಿತು. 1939ರಲ್ಲಿ ದ್ವಿತೀಯ ಜಾಗತಿಕ ಮಹಾಯುದ್ಧವಾರಂಭಿಸಿದಾಗ ಯುದ್ಧಭಾಗಿಯಾಗುವ ಆತುರವಿವರಲ್ಲಿ ಮೂಡಿತು. ಅಹಮ್ಮದ್ ನಗರದಲ್ಲಿ ಮತ್ತೊಂದು ತರಬೇತಿ ಪಡೆದು '10ನೇ ಹಿಂದೀ ಸೇನಾ ವಿಭಾಗವನ್ನು' ಕೂಡಿಕೊಳ್ಳುವಂತೆ ಹಡಗ ಮೂಲಕ ರವಾನೆಗೊಂಡು ಪ್ರಥಮತಃ ಸಿರಿಯದಲ್ಲಿ ಆಮೇಲೆ ಇರಾಕ್ ಮತ್ತು ಇರಾನುಗಳಲ್ಲಿ ಇದ್ದರು. ಅಲ್ಲಿ ತನ್ನಪಾಲಿನ ಯುದ್ಧಾವಕಾಶ ಸರಿ ಬಾರದಿದ್ದಾಗ, ಲೆಫ್ಟಿನೆಂಟ್ ಕರ್ನಲ್ ಕರಿಯಪ್ಪನವರು ತಾನಾಗಿ ಪಶ್ಚಿಮ ಮರಳು ಗಾಡಿನೊಳಗೆ ನುಗ್ಗಿ ಹೋಗಿ, ಅಲ್ಲಿ ಕಾರ್ಯ ಪ್ರವೃತ್ತರಾಗಿದ್ದ ವಿವಿಧ ಹಿಂದೀ ದಳಗಳ ಯೋಧರೊಡನೆ ಖಾಸಗೀ ಸಂಪರ್ಕ ಬೆಳೆಸಿಕೊಳ್ಳುತಿದ್ದರು. ಆಲಸ್ಯ ಅಥವಾ ತಾಟಸ್ಥ್ಯವು ಇವರ ಪ್ರಕೃತಿಗೆ ಹಿಡಿಸುತಿದ್ದಿಲ್ಲ. 1942ರಲ್ಲಿ ಅವರು ಭಾರತಕ್ಕೆ ಮರಳಿ ಬಂದರು. ಒಂದು ವಾರ ಕಳೆಯುವುದರೊಳಗೆ ಈ ತರುಣ ಸೇನಾನುಭವಿಗೆ '17ನೇ ರಜಪೂತ್ ರೈಫಲ್'ದ ಸೇನಾನಿತ್ವ ದೊರೆಯಿತು. ಒಂದು ಸೇನೆಯ ಸರ್ವಾಧಿಕಾರಿಸ್ಥಾನವು ಓರ್ವ ಭಾರತೀಯನಿಗೆ ದೊರೆಯುವ ಹೊಸ ದಾಖಲೆ ನಿರ್ಮಾಣವಾದುದು ಇಲ್ಲಿ ಕೂಡಾ ಕರಿಯಪ್ಪನವರಿಂದಲೇ. ತನ್ನ ಕೈಕೆಳಗಿನ ಸೈನಿಕರೊಂದಿಗೆ ಸಲುಗೆಯಿಂದ ಬೆರೆಯುವ ಕರಿಯಪ್ಪನವರು ಆ ಸೇನೆಯ ಪ್ರೀತಿ ಪಾತ್ರರಾಗಿದ್ದರು 1943ರಲ್ಲಿ 'ಪೂರ್ವ ಸೇನೆ'ಯ ಅಸಿಸ್ಟಂಟ್ ಎಡ್ಜುಟಾಂಟ್'' ಮತ್ತು 'ಕ್ವಾರ್ಟರ್ ಮಾಸ್ಟರ್'' ಆಗಿ ನೇಮಕಗೊಂಡರು. ಆ ಸೇನಾನಾಯಕ ಜನರಲ್ 'ಅಚೆನ್‌ಲೆಕರು' ಇವರಲ್ಲಿರುವ ಅತಿಹೆಚ್ಚಿನ ಪ್ರಗತಿ ಯೋಗ್ಯತೆಯನ್ನು ಕಂಡು ಹಿಡಿದು 'ಸೇನಾ ಪುನರ್ಘಟನಾ ಸಮಿತಿ'ಯ ಸದಸ್ಯನಾಗಿ ಕರಿಯಪ್ಪನವರನ್ನು ನೇಮಿಸಿಕೊಂಡರು. ಈ ಸಮಿತಿಯ ಸದಸ್ಯ ಸ್ಥಾನದಿಂದ ಹಿಂದೀ

THE CANARA MUTUAL ASSURANCE COMPANY LIMITED

H. O. UDIPI · Estd: 1935

Hunger Knows No Holiday.

Parental love will make tremendous efforts and face terrible sufferings to satisfy the hunger of its young. This is Nature's plan to supply the need of the helpless and to enable life to march on. To complete this plan the continuance of the parent's life is necessary.

But humanlife is frail and uncertain. Life insurance is the only certain provider of the comforts of home, education and of a fair chance in life for our Children.

T. R. A. Pai
Managing Director.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore**.

Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.

B. Manjaya Hegde.
Advocate & President, District Board, S. Kanara.
CHAIRMAN

ಅವರ ಅರ್ಹತೆ ಮತ್ತು ಗುಣ ನಡತೆ

ಸೇನೆಯಲ್ಲಿ ಪ್ರಮುಖ್ಯ ಸುಧಾರಣೆಗಳನ್ನು ಸಾಧಿಸುವುದಕ್ಕಾಗಿ ಒಂದು ವರುಷ ಪರಿಯಂತರ ಕರಿಯಪ್ಪನವರು ಅವಿಶ್ರಾಂತವಾಗಿ ದುಡಿದರು. ರಾಷ್ಟ್ರದ ಉದ್ದಗಲಕ್ಕೂ ಸಂಚಾರ ಕೈಕೊಂಡು, ಸೇನಾಧಿಕಾರಿಗಳನ್ನೂ ಸೈನಿಕರನ್ನೂ ವಿಚಾರಿಸಿ ಅವರ ಅಭಿಮತ, ಸ್ವಭಾವ, ಸಮಸ್ಯೆಗಳ ಗಾಢಪರಿಚಯ ಮಾಡಿಕೊಂಡು, ತನ್ನ ಉಪಯುಕ್ತ ವರದಿಗಳನ್ನೊಪ್ಪಿಸಿದರು. ಈ ಕಾರ್ಯವಾದ ಮೇಲೆ ಸೇನಾವಿಧಾನಗಳನ್ನು ಅಭ್ಯಾಸಿಸುವುದಕ್ಕಾಗಿ ಬ್ರಿಟನು ಮತ್ತು ಅಮೇರಿಕಗಳಲ್ಲಿ ಸಂಚರಿಸಿದರು. ಅಲ್ಲಿ ಇವರ ಭೇಟಿಪಡೆದು ಇವರ ಅನುಭವ, ಯೋಗ್ಯತೆಗಳ ಪ್ರತ್ಯಕ್ಷ ಪರಿಚಯ ಮಾಡಿಕೊಂಡ ಸೂಕ್ಷ್ಮದರ್ಶಿ ಸೇನಾತಜ್ಞರು "ಈ ಮನುಷ್ಯ ಭಾರತದ ಸರ್ವಸೇನಾನಿಯಾಗುವ ದಿನವೊಂದಿದೆ" ಎಂದು ಆಗಲೇ ಭವಿಷ್ಯವಾಡಿದ್ದರು. 1946ರಲ್ಲಿ ಕರಿಯಪ್ಪನವರು ಭಾರತಕ್ಕೆ ಮರಳಿದರು.

ಒಂದು ಅಪೂರ್ವ ಬುದ್ಧಿವಂತಿಕೆ

ಬ್ರಿಟನು ಅಮೇರಿಕಾ ಪ್ರವಾಸದಿಂದ ಮರಳಿದೊಡನೆಯೇ ಅಪಾಯಕರ ಗುಡ್ಡಗಾಡು ವಲಯದಲ್ಲಿ, ಅಲ್ಲಿಯ ಕಟ್ಟುಗ್ರ ಕಾಡಾಳುಗಳ ವಿರುದ್ಧ ಸೇನಾಕಾರ್ಯ ನಡಿಸಲು 'ಬನ್ನು ಸೇನಾದಳ'ದ ಚಾಲನಾಧಿಕಾರವು ಇವರ ವಶಕ್ಕೆ ಬಂತು. ಈ ಅತ್ಯಪಾಯಕರ, ಅಂತೆಯೇ ಅತಿ ಪ್ರಮುಖ್ಯ ಜವಾಬ್ದಾರಿಯನ್ನು ವಹಿಸಿಕೊಳ್ಳುವಾಗಲೇ ಕೊರಳಗಡ ಕಠಿನದಲ್ಲಿ ಅತಿ ಪ್ರವೀಣರಾದ, ಕಠೋರ ಗುಡ್ಡಗಾಡು ಜನರಿಂದೊದಗಬಹುದಾದ ಅಸಂಖ್ಯ ಅಪಾಯಗಳ ಕುರಿತು ಎಚ್ಚರಿಕೆಯೂ ಇವರಿಗೆ ದೊರೆತಿದ್ದಿತು. ಆದರೆ, ಕಣ್ಣು, ಕಿವಿ ಮತ್ತು ಬುದ್ಧಿ ಸದಾಕಾಲ ಜಾಗ್ರತಾವಸ್ಥೆಯಲ್ಲಿದ್ದರೂ. ಇವುಗಳಿಂದ ತಿಳಿದು ಬರುವ ಅಪಾಯಗಳೆಂತಹವಿದ್ದರೂ, ಅಲಕ್ಷಿಸುವ ಆತ್ಮಬಲವು ಕರಿಯಪ್ಪನವರದು. ವಿರೋಧಿ ಸೇನೆ ನುಗ್ಗಿ ಬಂದ ಮೊದಲನೇ ಮೂರು ದಿನಗಳ ವರೆಗೆ, ಗುಡ್ಡಗಾಡು ಜನರು ಇದ್ದಾರೋ ಇಲ್ಲವೋ ಎಂಬ ಸಂದೇಹ ಬರುವಷ್ಟು ತಟಸ್ಥರಾಗಿದ್ದು ಮೂರನೇ ರಾತ್ರಿ ಎಲ್ಲಿಂದ ಬರುವವೆಂಬುದನ್ನು ಗೊತ್ತು ಹಚ್ಚಲಾಗದಷ್ಟು ಆಕಸ್ಮಿಕವಾಗಿ ಗುಂಡು ಹಾರಿಸುವರೆಂಬ ಅನುಭವವನ್ನು ಕರಿಯಪ್ಪನವರು ಹೋಗುವಾಗಲೇ ಕೇಳಿ ಪಡೆದಿದ್ದರು. ಹಾಗೆಯೇ ಆಯಿತು. ಕರಿಯಪ್ಪನವರು ತನ್ನ ಸೇನೆಯನ್ನು ನಡೆಯಿಸಿಕೊಂಡು ಆ ಗುಡ್ಡಗಾಡು ವಲಯಕ್ಕೆ ಹೋದಂತೆ ಮೂರು ದಿನಗಳ ವರೆಗೆ ಏನನ್ನೂ ಕಾಣಲಿಲ್ಲ; ಮೂರನೇ ರಾತ್ರಿ, ಕರಿಯಪ್ಪನವರ ಸೇನೆಯು ಸ್ಮಶಾನ ಸದೃಶ ನಿರ್ಜನ ಕಂದರವೊಂದರಲ್ಲಿ ಡೇರೆ ಹೊಡೆದಿದೆ. ನಡುರಾತ್ರಿ ಹೊತ್ತಿಗೆ ರೈಫಲ್ ಗುಂಡುಗಳ ಜಡಿಮಳೆ ಬಿದ್ದು, ಎಲ್ಲರೂ ದಡಬಡಿಸಿ ಎದ್ದರು. ಕರಿಯಪ್ಪನವರು ತನ್ನ ಡೇರೆಯಲ್ಲಿ ಸಿಗರೇಟು ಸೇದುತ್ತಾ ಕುಳಿತಿದ್ದರು. 'ಎಂತಹ ಸಂಭವಕ್ಕಾದರೂ ಸದಾ ಸಿದ್ಧರಿರಬೇಕು; ಆದರೆ ಅಪ್ಪಣೆ ವಿನಹಾ ಮರಳಿ ಗುಂಡು ಹಾರಿಸಬಾರದು' ಎಂದು ಅವರು ತನ್ನ ಸೈನಿಕರಿಗೆ ಮೊದಲೇ ಕಟ್ಟಪ್ಪಣೆ ಕೊಟ್ಟಿದ್ದರು. ಈ ಆಕಸ್ಮಿಕ ಅಪಾಯದ ವೇಳೆ ಅವರು ಮಾಡಬೇಕಾದುದೇನು? ಕೂಡಲೇ ವಜೀರಿಸ್ತಾನದ ತನ್ನ ಅನುಭವವನ್ನು ಜ್ಞಾಪಿಸಿಕೊಂಡರು; ಅಲ್ಲಿ ಮಾಡಿಕೊಂಡಿದ್ದ ಪರಿಚಯ ಬಲದಿಂದ ಗುಡ್ಡಗಾಡು ಜನರ ಸ್ವಭಾವ ಮತ್ತು ಗುಣನಡತೆಗಳ ಚಿತ್ರ ಅವರ ಕಣ್ಣುಮುಂದೆ ಬಂತು. ಅವರ ಮೂಢಭಾವನೆಯೆಂತಹದೆಂಬುದು ಕರಿಯಪ್ಪನವರಿಗೆ ತಿಳಿದಿದ್ದಿತು. ಈ ಅನುಭವವನ್ನು ಪ್ರಯೋಗಿಸಿ ಪರೀಕ್ಷಿಸುವ ನಿರ್ಧಾರಕ್ಕೆ ಬಂದರು; ಆ ಹೊತ್ತು ಅವರಿಗೆ ಬೇರಾವ ಹಾದಿಯೂ ಆಗ ಉಳಿದಿರಲಿಲ್ಲ. ಕೂಡಲೇ ಹವಿಲ್ದಾರನಿಗೆ ಆಜ್ಞಾಪಿಸಿ ತನ್ನ ಡೇರೆಯ ಹೊರಗೆ 'ಮೈಕ್ರೋಫೋನ'ನ್ನು ಇಡಿಸಿದರು; ಸುತ್ತಲೂ ಧ್ವನಿವರ್ಧಕ ಯಂತ್ರಗಳನ್ನಿಡಿಸಿ, ತಾನು ಹಿಂದುಸ್ಥಾನಿಯಲ್ಲಿ ಹೇಳಿದುದನ್ನು, ಗುಡ್ಡಗಾಡು ಜನರ ಪುಷ್ತು ಭಾಷೆಗೆ ಭಾಷಾಂತರಿಸಿ, ಮೈಕ್'ನ್ ಮುಂದೆ ಗುಡುಗುವಂತೆ ಹವಿಲ್ದಾರನಿಗೆ ಆಜ್ಞಾಪಿಸಿ ಹೇಳ ಹತ್ತಿದರು: "ನೀವು ನಮ್ಮ ಮೇಲೇಕೆ ಗುಂಡು ಹಾರಿಸುವಿರಿ? ನಾವೇನೂ ನಿಮ್ಮ ವಿರೋಧಿಗಳಲ್ಲ. ನಿಮಗೇನಾದರೂ ದೂರು ಆಕ್ಷೇಪಗಳಿದ್ದರೆ ನಾಳೆ ಮುಂಜಾನೆ ಕಮಾಂಡರ್ ಸಾಹೇಬರ ಬಳಿಗೆ ನೀವು ಬರಬಾರದೇಕೆ? ಅವರು ನಿಮ್ಮೆಲ್ಲರನ್ನೂ ಕಂಡು ನೀವು ಹೇಳುವ ಕಥೆಗಳಿಗೆ ಕಿವಿಗೊಡಲಿದ್ದಾರೆ. ಗುಂಡು ಹಾರಿಸುವುದನ್ನು ದಯವಿಟ್ಟು ನಿಲ್ಲಿಸಿರಿ. ನಮ್ಮ ಸೇನೆಯು ಬಹಳ ದೂರದಿಂದ ನಡೆದುಕೊಂಡು ಬಂದು ತೀರಾ ಸೋತು ಹೋಗಿದೆ. ನಮ್ಮ ಜನರಿಗೀಗ ವಿಶ್ರಾಂತಿ ಬೇಕಾಗಿದೆ. ನಿಮ್ಮ ಗುಂಡುಗಳಿಂದ ಯಾರೊಬ್ಬನಿಗೂ ತಾಗುತ್ತಿಲ್ಲವಾದರೂ ಅವುಗಳ ಸಪ್ಪಳದಿಂದ ನಮ್ಮ ಸೈನಿಕರ ನಿದ್ರಾಭಂಗವಾಗಿದೆ. ದಯವಿಟ್ಟು ಈಗ ಮನೆಗೆ ಹೋಗಿ ಬೆಳಿಗ್ಗೆ ಬಂದು ನಮ್ಮ ಕಮಾಂಡರರ ಇದಿರು ನಿಮ್ಮ ದೂರುಗಳನ್ನು ಇಡೋಣವಾಗಲಿ. ಕಮಾಂಡರರಿಗೂ ಈಗ ನಿದ್ರಿಸಬೇಕಾಗಿದೆ. ದಯವಿಟ್ಟು ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಿರಿ; ಮನುಷ್ಯರಂತೆ ವರ್ತಿಸಿರಿ" ಧಾಳಿಗಾಗಿ ಬಂದ ಸೇನೆಯ ಕಡೆಯಿಂದ ಹೋರಾಟ ಘೋಷಣೆ ಕೇಳಿ ಬರುವ ಬದಲು, ಮಾನುಷತ್ವಕ್ಕಾಗಿ ವಿಜ್ಞಾಪನೆ ಹೊರಟರೆ ವೈರಿಗಳು ಕಿವಿಗೊಟ್ಟಾರೆ? ಆದರೆ ಆಶ್ಚರ್ಯದ ಮಾತು— ಆ ಮೇಲೆ ಒಂದೇ ಒಂದು ಗುಂಡು ಹಾರಲಿಲ್ಲ. ಈ ಘಟನೆಯ ಸ್ಮರಣೆಯಿಂದ ಕಣ್ಣಲ್ಲೊಂದು ದಿವ್ಯ ಪ್ರಕಾಶ ಮಿನುಗುತ್ತಿದ್ದಂತೆ ಜನರಲ್ ಕರಿಯಪ್ಪನವರೇ ಈ ಕುರಿತು ಒಬ್ಬರೊಡನೆಂದಿದ್ದರು: "ನನ್ನೀ ವಿಜ್ಞಾಪನೆಯನ್ನು ಮನ್ನಿಸಿ ಆ ಕಾಡು ಮನುಷ್ಯರು ಗುಂಡೆಸೆತವನ್ನು ನಿಲ್ಲಿಸುವ ಸುಯೋಗವಿರುವುದೆಂದು ಕೇವಲ ಮಿಲಿಯಕ್ಕೊಂದು ಎಂದು ನಾನು ಯೋಚಿಸಿದ್ದೆ. ಆದರದು ಗ್ರಹಣಾಕ

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp. His Master's Voice,
ಸರ್ ಫಿರೋಜ್ ಷಾ ಮೆಹ್ತಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ

ಅನುನಿತ್ಯದ ಉಪಯೋಗಕ್ಕೆ ಆಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕುಗಳೂ ವಿಟೆಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ,
ಮಾಲಕ.

M. Mendosa,
Proprietor.

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp: His Master's Voice,
Sir Phirozshah Mehta Road, FORT, BOMBAY.

ಸಂಗತಿ. ನೀವಿದನ್ನು ನಂಬುವಿರೋ, ಇಲ್ಲವೋ, ಅಂತೂ ಗುಂಡು ಹಾರಾಟ ಅಲ್ಲಿಗೇ ನಿಂತಿತು. ಆ ಜನರು ಮೂಢ ಭಾವನೆಯವರು ಮತ್ತು ಹಳೇ ಸಂಪ್ರದಾಯದವರೆಂಬ ನನ್ನ ಅನುಭವವನ್ನು ಆಧರಿಸಿಯೇ ನಾನೀ ಪ್ರಯೋಗವನ್ನು ಮಾಡಿದುದು. ಪೈಕಿನಲ್ಲಿ ಒಬ್ಬ ಮನುಷ್ಯ ಮಾತಾಡುವುದನ್ನು ಅವರು ಕೇಳಿರುವುದು ಅಸಂಭವವೆಂದು ನನಗೆ ಗೊತ್ತಿದ್ದಿತು. ಧ್ವನಿವರ್ಧಕದಿಂದ ಹೊರಬೀಳುವ ಮನುಷ್ಯ ಸ್ವರವನ್ನು ಅವರು ಎಂದೂ ಕೇಳಿದ್ದಿಲ್ಲ. ಧ್ವನಿವರ್ಧಕ ಯಂತ್ರದ ಮೂಲಕ ಘೋಷಿಸಿದ ಹವಿಲ್ದಾರರ ಸ್ವರವನ್ನು ಕೇಳಿ ಯಾವುದೋ ಒಂದು ಭೂತ ಆ ಪರ್ವತದಿಂದ ಗುಡುಗುತ್ತಿದೆ ಎಂದೇ ಅವರು ಭಾವಿಸಿರಬೇಕು; ಮತ್ತು ಭೀತಿಯಿಂದ ಬೇಗ ಬೇಗನೇ ಅಲ್ಲಿಂದೋಡಿ ಹೋಗಿರಬೇಕು".

ಕಮಾಂಡರ್ ಇನ್ ಚೀಫ್

1947ನೇ ಇಸವಿಯೆಂಬುದು ಕರಿಯಪ್ಪನವರು ವಿರಾಮವಿಲ್ಲದೆ ದುಡಿದ ಮತ್ತೊಂದು ವರುಷ. ಸೇನೆಯ ಅಗ್ರಹನ್ಯಾಧಿಕಾರದ ಫಲತರುವ ಪರಿಶ್ರಮವೇ ಈ ವರುಷದ್ದಾಗಿತ್ತು ಎನ್ನಬಹುದು. 'ಸಾಮ್ರಾಜ್ಯ ರಕ್ಷಣಾ ಕಾಲೇಜ'ನಲ್ಲಿ ಅಭ್ಯಾಸಹೊಂದುವುದಕ್ಕಾಗಿ ಭಾರತೀಯ ಅಧಿಕಾರಿಗಳಿಂದ ಚುನಾಯಿಸಲ್ಪಟ್ಟ ಇಬ್ಬರಲ್ಲಿ ಒಬ್ಬನಾಗಿ ಕರಿಯಪ್ಪನವರು ಮತ್ತೊಮ್ಮೆ ಈ ವರುಷ ಇಂಗ್ಲಾಂಡಿಗೆ ಹೋಗಬೇಕಾಯಿತು; ಮತ್ತೊಬ್ಬನೂ ಕೂರ್ಗಿನವರೇ. ಆದರೆ ಭಾರತದಲ್ಲಿ 'ರಾಷ್ಟ್ರೀಕರಣ ಸಮಿತಿ'ಗೆ ಇವರು ಬೇಕಾಗಿದ್ದುದರಿಂದ ಅಕಸ್ಮಾತ್ ಅಲ್ಲಿಂದ ಮರಳಬೇಕಾಯಿತು; ಈ ಸಮಿತಿಗಾದರೋ ಕರಿಯಪ್ಪನವರ ಹೇಳಿಕೆಯು ಬಹಳ ಅಮೂಲ್ಯದ್ದಿದ್ದಿತು. ಅದೇ ವರುಷ ಅವರು ಮೇಜರ್ ಜನರಲ್ ಆಗಿ ಭಡ್ತಿ ಹೊಂದಿದರು; ಸೇನಾನಿ ಮಂಡಲಿಯ ದ್ವಿತೀಯೋಚ್ಚ ಡಿಪ್ಯುಟಿ ನಾಯಕ ಹುದ್ದೆಗೂ ನೇಮಕಗೊಂಡರು. ಅದಕ್ಕೆತ್ತಿನ ಮೇಲಂತೂ ಸರ್ವ ಸೇನಾನಿತ್ವ. ಭಾರತವು ಸ್ವಾತಂತ್ರ್ಯದಿಂದ ಸ್ವಯಂ ಐಕ್ಯತೆಗೆ ಪರ್ಗಾಂತರ ಹೊಂದಿದ ಅವಧಿಯಲ್ಲಿ– ಅದರಲ್ಲೂ ಹೋರಾಟ ಮತ್ತು ಭೀಕರ ಅರಾಜಕತೆಯ ಸ್ಥಳಗಳಲ್ಲಿ– ಹಿಂದೀ ಸೇನೆಯಿಂದಾದ ಅಮೋಘ ಕಾರ್ಯಗಳು ಕರಿಯಪ್ಪನವರ ಸ್ಫೂರ್ತಿದಾಯೀ ನಾಯಕತ್ವದ ಲಕ್ಷಣಗಳಾಗಿದ್ದುವು; ತಮ್ಮ ಸರ್ವಶಕ್ತಿಯಿಂದ ಕೆಲಸ ಮಾಡುವಂತೆ ಸೇನಾ ಅಧಿಕಾರಿಗಳನ್ನು ಮತ್ತು ಸೈನಿಕರನ್ನು ಹುರಿದುಂಬಿಸಿದ್ದುದೆಂದರೆ ಈ ನಾಯಕತ್ವವೇ. ತನ್ನ ಸೈನಿಕರ ಮನೋಬಲ ತಗ್ಗುವ ಲಕ್ಷಣಗಳು ತೋರಿಬಂದಾಗಲೆಲ್ಲಾ ತಾನು ಸ್ವತಃ ಅಲ್ಲಿ ಹಾಜರಿದ್ದು ಅದನ್ನು ಮೇಲಕ್ಕೆಬ್ಬಿಸುವ ಪ್ರಯತ್ನವನ್ನು ಕರಿಯಪ್ಪನವರು ಮಾಡುತ್ತಾರೆ. ಅತಿ ಮುಂಜಾನೆ ಎದ್ದು ಆರಂಭಿಸಿದರೆ, ಅತಿ ರಾತ್ರಿಯ ವರೆಗೂ ಕೆಲಸಮಾಡುತ್ತಿದ್ದ ಕರಿಯಪ್ಪನವರು 1947 ಇಡೀ ವರುಷದಲ್ಲಿ ಕೇವಲ ಆರುದಿನಗಳ ರಜೆಯನ್ನಷ್ಟೇ ಅನುಭವಿಸಿದ್ದರು. ಇಂತಹ ಅಸಾಮಾನ್ಯ ಹಾಗೂ ಅತ್ಯುಚ್ಚ ಯೋಗ್ಯತೆ, ಅನುಭವ ಮತ್ತು ಪರಿಶ್ರಮದ ನಂತರ 1949ನೇ ಜನವರಿ 15ರಲ್ಲಿ ಜನರಲ್ ಕರಿಯಪ್ಪನವರನ್ನು ಭಾರತೀಯ ಸೇನೆಯ ಪ್ರಥಮ ಭಾರತೀಯ ಸರ್ವಸೇನಾನಿಯಾಗಿ ನೇಮಿಸಿಕೊಂಡ ಸರಕಾರೀ ಪ್ರಕಟಣೆ ಹೊರಬಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಪಂಡಿತ ನೆಹರುಗಳು ಪ್ರಧಾನ ಮಂತ್ರಿಯಾಗಿರುವುದರಿಂದ ಎಂತಹ ಆಕ್ಷೇಪಣೆಗಾರರಾದರೂ ಒಪ್ಪಲೇಬೇಕಾದ ಆತ್ಮೀಯತೆಯು ರಾಷ್ಟ್ರದಲ್ಲಿ ಆಡಳಿತೆ ಮತ್ತು ಜನತೆಯ ನಡುವೆ ಬೆಳೆದಿರುವಂತೆ ಜನರಲ್ ಕರಿಯಪ್ಪನವರು ಸರ್ವಸೇನಾನಿಯಾಗಿರುವುದರಿಂದ ಸೇನೆ ಮತ್ತು ನಾಗರಿಕರ ನಡುವಿನ ತಡೆಬೇಲಿಗಳು ಕಳಚಿ ಹೋಗಿವೆ. ಅವರೀಗ ಭಾರತದ ಪ್ರಥಮ ಯೋಧನಾಗಿ ಇರುವುದಷ್ಟೇ ಅಲ್ಲ; ಸೇನೆಯ ಸರ್ವ ಪ್ರಥಮ ಸಹೃದಯಿ ಮಹಾನುಭಾವನೂ ಆಗಿದ್ದಾರೆ. "ನಾನೊಬ್ಬ ಮಾನವನಿದ್ದೇನೆ. ನಾನು ಹೇಗೆ ಸಂಭಾವಿಸಲ್ಪಡಬೇಕೆಂಬುದು ನನಗೆ ಗೊತ್ತಿದೆ. ಅಂತೆಯೇ ನಾನು ನನ್ನ ಇತರ ಅಧಿಕಾರಿಗಳನ್ನೂ ಸೋಲ್ಜರರನ್ನೂ ಕಾಣುತ್ತೇನೆ. ನಾನು ಅವರಲ್ಲೊಬ್ಬನೆಂದೇ ಭಾವಿಸಿಕೊಳ್ಳುತ್ತೇನೆ" ಎನ್ನುತ್ತಾರೆ ಜನರಲ್ ಕರಿಯಪ್ಪ. ಫಿರಂಗೀ ಸ್ವರದಷ್ಟು ಕಠೋರತೆಯನ್ನು ಕಂಠದಿಂದಲೂ ಹೊರಗೆಡಹಬಲ್ಲ ಸೈನ್ಯಾಧಿಪತಿ ಹೀಗನ್ನುತ್ತಿರುವಾಗ 'ತನ್ನನ್ನು ಬೇರೆಯವರು ಕಾಣಬೇಕೆಂದು ಆಶಿಸುವ ಮಾದರಿಯಲ್ಲೇ ತಾನು ಬೇರೆಯವರನ್ನು ಕಾಣಲು ಬಯಸುವ ನಾಗರಿಕರಾದರೂ ಎಷ್ಟಿದ್ದಾರೆ? ಜನರಲ್ ಕರಿಯಪ್ಪನವರ ಈ ಮಾತು ಕೇವಲ ಮಿರುಗುಳ್ಳದ್ದಲ್ಲ, ಅವರ ಕೈಕೆಳಗಿನ ಪ್ರತಿಯೊಬ್ಬ ಸೇನಾಧಿಕಾರಿ ಮತ್ತು ಸೈನಿಕನ ಮನಸ್ಸಾಕ್ಷಿಯು ಇದಕ್ಕೆ ಸಾಕ್ಷಿಯಾಗಬಲ್ಲುದು. ಅವರು ಅಧಿಕಾರಿಯಿರುವಂತೆಯೇ ಆತ್ಮೀಯನೂ ಆಗಿದ್ದಾರೆಂಬುದು ಸೈನಿಕರೆಲ್ಲರಿಗೂ ಸ್ವಾನುಭವವಾಗಿದೆ. ಜನರಲ್ ಕರಿಯಪ್ಪನವರು ಸೇನಾಕಾರ್ಯಗಳಲ್ಲಿ ಎಷ್ಟು ಧೃಢಮನಸ್ಸು ಮತ್ತು ಕಠೋರರಿದ್ದಾರೋ, ಮಾನವೀಯ ವ್ಯವಹಾರಗಳಲ್ಲಿ ಅಷ್ಟೇ ದಯಾಳು ಮತ್ತು ಉದಾರಿಯಿದ್ದಾರೆ. ತನ್ನ ಕೆಳಗಿನ ಸೇನಾಧಿಕಾರಿಗಳು ಅಥವಾ ಸೈನಿಕರು, ತಾವು ಬೇರೊಂದು ಜಗತ್ತಿನವರೆಂಬಂತೆ ವರ್ತಿಸದೆ ನಾಗರಿಕರೊಡನೆ ಪೂರ್ಣ ಮಾನುಷತ್ವದಿಂದ ಬೆರೆಯಬೇಕೆಂದು ಈ ಸರ್ವಸೇನಾನಿ ವಿಧಿಸಿದ್ದಾರೆ. ತಾನಂತೂ ಸೇನಾಧಿಪತಿಯು ಅನವಶ್ಯ ರೀತಿಗಳನ್ನು ಬದಿಗೊತ್ತಿ ನಾಗರಿಕ ಸಮಾರಂಭಗಳಲ್ಲಿ ಭಾಗವಹಿಸಿ, ಉಚ್ಚಯೋಧತ್ವದಂತೆಯೇ ಮೇಲ್ಮಟ್ಟದ ನಾಗರಿಕತೆಯೂ ತನ್ನಲ್ಲಿದೆ ಎಂಬುದನ್ನು ಪ್ರದರ್ಶಿಸುತಿದ್ದಾರೆ. ಅವರ ಜವಾನರಾದರೋ ಈಗ ಎಲ್ಲೆಲ್ಲೂ ರಾಷ್ಟ್ರ ನಿರ್ಮಾಣ ಅಥವಾ ನಾಗರಿಕ ಕಾರ್ಯಗಳಲ್ಲಿ ತಲ್ಲೀನರಾಗಿರುವುದನ್ನು ಗಮನಿಸಬಹುದು; ಬಾವಿ ಅಗೆತ, ರಸ್ತೆ ರಚನೆ, ಅಧಿಕ ಆಹಾರೋತ್ಪನ್ನ, ಕಾಶ್ಮೀರ, ಅಸ್ಸಾಮುಗಳಂತಹ ಗೊಂದಲ ಪೀಡಿತ ಸ್ಥಳಗಳಿಗೆ ಆಹಾರ ಸರಬರಾಯಿ ಮತ್ತು ವ್ಯವಸ್ಥಾಪಾಲನೆ, ಇಂತಹ ಕಾರ್ಯಗಳೀಗ ಕರಿಯಪ್ಪನವರ ಜವಾನರಿಗೆ ಗಂಟು ಬಿದ್ದಿವೆ. ಅಂತೂ ಸ್ವತಂತ್ರ ಭಾರತದ ರಕ್ಷಣೆಯಂತೆಯೇ ಜನ-ಸೇನಾ ಸಂಬಂಧ ನಿರ್ಮಾಣದ ಮಟ್ಟಿಗೂ ಜನರಲ್ ಕರಿಯಪ್ಪನವರು ಹೇಳಿಸಿದ ಸೇನಾನಿ.

ಕೆಲವು ನಿದರ್ಶನಗಳು

ಅವರೆಂತಹ ಸಹೃದಯಿಯೆಂಬುದು ಅವರ ಸಂಬಂಧ, ಪರಿಚಯವಿರುವವರಿಗೆಲ್ಲಾ ಚೆನ್ನಾಗಿ ಗೊತ್ತು. 1940ರಲ್ಲಿ ಘಡಿದ ಸಾಮಾನ್ಯ ಘಟನೆಯಿದು. ಕರಿಯಪ್ಪನವರ ದಳವು ಪಂಜಾಬಿನಲ್ಲಿ ಠಾಣ್ಯವೂರಿದ್ದಿತು. ಅದರ ಒಬ್ಬ ಜವಾನ ಆಗ ತಾನೇ ರಜೆ ಮುಗಿಸಿಕೊಂಡು ಬಂದವ ಪುನಃ ಹತ್ತು ದಿನಗಳ ರಜೆಯನ್ನು ಬೇಡಿದ್ದ. ಅವನ ಮೇಲಧಿಕಾರಿಯು ಆ ರಜೆ ಕೊಡಲು ನಿರಾಕರಿಸಿದ್ದರೂ ಜವಾನ ಮತ್ತೂ ಕಾಡುತ್ತಲೇ ಇದ್ದ. ಕರಿಯಪ್ಪನವರು ಅವನನ್ನು ಕರೆಯಿಸಿ, ಸಂಬಂಧಪಟ್ಟ ಸಂಗತಿಗಳ ಕುರಿತು ಪ್ರಶ್ನೆ ಹಾಕಿ ತಿಳಿದರು. ಆತನಿಗೆ ರಜೆ ನಿರಾಕರಿಸಿದ ಅಧಿಕಾರಿಯ ವರ್ತನೆಯು ಸರಿಯೆಂದು ಈ ವಿಚಾರಣೆಯಿಂದ ಅವರಿಗೆ ಮನದಟ್ಟಾಯಿತು; 'ನಿನಗೆ ರಜೆ ದೊರೆಯುವಂತಿಲ್ಲ' ಎಂದು ಕರಿಯಪ್ಪನವರು ಹೇಳಿಬಿಟ್ಟರು. "ಆಗ ಅವನ ಮುಖದಲ್ಲಿ ತೋರಿಬಂದ ತೀವ್ರ ನಿರಾಶಾ ಭಾವವನ್ನು ನಾನೆಂದೂ ಮರೆಯುವಂತಿಲ್ಲ" ಎಂದು ಜನರಲ್ ಕರಿಯಪ್ಪ ಅನ್ನುತ್ತಾರೆ. ಆ ದಿನ ವಿಡೀ ಆ ಜವಾನನ ಕಳೆಗುಂದಿದ ಮುಖವೇ ಜನರಲ್ ಕರಿಯಪ್ಪನವರ ಕಣ್ಮುಂದೆ ಬಂದು ನಿಂತಂತಾಗುತಿತ್ತು. ಆ ರಾತ್ರಿ ಪದ್ಧತಿ ಪ್ರಕಾರ [illegible] ಬರುವಾಗ, ಸದ್ರಿ ಜವಾನ ಒಂದೇ [illegible]ಯಲ್ಲಿ ಭಗ್ನಹೃದಯಿಯಾಗಿ ಕುಳಿತಿರುವುದನ್ನು ಇವರು ಕಂಡರು. ಸೀದಾ ಅವನಿದ್ದಲ್ಲಿಗೆ ಹೋದರು; "ನೀನು ರಜೆಯನ್ನು ಅಪೇಕ್ಷಿಸುವ ಕಾರಣವೇನು?" ಎಂದು ಮತ್ತೊಮ್ಮೆ ಅವನನ್ನು ವಿಚಾರಿಸಿದರು. ಜವಾನನು ಆಗ ಕೂಡಾ ಕಾರಣ ಕೊಡಲು ನಿರಾಕರಿಸಿದ. ಕರಿಯಪ್ಪನವರು ಅಲ್ಲೇ ಅವನ ಪಕ್ಕದಲ್ಲಿ ಕುಳಿತುಕೊಂಡರು. "ನಿನಗೀಗ ಆಗಿರುವುದೇನು ಎಂಬುದನ್ನು ನಾನು ಹೇಳಲೇ? ಅದಕ್ಕೆ ನೀನು ಹೌದು ಅಥವಾ ಅಲ್ಲವೆಂದು ಹೇಳುವಿಯಾ?" ಎನ್ನುತ್ತಾ "ನಿನ್ನ ಹೆಂಡತಿ" ಎಂದರು. ಜವಾನನು ನಾಚಿಕೆಯಿಂದ ತಲೆತಗ್ಗಿಸಿದ. ಅವನ ಅಧಿಕಾರಿಯ ಊಹೆ ನಿಜವಾಗಿತ್ತು. ಆತನ ಹೆಂಡತಿ ತೀರಾ ಚಂಚಲೆಯಾಗಿದ್ದಳು. ಜವಾನ ಕೂಡಲೇ ಮನೆಗೆ ಹೋಗದಿದ್ದಲ್ಲಿ ಇಡೀ ಮನೆ ಹಾಳಾಗುವ ಸ್ಥಿತಿಯೊದಗಿದ್ದಿತು; ತನ್ನ ಇಬ್ಬರು ಮಕ್ಕಳ ಗತಿಯೇನಾಗುವುದೋ ಎಂದಾತ ದಿಗಿಲು ಬಿದ್ದಿದ್ದ. ಕರಿಯಪ್ಪನವರ ಮನಸ್ಸಿಗಿದು ನಾಟಿತು; ಅವರು ತನ್ನ ತೀರ್ಪು ಬದಲಾಯಿಸಿ "ಆಗಲಿ; ನೀನು ಹೋಗಬಹುದು. ಆದರೆ ನಿನಗಿದು ಕೊನೆಯ ಸಂದರ್ಭವೆಂದು ಖಂಡಿತವಾಗಿ ತಿಳಿದುಕೋ" ಎಂದರು. ಆಗ ಜವಾನನ ಮುಖಭಾವದಲ್ಲಿ ಆಶ್ಚರ್ಯಕರ ಮಾರ್ಪಾಟು ಕಂಡು ಬಂತು; ಸೇನಾನಿಯ ಕಡೆಗಿನ ಗಾಢ ಕೃತಜ್ಞತೆಯು ಮತ್ತು ನವೀನಾನಂದದ ಹೊಳಪು ಅದರಲ್ಲಿ ಮಿರುಗುತಿತ್ತು. ಇಷ್ಟನ್ನು ಮಾಡಿದ ಮೇಲೆ ಕರಿಯಪ್ಪನವರಿಗೆ ಆ ರಾತ್ರಿ ಸುಖ ನಿದ್ರೆ ಬಂತು. ರಜೆ ಮುಗಿಯಲು ಎರಡು ದಿನಗಳಿರುವಾಗಲೇ ಆ ಜವಾನ ಪ್ರಫುಲ್ಲ ವದನದೊಡನೆ ಸೇನಾನಿಯ ಇದಿರು ಹಾಜರಾದ. ಮನೆಯಲ್ಲಿ ಪುನಃ ಸುವ್ಯವಸ್ಥೆ ನಿರ್ಮಿಸಿ ಬಂದಿದ್ದನಾತ. ಕರಿಯಪ್ಪನವರು ಅವನ ಕುಟುಂಬವನ್ನು ಉಳಿಸಿದರು. ಕುಟುಂಬ ಸುಖದ ಮಟ್ಟಿಗೆ ದುರ್ದೈವಿಯಾಗಿರುವ ಕರಿಯಪ್ಪನವರು, ಅನ್ಯರ ಕೌಟುಂಬಿಕ ಯಾತನೆಗಳನ್ನು ಸ್ವಾನುಭವದಿಂದಲೇ ಅರಿತುಕೊಳ್ಳಬಲ್ಲರು. ಅವರು ಸೇನಾ ಶಿಸ್ತಿನ ಮಟ್ಟಿಗೆ ಕಲ್ಲುಹೃದಯಿಯಾದರೆ ಗೃಹವನದಲ್ಲಿ ಬೆಣ್ಣೆಯಂತಹ ಮನಸ್ಸಿನವರು. ಮಕ್ಕಳ ಮೇಲೆ ಇವರಿಗೆ ಅತ್ಯಂತ ಮಮತೆ. 12 ವರುಷದ ಒಬ್ಬ ಮಗ ಮತ್ತು 6 ವರುಷದ ಓರ್ವ ಮಗಳು ಅವರಿಗಿದ್ದಾರೆ. ಮಕ್ಕಳ ವಿದ್ಯಾಭ್ಯಾಸ ಮತ್ತು ಅಭಿವೃದ್ಧಿಯ ಮೇಲ್ವಿಚಾರಣೆಯನ್ನು ಇಷ್ಟು ಕೆಲಸಗಳ ಮಧ್ಯದಲ್ಲೂ ಅವರು ಸ್ವತಃ

For Life Assurance

CUNSULT

THE NEW GUARDIAN OF INDIA
LIFE ASSURANCE CO. LTD.
(Established 1934)

Chairman: Sri. M. C. T. M. Chidambaram Chattiyar

A Policy in this progressive Life Office is a good investment; its Agency is a valuable business connection

MANGALORE BRANCH:
K. S. R. Road,
Hampankatta, Mangalore

HEAD OFFICE:
United India Life Building,
B No. 142 MADRAS.

ಬೆಳೆ ಬಾಗಾಯಿಗಳ ಬಗ್ಗೆ

ನೀರಿನ ಇಂಜಿನ್ ಪಂಪು

ಉತ್ಕೃಷ್ಟ ತರಗತಿ!

ಯೋಗ್ಯವಾದ ಬೆಲೆ!!

ಮಾಹಿತಿ ಬಗ್ಗೆ ಬರೆಯಿರಿ:

G. N. Hemmady,
Goldville Engg: Works,
P B 6204, Bombay 10

ಪ್ರೆಸ್ಬಿಟೇರಿ, ದಯೆ, ಸತ್ಯ, ಪರಿಶ್ರಮ ಮತ್ತು ಪರರ ದುಃಖದಲ್ಲಿ ಭಾಗಿಯಾಗುವ ಕುರಿತು ಕರಿಯಪ್ಪನವರು ತನ್ನ ಮಕ್ಕಳಿಗೆ ಪದೇ ಪದೇ ಉಪದೇಶಿಸುವರಿದೆ ಮಗಳೊಡನೆ ಇಂತಹ ಮಾತುಕತೆ ಮಾಡಿ ಮುಗಿಸಿದೊಡನೆಯೇ, ತನ್ನ ಶರ್ಟನ್ನು ಪೂರ್ಣವಾಗಿ ಮಾಡಿಬಿಟ್ಟ ದೋಬಿಯನ್ನು ಡಿಸ್‌ಮಿಸ್ ಮಾಡುವ ಸಂದರ್ಭ ಒಮ್ಮೆ ಜನರಲ್ ಕರಿಯಪ್ಪನವರಿಗೊದಗಿತು. ಹುಡುಗಿ ದೂರನಿಂತುಕೊಂಡು ದೋಬಿಯು ಹೊರಟು ಹೋಗುವದನ್ನು ಕಾಣುತ್ತಿದ್ದಳು. ಆತ ಹೋದೊಡನೆ ತಂದೆಯ ಒಳಗೆ ಬಂದು "ಪಪ್ಪಾ; ನೀವು ಪರರ ಕುರಿತು ದಯೆಯಿಡಬೇಕು ಮತ್ತು ಅನ್ಯ ಆಲೋಚನೆಯಿರಬೇಕು ಎಂದು ಈಗ ತಾನೇ ಹೇಳಿದರಲ್ಲಾ" ಎಂದಳು ದೋಬಿಯನ್ನು ತೆಗೆದು ಹಾಕಿದುದರ ಜತೆಯಲ್ಲೇ ಅವನ ಯೋಚನೆಯನ್ನೂ ರದ್ದುಪಡಿಸಿಕೊಂಡು ಪುನಃ ತನ್ನ ಕೆಲಸದಲ್ಲಿ ತಲ್ಲೀನರಾಗಿದ್ದ ಕರಿಯಪ್ಪನವರು ಆಶ್ಚರ್ಯದಿಂದ ಮಗಳ ಮುಖ ನೋಡಿ "ಹೌದು ನಳಿನೀ, ಆದರೆ ಈಗೇಕೆ ಆ ಪ್ರಶ್ನೆ?" ಎಂದರು. "ನೀವು ಈಗ ತಾನೇ ಆ ದೋಬಿಯನ್ನು ಡಿಸ್‌ಮಿಸ್ ಮಾಡಿದಿರಿ. ಅವನಿಗೆ ಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಆತ ಕೂಡಲೇ ತನ್ನ ತನ್ನ ಬಿಡಾರ ಬಿಟ್ಟರೆ ಅವರೆಲ್ಲಿ ಹೋಗಬೇಕು? ನೀವೆಲ್ಲಿ ದಯೆ ತೋರಿಸಿದಂತಾಯಿತು ಪಪ್ಪಾ?" ಎಂದಿತು ಹುಡುಗಿ. ಕರಿಯಪ್ಪನವರ ಹೃದಯ ಮತ್ತು ವಿಚಾರ ಬುದ್ಧಿ ತೆರೆಯಿತು. ಕೂಡಲೇ ದೋಬಿಯನ್ನು ಹಿಂದೆ ಕರೆದು "ನಾನು ನಿನಗೆ ಇನ್ನೊಂದು ಚಾನ್ಸ್ ಕೊಡುತ್ತೇನೆ. ಆದರೆ ನಿನಗೆ ಕೆಲಸವನ್ನು ಉಳಿಸಿಕೊಟ್ಟದ್ದು ಈ ಹುಡುಗಿ" ಎಂದರು. ನಳಿನಿ ಮುಂದೆ ಬಂದು ಗಂಭೀರ ಸ್ವರದಲ್ಲಿ ಹೇಳಿದಳು: "ದಯವಿಟ್ಟು ಕೇಳು ದೋಬಿ. ಸಾಹೇಬರು ಈ ಸಲ ನಿನ್ನ ಮೇಲೆ ದಯೆ ತೋರಿಸಿದ್ದಾರೆ; ಇನ್ನೊಂದು ಬಾರಿ ಯಾವ ತಪ್ಪೂ ಆಗದಂತೆ ಜಾಗ್ರತೆಯಿಂದಿರು." ಕರಿಯಪ್ಪನವರು ಅದನ್ನು ನೆನಸಿಕೊಂಡು ನಗುವರಿದೆ. "ನಳಿನಿಯ ಮಾತಿಗೆ ಪ್ರತಿಯಾಡುವ ಸಂದರ್ಭವೇ ನನಗೆ ಬಂದಿಲ್ಲ" ಎನ್ನುತ್ತಾರೆ ಅವರು. ಒಂದು ಬಾರಿ ಅವರ ಮಗ ಉಣ್ಣಲು ಕುಳಿತಲ್ಲಿ ಊಟ ಸರಿಯಿಲ್ಲವೆಂದು ಚಂಡಿ ಹಿಡಿದ. ಕರಿಯಪ್ಪನವರು ಆತನನ್ನು ಬಲವಾಗಿ ಗದರಿಸಿದರು: "ದೇವರು ನಿನಗೆ ಯಾವುದನ್ನು ಕೊಟ್ಟಿರುವನೋ ಅದನ್ನೇ ನೀನು ಉಣ್ಣಬೇಕು. ಬೇರೆ ವ್ಯಕ್ತಿಗಳಿಗಿಂತ ಹೆಚ್ಚಿನದನ್ನು ನಿನಗೆ ಕೊಟ್ಟಿರುವದಕ್ಕಾಗಿ ನೀನು ದೇವರಿಗೆ ಕೃತಜ್ಞನಾಗಿರಬೇಕು" ಎಂದರು. ಕೆಲವು ತಿಂಗಳ ನಂತರ ಬೋರ್ಡಿಂಗಿನ ಶಾಲೆಗೆ ಆ ಹುಡುಗ ಸೇರಿಸಲ್ಪಟ್ಟ. ಆಗ "ನೀನು ಅಲ್ಲಿಗೆ ಹೋದಮೇಲೆ ಕಾಗದದಲ್ಲಿ ಏನೆಲ್ಲಾ ಬರೆಯುತ್ತಿ" ಎಂದು ತಂದೆ ಪ್ರಶ್ನಿಸಿದಾಗ "ಆಹಾರದ ಕುರಿತೊಂದನ್ನು ಬಿಟ್ಟು ಬೇರೆಲ್ಲಾ ವಿಷಯಗಳನ್ನೂ ಬರೆಯುತ್ತೇನೆ ಪಪ್ಪಾ. ಊಟವೆಂತಹದಿದ್ದರೂ ಮುದ್ದೆ ಮಾಡಿ ಕಬಳಿಸುತ್ತೇನೆ" ಎಂದ ಮಗ. ಕರಿಯಪ್ಪನವರು ತನ್ನ ಸೈನಿಕರನ್ನು ತನ್ನ ಸ್ವಂತ ಮಕ್ಕಳಂತೆಯೇ ಕಾಣುತ್ತಾರೆ. ಅವರು ಧಾರ್ಮಿಕ ಬುದ್ಧಿಯ ಮನುಷ್ಯ; ಪ್ರಾರ್ಥನೆಯಲ್ಲಿ ಗಾಢಾಸಕ್ತಿಯಿದೆ. ಹಿಂದೊಂದು ಬಾರಿ ಅಮೇರಿಕದ ಸೈನಿಕರು ನಡೆಸುತ್ತಿದ್ದ 'ಸೇನಾಪ್ರಾರ್ಥನೆ'ಯೊಂದನ್ನು ಕಂಡಾಗ ಅದವರ ಮನಸ್ಸಿಗೆ ಬಹಳವಾಗಿ ಹಿಡಿದು, ಅವರದನ್ನು ಪ್ರತಿ ಮುಂಜಾನೆ ಓದಹತ್ತಿದರು; ತನ್ನ ಸೇನಾಧಿಕಾರಿಗಳೂ ತನ್ನನ್ನು ಅನುಕರಿಸುವಂತೆ ಮಾಡಿದ್ದರು. ಕಾಶ್ಮೀರದ ಒಂದು 'ಮಹಿಳಾ ಸೇನಾದಳ'ವನ್ನು ಇತ್ತೀಚೆಗೆ ಅವಲೋಕಿಸಿದ ಮೇಲೆ ಜನರಲ್ ಕರಿಯಪ್ಪನವರ ಬಾಯಿಯಿಂದ ಬಂದ ಉದ್ಗಾರಗಳಿವು: "ಒಂದು ಒಳ್ಳೇ ನಾಟಕೀಯ ಪ್ರದರ್ಶನ. ಆದರೆ ಅವರು ಉತ್ಸವ ಹತ್ತಿಯರಾಗುವಂತಿಲ್ಲ!" ದೇಶದಲ್ಲಿ ಬೇಕಾದಷ್ಟು ಪುರುಷಬಲವಿದೆ; ಕೋವಿ ಹಿಡಿಯುವ ಅವಶ್ಯಕತೆಯೇ ಮಹಿಳೆಯರಿಗೆ ಬೇಡದಂತೆ ಅವರು ಮಾಡಲಾಗುವ ಕೆಲಸಗಳೂ ಬೇಕಾದಷ್ಟಿವೆ, ಎಂದೇ ಸ್ತ್ರೀ ಸೈನಿಕ ವೃತ್ತಿಯ ಕುರಿತು ಜನರಲ್ ಕರಿಯಪ್ಪನವರ ಅಭಿಮತ. ಅವರು ಅವಲೋಕಿಸಿದ ಕಾಶ್ಮೀರೀ ಮಹಿಳಾದಳದಲ್ಲಿ ತಲೆ ಹಣ್ಣಾದ ಮುದುಕಿಯೊಬ್ಬಳಿದ್ದಳಂತೆ. ಆಶ್ಚರ್ಯಗೊಂಡ ಕರಿಯಪ್ಪನವರು ಆಕೆಯೊಡನೆ "ನೀವಿಲ್ಲಿ ಏನು ಮಾಡುತ್ತಿರುವಿರಿ, ಮುದುಕಮ್ಮ?" ಎಂದು ಪ್ರಶ್ನಿಸಿದರು. "ಜವಾನರಿಗೊಂದು ಮೇಲ್ಪಂಕ್ತಿ ಹಾಕಿ ಕೊಡುತ್ತಿದ್ದೇನೆ, ಸರ್" ಎಂದಾಕೆ ಉತ್ತರವಿತ್ತಳಂತೆ.

(ಆಧಾರದಿಂದ)

ಜಾಗತಿಕ ವಾತಾವರಣ

ಕೊರಿಯಾ ರಣಾಂಗಣದಲ್ಲಿ ಕಮ್ಯೂನಿಸ್ಟರನ್ನು ಹಿಂದೂಡುತ್ತಾ ಸಂಯುಕ್ತ ರಾಷ್ಟ್ರಗಳ ಸೇನೆಗಳು ಮುಂದೊತ್ತಿ ಹತ್ತಿದಂದಿನಿಂದ ಲೋಕದ ವಾತಾವರಣವು ಪ್ರಬಲ ಮಾರ್ಪಾಟುಗೊಂಡಿದೆ, ಎಂಬುದು ಸ್ಪಷ್ಟ. ಕೊರಿಯಾ ಯುದ್ಧಕ್ಕೆ ಯುದ್ಧ ಭೂವಿಸ್ತಾರದಷ್ಟೇ ಉದ್ದಗಲದ ಪ್ರಾಮುಖ್ಯತೆಯಿರುವುದಿಲ್ಲ. ಅದು ಜಗದ್ವ್ಯಾಪೀ ಕಮ್ಯೂನಿಸ್ಟರು ಮತ್ತು ಅವರ ವಿರುದ್ಧ ಪಾಳೆಯಗಳ ಬಲಾಬಲಗಳನ್ನು ಅಳೆಯುವ ತಕ್ಕಡಿಯಂತಿದೆ. ಆದ್ದರಿಂದಲೇ ಕೊರಿಯದಲ್ಲಿ ಉತ್ತರ ಭಾಗದವರು ಗೆಲ್ಲುತ್ತಾ ಬಂದಂತೆ ಇಡೀ ಪ್ರಪಂಚದ ಕಮ್ಯೂನಿಸ್ಟರು ಹಿಗ್ಗುತ್ತಾ ಹೋದರು. ಈಗ ದಕ್ಷಿಣ ಕೊರಿಯದವರು ಜಯಿಸುತ್ತಾ ಮುಂದಾಗುತ್ತಿರುವಾಗ ಪ್ರಪಂಚದ ಕಮ್ಯೂನಿಸ್ಟ್ ವೈರಿಗಳೆಲ್ಲರೂ ಅತಿಯಾಗಿ ಹಿಗ್ಗ ಹತ್ತಿದ್ದಾರೆ. ಅಂತೂ ಕಳೆದ ದಿನಗಳು ಕಮ್ಯೂನಿಸ್ಟರಿಗೆ ನಿರಾಶೆಯ ದಿನಗಳು. ಹೀಗೆ ಎರಡು ಪಾಳೆಯಗಳ ಶಕ್ತಿ ತಾರತಮ್ಯಗಳತ್ತ ಕೈ ತೋರಿಸುವಾಗ ಕೊರಿಯದಲ್ಲಿ ಇಕ್ಕಡೆಯವರ ಎಲ್ಲ ಶಕ್ತಿ ಯೋಗ್ಯತೆಗಳೂ ತಕ್ಕಡಿಗಿಡಲ್ಪಟ್ಟಿಲ್ಲವೆಂಬುದನ್ನು ನೆನಪಿಸಲ್ಲಿಡಬೇಕು. ಅದರಲ್ಲೂ ಕೊರಿಯದ ಕಮ್ಯೂನಿಸ್ಟರ ವಿರುದ್ಧವಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಸೇರಿದ ರಾಷ್ಟ್ರಗಳಲ್ಲಿ ಅತ್ಯಧಿಕ ಸಂಖ್ಯೆಯವು ಕತ್ತಿ ಕಟ್ಟಿರವಾಗ ರಶ್ಯವೇನೂ ಆ ಕಮ್ಯೂನಿಸ್ಟರ ಬೆಂಬಲಕ್ಕೆ ಬಂದಿಲ್ಲ– ಚೈನ ಕೂಡಾ ಈ ಸಮರ ಪ್ರತ್ಯಕ್ಷವಾಗಿ ಅಪಕ್ಷ ಹಿಡಿದಿಲ್ಲವೆಂಬುದನ್ನು ಮರೆಯಬಾರದು. ಆದ್ದರಿಂದ ಅಮೇರಿಕ, ಬ್ರಿಟನು ಮತ್ತಿತರ ಹಲವು ರಾಷ್ಟ್ರಗಳಿಗಿದಿರಾಗಿ ಉತ್ತರ ಕೊರಿಯದಂತಹ ಅತಿ ಸಣ್ಣ ರಾಷ್ಟ್ರವೊಂದು ಇದುವರೆಗಾಡಿರುವ ಮತ್ತೀಗಲೂ ಆಡುತ್ತಿರುವ ಆಟಗಳೆಂತಹವೆಂಬುದನ್ನು ನೆನಸಿಕೊಂಡರೆ ಕಮ್ಯೂನಿಸ್ಟ್ ಪ್ರಭಾವ ಮತ್ತು ಶಕ್ತಿಯ ಕುರಿತು ಅಶ್ಚರ್ಯಪಡಲಿಕ್ಕಿದೆ ಹೊರತು ತಾತ್ಸಾರಪಡುವಂತಿಲ್ಲ. ಜಾಗತಿಕ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರ ಪಾಳೆಯಗಳ ಸತ್ವ ಪರೀಕ್ಷೆಯಿಲ್ಲಿ ಸಂಪೂರ್ಣವಾಗಿ ನಡೆದಿಲ್ಲ ಅಭಿಮಾನಕ್ಕೆ ಮಾತ್ರ ಧಕ್ಕೆಯೊದಗುವಂತಾಗಿದೆ— ಪ್ರಥಮತಃ ಅಮೇರಿಕ ಮತ್ತದರ ಹಿಂಬಾಲಕ ರಾಷ್ಟ್ರಗಳಿಗೆ ಅಪಮಾನವಾಗಿದ್ದರೆ ಈಗ ರಶಿಯಾ ಮತ್ತದರ ಅನುಯಾಯಿಗಳ ಮುಖಭಂಗವಾಗುತ್ತಿದೆ.

೦೦ ೦೦ ೦೦

ಕೊರಿಯಾ ಸಮರವೀಗ ೩೮ನೇ ಡಿಗ್ರಿ ಗೆರೆಯಿಂದ ಉತ್ತರಾಭಿಮುಖವಾಗಿ ಒಂದೇ ಸಮನೆ ಸಾಗಿದೆ. ಸುಸಂಘಟಿತ ಸಂಯುಕ್ತ ರಾಷ್ಟ್ರ ಸೇನೆಗಳು ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್ಯಾಂಗನ್ನು ವಶಪಡಿಸಿಕೊಳ್ಳಲು ಮುಂದೊತ್ತುತ್ತಿವೆ. ಈ ದಿಯಲ್ಲಿ ಕುವ್ಹೋನಿನಂತಹ ಪ್ರಸಿದ್ಧ ನಗರ ಮತ್ತು ಪ್ರಾಮುಖ್ಯ ನೆಲೆಗಳನ್ನು ಅವು ಇಷ್ಟರಲ್ಲೇ ಸ್ವಾಧೀನ ಪಡಿಸಿಕೊಂಡಿವೆ. ಇತ್ತ ಒಳಗಡೆಯಲ್ಲಿ ಆಕ್ರಮಣ ಧಾಳಿ ನಡೆಸುತ್ತಿರುವಾಗಲೇ ಉತ್ತರ ಕೊರಿಯದ ಪೂರ್ವ, ಪಶ್ಚಿಮ ಕರಾವಳಿಗಳೆರಡರ ಮೇಲೂ ಸಂಯುಕ್ತ ರಾಷ್ಟ್ರಗಳ ವಿಮಾನಗಳು ಹಾಗೂ ಯುದ್ಧ ಹಡಗಗಳು ಪ್ರಚಂಡ ಧಾಳಿ ನಡೆಸಿವೆ. ಚೈನದ ಮಂಚೂರಿಯಾ ಗಡಿಯ ಮತ್ತು ರಶ್ಯದ ಸೈಬೇರಿಯಾ ಸರಹದ್ದಿನ ಕೆಲವು ಮೈಲುಗಳಷ್ಟು ಸಮೀಪಕ್ಕೆ ಬಳಿಯ ಉತ್ತರ ಕೊರಿಯದ ಎರಡು ಪಕ್ಕಗಳಲ್ಲಿ ಈ ಧಾಳಿ ಒಲವಾಗಿ ನಡೆದಿತ್ತೆಂದು ತಿಳಿದು ಬರುತ್ತದೆ. ದಕ್ಷಿಣ ಕೊರಿಯದ ರಾಜಧಾನಿ ಸಿಯೋಲಿನ ಬಳಿ ಸಮುದ್ರ ಸೇನೆಗಳನ್ನು ಅಲ್ಲಿ ಇಳಿಸಿದಂತೆಯೇ ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್ಯಾಂಗಿನ ಬಳಿಯಲ್ಲಿ ಸಮುದ್ರ ಸೇನೆಗಳನ್ನು ಇಳಿಸುವ ಪೂರ್ವ ಸಿದ್ಧತೆಗಾಗಿಯೇ ಈ ಕರಾವಳಿ ಧಾ

[೭ನೇ ಪುಟ ನೋಡಿರಿ]

ಭಾರತಕ್ಕೆ ಇಪ್ಪತ್ತೈದು ವರುಷಗಳ

ಬೇಂಕಿಂಗ್ ಸೇವೆಯನ್ನು ಸಲ್ಲಿಸಿದ

ಈ ಶುಭ ಮುಹೂರ್ತದಲ್ಲಿ....

೧೯೫೦ನೆಯ ಇಸವಿ, ಅಕ್ಟೋಬರ ದಿನಾಂಕ ೨೦, ಎಂದರೆ ನಮ್ಮ ಬೇಂಕಿಗೆ ಕೇವಲ ಒಂದು ಹೊಸ ಆರ್ಥಿಕ ವರ್ಷದ ಆರಂಭ ಮಾತ್ರವೇ ಆಗಿಲ್ಲ. ಇದೀಗ ನಮ್ಮ ಬೇಂಕಿನ ಇಪ್ಪತ್ತೈದನೆಯ ವಾರ್ಷಿಕೋತ್ಸವವೂ ಕಾಲು ಶತಮಾನದ ಸೇವೆಯ ಚಾರಿತ್ರಿಕ ಸಂಪೂರ್ಣತೆಯೂ ಆಗಿರುವುದು ಮಹತ್ವದ ವಿಷಯ. ಇನ್ನಷ್ಟು ಉಪಯುಕ್ತವಾಗುವಂತೆ ಬದುಕಿ ಬಾಳುವ ಭರವಸೆಯನ್ನು ಮುಂಗಾಣಿಸುವ ನವಯುಗದ ಪುಣ್ಯೋದಯವಿದು

ಆ ಮುಂದೆ ತೋರುವುದೇ ನಮ್ಮಗಳ ಉಜ್ವಲ ಭವಿಷ್ಯ. ಅದು ಕೈತೋರಿಸಿ ನಮ್ಮನ್ನು ತನ್ನೆಡೆಗೆ ಆಹ್ವಾನಿಸುತ್ತಿದೆ ಪ್ರತಿಭಾ ಸಂಪನ್ನರಿಗೂ, ದೀಕ್ಷಾಬದ್ಧರಿಗೂ, ಮುಂದೊತ್ತುವ ಚೈತನ್ಯವುಳ್ಳವರಿಗೂ, ಬೇಕಷ್ಟು ಸದವಕಾಶಗಳನ್ನು ಒದಗಿಸಿಕೊಡುವ ಸನ್ನಿವೇಶವು ನಮ್ಮ ಮುಂದಿದೆ ಪ್ರತಿಯೊಬ್ಬ ವ್ಯಕ್ತಿಗೂ. ಪ್ರತಿಯೊಂದು ವ್ಯವಹಾರಿಕ ಸಂಸ್ಥೆಗೂ ಒಳ್ಳೆಯ ಬೇಂಕಿಂಗ್ ಸಂಬಂಧದಿಂದ ಅಪಾರವಾದ ಪ್ರಯೋಜನ ಉಂಟಷ್ಟೆ.

ದೀರ್ಘಕಾಲದ ಅನುಭವವೂ ಎಳೆವರೆಯದ ಪ್ರಗತಿಶೀಲ, ಓಜಃಪೂರ್ಣ ಸತ್ತ್ವವೂ ಜತೆಯಾಗಿ ಉಳ್ಳ

ಕೆನರಾ ಇಂಡಸ್ಟ್ರಿಯಲ್ ಮತ್ತು

ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಇವರ ಪರಿಚಯವನ್ನು ತಾವು ಪಡೆಯಬೇಕೆಂದು ಈ ಸಂಸ್ಥೆ ತಮ್ಮನ್ನು ಬಿನ್ನವಿಸಿಕೊಳ್ಳುತ್ತಿದೆ.

ನಮ್ಮ ಸಿಬ್ಬಂದಿಯಲ್ಲಿರುವ ಒಬ್ಬೊಬ್ಬನೂ,

"ಉತ್ತಮೋತ್ತಮವಾದ ಬೇಂಕಿಂಗ್"

ಎಂಬ ನಮ್ಮ ಆಶ್ವಾಸನೆಯನ್ನು ಪೂರ್ಣಗೊಳಿಸಲು ಅವಿರತವಾಗಿ ಶ್ರಮಿಸುವನು.

The Canara Industrial &
Banking Syndicate Ltd.

H. O. **UDIDI.**

ಹೊಟ್ಟೆಯ ವಿಕಾರವೇ? ಅಶಕ್ತತೆಯೋ? ಮರುಗಬೇಡ! ಶ್ರೀ ಶಿವಾನಂದ ಸ್ವಾಮಿಗಳ ಅನುಭವಪೂರ್ಣ

ವ್ಯಾಯಾಮ, ಆಸನ ಮೊದಲಾದ ಹಲವಾರು ಚಿಕಿತ್ಸೆಗಳಿಂದ ದೀರ್ಘಾಯುಷಿಗಳಾಗಿರಿ!!

ಉದರದ ಆರೋಗ್ಯ ಮತ್ತು ಸ್ನಾಯುಬಲ ಸಂವರ್ಧನ

೧೫೦ ಚಿತ್ರಗಳುಳ್ಳ ಪುಸ್ತಕ. ಅಂಚೆವೆಚ್ಚ ಸೇರಿ ಬೆಲೆ: ರೂ. ೨—೩—೦

ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು!

ವೀರ್ಯರಕ್ಷಣೆಯ ರಾಮಬಾಣ ಉಪಾಯಗಳು! ೨೫೦ ಪುಟ! ಅಂಚೆವೆಚ್ಚ ಸೇರಿ ರೂ. ೩—೮—೦

ಸಮಾಜ ಪುಸ್ತಕಾಲಯ, ಸುಭಾಸ ಬೀದಿ, ಧಾರವಾಡ.

THE

Canara Banking Corporation Ltd.

(Incorporated in India.)

Estd: 1906.

Head Office : UDIPI. (S. I.)

Capital Authorised	Rs. 25,00,000
Capital Issued, Subscribed & Paid up	Rs. 20,00,000
Reserves	Rs. 9,44,765

ಗುರುವಾರ, ಉಡುಪಿ, ೧೯-೧೦-೫೦

ಒಂದು ಪಾಠ

ಬೊಂಬಾಯಿಯ ಗಿರಣಿ ಮಜೂರರ ಪ್ರಚಂಡ ಮುಷ್ಕರವು ಇದೇ ತಾ 16ನೇ ಸೋಮವಾರ ಮುಕ್ತಾಯ ಗೊಂಡು, ಕೆಲಸವಾರಂಭಿಸಿದೆ ಎನ್ನಲು ಸಂತೋಷಿಸುತ್ತೇವೆ. ಇದು ವರೆಗಿನ ಉದ್ಯಮೀ ಮುಷ್ಕರಗಳ ಪೈಕಿ ಅತ್ಯಂತ ದೊಡ್ಡದಾದ ಈ ಬೊಂಬಾಯಿ ಗಿರಣಿ ಮುಷ್ಕರವು ಸೋತು ಮುಗಿಯಿತೆಂಬುದು ಸ್ಪಷ್ಟ. ಇದನ್ನಾರಂಭಿಸಿ 62 ದಿನಗಳ ವರೆಗೆ ನಡೆಯಿಸಿದ ಸಮತಾವಾದಿ 'ಮಿಲ್ ಮಝ್ದೂರ್ ಸಭಾ' ಇದರ ಮುಷ್ಕರ ಸಮಿತಿಯು ದೀರ್ಘ ಚರ್ಚೆಯ ನಂತರವೇ ತಾ 13ನೇ ರಾತ್ರಿ ಮುಷ್ಕರವನ್ನು ಹಿಂದೆಗೆಯುವ ನಿರ್ಧಾರಕ್ಕೆ ಬಂತು. ಈ ನಿರ್ಧಾರದ ಕಾರಣಗಳ ವಿವರವೀವರೆಗೆ ತಿಳಿದುಬಂದಿಲ್ಲವಾದರೂ, ಕಳೆದ ವಾರಗಳಿಂದ ಸಡಿಲು ಬೀಳುತ್ತಾ ಬಂದಿದ್ದ ಸಂಪು ಇನ್ನು ಮುಂದೊತ್ತದಷ್ಟು ಕುಸಿದು ಹೋದುದೇ ಮೂಲಕಾರಣವೆನ್ನಬಹುದು. ತಾ. 11ನೇ ಬುಧವಾರ ಸೇರಿದ ಸಭೆಯಲ್ಲಿ ಮುಷ್ಕರವನ್ನು ಅನಿಶ್ಚಿತಾವಧಿಯ ವರೆಗೆ ಯಥಾಪ್ರಕಾರ ಮುಂದೊತ್ತಬೇಕೆಂದು ಸಂಪು ಸಮಿತಿಯು ನಿರ್ಧರಿಸಿದ್ದಿತು. ಆದರೆ ಈ ನಿರ್ಣಯವಾದ ಮಾರುದಿನ 65,000 ಸಂಪುಗಾರ ಮಜೂರರು ಕೆಲಸಕ್ಕೆ ಹಾಜರಾದರು; 'ಮಝ್ದೂರ ಸಭಾ'ದ ಘೋಷಣೆಯನ್ನು ಅಲಕ್ಷಿಸಿ ಸಾಧಾರಣ ಸೇಕಡಾ 75ರಷ್ಟು ಮುಷ್ಕರಗಾರರು ಕೆಲಸಕ್ಕೆ ಹೋಗಹತ್ತಿದುದರಿಂದ ತನ್ನಿಂತೆ ಜಾರಿ ಬೀಳುತ್ತಿದ್ದುದನ್ನು ತಳ್ಳುವ ಘಟನೆಯನ್ನು 'ಮಿಲ್ ಮಜದೂರ್ ಸಭಾ' ಮಾಡಲೇಬೇಕಾಯಿತು. ತಾ. 13ರಲ್ಲಿ ಅದರ 'ಸಂಪು ಸಮಿತಿ' ಮುಷ್ಕರ ಮುಕ್ತಾಯ ನಿರ್ಣಯ ಮಾಡಿತು. ತಾ. 15ರಲ್ಲಿ ಮಜೂರರ ಮಹಾಸಭೆ ನೆರೆದು ಈ ನಿರ್ಣಯವನ್ನು ದೃಢೀಕರಿಸಿಕೊಂಡು, ತಾ. 16ರಿಂದ ಎಲ್ಲರೂ ಕೆಲಸಕ್ಕೆ ಹೋಗುವಂತಾಯಿತು.

ಬೊಂಬಾಯಿಯ ಈ ಪ್ರಚಂಡ ಮುಷ್ಕರ ಮತ್ತದರ ಮುಕ್ತಾಯದ ಮೇಲಿಂದ ಅಖಿಲ ಭಾರತೀಯರು ಅರಿತುಕೊಳ್ಳಬೇಕಾದ ಅಂಶಗಳಿವೆ; ಮಜೂರ ವರ್ಗವಂತೂ ಅಗತ್ಯವಾಗಿ ಕಲಿಯಬೇಕಾದ ಪಾಠ ಇಲ್ಲಿದೆ. ಬೊಂಬಾಯಿಯ ಗಿರಣಿ ಮಜೂರರು ಅಲ್ಲಿಯ ಸಮತಾವಾದಿ 'ಮಿಲ್ ಮಜದೂರ್ ಸಭಾ'ದ ನೇತೃತ್ವದಲ್ಲಿ ಕಳೆದ ಆಗೋಸ್ತು 14ರಲ್ಲಿ ಆರಂಭಿಸಿದ್ದ ಮುಷ್ಕರವದು. ಗಿರಣಿ ಮಜೂರರಿಗೆ ಎರಡು ತಿಂಗಳುಗಳ ಸಂಬಳದಷ್ಟನ್ನು ಬೋನಸಾಗಿ ಕೊಡತಕ್ಕದ್ದೆಂದು ಕಳೆದ ಜುಲಾಯಿ ತಾ.7ರಲ್ಲಿ 'ಬೊಂಬಾಯಿ ಇಂಡಸ್ಟ್ರಿಯಲ್ ಕೋರ್ಟು' ತೀರ್ಮಾನಿಸಿದ್ದಿತು. ಇಷ್ಟು ಸಾಲದೆಂದು ಗಿರಣಿ ಮಜೂರರ ಪರವಾಗಿ ಇಷ್ಟನ್ನು ತೀರುವುದು ಅಸಾಧ್ಯವೆಂದು ಗಿರಣಿ ಮಾಲಕರ ಪರವಾಗಿ 'ಮಜೂರ ಅಪ್ಪೀಲು ನ್ಯಾಯಾಲಯ'ಕ್ಕೆ ಎರಡೂ ಕಡೆಗಳವರ ಅಪ್ಪೀಲುಗಳು ದಾಖಲಾಗಿದ್ದವು. ಆ ಕುರಿತು ಮೇಲಿನ ನ್ಯಾಯಾಲಯದ ವಿಚಾರಣೆ ಬಾಕಿಯಿರುವಾಗಲೇ ಮಜೂರರು ಮುಷ್ಕರವನ್ನು ಹೂಡಿಬಿಟ್ಟರು. ಬೊಂಬಾಯಿಯ 62 ಅರಿವೆ ಗಿರಣಿಗಳ ಸುಮಾರು 2,25,000 ಗಿರಣಿ ಮಜೂರರ ಪೈಕಿ ಸೇಕಡಾ 95 ಮಂದಿ ಈ ಮುಷ್ಕರ ಭಾಗಿಗಳಾಗಿದ್ದರು. 62 ದಿನಗಳ ಈ ಮುಷ್ಕರದಿಂದ ಒಟ್ಟು 200 ಮಿಲಿಯ ಕೆಲಸದ ತಾಸುಗಳು ನಷ್ಟವಾದುವೆಂದು ಲೆಕ್ಕಹಾಕಲಾಗಿದೆ. ಈ ಮುಷ್ಕರದ ದೆಸೆಯಿಂದ ಜುಮ್ಲಾ ಸುಮಾರು 235 ಮಿಲಿಯ ಯಾರ್ಡು ಅರಿವೆಗಳು ಮತ್ತು 58 ಮಿಲಿಯ ಪೌಂಡು ನೂಲುಗಳು ದೇಶದ ಪಾಲಿಗೆ ಕಳೆದು ಹೋದವು. ಕೆಲಸಗಾರರು ತಮಗೆ ದೊರೆಯಬಹುದಾಗಿದ್ದ ಒಟ್ಟು ಸಂಬಳ 40.10 ಕೋಟಿ ರೂಪಾಯಿಗಳನ್ನು ಕಳೆದು ಕೊಂಡರಾದರೆ ಗಿರಣಿ ಆಡಳಿತೆಗೆ 23 ಕೋಟಿ ರೂಪಾಯಿಗಳಷ್ಟು ಮಹಿಮಾಟು ಮೊತ್ತ ಕಳೆದು ಹೋಯಿತು. ಈ ಪ್ರಚಂಡ ಮುಷ್ಕರದ ದೆಸೆಯಿಂದ ಬೊಂಬಾಯಿಯ ಇತರ ವ್ಯಾಪಾರ, ಚಟುವಟಿಕೆಗಳಿಗೆ ಧಕ್ಕೆ ಬಿದ್ದು ಕಳೆದೆರಡು ತಿಂಗಳುಗಳಲ್ಲಿ ಅಲ್ಲಿಯ ವಾತಾವರಣ ಹೇಗಿದ್ದಿತೆಂಬುದು ಬೊಂಬಾಯಿಯಲ್ಲಿರುವವರಿಗೆ, ಮತ್ತದರ ಸಂಬಂಧವಿರುವವರಿಗೆ ಗೊತ್ತಿರುವ ವಿಷಯ. ಈ ನಡುವೆ ಇದೇ ಒಕ್ಟೋಬರ್ ತಾ. 9ರಲ್ಲಿ ಬೋನಸ್ ಸಂಬಂಧವಾಗಿ 'ಅಪ್ಪೀಲು ಕೋರ್ಟು' ತನ್ನ ತೀರ್ಮಾನವಿತ್ತಿದೆ. ಗಿರಣಿ ಮಜೂರರ ಮತ್ತು ಗಿರಣಿ ಮಾಲಕರ ಎರಡು ವಾದಗಳನ್ನೂ ಮನ್ನಿಸದೆ, ಮೂಲ 'ಉದ್ಯಮೀ ಕೋರ್ಟಿ'ನ ಎರಡು ತಿಂಗಳ ಬೋನಸ್ ಎವಾರ್ಡನ್ನೇ ಅದು ಎತ್ತಿಹಿಡಿದಿದೆ. ಈ ತೀರ್ಪಾಗಿ ವಾರ ಮುಗಿಯುವುದರೊಳಗೆ ಮುಷ್ಕರವೂ ಮುಕ್ತಾಯ ಗೊಂಡಿತು. ಈ ಸಂಪು ಚರಿತ್ರೆಯಿಂದ ಸಹಜವಾಗಿ ಏಳುತ್ತಿರುವ ಪ್ರಶ್ನೆ: ಬೊಂಬಾಯಿ ಗಿರಣಿ ಮಜೂರರು ಈ ಮುಷ್ಕರದಿಂದ ಅಪಜಯ ಮತ್ತು ಅಪಮಾನವನ್ನಲ್ಲದೆ ಬೇರೇನನ್ನು ಸಾಧಿಸಿಕೊಂಡರು? ಮಾಲಕ ಮಜೂರರೊಳಗಿನ ವಿವಾದಗಳನ್ನು ತೀರ್ಮಾನಿಸುವುದಕ್ಕಾಗಿ ನಿಷ್ಪಕ್ಷಪಾತ ನ್ಯಾಯಾಲಯಗಳು ಪ್ರತ್ಯೇಕ ಸ್ಥಾಪನೆಗೊಂಡಿರುವಾಗ ಅವುಗಳ ಆಶ್ರಯವನ್ನು ಪಡೆಯದೆ ಸಂಪು ಸಂಗ್ರಾಮಕ್ಕೇಳುವುದಂತೂ ದುಡುಕುತನ. ಬೊಂಬಾಯಿ ಗಿರಣಿ ಮಜೂರರು ಮಾಡಿದಂತೆ, ಅತ್ತ ಮೇಲು ಕೋರ್ಟಿಗೆ ಅಪ್ಪೀಲನ್ನೂ ಮಾಡಿ, ಇತ್ತ ಮುಷ್ಕರವನ್ನೂ ಹೂಡುವುದೆಂದರೆ ಅಹಂಭಾವ ಪ್ರದರ್ಶನದಂತೆಯೇ ಅಕ್ರಮ ಕೂಡ. ಬೊಂಬಾಯಿ ಗಿರಣಿ ಮಜೂರರು ತಮ್ಮ ಅಂಕೆಯಲ್ಲಿದ್ದಾರೆ ಹೊರತು, ಕಾಂಗ್ರೆಸಿನ 'ಹಿಂದ್ ಮಜದೂರ್ ಸಭಾ'ದ ಕೈಯಲ್ಲಿಲ್ಲವೆಂಬುದನ್ನು ಪ್ರದರ್ಶಿಸಬೇಕೆಂದೇ ಸಮತಾವಾದಿಗಳು ಈ ಮುಷ್ಕರ ಪ್ರಯೋಗ ಮಾಡಿದ್ದರೆಂದು ನಂಬಲಾಗಿದೆ. ಬೊಂಬಾಯಿ ಮುಷ್ಕರದ ಆದಿ ಮತ್ತು ಅಂತ್ಯವನ್ನು ತುಲನೆ ಮಾಡುವಾಗ ಆದಿಭಾಗದಲ್ಲಿ ಬೊಂಬಾಯಿ ಮಿಲ್ ಮಜೂರರು ಸಮತಾವಾದಿಗಳ ಕೈಯಲ್ಲಿದ್ದರೆಂಬುದು ಸ್ಪಷ್ಟವಾಗಿದ್ದರೆ, ಈ ಮುಷ್ಕರದ ದೆಸೆಯಿಂದ ಅವರೀಗ ಕೈತಪ್ಪಿಹೋದರು, ಎಂಬುದು ಅಂತ್ಯ ಭಾಗದಲ್ಲಿ ಸ್ಪಷ್ಟವಾಗಿದ್ದಿತು. ಅನ್ನ ವಸ್ತ್ರಗಳ ಅಭಾವದ ಈ ಕಾಲದಲ್ಲಿ ರಾಷ್ಟ್ರಕ್ಕೆ ಅಪಾರ ನಷ್ಟವನ್ನು — ಮಜೂರರಿಗೆ ಕೆಲಸ ಮತ್ತು ಸಂಬಳವಿಲ್ಲದ ಅಸಹ್ಯ ಬಿಕ್ಕಟ್ಟುಗಳನ್ನು — ಬೊಂಬಾಯಿಯ ಹಾಗೂ ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಅಡಚಣೆ ಮತ್ತು ಉದ್ವೇಗವನ್ನು — ಉಂಟುಮಾಡಿದ ಜತೆಯಲ್ಲೇ ಬೊಂಬಾಯಿ ಗಿರಣಿ ಮುಷ್ಕರವು ಸಮತಾವಾದಿಗಳ ವರ್ಚಸ್ಸನ್ನೂ ನುಂಗಿ ಜೀರ್ಣಿಸಿ ಕೊಂಡಿತೆಂಬುದು ಸ್ಪಷ್ಟವಿದೆ. ಭಾರತದ ಭಾವೀ ನಾಯಕತ್ವಕ್ಕಾಗಿ ಶಕ್ತಿಯನ್ನು ಸಂಘಟಿಸಿಕೊಳ್ಳಬೇಕಾಗಿರುವ ಸಮತಾವಾದಿಗಳು, ಅದು ಎಲ್ಲಿಯಾದರೊಂದಿಷ್ಟು ತುಂಬುತ್ತದೆಯೆನ್ನುವಾಗಲೇ ಅದನ್ನೀ ರೀತಿ ದುರ್ವ್ಯಯ ಮಾಡಿಕೊಳ್ಳುತ್ತಿರುವುದು ವಿಷಾದಕರ. ಸ್ವಂತೋದ್ದೇಶ ಸಾಧನೆಗಾಗಿ ಉಪಕರಣಗಳಾಗಿ ತಮ್ಮನ್ನು ಬಳಸಿಕೊಳ್ಳಬಯಸುವ ರಾಜಕಾರಣಿಗಳ ಸೂತ್ರದ ಗೊಂಬೆಗಳು ತಾವಾಗಬಾರದೆಂಬ ಪಾಠವನ್ನು ರಾಷ್ಟ್ರದ ಮಜೂರ ವರ್ಗವು ಈ ಮಹಾಮುಷ್ಕರದ ಪರಿಣಾಮದ ಮೇಲಿಂದಾದರೂ ಅರಿತುಕೊಳ್ಳಲಾರದೆ? ನ್ಯಾಯಾನ್ಯಾಯ, ಉಚಿತಾನುಚಿತತೆಯನ್ನು ಗಣಿಸದೆ, ಯಾವ ವರ್ಗದ ಗೊಂದಲವೆದ್ದರೂ ಅದರೊಡನೆ ಸಹಾನುಭೂತಿ ಪ್ರದರ್ಶಿಸುವ ಮನೋವೃತ್ತಿಯುಳ್ಳವರು ಇನ್ನಾದರೂ ನ್ಯಾಯ ಚಿಂತನಾಭ್ಯಾಸ ತಾಳುವರೆ?

— ಕಾಂಗ್ರೆಸ್ ಕಾರ್ಯಕಾರಿ ಸಮಿತಿ —

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ ಥಂಡನರು ಇದೇ ತಾ. 16ರಲ್ಲಿ 20 ಮಂದಿಯುಳ್ಳ ಹೊಸ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸಿದ್ದಾರೆ:—

ಬಾಬು ಪುರುಷೋತ್ತಮ ದಾಸ ಥಂಡನ್ (ಅಧ್ಯಕ್ಷ) ಸರ್ದಾರ್ ವಲ್ಲಭಭಾಯಿ ಪಟೇಲ್ (ಖಜಾನ್ಜಿ) ಪಂಡಿತ ಜವಾಹಿರಲಾಲ ನೆಹರು. ಮೌಲಾನಾ ಅಬುಲ್ ಕಲಮ್ ಆಜಾದ್. ಶ್ರೀ ಸಿ. ರಾಜಗೋಪಾಲಾಚಾರಿ. ಶ್ರೀ ಜಗಜ್ಜೀವನರಾಮ್, ಪಂಡಿತ ಗೋವಿಂದ ವಲ್ಲಭಪಂತ್. ಶ್ರೀ ಯಸ್. ಕೆ. ಪಾಟೀಲ್. ಶ್ರೀ ಕಾಮರಾಜ ನಾದರ್, ಸರ್ದಾರ್ ಪ್ರತಾಪ ಸಿಂಗ್ ಕೈರೋನ್. ಶ್ರೀ ಎನ್. ಜಿ. ರಂಗ. ಶ್ರೀ. ಅಜಿತ್ ಪ್ರಸಾದ್. ಶ್ರೀ ಸಿದ್ಧನಾಥ್ ಶರ್ಮಾ. ಶ್ರೀ ಲಕ್ಷ್ಮೀನಾರಾಯಣ ಸುಧಾಂಶು. ಶ್ರೀ ಬಿ. ಎಸ್. ಹಿರೆ. ಸೇಟ್ ಗೋವಿಂದದಾಸ್. ಶ್ರೀ ಗೋಕುಲ್‌ಲಾಲ್ ಅಸಾವಾ. ಶ್ರೀಮತಿ ಪುಷ್ಪ ಬಹೆನ್. ಶ್ರೀ ಕಲಾವೆಂಕಟರಾವ್. (ಮಹಾ ಕಾರ್ಯದರ್ಶಿ) ಶ್ರೀ ಮೋಹನಲಾಲ್ ಗೌತಮ (ಮಹಾಕಾರ್ಯದರ್ಶಿ)

ನಾಸಿಕ ಕಾಂಗ್ರೆಸ್ ಅಧಿವೇಶನ ಮುಗಿದು ಮೂರು ವಾರಗಳ ವರೆಗೂ ಕಾರ್ಯಕಾರೀ ಸಮಿತಿಯನ್ನು ರಚಿಸಿಕೊಳ್ಳಲಾಗದ ಬಿಕ್ಕಟ್ಟು ಅಧ್ಯಕ್ಷ ಥಂಡನರ ಕಣ್ಣೆದಿರು ನಿಂತಿದ್ದಿತು. ಪಂಡಿತ ನೆಹರು ಶ್ರೀ ಥಂಡನರ ಕಾರ್ಯಕಾರೀ ಸಮಿತಿಯಲ್ಲಿ ಸೇರಿಕೊಳ್ಳಲು ಒಪ್ಪದಿದ್ದುದೇ ಈ ಬಿಕ್ಕಟ್ಟಿಗೆ ಕಾರಣ. ಪಂಡಿತ ನೆಹರುಗಳನ್ನು ಸಮಜಾಯಿಸುವುದರಲ್ಲಿ ಮೌಲಾನಾ ಅಬುಲ್ ಕಲಮ್ ಆಜಾದ್ ಮತ್ತು ರಾಜಾಜಿ ಮುಖ್ಯಭಾಗವಹಿಸಿದರೆಂದು ತಿಳಿದುಬರುತ್ತದೆ. ನಾಸಿಕಾಧಿವೇಶನದ ನಿರ್ಧಾರಗಳಲ್ಲಿ ಅಡಕವಾಗಿರುವ ಕಾಂಗ್ರೆಸಿನ ಹೊಸ ಧೋರಣೆಗಳು ಅಸ್ತಿತ್ವದಲ್ಲಿ ಬರುವಂತೆ ಮಾಡಲು ತಾನು ಕಾರ್ಯಕಾರೀ ಸಮಿತಿಯಲ್ಲಿರುವುದೇ ವಾಸಿಯೆಂದು ತೋರಿದುದರಿಂದ ಅದರಲ್ಲಿ ಸೇರಿಕೊಂಡೆನೆಂದು ನೆಹರುಗಳೆಂದಿದ್ದರೆ ಅಧ್ಯಕ್ಷ ಶ್ರೀ ಥಂಡನರೆಂದಿದ್ದಾರೆ, ಸರಕಾರದ ಅಥವಾ ಪ್ರಧಾನಮಂತ್ರಿಗಳ ದೈನಂದಿನ ಕಾರ್ಯಕಲಾಪಗಳಲ್ಲಿ ಕಾಂಗ್ರೆಸು ಅಧ್ಯಕ್ಷನು ಕೈಹಾಕುವಂತಿಲ್ಲ; ಅದು ಅವ್ಯವಹಾರ್ಯ. ಶ್ರೀ ಶಂಕರರಾವ್ ದೇವೋ, ಶ್ರೀಮತಿ ಸುಚೇತಾ ಕೃಪಲಾನಿ, ಹೊಸಸಮಿತಿಯಲ್ಲಿಲ್ಲದಿರುವುದು—ಮುಖ್ಯ ಗಣ್ಯ ಭಾಗಗಳಿಗೆ ಪ್ರಾತಿನಿಧ್ಯ ದೊರೆತಿರುವಾಗ ಕರ್ನಾಟಕಕ್ಕೊಂದು ಸದಸ್ಯತ್ವವನ್ನು ಈ ಸಲ ಕೊಡದಿರುವುದು—ಎದ್ದು ತೋರುವ ವಿಷಯ.

ಉಡುಪಿ

ಡಿಪ್ಪೋ ಮೆನೇಜರರ ಸಭೆ ಎಸ್. ಕೆ. ಸಿ. ಸಿ. ಡಬ್ಲ್ಯು. ಸ್ಟೋರ್ಸಿನ ಉಡುಪಿ ತಾಲೂಕಿನ ಡಿಪ್ಪೋ ಮೆನೇಜರರ ಸಭೆಯು ತಾ. 10ರಲ್ಲು ಒಡಗಬೆಟ್ಟು ಸಂಘದ ಆಫೀಸಿನಲ್ಲಿ ಶ್ರೀ ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಕ್ಕಿ ಭತ್ತ ಸಂಗ್ರಹದ ಕುರಿತು ರಾಯರು ಮಾನನೀಯ ಉಪದೇಶವೃತ ಮಾತುಗಳನ್ನಾಡಿದರು.

ನಗರ ಸಭೆಯ ವಿಶೇಷ ಸಭೆಯು ತಾ. 14 ರಲ್ಲು ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಅಖಿಲ ಭಾರತ ಪತ್ರಿಕಾ ಸಂಪಾದಕ ಮಂಡಳಿಯ ಅಧ್ಯಕ್ಷ ಶ್ರೀ ಸಿ. ಆರ್. ಶ್ರೀನಿವಾಸನರಿಗೆ ಮಾನಪತ್ರವೀಯುವ ನಿರ್ಧಾರವಾಯಿತು.

ಅನಂತರ ಸಾಮಾನ್ಯ ಸಭೆಯು ಜರಗಿತು. ಪಾಲ್ಘಾಟ್ ಮುನಿಸಿಪಾಲಿಟಿಯ ಕಮಿಶನರಾಗಿ ವರ್ಗಾಯಿಸಲ್ಪಟ್ಟ ಇಲ್ಲಿಯ ಕಮಿಶನರ್ ಶ್ರೀ ಬಾಲಗಂಗಾಧರನ್, ಅವರು ನಗರಾಡಳಿತಕ್ಕೆ ಸಲ್ಲಿಸಿದ ಸೇವೆಯನ್ನು ರೆಕಾರ್ಡು ಮಾಡಲಾಯಿತು. ಮುನಿಸಿಪಲ್ ಕಟ್ಟಡ ಕಟ್ಟಲುವ ಅವಧಿಯನ್ನು 30-4-195[illegible]ಕ್ಕೆ ಹೆಚ್ಚಿಸುವಂತೆ ಜಿಲ್ಲಾ ಕಲೆಕ್ಟರಿಂದ ಕೇಳಿಕೊಳ್ಳಲಾಯಿತು. ಗಂಟೆಗೆ ಐದು ಮೈಲಿಗಿಂತ ಜಾಸ್ತಿ ಓಟದಲ್ಲಿ ವಾಹನಗಳು [illegible]ಲಾವಟಾರಗಳಲ್ಲಿ ಓಡಿಸದಂತೆ 'Caution' ಬೋರ್ಡುಗಳನ್ನು ಹಾಕುವಂತೆ ಹ್ಯಾವೇ ಇಲಾಖೆಯವರನ್ನೂ ಮತ್ತಿತರ ಸಂಬಂಧಪಟ್ಟವರನ್ನೂ ಕೇಳಿಕೊಳ್ಳಲಾಯಿತು.

[೧ನೇ ಪುಟದಿಂದ]

ಟ್ಟೆಂದು ಊಹಿಸಬಹುದಾಗಿದೆ. ಕೊರಿಯದ ಮೇಲೆ ಅಮೇರಿಕವು ನಡೆಸುತ್ತಿರುವ ಈ ಅನ್ಯಾಯೀ ಆಕ್ರಮಣವನ್ನು ತಾವು ತಟಸ್ಥರಾಗಿ ಕಣ್ಣು ತೆರೆದು ನಿಲ್ಲಲಾರೆವೆಂದು ಕಮ್ಯೂನಿಸ್ಟ್ ಚೈನಾ ಸರಕಾರದ ಮಾತು ಕೇಳಿ ಬರುತ್ತಿರುವಂತೆಯೇ, ಚೈನೀ ಸೇನೆಗಳು ಉತ್ತರ ಕೊರಿಯದ ಯಾಲೂ ಹೊಳೆ ವಲಯದ ಸಂಕುಚಿತ ಪ್ರದೇಶವನ್ನು ವಶಪಡಿಸಿಕೊಳ್ಳಲು ತಯಾರಾಗಿವೆ, ಎಂಬ ವಾರ್ತೆಯೂ ಬಂದಿದೆ. ತಮ್ಮ ಮಂಚೂರಿಯದ ಉದ್ಯೋಗ ಕಾರ್ಖಾನೆಗಳಿಗೆ ಇಲೆಕ್ಟ್ರಿಕ್ ಸರಬರಾಯಿಯಾಗುತ್ತಿರುವ ಯಾಲು ಹೊಳೆಯ ಹೈಡ್ರೋ ಇಲೆಕ್ಟ್ರಿಕ್ ಕೇಂದ್ರಕ್ಕೆ ಅಮೇರಿಕದ ನೆರಳು ಕೂಡಾ ಬೀಳಬಾರದೆಂದು ಚೈನೀಯರ ಅಭಿಮತವಿದೆ; ಅಂತೆಯೇ ಉತ್ತರ ಕೊರಿಯದ ಸರಕಾರಕ್ಕೆ ಕೊನೆಯ ಆಶ್ರಯ ಸ್ಥಾನವೊಂದನ್ನು ಕಾದಿಟ್ಟುಕೊಳ್ಳಬೇಕೆಂಬ ಬಯಕೆಯೂ ಕೆಂಪು ಚೈನಕ್ಕಿರಬಹುದು. ಇವೆರಡು ಕಾರಣಗಳಿಂದಾಗಿ ಉತ್ತರ ಕೊರಿಯದ ಯಾಲು ಹೊಳೆ ಪ್ರದೇಶವೊಂದನ್ನು ಚೈನೀಯರು ಮುಂದಾಗಿ ಹಿಡಿದುಕೊಳ್ಳಬಹುದೆಂಬ ನಿರೀಕ್ಷೆಯಿದೆ. ಉತ್ತರ ಕೊರಿಯದವರೂ ತಮ್ಮ ರಾಜಧಾನಿ ಪ್ಯೋಂಗ್ಯಾಂಗನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಘೋರ ಕಾಳಗ ಕೊಡುವರೆಂದು ನಂಬಲಾಗಿದೆ

೦೦ ೦೦ ೦೦

ಇಂತಹ ಕೊರಿಯಾ ವಾತಾವರಣವು ಹಲವು ರೀತಿಯ ವಿವಾದ, ವಿಚಾರ ಮತ್ತು ಉಪದೇಶಗಳಿಗಾಸ್ಪದವಿತ್ತಿದೆ. ಅಮೆರಿಕಾಧ್ಯಕ್ಷ ಟ್ರೂಮೇನರು ವಾಷಿಂಗ್ಟನಿನಿಂದ 7800 ಮೈಲು ದೂರದ ಶಾಂತ ಸಮುದ್ರದ ಒಂದು ಬಂಜರು ನೆಲೆ ವೇಕ್ ದ್ವೀಪಕ್ಕೆ ಬಂದು ಅಲ್ಲಿ ಪೂರ್ವ ವ್ಯವಸ್ಥೆಯಂತೆ ಕೊರಿಯಾ ಯುದ್ಧದ ಸರ್ವ ಸೇನಾನಿ ಜನರಲ್ ಮೇಕಾರ್ಥರರೊಡನೆ ಪ್ರಮುಖ್ಯ ಮಾತುಕತೆಗಳಲ್ಲಿ ತೊಡಗಿದ್ದಾರೆ. ಆದಷ್ಟು ಬೇಗನೆ ಕೊರಿಯಾ ಯುದ್ಧ ಮುಗಿಸಿ ಏಕೀಕೃತ ಪ್ರಜಾಸತ್ತಾತ್ಮಕ ಕೊರಿಯವನ್ನು ಸ್ಥಾಪಿಸುವುದು—ಇಂಡೋ ಚೈನದಲ್ಲಿ ಕಮ್ಯೂನಿಸ್ಟ್ ವೀಟ್‌ಮಿನ್ ಸೈನಿಕರ ಹೊಡೆತದಿಂದ ಕಂಗಾಲಾಗಿರುವ ಫ್ರೆಂಚರಿಗೆ ಸಹಾಯ ಸಲ್ಲಿಸುವುದು—ದೂರ ಪೂರ್ವ ರಾಷ್ಟ್ರಗಳಲ್ಲಿ ಅಮೇರಿಕದ ಮುಂದಿನ ಹೆಜ್ಜೆ ಎಲ್ಲೆಲ್ಲಿ ಹೇಗಿರಬೇಕೆಂಬುದನ್ನು ನಿರ್ಧರಿಸುವುದು—ಮೊದಲಾದ ಅತಿ ಪ್ರಮುಖ್ಯ ವಿಷಯಗಳನ್ನು ಟ್ರೂಮೇನ್ ಮೇಕಾರ್ಥರರು ಪರ್ಯಾಲೋಚಿಸುತ್ತಿದ್ದಾರೆ. ಯೂರೋಪಿಗೆ ಕಮ್ಯೂನಿಸ್ಟರಿಂದ ಒದಗಲಿರುವ ಗಂಡಾಂತರವೆಂತಹದೆಂಬ ಪಾಠವನ್ನು ಕೊರಿಯವು ಕಲಿಸುತ್ತಿದೆಯೆಂದೂ, ಕೊರಿಯದ ಇಂದಿನ ವಿಜಯದಿಂದ ಕೃತಕ ಭರವಸೆಯ ಜಾಡ್ಯಕ್ಕೊಳಗಾಗದೆ ಕಾರ್ಯಪ್ರವೃತ್ತರಾಗಬೇಕೆಂದೂ ಚರ್ಚಿಲ್ಲರು ಎಚ್ಚರಿಸಿದ್ದಾರೆ. ಅತ್ತ ಲೇಕ್ ಸಕ್ಸೆಸಿನಲ್ಲಿ ಸಂಯುಕ್ತ ರಾಷ್ಟ್ರ ಸಂಘದ ವಿವಿಧ ಸಮಿತಿಗಳ ಕಾರ್ಯಕಲಾಪಗಳಾಗುತ್ತಿವೆ. ಕೊರಿಯದ ಭವಿಷ್ಯ ಸಂಬಂಧದ ಸೂತ್ರಗಳು ಚರ್ಚೆಯಲ್ಲಿವೆ. ಸಂ. ರಾ. ಸಂಘದ ಮಹಾ ಸಭೆಗೆ ವಿಶೇಷಾಧಿಕಾರಗಳನ್ನು ಕೊಡುವ ಯೋಜನೆಯ ಚರ್ಚೆಯವೇಳೆ 'ರಾಜಕೀಯ ಸಮಿತಿ'ಯಲ್ಲಿ ಮಾತಾಡುತ್ತಾ ಸೋವಿಯೆಟ್ ವಿದೇಶ ಮಂತ್ರಿ ಎಮ್. ಅಂಡ್ರೆಲ್ ವಿಶ್ಸಿನ್ಸ್ಕಿಯವರು ಅಮೇರಿಕವು ಯುದ್ಧ ಕಾಲದಲ್ಲಿ ಅನುಸರಿಸಿದ್ದ ಸರಕಾರ ಘೋಷಣೆಯನ್ನು ಈಗಲೂ ಪಾಲಿಸಿದರೆ ಎಲ್ಲಾ ಸಂಗತಿಗಳೂ ಬದಲಾಯಿಸುವವು" ಎಂದರು. ರಶ್ಯವು ಸಹಕಾರಕ್ಕಾಗಿ ಸದಾ ಹಾತೊರೆಯುತ್ತಿದೆಯೆಂದೂ ತನ್ನ ಪಾಲಿಗರನ್ನು ಅರ್ಧಹಾದಿವರೆಗೆ ಬಂದು ಇದಿರುಗೊಳ್ಳಲು ಅದು ಸರ್ವದಾ ಸಿದ್ಧವಿದೆಯೆಂದೂ ವಿಶ್ಸಿನ್ಸ್ಕಿ ಘೋಷಿಸಿರುವರು. ಚೈನದ ದಕ್ಷಿಣದ ಫ್ರೆಂಚ್ ವಸಾಹತಾಗಿರುವ ಇಂಡೋ ಚೈನದಲ್ಲಿ ಸುಸಜ್ಜಿತ ಮತ್ತು ಅಧಿಕ ಸಂಖ್ಯಾಕ ಕಮ್ಯೂನಿಸ್ಟ್ ವೀಟ್‌ಮಿನ್ ಸೇನೆಗಳು ಹೋರಾಟ ಹೂಡಿದ್ದು, ಫ್ರೆಂಚ್ ಸೈನಿಕರು ಅವರನ್ನು ಪ್ರತಿಭಟಿಸಿ ನಿಲ್ಲಲಾರದೆ [illegible] ಹಿಂದೆ ಸರಿಯುತ್ತಿದ್ದಾರೆ. ಅಮೇರಿಕ ಮತ್ತು ಫ್ರೆಂಚ್ ಮಂತ್ರಿಗಳೊಳಗೆ ಈ ಕುರಿತು ವಿಚಾರ ವಿನಿಮಯ ನಡೆದ ವೇಳೆ ಅಮೇರಿಕವು ಇಂಡೋ ಚೈನದಲ್ಲಿರುವ ಫ್ರೆಂಚ್ ಸೈನಿಕರಿಗೆ ಕೂಡಲೇ ಶಸ್ತ್ರಸಹಾಯವೊದಗಿಸುವ ಆಶ್ವಾಸನೆ ಕೊಟ್ಟಿದೆ, ಸಹಾಯ ಬರುತ್ತಿದೆ. ಬ್ರಿಟನು ಶಸ್ತ್ರಧಾರಣ ಪುನರ್ಘಟನೆಯ ಆಲೋಚನೆ ತಯಾರಿಸಿಕೊಂಡು ಆ ಸಂಬಂಧವಾಗಿ ಅಮೇರಿಕದ ಸಹಾಯ ಪಡೆಯುವ ಒಪ್ಪಂದವೊಂದನ್ನು ಮಾಡಿಕೊಂಡಿದೆ. ಶಾಂತ ಸಮುದ್ರ ವಲಯದ ರಾಷ್ಟ್ರಗಳ ಬಾಂಧವ್ಯ ಸಮ್ಮೇಳನವು ಕಳೆದ ವಾರದಿಂದ ಲಕ್ನೋದಲ್ಲಿ ನೆರೆದಿದ್ದು ಅಲ್ಲಿ ಪ್ರಾಮುಖ್ಯ ಪರ್ಯಾಲೋಚನೆಗಳು ನಡೆದಿವೆ.

ಉಡುಪಿ

ಡಾ। ಕೆ. ಎಮ್. ರೈಗಳಿಗೆ ಸತ್ಕಾರ ಸಮಾರಂಭ—ಮದ್ರಾಸಿನ ಪ್ರೊಫೆಸರ್ ಒಫ್ ರೇಡಿಯೋಲಜಿ ಮತ್ತು ಬರ್ನಾರ್ಡ್ ಇನ್ಸ್ಟಿಟ್ಯೂಟಿನ ಡೈರೆಕ್ಟರ್ ಆದ ಡಾ। ಕೆ ಎಮ್ ರೈಗಳಿಗೆ ಇದೇ ತಾ. 16ರಲ್ಲು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಡಾ। ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದು ನಡೆಯಿತು. ಉಪಾಹಾರವಾದ ಬಳಿಕ ವಕೀಲ್ ಕೆ ಜೆ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಅಸಿಸ್ಟೆಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಪಿ ಕೆ ಸೆಟ್ಟರು ಸ್ವಾಗತ ಮಾನಪತ್ರ ಮನ್ನೋದಿ ಮಾನ್ಯ ಅತಿಥಿಗೆ ಸಮರ್ಪಿಸಿದರು. ಸಭಿಕರ ಕಡೆಯಿಂದ ಡಾ। ಎಸ್. ಆರ್ ಪೈ, ಡಾ। ಕೆ ಎಲ್. ಐತಾಳ್, ಶ್ರೀ ಬಿ ಶ್ಯಾಮರಾಯ ಸೆಟ್ಟರು ಡಾ। ರೈಗಳಲ್ಲಿರುವ ಅಮೂಲ್ಯ ಗುಣಗಳನ್ನೂ ಸ್ವಪ್ರಯತ್ನ ಮತ್ತು ಪರಿಶ್ರಮಗಳಿಂದ ಅವರಿಂದು ಗಳಿಸಿರುವ ಉನ್ನತ ಸ್ಥಾನವನ್ನೂ ವಿವರಿಸಿ ಭಾಷಣ ಮಾಡಿದರು. ಡಾ। ರೈಗಳು ತಮಗಿತ್ತ ಸತ್ಕಾರಕ್ಕಾಗಿ ಆಭಾರ ಸೂಚಿಸಿ ತನ್ನ ಜೀವನದ ಕೆಲ ಘಟನೆಗಳನ್ನು ವಿವರಿಸಿ ಸತತೋದ್ಯೋಗದಿಂದ ಸಫಲತೆ ಪಡೆಯಬಹುದೆಂದರು. ಅಧ್ಯಕ್ಷರು ನಮ್ಮ ಜಿಲ್ಲೆಯ ಕೆಲವೊಂದು ವ್ಯಕ್ತಿಗಳನ್ನು ವಿವರಿಸಿ, ಡಾ। ರೈಗಳು ಪಡೆದಿರುವ ಗೌರವಸ್ಥಾನ ಜಿಲ್ಲೆಗೆ ಭೂಷಣಪ್ರಾಯವಾಗಿದೆ ಎಂದರು. ಶ್ರೀ [illegible] ಶಿವರಾಮ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಈ [illegible] ಡಾ। [illegible] ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ [illegible] ಜನ್ಮ ದಿನ [illegible] ಒಂದು ವಿಷಯಗಳ [illegible] ಶ್ರೀ [illegible] ಭಾಷಣ ಮಾಡಿದರು, [illegible]

ಎಮ್ ಜಿ ಎಮ್ ಕಾಲೇಜಿನಲ್ಲಿ ಇದೇ ತಾ. 10ರಲ್ಲಿ [illegible] ಭಾಷಣವಿತ್ತರು. ತಾ. 13ರಲ್ಲಿ ಶ್ರೀ ಗೋಪಾಲಕೃಷ್ಣ [illegible] ದನದೊಂದಿಗೆ ಪ್ರತಿಭಾವಂತ ಸಂಗೀತ [illegible] ಶ್ರೀ ಕೆ ಕೆ [illegible] ನಡೆಯಿತು. ತಾ. 14ರಲ್ಲಿ ಕಾಲೇಜು ಭಾಷಾ ಸಂಘದ ಸಾಹಿತ್ಯೋತ್ಸವವು ಶ್ರೀ ಕೆ ಸಂಜೀವಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೌಲಗಿ ಶೇಷಾಚಾರ್ಯರು 'ನಾಟಕದ ಕುರಿತು' ಉಪನ್ಯಸಿಸಿದರು. ಕಾವ್ಯವಾಚನವಾಗಿ ಶ್ರೀ ಮಂಜನಾಥಯ್ಯನವರ ಪಿಟೀಲುವಾದನದೊಂದಿಗೆ ಶ್ರೀ ರಾಜಗೋಪಾಲಾಚಾರ್ಯರ ಸಂಗೀತ ನಡೆಯಿತು.

ಡಾ। ಯು ಕೃಷ್ಣರಾಯರಿಗೆ ಮಾನಪತ್ರ—ಮದ್ರಾಸಿನ ಡಾ। ಯು. ಕೃಷ್ಣರಾಯರಿಗೆ ಇದೇ ತಾ 10ರಲ್ಲು ನಗರಸಭೆಯ ಪರವಾಗಿ ವೈಸ್ ಚೆಯರ್ ಮೇನ್ ಶ್ರೀ ಎ ಬಿ ಕೃಷ್ಣರಾಜರು ಮಾನಪತ್ರವೊಂದನ್ನು ಅರ್ಪಿಸಿದರು. ಮುನಿಸಿಪಲ್ ಕಮಿಶನರರು ಪರಿಚಯಾತ್ಮಕ ಭಾಷಣ ಮಾಡಿದರು. ಡಾ। ಕೃಷ್ಣರಾಯರು ಮಾನಪತ್ರವಿತ್ತುದಕ್ಕಾಗಿ ನಗರಸಭೆಯ ಉಪಕಾರ ಸ್ಮರಿಸಿದರು. ಶ್ರೀ ಟಿ ರಮೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಮರಕಡ ಗಿರಿಜ ಸೆಟ್ಟಿಯವರ ನಿಧನ—ಜಿಲ್ಲಾ ಮೆಡಿಕಲ್ ಆಫೀಸರಾಗಿದ್ದ ದಿ। ಬಿ ರಾಮಣ್ಣ ಶೆಟ್ಟಿ ವಿಧವೆ ಮರಕಡ ಗಿರಿಜ ಶೆಟ್ಟಿಯವರು ದೀರ್ಘಕಾಲದಿಂದ ಕಾಯಿಲೆಯಿಂದಿದ್ದು ಇದೇ ತಾ 11ರಲ್ಲಿ ಮೃತರಾಗಿರುವರೆಂದು ವಿಷಾದಿಸುತ್ತೇವೆ. ಇವರು ಅತ್ಯಂತ ಗುಣವತಿಯಿದ್ದು ಸಮಾಜ [illegible] ಸ್ತ್ರೀ ವಿದ್ಯಾಸಂಗಕ್ಕೆ ಪಾತ್ರರಾಗಿದ್ದರು. ಇವರ ಆತ್ಮಕ್ಕೆ ಶಾಂತಿಯನ್ನು ಕೋರುವದಲ್ಲದೆ ಬಂಧು ಬಳಗ ಮತ್ತು ಮಕ್ಕಳ ದುಃಖದಲ್ಲಿ ಸಹಾನುತಾಪ ಪಡುತ್ತೇವೆ.

THE
Pangal Nayak Bank, Ltd, Katapadi, S K.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ ಕ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮ ಪ್ರಕಾರ ನೋಟೀಸು ವ ರಿಜಿಸ್ತ್ರೀ ನೋಟೀಸು ಕೊಟ್ಟಾಗ್ಯೂ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ತ್ರೀ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಐವೇಜುಗಳನ್ನು ಇದೇ ತಾರೀಕು 24 10–1950ನೇ ಮಂಗಳವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಒಡವಿಟ್ಟ ಎಲ್ಲಾ ಚಿನ್ನಾಭರಣಗಳನ್ನು ಇದೇ ತಾರೀಕು 28– 0 1950ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ತಿಳಿದಿರಲಿ

ಲೋನು ನಂಬ್ರ	ಒಡವಿಟ್ಟವರ ಹೆಸರು ಮತ್ತು ವಿಳಾಸ
484/48 1174/48, 1301/48, 1903/48 ಮತ್ತು 273/49	ಯು ಗಣಪತಿಆಚಾರ್ಯ, ಲಕ್ಷ್ಮಣಾಚಾರ್ಯರ ಮಗ, ಗೋಲ್ಡ್‌ಸ್ಮಿತ್, ಕಟಪಾಡಿ ದ ಕ
1242//48	ಗೋಪಸೆಟ್ಟಿ, ತನ್ನಯ್ಯಸೆಟ್ರ ಅಳಿಯ, ಪ್ರೋಸಾರು, ಮೂಡಬೆಟ್ಟು ಕಟಪಾಡಿ, ದ ಕ
2319/48	ದೂಮ ಮುಕಾರಿ, ಪಿಜಿನ ಮುಕಾರಿ ಅಳಿಯ, ಏಣಗುಡ್ಡೆ ಗ್ರಾಮ, ಕಟಪಾಡಿ ದ ಕ
134/49 ಮತ್ತು 305/49	ಕೆ. ವಾಸುದೇವಶೆಣೈ, ಕೆ ಚರಡಪ್ಪ ಶ್ಯಾನುಬಾಗರ ಮಗ, ಕಟಪಾಡಿ, ದ ಕ
440/49	ದೇಜುಪೂಜಾರಿ ಚಲ್ಲ ಪೂಜಾರಿ ಅಳಿಯ, ಏಣಗುಡ್ಡೆ ಗ್ರಾಮ, ಕಟಪಾಡಿ, ದ ಕ
661/49	ಮುತ್ತು ಪೂಜಾರ್ತಿ ಕೇಶಿಪೂಜಾರ್ತಿ ಮಗಳು, ಕೋಟೆಗ್ರಾಮ, ಕಟಪಾಡಿ, ದ.ಕ
658/49, 7 3/49 ಮತ್ತು 932/49	ಕೆ ರಾಘವೇಂದ್ರ ಕಾಮತ್, ಅಣ್ಣಯ್ಯ ಕಾಮತರ ಮಗ, ಕೋಟೆ ಗ್ರಾಮ, ಕಟಪಾಡಿ, ದ ಕ
764/49	ಪಿ ಕೃಷ್ಣಭಟ್ಟ, ವಿಷ್ಣುಮೂರ್ತಿ ಭಟ್ರ ಮಗ, ಕುಕ್ಕೆಹಳ್ಳಿ ಗ್ರಾಮದ ನೂಜಿ, ಕಾರ್ಕಳ, ದ ಕ

Office of the Bank,
Katapadi S K.
Dated 10th October 1950

P. S. Nayak,
AGENT

Notice

ಕಾಸರಗೋಡು ಡಿ. ಮು ಕೋರ್ಟಿನಲ್ಲಿ

S C No 150/1950

ಕೆ. ಅಬ್ಬಾಸ್ ಬ್ಯಾರಿ —ವಾದಿ

ಬಿ ಭವಾನಿಶಂಕರ ರಾವ್, ಬಿ ಮಾಧವರಾಯರ ಮಗ, Special Re enue Inspector for Political Sufferers, ಕಾಸರಗೋಡು ಕಸಬೆಯಲ್ಲಿರುವವ

—ಪ್ರತಿವಾದಿ

ಪ್ರತಿವಾದಿಯು ವಾದಿಗೆ ಕೈಕಾಗದ ಪ್ರಕಾರ ಕೊಡಬೇಕಾದ ಐವೇಜಿಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 30-10-1950ಕ್ಕೆ ತನಿಖೆಗೆ ಇಟ್ಟಿರುವ ಸಂಗತಿ ತಿಳಿಸಲಾಗಿದೆ

(Sd.) P AHMAD,

Advocate for Plaintiff.

ಕಾಸರಗೋಡು 15-10-50

ಮಂಗಳೂರು

ದಕ್ಷಿಣ ಭಾರತ ಡಾಕ್ಟರರ ಪರಿಷತ್ತು ಇದೇ ತಾ. 13ರಲ್ಲು ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಮದ್ರಾಸಿನ ಡಾ॥ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಪ್ರಾತಃಕಾಲ ನಿಯೋಜಿತ ಅಧ್ಯಕ್ಷರ ಸ್ವಾಗತವಾದ ನಂತರ ಮುನಿಸಿಪಲ್ ಚೆಯರ್‌ಮೆನ್ ಶ್ರೀ ಎಲ್. ಸಿ. ಪಾಯುಸರು ರಾಷ್ಟ್ರಧ್ವಜವನ್ನು ಅರಳಿಸಿದರು. ಡಾ. ಯು. ಪಿ. ಮಲ್ಯರು ಸ್ವಾಗತ ಭಾಷಣ ಮಾಡಿದರು. ಬಳಿಕ ಮದ್ರಾಸ್ ಸರಕಾರದ ಸರ್ಜನ್ ಜನರಲರಾದ ಡಾ॥ ಡೇವಿಡ್, ಅವರು ಪರಿಷತ್ತಿನ ಉದ್ಘಾಟನೆಯನ್ನು ನೆರವೇರಿಸುತ್ತ 'ನಮ್ಮ ಪ್ರಾಂತದ ಅತ್ಯುತ್ತಮ' ಶ್ರೇಣಿಯ ಡಾಕ್ಟರರು ಈ ಜಿಲ್ಲೆಯಿಂದ ಬಂದವರು ಎಂದರು.

ಡಾ॥ ಕಿಣಿಯವರು ಪರಿಷತ್ತಿಗೆ ಶುಭವನ್ನು ಕೋರಿಬಂದಿದ್ದ ಪ್ರಾಂತದ ಪ್ರಧಾನಿ ಕುಮಾರ ಸ್ವಾಮಿ ರಾಜಾ, ಆರೋಗ್ಯಮಂತ್ರಿ ಡಾ. ರಾಜನ್, ಕೃಷಿಮಂತ್ರಿ ಎ. ಬಿ. ಸೆಟ್ಟಿ, ಕಂದಾಯ ಮಂತ್ರಿ ಸೀತಾರಾಮ ರೆಡ್ಡಿ, ಮೈಸೂರಿನ ಮುಖ್ಯ ಮಂತ್ರಿ ಚೆಂಗಲರಾಯ ರೆಡ್ಡಿ ಮೊದಲಾದವರ ಸಂದೇಶಗಳನ್ನು ಓದಿದರು. ವೈದ್ಯಕೀಯಕ್ಕೆ ಸಂಬಂಧಪಟ್ಟ ಪ್ರದರ್ಶನದ ಉದ್ಘಾಟನೆಯು ಜಿಲ್ಲೆಯ ಬಿಶೋಪರಿಂದ ನೆರವೇರಿತು. ಡಾ॥ ಕೃಷ್ಣರಾಯರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುತ್ತ ಡಾ॥ ಎ ಎಫ್. ಕ್ಯೊಲೊ ಅವರು ವೈದ್ಯಕೀಯ ಪ್ರಪಂಚಕ್ಕೆ ಡಾ॥ ಕೃಷ್ಣರಾಯರು ಹಾಗೂ ಅವರ ಪೂಜ್ಯ ಪಿತ ಡಾ॥ ಯು. ರಾಮರಾಯರು ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ಡಾ॥ ಶಿಣೆ ಅವರು ಕೃಷ್ಣರಾಯರ ಹೆಸರನ್ನು ಅನುಮೋದಿಸಿದ ಬಳಿಕ ದ. ಭಾರತ ಡಾಕ್ಟರರ ಸಂಘದ ನಿವೃತ್ತ ಅಧ್ಯಕ್ಷ ಡಾ॥ ರಾಘವನ್, ಅವರು ಹೊಸ ಅಧ್ಯಕ್ಷರಿಗೆ ಹಾರವನ್ನರ್ಪಿಸಿದರು. ಅನಂತರ ಡಾ॥ ಕೃಷ್ಣರಾಯರು ಅಗ್ರಪೀಠದಿಂದ ತಮ್ಮ ಅಧ್ಯಕ್ಷ ಭಾಷಣ ಮಾಡುತ್ತಾ ಹೀಗೆಂದರು: "ಸ್ವಾತಂತ್ರ್ಯದ ಜತೆಗೆ ನಮ್ಮ ಹೆಗಲೇರಿರುವ ಹೊಣೆಯನ್ನು ಸಮರ್ಥತೆಯಿಂದ ನಿರ್ವಹಿಸಿಕೊಳ್ಳುವಂತಾಗಬೇಕಾದರೆ ಜನತೆಯ ಆರೋಗ್ಯ ಸುಧಾರಿಸಲು ಅನುಕೂಲವಾಗುವಂತೆ ವೈದ್ಯಕೀಯ ತಜ್ಞರ ಸಂಖ್ಯೆ ಬೆಳೆದು ಬರಬೇಕು. ದೇಶದ ಅಭಿವೃದ್ಧಿಯು ಜನತೆಯ ಆರೋಗ್ಯವನ್ನೇ ಅವಲಂಬಿಸಿರುವುದರಿಂದ, ಆರೋಗ್ಯ ಸಂವರ್ಧನೆಯಲ್ಲಿ ಚಿಕಿತ್ಸಕರ ಹೊಣೆ ಅಪಾರವಾಗಿದೆ. ಸುಧಾರಿಸಿದ ಪಾಶ್ಚಾತ್ಯ ರಾಷ್ಟ್ರಗಳೊಡನೆ ಭಾರತವನ್ನು ತುಲನೆಮಾಡಿದರೆ, ಆರೋಗ್ಯ ಸಂವರ್ಧನೆಯ ಎಲ್ಲ ಮುಖಗಳಲ್ಲಿಯೂ ನಾವು ಹಿಂದುಳಿದಿರುವುದು ಸ್ಪಷ್ಟ. ತಜ್ಞ ಚಿಕಿತ್ಸಕರ ಕೊರತೆ ನಮ್ಮಲ್ಲಿ ಅತಿಯಾಗಿದೆ" ಎಂದರು.

ಅಭ್ಯಾಸ ಗೋಷ್ಠಿ:—ಲೋಕ ಸೇವಾ ಸಂಘದ ಆಶ್ರಯದಲ್ಲಿ ಗಾಂಧಿ ಜಯಂತಿಯ ಕೊನೆಯ ದಿನದಂದು ಅಭ್ಯಾಸ ಗೋಷ್ಠಿಯನ್ನು ಡಾ॥ ಮಲ್ಯರು ಉದ್ಘಾಟಿಸಿದರು. ನಂತರ ನಾಸಿಕ ಕಾಂಗ್ರೆಸಿನ ಠರಾವುಗಳ ವಿಮರ್ಶೆಯ ಗೋಷ್ಠಿ ನಡೆಯಿತು. ಶ್ರೀಗಳಾದ ಎಚ್. ಆರ್. ಮಲ್ಯ, ಕೆ. ಕೆ. ಸೆಟ್ಟಿ, ಕೆ. ಆರ್. ಆಚಾರ್ ಮೊದಲಾದವರು ಗೋಷ್ಠಿಯಲ್ಲಿ ಪ್ರಮುಖ ಭಾಗವಹಿಸಿದ್ದರು.

ಜಿಲ್ಲಾ ಬೋರ್ಡಿನ ಸಭೆಯು: ಕಳೆದ ತಾ. 6ರಲ್ಲಿ ಜರಗಿದಾಗ ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ಆರಂಭಿಸಲಾಗಿದ್ದ ಕೃಷಿ ಅಭ್ಯಾಸವನ್ನು ತಾತ್ಕಾಲಿಕವಾಗಿ ಕೊನೆಗೊಳಿಸಲು ನಿರ್ಧರಿಸಿತಲ್ಲದೆ ಮುಂದಿನ ವರ್ಷದಿಂದಲಾದರೂ ಈ ವರ್ಗವನ್ನು ತೆರೆಯಲನುಕೂಲವಾಗುವಂತೆ ಕೃಷಿ ಪಾಠ ಕಲಿಸಬಲ್ಲ ಅಧ್ಯಾಪಕರನ್ನು ಒದಗಿಸಿಕೊಡಬೇಕೆಂದು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು. ಅಸ್ಸಾಮ್ ನಿಧಿಗೆ ಒಂದು ನೂರು ರೂಪಾಯಿ ಅರ್ಪಿಸಲು ಸರಕಾರದ ಅನುಮತಿ ಕೇಳಲಾಯಿತು. ಸ್ತ್ರೀಯರಿಗೂ ಕಾಲೇಜಿಗೆ ಹೋಗದೆ ಇಂಟರ್ ಮತ್ತು ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳುವ [illegible] ಲ ಕಲ್ಪಿಸುವಂತೆ [illegible] ವಿಶ್ವವಿದ್ಯಾಲಯವನ್ನು ವಿನಂತಿ[illegible]. ಮಂಗಳೂರು-[illegible] ರಸ್ತಾಗಿ ಆರಸಾಳು ಅಥವಾ ಆನಂದಪುರಕ್ಕೆ ರೈಲ್ವೆಮಾರ್ಗವನ್ನು ರಚಿಸುವಂತೆ ಕೇಂದ್ರ ಸರಕಾರವನ್ನು ವಿನಂತಿಸುವ ಶ್ರೀ ಕೆ. ಸದಾಶಿವ ಸೆಟ್ಟರ ನಿರ್ಣಯವು ಮಾನ್ಯವಾಯಿತು. ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ವಿದ್ಯಾ ಸಮಿತಿಗೆ ಆರಿಸಲ್ಪಟ್ಟರು.

ಶಿರ್ವ—ಗೊಬ್ಬರ ಸಪ್ತಾಹ ಸಂಬಂಧದ ಸಭೆಯೊಂದು ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ನೇತೃತ್ವದಲ್ಲಿ ಸ್ಥಳೀಯ ಹಿಂದೂ ಹಾ. ಎ ಶಾಲಾಕಟ್ಟಡದಲ್ಲಿ ಜರಗಿ ಅವರ ಮತ್ತು ಊರ ಮಹನೀಯರ ಭಾಷಣಗಳಾದುವು.

NOTICE

In the Court of the Subordinate judge of south Canara

O. S No. 184/50

Between

Ganesha Bhatta —Plaintiff

Vs

Subraya Bhatta & others —Defendants.

To

5th Defendant: Krishna Bhatta, son of Subraya Bhatta, residing at Kanyala Melinamoole of bayar village of Kasaragode Taluk.

Take notice that the Plaintiff above named has instituted the abovesuit against you for the recovery of arrears of rent due and for such other reliefs and the same is posted to 13-11-1950 for your appearance. if you fail to appear on that date either in person or through a duly authorised lawyer the suit will be decided in your absence.

By order of the court

(S) S. Venkat Rao,

Vakil for Plaintiff.

Mangalore, 12-10-1930.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. No. 184/50

ಬಪ್ಪಡಿ ಅಬ್ದುಲ್ಲ ರಹಿಮಾನ್ ಬ್ಯಾರಿ —ವಾದಿ.

ಅಬ್ದುಲ್ಲ —ಪ್ರತಿವಾದಿ.

ಇವರೊಳಗೆ ತಾ. 14-10-50.

ಸದ್ರಿ ಪ್ರತಿವಾದಿ ಅಬ್ದುಲ್ಲರವರಿಗೆ—

ನೀವು ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಐವೇಜನ್ನು ವಸೂಲು ಮಾಡುವರೆ ಮೇಲ್ಕಂಡ ವ್ಯಾಜ್ಯವನ್ನು ವಾದಿಯು ದಾಖಲು ಮಾಡಿದ್ದಾಗಿರುತ್ತದೆ. ಸದ್ರಿ ವ್ಯಾಜ್ಯವು ತಾ. 24-10-50ಕ್ಕೆ ತನ್ನಿಖೆಗೆ ಇಟ್ಟಿರುತ್ತದೆ. ಆದ್ದರಿಂದ ನೀವು ಖುದ್ದಾಗಲೀ ವಕೀಲರ ಮುಖಾಂತ್ರವಾಗಲಿ ಆ ದಿವಸ ಬೆಳಿಗ್ಗೆ 11 ಗಂಟೆಗೆ ಹಾಜರಾಗದಿದ್ದ ಪಕ್ಷದಲ್ಲಿ ನಿಮ್ಮನ್ನು ಎಕ್ಸಪಾರ್ಟೆ ಮಾಡಿ ತೀರ್ಪು ಕೊಡೋಣಾದೀತು ಎಂತ ಈ ಮೂಲಕ ತಿಳಿಸೋಣಾಗಿದೆ.

(Sd.) C. Abdulla,

Advocate for Plaintiff.

ಕಾಸರಗೋಡು, ತಾ. 14-10-50.

ವಿಜಯ ಬ್ಯಾಂಕ್, ಲಿಮಿಟೆಡ್, ಬ್ರಹ್ಮಾವರ- ದ. ಕ.

ಕೆಳಗೆ ಕಾಣಿಸಿದ ಜನರಿಗೆ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ, ನಗಗಳನ್ನು ಬಿಡಿಸಿಕೊಂಡು ಹೋಗದೆ ಇರುವುದರಿಂದಲೂ, ಮತ್ತು ಕೆಲವರು ಮೃತ ಪಟ್ಟಿರುವುದರಿಂದಲೂ ಸದ್ರಿಯವರು ಬ್ಯಾಂಕಿನಲ್ಲಿ ಪಡೆದ ಲೋನಿನ ಮೇಲೆ ಇಡಿರುವ ಚಿನ್ನಾಭರಣಗಳನ್ನು ಬರುವ ನವಂಬರ ತಾ. 6ರ ಒಳಗೆ ಹಣಪಾವತಿ ಮಾಡಿ ಬಿಡಿಸಿಕೊಂಡು ಹೋಗದಿದ್ದಲ್ಲಿ ನವಂಬರ 11ನೇ ಶನಿವಾರ ಅಪರಾಹ್ನ ಗಂಟೆ 3-30ಕ್ಕೆ ಅಥವಾ ಅನಂತರ ಯುಕ್ತ ಕಂಡ ಇತರ ದಿನಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದೆಂದು ಈ ಮೂಲಕ ತಿಳಿಸಲಾಗಿದೆ.

ಲೋನು ನಂಬ್ರ	ಹೆಸರು	ಹಣ ರೂ.-ಆ.-ಪೈ
117/6-7	ಶ್ರೀ. ಎನ್. ಶ್ರೀನಿವಾಸ ಕಲ್ಕೂರ, S/o ಲಕ್ಷ್ಮಿನಾರಾಯಣ ಕಲ್ಕೂರ. ನೀಲಾವರ.	95-0-0
406/6-7	ಶೀನಪ್ಪ ಶೆಟ್ಟಿ. S/o. ಸುಬ್ಬಯ್ಯ ಶೆಟ್ಟಿ. ಹನೆಹಳ್ಳಿ ಗ್ರಾಮ. ಕೊಕ್ಕರ್ಣೆ,	200-0 0
478/6 7	ಕೃಷ್ಣಯ್ಯ ಶೆಟ್ಟಿ. S/o ತುಂಗಮ್ಮ ಶೆಡ್ತಿ, ಹಂದಾಡಿ ಗ್ರಾಮ ಮಟಪಾ-ಬ್ರಹ್ಮಾವರ.	7-0-0
516/6-7	ಹಸನ್ ಮೈದಿನ್. S/o. ಮೈದಿನ್ ಸಾಹೇಬ್. ಚಜ್ಜೂರ್ ಗ್ರಾಮ, ಬಾರಕೂರು.	9-0-0
580/6-7	ಎ. ಪಿ. ಸಿ. ಲೂವಿಸ್. ಬ್ರಹ್ಮಾವರ.	33-12-0
628/6-7	ಎನ್. ಶ್ರೀನಿವಾಸ್ ಕಲ್ಕೂರ. S/o. ಲಕ್ಷ್ಮಿನಾರಾಯಣ ಕಲ್ಕೂರ. ನೀಲಾವರ.	100-0-0
507/7-8	ಬಿ. ಶೀನಪ್ಪ ಶೆಟ್ಟಿ. N/o. ಮಂಜಯ್ಯ ಶೆಟ್ಟಿ. ಹಂದಾಡಿ ಗ್ರಾಮ, ಬ್ರಹ್ಮಾವರ.	100-0-0
822/8-9	ನಂದ್ಯಪ್ಪ ಶೆಟ್ಟಿ. ಹಲ್ನಾಡ್.	750-0-0

Brahmavar
Date 14-10-50 } K Bhujanga Hegde Agent.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ. ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 371/1950

ಲುವಿಸ್ ಪಿಂಟೋ —ವಾದಿ

ಮತ್ತು

ಅಬ್ದುಲ್ ಹಮ್ಮದ್ ಸಾಹೇಬ ಕೂಡಾ —ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ ಉಡುಪಿ ತಾಲೂಕು ಹಾರಾಡಿ ಗ್ರಾಮದಲ್ಲಿರುವ ಅಬ್ದುಲ್ ರಹಿಮಾನ್ ಸಾಹೇಬರ ಮಗ ಶಾಬುದ್ದೀನ್ ಸಾಹೇಬರಿಗೆ.

ತಾ. 5-9-1936ರಲ್ಲು ರಿ. ನಂ 1ನೇ ಪ್ರತಿವಾದಿಯು ವ ವಾದಿಯ ಪೂರ್ವಾಧಿಕಾರಿ ಕೂಡಾ ಮಾಡಿಕೊಂಡ ಮೂಲಗೇಣಿ ಚೀಟು ಪ್ರಕಾರ ವಾದಿಗೆ 1ನೇ ಪ್ರತಿವಾದಿಯಿಂದ ಕಳೆದ ವಿರೋಧಿ ಸಂ॥ರಕ್ಕೆ ಬರತಕ್ಕ ಗೇಣಿ, ಬಡ್ಡಿ ವಗೈರೆಯನ್ನು 1ನೇ ಪ್ರತಿವಾದಿಯ ದೇಹ ಜವಾಬುದಾರಿಯಿಂದ್ಲೂ, 2ನೇ ಪ್ರತಿವಾದಿಗಾದ ಟ್ರಸ್ಟಫರಿನ ಉಜ್ರ ಶಿವ್ಯಾ ಮೂಲಗೇಣಿಗೆ ಕಾರಣವಾದ ಆಸ್ತಿ ಮಾರಾಟದಿಂದ್ಲೂ, ಬರಮಾಡಿಕೊಳ್ಳುವರೇ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 7-11-50ಕ್ಕೆ ತನ್ನಿಗೆ ಇಟ್ಟಿರುವುದ್ರಿಂದಾ, 2ನೇ ಪ್ರತಿವಾದಿಯು ತನ್ನ ಉದಾಹರಣೆ ಇದ್ದರೆ ಸದ್ರಿ ದಿವಸ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಪ್ರತಿಪಾದಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಅವನ ಗೈರುಹಾಜ್ರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. Vasudeva Rao

Councel for Plaintiff

Camp Udipi, 14-10-50

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 161/1950

ಮಾಧವ ಪ್ರಭು, ಸುಬ್ರಾಯ ಪ್ರಭು ಮಗ, ಕೆಮ್ಮಿಂಜಾ ಗ್ರಾಮ, ಪುತ್ತೂರು ತಾಲ್ಲೂಕು —ವಾದಿ

ನೇಮಿರಾಜಶೆಟ್ಟಿ, ನೇಮಣ್ಣ ಶೆಟ್ಟಿ, ಮಗ, ನರಿಮೊಗ್ರು ಗ್ರಾಮದ ಕೈರಂಗಳ, ಪುತ್ತೂರು ತಾಲ್ಲೂಕು. —ಪ್ರತಿವಾದಿ

ಮೇಲಿನ ಕೋರ್ಟಿನಲ್ಲಿ, ಮೇಲಿನ ವಾದಿ, ಮೇಲಿನ ಪ್ರತಿವಾದಿ ಮೇಲೆ ದಾಖಲು ಮಾಡಿದ, ಮೇಲಿನ ನಂಬ್ರ ಪ್ರತಿವಾದಿ ಹಾಜರಾತಿ ಬಗ್ಗೆ ತಾ. 24-10-50ಕ್ಕೆ ವ್ಯಾದಯಿಟ್ಟಿದೆ. ಆ ದಿವಸ ನಂಬ್ರ ಕರೆದಾಗ ಪ್ರತಿವಾದಿ ಹಾಜರಾಗಿ, ವ ವಕೀಲ್ ಮೂಲಕ ತನ್ನ ಸಾಧನೆ ಯಿದ್ದರೆ, ಹೇಳಿಕೊಳ್ಳತಕ್ಕದ್ದು, ತಪ್ಪಿದ್ರೆ, ಏಕಪಕ್ಷ ವಿಚಾರಣೆಯಿಂದ ನಂಬ್ರ ತೀರ್ಮಾನಿಸೋಣಾಗುವದು ಎಂತ ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸಿಯದೆ.

K. K. Shenai

Vakil for Plff.

ರಸನಿಮಿಷ

ಅಮೇರಿಕದ ಲೈಫ ಪತ್ರಿಕೆ ನೆಹರೂ ಅವರ ವಿದೇಶೀಯ ಧೋರಣೆಯ ಮೇಲೆ ಅಸಂತೋಷ, ಅಸಮಾಧಾನ ಇತ್ಯಾದಿಗಳನ್ನು ಪರೋಕ್ಷದಲ್ಲಿ ವ್ಯಕ್ತಪಡಿಸಿದೆ

—ಕಿಪ್ಲಿಂಗ್ ಬರೆದ ಹಾಗೆ East is East, West is West... ಪೂರ್ವ ಪೂರ್ವವೇ, ಪಡುವಲು ಪಡುವಲೇ...

oo oo

ಜೋಗೇಂದ್ರನಾಥ ಮಂಡಲ ಅವರು ಭಾರೀ ಹಿಂದೂ ಪಕ್ಷಪಾತಿಗಳಾಗಿ ಬಿಟ್ಟು ಘೋಷಣೆ ಹೊರಡಿಸಿದ್ದಾರೆ.

—ಕೆಲವರಿಗೆ ಕೆಟ್ಟ ಮೇಲೆಯೇ ಬುದ್ಧಿ ಬರುವುದು.

oo oo

ಸಿಂಗಾಪುರಕ್ಕೆ ಗಾಳಿಯ ಸಂಬಂಧ ವಿರ್ಪಟ್ಟಿತು.

—ಅದರೂ ಬಿಳಿಜನರಿಗೆ ಅತ್ತ ಕಡೆಯ ಸಂಬಂಧ ಕಡಿದು ಹೋಗುವ ಸಂದರ್ಭ ಇರಬಹುದಂತೆ.

oo oo

ಇಂಗ್ಲೆಂಡಿನ ಕಿಂಗ್ ಜಾರ್ಜ್ರ ಅವರ ರೈಲುಗಾಡಿ ಹದಿನಾರು ನಿಮಿಷ ತಡವಾಯಿತಂತೆ.

—ಅದೇನು ಮಹಾ! ನಾನು ಕುಳಿತ ಭಾರತೀಯ ಗಾಡಿ ಒಂದು ಸಲ ಹದಿನಾರು ಗಂಟೆ ತಡವಾಗಿದೆ.

oo oo

ಪಾಕಿಸ್ತಾನಕ್ಕೂ ಭಾರತಕ್ಕೂ ಇಂಡೋ-ಪಾಕ್ ಸಂಧ್ಯನಂತರದ ವಾಗ್ಯುದ್ಧ ಆರಂಭವಾಗಿದೆ.

—ಅಷ್ಟರಲ್ಲೇ ಮುಗಿದರೆ ಸಾಕು.

oo oo

ಶೈಗಾಳ ಎಳೆವವರು ದಿಲ್ಲಿಯಲ್ಲಿ ಪಂಡಿತ ನೆಹರೂ ಅವರನ್ನು ಭೇಟಿಯಾದರು.

ನೆಹರೂ ಅವರ ಗೋಳನ್ನು ಕೇಳಿದರು... ಗೋಳಿಲ್ಲದವರು ಯಾರು?

oo oo

ಚರ್ಚಿಲ್ಲರು ಡೆನ್ಮಾರ್ಕಿನಲ್ಲಿ ಐಕ್ಯ-ಯುರೋಪಿನ ಘೋಷಣೆ ಹೊರಡಿಸಿದರು

—ಒಬ್ಬ ಮೂರ್ಖ ಅದನ್ನು ನಿಭಜಿಸಲು ಒಂದು ದುರುಸು ಬಾಣದ ಬಾಂಬು ಎಸೆದನಂತೆ. ಅಳಲುತೀವೆ!

oo oo

ಸಿಂಗ್‌ಮನ್ ರ್ಹೀಯ ಅಧಿಕಾರ ದಕ್ಷಿಣ ಕೊರಿಯಾದಲ್ಲಿ ಮಾತ್ರ ನಡೆಯಬೇಕೆಂದು "ಯುನೋ" ವಿಧಿಸಿದೆ.

—ಇನ್ನು ಅವನೂ ತಿರುಗಿ ಬೀಳದಿದ್ದರಾಯಿತು.

oo oo

ಭಾರತದಲ್ಲಿ ಬೆಲೆಯನ್ನು ಇಳಿಸಲು ಕ್ರಮ ಕೈಕೊಳ್ಳಲಾಗುವುದು.

(ಮೆಹತಾಬ್ ಭಾಷಣ)

—ಈಗ ನಡೆಯುವುದು ಹಾಗಾದರೆ ಅಕ್ರಮ ಎಂದಾಯಿತು.

oo oo

ಮೊನ್ನೆ ಗಾಂಧೀ ಕಾಲೇಜಿಗೆ ಊರಿನ ನಾಗರಿಕರು ಮಣ್ಣು ಹೊತ್ತ ಮೇಲೆ ಉಡುಪಿಯ ಮಟ್ಟಿಗೆ "ಏನು ಮಣ್ಣು ಹೊತ್ತಿದ್ದಿ!" ಎಂಬ ಪ್ರಯೋಗವು ಅರ್ಥಶೂನ್ಯವಾಗಿದೆ

oo oo

ಬುದ್ಧಿ ಇದ್ದವರು ಈ ಲೋಕದಲ್ಲಿ ಕಡಮೆಯಾಗಿರುವುದೇ .....

(ಭಾಷಣದ ಅಂತ್ಯದಲ್ಲಿ)

—ನೀವು ಹೀಗೆ ಆಡಲು ಕಾರಣ.

(ಶ್ರೋತೃ ಅಂತರಾಳದ ಉತ್ತರ)

— ಕುಶಿ

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂ. 362/1950

ವಿಶ್ವನಾಥಾಚಾರ್ಯ, ವಿಷ್ಣುಮೂರ್ತಿ ಭಟ್ರ ಮಗ, ಯಿಂನೆಂಜೆ ಗ್ರಾಮ —ವಾದಿ.

ಮತ್ತು

ವಿಷ್ಣುಮೂರ್ತಿ ಭಟ್ಟ, ಅಣ್ಣಯ್ಯ ಭಟ್ರ ಮಗ, ಸದ್ರಿಗ್ರಾಮ —ಪ್ರತಿವಾದಿ

ವಾದಿಗೆ ಪ್ರತಿವಾದಿಯು ತನ್ನ ಕುಟುಂಬಾರ್ಥವಾಗಿ ತಾರೀಕು 2-2-1946ಲ್ಲಿ ರೂಪಾಯಿ 35 0-0ಕ್ಕೆ ಬರಕೊಟ್ಟ ದಿಮಾಂಡ ನೋಟಿನ ಅಸಲು ಬಡ್ಡಿ ಪೈಕಿ ತಾರೀಕು 8-2-1948ನೇ ಪರಪ್ರಕಾರ ವಸೂಲಾದ ರೂ. 21-1-0 ಕಳೆದು ಬಾಕಿ ರೂಪಾಯಿ 426-9-0ಕ್ಕೆ ಮಾಡಿದ ಮೋಕದ್ದಮೆಯು ತಾರೀಕು 27-10-1950ಕ್ಕೆ ತನ್ನಿಗೆಯಿಟ್ಟಿದೆ. ಪ್ರತಿವಾದಿಗೆ ಆಕ್ಷೇಪಣೆಯಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಕ್ವಚಿತ್ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ತಿಳಿಸಿಯದೆ,

K. Laxminarayana Aithal,
Vakil for Plaintiff.

ಉಡ್ಪಿ, ತಾರೀಕು 10-10-1950.

Notice

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. C. 648/50.

ಯಡ್ತರೆ ನಾರಾಯಣ ಸೆಟ್ಟಿ —ವಾದಿ

ದಾರ ಸೂರ. ಮನೆ ಮರ್ಲಿ ಮಗ, ಹಳೆ ಪೈಕ ಜಾತಿ, ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮದದೊಂಬೆ.

ಸದ್ರಿ ಪ್ರತಿವಾದಿಗೆ ತಿಳಿಯಪಡ್ಸಿದ್ದು.

ವಾದಿಯು ಪ್ರತಿವಾದಿಯಿಂದ ಬರ ಮೂಲಗೇಣಿ ಗೇಣಿ ಬಾಕಿ ವ್ಯವೇಜು ರೂ. 58-2-0ನ್ನು ಬರಮಾಡಿಕೊಳ್ಳುವರೇ ಸದ್ರಿ ಪ್ರತಿವಾದಿ ಮೇಲೆ ವಾಕಲ್ಲ ಮಾಡಿದ ಮೇಲಿನ ದಾವೆಯು ತಾ. 27-10-50ಕ್ಕೆ ಇಟ್ಟಿದೆ ಆ ಕುರಿತು ನಿಮ್ಮ ಉಜಾಹರಿ ಯಿದ್ರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸಿದ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು

Y Manjaya Shetty,
Advocate for Plffs

ಮೊಕ್ಕಾಂ ಕುಂದಾಪುರ, ತಾ. 8-10-50.

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ತರಾಭದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು

ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ ದೆಲ; ರೂ. 3; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F DS (N. J.)

Tollygunge CALCUTTA,

ಸ್ಟಾಕಿಸ್ಟರು ಶಹಾಕಂಪನಿ, ಮಂಗಳೂರು

ದಕ್ಷಿಣ ಕನ್ನಡ

ಅಜೆಕಾರು—ಕಳೆದ ವಾರ ಶಾಲಾ ಮರಾರದಲ್ಲಿ ಕುಂದಾಪುರ ಸಬ್ ಕಲೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಗೊಬ್ಬರದ ಸಪ್ತಾಹ ಮತ್ತು ಅಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರರಾದ ಶ್ರೀ. ಮುದ್ದಣ್ಣ ಸೆಟ್ಟರವರಿಂದ ಸುಧಾರಣಾ ರೀತಿಯ ಕೃಷಿಯ ಕುರಿತಾದ 4 ದಿನಗಳ ತರಬೇತಿ ಕ್ಲಾಸುಗಳೂ ಜರಿಗಿಸಲ್ಪಟ್ಟಿರುವುದು ತುಂಬಾ ಪ್ರಯೋಜನಕಾರಿಯಾಗಿರುವುದು.

ಕುರುಕಾಲು ಕಂಪೋಸ್ಟ್ ಗೊಬ್ಬರ ಸಪ್ತಾಹ:- ತಾ 2-10-50'ಲ್ಲಿ ಬಗ್ಗಡಿಕಲ್ ಸಂಟರಿನಲ್ಲಿ ನಿಶ್ಚಿತ ಸಭಾಧ್ಯಕ್ಷರಾದ ಶ್ರೀ. ಬಿ. ಶ್ರೀನಿವಾಸರಾಯರು ಕಂಪೋಸ್ಟ್ ಗೊಬ್ಬರದ ಮಹತ್ವಿಕೆಯನ್ನು ವರ್ಣಿಸಿ ಶ್ರೀ. ಕೆ. ಬಿಕ್ಕ ಪೂಜಾರಿಯವರಿಂದ ತಯಾರಿಸಲ್ಪಟ್ಟ ಕಂಪೋಸ್ಟ್ ಗೊಬ್ಬರದ ಹೊಂಡವನ್ನು ಉದ್ಘಾಟಿಸಿದನಂತರ ಮೆರವಣಿಗೆ ಹೊರಟು ಕುಂಜಾರು ಶಾಲಾ ವಠಾರದಲ್ಲಿ ಶ್ರೀ. ಬಿ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಅಧ್ಯಕ್ಷರಿಂದಲೂ, ಶ್ರೀ. ಕೆ. ಗಣಪಯ್ಯ ಶೆಟ್ಟರಿಂದಲೂ ಆಹಾರ ಅಭಾವದ ನಿವಾರಣೆಗಾಗಿ ಮಿಶ್ರ ಗೊಬ್ಬರ ಮತ್ತು ಹಟ್ಟಿ ಗೊಬ್ಬರದ ವ್ಯವಸ್ಥಿತ ಸಂಗ್ರಹಣೆಯ ಕುರಿತು ಯೋಗ್ಯ ಭಾಷಣಗಳಾದ ಬಳಿಕ ಅಲ್ಲಿ ಪಂಚಾಯತ ಬೋರ್ಡಿನಿಂದ ತಯಾರಿಸಲ್ಪಟ್ಟ ಕಂಪೋಸ್ಟ್ ಗೊಬ್ಬರದ ಹೊಂಡವನ್ನು ಅಧ್ಯಕ್ಷರು ಉದ್ಘಾಟಿಸಲು, ಗ್ರಾಮಸ್ಥರಿಂದಲೂ ವಿದ್ಯಾರ್ಥಿಗಳಿಂದಲೂ ಸದ್ರಿ ಹೊಂಡವು ಕಸಕಡ್ಡಿಗಳಿಂದ ತುಂಬಿಸಲ್ಪಟ್ಟು ಮಕ್ಕಳಿಗೆ ತಿಂಡಿ ಹಂಚಿ ಈ ಕೆಳಗಿನ ನಿರ್ಣಯಗಳನ್ನು ಮಾಡಲಾಯಿತು ಕುರುಕಾಲು ಗ್ರಾಮದಲ್ಲಿ ಪುರಾತನ ಕಾಲದ ನೀರಾವರಿಯ ದೆ 'ಹೊಸಕಾಡುಮದಗ' 'ಕುಂಜಾರುಗಿರಿಮದಗ', 'ಬೋವುಕೆರೆಮದಗ', 'ಕಟ್ಟದಕೆರೆಮದಗ', 'ಕುಳಿಬುಮದಗ', 'ದಾದೋರ್ಟಮದಗ'— ಇವು 6 ಸರಕಾರಿ ಸ್ಥಳದಲ್ಲಿ ದೊಡ್ಡ ದೊಡ್ಡ ಮದಗಗಳಿದ್ದು ಅವುಗಳು ಈಗ ಕುಸಿದು ನಾದುರಸ್ತಿಯಲ್ಲಿದ್ದುದರಿಂದ ಅವುಗಳನ್ನು ಪುನಃ ದುರಸ್ತಿ ಪಡಿಸಿದರೆ ಗ್ರಾಮದಲ್ಲಿ ಹೆಚ್ಚಿನ ಬೆಳೆಯಿಂದ ನೂರಾರು ಮುಡಿ ಅಕ್ಕಿ ಜಾಸ್ತಿ ಉತ್ಪತ್ತಿಯಾಗಲಿಕ್ಕಿರುವುದರಿಂದ ಸದ್ರಿ ಮದಗಗಳನ್ನು ಸರ್ಕಾರ್ಯಂದರಂತೆ ದುರಸ್ತಿ ಪಡಿಸುವ ಏರ್ಪಾಡು ಮಾಡಿಸುವ ಹಾಗೆ ಸಭಾಧ್ಯಕ್ಷರ ಮುಖಾಂತ್ರ ಮಾನ್ಯ ಜಿಲ್ಲಾ ಕಲೆಕ್ಟರ್ ಧೊರೆಗಳವರಿಗೆ ಬರಕೊಳ್ಳಬೇಕಾಗಿ ನಿಶ್ಚೈಸಲಾಯಿತು.

ಬಡಾಗ್ರಾಮ: ಇದೇ ಕಳೆದ ತಾ. 2-10 50ರಲ್ಲಿ ಗಾಂಧಿ ಜಯಂತಿಯನ್ನು ಈ ಗ್ರಾಮದ ಉಚ್ಚಿಲ ಸರಸ್ವತಿ ಹಾಯರ್ ಎಲಿಮೆಂಟರಿ ಶಾಲೆಯ ಅಧ್ಯಾಪಕರೂ, ಪಂಚಾಯತ ಬೋರ್ಡು ಪ್ರಸಿಡೆಂಟರೂ, ಊರ ಮಹನೀಯರೂ, ಸ್ಥಳೀಯ ಪಂಚಾಯತ ಬೋರ್ಡು ಆಫೀಸಿನ ಎದುರು ನೆರೆದು ಪಟೇಲ್ ಶ್ರೀ ಎಸ್. ರಾಮಸೆಟ್ರ ನೇತೃತ್ವದಲ್ಲಿ ಧ್ವಜಾರೋಹಣ ಸಮಾರಂಭವನ್ನು ಪೂರೈಸಿ ಸಾಯಂಕಾಲ ಶಾಲಾ ಮಕ್ಕಳ ಮೆರವಣಿಗೆಯಿಂದ ಉಚ್ಚಿಲ ದೇವಸ್ಥಾನದ ಎದುರು ಮೈದಾನಿನಲ್ಲಿ ಉಚ್ಚಿಲ ನರ್ಸ... ಶ್ರೀ ಗಾಬ್ರಿಲ್ ಸೋನ್ಸರಿಂದ ಮಿಶ್ರ ಗೊಬ್ಬರದ ಮಹತ್ವಿಕೆಯ ಕುರಿತು ಭಾಷಣಗಳು ಜರಗಿದವು.

ಕುಂಬಳೆ:-ದಕ್ಷಿಣ ಕನ್ನಡ ಜಿಲ್ಲೆಯ ಹರಿಜನರಲ್ಲಿ ಪ್ರಥಮವಾಗಿ ಎಂ. ಬಿ. ಬಿ. ಎಸ್. ಬಿರುದನ್ನು ಪಡೆದ ಇಲ್ಲಿನ ಡಾಕ್ಟರ್ ಕೆ. ಮಹಾಲಿಂಗ ಎಂಬವರನ್ನು ಮದ್ರಾಸು ಸರಕಾರದವರು ಒಂದನೇ ಕ್ಲಾಸ್ ಸಿವಿಲ್ ಅಸಿಸ್ಟೆಂಟ್ ಸರ್ಜನರನ್ನಾಗಿ ಆರಿಸಿರುವರು

ಗೊಬ್ಬರ ಸಪ್ತಾಹ ಸಂಬಂಧವಾಗಿ ತಾ. 8ರಂದು ಅಂಗಡಿ ಮೊಗರಿನಲ್ಲಿ ಸೇರಿದ ಸಭೆ... ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ ಶ್ರೀ ಎಚ್. ನರಸಿಂಹನವರು ಅಧ್ಯಕ್ಷತೆ ... ಹಿಸಿದರು, ಮೆಸ್ಸರ್ಸ್ ಎನ್. ಅಬ್ದುಲ್ಲ, ... ಕಾ ಡೆವಲಪ್‌ಮೆಂಟ್ ಆಫೀಸರ್ ಕೆ. ಎಂ... ಬಾಬು ಶೆಟ್ಟಿ, ಎನ್. ಸಂಕಪ್ಪ ರೈ, ಎ. ... ಶೆರೂಲ್ ಕೂಡಾ ಭಾಷಣವಿತ್ತಿರುವರು ಶ್ರೀ ವಾಸುದೇವ ಮೂಡಿತ್ತಾಯರು ವಂ... ನಾರ್ಪಣೆ ಮಾಡಿದರು.

ಕರಾವಳಿ ಪ್ರದೇಶಗಳಿಗಿಂತ ಹಳ್ಳಿ ಪ್ರದೇಶಗಳ ಎಣಲು ಬೆಳೆಯು ಬಹಳ ಹೀನಸ್ಥಿತಿಯಲ್ಲಿರುತ್ತದೆ. ಆರ್ ಡಿ ಓ.ರವರು ... ಳರಂದು ಅಂಗಡಿಮೊಗರಿನ ಏಜಂಟ್ಸ್ ವಿಸ್ತ... ರ್ಣದ ಭತ್ತವನ್ನು ಕೊಯ್ಸಿ ನೋಡಿದ್ದ... ಬರೇ ಏಳುವರೆ ಸೇರು ಭತ್ತ ಮಾತ್ರ ಸಿಕ್ಕಿ...

ಸುರತ್ಕಲ್—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ V ಫಾರ್ಮಿನಲ್ಲಿ ಶಿ... ಣ ತರಬೇತಿ ತರಗತಿಯನ್ನು ತೆರೆಯಲು ಡ್ಯಾಂಗ ಡೈರೆಕ್ಟರರಿಂದ ಇದೀಗ ಅನುಮತಿ ದೊರಕಿರುತ್ತದೆ. ಈ ತರಗತಿಯನ್ನು ಸೇರುವ ವಿದ್ಯಾರ್ಥಿಗಳು ತಾ. 25-10-50ರೊಳಗೆ ಶಾಲಾ ಮುಖ್ಯೋಪಾಧ್ಯಾಯರಿಗೆ ಬರಕೊಳ್ಳಬಹುದು.

ಮೂಲ್ಕಿ ಬೇಂಕ್

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾನೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



REGD TRADE MARK

Highly perfumed and medicated worth using daily by one and all keeps hair black and relieves headache etc.

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ದಕ್ಷಿಣ ಕನ್ನಡ

ಕುಂದಾಪುರ— ಶಿಷ್ಯರ ಎಲಿಮೆಂಟ್ರಿ ಶಾಲೆಯಲ್ಲಿ ತಾ. 8ನೇ ದಿನ ಗಾಂಧಿ ಜಯಂತಿಯೂ ಮಿಶ್ರ ಗೊಬ್ಬರ ಸಪ್ತಾಹವೂ ಶ್ರೀ ಭೋಜರಾವ್, ಬಿ. ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ರಾಮಯ್ಯ ಸೆಟ್ಟಿ, ಕಲ್ಕೂರರು, ಗಾಳಿಮನೆ ಮಂಜಯ್ಯ ಸೆಟ್ಟಿ, ಕಜ್ಕೂರು ಪಟೇಲರು ವಗೈರೆಯವರು ಮಾತನಾಡಿದ ಮೇಲೆ ಅಧ್ಯಕ್ಷರ ಸುಂದರವಾದ ಭಾಷಣ ಮುಗಿಯಲು ಧನ್ಯವಾದ, ಲಘೂಪಹಾರದೊಂದಿಗೆ ಸಭೆಯು ಅಂತ್ಯವಾಯಿತು.

ಕಾಸರಗೋಡು— ಇಲ್ಲಿ ಕುರುಡರ ಮಕ್ಕಳಿಗೋಸ್ಕರ ತಾ. 7ರಲ್ಲಿ ಸರಕಾರಿ ಶಾಲೆ ತೆರೆಯಲ್ಪಟ್ಟಿದೆ. ಕನ್ನಡ ಮತ್ತು ಮಲೆಯಾಳ ಮಕ್ಕಳಿಗೆ ಧರ್ಮಾರ್ಥವಾಗಿ ಊಟ, ವಸ್ತ್ರ, ವಸತೀಗೃಹ ಇತ್ಯಾದಿ ಎಲ್ಲಾತರದ ಏರ್ಪಾಟು ಇದೆ. 15ವರ್ಷ ಪ್ರಾಯಕ್ಕೆ ಮಿಕ್ಕದ ಕುರುಡ ಮಕ್ಕಳ ಹೆತ್ತವರು ತಮ್ಮ ಅರ್ಜಿಯನ್ನು ಕಾಸರಗೋಡು ನೋರ್ತರ್ನ್ ರೇಂಜ್ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರವರಿಗೆ ರವಾನಿಸುವುದು.

ಇರಾ — ತಾ. 8-10-1950ರಲ್ಲಿ "ಗೊಬ್ಬರ ಸಪ್ತಾಹ"ವು ಇರಾ ಬೋರ್ಡು ಶಾಲೆಯಲ್ಲಿ ಶ್ರೀ ಬಿ. ಪಟೇಲ್ ಮಹಾಬಲ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ತಾ. 11ರಲ್ಲಿ ಇರಾ ಗ್ರಾಮದ ತಾಳಿತಬೆಟ್ಟು ಎಂಬಲ್ಲಿ ಹೊಸ ಬ್ರಾಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಫಲಿಮಾರು—ಫಲಿಮಾರು ಶಾಲೆಯಲ್ಲಿ- ಸುಮಾರು 40 ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ತಾ. 12ರಿಂದ ಪ್ರಥಮ ಚಿಕಿತ್ಸಾ ಪಾಠಗಳು-ಮೂಲ್ಕಿ ಡಾ. ಶ್ಯಾಮ ಸೆಟ್ಟಿ ನೇತೃತ್ವದಲ್ಲಿ ಪ್ರಾರಂಭವಾಗಿವೆ.

ಚಿಪ್ಪಾರು—ಇತ್ತೀಚೆಗೆ ಪರಮಹಂಸ ಶ್ರೀಧರ ಸ್ವಾಮಿಗಳವರ ಅಪ್ಪಣೆಯಂತೆ ಚಿಪ್ಪಾರು ದೇವಸ್ಥಾನದಲ್ಲಿ ಗ್ರಂಥ ವಾಚನ ಭಜನೆ ವಗೈರೆ ನಡೆಸಿಕೊಂಡುಬರುತ್ತಿದ್ದು ಈಗ ಆಗಾಗ ವಿದ್ವಾಂಸರ ಉಪನ್ಯಾಸಗಳೂ ಏರ್ಪಟ್ಟಿವೆ. ತಾ. 7-10-1950ರಲ್ಲಿ ಶಿರೋಮಣಿ ಪರಕಜೆ ಸುಬ್ರಾಯ ಭಟ್ಟರವರು "ಭಕ್ತಿಯೋಗದ ವಿಷಯ" ಉಪನ್ಯಾಸವಿತ್ತರು.

ಬಾರಕೂರು—ದ. ಕ. ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿಯ ಉಡುಪಿ ತಾಲೂಕು ಪ್ರಚಾರ ಸಭೆಯು ತಾ. 8-10-50 ರಲ್ಲಿ ಬಾರಕೂರು ಉದ್ದಾಲಗುಡ್ಡೆ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಿ. ಚಿಕ್ಕಯ್ಯ ಮುಲ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕುಂಜಾಲು ಸೀನ ಮಾಸ್ತರರು ಮತ್ತು ಶ್ರೀ ಯಚ್. ಸಿದ್ದಯ್ಯ ಮಾಸ್ತರರು ಮಾತಾಡಿದ ಮೇಲೆ ಶ್ರೀ. ಬಿ. ರಾಮಯ್ಯ ಶೆಟ್ಟಿ, ಮತ್ತು ಶ್ರೀ ಹಾಲಾಡಿ ರತ್ನಾಕರ ಹೆಗ್ಡೆಯವರು ಸಮಾಜದ ಏಳಿಗೆಯ ಕುರಿತು ಹಿತಸೂಚನೆಗಳನ್ನಿತ್ತರು. ಶ್ರೀ ಟಿ. ಕೆ. ಚಂದಪ್ಪ ಶ್ಯಾನುಭಾಗರು ಸಮಿತಿಯ ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀ ಬಿ. ಚಂದಪ್ಪ, ಮತ್ತು ಶ್ರೀ ಯಸ್. ತನಿಯಪ್ಪ, ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ನೋಟೀಸು

ದ. ಕ. ಜಿಲ್ಲಾ ಸಬೋರ್ಡಿನೇಟ್
ಜಡ್ಜರ ಕೋರ್ಟಿನಲ್ಲಿ.

R. E. P. No. 158/1950
in O. S. 151/1947

ಶ್ರೀ ಅನಂತಪದ್ಮನಾಭ ದೇವರು, ಪೆರ್ಡೂರು, ಇಂಟೆರಿಮ್ ಎಕ್ಸಿಕ್ಯೂಟಿವ್ ಆಫೀಸರ್ ಎ. ಕೃಷ್ಣಯ್ಯ ಹೆಗ್ಡೆ— ಅರ್ಜಿದಾರ.

ನಾರಾಯಣ ಐತಾಳ— ರೆಸ್ಪೊಂಡೆಂಟ್.

ರೆಸ್ಪೊಂಡೆಂಟ- ನಾರಾಯಣ ಐತಾಳ, ಪದ್ಮನಾಭ ಐತಾಳರ ಮಗ, ಉಡುಪಿ ತಾಲೂಕು ಪೆರ್ಡೂರು ಗ್ರಾಮದಲ್ಲಿರುವವ.

ಮೇಲೆ ಕಾಣಿಸಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಏಲಂ ಇಸ್ತಿಹಾರಿನಲ್ಲಿ ಕಾಣ್ಸಿದ ಉಡುಪಿ ತಾಲೂಕು ಪೆರ್ಡೂರು ಗ್ರಾಮದ ಸ. ನಂ. 129-23 ಬಾಗ್ಯಾತು 0-08 ಸೆಂಟ್ಸು ಆಸ್ತಿಯನ್ನು ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಸದ್ರಿ ಆಸ್ತಿಯನ್ನು ದ. ಕ. ಸೆಂಟ್ರಲ್ ನಾಜರ ಆಫೀಸಿನಲ್ಲಿ ಬಹಿರಂಗವಾಗಿ 1950ನೇ ಇಸ್ವಿ ದೆಶಂಬರ ತಿಂಗಳ 4ನೇ ತಾರೀಕು ಹಗಲು 11 ಗಂಟೆಗೆ ಏಲಮಿಗೆ ಇಟ್ಟಿರುವದ್ರಿಂದ ಸದ್ರಿ ದಿವಸ ನೀವು ಖುದ್ದಾಗಿ ಯಾ ವಕೀಲರ ಮುಖಾಂತರ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಆಸ್ತಿಯನ್ನು ನಿಮ್ಮ ಉಜ್ರು ಶಿವಾಯಿ ಏಲಂ ಮಾಡೋಣಾದೀತು ಎಂತ ಕೋರ್ಟು ಹುಕುಂ ಪ್ರಕಾರ ಪ್ರಕಟಿಸೋಣಾಗಿಯದೆ.

Sd. **B. Manjayya Hegde,**
Advocate for Petitioner.
ಮಂಗಳೂರು, ತಾ. 30-9-1950.

ಮುಂಬಯಿ

ಉದ್ಯಾನದ ಬೋವಿ ವಿದ್ಯಾದಾಯಿನಿ ಸಂಘದ ಉತ್ಸಾಹೀ ಕಾರ್ಯದರ್ಶಿ ಸದಸ್ಯರಾದ ಶ್ರೀ ಗೋಪಾಲ ಯಸ್. ಉದ್ಯಾವರ್ ಎಂಬವರು ವಿಷ ಜಂತುವಿನ ಕಡಿತದಿಂದ, ತಾ. 5-10-50ರಲ್ಲಿ ಸ್ವರ್ಗಾಧೀನರಾದರೆಂದು ತಿಳಿಸಲು ವಿಷಾದಪಡಿಸುತ್ತೇವೆ. ತಾ. 8-10-50ಕ್ಕೆ ಜರಗಿದ ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ ಈ ಕುರಿತು ದುಃಖ ಸೂಚಕ ಠರಾವು ಮಾಡಲಾಯಿತು.

— ನಿಯಂತ್ರಣಗಳು —

ಲೇಖಕ:- ಶ್ರೀ ಪಿಯೆಸ್ ಲಕ್ಷ್ಮೀನಾರಾಯಣ ಆಳ್ವ

ಲೇಖನಾಂಕ ೩

ಕೆಲವರ್ಷ ದಿ. ಕಾರ್ಡು ಕೊಡುವ ವ್ಯವಸ್ಥೆಯೋ ಅವ್ಯವಸ್ಥೆಯೋ ಜನರಿಗೆ ಬಹಳ ಕಷ್ಟವನ್ನೊದಗಿಸಿತ್ತು. ದಿ. ಕಾರ್ಡು ಬೇಕಾದ ಒಬ್ಬ ರೈತ ಮೊದಲು ಒಂದು ಅರ್ಜಿಯನ್ನು ಬರೆದುಕೊಂಡು ಶ್ಯಾನುಭಾಗರಲ್ಲಿ ಹೋಗಬೇಕು. ಅವರು "ಇವನಿಗೆ ದಿ. ಕಾರ್ಡು ಕೊಡಬಹುದು" ಎಂದು ಬರೆಯಬೇಕು. ಅಲ್ಲಿಂದ ಆ ರೈತ ಆ ಅರ್ಜಿಯನ್ನು ಹಿಡಕೊಂಡು ಪಟೇಲರಲ್ಲಿ ಹೋಗಬೇಕು. ಅವರು ಆ ಅರ್ಜಿಯಲ್ಲಿ ಶಿಫಾರಸು ಬರೆಯಬೇಕು. ಅಲ್ಲಿಂದ ಅದನ್ನು ಹಿಡಕೊಂಡು ಪೇಟೆಗೆ ಫಿರ್ಕಾ ಪೂರೈಕೆ ಅಧಿಕಾರಿಗಳಲ್ಲಿ (Firka Supply Officer) ಹೋಗಬೇಕು. ಅವರು ಈ ಅರ್ಜಿಯನ್ನು ಕಂಡು ಒಂದು ಖಾಲಿ ಕಾರ್ಡು ಇವನಿಗೆ ಕೊಡಬೇಕು. ಅಲ್ಲಿಂದ ಆ ಖಾಲಿ ಕಾರ್ಡನ್ನು ಹಿಡಕೊಂಡು ಪುನಹ ಪಟೇಲರಲ್ಲಿ ಬರಬೇಕು. ಪಟೇಲರು ಆ ಕಾರ್ಡಿನಲ್ಲಿ ಮನೆನಂಬ್ರ ಜನಸಂಖ್ಯೆ ಇತ್ಯಾದಿ ಬರೆದುಕೊಡಬೇಕು. ಅದನ್ನು ಹಿಡಕೊಂಡು ಪುನಹ ಫಿರ್ಕಾ ಪೂರೈಕೆ ಆಫೀಸರಲ್ಲಿ ಹೋಗಬೇಕು. ಅಲ್ಲಿ ಅವರು ಆ ಕಾರ್ಡಿಗೆ ದಸ್ಕತು ಹಾಕಬೇಕು. ನಿಜವಾಗಿಯೂ ಇದನ್ನೆಲ್ಲಾ ಬರೆದರೆ ಅದೊಂದು ರಾಮಾಯಣದಂತಹದೇ "ರೈತಾಯನ" ಗ್ರಂಥವಾದೀತು. ಹೀಗೆ ಈ ಎಲ್ಲಾ ಅಧಿಕಾರಿಗಳನ್ನು ಸಮಾಧಾನ ಪಡಿಸಿ ಇಷ್ಟು ದಣಿದರೆ ಮಾತ್ರ ಅತನಿಗೆ ಒಂದು ದಿ. ಕಾರ್ಡು ಸಿಗುತಿತ್ತು. ಅದೂ ಕೆಲವೊಮ್ಮೆ ಒಂದೊಂದು ದಸ್ಕತ್ತಿಗಾಗಿ ಒಬ್ಬಬ್ಬ ನೌಕರರು ಎರಡು ಮೂರು ಸಲ ದಣಿಸಿದುದು ನಮ್ಮ ಕಣ್ಣೆದುರಿನ ಚಿತ್ರ. ಅಧಿಕಾರಿಗಳ ಅಪ್ರೀತಿಗೊಳಗಾದ ಎಷ್ಟೋ ಮಂದಿ ದಿ. ಕಾರ್ಡಿಗೆ ಪ್ರಯತ್ನಿಸಿಯೂ ಸಿಕ್ಕದೆ ಹೋದುದು ನಮಗೆ ತಿಳಿದಿದೆ. ಈ ಎಲ್ಲಾ ಅವ್ಯವಸ್ಥೆಗಳು ತೊಲಗಲೇ ಬೇಕು. ಇಲ್ಲದಿದ್ದರೆ ಮೊದಲೇ ಹದಗೆಟ್ಟಿ ಹೋದ ರೈತರು ಧೈರ್ಯಗುಂದಬಹುದು.

ಜೀವನಾವಶ್ಯಕ ವಸ್ತುಗಳನ್ನು ಮತ್ತು ಕೃಷಿಗೆ ಬೇಕಾದ ಗೊಬ್ಬರ, ಕಬ್ಬಿಣ ಇತ್ಯಾದಿ ವಸ್ತುಗಳನ್ನು ಸರಕಾರ ರೈತನಿಗೆ ನಿಯಂತ್ರಿತ ಕ್ರಯದಲ್ಲಿ ಒದಗಿಸಿಕೊಡಬೇಕು. ಅವನಿಗೆ ಬೇಕಾದ ಗೊಬ್ಬರ ಇತ್ಯಾದಿ ಕೆಲವೊಂದು ಕೃಷಿಗೆ ಸಂಬಂಧಪಟ್ಟ ವಸ್ತುಗಳನ್ನು ಕೃಷಿ ಇಲಾಖೆ (Agriculture Department) ಯ ಮೂಲಕ ಒದಗಿಸಿಕೊಡುವ ಏರ್ಪಾಡನ್ನು ಸರಕಾರ ಮಾಡಿದ್ದರೂ ಅದರಿಂದ ಹಳ್ಳಿಗರಿಗೆ ಹೆಚ್ಚಿನ ಪ್ರಯೋಜನ ದೊರಕಿಲ್ಲ ಎಂಬುದನ್ನು ಪ್ರತಿಯೊಬ್ಬ ಹಳ್ಳಿಗನೂ ಬಲ್ಲ. ಇದಕ್ಕೆ ಕಾರಣ ಸಂಗ್ರಹ (Stock) ಕಡಿಮೆಯಾದುದೋ? ಅಥವಾ ಇದ್ದ ಸಂಗ್ರಹವನ್ನು ಕಬ್ಬು ಇತ್ಯಾದಿ ಆಹಾರೇತರ ಬೆಳೆ ಬೆಳೆಸುವವರು ಮುಂಚಿತ ಬಿದ್ದುಕೊಳ್ಳುವುದೋ? ಇದು ನಮಗರಿಯದು. ಇನ್ನು ಈ ದಿಸೆಯಲ್ಲಿ ಕೃಷಿ ಇಲಾಖೆಯವರ ಒಂದು ದೂರು ಇದೆ, "ನಾವು ರೈತರಿಗೆ ರಾಸಾಯನಿಕ ಗೊಬ್ಬರವನ್ನು ಒದಗಿಸಿಕೊಟ್ಟರೂ ಅವರು ಅದನ್ನು ಉಪಯೋಗಿಸುತ್ತಿಲ್ಲ" ಎಂಬುದು ಈ ವಾದ ಹುರುಳಿಲ್ಲದ್ದು. ಕೃಷಿ ಇಲಾಖೆಯವರು ಗೊಬ್ಬರವನ್ನು ಬರೇ ಒದಗಿಸಿಕೊಟ್ಟರೆ ಸಾಲದು, ಅವರು ರಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವ ಕ್ರಮವನ್ನು ರೈತರಿಗೆ ತಿಳಿಸಿ ಹೇಳಿ ಅದರ ಪ್ರಯೋಜನವನ್ನು ನಿರಕ್ಷರಕುಕ್ಷಿಗಳಾದ ಅವರಿಗೆ ತೋರಿಸಬೇಕು. ಅವುಗಳು ನಿಜವಾಗಿ ಪ್ರಯೋಜನ ಕೊಡುವ ವಸ್ತುಗಳೆಂದು ರೈತನಿಗೆ ಮನವರಿಕೆಯಾದರೆ ಆತ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಲ್ಲಿ ಎಂದೂ ಹಿಂದೆ ಬೀಳಲಾರ. ಮನೆಗೆ ಬಂದವಳು ಧರ್ಮಪತ್ನಿಯಲ್ಲ, ಮಹಾಲಕ್ಷ್ಮಿ ಎಂದಾದರೆ ಯಾರೂ ಅವಳನ್ನು ಹೊರದೂಡಲಿಕ್ಕಿಲ್ಲವಷ್ಟೆ? ಈ ರಾಸಾಯನಿಕ ಗೊಬ್ಬರಗಳ ಕುರಿತಾಗಿ ತಿಳಿಸಿಹೇಳುವುದು ಸರಕಾರದಷ್ಟೇ ಹಳ್ಳಿಯ ಬಲ್ಲವರಿಗೂ ಸೇರಿದೆ. ಅವರೂ ಈ ದೆಸೆಯಲ್ಲಿ ಪ್ರಯತ್ನಿಸಬೇಕು.

ತಾನು ಬೆಳೆಸಿದುದೆಲ್ಲವನ್ನೂ ಒಂದು ನಿರ್ದಿಷ್ಟ ಸ್ಥಳದಲ್ಲಿ ನಿಯಂತ್ರಿತ ಬೆಲೆಗೆ ಕೊಡಬೇಕು, ಎಂಬುದರಿಂದಾಗಿ ರೈತರ ಗೇಯುವ ಉತ್ಸಾಹ ಕುಗ್ಗುತ್ತಿದೆ. ಇಂದಿನ ಜಗತ್ತಿನಲ್ಲಿ ಯಾರೂ ಕರ್ಮಯೋಗಿಗಳಲ್ಲ. ಪ್ರತಿಯೊಂದು ವ್ಯಕ್ತಿಗೆ ತಾನು ಹೊರುವ ಹುರುಪು ಅತನಿಗೆ ದೊರೆಯುವ ಪ್ರತಿಫಲದ ಮೇಲೆಯೇ ಹೊಂದಿಕೊಂಡಿದೆ, ಭವಿಷ್ಯತ್ತಿನ ಗೂಢ ಗರ್ಭದಲ್ಲಿ ಅಡಗಿರುವ ಅವ್ಯಕ್ತ ಪ್ರತಿಫಲಕ್ಕಾಗಿ ಪ್ರತಿಯೋರ್ವನ ಮನಸ್ಸೂ ಹಾತೊರೆಯುತ್ತಿರುತದೆ. ಆಗ ದುಡಿತದಲ್ಲಿ ತನ್ನಿಂದ ತಾನೇ ಹುರುಪು ಹೆಚ್ಚುತ್ತಾ ಹೋಗುತ್ತದೆ. ಈ ನಿಯಮಕ್ಕೆ ನಿರಕ್ಷರ ಕುಕ್ಷಿಯಾದ ರೈತ ಹೊರಗಾಗಿಲ್ಲ. ಮಾತ್ರವಲ್ಲ, ಆತನ ಅದೂರ ದೃಷ್ಟಿಯ ಪರಿಣಾಮದಿಂದಾಗಿ ಈ ನಿಯಮ ಉಳಿದೆಲ್ಲರಿಗಿಂತ ಹೆಚ್ಚು ಆತನನ್ನೇ ಬಂಧಿಸಿರುತ್ತದೆ. ತನ್ನ ಜ್ಞಾನದ ಪರಿಮಿತಿಯಿಂದಾಗಿ ಬಹು ದೂರದ ವರೆಗೆ ನೋಡಲಾರದ ರೈತನಿಗೆ ಭವಿಷ್ಯತ್ತಿನ ಗೂಢ ಗರ್ಭದಲ್ಲಿ ಅಡಗಿರುವ ಪ್ರತಿಫಲ ಇನ್ನಷ್ಟು ರಮ್ಯವಾಗಿ ಕಾಣುತ್ತದೆ. ಪ್ರತಿಫಲ ಗೂಢವಾದಷ್ಟು, ರಮ್ಯವಾದಷ್ಟು ಆ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ:- ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹುರಪೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು, ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:—ದಾಲಪ್ಪ ಫಕೀರಪ್ಪ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ... ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಸ್ಟೋರ್ಸ್, ಆರ್ ಎಲ್ ಕನುಬಾಯಿ, ಕೆಮಿಸ್ಟ್, ದಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ಸವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕಸ್ಥರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಪ್ರಾಪ್ತ ಬೆಳೆಯಿಸಿಕೊಳ್ಳುವ ದುಡಿತದಲ್ಲಿ ಉತ್ಸಾಹ ಹೆಚ್ಚು. ಆದರೆ ಇಂದು ಅಂತಹ ಭವಿಷ್ಯತ್ತಿನ ಕಕ್ಷತೆಯಲ್ಲಿ ಅಡಗಿದ್ದ ಪ್ರತಿಫಲದ ಮೇಲೆ ಭಯದ ಬೆಳಕು ಬೀರಿದೆ. ರೈತನ ಹಸ್ತಕ್ಕೆ ದೊರಕುವ ಬೆಲೆಯು ನಿರ್ಣಯವಾಗಿ ಹೋಗಿದೆ. ಇದರಿಂದಾಗಿ ಆತನ ದುಡಿತದಲ್ಲಿರುವ ಉತ್ಸಾಹವು ಬಹಳಷ್ಟು ಇಳಿದಿದೆ. "ಎಷ್ಟಾದರೂ ದೊರೆಯುವುದು ಇಷ್ಟೇ ತಾನೇ!" ಎಂಬ ರೈತರ ನಿರಾಶೆಯ ಉದ್ಗಾರಗಳನ್ನು ಹಳ್ಳಿಯ ಪ್ರತಿಯೊಬ್ಬರೂ ಕೇಳಬಲ್ಲರು. ಈ ನಿರುತ್ಸಾಹ ಭಾವ ರೈತರ ಕ್ರಿಯಾಶೀಲತೆಯನ್ನು ಹತ್ತಿಕ್ಕಿದೆ. ಇದಕ್ಕೆ ಒಂದು ಪರಿಹಾರೋಪಾಯವೆಂದರೆ ಪ್ರತಿಯೊಬ್ಬ ರೈತನಿಂದಲೂ ಒಂದು ನಿರ್ದಿಷ್ಟ ಸಂಖ್ಯೆಯಲ್ಲಿ ಅಕ್ಕಿಯನ್ನು ಖಡ್ಡಾಯವಾಗಿ ವಸೂಲು ಮಾಡಿ ಉಳಿದುದನ್ನು ಆತನ ಸ್ವಾತಂತ್ರ್ಯಕ್ಕೆ ಬಿಟ್ಟುಬಿಡುವುದು. ಆ ನಿರ್ದಿಷ್ಟ ಸಂಖ್ಯೆಯಷ್ಟನ್ನು ವಸೂಲು ಮಾಡುವಾಗ ಮಾತ್ರ ಸರಕಾರ "ಕಣ್ಣು ಮುಚ್ಚಿ" ಕೆಲಸ ಮಾಡಬೇಕು. ಆದರೆ ಆತನಲ್ಲಿ ಉಳಿದುದನ್ನು ರೈತನ ಅಧಿಕಾರಕ್ಕೇ ಬಿಟ್ಟು ಬಿಡಬೇಕು. ಹೀಗಾದರೆ ರೈತನಿಗೆ ದಿನರಾತ್ರಿ ದುಡಿದು ಬೆಳಸುವದರಲ್ಲಿ ಉತ್ಸಾಹ ತನ್ನಿಂದ ತಾನೇ ಹೆಚ್ಚುತ್ತದೆ. "ನಿರ್ದಿಷ್ಟವಾದುದನ್ನು ನಿಯಂತ್ರಿತ ಬೆಲೆಯಲ್ಲಿ ಸರಕಾರಕ್ಕೆ ಕೊಟ್ಟರೆ ಉಳಿದುದರ ಮೇಲೆ ತನ್ನದೇ ಅಧಿಕಾರವಲ್ಲವೇ! ಹೆಚ್ಚು ಬೆಳೆಸಿದುದೆಲ್ಲವೂ ತನ್ನ ಸ್ವಾತಂತ್ರ್ಯ ಸಿಕ್ಕುತ್ತಾ ಹೋಗುತ್ತದಷ್ಟೇ" ಎಂಬ ಅಭಿಮಾನ ಆತನ ನಿದ್ರಿಸಿದ ಕ್ರಿಯಾಶೀಲತೆಯನ್ನು ಬೆನ್ನುತಟ್ಟಿ ಎಬ್ಬಿಸುತ್ತದೆ.

ಮೇಲಿನ ಯೋಜನೆಯಿಂದ ಹೊಸತೊಂದು ಪ್ರಶ್ನೆ ಉದ್ಭೂತವಾಗುವುದಿಲ್ಲವೇ? ಕಳ್ಳಸಂತೆಗೆ ಎಡೆಕೊಟ್ಟಂತಾಗಲಿಲ್ಲವೇ? ಎಂದು ಹಲವಾರು ಮಂದಿ ಕೇಳಬಹುದು. ಆದರೆ ರೈತನಿಂದ ನಿರ್ದಿಷ್ಟವಾದಷ್ಟನ್ನು ವಸೂಲು ಮಾಡಿ ಉಳಿದುದನ್ನು ಆತನ ಸ್ವಾತಂತ್ರ್ಯಕ್ಕೆ ಬಿಟ್ಟುಕೊಡಬೇಕು, ಎನ್ನುವಾಗಲೇ ಕಳ್ಳಸಂತೆ ಎಂಬ ಹೆಸರು ಮಾಯವಾಗಿದೆ. ಸರಕಾರವು ತಾನು ನಿಶ್ಚಯಿಸಿದಷ್ಟನ್ನು ವಸೂಲು ಮಾಡಿಯೇ ತೀರುವುದರಿಂದ, ಉಳಿದವುಗಳ ಕತೆ ಏನಾದರೂ ನಿಯಂತ್ರಣಗಳಿಗೆ ಧಕ್ಕೆ ತಗಲದು ಎಂದು ನಮ್ಮ ಅಭಿಪ್ರಾಯ.

ಮಾತ್ರವಲ್ಲ ಇಂದು ಸರಕಾರ ಕೊಟ್ಟಷ್ಟೇ ಅಕ್ಕಿಯಲ್ಲಿ ಜೀವನ ನಡೆಸುವ ಜನರೆಷ್ಟು? ಹಳ್ಳಿಗನೂ, ಪಟ್ಟಣಿಗನೂ ಈರ್ವರೂ ಕಳ್ಳಸಂತೆಯಿಂದ ಅಕ್ಕಿಯನ್ನು ಒದಗಿಸಿಕೊಳ್ಳುತ್ತಿದ್ದಾರೆ. ಹೀಗೆ ಒದಗಿಸಿಕೊಳ್ಳದವರು ಶೇಕಡಾ ಐದು ಮಂದಿಯೂ ಇಲ್ಲ. ಕಳ್ಳಸಂತೆಯಿಂದ ಅಕ್ಕಿಯನ್ನು ತೆಗೆಯಲೇಬಾರದು ಎಂದು ದೃಢಮನಸ್ಸು ಮಾಡಿದವರೂ ಮಕ್ಕಳು ಮರಿಗಳ ಗೋಳನ್ನು ಕಂಡು ತಮ್ಮ ನಿರ್ಧಾರವನ್ನು ಬದಲಿಸಬೇಕಾಗಿ ಬಂದ ಎಷ್ಟೋ ಪ್ರಸಂಗಗಳನ್ನು ನಾವು ಕಣ್ಣಾರೆ ಕಂಡಿರುವೆವು. ಹೀಗೆ ಸಾಧಾರಣ ಶೇಕಡಾ ತೊಂಬತ್ತೈದು ಮಂದಿ-ಕೆಲವರು ಮನಸಿದ್ದು ಕೆಲವರು ಮನಸಿಲ್ಲದೆಯೂ ಅನಿವಾರ್ಯವಾಗಿ ಕಳ್ಳಸಂತೆಗೆ ಪ್ರೋತ್ಸಾಹ ಕೊಡಬೇಕಾಗಿ ಬಂದಿದೆ. ಹೀಗೆ ಕಾಯಿದೆ ಇದ್ದೂ ಕಳ್ಳಸಂತೆ ಉಳಿಸುವುದಕ್ಕಿಂತ ಮತ್ತು ಶೇಕಡಾ ತೊಂಬತ್ತೈದು ಮಂದಿಯನ್ನು ಕಾಯಿದೆ ದೃಷ್ಟಿಯಿಂದ ಕಳ್ಳರನ್ನಾಗಿಸುವುದಕ್ಕಿಂತ ಸರಕಾರ ನಿರ್ದಿಷ್ಟ ಸಂಖ್ಯೆಯಲ್ಲಿ ಅಕ್ಕಿಯನ್ನು ಖಡ್ಡಾಯವಾಗಿ ಸಂಗ್ರಹಿಸಿ ಉಳಿದುದಕ್ಕೆ ಸ್ವಾತಂತ್ರ್ಯ ಕೊಟ್ಟರೆ ನಿಯಂತ್ರಣಗಳಿಗೆ ಏನೂ ಧಕ್ಕೆ ತಗಲಲಿಕ್ಕಿಲ್ಲವೆಂದು ನಮ್ಮ ಭಾವನೆ. ಅದರೆ ಈ ಯೋಜನೆಯಿಂದ ಅಕ್ಕಿ ಬೆಳೆಸುವವರಿಗೆ ಮಾತ್ರ ಬಹಳ ಉತ್ಸಾಹ ಹುಟ್ಟುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಈ ಯೋಜನೆಯಿಂದ ಇನ್ನೂ ಕೆಲವು ಸಮಸ್ಯೆಗಳು ತಲೆದೋರಿಯಾವು ಎಂಬ ಅರಿವು ನಮಗಿದೆ. ಇದು ಒಂದು ಸೂಚನೆ ಮಾತ್ರ. ಇದನ್ನು ಈ ವಿಚಾರದಲ್ಲಿ ನುರಿತಜನ ವಿಮರ್ಶಿಸಿ ಕಂಡಾರೆಂದು ಭಾವಿಸಿದ್ದೇವೆ.

ಈ ನಿಯಂತ್ರಣಗಳಿಂದಾಗಿ ರೈತರಿಗೆ ಉಂಟಾಗಿರುವ ಎಲ್ಲಾ ಕಷ್ಟಗಳನ್ನು ಬರೆಯುತ್ತಾ ನಡೆದರೆ ಅದೊಂದು ಪುರಾಣವೇ ಆದೀತು. ಆದ್ದರಿಂದ ಇಲ್ಲಿ ಕೆಲವೊಂದು ವಿಚಾರಗಳ ಖಚಿತವಾಗಿ ಮಾತ್ರ ತಿಳಿಸಿರುವೆವು. ಇದನ್ನು ಸಂಬಂಧಪಟ್ಟವರು ಸಾಧ್ಯವಿದ್ದಷ್ಟು ಸರಿಪಡಿಸ್ಯಾರೆಂದು ನಂಬುತ್ತೇವೆ.

ನಿಯಂತ್ರಣಗಳು ಅಯಶಸ್ವಿಯಾಗಲು ಇಂದಿ ನಿಯಂತ್ರಣಗಳಲ್ಲಿರುವ ಲೋಪದೋಷಗಳಷ್ಟೇ ನಮ್ಮ ಜನರ ತಪ್ಪುತಡಿಗಳೂ ಅಸಹಕಾರವೂ ಕಾರಣವಾಗಿವೆ ಬ್ರಿಟನ್ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಿಯಂತ್ರಣಗಳು ಬಹಳ ಯಶಸ್ವಿಯಾಗಿವೆ. ಇದಕ್ಕೆ ಕಾರಣ ಅಲ್ಲಿಯ ಆಡಳಿತ ವರ್ಗದ ದಕ್ಷತೆ ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚು ಜನರ ಸಹಕಾರ. ಇದನ್ನು ನಾವು ಬ್ರಿಟನಿನಲ್ಲಿ ಜರಗಿದ ಒಂದು ಚಿಕ್ಕ ಘಟನೆಯಿಂದ ನಿಚ್ಚಳವಾಗಿ ಕಾಣಬಹುದಾಗಿದೆ. ಒಂದು ತಿಂಗಳಲ್ಲಿ ಬ್ರಿಟನಿನಲ್ಲಿ ಸಕ್ಕರೆ ವಿತರಣೆ ಮಾಡಿ ಅರ್ಧ ಮಂದಿಗೆ ಕೊಡುವಾಗಲೇ ಪೂರೈಕೆಯ ಅವ್ಯವಸ್ಥೆಯಿಂದಾಗಿ ಸಕ್ಕರೆಯ ಸಂಗ್ರಹ ಮುಗಿಯಿತು. ಉಳಿದ ಕಾರ್ಡುದಾರರಿಗೆ ಕೊಡಲು ಸಕ್ಕರೆ ಉಳಿಯಲಿಲ್ಲ. ಆಗ ಸಂಬಂಧಪಟ್ಟ ಖಾತೆ ಒಂದು ಪ್ರಕಟಣೆ ಹೊರಡಿಸಿ "ಸಕ್ಕರೆ ತೆಗೆದುಕೊಂಡು ಹೋದ ಕಾರ್ಡುದಾರರು ಅವರು ಕೊಂಡುಹೋದುದರಲ್ಲಿ ಅರ್ಧಾಂಶವನ್ನು ಹಿಂದೆ ಕೊಡಬೇಕೆಂದೂ ಅವರಿಗೆ ಅದನ್ನು ಮುಂದಿನ ತಿಂಗಳಲ್ಲಿ ಒದಗಿಸಿಕೊಡುವುದೆಂದೂ" ಸಾರಿತು. ಮರುದಿನ ರೇಷನ್ ಅಂಗಡಿಯ ಬಾಗಿಲಲ್ಲಿ ತಮ್ಮ ಪಾಲಿನ ಸಕ್ಕರೆಯನ್ನು ಹಿಂದೆ ಕೊಡಲು ಜನ ಸಾಲುಗಟ್ಟಿ ನಿಂತಿದ್ದರಂತೆ. ಈ ಒಂದು ಘಟನೆಯಿಂದಲೇ ಬ್ರಿಟನಿನ ಜನರು ಅಲ್ಲಿನ ಸರಕಾರಕ್ಕೆ ಯಾವ ರೀತಿಯಲ್ಲಿ ಸಹಕಾರ ನೀಡುತ್ತಿದ್ದರೆಂಬುದನ್ನು ಅರಿತುಕೊಳ್ಳಬಹುದಾಗಿದೆ. ಆದರೆ ನಾವು? ನಮಗೆ ಸರಕಾರವನ್ನು ಟೀಕಿಸುವುದೇ ಕೆಲಸ. ಕಾಯಿದೆಗಳನ್ನು ಮುರಿಯುವುದರಲ್ಲೇ ಉತ್ಸಾಹ. ಇನ್ನಾದರೂ ನಾವು ನಮ್ಮ ಈ ಹೇಯ ಮನೋವೃತ್ತಿಯನ್ನು ತೊರೆಯಬೇಕು. ಸರಕಾರಗಳ ಉತ್ತಮ ಕೆಲಸಗಳಲ್ಲಿ ಉತ್ಸಾಹೀ ಸಹಕಾರ ನೀಡಬೇಕು. ಆಗ ಮಾತ್ರ ಎಲ್ಲವೂ ಯಶಸ್ವಿಯಾದೀತು.

ಜನರು ಸಹಕರಿಸಿದರೆ, ಸರಕಾರ ಮೇಲಿನ ಕೆಲ ಲೋಪದೋಷಗಳನ್ನು ಸರಿಪಡಿಸಿಕೊಂಡರೆ ನಿಯಂತ್ರಣಗಳು ಯಶಸ್ವಿಯಾಗುವುದರಲ್ಲೇನೂ ಸಂಶಯವಿಲ್ಲವೆಂದು ಭಾವಿಸುತ್ತೇವೆ.

ಅಂತರಂಗಮಾಸಪತ್ರಿಕೆಯನ್ನು ತಪ್ಪದೆ ಓದಿರಿ

Notice

In the Court of the District Munsiff of Mangalore.

O. S. No. 301 of 1950

Between-

Madur Venkatesha Bhatta, -Plaintiff.

and

Ammunaje Vaman Pai & others -Defendants.

To

2nd Defendant.

Rohi Dasa Pai, S/o Laxmiamma, C/o Gopal Kamath, S/o Cherdappa Srinivas Kamath, Mannagudda, Mangalore Town.

3rd Defendant.

Sanjeevi Shedthi, Wife of Mudakare Vittal Shetty, Ammunaje Village, Mangalore Taluq

Please take Notice that the Plaintiff has filed the above suit against you for possession of the suit properties and recovery of arrears of rental and mesne profits and the said suit stands posted to 15-11-1950 for Hearing. In Case you fail to appear before the above Court in person or by a pleader at 11 A M on 15-11 1950 the suit will be heard in your absence and decided exparte.

(By order of Court)

M. Venkatraya Kamath.

Advocate for Plaintiff

Mangalore, 12-10-1950

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಡುತ್ತಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕರುಳಿನ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು-ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0. ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ.ಪಿ. ಬೇರೆ. ಡಜನ್ ಕೆಪ್ಸಲುಗಳಿಗೆ ರೂ 42-0-0 ವಿ ಪಿ ಸಹಿತ. ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫಿ.

ಪ್ರಶಂಸನಾ ಪತ್ರ-ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೦ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ; ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-

ದಾಹಾನು ರೋಡು, ಬಿ. ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,

Dahanu Road, B B. & C I Rly,

ಬೊಂಬಾಯಿ ಸ್ಟಾಕಿಸ್ಟರು:—ಲಕ್ಡಾವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2.

ವಾರ ಭವಿಷ್ಯ

ತಾರೀಕು 19-10-1950ರಿಂದ ತಾ. 25-10-1950ರ ವರೆಗೆ.

ಮೇಷ—ಕಳೆದ ವಾರಕ್ಕೂ ಈ ವಾರಕ್ಕೂ ರಾತ್ರಿ ಹಗಲಿನಷ್ಟು ವ್ಯತ್ಯಾಸವು ನಿಮ್ಮ ಜೀವನದಲ್ಲಿ ಕಂಡು ಬರಲಿದೆ. ಆದಾಯದ ಇಮ್ಮಡಿ ವ್ಯಯವಾಗುವದು. ದೇಹಾಲಸ್ಯ, ವಿಜಾತೀಯ ಜನರೊಡನೆ ಕಲಹ, ಸ್ತ್ರೀಯರಿಂದಾಗಿ ಅಪವಾದ, ಅನಿಷ್ಟ, ಕಲಹಾದಿಗಳೂ ಪ್ರಾಪ್ತವಾದಾವು. ಆದರೂ ಗುರ್ವನುಗ್ರಹವೊಂದು ಉತ್ತಮವಿರುವುದರಿಂದ ತಾ. 19, 20, 21, 22, 25 ಈ ದಿನಗಳಲ್ಲಿ ಸುಖ ಸಂತೋಷ ಭೋಗಗಳನ್ನು ಪಡೆವಿರಿ.

ವೃಷಭ—ನಿಮ್ಮ ಗೃಹಕಾಪತ್ರ್ಯಗಳು ಈ ವಾರದಲ್ಲಿ ಕಡಿಮೆಯಾಗುವವು. ಆದರೆ ಅರ್ಧಾಂಗಿಯ ಕೂಡೆ ನಿತ್ಯ ಜಗಳ ತಪ್ಪಲೊಲ್ಲದು. ಆಹಾರ ದೋಷದಿಂದಾಗಿ ಉದರ ಶೂಲೆಯುಂಟಾದೀತು. ನಿರುದ್ಯೋಗಿಗಳು ಸದುದ್ಯೋಗ ಪ್ರವೃತ್ತರಾಗಿ ಸ್ಥಾನಮಾನಗಳನ್ನು ಹೊಂದುವರು. ಆರ್ಥಿಕ ಬಿಕ್ಕಟ್ಟು ದೂರವಾಗಲಿದೆ. ವ್ಯಾಪಾರಿಗಳಿಗೆ ಆಕಸ್ಮಿಕ ನಷ್ಟವೊದಗಲಿದೆ. ತಾ. 19, 20, 25 ಈ ದಿನಗಳಲ್ಲಿ ರಾಜಭಯ, ಅತಿವ್ಯಯಗಳಾದಾವು.

ಮಿಥುನ—ಜನಬಲ ಧನಬಲಗಳಿಂದ ಕೂಡಿದ ನಿಮಗೆ ಯಾವ ಮಹತ್ಕಾರ್ಯವೇ ಇರಲಿ, ತೃಣಸದೃಶವೆನಿಸುವದು. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಗೌರವಾದರಗಳನ್ನು ಪಡೆವಿರಿ. ಉದ್ಯಮದಲ್ಲಿ ಅಧಿಕ ಫಲವಿದೆ. ಆದರೆ ಮನೆಯಲ್ಲಿ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಮನಸ್ತಾಪ, ಕಲಹಗಳಾದಾವು. ವಾರಾದಿಯ 4 ದಿನಗಳಲ್ಲಿ ಆಕಸ್ಮಿಕ ವಿಪತ್ತು, ದೇಹಾಲಸ್ಯಗಳು ಕಾಣಿಸಲಿವೆ.

ಕರ್ಕಾಟ—ಪ್ರವಾಸಿಗಳಿಗೆ ಈ ವಾರವು ಅನಿಷ್ಟಕರವಿದೆ. ನಷ್ಟ ಕಷ್ಟಗಳೊದಗಬಹುದು. ಪರರ ಹಂಗಿಲ್ಲದೆ ಕಾರ್ಯವನ್ನು ಸಾಗಿಸುವ ಶಕ್ತಿ ಸಾಹಸಗಳು ನಿಮ್ಮಲ್ಲಿರುವವು. ಬಲವಂತರಾದ ಶತ್ರುಗಳು ಮುಂಗುಸಿಯನ್ನು ನೋಡಿದ ಸರ್ಪದಂತೆ ತಲೆಬಾಗುವರು. ಮಕ್ಕಳ ಸಲುವಾಗಿ ಮತ್ತು ಸ್ವಂತದ ಸಲುವಾಗಿ ವೈದ್ಯರ ಸ್ನೇಹ ಮಾಡಬೇಕಾಗುವದು. ತಾ. 19, 20, 25 ಈ ದಿನಗಳಲ್ಲಿ ಸ್ತ್ರೀ ಧನ ಲಾಭ, ಇಷ್ಟಸಿದ್ಧಿ, ಸುಖಗಳು ಲಭಿಸುವವು.

ಸಿಂಹ— ಸಂಸರ್ಗದೋಷದಿಂದಾಗಿ ನೀವೀ ವಾರದಲ್ಲಿ ಜನಾಪವಾದ, ಅನಿಷ್ಟಗಳಿಗೆ ಸಿಲುಕಲಿರುವಿರಿ. ಖರ್ಚು ವೆಚ್ಚಗಳು ಬಹುವಾಗಿದ್ದರೂ ನಿಮ್ಮ ದುಡಿಮೆಯೂ ಕೂಡ ಉತ್ತಮವಿರುವುದರಿಂದ ಹಣದ ತಗಾದೆಗೆ ಸಿಲುಕಲಾರಿರಿ. ಇಷ್ಟಾದರೂ ಕೂಡ ನಿಮ್ಮ ತನುಮನಗಳಿಗೆ ಸುಖ ಶಾಂತಿಗಳಿಲ್ಲವು. ವ್ಯಾಪಾರಿಗಳಿಗೂ ಲೇಖಕ ವರ್ಗದವರಿಗೂ ವಿಟ ನಟರಿಗೂ ಈ ವಾರವು ಇಷ್ಟಸಿದ್ಧಿಕರ. ವಾರಾದಿಯ 4 ದಿನಗಳು ಇಷ್ಟಪ್ರದಗಳಿವೆ.

ಕನ್ಯಾ—ನಿಮ್ಮ ಪರಿಸ್ಥಿತಿಯು ಸ್ವಲ್ಪ ಸುಧಾರಿಸಲಿದೆ. ಖರ್ಚಿನ ಭಾಗಗಳು ಕಡಿಮೆಯಾಗುವವು. ಶ್ರಮಕ್ಕಿಂತ ಅಧಿಕವಾದ ಫಲ ಲಭಿಸಲಿದೆ. ಮಕ್ಕಳಿಂದಲೂ ಕಳ್ಳಕಾಕರಿಂದಲೂ ಧನ ಪ್ರಾಪ್ತಿಯ ಯೋಗವಿದೆ. ವಿಷಾಗ್ನಿ ಸಂಬಂಧ ಭಯವೂ ಆಪ್ತೇಯರ ವಿರಹದಿಂದುಂಟಾದ ಮನಃಕ್ಲೇಶವೂ ನಿಮ್ಮನ್ನು ಪೀಡಿಸುತ್ತಿರುವದಾದರೂ ತಾ. 21, 22, 23, 24 ಈ ದಿನಗಳಲ್ಲಿ ಸ್ವಲ್ಪ ನೆಮ್ಮದಿ ಹೊಂದುವಿರಿ.

ತುಲಾ—ಬಹುಮಟ್ಟಿಗೆ ನಿಮ್ಮ ದೇಹಾಲಸ್ಯವು ಕಡಿಮೆಯಾಗುವದು. ಆಪತ್ಪರಂಪರೆಗಳು ಮೇಲಿಂದ ಮೇಲೆ ಬರುತಲಿದ್ದರೂ ಅವೆಲ್ಲವುಗಳಿಂದ ಪಾರಾಗುವಿರಿ. ಜನತೆಯಲ್ಲಿ ಒಳ್ಳೇ ಸ್ಥಾನ ಪಡೆವಿರಿ. ನಿಮ್ಮ ದೈಹಿಕ ಸುಖಕ್ಕಾವ ಕೊರತೆಯೂ ಉಂಟಾಗದು. ಈ ಹಿಂದೆ ನಿಮ್ಮಿಂದ ತುಂಬಾ ಉಪಕೃತರಾದವರು ಈಗಲೀಗ ನಿಮ್ಮನ್ನೇ ನಿಂದಿಸುತ್ತಿರುವರು. ತನ್ನಿಮಿತ್ತ ಮನಸ್ಸಿಗೆ ಖೇದವಾದೀತು. ವಾರಾಂತ್ಯದ 3 ದಿನಗಳು ಎಲ್ಲಾ ಭಾಗಗಳಲ್ಲೂ ಉತ್ತಮವಿರುವವು.

ವೃಶ್ಚಿಕ—ಈ ವಾರದಲ್ಲಿ ಒಮ್ಮೆಲೇ ನಿಮ್ಮ ಪರಿಸ್ಥಿತಿಯಲ್ಲಿ ಹಲವಾರು ಬದಲಾವಣೆಗಳಾಗಲಿವೆ. ಒಮ್ಮಿಂದೊಮ್ಮೆಗೆ ಆದಾಯದ ಮಾರ್ಗಗಳು ಕಟ್ಟಾಗುವುದರಿಂದ ದಿನದ ಖರ್ಚಿಗಾಗಿ ಹೆರವರ ಕೂಡೆ ಸಾಲ ಮಾಡುವ ಪ್ರಸಂಗ ಬರಲಿದೆ. ವಿಪಕ್ಷೀಯರ ಪ್ರತೀಕಾರದ ದೆಸೆಯಿಂದಾಗಿ ಕಾರ್ಯಗಳನ್ನು ಅರ್ಧದಲ್ಲೇ ಕೈದಿಡಬೇಕಾಗುವದು. ಜೇನಿನಾಸೆಗಾಗಿ ಬಂದ ಭ್ರಮರಗಳು ಆ ಮೇಲೆ ದೂರ ಸರಿವಂತೆ ಈ ಹಿಂದೆ ನಿಮ್ಮನ್ನಾಶ್ರಯಿಸಿದ್ದವರೆಲ್ಲರೂ ತಾವಾಗಿ ದೂರ ಸರಿವರು. ಆದರೂ ತಾ. 19, 20, 25 ಈ ದಿನಗಳಲ್ಲಿ ನಿಮ್ಮ ಬಯಕೆಯು ಬಹ್ವಂಶ ಸಿದ್ಧಿಸುವದು.

ಧನು—'ದುಃಖಸ್ಯಾನಂತರಂ ಸುಖಂ' ಎಂಬಂತೆ ಹಲವು ಸಮಯದಿಂದ ಬಹಳ ಕಷ್ಟ ನಷ್ಟಗಳಿಗೀಡಾಗಿದ್ದ ನಿಮಗೆ ಈ ವಾರವು ಸ್ವಲ್ಪ ಸುಖ ಶಾಂತಿದಾಯಿಯಾಗಿ ಪರಿಣಮಿಸಲಿದೆ. ಬಂಧು ಮಿತ್ರರ ನೆರವಿನಿಂದಾಗಿ ಹಣದ ಬಿಕ್ಕಟ್ಟಿನಿಂದ ಮುಕ್ತರಾಗುವಿರಲ್ಲದೆ ಹೆಚ್ಚಿನ ಕಾರ್ಯಗಳನ್ನು ಕೊನೆಗಾಣಿಸುವಿರಿ. ಆದರೂ ಪಿತ್ಥ ದೋಷದಿಂದ ದುಃಸ್ವಪ್ನ, ನಿದ್ರಾಭಾವಾದಿಗಳು ಆಗಾಗ ಉಂಟಾಗಲಿವೆ. ಕೆಲವೊಮ್ಮೆ ನಿಮ್ಮ ಮನಸ್ಸು ಹೆದರಿಕೆಯಿಂದ ಹುಲ್ಲೆಯಂತೆ ಬಹಳ ಚಂಚಲವಾದೀತು. ತಾ 21, 22 ಈ ದಿನಗಳಲ್ಲಿ ಪ್ರವಾಸಗಳ ಲಾಭ, ಜಯ, ಗೃಹಸುಖಗಳು ಲಭಿಸುವವು.

ಮಕರ—ಬೇರೆಯವರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಯಾವತ್ತು ಕಾರ್ಯಗಳನ್ನು ನಿರ್ವಹಿಸುವ ಶಕ್ತಿ ಯುಕ್ತಿಗಳು ನಿಮ್ಮಲ್ಲಿದ್ದ ಕಾರಣ ನಿಮ್ಮ ಬಯಕೆಗಳನ್ನು ಇಂದೇ ಪೂರೈಸಿರಿ. ರಾಜಕೀಯ ಕ್ಷೇತ್ರದಲ್ಲಿ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವದು. ಹಿಂದಿನ ಸಾಲ ತಗಾದೆಗಳಿಂದ ಮುಕ್ತರಾಗಿ ಆಪದ್ಧನವನ್ನೂ ಕೂಡ ಸಂಗ್ರಹಿಸುವಿರಿ. ವಿನಾ ಕಾರಣ ಕೆಲವರೊಡನೆ ಕಲಹಗಳಾದಾವು. ತಾ. 19, 20, 23, 24 ಈ ದಿನಗಳು ಸರ್ವೋತ್ಕೃಷ್ಟಗಳಿವೆ.

ಕುಂಭ—ಕಾರ್ಯರಂಗದಲ್ಲಿ ಮುಂದೊತ್ತುವರೆ ಬೇಕಾದ ಧೈರ್ಯ ಸಾಹಸಗಳು ನಿಮ್ಮಲ್ಲಿ ಮಾಯವಾಗುವವು. ಖರ್ಚನ್ನು ಪೂರೈಸುವ ಆದಾಯವು ಇಲ್ಲದ್ದರಿಂದ ದಿನಯಾಪನೆಯು ಕಷ್ಟಸಾಧ್ಯವಾಗುವದು. ಮನೋರೋಗವು ಅತ್ಯಧಿಕವಾಗಿ ಬಾಧಿಸುವುದರಿಂದ ತನ್ನಿಮಿತ್ತ ಆರೋಗ್ಯವೂ ಕೆಡಲಿದೆ. ಯಾವುದನ್ನು ಮಾಡತಕ್ಕದ್ದು ಯಾವುದನ್ನು ಬಿಡತಕ್ಕದ್ದು ಎಂಬ ಜ್ಞಾನ ಶೂನ್ಯರಾದ ನಿಮಗೆ ತಾ 19, 20, 23, 24 ಈ ದಿನಗಳಲ್ಲಿ ಇಲ್ಲಸಲ್ಲದ ಖರ್ಚು, ಮಾನನಾಶ, ಕಾರ್ಯವಿಘ್ನಗಳೂ ಪ್ರಾಪ್ತವಾಗುವವು.

ಮೀನ—ಮಹದಾಪತ್ತಿನಿಂದ ನೀವು ಪಾರಾದಿರೆಂದರೆ ಅತಿಶಯೋಕ್ತಿಯೆನಿಸದು. ಈ ವಾರದಲ್ಲಿ ನಿಮ್ಮ ಆರ್ಥಿಕ ಬಿಕ್ಕಟ್ಟು ಬಹುಮಟ್ಟಿಗೆ ಕಡಿಮೆಯಾಗುವದು. ಕೈಗೊಂಡ ಕೆಲವು ಕಾರ್ಯಗಳು ನಿಮ್ಮಂತೆ ಆಗುವವು. ಗೃಹಕಾಪತ್ರ್ಯಗಳು ಬಹುತೇಕ ಹಿಂಗುವವು. ಆದರೂ ಪರ್ಯಟನದಲ್ಲಿ ನಾನಾ ತೆರನಾದ ಕಷ್ಟ ನಷ್ಟಗಳು ಒದಗಬಹುದು. ದೇಹಾರೋಗ್ಯವೂ ತೃಪ್ತಿಕರವಾಗಿರಲಾರದು. ತಾ. 21, 22, 25ರಲ್ಲಿ ಖರ್ಚು ಹೆಚ್ಚೀತು.





Approved firm by the Govt. of Mysore
Certificated by the Agent of the Govt of Ceylon & Indian.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುತ್ತದೆ. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ದಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳುಕಡ್ಡಿ ಮುಲಾಮು ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Edited, Printed & Published By K. H. Shetty At The Navayuga Press, Udipi, S.India.

Regd. No. M. 3618 | Estd 1921 ಸ್ಥಾಪನೆ. 31ನೇ ವರ್ಷ | 26-10-1950

LICENCE No. 31
Licensed to Post without Prepayment

Founder. Sri A. B. Shetty,
Minister for Agriculture & Veterinary.

ನವಯುಗ

ವರ್ಷ ೩೧
ವಾರ ೮

NAVAYUGA
WEEKLY

POST BOX NO. 22
UDIPI, S. K.

Vol. 31
No. 8

ಇವು ಕ್ರಾಂತಿ ಪ್ರೇರಣೆಗಳು–

ಬ್ರಿಟಿಷರಿಗೆ ಭಾರತದಲ್ಲಿದ್ದ ಪರಕೀಯ ಸ್ಥಾನ, ಮಾನ, ಭಾವನೆಗಳು, ಸ್ವಾತಂತ್ರ್ಯಕ್ಕಾಗಿ ಕ್ರಾಂತಿಯೆಬ್ಬಿಸುವ ಪ್ರೇರಣೆಯನ್ನು ಭಾರತೀಯರಲ್ಲಿ ನಿರ್ಮಿಸಿದ್ದಂತೆಯೇ ಪ್ರಚಲಿತ ರಾಜಕೀಯ, ಆರ್ಥಿಕ, ಸಾಮಾಜಿಕ ರಂಗಗಳಲ್ಲಿ 'ಇದ್ದವರ' ವಿರುದ್ಧವಾಗಿ 'ಇಲ್ಲದವರ' ಕ್ರಾಂತಿಯನ್ನು ಹುರಿದುಂಬಿಸುವ ವಿದ್ಯಮಾನಗಳು ಈಗ ಕಂಡು ಬರುತ್ತಿವೆ.

ತಮ್ಮ ಆಡಳಿತ ವಿಧಾನಗಳು ದೋಷರಹಿತವಿವೆ, ಜನತೆಯ ನಡುವಿನಲ್ಲೇ ಎಲ್ಲಾ ಲೋಪದೋಷಗಳೂ ತುಂಬಿವೆ, ಎಂಬಂತೆ ಉಪದೇಶಿಸುತ್ತಾ, ಹೋಗುವುದರ ಜತೆಯಲ್ಲಿ ಪ್ರಚಲಿತ ಸ್ಥಿತಿಗತಿಗಳನ್ನು ಬಹುಜನ ಹಿತಕಾರಿಯಾಗಿ ಬದಲಾಯಿಸಲು 'ಕಾಲಬಂದಿಲ್ಲ' ಎಂಬ ಕಾರಣ ಕೊಡುತ್ತಾ ಬರುತ್ತಿರುವ ಸರಕಾರೀ ನಾಯಕರ ಮನೋವೃತ್ತಿಯು ಅಧಿಕಾರೀ ವರ್ಗದ ವಿರುದ್ಧವಾಗಿ ಜನಮನವನ್ನು ಕೆರಳಿಸಿದೆ.

ಧನಿ, ಧನಿಕ ಮತ್ತು ವರ್ಚಸ್ಸುಳ್ಳ ವರ್ಗಗಳವರ ಅಭಿಲಾಷೆಗಳು ಈ ಕಾಂಗ್ರೆಸ್ ಆಡಳಿತೆಯಲ್ಲಿ ಹಿಂದಿಗಿಂತ ಸುಲಭದಲ್ಲಿ ಈಡೇರುತ್ತಿರುವಾಗ ಬಡಜನವರ್ಗದ ಪಾಲಿನ ಕ್ರಮ ಬದ್ಧನ್ಯಾಯ ಪಾಲನೆ ಕೂಡಾ ಮೊದಲಿಗಿಂತ ಪ್ರಯಾಸದ್ದಾಗಿರುವುದರಿಂದ ಜನಸಾಮಾನ್ಯರಲ್ಲಿ ಜಿಗುಪ್ಸೆ ಮತ್ತು ಸಂತಾಪ ಮೊಳೆತಿದೆ.

ರಾಷ್ಟ್ರ ಸ್ವಾತಂತ್ರ್ಯವು ಸಂಪೂರ್ಣವಾಗಿ ಸ್ವಾರ್ಜಿತ ಮತ್ತು ತಮ್ಮ ಪರಂಪರಾಗತ ಹಕ್ಕಿನದು ಎಂದೇ ಭಾವಿಸಿಕೊಂಡು ವರ್ತಿಸುತ್ತಿರುವ ಕಾಂಗ್ರೆಸಿಗರ ವಿರುದ್ಧವಾಗಿ ಕಾಂಗ್ರೆಸೇತರರೆಲ್ಲರ ಮನಸ್ಸೂ ಈಗ ಗುಪ್ತ ಬಂಡಾಯವಿದ್ದಿದೆ.

ಎಂತಹ ಕಪಟನಾಟಕ, ಕಳಂಕವರ್ತನೆಯಿಂದಾದರೂ ಅಧಿಕಾರ, ಸ್ಥಾನ ಅಥವಾ ಹಣವನ್ನು ಸಂಪಾದಿಸಿ ಕೊಂಡವರು ಪ್ರಚಲಿತ ಸ್ಥಿತಿಗತಿಯೇ ನ್ಯಾಯೋಚಿತ ಮತ್ತು ಕಾಲೋಚಿತವೆಂಬ ಭಾವನೆಯುಳ್ಳವರು, ತದ್ವಿರುದ್ಧವಾದ ಪ್ರಗತಿ ಸಾಧನೆಗಳ ಸುವವರನ್ನು ಒಂದು ವರ್ಗದ ಕೇಡಿಗಳಂತೆ ಕಾಣುತ್ತಿರುವುದರಿಂದ ಪ್ರಗತಿಶೀಲರ ಮನಸ್ಸು ಪ್ರಚಲಿತ ಸ್ಥಿತಿಗತಿಗಳ ಕಡೆಗೆ ಪರಮಾವಧಿ ಕೆರಳಿದೆ

ಪ್ರದರ್ಶನ ಗಾಂಭೀರ್ಯವಿಲ್ಲದೆ, ಕೃತಕ ಟಪ್ಪ, ಒಯ್ಯಾರಗಳಿಲ್ಲದೆ ಕಾರ್ಯವೊಂದರಲ್ಲೇ ತಲ್ಲೀನರಾಗಿ ಎಂತಹ ಸೇವೆ ಸಲ್ಲಿಸಿದರೂ, ಅಂಥವರು ಕಡೆಗಣಿಸಲ್ಪಡುತ್ತಿರುವಾಗ, ಕೇವಲ ಕೃತಕ ನಟನೆಗಳಿಂದ ಪ್ರಸಿದ್ಧರಾಗುತ್ತಿರುವವರನ್ನು ಕಂಡು ಸದ್ಯದ ಮಾನಸಿಕ ವ್ಯಕ್ತಿವಿಚಾರಗಳ ಹಾರ್ದಿಕ ತಾಪ ಒಡೆಯುತ್ತಿದೆ.

ಸ್ವಂತ ಮೇಲ್ಮೆಯೊಂದನ್ನಲ್ಲದೆ ಬೇರೇನನ್ನೂ ಸಾಧಿಸದಿದ್ದವನನ್ನು ಸರ್ವರೂ ತಲೆಯಮೇಲಿಟ್ಟು ಕೊಳ್ಳುತ್ತಿರವಾಗ, ಸ್ವಯಂಸೇವಕನಾಗಿ ದುಡಿಯಬನವನನ್ನು ಎಲ್ಲರೂ ಸ್ವಂತ ಸೇವಕನೆಂದೇ ಗಣಿಸುತ್ತಿರುವ ಅಸ್ತವ್ಯಸ್ತತೆಯು ಸ್ಫೋಟವಾಗಲ ಸಿಡಿಮದ್ದಾಗಿ ನಿಂತಿದೆ

ಧನಿ, ಧನಿಕರ ಸ್ವಾರ್ಥ, ಕಪಟ ಮತ್ತು ಕಳಂಕಗಳಿಗೆ ಸ್ವಾತಂವಿರತೆಯ ಮತ್ತು ಘನಸ್ಥಿತಿಯ ರಕ್ಷೆ ಪಡೆ ಬೀಳುತ್ತಿರುವಾಗ, ಶ್ರಮಜೀವಿಗಳ ಸ್ಥಿತಿಗತಿಗಳಲ್ಲಿ ಸ್ವಾಭಾವಿಕವಿರುವ ಒರಟುತನ, ದುಡುಕುತನಗಳು ಮಾತ್ರ ಪರಮಾವಧಿ ಅಪರಾಧಗಳಾಗಿ ಗಣಿಸಲ್ಪಟ್ಟು ದಂಡನೆಗೀಡಾಗುತ್ತಿರುವುದರಿಂದ ಕೆಳ ದರ್ಜೆಯವರೆಲ್ಲರಲ್ಲೂ ಪ್ರಚಲಿತ ಸ್ಥಿತಿಯ ಕಡೆಗೆ ಉದ್ವೇಗವೆದ್ದಿದೆ.

ಪ್ರಚಲಿತ ವಾತಾವರಣದ ಪಹರೆಗಾಗಿ ಇರುವ ಕಾಯಿದೆಗಳ ಮತ್ತು ಕ್ರಮನಿಯಮಗಳ ಬೆಂಬಲ—ತೋರುವಿಕೆಯ ಮಟ್ಟಿಗೆ ನಾಗರಿಕ ನಡತೆಗಳನ್ನು ಉಳಿಸಿ ಕೊಳ್ಳಲಾಗುವ ನೆಮ್ಮದಿ—ಮೇಲು ವರ್ಗದವರ, ಮಂತ್ರಿ ಪ್ರಮುಖರ ಸಂಬಂಧ ಅಥವಾ ಸಲುಗೆ—ಇವೆಲ್ಲವೂ ಶ್ರೀಮಂತರಿಗೇನೇ ಇದ್ದು, ತಾವು ಎಲ್ಲಾ ವಿಧಾನಗಳಿಂದಲೂ ನಿಸ್ಸಹಾಯಕರಾಗಿರುವುದರಿಂದ ಬಡವರ ಹೃದಯದಲ್ಲಿ ಕಿಡಿ ಧಗಿಸುತ್ತಿದೆ.

ಒಮ್ಮೆ ಗಾಂಧಿಭಕ್ತರು ಅಥವಾ ದೇಶಸೇವಕರೆನ್ನಿಸಿಕೊಂಡವರು, ಮತ್ತೆ ಏನೇ ಮಾಡಿದರೂ ತಪ್ಪುಗಾರರೆನ್ನಿಸಿಕೊಳ್ಳುತ್ತಿದ್ದುದು ಅಸಾಧ್ಯವಿರುವುದರಿಂದ ಮಿಕ್ಕವರಲ್ಲೆಲ್ಲಾ ನ್ಯಾಯನಿರಾಶೆ ಮತ್ತು ಜಿಗುಪ್ಸೆ ಮೊಳೆತಿದೆ

ಸರ್ವಸಮಾನತೆ ಮತ್ತು ಸಮಾನಾಧಿಕಾರಗಳನ್ನು ಅಸ್ತಿತ್ವದಲ್ಲಿಡಲು ಮುಂದೆ ಬಂದಿರುವ ಶಾಸನ ಮತ್ತು ವಿಧಾನಗಳು ಕೂಡಾ ಸದ್ಯಸ್ಥಿತಿಯಲ್ಲಿ ಮೇಲು ವರ್ಗದ ಅಲ್ಪ ಸಂಖ್ಯಾಕರ ಹಿತವನ್ನು ಹಿಂದಿಗಿಂತಲೂ ಹೆಚ್ಚಾಗಿ ಸಾಧಿಸಿಕೊಡುವ ಸಂಭವವಿರುವುದರಿಂದ, ಘಟನಾತ್ಮಕವಾಗಿ ಸಮತೆ ಮತ್ತು ಸಮಾನಾಧಿಕಾರ ಸ್ಥಾಪಿಸುವ ಕುರಿತು ಸಾಮಾನ್ಯರಲ್ಲಿ ನಿರಾಶೆ ಮತ್ತು ಮೂಲಕ ಉದ್ವೇಗವೇಳುವಂತಾಗಿದೆ.

ರಾಷ್ಟ್ರದ ಆಹಾರೋತ್ಪಾದಕರಾದ ಮತ್ತು ರಾಷ್ಟ್ರಜೀವಾಳವಾಗಿರುವ ಕೃಷಿ... ಧಿಕಾರ ರಂಗದಲ್ಲಿ ಮಾತ್ರವಲ್ಲ, ಆಹಾರ ವಿತರಣಾ ಕ್ಷೇತ್ರದಲ್ಲೂ ಅಸಹ್ಯ ರೀತಿಯಿಂದ ಕಡೆಗಣಿಸಲ್ಪಟ್ಟು, ಕಷ್ಟ ನಷ್ಟಗಳನ್ನು ಅನುಭವಿಸಿ, ಕೃಷಿವರ್ಗದ ಮ... ಸ್ಸು ಒಳಗಿಂದೊಳಗೆ ಕುದಿಯುತ್ತಾ ಇದೆ.

ತಮ್ಮ ಬೇಡಿಕೆಗಳು ಎಂತಹವೇ ಇದ್ದರೂ ಈ ಕಾಲದಲ್ಲಿ ಅವುಗಳನ್ನು ಒಂದಿಷ್ಟು ಗಟ್ಟಿ ಸ್ವರದಿಂದ ಹೇಳಿಕೊಂಡ ಮಾತ್ರಕ್ಕೇನೇ ಅದಕ್ಕೆ 'ಕಮ್ಯೂನಿಸ್ಟ್ ಕಂಟಕ'ವೆಂಬ ಚಿಲ್ಲೆ ಹಚ್ಚುವ ಚಟವೂ ... ವರ್ತಿವ್ಯಾಪಿಸಿರುವುದರಿಂದ ಮಜೂರ ... ರ್ಗದಲ್ಲಿ ಒಂದು ರೀತಿಯ ಕ್ರಾಂತಿಪೂರ್ವ ಭೀತಿ ವ್ಯಾಪಿಸಿದೆ.

ಕಾಂಗ್ರೆಸಿನ ತತ್ವ, ಘೋಷಣೆ, ಕಾರ್ಯಕ್ರಮಗಳು ಹೇಗಿದ್ದರೂ, ಸುಸಂದರ್ಭವಿರುವ ಮಿಕ್ಕ ರಾಜಕೀಯ ಪಕ್ಷಗಳಿಗೆ



THE UNITED KARNATAK
INSURANCE COMPANY LIMITED,
United Karnatak Buildings, DHARWAR.
Established 1929
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ
ರಜತೋತ್ಸವ ಸಮಾರಂಭದ ಸುಸಂದರ್ಭದಲ್ಲಿ
ನವಯುಗದ ಹಾರ್ದಿಕ ಶುಭಾಶಯಗಳು

ಕ ಕಾಂಗ್ರೆಸೇ ಪಾಪಿಯೆಂಬ ಭಾವನೆಯಿಂದ ಎಲ್ಲಾ ವರ್ಗಗಳ ಶ್ರೀಮಂತರ ಒಲವು ಕಾಂಗ್ರೆಸಿಗಿರುವುದರಿಂದಲೂ ಪ್ರಕೃತ ಕಾಂಗ್ರೆಸಿನಲ್ಲಿ ಶ್ರೀಮಂತರೇ ಹೆಚ್ಚಾಗಿ ಸೇರಿಕೊಂಡಿರುವುದರಿಂದಲೂ ಕಾಂಗ್ರೆಸನ್ನು, ಆ ಮೂಲಕ ಇಂದಿನ ಆಡಳಿತೆಯನ್ನು ಬಡವರು ಓರೆಗಣ್ಣಿನಿಂದ ನೋಡಲಾರಂಭಿಸಿದ್ದಾರೆ.

ತಮ್ಮ ಹೆಸರಿನಲ್ಲಿ ಸರಕಾರ ರಚನೆ, ತಮ್ಮ ಹೆಸರಿನ ರಾಜ್ಯ ಘಟನೆ, ಎಲ್ಲರ ಬಾಯಿಯಲ್ಲೂ ತಮ್ಮ ನಾಮಸ್ಮರಣೆ— ಆದರೂ ತಮ್ಮ ಅಭಿಪ್ರಾಯಗಳಿಗೆ ಬೆಲೆಯನ್ನಾಗಲೀ, ತಮ್ಮ ಸ್ಥಿತಿಗತಿಗಳ ಕಡೆಗೆ ಲಕ್ಷ್ಯವನ್ನಾಗಲೀ ಕೊಡದೆ ಕೆಲವೇ ಮಂದಿಯು ಕಾರುಬಾರು ನಡೆದಿದೆಯೆಂಬುದರಿಂದ ಜನತೆಯೀಗ ಮನೋದ್ವೇಗಗೊಂಡಿದೆ.

ಮಹಾಚುನಾವಣೆ ಸಮೀಪಿಸುತ್ತಿದೆ

ಮಹಾಚುನಾವಣೆ ಸಮೀಪಿಸುತ್ತಿದೆ; ಬರುವ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ರಾಷ್ಟ್ರದ ಎಲ್ಲಾ ಕಡೆಗಳಲ್ಲೂ 'ಜನತಾ ಭವನದ' ಮತ್ತು ಸಂಸ್ಥಾನಿಕ ಶಾಸನ ಸಭೆಗಳ ಚುನಾವಣೆಗಳಾಗುವವು. ಪ್ರಾಯ 21 ಮಿಕ್ಕಿದ ಎಲ್ಲರಿಗೂ ವೋಟಿನ ಹಕ್ಕು ಬಂದಿದೆ; ಕಳೆದ ಬಾರಿಯ ಚುನಾವಣೆಯ ವೇಳೆ ಇದ್ದ ಮತದಾರರ ಸಂಖ್ಯೆಯ ಇಮ್ಮಡಿಯಷ್ಟು ಮತದಾರರು ಮುಂದಿನ ಬಾರಿ ಆಗಬಹುದೆಂದು ಊಹಿಸಲಾಗಿದೆ. ಹೊಸ ರಾಜ್ಯಘಟನೆಯನ್ವಯ ಮತದಾರರ ಸಂಖ್ಯೆ ಹೆಚ್ಚಿದ ಮಾದರಿಯಲ್ಲೇ ಶಾಸನ ಸಭೆಗಳ ಸ್ಥಾನಗಳೂ ಹೆಚ್ಚಿವೆ. ಮತದಾನ ನಿಲ್ದಾಣಗಳ ಸಂಖ್ಯೆಯೂ ಹೆಚ್ಚಲಿದೆ; ಚುನಾವಣಾ ಪ್ರಚಾರಗದ್ದಲವೂ ಹೆಚ್ಚಬೇಕು; ಆತುರ ಉದ್ವೇಗಗಳೂ ಹೆಚ್ಚಾದಾವು; ಎಲ್ಲವೂ ಅಧಿಕಾಧಿಕ.

ಸಂಪೂರ್ಣ—ಸಮರ್ಪಕ

ಪ್ರೌಢ ಮತಾಧಿಕಾರ ಬಂದಿದೆಯೆನ್ನುವಾಗ, ಪ್ರಜಾಪ್ರಭುತ್ವ ರಚನೆಯ ಕಳಹದಿ ಪೂರ್ಣಗೊಂಡಿದೆ ಎಂದರ್ಥ. ಸರ್ವಜನ ಪ್ರಾತಿನಿಧ್ಯದ ಮೂಲಕ ಉಂಟಾಗಿದೆ; ಜನತೆಯೇ ಜನತಾರಾಜ್ಯ ಭಾರತವನ್ನು ಕಟ್ಟುವದೆಂದರೆ, ಪ್ರಾಪ್ತವಯಸ್ಕರೆಲ್ಲರೂ ತಮ್ಮ ಅಭಿಮತವನ್ನು ವ್ಯಕ್ತಪಡಿಸುವ ಪ್ರೌಢಮತದಾನ ಪದ್ಧತಿಯ ಮೂಲಕವೇ ಹೊರತು ಬೇರಲ್ಲ. ಆದ್ದರಿಂದ ಪ್ರಾಯಸ್ಥರಿಗೆ ಬಂದಿರುವ ಮತಾಧಿಕಾರದಿಂದ ಪ್ರಜಾಸತ್ತಾ ತತ್ವವು ಈ ಮಟ್ಟಿಗೆ ಸಂಪೂರ್ಣವಾಗಿ ಪಾಲಿಸಲ್ಪಟ್ಟಿದೆ, ಎಂಬುದು ನಿರ್ವಿವಾದ. ಸ್ವಂತಆಸ್ತಿಯ ಅನುಭೋಗ,ಸ್ವೇಚ್ಛಾಪ್ರಯೋಗದ ಮಟ್ಟಿಗೂ ಒಬ್ಬನನ್ನು ಅಥವಾ ಒಬ್ಬಳನ್ನು ಅನರ್ಹನನ್ನಾಗಿ ಮಾಡುವ 21 ವರುಷ ಪ್ರಾಯವಾಗದ 'ಮೈನರ'ರಿಗೂ ವೋಟಿನ ಹಕ್ಕಿರಬೇಕೆಂದು ಯಾರೂ ಹೇಳಲಾರರು. 'ಒಂದು ಜನ'ವೆನ್ನಿಸುವ ಪ್ರಾಯ 21 ನೇ ವಯಸ್ಸು, ಈಗಿನ ರಾಜ್ಯಭಾರದಲ್ಲಿ ಮತದಾನದ ಅಧಿಕಾರವನ್ನೂ ತರುತ್ತಿದೆಯಾದ್ದರಿಂದ ಈ ಮೂಲಕ 'ಜನಜವಾಬ್ದಾರೀ' ಆಡಳಿತೆ ನಿರ್ಮಾಣಗೊಳ್ಳಬೇಕು; ಈ ಮೂಲಕವೇ 'ಜನತಾರಾಜ್ಯ'ವಾಗಬೇಕು. ಈ ಮಟ್ಟಿಗೆ ಯಾವ ತಿದ್ದುಪಡಿ ಸೂಚನೆಯಾದರೂ ಮುಂದೆ ಬರಲು ಸಾಧ್ಯವಿಲ್ಲ. ಹಾಗಾದರೆ, ಈ ಜನಾಭಿಮತ ಪ್ರದರ್ಶನ ವ್ಯವಸ್ಥೆಗಳಲ್ಲಿ ಬೇರಾವ ಲೋಪದೋಷಗಳಿವೆ? ಹೊಸ ರಾಜ್ಯಾಂಗ ಶಾಸನದ ವಿವಿಧಾಂಗಗಳ ಕುರಿತು 'ಸಮಾಜವಾದಿ'ಗಳೇ ಮೊದಲಾದವರು ಮುಂದೊಡ್ಡಿರುವ ಆಕ್ಷೇಪಗಳು ಬಹಳವಿವೆ; ಈ ರಾಜ್ಯಾಂಗ ರಚನೆ ಮಾಡಿಕೊಂಡ 'ಘಟನಾ ಸಮಿತಿ'ಯು ನೇರಾಗಿ ಜನಮತದಿಂದಾರಿಸಲ್ಪಟ್ಟುದಲ್ಲವೆಂಬುದು ಅವರ ಮೂಲ ಆಕ್ಷೇಪ. ಹೀಗಿದ್ದರೂ ಅದರಲ್ಲಿರುವ ಚುನಾವಣಾ ಕ್ರಮನಿಯಮಗಳ ಮಟ್ಟಿಗೆ ಅಂತಹ ಗಂಭೀರ ಆರೋಪಗಳಾವುವೂ ಯಾರಿಂದಲೂ ಮುಂಬರುವಂತಿಲ್ಲ; ಸಣ್ಣಪುಟ್ಟ ತಿದ್ದುಪಡಿಗಳನ್ನು ಸೂಚಿಸುವವರಿರಬಹುದು; ಆದರೆ ಹೀಗೆ ತಿದ್ದುಪಡಿಸುವಂತಹ ತಪ್ಪುಗಳು ಕೂಡಾ ಸ್ವತಃ ತಮ್ಮ ಆಡಳಿತೆಯಲ್ಲಾದರೂ ನಡೆಯಲಾರವೆಂದು ಅವುಗಳ ಸೂಚಕರು ಕೂಡಾ ಹೇಳಲಾರರಾದ್ದರಿಂದ ಅವೆಲ್ಲವೂ ಎಲ್ಲರಿಂದಲೂ ಕ್ಷಮಿಸಲ್ಪಡುವಂತಹವಿವೆ. ಅಂದ ಮೇಲೆ ಭಾವೀ ಮಹಾಚುನಾವಣಾವ್ಯವಸ್ಥೆಯ ಅಸ್ತಿವಾರ, ಹಾಗೂ ಅಂತಸ್ತುಗಳು ಸರ್ವಸಮ್ಮತವೆಂದೇ ಕಟ್ಟಿಕೊಳ್ಳಬಹುದು. ಹಾಗಾದರೆ ಮತ್ತೇನು? ಮಹಾಚುನಾವಣೆಯನ್ನು ನಡಿಸಲು ಹಾಕಿಕೊಂಡ ವಿಧಾನ, ವ್ಯವಸ್ಥೆಗಳು ಸಮಾಧಾನಕರವಾದರೂ ಕಾಲತಪ್ಪಿಎನ್ನಬಹುದೆ? ಬರುವ ಎಪ್ರಿಲ್, ಅಥವಾ ಮೇ ತಿಂಗಳಷ್ಟು ದೂರಕ್ಕೆ ಅದನ್ನಿಟ್ಟುದು ಹೆಚ್ಚಾಯಿತೆ? ಇಷ್ಟು ಹತ್ತಿರಕ್ಕೆಳೆದು ಕೊಂಡುದು ಹೆಚ್ಚಾಯಿತೇ? "ಕಾಂಗ್ರೆಸಿಗರು ಉದ್ದೇಶಪೂರ್ವಕ ಚುನಾವಣೆಗಳನ್ನು ಮುಂದೆ ಮುಂದೆ ಹಾಕುತಿದ್ದಾರೆ" ಎಂಬ ಆರೋಪಗಳು ಕೇಳಿಬಂದಿದ್ದುವು; "ಮುಂದಿನ ಕಾಲಕ್ಕಂಜಿ ಕಾಂಗ್ರೆಸಿಗರು ಚುನಾವಣೆಗಳಿಗಾಗಿ ವಿಶೇಷ ಆತುರಿಸಹತ್ತಿದ್ದಾರೆ"ಎಂಬ ಅಪವಾದ ಈಗ ಕೇಳಿಬರಬಹುದು; ಆದರೆ ಇವೆರಡೂ ಸುಳ್ಳು; ತಪ್ಪು. ಈಗ ತಯಾರಾಗುತ್ತಿರುವ ಮತದಾರರ ಯಾದಿ ಮತ್ತಿತರ ಚುನಾವಣಾ ವ್ಯವಸ್ಥೆಗಳತ್ತ ನೋಡಿದರೆ, ಯಥಾರ್ಥವಾದಿಗಳಾರೂ 'ಅವಧಿ ಹೆಚ್ಚಾಯಿತು' ಎನ್ನುವಂತಿಲ್ಲ. ಸ್ವಾತಂತ್ರ್ಯ ಸ್ಥಾಪನೆಯಾಗಿ ಕಳೆದು ಹೋಗಿರುವ ಕಾಲ ಮತ್ತು ಇಂದಿನ ಸ್ಥಿತಿಗತಿಗಳ ಕಡೆಗೆ ನೋಡುವವರಾರೂ 'ಅವಧಿ ಕಡಿಮೆಯಾಯಿತು'ಎನ್ನುವಂತೆಯೂ ಇಲ್ಲ. ಈ ಬಾರಿ ಭಾರತದಲ್ಲಿರುವಷ್ಟು ಮತದಾರರು, ಪ್ರಪಂಚದ ಬೇರಾವ ರಾಷ್ಟ್ರದಲ್ಲೂ ಎಂದೂ ಇದ್ದುದಿಲ್ಲ. ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವನ್ನಿತ್ತರೆ ಚೈನವು ಭಾರತವನ್ನು ಕ
ರಂಗದಲ್ಲಿ ಹಿಂದ ಹಾಕಬಲ್ಲುದು; ಆದ
ಚೈನದಲ್ಲಿ ಈ ವಿಧಾನ ಜಾರಿಯಲ್ಲಿಲ್ಲ; ಪ್ರೌ
ಢ ಮತಾಧಿಕಾರವಿರುವ ಲೋಕದ ಬೇ
ರಾವ ರಾಷ್ಟ್ರದಲ್ಲೂ ಭಾರತದಷ್ಟು ಸಂಖ್ಯೆ
ಯಿಲ್ಲ; ಹೀಗಾಗಿ ಮತಾಧಿಕ್ಯ
ಮಟ್ಟಿಗೆ ಭಾರತವು ಅದ್ವಿತೀಯ. ಇಷ್ಟು
ದೊಡ್ಡ ಮತದಾರ ಯಾದಿಯನ್ನು ತಯಾ
ರಿಸಲು—ಅಷ್ಟೂ ಸಂಖ್ಯೆಯ ಮತದಾ
ರಿಗಳಾಗಲು ಅವಶ್ಯವುಳ್ಳ ವ್ಯವಸ್ಥೆಗಳನ್ನ
ಮಾಡಲು —ಇಷ್ಟು ಸಮಯ ಬೇ
ಬೇಕು ಇಷ್ಟು ಸಂಶಯ ದೂರವಾಯಿ
ನ್ನುವವರ ಅಭಿಪ್ರಾಯವನ್ನು ಇಂತಹ
ಹಾಸಿದ್ಧತೆಯ ನೋಟವು ಬದಲಾಯಿಸ
ರದು; ಅದು ಸಮೀಪವಾಯಿತೆನ್ನುವ
ಬಾಯಿಯನ್ನು ಸದ್ಯಸ್ಥಿತಿಯೇ ಮುಚ್ಚಿಸ
ರದು. ಅಧಿಕಾರಾರೂಢನೆಯ ಸಂಧಿಕಾಲ
ಪರಿಳತಗಳನ್ನು ದಾಟಿ ರಾಷ್ಟ್ರವೀಗ

ನೋಟೀಸು
ಕಾಸರಗೋಡು
ಡಿ. ಮು. ಕೋರ್ಟಿನಲ್ಲಿ

O. S. 460/1946
R. E. P. 443/1950

ನಾರಾಯಣ ಭಟ್ಟ —ಅರ್ಜಿದಾರ
ಸೀತಮ್ಮ ಸಹಾ —ರೆಸ್ಪಾಂಡೆಂಟ್ಸು

1) ಸೀತಮ್ಮ, ಕಾವಳಜೆ ವಿಷ್ಣು ಭಟ್ಟರ ವಿಧವೆ. 2) ಕೃಷ್ಣ ಭಟ್ಟ, ಸದ್ರಿ ವಿಷ್ಣು ಭಟ್ಟರ ಮಗ, ಕುಟುಂಬದ ಯಜಮಾನ 3) ವೆಂಕಟೇಶ, ಸದ್ರಿ ವಿಷ್ಣು ಭಟ್ಟರ ಮ್ಯಾನರ ಮಗ. ಮ್ಯಾನರು, ಗಾರ್ಡಿಯನ್ ಆಂಡ 2ನೇ ಕೃಷ್ಣ ಭಟ್ಟ,

ಕಾಸರಗೋಡು ತಾಲೂಕು ಪುತ್ತಿಗೆ ಗ್ರಾಮದಲ್ಲಿರುವವರು.

ಮೇಲ್ಕಂಡ ಅಮ್ಲಜ್ಯಾರಿಯು ವಿಲಂಬಿಸ್ತಿಹಾರು ಮಂಜೂರಾತಿ ಬಗ್ಗೆ ತಾ. 13-11-50ಕ್ಕೆ ಯಿಟ್ಟಿರುವ ಸಂಗ್ತಿ ತಿಳಿಸೋಣಾಗಿಯದೆ.

(Sd) P. Ahmad
Advocate for Petitioner
ಕಾಸರಗೋಡು 14-10-50

NOTICE
ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 359/1950

ಶೇಶಪ್ಪ ಚಾಕ್ರ —ವಾದಿ
ಮಹಾಲಿಂಗ ಮೋಣ್ಯ — ಪ್ರತಿವಾದಿ

ಪ್ರತಿವಾದಿ ಮಹಾಲಿಂಗ ಮೋಣ್ಯ,ತಿಮ್ಮಪ್ಪ ಮೋಣ್ಯನ ಮಗ, ಕುಂದಾಪುರ ತಾಲ್ಲೂಕು ಅಜ್ರಿ ಗ್ರಾಮದ ಕಗ್ಗನಕೊಡ್ಲಿನಲ್ಲಿರುವವರು.

ಇವರಿಗೆ

ವಾದಿಯಿಂದ ತಾರೀಕು 22-8-1949ರಲ್ಲಿ ಪ್ರತಿವಾದಿಯು ಗಾಡಿ ಮ ಯೆತ್ತು ಜೊತೆಯನ್ನು ಪಡೆದು ರೂಪಾಯಿ 375-0-0 ಕ್ರಯ ನಿಶ್ಚಯಿಸಿ ಆ ಪ್ರಕಾರ ಬರತಕ್ಕ ತಾರೀಕು 15-1-1950ಕ್ಕೆ ರೂಪಾಯಿ 150-0-0, ತಾರೀಕು 15-5-50ಕ್ಕೆ ರೂಪಾಯಿ 150-0-0 ತಾ. 15-1-51ಕ್ಕೆ ರೂಪಾಯಿ 75-0-0 ಸಹಾ ಕೊಡುವದಾಗಿ ವಾದಿಯ ವರ್ಗ ಪುಸ್ತಕದಲ್ಲಿ ಯೆಗ್ರಿಮೆಂಟು ಬರೆದುಕೊಟ್ಟ ಪ್ರಕಾರ ಆ ಬಾಬ್ತು ತಾ. 15-5-50ಕ್ಕೆ ಬರತಕ್ಕ ಹಣ ಬಡ್ಡಿಗಳಿಗೆ ವಾದಿಯು ಈ ದಾವಾ ದಾಖಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 4-11-1950ನೇ ದಿವಸ ಹಗಲು 11ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai
Pleader for Plff.
Coondapoor 16-10-1950

ಜೀವವಿಮೆಗಾಗಿ
ವಿಚಾರಿಸಿರಿ
ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1934)
ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು

Vijaya Bank, Ltd.,
Vijaya Cash Certificates
"pend less and save more" shall be the Motto of every Indian Citizen.
Vijaya Cash Certificates are the safest and best media for a discriminating investor. They mature on the expiry of three years and carry interest at 4½%.
Rules on application at any of our following Offices
Head Office:—Kadri Road, Mangalore.
Branches:- City-Mangalore, Kaup, Coondapur, Byndoor, Karkala, Brahmavar, Kasaragod, Puttur, Bombay, Udipi, Kanhangad & Mercara.
B. Manjaya Hegde.
Advocate & President, District Board, S. Kanara.
CHAIRMAN

ಅದು ಹೇಗಿದ್ದೀತು? ಹೇಗಿರಬೇಕು?

...ಳಿದಿದೆ; ಸ್ವಾಧಿಕಾರ ಸ್ಥಾಪನೆಯ ಮೊದಲು ಅಧಿಕಾರದಲ್ಲಿದ್ದವರೇ ಅದು ಸ್ಥಾಪನೆಗೊಂಡು ಬಿಸಿಯಾರಿರುವ ಈ ಕಾಲದಲ್ಲೂ ಇದ್ದಾರೆ. ರಾಷ್ಟ್ರಜೀವನದ ಎಲ್ಲಾ ವಿಭಾಗಗಳಲ್ಲೂ ಒಂದಲ್ಲೊಂದು ರೀತಿಯಲ್ಲಿ ಬದಲಾವಣೆಯನ್ನು ತಂದೊಡ್ಡಿರುವ ನವ ಮನ್ವಂತರವು ಅಧಿಕಾರಸ್ಥಾನಗಳಲ್ಲಿರುವ ವ್ಯಕ್ತಿಗಳ ಮತ್ತು ಪಕ್ಷದ ಮಟ್ಟಿಗೆ ಸುಳ್ಳಾಗಿದೆ; ಅಲ್ಲಿರುವವರು ಜನಪ್ರಿಯರಿರಬಹುದು; ಅವರ ಅಧಿಕಾರವೆಂಬುದು, ಹೊಸ ವಾತಾವರಣಕ್ಕೆ ಬದಲಾಯಿಸಿಕೊಂಡವುಗಳ ದರ್ಜೆಗೆ ಸೇರುವಂತಹದಲ್ಲವಾಗಿರಬಹುದು. ಆದರೆ ಅಧಿಕಾರ ಕ್ಷೇತ್ರದಲ್ಲಿ ಹಳೆಯದನ್ನು ಕೆಳಗಿಳಿಸಿ, ಹೊಸತನ್ನು ಏರಿಸಿಕೊಳ್ಳುವುದೇ ನವಯುಗದ ಮುಖ್ಯ ಕರ್ತವ್ಯವಾಗಿರುವಾಗ, ಹಳೇ ನಾಯಕತ್ವವನ್ನು ಉಳಿಸಿಕೊಳ್ಳಬೇಕಾಗಿ ಬಂದಲ್ಲಿ ಪರೀಕ್ಷಿಸಿಕೊಳ್ಳುವ ಕೆಲಸವಾದರೂ ಆಗಬೇಕಿದ್ದಿತು; ಅಂತಹದೀವರೆಗೂ ಆಗಿಲ್ಲ. ಮೊದಲು ಕೇಂದ್ರ ಮಂತ್ರಿಮಂಡಲದಲ್ಲಿ ಅಥವಾ ಸಂಸ್ಥಾನಗಳ ಸಚಿವ ಸಮಿತಿಗಳಲ್ಲಿ ಇದ್ದವರನ್ನು, 1947ನೇ ಆಗೋಸ್ತು 15 ಬಂದು ಕೆಳಗಿಳಿಸಿದುದಿಲ್ಲ. ಜನತಾರಾಜ್ಯ ಘಟನೆ ಮತ್ತು ಪ್ರಾಯಸ್ಥರೆಲ್ಲರ ಪ್ರಾತಿನಿಧ್ಯ ಶಾಸನ ರೂಪದಿಂದ ಜಾರಿಯಲ್ಲಿದೆ; ಆದರೆ ಜನತೆಯಲ್ಲಿ ಕೇವಲ ಒಂದು ಭಾಗದ ಪ್ರಾತಿನಿಧ್ಯವನ್ನಷ್ಟೇ ಪಡೆದು ಆ ಕಾಲದಲ್ಲಿ ಆರಿಸಲ್ಪಟ್ಟಿದ್ದವರೇ ಈಗಲೂ ಅಧಿಕಾರ ಚಾಲು ಮಾಡುತಿದ್ದಾರೆ; ಕೇಂದ್ರ ನಾಯಕರಾದರೋ ಬ್ರಿಟಿಷರು ಅಧಿಕಾರ ಬಿಟ್ಟು ಹೋಗುವಾಗ ನಾಮಕರಣಗೊಂಡಿದ್ದವರು; ಆ ವೇಳೆ ಅವರ ನಾಯಕತ್ವಕ್ಕೊಪ್ಪಿಗೆ ಕೊಡುತ್ತಾ ಬಂದಿರುವ ಪಾರ್ಲಿಮೆಂಟಾದರೋ ನೇರಾಗಿ ಜನತೆಯಿಂದ ಆರಿಸಲ್ಪಡದೆ, ಜನತೆಯ ಒಂದಂಶದಿಂದ ಚುನಾಯಿಸಲ್ಪಟ್ಟವರಿಂದ ಚುನಾಯಿಸಲ್ಪಟ್ಟು ನಿರ್ಮಾಣಗೊಂಡಿರುವ ಸಭೆ. ಇನ್ನು ಇವರೆಲ್ಲರ ಈಗಿನ ಆಡಳಿತೆಯಾದರೋ ಯಾವ ವಿರುದ್ಧ ಸೊಲ್ಲೂ ಕೇಳಬಾರದಷ್ಟು ಸರ್ವಸಮ್ಮತವಿದೆ ಎನ್ನುವುದು ಕಷ್ಟ; ಜನತೆಯ ಇಂದಿನ ಜೀವನ ಸಂಕಷ್ಟಗಳು 'ದೇವರನ್ನೂ' ಟೀಕಿಸುವಷ್ಟು ಹೆಚ್ಚಿನದಿರುವುದರಿಂದ ಆಡಳಿತೆಗಂತೂ ಮಹಾಮಹಾ ಶಾಪಗಳು ಬಡಿಯುತ್ತಿವೆ. ಇವೆಲ್ಲಾ ಸ್ಥಿತಿಗತಿಗಳ ಮೇಲಿಂದ ಸರಕಾರೀ ಪಕ್ಷವು ಸಾರ್ವಜನಿಕ ವಿಶ್ವಾಸದ ಪರೀಕ್ಷೆಗೆ ನಿಲ್ಲುವ ಅವಶ್ಯಕತೆ ಸತ್ಯಕ್ಕೂ ಉಂಟಾಗಿದೆ. ಅದಕ್ಕಾಗಿ ಜನತಾ ವಿಶ್ವಾಸವನ್ನಷ್ಟೇ ಯಾಚಿಸುವುದು ಸದ್ಯಸ್ಥಿತಿಗೆ ಹೊಂದಿಕೆಯಾಗುವುದಿಲ್ಲ. ಪ್ರಾಯಸ್ಥರಿಗೆಲ್ಲಾ ಹೊಸತಾಗಿ ಮತಾಧಿಕಾರ ಬಂದಿರುವಾಗ, ಅವರಿಗದನ್ನು ಪ್ರಯೋಗಿಸುವ ಹೊಸ ಸಂದರ್ಭವನ್ನು ಸಾಧ್ಯವಿದ್ದಷ್ಟು ಬೇಗನೇ ಒದಗಿಸಿಕೊಡುವುದೇ ವಾಸಿ; ತಮ್ಮೆಲ್ಲರ ಪ್ರಾತಿನಿಧ್ಯವನ್ನೂ ಪಡೆದಿರದೆ ಈಗ ಅಲ್ಲಿರುವವರನ್ನೇ 'ಹೂಂ' ಅಥವಾ 'ಊಹೂಂ' ಎನ್ನುವ ಅವಕಾಶವನ್ನಷ್ಟೇ ಜನತೆಗೆ ಒದಗಿಸಿದರದು ನಿಜಕ್ಕೂ ... ಕಡೆಗೆ ಲಕ್ಷ್ಯ ಕೊಡಲಾಗದಂತೆ ಮಾಡುವ ಯುದ್ಧ ಅಥವಾ ಸಾರ್ವತ್ರಿಕ ಗೊಂದಲದಂತಹದಾವುವೂ ಸದ್ಯ ರಾಷ್ಟ್ರದ ಪಾಲಿಗಿಲ್ಲ. ಅಂದ ಮೇಲೆ ಸಾಧ್ಯವಿದ್ದಷ್ಟು ಬೇಗನೇ ಸಾರ್ವತ್ರಿಕ ಮಹಾ ಚುನಾವಣೆ ನಡೆಸುವ ಸಿದ್ಧತೆ ಕೈಕೊಂಡು ಮುಂದಿನ ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ಚುನಾವಣೆಯೆಂಬ ಗುರಿ ನಿಶ್ಚೈಸಿದುದು ತಪ್ಪಲ್ಲ; ಅವಸರವೂ ಅಲ್ಲ. ಮುಂಬರುವ ಮಹಾ ಚುನಾವಣೆಯ ಕ್ರಮ ನಿಯಮ, ವ್ಯವಸ್ಥೆಗಳಂತೆಯೇ ನಿಶ್ಚಿತ ಕಾಲ ಕೂಡಾ ಸಮಂಜಸವಾದುದೆ?

ನ್ಯಾಯ ನಡೆದೀತೆ?

ಸ್ವತಂತ್ರ ಜನತಾರಾಜ್ಯ ಭಾರತದ ಭಾವೀ ಮಹಾಚುನಾವಣೆಯು ನ್ಯಾಯೋಚಿತ ಪರಿಣಾಮವನ್ನು ಉಂಟು ಮಾಡೀತೆ? ಎಂಬೊಂದೇ ಪ್ರಶ್ನೆಯೀಗ ಉಳಿದಿದೆ. ಸರ್ವಜನರಿಗೆ ಸಮಾನ ಹೊಣೆಯಾಗಿರುವ— ಸಾರ್ವಜನಿಕರ ಸಮಾನ ಹಿತವನ್ನು ಸಾಧಿಸಬಲ್ಲ—ಯಥಾರ್ಥ ಜನ ಪ್ರತಿನಿಧಿ ಸರಕಾರ ಸ್ಥಾಪನೆಗೊಳ್ಳಬೇಕೆಂಬುದೇ ಇವೆಲ್ಲಾ ತತ್ವ, ಧೋರಣೆ ಮತ್ತು ಕಾರ್ಯಕ್ರಮಗಳ ಗುರಿ, ಬರುವ ವರುಷದ ಮಧ್ಯಾದಿ ಭಾಗವು ಈ ಗುರಿಯನ್ನು ಮುಟ್ಟಿಸೀತೆ, ಎಂಬುದು ಈಗಿನ ಪ್ರಶ್ನೆ. ಪ್ರಚಲಿತ ಸ್ಥಿತಿಗತಿಗಳನ್ನು ಎಷ್ಟು ಆಳಕ್ಕೆ ಶೋಧಿಸಿದರೂ, ಈ ಗುರಿ ಸಿದ್ಧಿಸೀತೆಂಬ ಧೈರ್ಯವೇಳುವದಿಲ್ಲ, ಪರಿಸ್ಥಿತಿ ಹಾಗಿದೆ. ಬ್ರಿಟಿಷ್ ಆಡಳಿತೆಯ ಅಂತ್ಯಭಾಗದಲ್ಲೆಲ್ಲಾ ಅರ್ಧವರ್ಧ ಪ್ರಜಾಪ್ರಾತಿನಿಧ್ಯಾಡಳಿತೆ ಇಲ್ಲಿದ್ದಿತು. ತೀರ್ವೆ, ತೆರಿಗೆಗಳನ್ನು ಕೊಡುವವರಿಗೆ ಮಾತ್ರ ಮತಾಧಿಕಾರವಿದ್ದ ಹಿಂದಿನ ಕಾಲವು ಶ್ರೀಮಂತ ವರ್ಗದ್ದಾಗಿತ್ತೆಂದರೂ, ಬರಹ ಬಲ್ಲವರಿಗೆಲ್ಲಾ ಮತಾಧಿಕಾರವಿದ್ದ ಕಳೆದ ಬಾರಿಯ ಚುನಾವಣೆಯ ಕಾಲವೂ ಶ್ರೀಮಂತರದೇ ಇದ್ದಿತ್ತೆನ್ನಲಾಗುವದಿಲ್ಲ; ಶ್ರಮಜೀವಿಗಳದಾಗಿರದೆ, ಬುದ್ಧಿಜೀವಿಗಳದು ಅಥವಾ ಬರಹಜೀವಿಗಳದಾಗಿತ್ತು. ಎಂದಷ್ಟೇ ಹೇಳಬಹುದು. ಬರಹ ಜೀವಿಗಳಲ್ಲಿ ಬಡಜೀವಿಗಳೆಲ್ಲರೂ ಇದ್ದಿಲ್ಲವೆಂಬುದು ನಿಜವಾದರೂ ಬರಹಬಲ್ಲವರಿಗೆ ಮತಾಧಿಕಾರ ಬಂದಾಗ, ಬಡವರಲ್ಲಿ ಕೆಲವರಿಗೇನೇ ಹೊಸತಾಗಿ ಆ ಅಧಿಕಾರ ಬಂದಿದ್ದಿತೆಂಬುದನ್ನು ಮರೆಯಲಾಗುವದಿಲ್ಲ. ಆದರೆ ತೆರಿಗೆದಾರರಿಗೆ ಮಾತ್ರ ಮತಾಧಿಕಾರವಿದ್ದ ಕಾಲದಲ್ಲಿ ಶ್ರೀಮಂತ ವರ್ಗದ ಕೆಲಸವಾಗಿದ್ದಂತೆಯೇ ಬರಹಬಲ್ಲ ಎಲ್ಲರಿಗೂ ಆ ಅಧಿಕಾರ ಬಂದವೇಳೆಯೂ ಅವರ ಕಾರ್ಯವಾಗಿದ್ದಿತು. ಬರಹ ತಿಳಿದಿದ್ದರೂ ಮತದಾರನ ಹೊಣೆಗಾರಿಕೆಯನ್ನು ಅವರು ತಿಳಿಯದಿದ್ದುದು—ವೋಟಿನ ಅರ್ಹತೆ ಮೂಡಿದ್ದರೂ ಸ್ವಾವಲಂಬನಾ ಯೋಗ್ಯತೆ ಅವರಲ್ಲಿಲ್ಲದಿದ್ದುದು—ಹೀಗಾಗಲು ಕಾರಣ. ಈಗ ಪ್ರಾಯ ಬಂದವರಿಗೆಲ್ಲಾ ಮತಾಧಿಕಾರ ಬಂದಿದೆ; ಅನಕ್ಷರಜ್ಞರೇ ಅತ್ಯಧಿಕ ಸಂಖ್ಯೆಯಲ್ಲಿರುವ ಈ ದೇಶದಲ್ಲಿ ಈ ದೆಸೆಯಿಂದಾಗಿ ವೋಟರರ ಸಂಖ್ಯೆ ಬಹಳವಾಗಿ ಹೆಚ್ಚಿದೆ. ತೆರಿಗೆದಾರ ಮಟ್ಟದಿಂದ ಬರಹಗಾರ ಮಟ್ಟಕ್ಕೇರಿದಾಗ ಯಾವ ರೀತಿ ಸ್ಥಿತಿ ಬದಲಾವಣೆಯಾಗಿಲ್ಲವೋ, ಅದೇ ರೀತಿ ಬರಹಗಾರ ಮಟ್ಟದಿಂದ ಪ್ರಾಯಸ್ಥ ಮಟ್ಟಕ್ಕೇ ಅಧಿಕಾರ ವ್ಯಾಪಿಸಿಕೊಂಡುದರಿಂದಲೂ ಪರಿಸ್ಥಿತಿ ಮಾರ್ಪಾಟು ಹೊಂದುವಂತಿಲ್ಲ. ಹಿಂದಿನಂತೆಯೇ ಮುಂದೆಯೂ ಧನಿ, ಧನಿಕ ವರ್ಗದ ಇಚ್ಛೆಯೇ ನೆರವೇರಬಹುದಲ್ಲದೆ ಸಾಮಾನ್ಯರ ಬಯಕೆ ಈಡೇರುವಂತಿಲ್ಲ. ಅಷ್ಟೇ ಯಾಕೆ, ಶ್ರೀಮಂತರ ಬಯಕೆ ಮೊದಲಿಗಿಂತಲೂ ಸರಾಗವಾಗಿಯೇ ಗುರಿಮುಟ್ಟೀತೆಂದು ಊಹಿಸಬಹುದು. ಕಾರಣವಿಷ್ಟೆ: ಭಾರತೀಯ ಜನಸಾಮಾನ್ಯರೆಲ್ಲರೂ ಹಿಂದಿನಷ್ಟೇ ಇಂದೂ ಅಜ್ಞಾನಿಗಳು; ಪರಾವಲಂಬಿಗಳು. ತೆರಿಗೆದಾರರಿಗೆ ಮತಾಧಿಕಾರವಿದ್ದ ಆ ಕಾಲದಿಂದ, ಪ್ರಾಯಸ್ಥರಿಗೆ ಮತಾಧಿಕಾರವಿರುವ ಈ ಕಾಲಕ್ಕೆ ಮಿಕ್ಕೆಲ್ಲಾ ವಿಭಾಗ, ವಿಧಾನಗಳಲ್ಲುದಂತಹ ಪ್ರಗತಿ ಮಾರ್ಪಾಟವು ಜನಸಾಮಾನ್ಯರ ಸ್ಥಿತಿಮತಿಯ ಮಟ್ಟಿಗಾಗಿಲ್ಲ. ಹೆಚ್ಚಿನ ಜನರು ಬುದ್ಧಿಯಲ್ಲೂ ಜೀವನದಲ್ಲೂ ಪರಾವಲಂಬಿಗಳಾಗಿಯೇ ಇರುವಾಗ ಅವರ ಕೈಗೆ ಬಂದ ಹೆಚ್ಚಿನ ವೋಟೂ ಪರಾವಲಂಬಿಯೇ. ಅಂದ ಮೇಲೆ, ಅವರು ಯಾರನ್ನು ಅವಲಂಬಿಸಿರುವರೋ ಅವರ ವಶಕ್ಕೇನೇ ಹೆಚ್ಚು ಮತಗಳನ್ನು ಒಪ್ಪಿಸಿ ಕೊಟ್ಟಂತಾಯಿತು. ಕುರಿತು ಸರ್ವಸಮಾನ ಮತಾಧಿಕಾರವನ್ನು, ಮತ್ತಾ ಮೂಲಕ ಸರ್ವ ಸಮಾನಾಧಿಕಾರವನ್ನು ಸ್ಥಾಪಿಸಿದಂತಾಗಲಿಲ್ಲ. ಬದಲಿಗೆ ಪಟ್ಟಾದಾರರಿಗೆ ಮಾತ್ರ ಮತಾಧಿಕಾರವಿದ್ದಾಗ, ಜೀವನದ ಮಟ್ಟಿಗಾದರೂ ಸಾಕಷ್ಟು ಸ್ವಾವಲಂಬಿಗಳಾಗಿದ್ದ ಒಂದು ವರ್ಗದ ಕೈಗೆ ಆ ಹಕ್ಕನ್ನು ಒಪ್ಪಿಸಿದಂತಾಗಿದ್ದಿತು. ಅವರಲ್ಲಿದ್ದ ಅಜ್ಞಾನ, ಮತ್ತು ಸ್ಥಿತಿಯಲ್ಲಿ ತಮಗಿಂತ ಕೆಳ ದರ್ಜೆಯಲ್ಲಿರುವವರನ್ನು ತಾತ್ಸಾರದಿಂದ ಕಾಣುವ ಅಭ್ಯಾಸ, ಅಹಂಭಾವ ಇತ್ಯಾದಿಗಳ ದೆಸೆಯಿಂದ ಮಾತ್ರವೇ ಆ ಕಾಲವು ಶ್ರೀಮಂತರ ಕಾಲವಾಗಿದ್ದಿತು; ಆ ವೇಳೆ ಅಕ್ಷರಜ್ಞರಿಗೆಲ್ಲಾ ವೋಟಿನ ಹಕ್ಕು ಬಂದಾಗ, ಸ್ವಾವಲಂಬಿ ವಿದ್ಯಾವಂತರಿಗಿಂತಲೂ ಪರಾವಲಂಬಿ ಅಕ್ಷರ ಜ್ಞಾನಿಗಳ ಸಂಖ್ಯೆಯೇ ಹೆಚ್ಚಾಗಿದ್ದುದರಿಂದ ಇಂಥವರಿಗೆ ಒಂದಲ್ಲೊಂದು ವಿಧದ ಆಶ್ರಯ ಮತ್ತು ಆಕರ್ಷಕ ಸ್ಥಾನವಾಗಿದ್ದ ಶ್ರೀಮಂತ ವರ್ಗದವರ ಕೆಲಸವು ಆ ಮೂಲಕ ದೊಡ್ಡದಾದರೂ ಸುಗಮವಾಯಿತು; ಈಗ ಪ್ರಾಯಸ್ಥರಿಗೆಲ್ಲಾ ಮತಾಧಿಕಾರ. ಈ ದೆಸೆಯಿಂದ ಶ್ರೀಮಂತರ ಕೆಲಸ ಇನ್ನಷ್ಟು ದೊಡ್ಡದಾಗುವಂತೆಯೇ ಮತ್ತಷ್ಟು ಸುಲಭವೂ ಆಗುವಂತಿದೆ. ಅಜ್ಞರು ಮತ್ತು ಅಸಹಾಯಕರಿರುವ ಜನಸಾಮಾನ್ಯರನ್ನು ಅಧಿಕ ಸಂಖ್ಯೆಯಲ್ಲಿ ತಮ್ಮ ಅಂಕೆಯಲ್ಲಿಟ್ಟುಕೊಂಡಿರುವ ಧನಿ, ಧನಿಕ ಮತ್ತು ಪ್ರಭಾವಾನ್ವಿತ ಮೇಲು ವರ್ಗದವರ ಕಾರ್ಯವೇ ಸಿದ್ಧಿಸಲಿದೆ. ನಿದರ್ಶನಕ್ಕಾಗಿ ಯಾವ ಗ್ರಾಮವನ್ನಾದರೂ ನೋಡಬಹುದು. 5000 ಜನಸಂಖ್ಯೆಯುಳ್ಳ ಗ್ರಾಮವೊಂದರಲ್ಲಿ 3000 ಮತದಾರರಿದ್ದಾರೆಂದು ಭಾವಿಸೋಣ. ಈ ಮೂರು ಸಾವಿರ ಮತದಾರರೆಂದರೆ ಸರ್ವಸಾಮಾನ್ಯವಾಗಿ 3ರಿಂದ 30ರ ವರೆಗಿನ ಧನಿಗಳ ಒಕ್ಕಲುಗಳೇ. ಉಂಡು ಜೀವಿಸಿರುವುದೇ ಜೀವನದ ಪರಮ ಧ್ಯೇಯವಾಗಿರುವ ಮೂರು ಸಾವಿರಕ್ಕೆ ತಮ್ಮೀ ಜೀವನಕ್ಕೆ ಆಗಲೇ ಏನನ್ನೂ ದೊರಕಿಸಿಕೊಡದ ಮತಾಧಿಕಾರವು ಹೆಚ್ಚೆಂದರೆ ಧನಿಗೆ ಬೆಂಬಲಕೊಟ್ಟು, ಅವನ ಮನಸ್ಸನ್ನೊಲಿಸಿಕೊಳ್ಳುವ ಒಂದು ಉಪಕರಣ ಮಾತ್ರ; ಧನಿಗೆ ಇದಿರುಬಿದ್ದು, ಮನೆಬಿಡಬೇಕಾಗಿ ಬಂದರೂ ಮನಸ್ಸಾಕ್ಷಿ ಪೂರ್ವಕ ವಿನಿಯೋಗಿಸುವ ಅಮೂಲ್ಯ ಸೊತ್ತಂತೂ ಅಲ್ಲವೇ ಅಲ್ಲ. ದೊಡ್ಡ ದೊಡ್ಡ ನಗರಗಳ ಸಂಘಟಿತ ಮಜೂರ ವರ್ಗವು ಮತದಾನದ ಮಟ್ಟಿಗೆ ತಮ್ಮ ಕಾರ್ಖಾನೆ ಮಾಲಕರಿಗೆ ವಿರೋಧವೆಸಗುವ ಸ್ಥಿತಿ ಮತ್ತು ಮನೋವೃತ್ತಿಯದಿರಬಹುದು; ಹಾಗೆ ಜಮೆಗೊಂಡು, ಸಂಘಟನೆಗೊಂಡಿರದ ಇತರ ಮಜೂರರು ಒಕ್ಕಲುಗಳಂತೆಯೇ ಮಾಲಕರ ಕೈಗೊಂಬೆಗಳೇ ಇದ್ದಾರೆ. ಒಕ್ಕಲು, ಮಜೂರರ ಸ್ಥಿತಿಮತಿ ಮಟ್ಟದಲ್ಲೇ ಇರುವ ಇತರ ಸಾಮಾನ್ಯ ಜನರೆಲ್ಲರೂ ಇತರ ವಿಧದ ಹಂಗು, ಆಶ್ರಯ ಮತ್ತು ಅಜ್ಞಾನದ ದೆಸೆಯಿಂದ ಧನಿ ಅಥವಾ ಧನಿಕ ವರ್ಗವನ್ನು ಕಣ್ಣುಮುಚ್ಚಿಕೊಂಡು ಹಿಂಬಾಲಿಸುವವರೇ. ಪ್ರಚಲಿತ ಸ್ಥಿತಿಗಳ ಮೇಲಿಂದ, ಪ್ರಾಯಸ್ಥರಿಗೆ ಮತಾಧಿಕಾರ ...

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೊಡ್ಸಲ್ ವೆಂಕಟರಾಯರು, ಎಲ್.ಐ ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ಮತದಾರರ ಯೋಗ್ಯತೆ ಮೂಡಲಿ!

ವನ್ನೇ ಸಾಧಿಸಲ್ಪಡುವಂತಾಗಿದೆ, ಎಂಬುದು ಸ್ಪಷ್ಟ. ಧನಿಕರೆಲ್ಲರೂ ಚುನಾವಣೆಗೆ ನಿಲ್ಲಲಾರರು; ಆದರೀ ವರ್ಗದ ಪೈಕಿ ಹೆಚ್ಚು ವರ್ಚಸ್ಸಿರುವವರೇ ಉಮೇದ್ವಾರರಾಗಬೇಕು— ಸ್ಪರ್ಧೆ ನಡೆಯುವುದಾದರೆ ಅಂಥವರೊಳಗೇನೇ ನಡೆಯಬೇಕು— ಹೊರತು, ತಕ್ಕ ಪ್ರೇಮಿಗಳು, ಜನಸೇವಾಸಕ್ತರು, ಯಾವ ಪಕ್ಷ ಸಂಗಡದವರೇ ಇದ್ದರೂ ಅಂಥವರು ಮುಂದೆ ಬರಲೆಡೆಯಿಲ್ಲ. ಅಂದಮೇಲೆ ಜನತೆಯ ರಾಜ್ಯ-ಅತ್ಯಧಿಕ ಸಂಖ್ಯಾಕರಾದ ಸಾಮಾನ್ಯ ಬಡಜನರ ರಾಜ್ಯ—ಈ ವಿಧಾನದಿಂದಾದರೂ ಸಾಧಿಸಲ್ಪಡುವುದೆಂದು ಊಹಿಸುವುದಾದರೂ ಹೇಗೆ? ಸರ್ವಜನ ಪ್ರಾತಿನಿಧ್ಯವುಳ್ಳ 'ಜನತಾ ರಾಜ್ಯ'ವೆಂಬ ಬಿಲ್ಲೆ ಹಚ್ಚಿಕೊಂಡೇ ಅಲ್ಪ ಸಂಖ್ಯಾಕ ಶ್ರೀಮಂತ ವರ್ಗದ ಹಿತಸಾಧನೆ ಮತ್ತು ಧನಿಕ ಮನೋವೃತ್ತಿಗನುಗುಣವಾದ ಅಧಿಕಾರ ಸ್ಥಾಪನೆಗೊ ಳ್ಳಲು ಅನುಕೂಲವಾಯಿತು; ಅಷ್ಟೆ! ಮನೆಯೊಡತಿಯ ಕೈಮೊಹರನ್ನು ಪಡಕೊಂಡು ಅವಳ ಹಕ್ಕು ಬಾಧ್ಯತೆಗಳನ್ನು ಅವಳ ಇಚ್ಛೆಗೆ ವಿರೋಧವಾಗಿ ವಿನಿಯೋಗಿಸುವಂತಹ ದುಸ್ಸಾಧನೆಯ ವಿರಾಟ್ರೂಪವೇ ಭಾವೀ ಮಹಾ ಚುನಾವಣೆಯಾಗುವ ಸಂಭವವಿದೆ.

ಪ್ರಥಮ ಚಿಕಿತ್ಸೆಯೇನು?

ಇನ್ನು ಆರೇಳು ತಿಂಗಳುಗಳ ಅವಧಿ ಮಾತ್ರವುಳಿದಿರುವ ಮಹಾ ಚುನಾವಣೆಯಿಂದ ಯಥಾರ್ಥ ಜನ ಪ್ರಾತಿನಿಧ್ಯ ಮೂಡುವಂತಾಗಬೇಕಾದರೆ, ಉಳಿದಿರುವ ಅಲ್ಪಾವಧಿಯಲ್ಲಿ ಮಾಡಲಾಗುವ ಅವಸರದ ಸುಧಾರಣೆಗಳಾವುವು?

ಧನಿಯು ಸ್ವಂತ ಜೀವನಕ್ಕಾಗಿ ಸ್ವತಃ ಸಾಗುವಳಿ ಮಾಡ ವುದೊಂದಕ್ಕಲ್ಲದೆ, ಬೇರಾವ ಕಾರಣಕ್ಕಾಗಿಯೂ ಒಕ್ಕಲನ್ನು ಎಬ್ಬಿಸದಂತೆ ತಡೆ ಹಾಕುವ ಶಾಸನವು ಕೂಡಲೇ ಜಾರಿಗೆ ಬರಬೇಕು. ಗೇಣಿ ಬಾಕಿ, ಮತ್ತಿತರ ಧನಿ–ಒಕ್ಕಲು ವಿವಾದಗಳಿಂತಹವಿದ್ದರೂ ಅವೆಲ್ಲವೂ ಮಿಕ್ಕವರೊಳಗಿನ ಕೊಡಕೊಂಡ ಮತ್ತು ವಾದ ವಿವಾದಗಳು ಕೋರ್ಟು ಮೂಲಕ ತೀರ್ಮಾನ ಹೊಂದುವ ಮಾದರಿಯಲ್ಲೇ ತೀರ್ಮಾನಿಸಲ್ಪಡಬೇಕಲ್ಲದೆ, ಒಕ್ಕಲುತನವನ್ನು ಅಪಹರಿಸುವಂತಿರಕೂಡದು. ಗೇಣಿ ಬಾಕಿ ಮಾಡಿಕೊಂಡ, ಆದರ ವಸೂಲಿಗೆ ಸಿಗದಂತೆ ತಪ್ಪಿಸಿಕೊಳ್ಳುವ ಇಚ್ಛೆಯಿಂದ ಒಕ್ಕಲು ತಾನಾಗಿ ಎದ್ದು ಹೋಗದಂತೆ ತಡೆಯಲು ಕೋರ್ಟ ಮೂಲಕವೇ 'ಸೋಡಚೀಟ' ಹಾಕುವ ಕ್ರಮ ಬರಬಹುದು. ಅಂತೂ ಭೂಮಿಯ ಗೇಣಿಯನ್ನು ಕೊಡುವ ಮತ್ತು ಪಡೆಯುವ ಸಂಬಂಧ ಮಾತ್ರ ಒಕ್ಕಲು ಮತ್ತು ಧನಿಯ ನಡುವೆ ಇರಬೇಕಲ್ಲದೆ, ಸ್ವಾರ್ಥ ಅಥವಾ ಹಠಸಾಧನೆಗಾಗಿ ಆ ಭೂಮಿಯನ್ನೇ ಉಪಕರಣವಾಗಿ ಮಾಡಿಕೊಂಡು ಆಟವಾಡುವ ಹಕ್ಕು ಇತ್ತಂಡೆಯವರಿಗೂ ಇರಬಾರದು. ಹೀಗಾದರೆ, ಮತಾಧಿಕಾರ ವಿನಿಯೋಗದ ಮಟ್ಟಿಗೆ ಧನಿಯ ಹಂಗಿಲ್ಲದ ಸ್ವಾತಂತ್ರ್ಯ ದೊರೆಯುವ ತಾತ್ಕಾಲಿಕ ಉಪಕಾರವಾಗುವಂತೆಯೇ, ಸರ್ವಸಮಾನತಾ ಭೂವ್ಯವಸ್ಥೆಯನ್ನು ತರುವ ಭಾವೀ ವ್ಯವಸ್ಥೆಯ ಕಡೆಗಿಡುವ ದೊಡ್ಡ ಹೆಜ್ಜೆಯೇ ಇದಾಗುವುದು.

ಇದೇ ಮಾದರಿಯಲ್ಲಿ ಮಾಲಕರಿಂದ ಮಜೂರರನ್ನು ಸ್ವತಂತ್ರಗೊಳಿಸಿಡಲು ಅಗತ್ಯವುಳ್ಳ ಶಾಸನವೂ ಬರಬೇಕು.

ಅಧಿಕಾರ, ವರ್ಚಸ್ಸು ಅಥವಾ ವ್ಯವಹಾರ ರಂಗದಲ್ಲಿ ಯಾವುದೇ ರೀತಿಯ ಮೇಲ್ಗೈ ಇರುವವರಿಂದ ಬಡವರ ಅಥವಾ ಜದನಸಾಮಾನ್ಯರ ಮೇಲೆ ಬಲಾತ್ಕಾರ, ಒತ್ತಾಯ, ಅನ್ಯಾಯ,ಅಪಮಾನವೆಲ್ಲಿಯಾದರೂ ನಡೆಯುವುದೇ ಎಂದು ಸ್ವತಃ ಶೋಧನೆ ಮಾಡಿ ಶಿಕ್ಷಿಸುವುದಕ್ಕಾಗಿಯೇ 'ಪಾನನಿರೋಧ ಖಾತೆ'ಯಂತಹ 'ಒತ್ತಡ ನಿರೋಧ ಖಾತೆ'ಯೊಂದನ್ನು ಚುನಾವಣೆಯ ಹಿಂದು ಮುಂದಿನ ಕಾಲದ ಮಟ್ಟಿಗಾದರೂ ಸ್ಥಾಪಿಸಿಕೊಳ್ಳುವುದು ವಾಸಿ.

ಮೇಲಿನವು ಸರಕಾರಕ್ಕೆ ಸಂಬಂಧಪಟ್ಟ ಸೂಚನೆಗಳಾದರೆ, ದೇಶ ಹಿತಚಿಂತಕ ಜನರು ತಾವಾಗಿ ಮಾಡಬೇಕಾದ ಪ್ರಾಮುಖ್ಯ ಕಾರ್ಯಗಳಿವೆ. ಒಕ್ಕಲು, ಕೂಲಿ ಮತ್ತಿತರ ಬಡ ಜನರೆಲ್ಲರನ್ನೂ ಜೀವನದ ಮಟ್ಟಿಗೆ ಭೀತಿ, ಹಂಗು, ದಾಕ್ಷಿಣ್ಯಗಳಿಲ್ಲದಂತೆ ಮಾಡಿಟ್ಟರೂ ಪ್ರಕೃತ ಅವರಲ್ಲಿರುವ ಅಜ್ಞಾನದ ದೆಸೆಯಿಂದ, ಪ್ರೌಢ ಮತದಾನಾಧಿಕಾರವು ಸದ್ವಿನಿಯೋಗ ಹೊಂದುವುದು ಅಸಂಭವ. ಆದ್ದರಿಂದ ಜನತೆಗೆ ಸರಿಯಾದ ತಿಳುವಳಿಕೆ ಕೊಡುವ ಪ್ರಚಾರ ಕಾರ್ಯಗಳಾಗಬೇಕು.

ಒಂದು ಪಕ್ಷದ್ದೇ ಇರುವ ಕಾಂಗ್ರೆಸ್ ಸರಕಾರವು ಈ ಪ್ರಚಾರ ಕಾರ್ಯ ಮಾಡಿದರಾಗದು. ಕಾಂಗ್ರೆಸ್, ಕಮ್ಯೂನಿಸ್ಟ್, ಸೋಶಿಯಾಲಿಸ್ಟ್, ಮತ್ತಿತರ ಯಾವ ಪಕ್ಷದವರಿಂದ ಈ ಕೆಲಸ ನಡೆದರೂ ಅದು ನಿಷ್ಪಕ್ಷಪಾತಿಯಾಗದು; ಇವು ತಂತಮ್ಮ ಅಭಿಲಾಷೆಗಳನ್ನು ಮತದಾರರ ಮನಸ್ಸಿನೊಳಗೆ ತುರುಕಿಸಲು ಪ್ರಯತ್ನಪಟ್ಟವು ಹೊರತು ಪರಿಸ್ಥಿತಿಯ ಯಥಾರ್ಥ ತಿಳುವಳಿಕೆಯನ್ನು ಕೊಡಲಾರವು.

ಶಾಸನ ಸಭೆಗಳ ಸ್ಥಾನಾಭಿಲಾಷೆಯಿರದೆ, ಯಾವ ಪಕ್ಷ ಸಂಗಡಕ್ಕೂ ಸೇರದೆ, ಹೊಸತಾಗಿ ದೊರೆತಿರುವ ಸ್ವಾತಂತ್ರ್ಯ ಮತ್ತು ಪ್ರೌಢ ಮತಾಧಿಕಾರವು ಪೂರ್ಣ ಸಾರ್ಥಕವಾಗಬೇಕೆಂದಷ್ಟೇ ಬಯಸುವ ಪ್ರಗತಿಚಿಂತಕರು [illegible] ಈ ನವಯುಗದಲ್ಲಿ ಸಾರ್ವಜನಿಕರು ಹಳೇ ಜನರಾಗಿಯೇ ಉಳಿದುಕೊಂಡಿರುವ [illegible] ಯಾವ ಪಕ್ಷವೂ ಈ ಯುದ್ಧ ತದಸ್ತಿ ನಿವಾರಣೆಯ ಕಡೆಗೆ ಸಾಕಷ್ಟು ಗಮನ ಕೊಡದಿರುವಾಗ— ನಿಸ್ವಾರ್ಥಿಸ ವಿಚಾರಿಗಳೆಲ್ಲರೂ ಯಾವ ಪಕ್ಷಕ್ಕೂ ಸೇರದೆ ದೇಶ ಹಿತಚಿಂತಕ ತಟಸ್ಥ ವರ್ಗಕ್ಕೆ ಸೇರಿದ್ದಾರೆಂಬುದು ಖಂಡಿತ. ಇಂಥವರು ಈ ಪರೀಕ್ಷಾ ಕಾಲದಲ್ಲಿ ತಮ್ಮ ತಾಟಸ್ಥ್ಯವನ್ನು ಬಿಟ್ಟು ಜನಮತ ಶುದ್ಧೀಕರಣ ಪ್ರಯತ್ನಕ್ಕಿಳಿಯಬೇಕು. ಲೋಕ ಸ್ಥಿತಿ, ರಾಷ್ಟ್ರದ ನವೋದಿತ ಸ್ವಾತಂತ್ರ್ಯ, ಮತಾಧಿಕಾರದ ಮಹತ್ವ ಇತ್ಯಾದಿಗಳನ್ನು ಸಾರ್ವಜನಿಕರಿಗೆ ಸರಿಯಾಗಿ ಮುಂದಿಟ್ಟು ಮಾಡಿ, ಅವರನ್ನು ಯೋಗ್ಯತಾ ಪ್ರಬುದ್ಧರನ್ನಾಗಿ ಮಾರ್ಪಡಿಸುವ ಕೆಲಸವೊಂದನ್ನೇ.ಅವರು ಮಾಡಬೇಕಲ್ಲದೆ ಚುನಾವಣಾ ಭಾಗಿ ರಾಜಕೀಯ ಪಕ್ಷವಾವುದರ ಗೊಡವೆಗೂ ಹೋಗಬಾರದು. ತಿಳುವಳಿಕೆಯ ಬಲ ಮತ್ತು ಶುದ್ಧ ಮನಸ್ಸಾಕ್ಷಿಯ ಪ್ರೇರಣೆಗನುಸಾರವಾಗಿ ತಮಗೆ ಸರಿತೋರಿದವರಿಗೆ ಮತವೀಯುವ ಸ್ವತಂತ್ರ್ಯವನ್ನು ಮತದಾರರಿಗೇ ಬಿಡಬೇಕು. ದೇಶದ ಆ ಮೂಲೆಯಿಂದೀ ಮೂಲೆಯ ವರೆಗೂ ಇಂತಹ ಪ್ರಚಾರವನ್ನು ನಡೆಸಲು 'ಪಕ್ಷಾತೀತ ಪ್ರಗತಿಶೀಲ'ರ ಸಮಿತಿಗಳು, ಪ್ರಚಾರಕರು ಮತ್ತು ಶಿಕ್ಷಕರು ಎಲ್ಲೆಲ್ಲೂ ನೇಮಿಸಲ್ಪಡಬೇಕು.

ಮತದಾರಪಟ್ಟಿ, ಮತದಾನದ ಕ್ರಮ, ನಿಯಮಗಳ ತಯಾರಿಗಿಂತಲೂ ಮತದಾರರನ್ನು ತಯಾರು ಮಾಡುವ ಕೆಲಸವೇ ಅತ್ಯಂತ ಮುಖ್ಯ ಮತ್ತು ಹೆಚ್ಚಿನದಿರುವುದರಿಂದ, ಇಂದಿನಿಂದ ಚುನಾವಣೆಯ ವರೆಗಿನ ಅವಧಿಯು ಸಂಪೂರ್ಣವಾಗಿ ಈ ಮಹತ್ಸಾಧನೆಗೆ ವಿನಿಯೋಗ ಹೊಂದಬಾರದೇಕೆ?

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ಪ್ರಗತಿಪರವಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K.

ಅಮೃತಾಂಜನ

ತಲೆನೋವು, ಶಿರಃಶೂಲೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎನೋವು, ಗಾಯಗಳು, ಬಾತುಕೊಳ್ಳುವುದು, ಕೀಳುವಿಷವುಂಟಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ
ನವಯುಗ ಪ್ರೆಸ್, ಉಡುಪಿ.

ಹೊಟ್ಟೆಯ ನಿಕಾರವೇ? ಅಶಕ್ತತೆಯೇ? ಮರುಗಬೇಡಿ! ಶ್ರೀ ಶಿವಾನಂದ ಸ್ವಾಮಿಗಳ ಅನುಭವಪೂರ್ಣ ವ್ಯಾಯಾಮ, ಆಸನ ಮೊದಲಾದ ಹಲವಾರು ಚಿಕಿತ್ಸೆಗಳಿಂದ ದೀರ್ಘಾಯುಷಿಗಳಾಗಿರಿ!!

ಉದರದ ಆರೋಗ್ಯ ಮತ್ತು ಸ್ನಾಯುಬಲ ಸಂವರ್ಧನ

೧೫೦ ಚಿತ್ರಗಳುಳ್ಳ ಪುಸ್ತಕ. ಅಂಚೆವೆಚ್ಚ ಸೇರಿ ಬೆಲೆ: ರೂ. ೨—೬—೦

ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು!

ವೀರ್ಯರಕ್ಷಣೆಯ ರಾಮಬಾಣ ಉಪಾಯಗಳು! ೨೫೦ ಪುಟ! ಅಂಚೆವೆಚ್ಚ ಸೇರಿ ರೂ. ೩—೮—೦

ಸಮಾಜ ಪುಸ್ತಕಾಲಯ, ಸುಭಾಸ ಬೀದಿ, ಧಾರವಾಡ.

ಜಾಗತಿಕ ವಾತಾವರಣ

ಜಾಗತಿಕ ಸ್ಥಿತಿಗತಿ, ಎಲ್ಲವುಗಳ ಬ್ರಿಟನ್-ಅಮೇರಿಕೆಗಳ ಅಥವಾ ಕಮ್ಯೂನಿಸ್ಟ್- ಕಮ್ಯೂನಿಸ್ಟ್ ವಿರೋಧಿ ಪಾಳೆಯಗಳ ತೀವ್ರ ಘರ್ಷಣೆಯೇ ತುಂಬಿ ತೋರುತ್ತಿದೆ. ಪ್ರಚಾರ ಗದ್ದಲವನ್ನು ಕಡೆಗಣಿಸಿ ವಸ್ತುಸ್ಥಿತಿಯ ಸೂಕ್ಷ್ಮಾವಲೋಕನೆ ಮಾಡುವುದಾದರೆ ಕೊರಿಯದಲ್ಲಿ ಪ್ರಬಲ ಪರಾಭವಕ್ಕೀಡಾಗಿರುವ ಈ ಕಾಲದಲ್ಲಿ ಕೂಡಾ ಕಮ್ಯೂನಿಸ್ಟ್ ಪ್ರಭಾವವೇ ವ್ಯಾಪಿಸಿರುವುದನ್ನು ಕಾಣಬಹುದು. ಇವೆರಡು ಪಾಳೆಯಗಳ ನಡುವೆ ನ್ಯಾಯಪಕ್ಷಪಾತಿಯಾಗಿ ನಿಂತಿರುವ ಮೂರನೇ ವರ್ಗದ ರಾಷ್ಟ್ರಗಳ ಪೈಕಿ ಭಾರತವು ಅಗ್ರಗಣ್ಯ ಸ್ಥಾನದಲ್ಲಿದೆ ಆದರೆ ಜಗಳ ನಿರತ ದ್ವಿಪಾಳಯಗಳ ಮೇಲೆ ತನ್ನ ವರ್ಚಸ್ಸನ್ನು ಬೀರುವ ಮಟ್ಟಕ್ಕೆ ಈ ತಟಸ್ಥ ಪಕ್ಷವೀವರೆಗೆ ಬಂದಿಲ್ಲ ಎಂಬುದನ್ನೊಪ್ಪಬೇಕು. ಅಂತರ್ರಾಷ್ಟ್ರೀಯ ವಹಿವಾಟುಗಳೇ ಕಳೆದ ವಾರದಲ್ಲಿ ಪ್ರತಿಯೊಂದು ರಾಷ್ಟ್ರದ ಪಾಲಿಗೂ ಸ್ವಂತ ಕಾರ್ಯಕ್ಕಿಂತ ಹೆಚ್ಚಿನವಾಗಿ ಪರಿಣಮಿಸಿದ್ದುವು.

oo oo oo

ಕೊರಿಯದಲ್ಲಿ ಸಂಯುಕ್ತ ರಾಷ್ಟ್ರ ಸೇನೆಗಳು ಉತ್ತರ ವಲಯದೊಳಗೆ ರಭಸದಿಂದ ಮುಂದೊತ್ತಿವೆ. ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್ಯಾಂಗಿನೊಳಗೆ ನುಗ್ಗಿದ 24 ತಾಸುಗಳೊಳಗೆ ಜನರಲ್ ಮೆಕಾರ್ಥರರ ಸೇನೆಗಳು ಅದನ್ನು ವಶಪಡಿಸಿ ಕೊಂಡುವು; ಒಳಗಡೆ ಕಮ್ಯೂನಿಸ್ಟರು ಬೀದಿಕಾಳಗ ಕೊಟ್ಟದ್ದಾದರೂ ನಗರವನ್ನು ರಕ್ಷಿಸಿಕೊಳ್ಳುವ ಗುರಿಯನ್ನಿಟ್ಟುಕೊಂಡು ಸುಸಜ್ಜಿತ ಪ್ರತಿಭಟನಾ ಹೋರಾಟ ಹೂಡಿದುದಿಲ್ಲ. "ಸಾಧ್ಯವಿದ್ದಷ್ಟು ಕ್ಷಿಪ್ರದಲ್ಲಿ ಚೈನದ ಮಂಚೂರಿಯಾ ಮತ್ತು ರಶ್ಯದ ಗಡಿಯ ವರೆಗೆ ಉತ್ತರಕ್ಕೆ ಮುಂಧಾವಿಸಿರಿ" ಎಂದು ಜನರಲ್ ಮೇಕರ್ಥರರು ತನ್ನ ಸೇನೆಗಾಜ್ಞಾಪಿಸಿದುದರಿಂದ ಸಂ. ರಾ. ಸೇನೆಗಳೀಗ ಹಿಂದಿಗಿಂತ ವೇಗವಾಗಿ ನುಗ್ಗುತ್ತಿವೆ. ಸಂಘಟನೆಗೊಳ್ಳಲವಕಾಶದೊರೆಯದ ಉತ್ತರ ಕೊರಿಯದ ಸೇನೆಗಳನ್ನು ಈ ಅಸ್ತವ್ಯಸ್ತ ಸ್ಥಿತಿಯಲ್ಲೇ ನಿರ್ಮೂಲಿಸುವ ಇಚ್ಛೆಯಿಂದ ಈ ರಭಸದ ಧಾಳಿ. ಉತ್ತರಗಡೆಯ ಮಧ್ಯ ನೆಲೆಗಳಲ್ಲಿ ವಿಮಾನ ಸೇನೆಗಳನ್ನು ಇಳಿಸಿ, ಕಮ್ಯೂನಿಸ್ಟರನ್ನು ಅಡ್ಡೈಸಿ ಸದೆಬಡಿಯಲಾಗುತ್ತಿದೆ; ವಿಮಾನಗಳು ಉತ್ತರ ಕೊರಿಯದ ಆ ಮೂಲೆಯ ವರೆಗೂ ಬೋಂಬಿನ ಮಳೆಗರೆದು ಎಲ್ಲವನ್ನೂ ಧ್ವಂಸ ಮಾಡುತ್ತಿವೆ, ಹೀಗೆ ಹದಕ್ಕೆ ತಂದ ಕ್ಷೇತ್ರದೊಳಗೆ ಸಂ. ರಾ. ಸೇನೆಗಳು ನುಗ್ಗಿ ಹೋಗುತ್ತಿವೆ; ಹೀಗಾಗಿ ಉತ್ತರ ಕೊರಿಯದ ಸೇನೆಗಳ ಸಮರ ಸಂಘಟನೆಯೇ ಮುಂದು ಹೋದಂತಿದೆ. ಮಂಚೂರಿಯದ ಗಡಿಗೆ ಕೇವಲ 40-50 ಮೈಲು ಸಮೀಪದ ವರೆಗೂ ಮೇಕರ್ಥರರ ಸೇನೆಗಳು ನುಗ್ಗಿಬಂದಿವೆ. ರಶ್ಯಾವಾಗಲೀ ಕೆಂಪು ಚೈನವಾಗಲೀ ಕೊರಿಯಾ ಯುದ್ಧದಲ್ಲಿ ಪ್ರತ್ಯಕ್ಷ ಭಾಗಿಯಾಗುವ ಸಂಭವವಿಲ್ಲವೆಂದೂ ಕೊರಿಯದ ಪೂರ್ಣ ವಿಜಯ ಮುಹೂರ್ತವು ಸಮೀಪಿಸಿದೆಯೆಂದೂ ಜನರಲ್ ಮೇಕರ್ಥರರ ಅಭಿಪ್ರಾಯ.

ಏಸ್ಯಾದೊಂದು ಸಣ್ಣ ನೆಲೆ ಕೊರೆಯದಲ್ಲಿ ಕಮ್ಯೂನಿಸ್ಟರು ಇಂತಹ ಪರಾಭವಕ್ಕೀಡಾಗಿದ್ದರೂ, ಆಗ್ನೇಯ ಏಸ್ಯಾದ ಹೆಬ್ಬಾಗಿಲೆಂತಿರುವ ಇಂಡೋ ಚೈನದಲ್ಲಿ ಅವರು ಪ್ರಬಲ ವಿಜಯಗಳನ್ನು ಗಳಿಸುತ್ತಿದ್ದಾರೆ. ಇಂಡೋ ಚೈನವು ಚೈನಾದೊತ್ತಿನಲ್ಲಿರುವ ಫ್ರೆಂಚರ ಅಧೀನ ರಾಷ್ಟ್ರ; ಈ ಪರಕೀಯಾಡಳಿತೆಯು ಅಲ್ಲಿಯ ಜನತೆಯ ವಿಶ್ವಾಸ ಕಳಕೊಂಡಿದೆ. ಚೈನದಲ್ಲಾದಂತೆಯೇ ಇಂಡೋ ಚೈನದಲ್ಲೂ ಕಮ್ಯೂನಿಸ್ಟ್ ನಾಯಕ ಹೋ- ಚೀ- ಮಿನ್ ಇವರ ವೀಟ್‌ಮಿನ್ ಸೇನೆಗಳು ಹೋರಾಟಕ್ಕೆದ್ದು ಫ್ರೆಂಚ್ ಸೇನೆಗಳನ್ನು ಬಡಿವಟ್ಟಲಾರಂಭಿಸಿವೆ. ಫ್ರಾನ್ಸಿನಿಂದ ಹೆಚ್ಚು ಸೇನೆಗಳೂ ಅಮೇರಿಕದಿಂದ ಶಸ್ತ್ರಾಸ್ತ್ರಗಳೂ ಈಗ ಸರಬರಾಯಿಯಾಗುತ್ತಿವೆಯಾದರೂ ಕಳೆದ ಒಂದು ತಿಂಗಳಲ್ಲಿ ಫ್ರೆಂಚ್ ಸೇನೆಗಳು ಕಮ್ಯೂನಿಸ್ಟ್ ಸೇನೆಗಳೆದಿರು ಪಡೆದಿರುವ ಪರಾಭವಗಳು ಅತಿ ಹೆಚ್ಚಿನವು- ದ್ವಿತೀಯ ಮಹಾಯುದ್ಧಾನಂತರ ಈ ವರೆಗೆ ಬೇರೆಲ್ಲಿಯೂ ಆಗದಿದ್ದಂತಹ ಅಪಜಯವು ಇಂಡೋಚೈನದಲ್ಲಿ ಫ್ರೆಂಚರಿಗಾಗಿದೆ ಒಂದು ತಿಂಗಳೊಳಗೆ ಸಂಪದ್ದಿನ ಐದು ರಕ್ಷಣಾ ಕೋಟೆಗಳನ್ನು ಖಾಲಿ ಮಾಡಿ ಫ್ರೆಂಚ್ ಸೇನೆಗಳು ಪಲಾಯನ ಮಾಡಿವೆಯಲ್ಲದೆ, ಚೈನಾ-ಇಂಡೋಚೈನಾಗಳ ನಡುವಿನ ವಿಸ್ತಾರ ಗಡಿಯಲ್ಲಿ ಯಾವ ರಕ್ಷಣಾ ವ್ಯವಸ್ಥೆಯನ್ನೂ ಮಾಡಲಾರದೆ ಅವು ಮಾಯವಾಗಿವೆ. ಉತ್ತರ ಇಂಡೋಚೈನವಿಡೀ ಅನ್ಯಗತಿಯಿಲ್ಲದೆ ಕಮ್ಯೂನಿಸ್ಟರ ವಶಕ್ಕೆ ಬಂದಂತಿದೆ ಅತ್ತ ಇಂಡೋಚೈನದ ಸ್ಥಿತಿ ಹೀಗಿರುವಾಗ, ಇತ್ತ ಟಿಬೇಟ, ಕೆಂಪು ಚೈನಾದ ಬಗಲೊಳಗಾಗುವುದು ಸ್ವಯಂಸಿದ್ಧವಿರುವಾಗ ಏಸ್ಯಾದ ಎಲ್ಲಾ ರಾಷ್ಟ್ರಗಳ ಮೇಲೂ ಕೆಂಪುಛಾಯೆ ದಟ್ಟವಾಗಿ ಬೀಳಹತ್ತಿದೆ. ಕೊರಿಯದಲ್ಲಿ ಮಾಡಿದಂತೆಯೇ ಇಂಡೋಚೈನದಲ್ಲೂ ಸಂ- ರಾ. ಸೇನೆಗಳು ಪ್ರವೇಶಿಸಬೇಕೆಂಬ ವಾದವು ಕಮ್ಯೂನಿಸ್ಟ್ ವಿರೋಧಿಗಳಿಂದ ಕೇಳಬರುತ್ತಿದೆ.

oo oo oo

ಅಮೇರಿಕಾಧ್ಯಕ್ಷ ಟ್ರೂಮೇನರು ಹಿಂದಿನ ವಾರ ವೇಕ್ ದ್ವೀಪಕ್ಕೆ ಬಂದು ಜನರಲ್ ಮೆಕಾರ್ಥರರೊಡನೆ ನಡೆಸಿದ ಸಮಾಲೋಚನೆಯ ಪರಿಣಾಮವಾಗಿ ಏಸ್ಯಾದ ಕುರಿತು ಅಮೇರಿಕದ ಹಂಚಿಕೆಗಳು ರೂಪಿಸಲ್ಪಟ್ಟಿರುವವೆಂದು ತಿಳಿದುಬಂದಿದೆ. ಕೊರಿಯದಿಂದ ಕಲಿತ ಪಾಠವನ್ನು ಕೂಡಲೇ ಕಾರ್ಯಕ್ಕೆ ಹಚ್ಚಿ, ಏಸ್ಯಾದಲ್ಲಿ ಕಮ್ಯೂನಿಸಮ್ ಹಬ್ಬದಂತೆ ಮಾಡಿ, ಅಖಿಲ ಏಸ್ಯಾವು ಅಮೇರಿಕದ ಆಶ್ರಯದಲ್ಲಿರುವಂತೆ ಮಾಡುವುದೇ ಈ ಹಂಚಿಕೆಯ ಗುರಿಯೆನ್ನಬಹುದು 'ಸಮಾನತೆ ಮತ್ತು ಸಹಕಾರ' 'ಸ್ವತಂತ್ರ್ಯಪಾಲನೆ ಮತ್ತು ಶಾಂತಿರಕ್ಷಣೆ' 'ಆರ್ಥಿಕ ಸಾಮಾಜಿಕ ಪ್ರಗತಿಸಾಧನೆ' ಮುಂತಾದ ಅಮೂಲ್ಯ ತತ್ವಗಳು, ತಮ್ಮ ಏಸ್ಯಾ ಧೋರಣೆಯ ಕುರಿತು ಅಧ್ಯಕ್ಷ ಟ್ರೂಮೆನ್ ಮತ್ತು ಗೃಹ ಕಾರ್ಯದರ್ಶಿ ಆಚೆಸನರ ಬಾಯಿಯಿಂದ ಬಂದಿವೆಯಾದರೂ ಏಸ್ಯಾದ ರಾಷ್ಟ್ರಗಳನ್ನು ತಮ್ಮ ಅಂಕೆಯೊಳಗಿರಿಸಿಕೊಳ್ಳುವುದೇ ಅಮೇರಿಕನ್ ನಾಯಕರ ಗುರಿಯೆಂಬುದು ಸ್ಪಷ್ಟವಿದೆ ಏಸ್ಯಾದಲ್ಲಿ ಅಗತ್ಯ ಬಿದ್ದಾಗ ಕೂಡಲೇ ಕಾರ್ಯಕ್ಕಿಳಿಸಲಾಗುವಂತೆ ಜನರಲ್ ಮೇಕರ್ಥರರ ಕೈಕೆಳಗೆ ಅಧಿಕಾಧಿಕ ವಿಮಾನ,ನಾವೆ ಮತ್ತು ಸೇನಾಬಲಗಳನ್ನಿಡುವುದ – ಏಸ್ಯಾ ರಾಷ್ಟ್ರಗಳಿಗೆ ಹಣ, ತಜ್ಞ ಜನ ಮತ್ತು ಸೇನೋಪಕರಣಗಳ ಸಹಾಯ ಸಲ್ಲಿಸಿ, ಅವುಗಳನ್ನು ಸಶಕ್ತವಾಗಿಡುವುದೇ ಮೊದಲಾದ ಯೋಜನೆಗಳನ್ನು ಅಮೇರಿಕವೀಗ ದೃಷ್ಟಿಪಥದಲ್ಲಿಟ್ಟುಕೊಂಡಿದೆ. ಅಂತೂ ಪ್ರಚಲಿತ ಸ್ಥಿತಿಗತಿಗಳ ಮೇಲಿಂದ ಏಸ್ಯಾವೇ ರಶ್ಯಾ ಮತ್ತು ಅಮೇರಿಕಗಳ ಚದುರಂಗದಾಟದ ರಂಗವಾಗಿ ಪರಿಣಮಿಸಿದೆ. ಸಾಮಾನ್ಯ ಜನರ ಅಸಹ್ಯ ದುಸ್ಥಿತಿಯ ದೆಸೆಯಿಂದ ಕಮ್ಯೂನಿಸಮ್ ಸ್ವಾಭಾವಿಕವಾಗಿ ಬೇರು ಬಿಟ್ಟು ವ್ಯಾಪಿಸುತ್ತಿರುವಾಗ, ಅಂತಹ ಆಧಾರವಿಲ್ಲದ ಅಮೇರಿಕವು ಧನ, ಸೇನಾಬಲದಿಂದ ಏಸ್ಯವನ್ನು ಹಿಡಿದುಕೊಳ್ಳಲು ಹವಣಿಸುತ್ತಿದೆ. ಈ ಸಂದರ್ಭದಲ್ಲಿ ಏಸ್ಯಾದ ಸ್ವತಂತ್ರ ಹಾಗೂ ನ್ಯಾಯ ಪಕ್ಷಪಾತಿ ದೊಡ್ಡ ರಾಷ್ಟ್ರ ಭಾರತದ ಮೇಲೆ ಅತಿ ಹೆಚ್ಚಿನ ಹೊಣೆ ಬಿದ್ದಿದೆ, ಎಂದು ಬೇರೆ ಹೇಳಬೇಕಾಗಿಲ್ಲ.

oo oo oo

ಜರ್ಮನಿಯ ಭವಿಷ್ಯದ ಕುರಿತು ರಶ್ಯಾ ಮತ್ತಿತರ ಏಳು ಕಮ್ಯೂನಿಸ್ಟ್ ರಾಷ್ಟ್ರಗಳ ಗುಪ್ತ ಸಮ್ಮೇಳನವೊಂದು ಕಳೆದ ವಾರ ಪ್ರೇಗ್ಯುವಿನಲ್ಲಿ ನಡೆದು, ಜರ್ಮನಿಯನ್ನು ಪುನಃ ಶಸ್ತ್ರೀಕರಣಗೊಳಿಸಬಾರದು- ಜರ್ಮನಿಯೊಡನೆ ಕೂಡಲೇ ಒಂದು ಶಾಂತಿ ಒಪ್ಪಂದವನ್ನು ಮಾಡಿಕೊಂಡು ಅಲ್ಲಿರುವ ಆಕ್ರಮಣ ರಾಷ್ಟ್ರಗಳ ಸೇನೆಗಳೆಲ್ಲವೂ ಒಂದು ವರ್ಷದೊಳಗೆ ಹಿಂದೆ ಹೋಗಬೇಕು-ಅಖಿಲ ಜರ್ಮನಿಗಾಗಿ ಘಟನಾತ್ಮಕ ಸರಕಾರವೊಂದನ್ನು ರಚಿಸಬೇಕು—ಎಂದೂ ಮೇಲಧಿಕಾರೀ ಚತುರ್ರಾಷ್ಟ್ರಗಳನ್ನು ಕೇಳಿಕೊಳ್ಳುವ ಹೇಳಿಕೆ ಹೊರಟಿದೆ ಉಪಕರಣಗಳ ಉತ್ಪನ್ನಕ್ಕೆ ಜರ್ಮನಿಯಲ್ಲಿದ್ದ ನಿಯಂತ್ರಣಗಳನ್ನು ತೆಗೆದು ಹಾಕಿ ತಮ್ಮ ಜರ್ಮನಿಯನ್ನು ಶಸ್ತ್ರೀಕರಣಗೊಳಿಸುವ ನಿರ್ಧಾರ ಮಾಡಿರುವ ಪಾಶ್ಚಾತ್ಯ ರಾಷ್ಟ್ರಗಳ ಧೋರಣೆಯ ವಿರುದ್ಧ ಹೂಡಿರುವ ಅಸ್ತ್ರವಿದು.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ವಿವಿಧ ವಿವಾದಗಳಿಗೆ ಸಂಬಂಧಪಟ್ಟ ಚರ್ಚೆಗಳು ಯಥಾಪ್ರಕಾರ ಸಾಗಿವೆ ಬರುವ ಫೆಬ್ರುವರಿಗೆ ಮುಗಿಯುವ ಪ್ರಚಲಿತ ಕಾರ್ಯದರ್ಶಿ ಎಮ್. ಟ್ರಿಗ್ವಿಲೀ, ಅವರ ಅವಧಿಯನ್ನೇ ಇನ್ನೂ ಐದು ವರುಷಗಳಿಗೆ ಹೆಚ್ಚಿಸಬೇಕೆಂದು ಅಮೇರಿಕದ ಆಶೆಯಿದ್ದರೆ, ರಶ್ಯವದಕ್ಕೆ ವಿರೋಧವಿದೆ. ಭಾರತವು ಈ ಮಟ್ಟಿಗೂ ಮಧ್ಯ ಹಾದಿ ಹಿಡಿದಿದೆ. ಭದ್ರತಾ ಕೌನ್ಸಿಲಿನ ಶಾಶ್ವತ ಸದಸ್ಯರಿರುವ ಐದು ಮಹಾ ರಾಷ್ಟ್ರಗಳು ಹೊಸ ಮಾತುಕತೆಗಿಳಿದು ಅಂತರ್ರಾಷ್ಟ್ರೀಯ ಶಾಂತಿಗೆ ಅಪಾಯಕರವಿರುವ ಸಮಸ್ಯೆಗಳನ್ನು ತೀರ್ಮಾನಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ಸಂಯುಕ್ತ ರಾಷ್ಟ್ರ ಸಂಘದ 'ರಾಜಕೀಯ ಸಮಿತಿ'ಯು ಒಮ್ಮತದ ನಿರ್ಧಾರ ಮಾಡಿದೆ. ಕಾಶ್ಮೀರ ಸಂಬಂಧದ ಸರ್. ಡಿಕ್ಸನರ ವರದಿಯ ಚರ್ಚೆಯನ್ನು ಭದ್ರತಾ ಕೌನ್ಸಿಲು ಈ ವಾರದಲ್ಲಿ ಆರಂಭಿಸುವುದು.

ಬ್ರಿಟನಿನ ಅರ್ಥ ಮಂತ್ರಿಯಾಗಿದ್ದು ಆರ್ಥಿಕ ಗಂಡಾಂತರದಿಂದ ಬ್ರಿಟನನ್ನು ಪಾರು ಮಾಡಿದವರೆಂಬ ಕೀರ್ತಿಗೊಳಗಾಗಿರುವ ಮತ್ತು ಭಾರತ ಸ್ವಾತಂತ್ರ್ಯ ಮಂಜೂರಾಯಿಸುವುದರಲ್ಲಿ ಪ್ರಮುಖ ಭಾಗವಹಿಸಿದ್ದ ಸ್ಟೆಫೋರ್ಡ್ ಕ್ರಿಪ್ಸರು ಅನಾರೋಗ್ಯ ನಿಮಿತ್ತ ತನ್ನ ಮಂತ್ರಿ ಸ್ಥಾನ ಮತ್ತು ಪಾರ್ಲಿಮೆಂಟ್ ಸದಸ್ಯತ್ವಕ್ಕೆ ರಾಜೀನಾಮೆ ಯಿತ್ತಿದ್ದಾರೆ.

THE CANARA MUTUAL ASSURANCE COMPANY LIMITED

H. O. UDIPI· Estd: 1935

Hunger Knows No Holiday.

Parental love will make tremendous efforts and face terrible sufferings to satisfy the hunger of its young. This is Nature's plan to supply the need of the helpless and to enable life to march on. To complete this plan the continuance of the parent's life is necessary.

But human life is frail and uncertain. Life insurance is the only certain provider of the comforts of home, education and of a fair chance in life for our Children.

T. R. A. Pai

THE
Canara Banking Corporation Ltd.
(Incorporated in India)
Estd: 1906
Head Office : UDIPI, (S. I)

Capital Authorised	Rs. 25,00,000
Capital Issued, Subscribed & Paid up	Rs. 20,00,000
Reserves	Rs. 9,44,765

ನವಯುಗ

ಗುರುವಾರ, ಉಡುಪಿ, ೨೬-೧೦-೫೦

'ಸಿಂಡಿಕೇಟ್' ಬೇಂಕಿನ ರಜತೋತ್ಸವ

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್–ಇದರ ರಜತೋತ್ಸವವು ಇದೇ ತಾ. 25ರಲ್ಲಿ, ಉಡುಪಿಯ ಮುಖ್ಯ ಕಾರ್ಯಾಲಯದಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿದೆ. ಇದು ಸಿಂಡಿಕೇಟಿನ ವ್ಯವಸ್ಥಾಪಕರ ಮಟ್ಟಿಗೆ ಹೆಗ್ಗಳಿಕೆಯ ವಿಷಯವಾಗಿರುವಂತೆಯೇ, ಈ ಬೇಂಕಿನೊಡನೆ ಸಂಬಂಧವಿಟ್ಟುಕೊಂಡಿರುವ ಸಾರ್ವಜನಿಕರೆಲ್ಲರ ಪಾಲಿಗೂ ಅಭಿಮಾನದ ಸಂಗತಿ 1925ನೇ ಒಕ್ಟೋಬರ ತಾರೀಕು 20ರಲ್ಲಿ ಕೇವಲ 8250 ರೂಪಾಯಿಗಳ ಮೂಲ ಭಂಡವಾಳದೊಡನೆ ಆರಂಭಿಸಿದ್ದ ಈ ಸಂಸ್ಥೆಯು, ಒಟ್ಟು 5 ಕೋಟಿ ರೂಪಾಯಿಗಳ ವಹಿವಾಟುಳ್ಳದ್ದಾಗಿ ಬೆಳೆದು 1950ನೇ ಒಕ್ಟೋಬರ 20ನೇ ತಾರೀಕಿಗೆ 25 ವರುಷಗಳನ್ನು ಜಯಶೀಲವಾಗಿ ಮುಗಿಸಿಕೊಂಡಿತೆನ್ನುವಾಗ ಜನಂದಾಭಿಮಾನ ಸಹಜವಾಗಿ ಮೂಡುತ್ತದೆ. ಜನಜೀವನರಂಗದಂತೆಯೇ, ಆರ್ಥಿಕ ಕ್ಷೇತ್ರದಲ್ಲೂ ಏರುತಗ್ಗು, ಇಳಿತ ಭರತಗಳಿಂದ ತುಂಬಿದ್ದ ಕಳೆದ ಕಾಲು ಶತಮಾನದಲ್ಲಿ, ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿಕೊಂಡು ಬರಲು ಶಕ್ತವಾದ ಈ ಆರ್ಥಿಕ ಸಂಸ್ಥೆಯು ವಿಜಯೀ ಸಾಹಸದ ಒಂದು ಉತ್ತಮ ದಾಖಲೆ. ವ್ಯವಹಾರ ಜಾಣ್ಮೆ, ಕಾರ್ಯನಿಷ್ಠೆ ಮತ್ತು ದೂರದರ್ಶಿತ್ವವಿದ್ದರೆ, ಎಂತಹ ತಡೆ ತೊಡಕುಗಳನ್ನಾದರೂ ಗೆದ್ದು ವಿಜಯ ಮುಕುಟವನ್ನೇರಿಸಿಕೊಳ್ಳಬಹುದೆಂಬ ಪಾಠ ಇಲ್ಲಿದೆ. ಬೆಳ್ಳೀಹಬ್ಬವನ್ನಾಚರಿಸುವ ಅವಧಿಯ ವರೆಗೆ, ಅಥವಾ ಅದನ್ನು ಸಂಭ್ರಮದಿಂದ ಆಚರಿಸಲಾಗುವಷ್ಟು ಪ್ರಗತಿಪರವಾಗಿ, ಬಾಳಿ ಬರುವ ಸಂಘ, ಸಂಸ್ಥೆಗಳು ನಮ್ಮಲ್ಲಿರುವುದು ವಿರಳ ಸಂಖ್ಯೆಯಲ್ಲೇ. 'ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್' ನಾಲ್ಕಂಕೆಗಳ ಮೂಲ ಭಂಡವಾಳದೊಡನೆ ಉಡುಪಿಯಲ್ಲಾರಂಭವಾದುದು ಕಾಲು ಶತಮಾನ ಕಳೆಯುವುದರೊಳಗೆ ಎಂಟಂಕೆಗಳ ವಹಿವಾಟಿನೊಂದಿಗೆ ನಾಲ್ಕು ಸಂಸ್ಥಾನಗಳಲ್ಲಿ ಹರಡಲು ಶಕ್ತವಾಯಿತು. ಮುಂಬಾಯಿ, ಮದರಾಸ, ಹೈದರಾಬಾದ್, ಕೊಚ್ಚಿ ತಿರುವಾಂಕೂರು ಸಂಸ್ಥಾನಗಳ ಹಲವೆಡೆಗಳಲ್ಲಿ ಈ ಬೇಂಕಿನ ಶಾಖೆಗಳು ಜಯಶೀಲವಾಗಿ ಕಾರ್ಯ ನಿರ್ವಹಿಸುತ್ತಿವೆ. ಬೊಂಬಾಯಿ, ಮದ್ರಾಸು, ಬೆಂಗಳೂರುಗಳಂತಹ ದೊಡ್ಡ ನಗರಗಳಿಂದಾರಂಭಿಸಿ, ಸಣ್ಣ ಹಳ್ಳಿಗಳ ವರೆಗೂ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಶಾಖೆಗಳು ಹರಡಿದ್ದು ಪರಿಣಾಮಕಾರೀ ಆರ್ಥಿಕ ವಹಿವಾಟುಗಳನ್ನು ನಡೆಯಿಸುತ್ತಿವೆ. ಪೇಟೆಯಂತೆಯೇ ಹಳ್ಳಿಯನ್ನು—ಧನಿಕನಂತೆಯೇ ದರಿದ್ರನನ್ನು ಆಲಿಂಗಿಸಿ ಕೊಳ್ಳುವ ವಹಿವಾಟು ಹಸ್ತ ಸಿಂಡಿಕೇಟಿನದು. ಯಾವ ಕ್ಷೇತ್ರದಲ್ಲೇ ಆದರೂ ಸಂಪ್ರದಾಯ ಬದ್ಧವಾಗಿ ಕಾರ್ಯ ನಿರ್ವಹಿಸುವವರು ಮತ್ತು ಕಾಲೋಚಿತ ಸುಧಾರಣೆಗಳನ್ನು ಹೊಸತಾಗಿ ಜಾರಿಗೆ ತರುವವರು, ಎಂಬ ವರ್ಗಭೇದವಿರುವಂತಹದೇ; ಸಿಂಡಿಕೇಟ್ ಬೇಂಕು ಯಶಸ್ವೀ ನವಪ್ರಯೋಗಗಳನ್ನು ಮಾಡಿ, ಆರ್ಥಿಕ ರಂಗದಲ್ಲಿ ಸಾಮಾನ್ಯ ಜನರ ಸಂಬಂಧ ಗಳಿಸಿಕೊಂಡಿದೆ; ಇದು ಎತ್ತಿ ಹೇಳತಕ್ಕ ಸಂಗತಿ. ಇಪ್ಪತ್ತೈದು ಕಡೆಗಳಲ್ಲಿ ಹಳ್ಳೀ ಶಾಖೆಗಳನ್ನು ತೆರೆದು, ಅಲ್ಲಿಯ ವಿದ್ಯಮಾನಗಳಿಗೆ ಹೊಂದಿಕೆಯಾಗುವಂತೆ ಕಾರ್ಯ ನಿರ್ವಹಿಸಿಕೊಂಡು ಬರುತ್ತಿರುವ ಅಪೂರ್ವ ಯೋಗ್ಯತೆ ಈ ಬೇಂಕಿನದು. ಅಲ್ಪೋತ್ಪತ್ತಿಯುಳ್ಳ ಬಡವನಿಗೂ 'ಉಳಿತಾಯ'ದ ಸಯೋಗವನ್ನೊದಗಿಸಿಕೊಡುವ 'ಪಿಗ್ಮಿ'ಯಂತಹ ಹೊಸ ವಿಧಾನಗಳನ್ನು ಅದು ಅಸ್ತಿತ್ವಕ್ಕೆ ತಂದಿದೆ. ಹಳ್ಳೀ ಶಾಖೆಗಳನ್ನು ತೆರೆದು 'ಬೇಂಕಿಂಗ್' ವ್ಯವಹಾರವನ್ನು ಗ್ರಾಮಪ್ರಿಯಗೊಳಿಸಬೇಕೆಂದು ರಿಜರ್ವ್ ಬೇಂಕು ಈಗ ಎಲ್ಲಾ ಬೇಂಕುಗಳಿಗೂ ಉಪದೇಶಿಸುತ್ತಿದೆ. ಸಿಂಡಿಕೇಟಾದರೋ ಹಲವು ವರುಷಗಳಿಗೆ ಮೊದಲೇ ಈ ವಿಧಾನವನ್ನು ಅಸ್ತಿತ್ವಕ್ಕೆ ತಂದು ಹಲವು ಹಳ್ಳೀ ಕೇಂದ್ರಗಳಲ್ಲೀಗ ಯಶಸ್ವೀ ವಹಿವಾಟು ನಡೆಸುತ್ತಿದೆ. ತೆತ್ತು ಬಂದ ಬಂಡವಾಳವೇ 23 ಲಕ್ಷ ರೂಪಾಯಿಗಳಷ್ಟಿದ್ದು, ಒಂದು ಲಕ್ಷ ಇಪ್ಪತ್ತು ಸಾವಿರಕ್ಕೂ ಮಿಕ್ಕಿದ ಗಿರಾಕಿಗಳಿಂದ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟು, ಆರ್ಥಿಕ ಸಂಸ್ಥೆಗಳ ಪಂಗ್ತಿಯಲ್ಲಿ ಒಂದು ಗಣ್ಯ ಸ್ಥಾನ ಗಳಿಸಿದೆ. ಸುದೃಢ ತಳಹದಿಯ ಮೇಲೆ ಸರ್ವಜ ಸಂಪರ್ಕ, ಸರ್ವವ್ಯಾಪಕತೆಯ ಧೋರಣೆಯಿಟ್ಟುಕೊಂಡು, ಕಳೆದ ಎರಡೂವರೆ ದಶಮಾನಗಳಿಂದ ಜಯಶೀಲವಾಗಿ ಮುಂದೊತ್ತಿ ಬಂದ ಸಿಂಡಿಕೇಟಿನ ಡೈರೆಕ್ಟರ್ ಮಂಡಲಿ ಹಾಗೂ ಅದರ ಸಂಚಾಲಕರು ಸತ್ಯಕ್ಕೂ ಇಂದು ಕೃತಾರ್ಥರು. ಸಣ್ಣ ಮೊತ್ತದೊಡನೆ ಈ ಬೇಂಕಿಂಗ್ ಸಂಸ್ಥೆಯನ್ನು ಪ್ರಾರಂಭಿಸುವಾಗ, ಅದರ ಸ್ಥಾಪಕರಾದ ದೂರದರ್ಶಿ ಶ್ರೀ ಯು. ಎ. ಪೈಗಳು ಆಶಿಸಿದ್ದ ಭವಿಷ್ಯತ್ತು ಕಾಲು ಶತಮಾನದೊಳಗೆ ಡಾ| ಟಿ. ಎಮ್. ಎ. ಪೈಗಳ ಯೋಜನಾ ಪ್ರತಿಭೆ ಮತ್ತು ಆಡಳಿತಾಧ್ಯತೆಯಿಂದ ವಸ್ತುತಃ ರೂಪುಗೊಂಡಿತು; ಇಪ್ಪತ್ತೈದು ವರುಷಗಳ ಮಾಯಿದೆಯೊಳಗೆ ಒಂದು ಸಂಸ್ಥೆಯ ಮಟ್ಟಿಗೆ ಪರಮಾವಧಿ ನಿರೀಕ್ಷಿಸಲಾಗುವಷ್ಟನ್ನು ಈ ಸಾಪರ್ಥ್ಯವು ಸಾಧಿಸಿಕೊಟ್ಟಿತು ಈ ರೀತಿ ಸಾರ್ಥಕ ಜೀವನ ನಡೆಸಿ, ಗಣನೀಯ ಸರಹದ್ದಿಗೀಗ ಬಂದಿರುವ ಸಿಂಡಿಕೇಟು, ಇನ್ನಷ್ಟು ಭವ್ಯ ಭವಿಷ್ಯದತ್ತ ಮುಖ ಮಾಡಿರುವುದು–ಸರ್ವ ಸಂಪೂರ್ಣತೆಯತ್ತ ನೋಡುತ್ತಿರುವುದು ಸ್ವಾಭಾವಿಕ. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಕರ್ತ ವಿಭಾಗದ ಸಂತೃಪ್ತಿಯನ್ನು ನೆನಸುವಾಗ ಬೇಂಕು ತನ್ನ ನೌಕರರಿಗೆ ಧರ್ಮಾರ್ಥ ವಿಮೆ, ಹೈಸ್ಕೂಲು ಶಿಕ್ಷಣದ ವರೆಗೆ ಅವರ ಮಕ್ಕಳಿಗೆ ಶಾಲಾ ಹಣ, ಇತ್ಯಾದಿ ಯೋಜನೆಗಳನ್ನು ಕೈಕೊಂಡಿರುವುದು ಸ್ಮರಣಾರ್ಹವಿದೆ. ಸ್ಥಾಪಕರ ಕನಸನ್ನು ಇಪ್ಪತ್ತೈದರ ತಾರುಣ್ಯದ ಗಡಿ ಸೇರುವುದರೊಳಗೆ ನಿಜಗೊಳಿಸಿದ ಸಂಸ್ಥೆಯಿದು, ಈ ಪ್ರಾಮುಖ್ಯ ಸಂದರ್ಭದಲ್ಲಿ ಸಂಚಾಲಕರು ನಿರೀಕ್ಷಿಸುತ್ತಿರುವ ಭವ್ಯ ಭವಿಷ್ಯವನ್ನೂ ಸಾಧಿಸಿಕೊಡಲು ಬದ್ಧವಿದೆ. ಶ್ರೀ ಟಿ. ಎ. ಪೈಗಳಂತಹ ಜನಸೇವಾಸಕ್ತರಾಗೂ ಉತ್ಸಾಹೀ ಜನರಲ್ ಮೆನೇಜರರ ಕಾರ್ಯಕರ್ತೃತ್ವದಲ್ಲಿ ಹಾಗಾಗಲೆಂದು ಹಾರೈಸುತ್ತೇವೆ. 'ಕೆನರಾ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ್'ನ ಸಂಚಾಲಕರು, ಡೈರೆಕ್ಟರರು ಮತ್ತು ಸಿಬಂದಿಯವರ ಕೃತಾರ್ಥತೆಗಾಗಿ ಅವರೆಲ್ಲರನ್ನೂ ಈ ರಜತೋತ್ಸವ ಶುಭ ಮುಹೂರ್ತದಲ್ಲಿ ಅಭಿನಂದಿಸಿ ಬೇಂಕಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರುತ್ತೇವೆ.

ಭಾರತದ ವಿದೇಶ ಧೋರಣೆ

ಪ್ರಪಂಚದ ಎರಡು ರಾಷ್ಟ್ರ ಪಾಳಯಗಳ ಪೈಕಿ ಯಾವುದಕ್ಕೂ ಹೊಂದಿಕೊಳ್ಳದೆ, ಲೋಕಶಾಂತಿ ಸ್ಥಾಪನೆಗನುಕೂಲವಾಗುವ ಇಚ್ಛೆಯಿಂದ ಸ್ವತಂತ್ರ ಧೋರಣೆ ವಹಿಸಿರುವ ಭಾರತವು ರಶ್ಯಾ, ಅಮೆರಿಕಗಳಲ್ಲಿ ಯಾವುದರ ಪೂರ್ಣ ವಿಶ್ವಾಸಕ್ಕೂ ಪಾತ್ರವಾಗದೆ ಟೀಕೆಗಳಿಗೀಡಾಗಿದೆ. ಸಂಬಂಧಪಟ್ಟವರ ಮುಖ ನೋಡುವ ಬದಲು, ಸಂಬಂಧಿಸಿದ ನ್ಯಾಯವನ್ನಷ್ಟೇ ನೋಡುವವರ ಪಾಲಿಗೆ ಈ ಕಾಲದಲ್ಲಿ ದೊರೆಯುವ ಸಹಜ ಸಂಭಾವನೆಯಿದಾಗಿರುವುದರಿಂದ ಸ್ವತಂತ್ರ ಭಾರತವೀಗ ದೂಷಣೆ ಕೇಳಬೇಕಾಗಿ ಬಂದುದರಲ್ಲಿ ದುಃಖವೇನೂ ಇಲ್ಲ. ಭಾರತ ಸ್ವಾತಂತ್ರ್ಯ ಸ್ಥಾಪನೆಯಾದಂದಿನಿಂದ, ನೆಹರುಗಳ ಅಮೆರಿಕಾ ಪ್ರವಾಸ ಮತ್ತಾನಂತರದ ವರೆಗೂ 'ಪಾಶ್ಚಾತ್ಯ ಭಂಡವಾಳಶಾಹೀ ರಾಷ್ಟ್ರಗಳ ಕೈಗೊಂಬೆ'ಯೆಂಬ ಬಿರುದು ದಾನವು ನೆಹರೂ ಸರಕಾರಕ್ಕೆ ರಶ್ಯದ ಪತ್ರಿಕೆಗಳಿಂದ ಮತ್ತು ಆಕಾಶವಾಣಿಯಿಂದ ದೊರೆಯುತ್ತಿದ್ದಿತು. ಕೊರಿಯಾ ಯುದ್ಧ ಸಂಬಂಧವಾಗಿ ರಶ್ಯಾ ಅಮೆರಿಕಗಳಿಗೆ ರಾಜೀ ಸೂಚನೆಗಳನ್ನು ಪಂಡಿತ ನೆಹರುಗಳು ಮಾಡಿದಂದಿನಿಂದ ಈ ವರೆಗೂ ಅಮೆರಿಕದ ಪತ್ರಿಕೆಗಳು ಮತ್ತು ಜನಾಭಿಮತವು ಭಾರತ ಸರಕಾರವನ್ನು ರಶ್ಯದ ಪಕ್ಷಪಾತಿಯೆಂದು ದೂಷಿಸುತ್ತಿವೆ. ಭದ್ರತಾ ಕೌನ್ಸಿಲಿನಲ್ಲಿ ಕಮ್ಯೂನಿಸ್ಟ್ ಚೈನಕ್ಕೆ ಸ್ಥಾನಕೊಡಬೇಕೆಂದು ಹೂಡಿದ ವಾದ–ಸಂಯುಕ್ತ ರಾಷ್ಟ್ರ ಸಂಘದ ಮಹಾಸಭೆಯ ಸುಧಾರಣೆಗಾಗಿ ಅಮೆರಿಕವು ಮುಂದಿಟ್ಟ ಸೂಚನೆಗಳಿಗೆ ಕೊಟ್ಟ ನಕಾರ—ಕೊರಿಯದ ಕುರಿತು ಶಾಂತಿಸಾಧನಾ ಪ್ರಯತ್ನ ಮಾಡಿಕೊಳ್ಳದೆ ಸಂ. ರಾ. ಸೇನೆಗಳು 38ನೇ ಗಡಿಗೆರೆ ದಾಟಿ ಉತ್ತರಕ್ಕೆ ಹೋಗ ಬಾರದೆಂದು ಮಾಡಿದ ಸೂಚನೆ—ಇತ್ಯಾದಿಗಳಿಂದ ಭಾರತವು ಅಮೆರಿಕದ ದೃಷ್ಟಿಯಲ್ಲಿ ರಶ್ಯದ ಪಕ್ಷಪಾತಿ ಅಪರಾಧಿಯಾಗಿ ತೋರಹತ್ತಿದೆ. "ವ್ಯವಹಾರ ಜ್ಞಾನವಿಲ್ಲದೆ ಬಾಯಿ ಹಾರಿಸುವುದೊಂದೇ ಈ ಪಂಡಿತರ ಅಭ್ಯಾಸ"ವೆಂದು ಪ್ರಧಾನಿ ನೆಹರುಗಳನ್ನು ಹೀಗಳೆಯುವ ಮನೋವೃತ್ತಿಯು ಅಮೆರಿಕದಲ್ಲಿ ಸರ್ವಸಾಮಾನ್ಯವಾದಂತಿದೆ. ಪ್ರತ್ಯಕ್ಷ ಯುದ್ಧ ಘೋಷಣೆಯೊಂದು ಮಾತ್ರ ಬಾಕಿಯಿರುವ ಉಗ್ರತೆಗೆ ರಶ್ಯಾ ಅಮೆರಿಕಗಳೊಳಗಿನ ವೈಮನಸ್ಸು ಏರಿರುವ ಈ ದಿನಗಳಲ್ಲಿ ಈ ಜಗಳದಲ್ಲಿ ತಮ್ಮೊಂದಿಗೆ ಕೂಡಿಕೊಳ್ಳದವರೆಲ್ಲರನ್ನೂ ರಶ್ಯದ ಪಕ್ಷಪಾತಿಗಳೆಂದೇ ಗಣಿಸುವಷ್ಟು ಭ್ರಮೆ ಅಮೆರಿಕಾನರಲ್ಲಿದೆ. ಕಮ್ಯೂನಿಸ್ಟರ ಮೇಲಿನ ಈ ದ್ವೇಷಾಸೂಯೆಗೆ ಈಗಿನ ಕೊರಿಯಾ ವಿಜಯದ ಅಹಂಕಾರವೂ ಜತೆಗೂಡಿ, ಅಮೆರಿಕದ ಜನಮತವೀಗ ಭಾರತದ ಧೋರಣೆಯನ್ನು ಆಕ್ಷೇಪಿಸುವ ಮಟ್ಟದಿಂದ, ಅಪಹಾಸ್ಯ ಮಾಡುವ ಮಟ್ಟಕ್ಕಿಳಿದಿದೆ. ಲೋಕ ಶಾಂತಿ ಚಿಂತನೆ, ನ್ಯಾಯ ನಿಷ್ಠೆಯಿರುವ ಎಲ್ಲರ ಕಣ್ಣನ್ನೂ ತೆರೆಯಿಸುವಂತಹ ವಿದ್ಯಮಾನವಿದು. ಸದ್ಯಸ್ಥಿತಿಯಲ್ಲಿ ಭಾರತ ಸರಕಾರದ ಅಂತರ್ರಾಷ್ಟ್ರೀಯ ಧೋರಣೆಯು ಎಷ್ಟೇ ದುರ್ಬಲವಾಗಿ ಕಂಡರೂ ಲೋಕ ಶಾಂತಿಸಾಧನೆಗೆ ಸಾಧು ಮಾತ್ರ ಆಧಾರವಾದರೂ ಇದೆಯಾದರೆ ಇದೊಂದೇ. ಕೊರಿಯಾ ಯುದ್ಧದ ನ್ಯಾಯಾನ್ಯಾಯವೇನಿದ್ದರೂ—ಅಲ್ಲಿಯ ಕಮ್ಯೂನಿಸ್ಟರನ್ನು ಆಕ್ರಮಣಗಾರರೆಂದು ಘೋಷಿಸುವುದರಲ್ಲಿ ಭಾರತವು ಅಮೆರಿಕದಷ್ಟೇ ಮುಂದಾಗಿದ್ದರೂ—ಇಂದು ಪೂರ್ಣ ನಿಷ್ಪಕ್ಷಪಾತ ಮತಗಣನೆ ನಡೆದಲ್ಲಿ, ಅಖಿಲ ಕೊರಿಯದ ಜನಮತವು ಕಮ್ಯೂನಿಸ್ಟರಿಗೆ ಬೆಂಬಲವಿದ್ದೆ, ಎಂಬುದು ಸ್ಪಷ್ಟವಾಗುವುದು ಖಂಡಿತ. ಕಮ್ಯೂನಿಸ್ಟ್ ಆಕ್ರಮಣಗಾರರ ಪರಾಭವಕ್ಕಾಗಿ ಸಂತೋಷಸೂಚಿಸುತ್ತಾ, ಕೊರಿಯದ ಜನಮತಕ್ಕೆ ಪ್ರಾಧಾನ್ಯ ಕೊಡಲಾಗುವಂತೆ, ಯುದ್ಧವನ್ನು ಉತ್ತರಕ್ಕೂ ಒಯ್ಯದೆ ಸಂಧಾನ ಪ್ರಯತ್ನ ಮಾಡಬೇಕೆಂದು ನೆಹರುಗಳು ಸೂಚಿಸಿದುದು ನ್ಯಾಯನಿಷ್ಠೆಯಿಂದ ಹೊರತ, ಕಮ್ಯೂನಿಸ್ಟರ ಮೇಲಿನ ಸಹಾನುಭೂತಿಯಿಂದಲ್ಲ. ಈಗ ಅಮೆರಿಕವು ಅಷ್ಟದ ಕುರಿತು ಮಾಡತ್ತಿರುವ ಚಿಂತನೆಯಾದರೂ ತಮ್ಮ ಸ್ವಕಾರ್ಯ

SILVER JUBILEE SUPPLEMENT OF

THE CANARA INDUSTRIAL & BANKING SYNDICATE LTD.

ಕೃತಜ್ಞತೆಯ ಮಾತೊಂದು......

ಈ ಸಂಸ್ಥೆಯಲ್ಲೂ ಅದರ ಅಭ್ಯುದಯದಲ್ಲೂ, ತಾವು ತೋರ್ಪಡಿಸಿದ ಆಳವಾದ ಅಭಿರುಚಿಗೆ ಸಿಂಡಿಕೇಟಿನವರಾದ ನಾವುಗಳು ಕೃತಜ್ಞರಾಗಿದ್ದೇವೆ. ತಾವು ಪಾಲುದಾರರೇ ಆಗಲಿ, ಎಕೌಂಟು ಇರುವವರೇ ಆಗಲಿ; ತಮ್ಮದು ಠೇವಣಾತಿಯ ಲೆಕ್ಕವೇ ಆಗಲಿ, ಎರವಲಿನ ಲೆಕ್ಕವೇ ಆಗಲಿ; ತಮ್ಮ ವ್ಯವಹಾರ ದೊಡ್ಡದಿರಲಿ, ಸಣ್ಣದಿರಲಿ; ನಮ್ಮ ನಿಮ್ಮ ಸಂಬಂಧವು ಶಾಶ್ವತರೂಪದ್ದಿರಲಿ, ನಿಯತ ಅವಧಿಯದಾಗಿರಲಿ, ಏನೇ ಆದರೂ ಈ ಬೇಂಕಿನ ಉಚ್ಛ್ರಾಯಕ್ಕೆ ತಾವು ನೆರವಾಗಿದ್ದೀರಿ, ತಮ್ಮ ಸಹಕಾರವೂ, ಸಹಾನುಭೂತಿಯೂ, ಬೇಂಕನ್ನು ಈಗಿನ ಈ ಗಾತ್ರಕ್ಕೆ ತಂದು ನಿಲ್ಲಿಸಿವೆ.

ಡಾ। ಟಿ. ಮಾಧವ ಪೈಗಳು ಎಂ ಬಿ & ಬಿ ಎಸ್
ಮೆನೇಜಿಂಗ್ ಡೈರೆಕ್ಟರರು ಮತ್ತು ಚೆಯರ್‌ಮ್ಯಾನರು.

ತಾವು ಈ ಸಂಸ್ಥೆಗೆ ಮಾಡಿರುವ ಮಹೋಪಕಾರಕ್ಕೆ ನಾವು ತುಂಬಿಪೆದೆಯಿಂದ ತಮ್ಮನ್ನು ಅಭಿನಂದಿಸುತ್ತೇವೆ. ಈ ಸುಸಂದರ್ಭವನ್ನು ಇದಕ್ಕೂ ಯೋಗ್ಯತರವಾಗಿ ನಾವು ಆಚರಿಸಿದರೆ ಎಷ್ಟು ಚೆನ್ನಾಗುತ್ತಿತ್ತು? ಆದರೆ ರಾಷ್ಟ್ರದ ಸದ್ಯದ ಪರಿಸ್ಥಿತಿಯಲ್ಲಿ ಸರಳತೆ, ನಿರಾಡಂಬರ ಎಂಬವು ರಾಷ್ಟ್ರೀಯ ಕರ್ತವ್ಯವೆಂದು ನಾವು ಭಾವಿಸಿದ್ದೇವೆ. ಇದಕ್ಕೆ ಗುಣಗ್ರಾಹಿಗಳಾದ ತಮ್ಮ ಕ್ಷಮೆ ಇರಲಿ.

ತಮ್ಮ ನಿರಂತರವೂ, ಅಮೂಲ್ಯವೂ,ಆದ ಸಹಾನುಭೂತಿ, ಸಹಯೋಗ ಮತ್ತು ಪ್ರೋತ್ಸಾಹಗಳನ್ನು ನಾವು ಸದಾ ನಿರೀಕ್ಷಿಸುತಿದ್ದೇವೆ. ಈ ತಮ್ಮ ವಿಶ್ವಾಸಕ್ಕೆ ಅರ್ಹರಾಗಲು ನಾವು ದುಡಿಯುವೆವೆಂದು ಬೇರೆ ಹೇಳಲೇಕೆ?

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಶ್ರೀ. ಉಪೇಂದ್ರ ಅನಂತ ಪೈಗಳು,
ಬ್ಯಾಂಕಿನ ಸ್ಥಾಪಕರು.

★

[illegible]

U. Anantha Pai

★

ಶ್ರೀ. ಟಿ. ಅನಂತ ಪೈಗಳು
B. Com. (Bom), A.I.I.B
ಜನರಲ್ ಮೆನೇಜರರು.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ರಜತೋತ್ಸವ ಪುರವಣಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ರಜತೋತ್ಸವಕ್ಕೆ

"ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಮತ್ತು ಬೇಂಕಿಂಗ್ ಸಿಂಡಿಕೇಟ್ ಸಂಸ್ಥೆಯು ತನ್ನ ರಜತ ಮಹೋತ್ಸವವನ್ನು ಈ ತಿಂಗಳ ೨೦ಕ್ಕೆ ನಡೆಯಿಸುತ್ತಿರುವುದನ್ನು ಅಲಿಸಿ ನನಗೆ ಸಂತೋಷವಾಗಿರುವುದು. ಈ ಸಂಸ್ಥೆಯಲ್ಲಿ ಆಸಕ್ತಿಯುಳ್ಳವರಿಗೆಲ್ಲ ಇದು ಸಂತೋಷದ ಮತ್ತು ಉತ್ಸಾಹದ ಸಮಾರಂಭವು. ಏಕೆಂದರೆ, ಬೇಂಕಿಂಗ್ ವ್ಯವಹಾರದಲ್ಲಿ ಇಪ್ಪತ್ತೈದು ವರುಷಗಳಲ್ಲಿ ಸಂತತವಾಗಿ ದುಡಿದುದರ ಸಂಪೂರ್ಣತೆಯನ್ನು ಸೂಚಿಸುತ್ತದೆ ಈ ಸಮಾರಂಭವು ಜಯಪ್ರದವಾಗಲಿ."

ಮಾನ್ಯ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾ ಅವರು,
ಮುಖ್ಯ ಸಚಿವರು, ಮದರಾಸು ಸರಕಾರ

"ಸಮಾರಂಭದ ಯಶಸ್ಸಿಗೆ ಮಾನ್ಯ ಶ್ರೀ ಕೆ. ಸಂತಾನಂ ಅವರು ತಮ್ಮ ಶುಭಾಶಯಗಳನ್ನು ಕಳುಹಲಪೇಕ್ಷಿಸುತ್ತಾರೆ"

—ಸಾರಿಗೆ ಮತ್ತು ರೈಲ್ವೇ ಉಪಸಚಿವರು,
ಭಾರತೀಯ ಕೇಂದ್ರ ಸರಕಾರ.

"ನಿಮ್ಮ ಪತ್ರವು ತಲುಪಿ ಸಂತೋಷವಾಯಿತು ನಿಮ್ಮ ನೇತೃತ್ವದಲ್ಲಿ ಸಿಂಡಿಕೇಟಿಗೆ ಆಗಿರುವ ಪ್ರಗತಿಯು ನನಗೆ ತುಂಬಾ ಆನಂದವನ್ನುಂಟು ಮಾಡಿದೆ. ನನ್ನ ವಿದ್ಯಾರ್ಥಿಗಳಲ್ಲಿ ಒಬ್ಬನು ವ್ಯವಹಾರದಲ್ಲಿ ಇಷ್ಟು ಚತುರನಾದುದು ನನಗೆ ಹೆಮ್ಮೆಯ ವಿಷಯ. ನಿಮಗೆಲ್ಲ ನನ್ನ ಶುಭಾಶಯಗಳು"

ಡಬ್ಲ್ಯು. ಆರ್. ನಾಟು,
ಆರ್ಥಿಕ ಮತ್ತು ಸ್ಟೆಟಿಸ್ಟಿಕ್ಸ್ ಸಲಹೆಗಾರರು,
ಕೃಷಿಸಾಚಿವ್ಯ, ಭಾರತೀಯ ಕೇಂದ್ರ ಸರಕಾರ.

"ಕಾರ್ಯಕಾರಣ ವಿಶೇಷಗಳ ದೆಸೆಯಿಂದಾಗಿ ನಿಮ್ಮ ರಜತ ಸಮಾರಂಭದಲ್ಲಿ ಭಾಗಿಯಾಗುವ ಸುಯೋಗ ನನ್ನದಾಗಲಿಲ್ಲ ಸಮಾರಂಭವು ಜಯವಾಗಲಿ"

ಮಾನ್ಯ ಶ್ರೀ ಕೆ. ಮಾಧವ ಮೆನನ್,
ವಿದ್ಯಾ ನ್ಯಾಯ ಸಚಿವರು, ಮದರಾಸು ಸರಕಾರ.

"ನನಗೆ ಬರಲಸಾಧ್ಯವಾದರೂ, ನಿಮಗೆ ನನ್ನ ಶುಭಾಶಯಗಳು ಬೇಂಕಿಗೆ, ಅದರಧ್ಯಕ್ಷರಿಗೆ, ಡೈರೆಕ್ಟರುಗಳಿಗೆ ಮತ್ತು ಸಿಬ್ಬಂದಿಗೆ ಅತ್ಯುತ್ತಮವಾದ ಉತ್ಕರ್ಷೆಯು ಲಭ್ಯಿಸಲೆಂದು ದೇವರನ್ನು ಪ್ರಾರ್ಥಿಸುವೆನು"

ಸಯ್ಯದ್ ಅಹ್ಮದ್, ಬಿ ಎಸ್.ಸಿ.(ಆನರ್ಸ್)
ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರ್.

"...... ಈ ವರುಷ ಇದೇ ಅಕ್ಟೋಬರದಲ್ಲಿ ನಡೆಯಲಿರುವ ನಿಮ್ಮ ಸಂಸ್ಥೆಯ ರಜತೋತ್ಸವ ಸಮಾರಂಭದ ಕಾಲದಲ್ಲಿ ನಿಮ್ಮ ಶುಭಾಶಯವನ್ನು ಕೋರಿ ನಿಮ್ಮ ಹಿತವನ್ನು ಬಯಸಲೆ?"

ಎಡ್‌ಲೇಂಡ್ ಬೇಂಕ್, ಲಿ., ಲಂಡನ್

"........ದಿ ಕೆನರಾ ಇಂಡಸ್ಟ್ರಿಯಲ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಇದರ ಮುಂಬರುವ ರಜತೋತ್ಸವದ ಸಲುವಾಗಿ ನನ್ನ ಶುಭಾಶಯವನ್ನು ಕಳುಹಿಸಲು ಸಂತೋಷಪಡುತ್ತೇನೆ"

ಲಾಯಡ್ಸ್ ಬೇಂಕ್, ಲಿ, ಲಂಡನ್

"........ಈ ಚರಿತ್ರಾರ್ಹ ಸಂದರ್ಭದಲ್ಲಿ ಈ ಬೇಂಕಿನ ಪರವಾಗಿ ನಿಮಗೆ ಹಿತವನ್ನು ಬಯಸಿ ಹರಸಿ ಕಳುಹಿಸಲು ಇಚ್ಛಿಸುತ್ತೇನೆ"

ವೆಸ್ಟ್ ಮಿನ್‌ಸ್ಟರ್ ಬೇಂಕ್, ಲಿ., ಲಂಡನ್

"........ಮುಂಬರುವ ನಿಮ್ಮ ರಜತೋತ್ಸವದ ಸಲುವಾಗಿ ನಿಮ್ಮನ್ನು ಅಭಿನಂದಿಸಿ; ಇನ್ನು ಮುಂದೆಯೂ ನಿಮ್ಮ ಸಂಸ್ಥೆಯು ಏಳಿಗೆಯನ್ನು ಹೊಂದಲೆಂದು ಆಶಿಸುತ್ತೇನೆ."

ಮಾರ್ಟಿನ್ಸ್ ಬೇಂಕ್, ಲಿ., ಲಿವರ್‌ಪೂಲ್.

"ಮುಂಬರುವ ನಿಮ್ಮ ರಜತೋತ್ಸವದ ವೇಳೆ ನಿಮಗೆ ನಮ್ಮ ಅಭಿನಂದನೆಯನ್ನರ್ಪಿಸ ಬಯಸುತ್ತೇವೆ."

ಬೇಂಕ್ ಆಫ್ ಅಮೇರಿಕ, ಕೆಲಿಫೋರ್ನಿಯ.

"........ವರ್ಷಾವಧಿ ಉತ್ಸವವು ಅತ್ಯಂತ ಜಯಶೀಲವಾಗಲೆಂಬ ನಮ್ಮ ಬಯಕೆಯನ್ನು ಸ್ವೀಕರಿಸಿರಿ."

ದಿ ಚೇಸ್ ನೇಶನಲ್ ಬೇಂಕ್ ಆಫ್ ದಿ ಸಿಟಿ ಆಫ್ ನ್ಯೂಯಾರ್ಕ್, ನ್ಯೂಯಾರ್ಕ್.

"ಇಪ್ಪತ್ತೈದು ವರುಷಗಳ ವರೆಗೆ ಸಮರ್ಥವಾದ ದಾರಿಯಲ್ಲಿ ನಡೆದುದು ಒಂದು ಬೇಂಕಿನ ಮಟ್ಟಿಗೆ ಒಂದು ಮಹಾ ಸಾಧನೆಯೇ ಸರಿ. ಸರ್ವಜನರಿಗೂ, ಸಂಬಂಧಿಸಿದವರಿಗೂ ಬೇಂಕಿನಲ್ಲಿರುವ ವಿಶ್ವಾಸವನ್ನು ಇದು ವ್ಯಕ್ತ ಪಡಿಸುವುದು. ಈ ಸಮಾರಂಭಕ್ಕೆ ನಾನು ಶುಭ ಕೋರುವೆ".

ಮಾನ್ಯ ಶ್ರೀ ಬಿ. ಗೋಪಾಲರೆಡ್ಡಿ,
ಅರ್ಥ ಸಚಿವರು, ಮದರಾಸು ಸರಕಾರ.

"........೨೫ ವರುಷಗಳೊಳಗೆ ನಿಮ್ಮ ಸಂಸ್ಥೆಯನ್ನು ದಕ್ಷಿಣ ಭಾರತದ ಮಾರ್ಗದರ್ಶಕ ಬೇಂಕುಗಳಲ್ಲೊಂದರ ಸ್ಥಾನಕ್ಕೆ ಏರಿಸಿದುದಕ್ಕಾಗಿ ನಿಮ್ಮ ಸಂಸ್ಥೆಯ ಡೈರೆಕ್ಟರರು ಮತ್ತು ಶಿಬಂದಿಯವರನ್ನು ನಾವು ಅಭಿನಂದಿಸುತ್ತೇವೆ.

ನಿಮ್ಮ ಸಂಸ್ಥೆಯೊಡನೆ ವಹಿವಾಟು ಮಾಡುವುದೆಂದರೆ ಅದೊಂದು ಅಪೂರ್ವ ಸಂತೋಷದ ಸಂಗತಿ; ಈ ಮೈತ್ರಿಯ ಸಂಪರ್ಕವನ್ನು ಇನ್ನು ಮುಂದೆಯೂ ನಿಮ್ಮೊಡನೆ ಮುಂದುವರಿಸುವ ನಿರೀಕ್ಷೆಯಲ್ಲಿರುವೆವು"

ದಿ ಪಾಲಾಯ್ ಸೆಂಟ್ರಲ್ ಬೇಂಕ್, ಲಿ., ಪಾಲಾಯಿ, ತಿರುವಾಂಕೂರು.

"........ನಮ್ಮ ಮತ್ತು ನಿಮ್ಮ ಸಂಸ್ಥೆಗಳೊಳಗಣ ಈಗಿರುವ ಪ್ರೀತಿಪೂರ್ವಕ ಸಂಪರ್ಕ ನಮ್ಮ ಗಮನದಲ್ಲಿದೆ; ಮುಂದೆ ಇನ್ನೂ ಹೆಚ್ಚಿನ ಪರಸ್ಪರ ಪ್ರಯೋಜನಕ್ಕಾಗಿ ಅದು ಮುಂದುವರಿಯುವುದೆಂಬ ಭರವಸೆಯೂ ನಮಗಿದೆ. ಕೆಲವೇ ಸಮಯದಲ್ಲಿ ನಿಮ್ಮ ಸಿಂಡಿಕೇಟಿನ ರಜತೋತ್ಸವ ಸಮಾರಂಭ ಜರಗಲಿರುವುದೆಂಬುದನ್ನು ಕೇಳಿ ನಮಗೆ ಬಹಳ ಹರ್ಷವಾಗುತ್ತದೆ"

ದಿ ಆಂಧ್ರ ಬೇಂಕ್, ಲಿ., ಮಚಲಿಪಟ್ಟಣ.

"........ಜನತೆಗೆ ಹಾಗೂ ಸೋದರ ಸಂಸ್ಥೆಗಳಿಗೆ ಯಶಸ್ವಿಯಾಗಿ ಸೇವೆ ಸಲಿಸುತಿದ್ದ ನಿಮ್ಮ ಬೇಂಕು ಮೊದಲ ೨೫ ವರುಷಗಳನ್ನು ಪೂರ್ತಿಮಾಡಿ ಇದೇ ಅಕ್ಟೋಬರ ತಿಂಗಳಲ್ಲಿ ಬೇಂಕಿನ ರಜತೋತ್ಸವವನ್ನು ಜರಗಿಸಲಿರುವುದೆಂಬುದನ್ನು ಕೇಳಿ ಸಂತೋಷದಿಂದ ನಮ್ಮ ಹೃತ್ಪೂರ್ವಕ ಅಭಿನಂದನೆಯನ್ನು ಕಳುಹಿಸಿದ್ದೇವೆ".

ದಿ ಭಾರತ ಲಕ್ಷ್ಮಿ ಬೇಂಕ್, ಲಿ., ಮದ್ರಾಸು.

—ನಮ್ಮ ವಿಷಯವಾಗಿ

ಈ ೨೦ನೆಯ ತಾರೀಕು ನಮ್ಮ ಬೇಂಕಿಗೆ ಇಪ್ಪತ್ತೈದು ವರುಷಗಳು ತುಂಬಿದ ಶುಭದಿವಸ. ಶ್ರೀಯುತ ಉಪೇಂದ್ರ ಅನಂತ ಪೈಗಳವರು ಇಪ್ಪತ್ತೈದು ವರುಷಗಳ ಹಿಂದೆ ಬರೇ ಎಂಟು ಸಹಸ್ರ ರೂಪಾಯಿಗಳ ಬಂಡವಲಿನಿಂದ ಪ್ರಾರಂಭಿಸಿದ ಈ ಸಂಸ್ಥೆಯು ಇಂದು ಬೇಂಕಿಂಗ್ ಕ್ಷೇತ್ರದಲ್ಲಿ ತುಂಬ ಅಭ್ಯುದಯವನ್ನು ಪಡೆದಿರುವುದು ಈ ದಿನ ಈ ಬೇಂಕಿಗೆ ಇಪ್ಪತ್ತಮೂರು ಲಕ್ಷ ರೂಪಾಯಿಗಳ ತೆತ್ತ ಬಂಡವಲೂ, ಹತ್ತು ಲಕ್ಷ ರೂಪಾಯಿಗಳ ಕ್ಷೇಮನಿಧಿಯೂ ಇವೆ ಎಂಬುದು ಗಮನೀಯ ಅಂಶವು.

ಇದರ ಕಾರ್ಯಕ್ಷೇತ್ರವು ಮುಂಬಯಿ, ತಿರುವಾಂಕೂರು-ಕೊಚ್ಚಿ, ಮದರಾಸು ಮತ್ತು ಹೈದರಾಬಾದು ಪ್ರಾಂತಗಳಲ್ಲಿ ವ್ಯಾಪಿಸಿಕೊಂಡಿದೆ.

ಇದು ೧೯೩೭ರಲ್ಲಿ ಶೆಡ್ಯೂಲ್ಡ್ ಬೇಂಕ್ ಆದುದು ಸಂತೋಷದ ವಿಷಯ. ಅಲ್ಲದೆ ಇದಕ್ಕೆ ಮುಂಬಯಿ, ಮದರಾಸು ಪ್ರಾಂತಗಳಲ್ಲಿ ತೀರುವೆ-ಮನೆಗಳ (Clearing House) ಸದಸ್ಯತನವೂ ಉಂಟು.

"........ನೀವು ನಿಮ್ಮ ಸಿಂಡಿಕೇಟಿನ ರಜತೋತ್ಸವವನ್ನು ಈ ವರುಷ ಅಕ್ಟೋಬರದಲ್ಲಿ ಜರಗಿಸಲಿರುವಿರೆಂಬುದನ್ನು ತುಂಬಾ ಸಂತೋಷದಿಂದ ತಿಳಿಯುತ್ತೇವೆ. ನಮ್ಮ ಅಭಿನಂದನೆಯನ್ನು ದಯಮಾಡಿ ಸ್ವೀಕರಿಸಿರಿ"

ದಿ ಯುನೈಟೆಡ್ ಕಮರ್ಶಿಯಲ್ ಬೇಂಕ್, ಲಿ, ಕಲ್ಕತ್ತ.

"........೧೯೫೦ನೇ ಅಕ್ಟೋಬರದಲ್ಲಿ ನಿಮ್ಮ ಬೇಂಕಿನ ರಜತೋತ್ಸವವನ್ನು ಆಚರಿಸಲಿರುವಿರೆಂಬುದನ್ನು ತಿಳಿದು ನಾನು ತುಂಬಾ ಸಂತೋಷಪಡುತ್ತೇನೆ ಬೇಂಕಿಂಗ್ ಕ್ಷೇತ್ರದಲ್ಲಿ ಅಧ್ಯರೆಸಿಸಿದ ಶ್ರೀಯುತ ಮಾಧವ ಪೈಗಳು ಮತ್ತು ನಿಮ್ಮಂತಹ ಮಹನೀಯರಿರುವಾಗ ಉತ್ಸವವು ಯಶಸ್ವಿಯಾಗುವುದೆಂದು ನಾನು ಹೇಳುವುದು ಅನಗತ್ಯ. ನಿಮ್ಮ ಬೇಂಕಿನೊಂದಿಗಿರುವ ನಮ್ಮ ಸಂಪರ್ಕವು ಅತ್ಯಂತ ವಾತ್ಸಲ್ಯಪೂರ್ವಕವಾಗಿದ್ದು ಇನ್ನು ಮುಂದೆಯೂ ಈ ನಿಕಟ ಸಂಬಂಧವು ಪ್ರಬಲವಾಗುವುದೆಂದು ಮನಗಂಡಿದ್ದೇನೆ"

ದಿ ವೈಶ್ಯ ಬೇಂಕು, ಲಿ, ಬೆಂಗಳೂರು ಸಿಟಿ.

"........ಬರುವ ಅಕ್ಟೋಬರದಲ್ಲಿ ನಿಮ್ಮ ಸಂಸ್ಥೆಯು ರಜತೋತ್ಸವ ಆಚರಿಸುವುದೆಂಬುದನ್ನು ತಿಳಿದು ನಾನು ನಿಜವಾಗಿಯೂ ಸಂತಸಗೊಂಡಿದ್ದೇನೆ. ಯಾವುದೇ ಸಂಸ್ಥೆಯ ಅದರಲ್ಲೂ ಬೇಂಕಿನ ಜೀವನದಲ್ಲಿ ಇದೊಂದು ಅತ್ಯಮೋಘ ಘಟನೆ ಎಂಬುದು ನಿಶ್ಚಯ."

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ, ಲಿ., ಬೊಂಬೆ.

"........ನಿಮ್ಮ ಸಂಸ್ಥಾಪಿತ ಹಾಗೂ ಸುವ್ಯವಸ್ಥೆಯ ಸಂಸ್ಥೆಯು ಶೀಘ್ರದಲ್ಲಿಯೇ ರಜತೋತ್ಸವವನ್ನಾಚರಿಸುವುದೆಂಬುದನ್ನು ತಿಳಿದು ನಾನು ತುಂಬಾ ಆನಂದಪಟ್ಟೆ ಇಂತಹ ಸುಸಂದರ್ಭದ ನೆನಹಿನಲ್ಲಿ ನೀವು ನನ್ನ ಅಭಿನಂದನೆಯನ್ನು ಸ್ವೀಕರಿಸೋಣಾಗಲಿ"

ದಿ ಇಂಡಿಯನ್ ಲೈಫ್ ಎಶ್ಯೂರೆನ್ಸ್ ಕೊ, ಲಿ, ಬೊಂಬೆ.

ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇದರ ಬಂದ ಶುಭಸಂದೇಶಗಳು

"........ಈ ಸುಸಂಧಿಯಲ್ಲಿ ನಮ್ಮ ಹೃತ್ಪೂರ್ವಕ ಅಭಿನಂದನೆ ಮತ್ತು ಶುಭಾಶಯವನ್ನು ಕಳುಹಿಸಲು ಇಚ್ಛಿಸುತ್ತೇವೆ."

ದಿ ಜ್ಯೂಪಿಟರ್ ಜನರಲ್ ಇನ್ಶೂರೆನ್ಸ್ ಕೊ, ಲಿ., ಬೊಂಬಾಯಿ.

"........ನಮ್ಮ ಜಿಲ್ಲೆಯ ಶೆಡ್ಯೂಲ್ಡ್ ಸಂಸ್ಥೆಗಳಲ್ಲಿ ಒಂದಾದ ನಿಮ್ಮ ಬೇಂಕು ಮಹತ್ವದ ೨೫ ವರುಷಗಳನ್ನು ದಾಟುತ್ತಿದೆ ಎಂಬುದನ್ನು ತಿಳಿಯಲು ನಮಗೆಲ್ಲರಿಗೂ ಅತ್ಯಂತ ತೃಪ್ತಿಯ ವಿಷಯ. ಧರ್ಮ ಪ್ರಸಾರಕರಂತೆ ಮನೆ ಮನೆಗೆ ಹೋಗಿ ಅತಿ ಚಿಕ್ಕ ಗಿರಾಕಿಗೂ ಸೇವೆಯನ್ನು ಸಲ್ಲಿಸುತ್ತಿರುವ ಈ ಬೇಂಕಿನ ಭವಿಷ್ಯ ಅದ್ವಿತೀಯವಾಗಿದೆ. ಸಿಂಡಿಕೇಟಿನ ಮುಂದಿನ ಭವಿಷ್ಯ ಬಹಳ ಜಯಶೀಲವಾಗಿರಲಿ ಎಂದು ನಾವು ಆಶಿಸುತ್ತೇವೆ."

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕೊ., ಲಿ., ಉಡುಪಿ

"......೧೯೨೫ರಲ್ಲಿ ಕೇವಲ ಸಾಮಾನ್ಯ ಸ್ಥಿತಿಯಲ್ಲಿ ಪ್ರಾರಂಭವಾದ ನಿಮ್ಮ ಬೇಂಕು ಅದರ ಈಗಿನ ಅಭಿವೃದ್ಧಿ ಸ್ಥಿತಿಯನ್ನು ಮುಟ್ಟಿರುವುದೆಂದು ತಿಳಿದು ನನಗೆ ತುಂಬಾ ಸಂತೋಷವಾಯಿತು. ಈಗ ಅದರ ಚಾಲು ಬಂಡವಲು ಐದು ಕೋಟಿ ರೂಪಾಯಿಯಾಗಿರುವುದು; ಅದರ ಶಾಖೆಗಳು ಮುಖ್ಯವಾಗಿ ಸಣ್ಣ ಪಟ್ಟಣಗಳಲ್ಲಿ ಹಬ್ಬಿರುವುವು. ರಾಷ್ಟ್ರದ ಜನರಿಗೆ ಉಪಯುಕ್ತ ಸಹಾಯ ಮಾಡುವುದರಲ್ಲಿ ನಿಮ್ಮ ಬೇಂಕಿಗೆ ಭವಿಷ್ಯದಲ್ಲಿ ಇತೋಪ್ಯತಿಶಯ ಶ್ರೇಯಸ್ಸು ದೊರೆಯಲಿ ಎಂದು ನಾನು ಹಾರೈಸುತ್ತೇನೆ."

ಡಾ। ಯಸ್ ಜಿ ಪಣಾಂದೀಕರ್,
ಎಂ. ಎ. (ಬಾಂಬೆ), ಪಿ ಎಚ್. ಡಿ ಇಕನ್ (ಲಂಡನ್)
ಭಾರತೀಯ ಬೇಂಕುಗಳ ಕೂಟದ ಕಾರ್ಯದರ್ಶಿಗಳು, ಮುಂಬಯಿ.

ಒಂದು ಮಾತು—

ಇನ್ನಾವ ಬೇಂಕಿಗೂ ಪಡುಕರಾವಳಿಯಲ್ಲಿ ಇಲ್ಲದಿರುವಷ್ಟು ಶಾಖೋಪಶಾಖೆಗಳು ಇದಕ್ಕಿರುವುವು. ಇದರ ಕಾರ್ಯಸೇವೆಯು ಬೃಹನ್ನಗರಗಳಿಗಷ್ಟೇ ಸೀಮಿತವಾಗಿರದೆ, ಮುಂದಕ್ಕೆ ಅಭಿವೃದ್ಧಿಗೆ ಬರಲಿರುವ ಚಿಕ್ಕಪುಟ್ಟ ಪೇಟೆಪಟ್ಟಣಗಳಲ್ಲಿಯೂ ಹರಡಿಕೊಂಡಿದೆ. ಐದು ಸಾವಿರಕ್ಕಿಂತಲೂ ಕಡಮೆ ಜನರಿರುವ ಸ್ಥಳಗಳಲ್ಲಿ ಈ ಬೇಂಕಿಗೆ ೨೧ ಶಾಖೆಗಳಿವೆ. ಯಾವ ಬಗೆಯ ಬೇಂಕಿಂಗ್ ಸೌಲಭ್ಯವೂ ಇರದಂಥ ಪ್ರದೇಶಗಳಲ್ಲಿ ಅವನ್ನು ನೀಡಲು ಯತ್ನಿಸಿದವರಲ್ಲಿ ಈ ಬೇಂಕು ಪ್ರಾಯಶಃ ಮೊದಲಿನದು.

ಮನೆಮನೆಗಳಲ್ಲಿಯೂ ಉಳಿತಾಯದ ಹಂಬಲವು ಹೆಚ್ಚುವುದಕ್ಕೆ ಈ ಬೇಂಕಿನ ನವ ಸಂಶೋಧಿತ ಯೋಜನೆಗಳು ಪ್ರಸಿದ್ಧವಾಗಿವೆ

ಕಿಂಚಿತ್ತಾದ ನಮ್ಮೀ ಸೇವೆಯು ತಮ್ಮ ಔದಾರ್ಯ ಪ್ರೋತ್ಸಾಹಗಳಿಂದಲೇ ಸಾಧ್ಯವಾಯಿತು. ಉಜ್ವಲವಾದ ಭವಿಷ್ಯದ ಮಂಗಳಮಯ ದಿವಸಗಳಲ್ಲಿಯೂ ತಮ್ಮ ಒಲವಿನ ನೆರವು ನಮಗೆ ಬೆಂಬಲವಾಗಲಿ

ತಮ್ಮೀ ವಿಶ್ವಾಸಕ್ಕೆ ಯೋಗ್ಯರಾಗಲು ನಾವು ಸರ್ವದಾ ದುಡಿಯುತ್ತೇವೆ

"......ನಿಮ್ಮೀ ರಜತ ಮಹೋತ್ಸವ ಶುಭ ಸಮಯದಲ್ಲಿ ಹಾರ್ದಿಕವಾದ ಅಭಿನಂದನೆಗಳು ಮತ್ತು ಶುಭಾಶಯಗಳು. ನಿಮ್ಮ ಬೇಂಕಿಗೆ ಅಮೋಘ ವಿಜಯವನ್ನೂ ಪ್ರಗತಿಯನ್ನೂ ಹಾರೈಸುತ್ತೇನೆ"

ಶ್ರೀ ಶ್ಯಾಮಲಾಲ್ ದೇವಕರನ್ ನಾನ್ಜೀ,
ಭಾರತೀಯ ಬೇಂಕುಗಳ ಕೂಟದ ಅಧ್ಯಕ್ಷರು, ಮುಂಬಯಿ.

"......ದಕ್ಷಿಣ ಭಾರತದ ಪ್ರಜೆಗಳಿಗೆ, ಅದರಲ್ಲಿಯೂ ಉಡುಪಿಯ ಜನರಿಗೆ ವಿಶೇಷವಾಗಿ ಸೇವೆ ಸಲ್ಲಿಸಿರುವ ತಮ್ಮ ಬೇಂಕಿಗೆ ೨೫ ವರ್ಷಗಳು ತುಂಬಿರುವ ಈ ದಿವಸ ನನ್ನ ಅಭಿನಂದನೆಗಳನ್ನು ದಯವಿಟ್ಟು ಸ್ವೀಕರಿಸಿ. ಅನೇಕರಿಗೆ ನಿಮ್ಮ ಬೇಂಕು ತುಂಬಾ ಉಪಕಾರವನ್ನೂ ಸಹಾಯವನ್ನೂ ಮಾಡಿದೆ. ನಿಮ್ಮ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದವರೆಲ್ಲರೂ ನಿಮ್ಮ ಬೇಂಕಿನ ಯೋಗ್ಯತೆಯನ್ನು ಪ್ರಶಂಸಿಸುವವರೇ. ಈ ಬೇಂಕು ನಿಮ್ಮ ದೂರದೃಷ್ಟಿಗೂ, ಸತತ ಪರಿಶ್ರಮಕ್ಕೂ ಜನವಿಶ್ವಾಸಕ್ಕೂ ಒಂದು ಬಹುಮಾನದಂತೆ ಇರುವುದು. ನಿರಂತರವೂ ನಿಮ್ಮ ಬೇಂಕಿನ ಶಕ್ತಿಯು ಬೆಳೆದು ಇದರಿಂದ ಲೋಕಸೇವೆಯು ಇನ್ನೂ ಅಧಿಕವಾಗಿ ನೆರವೇರಲಿ ಎಂದು ಹಾರೈಸುತ್ತೇನೆ."

ಡಾ। ಯು. ಕೃಷ್ಣರಾವ್, ಎಂ ಬಿ. & ಬಿ. ಎಸ್,
(ಮದರಾಸಿನ ಮಾಜಿ ಪುರಾಧ್ಯಕ್ಷರು) ಮದರಾಸು.

"೧೯೩೦ರ ಜಾಗತಿಕ ಆರ್ಥಿಕ ಮುಗ್ಗಟ್ಟನ್ನೂ, ಒಂದು ವಿಶ್ವಮೋಘವನ್ನೂ ಬಳಿಕ ಮಹಾಯುದ್ಧಾನಂತರ ಅಪರಿಹಾರ್ಯ ಸಮಸ್ಯೆಗಳನ್ನೂ ಒಳಗೊಂಡ ಮಹತ್ವಪೂರ್ಣ ಕಾಲಾಂತರದಲ್ಲಿ ಬದುಕಿ, ಬಾಳಿ, ಬೆಳೆವಣಿಗೆ ಹೊಂದಿರುವುದು ಬಹುಲವಾದ ಧನ್ಯವಾದಗಳಿಗೆ ಅರ್ಹವಾದ ಸಂಗತಿಯು. ಮುಂದಕ್ಕೂ ನೀವು ಇದೇ ರೀತಿಯಲ್ಲಿ ಏಳ್ಗೆ ಪಡೆಯಿರಿ."

– ಎಂಪೈರ್ ಒಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂ, ಲಿ, ಮುಂಬಯಿ.

"ಬೇಂಕು ಈ ವರೆಗೆ ಗಳಿಸಿರುವ ಅಭ್ಯುದಯವು ಕಾರ್ಯನಿರ್ವಾಹಕರ ವ್ಯವಹಾರ ಕೌಶಲ್ಯವನ್ನೂ, ಸರ್ವಜನರು ಈ ಸಂಸ್ಥೆಯಲ್ಲಿಟ್ಟಿರತಕ್ಕಂತಹ ನಂಬಿಕೆಯನ್ನೂ ವ್ಯಕ್ತ ಪಡಿಸುವುದು. ಸಮಾರಂಭವು ಯಶಸ್ವಿಯಾಗಲೆಂದೂ, ನಿಮ್ಮ ಸಂಸ್ಥೆಯು ದೀರ್ಘಾಯುವಾಗಲೆಂದೂ ಹಾರೈಸುವೆ"

ಮಾನ್ಯ ಶ್ರೀ ಕೆ. ಸಿ. ರೆಡ್ಡಿ,
ಮುಖ್ಯ ಮಂತ್ರಿ, ಮೈಸೂರು ಸರಕಾರ

"......ಈ ೨೫ ವರ್ಷಗಳ ಅತ್ಯಲ್ಪ ಅವಧಿಯಲ್ಲಿ ನಿಮ್ಮ ಬೇಂಕು ಭಾರತದಲ್ಲಿಯೇ ಒಂದು ಮುಖ್ಯವಾದ ಬೇಂಕು ಸಂಸ್ಥೆಯಾಗಿದೆಯೆಂದು ತಿಳಿಯಲು ಬಹಳ ಸಂತೋಷವಾಗುವುದು. ಇದರ ಎಲ್ಲಾ ಹಿತೈಷಿಗಳಿಗೂ ಈ ಬೇಂಕು ತುಂಬಾ ಉಪಕಾರದ ಕಾರ್ಯಗಳನ್ನು ಮಾಡುತ್ತಿದೆ. ಅತಿ ಶೀಘ್ರ ಸಮಯದಲ್ಲಿಯೇ ಈ ಬೇಂಕು ಇದರ ಕಾರ್ಯಕ್ಷೇತ್ರವನ್ನು ಇನ್ನೂ ವಿಸ್ತರಿಸಿ, ದೇಶದ ಅಧಿಕವಾಗಿರುವ ಬೇಂಕಿಂಗ್ ಅವಶ್ಯಕತೆಗಳನ್ನು ಪೂರೈಸುವುದೆಂದು ನಿರೀಕ್ಷಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ನಿಮ್ಮ ಬೇಂಕಿಗೆ ಶೀಘ್ರ ಮತ್ತು ಆರೋಗ್ಯಕರ ಪ್ರಗತಿ ಲಭಿಸಲಿ ಎಂದು ಹಾರೈಸುತ್ತೇನೆ"

ಶ್ರೀ ಡಿ. ಸುಬ್ರಹ್ಮಣ್ಯಂ,
ಎಂ ಎ, ಎಫ್. ಐ ಎ, ಎಫ್ ಎಸ್ ಎಸ್.,
ಆಂಧ್ರ ಇನ್ಶೂರೆನ್ಸ್ ಕೊ, ಲಿ, ಇದರ ಕಾರ್ಯದರ್ಶಿ ಮತ್ತು ಎಕ್ಚುಯರಿ,
ಮಸೂಲಿಪಟಮ್.

"..........ನಿಮ್ಮ ಬೇಂಕಿಗೆ ಎಲ್ಲ ಅಭ್ಯುದಯವನ್ನೂ ಉತ್ತಮಿಕೆಯನ್ನೂ ಬಯಸಿ, ನಾಡಿಗೆ ಅನಂತವಾದ ಮತ್ತು ಉಪಯುಕ್ತವಾದ ಸೇವೆ ಸಲ್ಲಿಸಿರೆಂದು ಕೋರುವೆವು"

ಇಂಡಿಯನ್ ಬೇಂಕ್, ಲಿ, ಮದರಾಸು.

"........ರಜತೋತ್ಸವಕ್ಕೆ ಶುಭಾಶಯಗಳು"

ಮರ್ಕೆಂಟೈಲ್ ಬೇಂಕ್ ಒಫ್ ಇಂಡಿಯ, ಲಿ, ಮುಂಬಯಿ.

"...... ಭಾರತೀಯ ಬೇಂಕುಗಳ ಚರಿತ್ರೆಯಲ್ಲಿ ಘಟನಾತ್ಮಕವಾದ ೨೫ ವರುಷಗಳ ವಯಸ್ಸಿಗೆ ತಲಪುವುದು ಒಂದು ಅಪೂರ್ವ ಸಂದರ್ಭವು"

ಸಾಂಗ್ಲಿ ಬೇಂಕ್, ಲಿ, ಸಾಂಗ್ಲಿ

'ನಾಡರ್ ಬೇಂಕಿನ ವ್ಯವಸ್ಥಾಪಕರೂ ಸಿಬ್ಬಂದಿಯವರೂ ನಿಮಗೆ ತಮ್ಮ ಹಾರ್ದಿಕ ಅಭಿನಂದನೆಗಳನ್ನು ಕಳುಹುತ್ತಾರೆ"

ನಾಡರ್ ಬೇಂಕ್, ಲಿ., ಟ್ಯುಟಿಕೋರಿನ್

"..... ಭಾರತೀಯ ಬ್ಯಾಂಕಿಂಗ್ ಪದ್ಧತಿಯು ಈ ನವ ಮನ್ವಂತರದಲ್ಲಿ ಭಾಗ್ಯ ನಿರ್ಣಯದ ಒಂದು ಹಂತಕ್ಕೆ ಬಂದಿದ್ದು, ಈ ವಿಷಯದಲ್ಲಿ ಸಿಂಡಿಕೇಟು ಪ್ರವರ್ಧಮಾನವಾಗಿ ಬೆಳೆಯಲೆಂದು ಆಶಿಸುತ್ತೇವೆ"

ದಿ ಸೌತ್ ಇಂಡಿಯನ್ ಬೇಂಕ್, ಲಿ, ತ್ರಿಚೂರು.

"ಕಾಲು ಶತಮಾನಗಳಿಂದೀಚೆಗೆ ನೀವು ಮಾಡುತ್ತಿರುವ ಅನುಪಮವಾದ ಸೇವಾಭಿವೃದ್ಧಿಗಳನ್ನು ನಾವು ಆಸಕ್ತಿಯಿಂದ ಈಕ್ಷಿಸಿರುವೆವು. ದೇಶದ ಒಳ್ಳಿತಿಗೂ ಜನದ ಒಳ್ಳಿತಿಗೂ ನಿಮ್ಮ ಸೇವೆ ಅನುವಾಗಲಿ, ಅಂತೆಯೇ ಅದು ಮೇಲ್ಮೆ ಪಡೆಯಲಿ. ....ಪರಸ್ಪರ ಸಹಕಾರವನ್ನೇ ನಂಬಿರುವ ನಾವು ಪೂರ್ವದಲ್ಲಿನಂತೋ ಭವಿಷ್ಯದಲ್ಲೂ ಅಂತೆಯೇ ಹೃತ್ಪೂರ್ವಕ ನೆರವು ನೀಡಿಯೇವು"

ದಿ ಮರ್ಕೆಂಟೈಲ್ ಬೇಂಕ್ ಒಫ್ ಹೈದರಾಬಾದು, ಲಿ., ಹೈದರಾಬಾದು.

"ಬಲಯುಕ್ತವಾಗಿ ಬೆಳೆದು, ಬಹುಮುಖವಾದ ಸೇವೆ ನಿಮ್ಮಿಂದ ಬಹುಕಾಲದ ವರೆಗೆ ನಡೆಯಲಿ"

ದೇವ್‌ಕರನ್ ನಾನ್ಜೀ ಬೇಂಕಿಂಗ್ ಕಂಪೆನಿ, ಲಿ, ಮುಂಬಯಿ.

'ನೀವು ಉದಿತೋದಿತ ಶಕ್ತಿಯಿಂದ ಮಹತೋಮಹೀಯವಾದ ಸೇವೆ ಜರಗಿಸಿರಿ ಎಂಬುದೇ ನಮ್ಮ ಪ್ರಾರ್ಥನೆ.'

ಇಂಡೋ ಮರ್ಕೆಂಟೈಲ್ ಬೇಂಕ್, ಕೊಚ್ಚಿ.

"ಹೆಚ್ಚು ಹೆಚ್ಚಾಗಿ ಸಾರ್ವಜನಿಕ ಸೇವೆಯು ನಡೆಯಲಿ ಎಂದು ನನ್ನ ಶುಭಾಶಯಗಳು"

ಮಾನ್ಯ ಶ್ರೀ ಸಿ ಡಿ ದೇಶಮುಖ,
ಅರ್ಥ ಸಚಿವರು, ಭಾರತೀಯ ಕೇಂದ್ರ ಸರಕಾರ.

ದಿ ಕೆನರಾ ಇಂಡಸ್ಟ್ರಿಯಲ್ ಮತ್ತು ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಮುಖ್ಯ ಕಛೇರಿ:— ಉಡುಪಿ.

ಡ್ಯಾರೆಕ್ಟರರ ಮಂಡಲಿ:

ಡಾ। ಟಿ. ಎಂ. ಎ. ಪೈ, M. B. & B. S.
ಚೆಯರ್‌ಮ್ಯಾನ್ ಮತ್ತು ಮೆನೇಜಿಂಗ್ ಡೈರೆಕ್ಟರರು,
ಉಡುಪಿ.

ಆರೂರು ಲಕ್ಷ್ಮೀನಾರಾಯಣ ರಾವ್, B. A. B. L.
ಉಡುಪಿ

ವಿ. ವಿ. ಶಾನುಭಾಗ್,
ಉಡುಪಿ

ಬಿ. ಪದ್ಮನಾಭ ಪೈ,
ಬ್ರಹ್ಮಾವರ.

ಎಂ. ಎನ್. ಪ್ರಭು, ಶಿರೂರಕಾರ್,
ಅಂಕೋಲಾ.

ಎಲ್. ಎಚ್. ಪ್ರಭು, B. A. L. L. B.
ಹೊನ್ನಾವರ.

ಕೆ ಗುರುರಾಜರಾವ್, B. A. B. L.
ಉಡುಪಿ.

ಕೆ. ವಿ ಎಂ ಕಾಮತ್,
ಕುಂದಾಪುರ

ಪಿ. ಪದ್ಮನಾಭ ರಾವ್, B. A. B. L.
ಉಡುಪಿ.

ಜನರಲ್ ಮೆನೇಜರ್:

ಟಿ. ಎ. ಪೈ, B Com (Bom), A. I. I. B.
(Fellow of the Royal Economic Society London)

ಕಾರ್ಯದರ್ಶಿ:
ಕೆ. ವಿ. ಶೆಣೈ.

ಚೀಫ್ ಎಕೌಂಟೆಂಟ್:
ಎಚ್. ಎನ್. ಪೈ, Cert. A. I. I. B.

ಡಿಪ್ಯುಟಿ ಛೀಫ್ ಎಕೌಂಟೆಂಟ್:
ಎಚ್ ಎನ್. ರಾವ್, B. Com [Bom.] Cert. A. I. I. B.

ಎಡ್ವಾನ್ಸ್ ಖಾತೆಯ ಸುಪರಿಂಟೆಂಡರರು:
ಟಿ. ಜಿ. ಎಂ. ಪೈ.

ಎಡ್ವಾನ್ಸ್ ಖಾತೆಯ ಸಹಾಯಕ ಸುಪರಿಂಟೆಂಡರರು:
ಎಚ್. ವಿ. ಕಾಮತ್, B SC.

ರಿಕವರಿ ಆಫೀಸರ್:
ಎಂ. ಎಸ್. ಭಂಡಾರಿ.

ಆಫೀಸು ಸುಪರಿಂಟೆಂಡರರ:
ಎನ್. ಎನ್. ಪ್ರಭು.

ಮುಂಬಯಿಯ ಮೆನೇಜರರು:
ಕೆ. ಎಲ್. ವಿ. ನಾಯಕ್.

ಮದ್ರಾಸಿನ ಮೆನೇಜರರು:
ಎಚ್. ಕೆ. ಪೈ, Cert. A. I. I. B.

ಶಾಖೆಗಳ ಇನ್ಸ್‌ಪೆಕ್ಟರರು:
ವಿ. ಎಸ್. ಇನಾಂದಾರ್, B. A.
ಪಿ. ಪಿ. ಶೆಣೈ, B. SC.
ಓ. ಪಿ ಚಾಂಡಿ, B. A. Cert. A. I. I. B.

ಸೊಲಿಸಿಟರು:
M/s ಕಾಂಗಾ ಮತ್ತು ಕಂಪೆನಿ
ಮುಂಬಯಿ.

ಕಾಯಿದೆ ಸಲಹೆಗಾರರು:
ಬಿ. ವೈಕುಂಠ ಬಾಳಿಗರು, B. A. B. L. ಮಂಗಳೂರು.
ಎಂ. ಡಿ ಕಾಮತ್. B. A. B. L. ಉಡುಪಿ.
ಎ ನಾರಾಯಣ ಪೈ, B. A. B. L. ಮದ್ರಾಸು.

ಲೆಕ್ಕ ಪರಿಶೋಧಕರು:
ಎ. ಉಪೇಂದ್ರನಾಥರಾವ್, B. A. F. C. A.
ಮಂಗಳೂರು.

1925ರಿಂದ 1950ರ ವರೆಗಿನ ಬೇಂಕಿನ ಬೆಳವಣಿಗೆ—

ಪ್ರಗತಿಯಿಂದ ಅತ್ಯಧಿಕ ಪ್ರಗತಿಗೆ—

	31-12-'26	31-12-'31	31-12-'36	31-12-41	31-12-'46	31-12-'49
Authorised Capital	1,00,000	1,00,000	5,00,000	50,00,000	56,00,000	56,00,000
Issued Capital	1,00,000	1,00,000	2,90,200	48,00,000	56,00,000	56,00,000
Subscribed Capital	48,400	1,00,000	2,90,200	14,17,570	32,10,987	32,10,987
Paid-up Capital	8,250	20,000	2,20,200	6,10,230	21,68,103	22,80,968
Reserves	—	5,899	52 448	2,10,100	7,07,631	10,00,000
Deposits	5,758	4,32,574	21,50,142	33,82,325	2,78,12,434	3,39,09,975
Net Profits	978	7,152	26,971	50,432	3,83,080	4,07,747
Investments on G. P. Notes	—	—	11,20,957	14,54,167	1,44,57,775	1,47,51,014
Other Investments	—	3,190	91,613	3,72,933	3,39,591	3,88,754
Total Advances	11,142	4,43,926	18,92,168	26,69,926	1,54,85,894	1,96,12,477
Cash in hand & with Banks	153	15,605	1,70,919	5,92,149	67,71,490	85,26,576
Bills for Collection	—	70	1,45,969	5,63,515	46,27,372	36,09,930
Total Income	2,254	38,906	1,91,588	2,72,874	14,69,738	21,97,610
Total expenditure	1,276	31,753	1,64,617	2,22,442	10,86,658	17 89,863

ಬೇಂಕಿನ ವಹಿವಾಟು ಐದು ಕೋಟಿ ರೂಪಾಯಿಗಳಿಗೂ ಮಿಕ್ಕಿದೆ. ಈ ಒಂದು ಲಕ್ಷದ ಇಪ್ಪತ್ತು ಸಾವಿರಕ್ಕೂ ಮಿಕ್ಕ ಖಾತೆಗಳಿವೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಮಂಗಳೂರು

ಮಂಗಳೂರಿನಲ್ಲಿ ಆಹಾರ ಮಂತ್ರಿಗಳು
ಮೆದ್ರಾಸು ಪ್ರಾಂತದಲ್ಲಿ ಎಂಟು
ಔನ್ಸ್ ಅಕ್ಕಿ ಕೊಡುವ ಯೋಜನೆ

ಮದ್ರಾಸು ಸರಕಾರದ ಆಹಾರ ಮಂತ್ರಿಗಳಾದ ಶ್ರೀ ಜೆ. ಎಲ್. ಪಿ. ರೋಚ್ ವಿಕ್ಟೋರಿಯಾ, ಅವರು ಇದೇ ತಾ. 17ರಲ್ಲು ಸಂಜೆ ಮಂಗಳೂರಿಗೆ ಆಗಮಿಸಿದರು. ಡಾ| ಯು. ಪಿ. ಮಲ್ಯ, ಎಲ್. ಸಿ. ಪಾಯಿಸ್, ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆ, ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮದ್ ಮೊದಲಾದವರು ಮಂತ್ರಿಗಳಿಗೆ ಸ್ವಾಗತವಿತ್ತರು. ನಂತರ ಮಂತ್ರಿಗಳು ಕದ್ರಿ ಪ್ರಯಾಣಿಕರ ಬಂಗ್ಲೆಗೆ ಹೋಗಿ ಅಲ್ಲಿ ಜಿಲ್ಲೆಯ ಅಧಿಕಾರಿಗಳೊಡನೆ ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ವಿಚಾರವಿನಿಮಯ ಮಾಡಿದರು.

ಮರುದಿನ ಬೆಳಿಗ್ಗೆ ಮಂತ್ರಿಗಳು ಹಮ್ಪನಕಟ್ಟೆ ಟ್ರೈನಿಂಗ್ ಶಾಲೆಯಲ್ಲಿ ಜರಗಿದ ಜಿಲ್ಲಾ ವಯಸ್ಕರ ಶಿಕ್ಷಣ ಸಂಘದ ಸಭೆಯಲ್ಲಿ ಹಾಜರಾಗಿ ಸಂಘವು ಮಾಡಿದ ಕೆಲಸಕ್ಕಾಗಿ ಸಂಘದ ಚಾಲಕರನ್ನು ಅಭಿನಂದಿಸಿದರು. ಸಂಘದ ಕಾರ್ಯದರ್ಶಿ, ಶ್ರೀ ಯು. ಕೇಶವರಾಯರು ಸಂಘದ ಕಾರ್ಯಕಲಾಪಗಳ ವರದಿಯನ್ನೋದಿದರು. ಸಂಘದ ಅಧ್ಯಕ್ಷ ಜಿಲ್ಲಾ ಕಲೆಕ್ಟರ್ ಸಯ್ಯದ್ ಅಹಮ್ಮದರು ಧನ್ಯವಾದಗಳನ್ನರ್ಪಿಸಿದರು. ಅಲ್ಲಿಂದ ಮಂತ್ರಿಗಳು ಬೆಸ್ತರ ಸಹಕಾರ ಸಂಘದ ಕಚೇರಿಗೆ ಸಂದರ್ಶನವಿತ್ತಾಗ ಸಂಘದ ಕಡೆಯಿಂದ ಅವರಿಗೊಂದು ವರದಿ ಒಪ್ಪಿಸಲಾಯಿತು. ಬೆಸ್ತರಿಗೆ ಮೀನುಗಾರಿಕೆಗೆ ಅನುಕೂಲವಾಗುವಂತೆ ಉಪ್ಪಿನ ಸೌಕರ್ಯವನ್ನೂ ಬಲೆಗಾಗಿ ನೂಲು ಒದಗಿಸುವ ಅನುಕೂಲತೆಯನ್ನೂ ಮಾಡಿಕೊಡುವೆನಾಗಿ ಮಂತ್ರಿಗಳು ಭರವಸೆಯಿತ್ತರು.

ಮೀನಿನ ಉಗ್ರಾಣದ ಶಂಕು ಸ್ಥಾಪನೆ— ಮಂತ್ರಿಗಳು ಬಳಿಕ ಕೊಯಿಲಿಗೆ ಬಜಾರಿನಲ್ಲಿರುವ 'ಮೋರಿಸ್ ಯಾರ್ಡ'ಗೆ ಸರಕಾರವು ಮಂಗಳೂರಲ್ಲಿ ಸ್ಥಾಪಿಸಲಿರುವ ಮೀನಿನ ಉಗ್ರಾಣದ ಶಂಕು ಸ್ಥಾಪನೆಮಾಡಿ ಅದರ ಪ್ರಯೋಜನವನ್ನು ತಿಳಿಸಿದರು. ಮೊಗವೀರ ಶ್ರೀ ಜ್ಞಾನೋದಯ ಸಮಾಜಕ್ಕೆ ಭೇಟ್ಟಿಯಿತ್ತಾಗ ಸಮಾಜದ ಕಡೆಯಿಂದ ಒಂದು ಬಿನ್ನವತ್ತಳೆಯನ್ನು ಶ್ರೀ ಎಚ್. ಎಲ್. ಸಾಲಿನ್ಸರು ಓದಿ ಮಂತ್ರಿಗಳಿಗರ್ಪಿಸಿದರು. ಮಂತ್ರಿಗಳು ಸದುತ್ತರವನ್ನು ಹೇಳಿ ಉಳ್ಳಾಲಕ್ಕೆ ಹೋಗಿ ಮೀನು ಒಣಗಿಸುವ ಸ್ಥಳವನ್ನು ಸಂದರ್ಶಿಸಿದರು.

ಸಂಜೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಸೇರಿದ ಆಹಾರ ಸಮಿತಿಯ ಸಭೆಯಲ್ಲಿ ಮಂತ್ರಿಗಳು ಮಾತನಾಡುತ್ತಾ ರೇಶನಿನ ವಿಚಾರವಾಗಿ ಈ ಜಿಲ್ಲೆಯಿಂದ ಪೆಟ್ಟಿನ ದೂರು ಬಂದಿಲ್ಲವೆಂದೂ, ದೇಶದ ಮೇಲೆ ಮುಖ್ಯವಾಗಿ ನಮ್ಮ ಪ್ರಾಂತದಲ್ಲಿಯ ಆಹಾರ ಕೊರತೆ ಇಳಿಮುಖವಾಗುತ್ತಲಿದೆಯೆಂದೂ ಹೇಳಿ ಎಲ್ಲರೂ ಆಹಾರ ಉತ್ಪಾದನೆ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಬೇಕೆಂದು ವಿನಂತಿಸಿದರು. ಆದಷ್ಟು ಬೇಗನೆ ಅಕ್ಕಿ ರೇಶನ್ ಮಿತಿಯನ್ನು ಎಂಟು ಔನ್ಸಿಗೆ ಏರಿಸಲಾಗುವುದೆಂದೂ ತಿಳಿಸಿದರು. ಅಲ್ಲಿಂದ ಮಂತ್ರಿಗಳು ಸೈಂಟ್ ಎಲೋಸಿಯಸ್ ಕಾಲೇಜಿಗೆ ಹೋಗಿ ಅಲ್ಲಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಾವ ರೀತಿಯಲ್ಲೂ ಇಂಗ್ಲಿಷ್ ಭಾಷೆಯನ್ನು ಕಳಕೊಳ್ಳಬಾರದಾಗಿ ಹೇಳಿದರು. ತಾ. 19ರಲ್ಲಿ ಮಂತ್ರಿಗಳು ಬಂಟ್ವಾಳ, ವಿಟ್ಲ, ಪುತ್ತೂರು, ವಿಟ್ಲ ಕೇಂದ್ರಗಳನ್ನು ಸಂದರ್ಶಿಸಿ ತಾ. 20ರಲ್ಲು ಮಡಿಕೇರಿಕಡೆ ತೆರಳಿದರು.

ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ — ತಾ. 12-10-1950 ಪ್ರತಿ ಗುರುವಾರ ಮೊದಲ್ಗೊಂಡು ಮಹಾನವಮಿಯವರೆಗೆ ಸಾಯಂ. ಗಂಟೆ 5ರಿಂದ 8ರ ತನಕ ಶ್ರೀ ಮಲ್ಪೆ ರಾಮದಾಸ ಸಾಮಗರಿಂದ ಎಂಟು ದಿನಗಳ ಹರಿಕೀರ್ತನಾ ಕಾರ್ಯಕ್ರಮವು ಶ್ರೀ ಪುತ್ತು ವೈಕುಂಠ ಸೇಟ್ ಅವರಿಂದ ನಡೆಸಲ್ಪಟ್ಟಿತು.

ಪ್ರಾಂತಿಕ ವೈದ್ಯಕೀಯ ಸಮ್ಮೇಳನ— ತಾ. 13ನೆ ಸಂಜೆ ವೈದ್ಯಕೀಯ ಅಧಿವೇಶನವನ್ನು ಮದ್ರಾಸು ಸರಕಾರದ ಸಾರ್ವಜನಿಕ ಆರೋಗ್ಯ ಡೈರೆಕ್ಟರರಾದ ಡಾ| ಟಿ. ಲಕ್ಷ್ಮೀನಾರಾಯಣನವರು ಉದ್ಘಾಟಿಸಿದರು. ಡಾ| ಕೆ ಮಂಜುನಾಥ ರೈಗಳು ಅಧ್ಯಕ್ಷತೆ ವಹಿಸಿದ್ದರು ಸ್ತ್ರೀಯರಲ್ಲಿಯ ಕೇನ್ಸರ್ ವ್ಯಾಧಿಯ ಕುರಿತು ಡಾ| ಕೆ. ಆರ್. ಕೆ. ತಂಪನ್ನರವರು ಭಾಷಣ ಮಾಡಿದರು. ಕೊನೆಯಲ್ಲಿ ಡಾ| ಕೆ. ಆರ್. ಕಿಣಿಯವರಿಂದ ಧನ್ಯವಾದಗಳಾಗಿ ರಾತ್ರಿ ನಾಟಕಾದಿ ಮನರಂಜನೆಯ ಕಾರ್ಯಕ್ರಮಗಳಾದುವು. ತಾ. 14ರಲ್ಲು ಡಾ| ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ವಿಜ್ಞಾನಗೋಷ್ಠಿಯಲ್ಲಿ ಡಾ| ಆರ್ ಸುಬ್ರಮಣ್ಯಮ್ ಅವರು ಉಪನ್ಯಾಸವಿತ್ತರು. ಸೇಲಮಿನ ಡಾ| ಎಸ್. ಆರ್. ರಾಜಾರಾಮರೂ ನಮ್ಮ ಜಿಲ್ಲೆಯವರೇ ಆಗಿದ್ದು ಚೆಟ್ಟಿನಾಡಿನ ಡಾಕ್ಟರ್ ಟಿ ಎಸ್. ಸೆಟ್ಟಿಯವರೂ ಡಾ| ಬಿ. ರಾಮಮೂರ್ತಿಯವರೂ ಬೇರೆ ಬೇರೆ ವಿಷಯಗಳ ಕುರಿತು ಮಾತನಾಡಿದರು. ಸಂಜೆ ನಡೆದ ವಿಜ್ಞಾನಗೋಷ್ಠಿಗೆ ಈಗಾಗಲೇ ಇಂಗ್ಲೆಂಡಿನಿಂದ ಮರಳಿದ ಡಾ| ಬಂಟ್ವಾಳ ನರಸಿಂಗರಾಯರು ಅಧ್ಯಕ್ಷರಾಗಿ ಮುಂಬಯಿ ಡಾ| ಎಮ್. ಜಿ. ಕಿಣಿಯರ ಮತ್ತು ಡಾ| ಕೆ. ಭಾಸ್ಕರ ರಾಯರ ಉಪನ್ಯಾಸಗಳಾದುವು.

ಅಂದು ಸಂಜೆ ಪರಿಷತ್ತಿನ ಅಧ್ಯಕ್ಷ ಡಾ| ಯು. ಕೃಷ್ಣರಾಯರಿಗೆ ನಗರ ಸಭೆಯವರು ಮಾನಪತ್ರವನ್ನರ್ಪಿಸಿ ಗೌರವಿಸಿದರು. ತಾ. 15ರಲ್ಲು ಪರಿಷತ್ತಿನ ಮಹಾ ಅಧಿವೇಶನವು ಸೇರಿ ಕೆಲವು ಠರಾವುಗಳು ಪಾಸಾದುವು.

ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ— ತಾ. 12ರಲ್ಲು ವೈದ್ಯಕೀಯವೂ ಬೌದ್ಧಿಕ ಶಾಸ್ತ್ರವೂ ಎಂಬ ವಿಷಯದಲ್ಲಿ ಡಾ| ಕೆ. ಮಂಜುನಾಥ ರೈಗಳು ಉಪನ್ಯಾಸವಿತ್ತರು. ಪ್ರಿನ್ಸಿಪಾಲ್ ರೆ| ಫಾ| ಇ. ಜೆ. ಜೇಕ್ಸರವರು ಅಧ್ಯಕ್ಷತೆ ವಹಿಸಿದ್ದರು.

ಉಡುಪಿ

ಪೈ ಬಂಧುಗಳಿಗೆ ಸತ್ಕಾರ— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ರಜತ ಮಹೋತ್ಸವದ ಸೂಚನಾರ್ಥವಾಗಿ ಕೆಲವು ಮಹನೀಯರು ಸೇರಿ ಇದೇ ತಾ. 24ರಲ್ಲು ಕೋರ್ಪರೇಶನ್ ಬೇಂಕಿನ ಉಪ್ಪರಿಗೆಯಲ್ಲಿ ಶ್ರೀಗಳಾದ ಉಪೇಂದ್ರ ಅನಂತ ಪೈ, ಡಾ| ಟಿ. ಮಾಧವ ಪೈ, ಮತ್ತು ರಘುನಾಥ ಪೈಗಳಿಗೆ ಉಪಾಹಾರ ಸತ್ಕಾರವನ್ನಿತ್ತು ಗೌರವಿಸಿದರು. ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬರು ಅಧ್ಯಕ್ಷತೆವಹಿಸಿದ್ದರು. ಡಾ| ಎಸ್. ಆರ್. ಪೈ, ಶ್ರೀ ಎಲ್. ಎಸ್. ಪ್ರಭುಗಳು ಪೈ. ಬಂಧುಗಳ ಸೇವೆಯನ್ನು ಪ್ರಶಂಸಿಸಿದರು ಡಾ| ಕೆ. ಎಲ್. ಐತಾಳರು ಧನ್ಯವಾದಗಳನ್ನರ್ಪಿಸಿದರು.

ಮಾನ ಪತ್ರ— ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್‌ನ ಸಿಂಡಿಕೇಟಿನ ಟಿಕ್ಕೆಯ ಹಬ್ಬದ ಅಧ್ಯಕ್ಷತೆ ವಹಿಸಲು ಬಂದಿದ್ದ ಅಖಿಲ ಭಾರತ ಪತ್ರಿಕಾಸಂಪಾದಕ ಪರಿಷತ್ತಿನ ಅಧ್ಯಕ್ಷ ಶ್ರೀ ಸಿ. ಆರ್. ಶ್ರೀನಿವಾಸನ್‌ರಿಗೆ ನಗರ ಸಭೆಯವರು ತಾ 25ನೇ ಬೆಳಿಗ್ಗೆ ಮಾನಪತ್ರವನ್ನರ್ಪಿಸಿ ಗೌರವಿಸಿದರು. ನಗರ ಸಭಾಧ್ಯಕ್ಷ ಶ್ರೀ. ಯು. ಎಸ್. ನಾಯ್ಕರು ಮಾನ ಪತ್ರವನ್ನೋದಿ ಅತಿಥಿಗಳಿಗೊಪ್ಪಿಸಿದರು. ಅತಿಥಿಗಳು ತಕ್ಕ ಉತ್ತರವನ್ನಿತ್ತರು. ಶ್ರೀ ಟಿ. ರಮೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು.

ತಾನು ಮಾಡಿದ್ದು-ತನಗಿದಿರು!

ಕೊರಿಯಾದಲ್ಲಿ ಸಂ. ರಾ. ಸೇನೆಗಳು ಆ ತುದಿಯಿಂದೀ ತುದಿಯ ವರೆಗೂ ಗೆದ್ದುಕೊಳ್ಳುವ ಸಾಹಸದಲ್ಲಿರುವಾಗ ಸಂ. ರಾ. ಸಂಘವು ಅಖಿಲ ಕೊರಿಯದ ಭವಿಷ್ಯದ ಕುರಿತು ಹಾಕಿರುವ ಯೋಜನೆಗೆ, ಈ ಸಂಘವು ಯಾರ ಬೆಂಬಲಕ್ಕೆ ಹೋಗಿರುವುದೋ ಆ ಸಿಂಗ್ಮನ್ರೀ, ಅವರೇ ವಿರೋಧ ನಿಲ್ಲ ಹತ್ತಿದ್ದಾರೆ- ಅಪ್ರಗತಿ ಮತ್ತು ಅಪ್ರಬುದ್ಧತೆಗೆ ಹೆಸರಾದ ದಕ್ಷಿಣ ಕೊರಿಯದ ಆಡಳಿತಾಧ್ಯಕ್ಷ 75 ವರುಷದ ಹಳಬ ಸಿಂಗ್ಮನ್ ರ್ಹೀ, ಅವರು ಕಮ್ಯೂನಿಸ್ಟರನ್ನು ಸೋಲಿಸಿ ದಕ್ಷಿಣೋತ್ತರ ಅಖಿಲ ಕೊರಿಯ ವನ್ನೇ ತನ್ನ ವಶಕ್ಕೆ ಸಂ. ರಾ. ಸಂಘವೊಪ್ಪಿಸಿಕೊಡಬೇಕೆಂದು ಬಯಸಿದ್ದರು; ಅದನ್ನೇ ಯಾಚಿಸಿದ್ದರು- ಆದರೆ ಕೊರಿಯಾ ಸಂಬಂಧದ ಸಂ. ರಾ. ಸಮಿತಿಯು ಅದಕ್ಕೊಪ್ಪದೆ ರ್ಹೀ ಅವರ ಅಧಿಕಾರವನ್ನು ಪ್ರಕೃತ ದಕ್ಷಿಣ ಕೊರಿಯದ ಮಟ್ಟಿಗೆ ಮಾತ್ರಮಿರಿಸಿ, ಉತ್ತರ ಕೊರಿಯವನ್ನು ಸಂ. ರಾ. ಸಂಘದ ಅಂಕೆಯಲ್ಲೇ ಇಟ್ಟುಕೊಳ್ಳುವ ನಿರ್ಧಾರಮಾಡಿದೆ. ಇದು ಕೊರಿಯದ ಜನತೆಯ ಮೇಲೆ ಪರಕೀಯಾಧಿಕಾರವನ್ನು ಹೇರುವ ಅಧಿಕ ಪ್ರಸಂಗವೆಂಬಂತಹ ಜಿಗುಪ್ಸೆಯನ್ನು ಸೂಚಿಸುತ್ತಾ ಸಿಂಗ್ಮನ್ ರ್ಹೀ ಉತ್ತರ ಕೊರಿಯದಲ್ಲೂ ತನ್ನ ಅಧಿಕಾರಿಗಳನ್ನು ನೇಮಿಸಲು ಮುಂದಾಗಿದ್ದಾರೆ. ಇದರ ಪರಿಣಾಮವೇನು? ತಮ್ಮ ವಿರೋಧಿ ಕಮ್ಯೂನಿಸ್ಟರನ್ನು ಸೋಲಿಸಿದ ಬೆನ್ನಲ್ಲೇ ತಮ್ಮ ಅನುಯಾಯಿ ಸಿಂಗ್ಮನ್‌ರ್ಹೀಯವರನ್ನು ಜಯಿಸುವ ಕೆಲಸವೂ ಅಮೆರಿಕದ ಸೈನಿಕರ ಪಾಲಿಗೊದಗಬಹುದೇ? ಅತ್ತ ಕೊರಿಯಾ ರಣರಂಗದಲ್ಲಾದರೂ, ಕಮ್ಯೂನಿಸ್ಟ್ ಸೇನೆಗಳು ಚೈನದ ಮಂಚೂರಿಯದೊಳಗೆ ನುಸುಳಿಕೊಂಡು ಬದುಕುವಂತೆ ನೋಡಬೇಕೆಂದು ಅಡ್ಡಹಾದಿಯಲ್ಲಿದ್ದ ಅಮೆರಿಕನ್ ಸೈನಿಕರ ಬೆನ್ನ ಹಿಂದೆ ಕಮ್ಯೂನಿಸ್ಟ್ ಗೊರಿಲ್ಲಾಗಳೆಳೆದು ತಿವಿಯ ಹತ್ತಿರು ವಾರ್ತೆ ಬಂದಿದೆ. ಒಟ್ಟಿನ ಮೇಲೆ ತಾನು ಮಾಡಿದ ಕರ್ಮ ಆಗಿಂದಾಗ ತನಗೇನೇ ಇದಿರು ಬೀಳುವಂತಹ ಕಾಲವಿದು.

೦೦೦

'ಹಿಂದೂ ರಾಜ್ಯ ಭಾರತ'ದಲ್ಲಿ ಅಸ್ಪೃಶ್ಯರಿಗೆ ಅನ್ಯಾಯವಾಗುತ್ತಿದೆಯೆಂಬುದನ್ನೂ ತಾವು ದಳಿತಜನ ಹಿತೈಷಿಗಳೆಂಬುದನ್ನೂ ತೋರಿಸಬೇಕೆಂಬುದಕ್ಕಾಗಿಯೋ ಪಾಕಿಸ್ತಾನಿಗಳು ಹರಿಜನ ಮಹಾನುಭಾವ ಶ್ರೀ ಮಂಡಲರನ್ನು ಪಾಕಿಸ್ತಾನ್ ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡು ಅವರ ಮೂಲಕ ತಮಗೆ ಬೇಕಾದುದನ್ನೆಲ್ಲಾ ಸಾಧಿಸಿದ್ದರು. ಇಂತಹ ಶ್ರೀ ಮಂಡಲರು ಪಾಕಿಸ್ತಾನದಿಂದ ಜಾರಿಕೊಂಡು ಕಲ್ಕತ್ತೆಗೆ ಬಂದು ಪಾಕಿಸ್ತಾನದಲ್ಲಿ ಹಿಂದುಗಳೆಲ್ಲರ ಮೇಲೆ, ಅದರಲ್ಲೂ ಹರಿಜನರ ಮೇಲೆ ನಡೆದಿರುವ ಅತ್ಯಾಚಾರಗಳನು ಬಯಲಿಗೆಳೆದು ಪ್ರಧಾನಿ ಮಿ. ಲಿಯಾಖತರ ಮುಖಕ್ಕೆ ಮಂಗಳಾರತಿ ಹಿಡಿದಿದ್ದಾರೆ; ಮಿ. ಲಿಯಾಖತರು ಶ್ರೀ ಮಂಡಲರ ಆರೋಪಗಳಿಗೆ ಕೊಟ್ಟ ಉತ್ತರದಲ್ಲಿ ತಮ್ಮ ಬೇರಾವ ಕೃತ್ಯಗಳಿಗೂ ಪಶ್ಚಾತ್ತಾಪ ಸೂಚಿಸದೆ 'ಉಂಡ ಮನೆಗೆರಡು ಬಗೆಯುವ ಮಂಡಲ'ರನ್ನು ಸುರಕ್ಷಿತವಾಗಿ ಪಾಕಿಸ್ತಾನದಿಂದ ಭಾರತಕ್ಕೆ ನುಸುಳಿಕೊಳ್ಳಲು ಬಿಟ್ಟುದು ತಪ್ಪಾಯಿತು' ಎಂಬ ಪಶ್ಚಾತ್ತಾಪವೊಂದನ್ನೇ ಪ್ರದರ್ಶಿಸಿದಂತಿದೆ- ಭಾರತದಿಂದ ತಪ್ಪಿಸಿಕೊಂಡುಹೋದ ನಾಯಕ್ ಅಲಿಗಳಂತ ಕೈದಿಗೆ ಪಾಕಿಸ್ತಾನದಲ್ಲಿ ಆತಿಥ್ಯ ದೊರಕುವಾಗ, ಪಾಕಿಸ್ತಾನದ ಮಂತ್ರಿಯೊಬ್ಬನು ಬಂದಾಗಲಾದರೂ ಭಾರತವವನಿಗೆ ಆತಿಥ್ಯ ಮಾಡುವುದು ಬೇಡವೇ? ತಾನು ಬೇರೆಯವರಿಗೆ ಬಗೆದುದೇ ಸ್ವತಃ ತನಗೂ ದೊರೆಯುವುದು ಸಹಜವೆಂಬ ಭಾವನೆಯಿಂದಾದರೂ ಪಾಕಿಸ್ತಾನಿಗಳು ಸಹನೆ ವಹಿಸಬೇಕಾದುದು ಅಗತ್ಯ-

೦೦೦

ತಮ್ಮ ಸಂಸ್ಕೃತಿ ಮತ್ತು ಜೀವನ ವಿಧಾನಗಳೇ ಪ್ರತ್ಯೇಕವೆಂಬ ಭಾವನೆಯಿಂದ ಪಾಕಿಸ್ತಾನ ಸ್ಥಾಪಿಸಿಕೊಂಡೊಡನೆಯೇ, ತಮ್ಮ ಸಂಸ್ಕೃತಿ ಮತ್ತು ಜೀವನ ವಿಧಾನಗಳೇ ಬೇರೆ ಎಂಬ ಕಾರಣದಿಂದ ಗಡಿನಾಡಿನವರ ಪಖ್ತೂನಿಸ್ತಾನ ಚಳವಳಿ ಮೊದಲಾದೆ ದೆಸೆಯಿಂದೀಗ ಅಫ್ಘಾನಿಸ್ತಾನ್—ಪಾಕಿಸ್ತಾನ್ ಘರ್ಷಣೆಗಳು ನಡೆಯುತ್ತಲೇ ಇವೆ. 'ಮಾಡಿದ್ದುಣ್ಣೋ ಮಹಾರಾಯ!' ಎಂಬ ಮಾತು ಬಳಕೆಯಲ್ಲಿರುವುದು ಇಂತಹ ವಿಸ್ಮಯಗಳಿಂದಲೇ!

ಸಾಧನೆಗಾಗಿ ಅಲ್ಲದೆ, ಅನ್ಯಥಾ ಅಲ್ಲ. ಇಂತಹ ದುಸ್ಸಾಧನೆ, ಕುಯುಕ್ತಿಗಳಲ್ಲೂ ಅಮೆರಿಕಕ್ಕೆ ಬೆಂಬಲವಾಗಿ ಭಾರತವು ಆ ಸ್ವಾದ ಸ್ವಾತಂತ್ರ್ಯವನ್ನು ಮತ್ತು ತನ್ನ ಇರಸ್ಥಿತಿಯನ್ನು ಬಲಿಕೊಡಲು ಮುಂದಾಗಬೇಕೆ? ಕಮ್ಯೂನಿಸ್ಟರ ಒತ್ತಡದಂತೆಯೇ ಅಮೆರಿಕದ ದುಸ್ವಾರ್ಥ ಪೂರಿತ ಹಂಚಿಕೆಗಳನ್ನೂ ಪ್ರತಿಭಟಿಸಿ, ಮೂಲ ನ್ಯಾಯ ಮತ್ತು ಶುದ್ಧ ಜನಮತವನ್ನು ಎತ್ತಿ ಹಿಡಿಯುವ ಕೆಲಸವಿಂದು ಆಗಬೇಕಾಗಿದೆ. ಸರ್ವ ಸಂದರ್ಭಗಳಲ್ಲೂ ಇದೇ ಧೋರಣೆಯಿಂದ ನಡುಕಟ್ಟೆಯಿಡುತ್ತಿರುವ ಭಾರತವನ್ನು ಅನುಕರಿಸುವ ನ್ಯಾಯ ನಿಷ್ಠುರತೆ ಮತ್ತು ಧೈರ್ಯ, ಯೋಗ್ಯತೆಗಳು ಇತರ ರಾಷ್ಟ್ರಗಳಲ್ಲೂ ಮೂಡಬೇಕಾಗಿದೆ. ಈ ಹೊರತು ಸದ್ಯ ಸ್ಥಿತಿಯಲ್ಲಿ ಲೋಕ ಶಾಂತಿಗೆ ಬೇರೆ ಮಾರ್ಗ ಕಾಣುವುದಿಲ್ಲ

ತಾರೀಕು 13 10-50ರಿಂದ
ನಡೆಯುವ ಚಿತ್ರ
ರಾಜಕುಮಾರ
ಬಸ್ರಾತ್
ಶ್ರೀ ರಾಮಕೃಷ್ಣ ಥಿಯೇಟರ್ ಉಡುಪಿ

ಉಡುಪಿಯಲ್ಲಿ ನಾಡಹಬ್ಬ

ಉಡುಪಿಯ ನಾಡಹಬ್ಬ—ತುಂಬ ವೈಭವದಿಂದ—ತುಂಬ ವೈವಿಧ್ಯದಿಂದ ನಡೆಯುವ ವಾಡಿಕೆ. ಈ ಪರಂಪರೆಯನ್ನು ಕಾಯ್ದುಕೊಂಡು ಈ ಸಲವೂ ಉಡುಪಿಯ ಕರ್ನಾಟಕ ಸಂಘದವರು ಈ ತಿಂಗಳ ತಾ. 18, 19, 20, ಈ ಮೂರು ದಿನಗಳಲ್ಲಿ ತುಂಬ ಚೆನ್ನಾಗಿ ನಾಡಹಬ್ಬವನ್ನು ನಡೆಯಿಸಿದ್ದಾರೆ. ಮೂರು ದಿನಗಳಲ್ಲಿ ಉಡುಪಿಯ ರಸಿಕರಾದ ಬಂಧು ಭಗಿನಿಯರು ಪೀಪಲ್ಸ್ ಹಾಲಿನಲ್ಲಿ ಕಿಕ್ಕಿರಿದು ಸೇರಿದ್ದೇ ಉತ್ಸವದ ಯಶಸ್ವೀ ಸಫಲತೆಗೆ ಸಾಕ್ಷಿಯಾಗಿತ್ತು ಎನಬಹುದು. ಮೊದಲನೆಯ ದಿನ ಮುಂಜಾನೆ ಪಂಡಿತ ವೆಂಕಟರಮಣಾಚಾರ್ಯರ ಸ್ಮಾರಕ ಭಾಷಣ ಸ್ಪರ್ಧೆ ನಡೆಯಿತು. ಸಂಜೆಗೆ ಕರ್ನಾಟಕದ ಸುಪ್ರಸಿದ್ಧ ಸಾಹಿತ್ಯಕರ್ಣಾಜ ಶ್ರೀಮಾನ್ ಗೋರೂರು ರಾಮಸ್ವಾಮ್ಯಯ್ಯಂಗಾರರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಅಂದು ಉಡುಪಿಯ ಹಿರಿಯ ಬರೆಹಗಾರರಲ್ಲೊಬ್ಬರಾದ ಶ್ರೀಮಾನ್ ಎಸ್. ವೆಂಕಟರಾಜರು "ಕೆಲವು ಕಾರ್ಯಗಳ ವಿಮರ್ಶೆ" ಎಂಬ ವಿಚಾರವಾಗಿ ಉಪನ್ಯಾಸವಿತ್ತರು. ಅವರು ಮುಖ್ಯವಾಗಿ ವಿಮರ್ಶೆಯೆಂದರೇನೆಂಬುದನ್ನು ಪ್ರಾರಂಭದಲ್ಲಿ ಸ್ಥೂಲವಾಗಿ ಪ್ರಸ್ತಾಪಿಸಿ ಪುಟ್ಟಪ್ಪನವರ 'ನವಿಲು' ಎಂಬ ಕವಿತಾ ಸಂಗ್ರಹದ ಕವಿತೆಗಳ ಕುರಿತು ವಿಮರ್ಶಿಸಿದರು. ತರುವಾಯ ಧರ್ಮಸ್ಥಳದ ಶ್ರೀ ಅ. ರಾ. ಸೆಟ್ಟರ ಕಾವ್ಯ ವಾಚನವಾಯಿತು. ಆ ಬಳಿಕ ಉಡುಪಿಯ ಶ್ರೀ ಲಕ್ಷ್ಮೀನಾರಾಯಣಾಚಾರ್ಯ ಬಿ. ಎಸ್‌ಸಿ (ಆನರ್ಸ್); ಬಿ. ಟಿ. ಇವರು "ವಿಶ್ವವು ಅನಂತವಾದುದೇ" ಎಂಬ ಖಗೋಲ ಶಾಸ್ತ್ರದ ವಿಚಾರವಾಗಿ ಬೋಧಪ್ರದ ಭಾಷಣವಿತ್ತರು. ಅಧ್ಯಕ್ಷರ ಸಮಾರೋಪ ಭಾಷಣವಾಗಿ ಸಂಜೆಯ ಸಭೆ ಕೊನೆಗೊಂಡಿತು. ಅಂದು ರಾತ್ರೆ ತಮ್ಮ ನಟನಾ ನೈಪುಣ್ಯದಿಂದ ಈಗಾಗಲೇ ಜನಪ್ರಿಯರಾದ ಶ್ರೀ ಎಸ್ಸೆಲ್ ಮತ್ತು ಗೆಳೆಯರ "ವೀಣಾ ಮದುವೆ" ನಾಟಕದ ಯಶಸ್ವೀ ಪ್ರದರ್ಶನವಿತ್ತು. ಮರುದಿನ ಸಂಜೆ ಶ್ರೀ ನಿ. ರಾಜಗೋಪಾಲ ಕೃಷ್ಣರಾಯರು ಅಧ್ಯಕ್ಷತೆ ಸೇರಿದ ಸಭೆಯಲ್ಲಿ ಶ್ರೀಮತೀ ಲೀಲಾಬಾಯಿ ಕಾಮತ್ ಅವರು ಬರೆದ "ಹಾರಿ ಹೋದ ಹಕ್ಕಿ" ಪುಸ್ತಕದ ಉದ್ಘಾಟನೆಯನ್ನು ಶ್ರೀ ಗೋರೂರು ನೆರವೇರಿಸಿದರು. ಅಧ್ಯಕ್ಷರು ನಾಲ್ಕು ಮಾತುಗಳನ್ನಾಡಿ ತಮ್ಮ ಅನಾರೋಗ್ಯದ ನಿಮಿತ್ತ ಅಧ್ಯಕ್ಷ ಪೀಠವನ್ನು ಶ್ರೀ. ಗೊರೂರರಿಗೆ ಒಪ್ಪಿಸಿ ಕೊಟ್ಟರು. ಅನಂತರ ಕನ್ನಡ ಕಾದಂಬರಿಗಳ ವಿಮರ್ಶಾ ಗೋಷ್ಠಿ ನಡೆಯಿತು. ಇದು ಉಡುಪಿಯ ನಾಡ ಹಬ್ಬದಲ್ಲಿ ಹೊಸ ಪ್ರಯೋಗ. ಅಂದು ನಾಲ್ಕು ಜನರು ನಾಲ್ಕು ಕಾದಂಬರಿಗಳನ್ನು ವಿಮರ್ಶಿಸಿದರು. ಶ್ರೀ. ಬೆಳ್ಳೆ ರಾಮಚಂದ್ರರಾಯರು ಬರೆದ "ಚಿರವಿರಹಿ' ಯನ್ನು ಶ್ರೀ ನಾರಾಯಣ ಸ್ವಾಮಿ ಅಯ್ಯಂಗಾರ್ ಎಂ. ಎ. ಅವರೂ, ಶ್ರೀ. ವಿ. ಎಂ. ಇನಾಂದಾರ್ ಅವರು ಬರೆದ "ಶಾಪ"ದ ಕುರಿತು ಶ್ರೀ. ಕೆ. ವಿ. ಶೆಣೈ ಬಿ. ಎ., ಎಲ್. ಟಿ. ಅವರೂ ಶ್ರೀ ಶಿವರಾಮ ಕಾರಂತರು ಬರೆದ "ಸನ್ಯಾಸಿಯ ಬದುಕು" ಕಾದಂಬರಿಯನ್ನು ಶ್ರೀಮತಿ ಲೀಲಾಬಾಯಿ ಕಾಮತ್ ಅವರೂ ಶ್ರೀ ಮಾಸ್ತಿಯವರು ಬರೆದ "ಚೆನ್ನ ಬಸವ ನಾಯಕ"ವನ್ನು ಶ್ರೀ ಬನ್ನಂಜೆ ರಾಮಾಚಾರ್ಯರೂ ವಿಮರ್ಶಿಸಿದರು. ಜನಾಬ್ ಇದಿನಬ್ಬನವರ ಹಾಗೂ ಶ್ರೀ ಶ್ರೀನಿವಾಸರಾವ್ ಬಿ. ಎ. ಬಿ. ಟಿ. ಯವರ ಸುಶ್ರಾವ್ಯ ಕಾವ್ಯ ವಾಚನವೂ ಇತ್ತು. ಶ್ರೀ ಶ್ರೀನಿವಾಸ ರಾಯರು ಶ್ರೀ ಡಿ. ವಿ. ಜಿ. ಯವರ "ಅಂತಃಪುರಗೀತೆಗಳು" ಎಂಬ ಸಂಗ್ರಹದಲ್ಲಿಯ ಕೆಲವು ಕವನಗಳನ್ನು ರಾಗಬದ್ಧವಾಗಿ ಹಿತವಾಗಿ ಚೇತೋಹಾರಿಯಾಗಿ ಹಾಡಿದ್ದು ತುಂಬ ಮೆಚ್ಚುಗೆಯನ್ನು ಪಡೆಯಿತು. ಅಂದು ರಾತ್ರೆ ವಿವಿಧ ವಿನೋದಾವಳಿಯ ಕಾರ್ಯಕ್ರಮವಿತ್ತು. ಆರಂಭದಲ್ಲಿ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ಗೆಳೆಯರು 'ಸೋಮಿಯ ಸೌಭಾಗ್ಯ'ವೆಂಬ ಕಾರಂತರ ಗೀತ ನಾಟಕವನ್ನು ತುಂಬ ಪರಿಣಾಮಕಾರಿಯಾಗಿ ಅಭಿನಯಿಸಿದರು. ಆ ಮೇಲೆ ತಾರಾಮಂಡಳದ ಕಿರಿಯರು ಶ್ರೀ ಜಿ. ಪಿ. ರಾಜರತ್ನಂರವರ "ಗಂಡುಗೊಡಲಿ" ಯನ್ನು ಅಭಿನಯಿಸಿದರು. ಶ್ರೀ ಬಾಬಾ ಬುಡಾನ್ ಸಾಹೇಬರ ಕೆಲವು ಅನುಕರಣ ನಟನೆ ಜನತೆಯನ್ನು ನಗೆಗಡಲಲ್ಲಿ ತೇಲಿಸಿದ ಬಳಿಕ ಉಡುಪಿಯ ಚಿರಪರಿಚಿತ ನಾಟ್ಯ ಸಂಸ್ಥೆಯಾದ 'ನಾಟ್ಯ ಕೂಟ'ದ ಗೆಳೆಯರಿಂದ "ಉಚ್ಚಾಟನೆ"ಯೆಂಬ ಪ್ರಹಸನದ ಪ್ರಯೋಗವಿತ್ತು.

ತಾ. 20ರಂದು ಕೊನೆಯ ದಿನದ ಕಾರ್ಯಕ್ರಮ ಮುಂಜಾನೆ ದಾಸರ ಪದಗಳ ಹಾಡುಗಾರಿಕೆಯೊಂದಿಗೆ ಪ್ರಾರಂಭವಾಯಿತು. ಸಂಜೆ ಮಂಗಳೂರಿನ ಬಿ. ಟಿ. ಕಾಲೇಜಿನ ಪ್ರಿನ್ಸಿಪಾಲರೂ 'ಹರಿಕಮತನ ಮೂಲಕ ಕನ್ನಡ ನಾಡಿಗೆಲ್ಲಾ ಚಿರಪರಿಚಿತ ಸಾಹಿತಿಗಳೂ ಆದ ಶ್ರೀಮಾನ್ ಪಡುಕೋಣೆ ರಮಾನಂದರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಪ್ರಾರಂಭದಲ್ಲಿ ಎಲ್ಲೊಶಿಯಸ್ ಕಾಲೇಜಿನ ಪ್ರಾಧ್ಯಾಪಕರಾದ ಶೀ ಜಿ. ಟಿ. ನಾರಾಯಣ ರಾಯರು "ಒಂದಾನೊಂದು ಕಾಲದಲ್ಲಿ......' ಎಂಬ ವಿಷಯವಾಗಿ- ಕುತೂಹಲಪೂರ್ಣವಾದ ಹಾಗೂ ಕೋಚಕವಾದ ಶೈಲಿಯಲ್ಲಿ ಖಗೋಲ ಶಾಸ್ತ್ರದ ಕೌತುಕದ ಪರಿಚಯ ಮಾಡಿಕೊಟ್ಟರು. ಆಮೇಲೆ ಉಡುಪಿಯ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮಾನ್ ಕೌಲಗಿ ಶೇಷಾಚಾರ್ ಎಂ. ಎ. ಅವರು "ತುಲಸೀ ದಾಸರ ಸುಮಿತ್ರಾ" ಎಂಬ ವಿಚಾರವಾಗಿ ಭಾಷಣವಿತ್ತರು. ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಸುಬ್ರಾಯ ಆಚಾರ್ಯರು ಕಾವ್ಯವಾಚನವಾದ ತರುವಾಯ ಶ್ರೀ ಗೋರೂರು ರಾಮ ಸ್ವಾಮಿ ಅಯ್ಯಂಗಾರರು "ಹಳ್ಳಿಯ ಹಾಡುಗಳು" ಎಂಬ ವಿಷಯವಾಗಿ ಭಾಷಣವಿತ್ತರು. ಅಧ್ಯಕ್ಷರು 'ಉತ್ತಮ ಜೀವನ' ಎಂಬ ಉದಾತ್ತ ವಿಚಾರವನ್ನು ಕುರಿತು ಉಪನ್ಯಾಸವಿತ್ತ ಬಳಿಕ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕು. ಶಿ. ಹರಿದಾಸ ಭಟ್ಟರು ಈ ಉತ್ಸವಕ್ಕೆ ಎಲ್ಲಾ ವಿಧದಿಂದ ನೆರವಾದ ನೆರವಿಗರನ್ನು ಅಭಿನಂದಿಸಿ ತುಂಬ ಸೊಗಸಾದ 'ಧನ್ಯವಾದ ಭಾಷಣ' ಮಾಡಿದ್ದರು. ಅಂದು ರಾತ್ರೆ ಸ್ಥಳೀಯ ಯಕ್ಷಗಾನ ಕಲಾ ಕೂಟದ ಮಿತ್ರರಿಂದ 'ಇಂದ್ರಜಿತ್ ಕಾಳಗ' ಯಕ್ಷಗಾನ ಕಥಾ ಕಾಲಕ್ಷೇಪವಿತ್ತು. ಹೀಗೆ ಈ ಮೂರು ದಿನಗಳಲ್ಲಿ ನಾಡಹಬ್ಬ ಹಿಂದಿನ ಪರಂಪರೆಗೆ ಭಂಗಬಾರದೆ ಯಶಸ್ವಿಯಾಗಿ ಮುಗಿದಿದೆ. ಈ ಯಶಸ್ಸಿಗೆ ಸಂಘದ ಸನ್ಮಾನ್ಯ ಅಧ್ಯಕ್ಷರೂ ಉಡುಪಿಯ ಜನಪ್ರಿಯ ಡಾಕ್ಟರರೂ ಆದ ಡಾ। ಕೆ. ಎಲ್. ಐತಾಳರು ಮತ್ತು ಸಂಘದ ಪ್ರಧಾನ ಕಾರ್ಯದರ್ಶಿಗಳೂ ಸ್ಥಳೀಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ಪ್ರಾಧ್ಯಾಪಕರೂ ಕನ್ನಡದ ನವೋದಿತ ಲೇಖಕರೂ ಈಗಾಗಲೇ ನಾಕಷ್ಟು ಪರಿಚಿತರೂ ಆದ ತರುಣೋತ್ಸಾಹೀ ಕಾರ್ಯಕರ್ತರಾದ ಶ್ರೀ ಕು. ಶಿ. ಹರಿದಾಸ ಭಟ್ಟರು ಬಿ. ಎ. [ಆನರ್ಸ್] ಇವರ ಅನನ್ಯ ದುಡಿತವೆ ಮೂಲಹೇತುವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

—ನಾಡಹಬ್ಬದ ಒಬ್ಬ ಪ್ರೇಕ್ಷಕ.

ಬೆಳ್ಮರೆ— ಯುರೋಪ್ ಪ್ರವಾಸವನ್ನು ಮುಗಿಸಿ ತಮ್ಮ ಹುಟ್ಟೂರಿಗೆ ಬಂದ ಡಾ। ಕೆ. ಯಂ. ರೈಗಳಿಗೆ ಊರ ಮಹನೀಯರು ಮಾನಪತ್ರವೊಂದನ್ನರ್ಪಿಸಿ ಗೌರವಿಸಿದರು. ಡಾಕ್ಟರರು ಊರ ಅಭಿವೃದ್ಧಿಗೆ ಕೆಲ ಸಲಹೆಗಳನ್ನಿತ್ತರು.

ಉಪ್ಪಳ— ಎಲಿಮೆಂಟರಿ ಶಾಲೆಯನ್ನು ಆಕಸ್ಮಿಕವಾಗಿ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಸಂದರ್ಶಿಸಿದಾಗ ಮುಖ್ಯೋಪಾಧ್ಯಾಯರು ಇಡೀ ದಿನದ ಹಾಜರಿ ಹಾಕಿ ಗೈರು ಹಾಜರಾಗಿದ್ದರು. ವಿಚಾರಿಸಲಾಗಿ ಅವರ ಮರ್ಜಿಯೇ ಹೀಗೆಂದು ತಿಳಿಯಲಾಗಿದೆ.

ಮುಂಬೈ— ತಾ. 20-10-1950 ರಲ್ಲಿ ಶ್ರೀ ಭಗವತೀ ನೃತ್ಯಕಲಾ ಮಂದಿರದಲ್ಲಿ ಶ್ರೀ ಶಾರದಾ ಪೂಜೆಯೂ, ದಸರಾ ಮಹೋತ್ಸವವೂ ಆಚರಿಸಲ್ಪಟ್ಟಿತು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬ್ಯರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆವರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. D8. (N. J.)

Tollygunge CALCUTTA.

ಪ್ರತಿನಿಧಿಗಳು ಶಹಾಕಂಪೆನಿ, ಮಂಗಳೂರು

NOTICE.

In the Court of the District Munsiff, Kasargod.

O. S. No. 282/50

Between

Padmavathi Amma-Plaintiff

and

Achuta Bhatta-Defendant

Notice to the Defandant- Achuta Bhatta, son of saipangallu Krishna Bhatta, residing in Padu village, Kasargod Taluk.

Whereas the plaintiff has filed a suit against you for the recovery of the price of coconuts due to her and the suit stands posted to 27-10-1950 for your appearence.

Please take notice that in default of your appearence on that day (27-10-50) the suit will be heard and determined in your absense.

N. Venkatramana Bhat,

Advocate for Plaintiff.

Kasargod, 20-10-50.

ದಕ್ಷಿಣ ಕನ್ನಡ

ಉಪ್ಪೂರು—ಶ್ರೀ ಯು. ಕೆ. ಗೋವಿಂದ ಸೆಟ್ಟಿ, ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದುವ ಸಮಾರಂಭವು ತಾರೀಕು 15-10-50ರಂದು ಶ್ರೀ ಯು. ಮಂಜುನಾಥ ಕಲ್ಕೂರರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ವಿನೋದಾವಳಿ, ಲಘು ಫಲಾಹಾರ, ಭಾವ ಚಿತ್ರಗಳಾದಮೇಲೆ ಶ್ರೀ ...ಸನ್, ಶಾಲು ಸೆಟ್ರು ವಗೈರೆರು ಶ್ರೀ ಸೆಟ್ಟರ ಗುಣ ಕಥನ, ವಿದ್ಯಾ ಪ್ರಚಾರ ಕಾರ್ಯದಲ್ಲಿ ಅವರು ಸಲ್ಲಿಸಿದ ಅಪಾರ ಸೇವೆ, ಇತ್ಯಾದಿಗಳನ್ನು ವಿವರಿಸಿದರು, ಶ್ರೀ ಯು. ಕೆ. ಗೋವಿಂದ ಸೆಟ್ರ ನಿವೇದನೆಯಾದ ಮೇಲೆ ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಕಿನ್ನಿಗೋಳಿ— ದಿನ ೧೩-೧೦-೫೦ ರಂದು ಇಲ್ಲಿಯ ಕರ್ನಾಟಕ ಸಂಘದ ಸದಸ್ಯರ ಮಹಾಧಿವೇಶನವು ಶ್ರೀ ಕೆ. ಗುರುರಾಜ ಉಡುಪ ಬಿ. ಎಸ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗಿ ಮುಂದಿನ ವರ್ಷದ ಕಾರ್ಯಕಾರಿ ಮಂಡಳದ ಚುನಾವಣೆಯಾಗಿ ಶ್ರೀ ಕೆ. ಅಚ್ಯುತ ಗೌಡ, ವಿದ್ವಾನ್ ಅವರು ಅಧ್ಯಕ್ಷ ಶ್ರೀ ಕೆ. ಅನಂತ ಪದ್ಮನಾಭ ಉಡುಪರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು ಸಂಘವು ಇಷ್ಟರ ತನಕ ಮಿಕ್ಕ ಪತ್ರಿಕೆಗಳುಳ್ಳ ಒಂದು ಅತ್ಯುತ್ತಮ ವರ್ಗದ ವಾಚನಾಲಯವನ್ನು ನಡೆಸುತ್ತಲಿದೆಯಲ್ಲದೆ ಸದ್ಯದಲ್ಲೇ ಒಂದು ಪುಸ್ತಕ ಭಂಡಾರವನ್ನು ತೆರೆಯುವ ಯೋಚನೆ ಮಾಡುತ್ತಲಿದೆ.

ನೀಲಾವರ ತಾ. 16-10-1950ರಲ್ಲಿ ಇಲ್ಲಿಯ ಶ್ರೀ. ಮಹಿಷಮರ್ದಿನಿ ಶಾಲಾ ವಾರ್ಷಿಕೋತ್ಸವವು ವಿದ್ವಾನ್ ಯು. ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಕರ್ಣ ಪರ್ವ ನಾಟಕ, ಅಮೇಲೆ ಚಿಕ್ಕ ಮಕ್ಕಳ ಅನೇಕ ವಿನೋದಾವಳಿಗಳು, ಹಳೇ ವಿದ್ಯಾರ್ಥಿಗಳ ಪ್ರಹಸನ ಮುಂತಾದುವು ಮುಗಿದೊಡನೆ "ಶ್ರೀ ಶಾರದಾ ಪೂಜಾ" ನಡೆಯಿತು. ತರುವಾಯ ವರದಿವಾಚನ, ಮೆನೇಜರ್ ಅಣ್ಣಪ್ಪ ಭಟ್ಟರು, ಶ್ರೀನಿವಾಸ ಕಲ್ಕೂರರು, ಕೆ. ವಿ. ಕಲ್ಕೂರರು ಮತ್ತು ಅಧ್ಯಕ್ಷರ ಭಾಷಣಗಳಾದುವು

ಬಾಳಿಕುದುರು—ಕರ್ನಾಟಕ ಸಂಘ ಸಭೆಯು ತಾ. 15ರಲ್ಲಿ ಶ್ರೀ ಕಾಡಪ್ಪ 'ವಿದ್ವಾನ್' B. O. L. B. T. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳಿಂದ ವರದಿವಾಚನವಾಯಿತು ಶ್ರೀ ಬಿ. ಎಲ್. ಕೆದ್ಲಾಯ, ಶ್ರೀ ಶಂಕರ ನಾರಾಯಣ ಐತಾಳ, ಶ್ರೀ ಕೃಷ್ಣ ಅಡಿಗಳ ಕಾರ್ಯಕ್ರಮಗಳಾಗಿ, ಅಣ್ಣಪ್ಪ ಚಡಗರು, ಡಿ ಪಿ ಉಪಿಸರು, ಡಾ| ಹಿರಿಯಣ್ಣ ಸೆಟ್ರು ಮುಂತಾದ ಮಹನೀಯರು ಸಂಘದ ಮೇಲ್ಮೆಯನ್ನು ಹಾರೈಸುತ್ತಾ ತಮ್ಮ ಸಲಹೆಗಳನ್ನಿತ್ತರು. ಅಧ್ಯಕ್ಷರು ತಮ್ಮ ಸುದೀರ್ಘ ಭಾಷಣದಲ್ಲಿ ಸಂಘದ ಅಗತ್ಯ, ಅದರ ಸ್ಥಾನ, ಕರ್ನಾಟಕದ ಏಕೀಕರಣ ಮತ್ತು ಏಳಿಗೆಯಲ್ಲಿ ಅದರ ಕಾರ್ಯಗಳ ಕುರಿತು ಮಾತನಾಡಿದರು. ಕಾರ್ಯದರ್ಶಿಗಳಾದ ಶ್ರೀ ಆನಂದರಾವ ಉಡುಪರು ಧನ್ಯವಾದವನ್ನಿತ್ತ ಬಳಿಕ ರಾಷ್ಟ್ರಗೀತದೊಡನೆ ಸಭೆಯು ಕೊನೆಗೊಂಡಿತು.

ಹುಣ್ಸೆಮಕ್ಕಿ—ಬೋರ್ಡ್ ಶಾಲಾ ಹೆಡ್ ಮಾಸ್ತರ್, ಶ್ರೀ. ವಿ. ಶೀನಪ್ಪ ಸೆಟ್ರ ಪುತ್ರ ಕುಂದಾಪುರ ಬೋರ್ಡ್ ಹೈಸ್ಕೂಲಿನ VI ಫೋರ್ಮ್ ವಿದ್ಯಾರ್ಥಿ ಬಿ ಸೀತಾರಾಮನು ಕೆಲವೇ ದಿನಗಳ ವ್ಯಾದೆಜ್ವರದಿಂದ ಬೆಳ್ಳಂಪಳ್ಳಿಯಲ್ಲಿ 8-10-50ರಲ್ಲಿ ಅಕಾಲ ಮರಣಕ್ಕೀಡಾಗಿರುವುದು ವಿಷಾದಕರವಿದೆ.

ಕುದ್ರುಕರೆ—ಬೋರ್ಡ ಎಲಿಮೆಂಟರಿ ಶಾಲೆಯ ಶಾರದಾ ಪೂಜೆಯು ತಾ. 17-10-50ರಲ್ಲಿ ಶ್ರೀ.A ಸುಬ್ರಾಯ ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಜೆ 'ಶಿಶು ಚರ' ದಳದವರ ಶಿಬಿರಾಗ್ನಿ ಶ್ರೀ ಜೋಸೆಫ್ 'ಡಿ' ಸೋಜರ ಅಧ್ಯಕ್ಷತೆಯಲ್ಲಿ ನೆರವೇರಿತು

ಸುರತ್ಕಲ್—ವಿದ್ಯಾದಾಯಿನಿ ಶಾಲೆಯಲ್ಲಿ ನಾಡಹಬ್ಬ ದಿನಾಚರಣೆಯು 18ರಲ್ಲಿ ಶ್ರೀ ಕೊಳಕೆ ಸರ್ವೋತ್ತಮ ಮಯ್ಯ M. O. L. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆನಂದ ರಾವ್ M. A., B. O. L., B. T. ಯವರು "ನಾಡ ಹಬ್ಬವೂ ಏಕೀಕರಣವೂ" ಎಂಬ ವಿಚಾರವಾಗಿ ಭಾಷಣವನ್ನಿತ್ತರು. ಅಧ್ಯಕ್ಷರು ಸಂದರ್ಭೋಚಿತ ಭಾಷಣವನ್ನೀಯಲು, ಮುಖ್ಯೋಪಾಧ್ಯಾಯರು ಧನ್ಯವಾದ ಅರ್ಪಿಸಿದರು. ವಿದ್ಯಾರ್ಥಿಗಳಿಂದ "ಸ್ವಾಮಿ ನಿಷ್ಠೆ" ನಾಟಕಾಭಿನಯವಿತ್ತು.

ಪುಣಚಾ—ತಾ. 19ರಲ್ಲು ಪರಿಯಾಲ್ತಡ್ಕ ಶಾಲೆಯಲ್ಲಿ ಶಾರದಾಪೂಜೆಯಾಗಿ ಶಾಲಾ ಕಮಿಟಿಯ ವಾರ್ಷಿಕ ಸಭೆಯು ಪಟೇಲ್ ಶ್ರೀ ಬಿ. ಸಂಕಪ್ಪ ರೈಗಳವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಈ ಸಂದರ್ಭದಲ್ಲಿ ಶಾಲಾ ಮಕ್ಕಳ "ಬೆಳಕು" ಸಂಘದ ವಾರ್ಷಿಕೋತ್ಸವವೂ ಗ್ರಾಮ ಸಂಘದ ಸಭೆಯೂ ನೆರವೇರಿದುವು ವಿವಿಧ ವಿನೋದಗಳೂ, ಗ್ರಾಮ ಸಂಘದವರಿಂದ "ಉತ್ತರನ ಪೌರುಷ" ಎಂಬ ಯಕ್ಷಗಾನ ನಾಟಕವೂ ಮನೋಹರವಾಗಿ ಪ್ರದರ್ಶಿಸಲ್ಪಟ್ಟವು.

ಪೆಡೂರು—ಶ್ರೀ ಅನಂತಪದ್ಮನಾಭ ದೇವಸ್ಥಾನ ಶಾಲೆಯಲ್ಲಿ ತಾ. 20ರಂದು ಶಾರದಾ ಪೂಜೆಯು ಶ್ರೀ ಪಿ. ಪದ್ಮನಾಭ ಅಡಿಗಳವರ ಅಧ್ಯಕ್ಷತೆಯಲ್ಲಿ ವಿವಿಧವಿನೋದಾವಳಿಗಳಿಂದ ನಡೆಯಿತು. ಶ್ರೀಗಳಾದ ಲಕ್ಷ್ಮೀನಾರಾಯಣ ಹೆಬ್ಬಾರ, ಅನಂತಪದ್ಮನಾಭ ಕಲ್ಯಾಣಿ, ಶೀನಸೆಟ್ಟಿ ಇವರು ಭಾಷಣ ಮಾಡಿದರು

ಬಂಟಕಲ್ಲು—ಶ್ರೀ ದುರ್ಗಾಪರಮೇಶ್ವರಿ ಹಾ| ಎ| ಶಾಲೆಯಲ್ಲಿ ತಾ. 17-10-50 ರಲ್ಲು 'ಶ್ರೀ ಶಾರದಾಪೂಜೆ'ಯು ಬಹು ವಿಜೃಂಭಣೆಯಿಂದ ಜರಗಿತು.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಂ ಎಲ್. ಸಿ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ, ಮಂಗಳೂರು. ಸಂಭಾವನಾ ಗ್ರಂಥ ಸಮರ್ಪಣೆ.

ಇದೇ ತಾ ೫ ೧೧-೫೦ನೇ ರವಿವಾರ ಮಂಗಳೂರಲ್ಲಿ ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯ ಡೈರೆಕ್ಟರರಾದ ಶ್ರೀ ಕೆ. ಗುರುದತ್ತರಾವ್, ಎಂ. ಸಿ ಎಸ್, ಅವರ ಅಧ್ಯಕ್ಷತೆಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಂ ಎಲ್ ಸಿ, ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭವೂ ತದಂಗವಾಗಿ ಶ್ರೀ ಯುತರಿಗೊಂದು ಸಂಭಾವನಾ ಗ್ರಂಥ ಸಮರ್ಪಣೆಯ ಕಾರ್ಯಕ್ರಮವೂ ಜರಗುವುದಾಗಿದೆ. ಈ ಸಂಬಂಧ ಅಗಲೇ ಪ್ರಮುಖರದೊಂದು ಸ್ವಾಗತ ಸಮಿತಿಯೂ ಏರ್ಪಟ್ಟಿದೆ. ಸಮಾರಂಭದ ಕಾಲ ಮತ್ತು ಸ್ಥಳವನ್ನು ಕ್ರಮಶಃ ಪ್ರಕಟಿಸಲಾಗುವುದು.

ನಿಧನ—ಸೆಟ್ಟಿಬೆಟ್ಟು ರಾಧಮ್ಮ ಹೆಗ್ಗಡ್ತಿಯರು ತನ್ನ 66ನೇ ವಯಸ್ಸಿನಲ್ಲಿ ಇದೇ ತಾ. 20-10-50ರಲ್ಲಿ ದೈವಾಧೀನರಾದರೆನ್ನಲು ವಿಷಾದಿಸುತ್ತೇವೆ. ಹೆಗ್ಗಡ್ತಿಯರು ಪ್ರಸಿದ್ಧ ಮನೆತನದ ಯಜಮಾನಿಯಾಗಿ, ತನ್ನ ಔದಾರ್ಯಾದಿ ಗುಣಗಳಿಂದ ಕೀರ್ತಿ ಗಳಿಸಿದ್ದರು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಮಕ್ಕಳು ಮತ್ತು ಕುಟುಂಬಿಕರೊಡನೆ ಅನುತಾಪ ಭಾಗಿಗಳಾಗಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸರ್ವಜನರ ಅವಗಾಹನೆ ಬಗ್ಗೆ ಪ್ರಕಟಣೆ

ಪಂಚಾಯತ ಬೋರ್ಡ್ ಯಾ ಮುನಿಸಿಪಾಲಿಟಿಗಳ ಆಡಳಿತಕ್ಕೆ ಒಳಪಡದ ಜಿಲ್ಲಾ ಬೋರ್ಡಿನ ಆಡಳಿತದ ಸರಹದ್ದಿನೊಳಗೆ ಅಪಾಯಕರ ವ್ಯಾಪಾರವನ್ನು ನಡಸುವ ಯಾವನಾದರೂ ವ್ಯಕ್ತಿಯು ಸದ್ರಿ ವ್ಯಾಪಾರದ ಬಗ್ಗೆ ತೆರತಕ್ಕ ಲೈಸನ್ಸ್ ಫೀಸಿನ ಮೊಬಲಗನ್ನು ಇದೇ ತಾ. 1-11-50ರ ಮೊದಲ್ಗೊಂಡು ನಗದಿಯಿಂದ ಯಾ ಮನಿಯಾರ್ಡರ್ ಮೂಲಕ ಯಾ ಚೆಕ್ ಮೂಲಕ ಜಿಲ್ಲಾ ಬೋರ್ಡ್ ಆಫೀಸಿಗೆ ಸೀದಾ ಕಳುಹಿಸಬಾರದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

2) ಹಾಗೆ ತೆರತಕ್ಕ ಮೊಬಲಗನ್ನು ನಗದಿಯಿಂದ ಯಾ ಮನಿಯಾರ್ಡರ ಮೂಲಕ ಜಿಲ್ಲಾ ಬೋರ್ಡ್ ಅಧ್ಯಕ್ಷರಿಂದ ಅಧಿಕಾರ ಗೊಳಿಸಲ್ಪಟ್ಟ ಬಿಲ್ ಕಲೆಕ್ಟರರಿಗೆ ನಿಯುಕ್ತ ಫಾರಮಿನಲ್ಲಿ ಅರ್ಜಿ ಸಮೇತ ಕೊಟ್ಟು ಕ್ಲಪ್ತವಾದ ರಶೀದಿಯನ್ನು L. F. ಫಾರಮ್ ನಂ 140-A ನೇಯಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷರಿಂದ ಯಾ ಸೆಕ್ರೆಟರಿಯವರಿಂದ ಅಥವಾ ಅಧ್ಯಕ್ಷರಿಂದ ನಿಯುಕ್ತಗೊಳಿಸಲ್ಪಟ್ಟ ಇತರ ಆಫೀಸರರಿಂದ ಸಹಿಮಾಡಲ್ಪಟ್ಟ ಲೈಸನ್ಸನ್ನು ಪಡೆಯತಕ್ಕದ್ದು. ಅಂಥ ಲೈಸನ್ಸ ಫೀಸನ್ನು ಬಿಲ್ ಕಲೆಕ್ಟರರ ಆಫೀಸಿನಲ್ಲಿ ಪ್ರತಿ ಸೋಮವಾರದಿನ ಬೆಳಗ್ಗೆ 11ಗಂಟೆಯಿಂದ ಸಂಜೆ 5ಗಂಟೆ ತನಕ ಕೊಟ್ಟು ಪಾವತಿ ಮಾಡಲೂ ಬಹುದು.

3) ಮನಿಯಾರ್ಡರ್ ಮೂಲಕ ಕಳುಹಿಸೋಣಾದ ಮೊಬಲಗಿನ ಬಾಬ್ತು ಮನಿಯಾರ್ಡರ ರಶೀದಿಯೇ ಸಾಕಾಗುವುದರಿಂದ ಅಲ್ಲಾದ ಬೇರೆ ರಶೀದಿ ಕೊಡೋಣಾಗಲಿಕ್ಕಿಲ್ಲ. ಆ ಬಗ್ಗೆ ಅಗತ್ಯವಿರುವ ಲೈಸನ್ಸನ್ನು ಆ ಬಗ್ಗೆ ಕ್ಲಪ್ತ ಫಾರಮಿನಲ್ಲಿ ಅರ್ಜಿ ತಲುಪಿದೊಡನೆ ಬಿಲ್ ಕಲೆಕ್ಟರರು ಕೊಡುವರು ಎಂತ ಸಹ ಈ ಮೂಲಕ ತಿಳಿಸಲಾಗಿದೆ.

ಎಮ್. ಸುಂದರ ರಾವ್,
ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರ ಪರವಾಗಿ
ದ. ಕ. ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು, ತಾ 16-10-1950

In the Court of the Principal District Munsiff of Mangalore.

O. S. No. 109 of 1950

Mogerapetah Jumma Masjid by Adalthe Moktessor Janab Porthi alias Pakruddin Beary —Plaintiff-

versus

Abdulkadri Beary— Defendant.

Notice is hereby given that R. I. A. No. 567/50 has been filed by the plaintiff in the above suit for permission to Sue in a representative capacity directing defendant to account for the sums- collected by him in respect of plaint mosque from the death of Ahmed Beary up to 24-2-50 and to pay plaintiff the amounts that may be found due on taking of such accounts with interest and that the said application stands posted for hearing on 3-11-1950. Persons desiring to oppose the petition may file their objections on that date. Failing which the matter will be decided in their absence.

(By order of the Court)

M. Madhava Rao,
Vakil for Plaintiff.

Mangalore, 23-10-50.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ
ಇಂಗ್ಲಿಷ್

English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವ್ದನು.



ಚಿಕಿತ್ಸಕರು: ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಸ್ವೀಕಾರ ವಿಮರ್ಶೆ

೧ ಮಗು: (ನಾಲ್ಕಂಕಿನ ಸಾಮಾಜಿಕ ನಾಟಕ) ಲೇಖಕರು- ಶ್ರೀ ಕೆ. ಎ. ಎನ್. ರಾವ್. ಪ್ರಕಾಶಕರು: ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಬೆಲೆ ೧—೮—೦

ಗುಂಡಪ್ಪ ಹಾಗೂ ಲಕ್ಷ್ಮಮ್ಮನ ಏಕಮಾತ್ರ ಪುತ್ರನಾದ ರಾಮಚಂದ್ರನೇ ಮಗು. ಬೆಳೆದು ವಿದ್ಯಾವಂತನಾಗಿ ಮದುವೆಯಾದ ಮೇಲೂ ತಂದೆತಾಯಿಗಳು "ಮಗು"ವೆಂದು ಕರೆದು ಏನೂ ತಿಳಿಯದ ಮುಗ್ಧ ಮನಸ್ಸಿನ 'ಮಗು'ವೆಂತಲೇ ಆವನನ್ನು ನೋಡುತ್ತಾರೆ. ರಾಮಚಂದ್ರನು ಮುಂಬಯಿಯಲ್ಲಿ ಉದ್ಯೋಗವನ್ನು ದೊರಕಿಸಿ ಕೊಂಡರೂ 'ಮಗು ನಿನಗಿನ್ನೂ ಬುದ್ಧಿ ಸಾಲದು, ಆದು ದೊಡ್ಡ ಊರು' ಎಂತ ಬೆದರಿಸುತ್ತಾರೆ. ಶಾಂತಾ ರಾಮಚಂದ್ರನ ಮೋಹದ ಮಡದಿ. ಮದುವೆಯ ನಂತರ ನಿಷೇಕವಾಗಬೇಕಾದರೆ ಹಣದ ಪ್ರಶ್ನೆ ನೆಂಟರಲ್ಲುದ್ಭವಿಸಿ ತಾರಾಳ ಬದುಕನ್ನೇ ಕೊಚ್ಚಿಕೊಂಡು ಹೋಗುತ್ತದೆ. ಇದುವೆ ಕತೆ,

ತಂದೆತಾಯಿಗಳು ರಾಮಚಂದ್ರನನ್ನು ಮಗುವೆಂತ ಇಟ್ಟಿದ್ದರೂ ರಾಮು ಸುಧಾರಿತ ಮನೋವೃತ್ತಿಯವ. ಅಂತಹ ಲೌಕಿಕ ವಿದ್ಯಾವಂತನು ನಿಷೇಕದ ಮುನ್ನ ಹೆಂಡತಿಯೊಡನೆ ಸಂಸರ್ಗಮಾಡಿ ಗರ್ಭಿಣಿಯಾದಾಗ ಎದುರು ನಿಲ್ಲಲು ಹಿಂದು ಮುಂದೆ ನೋಡುವುದು ವಿಷಾದದ ಸಂಗತಿ! 'ನೀನು ನನ್ನ ಮೋಹದ ಮಡದಿ! ರಾಣಿ ರಂಭೆ, ರತ್ನ, ಚಿನ್ನ, ಎಂದು ರಸಿಕತನವಾಡಿದ್ದು ಹೆಣ್ಣನ್ನು ವಂಚಿಸುವದಕ್ಕಾಗಿಯೋ ಎಂದು ತೋರುತ್ತದೆ. ಹೃದಯಿಕವಾದ ಪ್ರೀತಿ ಯಾವಾಗಲೂ ಪ್ರೇಮಿಯನ್ನು ಕರ್ತವ್ಯ ಮೂಢನನ್ನಾಗಿ ಮಾಡಲಾರದು. ರಾಮಚಂದ್ರನ ವ್ಯಕ್ತಿತ್ವದಲ್ಲಿ ಆ ದೌರ್ಬಲ್ಯ ಎದ್ದು ಕಾಣುತ್ತದೆ. ತಾರಾ ಮಹಾಸಾಧ್ವಿ, ರಾಮಚಂದ್ರನನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸಿ, ಆವನಿಚ್ಛೆಯಂತೆ ಪ್ರೇಮಕ್ಕೆ ಮೈಯೊಡ್ಡಿದಳೇ ಹೊರತು ಕಾಮಕ್ಕಾಗಿಯಲ್ಲ! ಬಸಿರಾಗಿ ಮೂರು ತಿಂಗಳ ಮೇಲೆ ಪತಿಯೊಡನೆ ಆಕೆ ಬೇಡಿದ ಬಗೆ ಕರುಳನ್ನು ಹಿಸುಕುತ್ತದೆ. ಪತಿಯೇ ಸರ್ವಸ್ವನೆಂದು ನಂಬಿದ ಆ ಸುಕೋಮಲೆಗೆ ಹೆತ್ತ ಮನೆಯಿಂದಾಗಲೀ- ಹೊಕ್ಕ ಮನೆಯಿಂದಾಗಲೀ ಆಸರ ಸಿಗಲಿಲ್ಲ. ಕೈಹಿಡಿದ ಗಂಡ ಹಿರಿಯರ ಅವಿವೇಕಕ್ಕೆ ತಲೆಬಾಗಿ, ಹೇಡಿಯಾದಾಗ ಆತ್ಮಹತ್ಯೆಯೊಂದೇ ಆಕೆಗೆ ಗತಿಯಾಯಿತು.

ರಾಮಚಂದ್ರ ಮತ್ತೆ ಪಶ್ಚಾತಾಪ ಪಟ್ಟರೂ, ಮಿಂಚಿಹೋದ ಕಾರ್ಯವನ್ನು ನೆನಸಿ ಮನೆಯವರನ್ನು ಧಿಕ್ಕರಿಸಿ ಮನೆಬಿಟ್ಟು ಹೊರಟುಹೋದನಾದರೂ ಮೊದಲು ಆವನ ಮೌಢ್ಯಕ್ಕೆ ಕನಿಕರಬರುವುದಿಲ್ಲ. ಒಬ್ಬನೇ ಮಗ ಮನೆ ಬಿಟ್ಟು ಹೋಗುವ ವೇಳೆ ತಂದೆ ತಾಯಿಗಳಲ್ಲಿಯು ಶೋಕಪ್ರದರ್ಶನ ವಿಷೇನೂ ಕಾಣುವುದಿಲ್ಲ. ತಾರಾ ರಾಮಚಂದ್ರರ ಪ್ರೇಮ ಸನ್ನಿವೇಶ ಬೇಸರವನ್ನುಂಟುಮಾಡುತ್ತದೆ. ರಾಮಚಂದ್ರ ತಾರಾಳನ್ನು ನೂರಾರು ಹೆಸರಿನಿಂದ ಪ್ರೀತಿಯಿಂದ ಕರೆಯುವುದು ಅಷ್ಟೊಂದು ಸೊಗಸಾಗಿಕಾಣುವುದಿಲ್ಲ.

ಯಥಾಪ್ರಕಾರ ಹಳೆಯ ಜನದ ದುರಾಶೆ, ಹಟಮಾರಿತನ, ಅಂಧಶ್ರದ್ಧೆಗಳ ಸನ್ನಿವೇಶ ಇಲ್ಲೂ ಇದೆ. ಸಮಾಜದ ಹಲವಾರು ಸಮಸ್ಯೆಗಳು ಇಲ್ಲಿ ತಲೆಹಾಕಿವೆ; ಪರಿಣಾಮಕಾರಿಯೂ ಆಗಿವೆ.

'ಮಗು' ಓದುವುದರಲ್ಲಿ ಉಂಟಾಗಬಹುದಾದ ಆನಂದವಾಗಲೀ, ಪರಿಣಾಮವಾಗಲೀ ರಂಗದ ಮೇಲೆ ಆಡುವುದರಿಂದ ಆಗದು. ಅಂತೂ ಮಗು ಅವಶ್ಯವಾಗಿ ಓದಬೇಕಾದ ನಾಟಕ, ಮೊದಲಿಂದ ತುದಿಯ ತನಕವೂ ಒಂದು ಬಗೆಯ ಸೆಳೆತವಿದೆ. ಕೊನೆಯಲ್ಲಿ ರಾಮಚಂದ್ರನ ಕೆಲವು ಮಾತುಗಳು ಮಹತ್ವದ್ದಾಗಿವೆ.

—ಎಸ್ಸೆಲ್

'The M- G. M- College Chronicle' — ಉಡುಪಿಯ ಎಮ್. ಜಿ. ಎಮ್. ಕಾಲೇಜಿನ ವತಿಯಿಂದ ಶ್ರೀಗಳಾದ ಎಚ್. ಸುಂದರ ರಾವ್, ಎಂ. ಎ; ಕೆ. ಎಸ್. ಕಾಮತ್ ಎಂ. ಎ; ಪಿ. ನಾರಾಯಣ ಆಯ್ಯಂಗಾರ್ ಎಂ. ಎ. ಮತ್ತು ವಿದ್ಯಾರ್ಥಿ ಪ್ರತಿನಿಧಿಗಳಾದ ಶ್ರೀ ಜಗನ್ನಾಥ ಮೂಡ್ಲಕಟ್ಟೆ, ಮಿಸ್. ಲೇನಾ ಫೆರ್ನಾಂಡೀಸರುಳ್ಳ ಸಂಪಾದಕೀಯ ಮಂಡಲಿಯ ಆಶ್ರಯದಲ್ಲಿ ರಚನೆಗೊಂಡಿರುವ ಟೈಪಾಗಿರುವ ಪತ್ರಿಕೆ. ಕಾಲೇಜಿನ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಲೇಖನ, ಕಥೆ, ಕವಿತೆ ಮುಂತಾದ ಮೇಲ್ಪಟ್ಟದ ವಿವಿಧ ಬರೆಹಗಳಿಂದ ಆಕರ್ಷಣೀಯವಿದೆ. ಕಾಲೇಜಿನ ಶುದ್ಧ, ಸುಖಮಯ, ಹಾಗೂ ಸದಾ ಚಟುವಟಿಕೆಯ ವಾತಾವರಣವು ಈ ಸಂಚಿಕೆಯ ಪುಟ ಪುಟದಲ್ಲೂ ಪ್ರತಿಬಿಂಬಿಸಿದಂತಿದೆ. ಸಂಶೋಧನಾ ವಿದ್ವಾಂಸ ಶ್ರೀ ಎಸ್. ಕೆ. ಶರ್ಮರ 'ಕೃಷ್ಣನ ಜಾಂತ್ರಿಕ ಸ್ಥಾನದಂತಹ ಘನೋಜ್ವಲ ಲೇಖನಗಳಿವೆಯಾದರೂ ಈ ಪತ್ರಿಕೆಯಲ್ಲಿ ಹೆಚ್ಚಿನವು ಲಘು ಬರಹಗಳೇ. ವಿದ್ಯಾರ್ಥಿಗಳ ಪೈಕಿ ಶ್ರೀ ಶ್ರೀಶ ಬಲ್ಲಾಳರ "ಕಾಲೇಜ್ ಕ್ರಾನಿಕಲ್‌ರೊಡನೊಂದು ಕಲ್ಪನಾ ಸಂಭಾಷಣೆ" ಮತ್ತು ಶ್ರೀ ಶ್ರೀಧರ ಆವರ "ಮಂಗನ ಸುಖ" ಎಂಬೆರಡು ವಿನೋದ ಬರಹಗಳು ಮತ್ತು ವಿದ್ಯಾರ್ಥಿನಿಯರ ಪೈಕಿ ಮಿಸ್. ಮುಕ್ತಾಬಾಯಿಯರ ಒಂದು ಸಣ್ಣ ಕಥೆ ಮತ್ತು ಮಿಸ್. ಬಲ್ಲಾಳರ ಒಂದು ವರುಷದ ಕಾಲೇಜು ಜೀವನದ ವಿಮರ್ಶೆ ಉಲ್ಲೇಖನೀಯವಿವೆ. ಕನ್ನಡ, ಸಂಸ್ಕೃತ ಮತ್ತು ಹಿಂದೀ ವಿಭಾಗಗಳನ್ನೂ ಸಂಚಿಕೆಯೊಳಗೊಂಡಿದೆ

ಕಲಾಪ್ರಜ್ಞೆ ಹಾಗೂ ಆಕರ್ಷಣೀಯ ರಕ್ಷಾ ಪುಟದಿಂದ, ಹಲವಾರು ಚಿತ್ರಗಳು, ಚಿತ್ರಗಳು ಮತ್ತು ವ್ಯಂಗ್ಯ ಚಿತ್ರಗಳಿಂದ ಸರ್ವಾಂಗ ಸುಂದರವಾಗಿರುವ ಈ ಸಂಚಿಕೆಯು ಸಾಹಿತ್ಯ ಮತ್ತು ಕಲೆಯಲ್ಲಿ ಎಮ್. ಜಿ. ಎಮ್. ಕಾಲೇಜಿನದಾಗಿರುವ ಉತ್ತಮ ದರ್ಜೆಯ ದ್ಯೋತಕ. ಅಮುದ್ರಿತ ಪತ್ರಿಕೆಗಳಿಗೊಂದು ಮೇಲ್ಪಂಕ್ತಿ.

"S"

ಅಂತರಂಗವನ್ನು
ತಪ್ಪದೆ ಓದಿರಿ

ಬೆಳೆ ಬಾಗಾಯಿಗಳ ಬಗ್ಗೆ

ನೀರಿನ ಇಂಜಿನ್ ಪಂಪು

ಉತ್ಕೃಷ್ಟ ತರಗತಿ!
ಯೋಗ್ಯವಾದ ಬೆಲೆ!!

ಮಾಹಿತಿ ಬಗ್ಗೆ ಬರೆಯಿರಿ:

G. N. Hemmady,
Goldville Engg: Works,
P B 6204, Bombay 10

ಪ್ರಕಟಣೆ

ಉಡ್ಪಿ ತಾಲೂಕು ಆಲೆವೂರು ಗ್ರಾಮದ ದೇಜು ಸೆಟ್ರ ಮಗ ಅಚ್ಚಣ್ಣ ಸೆಟ್ಟಿಯು ಈ ಮೂಲಕ ತಿಳಿಯಪಡಿಸುವದೇನಂದರೆ ನಾನು ಈ ಮೊದಲು ನಮ್ಮ ಊರಿನಲ್ಲಿ ಇರುವಾಗ ಕನ್ನಡದಲ್ಲಿ "ಅಚ್ಚಣ್ಣ ಶೆಟ್ಟಿ ರುಜು"ಯೆಂತ ದಸ್ಕತು ಮಾಡಿರುವೆನು ನಾನು ವ್ಯಾಪಾರ ನಡೆಸುತ್ತಿರುವ ಪೂನಾ ಸಿಟಿಯಲ್ಲಿ ಕನ್ನಡ ವ್ಯವಹಾರ ಇಲ್ಲದೆ ಇರುವದರಿಂದಲೂ ದಸ್ಕತಿನಲ್ಲಿ ತಂದೆಯವರ ಹೆಸರು ಅಡಕವಾಗಿರುವ ಪದ್ಧತಿ ಇರುವದರಿಂದಲೂ ನಾನು "Achanna D Shetty" ಎಂತ ಇಂಗ್ಲಿಷಿನಲ್ಲಿ ದಸ್ಕತು ಮಾಡುತ್ತಿದ್ದೇನೆ ಇನ್ನು ಮುಂದೆ ಯಾವ ಕಾಲಕ್ಕೂ ಯಾ ಅದೇ ರೀತಿ ಇಂಗ್ಲಿಷಿನಲ್ಲಿ ದಸ್ಕತು ಮಾಡುತ್ತೇನಾಗಿ ಈ ಮೂಲಕ ತಿಳಿಸಲು ಇಚ್ಛಿಸುತ್ತೇನೆ–

Achanna D Shetty

ಉಡುಪಿ, 23-10-50

ಪ್ರಕಟಣೆ

ಉಡ್ಪಿ ತಾಲೂಕು ಯೇಣಗುಡ್ಡೆ ಗ್ರಾಮದಲ್ಲಿರುವ ಅಬ್ದುಲ್ ಖಾದ್ರಿ ಬ್ಯಾರಿಗಳ ಮಗ ವೈ. ಮಹಮ್ಮದ್ ಬ್ಯಾರಿ ಸಾಹೇಬ್ ಬಹದ್ದೂರ್ ಇವರು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ–

ನಾನು ನನ್ನ ಯಾವತ್ತೂ ವ್ಯವಹಾರದ ಲೇವಾದೇವಿಗಳಲ್ಲಿ ಈ ವರೆಗೆ ಕನ್ನಡದಲ್ಲಿಯೂ ದಸ್ಕತು ಮಾಡಿದ್ದೂ ಉಂಟು ಆದರೆ ಇನ್ನು ಮುಂದೆ ಸದ್ರಿ ನನ್ನ ದಸ್ಕತನ್ನು ಈ ಕೆಳಗೆ ಕಾಣಿಸಿದ ಮೇರೆಗೆ ಇಂಗ್ಲಿಷಿನಲ್ಲಿಯೇ ಹಾಕುತ್ತೇನೆ, ಆದುದರಿಂದ ಇನ್ನು ಮುಂದೆ ನನ್ನ ವ್ಯವಹಾರದ ಲೇವಾದೇವಿಗಳಲ್ಲಿ ಇಂಗ್ಲಿಷು ದಸ್ಕತೇ ಸಿಂಧುವಾಗ ತಕ್ಕದ್ದು–

Y. Mahammad Beary Saheb,
Bahadur

ಉಡುಪಿ, 21-10-50

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ



ಹಾನಿಂಗ್ ಟಿಲ್ಲಿ ಆಯಿಲ್
ದೇವಾನುಮೋದಿತ ಔಷಧ ೧೧

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ಹಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರ ಮಾಡಲ್ಪಟ್ಟಿದೆ



ನಿಮ್ಮ ಹಾನಿಂಗ್ ಟಿಲ್ಲಿ ಹಾಲೇಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ನಿಕಟ್ರಸಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ಹಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ಹಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ಹಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ಹಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನಂಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ಹಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಕ್ಕಳನೊಟ್ಟೆನೋವು,ಕಿವಿಗಳ ಉಪದ್ರವ,ಹೆಂಗಸರ ಮುಟ್ಟಾಗುವಕಾಲದ ಆಕ್ರಮಗಳು,ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು-ಹಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0. ಹಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ.ಪಿ.ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0-0 ವಿ. ಪಿ. ಸಹಿತ. ಹಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0- ವಿ. ಪಿ. ಸಹಿತ. ಹಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫಿ.

ಪ್ರಶಂಸನಾ ಪತ್ರ- ನಾನು ನಿಮ್ಮ ಹಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ; ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ಹಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ- ಐ. ರೈಲ್ವೆ-

The Eclipse Distributing Agency.
Dahanu Road, B. B. & C I. Rly,

ಬೊಂಬಾಯಿ ಸ್ಟಾಕಿಸ್ಟರು:—ಲಕ್ಡವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2.

ಮಹಿಳಾ ಪುಟ

— "ಸ್ತ್ರೀಜನ ಚಳವಳಿ" —

ಲೇಖಕಿ: ಪಿಯರ್ ಲಕ್ಷ್ಮೀನಾರಾಯಣ ಅಳ್ವ.

ಇತ್ತೀಚೆಗೊಮ್ಮೆ ನಾನು ನನ್ನ ಭಾವನ ಜೊತೆಗೆ ಪ್ರವಾಸಗೈದ್ದೆ. ರಾತ್ರಿ ಊಟವಾದ ಬಳಿಕ ಭಾವನು, ಭಾವ ಮತ್ತು ಅಕ್ಕ ಮೂವರೂ ಕುಳಿತು ಲೋಕಾಭಿರಾಮವಾಗಿ ಸಲ್ಲಾಪ ನಡೆಸುತ್ತಿದ್ದೆವು. ಕೊರಿಯದ ಯುದ್ಧ, ತೃತೀಯ ಮಹಾಯುದ್ಧದ ಸಂಭವಾಸಂಭವಗಳು, ರಷ್ಯದ ಕುಟಿಲ ಕಾರಸ್ಥಾನ, ಅಮೇರಿಕದ ಆಕ್ರಮಣಕಾರೀ ವಿದೇಶ ನೀತಿ, ಅಸ್ಸಾಮಿನ ಭೂಕಂಪ, ಆಹಾರದ ಅಭಾವ, ಹಳ್ಳಿಗಳ ಪ್ರಗತಿಗೆ ಇಂದಿರುವ ಅಡೆತಡೆಗಳು, ಅದರ ನಿವಾರಣೆಯ ಹಾದಿ—ಹೀಗೆ ಸಾಗಿತ್ತು ಮಾತುಕತೆ. ವಿಷಯದಿಂದ ವಿಷಯಕ್ಕೆ ಹಕ್ಕಿಯಂತೆ ಹಾರುತ್ತ ಹರಿಜನ ಚಳವಳಿಯ ವಿಚಾರಕ್ಕೆ ತಲುಪಿದೆವು. ಹರಿಜನ ಚಳವಳಿ ನನಗೆ ಬಹಳ ಆಸಕ್ತಿಯುಳ್ಳ ವಿಚಾರ. ಮಾತುಕತೆಯ ನಡುವೆ ನನಗೆ ಆಸಕ್ತಿಯುಳ್ಳ ವಿಚಾರ ಬಂದರೆ ಆ ಕುರಿತಾಗಿ ನಾನು ಯಾವಾಗಲೂ ಮೈಮರೆತು ಮಾತಾಡುತ್ತೇನೆ. ಆದ್ದರಿಂದ ಅಂದು ಕೂಡಾ ಹರಿಜನ ಚಳವಳಿ ವಿಷಯಕ್ಕೆ ನಾವು ಪ್ರವೇಶಿಸಿದೊಡನೆ ನಾನು ನನ್ನ ವಾಗ್ಝರಿಯನ್ನು ಹರಿಯಬಿಟ್ಟೆ. ಹರಿಜನರ ಹಿಂದಿನ ದುಃಸ್ಥಿತಿ, ಅದರಿಂದಾಗಿ ಧರ್ಮದ ಮತ್ತು ದೇಶದ ಪ್ರಗತಿಗಾದ ತಡೆ, ಹರಿಜನರ ಈ ಹೀನ ದೀನ ಸ್ಥಿತಿಯನ್ನು ಮತ್ತು ಇದರಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯನ್ನು ಅರಿತು ಅಸ್ಪೃಶ್ಯತೆ ಎಂಬುದನ್ನೇ ಹಿಂದೂ ಧರ್ಮದಿಂದ ಕಳೆದೊಗೆಯಲು ಮಹಾತ್ಮಾ ಗಾಂಧಿಯವರು ನಡೆಸಿದ ಕೆಲಸ, ನಾವು ಈ ದೆಸೆಯಲ್ಲಿ ಮಾಡಬೇಕಾದ ಕೆಲಸ, ಹೀಗೆ ಮುಂದುವರಿಯುತ್ತಾ, ಪ್ರಾಯಶಃ ಅಕ್ಕ ನಡುವೆ ಬಾಯಿ ಹಾಕದಿರುತ್ತಿದ್ದರೆ ನಾನೊಂದು ಭಾಷಣವನ್ನೇ ಕೊಡುತ್ತಿದ್ದೆ. ಆದರೆ ಅಕ್ಕ ನನ್ನನ್ನು ನಡುವೆ ತಡೆದು ಮೆಲ್ಲನೇ ಆದರೆ ತೀಕ್ಷ್ಣವಾಗಿ "ಹರಿಜನ ಚಳವಳಿಯನ್ನು ವ್ಯವಸ್ಥಿತವಾಗಿ ಸಾಗಿಸಲು ಮಹಾತ್ಮರು ಒಂದು ಸಂಸ್ಥೆಯನ್ನೇ ಕಟ್ಟಿದರು. ಆ ಸಂಸ್ಥೆ ಇಂದು ಆ ದೆಸೆಯಲ್ಲಿ ಯಶಸ್ವಿಯಾಗಿ ಮುಂದುವರಿಯುತ್ತಿದೆ. ಜನ ಕೂಡಾ ಈ ಚಳವಳಿಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ. ಆದರೆ ಸ್ತ್ರೀಯರ ಉನ್ನತಿಗಾಗಿ ಮಹಾತ್ಮರು ಪ್ರಯತ್ನಿಸಿದರೂ ಜನ ಈ ದೆಸೆಯಲ್ಲಿ ಮುಂದುವರಿಯುತ್ತಿಲ್ಲ. "ಸ್ತ್ರೀ ಜನ ಚಳವಳಿ" ಪುರುಷ ವರ್ಗಕ್ಕೆ ಬಹಳಷ್ಟು ಆಸಕ್ತಿಯುಳ್ಳದಾಗಿ ಪರಿಣಮಿಸಿಲ್ಲ. ಪ್ರಾಯಶಃ ಇದು ತಮ್ಮ ಬಾಳಿನಲ್ಲೇ ಜರಗಬೇಕಾದ ಒಂದು ಸುಧಾರಣೆಯಾದುದರಿಂದ ಗಂಡಸರು ಈ ಕಾರ್ಯದಲ್ಲಿ ಇನಿತು ಹಿಂದೆ ಬಿದ್ದಿರಬಹುದು! ಆದರೂ ಮಾನವ ಪ್ರೇಮಿಗಳು, ಸಮಾಜದ ಉನ್ನತಿಯನ್ನು ಆಶಿಸುವವರು, ದೇಶದ ಪ್ರಗತಿಗಾಗಿ ಹಾತೊರೆಯುವವರು, ಈ ದೆಸೆಯಲ್ಲಿ ಕಾರ್ಯ ಪ್ರವರ್ತರಾಗದೆ ನಿರ್ವಾಹವಿಲ್ಲ. ಸ್ತ್ರೀಜನ ಚಳವಳಿಯು ಯಶಸ್ವಿಯಾಗಿ ಮುಂದರಿದರೆ ಮಾತ್ರ ನಮ್ಮೆಲ್ಲರ ಕನಸುಗಳು ನನಸುಗಳಾದಾವು" ಎಂದಳು. ನಾನು ಅಂದು ಆ ಮಾತನ್ನು ನಗೆಯ ಮಹಾಪೂರದಲ್ಲಿ ಕೊಚ್ಚಿಬಿಟ್ಟೆ. ಕೆಲವೊಂದು ಕಡೆ ನಮ್ಮ ತಪ್ಪನ್ನು ಮರೆಮಾಚಲು ಕರ್ತವ್ಯದಿಂದ ನುಣುಚಿಕೊಳ್ಳಲು ನಗೆಯು ಬಹಳಷ್ಟು ಸಹಕಾರಿಯಾಗುತ್ತದೆ, ಎಂಬುದರ ಅರಿವು ಅಂದೆ ನನಗಾಯಿತು.

ಅಂದೇನೋ ಆ ಮಾತನ್ನು ನಾನು ನಗೆಯ ಪ್ರವಾಹದಲ್ಲಿ ತೇಲಿಸಿಬಿಟ್ಟರೂ ಇಂದು ಆ ಮಾತಿನ ಮೊನೆ ಈಟಿಯಂತೆ ನನ್ನನ್ನು ತಿವಿಯುತ್ತಿದೆ. ಆ ನಗ್ನ ಸತ್ಯದ ತೀಕ್ಷ್ಣ ಕರಧಾರೆ ಅಲಗಿನಂತೆ ನನ್ನ ಹೃದಯವನ್ನು ಇರಿಯುತ್ತಿದೆ. ಆ ಮಾತುಗಳ ಹಿನ್ನೆಲೆಯಲ್ಲಿ ಅಡಗಿರುವ ಅಪಾರ ವೇದನೆಯ ಅರಿವು ಎನಗಾಗುತ್ತಿದೆ. ಹಿನ್ನೆಲೆಯ ಚಿತ್ರ ಸ್ಪಷ್ಟವಾಗಿ ಕಣ್ಣೆದಿರಾಗುತ್ತಿದೆ. ಇಡೀ ನಾರೀ ಲೋಕದ ಕರುಣಗಾಥೆ ಆ ಮಾತಿನ ಹಿಂದೆ ಮೌನವಾಗಿ ಮಲಗಿರುವಂತೆ ಭಾಸವಾಗುತ್ತಿದೆ. ಆದ್ದರಿಂದಲೇ ಇಂದು ನನಗೆ ಆ ಮಾತುಗಳು ಅಕ್ಕನ ಒಬ್ಬಳ ಮಾತಾಗಿ ಕೇಳುತ್ತಿಲ್ಲ, ಗಂಡಸಿನ ಹುಚ್ಚು ಒಡೆತಕ್ಕೆ ಬಲಿಯಾಗಿ "ಸತ್ತ ಬಾಳುವೆ"ಯನ್ನು ಬಾಳುತ್ತಿರುವ ಸಾವಿರಾರು ಅಕ್ಕಂದಿರ ಹೃದಯದಿಂದ ಹರಿದು ಬಂದ ಮೊರೆಯಾಗಿ ಕೇಳುತ್ತಿದೆ; ಸಿಡಿದು ಬಂದ ಗರ್ಜನೆಯಂತೆ ಭಾಸವಾಗುತ್ತಿದೆ. ನಮ್ಮ ನಾಡಿನ ಸಾವಿರ ಸಾವಿರ ನಾರಿಯರು ಇಂದು ತಮ್ಮ ಮನೆಗಳಲ್ಲಿ, ಗಂಡಂದಿರಲ್ಲಿ, ಅಣ್ಣ ತಮ್ಮಂದಿರಲ್ಲಿ ಇದೇ ಮೊರೆಯನ್ನಿಡುತ್ತಿರಬಹುದು. ಆದರೆ ಅವುಗಳಲ್ಲಿ ಹೆಚ್ಚಿನವು ಅವ್ಯಕ್ತ ರೋದನ, ಮೂಕ ಮೊರೆ. ಕಾರಣ ಅವರಿಗೆ ಬಾಯಿ ಬಿಚ್ಚುವ ಅಧಿಕಾರವಿಲ್ಲ. ನಾರಿಯರ ಬೇಡುವ ಬಾಯಿಗೆ ಕೂಡಾ ಸಮಾಜದ ನ್ಯಾಯಶಾಸ್ತ್ರ ಬೀಗ ಹಾಕಿದೆ. ಆ ಮೂಲಭೂತ ಹಕ್ಕಿನ ಮೇಲೂ ಗಂಡಿನ ಅಧಿಕಾರದ ಗದೆ ನೇತಾಡುತ್ತಿದೆ.

ತತ್ವಗಳನ್ನು ವೇದಿಕೆಯ ಮೇಲೆ ನಿಂತು ಉಪದೇಶಿಸಲಿಕ್ಕೆ, ಉದ್ದೇಶವಿರಹಿತವಾಗಿ ಹರಟೆ ಹೊಡೆಯುತ್ತಿರುವಾಗ ನಡುವೆ ಬಳಸಿಕೊಳ್ಳಲಿಕ್ಕೆ ಬಹಳ ಸುಲಭ. ತನ್ನನ್ನು ಬಿಟ್ಟು ಉಳಿದವರನ್ನು ಈ ಮಾನದಂಡದಿಂದ ಅಳೆಯಲು ಇನ್ನೂ ಸುಲಭ. ಆದರೆ ಅವುಗಳನ್ನು ತನ್ನ ನಿತ್ಯ ವ್ಯವಹಾರದಲ್ಲೇ ಬಳಸಿಕೊಳ್ಳಲು, ಬಾಳಿನಲ್ಲೇ ಅರಗಿಸಿಕೊಳ್ಳಲು ಮಾತ್ರ ಬಹಳ ಕಷ್ಟ. ಆದ್ದರಿಂದಲೇ ನಾವು ತತ್ವಗಳನ್ನು ಬಾಳಿನಲ್ಲಿ ಇಳಿಸಿಕೊಳ್ಳದೆ ಮಾತಿನ ಮಲ್ಲತನದಲ್ಲೇ ಗೊನೆಗೊಳಿಸುತ್ತೇವೆ. ಇದೇ ರೀತಿ ಹೆಣ್ಣಿನ ಉನ್ನತಿಯು ಹೆಚ್ಚಿನ ಪಾಲು ಗಂಡಿನ ಮಾತಿನಲ್ಲೇ ಮುಕ್ತಾಯವಾಗಿದೆ. ಅದರಿಂದ ಬಹಳಷ್ಟು ಮುಂದೆ ಸಾಗಿಲ್ಲ.

ತತ್ವಗಳ ಮಟ್ಟಕ್ಕೆ ಏರಲಾರದ ದುರ್ಬಲ ವ್ಯಕ್ತಿ ತತ್ವಗಳನ್ನೇ ತನ್ನ ಮಟ್ಟಕ್ಕೆ ಎಳೆದುಕೊಳ್ಳುತ್ತಾನೆ; ಅಂದರೆ ಆ ತತ್ವಗಳಲ್ಲಿ ತನಗೆ ಬೇಕಾದುದನ್ನು ಉಳಿಸಿ ಬೇಡವಾದುದನ್ನು ಬಿಟ್ಟುಬಿಡುತ್ತಾನೆ. ಮತ್ತು ಸಮಾಜದ ಮುಂದೆ, ಹಾಗೆ ವಿಕೃತಗೊಳಿಸಲ್ಪಟ್ಟ ತತ್ವಗಳೇ ಸಮಾನಾದುದು ಎಂದು ಸಾರುತ್ತಾನೆ. ಹೀಗೆ ಇಂದು ಸ್ತ್ರೀಯರ ಹಕ್ಕು ಬಾಧ್ಯತೆಗಳು ಕೂಡಾ ಗಂಡಿನ ಕತ್ತರಿಗೆ ಸಿಕ್ಕಿ ಅದರಲ್ಲಿ ಆತ ಉಳಿಸಿದಷ್ಟು ಮಾತ್ರ ಉಳಿದಿವೆ ಮತ್ತು ಇದೇ ಸಮನಾದುದು ಎಂದು ಪುರುಷರಿಂದ ಸಾರಲ್ಪಡುತ್ತಿದೆ

ಸ್ತ್ರೀಜನ ಚಳವಳಿಯು ಕೆಲವರ ಅಂಧವಿಶ್ವಾಸದಿಂದ ಹಿಂದುಳಿದಿದ್ದರೆ, ಕೆಲವರ ಸ್ವಾರ್ಥದಿಂದ ಮುಂದುವರಿದಿಲ್ಲ; ಮಾತ್ರವಲ್ಲ ಇನ್ನು ಕೆಲವರ ಆಲಸ್ಯ ಕೂಡಾ ಈ ಚಳವಳಿಯ ಪ್ರಗತಿಯನ್ನು ಕುಂಠಿತಗೊಳಿಸಿದೆ. ಸ್ತ್ರೀಜನ ಚಳವಳಿಯ ಕುರಿತಾಗಿ ಮಾತೆತ್ತಿದ ಕೂಡಲೇ ಆ ಮಂದಿ ಹಲವಾರು ಬಗೆಯಿಂದ ವಾದಿಸಿ ತಮ್ಮ ಹೊಣೆ ತಪ್ಪಿಸಿಕೊಳ್ಳಲು ಹವಣಿಸುತ್ತಾರೆ. ಕೆಲವರು "ಎಲ್ಲೀ! ಇನ್ನು ಹೆಂಗಸರ ಉನ್ನತಿಗಾಗಿ ದುಡಿಯುವ ಅವಶ್ಯಕತೆಯಿಲ್ಲ. ಅವರು ಈಗಲೇ ಸಾಕಷ್ಟು ಮುಂದುವರಿದಿದ್ದಾರೆ. ಅವರಲ್ಲಿ ವಿದೇಶ ರಾಯಭಾರಿಗಳಿದ್ದಾರೆ, ಗವರ್ನರರಿದ್ದಾರೆ, ಮಂತ್ರಿಗಳಿದ್ದಾರೆ ....." ಎನ್ನುತ್ತಾರೆ. ಇದೇನೋ ಕೇಳಲು ರಮ್ಯವಾಗಿದೆ. ಆದರೆ ಈ ವಾದ ತಮ್ಮ ಕರ್ತವ್ಯದಿಂದ ನುಣುಚಿಕೊಳ್ಳಲು ಒಂದು ಹಾದಿಯೇ ಹೊರತು ಬೇರಲ್ಲ. ಭಾರತದ ಹದಿನೈದು ಕೋಟಿಗೂ ಮಿಕ್ಕಿ ಸಂಖ್ಯೆಯುಳ್ಳ ಹೆಂಗಸರಲ್ಲಿ ಬರೇ ಹತ್ತು ಹದಿನೈದು ಮಂದಿಯನ್ನು ಕಂಡು ಉಳಿದವರ ಯೋಗ್ಯತೆಯನ್ನು ನಿರ್ಣಯಿಸುವುದೆಂದರೆ, ಬಿರ್ಲಾ, ಡಾಲ್ಮಿಯರನ್ನು ಕಂಡು ಹಿಂದುಸ್ಥಾನದ ಕೋಟಿ ಕೋಟಿ ಜನಸಾಮಾನ್ಯರ ಆರ್ಥಿಕ ಮಟ್ಟವನ್ನು ಅಳೆದಂತೆಯೇ ಸರಿ. ಹೆಂಗುಸರು ಇಂದು ಮುಂದುವರಿಯುತಿದ್ದಾರೆ ಎಂಬುದು ನಿಜ. ಆದರೆ ಅಂತಹ ಪ್ರಗತಿಯೊಂದು ಪೇಟೆಯಲ್ಲಿ ಮಾತ್ರ ಕಾಣುತ್ತಿದೆ. ಅದರಲ್ಲೂ ಕೆಲವರು "ಪ್ರಗತಿ ಪ್ರಗತಿ" ಎಂದುಕೊಂಡು ಅಡ್ಡಹಾದಿಗಿಳಿಯುತಿದ್ದಾರೆ. ಇಂತಹ ಅವ್ಯವಸ್ಥೆ ಅಳಿಯಬೇಕು. ಹಳ್ಳಿ ಹಳ್ಳಿಗಳಲ್ಲೂ ಸ್ತ್ರೀಯರ ಉನ್ನತಿಯ ಕಾರ್ಯ ಜರಗಬೇಕಾಗಿದೆ. ವ್ಯಕ್ತಿ ವ್ಯಕ್ತಿಯಲ್ಲೂ ಒಂದು ನೂತನ ಕ್ರಾಂತಿ ಜರಗಬೇಕಾಗಿದೆ. ಆದರೆ ಸ್ತ್ರೀಯರ ಪ್ರಗತಿಯ ತೇರು ಭಾರತೀಯ ಮಹಿಳೆಯರ ಉನ್ನತ ಸಂಸ್ಕೃತಿಗೆ ಅನುಸಾರವಾಗಿ ಪವಿತ್ರ ಮಾರ್ಗವಿಡಿದು ಸಾಗಬೇಕಾಗಿದೆ. ಇದಕ್ಕೆಲ್ಲ ಗಂಡಸಿನ ಉತ್ಸಾಹೀ ಸಹಕಾರದ ಅವಶ್ಯಕತೆಯಿದೆ.

ಇನ್ನು ಕೆಲಮಂದಿ "ಸ್ತ್ರೀಯರ ಉನ್ನತಿಯ ಕಾರ್ಯದಲ್ಲಿ ಗಂಡಸರೇನು ಮಾಡಬಲ್ಲರು? ಅದು ಸ್ತ್ರೀಯರದೇ ಕೆಲಸ" ಎನ್ನುತ್ತಾರೆ. ಈ ವಾದವಂತೂ ಬುದ್ಧಿಗೇಡಿತನದ ಪರಮಾವಧಿಯಲ್ಲದೆ ಮತ್ತೇನು? ಆ ಮಂದಿ 'ಹರಿಜನರ ಉನ್ನತಿಯನ್ನು ಹರಿಜನರೇ ಸಾಧಿಸಬೇಕು.' ಎಂದವರಿಗೆ ಮಹಾತ್ಮಾಗಾಂಧಿಯವರು ಕೊಟ್ಟ ಉತ್ತರವನ್ನೇ ಓದಿಕೊಳ್ಳುವುದೊಳಿತು. ಹೆಣ್ಣಿನ ಪ್ರಗತಿ ಗಂಡನ್ನೇ ಹೊಂದಿಕೊಂಡಿದೆ, ಎಂಬುದು ಸ್ವಯಂ ಸ್ಪಷ್ಟ.

ಕೆಲಮಂದಿ "ಹಿಂದೂಕೋಡು ಬರುತ್ತದಲ್ಲಾ, ಆಗ ಸ್ತ್ರೀ ಪುರುಷರಿಗೆ ಸಮಾನ ಸ್ಥಾನಮಾನಗಳು ತನ್ನಿಂದ ತಾನೇ ದೊರಕುತ್ತವೆ. ಆದ್ದರಿಂದ ಇನ್ನು ಮಹಿಳೆಯರ ಉನ್ನತಿಯ ಬಗ್ಗೆ ಹೋರಾಡುವ ಅವಶ್ಯಕತೆಯಿಲ್ಲ" ಎನ್ನುತ್ತಾರೆ. ಈ ವಾದವಂತೂ ಹುರುಳಿಲ್ಲದ್ದು. ಕಾನೂನು ಜಾರಿಗೆ ಬಂದಕೂಡಲೇ ಜಾದೂವಿನಂತೆ ಎಲ್ಲವೂ ಸರಿಹೋಗುವಂತಿದ್ದರೆ ನಮ್ಮ ಸರಕಾರಗಳಿಗೆ ಬಹಳ ಸುಲಭವಾಗುತ್ತಿತ್ತು. ಇಂದು ನೂರಾರು ಕಾನೂನುಗಳು ಜಾರಿಯಾಗುತ್ತಿವೆ; ಆದರೆ ಅವ್ಯೊಂದೂ ಕಾರ್ಯಕಾರಿಯಾಗುತ್ತಿಲ್ಲ. ಕಾರಣ ಜನತೆಯ ಸಹಕಾರವಿಲ್ಲ. ಆದ್ದರಿಂದ ಯಾವುದೇ ಕಾನೂನು ಬಂದರೂ ಪುರುಷ ವರ್ಗದ ಸಹಕಾರವಿಲ್ಲದೆ ಸ್ತ್ರೀಯರ ಪ್ರಗತಿ ಎಂದಿಗೂ ಸಾಧ್ಯವಿಲ್ಲ ಎಂಬುದು ಎಂತಹ ಗಾವಿಲನೂ ತಿಳಿಯುವಂತಹ ಮಾತೇ.

ಮಹಾತ್ಮಾ ಗಾಂಧಿಯವರೊಮ್ಮೆ ಹರಿಜನ ಸಮಸ್ಯೆಯ ಕುರಿತಾಗಿ ಮಾತಾಡುತ್ತಾ "ತಮ್ಮ ಹಿಂದಿನ ಪರಂಪರೆಯವರು ಮಾಡಿದ ಪಾಪದ ಪ್ರಾಯಶ್ಚಿತ್ತ" ಎಂಬ ದೃಷ್ಟಿಯಿಂದ ಮೇಲಿನ ವರ್ಗದವರು ಹರಿಜನ ಸೇವೆಯನ್ನು ಮಾಡಬೇಕಾಗಿದೆ" ಎಂದರು. ಇದೇ ಮಾತು ಇಂದು ಪುರುಷ ಲೋಕಕ್ಕೂ ಅನ್ವಯಿಸುತ್ತದೆ. ಶತಮಾನ ಶತಮಾನಗಳ ಹಿಂದಿನಿಂದ ಪುರುಷ ಲೋಕವು ಮಾಡಿಕೊಂಡು ಬಂದ ಪಾಪದ ಪ್ರಾಯಶ್ಚಿತ್ತ ರೂಪವಾಗಿ ನಾವಿಂದು ಸ್ತ್ರೀಯರ ಸ್ವಾತಂತ್ರ್ಯ, ಉನ್ನತಿಗಳಿಗಾಗಿ ಹೆಣಗಬೇಕಾಗಿದೆ. ಇಂದಾದರೂ ಈ ದೆಸೆಯಲ್ಲಿ ಕಾರ್ಯಪ್ರವರ್ತರಾಗದಿದ್ದರೆ ನಾವು ನಮ್ಮ ಅಧೋಗತಿಯ ಜೊತೆಗೇ ಮುಂದಿನ ಪೀಳಿಗೆಯ ಅವನತಿಗೂ ಕಾರಣಭೂತರಾಗುತ್ತೇವೆ.

ಜೀವನದ ಚರಮೋದ್ದೇಶವನ್ನು ಬಲ್ಲ ಗಂಡು ಹೆಣ್ಣಿನ ಉನ್ನತಿಗೆ ಹೆಣಗುವದರಲ್ಲಿ ಎಂದೂ ಹಿಂದೆ ಬೀಳಲಾರ. ಬಾಳತೇರು ಅಡೆತಡೆಗಳಿಲ್ಲದೆ ಉತ್ಸಾಹ ಸಂಭ್ರಮಗಳ ಬೀದಿಯಿಂದಲೇ ಸಾಗಬೇಕಾದರೆ ಗಂಡು ಹೆಣ್ಣು ಸಮನಾಗಿ, ಜೊತೆಯಾಗಿ ಹೆಜ್ಜೆಹಾಕದೆ ನಿರ್ವಾಹವಿಲ್ಲ. ರಥಕ್ಕೆ ಹೂಡಿದ ಎರಡು ಕುದುರೆಗಳಲ್ಲಿ ಯಾವುದೇ ಒಂದು ಅಬಲವಾದರೂ ಉಳಿದೊಂದೂ ಮುಂದೆ ಸಾಗಲಾರದೆ ರಥದ ಗತಿಯೇ ಕುಂಠಿತವಾಗುವಂತೆ ಗಂಡು ಹೆಣ್ಣಿನ ಬಾಳುವೆ ಕೂಡಾ. ಗಂಡು ಹೆಣ್ಣಿನ ಪರಸ್ಪರ ಸಹಕಾರವಿಲ್ಲದ ಸಂಸಾರ ಸಾರಹೀನವಾಗುತ್ತದೆ. ಆ ಬಾಳಿನಲ್ಲಿ ಸಂತಸವಿಲ್ಲ. ಸಂತಸ ಸಂಭ್ರಮಗಳಿಲ್ಲದ ಬಾಳು ಬಾಳಲ್ಲ, ಬೀಳು. ಆದ್ದರಿಂದ ಬಾಳಗುಟ್ಟನ್ನರಿತ ಗಂಡು ಸ್ತ್ರೀಜನ ಚಳವಳಿಯಲ್ಲಿ ಉತ್ಸಾಹದಿಂದ ಕಾರ್ಯ ಪ್ರವರ್ತನಾದಾನೆಂದು ನಂಬಬಹುದಾಗಿದೆ.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD



Highly perfumed and medicated, worth using daily by one and all keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P.O. Brahmavar, S.K.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಳಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—
ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕೆಮಿಸ್ಟ, ಶಿಮೊಗ್ಗ, ಹಾವೇರಿ, ಬ್ಯಾಡಗಿ

ವಾರ ಭವಿಷ್ಯ

ತಾರೀಕು 26-10-1950ರಿಂದ ತಾ. 1-11-1950ರ ವರೆಗೆ.

ಮೇಷ— ಈ ವಾರದಲ್ಲಿ ನಿಮ್ಮ ಪ್ರಯತ್ನವು ಫಲಿಸುವದು. ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗುವಿರಿ. ಜನಾನುರಾಗಕೂ ಪಾತ್ರರಾಗುವಿರಿ ಆದರೆ ಆರೋಗ್ಯ ಭಾಗವು ಮಾತ್ರ ಉತ್ತಮವಿಲ್ಲ ಮಾತ್ರವಲ್ಲ, ಮನೋರೋಗವು ಕೂಡ ಮೇಲಿಂದ ಮೇಲೆ ಬಾಧಿಸುತ್ತಿರುವದು. ಕೋರ್ಟು ಕಚೇರಿಗಳ ಕಾರ್ಯಗಳಿಗೆ ಕಾಲವು ಪ್ರತಿಕೂಲವಿದೆ. ಪ್ರಯಾಣಕ್ಕೂ ಸಮಯವು ಅನುಕೂಲವಾಗಿಲ್ಲವು ತಾ. 28, 29ರಲ್ಲಿ ಧನಮಾನಗಳಿಗೆ ಹಾನಿಯೊದಗುವ ಸಂಭವವಿದೆ.

ವೃಷಭ— ಇಷ್ಟಕ್ಕಿಂತ ಅನಿಷ್ಟವು ದ್ವಿಗುಣವಾಗಿರುವುದು. ಪ್ರಯತ್ನಕ್ಕೆ ತಕ್ಕ ಫಲ ಪ್ರಾಪ್ತಿಯಿದೆಯಾದರೂ ಖರ್ಚುವೆಚ್ಚಗಳು ಅತಿಯಾಗುವುದರಿಂದ ಮರ್ಯಾದೆಯಿಂದ ಕಾಲ ಕಳೆವುದು ಕಷ್ಟವಾದೀತು. ವಿನಾ ಕಾರಣ ಕಲಹಗಳು ಗಂಟು ಬೀಳುವವು. ವೈದ್ಯರು ವ್ಯಾಪಾರಿಗಳು ಹೊರತಾಗಿ ಇತರ ವರ್ಗದವರಿಗೆ ಸಮಯವು ಪ್ರತಿಕೂಲವಾಗಿರುವುದು. ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಸದಾ ದುಃಖ ಭಾಗಿಗಳಾಗಲಿರುವಿರಿ. ತಾ. 26, 27, 30, 31, 1 ಈ ದಿನಗಳಲ್ಲಿ ಖರ್ಚುಗಳು ಹೆಚ್ಚುವವು ದೇಹಾಲಸ್ಯವೂ ತೋರೀತು.

ಮಿಥುನ—ಗೃಹತಾಪತ್ರಯಗಳಿಂದಲೂ ವ್ಯರ್ಥ ಖರ್ಚುಗಳಿಂದಲೂ ದೇಹಾಲಸ್ಯದಿಂದಲೂ ನಿಮ್ಮ ಮನಸ್ಸು ಉದ್ವಿಗ್ನಗೊಂಡೀತು. ಆದರೂ ಗುರು ಶುಕ್ರರ ಅನುಗ್ರಹವು ನಿಮಗಿರುವುದರಿಂದ ದಿನಯಾಪನೆಯು ಕಷ್ಟವಾಗಲಾರದು ಉದ್ಯಮದಲ್ಲಿ ಸಾಕಷ್ಟು ಫಲ ಪ್ರಾಪ್ತಿಯಿರುವದು ಸಮಾಜದಲ್ಲಿ ಮಾನ ಮನ್ನಣೆಗಳು ಲಭಿಸುವವು ಮನಶ್ಚಾಂಚಲ್ಯದಿಂದಾಗಿ ನೀವು ಕೆಲವೊಮ್ಮೆ ಅಕಾರ್ಯ ಪ್ರವೃತ್ತರಾಗಿ ಪಶ್ಚಾತ್ತಾಪಕ್ಕೆ ಗುರಿಯಾಗಲಿರುವಿರಿ. ತಾ. 28, 29 ಒಳ್ಳೆಯುದಿಲ್ಲವು.

ಕರ್ಕಟ—ಸಾಹಸಿಗಳಾದ ನೀವು ಹೆಚ್ಚಿನ ಕಾರ್ಯಗಳಲ್ಲಿ ವಿಜಯವನ್ನು ಸಂಪಾದಿಸುವಿರಿ. ಜನತೆಯ ಬೆಂಬಲವೂ ಆರ್ಥಿಕ ಭಾಗವೂ ಉತ್ತಮವಿರುವುದರಿಂದ ನೀವಾವ ತಾಪತ್ರಯಕ್ಕೂ ಸಿಲುಕದೆ ಸುಖದಿಂದ ಕಾಲ ಕಳೆವಿರಿ. ನಿಮ್ಮ ಧೈರ್ಯ ಸಾಹಸಗಳಿಗೆ ಬೆದರಿದ ಶತ್ರು ವರ್ಗದವರು ನಿಮ್ಮ ಮೈತ್ರಿಯನ್ನಪೇಕ್ಷಿಸಲಿರುವರು. ಆಕಸ್ಮಿಕ ಪ್ರವಾಸದಿಂದಾಗಿ ನಷ್ಟ ಕಷ್ಟಗಳೊದಗುವ ಸಂಭವವಿದೆ. ವಾರಾಂತ್ಯದ 3 ದಿನಗಳಲ್ಲಿ ಜಾಗರೂಕರಾಗಿರಿ.

ಸಿಂಹ— ಸುಖ ದುಃಖಗಳಿಂದ ಸಮ್ಮಿಶ್ರವಾದ ಈ ವಾರದಲ್ಲಿ ಹಲವಾರು ಖರ್ಚುಗಳು ನಿಮಗೆ ಪ್ರಾಪ್ತವಾಗುವವಾದರೂ ದೈವಬಲದಿಂದಾಗಿ ಅಡಚಣೆಯಲ್ಲಿ ಸಿಲುಕಲಾರಿರಿ. ನಿರ್ದಾಕ್ಷಿಣ್ಯವಾದಿಗಳಾದ ನಿಮಗೆ ಎಲ್ಲರೂ ತಲೆ ಬಾಗುವರು. ಕೆಲವೊಮ್ಮೆ ಈಪ್ಸಿತ ವಸ್ತುಗಳ ಅಭಾವದಿಂದಲೂ ಮಕ್ಕಳು ಮರಿಗಳ ದೇಹಾಲಸ್ಯದಿಂದಲೂ ಖೇದಗೊಳ್ಳುವಿರಾದರೂ ವಾರಾಂತ್ಯದ 5 ದಿನಗಳು ಸುಖಮಯವಾಗಿ ಪರಿಣಮಿಸಲಿವೆ.

ಕನ್ಯಾ—ಜನ್ಮಕ್ಕೆ ಬಂದ ಶನಿಯೂ ಸುಖಸ್ಥಾನವನ್ನು ಹೊಂದಿದ ಅಂಗಾರಕನೂ ರೋಗಸ್ಥಾನಗತ ಗುರುವೂ ನಿಮ್ಮನ್ನು ಅಪ್ತೇಷ್ಟರ ವಿರಹ, ದೇಶಾಟನ, ಶತ್ರುಪೀಡೆ, ದೇಹಾಲಸ್ಯ, ಮರ್ಮರೋಗಾದಿ ವಿಪತ್ತುಗಳಿಗೆ ಗುರಿಪಡಿಸಲಿರುವರು, ಆದರೂ ಹಣದ ಮುಗ್ಗಟ್ಟು ಅಷ್ಟೊಂದು ಕಾಣಿಸಲಾರದು. ದುರ್ಜನರ ಸಹವಾಸದಿಂದ ಜನವಿರೋಧಕ್ಕೆ ಗುರಿಯಾಗಲಿರುವಿರಿ. ವಾರಾದಿಯ 4 ದಿನಗಳು ರಾಜ ಭಯ, ಅನಾರೋಗ್ಯಕಾರಿಗಳಿವೆ.

ತುಲಾ—ದೈವಾನುಗ್ರಹದಿಂದ ನಿಮಗೆ ಆದಾಯವೂ ಜನಮನ್ನಣೆಯೂ ಚೆನ್ನಾಗಿರುವುದು. ಹೆಚ್ಚಿನ ಕಾರ್ಯಗಳಲ್ಲಿ ವಿಜಯವೂ ಲಭಿಸಲಿರುವುದು, ವಿನಾಕಾರಣ ಕಲಹವಾಗುವ ಸಂಭವವಿದೆ. ಶ್ರಮಜೀವಿಗಳಿಗೆ ದಿನಯಾಪನೆಯು ಸ್ವಲ್ಪ ಕಷ್ಟವಾದೀತು ವಾರಾದಿಯ 2 ದಿನ ಸಕಲ ಕಾರ್ಯಗಳಿಗೂ ಶ್ರೇಯಸ್ಕರವಿದೆ

ವೃಶ್ಚಿಕ—ಶತ್ರು ವರ್ಗದವರ ಹಂಚಿಕೆಗಳ ನಡುವೆ ನೀವು ಸಿಲುಕಿಬೀಳಲಿರುವಿರಿ. ಮಾತ್ರವಲ್ಲ ಅವರ ಕಾರಸ್ಥಾನದಿಂದಾಗಿ ನಿಮ್ಮ ಕಾರ್ಯಗಳೆಲ್ಲವೂ ಮಧ್ಯದಲ್ಲೇ ಕುಂಠಿತವಾಗಿ ನಿಲ್ಲಲಿವೆ. ಆಪ್ತಜನರ ವಿರೋಧ, ಆರ್ಥಿಕ ಬಿಕ್ಕಟ್ಟು, ದೇಹಾನಾರೋಗ್ಯ ಇವುಗಳಿಂದ ಪೀಡಿತರಾದ ನಿಮಗೆ ವಾರಾದಿಯ 4 ದಿನಗಳಲ್ಲಿ ಮಿತ್ರವರ್ಗದವರಿಂದಲೂ ಭೃತ್ಯ ಜನತೆಯಿಂದಲೂ ಸುಖಸಮ್ಮದಿಗಳು ಲಭಿಸಲಿವೆ.

ಧನು— ಬಹು ಸಮಯದಿಂದ ನಿಮ್ಮ ದುರ್ದೈವವು ನಿಮ್ಮನ್ನು ಪೀಡಿಸುತ್ತಿತ್ತಾದರೂ ಇಂದೀಗ ಸ್ವಲ್ಪ ಆಶೆಯ ಕಿರಣವು ನಿಮ್ಮ ಜೀವನದಲ್ಲುದ್ಭವಿಸಿದಂತಿದೆ, ಆದಕಾರಣ ನೀವು ನಿಮ್ಮ ಖರ್ಚುವೆಚ್ಚಗಳನ್ನು ಸ್ವಯಮೇವ ಸಾಗಿಸಲು ಸಮರ್ಥರಾಗಿರುವಿರಿ. ಸ್ಥಾನ ಪಲ್ಲಟ, ದೇಶಾಟನಾದಿಗಳ ಯೋಗವಿದೆ ವಾರಾಂತ್ಯದ 5 ದಿನಗಳಲ್ಲಿ ಗೃಹಸುಖಲಾಭ, ವಿಷಯಗಳು ಲಭಿಸುವವು.

ಮಕರ—ಆಧಿವ್ಯಾಧಿಗಳಿಂದಲೂ ಸಣ್ಣಪುಟ್ಟ ಪ್ರವಾಸಗಳಿಂದೂ ನಿಮ್ಮ ಖರ್ಚು ಆದಾಯವನ್ನು ಅತಿಕ್ರಮಿಸಲಿದೆ. ಆಪ್ತೇಷ್ಟರೂ ಬಂಧುವರ್ಗದವರೂ ನಿಮ್ಮಿಂದ ದೂರವಾಗುವರು ಸುಮ್ಮಸುಮ್ಮನೆ ಜನರೊಡನೆ ಕಲಹವಾಗುವದು. ಪಿತ್ಥಪ್ರಕೋಪಾದಿಗಳಿಂದ ನಿದ್ರಾಭಾವವುಂಟಾದೀತು ರಾಜಕೀಯ ಕ್ಷೇತ್ರದಲ್ಲಿ ವ್ಯರ್ಥಖರ್ಚುಗಳೂ ಪರಾಭವವೂ ಪ್ರಾಪ್ತವಾಗಲಿವೆ. ಆದರೆ ನೀವು ಕೈಕೊಂಡ ಕಾರ್ಯಗಳು ನಿರರ್ಗಲವಾಗಿ ಮುಂದರಿಯಲಿವೆ. ವಾರಾಂತ್ಯದ 3 ದಿನ ಉತ್ತಮ.

ಕುಂಭ—ಸದ್ಯ ನಿಮ್ಮ ದುರ್ವಿಧಿಯು ನಿಮ್ಮನ್ನು ಬಹುವಾಗಿ ಪೀಡಿಸುತ್ತಿದೆ. ನೀವೆಷ್ಟೇ ದುಡಿಯಿರಿ ದಿನಾಂತ್ಯದಲ್ಲಿ ರಿಕ್ತಹಸ್ತರಾಗುವಿರಿ. ಸದಾ ಒಂದಲ್ಲೊಂದು ತೆರನಾದ ದೇಹಪೀಡೆಯು ನಿಮ್ಮನ್ನು ಪೀಡಿಸುತ್ತಿರಬಹುದು, ಆದರೆ ಸಮಾಜದಲ್ಲಿ ನಿಮಗೆ ಒಳ್ಳೇಸ್ಥಾನಮಾನಗಳು ಲಭಿಸುವವು, ದುಡುಕುವ ಸ್ವಭಾವದಿಂದಾಗಿ ನೀವು ಕಷ್ಟನಷ್ಟಗಳಿಗೆ ಗುರಿಯಾಗಲಿರುವಿರಿ ವಾರಾದಿಯ 2 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲವು

ಮೀನ— ವಿದ್ಯೋದ್ಯೋಗಿಗಳಿಗೂ ನ್ಯಾಯವಾದಿಗಳಿಗೂ ಈ ವಾರವು ಚೆನ್ನಾಗಿ ಲಾಭಕಾರಿಯಾಗಿದೆ. ಖರ್ಚು ಬಹುವಾಗಿದ್ದರೂ ಆಕಸ್ಮಿಕ ಧನಾಗಮನ ಯೋಗವಿರುವುದರಿಂದ ನಿಮಗೆ ತಾಪತ್ರಯವಾಗಲಾರದು. ಆಲಸ್ಯದಿಂದಾಗಿ ವೃಥಾ ಕಾಲಯಾಪನೆ ಮಾಡುವಿರಿ. ಕೈಗೆಬಂದ ತುತ್ತು ಬಾಯಿಗೆ ಬರಲಿಲ್ಲವೆಂಬಂತಹ ಅನೇಕ ಪ್ರಸಂಗಗಳು ನಿಮಗೊದಗಲಿವೆ. ತಾ. 28, 29, ಈ ದಿನಗಳು ಕಿಂಚಿತ್ಸುಖದಿಂದ ಕಳೆವವು.

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಲಿಮಿಟೆಡ್

ಸ್ಥಾಪಿತ 1906

ಕರಭಾರದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು

ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ಕಬ್ಬಿನ ಆಲೆಕಣೆ

2 ಹೋರಿಯಿಂದ ಸುಲಭ ತಿರುಗುವಂಥ ಅತಿ ಉತ್ತಮ ದರ್ಜೆಯ ಗಾಣಗಳು. ದರ 1ಕ್ಕೆ ರೂ 465/- ಗಂಗೊಳ್ಳಿ ಯಾ ಮಲ್ಪೆ ಬಂದರ ಡಿಲಿವರಿ

ಬರೆಯಿರಿ:

G. N. Hemmady,
Goldville Engg: Works,
P B 6204, Bombay 10



Approved from by the Govt, of Mysore
Certificated by the Agent of the Govt of
Cylone & Indian,

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರೆಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹತ್ತೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಧುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಶೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

ನೋಟೀಸು

O. S. No. 413/1950

ಇರ್ವತ್ತೂರು ಅಧೀಶ್ವರ ಸ್ವಾಮಿದೇವರ ಭಂಡಾರ, ಯಿದರ ಮೊಕ್ತೇಸರ ಪದ್ಮರಾಜಯಿಂದ್ರ —ವಾದಿ

ಮತ್ತು

1) ಬಾಬು ಮ್ಹೊಲಿ, 2) ಅಂಗರ ದೇವಡಿಗ —ಪ್ರತಿವಾದಿರು

ಯಿವರೊಳಗೆ

ಪ್ರತಿವಾದಿರು.- 1) ಬಾಬು ಮ್ಹೊಲಿ, ಜಾತಿ ಹೆಂಗ್ಸಿನ ಮಗ, ಬೇಸಾಯಗಾರ ಕಾರ್ಕಳ ತಾಲ್ಲೂ ಇರ್ವತ್ತೂರು ಗ್ರಾಮದ ಅಪ್ಪಜಾಲು ಅಸ್ತಿಗೆ ಸಳಪಟ್ಟ ಮಿತ್ತಬೆಟ್ಟು ಎಂಬಲ್ಲರುವವ 2) ಅಂಗರ ದೇವಡಿಗ, ಕೊರಗ ದೇವಡಿಗನ ಅಳಿಯ ಮ 1ನೇ ಪ್ರತಿವಾದಿಯ ತಮ್ಮ, ಬೇಸಾಯಗಾರ, ಕಾರ್ಕಳ ತಾಲ್ಲೂ ಇರ್ವತ್ತೂರು ಗ್ರಾಮದ ಬಸ್ತಿಬೆಟ್ಟು ಎಂಬಲ್ಲಿರುವವ

ಸದರಿ ಪ್ರತಿವಾದಿಂಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ವಾದಿಯು 2ನೇ ಪ್ರತಿವಾದಿಯ ಮೇಲೆ ಚಾಲಗೇಣಿ ಅಸ್ತಿಯ ಗೇಣಿ ಬಾಕಿ ಬಗ್ಗೂ ಅಸ್ತಿ ಸ್ವಾಧೀನತೆ ವಗ್ಯೆರೆ ಬಗ್ಗೂ ದಾಖಲ್ ಮಾಡಿದ ಈ ಕೋರ್ಟು ಕ್ರಮನಂಬ್ರ 361/1947ನೇ ದಾವೆಯಲ್ಲಿ 2ನೇ ಪ್ರತಿವಾದಿಯ ಮೇಲೆ ಪಡದ ಸ್ವಾಧೀನತೆ ಡಿಕ್ರಿಯ ಮೇಲೆ ವಾದಿಯು ದಾಖಲ್ಲ ಮಾಡಿದ R. E. P. No 392/1949ನೇ ಅಮಲ್ದಾರಿಯಲ್ಲಿ ಸದ್ರಿ ಡಿಕ್ರಿಯಲ್ಲಿ ವಿವರ್ಸಿದ ಅಸ್ತಿ ಸ್ವಾಧೀನತೆ ಬಗ್ಗೆ ಸದ್ರಿಕೋರ್ಟು ಅಮೀನರನ್ನು ಕರಕೊಂಡು ಹೋದ್ದಲ್ಲಿ ಸದ್ರಿ ಅಸ್ತಿಯಲ್ಲಿ 2ನೇ ಪ್ರತಿವಾದಿಯು ವಕ್ಲೇ ಅಗಿರುವ್ವದಿಲ್ಲವಾಗಿಯೂ ಸದ್ರಿ ಅಸ್ತಿಯನ್ನು ತನ್ನ ಕುಟುಂಬದ ಕಡೆಯಿಂದ ವಾದಿ ದೇವರ ಭಂಡಾರದ ಅಡ್ಡಿ ನೋಡಿಕೊಂಡು ಬರುವ ಇರ್ವತ್ತೂರು ಪಟೇಲ ಶಾಂತಿರಾಜ ಕಡಂಬರ ವಳಗೆ ಚಾಲಗೇಣಿ ತಾನು ಅನುಭವಿಸಿ ಬರುವುದಾಗಿ 1ನೇ ಪ್ರತಿವಾದಿಯು ಕೊಟ್ಟ ಅತಂಕವನ್ನು ತೆಗೆದು ಹಾಕಬೇಕಾಗಿ ವಾದಿಯು ಪ್ರತಿವಾದಿರ ಮೇಲೆ ದಾಖಲ್ಲ ಮಾಡಿದ R. E A. No. 387/1949ನೇ ಅರ್ಜಿಯಲ್ಲಿ ಅಪೂರ್ಣ ತೀರ್ಪಿಯಿಂದ ಕೊಡೋಣಾದ ಹುಕುಮನ್ನು ರದ್ದು (Vacate) ಮಾಡಿಸುವರೆ ಅಗತ್ಯವುಳ್ಳ ಡಿಕ್ಲೇರೇಷನ್ ವಗ್ಯೆರೆ ನಿವೃತ್ತಿಗಳನ್ನು ಕೇಳಿ ವಾದಿಯು ಪ್ರತಿವಾದಿರ ಮೇಲೆ ದಾಖಲ್ಲ ಮಾಡಿದ ಸದ್ರಿ ಕ್ರಮ ನಂಬ್ರ 413/1950ನೇ ದಾವೆಯು ಯಿದೇ ಬರುವ ತಾ. 6-11-1950ಕ್ಕೆ ಪ್ರತಿವಾದಿರ ಹಾಜರಾತಿ ಬಗ್ಗೆ ಯಿಡೋಣಾಗಿಯದೆ. ಅ ದಿವಸ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದ್ರಿ ಪ್ರತಿವಾದಿರ ಗ್ಯೆರು ಹಾಜರಿಯಿಂದ ಸದ್ರಿವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಈ ಮೂಲಕ ತಿಳಿಸೋಣಾಗಿಯದೆ, ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat
ವಾದಿಕಡೆ ವಕೀಲ್

ಕಾರ್ಕಳ 15-10-1950

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

Estd. 1921 ಸ್ಥಾಪನೆ.
31ನೇ ವರ್ಷ

2—11—1950

Founder: Sri A. B. Shetty,
Minister for Agriculture & Veterinary.

ನವ ಯುಗ

ವರ್ಷ ೩೧
ವಾರ ೯

NAVAYUGA
WEEKLY

POST BOX NO. 22
UDIPI, S. K.

Vol. 31
No. 9

ಒಳಕಂಟಕ ಅಪಾಯಕರ!

ಹೊರಗಿನ ವಿರೋಧಕ್ಕಿಂತ ಒಳಗಿನ ವೈರವು ಅಪಾಯಕರವಾದುದು; ಪರಕೀಯ ಸ್ಪರ್ಧೆಗಿಂತ ಸ್ವಕೀಯ ಮತ್ಸರವು ಅಸಹ್ಯವಾದುದು; ಆದ್ದರಿಂದಲೇ ಇಂದು ಗೃಹಸುಧಾರಣೆ, ಆತ್ಮಶುದ್ಧೀಕರಣದಂತಹ ಒಳಮುಖೀ ವಿಧಾನಗಳ ಕಡೆಗೇನೇ ವಿಚಾರಿಗಳ ವಿಶೇಷ ಲಕ್ಷ್ಯ ಸಹಜವಾಗಿ ಬೀಳುತ್ತಿದೆ.

ಯಾವ ರಾಷ್ಟ್ರವೇ ಇರಲಿ, ಒಳಗಡೆಯ ದೋಷದೌರ್ಬಲ್ಯಗಳಿಂದ ಮತ್ತು ಒಳಗಡೆಯಲ್ಲಿ ಸಮರ ನಡೆದೇ ಯುದ್ಧದಲ್ಲಿ ಪತನಗೊಂಡುದಿದೆ ಹೊರತು ಪರರಾಜ್ಯದ ಮೇಲೆ ದಂಡೆತ್ತಿ ಹೋಗಿ ಪರಾಭವಗೊಂಡುದರಿಂದ ನಾಶವಾದುದಿಲ್ಲ.

ಕ್ರೈಸ್ತ ಮತ್ತು ಪಾಶ್ಚಾತ್ಯ ರಾಷ್ಟ್ರಗಳಾದ ಇಂಗ್ಲಾಂಡು ಮತ್ತು ಜರ್ಮನಿ—ಬೌದ್ಧ ಮತ್ತು ಪೌರ್ವಾತ್ಯ ರಾಷ್ಟ್ರಗಳಾದ ಚೀನಾ ಮತ್ತು ಜಪಾನ್— ಪರಸ್ಪರ ಹೋರಾಡಿಕೊಂಡುದೇ ಮಹಾಯುದ್ಧ ಮೂಲವಾಯಿತೆಂಬುದನ್ನು ಮರೆಯಬಾರದು.

ಭಾರತದೊಳಗಿನ ರಾಜರು ತಮ್ಮೊಳಗೆ ದ್ವೇಷಾಸೂಯೆ ಕಟ್ಟಿಕೊಂಡು ಹೋರಾಡುತಿದ್ದ ದೆಸೆಯಿಂದಲೇ ಬ್ರಿಟಿಷರಿಗೆ ಆ ಕಾಲದಲ್ಲಿ ಭಾರತವನ್ನು ಹಿಡಿದುಕೊಳ್ಳಲು ಸಾಧ್ಯವಾಗಿದ್ದಿತು; ಭಾರತೀಯರೊಳಗೆ ಜಾತಿಭೇದ, ಗುಲಾಮ ಮನೋವೃತ್ತಿಯಂತಹ ದೋಷ ದೌರ್ಬಲ್ಯಗಳಿದ್ದ ದೆಸೆಯಿಂದಲೇ ಸುಮಾರು ಎರಡು ಶತಮಾನಗಳ ವರೆಗೆ ಭಾರತವನ್ನು ಆಳಿಕೊಂಡಿರಲು ಆಂಗ್ಲೇಯರು ಶಕ್ತರಾದರು.

ಪರಕೀಯ ಬ್ರಿಟಿಷ್ ಸರಕಾರವು ಮಾಡಿದ ಬಂಗಾಳಾ ವಿಭಜನೆಯು ಕೂಡಲೇ ರದ್ದಾಗಬೇಕಾಗಿ ಬಂದಿದ್ದರೂ ಸ್ವಕೀಯ ಮುಸ್ಲಿಂ ಲೀಗಿನವರು ಸಾಧಿಸಿದ ಪಾಕಿಸ್ತಾನವೊಂದು ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂತು; ರಾಷ್ಟ್ರವು ಇಬ್ಭಾಗವಾಗಿ ಹೋಯಿತು.

ಮಹಾತ್ಮಾ ಗಾಂಧಿಯವರೊಡನೆ ಎಷ್ಟು ತೀಕ್ಷ್ಣ ಭಿನ್ನಾಭಿಪ್ರಾಯಗಳಿದ್ದರೂ ಬ್ರಿಟಿಷರಾಗಲೀ, ಮುಸ್ಲಿಂ ಲೀಗಿನವರಾಗಲೀ ಮಾಡಲು ತಯಾರಿರದಂತಹ 'ಗಾಂಧೀ ಕೊಲೆ'ಯನ್ನು ಮಾಡಿದವನು ಓರ್ವ ಹಿಂದುವೇ.

ಒಂದು ರಾಷ್ಟ್ರದ ಅಜ್ಞಾನ, ಅಸಡ್ಡೆ, ಆಲಸ್ಯಗಳಿಂದ ಉತ್ಪತ್ತಿ ಕಡಿಮೆಯಾಗಿ ಸಾಮಾಗ್ರಿಗಳ ಅಭಾವವುಂಟಾಗುವಂತೆ ಪರರಾಷ್ಟ್ರಗಳ ಸೂರೆ, ಸುಲಿಗೆಗೊಳಗಾಗಿ ಅಂತಹ ಕೊರತೆಯುಂಟಾಗುವಂತಿಲ್ಲ; ಭಾರತದ ಸದ್ಯಸ್ಥಿತಿಯೇ ಇದಕ್ಕೆ ನಿದರ್ಶನ.

ಕಾಲು ಶತಮಾನದ ಅಂತರದಲ್ಲಿ ನಡೆದ ಎರಡು ಜಾಗತಿಕ ಯುದ್ಧಗಳಿಂದ, ಹಾಗೂ ಅವುಗಳ ಹಿಂದುಮುಂದಿನ ಎಲ್ಲಾ ಹೋರಾಟಗಳಿಂದ ಸತ್ತವರ ಸಂಖ್ಯೆಗಿಂತ ಎಷ್ಟೋ ಪಾಲು ಹೆಚ್ಚಿಗೆ ರೋಗರುಜೆಗಳಿಂದ ಈ ಅವಧಿಯಲ್ಲಿ ಸತ್ತಿದ್ದಾರೆ.

ಜನರ ಆಸ್ತಿಪಾಸ್ತಿ, ಹಣ, ಸೊತ್ತು ಮುಂತಾದುವುಗಳು ಸ್ವಂತ ದುಂದು ವೆಚ್ಚಗಳಿಂದ ನಷ್ಟವಾಗುವಷ್ಟು ಕಳವು, ಸುಲಿಗೆಗಳಿಂದ ಕಳೆದು ಹೋಗುತ್ತಿಲ್ಲ.

ಯಾರು ಏನೆಂದರೂ, ಹಿಂದೂಸಮಾಜದೊಳಗಿರುವ ಜಾತಿಭೇದ, ಮೂಢಸಂಪ್ರದಾಯದಂತಹ ದೋಷ, ದೌರ್ಬಲ್ಯಗಳಿಂದ ಈ ಸಮಾಜಕ್ಕಾಗಿರುವಷ್ಟು ಹಾನಿಯನ್ನು ಪರಧರ್ಮೀಯರ ಯಾವ ಅಚಾರ ಅನಾಚಾರಗಳೂ ಹಿಂದೂ ಧರ್ಮಕ್ಕೆ ಮಾಡಿಲ್ಲ.

ಕಲಾವಿದರೊಳಗ — ನೆರೆಮನೆಯವರೊಳಗೆ—ಸಮಾನ ಸ್ಥಾನ, ಜೀವನಾನುಭವಿಗಳೊಳಗೆ—ಒಂದೇ ತಾಯಿ ಮಕ್ಕಳೊಳಗೆ—ಪರಸ್ಪರ ದ್ವೇಷ ಮತ್ತು ಮೇಲಾಟವಿರುವಂತೆ ಅನ್ಯರ ಸಂಬಂಧದಲ್ಲಿಲ್ಲ. ಸಿವಿಲ್, ಕ್ರಿಮಿನಲ್ ವ್ಯಾಜ್ಯ ವ್ಯವಹಾರಣಗಳಲ್ಲಿ ಅಧಿಕ ಸಂಖ್ಯೆಯವು ಸಂಬಂಧಿಕರೊಳಗಿನವೇ ಇವೆ.

ಎರಡು ಶ್ವಾನಗಳು ಕಚ್ಚಾಡಿಕೊಳ್ಳುವಂತೆ, ಎರಡು ಕೋಣಗಳು ಹಾಯ್ದುಕೊಳ್ಳುವಂತೆ, ಒಂದು ಜಾತಿಯ ಪ್ರಾಣಿ ಮತ್ತೊಂದು ಜಾತಿಯ ಜಂತುವಿನೊಡನೆ ಜಗಳ ಕೊಡುವುದಿಲ್ಲ.

ಒಳಗಡೆಯ ಜಾತಿಭೇದ, ಪಕ್ಷ ಕಲಹ, ಮುಷ್ಕರ, ಮತ್ತಿತರ ಸ್ವಾರ್ಥ ಸಂಕುಚಿತ ಧೋರಣೆಗಳಿಂದ ಭಾರತಕ್ಕೆ ಇರುವಂತಹ ಅಪಾಯವು, ಪಾಕಿಸ್ತಾನದಂತಹ ನೆರೆ ರಾಷ್ಟ್ರಗಳ ಯಾವ ಆಚರಣೆಯ ದೆಸೆಯಿಂದಲೂ ಒದಗದು.

ಒಳಗಡೆ ಸಂಚು ವಂಚನೆ, ಮತ್ತು ವಿಚ್ಛೇದನಾ ಕೃತ್ಯಗಳನ್ನು ನಡೆಸುವ ಪಂಚಮದಳದವರಿಗೆ ಅಂಜಬೇಕಾದಷ್ಟು, ಖಾಡಾಖಾಡಿ ಯುದ್ಧಕೊಡುವ ವೈರಿದಳಗಳಗಂಜಬೇಕೆಂದಿಲ್ಲ.

ಅತ್ಯಾಚಾರ, ಅನ್ಯಾಯ, ಅಪಮಾನಗಳ ದೆಸೆಯಿಂದಾಗುವ ಮಾನಸಿಕ ಆಘಾತದಷ್ಟು ಯಾತನೆಯನ್ನು ದೈಹಿಕ ಜಖಮು ಮಾಡುವಂತಿಲ್ಲ.

ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಹೋರಾಟಗಳನ್ನು ಹೂಡುತಿದ್ದ ಆ ಕಾಲದಲ್ಲಿ ಭಾರತೀಯರು ಪ್ರದರ್ಶಿಸಿದ್ದ ಕುಂದುಕೊರತೆಗಳನ್ನು ಕಂಡೇ ಪ್ರತಿ ಬಾರಿಯೂ ಅವರು ತಮ್ಮ ಹೋರಾಟಗಳನ್ನು ನಿಲ್ಲಿಸಿಕೊಂಡಿದ್ದರಲ್ಲದೆ ಬ್ರಿಟಿಷ್ ಸರಕಾರದ ದಬ್ಬಾಳಿಕೆಗೆ ಅಂಜಿ ಅಲ್ಲ.

ಮನೆಯೊಳಗೆ ತುಂಬಿರುವ ಕಸ, ಕಲ್ಮಶಗಳು ಹೇಸಿಕೆಯನ್ನಿಸುವಂತೆ ಮತ್ತು ಅನಾರೋಗ್ಯ ಹೇತುಗಳಾಗುವಂತೆ ಹೊರವಲಯದವುಗಳಾಗಲಾರವು.

ತಾನು ಅಜ್ಞಾನಿ, ಅಸಹಾಯಕ ಅಥವಾ ಅಸ್ತವ್ಯಸ್ತ ಬುದ್ಧಿಯ ಮನುಷ್ಯನಾಗಿದ್ದರೇನೇ ಪರಕೀಯರ ಒತ್ತಡ, ಅತ್ಯಾಚಾರ ಅಥವಾ ಗುಲಾಮಗಿರಿಯೊದಗೀತು ಹೊರತು ಸ್ವಜ್ಞಾನ, ಸ್ವಾವಲಂಬಿಯಾಗಿದ್ದರೆ ಎಂದಿಗೂ ಅಂತಹದಕ್ಕವಕಾಶವೊದಗದು.

ಸ್ವತಃ ತನ್ನೊಳಗೇನೇ ಶಂಕೆ, ಸಂದೇಹ, ಅವಿಶ್ವಾಸ ಮತ್ತು ಚಾಂಚಲ್ಯ ಕಟ್ಟಿಕೊಂಡವನು ಅನುಭವಿಸುವಂತಹ ಸಂಕಟವನ್ನು ಅನ್ಯರ ಸಂಶಯಕ್ಕೀಡಾದವನು ಅನುಭವಿಸಲಾರ.

ಅಂತೂ ಒಳಿತು, ಕೆಡುಕು, ಎರಡರಲ್ಲೂ 'ತನ್ನದೇ ತನಗೆ' ಹೊರತು ಅನ್ಯರದು ತನಗೆಂದಿಗೂ ಆಗುವಂತಿಲ್ಲ. ಆದ್ದರಿಂದಲೇ 'ತಾನು ಒಳ್ಳೆಯವನಾದರೆ ಊರು ಒಳ್ಳೆಯದು' ಎಂಬ ಮಾತು ವಾಡಿಕೆಯಲ್ಲಿದೆ.

ದೂಷಣೆ ಮತ್ತು ಶ್ಲಾಘನೆಯಿರಬಾರದು—ವಿಚಾರ ಮತ್ತು ತುಲನಾತ್ಮಕ ಬುದ್ಧಿ ಮಾತ್ರವಿರಬೇಕು. ಉಪಕಾರವನ್ನು ಮತ್ತು ಉಪದೇಶವನ್ನು ಆಧರಿಸಿರುವ ಸ್ಥಿತಿ ಮತ್ತು ಮತಿಯಿರಬಾರದು—ಸ್ವಬುದ್ಧಿ, ಸ್ವಾವಲಂಬನೆಯಿರಬೇಕು. ಈ ನೀತಿ ಎಲ್ಲರಿಗೂ ಲಗುವಾದಲ್ಲಿ ಪ್ರತಿಯೊಬ್ಬರೂ ಉತ್ತಮರಾಗುವಂತೆ, ವಾತಾವರಣವು ತಿಳಿಗೊಂಡೀತು; ಪ್ರಗತಿಸಾಧನೆಯಾದೀತು.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲೀದೆ ಛಟ್ಟೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಕೆಂಪು ಚೈನಾ ಟಿಬೇಟ್ ಆಕ್ರಮಿಸಿತು!

ಸ್ವತಂತ್ರ ಭಾರತದ ಪಾಲಿಗೆ ಪ್ರಸ್ತುತ ಅತ್ಯುಗ್ರಹದಾಯೀ ಪರದೇಶ ಸಂಬಂಧಗಳೆಂದರೆ, ತನ್ನ ನೆರೆವಲಯ ಟಿಬೇಟನ್ನು ಚೈನದ ಕಮ್ಯೂನಿಸ್ಟರಾಕ್ರಮಿಸಿಕೊಂಡುದು ಒಂದು; ಗೋವೆಯಂತಹ ಕೆಲವು ನೆಲೆಗಳಲ್ಲಿ ಪರಕೀಯಾಡಳಿತೆಯಿನ್ನೂ ಉಳಿದಿರುವುದು ಮತ್ತೊಂದು. ಗುಲಾಮಗಿರಿಯು ಸ್ಮಶಾನ ಶಾಂತಿಯನ್ನೊದಗಿಸುತ್ತದೆಂದರೆ, ಸ್ವಾತಂತ್ರ್ಯವು ಜೀವಂತ ಗೊಂದಲಗಳನ್ನು ಹೊತ್ತುಕೊಂಡೇ ಸಾಗಬೇಕಾಗುತ್ತದೆ. ಭಾರತಕ್ಕೆ ಈ ವರೆಗೂ ಇಂತಹ ಅನುಭವಗಳಾಗುತ್ತಾ ಬಂದಿವೆ. ಇಲ್ಲಿ ಬ್ರಿಟಿಷ್ ಆಳ್ವಿಕೆಯಿದ್ದಾಗ, ರಾಷ್ಟ್ರಕ್ಕೆ ಸಂಬಂಧಪಟ್ಟ ಎಲ್ಲಾ ವಹಿವಾಟುಗಳನ್ನೂ ನಿರ್ವಹಿಸಲು ಪರಕೀಯರಿದ್ದರು; ಭಾರತೀಯರು ಪ್ರೇಕ್ಷಕರಾಗಿಯೋ ವಿಮರ್ಶಕರಾಗಿಯೋ ದೂರವುಳಿದು ಬೇಜವಾಬ್ದಾರಿಕೆಯ ಸುಖವನುಭವಿಸಬಹುದಾಗಿದ್ದಿತು; ಸ್ವಾತಂತ್ರ್ಯ ಬಂತು—ಅದರೊಂದಿಗೆ ಹಿಂದೀಯರ ಪಾಲಿಗೆ ತೀರಾ ಹೊಸ ಅನುಭವಗಳಾದ ಕಷ್ಟಾತಂಕಗಳೂ ಬಂದುವು. ಈ ಕಂಟಕಗಳನ್ನು ಇದಿರಿಸುವ-ಸಮಸ್ಯೆಗಳನ್ನು ಬಿಡಿಸುವ—ಅನ್ಯರಿಲ್ಲದಿರುವುದರಿಂದ ಭಾರತವೇ ಆ ಸಾಹಸವನ್ನು ಮಾಡಬೇಕಾಗಿ ಬಂದಿದೆ. ಸ್ವಾತಂತ್ರ್ಯವು ಅಭಿಮಾನ ಮತ್ತು ಆನಂದವನ್ನಷ್ಟೇ ಒದಗಿಸುವಂತಹದಲ್ಲ; ಹೊಣೆಗಾರಿಕೆಗಳನ್ನು ತಂದೊಡ್ಡಿ, ಅಗ್ನಿಪರೀಕ್ಷೆಗಳಿಗೊಳಪಡಿಸುವಂತಹದೂ ಇದೆ; ಸ್ವಾತಂತ್ರ್ಯದ ಆದಿ ಭಾಗದಲ್ಲಂತೂ ಕಷ್ಟನಷ್ಟ ಸಹನೆಯ ಸಂದರ್ಭಗಳೇ ಹೊರತು ಸುಖಾನುಭೋಗದ ಸುಯೋಗವೆಂಬುದಿಲ್ಲ. ಮೂರು ವರುಷ ಕಳೆದ ಸ್ವಾತಂತ್ರ್ಯದಲ್ಲಿರುವ ಭಾರತವು, ಈ ಪಾಠವನ್ನು ಇಡೀ ಜಗತ್ತಿಗೇನೇ ಕಲಿಸಿಕೊಡಲಾಗುವ ಮಾದರಿಯಲ್ಲಿ ಇಂದು ಮೇಲಿಂದ ಮೇಲೆ ಹೊಸ ಸಮಸ್ಯೆಗಳಿಗೀಡಾಗುತ್ತಾ ಬಂದಿದೆ. ಇದು ಸಾಭಾವಿಕ, ಮತ್ತೀ ಪರೀಕ್ಷೆಯಲ್ಲಿ ಗೆದ್ದೇ ಸ್ವಾತಂತ್ರ್ಯಾರ್ಹತೆಯನ್ನು ಜಗತ್ತಿಗೆ ತೋರಿಸಬೇಕು, ಹಾಗೂ ದೃಢಪಡಿಸಿಕೊಳ್ಳಬೇಕು,ಎಂಬುದನ್ನು ಮರೆಯಬಾರದು.

ಟಿಬೇಟ್ ಆಕ್ರಮಣ

ಭಾರತದ ಗಡಿಗೆ ತಾಗಿಕೊಂಡೇ ಇರುವ ಟಿಬೇಟನ್ನು ಚೈನೀ ಕಮ್ಯೂನಿಸ್ಟ್ ಸೇನೆಗಳು ಏಕಾಏಕಿ ಆಕ್ರಮಿಸಿಕೊಂಡ ವಾರ್ತೆ ಬಾಂಬು ಸ್ಫೋಟದಂತೆ ಒಕ್ಟೋಬರ್ ತಾ. 25ರಲ್ಲಿ ಸ್ಫೋಟಗೊಂಡಿತು. ಟಿಬೇಟು, ಈ ಕಡೆಯಿಂದ ಭಾರತ, ಆ ಕಡೆಯಿಂದ ಚೈನಾದೊಂದಿಗೆ ಸಮಾನ ಸಂಬಂಧವುಳ್ಳ ಪರ್ವತ ತಗ್ಗಿನ ವಲಯ. ಲೋಕದ ದೃಷ್ಟಿಗೆ ಯಾರ ಕಣ್ಣಿಗೂ ವಿಶೇಷತಃ ಬೀಳದ ಕತ್ತಲೆಕೋಣೆಯಂತಿದೆ. ಭಾರತದಲ್ಲಿ ಬ್ರಿಟಿಷ್ ಅಧಿಕಾರವಿದ್ದಾಗ, ಬ್ರಿಟಿಷ್ ಏಜಂಟರ ಮೂಲಕವೇ ಅಗತ್ಯವುಳ್ಳ ವಿದೇಶೀ ಸಂಬಂಧಗಳನ್ನು ಟಿಬೇಟ್ ಇಟ್ಟುಕೊಂಡಿದ್ದಿತಲ್ಲದೆ, ತನ್ನ ಸ್ವಂತ ಪರದೇಶೀ ಧೋರಣೆಯೆಂಬುದು ಅದಕ್ಕಿಂದಿಲ್ಲ. ಕಳೆದ 36 ವರುಷಗಳಿಂದಲೂ ಟಿಬೇಟಿನ ಮೇಲೆ ಚೈನದ ಸಾರ್ವಭೌಮಾಧಿಕಾರವಿದ್ದಿತು. ಚೈನದ ...ಧಿಕಾರ [illegible] ವಣೆಯ [illegible] ವ್ಯಾಪಿಸಿದ್ದಾಗ, ಬ್ರಿಟನಿನಂತಹ ಪಾಶ್ಚಾತ್ಯ ರಾಷ್ಟ್ರಗಳ ಪ್ರೇರಣೆಯಿಂದ, ಟಿಬೇಟು ಚೈನವನ್ನು ಕಡೆಗಣಿಸುವ ಚಿಹ್ನೆ ತೋರಿಸಿದುದಿದೆ. ಚೈನದಲ್ಲಿ ಕಮ್ಯೂನಿಸ್ಟ್ ಸರಕಾರ ಸ್ಥಾಪನೆಯಾದ ಮೇಲೆ, ಟಿಬೇಟನ್ನದು ತನ್ನ ರಾಷ್ಟ್ರದೊಂದು ಭಾಗವೆಂದೇ ಗಣಿಸಿ, ಅದರ ಮೇಲೆ ಬ್ರಿಟನು ಅಮೇರಿಕಗಳ ವರ್ಚಸ್ಸೇನೂ ಉಳಿಯಬಾರದೆಂಬ ಧೋರಣೆ ವಹಿಸಿತು. ಆದಕ್ಕಾಗಿ ಟಿಬೇಟನ್ನು ಆಕ್ರಮಿಸಿಕೊಳ್ಳುವ ಸಂಕಲ್ಪವನ್ನು ಅದು ಎಂದೋ ಮಾಡಿದ್ದಿತು. ಚೈನದಂತಹ ರಾಷ್ಟ್ರಕ್ಕೆ ಟಿಬೇಟಿನಂತಹ ಅನಾಥ ನೆಲೆಯನ್ನು ಹಿಡಿದುಕೊಳ್ಳುವದು ಕೇವಲ ಕಾಸುಗಳ ಕೆಲಸ. ಆದರೆ ಭಾರತವು ಈ ಕುರಿತು ಚೈನೀ ಕಮ್ಯೂನಿಸ್ಟ್ ಸರಕಾರವನ್ನು ಮೇಲಿಂದ ಮೇಲೆ ಸವಿನಯವಾಗಿ ವಿಚಾರಿಸುತ್ತಾ ಬಂದಿದ್ದಿತು. ಟಿಬೇಟಿನ ಮೇಲೆ ಚೈನಕ್ಕಿರುವ ವಿಶಿಷ್ಟಾಧಿಕಾರವನ್ನು ಒಪ್ಪಿಕೊಂಡು ಶಾಂತ ಹಾಗೂ ವಿಧಾಯಕ ವಿಧಾನಗಳಿಂದಲೇ ಅಲ್ಲಿ ನ್ಯಾಯ ಸ್ಥಾಪನೆ ಮಾಡಬೇಕಲ್ಲದೆ ದಡುಕಬಾರದು, ಎಂದು ಭಾರತ ಸರಕಾರವು ಚೈನೀ ಸರಕಾರವನ್ನು ಕೇಳಿಕೊಂಡಿದ್ದಿತು. ಭದ್ರತಾ ಕೌನ್ಸಿಲಿನಲ್ಲಿ ಕಮ್ಯೂನಿಸ್ಟ್ ಚೈನಕ್ಕೆ ಸ್ಥಾನ ದೊರಕಿಸಿ ಕೊಡಲು ಒದ್ದಾಡುತ್ತಿರುವ ಭಾರತದ ಮೇಲೆ ಆಧುನಿಕ ಚೈನಕ್ಕೆ ಸಹಜವಾಗಿ ಅಂತರಿಕ ಸೌಹಾರ್ದತೆ ಮೂಡಿರುವುದರಿಂದ ತಾವು ವಿಧಾಯಕ ವಿಧಾನಗಳಿಂದಲೇ ಟಿಬೇಟ್ ವ್ಯವಸ್ಥೆ ನಿರ್ವಹಿಸುವೆವೆಂಬ ಆಶ್ವಾಸನೆಯು ಚೈನಾ ಸರಕಾರದಿಂದ ದೊರೆತಿದ್ದಿತು. ಆದರೀಗ ಚೈನೀ ಸರಕಾರದ ಆಜ್ಞಾನುಸಾರವಾಗಿ, ಚೈನೀ ಕಮ್ಯೂನಿಸ್ಟ್ ಸೇನೆ ಟಿಬೇಟಿನೊಳಗೆ ನುಗ್ಗಿದೆ.

ಮುಂದೇನು?

ಅಖಿಲ ಟಿಬೇಟು ಅಖಂಡಾಕಾರದಿಂದ ನಿಂತರೂ ಚೈನದ ಸೇನೆಯನ್ನು ಇದಿರಿಸಲು ಸಾಧ್ಯವಿಲ್ಲ ಈಗಂತೂ ಟಿಬೇಟು ಒಕ್ಕಟ್ಟೆಂಬುದಿಲ್ಲ. ಅಧಿಕಾರ ಮತ್ತು ಧರ್ಮಗುರುವಿನಂತಿರುವ 14ನೇ ದಲಾಯಿ ಲಾಮಾನ ವಿರುದ್ಧ ಈಗ ಕೆಂಪು ಚೈನಾದ ಧಾಳಿ ನಡೆದಿದೆಯಾದರೆ ಪಾಂಚೆನ್ ಲಾಮಾನನ್ನು ಚೈನೀ ಕಮ್ಯೂನಿಸ್ಟ್ ಸರಕಾರವು ಭದ್ರವಾಗಿ ಪೆಕಿಂಗ್‌ನಲ್ಲಿಟ್ಟುಕೊಂಡು, ಮುಂದೆ ಅವನ ತಲೆಗೆ ಮುಕುಟವೇರಿಸುವ ಹವಣಿಕೆಯಲ್ಲಿರುವಂತೆ ಕಾಣುತ್ತಿದೆ. ಹಿಮಾಲಯ ಪ್ರದೇಶದಲ್ಲಿ 470000 ಚದರ ಮೈಲು ವಿಸ್ತೀರ್ಣವಿರುವ ಟಿಬೇಟಿನಲ್ಲಿರುವುದು ಕೇವಲ 30 ಲಕ್ಷ ಜನ. ಅಲ್ಲಿಯ ಸರಕಾರವು ಹೋರಾಟ ಕೊಡದೆ, ತಮಗೆ ಯಾವ ಅದೃಷ್ಟವೊದಗುವುದೋ ಅದನ್ನು ಅನುಭವಿಸಲು ಈಗ ತಯಾರಾದಂತಿದೆ. ಟಿಬೇಟಿನ ಆಗುಹೋಗುಗಳಲ್ಲಿ ಕೈಹಾಕುವ ಸ್ಥಿತಿಯಲ್ಲಿ ಇಂಗ್ಲಾಂಡು, ಅಮೇರಿಕಗಳಿಲ್ಲ. ಈ ಕುರಿತು ಮಿಕ್ಕೆಲ್ಲಾ ರಾಷ್ಟ್ರಗಳಿಗಿಂತ ಹೆಚ್ಚಿಗೆ ತಲೆಕರಡು ಮಾಡಿಕೊಳ್ಳಬೇಕಾಗಿ ಬಂದುದು ಭಾರತಕ್ಕೇನೇ. "ಟಿಬೇಟಿನ ಆಕ್ರಮಣವು ನನ್ನ ರಾಷ್ಟ್ರದ ಪಾಲಿಗೆ ಯಾವ ಹೊಸ ಸಮಸ್ಯೆಯನ್ನೂ ನಿರ್ಮಿಸಿಲ್ಲ" ಎಂದು ಅಮೇರಿಕದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ಮಿ. ಮಿರ್ಜಾ ಇಸ್ಪಹಾನಿಯವರು ಸ್ಪಷ್ಟಪಡಿಸಿದ್ದಾರೆ. ಆದರೆ 250 ಮೈಲುದ್ದಕ್ಕೂ ಟಿಬೇಟಿನೊಡನೆ ಸಮಾನ ಸರಹದ್ದಿರುವ ಭಾರತವು ಈ ಕುರಿತು ವಿಶೇಷ ಲಕ್ಷ್ಯಕೊಡದೆ ನಿರ್ವಾಹವಿಲ್ಲ. ಆದ್ದರಿಂದಲೇ ಭಾರತವು ಆದಿಯಿಂದಲೂ ಈ ಪ್ರಶ್ನೆಯಲ್ಲಿ ತಲೆಹೊಗಿಸುತ್ತಾ ಬಂದಿದ್ದಿತು. ಟಿಬೇಟಿನೊಳಗೆ ಸೇನೆನುಗ್ಗಿಸುವ ಮೊದಲು ಅಥವಾ ಅನಂತರ ಚೈನೀಸರಕಾರವು ಯಾವ ರಣಡಂಗುರವನ್ನೂ ಬಾರಿಸದೆ, ಗುಟ್ಟಿನಲ್ಲಿಯೇ ಕೆಲಸಮಾಡಿದಂತಿದೆ. ಕೆಂಪು ಚೈನಾ ಬಾಯಿ ಮುಚ್ಚಿದಾಗಲೇ, ತಾನು ನುಂಗಲ್ಪಡುತ್ತಿರುವ ಅನುಭವ ಕೂಡಾ ಟಿಬೇಟಿಗಾದುದಿಲ್ಲ. ಆ ಮೇಲೆ ತನ್ನಂತೆ ಸುದ್ದಿ ಸ್ಫೋಟಗೊಂಡಿತು; ಚೈನೀ ಸರಕಾರದ ಪ್ರಕಟಣೆ ಹೊರಟಿತು; ರಷ್ಯದ ಬಾಯಿಗಳಿಂದ ಹೆಗ್ಗಳಿಕೆಯ ವಾರ್ತೆ ಬರಹತ್ತಿದುವು. ತಕ್ಷಣ ಪಂಡಿತ ನೆಹರೂಗಳು ತಜ್ಞರೊಡನೆ ಪರ್ಯಾಲೋಚನೆ ನಡೆಸಿದರು. ತನ್ನ ಸೇನಾದಳಗಳನ್ನು ಟಿಬೇಟಿನೊಳಗೆ ನುಗ್ಗಿಹೋಗಬೇಕೆಂದು ನಿರ್ದೇಶಿಸಿದ ಚೈನೀ ಕಮ್ಯೂನಿಸ್ಟ್ ಸರಕಾರದ ಕೃತ್ಯಕ್ಕೆ "ಆಶ್ಚರ್ಯ ಮತ್ತು ಸಂತಾಪವನ್ನು" ಸೂಚಿಸುವಂತೆ ಭಾರತ ಸರಕಾರವು ಪೆಕಿಂಗ್‌ದಲ್ಲಿರುವ ತನ್ನ ರಾಯಭಾರಿ ಸರ್ದಾರ್ ಕೆ. ಎಮ್. ಪಣಿಕ್ಕರರಿಗೆ ತಿಳಿಸಿತು. ಭಾರತ ಸರಕಾರದ ಈ ದುಃಖಾಶ್ಚರ್ಯ ಸೂಚನಾಪತ್ರವು ಕಠಿಣ ಪದಗಳಿಂದ ತುಂಬಿದ್ದಿತೆಂದು ತಿಳಿದು ಬಂದಿದೆ. ಅದು ಮಾಡಾಮಾಡಿ ವಿರೋಧಕ್ಕೆಳಸಿದ ಭಾಷೆಯಲ್ಲಿಲ್ಲವಾದರೂ, ಚೈನದ ವರ್ತನೆಯು ಪೂರ್ಣ ತಪ್ಪೆಂಬುದನ್ನು ಕಂಠೋಕ್ತವಾಗಿ ಅದರಲ್ಲಿ ನಮೂದಿಸಿದಂತಿದೆ. ಟಿಬೇಟ್–ಚೈನಾ ವ್ಯವಹಾರವನ್ನು ಸಂಧಾನ ಮೂಲಕ ಇತ್ಯರ್ಥಿಸಿಕೊಳ್ಳುವುದಕ್ಕಾಗಿ ಟಿಬೇಟಿನಿಂದ ಪೆಕಿಂಗಿಗೆ ಹೊರಟಿದ್ದ ಶಿಷ್ಟಮಂಡಲವು ಹೋಂಕೋಂಗಿನಲ್ಲಿರುವಾಗ, ಆ ರಂಗದ ಕೆಲಸವನ್ನು ಮಾಡಿಕೊಳ್ಳದೆ, ಈಚೆಯಿಂದ ಸೇನೆ ನುಗ್ಗಿಸಿದುದು ವಂಚನೆ ಮತ್ತು ಅಕ್ರಮವೆಂದು ಭಾರತ ಸರಕಾರವು ಸೂಚಿಸಿದಂತಿದೆ. ಪ್ರಶ್ನೆಯು ಸಂಧಾನರಂಗದಲ್ಲಿರುವಾಗ ತನ್ನ ವಿಶೇಷ ವರ್ತನೆಗೊಂದು ನೆವನವನ್ನಾದರೂ ಮುಂದಿಡದೆ ಚೈನಾ ಸರಕಾರವು ಮೌನವಾಗಿ, ಆಕ್ರಮಣಕ್ಕೆ ಹೆಜ್ಜೆಯಿಟ್ಟುದು ಎತ್ತಿ ಹೇಳತಕ್ಕ ಸಂಗತಿ. ತನ್ನೀ ದುಃಖಾಶ್ಚರ್ಯ ಸೂಚನೆಗೆ ಚೈನವು ಕೊಡುವ ಉತ್ತರವೇನೆಂಬುದನ್ನು ಭಾರತ ಸರಕಾರವೀಗ ನಿರೀಕ್ಷಿಸುತ್ತಿದೆ. ಭಾರತದ ಮಂತ್ರಿಮಂಡಲದ ಅವಸರದ ಸಭೆಗಳಾಗಿ ಟಿಬೇಟ್ ಪ್ರಶ್ನೆಯ ಕುರಿತು ಗಾಢ ಪರ್ಯಾಲೋಚನೆ ನಡೆದಿದೆ.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.,
(Established: 1934)

Chairman: **Sri. M. C. T. M. Chidambaram Chattiyar**

A Policy in this progressive Life Office is a good investment; its Agency is a valuable business connection.

MANGALORE BRANCH: K. S. R. Road, Hampankatta, Mangalore.

HEAD OFFICE: United India Life Building, B. No. 142 MADRAS.

ಭಾರತದಲ್ಲಿ ಇನ್ನೂ ವಿದೇಶೀ ನೆಲೆಗಳೆ?

ಭಾರತದ ಆಸಕ್ತಿ

ಭಾರತದ ಉತ್ತರ ಪ್ರದೇಶದ ಅಲ್ಮೋರಾ ಜಿಲ್ಲೆ ಬಳಿಯಲ್ಲಿ 250 ಮೈಲು ಉದ್ದವು ಭಾರತ ಮತ್ತು ಟಿಬೇಟಿನ ಸಮಾನ ಗಡಿಯಾಗಿದೆ. ಉತ್ತರ ಪ್ರದೇಶದ ಕುಮಾವೂನ್ ಡಿವಿಜನಿನ ಅಲ್ಮೋರಾ, ಘರ್ವಾಲ್ ಮತ್ತು ತೆಹ್ರಿ ಘರ್ವಾಲ್ ಎಂಬ ಮೂರು ಜಿಲ್ಲೆಗಳು ಟಿಬೇಟ್ ಸರಹದ್ದಿಗೆ ಒತ್ತಿನಲ್ಲಿವೆ. ದರ್ಮ, ಬಯಾನ್ಸ್, ಚೌಧಾಸ್, ಜೋಹರ್, ನಿಟಿ, ಮನಾ, ಎಂಬ ಆರು ಕಣಿವೆಗಳು ಉತ್ತರ ಪ್ರದೇಶದಿಂದ ಟಿಬೇಟಿನೊಳಗೆ ಹೋಗಿವೆ. ಟಿಬೇಟ್ ಸರಹದ್ದಿನಲ್ಲಿ ಗಲಭೆಗಳಾಗಹತ್ತಿದ ಮೇಲೆ ಮತ್ತು ಆ ಕಡೆಯಿಂದ ಕೆಲವರು ಈ ಕಡೆಗೆ ಸವಾರಿ ಬಿಟ್ಟ ವಾರ್ತೆ ಬಂದ ನಂತರ ಉತ್ತರ ಪ್ರದೇಶ ಸರಕಾರವು ಅಲ್ಲಿಯ ಸ್ಥಿತಿಗತಿಗಳನ್ನು ಪರಿಶೀಲಿಸಿ ವರದಿಯೊಪ್ಪಿಸಲು ವಿಶೇಷಾಧಿಕಾರಿಯೊಬ್ಬನನ್ನು ಕಳುಹಿದ್ದಿತು. ಈ ಅಧಿಕಾರಿಯು ಮೂರು ವಾರಗಳ ವರೆಗೆ ಎಲ್ಲವನ್ನೂ ಪರಿಶೀಲಿಸಿ, ಚೈನೀ ಆಕ್ರಮಣಾರಂಭವಾಗುವ ಕೆಲವೇ ದಿನಗಳ ಮೊದಲು ಮರಳಿದ್ದರು. ಅವರ ವರದಿಯನ್ನೀಗ ನಿರೀಕ್ಷಿಸಲಾಗುತ್ತಿದೆ. ಟಿಬೇಟಿನ ಸರಹದ್ದಿನಲ್ಲಿ ಬಲವಾದ ರಕ್ಷಣಾ ವ್ಯವಸ್ಥೆಯನ್ನು ಭಾರತ ಸರಕಾರವು ಕೈಕೊಳ್ಳಲಿದೆ. 250 ಮೈಲುದ್ದದ ಸರಹದ್ದು ಮತ್ತು 6 ಕಣಿವೆಗಳ ಮೂಲಕ ಕಮ್ಯೂನಿಸ್ಟ್ ಸೇನೆಗಳು ತನ್ನ ಮೈಗೆ ಮೈತಾಗಿಸಿಕೊಂಡು ನಿಲ್ಲುವಂತಾಗುವ ಹೊಸ ವಿದ್ಯಮಾನವು ಸ್ವತಂತ್ರ ಭಾರತದ ಪಾಲಿಗೆ ವಿಶೇಷ ಘಟನೆಯೇ. ಭಾರತಕ್ಕುಂಟಾಗುವ ಈ ಹೊಸ ಸಂಬಂಧದಂತಹದು ಟಿಬೇಟ್ ಆಕ್ರಮಣದ ದೆಸೆಯಿಂದ ಬೇರಾವ ರಾಷ್ಟ್ರಕ್ಕೂ ಒದಗುವಂತಿಲ್ಲ. ಟಿಬೇಟಿಗಂತೂ ಪ್ರಪಂಚದತ್ತ ನೋಡಿ ಮಾತಾಡುವ ಬಾಯಿಯೇ ಇಲ್ಲ. ಅಂದಮೇಲೆ ಇದು ಮುಖ್ಯವಾಗಿ ಭಾರತಕ್ಕೆ ಸಂಬಂಧಿಸಿರುವ ಪ್ರಶ್ನೆ. ಭಾರತ ಮತ್ತು ಕೆಂಪು ಚೈನಗಳೊಳಗಿನ ಮೈತ್ರಿಗೆ ಲಗಾವಾಗುವ ಸಮಸ್ಯೆ. ಟಿಬೇಟ್ ಆಕ್ರಮಣದ ಕುರಿತು ಸಂ. ರಾ. ಸಂಘಕ್ಕೆ ದೂರು ಕೊಡುವ ಅಥವಾ ಅಂತರಾಷ್ಟ್ರೀಯ ರಂಗಕ್ಕೆಳೆಯುವ ಅವಕಾಶ ಮತ್ತು ಅವಶ್ಯಕತೆಯಿರುವ ರಾಷ್ಟ್ರ ಭಾರತವೊಂದೇ.

ಭಾರತ ಚೈನಾ ಮೈತ್ರಿ?

ಭಾರತವು ಟಿಬೇಟ್ ಪ್ರಶ್ನೆಗೆ ಅಂತಹ ಪ್ರಾಮುಖ್ಯತೆಯನ್ನು ಕೊಡಲಿರುವುದೆ? ಕಮ್ಯೂನಿಸ್ಟ್ ಚೈನಕ್ಕೆ ಮನ್ನಣೆ ಕೊಟ್ಟು ಭದ್ರತಾ ಕೌನ್ಸಿಲಿನಲ್ಲೂ ಅದರ ನ್ಯಾಯಬದ್ಧ ಸ್ಥಾನವನ್ನು ಒದಗಿಸಿ ಕೊಡುವ ಪ್ರಯತ್ನದಲ್ಲಿರುವ ಭಾರತವು ಟಿಬೇಟಿನ ಮೇಲೆ ಚೈನಕ್ಕಿರುವ ಸಾರ್ವಭೌಮಾಧಿಕಾರಕ್ಕೂ ತನ್ನ ಸಮ್ಮತಿಯನ್ನು ಸೂಚಿಸಿದ್ದಿತು. ಅಂತಹದೊಂದು ಸಂಬಂಧವು ತನಗೂ ಟಿಬೇಟಿನ ಮೇಲಿದೆ ಎಂದು ಭಾರತವೇನೂ ಘೋಷಿಸಿದುದಿಲ್ಲ. ಮನಸಿದ್ದರೆ ಟಿಬೇಟಿನ ಮೇಲೆ ತನಗೂ ಹಕ್ಕು ಬಾಧ್ಯತೆಗಳಿವೆ, ಎಂದು ಸಾರುವ ಕಾರಣಗಳು ಭಾರತಕ್ಕಿವೆಯಾದರೂ ಭಾರತವು ಹಾಗೆಂದುದಿಲ್ಲ. ಹೀಗಿದ್ದರೂ ಟಿಬೇಟು ಹೊಂದುವ ರೂಪಾಂತರಗಳು ಭಾರತದ ರಕ್ಷಣೆಯ ಮೇಲೆ ಪರಿಣಾಮ ಬೀರುವಂತಹವೆಂಬುದನ್ನು ಕಡೆಗಣಿಸಲು ಸಾಧ್ಯವಿಲ್ಲ. ಈ ದೆಸೆಯಿಂದ ಭಾರತವು ಕಮ್ಯೂನಿಸ್ಟ್ ಚೈನಕ್ಕಿದಿರು ಬೀಳುವುದಾದರೆ ಅಮೆರಿಕದಂತಹ ರಾಷ್ಟ್ರಗಳ ಬೆಂಬಲವು ಭಾರತಕ್ಕೊದಗುವುದು ಖಂಡಿತ. ಕಮ್ಯೂನಿಸರು ಕಾಲಿಡುವಲ್ಲೆಲ್ಲಾ ಸಮಾಧಿಯಾಗೆಯುವವರು ಬೇಕಾಗಿದ್ದಾರೆಂಬ ಅಪೇಕ್ಷೆಯನ್ನು ಜಾಹೀರುಪಡಿಸಿರುವ ಅಮೆರಿಕವು, ಕೆಂಪು ಚೈನದ ಟಿಬೇಟ್ ಹೆಜ್ಜೆ ಗಡ್ಡಗಾಲಿಡಲು ಭಾರತವೆದ್ದರಾದೀತೆಂದು ಹಾರೈಸುತ್ತಿರಬಹುದು. ಆಸ್ಯಾದ ಎರಡು ಪ್ರಮುಖ ರಾಷ್ಟ್ರಗಳ ಪೈಕಿ ಒಂದಾದ ಚೈನವು ಕಮ್ಯೂನಿಸ್ಟದ ಮೇಲೆ, ಮತ್ತೊಂದಾದ ಭಾರತವನ್ನು ತಮ್ಮದನ್ನಾಗಿ ಮಾಡಿಕೊಂಡು ಎತ್ತಿಕಟ್ಟುವ ಆತುರವು ಅಮೆರಿಕಾ ಮತ್ತು ಬ್ರಿಟನುಗಳಿಗಿರುವಂತಹದೇ. ಇಂಥವರ ಬಲೆಯೊಳಗೆ ಬೀಳದೆ ಆಸ್ಯಾದ ಜಾಗ್ರತಿ ಮತ್ತು ಐಕ್ಯವನ್ನು ಉಳಿಸಿಕೊಳ್ಳಬೇಕೆಂಬ ಭಾವನೆಯಿಂದ ಭಾರತವು ಸ್ವಾಭಿಮಾನ ಮತ್ತು ಮುಂಜಾಗರೂಕತೆಯಿಂದ ವರ್ತಿಸುತ್ತಿದೆ. ಆದ್ದರಿಂದಲೇ ತನಗಾವ ಪೂರ್ವಸೂಚನೆಯನ್ನೂ ಕೊಡದೆ, ಚೈನವು ಮಹಾನಾಕ್ರಮಣ ಹೂಡಿದ್ದರೂ, ಈ ಆಕ್ರಮಣವು ಚೈನಾ ಟಿಬೇಟ್ ಗಡಿವಲಯಗಳ ಮಟ್ಟಿಗೆ ಮಾತ್ರವಿರುವುದೆಂದೂ ಇನ್ನಾದರೂ ಶಾಂತ ವ್ಯವಸ್ಥೆಯೇ ಜಗಬಹುದೆಂದೂ ಭಾರತ ಸರಕಾರವೀಗಲೂ ಆಶಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ವಿರೋಧಿ ಪಾಶ್ಚಾತ್ಯ ರಾಷ್ಟ್ರಗಳು ಬಯಸುತ್ತಿರುವ ವಾತಾವರಣವನ್ನೇ ನಿರ್ಮಿಸುವ ಹೆಜ್ಜೆಯನ್ನು ಕಮ್ಯೂನಿಸ್ಟ್ ಚೈನವಿಟ್ಟಿರುವುದು ಅತ್ಯಂತ ಶೋಚನೀಯ. ಚೈನದಂತಹ ರಾಷ್ಟ್ರಕ್ಕೆ ಟಿಬೇಟಿನಂತಹ ನೆಲೆಯನ್ನು ಆಕ್ರಮಿಸಿಕೊಳ್ಳುವುದು ಆಟದಷ್ಟು ಲಗುವಾದ ಕೆಲಸ. ಆಸ್ಯಾದ ನವೋದಿತ ಮಹಾರಾಷ್ಟ್ರ ಭಾರತದ ಸ್ನೇಹಾಚಾರವನ್ನು ಬೆಲೆಯಾಗಿ ತೆತ್ತು ಪಡೆಕೊಳ್ಳಬಹುದಾದಂತಹ ಗಣ್ಯ ವಿಜಯ ಇದಲ್ಲ. ಚೈನಾ ಮತ್ತು ಭಾರತಗಳೊಳಗಿನ ಸೌಹಾರ್ದತೆಯ ಮೌಲ್ಯಕ್ಕೆ ಒಂದಲ್ಲ ಹಲವು ಟಿಬೇಟುಗಳು ಬರಲಾರವು. ಭಾರತ ಸರಕಾರವು ಈ ತುಲನಾತ್ಮಕ ಧೋರಣೆಯಿಂದ ಸಂಧಾನ ವ್ಯವಹಾರ ಮಾರ್ಗ ಹಿಡಿದಿರುವಂತೆಯೇ ಕೆಂಪುಚೈನಾ ಸರಕಾರವು ಇನ್ನಾದರೂ ದೂರದೃಷ್ಟಿ ಮತ್ತು ಶಾಂತಧೋರಣೆ ವಹಿಸಿ, ಪರಿಸ್ಥಿತಿಯು ಹಾಳಾಗುವಂತೆ ವರ್ತಿಸುವದೆಂದು ಆಶಿಸಬೇಕಾಗಿದೆ:

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ.

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ, ವ್ಯಾಲಕ. — M. Mendosa, Proprietor.

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp: His Master's Voice,
Sir Phirozshah Mehta Road, FORT, BOMBAY.

ವಿದೇಶಿ ವಸಾಹತುಗಳು

ಸರಹದ್ದಿನಾಚೆಯ ಟಿಬೇಟ್ ಪ್ರಶ್ನೆ ಹೀಗಿದ್ದರೆ, ಸ್ವತಂತ್ರ ಭಾರತದ ಪಾಲಿಗೆ ಅಸಹ್ಯ ಮತ್ತು ಅಪಮಾನಕರವಾಗಿ ಉಳಿದಿರುವ ಮತ್ತೊಂದು ಪ್ರಶ್ನೆಯೆಂದರೆ ವಿದೇಶೀ ವಸಾಹತುಗಳದು. ಯುರೋಪಿನ ಎರಡು ರಾಷ್ಟ್ರಗಳಾದ ಪೋರ್ಚುಗಲ್ ಮತ್ತು ಫ್ರಾನ್ಸುಗಳ ಕೆಲವು ಸಣ್ಣ ಪುಟ್ಟ ನೆಲೆಗಳು ಈಗಲೂ ಭಾರತದಲ್ಲಿ ಉಳಿದುಕೊಂಡಿವೆ. ಗೋವೆಯಲ್ಲಿ ಪೋರ್ಚುಗೀಸರ ಮತ್ತು ಕೆಲವು ಸಣ್ಣ ವಲಯಗಳಲ್ಲಿ ಫ್ರೆಂಚರ ಅಧಿಕಾರವೀಗಲೂ ಉಳಿದಿದೆ. ಭಾರತ ಸ್ವಾತಂತ್ರ್ಯ ಸ್ಥಾಪನೆಯಾಗಿ ಮೂರು ವರುಷಗಳು ಕಳೆದು ಮೂರು ತಿಂಗಳುಗಳು ತುಂಬುತ್ತಾ ಬರುತ್ತಿರುವ ಈ ಕಾಲದಲ್ಲೂ ವಿಶಾಲ ಸ್ವತಂತ್ರ ಭಾರತ ನಕಾಶೆಯಲ್ಲಿ ಕಂಚುಕ್ಕಿಗಳಂತೆ ಕೆಲವು ವಿದೇಶಿ ವಸಾಹತುಗಳು ಕಾಣಿಸುತ್ತಿರುವುದು ತೀರಾ ಅಸಹನೀಯವಾದ ವಿಷಯ. ಮರುಮಾತಿಲ್ಲದೆ ಇವು ಭಾರತಾಂತರ್ಗತವಾಗಲೇ ಬೇಕೆನ್ನುತ್ತಾ ಪಂಡಿತ ನೆಹರುಗಳಂದಿದ್ದಾರೆ: "ಸಾಂಸ್ಕೃತಿಕ, ಭೌಗೋಲಿಕ ಮತ್ತಿತರ ಕಾರಣಗಳಿರುವಂತೆಯೇ, ಭಾರತದೊಳಗಡೆಯಲ್ಲಿ ಯಾವುದೇ ವಸಾಹತು ದ್ವೀಪಗಳಿರುವುದನ್ನೂ ನಾವೆಂದಿಗೂ ಸಹಿಸಲಾರೆವೆಂಬ ಮುಖ್ಯ ವಿಷಯವು ಇಲ್ಲಿದೆ. ಈ ಕುರಿತು, ನಾನಿನ್ನೂ ಮುಂದೆ ಹೋಗಿ, ಏಷ್ಯಾ ಮತ್ತು ಆಫ್ರಿಕದಲ್ಲಿಯೂ ವಸಾಹತುತನವೇ ಇರಬಾರದೆಂದು ಹೇಳುತ್ತೇನೆ. ನಮ್ಮ ಸ್ವಂತ ರಾಷ್ಟ್ರದೊಳಗಡೆಯಲ್ಲೇ ಇಂತಹ ಯಾವುದೇ ವಸಾಹತು ತುಂಡುಗಳನ್ನು ಉಳಿಸಿಕೊಳ್ಳುವದಂತೂ ಮತ್ತಷ್ಟು ಅಸಹ್ಯ". ಯಾವ ದೃಷ್ಟಿಯಿಂದ ನೋಡಿದರೂ ಭಾರತದಲ್ಲಿ ಫ್ರೆಂಚ್ ಮತ್ತು ಪೋರ್ಚುಗೀಸ್ ಕ್ಷೇತ್ರಗಳುಳಿದಿರುವದಕ್ಕೆ ಅರ್ಥವೇ ಇಲ್ಲ. ಯುರೋಪಿನ ಅತಿ ಪ್ರಬಲ ರಾಷ್ಟ್ರ ಬ್ರಿಟನು, ಅಖಿಲ ಭಾರತದಿಂದ ಕಾಲ್ತೆಗೆದೊಡನೆಯೇ, ಇಲ್ಲಿ ಮೂಲೆಗುಂಪಾಗಿರುವ ಇನ್ನೆರಡು ಯುರೋಪಿಯನ್ ರಾಷ್ಟ್ರಗಳೂ ಅದನ್ನನುಸರಿಸಿ, ಇಲ್ಲಿಂದ ಹೊರಟು ಹೋಗಬೇಕಿದ್ದಿತು. ಅಖಿಲ ಭಾರತದ ಮಟ್ಟಿಗೆ ಬ್ರಿಟಿಷರಿಗೆ ಬಂದ ಸದ್ಬುದ್ಧಿಯು, ಸಂದು ಮೂಲೆಯ ಮಟ್ಟಿಗೆ ಫ್ರೆಂಚ್ ಮತ್ತು ಪೋರ್ಚುಗೀಸರಿಗೆ ಬಾರದಿದ್ದುದು ನಿಜಕ್ಕೂ ವಿಷಾದಕರ. ಇತ್ತ ಸ್ವತಂತ್ರ ಭಾರತವಾದರೋ ತನ್ನೊಳಗಿನ ಆಶ್ರಿತ ರಾಜ್ಯಗಳನ್ನು ಸಮಾವೇಶಗೊಳಿಸಿಕೊಂಡಷ್ಟು ರಭಸದಿಂದ ಈ ವಿದೇಶೀ ತುಂಡುಗಳನ್ನು ಎಳೆದುಕೊಳ್ಳಬೇಕಿದ್ದಿತು. ಅನ್ಯರಾಷ್ಟ್ರಗಳೊಡನೆ ಸಾಧ್ಯವಿದ್ದಷ್ಟು ಶಾಂತವಿಧಾನಗಳಿಂದ ವ್ಯವಹರಿಸಬೇಕೆಂಬ ಇಚ್ಛೆಯಿಂದ ಭಾರತ ಸರಕಾರವಾದರೂ ಈ ಕುರಿತು ನಿಧಾನದ ಹೆಜ್ಜೆಯನ್ನಿಡುತ್ತಾ ಬಂದಿದೆ. ಆ ಪೈಕಿ ಗೋವೆಯನ್ನು ಹಿಡಿದುಕೊಂಡಿರುವ ಪೋರ್ಚುಗೀಸ್ ಸರಕಾರವು ಆಧುನಿಕ ಕಾಲಕ್ಕೆ ಅಯೋಗ್ಯವೆನ್ನಿಸುವಷ್ಟು ಅಪ್ರಗತಿಕವಿದೆ. ಗೋವೆಯ ಶಾಂತ ಸ್ವಾಧೀನತೆಗಾಗಿ ಭಾರತ ಸರಕಾರವು ನಡೆಸಿದ ಪ್ರಯತ್ನಕ್ಕೆ ಪ್ರತಿಯಾಗಿ ಪೋರ್ಚುಗೀಸ್ ಸರಕಾರವು ಗೋವೆಯಲ್ಲಿ ದಬ್ಬಾಳಿಕೆಯನ್ನಾರಂಭಿಸಿದೆ ಹೊರತು ಹೆಚ್ಚೇನನ್ನೂ ಮಾಡಿಲ್ಲ. ಫ್ರಾನ್ಸಿನ ಆಡಳಿತೆಗಾರರು ಭಾರತದಲ್ಲಿರುವ ತಮ್ಮ ವಸಾಹತುಗಳ ಅಧಿಕಾರವನ್ನು ಶಾಂತ ವಿಧಾನಗಳಿಂದಲೇ ಬಿಟ್ಟು ಹೋಗುವ ಮನೋವೃತ್ತಿಯನ್ನು ತೋರಿಸಿದ್ದರಿಂದ ಭಾರತ ಸರಕಾರವು ಫ್ರೆಂಚ್ ಸರಕಾರದೊಂದಿಗೆ ಫ್ರೆಂಚ್ ವಸಾಹತುಗಳ ಜನಮತ ಸಂಗ್ರಹ ವ್ಯವಸ್ಥೆಯ ಕುರಿತೊಂದು ಒಡಂಬಡಿಕೆಯನ್ನು 1948ನೇ ಮಧ್ಯ ಭಾಗದಲ್ಲಿ ಮಾಡಿಕೊಂಡಿದ್ದಿತು. ಅದರಂತೆ ನಿರ್ವಾಹವಿಲ್ಲದೆ ಚಂದ್ರನಾಗೋರಿನ ಜನಮತ ಸಂಗ್ರಹವಾಗಿ ಅದು ಭಾರತದೊಂದಿಗೆ ಮಿಲನಗೊಂಡರೂ ತಮ್ಮ ಮಿಕ್ಕ ವಸಾಹತುಗಳ ಸಂಬಂಧವಾಗಿ ಫ್ರೆಂಚರು ಒಪ್ಪಂದ ಶರ್ತಗಳನ್ನು ಮನಃಪೂರ್ವಕವಾಗಿ ಪಾಲಿಸಿಲ್ಲ. ಜುಲುಮೆ, ಒತ್ತಾಯಗಳಿಲ್ಲದ ನಿಷ್ಪಕ್ಷಪಾತ ಚುನಾವಣೆ ನಡೆಯುವುದು ಅಸಾಧ್ಯವಾಗುವಂತಹ ವಾತಾವರಣವನ್ನು ಫ್ರೆಂಚ್ ಅಧಿಕಾರಿಗಳು ತಮ್ಮ ವಸಾಹತುಗಳಲ್ಲಿ ನಿರ್ಮಿಸಿಟ್ಟು, ಭಾರತ ಸರಕಾರವನ್ನು ವಂಚಿಸುತ್ತಾ ಬಂದಿದ್ದಾರೆ. ಇದರಿಂದಾಗಿ ಭಾರತದ ತಾಳ್ಮೆಯೀಗ ಒಡೆದಾಗಿದೆ. ಫ್ರೆಂಚ್ ಮತ್ತು ಪೋರ್ಚುಗೀಸ್ ವಸಾಹತುಗಳನ್ನು ಸ್ವತಂತ್ರಗೊಳಿಸಲು, 'ಸ್ವಾತಂತ್ರ್ಯಸಮಿತಿ'ಯೊಂದು ಭಾರತದಲ್ಲಿ ಸ್ಥಾಪನೆಗೊಳ್ಳುವ ಸಂಭವವಿದೆ. ಜರ್ಮನರಿಂದ ಆಕ್ರಮಿಸಲ್ಪಟ್ಟ ಯುರೋಪಿನ ಸಣ್ಣ ರಾಷ್ಟ್ರಗಳವರು, ಲಂಡನಿನಲ್ಲಿ ತಂತಮ್ಮ ರಾಷ್ಟ್ರಗಳ "ಸ್ವಾತಂತ್ರ್ಯ ಸಮಿತಿ"ಯನ್ನು ಕಟ್ಟಿಕೊಂಡು ಅಲ್ಲಿಂದಲೇ ಸ್ವಾತಂತ್ರ್ಯ ಯುದ್ಧವನ್ನು ನಡೆಸಿದ್ದ ಮಾದರಿಯಲ್ಲಿ ವಿದೇಶೀವಸಾಹತುಗಳ ಬಂಧವಿಮೋಚನೆಗಾಗಿ ಭಾರತದಲ್ಲಿ ಸ್ಥಾಪನೆಗೊಳ್ಳುವ ಈ ಸ್ವಾತಂತ್ರ್ಯ ಸಮಿತಿಯು ಸರ್ವೆಡೆಗಳ ಸ್ವಾತಂತ್ರ್ಯಾಂದೋಲನವನ್ನು ಸಂಘಟಿಸಿ, ಸರಿದಾರಿಯಿಂದ ನಡೆಸಲಿದೆ. ಅಂತೂ ಪರಕೀಯ ನೆಲೆಗಳು ಈಗಲೂ ಇಲ್ಲಿ ಉಳಿದುಕೊಂಡಿರುವುದು ಎಂತಹ ವಿದ್ಯಮಾನದಲ್ಲಾದರೂ ಅಸಹ್ಯವಿರುವುದರಿಂದ, ಅನುಕ್ರಮವಾಗಿ ಸುಗಮ–ದುರ್ಗಮ ವಿಧಾನಗಳನ್ನನುಸರಿಸಿಯಾದರೂ ಸ್ವತಂತ್ರ ಭಾರತವು ತನ್ನಾ ತುಂಡುಗಳನ್ನು ಮರಳಿ ಪಡಕೊಳ್ಳುವದೆಂಬುದು ಖಂಡಿತ.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೋಡ್ಯಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಔಷಧಿ ತಯಾರಿಸುವ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.

ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

ಜಾಗತಿಕ ಸಂಘ

ಒಕ್ಟೋಬರ ತಾ. 26ಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಪಂಚ ವಾರ್ಷಿಕ ವರ್ಧಂತಿಯು ಆಚರಿಸಲ್ಪಟ್ಟಿತು. ಅಂದು ಸಂ. ರಾ. ಸಂಘದ ವಿಶೇಷ ಅಧಿವೇಶನ ನೆರೆದು ಅಧ್ಯಕ್ಷ ಟ್ರೂಮೆನರು ಸಂಘದ ಲೋಕ ಶಾಂತಿ ಪ್ರಯತ್ನಗಳನ್ನು ಪ್ರಸ್ತಾಪಿಸಿ, ಜಾಗತಿಕ ನೆಮ್ಮದಿ ಪಾಲನೆಗಾಗಿ ಶಾಂತ ವಿಧಾನದಂತೆಯೇ ಹೋರಾಟ ವಿಧಾನವನ್ನೂ ಅನುಸರಿಸುವ ಅಗತ್ಯ ಬೀಳಬಹುದೆಂದರು. ಭಾರತವೂ ಸಂ. ರಾ. ಸಂಘದ ದಿನವನ್ನಾಚರಿಸಿದ್ದಿತು. ಅಧ್ಯಕ್ಷ ಡಾ। ರಾಜೇಂದ್ರ ಪ್ರಸಾದರೂ ಪ್ರಧಾನಿ ಪಂಡಿತ ನೆಹರುಗಳೂ ಸಂ. ರಾ. ಸಂಘದ ಮೇಲೂ, ವಿವಾದಗಳನ್ನು ಶಾಂತ ವ್ಯವಹಾರ ಮೂಲಕ ಬಗೆಹರಿಸಿಕೊಳ್ಳುವ ವಿಧಾನದ ಮೇಲೂ ಭಾರತಕ್ಕಿರುವ ಅಚಲ ವಿಶ್ವಾಸವನ್ನು ವ್ಯಕ್ತಪಡಿಸಿದ್ದರು.

ವ್ಯವಹಾರ ಸಂಬಂಧದ ಎಲ್ಲಾ ವಿಭಾಗಗಳಲ್ಲೂ ರಾಷ್ಟ್ರ—ರಾಷ್ಟ್ರಗಳು ಪರಸ್ಪರ ತೀರಾ ಸಮೀಪವಾಗಿ ಜಾಲ ಪ್ರಪಂಚವು ಇಂದು ಎಲ್ಲೆಡೆಯ ಮಾನವ ಹಸ್ತಗತವಾಗುವಷ್ಟು ಕಿರಿದುಗೊಂಡಿರುವಾಗ, ರಾಷ್ಟ್ರರಾಷ್ಟ್ರಗಳೊಳಗಿನ ವೈಷಮ್ಯ ಮತ್ತು ಸ್ಪರ್ಧೆಗಳು ಹಿಂದಿಗಿಂತ ಎಷ್ಟೋ ಹೆಚ್ಚಿವೆ, ಎಂಬುದು ಸ್ಪಷ್ಟವಿದೆ. ಹೇಗಿದ್ದರೂ ಈ ವೈಜ್ಞಾನಿಕ ಯುಗದಲ್ಲಿ ಜಗತ್ತಿನೊಳಗಡೆಯ ವಹಿವಾಟು ಪಥಗಳು ತೀರಾ ಗಿಡ್ಡಾಗಿರುವುದರಿಂದ 'ಏಕ ಜಗತ್ತು' 'ಜಾಗತಿಕಸರಕಾರ' ಹಿಂದಿಗಿಂತ ಸುಲಭವಾಗಿ ತೋರುತ್ತಿದೆ. ಸಂಕುಚಿತ ಸ್ಥಳಾಭಿಮಾನಗಳಿಗೆ ಗತಕಾಲದಲ್ಲಿದ್ದಂತಹ ಬೆಲೆಯು ಈ ಕಾಲದಲ್ಲಿ ದೊರೆಯದಿರಲು ಮೂಲ ಕಾರಣ ಇದೇ.

ಪ್ರಪಂಚದ ಒಂದು ತುದಿ ಮೂಲೆಯೊಡನೆ ಮತ್ತೊಂದು ತುದಿ ಮೂಲೆಗೆ ಇಂತಹ ನಿಕಟ ಸಂಬಂಧವುಂಟಾಗಿದ್ದರೂ ರಾಷ್ಟ್ರರಾಷ್ಟ್ರಗಳೊಳಗಿರುವ ಇಂದಿನ ದ್ವೇಷಾಸೂಯೆಯು ಭೂಗೋಲದೊಳಗಡೆ ಸಿಡಿಮದ್ದಿನಂತೆ ಸೇರಿಕೊಂಡು ಅದು ಯಾವ ಕಾಲಕ್ಕೆ ಸ್ಫೋಟಿಸಿಕೊಂಡು ಭೂಚೆಂಡನ್ನು ಒಡೆದು ಹಾರಿಸುವುದೋ ಎಂಬ ಭೀತಿಯುಳಿದುಕೊಂಡಿದೆ. ಈ ಭಯನಿವಾರಣೆಗಾಗಿ, ರಾಷ್ಟ್ರ ರಾಷ್ಟ್ರಗಳೊಳಗಿನ ಬೆಂಕಿಯನ್ನು ತಣಿಸುವ— ವೈಮನಸ್ಸಿನಿಂದ ಹೋರಾಡಿಕೊಳ್ಳುವವರ ಎದೆಗೆ ಕೈಯಿಕ್ಕಿ ಹಿಂತಳ್ಳುವ— ಮಧ್ಯವರ್ತಿ ಕೈಯೊಂದು ಬೇಕು. ಅದೇ ಸಂಯುಕ್ತ ರಾಷ್ಟ್ರ ಸಂಘ.

ಸಂಘವಿದು ಸ್ಥಾಪನೆಗೊಂಡು ಕಳೆದ ಒಕ್ಟೋಬರ್ 26ಕ್ಕೆ ಐದು ವರುಷಗಳಾದುವು. ಈ ಅವಧಿಯಲ್ಲಿ ಸಂ. ರಾ. ಸಂಘಕ್ಕೆ ತನ್ನ ಗುರಿ ಮುಟ್ಟಲಾಗಲಿಲ್ಲವೆಂಬುದನ್ನು ಒಪ್ಪಬೇಕು. ಕಳೆದೈದು ವರುಷಗಳಿಂದ ಈ ಸಂಘವು ಅಸ್ತಿತ್ವದಲ್ಲಿಲ್ಲದಿರುತಿದ್ದರೆ ಹೇಗೋ ಹಾಗೆಯೇ ರಾಷ್ಟ್ರ-ರಾಷ್ಟ್ರಗಳೊಳಗಿನ ಘರ್ಷಣೆ ಮತ್ತು ದ್ವಿಪಾಳಯ ಮೇಲಾಟ ಬೆಳೆಯುತ್ತಾ ಬಂದಿದೆ. ಆದರೂ ಸಂಯುಕ್ತ ರಾಷ್ಟ್ರ ಸಂಘವು ಈ ನಡುವೆ ಸಮ್ಮಗೆ ಕೂತಿರದೆ ಶಾಂತಿ ಸ್ಥಾಪನೆ ಅಥವಾ ಸಂಧಾನ ಸಾಧನೆಗಾಗಿ ತನ್ನಿಂದ ಸಾಧ್ಯವಿದ್ದಷ್ಟು ಪ್ರಯತ್ನಗಳನ್ನು ಮಾಡಿದೆ, ಎಂಬುದು ನಿರ್ವಿವಾದ.

ಯಾವುದಾದರೊಂದು ಪಕ್ಷಾಸಕ್ತಿಯಿದ್ದವರಿಗೆ ಸಂಯುಕ್ತ ರಾಷ್ಟ್ರ ಸಂಘದ ಇದುವರೆಗಿನ ಶಾಂತಿ ಪ್ರಯತ್ನಗಳೆಲ್ಲವುಗಳಲ್ಲೂ ಕೆಲವರ ಸ್ವಾರ್ಥವೇ ಹುದುಗಿರುವಂತೆ ಕಾಣಬಹುದು. ಲೋಕ ಶಾಂತಿಗೆ ಭದ್ರ ತಳಹದಿಯನ್ನು ಹಾಕುವುದರಲ್ಲಿ ಅದು ಪರಾಭವಗೊಂಡಿದೆ, ಎಂಬುದೂ ಸ್ಪಷ್ಟ. ಈ ಸಂಘವಿದ್ದಂತೆಯೇ ರಾಷ್ಟ್ರ-ರಾಷ್ಟ್ರಗಳೊಳಗಿನ ಕಲಹವು, ಕಳೆದ ಮಹಾಯುದ್ಧ ಪೂರ್ವದಲ್ಲಿ ಬೆಳೆದುದಕ್ಕಿಂತ ಕ್ಷಿಪ್ರ ಗತಿಯಲ್ಲಿ ಬೆಳೆದು, ಕ್ಷಿಪ್ರಾವಧಿಯಲ್ಲೇ ಇನ್ನೊಂದು ಲೋಕ ಯುದ್ಧದ ಸಂಭವವೆದ್ದಿರುವುದೂ ನಿಜ. ಆದರೂ ಸಂ. ರಾ. ಸಂಘವು ತನ್ನ ಪ್ರಭಾವ ಬಲದಿಂದಲ್ಲವಾದರೂ ಸತತಶ್ರಮದಿಂದ, ಕೆಲವು ಕಲಹಗಳ ರೂಪ ರೇಖೆಯನ್ನು ಬದಲಾಯಿಸಿದೆ, ಎಂಬುದನ್ನು ಒಪ್ಪಬೇಕು. ನ್ಯಾಯವಾಗಿಯೋ, ಅನ್ಯಾಯದಿಂದಲೋ, ಅಂತೂ ಪ್ರಬಲಾಕಾರ ಹೊಂದಲಿದ್ದ ಕೆಲವು ಹೋರಾಟಗಳನ್ನು ಅದು ಕುರೂಪಗೊಳಿಸಿ ಅಲ್ಲಿಂದಲ್ಲಿಗೇ ಕುಗ್ಗಿಸಿಟ್ಟಿರುವುದು ನಿಜ.

ನಿದರ್ಶನಕ್ಕಾಗಿ ಸಂ. ರಾ. ಸಂಘದ ಕೈವಾಡವಲ್ಲವಾಗಿದ್ದರೆ ಪೆಲಸ್ಟೈನ್ ಯುದ್ಧದ ಅದೃಷ್ಟ ಬೇರಾಗುತಿತ್ತು; ಕಾಶ್ಮೀರ ಯುದ್ಧವು ಇಷ್ಟರೊಳಗೆ ಬೃಹದಾಕಾರ ತಾಳುತ್ತಿತ್ತು; ಕೊರಿಯಾ ಯುದ್ಧದಿಂದ ರಶ್ಯಾ, ಚೈನಾಗಳು ಈರೀತಿ ದೂರನಿಂತು ನೋಡುವಂತಾಗುತ್ತಿರಲಿಲ್ಲ.

ಪ್ರಥಮ ಜಾಗತಿಕ ಯುದ್ಧಾನಂತರ ಸ್ಥಾಪನೆಗೊಂಡಿದ್ದ 'ಲೀಗ್ ಓಫ್ ನೇಶ

ನ್ಯಸ್ಥೈ ಸ್ಥಿತಿಯು ಉಂಟಾದ ನಂತರ ಅಸ್ತಿತ್ವಕ್ಕೆ ಬಂದಿರುವ ಯುನೈಟೆಡ್ ನೇಶನ್ಸ್ ಸಂಸ್ಥೆಯ ಕೆಲವಂಶ ಹೊರಟು ತೋರುವ ವಿವಿಧ ವಿಭಾಗಗಳು ಮತ್ತು ಕಾರ್ಯಕ್ರಮಗಳಿಂದ ಬಹಳವು ಹೀ ಚಟುವಟಿಕೆಗಳನ್ನು ನಡೆಸುವುದರಲ್ಲಿ ಇದು ಅದಕ್ಕಿಂತ ಎಷ್ಟೋ ಹೆಚ್ಚಿನದಿದೆ.

ಆದರೆ, ಸಂಯುಕ್ತ ರಾಷ್ಟ್ರ ಸಂಘದ ಇಂದಿನ ಸ್ಥಿತಿಯು ಸಮಾಧಾನಕರವಲ್ಲವೆಂಬುದಂತೂ ಖಂಡಿತ. ಲೋಕದಲ್ಲಿ ಶಾಂತಿ ಮತ್ತು ಸುರಕ್ಷಿತತೆಯನ್ನು ಸ್ಥಾಪಿಸುವ ಮೂಲೋದ್ದೇಶದಿಂದ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆಯು ತನ್ನ ಉದ್ದೇಶ ಸಾಧನೆಯಲ್ಲಿ ಪರಾಭವಗೊಂಡಿರುವುದು ಮಾತ್ರವಲ್ಲ, ಇದರ ಕೆಲವು ಚಟುವಟಿಕೆಗಳು ಲೋಕದ ಅಶಾಂತಿ ಕಾರಣಗಳನ್ನು ಮತ್ತಷ್ಟು ಹುಟ್ಟಿಸಿವೆ ಎಂಬುದು ವಿಚಾರಣೀಯ ಅಂಶ. ಇದಕ್ಕೇನು ಕಾರಣ?

—ಅದರ ವಹಿವಾಟು

ಜಗಳಗಂಟಿ ಸ್ವಭಾವದವರ ನಡುವೆ ಎಂತಹ ಮಧ್ಯಸ್ಥಗಾರ ನಿಗ್ಗಿದರೂ ಜಗಳ ನಿವಾರಿಸುವ ಭರವಸೆಯಿಲ್ಲ ಅಂತೆಯೇ ಸ್ವಾರ್ಥಸಾಧಕ ಸಮರ ಮನೋವೃತ್ತಿಯು ಲೋಕದ ಪ್ರಮುಖ ರಾಷ್ಟ್ರಗಳೊಳಗೆ ವ್ಯಾಪಿಸಿಕೊಂಡಿರುವುದರಿಂದ, ಕೇವಲ ಮಧ್ಯಸ್ಥಿಕೆ ಪ್ರಯತ್ನಕ್ಕಾಗಿ ಎಂತಹ ನಿರ್ದೋಷಿ ಸಂಸ್ಥೆ ಸ್ಥಾಪಿಸಲ್ಪಟ್ಟರೂ ಅದು ಜಯಶೀಲವಾಗುವದು ಅತ್ಯಂತ ಪ್ರಯಾಸ. ಸಂ. ರಾ. ಸಂಘದ ಕ್ರಮನಿಯಮ, ವಿಧಿವಿಧಾನಗಳು ದರೋ ಸಂಪೂರ್ಣವಾಗಿ, ಪ್ರಜಾಸತ್ತಾ ತತ್ವವನ್ನಾಧರಿಸಿ ರಚನೆಗೊಂಡಿಲ್ಲ.

ಸಂ. ರಾ. ಸಂಘದ ಪ್ರಚಲಿತ ಘಟನೆಯಂತೆ, ಅದರ ತಿಳುಗಿರುವ ಭದ್ರತಾ ಸಮಿತಿಯ ಶಾಶ್ವತ ಸದಸ್ಯತ್ವವಿರುವ ಅಮೇರಿಕ, ಬ್ರಿಟನ್, ಫ್ರಾನ್ಸ್, ಚೈನಾ ರಶ್ಯ, ಈ ಐದು ರಾಷ್ಟ್ರಗಳಲ್ಲಿ ಪ್ರತಿಯೊಂದಕ್ಕೂ 'ವೆಟೋ' ಅಥವಾ 'ವಿಶಿಷ್ಟ ನಿಷೇಧಾಧಿಕಾರ'ವಿದೆ. ತನಗೊಪ್ಪಿಗೆಯಿಲ್ಲದ ಒಂದು ವಿಷಯವು ಚರ್ಚೆಗೇ ಬಾರದಂತೆ ಮಾಡುವ ವಿಶೇಷಾಧಿಕಾರವು ಈ ಪಂಚರಾಷ್ಟ್ರಗಳ ಪ್ರತಿಯೊಂದಕ್ಕೂ ಆ ಮೂಲಕ ದೊರೆತಿದೆ. ಇದರ ಪರಿಣಾಮವಾಗಿ ಶಾಶ್ವತ ಸದಸ್ಯ ಪಂಚ ಮಹಾರಾಷ್ಟ್ರಗಳಿಗೆ ಅಪ್ರಿಯವಾದುದೇನನ್ನೂ ಭದ್ರತಾ ಕೌನ್ಸಿಲು ಮಾಡುವಂತಿಲ್ಲ. ಅಮೇರಿಕ—ರಶ್ಯಗಳೊಳಗೆ ತೀಕ್ಷ್ಣ ಭಿನ್ನಾಭಿಪ್ರಾಯಗಳಿರುವಾಗ, ಅಂತೆಯೇ ತಂತಮ್ಮ ಹಠಸಾಧಿಸಿಕೊಳ್ಳುವ ಅನುಕೂಲತೆ ಪ್ರತಿಯೊಂದಕ್ಕೂ ಇರುವಾಗ ಭದ್ರತಾ ಕೌನ್ಸಿಲಿನ ಕಾರ್ಯ ಮುಂದುವರಿಯದಂತಾಗಿದೆ.

ಬಹುಮತದ ನಿರ್ಣಯದಂತಾಗಬೇಕಾದ ಸರ್ವಸಾಮಾನ್ಯ ವಿಷಯಗಳ ಮಟ್ಟಿಗೆ ಭದ್ರತಾ ಸಮಿತಿಯಲ್ಲೂ ಸಂಯುಕ್ತ ರಾಷ್ಟ್ರ ಸಂಘದ ಮಹಾ ಸಭೆಯಲ್ಲೂ ಅಮೇರಿಕದ ಪಾಳಯಕ್ಕೇನೇ ಬಹುಮತವಿರುವುದರಿಂದ ಕಮ್ಯೂನಿಸ್ಟ ಪಂಗಡವು ಮೇಲಿಂದ ಮೇಲೆ ಪರಾಭವ ಮತ್ತು ನಿರಾಶೆಗೀಡಾಗಬೇಕಾಗಿ ಬಂದಿದೆ. ತತ್ಪರಿಣಾಮವಾಗಿ ಸಂಯುಕ್ತ ರಾಷ್ಟ್ರ ಸಂಘದಲ್ಲೂ ಬಲವಾದ ಪಾಳಯ ಸ್ಪರ್ಧೆ ನಡೆದಿವೆಯಲ್ಲದೆ ನ್ಯಾಯಪಾಲನೆಯಾಗುತ್ತಿಲ್ಲ.

ಸ್ಪರ್ಧಿಸುತ್ತಿರುವ ಪ್ರಮುಖ ಪಾಳಯಗಳು ಲೋಕವನ್ನೇ ರಂಗವಾಗಿ ಮಾಡಿ ಒಬ್ಬರನ್ನೊಬ್ಬರು ಗೆಲ್ಲಬೇಕೆಂದು ಆಟ ಮಾಡುತ್ತಿರುವವರಾಗಿ. ಇದೇ ಮೇಲಾಟವು ಸಂ. ರಾ. ಸಂಘದ ಕ್ಷೇತ್ರದವರೆಗೂ ವಿಸ್ತರಿಸಿರುವುದರಿಂದ ಈ ಶಾಂತಿ ಸ್ಥಾಪಕ ಸಂಸ್ಥೆ ಕೂಡಾ ಸ್ಪರ್ಧಾರಂಗದ ಒಂದು ಭಾಗವಾಗಿ ಪರಿಣಮಿಸಿದೆ ಹೊರತು, ಅದಕ್ಕಿಂತ ಮೇಲಂತಸ್ತಿಗೇರಿ ನಿಂತಿಲ್ಲ.

ಹೀಗಾಗಿ ಸಂ. ರಾ. ಸಂಘದ ಹೆಜ್ಜೆ ತಡವರಿಸುತ್ತಿದೆ; ಕಣ್ಣೆದುರು ಕತ್ತಲೆ ಕವಿಯುತ್ತಿದೆ. ಈ ದುಸ್ಥಿತಿ ನಿವಾರಣೆಗೊಳ್ಳಬೇಕಾದರೆ ಇಕ್ಕಡೆಯವರ ಸ್ಪರ್ಧೆ ಮತ್ಸರ ದ್ವೇಷಗಳಿಗಿಂತ ಭಿನ್ನವಾದ ಮೂರನೇ ಹಾದಿಯೊಂದು ಹಿಡಿಯಬೇಕು; ಮಧ್ಯ ಪಥಗಾಮಿಯಾಗಬೇಕು. ಪಂಡಿತ ನೆಹರುಗಳ ನಾಯಕತ್ವದಲ್ಲಿ ಭಾರತವು ಇಂದು ವಹಿಸಿರುವ ಅಂತರ್ರಾಷ್ಟ್ರೀಯ ಧೋರಣೆಯೇ ಈ ನಡುದಾರಿ.

ಮಾನವ ಜನಾಂಗವನ್ನೇ ಉದ್ಧರಿಸುವ ಉದಾತ್ತ ಧ್ಯೇಯ ಮತ್ತು ತದನುಗುಣವಾದ ತತ್ವಗಳಿಂದ ಮಹಾತ್ಮಾ ಗಾಂಧಿಯವರ ಸಂದೇಶದಿಂದ ಸ್ಫೂರ್ತಿಗೊಂಡು ಲೋಕ ಶಾಂತಿಪಾಲನೆಯ ನಿಷ್ಪಕ್ಷಪಾತ ಧೋರಣೆ ವಹಿಸಿರುವ ಭಾರತದ ಹೆಜ್ಜೆಯನ್ನೇ ಮಾದರಿಯಾಗಿಟ್ಟುಕೊಂಡು ಸಂ. ರಾ. ಸಂಸ್ಥೆಯು ತನ್ನ ಗತಿಯನ್ನು ಬದಲಾಯಿಸಿಕೊಳ್ಳಬಲ್ಲುದಾದರೆ ಮಾತ್ರ ಪೂರ್ಣ ಸಾರ್ಥಕವಾಗಬಲ್ಲುದು ಎಂದು ಹೇಳಬಹುದಾಗಿದೆ; ಅದು ದಾರಿಗಾಣುವವೆಂದು ನಿರೀಕ್ಷಿಸಬಹುದೆ?

ಲೋಕ ವಾತಾವರಣ

ಜಾಗತಿಕ ರಂಗದಲ್ಲಿ ಒಂದೇ ಹಾದು—ರಶ್ಯಾ ಮತ್ತು ಅಮೆರಿಕ ಪಾಳಯಗಳೊಳಗಿನ ವಾದ ವಿವಾದ. ಈ ಕಿಕ್ಕಾಟಗಳ ಸ್ವರೂಪ ಕೂಡಾ ಒಹುತೇಕವಾಗಿ ಏಕಪ್ರಕಾರ. ಜರ್ಮನಿಯ ಕಿಕ್ಕಾಟ್ಟ, ಕೊರಿಯಾ ಯುದ್ಧದಂತಹ ವಿಶೇಷ ಘಟನೆಗಳು ಆಗಾಗ ಮಹಾಯುದ್ಧ ಸಮೀಪಿಸಿತೇನೋ ಎಂಬ ಭೀತಿಯನ್ನೆಬ್ಬಿಸಿದ್ದರೂ ಸದ್ಯಸ್ಥಿತಿಯಲ್ಲಿ ಮತ್ತೊಂದು ಮಹಾಯುದ್ಧಕ್ಕೆ ಯಾವ ಕಡೆಯವರೂ ತಯಾರಿಲ್ಲವೆಂದು ಖಚಿತವಾಗಿ ಹೇಳಿಕೊಳ್ಳಲವಕಾಶವಿದೆ.

೦೦೦

ಕೊರಿಯಾ ಸಂ. ರಾ. ಸೇನೆಗಳ ಅಮೆರಿಕ, ಬ್ರಿಟನ್ ಮತ್ತು ಕಾಮನ್‌ವೆಲ್ತ್ ದಳಗಳು ಉತ್ತರ ಕೊರಿಯದ ಮಂಚೂರಿಯಾ ಗಡಿಗೆ ಅತ್ಯಂತ ರಭಸದಿಂದ ಮುನ್ನುಗ್ಗಿವೆ. ಈ ಸೇನೆಗಳು ಉತ್ತರಕ್ಕೊತ್ತಿಕೊಂಡು ಬಂದಂತೆ ಕಮ್ಯೂನಿಸ್ಟರು ಬಲವಾದ ಪ್ರತಿಭಟನೆಗಳನ್ನು ಕೊಟ್ಟಿದ್ದರು. ಕೆಲವಡೆ ಸಂ. ರಾ. ಸೇನೆಗಳು ಕಮ್ಯೂನಿಸ್ಟ ಕೋಟೆಯೊಳಗಡೆ ಸಿಕ್ಕಿಹೋದಂತಾಗಿತ್ತು; ಆದರೂ ಸಂ. ರಾ. ಸೇನೆಗಳಿಗೆ ಸಂಖ್ಯೆ ಮತ್ತು ಶಸ್ತ್ರಾಸ್ತ್ರಗಳಲ್ಲಿ ಸ್ಪಷ್ಟ ಮೇಲ್ಮೆಯಿದ್ದುದು ಮಾತ್ರವಲ್ಲದೆ, ಆಯಕಟ್ಟು ಸ್ಥಳಗಳನ್ನೂ ಸರಬರಾಯಿ ಅನುಕೂಲತೆಗಳನ್ನೂ ಸ್ವಾಧೀನಕ್ಕೆ ತಂದುಕೊಂಡಿರುವುದರಿಂದ ಕೆಂಪು ರಣರಂಗದಲ್ಲೀಗ ಸಂ. ರಾ. ಸೇನೆಗಳ ಪಕ್ಷ ಗೆಲುವಾದಂತಿದೆ. ಈಗ ಉತ್ತರ ನಿರ್ಮಾಣವಾಗುವದೆಂದರೆ ಕೆಂಪು ಚೈನಾದ ಸೈನಿಕರು ಅಧಿಕ ಸಂಖ್ಯೆಯಲ್ಲಿ ಉತ್ತರ ಕೊರಿಯಾ ರಣರಂಗದೊಳಗೆ ಪ್ರವೇಶಿಸಿದರೆಂಬ ವಾರ್ತೆ. 40000 ಕೆಂಪು ಸೈನಿಕರು ಮಂಚೂರಿಯಾ ಗಡಿಯ 50 ಮೈಲು ಪೂರ್ವದ ಯುನ್ಸಾನ್ ಕ್ಷೇತ್ರದಲ್ಲಿ ಕೊರಿಯದ ಕಮ್ಯೂನಿಸ್ಟ್ ಸೇನೆಗಳನ್ನು ಕೂಡಿಕೊಂಡಿರುವರೆಂಬ ಸುದ್ದಿಯಿದೆ. ಮಂಚೂರಿಯಾ ಸರಹದ್ದಿನಲ್ಲೆಲ್ಲ ಕೆಲವು ವಾರಗಳಿಂದ ಬಲವಾದ ರಕ್ಷಣಾ ವ್ಯವಸ್ಥೆ ನಡೆದಿದೆಯಲ್ಲದೆ 3 ಲಕ್ಷ ಕೆಂಪು ಚೈನಾ ಯೋಧರು ಹೋರಾಟಕ್ಕೆ ಸಿದ್ಧರಾಗಿ ನಿಂತಿದ್ದಾರೆಂದು ತಿಳಿದು ಬಂದಿದೆ. ಆದರೆ ವ್ಯವಸ್ಥೆ ಮಂಚೂರಿಯದ ರಕ್ಷಣೆಯ ಉದ್ದೇಶದಿಂದಲೋ ಕೊರಿಯಾ ಯುದ್ಧ ಪ್ರವೇಶಕ್ಕಾಗಿಯೋ ಎಂಬ ವಿವರ ಗೊತ್ತಾಗಿಲ್ಲ. ಮಾತ್ರವಲ್ಲ, ಕೊರಿಯದೊಳಗೆ ಚೈನೀ ಸೈನಿಕರು ಪ್ರವೇಶಿಸಿದ ವಾರ್ತೆ ಯಾವ ಅಧಿಕೃತವಾದುದಲ್ಲ. ಇವೆಲ್ಲವೂ ಸತ್ಯಸ್ಥಿತಿಯೋ ಅಮೇರಿಕನ್ ಪಕ್ಷೀಯರ ಸ್ವಪ್ನ ಭೀತಿಯೋ ಎಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ.

೦೦೦

ಸಂಯುಕ್ತ ರಾಷ್ಟ್ರಸಂಘದ ವಿವಿಧರಂಗಗಳಲ್ಲಿ ಪ್ರಾರಂಭಿಕ ಪ್ರಾಮುಖ್ಯತೆಯುಳ್ಳ ಹಲವು ಪ್ರಶ್ನೆಗಳ ಪರ್ಯಾಲೋಚನೆಗಳು ನಡೆದಿವೆ. ಸಂಘದ ಸ್ಪೆಶಲ್ 'ರಾಜಕೀಯ ಸಮಿತಿ'ಯಲ್ಲಿ ಸ್ಪೈನಿನ ಸಂಬಂಧವನ್ನು ಪುನರುಜ್ಜೀವನಗೊಳಿಸುವ ಸಂಬಂಧದ ಚರ್ಚೆಯಾರಂಭಿಸಿದೆ. ಸ್ಪೈಯಿನನೊಡನೆ ರಾಜಕೀಯ ವ್ಯವಹಾರ ಸಂಬಂಧವನ್ನು ಕಡಿದುಕೊಳ್ಳತಕ್ಕದ್ದೆಂಬ ಬಹಿಷ್ಕಾರವು 1946ರಲ್ಲಿ ಸಂಯುಕ್ತ ರಾಷ್ಟ್ರ ಸಂಘದಿಂದ ಬಿದ್ದಿತ್ತು. ಈಗ ಈ ಬಹಿಷ್ಕಾರವನ್ನು ತೆಗೆದುಹಾಕುವ ಸೂಚನೆ ಮುಂದೆ ಬಂದಿದೆ. ಭಾರತವು ಈ ಸೂಚನೆಗೆ ಬೆಂಬಲಕೊಟ್ಟಿದೆ.

ಸಂಯುಕ್ತ ರಾಷ್ಟ್ರ ಸಂಘದ ಭಾವೀ ಕಾರ್ಯದರ್ಶಿಯ ಚುನಾವಣೆಯ ಪ್ರಶ್ನೆಯು ಬಗೆಹರಿಯಲೊಲ್ಲದೆ ಕೊಳೆಯುತ್ತಾ ಉಳಿದುಕೊಂಡಿದೆ. ಇಂದಿನ ಕಾರ್ಯದರ್ಶಿ ಮಿ. ಟ್ರಿಗ್ವಿಲೀ ಅವರು ರಶ್ಯಾ—ಅಮೆರಿಕೆಗಳ ಎಳೆದಾಟದ ಉಪಕರಣವಾಗಿದ್ದಾರೆ. ಟ್ರಿಗ್ವಿಲೀ ಅವರ ಅವಧಿಯನ್ನೇ ಹೆಚ್ಚಿಸಬೇಕೆಂದು ಅಮೇರಿಕದ ಹೇರಿಕೆಯಾಗ್ರಹ, ಅವರನ್ನೆಂದಿಗೂ ಇನ್ನು ಇರಿಸಿಕೊಳ್ಳಬಾರದೆಂದು ರಶ್ಯದ ಆಗ್ರಹವಿದೆ. ಸಂ. ರಾ. ಸಂಘದ ಕಾರ್ಯದರ್ಶಿ ಹುದ್ದೆಗೆ ಆ ಕಾಲದಲ್ಲಿ ಲೀ ಅವರ ಹೆಸರನ್ನು ಸೂಚಿಸಿದ್ದವರೇ ರಶ್ಯ. ಆದರೆ ಆ ಮೇಲೆ ಪೌರ್ವಾತ್ಯ—ಪಾಶ್ಚಾತ್ಯ ಘರ್ಷಣೆಗಳು ಭದ್ರತಾ ಕೌನ್ಸಿಲು ಪತಿಯಿಂದ ಬೆಳೆಯುತ್ತಾ ಬಂದಂತ ರಶ್ಯಕ್ಕೆ ಲೀ ಅವರು ಅಪ್ರಿಯರಾಗುತ್ತಾ ಬಂದಿದ್ದರು. ಆ ಮೇಲೆ ಕಾರ್ಯದರ್ಶಿ ಲೀ ಸಂಧಾನಾಕಾಂಕ್ಷೆಯಿಂದ ಮೋಸ್ಕೋ ಪ್ರಯಾಣ ಕೈಗೊಂಡ ವೇಳೆ ಅಮೇರಿಕವು ಅವರನ್ನು ದ್ವೇಷಿಸಲಾರಂಭಿಸಿತು. ಭದ್ರತಾ ಕೌನ್ಸಿಲಿನಲ್ಲಿ ಕಮ್ಯೂನಿಸ್ಟ್ ಚೈನಕ್ಕೆ ಸ್ಥಾನದೊರಕಿಸಿ ಕೊಡುವ ಸಂಬಂಧದ ವ್ಯವಹಾರದಿಂದಲೇ ಅವರ ಮೇಲಿನ ಅಮೇರಿಕದ ಜಿಗುಪ್ಸೆ ಮತ್ತಷ್ಟು ಬೆಳೆಯಿತು. ಆಮೇಲೆ ಕೊರಿಯಾ ಯುದ್ಧ ಸಂಬಂಧವಾಗಿ ಕಾರ್ಯದರ್ಶಿ ಲೀ ನಡೆಸಿದ ಚಟುವಟಿಕೆಯು ರಶ್ಯದ ಉಗ್ರ ದ್ವೇಷಕ್ಕವರನ್ನು ಗುರಿಪಡಿಸಿದೆ. ಅವರ ವಾಯಿದೆಯನ್ನು ಎಷ್ಟಕ್ಕೂ ಬೆಳೆಯಿಸಬಾರದೆಂದು ರಶ್ಯವೀಗ ಕಂಕಣತೊಟ್ಟು ಛಲವಹಿಸಿದೆ; ಅವರನ್ನೇ ಇನ್ನೂ ಇಟ್ಟುಕೊಳ್ಳುವ ದೃಢ ಸಂಕಲ್ಪವನ್ನು ಅಮೆರಿಕ ಕಟ್ಟಿಕೊಂಡಿದೆ. ಈ ವಿವಾದದ ಹೇತು ಮನಸ್ಸು ಲೀ ಅವರ ಬದಲಿಗೆ ಬೇರೆ ಕೆಲವು ಹೆಸರುಗಳೂ ಮುಂದೆ ಬಂದಿವೆ; ಅವುಗಳಲ್ಲಿ ಭಾರತದ ಸರ್. ಬಿ. ಎನ್. ರಾಯರ ಹೆಸರೂ ಒಂದು. ಭದ್ರತಾ ಕೌನ್ಸಿಲಿನಲ್ಲಿ ಕಾರ್ಯದರ್ಶಿ ಚುನಾವಣೆಯ ಸಂಬಂಧವಾಗಿ ನಡೆದ ಕಾರ್ಯಕಲಾಪಗಳು ಒಂದು ತೀರ್ಮಾನ ಹೊಂದಲಿಲ್ಲ. ಸಂ. ರಾ. ಸಂಘದ ಮಹಾಧಿವೇಶನದ ಪರಿಗಣನೆಗೆ ಈ ಪ್ರಶ್ನೆ ಬಂದಿದೆ.

ಸೇನಾಸಂಖ್ಯೆ ಕಡಿತ, ಸಂ. ರಾ. ಸಂಸ್ಥೆಯ ಸುಧಾರಣೆ, ಮುಂತಾದವುಗಳ ಸಂಬಂಧದ ಚರ್ಚೆಗಳೂ ನಡೆದಿವೆ. ಪ್ರಬಲ ರಾಷ್ಟ್ರಗಳು ಮೂರನೇ ಒಂದಂಶದಷ್ಟು ನಿಶ್ಶಸ್ತ್ರೀಕರಣಕ್ಕೆ ಒಪ್ಪುವದಾದಲ್ಲಿ ತಾವು ತಮ್ಮ ಸೇನಾಬಲದ ಅಧಿಕೃತ ಅಂಕೆ ಸಂಖ್ಯೆಗಳನ್ನು ಮುಂದಿಡಲು ತಯಾರಿರುವೆನೆಂದು ರಶ್ಯದ ವಿದೇಶ ಮಂತ್ರಿ ವಿಶಿನ್ಸ್ಕಿಯವರು ಉದ್ಘೋಷಿಸಿದ್ದಾರೆ.

ಇಂಡೋ ಚೈನದಲ್ಲಿ ಕಮ್ಯೂನಿಸ್ಟ ವೀಟ್ ಮಿನ್ ಸೈನಿಕರನ್ನು ಪ್ರತಿಭಟಿಸಲಾರದೆ ಫ್ರೆಂಚ್ ಸೇನೆಗಳು ಒಂದೇ ಸವನೆ ಹಿಂದೆಗೆಯುತ್ತಾ ಹೋಗುತ್ತಿವೆ.

ತಮ್ಮ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್ ಲಿಮಿಟೆಡ್
ಸ್ಥಾಪಿತ 1906
ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು
ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು
ಎಂಟು ಕೋಟಿಗೂ ಮಿಗಿಲಾದ ನಿಧಿಗಳು



Approved from by the Govt of Mysore Certificated by the Agent of the Govt of Cylone & Indian.

THE

Canara Banking Corporation Ltd.

(Incorporated in India)

Estd. 1906.

Head Office : UDIPI. (S. I.)

Capital Authorised	Rs. 25,00,000
Capital Issued, Subscribed & Paid up	Rs. 20,00,000
Reserves	Rs. 9,44,765

ಗುರುವಾರ, ಉಡುಪಿ, ೨-೧೧-೫೦

ಮದ್ರಾಸೀ ರೋಗ

ಜಾತ್ಯಾತೀತ ಜನತಾ ರಾಜ್ಯ ಭಾರತದಲ್ಲಿ, ಅಪಾಯಕರ ಜಾತ್ಯಭಿಮಾನ ಮತ್ತು ಸ್ಥಳಾಭಿಮಾನಗಳಿಗೆ ಸ್ಥಾನವಿಲ್ಲವೆಂಬುದು ಸ್ಪಷ್ಟವಿರುವಾಗ, ಮದ್ರಾಸ್ ಸಂಸ್ಥಾನದ 'ದ್ರಾವಿಡ ಕಾಝಗಮ್' ಮತ್ತು 'ದ್ರಾವಿಡ ಮುನ್ನೇತ್ರ ಕಾಝಗಮ್' ನಂತಹ ಸಂಸ್ಥೆಗಳ ಚಟುವಟಿಕೆಗಳು ತೀರಾ ಖಂಡನೀಯವಿವೆ, ಎಂದು ಬೇರೆ ಹೇಳಬೇಕೆಂದಿಲ್ಲ. ಮುಸ್ಲಿಂ ಲೀಗು ಪಾಕಿಸ್ಥಾನವನ್ನು ಸ್ಥಾಪಿಸಿಕೊಂಡಂತೆ—ಉಗ್ರಗಾಮಿ ಸಿಖ್ಖರು ಸಿಖ್ ಸ್ಥಾನವನ್ನು ಕೇಳುತ್ತಿರುವಂತೆ—ದಕ್ಷಿಣ ಭಾರತವನ್ನು 'ದ್ರಾವಿಡ ಸ್ಥಾನ'ವಾಗಿ ವಿಂಗಡಿಸುವುದೇ ಈ ಸಂಸ್ಥೆಗಳ ಗುರಿಯೆಂದು ಭಾವಿಸಬಹುದು. ಅದಕ್ಕಾಗಿ ಹಿಂದೀ ಭಾಷೆಯನ್ನೂ ಉತ್ತರ ಭಾರತೀಯರನ್ನೂ ದ್ವೇಷಿಸುವ-ಬ್ರಾಹ್ಮಣರಿಗಿದಿರಾಗಿ ಅಬ್ರಾಹ್ಮಣರನ್ನು ಎತ್ತಿಕಟ್ಟುವ—ಕಠಿಣ ಕಾರ್ಯಗಳು ಮತ್ತು ಪ್ರದರ್ಶನಗಳು ಈ ಜಾತೀಯ ಸಂಘಗಳಿಂದಾಗುತ್ತಿವೆ. ಕರಿ ಪತಾಕೆಗಳ ಮೆರವಣಿಗೆ, ಅಂಗಡೀ ಪಹರೆ, ನಿಷೇಧ ಸಭೆ, ಅಶ್ಲೀಲ ಭಾಷಣ ಬರೆಹ ಮತ್ತು ಗೂಂಡಾವರ್ತನೆಗಳ ಈ ಸಂಘದ ಸ್ಪರ್ಶದಿಂದ ಕೇಟನೆಡೆಯ ವಾತಾವರಣವು ಕದಡಿ ಹೋಗಿದೆ. ದಕ್ಷಿಣ ಕನ್ನಡ ಜಿಲ್ಲೆಯಂತಹ ಪಶ್ಚಿಮ ಕರಾವಳಿಗೆ ಈ ಜಾತೀಯ ವಿಷವಾಯು ಇನ್ನೂ ಬೀಸಿಲ್ಲವೆಂಬುದು ಸಮಾಧಾನಕರ. ಆದರೂ ಈ ಕಡೆಯ ವಾತಾವರಣ ಪೂರ್ಣ ಶುದ್ಧವಿದೆ ಎನ್ನಲಾಗುವುದಿಲ್ಲ. ಸಂಸ್ಥಾನದ ಪೂರ್ವ ಕರಾವಳಿ ಜಿಲ್ಲೆಗಳಲ್ಲೆಲ್ಲಾ ಈ ದ್ರಾವಿಡವಾದಿಗಳ ಹಾವಳಿ ಮಿತಿಮೀರಿದಂತಿದೆ. ಮೂಲದಲ್ಲಿ ವ್ಯಕ್ತಿ ಸ್ವಾರ್ಥ, ಬದರೊತ್ತಿಗೆ ಜಾತಿ ಸ್ವಾರ್ಥ ಅನಂತರವೇ ಪರಿಹಿತಾಸಕ್ತಿ, ದೇಶಾಭಿಮಾನ, ಮಾನವ ಜನಾಂಗದ ಕಲ್ಯಾಣ ಚಿಂತನೆ—ಎಂದು ಭಾರತೀಯ ಸಾಮಾನ್ಯ ಮನೋವೃತ್ತಿಯನ್ನು ಚಿತ್ರಿಸಿದರೆ, ಅದೇನೂ ಅತಿರೇಕವೆನ್ನಿಸದು. ಬುಡದ ಸಂಕುಚಿತ ಸ್ವಾರ್ಥಕೀಟಗಳನ್ನು ನಿವಾರಿಸಿ ಕಾಂಡ ಪುಷ್ಟಿಗೊಳಿಸದಿದ್ದರೆ, ಕೊಂಬೆ ರೆಂಬೆಗಳ ಶೋಭೆ ಶಾಶ್ವತವಾಗುವಂತಿಲ್ಲ. ಭಾರತವನ್ನು ಜಾತ್ಯಾತೀತ ಲೌಕಿಕವಾದಿ ರಾಷ್ಟ್ರವಾಗಿ ಮಾರ್ಪಡಿಸಿ, ಜಾತೀಯತೆಗೆ ಕಾದಿನೀರೆರೆದ ಮೇಲೂ ಆ ಕೀಟವುಳಿಯಬಾರದು. ಆದರೂ ಉಳಿದಿದೆ ಎಂಬುದಕ್ಕೆ ದ್ರಾವಿಡ ವಾದದಂತಹ ಕೆಲವು ನಿದರ್ಶನಗಳು ಕಣ್ಣಮುಂದಿವೆ; ಇದು ಅಸಹ್ಯ. ರಾಷ್ಟ್ರಜೀವನಕ್ಕೆ, ಆಧುನಿಕ ಭಾರತದ ಇರವಿಕೆಗೇನೇ ಅಪಾಯಕರ.

'ದ್ರಾವಿಡ ಕಾಝಗಮ್' ಚಳವಳಿಯು ಜಾತೀಯತೆಯಲ್ಲೂ ಜಾತೀಯತೆಯನ್ನು ಅಧಃಸಿರುವ—ಮನೆಯೋಗಲ್ಲ, ಕೋಣೆಯೊಳಗೇನೇ ಅಡ್ಡಗೋಡೆಯೇರಿಸುವ—ಅಸಹ್ಯ ಕಿರಿಕಿಳ. ಆದ್ದರಿಂದ ಅದನ್ನು ಅಮೂಲಾಗ್ರವಾಗಿ ವಿರೋಧಿಸುವ ಕೆಲಸವೊಂದೇ ಇದೆ ಹೊರತು ಅದರ ವಾದ, ಕಾರ್ಯಕ್ರಮಗಳನ್ನು ವಿಮರ್ಶಿಸುವ ಆವಶ್ಯಕತೆಯುಳಿದಿಲ್ಲ. ಭಾರತೀಯರ ಸರ್ವಸಾಮಾನ್ಯ ಜಾತೀಯತಾ ಮನೋವೃತ್ತಿಯ ಮಟ್ಟಕ್ಕೆ ಕೂಡಾ ಏರಲಾರದಷ್ಟು ಕೆಳಗಡೆಯಲ್ಲಿ ಈ ದ್ರಾವಿಡಾಭಿಮಾನವಿರುವುದರಿಂದಲೇ ಅದಕ್ಕೀ ವರೆಗೂ ಜನಬೆಂಬಲ ದೊರಕಿಸಿಕೊಳ್ಳಲಾಗಿಲ್ಲ. ಬಹುತೇಕವಾಗಿ ಪಾಕಿಸ್ತಾನ್ ಚಳವಳಿಯೊಂದಿಗೇನೇ ಮದ್ರಾಸಿನಲ್ಲಿ ತಲೆಯೆತ್ತಿದ್ದ ಈ ದ್ರಾವಿಡಸ್ಥಾನ್ ಚಳವಳಿಯು, ನಿರ್ಜೀವ ಗೊಂಬೆಯಂತೆ ಅದನ್ನು ನಿರ್ಮಿಸಿದ ಕೆಲವರ ಆಟದ ವಸ್ತುವಾಗಿಯೇ ಈ ವರೆಗಿದೆ ಹೊರತು ಜೀವಗೂಡಿ ಬೆಳೆದು ಬಂದುದಿಲ್ಲ; ಇನ್ನಂತೂ ಇಂತಹ ವಿಷವೃಕ್ಷಗಳನ್ನು ಕಟಿಸುವ ಕಾಲವೇ ಹೊರತು ಚಿಗುರಿಸುವ ಋತು ಬರುವಂತಿಲ್ಲ. ಆದರೂ 'ದ್ರಾವಿಡ ಕಾಝಗಮ್' ಚಟುವಟಿಕೆಗಳಿನ್ನೂ ಉಳಿದುಕೊಂಡಿರುವುದು ಜಾತೀಯತಾ ನಂಜು ಎಷ್ಟೊಂದು ನಿವಾರಣಾತೀತವಿದೆ, ಎಂಬುದಕ್ಕೊಂದು ನಿದರ್ಶನವಾಗಿ ಮಾತ್ರ; ಹೀಗೆ ಹಠಹಿಡಿದು ಉಳಿದುಕೊಂಡಂತೆ ತೋರಿಸಿಕೊಳ್ಳುತ್ತಿರುವ ಈ ಕಂಟಕವನ್ನು ಕಡೆಗಣಿಸಲಡ್ಡಿಯೇನು, ಎಂಬ ಪ್ರಶ್ನೆ ಬರಬಹುದು. ಏನಿಲ್ಲೆಂದರೂ ಕಿರುಕುಳರೂಪೀ ಒಳಯಾತನೆಯನ್ನು ಇಂತಹ ಚಳವಳಿ ನಿರ್ಮಿಸಬಲ್ಲುದು. ಸಂಕುಚಿತ ದ್ರಾವಿಡವಾದವನ್ನು ಜಾಹೀರಾಗಿ ಸಮರ್ಥಿಸಲಂಜುವವರಲ್ಲಿ ಕೂಡಾ, ಅದೊಂದು ಪರಿಮಾಣದ ಜಾತೀಯ ಸ್ವಾರ್ಥ ಸಂಕುಚಿತತೆಯಿದೆಯಾದ್ದರಿಂದ, ಅಂಥವರು ಈ ಆಂದೋಲನದ ಕಡೆಗೆ ಆಂತರಿಕ ಸಹಾನುಭೂತಿ ಪ್ರದರ್ಶಿಸುವ ಸಂದರ್ಭಗಳು ಬರಬಹುದು. ಭಾರತೀಯ ಅಖಂಡತ್ವ, ಐಕ್ಯತೆ ಮತ್ತು ಜಾತಿಭೇದ ರಾಹಿತ್ಯವನ್ನು ಕಾಡಿಸಿಕೊಂಡಿರುವ ಕೆಲವು ವಿಶಿಷ್ಟ ಶಕ್ತಿಗಳು ಮಾಯವಾಗುವ ಅಥವಾ ಕುಗ್ಗುವ ಕಾಲಬಂದಾಗ, ಈಗ ಮೂಲೆ ಗುಂಪಾಗಿರುವ ಈ ದುಷ್ಕ್ರಿಯೆ ಸರ್ವತ್ರ ವ್ಯಾಪಿಸಿಕೊಳ್ಳುವಂತಿಲ್ಲಾಗಲೂ ಬಹುದು. ಆದ್ದರಿಂದ ಈ ವಿಷವನ್ನು ಜಣ್ಣವೆಂದು ಕಡೆಗಣಿಸ ಕೂಡದು. ಈ ಕಾಲದಲ್ಲಿ ಈ ಮಾದರಿಯ ಕ್ಷುದ್ರಾಂದೋಲನವು, ಅನ್ಯಾಯ ಮೇಲಾವ ವಿಜಯವನ್ನೂ ಸಾಧಿಸಲೊಲ್ಲದು; ಬದಲಿಗೆ ಅದು ಯಾರ ಹೆಸರು ಹಾಕಿಕೊಂಡು ಸಾಗುತ್ತಿದೆಯೋ ಆ ವರ್ಗದ ಜನತೆಯ ಸ್ಥಿತಿಮತಿ ತೀರಾ ಕೀಳೆಂಬುದನ್ನೇ ಪ್ರದರ್ಶಿಸಿ, ಅವರ ಭವಿಷ್ಯಕ್ಕೇನೇ ಕುಠಾರವನ್ನಿಡುವಂತಹದಿದೆ. ಆದ್ದರಿಂದ ಎಲ್ಲರಿಗಿಂತ ಮುಂದಾಗಿ ಸಂಬಂಧಪಟ್ಟ ವರ್ಗ ಅಥವಾ ಸಮಾಜವೇ ಈ ಕಲ್ಮಷವನ್ನು ಝಾಡಿಸಿಕೊಳ್ಳಬೇಕು. ಸರಕಾರವು ಕಠಿಣ ಹಸ್ತದಿಂದ ಇಂತಹ ದುರಾಂದೋಲನಗಳನ್ನು, ಮತ್ತವಕ್ಕೆ ಆಧಾರವಾಗಿರುವ ಎಲ್ಲಾ ದುಷ್ಕಕ್ತಿಗಳನ್ನು ನಿರ್ಮೂಲಿಸಬೇಕು.

ದೇಶನಾಯಕರ ಸಂಚಾರ—

ಶ್ರೀ ಜಾರಿ ಭಾರತದ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದ್, ಪ್ರಧಾನಿ ಪಂಡಿತ ಜವಾಹರಲಾಲ ನೆಹರು, ಉಪಪ್ರಧಾನಿ ಸರ್ದಾರ್ ವಲ್ಲಭಾಯಿ ಪಟೇಲ್, ಖಾತೆರಹಿತ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ— ಈ ನಾಲ್ವರು ಪ್ರಮುಖರು ರಾಷ್ಟ್ರದ ವಿವಿಧ ಭಾಗಗಳಿಗೆ ಕೊಟ್ಟ ಭೇಟಿ ಮತ್ತು ಉಪದೇಶಗಳು ವಿಶೇಷ ಗಮನಾರ್ಹವಿವೆ. ಡಾ। ಪ್ರಸಾದರು ಅಧ್ಯಕ್ಷಸ್ಥಾನಬಲದಿಂದಲೂ, ಹಿಂದಿನ ಬಿಹಾರ್ ಭೂಕಂಪದ ವೇಳೆ ಕೆಲಸಮಾಡಿದ್ದ ಅನುಭವದಿಂದಲೂ, ಭೂಕಂಪ ಪೀಡಿತ ಅಸ್ಸಾಮಿಗೆ ಭೇಟಿ ಕೊಡಲು ಅರ್ಹರಾದವರೇ. ಕಾಶ್ಮೀರದ ಪ್ರಶ್ನೆ ಭದ್ರತಾ ಕೌನ್ಸಿಲಿನ ಮುಂದೆ ಬಂದಿರುವ-ಜನ್ನು ಮತ್ತು ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ಮಹಾಸಮಿತಿಯು ಕಾಶ್ಮೀರದ ಭವಿಷ್ಯ ಸಂಬಂಧದ ನಿರ್ಣಯ ಮಾಡಿರುವ—ಸಮಯದಲ್ಲೇ ಕಾಶ್ಮೀರದ ನಿಕಟ ಸಂಬಂಧಿ ಮತ್ತು ಪ್ರಧಾನಿ ಪಂಡಿತ ನೆಹರುಗಳು ಶ್ರೀನಗರಕ್ಕೆ ಭೇಟಿಯೀಯುತ್ತಿರುವುದು ಸಮಂಜಸವಾದುದೇ. ವಯಸ್ಸು 75ನ್ನು ತುಂಬಿಸಿಕೊಂಡು 76ಕ್ಕೆ ಕಾಲಿಡುವ ಮುಹೂರ್ತವನ್ನು ತನ್ನ ಸ್ವಂತ ಊರುಗಳಾದ ಅಹಮ್ಮದಾಬಾದ್, ಬೊಂಬಾಯಿಗಳಲ್ಲಿ ಕಳೆಯಲು ಸರ್ದಾರ್ ಪಟೇಲರು ಅತ್ತ ಹೋಗಿರುವುದು ಕೂಡಾ ಸಮರ್ಪಕ ವರ್ತನೆ. ತನ್ನ ಹುಟ್ಟು ಕ್ಷೇತ್ರಗಳಿರುವ ಮದ್ರಾಸ್, ಮತ್ತು ಮೈಸೂರಿಗೆ ರಾಜಾಜಿ ಬಂದು ಹೋದುದು ಕೂಡಾ ಹಾಗೆಯೇ. ಅಂತೂ ಸ್ವತಂತ್ರ ಭಾರತದ ಕೇಂದ್ರ ಮತ್ತು ಸಂಸ್ಥಾನಗಳ ಕಾಂಗ್ರೆಸ್ ಮಂತ್ರಿಮಂಡಲಗಳ ಸಚಿವರಲ್ಲಿ ಹಚ್ಚಿನವರು ಸದಾ ಕಾಲ ಪ್ರವಾಸದಲ್ಲೇ ಇರುತ್ತಾರೆ. ಈ ಸಂಚಾರ ಸಂಬಂಧದ ಟೀಕೆ, ವಿಮರ್ಶೆಗಳಂದು ದೇಶದಲ್ಲಿ ಕೇಳಬರುತ್ತಿವೆ. ಬೇರಾವ ಎಷ್ಟಿಗೆ ಹೇಗಿದ್ದರೂ ಜನತೆಯ ಪ್ರೀತಿಪಾತ್ರರಾದ ಅಧಿಕಾರೀ ನಾಯಕರ ಭೇಟಿ ಮತ್ತು ಉಪದೇಶಗಳು ಸಾರ್ವಜನಿಕರಿಗೆ ಬೇಡವೆನ್ನಿಸುವಂತಿಲ್ಲ. ನಿದರ್ಶನೆಕ್ಕಾಗಿ ಸಂಚಾರಪ್ರಿಯ ನೆಹರಗಳು ತನ್ನಿಂದ ಸಾಧ್ಯವಿರುವಷ್ಟು ಪ್ರವಾಸಗಳನ್ನು ಕೈಕೊಳ್ಳುತ್ತಿರುವರಾದರೂ ಅವರ ಭೇಟಿಯು ಅದಮ್ಯ ಆತುರವನ್ನು ಕಟ್ಟಿಕೊಂಡಿರುವ ಭಾಗಗಳು ರಾಷ್ಟ್ರ ತುಂಬಾ ಇವೆ. ಎಲ್ಲವನ್ನೂ ತೂಗಿ ನೋಡುವಾಗ, ಇಂದಿನ ಅತೃಪ್ತ, ಅಸಹ್ಯ ಕಷ್ಟನಷ್ಟಗಳ ನಡುವಿನಲ್ಲೂ ಸಾಮಾನ್ಯ ಜನರಲ್ಲಿ ಭವಿಷ್ಯದ ಕುರಿತು ಭರವಸೆಯುಳಿದಿರುವದು ನೆಹರು, ವಲ್ಲಭಾಯಿ, ಪ್ರಸಾದರಂತಹ ವಿಶ್ವಾಸಾರ್ಹ ನಾಯಕರ ಮಾತುಗಳ ಮೇಲಿಂದಲೇ. ಆದ್ದರಿಂದ ಜನಪ್ರಸಿದ್ಧ ನಾಯಕರ ಪ್ರವಾಸಗಳಿಂದ ಭಕ್ತಿ ನಷ್ಟ ಮಾತ್ರವಲ್ಲ—ಕೆಲವು ಸಂದೇಹಗಳೂ ಕಳೆದುಹೋಗುತ್ತಿವೆ. ಮಹಾ ಚುನಾವಣೆ ಸಮೀಪಿಸುತ್ತಾ ಬಂದಂತೆ ನಾಯಕರ ಪ್ರವಾಸ ಹೆಚ್ಚುತ್ತಾ ಹೋಗುವುದು ಸ್ವಾಭಾವಿಕ.

೦೦೦

ಹಿಂದಿನ ವಾರ ಸೂರತ್, ಬಾರ್ಡೋಲಿ ಮೊದಲಾದ ಗುಜರಾತು ಸ್ಥಳಗಳಲ್ಲಿ ಸಂಚರಿಸಿ, ಅತ್ಯಂತ ಸಂಭ್ರಮದ ಸ್ವಾಗತವನ್ನು ಪಡೆದು ಬಂದಿದ್ದ ಅಧ್ಯಕ್ಷ ಡಾ। ಪ್ರಸಾದರು ಈ ವಾರದಲ್ಲಿ ಭೂಕಂಪ ಪೀಡಿತ ಅಸ್ಸಾಮಿಗೆ ಭೇಟಿಕೊಟ್ಟಿದ್ದಾರೆ. ಅಲ್ಲಿ ವಿಶೇಷ ಜಖಂಗೊಳಗಾದ ನೆಲೆಗಳನ್ನು ಸಂದರ್ಶಿಸಿ, ಗೌಹಾತಿಯಲ್ಲಿ ಭಾಷಣವೀಯುತ್ತ ಅಧ್ಯಕ್ಷ ಪ್ರಸಾದರೆಂದರು: "ಸ್ವಾತಂತ್ರ್ಯ ದೊರೆತೊಡನೆಯೇ, ಅದರ ಪ್ರಯೋಜನಗಳನ್ನು ಜನತೆಗೊದಗಿಸಿಕೊಡುವ ಘಟನೆಯೊಂದನ್ನು ಮುಂದಾಳುಗಳು ತಯಾರಿಸಿಕೊಂಡರು. ಜನತೆ ಹೆಗ್ಗಳಿಕೆ ಪಡುವಂತಹ ರಾಜ್ಯಘಟನೆ ತಯಾರಾಯಿತೆಂಬುದಕ್ಕಾಗಿ ನಾನು ತೃಪ್ತನಿದ್ದೇನೆ. ಈ ಘಟನೆಯನ್ವಯ 18 ಕೋಟಿಗೂ ಮಿಕ್ಕಿದ ಜನತೆಗೆ ಮತಾಧಿಕಾರ ದೊರೆತಿದೆ; ನಿಜಕ್ಕೂ ಇದು ಲೋಕದ ಚರಿತ್ರೆಯಲ್ಲೇ ಅದ್ವಿತೀಯವಾದುದು. ಆದರೆ ಜನತೆ ಅದನ್ನು ಹೇಗೆ ಉಪಯೋಗಿಸಿಕೊಳ್ಳುವುದೆಂಬುದನ್ನಾಧರಿಸಿಯೇ ಈ ಘಟನೆಯ ಉದ್ದೇಶ ಸಾಫಲ್ಯವಿದೆ. ಯಾವ ಸ್ಫೂರ್ತಿಯಿಂದ ರಾಜ್ಯಘಟನೆ ತಯಾರಾಗಿರುವುದೋ ಅದೇ ಸ್ಫೂರ್ತಿಯಿಂದ ಜನತೆಯು ಇದನ್ನು ಬಳಸಿಕೊಳ್ಳಬಲ್ಲುದಾದರೆ, ಭಾರತವು ಲೋಕ ರಾಷ್ಟ್ರಗಳ ನ

ಹೊಸವಾರ್ತೆ

'ಪುಷ್ಪ' ಮಾಸಪತ್ರಿಕೆ ಶ್ರೀ ಎಂ. ವಿ ಹೆಗ್ಡೆಯವರಿಂದ ಹೊಸ ಮಾದರಿಯಲ್ಲಿ ಪ್ರಕಟವಾಗುವದು. ಇದೇ ನವಂಬರ ತಾ. 15ಕ್ಕೆ ಹೊರಬೀಳುವ ಪ್ರಥಮ ಸಂಚಿಕೆಯನ್ನು ನಿರೀಕ್ಷಿಸಿರಿ. ವಾರ್ಷಿಕ ಚಂದಾ 3-0-0.

ವಿವರಗಳಿಗೆ:-

ಕೆ. ಜಿ. ಶೆಟ್ಟಿ,

ವ್ಯವಸ್ಥಾಪಕ,

'ಪುಷ್ಪ' ಕಾರ್ಯಾಲಯ,

ಶಿರ್ವ, ದ. ಕ.

-ಜನತೆಗೆ ಅವರ ಬೋಧನೆ

ಡುವೆ ಒಂದು ಘನಸ್ಥಾನವನ್ನು ಸಂಪಾದಿಸಿಕೊಳ್ಳುವುದು ನಿಶ್ಚಯ. ತಮ್ಮ ಮೇಲೀಗ ಬಿದ್ದಿರುವ ಅಧಿಕ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಂಡು ರಾಷ್ಟ್ರ ರಚನೆಯಲ್ಲಿ ತಮ್ಮ ಭಾಗವನ್ನು ನಿರ್ವಹಿಸಬೇಕೆಂದು ನಾನು ಜನರನ್ನು ಕೇಳಿಕೊಳ್ಳುತ್ತೇನೆ", ಅಧ್ಯಕ್ಷ ಪ್ರಸಾದರು ಅಸ್ಸಾಮಿನಿಂದ ಈಗ ಕಲ್ಕತ್ತೆಗೆ ಬಂದು ಬಂಗಾಳಿಗಳಿಗೂ ಆಗತ್ಯವುಳ್ಳ ಆಶ್ವಾಸನೆ ಮತ್ತು ಕರ್ತವ್ಯ ಪ್ರೇರಣೆಯನ್ನಿತ್ತಿದ್ದಾರೆ.

oo oo oo

ಪಂಡಿತ ನೆಹರುಗಳು ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ಬಂದು ಅಲ್ಲಿ ಒಕ್ಟೋಬರ್ ತಾ 28ರಲ್ಲಿ ಸೇರಿದ್ದ ಅಖಿಲ ಜಮ್ಮು ಮತ್ತು ಕಾಶ್ಮೀರದ ರಾಷ್ಟ್ರೀಯ ಸಮ್ಮೇಲನದ ಮಹಾ ಸಮಿತಿಗೆ ಭಾಷಣ ಮಾಡುತ್ತಾ ಹೇಳಿದ್ದರು: "ಚಾರಿತ್ರಿಕ ಸಂಬಂಧಗಳು ಮತ್ತು ಪರಸ್ಪರ ಸೌಹಾರ್ದತೆಗಳ ಜತೆಯಲ್ಲಿ, ಕಾಶ್ಮೀರ ಸಂಬಂಧದೊಳಗೆ ಹಲವು ಮೂಲಭೂತ ವಿಷಯಗಳೂ ಸೇರಿಕೊಂಡಿರುವುದರಿಂದ, ಈ ಸಂಬಂಧದಲ್ಲಿ ತಪ್ಪು ತೀರ್ಮಾನವಾದಲ್ಲಿ ಅದು ಭಾರತವನ್ನಷ್ಟೇ ಅಲ್ಲ, ಅಖಿಲ ಪಾಕಿಸ್ತಾನವನ್ನು ಕಂಪಾಯಮಾನಗೊಳಿಸುವುದು. ಇತರ ದೇಶಗಳಾದರೋ ಈ ಪ್ರಶ್ನೆಯ ಮೇಲ್ಭಾಗವನ್ನಷ್ಟೇ ನೋಡುತ್ತಿವೆ ಹೊರತು ಭಾರತವು ವಹಿಸಿನಿಂತಿರುವ ಮೂಲಭೂತ ವಿಷಯಗಳ ಕಡೆಗೆ ನೋಡುವಂತಿಲ್ಲ. ಕೆಲವೇ ವಾರಗಳೊಳಗೆ ಇತ್ಯರ್ಥ ಹೊಂದಬಹುದೆಂಬ ನಿರೀಕ್ಷೆಯಿಂದ ಭದ್ರತಾ ಕೌನ್ಸಿಲಿಗೆ ಕಾಶ್ಮೀರ ಪ್ರಶ್ನೆಯನ್ನೊಪ್ಪಿಸಿದ್ದರೂ, ಅದಿಂದಿಗೆ ಮೂರು ವರುಷಗಳಿಂದಲೂ ಅನಗತ್ಯವಾಗಿ ಉದ್ದಕ್ಕೆಳೆಯಲ್ಪಡುತ್ತಾ ಇದೆ. ಆ ಸಮಿತಿಯ ಕೆಲವು ಸದಸ್ಯರು ಮೂಲಭೂತ ವಿಷಯಗಳಲ್ಲದ ಸಂಗತಿಗಳ ಕಡೆಗೆ ಒಂದು ಕಣ್ಣಿಟ್ಟುಕೊಂಡೇ ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸುವ ಪ್ರಯತ್ನದಲ್ಲಿದ್ದಾರೆಂಬುದು ಸ್ಪಷ್ಟವಿದೆ. ಕಾಶ್ಮೀರವೆಲ್ಲಿಯಾದರೂ ಪಾಕಿಸ್ತಾನಕ್ಕೆ ಸೇರಿಹೋದಲ್ಲಿ ಅದು ಸಂಪೂರ್ಣವಾಗಿ ಪತನಗೊಳ್ಳುವುದು. ಕಾಶ್ಮೀರವು ಭಾರತದ ಒಂದು ಭಾಗವಾಗಿರಬೇಕೆಂದು ನಾನಿಚ್ಛಿಸುತ್ತೇನೆ. ಕಾಶ್ಮೀರ ಮತ್ತು ಭಾರತಗಳೊಳಗೆ ನಿಕಟ ಬಾಂಧವ್ಯವಿರಬೇಕೆಂದು ನಾನು ಬಯಸುತ್ತೇನೆ. ಓರ್ವ ಕಾಶ್ಮೀರಿ ಮತ್ತೋರ್ವ ಭಾರತೀಯನಿರುವ ನಾನು ಕಾಶ್ಮೀರವು ಪಾಕಿಸ್ತಾನದೊಂದು ಭಾಗವಾಗುವದನ್ನು ಬಯಸಲಾರೆ. ಯಾಕೆಂದರೆ ಹಾಗಾದಲ್ಲಿ ಕಾಶ್ಮೀರದ ಬಾಳುವೆ ಮುಗಿದಂತೆಯೇ ಎಂಬುದು ನನಗೆ ಪೂರ್ಣ ಮನವರಿಕೆಯಾಗಿದೆ. ಕೊರಿಯಾ ಪ್ರಶ್ನೆ ಮತ್ತು ರಶ್ಯಾ ಅಮೆರಿಕ ಘರ್ಷಣೆ ಮುಂತಾದವುಗಳಿಂದ ತಲೆಬಿಸಿಯಾಗಿರುವ ಭದ್ರತಾ ಕೌನ್ಸಿಲಿಗೆ ಕಾಶ್ಮೀರ ಪ್ರಶ್ನೆಯನ್ನು ಶಾಂತಚಿತ್ತದಿಂದ ಅಥವಾ ಅದರ ಗುಣಗಳನ್ನಾಧರಿಸಿ ಪರ್ಯಾಲೋಚಿಸಲು ಸಾಧ್ಯವಾಗಿಲ್ಲ. ನಮಗೆ ಅತ್ಯಂತ ಸ್ಪಷ್ಟ ಮತ್ತು ತೀರಾ ಸುಲಭವಾಗಿ ತೋರುತ್ತಿರುವ ಕಾಶ್ಮೀರ ಪ್ರಶ್ನೆಯು ಇಷ್ಟು ಕಠಿಣ ಮತ್ತು ಅಭೇದ್ಯವಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಯಾಕೆ ತೋರಬೇಕೋ ನನಗೆ ಅರ್ಥವಾಗುವದಿಲ್ಲ. ಕೆಲವೇ ದಿನಗಳಲ್ಲಿ ಅವರೀ ಕುರಿತು ಒಂದು ನಿರ್ಧಾರಕ್ಕೆ ಬರುವರೆಂದೇ ನಾನು ಆಗ ಯೋಚಿಸಿದ್ದೆ. ಆದರವರು ತಡಮಾಡುತ್ತಾ, ಇದರೊಂದಿಗೆ ಇತರ ಪ್ರಶ್ನೆಗಳನ್ನೂ ಮಿಶ್ರ ಮಾಡುತ್ತಾ, ಮೂರು ವರುಷಗಳು ಕಳೆದೂ ಈಗ ಕೂಡಾ ತೀರ್ಮಾನವೊಂದಕ್ಕೆ ಬಂದಿಲ್ಲ." ಪಂಡಿತ ನೆಹರುಗಳು ತಾ. 29ರಲ್ಲಿ ಶ್ರೀನಗರದಲ್ಲಿ ವಿದ್ಯಾರ್ಥಿಗಳ ಸಭೆಯಲ್ಲಿ ಮಾತಾಡುತ್ತಾ ಕಾಶ್ಮೀರ ಸಂಬಂಧವಾಗಿ ಪಾಕಿಸ್ತಾನದ ಧೋರಣೆಯು ಯುದ್ಧಾರ್ಥತೆಯೆನ್ನಬಹುದನ್ನು ಬಯಲಿಗೆಳೆದಿದ್ದಾರೆ. "ಜನತೆಯ ನಡುವೆ ಅನೈಕ್ಯತೆ, ಅರಾಜಕತೆ ಮತ್ತು ಗೊಂದಲಗಳನ್ನು ನಿರ್ಮಿಸುವುದೇ ಕಾಶ್ಮೀರ ಸಂಬಂಧದಲ್ಲಿ ಪಾಕಿಸ್ತಾನದ ಯುದ್ಧಾರ್ಥ ಧೋರಣೆ. ಪಾಕಿಸ್ತಾನ್ ಕಾಶ್ಮೀರದ ವಿಧ ನವು ಮೂಲತಃ ತಪ್ಪಾಗಿದೆ; ಮತ್ತೀ ಹಾದಿಯನ್ನು ಅವರು ಬಿಡದಿದ್ದಲ್ಲಿ ಅದರ ದುಷ್ಪರಿಣಾಮಗಳನ್ನು ಅವರು ಅನುಭವಿಸಬೇಕಾಗಿದೆ, ಎಂಬುದು ನಿಶ್ಚಯ. ಆದರೆ ತಮ್ಮ ಹಾದಿ ಬದಲಾಯಿಸಿಕೊಳ್ಳುವುದು ಅವರನ್ನೇ ಸೇರಿದ್ದು. ಅವರಿಗಾಗಿ ನಾವದನ್ನು ಮಾಡುವಂತಿಲ್ಲ. ಅವರ ಧೋರಣೆಯು ಕಟ್ಟಕಡೆಗೆ ಅವರಿಗೇನೇ ಅನಾಹುತವನ್ನು ತಂದೊಡ್ಡಲಿದೆ ಎಂದು ನನಗೆ ಖಾತ್ರಿಯುಂಟು" ಎಂದು ನೆಹರು ಖಂಡಿತದ ಮಾತುಗಳನ್ನಾಡಿದ್ದಾರೆ.

oo oo oo

ಸರ್ದಾರ್ ವಲ್ಲಭಾಯಿಗಳು ಒಕ್ಟೋಬರ್ 30ರಲ್ಲಿ ಅಹಮ್ಮದಾಬಾದಿಗೆ ಹೋಗಿ 31ರಲ್ಲಿ ಬೊಂಬಾಯಿಗೆ ಬಂದಿದ್ದಾರೆ. ಒಕ್ಟೋಬರ್ 31 ಸರ್ದಾರ್ ಪಟೇಲರ ಜನ್ಮದಿನ. ಸ್ವತಂತ್ರ ಭಾರತ ಯಂತ್ರದ ಮೂಲ ಸಾರಥಿಯಾಗಿದ್ದು ತನ್ನ ದೃಢ ನಿರ್ಧಾರ, ಕಾರ್ಯನಿಷ್ಠೆ, ಕಲ್ಪನಾಶಕ್ತಿ, ಎಚ್ಚರಿಕೆಯಿಂದ ಸ್ವತಂತ್ರ ಭಾರತವನ್ನು ಹಲವು ಗಂಡಾಂತರಗಳೆಡೆಯಿಂದ ಜಯಶೀಲವಾಗಿ ಮುನ್ನಡೆಯಿಸಿತಂದ ಸರ್ದಾರರ ಕಡೆಗೆ ರಾಷ್ಟ್ರವೀ ಸಂದರ್ಭದಲ್ಲಿ ಕೃತಜ್ಞತೆಯನ್ನು ಸೂಚಿಸುವುದು ಸ್ವಾಭಾವಿಕ, "ನಾನು ಪಂಡಿತ ನೆಹರುಗಳ ನಮ್ರ ಅನುಯಾಯಿ. ಗಾಂಧಿಜೀ ತನ್ನ ವಾರಿಸ್ದಾರನೆಂದು ಸಾರಿದ ಪಂಡಿತ ಪಂಡಿತನೆಹರುಗಳ ನಾಯಕತ್ವಕ್ಕೆ ದ್ರೋಹ ಬಗೆಯುವದೆಂದರೆ ಅದು ದೈವ ದ್ರೋಹ. ನಾನಂತಹ ದ್ರೋಹಿಯಾಗಲಾರೆ" ಎಂದು ದೇವರ ಸಾಕ್ಷಿಯಾಗಿ ಇತ್ತೀಚೆಗೆ ಸಾರಿರುವ—ಪಂಡಿತ ನೆಹರುಗಳನ್ನು ಮುಂದಿಟ್ಟುಕೊಂಡು ರಾಷ್ಟ್ರ ಕಾರ್ಯಗಳನ್ನು ಶಕ್ತಿಪೂರ್ಣವಾಗಿ ನಿರ್ವಹಿಸುತ್ತಿರುವ—ಈ ರಾಷ್ಟ್ರ ನಾಯಕನಿಗೆ ಅವರ 76ನೇ ಜನ್ಮೋತ್ಸವ ಮುಹೂರ್ತದಲ್ಲಿ ಮುಂಬಾಯಿಯಲ್ಲಿ ಅಪೂರ್ವ ರೀತಿಯ ಸನ್ಮಾನ ಮತ್ತು ಕಾಣಿಕೆಗಳರ್ಪಿಸಲ್ಪಟ್ಟವು. ತಾ. 30ರಲ್ಲಿ ಅಹಮ್ಮದಾಬಾದಿನ 'ಗಿರಣಿ ಮಜದೂರ ಸಂಘ'ದ ಹೊಸಕಟ್ಟಡಕ್ಕೆ ಭೇಟಿಕೊಟ್ಟ ಸರ್ದಾರ್ ಪಟೇಲರು ಭಾರತೀಯ ಮಜೂರರ ರೀತಿ ನೀತಿ ಹೇಗಿರಬೇಕೆಂಬ ಕುರಿತು ಹಿತೋಪದೇಶವಿತ್ತರು. "ಭಾರತೀಯ ಮಜೂರರಿಗೆ ಈದಿನ ಸ್ಪಷ್ಟ ಮಾರ್ಗದರ್ಶಿತ್ವದ ಅವಶ್ಯಕತೆಯಿದೆ. ಜಾಗತಿಕ ಚಳವಳಿಗಳ ನೆರೆಯಲ್ಲಿ ತೇಲಿಹೋಗದೆ ಹಿಂದೀ ಕೆಲಸಗಾರರು ತಡದು ನಿಲ್ಲದಿದ್ದರೆ ಅವರು ತಮಗೂ ರಾಷ್ಟ್ರಕ್ಕೂ ಹಾನಿಯನ್ನು ತಂದುಕೊಳ್ಳುವರು. ಇತ್ತೀಚೆಗೆ ನಡೆದ ಬೊಂಬಾಯಿ ಮುಷ್ಕರದತ್ತ ನೋಡಿರಿ. ಅದರ ಪರಿಣಾಮಗಳೇನೆಂಬುದನ್ನು ಅವಲೋಕಿಸುವ ಕಾಲವೀಗ ಒದಗಿದೆ. ಬೊಂಬಾಯಿ ಕೆಲಸಗಾರರು, ಎಲ್ಲಾ ಕೆಲಸಗಾರರಿಂದ ಸಹಾನುಭೂತಿ ಮುಷ್ಕರವೊಂದಕ್ಕೆ ಕರೆಕೊಟ್ಟಿದ್ದರು; ಅದು ಸಂಭವಿಸುತ್ತಿದ್ದರೆ ಇನ್ನಷ್ಟು ಹೆಚ್ಚು ಹಾನಿಗಳನ್ನು ತಂದೊಡ್ಡುತ್ತಿದ್ದಿತು. ಬೊಂಬಾಯಿ ಮುಷ್ಕರವನ್ನು ಆರಂಭಿಸುವ ಮೊದಲು ಅದು ಕಾಯಿದೇಶೀರವಾದುದೇ ಮತ್ತು ಉಚಿತವಾದುದೇ ಎಂಬುದನ್ನು ಪರ್ಯಾಲೋಚನೆ ಮಾಡಿಕೊಳ್ಳಬೇಕಿದ್ದಿತು. ವರ್ಗದ್ವೇಷ ಮತ್ತು ವರ್ಗಕಲಹಗಳನ್ನು ತಪ್ಪಿಸಲು ಉದ್ದಿಮೆ ವಿವಾದಗಳನ್ನು ಮಧ್ಯಸ್ಥಿಕೆಯಿಂದ ತೀರ್ಮಾನಿಸಬೇಕೆಂಬುದೇ ಮಹಾತ್ಮಾ ಗಾಂಧಿಯವರ ತತ್ವವಾಗಿತ್ತು. ಆ ತತ್ವವು ಅಹಮ್ಮದಾಬಾದಿನಲ್ಲಿ ಮೊದಲೊಮ್ಮೆ ಕಾರ್ಯತಃ ಜಾರಿಯಾಗಿದ್ದಿತು. ಕಾಂಗ್ರೆಸು ಅಧಿಕಾರಕ್ಕೆ ಬಂದಮೇಲೆ ಈ ಸಂಬಂಧದ ಶಾಸನವೇ ಆಗಿದೆ. ಬೊಂಬಾಯಿಯ ಕೆಲಸಗಾರರು 60 ದಿನಗಳವರೆಗೆ ಕೆಲಸಕ್ಕೆ ಹೋಗದೆ ನಿಂತು, ತಾವು ಪಡೆದ ಬೋನಸ್ಸುಗಳನ್ನು ಜೀರ್ಣಿಸಿಕೊಂಡರು. ಅವರು ಹೂಡಿದ್ದುದು ಬೇಕಾಯಿದೇಶೀರ ಮುಷ್ಕರವಾಗಿದ್ದುದರಿಂದ ಮುಷ್ಕರಾವಧಿಯ ಸಂಬಳ ಕೇಳುವ ಎಡೆಗಾರಿಕೆ ಈಗ ಅವರಿಗಿಲ್ಲ. 60 ದಿನಗಳ ಸಂಬಳಗಳನ್ನು ಅವರು ಕಳಕೊಂಡರು. ಮತ್ತು ಅವರೀ ಮೂಲಕ ನಿರ್ಮಿಸಿದ ಕಹಿ ಭಾವನೆಯು ಮುಂದಿನ ಭವಿಷ್ಯದಲ್ಲೂ ಪರಿಣಾಮ ಬೀರುವದನ್ನು ಕಾಣುವಂತಾದೀತು. ವಸ್ತ್ರದ ಕಠಿಣ ಅಭಾವವಿರುವಾಗ 60 ದಿನಗಳ ವರೆಗೆ ಗಿರಣಿಗಳನ್ನು ಮುಚ್ಚುವದೆಂದರೆ ಅದು ಮಹಾಪರಾಧ. 'ಕಿಸಾನ್ ಮಜದೂರ ರಾಜ್ಯ'ದ ಘೋಷಣೆಗಳೀಗ ಕೇಳಬರುತ್ತಿವೆ. ಗುಲ್ಜಾರಿಲಾಲ್ ನಂದಾರಂತಹ ಜೀವಾವಧಿ ಮಜೂರ ಕೆಲಸಗಾರರಿಂದ ಸ್ಥಾಪಿಸಲ್ಪಟ್ಟದಕ್ಕಿಂತ ಉತ್ತಮವಾದ ಬೇರೊಂದು ಮಜೂರ ರಾಜ್ಯವೇನಿದ್ದೀತ? ನಿನಗೊತ್ತಿಲ್ಲದ ಕೆಲವು ಕೆಲಸಗಾರರಿಂದ ಕೂಡಿದರೇನೇ ಅಂತಹದನ್ನು ಮಜೂರ ರಾಜ್ಯವೆಂದು ಕರೆಯಬಹುದೆ? ನನಗಿಂತ ಉತ್ತಮವಾದ ರೈತ ಪ್ರತಿನಿಧಿಯು ಬೇರಾವುದಿದ್ದೀತು? ನನ್ನ ನರನಾಡಿಗಳಲ್ಲೆಲ್ಲಾ ಕಿಸಾನ್ ರಕ್ತವೇ ಹರಿದಾಡುತ್ತಿದೆ. ನಾನೇ ರೈತ ಪ್ರತಿನಿಧಿಯೆಂದು ಬೇರಾರ ವಿರುದ್ಧವಾಗಿಯಾದರೂ ನಿಲ್ಲಬಲ್ಲೆ. ಮಜೂರರು ಮತ್ತು ರೈತರು ಕೇವಲ ಘೋಷಣೆ, ಘರ್ಜನೆಗಳಿಗೆ ಮರುಳಾಗಿ ಹೆಜ್ಜೆ ತಪ್ಪಬಾರದು" ಎಂದು ಸರ್ದಾರ್ ವಲ್ಲಭಾಯಿಗಳ ಉಪದೇಶ.

Get the habit - - - - - - - of Saving a little out of each pay cheque. It's regularity that counts You'll be surprised how quickly small sums mount up Set a goal now. Then go after it It's not how fast, but how regular. "Steady does it."

The Canara Industrial & Banking Syndicate Ltd.

H. O **UDIPI**, S. K.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **3--11—1950**ರಿಂದ

ಇಡೀ ಭಾರತಕ್ಕೇನೆ ಒಂದು ಭವಿಷ್ಯ ಸೂಚಿಸಿ ಸಂದರ್ಭ ಬಂದಾಗ ಹೋಲಿವುದ್ದಿನ ಉತ್ತಮೋತ್ತಮ ಚಿತ್ರಗಳೊಂದಿಗೆ ಪ್ರತಿಸ್ಪರ್ಧಿಸಲೂ ಅರ್ಹತೆ ಪಡೆದ

ಮೆಹಬೂಬರ

❖ ಅಂದಾಜ್ ❖

ನರ್ಗೀಸ್, ರಾಜಕಪೂರ್, ದಿಲೀಪ್, ಕುಕ್ಕು, ವಿ. ಎಚ್. ದೇಸಾಯಿ ನೊದಲಾದವರು.

NOTICE.

The Bombay Life Assurance Company, Limited.

Notice having been given of the Loss of Policy No. 130506 on the Life of K Mahabala Adiga a duplicate policy will be issued unless objection is lodged with us within one month from this date.

K. BALASUBRAHMANYAM
Manager & Actuary.

Bombay, 28—10—1950.

ರಸನಿಮಿಷ

ಭದ್ರತಾ ಮಂಡಳದ ಸಭೆಯಲ್ಲಿ ಕಾರ್ಯದರ್ಶಿಯ ಹೆಸರಿನ ನಿರ್ಣಯವಾಗಲಿಲ್ಲ

— ಶೇಕ್ಸ್‌ಪಿಯರ್ 'ಹೆಸರಿನಲ್ಲೇನಿದೆ?' ಎಂದು ಪ್ರಶ್ನಿಸಿದರೂ, ಅಮೇರಿಕನ್ನರಿಗೆ ಹೆಸರಿನಲ್ಲೇ ಎಲ್ಲವೂ ಇರುವ ಹಾಗೆ ಅನಿಸುತ್ತದೆ.

೦೦೦೦

ಜರ್ಮನಿಯಲ್ಲಿ ಒಂದೇ ಸರಕಾರ ರಚಿಸಲು ಅಮೇರಿಕೆಯ ಧಿಕ್ಕಾರ.

— ಒಂದೇ ಸರಕಾರದ ಸೂಚನೆ ಮೊದಲು ಬಂದುದು ಕಮ್ಯೂನಿಸ್ಟರ ಕಡೆಯಿಂದ, ಎಂಬುದರಿಂದಲೇ?

೦೦೦೦

ದ್ರಾವಿಡ ಮಹಾಮಂಡಳದವರು ಉತ್ತರ ಹಿಂದೀಯರ ಅಂಗಡಿಯ ಮುಂದೆ ಪಿಕೆಟಿಂಗ್ ಹೂಡುತ್ತಿದ್ದಾರೆ.

— ಮಾತುಂಗದಲ್ಲೂ, ದಿಲ್ಲಿಯ ಸೆಕ್ರೆಟೇರಿಯಟ್ಟಿನಲ್ಲೂ ಇರುವ ಮದರಾಸಿ ಜೀವಗಳಿಗೆ ಏನು ಕಷ್ಟ ಬರಬಹುದೋ ಎಂದು ಎದೆ ನಡುಗುತ್ತೆ.

೦೦೦೦

ಬರಗಾಲ ಭೀತಿ ಇರುವ ಪ್ರದೇಶಗಳಿಗೆ ಭಾರತ ಸರಕಾರ ಆಹಾರ ಧಾನ್ಯದ ವಿಶೇಷ ಸರಬರಾಯಿ ನಡೆಯಿಸುವುದು. (ಪಿ. ಟಿ. ಐ. ಸುದ್ದಿ).

— 'ಬರಗಾಲ' ಎಂದರೆ ಎಷ್ಟು ಟನ್ನು ಧಾನ್ಯ, ಎಷ್ಟು ಕೆಲೋರಿ ಉಷ್ಣ ಎಂಬುದನ್ನು ಆಹಾರದ ಇಲಾಖೆ ಪ್ರಚುರ ಮಾಡಲಿ.

೦೦೦೦

"ಪರೀಕ್ಷೆ ಪಾಸಾಗಲು ಒಂದೇ ದಾರಿ" (ಜಾಹೀರಾತಿನ ಶಿರೋನಾಮ)

ಹೌದು, ಪಾಸಾಗುವುದು ಒಂದೇ.

೦೦೦೦

ನಮ್ಮ ಚರಿತ್ರೆ ದೊಡ್ಡದು, ನಮ್ಮ ಸಾಹಿತ್ಯ ಬೆಳೆದಿದೆ, ನಮಗೊಂದೇ ಕೊರತೆ... (ಒಬ್ಬ ನಾಯಕರ ಭಾಷಣ)

— ... ...ಬುದ್ಧಿ ಅಥವಾ ಸಾಮಾನ್ಯ ತಿಳುವಳಿಕೆ.

೦೦೦೦

ಎಲ್ಲರೂ ದುಡ್ಡೇ ದೇವರು ಅನ್ನುವಂತೆ ತೋರುತ್ತದೆ (ಮಂಬಯಿ ಅದೇ ಭಾಷಣ)

— ಹಾಗಿದ್ದು ಗಾಂಧಿ ಸೂತ್ರದಂತೆ ಇದನ್ನು ಸ್ಥಾಪಿಸಬಹುದು.

(೧) ಭಾರತಕ್ಕೆ ದೇವರು ರೊಟ್ಟಿಯ ರೂಪದಲ್ಲೇ ಬರಬೇಕು

(೨) ರೊಟ್ಟಿಯೊಂದರೆ ದೇವರು

(೩) ಈ ರೊಟ್ಟಿ ಸಿಗಲು ದುಡ್ಡು ಬೇಕು

(೪) ದುಡ್ಡು = ರೊಟ್ಟಿ = ದೇವರು

(೫) ∴ ದುಡ್ಡು = ಏಕ ದೇವರು

ಚೀನವು ತಿಬೇಟ ನುಗ್ಗಿದ್ದು ಭಾರತಕ್ಕೆ ಚಿಂತೆಯನ್ನು ಒಡ್ಡಿದರೆ, ಪಾಕಿಸ್ತಾನಕ್ಕೆ ಈ ಘಟನೆಯಿಂದ ಸಂಬಂಧವೇ ಇಲ್ಲವೆಂದು ಅಲ್ಲಿನ ಮಂತ್ರಿಗಳೇ ಹೇಳಿದರು.

— ಅಂದರೆ ಕಾಶ್ಮೀರ ಮರೆತು ಹೋದಂತೆ ತೋರುತ್ತದೆ.

೦೦೦೦

ಆತ್ಮಹತ್ಯೆಗಳ ಅಂಕೆಸಂಖ್ಯೆ ಕೊಡುತ್ತಾ ಮಾನ್ಯ ಮೊರಾರಜಿಯವರು ಮುಂಬಯಿಯಲ್ಲಿ ಸಾಯಿಸಿಕೊಂಡವರಲ್ಲಿ ಸರಿ ಅರ್ಧದಷ್ಟು, ೭೬೦೦೦ ದಲ್ಲಿ ೩೮೦೦೦ ಮಹಿಳೆಯರೆಂದು ಸಾರಿದರು.

— ಸಾವಿನ ಬುಡಿಯಲ್ಲೇ ಅದೂ ಹಿಂದೂಕೋಡ್ ಪಾಸಾಗುವ ಮುನ್ನವೇ ಸಮಾನತೆ ಕಾಯ್ದುಕೊಂಡ ಭಾರತದ ವೀರ ಮಹಿಳೆಯರು ಧನ್ಯರು!

೦೦೦೦

ಮುಂಬಯಿ ಕೂಲಿಕಾರರಿಗೆ ಅಮೇರಿಕೆಯ ಆಹಾರ (ಪಿ ಟಿ ಐ.)

— ಬಂಡವಲುಗಾರರಿಗೂ ಅಮೇರಿಕದ್ದೇ ಆಹಾರ, ನಮ್ಮ ಸರಕಾರೀ ಯೋಜನೆಗಳಿಗೂ ಆಹಾರ ಸರಬರಾಯಿ ಅಲ್ಲಿಂದಲೇ.

ಮಂಗಳೂರು

ಅಪಘಾತ — ಮಂಗಳೂರು ಗವರ್ನಮೆಂಟ್ ಕಾಲೇಜು ಎದುರುಗಡೆಯ ರಸ್ತೆಯಲ್ಲಿ ಕಳೆದ ತಾ. ೧೯ರಲ್ಲಿ ಸಂಜೆ ರಿಟಾಯರ್ಡ್ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಜೆ. ಎಫ್. ಮಥಾಯಸ್ ಅವರ ಮೋಟಾರ್ ಸ್ಕೂಟರಿಗೆ ಒಂದು ಮೋಟಾರ್ ಕಾರ್ ಡಿಕ್ಕಿ ಹೊಡೆದುದರ ದೆಸೆಯಿಂದಾಗಿ ಅವರನ್ನು ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕೊಂಡುಹೋಗಲಾಯಿತು. ಅಜಗೆ ಅವರು ಹೊಂದಿದ ಪೆಟ್ಟುಗಳ ಮೇಲೆ ಪಡುತ್ತಿದ್ದರು.

ವಾರ್ಷಿಕೋತ್ಸವ — ತಾ. ೨೦ರಲ್ಲು ಗಣಪತಿ ಶಾಲೆಯ ವಾರ್ಷಿಕೋತ್ಸವವು ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೋದಿದರು. ಶ್ರೀ ಕೆ. ಸೀತಾರಾಮ ರಾಯರು ಶಾಲೆಯ ಶ್ರೇಯಃ ಪ್ರಾರ್ಥನೆ ಮಾಡಿದರು. ಕಳೆದ ಎಂಭತ್ತು ವರುಷಗಳಿಂದ ಸೇವೆಸಲ್ಲಿಸುತ್ತಿರುವ ಶಾಲೆಯ ಆಡಳಿತೆ ನೋಡುವ ಸಾರಸ್ವತ ಶಿಕ್ಷಣ ಸಮಿತಿಯನ್ನು ಅಧ್ಯಕ್ಷರು ಅಭಿನಂದಿಸಿ ಮಾತನಾಡಿದರು.

ತಾ. ೧೯ರಲ್ಲು ಬೆಳಿಗ್ಗೆ ವಿದ್ಯಾರ್ಥಿಗಳಿಗೆ ಬಹುಮಾನ ಹಂಚಲಾಯಿತು. ಸಂಜೆ ಹಳೆ ವಿದ್ಯಾರ್ಥಿಗಳ ಸಭೆಯು ಶ್ರೀ ಕೆ. ಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಯ ಮಾಜಿ ಮುಖ್ಯೋಪಾಧ್ಯಾಯರಾದ ಶ್ರೀ ಎಮ್. ಎಸ್. ಪಿತಾಂಬರ ರಾಯರ ಹೆಸರಲ್ಲಿ ಒಂದು ವೇತನನಿಧಿಯೇರ್ಪಡಿಸುವ ನಿರ್ಧಾರವಾಗಿ ಆ ಬಗ್ಗೆ ಒಂದು ಸಮಿತಿಯ ರಚನೆಯಾಯಿತು. ತಾ. ೧೮ರಲ್ಲು ಹಿತವರ ಸಭೆಯು ಶ್ರೀ ಕೆ. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಮದ್ರಾಸು

ಕರ್ನಾಟಕ ಸಂಘದ ದಸರಾ ಮಹೋತ್ಸವವು — ಈ ಅಕ್ಟೋಬರ್ 19 ಮತ್ತು 20ರಲ್ಲು ಮ್ಯೂಸಿಯಂ ಥಿಯೇಟರಿನಲ್ಲಿ ನಡೆಯಿತು. 19ನೇ ದಿನ ರಾವ್ ಸಾಹೆಬ್ ಶ್ರೀ ಎ. ಆರ್. ನಾರಾಯಣ ರಾವ್ ಅಧ್ಯಕ್ಷತೆಯಲ್ಲಿ ಶ್ರೀಮತಿ ರತ್ನಾರಾಮ ರಾವ್ (ಮೈಸೂರು) ಅವರು ದಸರದ ಮಹತ್ವದ ಕುರಿತು ಸ್ವಾರಸ್ಯವಾದ ಭಾಷಣವಿತ್ತರು. ಶ್ರೀ ಎಚ್. ಎಸ್. ಕೃಷ್ಣಸ್ವಾಮಿ ಅವರು ಮಾನ್ಯ ಅಧ್ಯಕ್ಷರ ಪರಿಚಯವನ್ನೂ, ಶ್ರೀಮತಿ ಕಾಮೇಶ್ವರಿಯಮ್ಮ ಕುಪ್ಪಸ್ವಾಮಿ ಅವರು ಭಾಷಣಗಾರ್ತಿಯವರ ಪರಿಚಯವನ್ನೂ ಮಾಡಿಕೊಟ್ಟರು. ಬಳಿಕ ಸಂಘದ ಸದಸ್ಯ ಬಾಲಬಾಲಕಿಯರು ಶ್ರೀ ಕೃಷ್ಣಲೀಲಾ ನಾಟಕವನ್ನು ಅತ್ಯಂತ ಯಶಸ್ವಿಯಾಗಿ ಅಭಿನಯಿಸಿದರು. ನಾಟಕದಲ್ಲಿ ಅಭಿನಯಿಸಿದ ಕೆಲವು ಬಾಲ ಬಾಲಕಿಯರಿಗೂ, ನಾಟಕ ನಿರ್ದೇಶಕರಾದ ಶ್ರೀಗಳಾದ ಬಿ. ದಾಸಪ್ಪ, ಬಿ. ರಾಮಕೃಷ್ಣರಾವ್, ದಿ. ಜಯರಾಮ, ಬಿ. ಎಸ್. ಸಿಂಹ ಇವರಿಗೂ ಮೋಡರ್ನ್ ಕೆಫೆಯ ಮಾಲಿಕರಾದ ಶ್ರೀ ಕೆ. ಸೀತಾರಾಮ ರಾವ್ ಮತ್ತು ಡಾ। ಪಿ ಬಿ. ಕೃಷ್ಣರಾವ್ ಇವರಿತ್ತ ರಜತ ಪಾತ್ರೆಗಳನ್ನೂ, ನ್ಯಾಯಮೂರ್ತಿ ಶ್ರೀ ಎನ್. ಎಸ್. ಲೋಕೂರ ಇವರಿತ್ತ ರಜತ ಪದಕಗಳನ್ನೂ ನಾಟಕದಲ್ಲಿ ಅಭಿನಯಿಸಿದವರೆಲ್ಲರಿಗೂ ಅಧ್ಯಕ್ಷರು ವಿತರಣೆಮಾಡಿ ತಮ್ಮ ಮುಕ್ತಾಯ ಭಾಷಣದಲ್ಲಿ ಕನ್ನಡದ ಬಾಲಬಾಲಕಿಯರ ನಾಟಕ ಕಲೆಯ ನಿಪುಣತೆಯ ಬಗ್ಗೆ ಅತ್ಯಂತ ಶ್ಲಾಘಿಸಿದಲ್ಲದೆ ಮಕ್ಕಳ ಮನೋವಿಕಾಸಕ್ಕೆ ಇದೊಂದು ಉತ್ತಮ ಸಾಧನವೆಂದು ಹೇಳಿ ಮದರಾಸಿನ ಕನ್ನಡಿಗರ ಉತ್ಸಾಹಕ್ಕೆ ತಲೆದೂಗಿದರು.

20ನೇ ದಿನಾಂಕ ಶ್ರೀಮಾನ್ ಪಿ. ಆರ್. ಕೃಷ್ಣರಾವ್ ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಕ್ಷೀರ ಸಾಗರ ಅವರ "ಲಕೀ ಲಕ್ಷ್ಮೀ" ಮತ್ತು ಬಿ. ಸದಾಶಿವಯ್ಯನವರ "ಶಾಂತಿ" ಎಂಬ ಎರಡು ನಾಟಕಗಳನ್ನು ಸಂಘದ ಸದಸ್ಯರು ಯಶಸ್ವಿಯಾಗಿ ಅಭಿನಯಿಸಿದರು. ಶ್ರೀ ಕೆ. ಸುಬ್ಬರಾವ್ ಅವರು ಮಾನ್ಯ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕನ್ನಡ ನಾಡಿನ ಸಂಸ್ಕೃತಿಯ ಹೆಗ್ಗುರುತಾಗಿ ದಸರೆಯ ಹಬ್ಬವು ಮದರಾಸಿನಲ್ಲಿ ನಡೆಯುತ್ತಿರುವುದಕ್ಕೆ ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು.

ಉಡುಪಿ

ಸಿಂಡಿಕೇಟ್ ಬೇಂಕಿನ ರಜತ ಮಹೋತ್ಸವ — ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ರಜತ ಮಹೋತ್ಸವವು ಕಳೆದ ತಾ. 25ರಲ್ಲು ಸಂಜೆ ಬೇಂಕಿನ ಪ್ರಧಾನ ಕಚೇರಿಯಾದ ಮುಕುಂದ ನಿವಾಸದ ಅಲಂಕೃತ ಪಟಾರದಲ್ಲಿ ರಿಜರ್ವ್ ಬೇಂಕಿನ ಡ್ಯಾರೆಕ್ಟರ್ ಹಾಗೂ ಅಖಿಲ ಭಾರತ ವೃತ್ತಪತ್ರ ಸಂಪಾದಕ ಪರಿಷತ್ತಿನ ಪ್ರೆಸಿಡೆಂಟರಾದ ಶ್ರೀ ಸಿ. ಆರ್ ಶ್ರೀನಿವಾಸನ್, ಅವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಸಭಾ ಕಾರ್ಯವು ಸಾವಿರಾರು ಮಂದಿಗೆ ಚಹಾ ಸತ್ಕಾರದಿಂದ ಪ್ರಾರಂಭವಾಯಿತು. ಬೆಳ್ಳಿ ಹಬ್ಬದ ಸ್ಮರಣಾರ್ಥವಾಗಿ ಸಭಾಧ್ಯಕ್ಷರು, ಡಾ। ಟಿ. ಮಾಧವ ಪೈ ಮತ್ತು ಶ್ರೀಗಳಾದ ಯು. ಎ. ಪೈ ಮತ್ತು ವಿ. ಎಸ್. ಕುಡ್ವರು ನಾಲ್ಕು ಸಸಿಗಳನ್ನು ನೆಟ್ಟರು. ಬಳಿಕ ಬೆಂಕಿನ ಜನರಲ್ ಮೆನೇಜರರಾದ ಶ್ರೀ ಟಿ. ಎ. ಪೈಗಳು ಸಮಾರಂಭಕ್ಕೆ ಶುಭವನ್ನು ಕೋರಿ ಕಳುಹಿಸಿದ ಸಂದೇಶಗಳನ್ನು ಓದಿದರು. ಮದ್ರಾಸು ಸರಕಾರದ ಮುಖ್ಯ ಸಚಿವ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾ, ಭಾರತೀಯ ಕೇಂದ್ರ ಸರಕಾರದ ತೆರಿಗೆ ಮತ್ತು ರೈಲ್ವೆ ಉಪಸಚಿವರು, ಭಾರತೀಯ ಕೇಂದ್ರ ಸರಕಾರದ ಆರ್ಥಿಕ ಮತ್ತು ಸ್ಟೆಟಿಸ್ಟಿಕ್ಸ್ ಸಲಹೆಗಾರ ಶ್ರೀ ಡಬ್ಲ್ಯೂ. ಆರ್. ನಾಟು, ಮದ್ರಾಸು ಸರಕಾರದ ಮಾನ್ಯ ಶ್ರೀ ಕೆ. ಮಾಧವ ಮೆನನ್, ದ. ಕ. ಜಿಲ್ಲೆಯ ಕಲೆಕ್ಟರ್ ಸಯ್ಯದ್ ಅಹಮ್ಮದ್, ಮೈಸೂರು ಸರಕಾರದ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಮಸೂಲಿಪಟಮಿನ ಶ್ರೀ ಡಿ. ಸುಬ್ರಮಣ್ಯಂ, ಡಾ। ಯು. ಕೃಷ್ಣರಾವ್, ಡಾ। ಯಸ್. ಜಿ. ಪಣಂದೀಕರ್, ಶ್ರೀ ಪಾಣಲಾಲ್ ದೇವಕರಣ್ ನಾನ್ಜೀ, ಲಂಡನಿನ ಮಿಡ್‌ಲಂಡ್ ಬೇಂಕ್, ಲಾಯಿಡ್ಸ್ ಬೇಂಕ್, ಲಿವರ್‌ಪೂಲಿನ ಮಾರ್ಟಿನ್ಸ್ ಬೇಂಕ್, ಕೆಲಿಫೋರ್ನಿಯದ ಬೇಂಕ್ ಒಫ್ ಅಮೇರಿಕಾ, ದಿ ಚೇಸ್ ನೇಶನಲ್ ಬೇಂಕ್ ಒಫ್ ದಿ ಸಿಟಿ ಒಫ್ ನ್ಯೂಯಾರ್ಕ್, ದಿ ಪಾಲಾಯ್ ಸೆಂಟ್ರಲ್ ಬೇಂಕ್, ದಿ ಆಂಧ್ರ ಬೇಂಕ್, ದಿ ಭಾರತ ಲಕ್ಷ್ಮೀ ಬೇಂಕ್, ದಿ ಯುನೈಟೆಡ್ ಕಮರ್ಶಿಯಲ್ ಬೇಂಕ್, ದಿ ವೈಶ್ಯ ಬೇಂಕ್, ದಿ ಇಂಡಿಯನ್ ಲೈಫ್ ಎಶ್ಯೂರೆನ್ಸ್ ಕೋ, ಇಂಡಿಯನ್ ಬೇಂಕ್, ಇಂಡೋ ಮರ್ಕಂಟೈಲ್ ಬೇಂಕ್, ದಿ ಸೌತ್ ಇಂಡಿಯನ್ ಬೇಂಕ್, ಮೊದಲಾದ ಸಂಘಸಂಸ್ಥೆಗಳೂ ವ್ಯಕ್ತಿ ಮಹಾಶಯರೂ ಸಂದೇಶಗಳನ್ನು ಕಳುಹಿಸಿಕೊಟ್ಟಿದ್ದರು.

ರಜತೋತ್ಸವದ ಸ್ಮಾರಕ ಪಂದ್ಯಾಟದಲ್ಲಿ ಗೆದ್ದ ಬೇಂಕಿನ ಡ್ಯಾರೆಕ್ಟರ್ ಮತ್ತು ಸಿಬಂದಿ ವರ್ಗದವರಿಗೆ ಅಧ್ಯಕ್ಷರು ಪಾರಿತೋಷ ವಿತರಣ ಮಾಡಿದ ಬಳಿಕ ಬೇಂಕಿನ ಚೆಯರ್‌ಮೆನ್ ಡಾ। ಟಿ. ಮಾಧವ ಪೈಗಳು ಬೇಂಕಿನ ಅಭಿವೃದ್ಧಿ ಸೂಚಕ ವಿಷಯಗಳನ್ನೊಳಗೊಂಡ ಸ್ವಾಗತ ಭಾಷಣವನ್ನೋದಿದರು. ಅಧ್ಯಕ್ಷರಿಗೆ ಅದರ ಪ್ರತಿಯನ್ನು ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಕೊಡಲಾಯಿತು. ಸಭಿಕರ ಕಡೆಯಿಂದ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಕೆ. ಶಿವರಾಮ ಕಾರಂತ ಮತ್ತು ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬರು ಬೇಂಕಿನ ಅಭಿವೃದ್ಧಿಯ ಕುರಿತು ಮಾತನಾಡಿದರು. ಅಧ್ಯಕ್ಷರು ಬೇಂಕಿನ ಪ್ರಗತಿಯನ್ನು ಅಭಿನಂದಿಸಿ ವಿಚಾರಪರ ಭಾಷಣವನ್ನೋದಿದರು. ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನರ್ಪಿಸಿದ ನಂತರ ಸಮಾರಂಭವು ಕೊನೆಗೊಂಡಿತು.

ಅಂತರಂಗವನ್ನು

The Canara Mutual Assurance Co. Ltd.

ESTD: 1935. H. O. UDIPI.

Canara Mutual occupies a unique position of distinction amongst the sound Life Offices in India. Constituted as a Mutual Company, the entire profits are shared by the participating Policy-holders alone, there being no share-holders. It has paid bonus since inception and in all the Valuations conducted on progressively stringent basis it has shown a surplus. The Company has maintained its reputation by fair treatment. For more details about this Progressive Mutual Life Office, write to-day to its Head Office.

ದಕ್ಷಿಣ ಕನ್ನಡ

ಮೂಡಬಿದರೆಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಷಷ್ಟ್ಯಬ್ದಪೂರ್ತಿ—ಕಳೆದ ತಾ. 22ರಲ್ಲು ಮೂಡಬಿದರೆಯ ಮಹಾವೀರ ಥಿಯೇಟರಿ ಮಹಾಜನ ಸಭೆಯೊಂದು ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಧರ್ಮಸ್ಥಳದ ಶ್ರೀ ಮಂಜಯ್ಯ ಹೆಗ್ಗಡೆ, ಎಮ್. ಎಲ್. ಸಿ, ಅವರ ಷಷ್ಟ್ಯಬ್ದಪೂರ್ತಿ ಸನ್ಮಾನಾರ್ಥವಾಗಿ ಅವರಿಗೆ ಮಾನಪತ್ರವೊಂದನ್ನು ಅರ್ಪಿಸಲಾಯಿತು.

ಶ್ರೀ ಹೆಗ್ಗಡೆಯವರು ಧರ್ಮಸ್ಥಳದಿಂದ ಲ್ಲಿಗೆ ದಯಮಾಡಿಸಿದಾಗ ಅವರನ್ನು ಸ್ವಾಗತ ಸಮಿತಿಯವರೂ ಇನ್ನಿತರ ಸಾರ್ವಜನಿಕರು ಇದಿರ್ಗೊಂಡು ಸುಸ್ವಾಗತವನ್ನು ಬಯಸಿದರು. ಸ್ಥಳೀಯ ಸೆಕೆಂಡರಿ ಶಾಲಾ ಬಾಲಿಕೆಯರಿಂದ ಪ್ರಾರ್ಥನೆ, ಸ್ವಾಗತಗೀತೆಗಳಾದ ಮೇಲೆ ಮೂಡಬಿದಿರೆಯ ಸಾರ್ವಜನಿಕರ ಪರವಾಗಿಯೂ, ಪಂಚಾಯತ ಬೋರ್ಡು, ವಾಣಿಜ್ಯ ಸಂಘ, ವಿದ್ಯಾ ಸಮಿತಿ, ಕಾಂಗ್ರೆಸ್ ಸಂಸ್ಥೆ, ಹಸ್ತಿ ಸೇವಾಸಂಘ, ಶ್ರೀ ಚಾರುಕೀರ್ತಿ ಶ್ರೀಗಳವರು, ಮಹಾವೀರ ಥಿಯೇಟರ್, ಜೈನ ಮಹಿಳಾಶ್ರಮ ಟ್ರಸ್ಟ್, ಗಾಂಧಿ ಸೇವಾಸಂಘ, ಪೂರ್ಣಿಮಾ ರಟ್ಟಿನ ಸಂಸ್ಥೆ, ವಾಚನಾಲಯ ಮೊದಲಾದ ಸಂಘ ಸಂಸ್ಥೆಗಳ ಕಡೆಯಿಂದಲೂ ಮಾನ್ಯ ಹೆಗ್ಗಡೆಯವರಿಗೆ ಹೂಮಾಲೆಗಳನ್ನರ್ಪಿಸಲಾಯಿತು. ಸ್ವಾಗತಸಮಿತಿ ಅಧ್ಯಕ್ಷ ಶ್ರೀ ಜಿ. ಗೋಪಾಲ ಪೈಗಳು ಸ್ವಾಗತಭಾಷಣ ಮಾಡಿದರು. ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ವಾಸುದೇವಪೈಗಳು ಮದ್ರಾಸಿನ ಮುಖ್ಯಮಂತ್ರಿ ಕುಮಾರಸ್ವಾಮಿ ರಾಜಾ, ಮದ್ರಾಸು ಮಂತ್ರಿವರಾದ ಶ್ರೀಗಳಾದ ಎಮ್. ಭಕ್ತವತ್ಸಲಂ, ಎ. ಬಿ. ಸೆಟ್ಟಿ, ಡಾ। ಟಿ. ಎಸ್. ಎಸ್. ರಾಜನ್, ಮೊದಲಾದವರು ಕಳುಹಿಸಿದ ಶುಭಸಂದೇಶಗಳನ್ನು ಓದಿದರು.

ಮಾನಪತ್ರದಲ್ಲಿ ಶ್ರೀ ಹೆಗ್ಗಡೆಯವರು ತ್ರಿಕರಣ ಶುದ್ಧಿಯಿಂದ ಮಾಡಿದ ಹಲವಾರು ಕಾರ್ಯಗಳನ್ನು ಸೂಚಿಸಲಾಗಿತ್ತು. ಸಭಿಕರ ಪರವಾಗಿ ಶ್ರೀಗಳಾದ ಧರಣೇಂದ್ರಯ್ಯ, ಎಚ್. ನಾರಾಯಣರಾವ್, ಎನ್. ಎಸ್. ಕಿಲ್ಲೆ, ಕೆ. ಸೆಟ್ಟಿ, ಎಚ್. ರಾಮರಾವ್, ಎಚ್. ರಾಮರಾವ್, ಎಮ್. ಡಿ. ಅಧಿಕಾರಿ, ಸುಬ್ರಹ್ಮಣ್ಯಶಾಸ್ತ್ರಿ, ಎಸ್. ಪಿ. ಸೆಟ್ಟಿ, ಡಿ. ವೆಂಕಟೇಶ ಭಟ್ ಮೊದಲಾದವರು ಶ್ರೀ ಹೆಗ್ಗಡೆಯವರ ಜನತಾ ಜನಾರ್ಧನನ ಬಹುಮುಖ ಸೇವಾ ಕಾರ್ಯಗಳ ಕುರಿತು ಮಾತನಾಡಿದರು. ಶ್ರೀ ಹೆಗ್ಗಡೆಯವರು ತಮಗೆ ಮಾಡಿದ ಸನ್ಮಾನಕ್ಕಾಗಿ ಸರ್ವರ ಆಭಾರಮನ್ನಿಸಿದರು.

ಅಧ್ಯಕ್ಷ ಶ್ರೀ ಗೋವಿಂದ ಪೈಗಳು ತಮ್ಮ ಭಾಷಣದಲ್ಲಿ ಶ್ರೀ ಹೆಗ್ಗಡೆಯವರ ಬಹುಮುಖ ಚಟುವಟಿಕೆಗಳನ್ನು ಎತ್ತಿ ಮಾತನಾಡುತ್ತಾ ಕರ್ಮಯೋಗಿ ಹೆಗ್ಗಡೆಯವರಿಗೆ ದೀರ್ಘಾಯುರಾರೋಗ್ಯ ವಿಪುಲ ಧನಧಾನ್ಯಾದಿ ಸೌಭಾಗ್ಯ ಸನ್ಮಂಗಲಗಳನ್ನು ಬಯಸಿದರು.

ಶ್ರೀ ಜಿ. ವಾಸುದೇವ ಪೈಗಳ ಧನ್ಯವಾದಾರ್ಪಣೆಯೊಂದಿಗೆ ಷಷ್ಟಿಪೂರ್ತಿ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಮುಕ್ತಾಯವಾಯಿತು.

ಸರಕಾರಿ ಬುನಾದಿ ತರಬೇತಿ ವಿದ್ಯಾಲಯ, ಮಣಿಪ್ಪಾಡಿ— ಇಲ್ಲಿ ಚರಕಾ ಜಯಂತಿಯು ಕಳೆದ ತಾ. 2ರಿಂದ 7ರವರೆಗೆ ಆಚರಿಸಲ್ಪಟ್ಟಿತು. ಈ 7ದಿನಗಳಲ್ಲಿ ಅಖಂಡ ಸೂತ್ರಯಜ್ಞವಿತ್ತು. ತಾ 2ನೇ ದಿನ ಶ್ರೀ ಶ್ರೀಧರ ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಸಭೆ, ನಂತರದ 2ದಿನಗಳಲ್ಲಿ ಪಟ್ಲ ಮತ್ತು ಶಿರಿಬಾಗಿಲು ಗ್ರಾಮಗಳ ನಿರ್ಮಲತೆ ಮತ್ತು ವಿಶ್ರಗೊಬ್ಬರ ಹೊಂಡದ ತಯಾರಿ ಕೆಲಸಗಳು ಜರಗಿಸಲ್ಪಟ್ಟವು. 4, 5ನೇ ದಿನಗಳಲ್ಲಿ ಸಂಸ್ಕೃತ, ಕನ್ನಡ, ಮತ್ತು ಹಿಂದಿ ಸಾಹಿತ್ಯಗಳ ಕುರಿತು ಪೆರ್ಡಾಲ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಶ್ಯಾಮ ಭಟ್, ಕಾಸರಗೋಡು ಹೈಸ್ಕೂಲಿನ ಅಧ್ಯಾಪಕ ಶ್ರೀ ಜಗನ್ನಾಥ ಶೆಟ್ಟಿ ಮತ್ತು ಪೆರ್ಡಾಲ ಹೈಸ್ಕೂಲಿನ ಹಿಂದಿ ಪಂಡಿತರಾದ ಶ್ರೀ ಶಂಕರ ಭಟ್ಟರ ಭಾಷಣಗಳು ಇದ್ದುವು. ಅಲ್ಲದೆ ಗಾಂಧಿಜಿಯವರ ವಿವಿಧ ರಚನಾತ್ಮಕ ಕಾರ್ಯಕ್ರಮಗಳ ಕುರಿತು ಭಾಷಣಗಳಿದ್ದುವು. ರಾತ್ರಿ ಯಕ್ಷಗಾನ, ಹರಿಕಥೆ, ಬಯಲಾಟ ಮತ್ತು ಇತರ ವಿವಿಧ ವಿನೋದಾವಳಿಗಳಿದ್ದುವು. ಕಡೆಯ 2ದಿನ ಈ ಸಂಸ್ಥೆಯ ವಿದ್ಯಾರ್ಥಿಗಳು ನೆರೆಹಳ್ಳಿಗಳನ್ನು ಸಂದರ್ಶಿಸಿ ಖಾದಿ ಪ್ರಚಾರ ಮಾಡಿ ತಾವು ನೂತ ನೂಲಿನಿಂದ ತಯಾರಾದ ಸುಮಾರು 520ರೂಗೆ ಮೇಲ್ಪಟ್ಟ ಬೆಲೆಯ ಬಟ್ಟೆಯನ್ನು ಮಾರಿರುತ್ತಾರೆ.

ಕಾಸರಗೋಡು — ಕೃಷಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವು ಪೈವಳಿಕೆ ಗ್ರಾಮ ಸೇವಾ ಸಂಘದ ಆಶ್ರಯದಲ್ಲಿ ಕಳೆದ ತಾ. 24ರಲ್ಲು ಪೈವಳಿಕೆ ಶಾಲಾ ಮಂದಿರದಲ್ಲಿ ಜರಗಿತು. ಅಂದು ಬೆಳಿಗ್ಗೆ ಶ್ರೀ ಕೆ. ವಿಠಲ ಭಂಡಾರಿಯವರು ಧ್ವಜಾರೋಹಣ ಮಾಡಿದ ಮೇಲೆ ಪಂದ್ಯಾಟಗಳು ನಡೆದವು. ನಂತರ ಪುತ್ತೂರು ಡಿವಿಜನಲ್ ಆಫೀಸರ್ ಶ್ರೀ ಎಚ್. ನರಸಿಂಹಯ್ಯನವರು ಪ್ರದರ್ಶನದ ಉದ್ಘಾಟನೆ ಮಾಡಿದರು. ಪ್ರದರ್ಶನದಲ್ಲಿ ಶಾಲಾ ಮಕ್ಕಳ ಹಸ್ತಾಕ್ಷರ ಪತ್ರಿಕೆಗಳೂ, ಗ್ರಾಮಸ್ಥರ ಕೈಗಾರಿಕೆಗಳೂ ವಿವಿಧ ತರಕಾರಿಗಳೂ ಪ್ರದರ್ಶಿಸಲ್ಪಟ್ಟಿದ್ದುವು. ಜಾನುವಾರು ಪ್ರದರ್ಶನವೂ ಜರಗಿತು. ಸಂಜೆ ಸಾರ್ವಜನಿಕ ಸಭೆಯು ಕಾಸರಗೋಡು ತಹಶಿಲ್ದಾರ್ ಶ್ರೀ ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಹಲವರ ಭಾಷಣಗಳಾದುವು. ರಾತ್ರಿ ಯಕ್ಷಗಾನ ತಾಲಮೇಳವಿತ್ತು.

ನಾಡ ಹಬ್ಬವು—ಕಳೆದ ತ. 18, 19 ಮತ್ತು 20ರಲ್ಲು ಕಾಸರಗೋಡು ಮಿಶನ್ ಹೈಸ್ಕೂಲಿನಲ್ಲಿ ಗೆಳೆಯರ ಬಳಗದ ಆಶ್ರಯದಲ್ಲಿ ಸಾಹಿತಿಗಳ ಕೂಡುವಿಕೆಯಿಂದ ಜರಗಿತು. ಮೊದಲಿನ ದಿನದ ಸಭಾಧ್ಯಕ್ಷತೆಯನ್ನು ಶ್ರೀ ಕೆ ಶಾಮ ಭಟ್, ಅವರು ವಹಿಸಿದ್ದರು. ಡಾ। ಪಿ. ಎಸ್. ಭಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಲಕ್ಷ್ಮೀನಾರಾಯಣ ಪುಣಿಚಿತ್ತಾಯ ಮೊದಲಾದವರು ಮಾತನಾಡಿದರು. ಎರಡನೇ ದಿನದ ಮತ್ತು ಕೊನೆಯ ದಿವಸದ ಕಾರ್ಯ ಕಲಾಪಗಳ ಅಧ್ಯಕ್ಷತೆಯನ್ನು ಶ್ರೀಗಳಾದ ಪಿ. ಗೋಪಾಲಕೃಷ್ಣಭಟ್ಟರೂ, ಕೆ. ಸೂರ್ಯನಾರಾಯಣ ರಾಯರೂ ಅನುಕ್ರಮವಾಗಿ ವಹಿಸಿದ್ದು ಹಲವು ಮಹನೀಯರುಗಳ ಭಾಷಣಗಳಾದುವು.

ಮೂಡಹಡು— ಗ್ರಾಮದ ಭತ್ತದ ಪೈರಿಗೆ ಸವಟು ಎಂಬ ಹುಳ ಬಿದ್ದು, ಹೆಚ್ಚಿನ ಪೈರು ನಾಶವಾಗಿ ಬೇಸಾಯಗಾರರಿಗೆ ಅಪಾರ ಹಾನಿಯಾಗಿದೆ. ಆಹಾರ ಸಂಗ್ರಹಣಾಧಿಕಾರಿಗಳು ತಮ್ಮ ಗಮನವನ್ನೀಯಲಿ

ಅಜೆಕಾರು— ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. 12-10-50ರಲ್ಲಿ ಶ್ರೀ ಶಾರದಾ ಪೂಜೋತ್ಸವವೂ ಶ್ರೀ ಬಿ. ವಾಸುದೇವ ನಾಯಕರವರ ಅಧ್ಯಕ್ಷತೆಯಲ್ಲಿ ಮಕ್ಕಳ ನಾಡಹಬ್ಬವೂ ವಿವಿಧ ವಿನೋದಾವಳಿ, ಡಾಕ್ಟರ್ ಯು. ಕೃಷ್ಣನವರ ಭಾಷಣಾದಿಗಳಿಂದ ನೆರವೇರಿದುವು.

ಬೊಂಬಾಯಿ

೩೪ನೇ ಕನ್ನಡ ಸಾಹಿತ್ಯ ಸಮ್ಮೇಲನ:— ಸೊಲ್ಲಾಪುರದಲ್ಲಿ ನಡೆದ ಕಳೆದ ಸಮ್ಮೇಲನದ ಕಾಲಕ್ಕೆ ಮುಂಬಯಿ ಸಂಯುಕ್ತ ಕರ್ನಾಟಕ ಸಂಘವು ಮುಂದಿನ ಅಧಿವೇಶನಕ್ಕೆ ಆಮಂತ್ರಣ ಕೊಟ್ಟಿತ್ತಷ್ಟೆ. ಪರಿಷತ್ತು ಅದನ್ನು ಅಂಗೀಕರಿಸಿಯಾದ ಮೇಲೆ ಸ್ವಾಗತ ಸಮಿತಿಯು ಸಿದ್ಧವಾಗಿ ಈಗ ಭರದಿಂದ ಸಿದ್ಧತೆ ನಡೆದಿದೆ.

ಸಮ್ಮೇಲನವು ಇದೇ ಡಿಸೆಂಬರ ತಿಂಗಳ ೨೪, ೨೫, ೨೬ ಈ ಮೂರು ದಿನಗಳಲ್ಲಿ ನಡೆಯುವದು. ಸಮ್ಮೇಲನದ ಅಂಗವಾಗಿ ಸಾಹಿತ್ಯ ಗೋಷ್ಠಿ, ನಾಟ್ಯಗೋಷ್ಠಿ, ಮಹಿಳಾ ಗೋಷ್ಠಿ, ಕಲಾಪ್ರದರ್ಶನ ಮುಂತಾದವುಗಳನ್ನೂ ಏರ್ಪಡಿಸಲಾಗುವದು. ಅದಕ್ಕಾಗಿ ಸುಪ್ರಸಿದ್ಧ ಕಾವಸಾಜಿ ಜಹಾಂಗೀರ ಸಭಾಂಗಣವನ್ನು ಈಗಾಗಲೇ ಕಾದಿರಿಸಲಾಗಿದೆ.

ಮುಂಬಯಿಯಂತಹ ದೊಡ್ಡ ನಗರದಲ್ಲಿ ದೊಡ್ಡ ಪ್ರಮಾಣದಲ್ಲಿ ಸಮ್ಮೇಲನವನ್ನು ನಡೆಯಿಸಬೇಕಾದರೆ ಕನಿಷ್ಠ ೨೫ ಸಾವಿರ ರೂಪಾಯಿಗಳ ವೆಚ್ಚ ಬರಬಹುದೆಂದು ಅಂದಾಜು ಮಾಡಲಾಗಿದೆ. ನೂರು ರೂಪಾಯಿ ಅಥವಾ ಅದಕ್ಕೂ ಹೆಚ್ಚು ಕೊಡುವ ಪೋಷಕರು, ಹತ್ತು ರೂಪಾಯಿ ಕೊಡುವ ಸದಸ್ಯರು ಇವರುಗಳಿಂದ ಹಾಗು ಮತ್ತಿತರರೀತಿಯಿಂದ ಹಣಸಂಗ್ರಹದ ಕೆಲಸ ನಡೆದಿದೆ.

ಸ್ವಾಗತ ಸಮಿತಿಗೆ ಶ್ರೀ ಕೆ. ಎಚ್. ಕಬ್ಬೂರ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿರುವರು.

ಸ್ವಾಗತ ಸಮಿತಿಯ ಇತರ ಅಧಿಕಾರಿಗಳು. ಉಪಾಧ್ಯಕ್ಷರು: ಶ್ರೀಗಳಾದ ಎ. ಡಿ. ಬಾಳಿಗಾ, ಎನ್. ಎಸ್. ಗುಬ್ಬಿ, ಡಿ. ವ್ಹಿ. ಭೂಮರಡ್ಡಿ, ಎಂ. ಜಿ. ಮೇಸ್ತ್ರಿ, ಆರ್. ವಿ. ಚಾಂ. ಕಾರ್ಯಾಧ್ಯಕ್ಷರು. ಶ್ರೀ ಆರ್. ವಿ. ಮೂರ್ತಿ. ಕಾರ್ಯೋಪಾಧ್ಯಕ್ಷರು: ಶ್ರೀಗಳಾದ ಕೆ. ಎನ್. ಗಾಯತೊಂಡೆ, ಬಿ. ಎಸ್. ಸಿ. ಸ್ವಾಮಿ. ಗೌರವ ಕೋಶಾಧಿಕಾರಿಗಳು:— ಶ್ರೀಗಳಾದ ಜಿ. ಎನ್. ಐಯ್ಯರ್, ಎ. ಎಚ್. ಕುಲಕರ್ಣಿ, ಈಶ್ವರಪ್ಪ ಪಾಚಾಪೂರ, ಪ್ರಧಾನ ಕಾರ್ಯದರ್ಶಿ: ವರದರಾಜ ಅದ್ಯ. ಗೌರವ ಸಹಕಾರ್ಯದರ್ಶಿಗಳು: ಶ್ರೀಗಳಾದ ಎಚ್. ಎಂ. ಕೆ. ಮೂರ್ತಿ, ಎಚ್. ಕೆ. ಪುತ್ರನ್

ರಜತ ಮಹೋತ್ಸವ—ದೇವಾಡಿಗ ಸುಧಾರಕ ಸಂಘದ ರಜತ ಮಹೋತ್ಸವವು ಕಳೆದ ತಾ. 22ರಲ್ಲು ಸರ್. ಸಿ. ಜೆ ಸಾರ್ವಜನಿಕ ಸಭಾಸದನದಲ್ಲಿ ಶ್ರೀ ವಜೀರವನ್‌ದಾಸ್ ತ್ರಿಭುವನದಾಸ್ ಶೇಟ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಲಕ್ಷ್ಮಣ ಬಿ. ಉಳ್ಳಾಲರ ಸ್ವಾಗತಭಾಷಣ, ಶ್ರೀ ಎಚ್. ಶ್ರೀನಿವಾಸರ ವರದಿವಾಚನಗಳಾದುವು. ಅಧ್ಯಕ್ಷರು ತನ್ನ ಭಾಷಣದಲ್ಲಿ ಜನತೆಯ ಉದ್ಧಾರದ ಮೂಲಕ ದೇಶದ ಕಲ್ಯಾಣವಾಗತಕ್ಕದ್ದಿರುವುದರಿಂದ ವಿದ್ಯೆ ಮತ್ತು ಸಾಮಾಜಿಕ ವ್ಯವಹಾರದ ಶಿಕ್ಷಣವು ಪ್ರತಿಯೊಬ್ಬರಿಗೂ ದೊರೆಯಬೇಕಾಗಿದೆ ಎಂದರು. ಮನೋರಂಜನ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಮುಂಬಯಿ ಅಖಿಲ ಕರ್ನಾಟಕ ಯಕ್ಷಗಾನ ಸಂಘದ ವತಿಯಿಂದ ಕಳೆದ ತಾ. 19ರಲ್ಲು 'ಭೀಷ್ಮಾರ್ಜುನ ಕಾಳಗ'ವೆಂಬ ಯಕ್ಷಗಾನಕೂಟವು ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಎಮ್. ಭೋಜರಾಜಸೆಟ್ಟಿ, ಪಿ. ಕೆ. ಬಂಗೇರ, ವಾಸುಶೆಟ್ಟಿ, ಭುಜಂಗಸೆಟ್ಟಿ, ಮೋನಪ್ಪ ಸಾಲಿಯಾನ್, ಸುಂದಪ್ಪಸೆಟ್ಟಿ, ಹರಿಯಪ್ಪ ಸೆಟ್ಟಿ, ಕೃಷ್ಣಮೆಂಡನ್, ಅಣ್ಣು ಭಟ್ಟ, ಲಕ್ಷ್ಮಣದೇವ ವಿದ್ಯಾರ್ಥಿ ಮೊದಲಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಫೋರ್ಟ್ ಆರ್ಯಸಮಾಜ ಮಂದಿರದಲ್ಲಿ ಕಳೆದ ತಾ. 20ರಲ್ಲು 'ವಿಜಯದಶಮಿ'ಸಮಾರಂಭವು ಶ್ರೀ ಸ್ವಾಮಿ ಸ್ವತಂತ್ರಾನಂದಜೀಯವರ ನೇತೃತ್ವದಲ್ಲಿ ಸಾಂಗವಾಗಿ ಆಚರಿಸಲಾಯಿತು.

ಮೊಗವೀರ ಹಳೆ ವಿದ್ಯಾರ್ಥಿಸಂಘದ ಆಶ್ರಯದಲ್ಲಿ 'ವಿಜಯದಶಮಿ'ಸಮಾರಂಭವು ಶ್ರೀ ಎನ್. ಗಾಯತೊಂಡೆ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಫೋರ್ಟ್ ಆರ್ಯಸಮಾಜದ ಸಾಪ್ತಾಹಿಕ ಅಧಿವೇಶನವು ಕಳೆದ ತಾ. 2 ರಲ್ಲು ಸೇರಿ ಪಂಡಿತಾಚಾರ್ಯ ದ್ವಿಜೇಂದ್ರನಾಥ ಶರ್ಮರ 'ಸ್ವತಂತ್ರ ಭಾರತದಲ್ಲಿ ಆರ್ಯಸಮಾಜದ ಆವಶ್ಯಕತೆ'ಯ ವಿಷಯದಲ್ಲಿ ಭಾಷಣವಾಯಿತು.

ನೋಟೀಸು

ಕಾಸರಗೋಡು ಡಿ, ಮು. ಕೋರ್ಟಿನಲ್ಲಿ

O. S. 890/4

ಕೆ. ಸರ್ವೋತ್ತಮ ಕಂಪ್ತಿ—ಅನಂತ ಕಿಣಿಯರ ಮಗ, ವ್ಯಾಪಾರಸ್ಥ—ಕಾಸರಗೋಡು ಕಸಬೆಯಲ್ಲಿರುವವರು.— ವಾದಿ ಮತ್ತು.

[1] ವಾಸುದೇವಭಟ್ಟ,(ಪೌತಿ) [2] ವಾಸುದೇವಮಯ್ಯ, ವಿಷ್ಣುಮಯ್ಯರ ಮಗ. [3] ಮಹಮ್ಮದ್‌ಬ್ಯಾರಿ—ಕುಂಞಾಮು ಪಕ್ರುಬ್ಯಾರಿಗಳ ಮಗ. [4] ಅಬ್ದುಲ್ಲ ಬ್ಯಾರಿ—ಕುಂಞಾಲು ಗಳು ಅಬ್ದುಲ್ಲ ಖಾದ್ರಿ ಬ್ಯಾರಿಗಳ ಮಗ [5] ನಾರಾಯಣ ಆಳ್ವ— ಅರಿದ್ಯೆ ರಾಮಕೃಷ್ಣ ಆಳ್ವರ ಮಗ, ವರ್ಗದಾರ [6] ಲಕ್ಷ್ಮೀ ಯಾನೆ ಯಶೋದ—ವಾಸುದೇವ ಭಟ್ಟರ ಮಗಳು ಮ ಶಂಕರನಾರಾಯಣ ಕಡಪಳಿತ್ತಾಯರ ಹೆಂಡ್ತಿ. 2ರಿಂದ 4ನೇ ಪ್ರತಿವಾದಿಯರು ಪಟ್ಲಗ್ರಾಮದಲ್ಲಿಯೂ, 5ನೇ ಪ್ರತಿವಾದಿಯು ಸಮ್ಮೂರು ಗ್ರಾಮದ ಅಂಬ್ಳೆಯಂಬಲ್ಲಿಯೂ, 6ನೇ ಪ್ರತಿವಾದಿಳು ಚೆಳ್ಳೂರು ಗ್ರಾಮದ ಬಾಲು ಯೆಂಬಲ್ಲಿ ವಾಸ ವವರು. —ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದಲ್ಲಿ ಪ್ಲಾಂಟಿನಲ್ಲಿ ವಿವರಿಸಿದ ಆಸ್ತಿ ಸ್ವಾಧೀನತೆ ಬಗ್ಗೆ ಮತ್ತು ಯಿಂ ನಿವೃತ್ತಿಗಳ ಬಗ್ಗೆ ವಾದಿ ಮಾಡಿದ ಮೊಕದ್ದಮೆ ವ್ಯಾಜ್ಯವು 6ನೇ ಪ್ರತಿವಾದಿಯಳ ಹಾಜರಾತಿ ಬಗ್ಗೆ ತಾರೀಕು 20-11-1950ಕ್ಕೆ ಬಿಟ್ಟದೆಯೆಂತ ಈ ಮೂಲಕ ಅವರಿಗೆ ತಿಳಿಸಲಾಗಿಯದೆ

K. Devadas Shenc
Vakil for Plff-

ಕಾಸರಗೋಡು 28-10-19

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ತ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ,
ನವಯುಗ ಪ್ರೆಸ್, ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ ಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

"ಹೆಣ್ಣು" ಎಂದೊಡನೆ ತಿರಸ್ಕಾರ ಭಾವ ತಾಳುವ ಜನವೂ "ಭಾರತ ಮಹಿಳೆಯರು" ಎಂದೊಡನೆಯೆ ಆದರ ಭಾವ ತಾಳುತ್ತಾರೆ. "ಭಾರತ ಮಹಿಳೆಯರು" ಎಂದೊಡನೆಯೆ ಅವರ ಪರವಾಗಿ ನಮಗೆ ಭಕ್ತಿ, ಗೌರವ ಭಾವಗಳು ತನ್ನಿಂದ ತಾನೇ ಉಕ್ಕಿಬರುತ್ತವೆ. ಈ ವಿರೋಧಾಭಾಸದ ಗುಟ್ಟೇನು? ಹೆಣ್ಣು ಎಂಬುದನ್ನು ಬಿಟ್ಟು "ಭಾರತ ಮಹಿಳೆ"ಯೆಂದೊಡನೆ ಯಾವುದರ ದರ್ಶನವಾಗಿ ನಮ್ಮ ಮನದಲ್ಲಿ ಈ ತೆರ ಗೌರವಾದರಗಳು ತಲೆದೋರುತ್ತವೆ?

ಶತಮಾನ ಶತಮಾನಗಳಿಂದ ಪಾರತಂತ್ರ್ಯದ, ಅಜ್ಞಾನದ ಅಂಧಕಾರದಲ್ಲಿದ್ದರೂ ಭಾರತ ಮಹಿಳೆಯರು ಕಾಲಕಾಲಕ್ಕೆ ತಮ್ಮ ಅತುಲ ಆತ್ಮತೇಜಸ್ಸಿನಿಂದ ಬೆಳಗಿ, ನಾಡನ್ನೇ ಬೆಳಗಿಸಿ ಜಗತ್ತೇ ಬೆಚ್ಚಿಬೀಳುವಂತೆ ಮಾಡಿದ್ದಾರೆ. ಅಡ್ಡಹಾದಿ ಹಿಡಿದ ನಾಡಿನ ಗತಿಯನ್ನೇ ಬದಲಿಸಿ ಸಗ್ಗದೆಡೆಗೆ ನಡೆಯಿಸಿದ್ದಾರೆ. ಆದುದರಿಂದಲೇ ಅವರ ಬಗ್ಗೆ ನಮಗಿಷ್ಟು ಗೌರವ ಭಕ್ತಿಗಳು. ಆದರೆ ಆ ಗೌರವ ಭಕ್ತಿಗಳು ನಮ್ಮ ಸ್ವಾರ್ಥದಿಂದಾಗಿ ವೈಯುಕ್ತಿಕ ಜೀವನದಲ್ಲಿ ಕಾಣದಾಗುತ್ತವೆ. ಅಲ್ಲಿ ಹೆಣ್ಣು ಮಣ್ಣಿಗಿಂತ ಕಡೆಯಾಗುತ್ತಾಳೆ.

ಭಾರತದಲ್ಲಿ ಗತಕಾಲದ ಕತ್ತಲೆಯನ್ನು ಕಳೆದು ಬೆಳಗುವ ನೂರಾರು ಮಹಿಳೆಯರಿರುವರು. ಅವರು ನಾಡಿನ ನಂದಾದೀವಿಗೆಯಾಗಿ ಬೆಳಗುತಿದ್ದಾರೆ. ಇಂದು ಕೂಡ ಅಂತಹ ಹಲವಾರು ಮಹಿಳೆಯರಿದ್ದಾರೆ. ಗಾರ್ಗಿ ಮೈತ್ರೇಯಿಗಳಂತಹ ವೇದೋಪನಿಷತ್ತುಗಳ ಕಾಲದ ಮಹಿಳೆಯರು, ಸಾವಿತ್ರಿ, ಸೀತೆ,

ಮಹಿಳಾ ಪುಟ

— ಭಾರತ ಮಹಿಳೆಯರು —

ಲೇಖಕ: ಪರ್ಯ ಲಕ್ಷ್ಮೀನಾರಾಯಣ ಆಳ್ವ.

ಮಂಡೋದರಿ, ದ್ರೌಪದಿ ಮೊದಲಾದ ಪೌರಾಣಿಕ ಕಾಲದ ಮಹಿಳೆಯರು, ಮೀರಾಬಾಯಿ, ಸಖೂಬಾಯಿ, ಮುಕ್ತಾಬಾಯಿ, ಅಕ್ಕಮಹದೇವಿ, ಅವ್ವೆ, ಆಂಡಾಳ್, ಶಾರದಾದೇವಿ, ಅಹಲ್ಯಾ, ಅನೂಬಾಯಿ, ಕರ್ಣಾವತಿ, ಝಾನ್ಸಿ ಲಕ್ಷ್ಮೀಬಾಯಿ, ಮೊದಲಾದ ಚಾರಿತ್ರಿಕ ಕಾಲದ ಮಹಿಳೆಯರು, ಕಸ್ತೂರಿ ಬಾ, ಕಮಲಾ ನೆಹ್ರು, ಸರೋಜಿನಿ ನಾಯ್ಡು, ವಿಜಯಲಕ್ಷ್ಮಿ ಪಂಡಿತ್, ಮೊದಲಾದ ಆಧುನಿಕ ಕಾಲದ ಮಹಿಳೆಯರು ಭಾರತದ ಭವಿಷ್ಯತ್ತನ್ನು ರೂಪಿಸುವುದಕ್ಕಾಗಿ ತಮ್ಮ ಬಾಳನ್ನೇ ಧಾರೆಯೆರೆದಿದ್ದಾರೆ. ಆದುದರಿಂದಲೇ ಭಾರತದ ಮಹಿಳೆಯರು ಎಂದೊಡನೆ ಸತ್ಯ, ಪ್ರೇಮ, ಕ್ಷಮೆ, ದಮೆ, ತ್ಯಾಗ, ಸೇವೆ, ಅಹಿಂಸೆಗಳ ನೆನಹು ನಮ್ಮ ಸ್ಮೃತಿಪಟಲದಲ್ಲಿ ಸುಳಿಯಲಾರಂಭಿಸುತ್ತವೆ. ಆಗ ಹೃದಯದಲ್ಲಿ ಗೌರವಾದರಗಳು ತಲೆಯೆತ್ತುತ್ತವೆ. ಎಲ್ಲಾ ಒಳ್ಳಿತು ತನಕ್ಕೂ ಬರಗಾಲಬಂದಿರುವ ಈ ಕಾಲದಲ್ಲೂ ಮೇಲಿನಂತಹ ದೈವಿಕ ಗುಣಗಳು ಅಲ್ಪ ಅಂಶದಿಂದಲಾದರೂ ಇಂದು ನಮ್ಮ ಮಹಿಳೆಯರಲ್ಲಿ ಉಳಿದಿವೆ. ಆದರೆ ಸ್ವಾತಂತ್ರ್ಯದ ಬೆಳಗಿಲ್ಲದೆ ಇಂದು ಅವು ಮುರುಟಿಕೊಂಡಿವೆ. ವಿಕಾಸವಾಗಲೆಡೆಯಿಲ್ಲದೆ ಬಿದ್ದುಕೊಂಡಿವೆ. ಆದುದರಿಂದ ಇಂದು ಅವರಲ್ಲಿ ಹಿಂದಿನಂತೆ ಆತ್ಮತೇಜಸ್ಸು ಇಲ್ಲದಿದ್ದರೆ ಅದು ನಮ್ಮ—ಗಂಡಸರ ತಪ್ಪು. ಈ ದೆಸೆಯಲ್ಲಿ ನಾವು ಅಕ್ಷಮ್ಯ ಅಪರಾಧಿಗಳು.

ನಮ್ಮ ಸ್ಮೃತಿ ಪುರಾಣಗಳಲ್ಲಿ ಮಹಿಳೆಯರ ಸ್ವಾತಂತ್ರ್ಯವನ್ನು ಅಪಹರಿಸುವ ಕೆಲವೊಂದು ಮಾತುಗಳಿದ್ದರೂ, ಹಲವಾರು ಕಡೆಗಳಲ್ಲಿ, ಅವರ ಅತ್ಯುನ್ನತ ಆತ್ಮಸ್ಥಿತಿಯನ್ನು ಕಂಡು, ಬೇರಾಗಿ ಅವರನ್ನು ಎತ್ತಿ ಹಿಡಿಯುವ ವಚನಗಳೂ ಇವೆ. ಮನುಸ್ಮೃತಿಯಲ್ಲಿ ಒಂದೆಡೆ ಹೀಗಿದೆ: "ಯತ್ರನಾರ್ಯಸ್ತು ಪೂಜ್ಯನ್ತೇ ತತ್ರ ದೇವತಾಃ। ಯತ್ರೈತಾಸ್ತು ನ ಪೂಜ್ಯಂತೆ ಸರ್ವಾಸ್ತತ್ರಾ ಫಲಾಃ ಕ್ರಿಯಾಃ॥ ಶೋಚನ್ತಿ ಜಾಮಯೊ ಯತ್ರ ವಿನಶ್ಯತ್ಯಾಶು ತತ್ಕುಲಮ್। ನ ಶೋಚನ್ತಿತು ಯತ್ರೈತಾ ವರ್ಧತೆ ತದ್ಧಿ ಸರ್ವದಾ" (ಮನು III ೫೬–೭) "ಎಲ್ಲಿ ನಾರಿಯರನ್ನು ಪೂಜ್ಯ ದೃಷ್ಟಿಯಿಂದ ನೋಡುತ್ತಾರೊ ಅಲ್ಲಿ ದೇವತೆಗಳು ಸುಪ್ರೀತರಾಗುತ್ತಾರೆ. ಎಲ್ಲಿ ಅವರನ್ನು ಅಗೌರವದಿಂದ ಕಾಣುವರೋ ಅಲ್ಲಿ ಪುರುಷರು ಮಾಡುವ ಕರ್ಮವೆಲ್ಲ ನಿಷ್ಫಲವಾದಂತೆ. ಎಲ್ಲಿ ನಾರಿಯರು ಕಂಬನಿಗರೆಯುತ್ತಾರೊ ಆ ಕುಲವೇ ನಾಶವಾದಂತೆ. ಎಲ್ಲಿ ಅವರು ಆನಂದದಿಂದ ಇರುತ್ತಾರೊ ಆ ಕುಲವೇ ವೃದ್ಧಿಯಾಗುವುದು. ಹೀಗೆ ಪುರಾಣಗಳಲ್ಲೂ ಮತ್ತಿನ ಚಾರಿತ್ರಿಕ ಕಾಲದ ಅನೇಕ ಗ್ರಂಥಗಳಲ್ಲೂ ಸ್ತ್ರೀಯರನ್ನು ಎತ್ತಿ ಹಿಡಿಯುವ ಅನೇಕ ಮಾತುಗಳಿವೆ. ಅದರಲ್ಲೂ "ಹದಿಬದೆಯ ಧರ್ಮ"ವನ್ನು ಬರೆದ ಹೊನ್ನಮ್ಮ "ಪೆಣ್ಣಲ್ಲವೇ ನಮ್ಮನೆಲ್ಲ ಪಡೆದತಾಯಿ, ಪೆಣ್ಣಲ್ಲದೇ ಪೊರೆದವಳು. ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು" ಎಂದು ಹೆಣ್ಣನ್ನು ಬೀಳುಗಳೆಯುವವರಿಗೆ ಅಹ್ವಾನವಿತ್ತಿದ್ದಾಳೆ.

ಇಂದಿನ ಯುಗಾಚಾರ್ಯರಾದ ಮಹಾತ್ಮಾ ಗಾಂಧಿಯವರು ಭಾರತ ಮಹಿಳೆಯರ ಕುರಿತಾಗಿ ಬರೆಯುತ್ತ "ಹೆಂಗಸನ್ನು ಅಬಲೆಯೆನ್ನುವುದೆಂದರೆ ಅಳೆಯನ್ನು ನಿಂದೆ ಮಾಡಿದಂತೆಯೇ ಸರಿ... ಶಕ್ತಿಯಲ್ಲಿ ನೈತಿಕ ಬಲವೂ ಒಳಗೊಂಡಿದ್ದರೆ ಹೆಂಗಸು ಗಂಡಸಿಗಿಂತ ಎಷ್ಟೋ ಹೆಚ್ಚಿನವಳು. ಜೀವನದಲ್ಲಿ ಪವಿತ್ರ ಹಾಗೂ ಧಾರ್ಮಿಕ ಎಂಬುದರ ತವರು ಮನೆಯೆಲ್ಲವೂ ಸ್ತ್ರೀಯರಲ್ಲೇ ಇದೆ, ಅಳೆ ಪುರುಷನಿಗಿಂತ ಹೆಚ್ಚು ಉದಾರಿ. ಈ ಜೊತೆ ಕೂಡಾ ಆಕೆ ತ್ಯಾಗ ಮೂರ್ತಿ, ಶ್ರದ್ಧೆ, ಜ್ಞಾನಗಳ ತವರುಮನೆ, ನಮ್ರತೆ, ಸಹಿಷ್ಣುತೆ ಮಾತೃ ಪ್ರೇಮ ಇವುಗಳ ಬೀಡು" ಎಂದಿದ್ದಾರೆ.

ಪಂಡಿತ ಜವಾಹಿರಲಾಲ ನೆಹರೂ, ತಮ್ಮ "ಭಾರತದರ್ಶನ"(Discovery of India) ದಲ್ಲಿ ನಮ್ಮ ಮಹಿಳೆಯರು ಮಹಾತ್ಮರ ನೇತೃತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ ಬಗೆಯನ್ನು ಬಣ್ಣಿಸುತ್ತ "ಗಂಡಸರೆಲ್ಲರೂ ಸೆರೆಮನೆ ಸೇರಿದ್ದರು. ಆಗ ಒಂದು ವಿಚಿತ್ರ ಸಂಗತಿ ನಡೆಯಿತು. ನಮ್ಮ ಮಹಿಳೆಯರು ಮುನ್ನುಗ್ಗಿ ಹೋರಾಟಕ್ಕೆ ನಿಂತರು. ಮಹಿಳೆಯರೇನೋ ಹೋರಾಟದಲ್ಲಿ ಹಿಂದೆಯೂ ಭಾಗವಹಿಸಿದ್ದರು, ಆದರೆ ಈಗ ತಂಡೋಪತಂಡವಾಗಿ ಕಾರ್ಯ ರಂಗಕ್ಕಿಳಿವುದನ್ನು ಕಂಡು ಬ್ರಿಟಿಷ್ ಸರಕಾರಕ್ಕೆ ಹಾಗಿರಲಿ, ಅವರ ಗಂಡಂದಿರಿಗೂ ಆಶ್ಚರ್ಯವಾಯಿತು.

"ಶ್ರೀಮಂತ ಮತ್ತು ಮಧ್ಯಮ ವರ್ಗದ ಸುಖಜೀವನದ ತಂಪಿನಲ್ಲಿ ಸುಖವಾಗಿ ಬೆಳೆದ ಕುಲೀನ ಮಹಿಳೆಯರು, ಕೂಲಿಗಾರ ಸ್ತ್ರೀಯರು, ಬಡವರು, ಬಲ್ಲಿದರು ದಳಸಹ ಸ್ತ್ರೀ(?)ಗಟ್ಟಲೆ ಸರಕಾರದ ಆಜ್ಞೆಯನ್ನು ಭಂಗ ಮಾಡುತ್ತ ಲಾಟಿಯೇಟಿಗೆ ತಲೆಯೊಡ್ಡಿದರು. ಈ ಧೈರ್ಯ ಮತ್ತು ಸಾಹಸದ ದೃಶ್ಯಹಾಗಿರಲಿ, ಅವರು ತೋರಿಸಿದ ಸಂಘಟನಾ ಶಕ್ತಿ ಕೂಡಾ ವಿಸ್ಮಯಕಾರಕವಾಗಿತ್ತು."

ಕಬ್ಬಿನ ಆಲೆಕಣೆ

2 ಹೋರಿಯಿಂದ ಸುಲಭ ತಿರುಗುವಂಥ ಅತಿ ಉತ್ತಮ ದರ್ಜೆಯ ಗಾಣಗಳು. ದರ Iಕ್ಕೆ ರೂ. 465/- ಗಂಗೊಳ್ಳಿ ಯಾ ಮಲ್ಪೆ ಬಂದರ ಡಿಲಿವರಿ. ಬರೆಯಿರಿ.

G. N. Hemmady.
Goldville Engg: Works,
P. B 6204, Bombay 10

ಏಲಂ ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ಕ್ರಮ ನಂಬ್ರ 58/1949 ಆರ್. ಪಿ. ಎ. ನಂಬ್ರ 991/1950ರಲ್ಲಾದ ಹುಕುಂ ಪ್ರಕಾರ ನೇಮಕ ಪಟ್ಟ ಕಮಿಶನರು ಮಂಗಳೂರು ಕೆನರಾ ಹ್ಯಾಸ್ಕೂಲ್ ಬಳಿ ಅವರ ಆಫೀಸಿನಲ್ಲಿ ಇದೇ 1950ನೇ ಇಸವಿ ನವಂಬರ ತಿಂಗಳ ತಾರೀಕು 5ನೇ ಆದಿತ್ಯವಾರ ಬೆಳಗ್ಗೆ 10ಗಂಟೆಗೆ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು ಮಂದೇ ಲೋಟಾಗಿ ಅಲಾಯಿದಾ ಪ್ರಕಟಿಸಿದ ಛಾಪಾ ಏಲಂ ನೋಟೀಸಿನಲ್ಲಿ ನಮೂದಿಸಿದ ಶರ್ತಗಳಿಗೆ ಒಳಪಟ್ಟು ಬಹಿರಂಗವಾಗಿ ಏಲಂ ಮಾಡುವರು.

ಆಸ್ತಿಯ ವಿವರ

1. ಅತ್ತಾವರ ಗ್ರಾಮದ ಬಾಬತು ಮಂಗಳೂರು ಟವನ ನಂಬ್ರ 17ನೇ ಬಲ್ಮಟ ವಾರ್ಡಿಗೆ ಒಳಪಟ್ಟ ಟಿ. ಎಸ್. ನಂಬ್ರ 131. (ಆರ್. ಎಸ್. ನಂಬ್ರ 35-)0-17 ಸೆಂಟ್ಸ ವಿಸ್ತೀರ್ಣದ ಸ್ಥಳ (ರೂಪಾಯಿ 2-13-4ರಂತೆ ಮೂಲಗೇಣಿ ತೆರುವ ಮೂಲಗೇಣಿ ಆಸ್ತಿ.)

2. ಅತ್ತಾವರ ಗ್ರಾಮದ ಬಾಬತು ಮಂಗಳೂರು ಟವನ ನಂಬ್ರ 17ನೇ ಬಲ್ಮಟ ವಾರ್ಡಿಗೆ ಒಳಪಟ್ಟ ಟಿ. ಎಸ್. ನಂಬ್ರ 521/A2 (ಆರ್. ಎಸ್. ನಂಬ್ರ 967/A2) 0-1 ಒಂದು ಸೆಂಟ ವಿಸ್ತೀರ್ಣದ ರೂಪಾಯಿ 0-2-0 ತೀರ್ವೆ ತೆರುವ ಸ್ಥಳ. ಇದರಲ್ಲಿರುವ ಮನೆ, ಉಪಕಟ್ಟಡಗಳು ಮರಗಳು ಕೂಡಾ.

H. Vasudeva Kamath, B.A., B.L
VakilC-ommissioner
ಮಂಗಳೂರು, 14—10—1950

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್(?), ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾತಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು,
ಡಬ್ಬಿ ಒಂದಕ್ಕೆ ರೂ. 2—0—0
ಏಜಂಟ್:—
ಶಾ ಕಂಪೆನಿ, ಮಂಗಳೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಛಳಿಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD
ಹುಳುಕು ಕದ್ದು ಮದ್ದು ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

"ಈ ವಾರ್ತೆ ನೈನೀ ಸೆರೆಮನೆಯಲ್ಲಿ ನಮಗೆ ತಿಳಿದಾಗ ನಮಗಾದ ಆನಂದವನ್ನೂ, ಭಾರತ ಮಹಿಳೆಯರ ವಿಷಯದಲ್ಲುಂಟಾದ ಅದ್ಭುತವಾದ ಗೌರವವನ್ನೂ ನಾನೆಂದಿಗೂ ಮರೆಯಲಾರೆ. ನಮ್ಮ ಎದೆಯುಬ್ಬಿ ಕಣ್ಣುಗಳು ಆನಂದ ಭಾಷ್ಪದಲ್ಲಿ ಮುಳುಗಿಕೊಂಡದ್ದರಿಂದ ಪರಸ್ಪರ ಮಾತನಾಡಲು ಕೂಡಾ ಶಕ್ತರಾಗಲಿಲ್ಲ" ಎಂದಿದ್ದಾರೆ.

೧೯೩೧ನೇ ಇಸವಿ ಜನವರಿ ೨೬ರಲ್ಲು ದಿವಂಗತ ಮೋತೀಲಾಲ ನೆಹರೂರವರ ಸಲಹೆಯಂತೆ ಭಾರತ ದೇಶದ ಅದ್ಯಂತ ಒಂದು "ಜ್ಞಾಪಕಾರ್ಥ ನಿರ್ಣಯ"ವು ಅಂಗೀಕರಿಸಲ್ಪಟ್ಟಿತು. ಅದರಲ್ಲಿ ಒಂದು ಭಾಗ ಮಹಿಳೆಯರಿಗೆ ಸಂಬಂಧಿಸಿದುದು. ಅದು ಹೀಗಿದೆ "ಮಾತೃಭೂಮಿಯ ಕಷ್ಟ ಸಮಯದಲಿ, ತಮ್ಮ ಮನೆಮಠಗಳನ್ನು ತೊರೆದು ಅಪ್ರತಿಹತವಾದ ಧೈರ್ಯ ಮತ್ತು ಸಹನಾ ಶಕ್ತಿಯಿಂದ ಗಂಡಸರೊಂದಿಗೆ ಭುಜಕ್ಕೆ ಭುಜಕೊಟ್ಟು, ಭಾರತೀಯ ರಾಷ್ಟ್ರಯೋಧರ ಮೊದಲ ಹೋರಾಟದಲ್ಲಿ ಮುನ್ನುಗ್ಗಿ ಹೋರಾಟದ ಜಯಾಪಜಯಗಳಲ್ಲಿ ಭಾಗಿಗಳಾದ ಮಹಿಳೆಯರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಮತ್ತು ಗೌರವಗಳನ್ನು ಅರ್ಪಿಸುತ್ತೇವೆ."

ಭಾರತೀಯ ಮಹಿಳೆಯರು ವ್ಯವಹಾರದಿಂದ ವೇದಾಂತದ ವರೆಗೆ ಗೃಹಕೃತ್ಯದಿಂದ ರಾಜಕಾರಣದವರೆಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಇಳಿದು ದುಡಿಯಲು ಸಮರ್ಥರು, ಮಾತ್ರವಲ್ಲ ಪ್ರತಿಯೊಂದು ಕ್ಷೇತ್ರದಲ್ಲಿಯೂ ತಮ್ಮದೇ ಆದ ವಿಶಿಷ್ಟತೆಯೊಂದನ್ನು ಕಾಯ್ದುಕೊಳ್ಳಲು ಕೂಡಾ ಶಕ್ತರು ಎಂಬುದನ್ನು ಅವರು ತಮ್ಮ ಕೃತಿಯಿಂದ ಪ್ರತ್ಯಕ್ಷ ಮಾಡಿ ತೋರಿಸಿದ್ದಾರೆ. ಅವರು ನಮ್ಮ ನಾಡಿನ ಅಮೂಲ್ಯ ನಿಧಿ. ಆದರೆ ಆ ನಿಧಿಯಿಂದು ಗಂಡಿನ ಅಜ್ಞಾನದಿಂದಲೋ, ಅಥವಾ ಸ್ವಾರ್ಥದಿಂದಲೋ ಮೂಲೆಗುಂಪಾಗಿ ಕೊಳೆಯುತ್ತಿದೆ.

ಇಂದು ನಮ್ಮ ಮಹಿಳೆಯರಲ್ಲು ಕೂಡಾ ಹಲವಾರು ಕುಂದುಕೊರತೆಗಳಿವೆ. ಅವುಗಳನ್ನು ಸರಿಪಡಿಸಿಕೊಂಡು ತಮ್ಮ ಶ್ರೇಷ್ಠಪರಂಪರೆಯ ಉನ್ನತ ಮಟ್ಟವನ್ನು ಕಾಯ್ದುಕೊಂಡು ಮುನ್ನುಗ್ಗುವ ಹೊಣೆ ಅವರ ಮೇಲೆಯೇ ಇದೆ. ಹಿಂದಿನದೆಲ್ಲವೂ ಪರಮ ಪವಿತ್ರವೆಂದು ವಾದಿಸುವ ಪೂರ್ವಾಚಾರ ಪರಾಯಣರ ಪಂಗಡವೊಂದಿದ್ದರೆ, ಹಿಂದಿನದರಲ್ಲಿರುವುದೆಲ್ಲಾ ಜಳ್ಳು, ಹುರುಳಿಲ್ಲದ್ದು. ಅನ್ಯಾಯದ ಹೊರೆ ಎಂದು ಭಾವಿಸಿ, ಭ್ರಮಿಸಿ ಪರಾನುಕರಣಕ್ಕೆ ಕೈಯಿಕ್ಕಿ ಬಣ್ಣದ ಚಿಟ್ಟೆಗಳಂತೆ ಹಾರಾಡುತ್ತಿರುವ ಪಂಗಡ ಇನ್ನೊಂದು. ಸತ್ಯ ಈ ಎರಡರ ಮಧ್ಯೆ ಇದೆ.

ಹಳೆಯದೆಲ್ಲವೂ ಬಂಗಾರವೆಂದು ಭ್ರಮಿಸಿ, ವಿಮರ್ಶಿಸಿ ಕಾಣದೆ ಅದಕ್ಕೇ ಅಂಟಿಕೊಂಡರೆ ನಮ್ಮ ಬಾಳಿನಲ್ಲಿ ಪ್ರಗತಿಯಿಲ್ಲದೆ ಹೋದೀತು. ಬಾಳೇ ಅರ್ಥಹೀನವಾಗಿ ಸಾವಿಲ್ಲದ್ದಾದೀತು. ಅಂತೆಯೇ ಹೊಸತೆಲ್ಲವೂ ಗ್ರಾಹ್ಯವೆಂದು ಗ್ರಹಿಸಿ ಹಿಂದುಮುಂದು ನೋಡದೆ ಅದನ್ನೇ ಅಪ್ಪಿಕೊಂಡರೆ ನಮ್ಮ ಬಾಳು ಸತ್ಯ, ನ್ಯಾಯಗಳಿಂದ ಬಹುದೂರ ಸರಿದು ಕೃತಕವಾದೀತು. ತಿರುಳಿಲ್ಲದ ಬಣ್ಣದ ಸಿಪ್ಪೆಮಾತ್ರವಾದೀತು. ಇದನ್ನೆಲ್ಲ ಮನದಂದು ಮಹಿಳೆಯರು ತಮ್ಮ ವಿಚಾರಶಕ್ತಿಯ ಸಹಾಯದಿಂದ ಹಳೆಗಾಲದ ತಳಗಟ್ಟಿನ ಮೇಲೆ ಹೊಸಗಾಲದ ಬಾಳಮಂದಿರವನ್ನು ಕಟ್ಟಬೇಕು.

ನಾರಿಯರು ಯಾವ ಹಾದಿಯಿಂದ ಮುಂದುವರಿಯಬೇಕು, ಅವರ ಆದರ್ಶವೇನು ಎಂಬ ಕುರಿತಾಗಿ ಅನೇಕ ಜ್ಞಾನಿಗಳು ಅವರಿಗೆ ಸಲಹೆ ಸೂಚನೆಗಳನ್ನಿತ್ತಿದ್ದಾರೆ; ಮಾರ್ಗದರ್ಶನ ಮಾಡಿದ್ದಾರೆ. ರಾಮಕೃಷ್ಣ ಪರಮಹಂಸರು ಹೆಣ್ಣಿನ ಆದರ್ಶದ ಬಗ್ಗೆ ಏನು ಹೇಳುತ್ತಿದ್ದರೆಂಬುದನ್ನು ಸೋದರಿ ನಿವೇದಿತಾ ಬಹಳ ಅರ್ಥವತ್ತಾಗಿ ಹೀಗೆ ಹೇಳಿದ್ದಾಳೆ "ಶ್ರೀ ರಾಮಕೃಷ್ಣ ಪರಮಹಂಸರು ಭಾರತೀಯ ನಾರಿಯರ ಆದರ್ಶದ ಕುರಿತಾಗಿ ಹೇಳಿರುವ ಕೊನೆಯ ಮಾತು 'ಶ್ರೀ ಶಾರದಾ ದೇವಿ'"

ಸ್ವಾಮಿ ವಿವೇಕಾನಂದರು ತಮ್ಮ ಸಿಂಹವಾಣಿಯಲ್ಲಿ ಭಾರತೀಯ ಮಹಿಳೆಯರನ್ನು ಉದ್ದೇಶಿಸಿ "ಮರೆಯದಿರಿ ಭಾರತೀಯ ನಾರಿಯರ ಆದರ್ಶ ಸೀತಾ ಎನ್ನುವುದನ್ನು. ಪವಿತ್ರೋತ್ತಮಳವಳು. ಎಂತಹ ಸಹಿಷ್ಣುತೆ! ಬಂದ ಎಲ್ಲಾ ಕಷ್ಟನಷ್ಟಗಳನ್ನು ಮರುಮಾತಿಲ್ಲದೆ ಅನುಭವಿಸಿದಳು. ರಾಮನಂತಹ ವ್ಯಕ್ತಿಗಳು ಹಲವಾರು ಬರಬಹುದು ಆದರೆ ಸೀತೆಯಂತಹ ಶೀಲಬರುವದಕ್ಕೆ ಅದೇ ಮೊದಲು, ಅದೇ ಕೊನೆ. ಇಂತಹ ಶೀಲದ ಎರಕದಲ್ಲಿ ಭಾರತೀಯ ಮಹಿಳೆಯರ ಜೀವನ ರೂಪುಗೊಳ್ಳಬೇಕು" ಎಂದರು.

ಮಹಾತ್ಮಾ ಗಾಂಧಿಯವರು ನಮ್ಮ ಮಹಿಳೆಯರಿಗೆ ಕರೆಕೊಡುತ್ತಾ "ನೀವು ಸ್ವೇಚ್ಛೆ, ಸ್ವೈರಾವಿಚಾರಗಳಿಗೆ ಗುಲಾಮರಾಗಿ ಜೀವಿಸಬೇಡಿ. ಶೃಂಗಾರ ಅಲಂಕಾರ ಇವುಗಳನು ಬಿಸಾಡಿ ಬಿಡಿ. ನಿಮ್ಮಿಂದ ಸುತ್ತಲೆಲ್ಲಾ ನಿಜ ಸುಗಂಧವು ಬೀರಬೇಕೆಂದು ನೀವು ಇಚ್ಛಿಸುತ್ತಿದ್ದರೆ ಅದು ನಿಮ್ಮ ಉಚ್ಚ ಹೃದಯದಿಂದ ಹೊರಹೊಮ್ಮಬೇಕು. ಆಮೇಲೆ ನೀವು ಒಬ್ಬ ಗಂಡಸನ್ನು ಆಕರ್ಷಿಸಿ ಸಂತುಷ್ಟರಾಗದೆ ಇಡೀ ಮಾನವ ಕುಲದ ಮನಸ್ಸನ್ನು ನಿಮ್ಮತ್ತ ಸೆಳೆಯಲು ಸಮರ್ಥರಾಗುವಿರಿ. ಅಂತಹ ಶಕ್ತಿಯು ನಿಮ್ಮಲ್ಲಿ ಹುಟ್ಟಾ ಇದೆ. ನೀವು ನಿಮ್ಮ ಮೂಲ ಸ್ವರೂಪವನ್ನು ಪಡೆಯಿರಿ. ಹಾಗೂ ನಿಮ್ಮ ದಿವ್ಯ ಸಂದೇಶವನ್ನು ಬೀರಿರಿ.

ಭಾರತ ಸ್ತ್ರೀಯರು ಸ್ವಾತಂತ್ರ್ಯ ಪಡೆದು ತಮ್ಮ ಆತ್ಮವನ್ನು ಬೆಳಸಿ ಬೆಳಗಿಸಿ ಆದರ್ಶ ಮಾತೆಯರೂ ಪಾವನ ತಪಸ್ವಿನಿಯರೂ ಸಮರ್ಥ ರಾಜಕಾರಣಿಗಳೂ ಆಗಿ ಬೆಳಗಲಿ, ನಾಡೇ ನಂದನವಾಗಲಿ.

Notice

ಉಡ್ಪಿ ಡಿ. ಮು. ಕೋರ್ಟನಲ್ಲಿ

ಕ್ರಮ ನಂಬ್ರ 80/1950

T. ರಾಮಚಂದ್ರ ರಾವ್ —ವಾದಿ

ಮತ್ತು

ಪೇದ್ರು ಡೇಸ ಕೂಡಾ —ಪ್ರತಿವಾದಿಯವರೊಳಗೆ

ಸದ್ರಿವ್ಯಾಜ್ಯದ 2ನೇ ಪ್ರತಿವಾದಿ— ಉಡ್ಪಿ ತಾಲೂಕು ಪುತ್ತೂರು ಗ್ರಾಮದಲ್ಲಿರುವ ಆಲೆಕ್ಸ್ ವಾಸರ ಮಗ ಜಾಕ ವಾಸರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ವಾದಿಯು ಮೂಲಗೇಣಿ ಬಾಕಿ ಬಗ್ಗೆ ಪ್ರತಿವಾದಿರ ಮೇಲೆ ದಾಖ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 16-11-50ಕ್ಕೆ 2ನೇ ಪ್ರತಿವಾದಿಯ ನೋಟೀಸು ಬಗ್ಗೆ ಇಟ್ಟಿದೆ. ಆದ್ದರಿಂದ ಸದ್ರಿ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಯು ಸಾಧನೆ ಮಾಡುವದಿದ್ದಲ್ಲಿ ಸದ್ರಿ ತಾ. 16-11-50ನೇ ದಿವಸ ಬೆಳಗ್ಗೆ 10ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಶಿವಾಯ್ ಮಾಡಿ ಸದ್ರಿವ್ಯಾಜ್ಯವು ಪೈಸಲು ಮಾಡಲ್ಪಡುವುದು.

P. V. Acharya,
Vakil for Plaintiff

ಉಡ್ಪಿ, ತಾ. 25-10-50

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD



Highly perfumed and medicated, worth using daily by one and all keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹರ್ಬಲ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನಂಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಶಾಶ್ವತಗುಣವಾಗುವುದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು- ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0 ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3-8-0 ವಿ.ಪಿ.-ಬೇರೆ. ಡಜನ್ ಕೆಪ್ಸಲುಗಳಿಗೆ ರೂ 42-0-0 ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫಿ.

ಪ್ರಶಂಸನಾ ಪತ್ರ-ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರಾಕರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಥಿನ ಆಯುರ್ವೇದಿಕ್ ವೈದ್ಯರಾದ ಟಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-

ಡಾಹಾನು ರೋಡ್ಡು, ಬಿ. ಬಿ- ಎಂಡ್ ಸಿ. ಐ. ರೈಲ್ವೆ-

The Eclipse Distributing Agency.

Dahanu Road, B. B. & C. I. Rly,

ಬೊಂಬಾಯಿ ಸ್ಟಾಕಿಸ್ಟರು:—ಲಿಕ್ಟವಾಲಾ ಲಿಮಿಟೆಡ್, 25, ಓಲ್ಡ್ ಹನ. ಮೂನ್‌ಲೇನ್, ಬೊಂಬಾಯಿ 2-

ವಾರ ಭವಿಷ್ಯ

ತಾರೀಕು 2-11-1950ರಿಂದ ತಾ. 9-11-1950ರ ವರೆಗೆ.

ಮೇಷ—ದಿನೇ ದಿನೇ ವಿರೋಧಿ ವರ್ಗವು ವೃದ್ಧಿಗೊಳ್ಳುತ್ತಿರುವುದು. ಆದಕಾರಣ ಹಲವಾರು ಕಾರ್ಯಗಳಲ್ಲಿ ನಿಮ್ಮ ಸಂಕಲ್ಪವು ವಿಫಲವಾಗುವದು. ದೀರ್ಘಕಾಲದ ದೇಹಾಲಸ್ಯದಿಂದಲೂ ಮನೋರೋಗದಿಂದಲೂ ಪೀಡಿತರಾದ ನಿಮಗೆ ಗೃಹದಲ್ಲೂ ಕೂಡಾ ಕಿಂಚಿತ್ಸುಖವಿಲ್ಲವು- ಸ್ತ್ರೀಹೇತುಕವಾಗಿ ಕಷ್ಟ ನಷ್ಟಾಪ್ರಿಯನಿಷ್ಟಗಳು ಪ್ರಾಪ್ತವಾಗಲಿವೆ. ಆದರೂ ನಿಮ್ಮ ಸಂಪದ್ಭಾಗವು ಸಾಕಷ್ಟು ಉತ್ತಮವಿರುವುದರಿಂದ ವಾರಾಂತ್ಯದ 3ದಿನಗಳು ಸುಖವಾಗಿ ಕಳೆವವು

ವೃಷಭ—ಸಂಕಟ ಬಂದಾಗ ವೆಂಕಟರಮಣನೆಂಬುದು ಲೋಕರೂಢಿ; ಅವಿಚ್ಛಿನ್ನವಾಗಿ ಮೇಲಿಂದ ಮೇಲೆ ಬರುತ್ತಿರುವ ವಿಪತ್ಪರಂಪರೆಗಳು ನಿಮ್ಮನ್ನು ತಲೆಯೆತ್ತಲು ಬಿಡಲೊಲ್ಲವು ಶತ್ರು ಜನರಿಂದಾಗಿ ನಿಮ್ಮ ಧನಮಾನಗಳಿಗೆ ತುಂಬಾ ಧಕ್ಕೆಯಿದೆ ಗೃಹದಲ್ಲಿ ಸುಖಶಾಂತಿಗಳಿಲ್ಲ. ಆದರೂ ಉದ್ಯಮಶೀಲರಾದ ನಿಮಗೆ ಉದ್ಯೋಗದಲ್ಲಿ ಫಲವು ತೃಪ್ತಿಕರವಾಗಿರುವುದು. ವಾರಾದಿಯ 2 ದಿನಗಳಲ್ಲಿ ಕಾರ್ಯಜಯ, ಧನಲಾಭವಿದೆ.

ಮಿಥುನ — ಬಹುಮುಖವಾದ ಖರ್ಚುಗಳನ್ನು ಸ್ಥಿಮಿತಕ್ಕೆ ತಂದು ಆದಾಯದ ಮಾರ್ಗಗಳನ್ನು ಹೆಚ್ಚಿಸಲು ಯತ್ನಿಸುತ್ತಿರುವಿರಿ. ಬಹುಮಟ್ಟಿಗೆ ಅದು ಸಾಧ್ಯವೇ, ನಿಮ್ಮ ಸಂಪದ್ಭಾಗಕ್ಕೆ ಶತ್ರುವರ್ಗದವರ ದೃಷ್ಟಿಯಿರುವುದರಿಂದ ಬಹಳ ಜಾಗರೂಕತೆಯಿಂದಿರಬೇಕಾಗುವದು. ಸೇವ್ಯ ಸೇವಕರಲ್ಲೂ, ಗುರುಹಿರಿಯರಲ್ಲೂ ಕೆಲವೊಮ್ಮೆ ಮನಸ್ತಾಪಕ್ಕವಕಾಶವಿದೆ ತಾ. 4, 5 ಈ ದಿನಗಳು ನಿಮಗನುಕೂಲವಾಗಿವೆ

ಕರ್ಕಟ— ಇಂದಿನ ನಿಮ್ಮ ಆದಾಯವು ನಿಮ್ಮ ಪ್ರಯತ್ನಕ್ಕಿಂತ ಅಧಿಕವಾಗಿರುವುದಾದರೂ ನೀವದನ್ನು ಸಂರಕ್ಷಿಸಲು ಶಕ್ತರಾಗುವುದಿಲ್ಲವು. ಕಟ್ಟಮೇಲೆ ಬುದ್ಧಿ ಬಂತು ಅಟ್ಟಮೇಲೆ ಒಲೆ ಉರಿಯಿತು ಎಂಬ ಗಾದೆಯಂತೆ ನಿಮಗದರ ಅರಿವು ಮುಂದಾಗಲಿರುವುದು. ಇಂದಿನ ನಿಮ್ಮ ಸಾಹಸ ಧೈರ್ಯಗಳು ಜನತೆಯನ್ನು ಬೆರಗುಗೊಳಿಸುವಷ್ಟು ಮಹತ್ವವಿದ್ದದ್ದಾದರೂ ಅದನ್ನು ಸಫಲ ಮಾಡಿಕೊಳ್ಳುವ ವಿವೇಕ ನಿಮಗಿರದು. ತಾ. 4, 5 ಉತ್ತಮವಿಲ್ಲವು.

ಸಿಂಹ—ನಿಮ್ಮಷ್ಟಕ್ಕೆ ನೀವು ಕುಳಿತಿದ್ದರೂ ಪರಸುಖಾಸಹಿಷ್ಣುಗಳಾದ ಕೆಲವರು ನಿಮ್ಮನ್ನು ಸುಮ್ಮ ಸುಮ್ಮನೆ ಕೆಣಕುವರು. ನಿಮ್ಮ ದುಡಿಮೆಯ ಹಣದಲ್ಲಿ ಬಹ್ವಂಶವು ವೈದ್ಯರ ಬೊಕ್ಕಸವನ್ನು ಸೇರಲಿದೆ ಜನತೆಯಲ್ಲಿ ಗೌರವ, ಉದ್ಯಮದಲ್ಲಿ ಧನಲಾಭ, ನಿಶ್ಚಿಂತವಾದ ಗೃಹಸುಖಗಳು ದೊರೆವುದರಿಂದ ಸುಖದಿಂದ ನಿಮ್ಮ ದಿನಗಳನ್ನು ಕಳೆಯಲಿರುವಿರಿ. ತಾ. 4, 5 ಸುಖಭೋಗದಾಯಿಗಳಿವೆ.

ಕನ್ಯಾ — ಇಂದಿನ ಪರಿಸ್ಥಿತಿಯನ್ನು ನೋಡುವಾಗ ಕಳೆದ ದಿನಗಳೆಷ್ಟೋ ಉತ್ತಮವೆಂದು ನಿಮ್ಮ ಮನಸ್ಸಿಗೆ ಹೊಳೆಯದಿರದು. ಕಷ್ಟಪಟ್ಟು ದುಡಿದರೂ ದುಡಿಮೆಗೆ ತಕ್ಕ ಫಲದೊರೆಯದ ಕಾರಣ ನಿರಾಶೆಗೆ ಗುರಿಯಾಗುವಿರಿ. ಸಂಸಾರಿಕ ತಾಪತ್ರಯಗಳಿಲ್ಲವಾದರೂ ಕೃತ್ರಿಮ ಮಿತ್ರರಿಂದಾಗಿ ಕಷ್ಟನಷ್ಟಗಳಿಗೀಡಾಗುವಿರಿ. ಸದಾ ಮನರೋಗ ಪೀಡಿತರಾದ ನಿಮಗೆ ತಾ. 2, 3, 6, 7. ಈ ದಿನಗಳಲ್ಲಿ ಕೊಂಚ ನೆಮ್ಮದಿಯಿದೆ.

ತುಲಾ—ನೀವು ಒಳ್ಳೇ ವಿಕ್ರಮಿಗಳೂ ಸಾಹಸಿಗಳೂ ಆಗಿರುವಿರಿ ಅದಕ್ಕೆ ತಕ್ಕುದಾದ ವಿವೇಕವೂ ನಿಮ್ಮಲ್ಲಿದೆ. ಆದರೆ ಸದ್ಯದ ನಿಮ್ಮ ಮನೋದೌರ್ಬಲ್ಯದಿಂದಾಗಿ ನೀವಾವ ಕಾರ್ಯದಲ್ಲೂ ಪ್ರವೇಶಿಸಲು ಹಿಂಜರಿಯುವಿರಿ. ಬಂಧು ವರ್ಗದವರ ಮತ್ತು ಕುಟುಂಬದವರ ಬೆಂಬಲವು ಅತ್ಯುತ್ತಮವಿದೆ. ನಿಮ್ಮ ಸ್ವಂತ ಸುಖಕ್ಕಾವ ಕೊರತೆಯೂ ಬರಲಾರದು. ವಾರಾಂತ್ಯದ 3 ದಿನಗಳು ಹೆಚ್ಚಿನ ಫಲದಾಯಿಗಳಲ್ಲ.

ವೃಶ್ಚಿಕ— ಗೃಹತಾಪತ್ರಯಗಳಿಂದ ಮುಕ್ತರಾದ ನೀವು ಉತ್ತಮವಾದ ಗೃಹಸುಖವನ್ನು ಪಡೆವಿರಿ. ಮಧ್ಯೆ ಮಧ್ಯೆ ಶತ್ರುವರ್ಗದವರಿಂದ ನಿಮ್ಮ ಮನಶ್ಶಾಂತಿಗೆ ಭಂಗ ಬರಲಿರುವುದು. ಪಿತ್ಥೋಷ್ಣವಿಕಾರದಿಂದ ಆರೋಗ್ಯ ಕೆಡಲಿದೆ, ರಾಜಕೀಯ ಅಧಿಕಾರಿಗಳಿಂದ ಪೀಡೆಯುಂಟಾದೀತು. ಸದಾಚಾರಶೀಲರಿಗೆ ಈ ವಾರವು ಸಾಕಷ್ಟು ಉತ್ತಮವೆಂದು ಹೇಳಬಹುದು. ವಾರಾಂತ್ಯದ 5ದಿನಗಳು ನಿಮಗನುಕೂಲವಾಗಿವೆ.

ಧನು—ಇಂದು ನಿಮ್ಮ ಆದಾಯಸ್ಥಾನದಲ್ಲಿ ಹಲವು ಗ್ರಹರು ಸೇರಿರುವರು. ಆದ್ದರಿಂದ ನಿಮ್ಮ ಆರ್ಥಿಕ ಭಾಗವು ಬಹುಮಟ್ಟಿಗೆ ವೃದ್ಧಿಹೊಂದಲವಕಾಶವಿದೆ. ಆದರೆ ನಿಮ್ಮ ಕರ್ಮಸ್ಥಾನದಲ್ಲಿ ಕುಳಿತ ಶನೈಶ್ಚರನು ನಿಮ್ಮ ಮನಸ್ಸಿಗೆ ಸ್ಥಿಮಿತದಲ್ಲಿರಿಸಲೊಲ್ಲನು. ದೇಹದಲ್ಲಿ ಕಜ್ಜಿ, ಹುಣ್ಣು ಇತ್ಯಾದಿಗಳ ಉಪದ್ರವು ಕಾಣಿಸಬಹುದು. ಗೃಹಕೃತ್ಯದಲ್ಲಿ ಎಳ್ಳಷ್ಟೂ ಸುಖವಿರದು. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಮಕರ—ಸುಖಾಭಿರುಚಿಯಾದ ಅಂಗಾರಕನು ವ್ಯಯದಲ್ಲಿ ನಿಂತ ಕಾರಣ ನಿಮ್ಮ ಮನಸ್ಸಿಗೆ ನೆಮ್ಮದಿಯಿರಲಾರದು. ಮಾತ್ರವಲ್ಲ ಉತ್ಪತ್ತಿಯ ಹಣವೆಲ್ಲವೂ ಹೆಚ್ಚಿನಂಶ ವ್ಯಯವಾಗಲಿದೆ. ಆದರೂ ನಿಮ್ಮ ಉದ್ಯೋಗದಲ್ಲಿ ತೃಪ್ತಿಕರವಾದ ಫಲ ಲಭಿಸುವುದರಿಂದ ದಿನಯಾಪನೆಯು ಸುಗಮವಾದೀತು. ವಿದ್ಯೋಪಜೀವಿಗಳಿಗೆ ಈ ವಾರವು ಅತ್ಯಂತ ಶ್ರೇಯೋದಾಯಿಯಾಗಿದೆ. ವಾರಾದಿಯ 2ದಿನಗಳಲ್ಲಿ ಮಾನ, ಮನ್ನಣೆ, ವಿಜಯ, ಲಾಭಗಳಿವೆ.

ಕುಂಭ— ವ್ಯವಹಾರ ಲೇವಾದೇವಿ ನಿಮಿತ್ತ ಕೋರ್ಟಿಗೆ ಹೋಗುವ ಪ್ರಸಂಗ ಬರಬಹುದು. ಆದರೂ ವಿಜಯವು ನಿಮ್ಮ ಭಾಗಕ್ಕೇನೇ ಹಲವಾರು ವಿಧದಿಂದ ಧನ ಗಳಿಸುವಿರಾದರೂ ಅದೇ ರೀತಿ ಖರ್ಚುವೆಚ್ಚಗಳು ಹೆಚ್ಚುವುದರಿಂದ ಸಂಗ್ರಹಿಸಿಡಲು ಶಕ್ತರಾಗಲಾರಿರಿ. ದೇಹಪೀಡೆ, ಆಪ್ತ ಬಂಧುಗಳ ವಿರಹದಿಂದ ದುಃಖಿತರಾಗುವಿರಿ ಮನೆಯಲ್ಲಿ ಸ್ತ್ರೀಪುತ್ರರೊಡನೆ ಕಲಹವಾದೀತು. ಆದರೂ ವಾರಾದಿಯ 4ದಿನಗಳು ನಿಮಗೆ ಸುಖಪ್ರದವಾಗಲಿವೆ.

ಮೀನ—ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ಸಂಸಾರ ಸುಖವು ಉತ್ತಮವಾಗಿ ಲಭಿಸುವುದು. ದುಡಿಮೆಯ ಹೆಚ್ಚಿನಂಶವನ್ನು ಸದ್ವಿನಿಯೋಗ ಮಾಡುವಿರಿ. ಪ್ರಯಾಣದಲ್ಲಿ ದೇಹಪೀಡೆ, ಧನಹಾನಿಗಳ ಯೋಗವಿರುವುದರಿಂದ ಅದನ್ನು ಮುಂದರಿಸುವದೊಳ್ಳಿತು. ಶ್ರಮಜೀವಿಗಳಿಗೆ ಈ ವಾರವು ಸ್ವಲ್ಪ ಕಷ್ಟವಾಗಿ ತೋರೀತು. ದೇಹದಲ್ಲಿ ಆಗಾಗ ವಾತಕೋಪವುಂಟಾಗಬಹುದು- ಆದರೂ ವಾರಾಂತ್ಯದ 5ದಿನಗಳು ಸುಖವಾಗಿ ಕಳೆಯಲಿವೆ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿನಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪುರ— ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಕ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕೆಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ನಿಮಗೆ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ ಪಿ ದ್ವಾರ ರೂ 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ, ಉಡುಪಿ

ಇವರಿಗೆ ಬರೆಯಿರಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು. ಹಳೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3.; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MRS. P. DEVEE, F. DS. (N. J.)

Tollygunge CALCUTTA.

ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

Estd 1921 ಸ್ಥಾಪನೆ.
31ನೇ ವರ್ಷ

2-11-1950

Founder: Sri A. B. Shetty,
Minister for Agriculture & Veterinary.

ನವ ಯುಗ

ವರ್ಷ ೩೧
ವಾರ ೯

NAVAYUGA
WEEKLY

POST BOX NO. 22
UDIPI, S. K.

Vol. 31
No. 9

ಪರ್ಯಾಯ ಪ್ರಕಾರ-

ಸರ್ದಾರ್ ವಲ್ಲಭಾಯಿ ಪಟೇಲರಿಗೆ ಒಕ್ಟೋಬರ್ 31ಕ್ಕೆ 75 ವರುಷ ತುಂಬಿ ಈಗ 76ನೇ ವರುಷ ನಡೆಯುತ್ತಿದೆ. ನಮ್ಮಲ್ಲಿ 75ರ ಹುಟ್ಟಿಂಬುದು ಜನಜನಿತವಾದುದು. 'ಮುದಿ ಭ್ರಾಂತಿಯಿಂದ ಮನೆಯ ವ್ಯವಸ್ಥೆ ನೋಡಲಾರದೆ ಇಂಥವರ ಕೈಗೊಂಬೆಯಾಗಿದ್ದಾನೆ' ಎಂದು ಈ ಪ್ರಾಯದ ಮುದುಕರ ಸಂಬಂಧವಾಗಿ ನೋಟಿಸು ಜಾಹೀರಾಗುತ್ತಿರುವುದನ್ನು ಕಾಣುತ್ತಿದ್ದೇವೆ.

ಆದರೂ ಸರ್ದಾರ್ ಪಟೇಲರು, 75ರ ಮುದಿ ಪ್ರಾಯದಲ್ಲಿ ರಾಷ್ಟ್ರದ ಪಾಲಿನ ಹೊಣೆಗಾರಿಕೆಯನ್ನು ಯಾವ ರೀತಿ ನಿರ್ವಹಿಸುತ್ತಿದ್ದಾರೆ, ಎಂತಹ ಶ್ರಮ ವಹಿಸುತ್ತಿದ್ದಾರೆ, ಎಂಬುದು ಗಣನೀಯ ವಿಚಾರ. "ನನ್ನ ಮುದಿತನವು ರಾಷ್ಟ್ರ ಸೇವೆಗೆ ಯಾವ ಭಂಗವನ್ನೂ ಒಡ್ಡದಂತೆ ನೋಡಿಕೊಂಡು ಕೊನೆಯ ವರೆಗೂ ದುಡಿಯುವೆ" ಎಂದು 76ನೇ ಜನ್ಮದಿನದಲ್ಲಿ ಅವರು ತನ್ನ ಶಪಥವನ್ನು ಸಾರಿದ್ದಾರೆ.

ಮುಪ್ಪು ಮತ್ತು ರಾಹಿಲೆಯ ಪೀಡೆಯಿಂದ ದೇಹ ಕುಸಿದಿದ್ದರೂ, ಕುಳಿತುಕೊಂಡೇ ಭಾಷಣ ಮಾಡಬೇಕಾದಷ್ಟು ದೌರ್ಬಲ್ಯವಿದ್ದರೂ, ಉಳಿದಿರುವ ತನ್ನ ಆಯುಷ್ಯ ಭಾಗದ ಪ್ರತಿಯೊಂದು ಕ್ಷಣವನ್ನೂ ಕರ್ತವ್ಯ ಪಾಲನೆಯಲ್ಲಿ ವ್ಯಯಿಸಬೇಕೆಂಬ ನಿರ್ಧಾರದಿಂದಿರುವ ಸರ್ದಾರ್ ವಲ್ಲಭಾಯಿಗಳು ಈ ಮಟ್ಟಿಗೂ ಜನತೆಗೊಂದು ಮೇಲ್ಪಂಕ್ತಿ.

ಪಂಡಿತ ಜವಾಹರಲಾಲ ನೆಹರುಗಳಿಗೆ ಇದೇ ನವಂಬರ್ 14ಕ್ಕೆ 62 ವರುಷ ತುಂಬಿ 63ನೇ ವರುಷ ಹಿಡಿಯಲಿದೆ. ದಿನದ 18 ತಾಸುಗಳಲ್ಲೂ ಕೆಲಸ ಮಾಡುತ್ತಿರುವ-ಅರುವತ್ತೆರಡರ ಅಪರ ವಯಸ್ಸಿನಲ್ಲಿ ಇಪ್ಪತ್ತೆರಡರ ತರುಣನ ಹುರುಪು, ಚಟುವಟಿಕೆಗಳನ್ನು ಪ್ರದರ್ಶಿಸುತ್ತಿರುವ- ಪಂಡಿತಜೀ ಈ ಮಟ್ಟಿಗೂ ಎಂತಹ ಅಸಾಮಾನ್ಯನೆಂಬುದನ್ನು ಊಹಿಸಬಹುದು.

ಸರ್ವಸಾಮಾನ್ಯವಾಗಿ 60ನೇ ವಯಸ್ಸು ಕಾರ್ಯದಿಂದ ನಿವೃತ್ತಿಹೊಂದುವ ಅವಧಿ. ಆದರೆ ಪಂಡಿತ ನೆಹರುಗಳು ಹಿಂದಿಗಿಂತಲೂ ಹೆಚ್ಚಾಗಿ ಈ ಪ್ರಾಯದಲ್ಲಿ ಅಹರ್ನಿಶಿ ದುಡಿಯಬೇಕಾಗಿ ಬಂದಿದೆ; ದುಡಿಯುತ್ತಿದ್ದಾರೆ. ಕಾರ್ಯ ಬಾಹುಳ್ಯದಿಂದ ದಣಿದು ವಿಶ್ರಾಂತಿ ತೆಗೆದುಕೊಳ್ಳುವ ಮತ್ತು ಕಾಹಿಲೆಗೀಡಾಗಿ ಚಿಕಿತ್ಸೆ ಪಡಕೊಳ್ಳುವ ಹವ್ಯಾಸವಂತೂ ಹೊಣೆಗಾರ ನಾಯಕ ವರ್ಗದಲ್ಲಿ ಇರುವಂತಹದೇ. ಆದರೆ ಪಂಡಿತ ನೆಹರುಗಳು ರಾಜಕೀಯರಂಗ ಪ್ರವೇಶಿಸಿದಂದಿನಿಂದ ಈವರೆಗೆ ಇಂತಹ ಸ್ಥಿತಿಗೀಡಾದ ಸಂದರ್ಭವೇ ನೆನಪಾಗುವದಿಲ್ಲ. ಇದು ಭಾರತದ ಸುದೈವಗಳಲ್ಲೊಂದು.

ಶ್ರಮಪಟ್ಟು ದುಡಿದ ದೆಸೆಯಿಂದ ಬ್ರಿಟನಿನ ಅರ್ಥಮಂತ್ರಿ ಸರ್. ಕ್ರಿಪ್ಸರು ಒಂದು ವರುಷ ಕಾರ್ಯನಿವೃತ್ತಿ ಹೊಂದಬೇಕಾಗಿ ಬಂದಂತೆ, ಬೇರೆಲ್ಲರಿಗಿಂತಲೂ ಹೆಚ್ಚಿನ ಶ್ರಮ ತೆಗೆದುಕೊಳ್ಳುತ್ತಿರುವ ಪಂಡಿತ ಜವಾಹರಲಾಲರು ಉದ್ಯೋಗ ವಿರಾಮ ಹೊಂದಬೇಕಾಗುತ್ತಿದ್ದರೆ? ಸಾಮಾನ್ಯರ ಮಟ್ಟದಿಂದ ಅಳೆಯುವಾಗ ಹಾಸಿಗೆ ಬಿಡಬೇಕಾದರೆ ಊರುಗೋಲನ್ನಾಧರಿಸುವ ಪ್ರಾಯದಲ್ಲಿ ವಲ್ಲಭಾಯಿಗಳು- ವಿರಾಮ ವೇತನ ಪಡೆದು ದಿನ ದೂಡಬೇಕಾಗಿರುವ ಪ್ರಾಯದಲ್ಲಿ ಜವಾಹಿರಲಾಲ ನೆಹರುಗಳು-ಭಾರತ ರಾಜಕೀಯ ರಂಗದಿಂದ ದೂರವಾಗುತ್ತಿದ್ದರೆ?

ಕಾಂಗ್ರೆಸಿನ ಅಗ್ರಗಣ್ಯ ನಾಯಕರ ಪೈಕಿ ಪಂಡಿತ ನೆಹರುಗಳೇ ಕಿರಿ ಪ್ರಾಯದವರೆಂಬುದನ್ನು ಮರೆಯಬಾರದು. ಅಂದ ಮೇಲೆ, ನಮ್ಮ ರಾಷ್ಟ್ರ ನಾಯಕರ ವರ್ಗವು ಹಣ್ಣು ಮುದುಕರ ಕೂಟ, ವಾಯಿದೆ ಮೀರುತ್ತಾ ಬಂದವರ ಗುಂಪು, ಎಂಬುದು ನೆನಪಿರಬೇಕು. ಸಾಮಾನ್ಯ ರೀತಿಯಂತೆ 'ಪೆನ್ಶನ್' ಕೊಟ್ಟು ವಿರಾಮಗೃಹಕ್ಕೆ ಬೀಳ್ಕೊಡ ವಷ್ಟು ಪ್ರಾಯವಾದವರಿಂದಲೇ ಈಗ ನಮ್ಮ ರಾಷ್ಟ್ರದ ಆಡಳಿತೆ ನಡೆಯುತ್ತಿದೆ.

ಈ ಹಳಬರ ಆಳ್ವಿಕೆಯ ಕುರಿತು ಆಲೋಚಿಸತಕ್ಕ ಅಂಶಗಳಿವೆ. ಮುದಿಪ್ರಾಯದಲ್ಲಿ ಸ್ವಭಾವ ಬದಲಾಯಿಸಿಕೊಳ್ಳುವುದು ಎಂಥವರಿಗೂ ಅಸಾಧ್ಯವಾಗಿರುವ ವಿಷಯ. ಆದ್ದರಿಂದ ಕ್ರಾಂತಿಕಾರಿ ಬದಲಾವಣೆಗಳನ್ನು ಅಪೇಕ್ಷಿಸುವವರು, ಈ ಹಳೇ ನಾಯಕರಿಂದಲೇ ಅಂತಹ ಸುಧಾರಣೆ ಬರಬೇಕೆಂದು ಅಗ್ರಹಹಿಡಿಯುವುದು ತಪ್ಪು.

ಈ ಮುದಿ ನಾಯಕರೆಲ್ಲರೂ ಕೃತಾರ್ಥಜೀವಿಗಳೇ. ತಮ್ಮ ಆಯುಷ್ಯದ ಅತಿ ಹೆಚ್ಚಿನ ಭಾಗವನ್ನು ಯಾವ ಸಾಧನೆಯಲ್ಲಿ ಅವರು ಕಳೆದಿದ್ದರೋ ಆ ರಾಷ್ಟ್ರ ಸ್ವಾತಂತ್ರ್ಯವನ್ನು ದೊರಕಿಸಿಕೊಂಡು, ಅದರ ಅಧಿಕಾರಿಗಳಾಗಿ ಚಾಲು ಮಾಡುವ ಭಾಗ್ಯಶಾಲಿಗಳು ಅವರು. ಸ್ವಸಾಧನೆ ಮತ್ತು ಸ್ವಾನುಭೋಗವೆರಡರ ಸುಯೋಗವೂ ಇವರಂತೆ ದೊರೆತವರು ಹಿಂದಿರಲಿಲ್ಲ, ಮುಂದೆ ಇರುವುದೂ ಅಸಂಭವ.

ಅಂದಮೇಲೆ ಭಾರತದ ಇದುವರೆಗಿನ ವಿದ್ಯಮಾನಗಳು ಕೇವಲ ಹಿರಿಯ ನಾಯಕರ ಜೀವನವನ್ನಷ್ಟೇ ಸಾರ್ಥಕಗೊಳಿಸಿದುವೆಂಬ ಅರ್ಥವಲ್ಲ. ಈ ನಾಯಕರಜನ್ಮಸಾರ್ಥಕವಾಗುವುದರೊಂದಿಗೇನೇ ರಾಷ್ಟ್ರದ ಪಾಲಿಗೆ ಆಗಬೇಕಾದುದು ಆಗುತ್ತಾ ಬಂದಿದ್ದಿತು. ದೇಶ ಸ್ಥಿತಿಯನ್ನು ಒಂದು ಹದಿಗೆ ತಂದಿಟ್ಟು ಅವರೆಲ್ಲರೂ ಈಗ ಮುದುಕರಾಗಿದ್ದಾರೆ. ಇದುವರೆಗಿನವೆಲ್ಲವೂ ಸಾರ್ಥಕವೇ.

ಇನ್ನು ಮುಂದೆ? ಭಾರತದ ಸ್ಥಿತಿಗತಿ- ಸಾಮಾಜಿಕ ಆರ್ಥಿಕ ಪರಿಸ್ಥಿತಿ- ಈಗಿರುವುದಕ್ಕಿಂತ ಕ್ರಾಂತಿಕರ ವಿಧಾನದಿಂದ ಬದಲಾವಣೆ ಹೊಂದಬೇಕು. ಹೊಸ ಅಧ್ಯಾಯವಾರಂಭಿಸಬೇಕು. ಹಳೇ ಅಧ್ಯಾಯ ರಚನೆಯಿಂದ ಹಣ್ಣಾಗಿರುವವರೇ ಈ ಹೊಸತನ್ನೂ ನಿರ್ಮಿಸಲಾರರು. ಅವರಿಂದಲೇ ಈ ಕಾರ್ಯವಾಗಬೇಕೆಂದು ನಿರೀಕ್ಷಿಸುವುದೂ ಸರಿಯಲ್ಲ; ಅವರನ್ನೇ ಅವಲಂಬಿಸಿರಬೇಕಾದ ಪರಿಸ್ಥಿತಿಯೂ ಇಂದಿಲ್ಲ.

ಈಗಿನದು ಜನತಾ ರಾಜ್ಯಭಾರ; ಸರ್ವರ ಸಮಾನ ಹೊಣೆಗಾರಿಕೆ. ಅಂದಮೇಲೆ ಆ ಕೆಲವೇ ಮಂದಿ ಹಿರಿನಾಯಕರ ಕೈಯ್ಯ ಸೂತ್ರವನ್ನು, ಇನ್ನು ಜನತೆ ತನ್ನ ಕೈಗೆ ತೆಗೆದುಕೊಳ್ಳಬೇಕು. ನಾಯಕರು ತಮ್ಮ ಕಾಲ ಮತ್ತು ಪರಿಸ್ಥಿತಿಗನುಸಾರವಾಗಿ ಈ ವರೆಗಿನದನ್ನು ಸಾಧಿಸಿಕೊಂಡಂತೆ, ಜನತೆ ಈಗಿನ ಕಾಲ, ವಿದ್ಯಮಾನಗಳಿಗಗತ್ಯವಿರುವುದನ್ನು ಇನ್ನು ಗಳಿಸಿಕೊಳ್ಳಬೇಕು, ಮುಂದಿನ ಅಧ್ಯಾಯ -ಮೇಲಿನ ಅಂತಸ್ತು-ಜನತೆಯಿಂದಾಗಬೇಕು.

ಮನುಷ್ಯ ಅಲ್ಪಜೀವಿ; ರಾಷ್ಟ್ರ ಚಿರಂಜೀವಿ. ಆದ್ದರಿಂದ ರಾಷ್ಟ್ರ ರಥವನ್ನು ನಡೆಸುವ ಕೈ ಪರ್ಯಾಯ ಪ್ರಕಾರ ಬದಲಾಯಿಸಲೇ ಬೇಕು. ಈಗಿನ ಪರ್ಯಾಯ ಜನತೆಯದು.

THE UNITED KARNATAK
INSURANCE COMPANY LIMITED,
United Karnatak Buildings, DHARWAR.
Established. 1929.
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.

ಆಧುನಿಕ ಇಂಗ್ಲಿಷ್ ಸಾಹಿತ್ಯದ ಅಗ್ರಗಣ್ಯ, ಜಗತ್ಪ್ರಸಿದ್ಧ ನಾಟಕಕರ್ತ ಜೋರ್ಜ್ ಬರ್ನಾರ್ಡ್ ಶಾ ತನ್ನ 94ನೇ ವಯಸ್ಸಿನಲ್ಲಿ ನವಂಬರ್ ತಾ 2ನೇ ಆತಿವಾರ ಬೆಳಗಿನ ಜಾವ ತಾಸು 4-49ಕ್ಕೆ ಇಂಗ್ಲಾಂಡಿನ ಹರ್ಟ್‌ಫೋರ್ಡ್‌ಶಯರಿನಲ್ಲಿರುವ ತನ್ನ ಹಳ್ಳೀಮನೆ ಆಯೊತ್ ಸ್ಯೆಂಟ್ ಲಾರೆನ್ಸಿನಲ್ಲಿ ಮರಣಗೊಂಡರು. ಶಾ ಅವರ ನಿಧನದಿಂದ ಆಧುನಿಕ ಇಂಗ್ಲಿಷ್ ಸಾಹಿತ್ಯ ಸೂರ್ಯ ಅಸ್ತಮಿಸಿದಂತಾಗಿ, ಒಮ್ಮೆ ಕತ್ತಲೆ ಕವಿದ ಹಾಗಿದೆ. ಶೇಕ್ಸ್‌ಪಿಯರರ ನಂತರ ಇಷ್ಟೊಂದು ಲೋಕಪ್ರಸಿದ್ಧಿ ಪಡೆದ ಇಂಗ್ಲಿಷ್ ಸಾಹಿತಿ ಬೇರಿರಲಿಲ್ಲ. ಸುಮಾರು ಅರ್ಧ ಶತಮಾನದಿಂದ ಈ ರಂಗದಲ್ಲಿ ಅವರು ಅನನ್ಯ ಸ್ಥಾನ ಗಳಿಸಿದ್ದರು. ಇಡೀ ಪ್ರಪಂಚದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಭಾಷೆ ಇಂಗ್ಲಿಷ್; ಇಂಗ್ಲಿಷ್ ಸಾಹಿತ್ಯದ ಅಲ್ಪ ಪರಿಚಯವಿರುವವರು ಕೂಡಾ ಬರ್ನಾರ್ಡ್ ಶಾ ಅವರನ್ನು ಬಲ್ಲರು. ಹೀಗೆ ಆಧುನಿಕ ಸಾಹಿತ್ಯ ಪ್ರಪಂಚದಲ್ಲಿ ಸರ್ವ ಪ್ರಥಮನಾಗಿ ರಾಜಿಸುತ್ತಿದ್ದವರು ಬರ್ನಾರ್ಡ್ ಶಾ. ಅವರ ನಿಧನದಿಂದ ಲೋಕದ ಒಂದು ಅಮೂಲ್ಯ ಸೊತ್ತು ಕಳೆದುಹೋಯಿತೆಂಬುದು ನಿಶ್ಚಯ.

ವಿಶೇಷ ವ್ಯಕ್ತಿತ್ವ

ಬರ್ನಾರ್ಡ್ ಶಾ, ಅವರದು ಮಿಂಚಿನ ಹೊಳಪು ಮತ್ತು ತೀವ್ರತೆ ಇದ್ದ ವ್ಯಕ್ತಿತ್ವ, ಅವರ ಮೆದುಳು ಪ್ರತಿಭೆ ತುಂಬಿದ್ದ ಸ್ವರ್ಣ ಕರಡಿಗೆಯಂತಿರದೆ, ಅನ್ಯಾಯಗಳನ್ನು ದಹಿಸಿ ಬಿಡುವ ಸಿಡಿಮದ್ದುಗಳನ್ನೇ ತುಂಬಿಸಿ ಕೊಂಡಿದ್ದಿತು. ಇಡೀ ಪ್ರಪಂಚಕ್ಕೆದಿರಾಗಿ ತನ್ನ ಸ್ವಂತಾಭಿಪ್ರಾಯಗಳನ್ನು ನುಗ್ಗಿಸುವ ಚೇತನವವರಲ್ಲಿದ್ದಿತು. 'ಶಾ' ಆಡಿದ್ದರಿಂದ ಮಾತ್ರ ಮಹತ್ವದ್ದೆನ್ನಿಸಿ, ಮಿಕ್ಕವರಾಡುತ್ತಿದ್ದರೆ ಮಹೋನ್ಮತ್ತತೆಯನ್ನಿಸುವಂತಹ ಕಿಡಿನುಡಿಗಳನ್ನು ಅವರು ಯಾವುದನ್ನೂ ಗಣಿಸದೆ ಆರಂಬಿಡುತ್ತಿದ್ದರು. 'ನಾಟಕಕ್ಕಾಗಿ ನಾಟಕ' 'ಕಲೆಗಾಗಿ ಕಲೆ' ಎನ್ನುವ ಪಂಥಾನುಸಾಹಿತಿಗಳ ವರ್ಗಕ್ಕೆ ಅವರು ಸೇರಿದವರಲ್ಲ. ಕಲೆಯನ್ನು ಪ್ರಗತಿಸಾಧನೆಯ ಉಪಕರಣವಾಗಿ ಬಳಸಿಕೊಂಡವರು, ನೆಲಬಿಟ್ಟು ಸಾಹಿತ್ಯಾಕಾಶದಲ್ಲಿ ವಿಹರಿಸಲಿಚ್ಛಿಸದೆ ನಿಂತ ನೆಲೆಯಲ್ಲಿ ಉದ್ದೇಶ ಸಾಧಿಸಿಕೊಳ್ಳಲು ತನ್ನೀ ಅಗಾಧ ಶಕ್ತಿಯನ್ನು ವಿನಿಯೋಗಿಸಿದವರು. ತನ್ನ ಕೃತಿಗಳ ಮೂಲಕ ಜಗತ್ತಿಗೆ ಮೃದುಸ್ಪರ್ಶ ಸುಖವನ್ನಷ್ಟೇ ಕೊಡುವ ಬದಲಿಗೆ ಲೋಲದ ಬೆನ್ನು ತಟ್ಟಿ ಜಾಗ್ರತಿ ಗೊಳಿಸುವ ಕೆಲಸ ಮಾಡಿದವರು. 'ತನ್ನದೇ ತನಗೆ' ಎಂಬಂತೆ, 'ಅದಮ್ಯ ಅತಿಗರ್ವಿ'ಯೆಂಬಂತೆ ಇಡೀ ಪ್ರಪಂಚವನ್ನೇ ತಲೆಯ ಮೇಲೇರಿಸಿಕೊಂಡ ವಿಷಯ ಮತ್ತು ವ್ಯಕ್ತಿಗಳನ್ನಾದರೂ ಕಡೆಗಾಲಿಂದ ಒದ್ದು ದೂಡಿಸುವ ಎದೆಯಿದ್ದವರು- "ಶೇಕ್ಸ್‌ಪಿಯರರನು ಲೋಕಕ್ಕೆ ಕೊಟ್ಟ ಸಂದೇಶವೆಂಬುದೇ ಇಲ್ಲ- ನನ್ನದಾದರೋ ಇದೆ- ಆದ್ದರಿಂದ ನಾನು ಶೇಕ್ಸ್‌ಪಿಯರರನಿಗಿಂತ ಮೇಲು" ಎಂದವರು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುವದಿದ್ದಿತು- ಮುಖ್ಯತಃ ನಾಟಕ ಕರ್ತನಾಗಿ ಲೋಕಪ್ರಸಿದ್ಧಿಗಳಿಸಿರುವ 'ಶಾ' ನಾಟಕಗಳೆಲ್ಲವೂ ಸಾಮಾಜಿಕ, ರಾಜಕೀಯ, ಆರ್ಥಿಕ ಸುಧಾರಣೆಗಳನ್ನು ತಾಣನಕೊಟ್ಟು ಕಲಿಸುವಂತಹವಿವೆ. ತತ್ವಶಃ ಅವರು ಸಮಾಜವಾದಿ- ಸಮಾಜ ಮತ್ತು ರಾಷ್ಟ್ರ ಕಲ್ಯಾಣ ಶಾ ಅವರ ಸಮಾಜ ಸಮತಾವಾದೀ ವಿಚಾರಗಳಿಗೆ ಗುರಿಯಾಗಿ ತತ್ತರಿಸುವಂತಾಗಿದ್ದಿತು- ಜನ್ಮತಃ ಐರ್ಲೆಂಡಿನವರಿದ್ದೂ,

ಜಿ. ಬಿ. ಶಾ. ವಿಯೋಗ

ಇಂಗ್ಲಾಂಡಿನವರಾಗಿ ಬಾಳಿ, ಜಾಗತಿಕ ಪ್ರತಿಭಾವಂತನಾಗಿ ಬೆಳಗಿದ ಜಿ. ಬಿ. ಶಾ. ಅವರಿಗೆ ಲೋಕವೆಂದು ಯಾವರಂಗದಲ್ಲಿ ಪಡೆದ ಪ್ರಗತಿಯೂ ಸಮಾಧಾನವನ್ನು ಕೊಟ್ಟಿರಲಿಲ್ಲ. ಆದ್ದರಿಂದ ಅವರು ಆಜೀಯ ಹಾಗೂ ವ್ಯಂಗ್ಯ ಟೀಕಾಕಾರರಾಗಿದ್ದರು. ಇಡೀ ಜಗತ್ತು ಮತ್ತು ಜಾಗತಿಕ ಪ್ರಗತಿ ಮಾತ್ರ ತನ್ನದಾಗಿದ್ದ ಬರ್ನಾರ್ಡ್ ಶಾ, ಜಗತ್ತಿನ ಒಳಗಡೆಯ ಸ್ವ-ಪರಭೇದವನ್ನೇ ಗಣಿಸದೆ, ಯುದ್ಧದಂತಹ ವಿಷಮ ಸನ್ನಿವೇಶಗಳಲ್ಲಿ ಕೂಡಾ ಸ್ವಪಾಳಯ ಧೋರಣೆಯನ್ನು ತೀಕ್ಷ್ಣವಾಗಿ ಟೀಕಿಸುವದಿದ್ದಿತು; ಸಾಮಾನ್ಯರನ್ನಾದರೆ ರಾಷ್ಟ್ರ ಸಂರಕ್ಷಣಾ ಶಾಸನಕ್ಕೆ ಆಹುತಿಮಾಡುವಷ್ಟು ಕಠೋರ ಖಂಡನೆಗಳು ಕಾಲಾಕಾಲ ನೋಡದೆ ಶಾ ಅವರ ಬಾಯಿಯಿಂದ ಬಂದಿದ್ದುವು ಅವರು ಅಷ್ಟು ಬಹಿರಂಗವಾದಿ; ರಾಷ್ಟ್ರಾಭಿಮಾನ, ಪಕ್ಷಾಭಿಮಾನ, ಮಂತ್ರಿ

ವುಗಳಿಗನುಗುಣವಾದ ತತ್ವ ನಿರ್ಬಂಧಗಳಿಂದ ಕಾರ್ಯಸಾಧಿಸಬೇಕೆಂದಿರುವ ಬಾರೀ ಜನರೂ ಸಮೀಪಕ್ಕೆ ಕೆದುಕೊಳ್ಳಲಾಗದ ಹುಚ್ಚುಕುದುರೆ' ಬರ್ನಾರ್ಡ್ ಶಾ. ಕೆಲವು ವರುಷಗಳ ಮೊದಲು ರಾಷ್ಟ್ರದ ಸ್ಥಿತಿಯಂತೆಯೇ ತನ್ನ ಮುದಿಪ್ರಾಯದ ಕುರಿತೂ ದೂರುತ್ತಾ ಶಾ ಅವರು "ನಾನು ಇನ್ನೊಂದು ನೂರು ವರುಷ ಬಾಳುವಂತಾದರೆ, ನಾನೋರ್ವ ಸುಪ್ರಭಾವಿ ಸರಕಾರೀ ಮಂತ್ರಿಯಾಗಿ ತೋರಿಸಿಕೊಡುತಿದ್ದೆ" ಎಂದಿದ್ದರು. ಆದರೂ ಶಾ ಇನ್ನೊಂದು ಶತಮಾನ ಬಾಳಿ, ಇನ್ನೊಂದು ನೂರು ಪ್ರಗತಿ ಬೋಧಕ ನಾಟಕಗಳನ್ನು ಬರೆದು ಲೋಕಕ್ಕೆ ತರಬೇತಿಕೊಡುತಿದ್ದರೂ ಇವರಂತಹ ಹರಿತ ನಾಲಿಗೆಯ ಜನವನ್ನು ಇಟ್ಟುಕೊಳ್ಳುವ ಮಂತ್ರಿ ಮಂಡಲಿಗೆ ಅನ್ಯ ಸದಸ್ಯರು ದೊರಕುತಿದ್ದರೆನ್ನಲಾಗುವದಿಲ್ಲ. ಸದಾಕಾಲ ಜನಸಾಮಾನ್ಯರ ಅಂತರಾಳದ ಆಶೆಯ ಯಥಾರ್ಥ ಪ್ರತಿನಿಧಿತ್ವವಹಿಸುವ ಯೋಗ್ಯತೆ ಮತ್ತು ಅಭಿರುಚಿಯಿದ್ದ ಈ ಐರಿಷ್ ಮನುಷ್ಯನಂಥವರು ಯಾವ ಕಾಲಕ್ಕೂ ಅಧಿಕಾರಕ್ಕೆ ಬರತಕ್ಕವರಲ್ಲ. ಶಾ ನಿಷ್ಕಾವಂತ ಸನ್ಯಾಸಿಯಾಗಿದ್ದರ;



ಹೊಗೆಬತ್ತಿ ಅಥವಾ ಅಮಲು ಸೇವನೆಯ ಚಟ ಅವರಿಗಿರಲಿಲ್ಲ. ಅತ್ಯಂತ ಸಾದಾ ರೀತಿಯ ಉಡುಗೆ ತೊಡುಗೆಯಲ್ಲಿರುತಿದ್ದರು. ಕಲಾವಿದರಲ್ಲಿ ಸರ್ವಸಾಮಾನ್ಯವಿರುವ ಅಹಂಭಾವ, ಸ್ವಯಂಪ್ರತ್ಯೇಕತೆ, ನಿಗೂಢತೆ, ಯಾವುದೂ ಇರದೆ ಮಗುವಿನಂತಹ ಸರಳತೆ ಇವರಲ್ಲಿದ್ದಿತು. ಕೀರ್ತಿಶ್ರೀ ಬರ್ನಾರ್ಡ್ ಶಾರಿಂದ ಒದೆತಿಂದಷ್ಟು-ಆದರೂ ಅಗ್ರಹಪಟ್ಟು ಅವರ ಬೆನ್ನಿಗೆ ಜೋತುಬಿದ್ದಷ್ಟು ಆಧುನಿಕ ಜಗತ್ತಿನ ಬೇರಾರಿಗೂ ಅದುದಿಲ್ಲ. ಅಯತ್ ಸ್ಯೆಂಟ್ ಲಾರೆನ್ಸ್, ಎಂಬ ಎಲ್ಲಾ ಗದ್ದಲಗಳಿಂದಲೂ ದೂರವಿರುವ ಒಂದು ಹಳ್ಳೀವಲಯದಲ್ಲಿ ಅವರು ವಾಸಿಸಿದ್ದರೂ, ಅದು ಬರ್ನಾರ್ಡ್ ಶಾರ ಕಾಲದಲ್ಲಿ ಸಾಹಿತಿಗಳ ಯಾತ್ರಾಸ್ಥಳವಾಗಿದ್ದಿತು. ಗಾಂಧಿಜೀ, ನೆಹರುಗಳಂತಹ ನಾಯಕರು ಇಂಗ್ಲಾಂಡಿಗೆ ಹೋಗಿದ್ದ ಸಂದರ್ಭದಲ್ಲಿ ಬರ್ನಾರ್ಡ್ ಶಾರ ಭೇಟಿ ಪಡೆದಿದ್ದರು. ಇಷ್ಟೊಂದು ಲೋಕ ಪ್ರಸಿದ್ಧರಿದ್ದರೂ, ಜನರ ಗೌರವಾರ್ಪಣಾ ಗೊಂದಲಗಳಿಂದ ತನ್ನ ಶಾಂತಿಯನ್ನು ಕೆಡಿಸಿಕೊಳ್ಳದಂತೆ ಶಾ ಅವರನ್ನು ಕಾಪಾಡಿದ್ದುದೆದರೆ, ಯಾವ ಕೃತಕ ಸಭ್ಯತೆ, ಸಂಪ್ರದಾಯಗಳಿಗೂ ಬೆಲೆಕೊಡದೆ 'ಅಧಿಕಪ್ರಸಂಗ'ಗಳಿಗೆಲ್ಲಾ ಮುಖಾಮುಖಿ ತಾಡನ ಕೊಡುವ ಅವರ ಸ್ವಭಾವವೇ. ಒಮ್ಮೆ ಒಬ್ಬ ಸುಂದರಿ ಸಿನೆಮಾ ನಟಿ ಬರ್ನಾರ್ಡ್ ಶಾರಿಗೊಂದು ಪ್ರಣಯಪತ್ರ ಬರೆದಿದ್ದಳು: "ನಾವು ಮದುವೆಯಾಗೋಣ. ನಮಗೆ ಹುಟ್ಟುವ ಮಕ್ಕಳಲ್ಲಿ ನಿಮ್ಮ ಬುದ್ಧಿ ಮತ್ತು ನನ್ನ ಸೌಂದರ್ಯ ಆವಿರ್ಭವಿಸಿದರೆ ಅವು ಹೇಗಾಗಬಹುದು!" ಗಡ್ಡಧಾರಿ ಮತ್ತು ಉದ್ದ ಬಡಕಲು ಕುರೂಪಿ ಬರ್ನಾರ್ಡ್ ಶಾ ಅದಕ್ಕುತ್ತರ ಕೊಟ್ಟರು: "ಬದಲಿಗೆ ನಿನ್ನ ಬುದ್ಧಿ ಮತ್ತು ನನ್ನ ಸೌಂದರ್ಯ ಆ ಮಕ್ಕಳಿಗೆ ಬಂದುಬಿಟ್ಟರೆ?"

ಆದಿ ಚರಿತ್ರೆ

"19ನೇ ಶತಮಾನದ ಮಧ್ಯದಲ್ಲಿ ಎರಡು ಪ್ರಾಮುಖ್ಯ ಘಟನೆಗಳು ಸಂಭವಿಸಿದ್ದುವು. ನಾನು ಹುಟ್ಟಿದುದೊಂದು. 'ದೇವರು ಹಲವು ವಿಧಾನಗಳಿಂದ ತನ್ನನ್ನು ತಾನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ' ಎಂಬ ಸುಪ್ರಸಿದ್ಧ ವಾಕ್ಯವನ್ನು ಟೆನ್ನಿಸನ್ ಬರೆದುದು ಮತ್ತೊಂದು" ಎಂದು ಕುಚೋದ್ಯಕ್ಕಾಗಿ ಒಮ್ಮೆ ಬರ್ನಾರ್ಡ್ ಶಾ ಹೇಳಿದ್ದರು. "ದೇವಸಾಕ್ಷಾತ್ಕಾರಕ್ಕಾಗಿ ನನ್ನ ಜನ್ಮ" ಎಂದು ಅವರೆರಡು ಸಂಧ

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶ್ಯೂರೆನ್ಸ್ ಕೋ, ಲಿಮಿಟೆಡ್

(ಸ್ಥಾಪನೆ 1934)

ಚೆಯರ್‌ಮೆನ್. ಶ್ರೀ. ಎಮ್ ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ

ಮಂಗಳೂರು ಶಾಖೆ:	ಕೇಂದ್ರ ಕಾರ್ಯಾಲಯ:
ಕೆ. ಎಸ್. ರಾವ್. ರೋಡು,	"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಹಂಪನಕಟ್ಟೆ, ಮಂಗಳೂರು.	ಮದ್ರಾಸು

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen

Vijaya Cash Certificates are the safest and best media for a discriminating investor. They mature on the expiry of three years and carry interest at 4½%

Rules on application at any of our following Offices.

Head Office:—**Kadri Road, Mangalore.**

Branches - City Mangalore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad & Mercara.

B. Manjaya Hegde,

Advocate & President, District Board S. Kanara.

CHAIRMAN.

ರ್ಭಗಳನ್ನು ಜೋಡಿಸಿ ಹೇಳುವ ಜಂಭಕ್ಕವರು ಹೋಗಲಿಲ್ಲವಾದರೂ ಟೆನ್ನಿಸನ್ ಅವರ ವಾಣಿಯ ಸಜೀವ ದಾಖಲೆಯಾಗಿ ಶಾ ಹುಟ್ಟಿದರೆಂಬುದನ್ನು ಈಗ ಒಪ್ಪಿಕೊಳ್ಳುವಂತಾಗಿದೆ. ಬರ್ನಾರ್ಡ್ ಶಾ 1856ನೇ ಜುಲಾಯಿ 26ರಲ್ಲಿ ಅಯರ್ಲೆಂಡಿನ ರಾಜಧಾನಿ ಡಬ್ಲಿನಿನಲ್ಲಿ ಹುಟ್ಟಿದ್ದರು. ಶಾರ ಪೂರ್ವ ಸಂತಾನಿಗರಲ್ಲಿ ಮೇಕ್ಡಫ್, ಒಲಿವರ್ ಕ್ರಾಮ್‌ವೆಲ್ಲರಂತಹ ಭಿನ್ನ ಗುಣ ನಡತೆಯ ಪ್ರಸಿದ್ಧರಿದ್ದರು. ಆದರೆ ಶಾರ ತಂದೆ ಜೋರ್ಜ್ ಕಾರ್ ಶಾ ಅತಿರೇಕ ಕುಡಿಕನಾಗಿದ್ದು ವ್ಯಾಪಾರದಲ್ಲಿ ಲುಕ್ಸಾನುಗೊಂಡ ಮನುಷ್ಯ. ತಂದೆಯಂತಹ ಚಂಚಲ ಸ್ವಭಾವದವ; ಆದರೆ ಶಾರ ತಾಯಿ ಪ್ರಭಾವೀ ವ್ಯಕ್ತಿತ್ವವಿದ್ದ ಮಹಿಳೆ. ಆಕೆ ಸಂಗೀತದಲ್ಲಿ ನಿಪುಣೆಯಿದ್ದಳು; ಸಂಗೀತಾಭ್ಯಾಸಕಿಯೂ ಆಗಿದ್ದಳು. ಕೊನೆಯ ವರೆಗೂ ಸಂಗೀತದ ಮೇಲೆ ಬರ್ನಾರ್ಡ್ ಶಾರಿಗಿದ್ದ ಅಭ್ಯಾಸಕ್ತಿಯು ತಾಯಿಯ ಗುಣವಾಗಿ ಅವರಲ್ಲಿ ಸೇರಿಬಂದುದು. ಕ್ರಮಬದ್ಧ ವಿದ್ಯಾಭ್ಯಾಸವು ಹೆಚ್ಚಿಗೇನೂ ಶಾ ಅವರಿಗಾಗಿಲ್ಲ. ಶಾಲೆಗೆ ಹೋಗಿ ಕಲಿಯುವ ಸ್ವಭಾವದ ಹುಡುಗ ಇವರಾಗಿರಲಿಲ್ಲ; ಹಲವು ಶಾಲೆಗಳಿಗೆ ಹಾಜರಾಗಿ ನೋಡಿದ ಮೇಲೆ, ಸುಮ್ಮಗೆ ಬಿದ್ದುಕೊಳ್ಳುವುದೇ ಸುಖವೆಂದು ಇವರಿಗೆ ತೋರಿತು. ಆದರೂ ತನ್ನ 15ನೇ ಪ್ರಾಯದಲ್ಲಿ ಅಸಾಮಾನ್ಯ ರೀತಿಯಿಂದ ಬುದ್ಧಿ ಪಕ್ವಗೊಂಡ, ಸ್ವಶಿಕ್ಷಿತ ಹುಡುಗನಾಗಿದ್ದರು ಶಾ. ಸಂಗೀತಾಭ್ಯಾಸಕಿಯಾಗಲು ಶಾರ ತಾಯಿ 1872ರಲ್ಲಿ ಲಂಡನಿಗೆ ಬಂದರು. ಆಗ ಒಬ್ಬ ಆಸ್ತೀ ಏಜಂಟನ ಆಫೀಸು ಹುಡುಗನಾಗಿದ್ದು, ಆ ಮೇಲೆ ಆತನ ಖಜಾನ್ಜಿಯಾಗಿದ್ದು, ಇವೆರಡು ಉದ್ಯೋಗವೂ ತನ್ನ ಸ್ವಭಾವಕ್ಕೊಗ್ಗದೆ ಪೇಚಾಡುತಿದ್ದ ಬರ್ನಾರ್ಡ್ ಶಾ ಕೆಲಸಕ್ಕೆ ರಾಜಿನಾಮೆ ಕೊಟ್ಟು ತಾಯಿಹೋದ ನಾಲ್ಕು ವರುಷಗಳ ನಂತರ ತಾನೂ ಲಂಡನಿಗೆ ಹೋಗಿ ತಾಯಿಯನ್ನು ಸೇರಿಕೊಂಡರು. ಆ ಮೇಲೆ ಒಂಭತ್ತು ವರುಷಗಳ ವರೆಗೂ ತಂದೆತಾಯಿಗಳನ್ನಾಧರಿಸಿಯೇ ಇವರ ಜೀವನ. ಈ ಅವಧಿಯಲ್ಲಿ ಇವರು ಬರೆದ ಒಂದು ಲೇಖನ, ಒಂದು ಕವಿತೆ, ಮತ್ತೊಂದು ಪೇಟೆಂಟ್ ಔಷಧ ಜಾಹೀರಾತು ಪುಣ್ಯವಶಾತ್ ಎಂಬಂತೆ ಪ್ರಕಾಶಕರಿಂದ ಅಂಗೀಕಾರಗೊಂಡಿದ್ದವು. ಶಾ, ಅವರು ತನ್ನ ಸಾಹಿತ್ಯ ಜೀವನವನ್ನು ಆರಂಭಿಸಿದುದು ಓರ್ವ ಕಾದಂಬರಿಕಾರನಾಗಿ. ಅವರು ಪ್ರಥಮತಃ ಒಂದರ ಮೇಲೊಂದರಂತೆ ಐದು ಕಾದಂಬರಿಗಳನ್ನು ಬರೆದಿದ್ದರು; ಆದರೆ ಅವೆಲ್ಲವೂ ಆ ಕಾಲದಲ್ಲಿ ಅಯೋಗ್ಯವೆನ್ನಿಸಿ ಮೂಲೆಗುಂಪಾಗಬೇಕಾಯಿತು. ಮೊದಲನೆಯದು ಪ್ರಕಟವಾಗಲೇ ಇಲ್ಲ; ನಂತರದ ನಾಲ್ಕು ಕಾದಂಬರಿಗಳೂ ಪುಸ್ತಕ ಪ್ರಕಾಶಕರಿಂದ ತಿರಸ್ಕರಿಸಲ್ಪಟ್ಟುದರಿಂದ ಪತ್ರಿಕೆಗಳಲ್ಲಿ ಪ್ರಕಟಗೊಳ್ಳಬೇಕಾಯಿತು. 1885ರಿಂದ 1898ರ ವರೆಗಿನ 13 ವರುಷಕಾಲ ಅವರು ಪತ್ರಿಕೋದ್ಯಮಿಯಾಗಿದ್ದರು. ಈ ಅವಧಿಯಲ್ಲಿ ಅವರ ಪ್ರತಿಭಾ ಪೂರ್ಣಲೇಖನಗಳು ಹಲವು ಪತ್ರಿಕೆಗಳಲ್ಲಿ ಬಂದುವು. ಸರ್ವಸಾಮಾನ್ಯ ಮೆಚ್ಚುಗೆಗೀಡಾಗಿದ್ದ ವ್ಯಕ್ತಿ ಮತ್ತು ವಿಷಯಗಳ ಕುರಿತು ಸೂಕ್ಷ್ಮ ವಿಷಯಗಳನ್ನೊಳಗೊಂಡ ಕಠಿಣ ಟೀಕೆಗಳನ್ನು ಮಾಡುವ ಮೂಲಕವೇ ಇವರು ಪ್ರಸಿದ್ಧಿಗೆ ಬಂದಿದ್ದರು. ಆದಿಭಾಗದಲ್ಲೇ ಪತ್ರಿಕಾಲೇಖಕ ಶಾ ಸರ್ವಜನಪರಿಚಿತರಾದರೂ ಓದುವವರಿಗಿಂತ ಹೆಚ್ಚಿಗೆ ಮುನಿಯುವವರ ಗುಂಪನ್ನೇ ಸಂಪಾದಿಸಿದ್ದರೆನ್ನಬಹುದು. ಪತ್ರಿಕೋದ್ಯಮವು ಅವರಿಗೆ ಎಲ್ಲಕ್ಕಿಂತ ಹೆಚ್ಚು ಮೆಚ್ಚುಗೆಯದಾಗಿದ್ದ ವಿಷಯ. "ಎಲ್ಲಕ್ಕಿಂತ ಉತ್ತಮವಾದ ಸಾಹಿತ್ಯವೆಂದರೆ ಪತ್ರಿಕಾ ಬರೆಹ. ಬೇರೆಯವರು ಸಾಹಿತ್ಯವೆನ್ನುತ್ತಾ ಏನನ್ನೇ ಅಭ್ಯಾಸಲಿ; ನನ್ನ ಪಾಲಿಗೆ ಪತ್ರಿಕೋದ್ಯಮವಿರಲಿ" ಎಂದು ಶಾ ಸಾರಿದ್ದರು. ಸಂಗೀತ, ಶೇಕ್ಸ್‌ಪಿಯರ್ ಮತ್ತು ಹಲವು ಪ್ರಚಲಿತ ವಿಷಯಗಳ ಕುರಿತು ಜಿ. ಬಿ. ಶಾ. ಬರೆದಿದ್ದ ಲೇಖನಗಳು ಸುಪ್ರಸಿದ್ಧವಿವೆ. ಕೀರ್ತಿವಂತ ನಟಿ ಎಲ್ಲೆನ್ ಟೆರ್ರಿಗೆ ಶಾ ಬರೆದಿದ್ದ ಪತ್ರಗಳು ಅಮೂಲ್ಯ ಸಾಹಿತ್ಯ ಕೃತಿಗಳಾಗಿ ಚಿರಸ್ಮರಣೀಯವಿವೆ. 1898ರಲ್ಲಿ ಐರಿಸ್ ಶ್ರೀಮಂತ ಯುವತಿ ಚಾರ್ಲೆಟ್ ಪೈನೆ ಎಂಬಾಕೆಯನ್ನು ಜಿ. ಬಿ. ಶಾ. ವಿವಾಹವಾದರು. 1943ರಲ್ಲಿ ಇವರ ಸಹಧರ್ಮಿಣಿ ತೀರಿಕೊಳ್ಳುವ ವರೆಗೂ ಅವರ ದಾಂಪತ್ಯ ಜೀವನವು ಸುಖಮಯವಾಗಿದ್ದಿತು; ಶಾ ದಂಪತಿಗಳಲ್ಲಿ ಮಕ್ಕಳಿಲ್ಲ.

ಸಮತಾವಾದಿ ನಾಟಕ ಕರ್ತೃ

ಕೇವಲ ಬರೆಹಗಾರ ಜೀವನದಿಂದ ಸಮಾಧಾನದಿಂದಿದ್ದ ಜನ ಜಿ. ಬಿ. ಶಾ. ಆಗಿರಲಿಲ್ಲ. 'ಪ್ರಗತಿ ಮತ್ತು ದಾರಿದ್ರ್ಯ' ಎಂಬ ಪುಸ್ತಕ ಬರೆದು ತಜ್ಞವರ್ಗದಲ್ಲೆಲ್ಲಾ ಒಂದು ನವೀನಾಸಕ್ತಿಯನ್ನು ನಿರ್ಮಿಸಿದ್ದ ಅಮೇರಿಕದ ತತ್ವವೇತ್ತ ಹೆನ್ರಿ ಜೋರ್ಜರು 1882ರಲ್ಲಿ ಲಂಡನಿಗೆ ಬಂದು ಅಲ್ಲಿಯ 'ಮೆಮೋರಿಯಲ್' ಹಾಲ್‌ನಲ್ಲೊಂದು ಭಾಷಣ ವಿತ್ತಿದ್ದರು. ಅವರ ಉಪನ್ಯಾಸವನ್ನು ಕೇಳಿದ ಜಿ.ಬಿ.ಶಾ, ಆಗಲೇ 'ಸಮತಾವಾದಿ'ಯಾಗಿ ಮತಾಂತರಗೊಂಡರು. ಸಮಾಜವು ಆರ್ಥಿಕ ಸಮಾನತೆಯ ಅಸ್ತಿವಾರವನ್ನಾಧರಿಸಬೇಕಾದ ಆವಶ್ಯಕತೆಯು ಅಂದೇ ಇವರಿಗೆ ಮನವರಿಕೆಯಾಗಿ, ಅವರ ಆ ಮೇಲಿನ ಕೃತಿಗಳೆಲ್ಲವೂ ಸಮಾಜವಾದವನ್ನು ಸ್ಫುಟಿಸಿದ್ದುವು. ಆದರೆ ಅವರು ತನ್ನ ಜೀವನದಲ್ಲೆಂದಿಗೂ ಯಾವ ಸಮಾಜವಾದೀ ಪಕ್ಷಕ್ಕೂ ಕಟ್ಟು ಬಿದ್ದುದಿಲ್ಲ. ಸಿಡ್ನಿವೆಬ್, ಗ್ರಾಹಾಮ್ ವೆಲ್ಲಾಸ್, ವಿಲ್ಲಿಯಮ್ ಮೋರಿಸ್ ರಾಮ್ಸೆ ಮೆಕ್ಡೊನಾಲ್ಡ್, ಸಿಡ್ನಿ ಒಲಿವರ್, ಅನ್ನಿ ಬೆಸೆಂಟ್ ಮುಂತಾದ ಆ ಕಾಲದ ಉತ್ಸಾಹೀ ಹಾಗೂ ಸಕತೋದ್ಯಮಿಗಳಿದ್ದ 'ಫೇಬಿಯನ್ ಸೊಸೈಟಿ'ಯ ಸದಸ್ಯನಾಗಿ ಶಾ 1879ರಲ್ಲಿ ಸೇರಿಕೊಂಡಾಗಲೇ ಶಾ ಮತ್ತು ವೆಬ್ಬರೊಳಗಿನ ಸುಪ್ರಸಿದ್ಧ ಸಂಬಂಧವಾರಂಭಿಸಿದುದು. ಸಮತಾವಾದಿ ಪ್ರಚಾರಕರ ಪಾಲಿಗೆ ಅತ್ಯಾವಶ್ಯವಿರುವ ಭಾಷಣ ಕಲೆಯನ್ನು ಶಾ ಅಭ್ಯಾಸಿಸಿದುದು ಇಲ್ಲಿಯೇ. 1883ರಿಂದ 1895ರ ವರೆಗಿನ 12 ವರುಷಗಳ ವರೆಗೂ ವಾರಕ್ಕೆ ಮೂರರಂತೆ ಜಿ. ಬಿ ಶಾ ಭಾಷಣಗಳನ್ನು ಕೊಟ್ಟಿದ್ದರೆಂದು ತಿಳಿದು ಬರುತ್ತದೆ. ನವಯುಗ ರಚನಾ ಪ್ರಭಾವವಿದ್ದ ಅಮೋಘ 'ಫೇಬಿಯನ್ ಎಸ್ಸೇಸ್' 1879ರಲ್ಲಿ ಶಾರ ಸಂಪಾದಕೀಯದಲ್ಲಿ ಪ್ರಕಟವಾಯಿತು. 27 ವರುಷಗಳ ವರೆಗೆ 'ಫೇಬಿಯನ್ ಸೊಸೈಟಿ'ಯ ಕಾರ್ಯಕಾರೀ ಸಮಿತಿಯಲ್ಲಿದ್ದು ಕೆಲಸ ಮಾಡಿದ ಮೇಲೆ 1911ರಲ್ಲಿ ಅವರದಕ್ಕೆ ರಾಜೀನಾಮೆಯಿತ್ತು ಹೊರಬಂದರು. ಕೈಸರ್ ಯುದ್ಧ ಕಾಲದಲ್ಲಿ ಜಿ. ಬಿ. ಶಾ. ಬರೆದ ಕೆಲವು ಲೇಖನಗಳು ಇವರ ಕುರಿತು ಬ್ರಿಟನಿನಲ್ಲಿ ಕಠೋರ ದ್ವೇಷಭಾವನೆಯನ್ನು ನಿರ್ಮಿಸಿದ್ದುವು. "ಯುದ್ಧ ಸಂಬಂಧದ ಸಾಮಾನ್ಯ ತಿಳುವಳಿಕೆ" ಎಂಬ ಶಾ, ಅವರ ಕರಪತ್ರವು ಬ್ರಿಟನಿನಲ್ಲೆಲ್ಲಾ ಭಯಂಕರ ಪರಿಣಾಮವನ್ನು ಮಾಡಿದ್ದಿತು. "ಹಲವು ಜನರ ಅಭಿಪ್ರಾಯದಂತೆ, ಮಿತ್ರ ರಾಷ್ಟ್ರಗಳೀಗ ಜರ್ಮನಿ, ಆಸ್ಟ್ರಿಯ, ಹಂಗೇರಿ, ಟರ್ಕಿ ಮತ್ತು ಬರ್ನಾರ್ಡ್ ಶಾರ ಸಂಯುಕ್ತ ಕೂಟದ ವಿರುದ್ಧ ಹೋರಾಡುತ್ತಿರುವಂತೆ ಕಾಣುತ್ತಿದೆ" ಎಂದು ರೋಬರ್ಟ್ ಲೈನ್ಡ್ ಆ ದಿನದಲ್ಲಿ ನಂಜು ಕಾರಿದ್ದರು. ಭಾರತ ಸ್ವಾತಂತ್ರ್ಯದೋಲನದ ಕಡೆಗೂ ಬರ್ನಾರ್ಡ್ ಶಾ ವಿಶೇಷಾಸಕ್ತಿಯನ್ನು ತೋರಿಸಿದ್ದರು. ದುಂಡು ಮೇಜು ಸಮ್ಮೇಳನಕ್ಕಾಗಿ ಲಂಡನಿಗೆ ಬಂದಿದ್ದ ಗಾಂಧಿಜೀಯೊಡನೆ ಸಂಭಾಷಿಸಿದ್ದಲ್ಲದೆ 1931ರಲ್ಲಿ ರಶ್ಯಕ್ಕೂ ಹೋಗಿ ಬಂದಿದ್ದರು. ಅವರು ಮುಖ್ಯತಃ ನಾಟಕಕರ್ತೃ. 50 ವರುಷಗಳ ವರೆಗೆ, ಸರ್ವಸಾಧಾರಣ ವರುಷಕ್ಕೊಂದರಂತೆ ಅವರ ನಾಟಕಗಳು ಪ್ರಕಟವಾಗಿದ್ದುವು. ಪ್ರಥಮ ಮತ್ತು ದ್ವಿತೀಯ ನಾಟಕಗಳು ಒಂದರಿಂದಿನ್ನೊಂದು ಪರಾಭವಗೊಂಡಿದ್ದರೆ, ಮೂರನೆಯದೇ ಅಂತರ್ರಾಷ್ಟ್ರೀಯ ಖ್ಯಾತಿಯನ್ನು ಶಾ ಅವರಿಗೆ ದೊರಕಿಸಿ ಕೊಡಹತ್ತಿ, ಆ ಮೇಲೆ ಪ್ರತಿಯೊಂದೂ ಒಂದರ ಬಳಿಕೊಂದು ವಿಶೇಷ ಲೋಕ ಪ್ರಿಯವಾಗುತ್ತಾ ಬಂದುವು. ಅವರ 47 ನಾಟಕಗಳಿವೆ. 1925ರಲ್ಲಿ ಸಾಹಿತ್ಯ ಸಂಬಂಧದ ನೋಬೆಲ್ ಬಹುಮಾನವು ಶಾರಿಗೆ ದೊರಕಿತು. ಇವರು ಆ ನಿಧಿಯನ್ನು ಇಂಗ್ಲಿಷ್ ಮಾತಾಡುವ ರಾಷ್ಟ್ರಗಳಲ್ಲಿ ಸ್ವೀಡಿಶ್ ಸಾಹಿತ್ಯವನ್ನು ಹರಡುವದಕ್ಕಾಗಿ ದಾನಕೊಟ್ಟಿದ್ದರು. ಶಾ, ಅವರಿಗೆ ಪ್ರಾಯ ಹೆಚ್ಚಾಗುತ್ತಾ ಹೋದಂತೆ ಅವರ ನಾಟಕಗಳು ವಿಶೇಷ ಪರಿಣಾಮಕಾರಿಯಾಗುತ್ತಾ ಬಂದಿದ್ದುವು. ಜಿ. ಬಿ. ಶಾ ತನ್ನ 57ರಿಂದ 67ನೇ ವಯಸ್ಸಿನ ಮಧ್ಯಾಂತರದಲ್ಲಿ ಬರೆದಿದ್ದ ನಾಟಕಗಳೇ ಸರ್ವೋತ್ತಮವಾದವುಗಳೆಂದು ಗಣಿಸಲ್ಪಟ್ಟಿವೆ. "ರಾಷ್ಟ್ರವನ್ನು ನನ್ನ ಅಭಿಪ್ರಾಯಗಳಿಗೆ ಮತಾಂತರಿಸಿಕೊಳ್ಳುವ ದೃಢಸಂಕಲ್ಪವಿಟ್ಟುಕೊಂಡೇ ನಾನು ನಾಟಕಗಳನ್ನು ಬರೆಯುತ್ತೇನೆ" ಎಂದಿದ್ದರು ಶಾ. 'ಮಿಸೆಸ್ ವಾರೆನ್ಸ್ ಪ್ರೊಫೆಶನ್' 'ಆರ್ಮ್ಸ್ ಎಂಡ್ ದಿ ಮೇನ್'; 'ದಿ ಡೆವಿಲ್ಸ್ ಡಿಸಾಯ್ಪಲ್' 'ದಿ ಮೇನ್ ಓಫ್ ಡೆಸ್ಟಿನಿ' 'ದಿ ಡಾಕ್ಟರ್ಸ್ ಡೆಲಿಮ್ಮಾ' 'ಯು ನೆವರ್ ಕೇನ್ ಟೆಲ್' 'ಮೇನ್ ಏಂಡ್ ಸುಪರ್ ಮೇನ್' ಇತ್ಯಾದಿ ಇತ್ಯಾದಿ ಹಲವು ಶಾ ನಾಟಕಗಳು ಒಂದನ್ನೊಂದು ಹಿಂದೆ ಹಾಕಿ ಪ್ರಪಂಚ ಗೆದ್ದಿದ್ದವು. ಶಾ ಮುದುಕನಾಗುತ್ತಾ ಹೋದಂತೆ, ಹೆಚ್ಚೆಚ್ಚು ದಯಾಳು, ವ್ಯಂಗ್ಯ ವಿನೋದಿ, ರಸಿಕ ಮತ್ತು ಪ್ರತಿಭಾನ್ವಿತನಾಗುತ್ತಾ ಬಂದಿದ್ದರು. ಕೊನೆಕೊನೆಗೆ ಅವರಾಡುವ ಪ್ರತಿ ಮಾತೂ ಲೋಕದ ಮೂಲೆಮೂಲೆಯ ಸಾಹಿತ್ಯಾಭಿಮಾನಿಗಳ ಮನೆಮಾತಾಗುತಿತ್ತು.

ನಿಧನ

ಸುಮಾರು ಏಳು ವಾರಗಳ ಮೊದಲು ಜಿ. ಬಿ. ಶಾ. ತನ್ನ ಅಯೊತ್ ಸ್ಟೆಂಟ್ ಲಾರೆನ್ಸ್ ಉದ್ಯಾವನದಲ್ಲಿ ಕಾಲು ಜಾರಿ ಬಿದ್ದು ತೊಡೆಗೆ ಪೆಟ್ಟಾಗಿ ಒಂದು ಎಲುಬು ತುಂಡಾಗಿದ್ದಿತು. ಆಸ್ಪತ್ರೆಯಲ್ಲಿ ಒಂದು ತಿಂಗಳು ಮಲಗಿ 'ಓಪರೇಶನ್' ಮತ್ತು ಮೂತ್ರಪಿಂಡದ ತೊಂದರೆಗಳಿಗೆ ಚಿಕಿತ್ಸೆ ಪಡೆದ ಮೇಲೆ ಮೂರು ವಾರಗಳ ಹಿಂದೆ ಅಲ್ಲಿಂದ ಬಿಡುಗಡೆ ಹೊಂದಿದ್ದರು. ಓಪರೇಶನ್ ನಡೆದಂದಿನಿಂದ ಕಳೆದ ಮಂಗಳವಾರದ ವರೆಗೂ ಆರೋಗ್ಯವಂತರಾಗುತ್ತಾ ಬಂದಿದ್ದ ಜಿ. ಬಿ. ಶಾ. ಮೊನ್ನೆ ಆಕಸ್ಮಾತ್ ನಿತ್ರಾಣಗೊಂಡರು; ಬುಧವಾರ ಸ್ಮೃತಿ ತಪ್ಪಿ, ಊರ್ಧ್ವ ಶ್ವಾಸ ಬಿಡಹತ್ತಿದವರು, ಗುರುವಾರ ಬೆಳಗಾಗುತ್ತಿದೆನ್ನುವಾಗ ಅಂತ್ಯಗೊಂಡರು. ಲೋಕ ಗದ್ದಲದಿಂದ ದೂರವಿದ್ದ ಅವರ ಶಾಂತ ಹಳ್ಳೀಮನೆಯೊಳಗೆ ಮೃತ್ಯುಶಯ್ಯೆಯಲ್ಲಿದ್ದ ಶಾರನ್ನು ನೋಡುವ ಅವಕಾಶವು ಆಗತ್ಯವುಳ್ಳ ಡಾಕ್ಟರರು, ದಾದಿಯರು, ಮನೆಯೊಡತಿ, ಆ

(೯ನೇ ಪುಟ ನೋಡಿರಿ)

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಟಿಬೇಟಿನ ಮೇಲೆ ಚೈನೀ ಧಾಳಿ.

ಟಿಬೇಟಿನ ಮೇಲೆ ಕೆಂಪು ಚೈನಾದ ಆಕ್ರಮಣವು ರಭಸದಿಂದ ಸಾಗಿದೆ. ಸುಮಾರು 21 ಸಾವಿರ ಚೈನೀ ಕಮ್ಯೂನಿಸ್ಟ್ ಸೈನಿಕರು ಒಂದೇ ಸವನೆ ಟಿಬೇಟಿನೊಳಗಡೆಯಲ್ಲಿ ಮುಂದೊತ್ತುತ್ತಿದ್ದು, ರಾಜಧಾನಿ ಲ್ಹಾಸಾದ ಸರಹದ್ದಿಗೆ ಬಂದಿರುವರೆಂದು ತಿಳಿದುಬಂದಿದೆ. ಟಿಬೇಟಿನ ಹುಡುಗ ದಲಾಯಿಲಾಮಾರು, ವಿಶೇಷ ವಿಶ್ವಾಸಾರ್ಹರಾದ ತನ್ನ 50 ಮಂದಿ ಅಧಿಕಾರಿಗಳೊಂದಿಗೆ ರಾಜಧಾನಿಯನ್ನು ಬಿಟ್ಟು ಯಾವುದೋ ಅಜ್ಞಾತ ನೆಲೆಗೆ ಹೊರಟುಹೋಗಿದ್ದಾರೆ. ದಲಾಯಿಲಾಮಾರು ಟಿಬೇಟು ಬಿಡುವ ಆಲೋಚನೆಯಿಂದಿಲ್ಲವೆಂದು ಆ ಮೊದಲು ಪ್ರಕಟವಾಗಿದ್ದರೂ, ಅವರ ಮಂತ್ರಿ ಮಂಡಲಿಯ ನಾಲ್ವರು ಮಂತ್ರಿಗಳು ಟಿಬೇಟ್ ಸೇನೆಯೊಂದಿಗೆ ಸೇರಿಕೊಂಡು ಕಮ್ಯೂನಿಸ್ಟರ ವಿರುದ್ಧ ಹೋರಾಡಿ ರಣರಂಗದಲ್ಲೇ ಪ್ರಾಣಾರ್ಪಣೆ ಮಾಡಿದ ಮೇಲೆ ದಲಾಯಿಲಾಮಾರು ತನ್ನ ನಿರ್ಧಾರ ಬದಲಾಯಿಸಿ ರಾಜಧಾನಿ ತ್ಯಾಗ ಮಾಡಿದರು. ಟಿಬೇಟಿನ ಸೇನೆಯೆಂಬುದು ನಾಮಮಾತ್ರವಿರುವ ದುರ್ಬಲ ಬಲ. ಅದರಲ್ಲೂ ಒಂದು ಭಾಗ 9ನೇ ದಳವು ಬಂಡಾಯವೆದ್ದು ಕಮ್ಯೂನಿಸ್ಟ ಪಕ್ಷಕ್ಕೆ ಸೇರಿಕೊಂಡಿತೆಂದು ತಿಳಿದು ಬಂದಿದೆ.

ಇದರ ಪರಿಣಾಮವೇನು?

ಟಿಬೇಟಿನೊಂದಿಗೆ ಭಾರತಕ್ಕಿರುವ ಸಾವಿರ ಮೈಲುದ್ದದ ಸರಹದ್ದಿನಲ್ಲೂ ಭಾರತ ಸರಕಾರವು ಸುಭದ್ರ ಪಹರೆಯನ್ನಿಟ್ಟು ಜಡ್ತೀ ಕಾರ್ಯಗಳನ್ನು ನಡೆಸುತ್ತಿದೆ. ಸಿಕ್ಕಿಮ್, ಭೂತಾನ್ ಮತ್ತು ಅಸ್ಸಾಮಿನ ಟಿಬೇಟ್ ಸರಹದ್ದಿನಲ್ಲಿ ಬಲವಾದ ಕಾವಲು ನಿಲ್ದಾಣಗಳನ್ನೇರ್ಪಡಿಸಿ, ಅತ್ತಿಂದಿತ್ತ ಹೋಗಿ ಬರುವವರನ್ನೆಲ್ಲಾ ಜಡ್ತಿ ಮಾಡಲಾಗುತ್ತಿದೆ. ಪೂರ್ವ ಪಾಕಿಸ್ತಾನದ ಸರಹದ್ದಿನಲ್ಲೆಲ್ಲಾ ಬಲವಾದ ಸೇನಾ ಪಹರೆಯನ್ನಿಡಲಾಗಿದೆ. "ಟಿಬೇಟಿನೊಳಗೆ ಚೈನೀಯರು ನುಗ್ಗಿ ಬಂದುದರಿಂದ ಪಾಕಿಸ್ತಾನವೀಗ ಆಕ್ರಮಣದ ಮಹಾ ಅಪಾಯಕ್ಕೊಳಗಾಗಿದೆ. ಹಾಗಾದರೆ, ನಾವು ಕೊನೆಯ ಮನುಷ್ಯನುಳಿಯುವ ವರೆಗೆ ಇಂಚು ಇಂಚಿಗೂ ಹೋರಾಡುವುದೇ ಸರಿ. ಪಾಕಿಸ್ತಾನದ ಮೇಲೊಂದು ಕಮ್ಯೂನಿಸ್ಟ ಆಕ್ರಮಣ ನಡೆದರೆ ಅದು ಮೂರನೇ ಜಾಗತಿಕ ಯುದ್ಧಕ್ಕೆ ಹೇತುವಾಗುವದು" ಎಂದು ಪೂರ್ವ ಪಾಕಿಸ್ತಾನ್ ಎಸೆಂಬ್ಲಿಯ ಸಭಾಪತಿ ಪ್ರಿನ್ಸ್ ಮಿ. ಕೆ. ನಾಸ್ರುಲ್ಲಾ ಘರ್ಜಿಸಿದ್ದಾರೆ. "ಟಿಬೇಟಿನ ಮೇಲೆ ನಡೆಯುವ ಯಾವುದೇ ಕಮ್ಯೂನಿಸ್ಟ ಆಕ್ರಮಣವನ್ನಾದರೂ ಅತ್ಯಂತ ದುರ್ದೈವಿ, ದುಃಖಿ ಮತ್ತು ಕಠೋರ ವಿಷಯವೆಂದು ಅಮೇರಿಕವು ಗಣಿಸುವುದು." ಎಂದು ಅಮೇರಿಕದ ಗೃಹ ಕಾರ್ಯದರ್ಶಿ ಮಿ. ಅಚೆಸನರೆಂದಿದ್ದಾರೆ. ಲಂಡನಿನಲ್ಲಂತೂ ಟಿಬೇಟಿನ ಕಮ್ಯೂನಿಸ್ಟ್ ಆಕ್ರಮಣದ ಕುರಿತು ಆಗ್ರಹಾತುರವೆದ್ದಿದೆಯಲ್ಲದೆ, ಭಾರತ, ಬ್ರಿಟನ್, ಅಮೇರಿಕ ಮತ್ತು ಪಾಕಿಸ್ತಾನಗಳು ಜತೆಗೂಡಿ ಈ ಸಂಬಂಧದ ಕಾರ್ಯ ಪಟುಪಾಟಿಗಳಯಬೇಕೆಂಬ ವಾದ ಮುಂದೆ ಬಂದಿದೆ. ಟಿಬೇಟ್—ಚೈನಾ ವಿವಾದವನ್ನು ಶಾಂತ ರೀತಿಯಿಂದ ಬಗೆಹರಿಸಲು ಅಧಿಭಾಗದಿಂದಲೂ ಪ್ರಯತ್ನಿಸುತ್ತಾ ಬಂದು, ಕೊನೆಗೆ ನಿಷೇಧಪತ್ರ ವ್ಯವಹಾರ ನಡೆಸಿ, ಕಮ್ಯೂನಿಸ್ಟ್ ಚೈನದಿಂದ ಕಟ್ಟುಗ್ರ ಉತ್ತರಗಳನ್ನು ಪಡೆದ ಭಾರತವು ಮುಂದೇನು ಮಾಡುವುದು, ಎಂಬ ಕಡೆಗೆ ಈಗ ಎಲ್ಲರ ದೃಷ್ಟಿ ಬಿದ್ದಿದೆ. ಸಂಯುಕ್ತ ರಾಷ್ಟ್ರ ಸಂಘಕ್ಕೆ ಟಿಬೇಟ್ ಆಕ್ರಮಣದ ದೂರನ್ನೊಯ್ಯುವ ಹಕ್ಕು ಯೋಗ್ಯತೆಗಳಿರುವ ರಾಷ್ಟ್ರ ಭಾರತ. ಆದರೆ ಪಂಡಿತ ನೆಹರುಗಳು ಅಂತಹ ಅವಕಾಶಕೊಡದೆ, ಏಸ್ಯಾದ ಎರಡು ದೊಡ್ಡ ರಾಷ್ಟ್ರಗಳಾದ ಚೈನಾ-ಭಾರತ ಮೈತ್ರಿಯನ್ನು ಊರ್ಜಿತವಿರಿಸುವ ಆಶೆ ಇಟ್ಟುಕೊಂಡವರು. ಅದಕ್ಕಾಗಿಯೇ ಅವರು ಸಂಧಿ ಕ್ಷೇತ್ರದಲ್ಲಿ ಸಾಧ್ಯವಿದ್ದ ಪ್ರಯತ್ನಗಳನ್ನೆಲ್ಲಾ ಮಾಡಿದ್ದರು. ನೆಹರುಗಳಂತಹ ಶಾಂತಿ ಸಾಧನೆಯಲ್ಲಿರುವಾಗಲೇ ಕಮ್ಯೂನಿಸ್ಟ ಚೈನ್ಯವು ಆಕ್ರಮಣವನ್ನಾರಂಭಿಸಿ ವಾತಾವರಣವನ್ನು ಕದಡಿಸಿತು. ಸಾಲದುದಕ್ಕೆ ಭಾರತ ಸರಕಾರವು ಕಳುಹಿದ ನಿಷೇಧ ಪತ್ರಕ್ಕೆ ಕೊಟ್ಟ ಉತ್ತರದಲ್ಲಿ ಭಾರತದ ಮೇಲೆ ಅಪಮಾನಕರ, ಅಬದ್ಧ ಅಸತ್ಯ ಆರೋಪಗಳನ್ನು ಮಾಡಿ ಕೆಣಕಿದೆ. ಇಂತಹ ಒದೆ ತಿಂದ ಮೇಲಾದರೂ, ಪಂಡಿತ ನೆಹರುಗಳು ತನ್ನ ಸೌಮ್ಯ ಧೋರಣೆಯನ್ನು ಬದಲಾಯಿಸಿ ಚೈನೀ ಕಮ್ಯೂನಿಸ್ಟರನ್ನು ಅಂತರ್ರಾಷ್ಟ್ರೀಯ ರಂಗದಲ್ಲಿ ಖಂಡಿಸಲು ಮುಂದಾಗಬೇಕೆಂದು ಹಲವರು ಗಾಳಿ ಹಾರಹತ್ತಿದ್ದಾರೆ. ಆದರೀಗಲೂ ಪಂಡಿತ ನೆಹರುಗಳು ಈ ಕುರಿತು ಉಗ್ರಾವತಾರ ತಾಳಲು ಆತುರಗೊಳ್ಳದೆ, ಸಹನೆ ಮತ್ತು ದೂರದೃಷ್ಟಿಯ ಚಿಂತನೆಗೀಡಾಗಿದ್ದಾರೆ. ಕಮ್ಯೂನಿಸ್ಟ್ ಚೈನದ ನ್ಯಾಯಬದ್ಧ ಸ್ಥಾನವನ್ನು ಭದ್ರತಾ ಕೌನ್ಸಿಲಿನಲ್ಲಿ ಅದಕ್ಕೆ ದೊರಕಿಸಿಕೊಡಬೇಕೆಂದು, ವಿರೋಧಿಗಳಿಗಿಂತ ಹೆಚ್ಚಿಗೆ ಒದ್ದಾಡುತ್ತಿರುವ—ಏಸ್ಯಾದ ರಾಷ್ಟ್ರಗಳ ಮೇಲೆ ಪಾಶ್ಚಿಮಾತ್ಯರ ವರ್ಚಸ್ಸಿರಬಾರದೆಂದು ಕಮ್ಯೂನಿಸ್ಟರಿಗಿಂತಲೂ ಬಲವಾಗಿ ಸಾಧಿಸುತ್ತಿರುವ—ಸ್ವತಂತ್ರ ಭಾರತಕ್ಕೆ ಕಮ್ಯೂನಿಸ್ಟ್ ಚೈನವಿತ್ತ ಕಲ್ಮಷ ಬುದ್ಧಿಯ ಸಂಭಾವನೆಯು ತೀರಾ ಖಂಡನೀಯವಿದೆಯೆಂಬುದು ನಿಸ್ಸಂದೇಹ. ಕಮ್ಯೂನಿಸ್ಟ್ ಮನೋವೃತ್ತಿಯು ಸತ್ಯ, ನ್ಯಾಯ, ಸೌಹಾರ್ದತೆಗೆ ಯಾವ ಬೆಲೆಯನ್ನೂ ಕೊಡದೆ ಅದವು ಕಂಟಕವೆಂಬುದಕ್ಕೆ ಚೈನೀ ಕೆಂಪು ಸರಕಾರವು ಭಾರತಕ್ಕಿತ್ತ ಉತ್ತರವು ಒಳ್ಳೇ ನಿದರ್ಶನ. ಭಾರತ—ಚೈನಾ ಪತ್ರವ್ಯವಹಾರಗಳ ಸಾರಾಂಶ ಕೆಳಗಿದೆ.

ಭಾರತದ ಪ್ರಥಮ ಪತ್ರ

ಒಕ್ಟೋಬರ್ 26ರಲ್ಲಿ ಚೈನದ ವಿದೇಶ ಮಂತ್ರಿಗೆ ಭಾರತ ಸರಕಾರವು ಕಳುಹಿದ ನಿಷೇಧ ಸೂಚನೆ: "ಟಿಬೇಟಿನೊಳಗೆ ಮುಂದೊತ್ತುವಂತೆ ಜನತೆಯ ಸೇನಾ ತುಕಡಿಗಳನ್ನು ಆಜ್ಞಾಪಿಸಲಾಯಿತು" ಎಂಬರ್ಥದ ಪೆಕಿಂಗಿನ ಅಧಿಕೃತ ಪ್ರಕಟಣೆಯ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನಾವು ಅತ್ಯಂತ ದುಃಖ ಪೂರ್ವಕ ನೋಡಿದೆವು. ಈ ಕುರಿತು ಇಲ್ಲಿರುವ ನಿಮ್ಮ ರಾಯಭಾರಿಯಿಂದಾಗಲೀ ಪೆಕಿಂಗಿನಲ್ಲಿರುವ ನಮ್ಮ ರಾಯಭಾರಿಯಿಂದಾಗಲಿ, ನಮಗೆ ಸುದ್ದಿ ಬಂದುದಿಲ್ಲ. ಶಾಂತವಿಧಾನಗಳಿಂದ ಮತ್ತು ಸಂಧಾನ ಮೂಲಕವೇ ಟಿಬೇಟ್ ಸಮಸ್ಯೆಯನ್ನು ಇತ್ಯರ್ಥಿಸಿಕೊಳ್ಳುವ ಆಶ್ವಾಸನೆಯು ಚೈನೀ ಸರಕಾರದಿಂದ ನಮಗೆ ಮೇಲಿಂದ ಮೇಲೆ ದೊರೆತುದಿದೆ. ನಿಮ್ಮ ಉಪವಿದೇಶ ಮಂತ್ರಿಯು ಇತ್ತೀಚಿಗೆ ಪೆಕಿಂಗಿನಲ್ಲಿ ಭಾರತದ ರಾಯಭಾರಿಯೊಡನೆ ನಡೆಸಿದ ಮಾತುಕತೆಗಳಲ್ಲಿ, ಟಿಬೇಟನ್ನು ಸ್ವತಂತ್ರಗೊಳಿಸುವ ತಮ್ಮ ದೃಢನಿರ್ಧಾರವನ್ನು ಅವರು ಪುನರುಚ್ಚರಿಸಿದ್ದರೂ, ಶಾಂತ ವಿಧಾನ ಮೂಲಕವೇ ಹಾಗೆ ಮಾಡುವ ತಮ್ಮಿಚ್ಛೆಯನ್ನು ವ್ಯಕ್ತಪಡಿಸಿದರು. ಸಂಧಾನ ಮಾತುಕತೆಯಾರಂಭಿಸುವುದಕ್ಕಾಗಿ ಟಿಬೇಟ್ ಶಿಷ್ಟ ಮಂಡಲವು ಕೂಡಲೇ ಪೆಕಿಂಗಿಗೆ ಹೊರಡುವ ನಿರ್ಧಾರವನ್ನು ನಾವು ನಮ್ಮ ರಾಯಭಾರಿಯ ಮೂಲಕ ಚೈನೀ ಸರಕಾರಕ್ಕೆ ತಿಳಿಸಿದ್ದೆವು. ಈ ಪ್ರತಿನಿಧಿ ಮಂಡಲಿಯು ನಿನ್ನೆ ತಾನೇ ದಿಲ್ಲಿಯಿಂದ ಹೊರಟಾಗಿದೆ. ಇಂತಹ ಸ್ಥಿತಿಯಲ್ಲಿ ಟಿಬೇಟಿನೊಳಗೆ ನುಗ್ಗಿಹೋಗುವಂತೆ ಚೀನೀ ಸೇನೆಗಳಿಗಾಜ್ಞೆಕೊಟ್ಟುದ್ದು ನಮಗೆ ಅತ್ಯಂತ ಆಶ್ಚರ್ಯಕರ ಮತ್ತು ಶೋಚನೀಯವಾಗಿ ಕಾಣುತ್ತಿದೆ. ಟಿಬೇಟ್ ಶಿಷ್ಟಮಂಡಲವು ಪೆಕಿಂಗಿಗೆ ಹೊರಡಲು ತಡವಾದುದು ನಮ್ಮ ತಿಳುವಳಿಕೆಯಲ್ಲಿದೆ. ಈ ವಿಳಂಬಕ್ಕಾದರೋ ಕಾರಣಗಳಿವೆ. ಪ್ರಥಮತಃ ಹೋಂಗ್‌ಕೋಂಗಿನ ಪರವಾನಗಿ ದೊರೆಯುವುದು ಅಸಾಧ್ಯವಾಯಿತು; ಹೀಗಾದುದರ ಹೊಣೆಗಾರಿಕೆಯಾದರೋ ಯಾವುದೇ ವಿಧದಿಂದ ಈ ಶಿಷ್ಟ ಮಂಡಲಿಯ ಮೇಲಿಲ್ಲ. ಆ ವೇಳೆ, ಸಂಧಾನದ ಪ್ರಾಥಮಿಕ ಮಾತುಕತೆಗಳು ಪ್ರಥಮತಃ ದಿಲ್ಲಿಯಲ್ಲಿರುವ ಚೈನೀ ರಾಯಭಾರಿಯೊಡನೆ ದಿಲ್ಲಿಯಲ್ಲೇ ನಡೆಯತಕ್ಕದ್ದೆಂಬ ಚೀನೀ ಸರಕಾರದ ಇಚ್ಛೆಯಂತೆ ಟಿಬೇಟ್ ಶಿಷ್ಟಮಂಡಲಿ ದಿಲ್ಲಿಗೆ ಮರಳಿ ಬಂತು. ಟಿಬೇಟ್ ಪ್ರತಿನಿಧಿಗಳಿಗೆ ಅನ್ಯ ರಾಷ್ಟ್ರಗಳೊಡನೆ ಮಾತುಕತೆ ನಡೆಸುವ ತಿಳುವಳಿಕೆಯಿಲ್ಲದ ದೆಸೆಯಿಂದ

(೩ನೇ ಪುಟದಿಂದ)

ಅವರ ಓರ್ವ ಸೋಸ, ಓರ್ವ ನಿಕಟ ಸ್ನೇಹಿತೆ, ಅವರ ನಾಟಕಗಳ ಚಲಚ್ಚಿತ್ರವೆತ್ತಿದವನ ಪತ್ನಿ, ಕಾರ್ಯದರ್ಶಿ ಮೊದಲಾದ ಕೆಲವೇ ಮಂದಿಗೆ ಮಾತ್ರವಿದ್ದಿತು. ಶಾ ಪ್ರಾಣ ಬಿಟ್ಟ ಕೋಣೆಯ ಗೋಡೆಯಲ್ಲಿ ಸ್ಟಾಲಿನರ ಒಂದು ಭಾವಚಿತ್ರ ತೂಗಾಡುತಿತ್ತು; ಲೋಹಗೂಡೊಂದರಲ್ಲಿ ಬುದ್ಧ ಪ್ರತಿಮೆ ಅಲ್ಲಿತ್ತು. ಇವು, ಅವರ ಅಭಿರುಚಿದ್ಯೋತಕಗಳು. ರಷ್ಯದ ಕಮ್ಯೂನಿಸ್ಟ್ ಪ್ರಚಾರದಂತಹ ಉಚ್ಚ ಮಾದರಿಯ ಪ್ರಚಾರವೇ ಬ್ರಿಟನಿಗರಿಯದೆಂದು ಇತ್ತೀಚಿಗೆ ಟೀಕಿಸುತ್ತಾ ಬರ್ನಾರ್ಡ್ ಶಾ ಅಂದಿದ್ದರು: "ಕಮ್ಯೂನಿಸ್ಟರ ಪ್ರಚಾರ ಕರಪತ್ರದಲ್ಲಿ ಬಂದಿದ್ದ ಸ್ಟಾಲಿನರ ಭಾವಚಿತ್ರವೊಂದು ನಾ ಜೋಕಾಗಿತ್ತೆಂದರೆ ನಾನದನ್ನು ಕನ್ನಡಿ ಹಾಕಿಸಿ ಗೋಡೆಗೆ ನೇತಾಡಿಸಿದ್ದೇನೆ". ಆ ಚಿತ್ರವೇ ಇದಾಗಿರಬೇಕು. ಬಿದ್ದು ತೊಡೆ ಮುರಿದು ಕೊಂಡಾಗಲೇ ಬರ್ನಾರ್ಡ್ ಶಾ "ನಾನಿದರಲ್ಲಿ ಬದುಕಿ ಉಳಿದರೆ ಮತ್ತೆ ಚಿರಂಜೀವಿಯಾಗುವುದೇ ಸೈ" ಅಂದಿದ್ದರು. 94ರ ವಯಸ್ಸಿನಲ್ಲೂ 34ರ ಉತ್ಸಾಹ, ಚಟುವಟಿಕೆಗಳನ್ನು ಪ್ರದರ್ಶಿಸುತ್ತಿದ್ದ ಈ ಜಗತ್ಪ್ರಸಿದ್ಧ ಮನುಷ್ಯ ಮೊನ್ನೆ ಶಾಂತನಾಗಿ ಕೊನೆಯುಸಿರನ್ನು ಎಳೆದುಕೊಂಡರು. ಶಾ ವಿಯೋಗಕ್ಕಾಗಿ, ಲೋಕವಿಡೀ ಮರುಗಿದೆ. ಸಾಯುವಾಗ 750,000 ಸ್ಟರ್ಲಿಂಗುಗಳ ವರೆಗೆ ಅವರು ಕೂಡಿಸಿಟ್ಟಿರಬೇಕೆಂದು ಊಹಿಸಲಾಗಿದೆ. 'ಕಾಪಿರೈಟ್' ಮಾಯಿದೆಯಿರುವ ಇನ್ನು 50 ವರುಷಗಳ ವರೆಗೂ ಅವರ ಗ್ರಂಥಗಳು ಹೇರಳ ಹಣಸಂಪಾದಿಸಿ ಕೊಡಲಿಕ್ಕಿವೆ. ಶ್ರೀಮಂತ ಕುಟುಂಬದ ಇವರ ಪತ್ನಿ ಮಡಿದಾಗ ಆಕೆಯ ಹೇರಳ ಸಂಪತ್ತು ಶಾ ಅವರಿಗೆ ದೊರೆತಿದ್ದಿತು. ಮಕ್ಕಳಿಲ್ಲದ ಶಾ ತನ್ನ 'ವಿಲ್‌ನಾಮೆ'ಯಲ್ಲಿ ಪರಿಚಾರಕರಿಗೆಲ್ಲಾ ನಿಧಿದಾನ ಬರೆದಿಟ್ಟಿರುವರೆಂದು ತಿಳಿದು ಬಂದಿದೆ.

The Canara Mutual Assurance Co. Ltd.

ESTD: 1935. H. O. UDIPI.

Canara Mutual occupies a unique position of distinction amongst the sound Life Offices in India. Constituted as a Mutual Company, the entire profits are shared by the participating Policy-holders alone, there being no share-holders. It has paid bonus since inception and in all the Valuations conducted on progressively stringent basis it has shown a surplus. The Company has maintained its reputation by fair treatment. For more details about this Progressive Mutual Life Office, write to-day to its Head Office.

ಭಾರತದ ಸೂಚನೆಗೆ ಧಿಕ್ಕಾರ!

ಲೂ, ಮಂತ್ರಿವರು ತಮ್ಮ ಸರಕಾರದಿಂದ ಸೂಚನೆಗಳನ್ನು ಪಡೆಯುವ ಮತ್ತು ಟಿಬೇಟು ಸರಕಾರವಾದರೋ ತದನುಗುಣವಾಗಿ ತಮ್ಮ ಏಸೆಂಬ್ಲಿಗಳ ಅಭಿಮತ ಪಡೆಯುವ ಅಗತ್ಯ ಬಿದ್ದುದರಿಂದಲೂ ಮಾತ್ರ ಸ್ವಲ್ಪ ವಿಳಂಬವಾಯಿತು. ಚೈನಕ್ಕೆ ವಿರೋಧವಿರುವ ಯಾವುದೇ ಪರರಾಷ್ಟ್ರದ ವರ್ಚಸ್ಸು ಶಿಷ್ಟಮಂಡಲಿ ಹೋಗದಂತೆ ತಡವಾಗಲು ಹೇತುವಾಯಿತೆಂದು ಭಾರತ ಸರಕಾರ ನಂಬುವದಿಲ್ಲ. ಈಗ ಟಿಬೇಟಿನ ಆಕ್ರಮಣಕ್ಕೆ ಚೈನೀ ಸರಕಾರ ಆಜ್ಞೆಯಿತ್ತುದ. ಶಾಂತ ರೀತಿಯ ಮಾತುಕತೆಗಳಿನ್ನು ಅದಕ್ಕೆ ಹೊಂದಿಕೆಯಾಗುವುದು ಕಷ್ಟ. ಇನ್ನು ಜುಲುಮೆಯಡಿಯಲ್ಲಿ ಮಾತುಕತೆಯೇ ಎಂಬ ಭೀತಿಯು ಟಿಬೇಟಿನವರಲ್ಲಿ ವ್ಯಾಪಿಸಿರುವುದು ಸ್ವಾಭಾವಿಕ. ವಿಶ್ವಪ್ರಪಂಚಿಕ ಘಟನೆಗಳ ಸದ್ಯದ ಆಗುಹೋಗುಗಳ ಮೇಲಿಂದ ಟಿಬೇಟಿನ ಮೇಲಿನ ಚೈನೀ ಸೇನಾಕ್ರಮಣವು ಖಂಡನೀಯವೆಂದಲ್ಲದೆ ಅನ್ಯಥಾ ಭಾವಿಸಲೆಡೆಯಿಲ್ಲ. ಭಾರತ ಸರಕಾರದ ವಿಚಾರಪೂರ್ಣ ತೀರ್ಮಾನದಂತೆ ಇದು ಚೈನಕ್ಕಾಗಲೀ ಶಾಂತಿಗಾಗಲೀ ಹಿತಕರವಾದುದಲ್ಲ: ತಾವು ಸ್ನೇಹಪೂರ್ವಕವಾಗಿ ಮತ್ತು ಅನಾಸಕ್ತಿ ಪೂರ್ವಕ ಮೇಲಿಂದ ಮೇಲೆ ಹಿತೋಪದೇಶಗಳನ್ನು ಕೊಟ್ಟಿದ್ದರೂ ಚೈನೀ ಸರಕಾರವು ಶಾಂತರೀತಿಯ ಸಾವಧಾನದ ಮತ್ತು ಮೃದುವಾದ ವಿಧಾನಗಳನ್ನು ಅಂಗೀಕರಿಸುವ ಬದಲಿಗೆ, ಟಿಬೇಟಿನ ತಮ್ಮ ಸಂಬಂಧದ ಸಮಸ್ಯೆಗಳನ್ನು ಬಲಾತ್ಕಾರ ಮೂಲಕವೇ ಬಗೆಹರಿಸಿಕೊಳ್ಳಲು ಬಗೆದುದರ ಕುರಿತು ಭಾರತ ಸರಕಾರವು ತನ್ನ ಗಾಢ ಸಂತಾಪವನ್ನಷ್ಟೇ ಸೂಚಿಸಲಿಚ್ಛಿಸುತ್ತದೆ".

ಚೈನದ ಉತ್ತರ

ಮೇಲಿನ ಪತ್ರಕ್ಕೆ ಚೈನದ ವಿದೇಶ ಮಂತ್ರಿಯು ಒಕ್ಟೋಬರ್ ೩೦ರಲ್ಲಿ ಕೊಟ್ಟ ಉತ್ತರ: "ಜನತಾ ರಾಜ್ಯ ಚೈನದ ಕೇಂದ್ರ ಜನತಾ ಸರಕಾರವು ಸಂಗತಿಗನ್ನು ಈರೀತಿ ಸ್ಪಷ್ಟಪಡಿಸಲಿಚ್ಛಿಸುತ್ತದೆ. ಟಿಬೇಟು ಚೈನದ ಭೂವ್ಯಾಂತರ್ಗತ ಕ್ಷೇತ್ರ. ಟಿಬೇಟಿನ ಸಮಸ್ಯೆಯೆಂಬುದು ಸಂಪೂರ್ಣವಾಗಿ ಚೈನದ ಒಂದು ಗೃಹಸಮಸ್ಯೆ. ಟಿಬೇಟಿನ ಜನರನ್ನು ಸ್ವತಂತ್ರಗೊಳಿಸುವುದಕ್ಕಾಗಿ ಮತ್ತು ಚೈನದ ಗಡಿಗಳ ರಕ್ಷಣೆಗಾಗಿ ಚೈನೀ ಜನತಾ ಸ್ವಾತಂತ್ರ್ಯ ಸೇನೆಯು ಟಿಬೇಟಿನೊಳಗೆ ಪ್ರವೇಶಿಸಲೇ ಬೇಕು. ಇದು ಕೇಂದ್ರ ಜನತಾ ಸರಕಾರದ ನಿಶ್ಚಿತ ಧೋರಣೆ. ಟಿಬೇಟಿನ ಸಮಸ್ಯೆಯನ್ನು ಶಾಂತ ಮಾತುಕತೆಗಳ ಮೂಲಕ ಬಗೆಹರಿಸಬೇಕೆಂಬ ಆಶೆಯನ್ನು ಕೇಂದ್ರ ಜನತಾ ಸರಕಾರವು ಮೇಲಿಂದ ಮೇಲೆ ತೋರಿಸಿದ್ದಿತು. ಆದ್ದರಿಂದ, ಈ ಶಾಂತ ಮಾತುಕತೆ ನಡಿಸಲು ಟಿಬೇಟಿನ ಸ್ಥಳೀಯ ಅಧಿಕಾರಿಗಳ ಶಿಷ್ಟಮಂಡಲವು ಅತಿ ಬೇಗನೇ ಪೆಕಿಂಗಿಗೆ ಬರುವುದನ್ನು ಅದು ಸ್ವಾಗತಿಸಿತು. ಹೀಗಿದ್ದರೂ ಟಿಬೇಟಿನ ಪ್ರತಿನಿಧಿ ಮಂಡಲಿಯು ಹೊರಗಿನವರ ಪ್ರೇರಣೆಗೊಳಗಾಗಿ ಪೆಕಿಂಗಿಗೆ ಹೊರಡುವ ದಿನವನ್ನು ಉದ್ದೇಶಪೂರ್ವಕ ಹಿಂದೆ ಹಾಕಿತು. ಹೀಗಿದ್ದರೂ ಕೇಂದ್ರ ಜನತಾ ಸರಕಾರವು ಶಾಂತಿ ಮಾತುಕತೆಗಳನ್ನು ಮುಂದೊತ್ತುವ ವಿಧಾನವನ್ನೇನೂ ಬಿಟ್ಟಿಲ್ಲ. ಆದರೆ, ಟಿಬೇಟಿನ ಸ್ಥಳೀಯ ಅಧಿಕಾರಿಗಳು ಶಾಂತಿ ಸಂಧಾನವನ್ನು ಮುಂದೊತ್ತಲಿಚ್ಛಿಸಲಿ, ಅಥವಾ ಆ ಸಂಧಾನ ಮಾತುಕತೆಗಳಿಂದ ಯಾವ ಪರಿಣಾಮವೇ ಆಗಲಿ—ಟಿಬೇಟಿನ ಸಮಸ್ಯೆಯೆಂಬುದು ಚೈನೀ ಜನತಾ ಸರಕಾರದ ಗೃಹ ಸಮಸ್ಯೆಯಾಗಿರುವುದರಿಂದ ಇದರೊಳಗೆ ಯಾವುದೇ ವಿದೇಶೀ ಹಸ್ತಪ್ರವೇಶವಾಗುವುದನ್ನೂ ನಾವು ಸಹಿಸುವಂತಿಲ್ಲ. ಟಿಬೇಟಿನ ಸಮಸ್ಯೆ ಮತ್ತು ಸಂ. ರಾ. ಸಂಘದಲ್ಲಿ ಚೈನೀ ಜನತಾ ಸರಕಾರವು ಭಾಗ ವಹಿಸುವ ಸಮಸ್ಯೆ, ಇವೆರಡೂ ಸಂಪೂರ್ಣ ಭಿನ್ನವಾದವುಗಳಿವೆ. ಆದ್ದರಿಂದ ಚೈನಕ್ಕೆ ಪ್ರತಿಕೂಲವಿರುವ ರಾಷ್ಟ್ರಗಳು, 'ಚೈನೀ ಜನತಾ ಸರಕಾರವು ತನ್ನ ಒಳಗಿನ ಟಿಬೇಟಿನ ಮೇಲೆ ತನ್ನ ಅಧಿಕಾರ ಸ್ಥಾಪನೆ ಮಾಡಿಕೊಳ್ಳುತ್ತಿದ್ದುದರಿಂದ ಸಂಯುಕ್ತ ರಾಷ್ಟ್ರಸಂಘದಲ್ಲಿ ಅದು ಭಾಗವಹಿಸುವ ಸಂಭವಕ್ಕೇನೇ ಧಕ್ಕೆ ತಾಕಿಕೊಳ್ಳುತ್ತಿದೆ' ಎಂಬ ನೆಪವನ್ನು ಮುಂದೊಡ್ಡುತ್ತವಾದರೆ, ಅದು ಚೈನದ ಕಡೆಗಿನ ಅಂತಹ ರಾಷ್ಟ್ರಗಳ ವೈರ ಮತ್ತು ಪ್ರತಿಕೂಲ ಧೋರಣೆಯ ಮತ್ತೊಂದು ಪ್ರದರ್ಶನವೇ ಹೊರತು ಬೇರಲ್ಲ; ಆದ್ದರಿಂದ, ಭಾರತ ಸರಕಾರವು 'ಖಂಡನೀಯ'ವೆಂದಿರುವ ಆದರ ಆ ಮನೋವೃತ್ತಿಯ ಕುರಿತು ಚೈನೀ ಜನತಾ ರಾಜ್ಯದ ಕೇಂದ್ರ ಜನತಾ ಸರಕಾರವು ಚೈನಕ್ಕೆ ಪ್ರತಿಕೂಲವಿರುವ ಟಿಬೇಟಿನ ವಿದೇಶೀ ವರ್ಚಸ್ಸಿಗೆ ಅದೂ ಬಲಿಬಿದ್ದಿದೆ ಹೊರತು ಬೇರಲ್ಲವೆಂದೇ ಭಾವಿಸುತ್ತ ದುಃಖದಿಂದ ಆ ಕುರಿತು ತನ್ನ ಗಾಢ ಸಂತಾಪವನ್ನು ಸೂಚಿಸುತ್ತದೆ"

ಭಾರತದ ಮರುಮಾತು

ಚೀನೀ ಕಮ್ಯೂನಿಸ್ಟ್ ಸರಕಾರದ ಮೇಲಿನ ಉತ್ತರದಲ್ಲಿ ಬಂದಿರುವ ಅಹಂಮನ್ಯತೆ ಮತ್ತು ಸಂದೇಹ, ಆರೋಪಗಳನ್ನು ಭಾರತವು ಸಕಾರಣವಾಗಿ ಅಲ್ಲಗಳೆದಿದೆ. ಚೈನೀ ಸರಕಾರದ ಉದ್ಧಟ ಧೋರಣೆಗಾಗಿ ಕನಿಕರ ಮತ್ತು ದುಃಖವನ್ನು ಸೂಚಿಸಿದೆ. ವಿಶೇಷ ಸಿಟ್ಟುಗೊಳ್ಳುವಂತಹ ಸಂದರ್ಭವನ್ನು ಚೈನ ಮುಂದೊಡ್ಡಿದರೂ ಭಾರತ ಸರಕಾರವು ತನ್ನ ಘನತೆ ಮತ್ತು ಹಿರಿಮೆಗನುಗುಣವಾಗಿ ಚೈನದ ಗಡಿಬಿಡಿಯ ಕಡೆಗೆ ಗಾಢ ಸಂತಾಪವನ್ನಷ್ಟೇ ಮುಂಚಾಚಿದೆ: "ಚೈನಕ್ಕೆ ಪ್ರತಿಕೂಲವಿರುವ ವಿದೇಶೀ ವರ್ಚಸ್ಸಿಗೊಳಗಾಗಿ ಭಾರತವಿಂತಹ ಧೋರಣೆ ವಹಿಸಿತೆಂಬ, ಚೈನೀ ಸರಕಾರದ ಉತ್ತರದ ಕೊನೆಯ ಭಾಗದಲ್ಲಿರುವುದನ್ನು ಓದಿ ನಾವು ಕೌತಕ ವಿನೋದಗೊಂಡೆವು. ನಾವದಕ್ಕೆ ಕಂಠೋಕ್ತ ನಕಾರ ಸೂಚಿಸುತ್ತೇವೆ. ಭಾರತ ಸರಕಾರದ ಧೋರಣೆಯು ಪೂರ್ಣ ಸ್ವತಂತ್ರವಿದ್ದು, ಅಂತರ್ರಾಷ್ಟ್ರೀಯ ಜಗಳಗಳನ್ನು ಶಾಂತ ರೀತಿಯಿಂದ ತೀರ್ಮಾನಿಸುವ ಮತ್ತು ಲೋಕದ ಪ್ರಚಲಿತ ಖಂಡನಾರ್ಹ ಘರ್ಷಣೆಗಳನ್ನು ತಪ್ಪಿಸುವ ಗುರಿಯುಳ್ಳದ್ದಿದೆ. ಟಿಬೇಟ್ ಶಿಷ್ಟಮಂಡಲದ ಆಗಮನಕ್ಕೆ ತಡವಾದ ಕಾರಣ ಚೈನವು ಆದೇ ರೀತಿ ತಪ್ಪಭಿಪ್ರಾಯಗಳನ್ನು ಕಟ್ಟಿಕೊಂಡಿದೆ. ವಿಳಂಬದ ನಿಜವಾದ ಕಾರಣಗಳನ್ನು ನಾವು ಮೊದಲ ಪತ್ರದಲ್ಲೇ ತಿಳಿಸಿದ್ದೇವೆ. ಮಧ್ಯ ಪ್ರವೇಶಿಸುವ ಬಯಕೆ ಅಥವಾ ಯಾವುದೇ ಸ್ವಂತ ಲಾಭದ ಆಶೆಯಿಲ್ಲದೆ, ಭಾರತ ಸರಕಾರವು ಚೈನೀ ಮೇಲ್ಮೆಕಾರದ ಚೌಕಟ್ಟಿನೊಳಗೆ ತನ್ನ ಹಕ್ಕುಬದ್ಧ ಸ್ವಾಯತ್ತೆಯನ್ನು ಕಾಯ್ದುಕೊಳ್ಳಬೇಕೆಂಬ ಟಿಬೇಟಿನ ನ್ಯಾಯ ಬದ್ಧ ಹಕ್ಕನ್ನು ಹೊಂದಿಕೊಳ್ಳುವರೆ ಟಿಬೇಟ್ ಸಮಸ್ಯೆಯನ್ನು ಶಾಂತ ವಿಧಾನದಿಂದ ತೀರ್ಮಾನಿಸಬೇಕೆಂಬ ಯಥಾರ್ಥ ಪ್ರಯತ್ನವನ್ನಷ್ಟೇ ಮಾಡಿದೆ. ಟಿಬೇಟಿನ ಸ್ವಾಯತ್ತೆಯೆಂಬುದು ವಸ್ತುಸ್ಥಿತಿ. ನಾವು ನಮ್ಮ ಚೈನದ ರಾಯಭಾರಿಯಿಂದ ಪಡೆದ ವರದಿಯ ಮೇಲಿಂದ ಮತ್ತಿತರ ಕಡೆಗಳಿಂದ ದೊರೆತ ಆಧಾರಗಳಿಂದ ಚೈನೀ ಸರಕಾರ ಕೂಡಾ ಟಿಬೇಟ್ ಸ್ವಾಧಿಕಾರಕ್ಕೆ ಮನ್ನಣೆ ಕೊಡಲು ಮತ್ತದನ್ನು ಉಳಿಸಿಕೊಡಲು ಸಿದ್ಧವಿತ್ತೆಂದು ತೋರಿದ್ದಿತು. ಟಿಬೇಟಿನ ಮೇಲಿನ ಚೈನದ ಮೇಲಧಿಕಾರ ಮತ್ತು ಟಿಬೇಟಿನ ಸ್ವಾಧಿಕಾರವನ್ನು ಶಾಂತ ರೀತಿಯಿಂದ ಪರಸ್ಪರ ಹೊಂದಿಸಿಕೊಡಲು ಭಾರತ ಸರಕಾರವು ಮೇಲಿಂದ ಮೇಲೆ ಕೊಟ್ಟ ಸೂಚನೆಯು ಚೈನೀ ಸರಕಾರ ಕಟ್ಟಿಕೊಂಡಂತೆ ತೋರುವ ಚೈನದ ಒಳವಹಿವಾಟುಗಳಲ್ಲಿ ಕೈಹಾಕುವ ಅಧಿಕಪ್ರಸಂಗವೇನೂ ಅಲ್ಲ. ಬದಲಿಗೆ, ತನ್ನ ನೆರೆ ರಾಷ್ಟ್ರಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಶಾಂತರೀತಿಯಿಂದ ತೀರ್ಮಾನಿಸುವ ಸ್ವಾಭಾವಿಕ ಆಸಕ್ತಿಯಿರುವ ರಾಷ್ಟ್ರದ ಸ್ನೇಹಾಚಾರದ ಸೂಚನೆ ಅದು. ಚೈನಕ್ಕೂ ಇಂತಹ ಶಾಂತ ವಿಧಾನದ ಬಯಕೆಯಿದೆ ಎಂದು ತಿಳಿದು ಬಂದುದರಿಂದಲೇ ನಾವು ಟಿಬೇಟ್ ಪ್ರತಿನಿಧಿಮಂಡಲಿಯನ್ನು ಅಲ್ಲಿಗೆ ಬೀಳ್ಕೊಡುವ ವ್ಯವಸ್ಥೆ ಮಾಡಿದ್ದೆವು. ಈ ಸಂಬಂಧದ ಆಶ್ವಾಸನೆಗಳನ್ನು ಕೊಡುತ್ತಾ ಬಂದಂತೆಯೇ ಚೈನೀ ಸರಕಾರವು ಏಕಾಏಕಿ ಟಿಬೇಟಿನ ಶಾಂತ ಜನರ ಮೇಲೆ ಆಕ್ರಮಣ ಕೈಕೊಂಡುದರಿಂದ ನಾವು ಅತ್ಯಾಶ್ಚರ್ಯಕ್ಕೀಡಾದೆವು. ಟಿಬೇಟಿನ ಕಡೆಯಿಂದ ಯಾವ ಉದ್ರೇಕ ಹೇತು ಕಾರ್ಯವೂ ಆದುದಿಲ್ಲ. ಇಂತಹ ಸ್ಥಿತಿಯಲ್ಲಿ ಚೈನೀ ಸರಕಾರವು ತನ್ನ ಸೈನ್ಯವು ಮುಂದೊತ್ತದೆ ಅಲ್ಲೇ ನಿಲ್ಲಬೇಕೆಂದು ಆಜ್ಞೆಕೊಡದಿದ್ದರೆ, ಟಿಬೇಟ್ ಶಿಷ್ಟಮಂಡಲವನ್ನು ಪೆಕಿಂಗಿಗೆ ಬೀಳ್ಕೊಡುವ ಸ್ಥಿತಿಯಲ್ಲಿ ನಾವಿಲ್ಲ. ಲೋಕದ ಎಲ್ಲ ಕಡೆಗಳ ಯುದ್ಧ ಸಂಭವವನ್ನು ತಡೆಗಟ್ಟುವ ಉದ್ದೇಶವೊಂದೇ ಇತ್ತೀಚೆಗಿನ ಕೆಲವು ತಿಂಗಳುಗಳಲ್ಲಿ ಭಾರತವಿಡುತ್ತಿರುವ ಪ್ರತಿಯೊಂದು ಹೆಜ್ಜೆಯದೂ ಆಗಿದೆ. ನಮ್ಮೀ ಹೆಜ್ಜೆಯು ಹಲವೆಡೆ ತಪ್ಪಭಿಪ್ರಾಯಗಳನ್ನು ನಿರ್ಮಿಸಿದ್ದರೂ ದೊಡ್ಡ ರಾಷ್ಟ್ರಗಳ ಅಪ್ರಿಯತೆಯನ್ನು ಗಣಿಸದೆ ನಾವಂತೂ ಈ ಧೋರಣೆಯನ್ನು ಬಿಗಿಹಿಡಿದಿದ್ದೇವೆ. ಟಿಬೇಟಿನ ಮೇಲೆ ಯಾವುದೇ ರಾಜಕೀಯ ಅಥವಾ ಸ್ಥಳವಾರು ಮಹತ್ವಾಕಾಂಕ್ಷೆಯು ನಮಗಿಲ್ಲ; ನಮಗಾಗಿ ಅಥವಾ ಟಿಬೇಟಿನಲ್ಲಿರುವ ನಮ್ಮ ದೇಶೀಯರಿಗಾಗಿ ಯಾವ ನವೀನ ರಿಯಾಯತಿಯನ್ನೂ ನಾವು ಯಾಚಿಸುವುದಿಲ್ಲ, ಎಂದು ಮೊದಲೇ ಸ್ಪಷ್ಟಪಡಿಸಿದ್ದೇವೆ. ಅದರೊಂದಿಗೇನೇ, ಸಂಸ್ಕೃತಿ ಮತ್ತು ವ್ಯಾಪಾರ ವಹಿವಾಟುಗಳ ನಿಕಟ ಬಾಂಧವ್ಯವಿರುವ ನೆರೆಕರೆಯವರ ನಡುವೆ ಸ್ವಾಭಾವಿಕವಾದ ಹಲವು ಹಕ್ಕು ಬಾಧ್ಯತೆಗ

(೭ನೇ ಪುಟ ನೋಡಿರಿ)

Get the habit - - - - - - - of Saving a little out of each pay cheque

It's regularity that counts. You'll be surprised how quickly small sums mount up. Set a goal now. Then go after it. It's not how fast, but how regular. "Steady does it"

The Canara Industrial & Banking Syndicate Ltd.

H. O. UDIPI, S. K.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

Our Constituents, Please Note!

The Business Hours of the LOCAL OFFICE of the CORPORATION have been changed with effect from 1st November, 1950, as follows:

On WEEK DAY .... From 10 A. M. to 2 P. M.
On SATURDAYS .... From 10 A. M. to 12 A. M.

THE
Canara Banking Corporation Ltd.
(Incorporated in India.)
Estd: 1906.
Head Office : **UDIPI,** (S. I.)

ಗುರುವಾರ, ಉಡುಪಿ, ೯-೧೧-೫೦

ಕಾಂಗ್ರೆಸ್ ಏನಂತೆ?

ದಿಲ್ಲಿಯಲ್ಲಿ ಇದೇ ತಾ. 4ರಲ್ಲಿ ಆರಂಭಿಸಿದ ಕಾರ್ಯಕಾರೀ ಸಮಿತಿಯು ಸಾರ್ವತ್ರಿಕ ಮಹಾಚುನಾವಣೆಗಳು 1951ನೇ ಎಪ್ರಿಲಿನಲ್ಲೇ ಜರಗಬೇಕೆಂದು ಅಭಿಪ್ರಾಯಪಟ್ಟಿದೆ. ಎಪ್ರಿಲ್ ಎಂಬುದು ನ್ಯಾಯವಿಧಾಯಕ ಸಭೆಗಳ ಬಜೆಟ್ ಅಧಿವೇಶನಗಳ ಮಾಸವಿರುವುದರಿಂದ, ಚುನಾವಣೆಗಳನ್ನು ನವೆಂಬರ್ ವರೆಗಾದರೂ ಮುಂದುವರಿಸಿಡುವುದು ವಾಸಿಯೆಂಬ ಅಭಿಪ್ರಾಯವು ಹಲವು ಸದಸ್ಯರಲ್ಲಿದ್ದರೂ ಪಂಡಿತ ನೆಹರು ಅವರ ದೃಢಾಭಿಮತವನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಅಂಗೀಕರಿಸಿಕೊಳ್ಳಬೇಕಾಯಿತೆಂದು ಊಹಿಸಬಹುದು. ಇದೇ ಮಾದರಿಯ ವಿಳಂಬಾಪೇಕ್ಷೆಯು ಕೆಲವರಿಂದ ನಾಸಿಕ ಕಾಂಗ್ರೆಸ್ ಅಧಿವೇಶನದ ಮುಂದೆಯೂ ಬಂದಿದ್ದಿತು; ಕ್ಷಿಪ್ರದಲ್ಲಾಗಬೇಕೆಂಬ ನೆಹರುವರ ಅಭಿಪ್ರಾಯವೇ ಅಲ್ಲಿಯೂ ಮೇಲಾಗಿದ್ದಿತು. ದಿನಾನುಕ್ರಮಣಿಕೆ ನಿಶ್ಚಯವಾಗುವದೊಂದೇ ಈಗ ಬಾಕಿ ಹೋಯಿತು. ಮಹಾಚುನಾವಣೆಗಳು ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ಜರಗುವದೆಂತೂ ನಿಶ್ಚಯವೆಂದು ಕಟ್ಟಿಕೊಳ್ಳಲಡ್ಡಿಯಿಲ್ಲ. ಅಂತೂ ಇನ್ನು ಉಳಿದಿರುವುದು ಐದು ಅಥವಾ ಆರು ತಿಂಗಳ ಅವಧಿ ಮಾತ್ರ. ಪ್ರಾಯಸ್ಥರೆಲ್ಲಾ ಮತಾಧಿಕಾರ ಬಂದಿದ್ದು, ತದನುಗುಣವಾಗಿ ಪ್ರತಿನಿಧಿ ಸ್ಥಾನಗಳೂ ಹೆಚ್ಚಾಗಿರುವ ಭಾವೀ ಮಹಾಚುನಾವಣೆಯ ಸಂಬಂಧವಾಗಿ ಎಷ್ಟು ಅಗಾಧ ಕಾರ್ಯಭಾಗವೇ ಕಾದಿದೆ ಎಂಬುದನ್ನು ಪ್ರತ್ಯೇಕ ಹೇಳಬೇಕೆಂದಿಲ್ಲ. ಅದಷ್ಟು ಬೇಗನೇ ಚುನಾವಣಾ ಪರೀಕ್ಷೆ ಕೊಡಬೇಕೆಂಬ ಹುರುಪನ್ನು ಪ್ರದರ್ಶಿಸಿದ್ದ ಸಮಾಜವಾದಿಗಳು ಕೂಡಾ ಈಗ ಇರುವ ಅವಧಿ ಕಡಿಮೆಯೆಂಬ ಆತುರಾವಸ್ಥೆಯಿಂದ ಈಗ ಕಾರ್ಯಪ್ರವೃತ್ತರಾಗಿರುವುದು ಕಂಡುಬಂದಿದೆ. ಕಾಂಗ್ರೆಸು ಮಾತ್ರ ಈ ವರೆಗೂ ತನ್ನ ಚುನಾವಣಾ ಯಂತ್ರವನ್ನು ಚಾಲೂಮಾಡಿಲ್ಲ. ಸಾರ್ವತ್ರಿಕ ಚುನಾವಣೆಗಳ ವ್ಯವಸ್ಥೆಗಾಗಿ ಪ್ರತ್ಯೇಕ ರಚನೆ ಕಾಂಗ್ರೆಸಿನ ಮಂದಿಯ ಇತ್ತಾದರೂ, ಅದಕ್ಕಾಗಿ ಕಾಂಗ್ರೆಸ್ ಘಟನೆಯಲ್ಲಿ ತಿದ್ದುಪಡಿ ಮಾಡಿಕೊಳ್ಳುವ ಅಗತ್ಯವಿರುವುದರಿಂದ ಆ ಮೂಲಕ ಆಗುವ ವಿಳಂಬವು ಎಪ್ರಿಲ್ ಚುನಾವಣೆಗೆ ಹೇಳಿಸಿದ್ದಲ್ಲವೆಂಬುದರಿಂದ ಆ ಯೋಜನೆಯನ್ನೀಗ ಬಿಟ್ಟುಬಿಡಲಾಗಿದೆ. ಪ್ರಚಲಿತ ಘಟನಾನ್ವಯ ವಿಧಾನಗಳಿಂದಲೇ ಚುನಾವಣೆ ಆಳಿಯುವ ಸಂಕಲ್ಪವು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯದಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನೇಮಿಸುವ ಐದು ಮಂದಿ ಮತ್ತು ಕಾಂಗ್ರೆಸ್ ಅಧ್ಯಕ್ಷರೇ 'ಎಕ್ಸ್ ಒಫಿಸಿಯೋ" ಅಧ್ಯಕ್ಷನಾಗಿರುವ ಆರು ಮಂದಿಯು ಕೇಂದ್ರ ಪಾರ್ಲಿಮೆಂಟರೀ ಬೋರ್ಡು. ಕಾಂಗ್ರೆಸಿನ ಶಾಸನ ಸಭಾ ಪಕ್ಷಗಳ ಸೂತ್ರಧಾರಿಯಾಗಿರುವುದು; ಈ ಪಾರ್ಲಿಮೆಂಟರೀ ಬೋರ್ಡಿನೊಂದಿಗೆ, ಅ.ಭಾ.ಕಾಂಗ್ರೆಸ್ ಸಮಿತಿಯು ಆರಿಸುವ ಬೇರೆ ಐದು ಮಂದಿಯು ಸೇರಿರುವ 'ಕೇಂದ್ರ ಚುನಾವಣಾ ಸಮಿತಿ' ರಚನೆಗೊಳ್ಳುವುದು. ಕೇಂದ್ರ ಮತ್ತು ಸಂಸ್ಥಾನಿಕ ಶಾಸನ ಸಭೆಗಳಿಗೆ ಕಾಂಗ್ರೆಸ್ ಉಮೇದ್ವಾರಿಗಳನ್ನು ನೇಮಿಸುವ ಕೊನೆಯ ಅಧಿಕಾರವು ಈ ಕೇಂದ್ರ ಚುನಾವಣಾ ಸಮಿತಿಯದಿದೆ. ಕಾಂಗ್ರೆಸಿನ ಚುನಾವಣಾ ಘೋಷಣೆ ತಯಾರಿ ಮತ್ತು ಚುನಾವಣಾ ಕಾರ್ಯ ಸಂಬಂಧದ ಯಂತ್ರ ರಚನೆಯು ಇನ್ನು ತಾನೇ ಆಗಬೇಕು.

ಅಂತೂ ಕೆಲಸ ಬಹಳವಿದೆ; ಅವಧಿ ಕಡಿಮೆಯಿದೆ. ಸಂಸ್ಥಾನೀ ಸರಕಾರಗಳ ಅಭಿಪ್ರಾಯದಂತೆ ಚುನಾವಣೆಯು ಬರುವ ಎಪ್ರಿಲಿನಿಂದ ಮುಂದೆ ಹೋದರೂ, ಅದು ಕೆಲವೇ ತಿಂಗಳುಗಳ ಅವಧಿಗೆ ಮಾತ್ರವಾದ್ದರಿಂದ ಗಣ್ಯವಲ್ಲ. ಕಾರಣವಾವುದಿದ್ದರೂ, ಕಳೆದ ಬಾರಿಯ ಚುನಾವಣೆಯ ಕಾಲದಲ್ಲಿದ್ದಷ್ಟು ಈಗ ಕಾಂಗ್ರೆಸ್ ಜನಪ್ರಿಯವಾಗಿಲ್ಲವೆಂಬುದಂತೂ ವಸ್ತುಸ್ಥಿತಿ. ಮತದಾನದ ಅವಧಿ ಸಮೀಪಿಸುತ್ತದೆನ್ನುವಾಗ ನೆಹರು ವಲ್ಲಭಭಾಯಿಗಳಂತಹ ಮಹಾ ವ್ಯಕ್ತಿಗಳನ್ನು ರಂಗಕ್ಕಿಳಿಸುವುದರೊಂದಿಗೆ, ತನ್ನ ಎಲ್ಲಾ ಶಕ್ತಿ ಯೋಗ್ಯತೆಗಳನ್ನೂ ಪ್ರದರ್ಶಿಸಿ ಕಾಂಗ್ರೆಸ್ ಮತ್ತೊಮ್ಮೆ ವಿಜಯ ದುಂದುಭಿಯನ್ನು ಬಾರಿಸುವುದು ಸಂಭವನೀಯವಾದರೂ ಹಿಂದಿನಷ್ಟು ಸುಲಭದಲ್ಲಿ ಇದಾಗದು. ಮಾತ್ರವಲ್ಲ, ಕೇವಲ ಕೆಲವೇ ವ್ಯಕ್ತಿಗಳ ಪ್ರತಿಷ್ಠೆ, ಪ್ರಚಾರ ಗದ್ದಲ, ಗತಕಾಲದ ಕಾರ್ಯಬಲದಿಂದ ಚುನಾವಣೆಯಲ್ಲಿ ಜಯ ದೊರಕಿಸಿಕೊಳ್ಳುವುದು ಕಾಂಗ್ರೆಸಿನಂತಹ ಸಂಸ್ಥೆಗೆ ಭೂಷಣವಾಗುವಂತಿಲ್ಲ. ಈಗಿನ ವಿದ್ಯಮಾನಗಳ ಮೇಲಿಂದ ಊಹಿಸುವದಾದರೆ, ಸಂಖ್ಯೆಯೊಂದನ್ನು ಬಿಟ್ಟು ಬೇರಾವುದನ್ನು ಗಣಿಸಿದರೂ ಕಾಂಗ್ರೆಸ್ ಸೋತಿತು ಎನ್ನಲಾಗುವಂತಹ ವಿಜಯವನ್ನೇ ಭಾವೀ ಚುನಾವಣೆಯಲ್ಲಿ ಕಾಂಗ್ರೆಸು ಪಡೆದೀತೇನೋ! ಇಂತಹ ಔರಂಭವಪೂರ್ಣ ಜಯವನ್ನಷ್ಟೇ ಅಲ್ಲ-ಸರ್ವಾಂಗಪೂರ್ಣ ವಿಜಯವನ್ನು ದೊರಕಿಸಿಕೊಳ್ಳಲು, ಕಾಂಗ್ರೆಸು ಪ್ರಯತ್ನಿಸಬೇಕು. ಅದಕ್ಕಾಗಿ ಜನಸಾಮಾನ್ಯರ ಆರ್ಥಿಕ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವ ಪ್ರತಿಜ್ಞಾಬದ್ಧ ಹಾಗೂ ನಿಶ್ಚಿತಾವಧಿ ಮತ್ತು ನಿಶ್ಚಿತಾಂಶಗಳುಳ್ಳ ಕಾರ್ಯಕ್ರಮಗಳ ಸ್ಪಷ್ಟಾಶ್ವಾಸನೆಯನ್ನು ಜನತೆಗೆ ಕೊಡಬೇಕು. ಆ ಕಾರ್ಯಕ್ರಮಗಳನ್ನು ತ್ರಿಕರಣಪೂರ್ವಕವಾಗಿ ಸಾಧಿಸುವಂಥವರನ್ನೇ ತನ್ನ ಉಮೇದ್ವಾರರನ್ನಾಗಿ ನೇಮಿಸಬೇಕು. ಈ ಮೊದಲು ಕಾಂಗ್ರೆಸು ಕೊಟ್ಟ ಮಾತಿನಂತೆ ವರ್ತಿಸಿಲ್ಲವೆಂಬ ಅಪವಾದವಿರುವಾಗ ಕಾಂಗ್ರೆಸ್ ಇಂತಹ ಸ್ಪಷ್ಟ ಹೆಜ್ಜೆಗಳನ್ನಿಡಬೇಕಾದುದು ಅತ್ಯಗತ್ಯ. ರಾಷ್ಟ್ರದ ಸದ್ಯಸ್ಥಿತಿಯಲ್ಲಿ ಸಾಮಾಜಿಕಾರ್ಥಿಕ ರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗದೆ ನಿರ್ವಾಹವಿಲ್ಲ; ಅಂತೆಯೇ ಪ್ರಚಲಿತ ಸ್ಥಿತಿಗತಿಗಳ ಮೇಲಿಂದ ಕಾಂಗ್ರೆಸ್ ಟಿಕೆಟೆಯೇ ಇನ್ನೊಂದು ಅವಧಿಯ ಮಟ್ಟಿಗೆ ಅಗತ್ಯವೆಂದು ತೋರುತ್ತಿದೆ. ಇವೆರಡೂ ಪರಸ್ಪರ ಹೊಂದಿಕೊಳ್ಳುವುದು ಅಸಾಧ್ಯವೆ? ಕಾಂಗ್ರೆಸಿನ ಧ್ಯೇಯ ಧೋರಣೆ, ಘೋಷಣೆಗಳು ಅಂತಹ ಕ್ರಾಂತಿಸಾಧನೆಗೆ ಅನುಕೂಲವಿವೆ; ಆದರೆ ಕಾಂಗ್ರೆಸಿಗರ ಸರ್ವಸಾಮಾನ್ಯ ಮನೋವೃತ್ತಿ ಮತ್ತು ಇದುವರೆಗಿನ ರೀತಿ ನೀತಿಗಳು ಇದಕ್ಕೆ ಪ್ರತಿಕೂಲವಾಗಿ ತೋರಿಬಂದಿವೆ. ತನ್ನ ಸ್ವಂತ ಧ್ಯೇಯ ಧೋರಣೆಗಳು ಮತ್ತು ವರ್ತನೆಗಳೊಳಗಿನ ಈ ಅಂತರವನ್ನು ನಿವಾರಿಸಿಕೊಂಡು ಕಾಂಗ್ರೆಸು ನಿಷ್ಠಾವಂತ ಸಂಸ್ಥೆಯಾಗಿ ಚುನಾವಣಾ ರಂಗಕ್ಕಿಳಿದು ದೇಶದ ಭವಿಷ್ಯವನ್ನು ಉಜ್ವಲಗೊಳಿಸುವದೆಂದು ಆಶಿಸಬಹುದೆ?

ಸುದ್ದಿಸಾರ

ಕೊರಿಯದಲ್ಲಿ, ಸಂ. ರಾ. ಸೇನೆಗಳು ಉತ್ತರ ಮೂಲೆಗೆ ಮುಂದೊತ್ತುತ್ತಾ ಹೋದಂತೆ, ಕಮ್ಯುನಿಸ್ಟ್ ಚೈನಾದ ಸೇನೆಗಳು ಉತ್ತರ ಕೊರಿಯದ ಸೇನೆಗಳ ಜತೆಗೂಡಿ ಧಾಳಿ ಮಾಡಹತ್ತಿ, ಸಂ. ರಾ. ಸೇನೆಗಳು ಒಂದೇ ಸಮನೆ ಈಗ ಹಿಂಜರಿಯಹತ್ತಿವೆ. ದಕ್ಷಿಣ ಮೂಲೆಯ ವರೆಗೆ ಕಮ್ಯೂನಿಸ್ಟರು ಬಂದಿದ್ದ ಯುದ್ಧವನ್ನು ಉತ್ತರ ಮೂಲೆಗೆ ಸಂ. ರಾ. ಸೇನೆಗಳು ಹಿಂದೂಡಿದರೆ ನ್ನುವಾಗ ಪುನಃ ಅದು ದಕ್ಷಿಣ ಕಡೆಗೇನೇ ಇಳಿಜಾರುತ್ತಿರುವ ದೃಶ್ಯ ಕಣ್ಣ ಮುಂದಿದೆ. "ಸಂ. ರಾ. ಸೇನೆಗಳು 38ನೇ ಗಡಿಗೆರೆ ದಾಟಿ ಉತ್ತರಕ್ಕೆ ನುಗ್ಗಿದರೆ ಚೈನವು ಯುದ್ಧ ಪ್ರವೇಶಿಸುವಂತಾಗಿ ಘರ್ಷಣೆ ದೊಡ್ಡದಾಗುವುದು" ಎಂದು ಭಾರತ ಸರಕಾರವು ಆಗ ಕೊಟ್ಟಿದ್ದ ಎಚ್ಚರಿಕೆಯ ಅರ್ಥವು ಈಗ ಅಮೆರಿಕೆಯವರಿಗಾಗುತ್ತಿದೆ.

೦೦೦

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅಮೆರಿಕದ ಅಭಿಪ್ರಾಯದಂತೆ ಟ್ರಿಗ್ವಿ ಲೀ, ಅವರ ಕಾರ್ಯದರ್ಶಿ ಹುದ್ದೆಯ ಅವಧಿಯನ್ನು ಹೆಚ್ಚಿಸಲಾಯಿತು. ಸದಸ್ಯ ರಾಷ್ಟ್ರಗಳೆಲ್ಲವೂ ತಂತಮ್ಮ ಸೇನೆಗಳ ಒಂದಂಶವನ್ನು ಸಂ. ರಾ. ಸಂಘದ ಕಾರ್ಯಕ್ಕಾಗಿ ಮೀಸಲಿಡುವುದೇ ಮೊದಲಾದ ಪ್ರಾಮುಖ್ಯ ಸಲಹೆಗಳ ಸೂಚನೆ ಮಂಜೂರಾಯಿತು. ಸ್ಪೈಯಿನಿನ ಮೇಲೆ ಹಾಕಿದ ಸಂಬಂಧ ಬಹಿಷ್ಕಾರವನ್ನು ಸಂ. ರಾ. ಸಂಘ ತೆಗೆದುಹಾಕಿತು.

೦೦೦೦

ಟಿಬೇಟಿನ ಯುದ್ಧವೀಗ ಕೊನೆಯ ಅಂಕದಲ್ಲಿದೆ. ದಲಾಯಿ ಲಾಮರು ಈಗಲೂ ರಾಜಧಾನಿಯಲ್ಲೇ ಇದ್ದಾರೆಂದು ತಿಳಿದುಬಂದಿದೆ. ಬೊಂಬಾಯಿಯಿಂದ ಲಂಡನಿಗೆ ಹೊರಟಿದ್ದ 40 ಮಂದಿ ಪ್ರಯಾಣಿಕರು ಮತ್ತು 8 ಮಂದಿ ನೌಕರರಿದ್ದ ಭಾರತದ 'ಮಲಬಾರ್ ಪ್ರಿನ್ಸೆಸ್' ವಿಮಾನವು ನಿಶ್ಚಿತ ದಿನ ತಾ. 3ಕ್ಕೆ ಲಂಡನಿಗೆ ಮುಟ್ಟದೆ 'ವಿನಾಯಿತಾ!' ಎಂಬ ಆತಂಕವನ್ನು ಕೈವಿರಿಸಿದ್ದಿತು. ಯುರೋಪಿನ ಅತ್ಯುತ್ತರ ಪರ್ವತವಾದ ಫ್ರಾನ್ಸಿನ 'ಮೋಂಟ್ ಬ್ಲೇನ್'ಯ ಶಿಖರ ಬಳಿಯಲ್ಲೇ ಅಪಘಾತಕ್ಕೀಡಾಗಿ ಅದು ನುಚ್ಚುನುರಿಯಾಗಿ ಬಿದ್ದಿರುವುದು ಕಾಣಿಸಿದೆ. ಅದರಲ್ಲಿದ್ದವರ ಗತಿಯೇನಾಯಿತೆಂಬ ಪತ್ತೆ ನಡೆದಿದೆ.

ಮಂಗಳೂರು

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಸಂಭಾವನ ಗ್ರಂಥ ಸಮರ್ಪಣೆ ಇದೇ ತಾ 5ರಲ್ಲು ಸಂಜೆ ಸೆಂಟ್ರಲ್ ಕೋ-ಓಪರೇಟಿವ್ ಬೇಂಕಿನ ಮಹಡಿಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಷಷ್ಟಬ್ದ ಪೂರ್ತಿ ಸಮಾರಂಭದ ಅಂಗವಾದ ಸಂಭಾವನಾ ಗ್ರಂಥ ಸಮರ್ಪಣೆಯ ಸಮಾರಂಭವು ಜಿಲ್ಲೆಯ ಬೇರೆ ಬೇರೆ ಭಾಗದ ಪ್ರತಿನಿಧಿಗಳೂ ನೂರಾರು ಮಹನೀಯರೂ ನೆರೆದ ಸಭೆಯಲ್ಲಿ ಜರಗಿತು. ಮೈಸೂರು ಸಂಸ್ಥಾನದ ವಿದ್ಯಾ ಡೈರೆಕ್ಟರರಾದ ಶ್ರೀ ಕೆ. ಗುರುದತ್ತ, ಎಮ್. ಎ. ಎಲ್. ಅವರು ಅಧ್ಯಕ್ಷತೆ ವಹಿಸಿದ್ದರು.

ಮಾನ್ಯ ಅತಿಥಿಗೂ ಅಧ್ಯಕ್ಷರಿಗೂ ಹೂವಿನ ಹಾರಗಳನ್ನು ಅರ್ಪಿಸಲಾದನಂತರ ಶ್ರೀ ಎಸ್. ನರಸಪ್ಪಯ್ಯನವರು, ಮೈಸೂರ ರಾಜಪ್ರಮುಖರ, ಕೇಂದ್ರ ಮಂತ್ರಿಗಳಾದ ಶ್ರೀ ದಿವಾಕರ, ಸರ್ ಅರ್ಚಿಬಾಲ್ಡ್ ನೈ, ಡಾ। ಎಸ್. ಎಸ್. ರಾಜನ್, ಶ್ರೀ ಎ. ಬಿ. ಶೆಟ್ಟಿ, ಡಾ। ಟಿ. ಎಮ್. ಏ. ಪೈ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು. ಶ್ರೀಗಳಾದ ಕೆ. ಎಸ್. ಧರಣೇಂದ್ರಯ್ಯ, ಜಿಲ್ಲಾ ಸಬ್ ಜಡ್ಜರಾದ ಶ್ರೀ ಸದಾಶಿವಯ್ಯ, ಶ್ರೀಗಳಾದ ಕೆ. ಶಿವರಾಮ ಕಾರಂತ, ಎನ್. ಎಸ್. ಕಿಲ್ಲೆ ಶ್ರೀ ಹೆಗ್ಗಡೆಯವರ ಗುಣಕಥನಮಾಡಿ ಸಂಭಾವನಾ ಗ್ರಂಥವನ್ನು ಸ್ವೀಕರಿಸಬೇಕೆಂದರು. ಶ್ರೀ ಹೆಗ್ಗಡೆಯವರು ಸರ್ವರ ಅಭಾರವನ್ನೂ ಮನ್ನಿಸಿ, ತನಗೆ ಅರ್ಪಿಸಿದ ಗೌರವ ಸನ್ಮಾನವು ಧರ್ಮಸ್ಥಳದೊಡೆಯ ಶ್ರೀ ಮಂಜುನಾಥ ಸ್ವಾಮಿಗೆ ಸಲ್ಲತಕ್ಕದಾಗಿದೆ ಎಂದರು. ಅಧ್ಯಕ್ಷರು ಮಾನ್ಯ ಅತಿಥಿಗೆ ಆಯುರಾರೋಗ್ಯವನ್ನು ಕೋರಿದ ನಂತರ ಸಂಭಾವನಾ ಗ್ರಂಥ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ನೆರೆದ ಅತಿಥಿಗಳ ಉಪ

[೫ನೇ ಪುಟದಿಂದ]

ಈ ಸಂಪ್ರದಾಯ ಪ್ರಕಾರ ಮತ್ತು ಒಡಂಬಡಿಕೆಗಳನ್ನಾಧರಿಸಿ ನಮಗೆ ಅಲ್ಲಿ ಬೆಳೆದು ಬಂದಿರುವುದನ್ನೂ ಮನಗಾಣಿಸಿದ್ದೇವೆ. ಲಾಸಾದಲ್ಲಿರುವ ಭಾರತ ಸರಕಾರದ ಓವರ್ ಏಜಂಟ್—ಗ್ಯಾಂಟ್ಸೆ ಮತ್ತು ಯಾಟುಂಗಿನಲ್ಲಿರುವ ಭಾರತದ ವ್ಯಾಪಾರೀ ಏಜನ್ಸಿಗಳು—ಗ್ಯಾಂಟ್ಸೇವರೆಗಿನ ವ್ಯಾಪಾರೀ ಪಥದಲ್ಲಿರುವ ಭಾರತದ ಟಪ್ಪಾಲು ಮತ್ತು ತಂತೀ ಆಫೀಸುಗಳು—ಭಾರತ ಟಿಬೇಟ್ ಸಂಬಂಧದ ದ್ಯೋತಕಗಳಿವೆ. ಈ ವ್ಯಾಪಾರೀ ಪಥದ ರಕ್ಷಣೆಗಾಗಿ ಭಾರತದ ಸಣ್ಣ ಸೇನಾ ಗುಂಪೊಂದು ಕಳೆದ 40 ವರುಷಗಳಿಂದಲೂ ಗ್ಯಾಂಟ್ಸೆಯಲ್ಲಿ ನಿಲ್ಲಿಸಲ್ಪಟ್ಟಿದೆ. ಭಾರತ ಟಿಬೇಟುಗಳೆರಡರ ಹಿತ ಸಾಧನೆಗಾಗಿಯೂ ಇರುವ ಮತ್ತು ಚೈನದ ಮೇಲಧಿಕಾರಕ್ಕೆ ಯಾವ ಭಂಗವನ್ನೂ ಒಡ್ಡದ ಈ ವ್ಯವಸ್ಥೆಗಳು ಇನ್ನೂ ಮುಂದುವರಿಯುವವೆಂದು ಭಾರತ ಸರಕಾರವು ಆತುರ ಪೂರ್ವಕ ಆಶಿಸುತ್ತಿದೆ. ತದನುಗುಣವಾಗಿ ಭಾರತ ಸರಕಾರವು ಈ ವ್ಯವಸ್ಥಾನೆಲೆಗಳ ತನ್ನ ನೌಕರರಿಗೆ ಅಲ್ಲೇ ಇರುವಂತೆ ನಿರ್ದೇಶಿಸಿದೆ. ಎರಡು ರಾಷ್ಟ್ರಗಳೂ ಪರಸ್ಪರ ಮೇಲಧಿಕಾರಗಳನ್ನು, ಸ್ಥಾನಾಖಂಡತೆಗಳನ್ನು ಮತ್ತು ಪರಸ್ಪರ ಹಿತ ಸಂಬಂಧಗಳನ್ನು ಮನ್ನಿಸಿಕೊಂಡು ಭಾರತ ಮತ್ತು ಚೈನಗಳು ಮೈತ್ರಿಯಿಂದಿರುವಂತೆ ಪ್ರಯತ್ನಿಸುವುದೇ ಭಾರತ ಸರಕಾರದ ಮೂಲಭೂತ ಧೋರಣೆ. ಟಿಬೇಟಿನ ಇತ್ತೀಚೆಗಿನ ಆಗುಹೋಗುಗಳು ಈ ಮೈತ್ರೀ ಸಂಬಂಧದ ಮೇಲೂ ಅಖಿಲ ಜಾಗತಿಕ ಶಾಂತಿಯ ಮೇಲೂ ಪರಿಣಾಮ ಬೀರಿವೆ. ಅದಕ್ಕಾಗಿ ಭಾರತ ಸರಕಾರವು ಗಾಢ ಸಂತಾಪಗೊಂಡಿದೆ. ಕೊನೆಯದಾಗಿ ಜುಲುಮೆ ಮತ್ತು ಬಲ ಪ್ರಯೋಗದ ಬದಲಿಗೆ ಶಾಂತ ಸಂಧಾನ ವ್ಯವಹಾರ ಮತ್ತು ತೀರ್ಮಾನಗಳ ವಿಧಾನವನ್ನು ಇನ್ನಾದರೂ ಚೈನೀ ಸರಕಾರವು ಸ್ವೀಕರಿಸುವುದೆಂಬ ತನ್ನ ಅಂತರಾಳದ ಆಶಯನ್ನು ಭಾರತ ಸರಕಾರವು ಸೂಚಿಸುತ್ತದೆ".

ಬೇಕು

ಕಂಪೋಸಿಟರ್ಸ್ ಮತ್ತು ಬೈಂಡರ್ಸ್ ಬೇಕಾಗಿದ್ದಾರೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ಕಂಪೋಸಿಂಗ್, ಬೈಂಡಿಂಗ್ ಮತ್ತು ಪ್ರಿಂಟಿಂಗ್ ವಿಭಾಗಗಳಲ್ಲಿ ತರಬೇತಿಗಾಗಿ ಕೆಲವು ಹುಡುಗರನ್ನೂ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಗೆ ವಿಚಾರಿಸುವದು.

KAILASH HILLS HERB

(Govt. Regd.)

Cures Asthma of all five kinds radically by a single dose to be taken on 24-11-50 (full moon). Correspond English or Hindi to:-

Brahmachari G. Das,
Sri Sidh Brahmacharya Seva Ashram, P.O. **Chitrakot**, U.P.

90 G Special provisions respecting certain joint families.

Nothing contained in this Part shall apply to any tarwad, tavazhi, kutumba or kavaru to which the Marumakkattayam or the Aliyasantana law would have applied if this Code had not been passed, and notwithstanding anything contained in this Code, all matters relating to the rights of any person in, or the management or partition of, any such tarwad, tavazhi, kutumba or kavaru (or its properties) shall continue to be regulated by the law which was applicable thereto immediately before the commencement of this Code.

* The words within brackets may have to be included.

(The above provision has been inserted at Dehli in the Hindu Code Bill which has been received here. I have said that this will be acceptable to the Aliyasanthana people. It is not known whether the Marumakkattayam people will also agree to it since they are having some different kinds of law in Malabar, Cochin and Travancore. It is not known whether the Hindu Code Bill will be taken up in the Central Legislature before the coming elections or it will be reserved for the next legislature.)

—A. B. Shetty

90 ಜಿ.

ಕೆಲವು ಅವಿಭಕ್ತ ಕುಟುಂಬಗಳ ವಿಷಯದಲ್ಲಿ ವಿಶೇಷ ಸಲುವಳಿಗಳು

ಹಿಂದೂ ಕೋಡು ಪಾಸಾಗದಿದ್ದರೆ ಮರುಮಕ್ಕತ್ತಾಯಂ ಅಥವಾ ಅಳಿಯಸಂತಾನ ಕಾನೂನಿನಿಂದ ಬದ್ಧವಾಗುವ ಯಾವುದೇ ತರವಾಡು, ತಾವಳಿ, ಕುಟುಂಬ ಅಥವಾ ಕವರುಗಳಿಗೆ ಈ ಪ್ರಕರಣದಲ್ಲಿ ಸೇರಿಕೊಂಡಿರುವುದು ಯಾವುದೂ ಅನ್ವಯಿಸುವುದಿಲ್ಲ. ಈ ಕೋಡಿನಲ್ಲಿ ಸೇರಿದುದು ಏನಿದ್ದರೂ ಕೂಡಾ ಆ ತರವಾಡು ತಾವಳಿ ಕುಟುಂಬ ಮತ್ತು ಕವರುಗಳಲ್ಲಿ * (ಅಥವಾ ಅವುಗಳ ಆಸ್ತಿಗಳಲ್ಲಿ) ಒಬ್ಬ ವ್ಯಕ್ತಿಗೆ ಇರುವ ಅಧಿಕಾರದ ಸಂಬಂಧದಲ್ಲಾಗಲೀ ವ್ಯವಸ್ಥೆ ಯಾ ವಿಭಜನೆಯ ಸಂಬಂಧದಲ್ಲಾಗಲೀ ಬರುವ ವಿಷಯಗಳಿಗೆ ಯಾವಹೊತ್ತೂ ಈ ಕೋಡು ಆರಂಭವಾಗುವ ತತ್ಪೂರ್ವದಲ್ಲಿ ಯಾವ ಕಾನೂನು ಅನ್ವಯಿಸುತ್ತಿತ್ತೋ ಅದೇ ಕಾನೂನಿನಿಂದ ನಿಯಂತ್ರಿಸಲ್ಪಡಬೇಕು.

* ಬ್ರೆಕೆಟಿನೊಳಗಿರುವ ಶಬ್ದಗಳನ್ನು ನಾವು ಸೇರಿಸಬೇಕಾದೀತು.

(ಇಲ್ಲಿಗೆ ಬಂದ ಹಿಂದೂಕೋಡು ಬಿಲ್ಲನಲ್ಲಿ ದಿಲ್ಲಿಯಲ್ಲಿ ಈ ಮೇಲಿನ ಸಲುವಳಿಯನ್ನು ಕೂಡಿಸಿದ್ದು ಕಂಡುಬರುತ್ತದೆ. ಅಳಿಯಸಂತಾನಿಗರಿಗೆ ಇದು ಸಮ್ಮತವಾಗುವುದೆಂದು ನಾನು ಒಪ್ಪಿಕೊಂಡಿದ್ದೇನೆ. ಮಲಬಾರು, ಕೊಚ್ಚಿ, ತ್ರಿವಾಂಕೂರುಗಳ ಮರುಮಕ್ಕತ್ತಾಯಮ್ ಜನರಲ್ಲಿ ವಿವಿಧ ಕಾನೂನುಗಳು ಜ್ಯಾರಿಯಲ್ಲಿರುವುದರಿಂದ ಅವರು ಇದಕ್ಕೆ ಒಪ್ಪಿಯಾರೋ ಎಂಬುದು ನನಗೆ ತಿಳಿಯದು. ಬರುವ ಚುನಾವಣೆಯ ಮೊದಲೇ ಕೇಂದ್ರ ಶಾಸನ ಸಭೆಯಲ್ಲಿ ಇದನ್ನು ತೆಗೆದುಕೊಳ್ಳುವರೋ ಅಥವಾ ಆ ಮೇಲಿನ ಸಭೆಗೆ ಮುಂದರಿಸುವರೋ ಎಂಬುದೂ ನನಗೆ ತಿಳಿಯದು.)

ಮುದ್ರಾಸು } ಎ. ಬಿ. ಶೆಟ್ಟಿ.

ಉಡುಪಿ

ಸೋಶಿಯಲಿಸ್ಟ್ ಪಕ್ಷದ ಸಭೆಯು ತಾ 29ರಲ್ಲು ಸಂಜೆ ರೈತವಾಣಿ ಕಾರ್ಯಾಲಯದಲ್ಲಿ ಕುಂದಾಪುರ ಎಡ್ವೊಕೇಟ್ ಶ್ರೀ ವಿ. ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ವಿಠಲದಾಸರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಸಮಾಜವಾದೀ ಪಕ್ಷದ ಕಾರ್ಯದರ್ಶಿ ಶ್ರೀ ರಾಮಕೃಷ್ಣರಾಯರು ತಮ್ಮ ಪಕ್ಷದ ಧ್ಯೇಯ ಸಾಧನೆಗಳೇನೆಂಬುದನ್ನು ವಿವರಿಸಿ ಮಾತನಾಡಿದರು. ಕೊಮ್ರೇಡ್ ಲೋಕಯ್ಯ, ಶ್ರೀಗಳಾದ ಮಂಗೆ ನಾರಾಯಣ ಸೆಟ್ಟಿ, ಟಿ. ಆರ್. ಬಾದ್ಯ, ಜಗನ್ನಾಥ ಮೂಡ್ಲಕಟ್ಟೆ, ಎಮ್. ಎನ್. ಮನ್ನಾ ಸಾಹೇಬ್, ರೈಮಂಡ್ ಮಾರ್ಟಿಸ್ ಮೊದಲಾದವರು ಕಾಂಗ್ರೆಸಿನ ಶಿಥಿಲತೆಯ ಕುರಿತೂ, ಮುಂಬರುವ ಚುನಾವಣೆಯಲ್ಲಿ ಸಮಾಜವಾದೀ ಪಕ್ಷದ ಕಡೆಯಿಂದ ಹುರಿಯಾಳುಗಳನ್ನು ನಿಲ್ಲಿಸುವ ಕುರಿತೂ ಮಾತನಾಡಿದರು. ಬಳಿಕ ಕುಂದಾಪುರ ಡಿವಿಜನಿಗೊಂದು ಕೌನ್ಸಿಲು ಸ್ಥಾಪಿಸಲ್ಪಟ್ಟು ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು.

ಕೊಳಲು ಸಂಗೀತ ಕಛೇರಿ— ತಾ 30ರಲ್ಲು ರಾತ್ರಿ ಶ್ರೀ ಚಂದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ಶ್ರೀನಿವಾಸ ಪುತ್ರಾಯರಿಂದ ನಡೆಯಿತು.

ಅಸ್ಸಾಮು ಭೂಕಂಪ ನಿಧಿಗೆ ಸಹಾಯ ಮಾಡಿರಿ— ತಾ.30ರಲ್ಲು ಸಂಜೆ ಉಡುಪಿ ತಾಲೂಕು ಕಚೇರಿಯಲ್ಲಿ ಉಡುಪಿ ತಾಲೂಕು ಅಸ್ಸಾಮು ಭೂಕಂಪ ನಿಧಿ ಸಹಾಯಕ ಕಮಿಟಿಯ ಸಭೆಯು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಾರ್ವಜನಿಕರು ಉದಾರ ಮನಸ್ಸಿನಿಂದ ಶಕ್ತಿಮೀರಿ ಅಸ್ಸಾಮು ಭೂಕಂಪ ನಿಧಿಗೆ ಸಹಾಯ ಮಾಡಬೇಕೆಂದು ಜಾಹೀರು ವಿನಂತಿ ಮಾಡಲಾಯಿತು. ಸ್ಥಳೀಯ ಸಿನೆಮಾ ಕಂಪೆನಿಗಳ ಮಾಲಕರು ಉತ್ತಮ ಚಿತ್ರವೊಂದನ್ನು ಪ್ರದರ್ಶಿಸಿ ತಮ್ಮಲ್ಲಿ ದೊರೆಯುವ ಉತ್ಪತ್ತಿಯನ್ನು ಕೊಡುವಂತೆ ಕೇಳಬೇಕೆಂದು ನಿರ್ಧಾರವಾಯಿತು

ಭತ್ತ ಅವಲಕ್ಕಿ ಸಮಸ್ಯೆ— ಪ್ರಕಟವಾಗಿ ಕೈಬಂದ ಭತ್ತವು ದಿನಾಲೂ ಮುಡಿಗಟ್ಟಲೆಯಲ್ಲಿ ಅವಲಕ್ಕಿ ತಯಾರಿಕೆಗಾಗಿ ವಿನಿಯೋಗಿಸಲಾಗುತ್ತಿದೆ ಎಂದು ಪಕ್ಕಾಳದ ತತ್ತಕಡೆಯಿಂದ ದೂರು ಕೇಳಿ ಬರುತ್ತಿದೆ. ಅಧಿಕಾರಿಗಳು ಕಾರ್ಯಾಸಕ್ತರಾಗಲು ವಿಳಂಬ ಮಾಡಿದರೆ ಪರಿಣಾಮ ನೆಟ್ಟಗಾಗಲಾರದೆಂದು ವಿಷಾದಪೂರ್ವಕ ಹೇಳಬೇಕಾಗುತ್ತದೆ. ಈ ಸಮಸ್ಯೆಯ ಕುರಿತು ಉಡುಪಿ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಗಡೆಯವರು ಈಗಾಗಲೇ ಜಿಲ್ಲಾ ಕಲೆಕ್ಟರಿಗೆ ಅಧಿಕೃತ ಪತ್ರವೊಂದನ್ನು ಬರೆದಿರುವರು

ಕಾಂಗ್ರೆಸ್ ಕಮಿಟಿ ಸಭೆಯು— ಕಳೆದ ಶುಕ್ರವಾರ ಸಂಜೆ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀಗಳಾದ [illegible] ಹೆಗ್ಡೆ ಮತ್ತು ಟಿ. ಕೇಶವ ಪೈಗಳ ಅಕಾಲ ನಿಧನಕ್ಕೆ ದುಃಖ ಪ್ರದರ್ಶಿಸಲಾಯಿತು. ಹಳ್ಳಿ ಹಳ್ಳಿಗಳಲ್ಲಿಯು ರೇಶನಿಂಗ್ ಪದ್ಧತಿಯನ್ನು ತೆಗೆದು ಹಾಕುವಂತೆಯೂ, ಪಟ್ಟಣದಲ್ಲಿ ಮಾತ್ರ ರೇಶನಿಂಗ್ ಪದ್ಧತಿಯನ್ನು ಇರಗೊಡಿಸುವಂತೆಯೂ ಮುದ್ರಾಸು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಸ್ಟೋರ್ಸು ಡಿಪೋವಿಗೆ ಅಕ್ಕಿ ಒಪ್ಪಿಸುವ ಪ್ರಥಮ ಕಂತಿನ ಮ್ಯಾದೆಯನ್ನು ಇದೇ ತಾ 15ಕ್ಕೆ ಮುಂದರಿಸಬೇಕೆಂದು ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು. ತೆಂಗಿನ ಕಾಯಿ, ತೆಂಗಿನೆಣ್ಣೆ, ಮೆಣಸು ಇತ್ಯಾದಿ ಸಾಮಾನುಗಳ ಏರಿದ ಬೆಲೆಯನ್ನು ತಗ್ಗಿಸುವಂತೆಯೂ ಬೆಲ್ಲ ಸಿಕ್ಕುವ ವ್ಯವಸ್ಥೆ ಮಾಡುವಂತೆಯೂ ಅಧಿಕಾರಿಗಳನ್ನು ಪ್ರಾರ್ಥಿಸಲಾಯಿತು. ಪೇಟೆ ಪಟ್ಟಣಗಳಲ್ಲೂ ಗ್ರಾಮಗಳಲ್ಲೂ ರಾತ್ರಿಯಲ್ಲಿರುವ ಸಟ್ಟಾ ಆಟವನ್ನು ನಿಲ್ಲಿಸುವಂತೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಕೇಳಿಕೊಳ್ಳಲಾಯಿತು.

ಮುನಿಸಿಪಲ್ ಸ್ಪೆಶಲ್ ಸಭೆಯು ತಾ 6ರಲ್ಲು ಸೇರಿದರೂ ನಿರ್ಣಯ ರದ್ದತಿಯ ಹೊಸ ನಿರ್ಣಯ ಅಂಗೀಕಾರಕ್ಕೆ ಬೇಕಾಗುವಷ್ಟು ಸದಸ್ಯರು ಇಲ್ಲದಿದ್ದುದರಿಂದ ಸದ್ರಿ ಸಭೆಯು ಮುಂದರಿಸಲಾಯಿತು.

ದುಃಖ ಸೂಚನೆ— ಸ್ಥಳೀಯ ಎಮ್. ಜಿ. ಎಮ್. ಕಾಲೇಜಿನಲ್ಲಿ ಇದೇ ತಾ. 6ರಲ್ಲಿ ಪ್ರಿನ್ಸಿಪಾಲ್ ಶ್ರೀ ಯು. ಎಲ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಬರ್ನಾರ್ಡ್ ಷಾರ ನಿಧನದ ಕುರಿತು ಸೇರಿದ ದುಃಖಸೂಚಕ ಸಭೆಯಲ್ಲಿ ಶ್ರೀ ಕೆ. ಎಸ್. ಕಾಮತರು ಮಂಡಿಸಿದ ಶೋಕಸೂಚನಾ ನಿರ್ಣಯವಾಯಿತು.

NOTICE

In the Court of the District Munsif of Coondapur

S. C. No 672/50.

Between

B. Manjunatha Pai, —Plaintiff

and

Ajjajan Saheb, son of Gaffur Saheb, resding at Hangarcatta of Balkudru village, Udipi Taluq Post Hangarkatta —Defendant

To

The Defendant Named above.

Please take Notice that the above suit filed by the Plaintiff against you for recovery of the amounts due under a pronote executed by you in favour of the plaintiff on 2-8-1946 Stands posted 21-11-1950 for your appearance either in person or through a duly instructed pleader. In case you fail to appear on the said date at 11 A. M. the suit will be decided exparte.

By order of Court

Sd. K. Ramappayya

Adv. for plaintiff

Coondapur, 6-11-1950.

Notice

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S.C. 425/49 S E.P. 555/50

ವಾದಿ—ಶ್ರೀನಿವಾಸ ಹೊಳ್ಳರವರ ಬಾಬ್ತಿ ಡಿಕ್ರಿಯನ್ನು R. E. P. 320/50ರಲ್ಲಿ ಅಪ್ಪಮಾತೆ ಅಮ್ಲುಜ್ಯಾರಿ ಮಾಡಲಿಕ್ಕೆ ಹಕ್ಕು ಪಡೆದ ಅರ್ಜಿದಾರರು ವೈ. ಕೃಷ್ಣಪ್ಪ ಸೆಟ್ಟಿ ಸಹಾ—

ಎದ್ರಿ—ಕೃಷ್ಣಪ್ಪ ಸೆಟ್ಟಿ, ಮಕ್ಕಳು ನಾಗಪ್ಪ ಸೆಟ್ಟಿ ಅಳಿಯ, ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮ—

ಸದ್ರಿ ಎದ್ರಿಗೆ ತಿಳಿಯಪಡಿಸಿದ್ದು.

ಸದ್ರಿ ಅಮ್ಲುಜ್ಯಾರಿಯಲ್ಲಿ ನಿಮಗೆ ನೋಟೀಸು ಯಾಕೆ ಕೊಡಬಾರದೆಂತ ಅರ್ಜಿದಾರರು ದಾಖಲ್ಲು ಮಾಡಿದ ಮೇಲಿನ ಅರ್ಜಿ ತಾ. 14-11-50ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಪದೇಯಿದ್ದರೆ ಸದ್ರಿ ದಿವಸ ಬೆಳಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjiya Shetty,

Advocate for Peter.

ದಕ್ಷಿಣ ಕನ್ನಡ

ದ. ಕ ಜಿಲ್ಲಾ ಹರಿಜನ ಲೇಬರ್ ಲೀಗ್— ಈ ಸಂಸ್ಥೆಯು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು ಸಾಧಾರಣ 14 ವರ್ಷಗಳಾದುವು. ಈ ಅವಧಿಯಲ್ಲಿ ಈ ಸಂಸ್ಥೆಯು ಮಾಡಬೇಕಾದಷ್ಟು ಕಾರ್ಯಗಳನ್ನು ಕೆಲವೊಂದು ಕಾರಣಗಳಿಂದಾಗಿ ಮಾಡಲಾಗಲಿಲ್ಲ. ಮುಖ್ಯವಾಗಿ ಹರಿಜನರೇ ಕಾರಣವೆಂದು ಹೇಳಬೇಕಾಗಿದೆ. ಪ್ರತಿಯೋರ್ವ ಹರಿಜನ ಬಂಧುವು ಸಮಾಜಸೇವೆ ಎಂದರೇನು, ತನ್ನ ಜವಾಬ್ದಾರಿಯೇನೆಂದು ತಿಳಿದೇ ಮುಂದುವರಿದರೆ ಲೀಗಿನ ಅನೇಕ ಧ್ಯೇಯಗಳನ್ನು ಸಾಧಿಸಲು ಸಾಧ್ಯವಿದೆ ಎಂದು ಸೂಚಿಸಿ ಈತನಕ ಲೀಗಿನ ಕಡೆಯಿಂದಾದ ಕಾರ್ಯಗಳೇನು ಎಂಬುದನ್ನು ಶ್ರೀ ಈಶ್ವರನವರು ತನ್ನ ಪತ್ರವೊಂದರಲ್ಲಿ ಜಾಹೀರು ಮಾಡಿರುತ್ತಾರೆ.

ಪೆರ್ಡೂರು— ತಾ. 3-11-50ರಲ್ಲಿ ಶ್ರೀ ಟಿ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ B.E.M. ಹಾ| ಎ| ಶಾಲೆಯ ಹೆತ್ತವರ ಸಭೆಯು ಸೇರಿದ್ದಿತು. ಬಾಲಕಿಯರಿಂದ ಕುಮ್ಮಿ, ಕೋಲಾಟ, ಲೇಸಿಯಂ ಮೊದಲಾದುವುಗಳು ಉತ್ತಮ ರೀತಿಯಲ್ಲಿ ಅಭಿನಯಿಸಲ್ಪಟ್ಟುವು. ಮಾತ್ರವಲ್ಲದೆ ಬಾಲಕ ಬಾಲಕಿಯರಿಂದ ಯಕ್ಷಗಾನ "ಆದರ್ಶ ಜೀವನ" ಮತ್ತು "ರಕ್ಷಾಬಂಧನ" ಎಂಬ ಪ್ರಹಸನಗಳು ಉತ್ತಮವಾಗಿ ಅಭಿನಯಿಸಲ್ಪಟ್ಟುವು. ಅನಂತರ ಅಧ್ಯಕ್ಷರು ವಿದ್ಯೆಯ ಮಹತ್ವದ ಕುರಿತೂ, ರಕ್ಷಕರ ಜವಾಬ್ದಾರಿಯ ಕುರಿತೂ ಜನರಿಗೆ ಹೃದಯಂಗಮವಾಗಿ ಭಾಷಣವಿತ್ತರು.

ಕುಂದಾಪುರ— 1950ನೆ ವರ್ಷದ ಉಡುಪಿ ಡಿವಿಜನಲ್ ಎತ್ಲೆಟಿಕ್ ಎಸೋಸಿಯೇಶನಿನ ಕ್ರಿಕೆಟ್ ಪಂದ್ಯಾಟಗಳಲ್ಲಿ ಈ ಕೆಳಗಿನವರು ವಿಜಯಿಗಳಾಗಿರುವರು.

ಜೂನಿಯರ್ಸ್ ಕ್ರಿಕೆಟ್ ಪಂದ್ಯಾಟದಲ್ಲಿ ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲ್ ಟೀಮು ಜಯಹೊಂದಿತು.

ಇಂಟರ್‌ಮೀಡಿಯಟ್ ಆಟವು ಉಡುಪಿ ಬೋರ್ಡ್ ಹ್ಯಾಸ್ಕೂಲಿಗೆ ಮತ್ತು ಕುಂದಾಪುರ ಬೋರ್ಡ್ ಹ್ಯಾಸ್ಕೂಲುಗಳೊಳಗೆ ನಡೆದು ಉಡುಪಿಯವರು ವಿಜಯಿಗಳಾದರು. ಸಿನಿಯರ್ ಸ್ಪರ್ಧೆಯು ಕುಂದಾಪುರ ಬೋರ್ಡ್ ಹ್ಯಾಸ್ಕೂಲ್ ಮತ್ತು ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲುಗಳೊಳಗೆ ನಡೆದು ಕುಂದಾಪುರ ಟೀಮಿನವರು ಗೆದ್ದರು.

ಕುಂಬಳೆ— ಇಲ್ಲಿಯ ಮೀನು ಕೈಗಾರಿಕೆಯವರಿಗೆ ಒಕ್ಟೋಬರ್ ತಿಂಗಳ ತಾ. 15ರಿಂದ ಯಾರ್ಡಿನಲ್ಲಿ ಉಪ್ಪು ದೊರೆಯದ ಕಾರಣದಿಂದಾಗಿ ಅವರ ವೃತ್ತಿಗೆ ಪೆಟ್ಟು ಬಿದ್ದಂತಾಗಿದೆ.

ಕಾಳಾವರ— ಹೊಸತಾಗಿ ಮಂಜೂರಾತಿ ಪಡೆದ ಜಿಲ್ಲಾ ಬೋರ್ಡ್ ಗ್ರಾಮಾಸ್ಪತ್ರೆಯ ಪ್ರವೇಶೋತ್ಸವವು ತಾ. 20-10-50ರಲ್ಲಿ ಕುಂದಾಪುರ ಡಿವಿಜನಲ್ ·ಆರ್, ಡಿ, ಓ. ಶ್ರೀ. ಪಿ. ಎಸ್. ಶಿವಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ವೈ. ಮಂಜಯ ಸೆಟ್ಟರಿಂದ ರಾಷ್ಟ್ರಧ್ವಜಾರೋಹಣವಾದ ಮೇಲೆ ಮಾನ್ಯ ಮಂತ್ರಿಗಳಾದ ಶ್ರೀ. ಚಂದ್ರಮೌಳಿ, ಶ್ರೀ ಎ. ಬಿ, ಸೆಟ್ಟರಿಂದ ಮತ್ತು ಜಿಲ್ಲಾ ಬೋರ್ಡ್ ಅಧ್ಯಕ್ಷರೇ ಮೊದಲಾದವರಿಂದ ಬಂದಿದ್ದ ಶುಭ ಸಂದೇಶಗಳನ್ನು ಶ್ರೀ ಕಾಪು ಸಂಜೀವ ಸೆಟ್ಟರು ಓದಿ ಹೇಳಿ ಹೊಸ ಆಸ್ಪತ್ರೆಯ ಹಿನ್ನೆಲೆ ಚರಿತ್ರೆಯನ್ನು ತಿಳಿಸಿದರು. ಶ್ರೀಗಳಾದ ಎಮ್. ಎಮ್. ಹೆಗ್ಡೆ, ವೈ. ಎಮ್. ಸೆಟ್ಟಿ, ಎನ್. ಎಸ್. ಪರಮೇಶ್ವರಯ್ಯ, ಕೆ, ಎಲ್. ಕಾರಂತ, ಕೆ. ರಾಮ ಭಟ್ಟ ಮತ್ತು ಶ್ರೀ ರಾಜಗೋಪಾಲ ಸೆಟ್ಟರ ಸಂದರ್ಭೋಚಿತ ಭಾಷಣಗಳಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಸ್ಪತ್ರೆಯ ಆವಶ್ಯಕತೆಯಂತೆಯೇ ಅಧಿಕಾಹಾರೋತ್ಪನ್ನ ಮತ್ತು ಕಂಪೋಸ್ಟು ಗೊಬ್ಬರ ತಯಾರಿಯ ಪ್ರಾಮುಖ್ಯತೆಯನ್ನೂ ಒತ್ತಿ ಹೇಳಿದರು. ಮಾಸ್ಟರ್ ವಾಸುದೇವ ನಾಯಕ್ ಮತ್ತು ಪಾರ್ಟಿಯ ಗಾಯನವಾಗಿ ಶ್ರೀ ಕೆ. ಸಂಜೀವ ಸೆಟ್ಟರ ಧನ್ಯವಾದಾರ್ಪಣೆ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮೂಡು ಬಿದ್ರೆ— ತಾ. 3-11-50ರಂದು ಮೂಡುಬಿದಿರೆಯಲ್ಲಿ ಸ್ಥಳೀಯ ಮತ್ತು ಆಸುಪಾಸಿನ ಗ್ರಾಮಗಳಿಗೆ ಸೇರಿದ ಬಿಲ್ಲವ ಸಮಾಜ ಬಂಧುಗಳ ಮಹಾ ಸಭೆಯೊಂದು, ಶ್ರೀ. ಕೃಷ್ಣಗೋಪಾಲರ ಅಧ್ಯಕ್ಷತೆಯಲ್ಲಿ ಜರಗಿ, "ಬಿಲ್ಲವ ಸಮಾಜ ಸೇವಾಸಂಘ"ವೆಂಬ ನವ ಸಂಸ್ಥೆಯೊಂದು ಸ್ಥಾಪಿಸಲ್ಪಟ್ಟಿತು.

ಸಭೆಯನ್ನು ಕರೆದ ಶ್ರೀ. ಯಂ ಮೋಹನರು ಸಭೆ ಕರೆದ ಉದ್ದೇಶಗಳನ್ನು ವಿವರಿಸುತ್ತಾ, ಸುತ್ತು ಮುತ್ತಲಿನ ಸೋದರ ಸಮಾಜಗಳಂತೆಯೂ, ಅಲ್ಲದೆ ಇತರ ಎಲ್ಲಾ ಕಡೆಗಳಲ್ಲಿ ಬಿಲ್ಲವ ಸಮಾಜದವರು ತಮ್ಮ ತಮ್ಮ ಧಾರ್ಮಿಕ, ಆರ್ಥಿಕ ಮತ್ತು ಸಮಾಜಿಕ ಸುಧಾರಣೆಗಳಿಗಾಗಿ ಸಂಘಗಳನ್ನು ಸ್ಥಾಪಿಸಿ ಒಕ್ಕಟ್ಟಿನಿಂದ ಹೆಣಗುವಂತೆಯೂ ನಾವು ಅವರ ಮಾರ್ಗವನ್ನನುಸರಿಸಿ ನಮ್ಮ ನಮ್ಮ ಏಳ್ಗೆಯನ್ನು ಸಾಧಿಸಬೇಕೆಂದು ವಿವರಿಸುತ್ತಾ, ಅದಕ್ಕಾಗಿ ಸ್ಥಾಪಿಸಲ್ಪಟ್ಟು ದುಡಿಯಲಿರುವ ಸಂಘದ ರೂಪರೇಷೆಗಳನ್ನೊಳಗೊಂಡ ಧ್ಯೇಯ ಮತ್ತು ಕ್ರಮ ನಿಬಂಧನೆಗಳನ್ನು ಸಭೆಯ ಮುಂದಿಟ್ಟಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು. ತದನಂತರ, ಶ್ರೀ. ಯಂ. ಕೃಷ್ಣಪ್ಪ, ಅಣ್ಣು ಮೇಸ್ತ್ರಿ, ಹೊಸಮನೆ ಚಂಪಯ, ಶಿವ ಪೂಜಾರಿ, ಯಂ. ಪದ್ದಣ್ಣ, ಪೂವಪ್ಪ ಮೇಸ್ತ್ರಿ, ಯಂ ಮೋಹನ್, ಕೂಕ್ರಣ್ಣ, ಕೆ' ಯಚ್, ಕೊರಗಪ್ಪ, ಯನ್. ಶೀನ, ಮತ್ತು ಸೀತಾರಾಮರನ್ನೊಳಗೊಂಡ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲ್ಪಟ್ಟಿತು. ಕೊನೆಗೆ ಅಧ್ಯಕ್ಷರು ಸಮಾಜಗಳಲ್ಲಿ ಹಾಗೂ ಹೊಸ ಸುಧಾರಣೆಗಳಿಗಾಗಿ ಸಂಘಗಳು ಅದೆಷ್ಟು ಅಗತ್ಯವೆಂದು ಹೇಳುತ್ತಾ ಅವುಗಳು ದುಡಿಯುವ ರೀತಿನೀತಿಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ. ಯಂ. ಮೋಹನರು ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದ ಬಳಿಕ ಸಭೆ ಮುಕ್ತಾಯವಾಯಿತು.

ಕರ್ನಾಟಕದ ಸುಪ್ರಸಿದ್ಧ

ಬರಹಗಾರ್ತಿಯರಲ್ಲೊಬ್ಬರಾದ

ಸರಸ್ವತಿಬಾಯಿ ರಾಜವಾಡೆ

(ಗಿರಿಬಾಲೆ)ಯವರ ಅಮೂಲ್ಯ ಕೃತಿಗಳು

ಕದಂಬ

(12 ಕತೆಗಳ ಸಂಗ್ರಹ)

ಬೆಲೆ ರೂ. 1—4—0

ಪ್ರಕಾಶ

(ಸೇಟ್ ಗೋವಿಂದದಾಸರ ನಾಟಕದ ಅನುವಾದ)

ಬೆಲೆ ರೂ. 2—0—0

ಆಹುತಿ ಇತ್ಯಾದಿ ಕಥೆಗಳು

(ಕಥಾಸಂಗ್ರಹ)

ಬೆಲೆ ರೂ. 0—12—0

ಪುಣ್ಯಫಲ

(ನೀಳ್ಗತೆ)

ಬೆಲೆ ರೂ. 0—3—0

ಉಡುಪಿಯ

ಬರಹಗಾರ್ತಿಯರಲ್ಲೊಬ್ಬರಾದ

ಮಟ್ಪಾಡಿ ಕಮಲಾಕ್ಷಿಯವರ

ವತ್ಸಲಾ

(ಸುರಸ ಕಾದಂಬರಿ)

ಬೆಲೆ ರೂ. 0—8—0

ಪ್ರತಿಗಳಿಗೆ:

ನವಭಾರತ ಬುಕ್ ಡಿಪೊ, ಉಡುಪಿ.

ರಸನಿಮಿಷ

ಊರಿನಲ್ಲಿ ಬೆಲ್ಲ ಮಾಯವಾಗಿದೆ.

—ಸಕ್ಕರೆಯ ತಂಗಿ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ.

೦೦೦೦

ಇನ್ನು ತೆಂಗಿನಕಾಯಿಯೂ ಮಾಯವಾಗುವುದಂತೆ

—ಕಲ್ಪವೃಕ್ಷವು ಕಲ್ಪನಾವೃಕ್ಷವಾಗುವುದೆ?

೦೦೦೦

"ಲೋಕದಲ್ಲಿ ಸುಭಿಕ್ಷೆ ಏರ್ಪಡಿಸುವುದೇ ನಮ್ಮ ಧ್ಯೇಯ" (ನಾಯಕರ ಭಾಷಣದಿಂದ ಉದ್ಧೃತ ಅಂಶ)

—ನಾವು ಭಿಕ್ಷೆ ಎತ್ತಿದರೂ, ಚಿಂತಿಲ್ಲ ಲೋಕ ಕಲ್ಯಾಣವಾದರಾಯಿತು.

೦೦೦೦

ನಮಗೆ ಬೇಕಾದವರು ಸಪರಿವಾರರಾಗಿ ಟಿಬೆಟಿಗೆ ಬಂದಿದ್ದಾರಂತೆ. (ನಾರ್ತ)

—ಇನ್ನು ಬೇಡಾದವರಾದರು.

೦೦೦೦

ಭಾರತದ ಪರರಾಷ್ಟ್ರೀಯ ಧೋರಣೆ ಪಕ್ಷಿಯಂತೆ ಅತೀತಕ್ಕೆ ಹಾರುವುದಿಲ್ಲ ತಾನೆ?

೦೦೦೦

ಟಿಬೆಟನಲ್ಲಿ ಶಾಂತಿಸ್ಥಾಪನೆ ಆಗಬೇಕೆಂದು ಕಲಕತ್ತದಲ್ಲಿ ಲಾಮಾ ಗುರುಗಳು ಕೊಂಬು ಕಹಳೆ ಇತ್ಯಾದಿ ವಾದ್ಯೋಪೇತರಾಗಿಯೂ, ಪುರಾಣ ಪಾರಾಯಣಯುತರಾಗಿಯೂ ಮೆರವಣಿಗೆ ಎತ್ತಿದರಂತೆ

—ಗಾಯವೊತ್ತಟ್ಟು, ಮದ್ದೊತ್ತಟ್ಟು.

೦೦೦೦

ಕಮ್ಯೂನಿಸ್ಟರು 'ಜಗತ್ತಿನ ಮೋಡಿ'ನಲ್ಲಿದ್ದಾರೆ

—ನಾವು ಮೋಡದಲ್ಲಿದ್ದೇವೆ.

೦೦೦೦

ಬರ್ನಾರ್ಡ್‌ಷಾ ಹಲವು ವರುಷ ಹಿಂದೆ 'ದೇವರನ್ನರಸಿಕೊಂಡು ಹೋದ ಕರಿಹುಡುಗಿ' ಎಂಬ ಒಂದು ಕಥೆ ಬರೆದಿದ್ದರು.

—ಈಗ ತಾವೇ ಪ್ರತ್ಯಕ್ಷಾನುಭವಕ್ಕೆ ತೆರಳಿದ್ದಾರೆ.

೦೦೦೦

ನಮ್ಮ ಸರಕಾರ ಕೃತಕ ಕಲ್ಲೆಣ್ಣೆ ತಯಾರಿಸಲು ಒಂದು ಕಾರ್ಖಾನೆ ತೆರೆಯುವುದು.

—ಇದೇ ಮಾದರಿಯಲ್ಲಿ ಸ್ವಲ್ಪ ಮುಂಬರಿದು ಕೃತಕ ಅಕ್ಕಿ, ಕೃತಕ ಬೆಲ್ಲ, ಎಣ್ಣೆ ಹಾಗೂ ಕೃತಕ ಹೊಟ್ಟೆ ಮೊದಲಾದ ಜೀರ್ಣಾಂಗಗಳನ್ನೂ ತಯಾರಿಸುವಂತಾದರೆ ನಮ್ಮ ಡಾಲರು ಸಮಸ್ಯೆ ಸುರಳೀತವಾಗುವುದು, ಜನಸಂಖ್ಯೆಯ ಸಮಸ್ಯೆಯೂ ಪರಿಹಾರಕ್ಕೆ ಬರುವುದು.

೦೦೦೦

ನಮ್ಮ ವಿದೇಶಿಯ ಧೋರಣೆಯನ್ನು ಕೆಲವರು ತ್ರಿಶಂಕು ಧೋರಣೆ ಎನ್ನುತ್ತಾರೆ.

—ಸರಿ. ಅತ್ತ ಜಗತ್ತಿನ ಅತ್ಯಂತ ಪ್ರತಿಗಾಮಿ ರಾಷ್ಟ್ರವಾದ ಪಾಕಿಸ್ತಾನ; ಇತ್ತ ಭಯಂಕರ ಪುರೋಗಾಮಿ ಪಕ್ಷಿಯಾದ ಸಾಮ್ಯವಾದೀ ದೇಶಿಗಳು, ನಡುವೆ ನಾವು.

೦೦೦೦

ಬೇರೆ ಕೆಲವರು ಇದೇ ಧೋರಣೆಗೆ ತ್ರಿಶಂಕು ಧೋರಣೆ ಎನ್ನುವರು,

—ಯುಕ್ತ ರಾಷ್ಟ್ರವನ್ನು (U. S. A.) ಬಲಪಡಿಸಿದೆಯೆ ಯು. ರಾ. ಸಂಘ (U.N.O.) ವನ್ನು ಬಲಪಡಿಸಬೇಕಲ್ಲಾ?— ಶಂಕೆ ನಂಬ್ರ ೧.

—ಪಶ್ಚಿಮ ದಿಗಂತದ ಚೆಲುವನ್ನವಲೋಕಿಸುತ್ತಾ ಅದರಲ್ಲೇ ತನ್ಮಯರಾಗುವುದೊ —ಶಂಕೆ ನಂಬ್ರ ಎರಡು

—ಅಥವಾ ಅದಕ್ಕೂ ದೂರದಲ್ಲಿರುವ ನಕ್ಷತ್ರಗಳ ಕಲ್ಪನೆಯಲ್ಲಿ ,ತಲ್ಲೀನವಾಗಿರುವೆ?

೦೦೦೦

ಊರಿನ ಕರ್ನಾಟಕ ಸಂಘದವರು ತೂಕಡಿಸುತ್ತಿದ್ದಾರೆಯೋ? (ಒಬ್ಬರು ಕಾಸು ಕದಡ ಹಿತೈಷಿಗಳ ಪ್ರಶ್ನೆ)

—ಹೌದು ಸ್ವಾಮೀ, ನಿಷ್ಠೆ ಕೆಟ್ಟಿದ್ದಾರೊನ್ನೆ.

೦೦೦೦

ಒಂದೇ ಕರ್ನಾಟಕ!
ಇಂದೇ ಕರ್ನಾಟಕ!!
ಎಂದೇ ಕರ್ನಾಟಕ!!!
ಮುಂದೇ ಕರ್ನಾಟಕ!!!!

(ಪ್ರಗತಿಶೀಲ ಕವಿ

ಅರ್ಥ:- ಇಂದೇ ಕರ್ನಾಟಕ ಒಂದಾದ ಮಾತ್ರ ಅದಕ್ಕೆ ಕರ್ನಾಟಕವೆಂದೂ, ಅದು ಮುಂದಾಗಿದೆ ಎಂದೂ ತಿಳಿಯಲು ಅಸ್ಪದವುಂಟು

ವಿವರ:- ಪ್ರಗತಿಶೀಲತ್ವ ಎಲ್ಲಿದೆ ಎಂದರೆ (೧) ಕರ್ನಾಟಕ 'ಣ' ಬಿಟ್ಟು 'ನ'ವಾದಿಯಾಗಿದ್ದಾನೆ ಈ ಕವಿ. (೨) 'ಒಂದೇ' ಇತ್ಯಾದಿ ಪ್ರಾಸೋಕ್ತರಾಗಿದ್ದರೂ, ಅರ್ಥ ಭಂಗವಾಗಿದೆ. (೩) ಅರ್ಥಭಂಗತ್ವವೇ ಪ್ರಗತಿಯ ಸಲ್ಲಕ್ಷಣವಾದುದರಿಂದ ಇದು ಪ್ರಗತಿಶೀಲ ಕವಿ ಅಲ್ಲದೆ ಒಂದು, ಎರಡು, ಮೂರು, ನಾಲ್ಕು ಆಶ್ಚರ್ಯ ಚಿಹ್ನೆಗಳು ಓದುಗರು ಆಶ್ಚರ್ಯಪಡುವಂತೆ ಸಹಾಯವಾಗುವುವು.

—ಕು. ಶ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 3—11—1950ರಿಂದ

ಇಡೀ ಭಾರತಕ್ಕೇನೆ ಒಂದು ಭವಿಷ್ಯ ಸೂಚಿಸಿ ಸಂದರ್ಭ ಬಂದಾಗ ಹೋಲಿವುಡ್ಡಿನ ಉತ್ತಮೋತ್ತಮ ಚಿತ್ರಗಳೊಂದಿಗೆ ಪ್ರತಿಸ್ಪರ್ಧಿಸಲೂ ಅರ್ಹತೆ ಪಡೆದ

ಮೆಹಬೂಬರ

ಅಂದಾಜ್

ನರ್ಗಿಸ್, ರಾಜಕಪೂರ್, ದಿಲೀಪ್, ಕುಕ್ಕು, ವಿ. ಎಚ್. ದೇಸಾಯಿ ಮೊದಲಾದವರು.



Approved from by the Govt. of Mysore
Certificated by the Agent of the Govt of Cylone & Indian.

ಸ್ವೀಕಾರ

ತೋರಣ.

ಗುಲಾಬಿ.

ಎರಡೂ ಕಥಾಸಂಗ್ರಹಗಳು, ಸಂಪಾದಕರು–ಶ್ರೀ ಟಿ ಮಹಾಬಲೇಶ್ವರ ಭಟ್, ಪ್ರಕಾಶಕರು–ಜಲಂಧರ ಪ್ರಕಟನಾಲಯ, ಸಾಗರ, ಬೆಲೆ ಅನುಕ್ರಮವಾಗಿ ರೂ. 2-0-0 ಮತ್ತು 0-12-0.

ಸರ್ವಜ್ಞ ವಚನಗಳು—ಪ್ರಕಾಶಕರು ಶ್ರೀ ಪ. ಅ. ಉಪಾಧ್ಯಾಯರು, ಉಪಾಧ್ಯಾಯ ಪ್ರಕಟನಾಲಯ, ಚಿಕ್ಕ ಪೇಟೆ, ಬೆಂಗಳೂರು ನಗರ. ಬೆಲೆ 0-6-0

Speeches by Netaji Subhas Chandra Bose:–ಪ್ರಕಾಶಕರು ಆಜಾದ್ ಪಬ್ಲಿಕೇಶನ್ಸ್ ಬೆಂಗಳೂರು. ಬೆಲೆ 0-12-0

ಹಿಂದೀ ಪ್ರಾರಂಭಿಕ ಶಿಕ್ಷೆ–ಬರೆದವರು ಶ್ರೀ. ಟಿ. ಕೃಷ್ಣಸ್ವಾಮಿ, ಪ್ರಕಾಶಕರು–ಭಾಗ್ಯೋದಯ ಪ್ರಕಾಶನ; ಜಬ್ಬಲ್‌ಪುರ (C. P.) ಹಿಂದೀ ಕಲಿಯುವವರಿಗೆ ಕೈಗನ್ನಡಿ; ಬೆಲೆ 0-10-0

ಹಣ್ಣು ಕಾಯಿ (ಕವನ ಸಂಗ್ರಹ) ಲೇಖಕರು 'ತಿರುಕ' ಪ್ರಕಾಶಕರು–ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ ಪೋಸ್ಟ್, ಹೊಳಲ್ಕೆರೆ ತಾಲೂಕು. ಬೆಲೆ 1-0-0

ತರಕಾರಿ ಮತ್ತು ಅವುಗಳನ್ನು ಬೆಳೆಯುವ ಬಗೆ– ಗ್ರಂಥಕರ್ತರು ಶ್ರೀ. ಸಿ. ವಿ. ರಾವ್. ವಿವರಗಳಿಗೆ—ಅತ್ರೇಯ ಜನರಲ್ ಏಜನ್ಸಿ, 34 ಸರಸ್ವತಿ ಬಿಲ್ಡಿಂಗ್ಸ್, ನರಸಿಂಹರಾಜ ರಸ್ತೆ, ಬೆಂಗಳೂರು ನಗರ ಬೆಲೆ ರೂ 2-0-0

ಬಾಲ ರಾಮಾಯಣವು–ರಚಯಿತ ಶ್ರೀ ಕರಿಚೇಡು ಹೇಮಾದ್ರಿ ಸತ್ಯನಾರಾಯಣ, ಪ್ರಕಾಶಕರು ಶ್ರೀ. ನೇರಂಬಳ್ಳಿ ಸೀತಾರಾಮಾಚಾರ್ಯರು, ಆಲೂರು (ಬಳ್ಳಾರಿ)

ಆತ್ಮ ವಿಚಾರ (ನೂತನ ಮಾಸ ಪತ್ರಿಕೆ) ಸಂಪಾದಕರು–ಶ್ರೀ. ಎಂ. ಎಲ್. ನಾಗಣ್ಣನವರು, ಆತ್ಮ ವಿಚಾರ ಮಂದಿರ, ಮೈಸೂರು.

ಹೃದಯವೀಣೆ (ಕವನಗಳು) ಬರೆದವರು: ಅಡಿಬಾಯಿ ರಾಮಣ್ಣ ಶೆಟ್ಟಿ, ಧರ್ಮಸ್ಥಳ, ಬೆಲೆ ರೂ. 1-0 0.

ಪ್ರಾಂತವಾದ ಬರೆದವರು: ಎಸ್. ಎಂ. ಹುನಸಾಳ, ಎಂ. ಎ , ಬಿ. ಟಿ. ಮಾರಾಟಗಾರರು–ಶಿವಪೂರ ಬ್ರದರ್ಸ್, ಧಾರವಾಡ. ಬೆಲೆ ರೂ. 1-0-0.

ಹಿಂದೂ ಕೋಡ್ ಮಸೂದೆ(ಅದರ ಹಿನ್ನೆಲೆ ಹಾಗೂ ವಿವರಗಳು) ಬರೆದವರು: ಐರಣಿ ಶ್ರೀನಿವಾಸ, ಬಿ.ಎ (ಆನರ್ಸ್) ಪ್ರಕಾಶಕರು–ಪೂರ್ಣಿಮಾ ಪ್ರಕಾಶನ, ಮುಂಬಯಿ 14, ಬೆಲೆ ರೂ. 0-8-0.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD

ಹುಳು ಕಡ್ಡಿ ಮುದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,

Moolky, S. K.

ಮಂಗಳೂರು

ಜಿಲ್ಲಾ ವಾಣಿಜ್ಯ ಸಂಘದ ಕಾರ್ಯಾಲಯದಲ್ಲಿ–ಮದ್ರಾಸು ಸಂಸ್ಥಾನದ ಪೋಸ್ಟ್‌ಮಾಸ್ಟರ್ ಜನರಲ್ ಶ್ರೀ ಸಿ. ವಿ. ಕನ್ನಿಂಘ್ಯಾಮಿಗೆ ವಾಣಿಜ್ಯ ಸಂಘದವರು ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಟಪ್ಪಾಲು ಖಾತೆಯ ಕಾರ್ಯಗಳಲ್ಲಿ ಕೆಲವು ಸುಧಾರಣೆಗಳಾಗಬೇಕೆಂದೂ ಜಿಲ್ಲೆಯ ಇತರ ಕೇಂದ್ರಗಳ ಪರವಾದ ಕೇಳಿಕೆಗಳು ಪುರಸ್ಕರಿಸಬೇಕೆಂದೂ ಕೇಳಲಾಗಿತ್ತು.

ಪತ್ರಿಕಾ ಪರಿಷತ್ತು—ಜಿಲ್ಲಾ ಕಲೆಕ್ಟರರ ಪರಿಷತ್ತಿನಲ್ಲಿ ಸೂಚಿಸಲಾದ ವಿಷಯಗಳು:- ಹೊಸಬ ಬೆಳೆಯುವ ಯೋಜನೆಯಂತೆ 1950–51ನೆ ವರ್ಷದ ಬಗ್ಗೆ ಜಿಲ್ಲೆಯಲ್ಲಿ ಎಪ್ಪತ್ತೈದು ಸಾವಿರ ರೂಪಾಯಿ ಸಹಾಯ ಧನವಾಗಿ ಹಂಚಲಾಗಿದೆ. ಕೆರೆ ಸುಧಾರಣೆ ಯೋಜನೆಯಂತೆ ಈ ತನಕ ಒಂದೂವರೆ ಲಕ್ಷ ರೂಪಾಯಿ ಮಂಜೂರಾಗಿದೆ. ಸುಧಾರಿತ ರೀತಿಯಲ್ಲಿ ಆಹಾರ ಬೆಳೆಸುವ ವಿಷಯ ತರಬೇತಿ ಕ್ಲಾಸುಗಳನ್ನು ಮಾಣಿ, ಅಡಮಾರು, ಕಾಪು, ಬ್ರಹ್ಮಾವರ, ಸಾಲಿಗ್ರಾಮ, ಕಾರ್ಕಳ, ಬೆಳ್ಮಣ್ಣು, ಅಜೆಕಾರು ಮತ್ತು ಮೂಡಬಿದ್ರೆಗಳಲ್ಲಿ ನಡೆಸಲಾಗಿದೆ. ಮೈಸೂರಿನ ಕೆಲವು ಜಿಲ್ಲೆಗಳಲ್ಲಿ ಜಾನುವಾರು ರೋಗವಿರುವುದರಿಂದ ಸೀತಾನದಿ ಜಾನುವಾರು ಸಂತೆಯನ್ನು ಮುಂದರಿಸಿದೆಯಾದರೂ ಅಲ್ಲಿಂದ ಸಂತೆ ಜರಗುವುದು ವೆಟರ್ನರಿ ಇಲಾಖೆಯವರು ತಕ್ಕ ಪ್ರತಿಬಂಧಕ ವ್ಯವಸ್ಥೆ ಕೈಕೊಳ್ಳುವರು.

ಜಿಲ್ಲೆಗೆ ಒಕ್ಕಲುತನ ಮಸೂದೆ ಬೇಕು— ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಕಳೆದ ತಾ 29ರಲ್ಲಿ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕಿನ ಕೆಲವು ಹಳ್ಳಿಗಳಿಗೆ ಅನ್ವಯಿಸಲಿರುವ ಮಲಬಾರು ಒಕ್ಕಲುತನ ಮಸೂದೆಯನ್ನು ಆ ಹಳ್ಳಿಗಳಿಗೆ ಅನ್ವಯಿಸಬಾರದೆಂದೂ ಇಡೀ ಜಿಲ್ಲೆಗೇನೇ ಅನ್ವಯಿಸುವಂತಹ ಮಸೂದೆಯೊಂದನ್ನು ತರಬೇಕೆಂದೂ ಕೇಳಿಕೊಳ್ಳುವ ನಿರ್ಣಯವಾಯಿತು.

ಮುನಿಸಿಪಲ್ ಮೀಟಿಂಗು– ಕಳೆದ ತಾ 28ರಲ್ಲಿ ಶ್ರೀ ಬಿ. ಗಂಗಾಧರದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಇಂಜಿನಿಯರಿಂಗ್ ಕಚೇರಿಗೆ ಬಿದಿರಿನತಟ್ಟಿ ಹಾಕಲು ರೂಪಾಯಿ 140/-, ಗೋ ಆಸ್ಪತ್ರೆಯ ಬಳಿ ವಿದ್ಯುದ್ದೀಪದ ಬಲ್ಬು ಒಂದರ ಬಗ್ಗೆ ರೂ. 75/-, ದ. ಕ ಜಿಲ್ಲಾ ಹರಿಜನ ಸೇವಾ ಸಂಘಕ್ಕೆ ರೂ 300/- ಮಂಜೂರು ಮಾಡಲಾಯಿತು. ನೀರಾವರಿ ಮತ್ತು ಡ್ರೈನೇಜು ತೆರಿಗೆಯನ್ನು ಈಗ ವಸೂಲಾಗುವ ಭೂಮಿ ತೆರಿಗೆಯ 2½ರಷ್ಟೆಂದು ವಿಧಿಸಲಾಯಿತು. ಜೆಪ್ಪು ಮಾರ್ಕೆಟಿನಲ್ಲಿ ಮಾಂಸ ಮಾರುವ ಶಾಖೆಯನ್ನು ತೆರೆಯುವುದೆಂದೂ ಅದನ್ನು ವಿಲಂಬ ಮಾಡಬೇಕೆಂದೂ ನಿರ್ಣಯಿಸಲಾಯಿತು.

ವರದಿಗಳು

ಸ್ವಾಮಿ ಶ್ರದ್ಧಾನಂದ ಸೇವಾಶ್ರಮ, ಮಂಗಳೂರು; ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿಗಳ ಗೋಪಾಲ ಭೇಷಜಾಶ್ರಮ, ಕದ್ರಿ, ಮಂಗಳೂರು; ವಿದ್ಯಾದಾಯಿನಿ ಹೈಸ್ಕೂಲ್, ಸುರತ್ಕಲ್; ಶ್ರೀ ರಜಕಸಂಘ, ಮುಂಬಯಿ; ಮೊಗವೀರ ಯುವಕ ಸಂಘ, ಮುಂಬಯಿ; ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ, ಮುಂಬಯಿ ಬಂಟರ ಯಾನೆ ನಾಡವರ ಸಂಘದಿಂದ ನಡೆಸಲ್ಪಡುತ್ತಿರುವ ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್ (2-4-50ರಲ್ಲಿ ಜರಗಿದ ರಜತೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ್ದು); ಕಲಾವೃಂದ ಉಡುಪಿ; ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು, ಬಂಟರ ಯಾನೆ ನಾಡವರ ಸಂಘ, ಮುಂಬಯಿ; ಗ್ರಾಮಸ್ಥರ ಬೋಧಿನಿ ಮತ್ತು ಸಂಚಾರಿ, ದಿ ಬೊಂಬೇ ಯೂನಿಯನ್ ಆಫ್ ಜರ್ನಲಿಸ್ಟ್ಸ್ ಇವುಗಳ ಅಭಿವೃದ್ಧಿ ಸೂಚಕ ವರದಿಗಳು ನಮ್ಮ ಕೈಸೇರಿವೆ.

ಶ್ರೀ ಸಿ ಕೆ. ವೆಂಕಟರಾಮಯ್ಯನವರು—ಕಳೆದ ತಾ. 27ರಲ್ಲಿ ಮಂಗಳೂರಿಗೆ ಬಂದವರು ಬಿ. ಟಿ. ಕಾಲೇಜಿನ ಆಶ್ರಯದಲ್ಲಿ ಭಾಷಾಕವಿಯ ಕುರಿತು ಭಾಷಣಮಾಡಿದರು. ಅಂದಿನ ಸಭೆಗೆ ಶ್ರೀ ಸೀತಾರಾಮಾಚಾರ್ಯರು ಅಧ್ಯಕ್ಷರಾಗಿದ್ದರು

ಕವಿರನ್ನ ಜಯಂತಿಯು—ಕಳೆದ ತಾ. 28ರಲ್ಲಿ ಮಂಗಳೂರಿನ ಗವರ್ನಮೆಂಟ್ ಕಾಲೇಜಿನ ಕರ್ನಾಟಕ ಸಭೆಯ ಆಶ್ರಯದಲ್ಲಿ ಮದ್ರಾಸು ಆಸ್ಥಾನಕವಿ ಶ್ರೀ ಎಮ್. ಗೋವಿಂದ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕ ಸಭೆಯ ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥನವರು ಸ್ವಾಗತ ಭಾಷಣಮಾಡಿದ ತರುವಾಯ ಶ್ರೀ ಕೆ. ಪರಮೇಶ್ವರಯ್ಯನವರು ಅಧ್ಯಕ್ಷರ ಮತ್ತು ಅತಿಥಿಗಳ ಪರಿಚಯ ಮಾಡಿದರು. ಶ್ರೀ ಸಿ. ಕೆ. ವೆಂಕಟರಾಮಯ್ಯನವರು ತಮ್ಮ ಭಾಷಣದಲ್ಲಿ ರನ್ನನು ಚಿತ್ರಿಸಿದ ಕೌರವನ ಪಾತ್ರದ ವಿವೇಚನೆ ಮಾಡಿದರು.

ಕವಿ ಕಾಳಿದಾಸ ಜಯಂತಿಯು– ಅದೇ ದಿ. ಕಾಲೇಜಿನ ಸಂಸ್ಕೃತ ಸಭೆಯ ನೇತೃತ್ವದಲ್ಲಿ ಪ್ರಿನ್ಸಿಪಾಲ್ ಎಮ್. ಎ. ಹಕಿಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಧಾನ ಭಾಷಣಕಾರರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಕಾಳಿದಾಸನ ಕೃತಿಗಳ ಕುರಿತು ಮಾತನಾಡುತ್ತಾ ಹೆಣ್ಣುಗಂಡಿನ ಪ್ರೇಮವನ್ನು ಕಾಳಿದಾಸನು ಚಿತ್ರಿಸಿದಂತೆ ಮತ್ತಾರಿಂದಲೂ ಚಿತ್ರಿಸಲು ಸಾಧ್ಯವಿಲ್ಲವೆಂಬುದನ್ನು ತಿಳಿಸಿದ್ದಲ್ಲದೆ ಪಾಶ್ಚಾತ್ಯ ಸಾಹಿತ್ಯಗಳಲ್ಲಿ ದುರಂತ ನಾಟಕಗಳಿಲ್ಲದಿರಲು ಕಾರಣವು ನಮ್ಮ ಜೀವನದ ದೃಷ್ಟಿಕೋನವೇ ಮುಖ್ಯವೆಂಬಲ್ಲದೆ ಭಾರತೀಯರು ಸಾವಿಗೆ ಹೆದರುವ ಹೇಡಿಗಳಿದ್ದಿಲ್ಲವೆಂದರು. ಕೊನೆಯಲ್ಲಿ ಶಾಕುಂತಲ ಮುಂತಾದ ನಾಟಕಗಳನ್ನು ಬರೆದ ಕವಿ ಮಹಾ ದಾರ್ಶನಿಕನೆಂದೂ, ಮಹಾ ಋಷಿಯೆಂದೂ ಸಾರಿ ತನ್ನ ಭಕ್ತಿಯನ್ನು ಸಮರ್ಪಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂಗ್ಲಿಷು ಕವಿಗಳನ್ನು ಒಂದಿಷ್ಟು ಹೊಗಳಿ ಕಾಳಿದಾಸನನ್ನು ಶ್ಲಾಘಿಸಿದರು.

ಸಂಸ್ಕೃತಿಯ ಸೇವೆ— ಈ ವಿಚಾರವಾಗಿ ಶ್ರೀ ಸಿ ಕೆ. ವೆಂಕಟರಾಮಯ್ಯನವರು ಕಳೆದ ತಾ. 29ರಲ್ಲಿ ಸಂಜೆ ದ. ಕ. ವಿದ್ಯಾರ್ಥಿ ಸಂಘದಲ್ಲಿ ಜರಗಿದ ಸಭೆಯಲ್ಲಿ ಮಾತನಾಡಿದರು. ಶ್ರೀ ಪಡುಕೋಣೆ ರಮಾನಂದರಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಸಿ ಕೆ ಯವರು ಮೊದಲು ಜೀವನಕ್ಕೆ ಯಾವುದು ತೇಜಸ್ಸನ್ನೂ ಮಾಧುರ್ಯವನ್ನೂ ಕೊಡುವುದೋ ಅದೇ ಸಂಸ್ಕೃತಿಯೆಂದು ತಿಳಿಸಿ ಅದೊಂದು ಹೂವಿನಂತಿದೆ ಎಂದರು. ನಾಗರಿಕತನದಿಂದ ಪೋಷಣೆಗೊಂಡ ಸಂಸ್ಕೃತಿಯು ನಮ್ಮ ದೇಹ, ಮನಸ್ಸು, ಹೃದಯ ಮತ್ತು ಆತ್ಮಗಳನ್ನು ಯಾವುದರಿಂದ, ಯಾವ ರೀತಿಯಲ್ಲಿ ವಿಕಾಸಗೊಳಿಸುತ್ತದೆಂಬುದನ್ನು ವಿವರಿಸಿದರು. ಭಾರತವು ಬೆಳೆಯಿಸಿಕೊಂಡು ಬಂದ ಶಾಸ್ತ್ರಗಳಲ್ಲಿ, ಕಲೆಗಳಲ್ಲಿ, ಆಚಾರಗಳಲ್ಲಿ ಹುದುಗಿದ್ದ ಸಂಸ್ಕೃತಿಯ ಕುರುಹನ್ನು ಎತ್ತಿ ತೋರಿಸಿದರು.

ಸದವ್ಯ ಸಹಕಾರಿ ಟೌನ್‌ಶಿಪ್ ಲಿಮಿಟೆಡ್—ಈ ಸಂಘದ ಡೈರೆಕ್ಟರರ ಸಭೆಯೊಂದು ಕಳೆದ ತಾ 22ರಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಜೆ. ಸಿ. ರಾಯನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೊಂದೇಲ್ ಕಾನ್ವೆಂಟಿನ ಎದುರುಗಡೆ ಕೊಂಚಾಡಿ ರಸ್ತೆಯ ಕಿನಾರೆ 50 ಎಕ್ರೆ ಸ್ಥಳವನ್ನು ಸಂಘದ ವಶದಲ್ಲಿ ಪಡೆಕೊಂಡು ಗೃಹ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕೆಂದು ನಿರ್ಧಾರವಾಯಿತು. ಇದಕ್ಕೆ ಸಾಧಾರಣ ರೂ. 35,000/- ವೆಚ್ಚ ಬೀಳಬಹುದೆಂದು ಅಂದಾಜು ಮಾಡಲಾಗಿದೆ. ಸಂಘದ ಸದಸ್ಯರಾಗಿ ಹೊಸಯೋಜನೆಯ ಸವಲತ್ತುಗಳನ್ನು ಪಡೆಯಬೇಕೆಂದಿರುವವರು ಹೆಚ್ಚಿನ ಮಾಹಿತಿಗಾಗಿ ಮಂಗಳೂರು ಶಾಖಾ ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರವರಿಗೆ ಬರೆಕೊಳ್ಳಬಹುದಾಗಿದೆ.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೊಳದ್ಕಲ್ ವೆಂಕಟರಾಯರು, ಎಲ್ ಐ ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಮದ್ದಿನ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ 2—0—0.
ವಿ ಪಿ ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತವೆ,

ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಜನಮತ

ಕುಂದಾಪುರ ಉಡ್ಪಿ ಮೂಲ್ಕಿ ಮಂಗಳೂರು ಕರಾವಳಿ ಲೈನಿನ ಪ್ರಯಾಣಿಕರ ದುರವಸ್ಥೆ

ಇತ್ತಲಾಗಿ ಕೆಲವು ವರುಷಗಳಿಂದ ಕುಂದಾಪುರ, ಉಡ್ಪಿ, ಮೂಲ್ಕಿ, ಮಂಗಳೂರು ಕರಾವಳಿ ಲೈನಿನಲ್ಲಿರುವ ಹೊಳೆಗಳ ಕಡವುಗಳು ದಿನ ಹೋದ ಹಾಗೆ ಹೆಚ್ಚುತ್ತಾ ಹೆಚ್ಚುತ್ತಾ ಕಂಟ್ರಾಕ್ಟು ಆಗುವುದಲ್ಲದೆ ಕಮ್ಮಿಯಾದದ್ದೇ ಇಲ್ಲ. ಹಾಗೆ ಹೊಳೆ ಕಡವು ಹೆಚ್ಚಿಗೆಗೆ ಕಂಟ್ರಾಕ್ಟಾದರೂ ಪ್ರಯಾಣಿಕರಿಗೇನಾದರೂ ಅನುಕೂಲವಾಯಿತೇ? ಇಲ್ಲ. 3 ಪೈ ಇದ್ದ ಕಡವಿನ ದೋಣಿ ಚಾರ್ಜು ಈಗ 0-1-3ಗೆ ಬಂದು ನಿಂತಿದೆ. ಹಾಗೆಂತ ನೋಟೀಸು ಬೋರ್ಡಿನಲ್ಲಿ 0-1-0 ಎಂತಲೇ ಇದ್ದರೂ ದೋಣಿಗಾರರು 0-1-3 ವಸೂಲು ಮಾಡಿಯೇ ಬಿಡುತ್ತಾರೆ. ಕೇಳಿದರೆ 0-0-3 [ಅರ್ಧ ಓಡ] ಸವಾರಿ ದೋಣಿಯ ಚಾರ್ಜು ಎಂತ ಹೇಳುತ್ತಾರೆ. ಹಾಗಾದರೆ ಕಡವಿನ ದೋಣಿ ಎಲ್ಲಿ ಎಂದು ಕೇಳಿದರೆ ಅದು ಆಚೆ ದಡಕ್ಕೆ ಹೋಗಿಯದೆ; ಈಚೆ ಬರಲಿಕ್ಕೆ ಬಹಳ ತಡ ಉಂಟು ಇತ್ಯಾದಿ ಗಾಬರಿಪಡಿಸಿ ಸವಾರಿ ದೋಣಿಗೆ ಹತ್ತಿಸಿ ಬಿಡುತ್ತಾರೆ. ನಿಜವಾಗಿಯೂ ಕಡವಿನ ದೋಣಿ ಎಂಬುದೇ ಇಲ್ಲ. ಒಂದು ಜಂಗಲು ಮಾತ್ರವಿರುತ್ತದೆ. ಬಾಕಿ ಎಲ್ಲಾ ಸವಾರಿ ದೋಣಿಗಳೇ ಇರುವುದು. ಉದಿಯಾವರ ಹೊಳೆಯಲ್ಲಿ ಮಾತ್ರ ಒಂದು ಸ್ಟೀಮ್ ಲಾಂಚು ಉಂಟು. ಅದು ಯಾವಾಗಲೂ ಜನರನ್ನು ಆಚೆ ಈಚೆ ದಾಟಿಸುವುದೇ ತಿಳಿಯದು. ಒಟ್ಟಾರೆ ಇಂಥಾ ಅವಸ್ಥೆಯನ್ನು ಜನರು ನಿತ್ಯ ಅನುಭವಿಸುತ್ತಿದ್ದರೂ ಸರಕಾರದವರಾಗಲೀ, ಇತರ ಸ್ಥಳೀಯ ಸರಕಾರಗಳಾಗಲೀ ಇತ್ತ ಕಡೆ ಲಕ್ಷ್ಯವಿಟ್ಟಂತೆ ತೋರುವುದಿಲ್ಲ. ಅನೇಕ ವರುಷಗಳ ಹಿಂದೆ ಒಂದೆರಡು ಕಡವಿನ ದೋಣಿಗಳಾದರೂ ಇರುತ್ತಿದ್ದವು. ಭರ್ತಿಯಾದ ಹಾಗೆ ದಿವಸಕ್ಕೆ 2-3 ಸರ್ತಿಯಾದರೂ ಜನರನ್ನು ಈಚೆಯಿಂದ ಆಚೆ ದಾಟಿಸುತಿದ್ದವು. ಈಗ 10-12 ದೋಣಿಗಳಿದ್ದರೂ, ಎಲ್ಲವೂ ಸವಾರಿ ದೋಣಿಗಳೇ. ಜಂಗಲು ಒಂದಿದ್ದರೆ ಅದು ಸರಕಾರದ ದೊಡ್ಡ ಹುದ್ದೇದಾರರ ಮತ್ತು ದೊಡ್ಡ ಸಾಹುಕಾರರ, ಜಮೀನ್ದಾರರ ಕಾರುಗಳನ್ನೋ ಗಾಡಿ ಎತ್ತುಗಳನ್ನೋ ಇತರ ಜಾನುವಾರುಗಳನ್ನೋ ದಾಟಿಸಲಿಕ್ಕಾಯಿತು. ಈ ಜಂಗಲು ಮತ್ತು ದೋಣಿಗಳು ಸರಿಯಾದ ಮಳೆಗಾಲದಲ್ಲಿ ಮಾತ್ರ ಸೀದಾ ದಾಟಿಕೊಂಡು ಹೋಗಬಹುದಾಗುತ್ತದೆ. ಬೇಸಗೆಯಲ್ಲಿ ನೀರಿನ ಇಳಿತಕ್ಕೆ ಒಂದು ಮೈಲು ಸುತ್ತಿಕೊಂಡು ಉದಿಯಾವರ ಕಲ್ಯಾಣಪುರ ಹೊಳೆ ದಾಟುವ ಸಂಗತಿ ಯಾರಿಗೆ ಬೇಕು? 1-2 ಘಂಟೆ ಕಾದು ಆಚೆ-ಈಚೆ ಹೋಗಬೇಕಾಗುತ್ತದೆ. ಇದನ್ನೆಲ್ಲಾ ನೋಡಿದರೆ ಸರಕಾರಕ್ಕೆ ಈ ಕಡವಿನ ಹಣದಲ್ಲಿ ಮಾತ್ರ ಲಕ್ಷ್ಯವಲ್ಲದೆ, ಪ್ರಯಾಣಿಕರ ಅನುಕೂಲತೆಯ ಕಡೆಗೆ ವಿಚಾರವಿದ್ದಂತೆ ತೋರುವುದಿಲ್ಲ. ಆದ್ದರಿಂದ ಒಂದೋ ಈ ಎಲ್ಲಾ ಕಡವುಗಳಾಗಿ ಕೂಡಲೇ ಸೇತುವೆಗಳ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಈ ಕಡವಿನ ಬಾಗಿಲಲ್ಲಿ ದೋಣಿ ಕಾಯುವ ಕಿರುಕುಳು ನಿವೃತ್ತಿಯಾಗಿ ಬಂದ ಕೂಡಲೇ ಸರಿಯಾಗಿ ಚಾರ್ಜಿನಂತೆ ದೋಣಿ ದಾಟಿಸುವ ಏರ್ಪಾಡಾಗಬೇಕು. ಕಡವಿನ ಬಾಗಿಲಲ್ಲಿ ಸರಿಯಾದ ಕಡವಿನ ದೋಣಿ ಯಾವುದು? ಎಷ್ಟು ಸಮಯಕ್ಕೆ ಬಿಡುವುದು? ಏನೆಂತ ಗೊತ್ತಾಗಬೇಕು. ರಾತ್ರಿ ಕಾಲದಲ್ಲಿ ಅತ್ಯಗತ್ಯ ಸಂದರ್ಭದಲ್ಲಿ ಕಾರು, ಗಾಡಿ, ಸೈಕಲುಗಳು ಬಂದರೆ ದಾಟಿಸುವ ವ್ಯವಸ್ಥೆಯಿರಬೇಕು. ಈ ಎಲ್ಲಾ ಪ್ರಯಾಣಿಕರ ತೊಂದರೆಗಳನ್ನು ನಿವೃತ್ತಿಪಡಿಸುವಂತೆ ಸರಕಾರಕ್ಕೆ ತಿಳಿಸಲು ನಾವು "ಪ್ಯಾಸೆಂಜರ್ಸ್ ಎಸೋಸಿಯೇಶನ"ವರನ್ನು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಇದಕ್ಕೆ ತಕ್ಕ ನಿವೃತ್ತಿಯಾಗದಿದ್ದ ಸಂದರ್ಭದಲ್ಲಿ ಮುಂದಕ್ಕೆ ಮೋಟಾರು, ರೈಲು ಟಿಕೇಟುಗಳನ್ನು ಪಡಕೊಂಡು ಪ್ಯಾಸೆಂಜರರು ಆಫೀಸಿಗೆ ಹೋಗಿ ರೈಲು, ಮೋಟಾರುಗಳನ್ನು ವಿಚಾರಿಸಿದರೆ, ಸಮಯಕ್ಕೆ ಹೊರಡದಿದ್ದರೆ ಪ್ರತ್ಯೇಕ ರೈಲು, ಮೋಟಾರುಗಳಿಗೂ ಸಹಾ [ಅರ್ಧ ಓಡ] ಸವಾರಿ ಚಾರ್ಜು ಕೊಡುವ ಪ್ರಸಂಗ ಬರದೇನೋ ಎಂತ ಯೋಚನೆಯಾಗುತ್ತ ಇದ್ದರಿಂದ ಜನಗಳು ಅಗತ್ಯ ಇತ್ತ ಕಡೆ ಲಕ್ಷ್ಯಕೊಡಬೇಕಾಗಿ ನನ್ನ ಅಪೇಕ್ಷೆ.

—ಓರ್ವ ಪ್ರಯಾಣಿಕ

ಬ್ರಹ್ಮಾವರ ಕೋಓಪರೇಟಿವ್ ಸ್ಟೋರ್ಸಿನಲ್ಲಿ ಬೀಡಿ ಪ್ರಸಾರ

ಬ್ರಹ್ಮಾವರ, ಆಸುಪಾಸು ಗ್ರಾಮಗಳ ಜನಜೀವನದ ರೇಷನ್ ಸಾಮಾನುಗಳ ವಿತರಣೆಯಕ್ಕಾಗಿ ಮೇಲಿನ ಸ್ಟೋರಿನ ಶಾಖೆಗಳನ್ನು ತೆರೆದು ಜನೋಪಕಾರ ಕೈಗೊಂಡದ್ದು ಸಂತೋಷ ಸಂಗತಿ.

ಆದರೆ ಇತ್ತೀಚೆಗೆ ಕೆಲವು ಸಮಯದಿಂದ ಸದ್ರಿ ಸ್ಟೋರಿನ ಮತ್ತು ಶಾಖೆಗಳಲ್ಲಿ ರೇಶನ್ ಸಾಮಾನು ಪಡೆಯುವ ಪ್ರತಿ ಒಬ್ಬ ಹೆಂಗಸು ಗಂಡಸು ಕಡ್ಡಾಯವಾಗಿ 2-3-4-5 ವರೆಗೆ ಬೀಡಿಪ್ರಸಾದ ಪಡೆಯಬೇಕೆಂಬ ನಿಯಮವಿದೆ ಎಂಬುದನ್ನು ತಿಳಿದು ವಿಷಾದವಾಯಿತು. ದೇಶವು ಜಾಗ್ರತವಾಗಿ ನಾಗರಿಕತೆಯ ನಮ್ಮ ಸ್ಟೋರಿನಲ್ಲೂ, ಅದರ ಶಾಖೆಗಳಲ್ಲೂ ಬೀಡಿ ಪ್ರಚಾರವಾಗಿ ಕೆಮ್ಮಲು ಜಾಡ್ಯ ಹರಡಿಸುವ ಕಾರ್ಯ ಕೈಗೊಂಡದ್ದು ವಿಷಾದಕರ. ಸದ್ಯ ಇನ್ನೇನು ಪ್ರಚಾರಕ್ಕೆ ಸೋಲ್ ಏಜೆಂಟರಾಗುತ್ತಾರೋ ತಿಳಿಯದು. ಸ್ಟೋರಿನ ಅಧಿಕಾರಿವರ್ಗದಲ್ಲಿ ಓರ್ವ ಡಾಕ್ಟರರೇ ಇರುತ್ತಾ, ಕೆಮ್ಮಲು ಜಾಡ್ಯದಿಂದ ಜನರನ್ನು ಪೀಡಿಸುವ ಪ್ರಸಾರವಾಗುತ್ತಿರುವುದರ ಗುಟ್ಟೇನಿರಬಹುದು? ವಾಚಕರೇ ಊಹಿಸಿಕೊಳ್ಳಿರಿ.

ನಮ್ಮ ದೇಶವು ದುರಭ್ಯಾಸ, ದುಂದುಗಾರಿಕೆಗಳಿಂದ ದಾರಿದ್ರ್ಯ, ನಿರುದ್ಯೋಗ, ನಿಶ್ಶಕ್ತಿಯಿಂದ ಬಳಲುತ್ತಿರುವುದನ್ನು ತಪ್ಪಿಸಲು ಭಾರತ ಸರಕಾರವು ಮದ್ಯನಿಷೇಧ, ಬೀಡಿ, ಸಿಗರೇಟು, ಗಾಂಜಾ ನಿಷೇಧದ ಕಾಯ್ದೆ ಮಾಡುತ್ತಿದ್ದರೂ, ನಮ್ಮೂರಲ್ಲಿ ಪ್ರತಿಮನೆಯಲ್ಲೂ ಬೀಡಿ ರಾಶಿ ಬೀಳುತ್ತಿರುವುದು ಒಂದು ವಿಚಾರಣೀಯ ಸಂಗತಿ. ಸಮ್ಬಂಧಪಟ್ಟ ಸರಕಾರಿ ಅಧಿಕಾರಿಗಳಾದರೂ ತಮ್ಮ ದೃಷ್ಟಿಯನ್ನು ಇತ್ತ ತಿರುಗಿ ಈ ದುಶ್ಚಟ ದುರಭ್ಯಾಸಕ್ಕೆ ಬಲಿಬೀಳದಂತೆ ಬಡಜನರನ್ನು ರಕ್ಷಿಸಲೆಂದು ಹಾರೈಸುವ,

—'ಪುರನಿವಾಸಿ'

ಉಡ್ಪಿ ಡಿ. ಮುಂ. ಕೋರ್ಟಿನಲ್ಲಿ

O. P. No. 40/195[0]

ಮುತ್ತಮ್ಮ ದೇವದಾಸ್ ಕೂಡಾ

—ಅರ್ಜಿದಾರರು

ಮತ್ತು

ಎಡಕೆಲ್ ದೇವದಾಸ್ ಕೂಡಾ

—ಎದ್ರಿಯರು

1ನೇ ಅರ್ಜಿದಾರಳ ಮಗ, ವ, 2-3ನೇ ಅರ್ಜಿದಾರ್ರ ಮತ್ತು ಎದ್ರಿಯರ ಸಹೋದರ ಜಿ. ದೇವದಾಸನು ತಾ. 7-11-1948 ರ ಆ ಸಮಯ ಬೊಂಬಾಯಿಯಲ್ಲಿ ಮೃತಪಟ್ಟು ಅವನಿಗೆ ಬೊಂಬಾಯಿ ಟೆಲಿಫೋನ್ ಡಿಪಾರ್ಟ್‌ಮೆಂಟ್ ಆಫೀಸಿನಿಂದ ಬರತಕ್ಕ ಐವೇಜು ರೂ. 109-14-0ನ್ನು ವಸೂಲುಮಾಡುವ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮಾಡಿದ ಅರ್ಜಿಯು ತಾ. 25-11-1950ಕ್ಕೆ ಇರುತ್ತದೆ. ಈ ಬಾಬಿನಲ್ಲಿ ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿನ ಪೂರ್ವಾಹ್ನ 11 ಗಂಟೆಗೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರರ ಅಪೇಕ್ಷೆ ಮೇರೆಗೆ ಅರ್ಜಿಯನ್ನು ತೀರ್ಮಾನಿಸಲಾದೀತು ಎಂತ ಈ ಮೂಲಕ ಸಮಸ್ತರಿಗೂ ತಿಳುಹಿಸೋಣಾಗಿಯದೆ.

(ಕೋರ್ಟಿನ ಹುಕುಂ ಮೇರೆಗೆ)

U. B. Krishna Rao,
Advocate for the Petitione[r]
ಉಡ್ಪಿ ತಾ. 1-11-1950

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all keeps hair black and relieves head-ache etc.

REGD. TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ರಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಬೆಲೆಯಿಂದ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ,
ರಥಬೀದಿ, ಉಡುಪಿ.

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು,
ಡಬ್ಬಿ ಒಂದಕ್ಕೆ ರೂ. 2—0—0
ಏಜಂಟ್:—
ಶಾ ಕಂಪೆನಿ, ಮಂಗಳೂರು.

ವಾರ ಭವಿಷ್ಯ

ತಾರೀಖು 9-11-1950ರಿಂದ ತಾ. 15-11-1950ರ ವರೆಗೆ.

ಮೇಷ—ಕಳೆದ ಅನೇಕ ದಿನಗಳಿಂದಲೂ ಈ ವಾರವು ನಿಮಗೆ ಸುಖದಾಯಿಯಾಗಿ ಪರಿಣಮಿಸಲಿರುವುದು. ನಿಮ್ಮ ಆರೋಗ್ಯವು ಉತ್ತಮಗೊಳ್ಳುವದಲ್ಲದೆ ಆರ್ಥಿಕ ಭಾಗವು ಕೂಡಾ ತೃಪ್ತಿಕರವಾಗಿರುವದು. ಕೈಗೊಂಡ ಕಾರ್ಯಗಳಲ್ಲಿ ಬಹುತೇಕ ನೀವೇ ವಿಜಯಿಗಳಾಗುವಿರಾದರೂ ರಾಜಕೀಯ ಕ್ಷೇತ್ರದಲ್ಲಿ ಪರಾಭವ ಹೊಂದುವಿರಿ. ವಿನಾ ಕಾರಣ ಸ್ತ್ರೀಯರಿಂದ ಕಲಹ ಅನಿಷ್ಟ ಅಪವಾದಗಳು ಬರಬಹುದು. ತರುಣ ಜನರಿಗೂ ವೈದ್ಯವರ್ಗಕ್ಕೂ ವಣಿಗ್ ವೃಂದಕ್ಕೂ ಈ ವಾರವು ಅಷ್ಟೊಂದು ಉತ್ತಮವಾಗಲಾರದು. ತಾ. 9, 10, 15 ಈ ದಿನಗಳಲ್ಲಿ ಸುಖ ಮಿತ್ರ ಸಮಾಗಮ ವಿಜಯಗಳು ಲಭಿಸುವವು.

ವೃಷಭ—ಕೃಷ್ಣಪಕ್ಷದ ಚಂದ್ರಮನಂತೆ ದಿನೇ ದಿನೇ ನಿಮ್ಮ ಅದೃಷ್ಟವು ಕ್ಷೀಣದೆಶೆಯನ್ನೈದುತ್ತಿರುವುದು. ಪ್ರತೀಕಾರೋದ್ಯುಕ್ತರಾದ ವಿರೋಧಿಗಳಿಂದ ಧನಮಾನಗಳಿಗೆ ಬಹುತೇಕ ಧಕ್ಕೆಯುಂಟಾಗುವುದಲ್ಲದೆ ಹೆಚ್ಚಿನ ನಿಮ್ಮ ಕಾರ್ಯಗಳು ಅರ್ಧದಲ್ಲೇ ಕುಂಠಿತವಾಗಿ ನಿಲ್ಲುವವು. ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಮನೆಯು ದುಃಖದ ಬೀಡಾದೀತು. ದೇಹಾಲಸ್ಯದಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ಪೀಡಿತರಾದ ನಿಮಗೆ ವಾರಾದಿಯ 4ದಿನಗಳಲ್ಲಿ ಬಾಲ್ಯ ಸಖರ ಬೆಂಬಲದಿಂದಾಗಿ ಸ್ವಲ್ಪ ಮನಶ್ಶಾಂತಿ, ಕಾರ್ಯದಲ್ಲಿ ಜಯಲಾಭವೂ ಆದೀತು.

ಮಿಥುನ—ಸಾಂಸಾರಿಕ ತಾಪತ್ರಯದಿಂದ ಮುಕ್ತರಾಗುವಿರಿ ನೀವೀವಾರದಲ್ಲಿ. ಆದರೂ ಅರ್ಧಾಂಗಿಯು ಕೆಲವೊಮ್ಮೆ ಕಲಹ ಮಾಡುವಳು. ಸದುದ್ಯಮ ಪ್ರವೃತ್ತರಿಗೆ ಕಾರ್ಯದಲ್ಲಿ ವಿಪುಲ ಧನಾಗಮವಾಗುವದು, ವಿಜಯವೂ ಲಭಿಸುವದು, ಆರೋಗ್ಯವು ಉತ್ತಮವಾಗುವದು. ಆದರೂ ಮನೋದೌರ್ಬಲ್ಯದ ದೆಸೆಯಿಂದ ಕೆಲವೊಂದು ಹಣವನ್ನು ಅಪವ್ಯಯ ಮಾಡುವಿರಿ. ವಿದ್ಯಾರ್ಥಿಗಳಿಗೂ ನೌಕರಿಜನರಿಗೂ ಕಾಲವು ಅನುಕೂಲವಾಗಿರುವುದು. ತಾ. 11, 12, 13, 14 ಈ ದಿನಗಳಲ್ಲಿ ಆಕಸ್ಮಿಕ ಪ್ರವಾಸ, ಜನಮನ್ನಣೆ, ಧನಲಾಭಾದಿಗಳ ಯೋಗವಿದೆ.

ಕರ್ಕಟಿ—ದೈವವು ನಿಮಗೆ ಸಾಕಷ್ಟು ಅನುಕೂಲವಿಲ್ಲದಿದ್ದರೂ ಪೌರುಷದಿಂದಲೇ ಕಾರ್ಯಸಾಧಿಸುವೆನೆನ್ನುವ ಹಠವಾದಿಗಳಿರುವಿರಿ ನಿಮ್ಮ ಮಿತ್ರವರ್ಗದಿಂದಲೂ ತುಂಬಾ ಬೆಂಬಲ ಸಿಗಲಿದೆ. ಖರ್ಚಿಗೆ ತಕ್ಕ ಆದಾಯವಿರುವುದರಿಂದ ಹಣದ ತಾಪತ್ರಯವುಂಟಾಗದು. ಆದರೂ ನಿಮ್ಮ ಮನೆಯ ಜನರಲ್ಲಿ ಅಸ್ವಸ್ಥವುಂಟಾಗುವುದರಿಂದಲೂ ಅಧಿವ್ಯಾಧಿಗಳ ಪೀಡೆಯಿಂದಲೂ ನಿಮಗೆ ಮನಶ್ಶಾಂತತೆಯಿರದು. ಆಕಸ್ಮಿಕ ಸಂಭವಿಸಬಹುದಾದ ಪ್ರವಾಸದಿಂದ ಕಷ್ಟನಷ್ಟಗಳೊದಗುವವು ವಾರಾಂತ್ಯದ 3ದಿನಗಳಲ್ಲಿ ಸ್ತ್ರೀಧನಮಾನ ಸುಖಾದಿಗಳು ಲಭಿಸುವವು

ಸಿಂಹ— ಸುದಿನಗಳು ಸನ್ನಿಹಿತವಾಗಿವೆ ನಿಮ್ಮ ಸಂಕಲ್ಪಗಳಲ್ಲಿ ಹೆಚ್ಚಿನವು ಕಾರ್ಯರೂಪಕ್ಕೆ ಬರುವವು ವ್ಯಾಪಾರಾದ್ಯುದ್ಯಮಗಳಲ್ಲೂ ನೌಕರಿ ಮೊದಲಾದ ಉದ್ಯೋಗಗಳಲ್ಲೂ ನಿಮ್ಮ ಬಯಕೆಯು ಈಡೇರುವದು. ಜನ, ಧನ, ಬಲಯುಕ್ತರಾದ ನಿಮಗೆ ಸಮಾಜದಲ್ಲಿ ಗೌರವವೂ ಅಗ ಭೋಗಗಳೂ ಲಭಿಸಲಿವೆ, ಆದರೂ ಮಕ್ಕಳ ಸಲುವಾದ ಚಿಂತೆಯು ಆಗಾಗ ನಿಮ್ಮನ್ನು ಪೀಡಿಸಬಹುದು. ತಾ. 9, 10, 15 ಈ ದಿನಗಳಲ್ಲಿ ವಿಜಯ, ಸ್ತ್ರೀಸುಖ, ಧನ, ವಸನಾದಿಗಳ ಲಾಭವಿದೆ.

ಕನ್ಯಾ — ನಿಮ್ಮ ಭಾಗಕ್ಕೀಕಾಲವು ಅತೀವ ಬಿಕ್ಕಟ್ಟಿನದಾಗಿದೆ. ಶತ್ರುಗಳ ಭಯವು ಅಧಿಕವಾದೀತು. ಉಷ್ಣಜ್ವರ ಉದರಶೂಲೆ ಸಾಂಸರ್ಗಿಕ ದೋಷ ಇವುಗಳಿಂದ ಕಲುಷಿತವಾದ ನಿಮ್ಮ ಮನಸ್ಸಿಗೆ ಸ್ವಪ್ನದಲ್ಲೂ ಸುಖವು ದುರ್ಲಭವೆನಿಸುವದು. ಆಪ್ತೀಯರ ನಿಯೋಗದಿಂದಲೂ ಆರ್ಥಿಕ ದುರವಸ್ಥೆಯಿಂದಲೂ ಸತತ ದುಃಖ ಭಾಗಿಗಳಾದ ನಿಮಗೆ ತಾ. 11, 12 ಈ ಎರಡು ದಿನಗಳಲ್ಲಿ ಮಾತ್ರ ಕಿಂಚಿದ್ಧನಾಗಮ, ಲೇವಾದೇವಿಯಲ್ಲಿ ಲಾಭಗಳೂ ದೊರೆಕಬಹುದು

ತುಲಾ—ಈ ವಾರವು ನಿಮ್ಮ ಭಾಗಕ್ಕೆ ಸರ್ವೋತ್ಕೃಷ್ಟವಿರುವದೆಂದರೆ ಅತಿಶಯೋಕ್ತಿಯಾಗಲಾರದು. ಯಾವ ಕಾರ್ಯದಲ್ಲೂ ನೀವು ಹಿಂಜರಿಯಲಾರಿರಿ. ಮಹತ್ಕಾರ್ಯವೂ ಕೂಡ ಸುಲಭದಲ್ಲಿ ನೆರವೇರಲಿರುವುದು. ಅಲ್ಪಾಯಾಸದಿಂದ ಅಧಿಕಲಾಭಪಡೆವಿರಿ. ಆದರೂ ಶನೈಶ್ಚರನ ಕಾಟದಿಂದಾಗಿ ಒಂದಿಲ್ಲೊಂದು ತೆರನಾದ ಆಪತ್ತು ನಿಮ್ಮನ್ನು ಸದಾ ಪೀಡಿಸುತ್ತಿರುವುದು. ಕಷ್ಟಸಹಿಷ್ಣುಗಳಾದ ನಿಮಗೆ ಇದರಿಂದೇನೂ ಬಾಧೆಯಾಗದು ತಾ 9, 10, 13, 14 ಈ ದಿನಗಳು ಅಭೀಷ್ಟಾರ್ಥದಾಯಿಗಳಾಗಿವೆ.

ವೃಶ್ಚಿಕ—ದೇಹಾಯಾಸವನ್ನು ಗಮನಿಸದೆ ಶ್ರಮಪಟ್ಟು ದುಡಿವಿರಿ ದುಡಿಮೆಗೆ ಉಚಿತವಾದ ಫಲವು ಲಭಿಸುವದು. ಆದರೇನು ಬಹುಮುಖವಾದ ಖರ್ಚುಗಳು ನಿಮ್ಮನ್ನು ಸುತ್ತಲಿಂದಲೂ ಪೀಡಿಸುತ್ತಿರುವುದರಿಂದ ಹಣದ ಮುಗ್ಗಟ್ಟಿಗೆ ಸಿಲುಕಿ ಸಾಲಮಾಡುವ ಪ್ರಸಂಗ ಬರಲಿದೆ. ಆಪ್ತೇಷ್ಟರಲ್ಲೂ ಬಂಧು ವರ್ಗದವರಲ್ಲೂ ವೈಮನಸ್ಯದಿಂದಾಗಿ ಮನಸ್ತಾಪವುಂಟಾಗುವದು. ವಿನಾಕಾರಣ ಕಲಹ, ನಿಷ್ಠುರಗಳು ತಪ್ಪಿದ್ದಲ್ಲವು, ಇಷ್ಟಾದರೂ ತಾ 11, 12, 15 ಈ ದಿನಗಳು ಇತರ ದಿನಗಳಿಗಿಂತ ಲೇಸೆನಿಸುವವು

ಧನು— ಭಾಗ್ಯಗಳು ಹಲವಾರಿದ್ದರೂ ಮಮುಜನಿಗೆ ಆರೋಗ್ಯ ಭಾಗ್ಯಕ್ಕಿಂತ ಹೆಚ್ಚಿನದಾವುದೂ ಅಲ್ಲವು ಈ ವಾರದಲ್ಲಿ ನಿಮ್ಮ ಆರೋಗ್ಯಕ್ಕೆ ಕಫ ಮತ್ತು ಪಿತ್ಥ ಪ್ರಕೋಪದಿಂದಾಗಿ ಧಕ್ಕೆಯುಂಟಾಗಲಿದೆ. ನೆನೆದ ಕಾರ್ಯಗಳು ವಿಪರೀತವಾದ ಫಲವನ್ನೀಯುವವು, ಶತ್ರುಜನರಿಂದ ಪರಾಭವವುಂಟಾದೀತು. ಸ್ಥಾನ ಚಲನೆಯ ಯೋಗವಿದೆ, ತತ್ರಾಪಿ ಆರ್ಥಿಕ ಮುಗ್ಗಟ್ಟು ವಿಶೇಷವಾಗಿ ಬಾಧಿಸಲಿದೆ ಇದ್ದುದರಲ್ಲಿ ಸ್ವಲ್ಪಮಟ್ಟಿನ ಅನುಕೂಲ ದಿನಗಳೆಂದರೆ ತಾ. 9, 10, 13, 14 ಮಾತ್ರ.

ಮಕರ—ನೀವು ಒಳ್ಳೆಯ ವಿವೇಕಿಗಳೂ ವಾಚಾಲರೂ ಆಗಿರುವಿರಿ. ಆದರೆ ಈ ವಾರದಲ್ಲಿ ನೀವು ಹಲವರೊಡನೆ ವಾಕ್ಕಲಹಕ್ಕೊಳಗಾಗಲಿರುವಿರಿ. ತನ್ನಿಮಿತ್ತವಾದ ಅಪಮಾನಕ್ಕೂ ಕೂಡ ಪಾತ್ರವಾಗುವ ಸಂಭವವಿದೆ, ನೇತ್ರ ಸಂಬಂಧವಾದ ಕಾಹಿಲೆಯು ಕಾಣಿಸಿಕೊಂಡೀತು. ಗುರುಹಿರಿಯರಲ್ಲಿ ಅನಾದರವೂ ಧರ್ಮ ಕರ್ಮಗಳಲ್ಲಿ ತಾತ್ಸಾರ ಭಾವವೂ ಹೆಚ್ಚಲಿದೆ. ವ್ಯಯಕ್ಕಿಂತ ಆಯವು ಅಧಿಕವಿರುವುದರಿಂದ ದಿನಯಾಪನೆಯು ಕಷ್ಟವಾಗಲಾರದು, ತಾ. 13, 14ರಲ್ಲಿ ಖರ್ಚು ಹೆಚ್ಚುವದು.

ಕುಂಭ—ಅನೇಕ ಸಮಯದಿಂದ ನಿಮ್ಮ ಅದೃಷ್ಟವು ಬಹಳ ದುರ್ಬಲವಾಗಿತ್ತು. ರಾತ್ರಿಯು ಕಳೆದಮೇಲೆ ಹಗಲು ಪ್ರಾಪ್ತವಾಗುವಂತೆ ಇಂದೀಗ ಸುದಿನಗಳು ನಿಮಗೆ ಸನ್ನಿಹಿತವಾಗಿವೆ. ಜನತೆಯಲ್ಲಿ ಮಾನಮರ್ಯಾದೆಗಳು ಲಭಿಸುವವು. ಬಹುಮುಖದಿಂದ ಧನಾಗಮವಾಗಲಿದೆ. ನಿಮ್ಮಿಚ್ಛೆಯಂತೆ ಕಾರ್ಯಗಳು ಬಹುಮಟ್ಟಿಗೆ ಜರಗುವವು ಆದರೂ ಕೆಲವೊಮ್ಮೆ ಹಿಂದುಮುಂದಿನ ವಿಚಾರ ಮಾಡದೆ ದುಡುಕಿ ಕಷ್ಟನಷ್ಟಗಳಿಗೆ ಗುರಿಯಾದೀರಿ ತಾ. 9, 10, 15ರಲ್ಲಿ ಜಾಗ್ರತೆಯಾಗಿರಿ,

ಮೀನ— ಶುಕ್ರಾಚಾರ್ಯರನ್ನು ಬಿಟ್ಟು ಮಿಕ್ಕೆಲ್ಲಾ ಗ್ರಹರೂ ನಿಮಗೆ ವಿಮುಖರಾಗಿರುವುದರಿಂದ ನೀವೀವಾರದಲ್ಲಿ ಹಲವು ತೆರನಾದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ಕಳೆಯಬೇಕಾದೀತು ದೇಹಾಲಸ್ಯ ಮನೋರೋಗಗಳು ರಾತ್ರಿ ಹಗಲೂ ನಿಮ್ಮನ್ನು ಪೀಡಿಸಲಿವೆ ಯಾವ ಉದ್ಯಮದಲ್ಲೂ ಆಶೆಯ ಚಿಹ್ನೆಗಳು ಕಾಣಲಾರವು. ವಾರಾಂತ್ಯದ 3ದಿನಗಳು ಇತರ ದಿನಗಳಷ್ಟು ದುಃಖದಾಯಿಗಳಾಗವು

ಅಂತರಂಗವನ್ನು

ತಪ್ಪದೆ ಓದಿರಿ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ



ವಾನಿಂಗ್ ಟಿಲ್ಲಿ ಆಯಿಲ್
ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ' ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೆ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು, ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಶೀಘ್ರವಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಶಾಶ್ವತ ಗುಣವಾಗುವುದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಅದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು- ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0' ವಾನಿಂಗ್ ಟಿಲ್ಲಿ ಕೆಪ್ಸಲ್ ಶೀಸೆ 1ಕ್ಕೆ 3 8-0 ವಿ ಪಿ-ಬೇರೆ. ಡಜನ್ ಕೆಪ್ಸಲುಗಳಿಗೆ ರೂ. 42-0 0 ವಿ. ಪಿ ಸಹಿತ. ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್‌ಬಾಟ್ಲಿಗಳಿಗೆ ರೂ. 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ. 1-8-0. ಡಜನ್ ಸೀಸೆಗಳಿಗೆ ರೂ. 18. ವಿ.ಪಿ.ಮಾಫಿ

ಪ್ರಶಂಸನಾ ಪತ್ರ-ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ, ಎಲ್ಲ ವಿಧದ ಕಠಿಣ ರೋಗಗಳನ್ನು ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ಶಿವಮನಾದಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ- ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

-ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ- ಐ. ರೈಲ್ವೆ-

The Eclipse Distributing Agency.
Dahanu Road, B. B. & C I. Rly.

ತನ್ನ ಅಧಿಕಾರವನ್ನು ಮೆರೆಯಿಸಲಿಕ್ಕೂ, ಆರ್ಥಿಕ ಪ್ರಯೋಜನವನ್ನು ಹೊಂದಲಿಕ್ಕೂ ಇಂದು ಅನೇಕ ರಾಷ್ಟ್ರಗಳು ಪರಸ್ಪರ ಆಕ್ರಮಿಸುತ್ತಿರುವದನ್ನು ನಾವು ಹಲವು ವರ್ಷಗಳಿಂದಲೂ ಕಾಣುತ್ತಿದ್ದೇವೆ. ಸ್ವಾರ್ಥಪರವಾದ ಯಾವ ದುರುದ್ದೇಶಗಳನ್ನೂ ಕಟ್ಟಿಕೊಳ್ಳದೆ ಧಾರ್ಮಿಕ ಹಾಗೂ ಶಾಂತ ಮಾರ್ಗವನ್ನು ಅವಲಂಬಿಸಿಕೊಂಡಿರುವ ರಾಷ್ಟ್ರಗಳೂ ಇವೆ. ಟಿಬೆಟು ಅಂತಹ ರಾಷ್ಟ್ರಗಳಲ್ಲಿ ಒಂದು. ಆದ್ದರಿಂದಲೇ ಕೆಂಪು ಚೀನವು ಇಂದು ಆ ಟಿಬೆಟನ್ನು ವ್ಯರ್ಥ ಆಕ್ರಮಿಸಿದ್ದರಿಂದ ಭಾರತವೂ ನೊಂದಿದೆ—ಅದು ಅನ್ಯಾಯವೆಂದು ಸಾರಿದೆ.

'ನಾವು ಟಿಬೆಟನ್ನು ಆಕ್ರಮಿಸಿದ ವಿಷಯದಲ್ಲಿ ಎದುರು ನುಡಿಯಲು ಭಾರತಕ್ಕೇನೂ ಅಧಿಕಾರವಿಲ್ಲ'ವೆಂದು ಈಗ ಕೆಂಪು ಚೀನವು ಒಂದು ವೇಳೆ ಹೇಳಿದರೂ ಆ ಕುರಿತು ಆಶ್ಚರ್ಯಪಡಬೇಕಾದ್ದಿಲ್ಲ. ಜನಾಂಗ ಸಭೆಯಲ್ಲಿ ಕೆಂಪು ಚೀನಕ್ಕೆ ಪ್ರಾತಿನಿಧ್ಯ ಸಿಗಬೇಕೆಂದು ವಾದಿಸುತ್ತಿದ್ದುದು- ಭಾರತವು ಕೆಂಪು ಚೀನದ ಆದರ್ಶ ಗುಣವನ್ನೋ ಉತ್ತಮ ರಾಜನೀತಿಯನ್ನೋ ಕಂಡು ಮರುಳಾಗಿ ಅಲ್ಲ; ಕೆಂಪು ಜನತೆಯು ಲೋಕದ ಶಾಂತಿಯನ್ನು ಭಂಗಗೊಳಿಸುವ ಜನಾಂಗವೆಂದು ಲೋಕವೇ ತಿಳಿದಿರುವುದರಿಂದ ಅದನ್ನು ತಪ್ಪಿಸಲು ಭಾರತಕ್ಕೆ ತೋರಿದ ಯುಕ್ತ ಮಾರ್ಗವದು. "ತುಷ್ಯತು ದುರ್ಜನ" ನ್ಯಾಯದಿಂದಾದರೂ ಶಾಂತಿನೆಲೆಗೊಳ್ಳಲಿ ಎಂಬುದೇ ಭಾರತದ ಮುಖ್ಯ ಧ್ಯೇಯ. ಟಿಬೆಟಿನ ಕುರಿತು ಮಾತನಾಡಲು ಭಾರತಕ್ಕೆ ಅಧಿಕಾರವಿಲ್ಲವೆಂಬ ಮಾತೇ ಕೆಂಪು ಚೀನದ ಅನಧಿಕಾರ ಚೇಷ್ಟೆಯಲ್ಲದೆ ಮತ್ತೇನು?

ಭಾರತವು ಮಾನವ ಧರ್ಮದ ತಳಹದಿಯ ಮೇಲೆ ತನ್ನ ಧರಣವನ್ನು ಸ್ಥಾಪಿಸಿದೆ. ಅದಕ್ಕೆ ಭಾರತೀಯರಲ್ಲಿರುವಷ್ಟೇ ಇತರ ರಾಷ್ಟ್ರಗಳ ಜನತೆಯಲ್ಲಿಯೂ ಪ್ರೇಮ ಸೌಹಾರ್ದವಿದೆ- 'ಕೃಣ್ವಂತೋ ವಿಶ್ವಮಾರ್ಯಂ" ಎಂಬ ವೇದವಾಕ್ಯದ ಆಧಾರದಿಂದ ಅದು ಲೋಕಶಾಂತಿಗಾಗಿ ಹಾತೊರೆಯುತ್ತಿದೆ. ಹಾಗಿರುತ್ತಾ ಟಿಬೆಟಿನ ಮೇಲೆ ಕೆಂಪು ಚೀನದ ಆಕ್ರಮಣವನ್ನು ಭಾರತವು ನೋಡಿ ಸುಮ್ಮನಿರುವದು ಅಸಾಧ್ಯವಾದ ಮಾತು.

ಟಿಬೆಟು

ಲೇಖಕರು:
ಕೆ. ಎ. ದೇವದಾಸ, ಶಿರೋಮಣಿ

ಚೀನದ ಈ ಆಕ್ರಮಣವು—ಟಿಬೆಟಿನ ಮೇಲೆ ಬಿದ್ದ ಈ ದುರಾಕ್ರಮಣವು—ಅಖಿಲ ರಾಷ್ಟ್ರಗಳ ದೃಷ್ಟಿಯನ್ನು ಸೆಳೆಯುವಂತಹ ಮಹತ್ವದ ವಿಷಯವಾಗಿದೆ. ನಾನಾ ಕಾರಣಗಳಿಂದ ಇಂದು ಕೆಂಪು ಚೀನಾದ ಪ್ರಾತಿನಿಧ್ಯದ ವಿಷಯವು ಭಾರತದ ಮುಖಾಂತರ ಮುಂದೆ ಬಂದುದೂ, ಅದರಲ್ಲಿ ಭಾರತ ಪ್ರತಿಭಟನಾತ್ಮಕವಾದ ವಿಚಾರ ತರಂಗಗಳು ಅನೇಕ ಸ್ವತಂತ್ರ ರಾಷ್ಟ್ರಗಳಿಂದ ಎದ್ದು ಬಂದುದೂ ಎಲ್ಲರಿಗೂ ತಿಳಿದ ವಿಷಯ. ಅದಿನ್ನೂ ಹಾಗೆಯೇ ಮಂಥನವಾಗುತ್ತಾ ಇರುವಾಗಲೇ—ಇತ್ತ ಚೀನದ ರಕ್ತವಾಹಿನಿಯು (ಕೆಂಪು ಸೈನ್ಯವು) ಟಿಬೆಟನ್ನೇರಿದುದು ಎಲ್ಲರನ್ನೂ ಮುಂದಿನ—ಭವಿಷ್ಯದ ಕಡೆಗೆ ನೋಡುವಂತೆ ಮಾಡಿದ ಹಾಗಾಯಿತು. ಶುಭ್ರವಾದ ವಿಶ್ವಶಾಂತಿ ಪಟದಲ್ಲಿ ರಕ್ತವರ್ಣದ ಕದನ ಕಲೆಗಳು ಪಸರಿಸುತ್ತವೋ ಎಂದು ತೋರುವಂತೆ ಮಾಡಿದ ಹಾಗಾಯಿತು.

ಟಿಬೆಟು ಉತ್ತಮ ಆಯಕಟ್ಟಿನ ಭವ್ಯ ರಾಷ್ಟ್ರವಾಗಿದೆ. ಕಾಲಕ್ಕೆ ತಕ್ಕ ಬದಲು ಆ ನಾಗರಿಕತೆಯ ಬೆಡಗುಗಳ ಸೋಂಕು ಅದಕ್ಕೆ ತಗಲಿದ್ದಿದ್ದರೂ ಅದು ತೀರಾ ಅಲ್ಪವೆಂದೇ ಹೇಳಬಹುದು. ಅಂತಹ ರಾಷ್ಟ್ರವನ್ನು ಒಂದು ದೃಷ್ಟಿಯಿಂದ ಹಿಂದುಳಿದ ರಾಷ್ಟ್ರವೆಂದೋ ಏನೋ ಹೇಳಿದರೂ ಅದೊಂದು ತನ್ನದೇ ಆದ ಪರಂಪರೆಯನ್ನು ಕಾಪಾಡಿದ ಮತ್ತು ಆಕ್ರಮಣ ಸ್ವಭಾವವಿಲ್ಲದ ರಾಷ್ಟ್ರವೆಂದು ತಿಳಿದುಕೊಳ್ಳಬಹುದು.

ಹಿಂದಿನ ಕಾಲದಲ್ಲಿ ಭಾರತೀಯರು ಯಾವ ರಾಷ್ಟ್ರವನ್ನು ದೇವಭೂಮಿಯೆಂದೂ ತ್ರಿವಿಷ್ಟಪವೆಂದೂ ಕರೆದು ಅತ್ಯಂತ ಗೌರವದಿಂದ ಕಾಣುತ್ತಿದ್ದರೋ ಹಿಮಾಲಯದ ಆ ಮಾನಸೆಯ ಪೀಠಭೂಮಿಯೇ ಇಂದಿದ ಟಿಬೆಟ್ ಎಂದು ಅನೇಕ ಇತಿಹಾಸ ಸಂಶೋಧಕರು ಹೇಳಿರುವರು. ಭಾರತದ ಉತ್ತರ ದಿಕ್ಕಿನ ಮೇಲೆ ಪೂರ್ವದಲ್ಲಿದ ಆ ಪುಣ್ಯಭೂಮಿ ತ್ರಿವಿಷ್ಟಪವು. 'ಹಿಮಾಲಯದ ಗೈರಿಕ, ಮೊದಲಾದ ಬಣ್ಣಬಣ್ಣದ ವ್ಯುತ್ಪತ್ತಿಯನ್ನು ಕೊಂಡುಹೋಗಲಿಕ್ಕಾಗಿ ತ್ರಿವಿಷ್ಟಪದ ದೇವಾಂಗನೆಯರು ಸಾನುಪ್ರದೇಶಕ್ಕೆ ಬರುತ್ತಿದ್ದರೆಂದೂ, ದುಷ್ಯಂತನೇ ಮೊದಲಾದ ರಾಜರು, ತ್ರಿವಿಷ್ಟಪವನ್ನಾಕ್ರಮಿಸಲು ಬಂದ ಕಾಲನೇಮಿಯ ಸೈನ್ಯವನ್ನು ನಾಶಮಾಡಿ ಮರಳಿ ಭಾರತಕ್ಕೆ ಬಂದರೆಂದೂ, ಹಿಮಾಲಯದ ಎರಡನೆಯ ಪೀಠಭೂಮಿಯು ಪಾವನವಾಗಿದ್ದು ಅಲ್ಲಿ ಮಾರೀಚನ ಆಶ್ರಮವಿತ್ತೆಂದೂ, ತ್ರಿವಿಷ್ಟಪದ ರಾಜನಾದ ಇಂದ್ರನು ಭಾರತ ಮಹಿಳೆಯರನ್ನು ವರಿಸಲು ಹವಣಿಸಿದ ಕಾಲವೂ ಇತ್ತೆಂದೂ, ಶಕುಂತಲೆಯ ತಾಯಿಯು ತ್ರಿವಿಷ್ಟಪದವಳೆಂದೂ ಕಾಳಿದಾಸಾದಿ ಕವಿಗಳು ಹೇಳಿದ—ವರ್ಣಿಸಿದ ಮಾತುಗಳೆಲ್ಲವೂ ಇಂದ್ರನ ರಾಜಧಾನಿಯಾಗಿದ್ದ ತ್ರಿವಿಷ್ಟಪವೇ ಇಂದಿನ ಟಿಬೆಟ್ ಎಂಬ ಮಾತನ್ನು ಪುಷ್ಟೀಕರಿಸುತ್ತದೆ.

ಕಾಲಕ್ರಮೇಣ ಭೃಗು ವಸಿಷ್ಠ ಮೊದಲಾದ ದೇವರ್ಷಿಗಳು, ತ್ರಿವಿಷ್ಟಪವನ್ನು ಬಿಟ್ಟು ಭರತಖಂಡದಲ್ಲಿ ನೆಲೆಹೊಂದಿದರು. ಇಲ್ಲಿ ಆ ಋಷಿಗಳು ವೇದವನ್ನು ಸಮಗ್ರವಾಗಿ ಸಾಕ್ಷಾತ್ಕರಿಸಿದರು, ಆ ದಿವ್ಯ ಸಂಸ್ಕೃತಿಯು ಇಂದಿಗೂ ಭಾರತದಲ್ಲಿ ಬೆಳಗುತ್ತಲೇ ಇದೆ. ಟಿಬೆಟು ಮಾತ್ರ ತನ್ನ ಆ ಪ್ರಾಚೀನ ಭವ್ಯ ಸಂಸ್ಕೃತಿಯನ್ನು ಮರೆತುಬಿಟ್ಟರೂ ಇಂದು ಅದು ಬುದ್ಧಮತದ ಮೂರ್ತರೂಪವಾಗಿ ತನ್ನ ಒಂದು ವೈಶಿಷ್ಟ್ಯವನ್ನೂ ಸ್ವರ್ಗದಂತೆ—ನೆನೆದಾಗ ಹೋಗಲೂ ಅಸಾಧ್ಯವಾದ ಪ್ರತ್ಯೇಕತೆಯನ್ನೂ ಕಾಯ್ದುಕೊಂಡು ಬಂದಿದೆ.

ಭಾರತ ರಾಜರ ಸಹಾಯವು ತ್ರಿವಿಷ್ಟಪಕ್ಕೆ ಅಂದು ಆಗಾಗ ಬೇಕಾಗಿತ್ತು. ತ್ರಿವಿಷ್ಟಪದ ಶ್ರೇಯಸ್ಸೇ ವಿಶ್ವಶಾಂತಿಗೆ ಮೂಲವೆಂದು ಭಾರತವು ಅಂದೇ ಮನಗಂಡಿದೆ. ಇಂದಿಗೂ ತ್ರಿವಿಷ್ಟಪೇಶ್ವರನ ಹಾಗೂ ರಾಜಕೀಯಾಧಿಕಾರಿಗಳ ನೆನಪು ಭಾರತೀಯರ ಹೃದಯದಿಂದ ತೊಲಗಲಿಲ್ಲ. ಇಂದು ಟಿಬೆಟೆಂದು ಕರೆಸಲ್ಪಡುವ ತ್ರಿವಿಷ್ಟಪವೇ ಭಾರತೀಯರಾದ ಆರ್ಯ ಸಂತತಿಯ ಸ್ವರ್ಗಭೂಮಿಯ ಸಂಕೇತ. ಪುಣ್ಯಗಳಿಸಿ ಅಂದು ಸುಖಪಡಲು ಹೋಗುತ್ತಿದ್ದ ಪದವಿ; ಅನೇಕ ರಾಜರು ಹೋಗಿ ಬಂದ ಭೂಮಿ.

ಇಂದೂ ನಮ್ಮ ಟಿಬೆಟು—ಅದು ಎಂದೆಂದಿಗೂ ಸ್ವತಂತ್ರವೂ ಸುಖಮಯವೂ ಮಿತ್ರ ರಾಷ್ಟ್ರವೂ ಆಗಿ ಅಭಿವೃದ್ಧಿ ಹೊಂದಬೇಕೆಂಬುದೇ ಭಾರತದ ಹೆಬ್ಬಯಕೆ.

(ಪ್ರಕಟವಾಗಲಿರುವ "ಪಂಚಾವತಾರ"ವೆಂಬ ಗ್ರಂಥದ ಆಧಾರದಿಂದ)

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—
ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ ಎಲ್ ಎಲ್ ಕವಲಬಾವಿ ಕೆಮಿಸ್ಟ, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಆಹಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ಶಿವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ. 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

ತಮ್ಮ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್
ಲಿಮಿಟೆಡ್
ಸ್ಥಾಪಿತ 1906
ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು
ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು
ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು ಶಹಾಕಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

Estd 1921 ಸ್ಥಾಪನೆ.
31ನೇ ವರ್ಷ

16—11—1950

Founder: Sri A. B. Shetty,
Minister for Agriculture & Veterinary.

ನವಯುಗ



ವರ್ಷ ೩೧
ವಾರ ೧೧

NAVAYUGA
WEEKLY

POST BOX NO. 22
UDIPI, S. K.

Vol. 31
No. 11

ಇದು ಒರೆಗಲ್ಲಾಗಿರಲಿ.

ಗತವೈಭವ, ಪರಂಪರಾಗತ ಪ್ರತಿಷ್ಠೆ, ಇತ್ಯಾದಿ 'ಮಾಜಿ' ಪ್ರಭಾವಗಳನ್ನಷ್ಟೇ ಆಧರಿಸಿದ್ದು ಪ್ರಚಲಿತ ಮಹತ್ವಿಕೆ ಯಾವುದನ್ನೂ ಪ್ರದರ್ಶಿಸಲಾರದ ವ್ಯಕ್ತಿ ಮತ್ತು ಸಂಗತಿಗಳು ಹೇಗೆ ಹಿಂದೆ ಬೀಳುತ್ತಿವೆಯೆಂಬುದು ಹಲವು ಜೀವಂತ ನಿದರ್ಶನಗಳಿಂದ ಈ ಕಾಲದಲ್ಲಿ ಸ್ಪಷ್ಟವಾಗುತ್ತಿದೆ.

ಅಂತೆಯೇ ಅಗತ್ಯವುಳ್ಳ ಪ್ರೌಢಿಮೆ, ಯೋಗ್ಯತೆಗಳನ್ನು ಕಾಲಾನುಗುಣವಾಗಿ ಗಳಿಸುತ್ತಾ ಹೋಗುವುದೇ ಸುದೃಢ ಪ್ರಗತಿ ಹೊರತು, ಒಮ್ಮೆಗೇ ಹೊಸತನದ ಹೊಸ್ತಿಲಿಗೆ ನೆಗೆಯುವುದು ಅಸ್ಥಿರವೆಂಬ ಅನುಭವವೂ ಬಹುಮುಖದಿಂದಾಗುತ್ತಿದೆ.

ವಿಕ್ಟೋರಿಯಾ ಮಹಾರಾಣಿಯ ಆಳ್ವಿಕೆಯ ಕಾಲದಲ್ಲಿ ತಾವು ಭಾರತದಲ್ಲಿ ಗಳಿಸಿದ್ದ ಗೌರವಾದರ, ವರ್ಚಸ್ಸನ್ನೇ ನಂಬಿಕೊಂಡು ಬ್ರಿಟಿಷರು ಕೊನೆಗೆ ಭಾರತವನ್ನು ಬಿಡಲೊಪ್ಪದಿರುತಿದ್ದರೆ, ಅವರ ಗತಿ ಈ ಕಾಲದಲ್ಲಿ ಹೇಗಾಗುತಿತ್ತೆನ್ನಲಾಗುವುದಿಲ್ಲ. ಅಂತೆಯೇ ಅವರು ಅಂಶಾಂಶವಾಗಿ ಭಾರತೀಯರಿಗೆ ಸ್ವಾಧಿಕಾರವನ್ನು ಕಂತುಪ್ರಕಾರ ದಾನಮಾಡುತ್ತಾ ಬಂದುದರಿಂದಲೇ 1947ನೇ ಆಗೋಸ್ತು 15 ರಲ್ಲಿ ಪೂರ್ಣಾಧಿಕಾರವನ್ನು ಸುಗಮವಾಗಿ ಬಿಟ್ಟು ಕೊಡಲು ಅವರಿಗೆ ಸಾಧ್ಯವಾಯಿತು; ಇಲ್ಲವಾದರದು ಬಹಳ ಪ್ರಯಾಸವಿದ್ದಿತ.

ಕಾಂಗ್ರೆಸು ಗಾಂಧಿಜೀಯ ನೇತೃತ್ವದಲ್ಲಿ ಕಾಲಾನುಗುಣವಾಗಿ ಆಗಾಗ ಸ್ವಾತಂತ್ರ್ಯ ಹೋರಾಟಗಳನ್ನು ಹೂಡುತ್ತಾ ಬಂದುದರಿಂದಲೇ ಕೊನೆಗೆ ಸ್ವಾತಂತ್ರ್ಯವನ್ನು ಕಸಗೊಳ್ಳಲು ಸಮರ್ಥವಾಯಿತು ಹೊರತು ಒಮ್ಮೆಗೇ ಬಂಡಾಯವೇಳುತ್ತಿದ್ದರೆ ಕೊನೆಗಾದರೂ ಅದು ವಿಜಯಿಯಾಗುವಂತಿರಲಿಲ್ಲ. ಆದರೀಗ ಕಾಂಗ್ರೆಸಿಗರು ವಿಶೇಷತಃ ತಮ್ಮ ಗತಕಾಲದ ಮಹತ್ವಿಕೆಯನ್ನೇ ಆಧರಿಸಿರುವುದರಿಂದ ಈ ಕಾಲದಲ್ಲಿ ಮೊದಲಿಗಿಂತ ಎಷ್ಟು ತೇಜೋಹೀನರಾಗಿ ಕಾಣುತ್ತಿದ್ದಾರೆಂಬುದು ಸ್ಪಷ್ಟವಿದೆ.

ಶತಮಾನಗಳಿಂದ ಲೋಕದ ವಿವಿಧ ಜನಾಂಗಗಳನ್ನಾಳಿ ಪಡೆದಿದ್ದ ಅನುಭವ ಬಲದಿಂದಲೇ ಬ್ರಿಟಿಷರು ಇಂದಾದರೂ ಸಮರ್ಥ ರಾಜಕಾರಣಿಗಳೆನ್ನಿಸಿ, ಎಲ್ಲಾ ವಿಧದ ಇಳಿತಭರತಗಳಲ್ಲೂ ಸಂದರ್ಭೋಚಿತವಾಗಿ ವರ್ತಿಸಲು ಶಕ್ತರಾಗಿದ್ದಾರೆ. ಈ ಮೊದಲು ಆಂದೋಲನಗಾರರಾಗಿದ್ದ ಅನುಭವ ಮಾತ್ರವಿದ್ದು, ಆಡಳಿತೆಯ ಅನುಭವವಿಲ್ಲದವರಾದ ದೆಸೆಯಿಂದಲೇ ಕಾಂಗ್ರೆಸ್ ನಾಯಕರ ಇಂದಿನ ಆಡಳಿತೆಯಲ್ಲಿ ಕೆಲವು ದೋಷಗಳು ಕಂಡು ಬರುತ್ತಿವೆ.

ಬ್ರಿಟಿಷರ ಯಜಮಾನಿಕೆಯಲ್ಲಿ ತಮ್ಮ ತಲೆ ಒಡೆದವರು—ಒಡೆಯಿಸಿದವರು—ಬ್ರಿಟಿಷ್ ಆಡಳಿತ ಯಂತ್ರದ ಚಾಲನಾ ಕೆಲಸದಲ್ಲಿದ್ದವರು—ಎಂಬ ಕಾರಣದಿಂದ ಆದಿನ ಯಾರನ್ನೇ ಆದರೂ ಇಂದಿನ ಕಾಂಗ್ರೆಸಿಗರ ಅಧಿಕಾರ ರದ್ದುಪಡಿಸಿಕೊಂಡುದಿದೆಯೆ? ಯಾವ ಆಡಳಿತೆಗಾದರೂ ಅಗತ್ಯವಿರುವ ಆಡಳಿತಾನುಭವ ಮತ್ತು ಕರ್ತವ್ಯ ಜ್ಞಾನವಿದ್ದವರು ಅವರೆಂಬ ಕಾರಣದಿಂದಾಗಿಯೇ ಹಾಗೆ ಮಾಡಿಲ್ಲ.

ಯಾವ ಕಲೆ, ಸಾಹಿತ್ಯ. ಉದ್ಯೋಗ ರಂಗದಲ್ಲೇ ಇರಲಿ—ಕ್ರಮಶಃ ದುಡಿದು ಪಕ್ವಗೊಂಡವರು ಮಾತ್ರವೇ ಆಧರಿಸಲು ಅರ್ಹರಾಗುತ್ತಾರೆ. ಬಿರುಗಾಳಿಯಂತೆ ಒಮ್ಮೆಗೇ ಕಾಣಿಸಿಕೊಂಡವರು ತಾತ್ಕಾಲಿಕವಾಗಿ ಹೇಗೆ ಕಂಡರೂ ದೃಢವಾಗಿ ಅವಲಂಬಿಸಿ ನಿಲ್ಲಲಾಗುವವರಲ್ಲ.

ಪರಂಪರಾಗತ ಶ್ರೀಮಂತಿಕೆ, ಮನೆತನ, ಮಾನ ಮರ್ಯಾದೆಗಳ ಜಂಭವನ್ನಷ್ಟೇ ಕಟ್ಟಿಕೊಂಡು ಪ್ರಚಲಿತ ಕಾಲಾನುಗುಣವಾದ ನವೀನಾಸಕ್ತಿ, ಶಕ್ತಿ, ಚಟುವಟಿಕೆಗಳನ್ನು ಪ್ರದರ್ಶಿಸಲಾರದವರು ಆಧುನಿಕ ಕಾರ್ಯರಂಗದಲ್ಲಿ ಹಿಂದೆ ಬಿದ್ದು ಕ್ರಮಶಃ ಮುಳುಗುತ್ತಿರುವುದನ್ನೂ ಅಂತಹ ಗತವೈಭವವಾವುದೂ ಇಲ್ಲದಿದ್ದರೂ ಸ್ವಸಾಮರ್ಥ್ಯ ಪ್ರದರ್ಶಿಸುವವರು ಬೆಳಗುತ್ತಿರುವುದನ್ನೂ ಇಂದು ಕಾಣುತಿದ್ದೇವೆ.

ಈ ಪ್ರಪಂಚದಲ್ಲಿ ಶಾಶ್ವತವಾದುದಾವುದೂ ಇಲ್ಲ. ಅನುಕ್ರಮವಾಗಿ ಎಲ್ಲವನ್ನೂ ಬದಲಾಯಿಸುತ್ತಾ ಹೋಗುವುದೇ ಕಾಲದ ಸ್ವಭಾವ. ಈ ಕಾಲಧರ್ಮಕ್ಕೆ ಇದಿರಾಗಿ ಅಥವಾ ಜೋರಿಯಾಗಿ ಗತವೈಭವ, ಗತಕಾಲದ ಯೋಗ್ಯತೆಗಳನ್ನು ತಂದೊಡ್ಡಿ ಗೆಲ್ಲುವೆನೆಂದರಾಗದು. ಅಂತೆಯೇ ಕಾಲಚಕ್ರದ ಸುತ್ತಿನೊಡನೆ ಸುತ್ತಿಕೊಂಡೇ ಯಾರಾದರೂ ಯಾವುದಾದರೂ ಮುಂಗಡೆಗೆ ಚಲಿಸಬೇಕು ಹೊರತು ಹೊಸತೊಂದನ್ನು ತಾನಾಗಿ ನಿರ್ಮಿಸಿ ಮುಂಗಡೆಗೆ ಚೆಲ್ಲಿದರೆ, ಅದು ಕಾಲಯಂತ್ರದ ಅಡಿಗೆ ಬಿದ್ದು ಅಲ್ಲಿ ನುಚ್ಚುನುರಿಯಾಗುವುದೇ ಸರಿ. ಅಂತೂ ಕಾಲಧರ್ಮವನ್ನು ಬಿಟ್ಟು ಹಿಂದೆ ಬಿದ್ದುದಕ್ಕಾಗಲೀ ಮುಂದೆ ಬಿದ್ದುದಕ್ಕಾಗಲೀ ಇರಸ್ಥಿತಿಯಿಲ್ಲ.

ರಾಜಕೀಯ ಪಕ್ಷ, ಪ್ರಭುತ್ವದಿಂದಾರಂಭಿಸಿ, ಉದ್ಯೋಗ ವ್ಯವಹಾರಗಳ ಖಾಸಗೀವ್ಯಕ್ತಿಗಳ ವರೆಗಿನ ಎಲ್ಲರಿಗೂ, ಎಲ್ಲಾ ರಂಗಗಳಿಗೂ ಮೇಲಿನ ಮಾತು ಅನ್ವಯಿಸುತ್ತದೆ. ಅಂದ ಮೇಲೆ ಸ್ವತಂತ್ರ ಭಾರತದ ಅಧಿಕಾರ ನಿರ್ವಹಣವು ಇದಕ್ಕಪವಾದವಾಗುವಂತಿಲ್ಲ. ಅನುಭವವಿದ್ದರೂ ಅನ್ಯೋದ್ದೇಶವಿದ್ದವರಾಗಬಾರದು, ಎಂಬುದೊಂದೇ ಇಲ್ಲಿರಬೇಕಾದ ಮುಖ್ಯ ಶರ್ತ.

ಬ್ರಿಟಿಷರು ಆಡಳಿತೆಯ ಅನುಭವವಿದ್ದವರೆಂಬುದು ನಿಜವಾದರೂ ಅನ್ಯೋದ್ದೇಶವುಳ್ಳ ಅನ್ಯರು ಎಂಬುದರಿಂದಲೇ ಅವರ ಕೈಯಿಂದ ಆಡಳಿತೆಯನ್ನು ಕಸಕೊಳ್ಳಲಾಯಿತ. ಆಡಳಿತಾಧ್ಯಕ್ಷತೆಯಲ್ಲಿ ಮಾಗಿಲಾದವರು ಬೇರಿದ್ದಾರಾದರೂ ರಾಷ್ಟ್ರಹಿತ ಚಿಂತನೆಯೊಂದಲ್ಲದೆ ಅನ್ಯೋದ್ದೇಶವಾವುದೂ ಇಲ್ಲದವರಿವರು ಎಂಬ ಕಾರಣದಿಂದಲೇ ಕಾಂಗ್ರೆಸ್ ನಾಯಕರು ಇಂದು ಅಧಿಕಾರದಲ್ಲಿದ್ದಾರೆ.

ಅಂತೂ ತಮ್ಮ ಪ್ರತಿನಿಧಿಗಳಾಗಿ ಆಡಳಿತೆ ನಿರ್ವಹಿಸತಕ್ಕವರನ್ನು ಆರಿಸಿಕೊಳ್ಳುವಾಗ ಜನತೆ ಯೋಚಿಸಬೇಕಾದ ಮುಖ್ಯ ಅಂಶಗಳಿವು: ಕಾಲಾನುಗುಣ ಪ್ರಗತಿ ಸಾಧಕರಿರಬೇಕು. ಅವರು ಕಾಲದೊಂದಿಗೆ ಹೊಂದಿಕೊಳ್ಳಲೊಲ್ಲದೆ ಹಿಂದೆ ಬೀಳುವ ಅಪ್ರಗತಿಕರಾಗಿರಕೂಡದು; ಹಾಗೆ ಹೊಂದಿಹೋಗದೆ ಮುಂದೆ ಹಾರುವ ಅವಸರಗಾಮಿಗಳೂ ಆಗಿರಕೂಡದು; ಅನ್ಯೋದ್ದೇಶವುಳ್ಳವರಿರಕೂಡದು.

ಈ ಒರೆಗಲ್ಲಿನಲ್ಲಿ ಪರೀಕ್ಷಿಸುವಾಗ ಯಾವ ಪಕ್ಷ ಅಥವಾ ವ್ಯಕ್ತಿಯು ಯೋಗ್ಯತೆ ಮೂಡಿ ತೋರುವುದೋ ಅಂಥವರಿಗೆ ಸೈಗೊಡುವುದೇ ಜನತೆಯ ಧರ್ಮ. ಜನತಾ ರಾಜ್ಯ ಭಾರತದ ಮುಂದಿನ ಮಹಾ ಚುನಾವಣೆಯಲ್ಲಿ ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಈ ಪರೀಕ್ಷೆ ನಡೆಯಿಸಿಯೇ 'ಪಾಸು'ಮಾಡುವ ಕ್ರಮ ಬರಲಾರದೆ?

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತಾಗಾರಿಕೆಯ ಮಾತುಗಳ ರೂಪದಲ್ಲಿಲ್ಲದ ಭಟ್ಟಿಯಾಗಿ ಎದ್ದು ಕಾಣುವುದು

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

1882ನೇ ನವಂಬರ್ 14ರಲ್ಲಿ ಜನ್ಮವೆತ್ತಿದ್ದ ಶ್ರೀ ಜವಾಹಿರಲಾಲ ನೆಹರುಗಳಿಗೆ 1950ನೇ ನವಂಬರ್ 14ರಲ್ಲಿ 62 ವರುಷ ತುಂಬಿ 63ನೇ ವರುಷ ಹಿಡಿಯಿತು. ಭಾರತದ ಸರ್ವಪ್ರಥಮ ನಾಯಕ ನೆಹರುಜೀ ಇಂದು 62ರ ಹಳಬ; ವಯಸ್ಸಿನ ನಡುಗೆರೆ ದಾಟಿ ಉತ್ತರಾರ್ಧದ ಒಂದಂಶವನ್ನು ಇಷ್ಟರಲ್ಲೇ ಮುಗಿಸಿ ಮುಂದೊತ್ತಿದವರು. ದಿನಕ್ಕೆ ಹದಿನೆಂಟು ತಾಸುಗಳಷ್ಟು ದೇಶಕ್ಕಾಗಿ ದುಡಿಯುವ—ಭೂಕಂಪದಿಂದಾದ ಕಣಿವೆ, ಪರ್ವತ ಶಿಖರ, ಪರದೇಶದ ಮೂಲೆ, ಎಂಬ ವ್ಯತ್ಯಾಸವಿಲ್ಲದೆ ಎಳೆಹರೆಯದವನಂತೆ ಎಲ್ಲೆಲ್ಲೂ ಚಿಗಿದಾಡುತ್ತಿರುವ—ಜವಾಹಿರಲಾಲಜೀ ಬೇರಿಲ್ಲದರಲ್ಲೂ ತರುಣನೇ

62 ತುಂಬಿದ ನೆಹರು

ನೋ ನಿಜ; ಆದರೆ ಪ್ರಾಯದಲ್ಲಿ ಹಳಬ. ಸ್ವತಂತ್ರ ಭಾರತದ ಅತ್ಯಮೋಘ ಉಪಕರಣ, ಒಂದು ಮಹಾ ಸುದೈವ, ಎಂದರೆ ಶ್ರೀ ಜವಾಹಿರಲಾಲ ನೆಹರು.

ನೆಹರೂ ವೈಶಿಷ್ಟ್ಯ

ನೆಹರೂ ವ್ಯಕ್ತಿತ್ವ ಅಸಾಮಾನ್ಯವಾದುದು. ಅವರು ರಾಜಕೀಯಕ್ಕೆ ಪ್ರವೇಶಿಸಿದಂದಿನಿಂದ ಈವರೆಗೂ ಅಸಾಮಾನ್ಯನೇ ಇದ್ದಾರೆ. ಅವರ ಕಡೆಗೆ ನೋಡುವಾಗ, ಗಾಂಧಿಜೀಯ ಕಡೆಗೆ ನೋಡುವಂತೆ ಸಾಮಾನ್ಯ ಮಟ್ಟದಿಂದೆತ್ತರಕ್ಕೆ ಕತ್ತೆತ್ತಬೇಕೆಂದೇನೂ ಇಲ್ಲ; ಪ್ರಚಲಿತ ಸ್ಥಿತಿಮತಿಯನ್ನು ಬದಲಾಯಿಸಿಕೊಂಡೇ ನೆಹರುವನ್ನು ಅನುಕರಿಸಬೇಕಾದ ಅಗತ್ಯವಿಲ್ಲ. ಅವರ ಗುಣನಡತೆ, ರೀತಿನೀತಿ, ಎಲ್ಲವೂ ಸಾಮಾನ್ಯ; ತೀರಾ ಲೌಕಿಕ. ಆದರೆ ಸರ್ವ ಸಮಾನ್ಯರಂಗದಲ್ಲಿ ಅಸಾಮಾನ್ಯನಾಗಿ—ಲೌಕಿಕತೆಯಲ್ಲೇ ದೈವಿಕತೆ ತುಂಬಿ—ರಾಜಿಸುತಿದ್ದಾರೆ ನೆಹರು. ಪ್ರಾಪಂಚಿಕನಿಗೆ ಅಸಾಧ್ಯವನ್ನಿಸುವಷ್ಟು ಶುದ್ಧ, ಸರಳ ಮನಸ್ಸು ಅವರದು; ಉದಾತ್ತ ಧೋರಣೆ, ವಿಶಾಲ ಭಾವನೆ, ಎಷ್ಟು ವಿಸ್ತಾರಗೊಳ್ಳಬಹುದೋ ಅಷ್ಟು ವಿಕಾಸಗೊಂಡ ಹೃದಯಿ ಶ್ರೀ ಜವಾಹಿರಲಾಲರು. ಅಭ್ಯಾಸಿಸಿ, ತಪಸ್ಸು ಮಾಡಿ ಅವರೇನೂ ಹೀಗಾದುದಲ್ಲ. ಜನ್ಮತಃ ಹೀಗಿದ್ದೇ ಬೆಳೆದು ಬಂದವರು. ಗಾಂಧೀಜಿಯಂತೆ ಆತ್ಮಶುದ್ಧೀಕರಣಕ್ಕಾಗಿ, ಸ್ವಾಭಿವೃದ್ಧಿಗಾಗಿ, ನೆಹರೂಜೀ ಒದ್ದಾಡಿದ ನಿದರ್ಶನವಿಲ್ಲ. ತನ್ನನ್ನು ತಾನೇ ದುರಸ್ತಿಪಡಿಸಿಕೊಳ್ಳುವುದರಲ್ಲಿ ಅವರೆಲ್ಲಿಯಾದರೂ ತಡೆದು ನಿಂತುದು ನೆನಪಾಗುವುದಿಲ್ಲ. ಗಾಂಧಿಜೀಗಾದರೂ ಮಾನವ ಜನಾಂಗದ ಸುಧಾರಣೆಗಾಗಿ ಲಕ್ಷ್ಯ ಕೊಟ್ಟಂತೆಯೇ ತನ್ನಾತ್ಮ ಶುದ್ಧೀಕರಣದತ್ತ ಪ್ರಾಣಾವಧಿ ಗಮನ ಕೊಡುವ ಕೆಲಸವಿದ್ದಿತು; ಆದರೆ ನೆಹರುಜೀಯಲ್ಲಿ ಅಂತಹ 'ಸ್ವಾರ್ಥ' ಕೂಡಾ ಇಲ್ಲ. ಅವರ ಎಲ್ಲಾ ಲಕ್ಷ್ಯ ರಾಷ್ಟ್ರದ ಕಡೆಗೆ; ಜನತೆಯ ಕಡೆಗೆ. ಒಳಗಿನ ಅಥವಾ ಹೊರಗಿನ ಯಾವುದೇ ಬೆಂಕಿಯಿಂದ ಬೇಯುದಂತಹ 'ಕಚ್ಚಾಮಾಲ.' ನೆಹರೂ ವ್ಯಕ್ತಿತ್ವ ಆದರದು ಪಕ್ವಗೊಂದುವ ಆವಶ್ಯಕತೆಯೇ ಇರದ ಸ್ವರುಚಿಯುಳ್ಳ ಹಸಿವಸ್ತು. ಹೀಗಾಗಿ 'ನೆಹರೂ ವ್ಯಕ್ತಿತ್ವವು ಸದಾ ಹಸಿಬಿಸಿಯಾಗಿಯೇ ಇದೆ. ಜನ್ಮತಃ ಉದಾತ್ತ, ಹುಟ್ಟು ನಾಯಕ ಜವಾಹಿರಲಾಲ ನೆಹರು ಸ್ವತಂತ್ರ ಭಾರತದ ಅಧಿಪತಿಯಾಗಿದ್ದಾರೆ. ಆಯಾಸ, ಸಂಕೋಚ, ಭಯಗೊಂದಲ ವಾವುದೂ ಇರದ ದೊಡ್ಡ ಮನಸ್ಸಿನ ಮನುಷ್ಯ ನೆಹರು. ದೇಶದಲ್ಲಿ ಇವೆಲ್ಲಾ ದೋಷ ದೌರ್ಬಲ್ಯಗಳು ತುಂಬಿದ್ದರೂ ದೇಶದ ಪರವಾಗಿ ಆಡುವ ಮಾಡುವ ಈ ಮನುಷ್ಯನ ದೊಡ್ಡ ಮನಸ್ಸು ಇಡೀ ದೇಶಕ್ಕೇನೇ ದೊಡ್ಡಸ್ತಿಕೆಯನ್ನು ಗಳಿಸಿಕೊಡುತ್ತಿದೆ. ಆದ್ದರಿಂದಲೇ ಸ್ವತಂತ್ರ ಭಾರತದ ದೊಡ್ಡ ಸೌಭಾಗ್ಯವೆಂದರೆ ನೆಹರೂ ನಾಯಕತ್ವ.

ಪೂರ್ಣತೆಯ ಮೂಲಶಿಲ್ಪಿ

"ಪರಕೀಯ ಹಂಗೆಲ್ಲವನ್ನೂ ಕಡಿದುಕೊಂಡ ಪೂರ್ಣ ಸ್ವಾತಂತ್ರ್ಯವೇ ಭಾರತದ ಗುರಿ" ಎಂಬ ಧ್ಯೇಯವನ್ನು ಪ್ರಥಮತಃ ಮುಂದಿಟ್ಟವರು ಜವಾಹಿರಲಾಲರೇ. ಸ್ವಾರ್ಥ, ಸಂಕುಚಿತ ಸ್ವಭಾವ, ಅರೆಮನಸ್ಸು, ಅಲ್ಪಾಭಿಲಾಷೆ, ಕುಂಟು ಆಸಕ್ತಿಯೆಂಬುದಾವುದೂ ನೆಹರೂ ಸ್ವಭಾವಕ್ಕೊಗ್ಗದು. ಭಾರತೀಯರಲ್ಲಿ 'ಸ್ವಾತಂತ್ರ್ಯ ಹೋರಾಟ ಜಾಗೃತಿ'ಯನ್ನು ನಿರ್ಮಿಸಿದವರು ಗಾಂಧಿಜೀಯಾದರೆ, ಅದು "ಪೂರ್ಣ ಸ್ವಾತಂತ್ರ್ಯ"ವೇ ಆಗಿರಬೇಕು, ಎಂದು ಆಗ್ರಹಪಡಿಸಿದವರು ಜವಾಹಿರಲಾಲರು. ಸ್ವಾತಂತ್ರ್ಯಾಂದೋಲನ ಯುಗವನ್ನು ನಿರ್ಮಿಸಿದ್ದ ಗಾಂಧಿಜೀ ಮೊದಲ ಭಾಗದಲ್ಲಿ 'ಸಾಮ್ರಾಜ್ಯಾಂತರ್ಗತ ಸ್ವರಾಜ್ಯ' 'ಸ್ವರಾಜ್ಯ' 'ಪೂರ್ಣ ಸ್ವರಾಜ್ಯ' ಎಂಬ ಅಂತಸ್ತುವಾರಾಗಿ ಕಾಂಗ್ರೆಸಿನ ಗುರಿಯನ್ನು ಕಾಲಕ್ರಮೇಣ ಮಾರ್ಪಡಿಸುತ್ತಾ ಬಂದಿದ್ದರು. ಈ ಗುರಿ ನಿರೂಪಣೆಯಲ್ಲಿ ಕೂಡಾ ಮಹಾತ್ಮಜೀಯ ರಾಜಕಾರಣ ಚಾತುರ್ಯವು ಬಿಂಬಿಸಿದ್ದಿತು. 'ಭಾರತದ ಸ್ವಾಧಿಕಾರಕ್ಕಾವ ತಡೆಯೂ ಆಗದ ಬ್ರಿಟಿಷ್ ಸಂಬಂಧ ಸ್ಪರ್ಶ ಕೂಡಾ ಇಲ್ಲದ ಬಾಳು' ಎಂಬ ಅರ್ಥವನ್ನು ಗಾಂಧಿಜೀಯ ಪೂರ್ಣ ಸ್ವರಾಜ್ಯ ಪದ ಸೂಚಿಸಿದ್ದಿಲ್ಲ. ರಾಷ್ಟ್ರದೊಳಗಿನ ಸಂಪೂರ್ಣಾಧಿಕಾರವು ದೊರೆಯಬೇಕೆಂಬುದೇ 'ಪೂರ್ಣ ಸ್ವರಾಜ್ಯ"ದ ಅರ್ಥ. ಬ್ರಿಟಿಷರ ಸಂಬಂಧವಿಟ್ಟುಕೊಳ್ಳಬೇಕಾ, ಅಥವಾ ಕಡಿದುಕೊಳ್ಳಬೇಕು ಎಂಬುದಾವುದನ್ನೂ ಇದು ಸೂಚಿಸುತ್ತಿಲ್ಲ ಅಂತಹ ಸೂಕ್ಷ್ಮ ನಿರ್ಧಾರವು ಕಾಲಬಂದಾಗಲೇ ಆಗುವಂತಹದು ಹೊರತು ಮುಂದಾಗಿ ಘೋಷಿಸುವಂತಹದಲ್ಲವೆಂದು ಗಾಂಧಿಜೀಯ ಅಭಿಪ್ರಾಯವಿದ್ದಿತು. ಇದು ವ್ಯವಹಾರ್ಯವೂ ಆಗಿತ್ತೆಂಬುದು ಕೊನೆಗೆ ಸ್ಪಷ್ಟವಾಯಿತು. 1947ನೇ ಆಗೋಸ್ತು 15ರಲ್ಲಿ ಭಾರತೀಯರು ತಮ್ಮಿಚ್ಛೆಯಂತೆ ರೂಪಿಸಿಕೊಳ್ಳಲಾಗುವ ಪರಮಹಕ್ಕು ಸ್ವರಾಜ್ಯ'ವನ್ನು ಬ್ರಿಟಿಷರು ಸಂಧಾನ ಮೂಲಕ ಬಿಟ್ಟುಕೊಟ್ಟಂತಹ ಸಂದರ್ಭ ಆ ಮೊದಲೇ ಬರಬಹುದು, ಬರಬೇಕು—ಹಾಗಾದ ವೇಳೆಯೇ ಭಾರತ ಸ್ವಾತಂತ್ರ್ಯಕ್ಕೊಂದು ರೂಪ ಕೊಟ್ಟರಾಯಿತು, ಎಂದೇ ಗಾಂಧಿಜೀ ಆ ಕಾಲದಲ್ಲಿ 'ಸ್ವರಾಜ್ಯ' ಗುರಿಯನ್ನು ಸಂದಿಗ್ಧಾಕಾರದಲ್ಲೇ ತೋರಿಸಿದ್ದರು. ಆದರೆ ಈ ಅಸ್ಪಷ್ಟ ನಿರೂಪಣೆಯು ತನ್ನ ಖಂಡತುಂಡ ಧೋರಣೆಗೊಗ್ಗದೆ "ಬ್ರಿಟಿಷ್ ಸಂಬಂಧ ಕಡಿದುಕೊಂಡ ಸಂಪೂರ್ಣ ಸ್ವಾತಂತ್ರ್ಯ"ವನ್ನೇ ಗುರಿಯಾಗಿ ಇಟ್ಟುಕೊಳ್ಳಬೇಕೆಂದು ಹಠ ಹಿಡಿದವರು ನೆಹರುಗಳೇ. ಈ ಹಠ ಸಾಧನೆಯಲ್ಲಿ ಜವಾಹಿರಲಾಲರು ತನ್ನ ಗುರು ಗಾಂಧಿಜೀಯ ಮ

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

ಷ್ಟು ತನ್ನ ತಂದೆ ಮೋತೀಲಾಲ ನೆಹರುಗಳ ದೃಷ್ಟಿಪಥದಿಂದ ಅದೃಶ್ಯರಾದುದಿದೆ. ಜವಾಹಿರಲಾಲರ ಒತ್ತಾಯವು ಅದಮ್ಯವಾದುದರಿಂದಲೇ, ಒಂದು ಗಡಿ ನಿಶ್ಚಯಿಸಿ "ಈ ಅವಧಿಯೊಳಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಬ್ರಿಟಿಷರು ಕೊಡದಿದ್ದರೆ, ಆ ಮೇಲೆ ಸಂಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿಯಾಗುವುದು." ಎಂದು ಸಾರಬೇಕಾಯಿತು. ಬ್ರಿಟಿಷರ ಭವಿಷ್ಯದಲ್ಲಿ ಆ ಅವಧಿ ಬರೆದಿರಲಿಲ್ಲ—1947ನೇ ಆಗೋಸ್ತು 15 ಬರೆದಿದ್ದಿತು. ಹಾಕಿದ ವಾಯಿದೆ ಮುಗಿದೊಡನೆ 1929ನೇ ಲಾಹೋರು ಕಾಂಗ್ರೆಸಿನಲ್ಲಿ, ಜವಾಹಿರಲಾಲ ನೆಹರುಗಳಿಂದ ಮುಂದೆ ಬಂದ 'ಸಂಪೂರ್ಣ ಸ್ವಾತಂತ್ರ್ಯ' ನಿರ್ಣಯವಾಯಿತು. 1930ನೇ ಜನವರಿ 26 ರಿಂದ ವರುಷಂಪ್ರತಿ 'ಸಂಪೂರ್ಣ ಸ್ವಾತಂತ್ರ್ಯ' ದಿನವಾಚರಿಸಲ್ಪಡುತ್ತಾ ಬಂದು 1950ನೇ ಜನವರಿ 26ರಲ್ಲಿ 'ಪೂರ್ಣ ಸ್ವತಂತ್ರ ಜನತಾರಾಜ್ಯ' ಸ್ಥಾಪನೆಯಾಯಿತು. ಈ ಜನತಾ ರಾಜ್ಯ ಧ್ಯೇಯವನ್ನು ಅಂದು ಕಡೆದ ಶಿಲ್ಪಿ ಮತ್ತು ಇಂದು ಈ ಜನತಾ ರಾಜ್ಯದ ಅಧಿಪತಿ ಶ್ರೀ ಜವಾಹಿರಲಾಲ ನೆಹರುಗಳೇ ಇದೊಂದು ಮಹತ್ವದ ಸಂಗತಿ.

ಅಭೇದ್ಯ, ಅದಮ್ಯ

ಧ್ಯೇಯ, ಧೋರಣೆ, ಭಾವನೆಗಳೆಲ್ಲವೂ ಹಿರಿದು—ಅಂತೆಯೇ ನೆಹರುಜೀಯ ಎದೆಗಾರಿಕೆಯೂ ದೊಡ್ಡದು. ಭಾವನಾ ದೃಷ್ಟಿಯನ್ನು ವಿಶಾಲವಾಗಿ ತೆರೆದುಕೊಂಡು, ದೂರಕ್ಕಿಟ್ಟುಕೊಂಡು, ಎದೆಯನ್ನು ಕಲ್ಲಾಗಿ ಮಾಡಿಕೊಂಡು, ತನ್ನ ಹಾದಿಯಲ್ಲಿ ಇದಿರಾಗುವುದೆಲ್ಲವನ್ನೂ ಮದಗಜದಂತಹ ಶಕ್ತಿ ಮತ್ತು ಚಿಂಕೆಯಂತಹ ಚುರುಕುತನದಿಂದ ಕಡೆಹಾಯ್ದು ಮುಂದೊತ್ತುವವರೆಂಬುದರಿಂದಲೇ ಜವಾಹಿರಲಾಲ ನೆಹರು ಮಹಾ ಮನುಷ್ಯ, ಅಸಾಮಾನ್ಯ. ಇಂಗ್ಲಾಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ, ಪಾಶ್ಚಾತ್ಯ ನಾಗರಿಕತೆಯನ್ನು ಮೈಗೂಡಿಸಿಕೊಂಡು ಮರಳಿದ್ದ ಜವಾಹಿರಲಾಲರ ಹೃದಯವು ಗಾಂಧಿಜೀಯ 'ರಾಷ್ಟ್ರ ಸ್ವಾತಂತ್ರ್ಯ'ಕರೆಗೆ ಕಿವಿಯಾಗಿ ಅರಳಿ, ಆಲಿಸಿದ್ದೇ ತಡ—ಯಾವುದೋ ಸತ್ಕಾರಕೂಟಕ್ಕೆಂದು ಇಡಲ್ಪಟ್ಟಿದ್ದ ಹಣ್ಣು ಕಾಯಿ ಹರಿವಾಣವನ್ನು ದೇವರ ಪೂಜೆಗಾಗಿ ಪೂಜಾರಿ ಒಯ್ದಂತಾಯಿತ; ಎಂತಹ ರಮ್ಯ ಸುಖ ಜೀವನವನ್ನು ಅನುಭವಿಸಲಿಕ್ಕಿದ್ದರೋ, ಮಧ್ಯದಲ್ಲೇ ನೆಹರುಗಳನ್ನು ರಾಷ್ಟ್ರ ಪೂಜೆಗಾಗಿ ಗಾಂಧಿಜೀ ಎಳೆದುಕೊಂಡರು ಮಗ ಗಾಂಧೀ ನೇತೃತ್ವದ ಅಸಹಕಾರ ಯುದ್ಧದಲ್ಲಿ ಧುಮುಕಿದಾಗ ತಂದೆ ಮೋತೀಲಾಲರು ಗಾಂಧೀಜೀಯನ್ನು ಅಣಕಿಸುವ ಪಾಶ್ಚಾತ್ಯ ಪ್ರಭುವಿನಂತೆಯೇ ಇದ್ದರು. ಆದರೆ ಅಖಿಲ ರಾಷ್ಟ್ರವನ್ನು ಆಕರ್ಷಿಸಿಕೊಳ್ಳುವ ಪ್ರಭಾವವಿದ್ದ ಜವಾಹಿರಲಾಲರ ವ್ಯಕ್ತಿತ್ವವು ತನ್ನ ರಕ್ತ ಸಂಬಂಧಿಗಳನ್ನು ಬಿಟ್ಟೀತೆ? ಜವಾಹಿರಲಾಲರ ಬೆನ್ನ ಹಿಂದೆ ಮೋತೀಲಾಲರೂ ಅದೇ ಹಾದಿಯನ್ನು ಹಿಡಿದರು; ನೆಹರೂ ಕುಟುಂಬವೇ ಅದನ್ನು ಅನುಸರಿಸಿತು. 'ಮನ್ನಣೆಯು ಆರಂಭ ಮನೆಯಲ್ಲೇ" ಎಂಬ ಗಾದೆಯಂತೆ ಜವಾಹಿರಲಾಲ ನೆಹರು ಮನೆಯವರನ್ನು ಕರಕೊಂಡೇ ರಾಷ್ಟ್ರಕ್ಕೆ ಕರೆಕೊಟ್ಟುದು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ಮೇಲೆ ನೆಹರುಗಳು ಆ ರಂಗದಲ್ಲಿ ಪ್ರದರ್ಶಿಸಿದ ಧೈರ್ಯ ಸಾಹಸವೆಂತಹದೆಂಬುದನ್ನು ಇಲ್ಲಿ ಜ್ಞಾಪಿಸಬೇಕೆಂದಿಲ್ಲ. ಹಿಂಸಾತ್ಮಕ ಯುದ್ಧಗಳಿಗಿಂತ ಅಹಿಂಸಾತ್ಮಕ ಹೋರಾಟಗಳಿಗೆ ಹೆಚ್ಚಿನ ಎದೆಗಾರಿಕೆ, ಆತ್ಮವಿಶ್ವಾಸ ಬೇಕಾಗುತ್ತದೇನೋ ನಿಜ. ಆದರೆ ಯೋಧ ಬಿಲ್ಲೆ ತೊಟ್ಟ ವೇಳೆಯೂ ಯುದ್ಧಾಪಾಯಗಳಿಂದ ತಪ್ಪಿಸಿಕೊಳ್ಳಲಾಗುವ ನಟನಾ ಸಂದರ್ಭಗಳು ಅಹಿಂಸಾತ್ಮಕ ಯುದ್ಧಗಳಲ್ಲೇ ಹೆಚ್ಚಾಗಿದ್ದುವೆನ್ನಬಹುದು. ಇದಕ್ಕಪವಾದವಾಗಿದ್ದವರಲ್ಲಿ ನೆಹರು ಒಬ್ಬರು, ಎಲ್ಲಿ ಅಪಾಯವಿದೆಯೋ ಅಲ್ಲಿ ಮುನ್ನುಗ್ಗುವ ಎದೆಗಾರಿಕೆಯಲ್ಲಿ ಇವರು ಅಸಾಮಾನ್ಯರೇ. ಇದು ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ಮಾತ್ರವಲ್ಲ, ಇಂದಾದರೂ ಹಾಗೆಯೇ. ಬ್ರಿಟಿಷ್ ಸರಕಾರದ ಕುದುರೇಗೊರಸುಗಳಿಗೆ ಇವರು ತಲೆ ಕೊಟ್ಟಿದಿದೆ ಲಾಠಿ, ಗುಂಡುಗಳ ಹಾರಾಟ ನಡೆದಿದ್ದಲ್ಲಿಗೆ ಮುನ್ನುಗ್ಗಿದುದಿದೆ. ಸ್ವಾತಂತ್ರ್ಯ ಹೋರಾಟ ಯುಗವಾರಂಭಿಸಿ, ಅದು ಸುಖಾಂತ್ಯಗೊಳ್ಳುವವರೆಗಿನ ಅವಧಿಯ ಬಹು ಭಾಗದಲ್ಲಿ ಜವಾಹಿರರಿದ್ದುದಂತೂ ಜೈಲುಕೋಣೆಯಲ್ಲೇ. ಹೀಗೆ ಸವೆದು ನವೆದು ಸ್ವಾತಂತ್ರ್ಯ ದೊರಕಿಸಿಕೊಂಡ ಮೇಲಾದರೂ ಯುದ್ಧ ಸೇನಾನಿಗಳಿಗೆ ಕ್ರಮಪ್ರಾಪ್ತವಿರುವ ವಿರಾಮಸುಖ ನೆಹರೂಗಳಿಗೆ ದೊರೆಯಲಿಲ್ಲ. ದೊರೆತ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಜವಾಬ್ದಾರಿಯನ್ನೂ ಅವರೇ ಹೊರಬೇಕಾಯಿತು. ಜಾತೀಯತಾ ಪುಂಡಾಟವು ಕಾಡು ಪ್ರಾಣಿ ಕಠೋರತೆಯುಳ್ಳವರು ಬೇರಿಲ್ಲ ಒಂದು ಜಾತಿಯು ಮನುಷ್ಯನನ್ನು ಹಿಂಸಿಸುವಾಗ ಮತ್ತೊಂದು ಜಾತಿಯ ಮನುಷ್ಯನು, ಧನವನ್ನು ಅಪ್ಪಳಿಸುವ ಹುಲಿಗಿಂತಲೂ ಕ್ರೂರ ಸ್ವಭಾವದವನಾಗುತ್ತಾನೆ, ಎಂಬುದು ಕಳೆದ ಜಾತೀಯ ಗೊಂದಲಗಳಲ್ಲಿ ಅನುಭವಕ್ಕೆ ಬಂದಿರುವ ಸಂಗತಿ. ಜಾತೀಬೇಟೆಯಾಡುವವರು ಆ ಸಂದರ್ಭದಲ್ಲಿ ದೇವರೆದ್ದು ಬಂದರೂ ಹೊಡೆದು ಹಾಕಿಯಾನು, ಎಂಬ ಗಾದೆಯಿದೆ. ಮಂತ್ರಿ, ಪ್ರಮುಖರಂತೂ ಸಾಮಾನ್ಯ ಸ್ಥಿತಿಯಲ್ಲೂ ಪಹರೇಪಂಜರದೊಳಗಿದ್ದುಕೊಂಡೇ ತಿರುಗತಕ್ಕವರು. ಆದರೆ ಜವಾಹಿರಲಾಲ ನೆಹರುಗಳು ಡಿಲ್ಲಿ ಮತ್ತು ಬಿಹಾರಿನಲ್ಲಿ ಪ್ರತ್ಯಕ್ಷ ಜಾತೀಯ ಗೊಂದಲಗಳು ನಡೆಯುವಲ್ಲಿಗೇನೇ ನುಗ್ಗಿ ಹೋಗಿ, ಗೆದ್ದು ಬಂದವರು ಅಧಿಕಾರ ಬಲದಿಂದಲ್ಲ, ಆತ್ಮಬಲದ ಅಬ್ಬರದಿಂದ ಅಲ್ಲಿಂದಲ್ಲಿಯೇ ಆ ಪುಂಡರನ್ನು ಚದರಿಸಿದವರು. ಆಗ ತಾನೇ ರಾಷ್ಟ್ರ ವಿಭಜನೆಯಾಗಿತ್ತು, ಲಾಹೋರಿನ ರಸ್ತೆಯಲ್ಲಿ ಹಿಂದುವಿನ, ಅಮೃತಸರದ ರಸ್ತೆಯಲ್ಲಿ ಮುಸಲ್ಮಾನನ ಮುಖ ಕಂಡುಬಂದೊಡನೆಯೇ ಬೆನ್ನಿಗೆ ಚೂರಿ ಬೀಳುತ್ತಿದ್ದ ದಿನವದು. ಪಾಲುಪಟ್ಟೀ ಸಂಬಂಧದ ವ್ಯವಸ್ಥೆಗಾಗಿ ನೆಹರು ತನ್ನ ಸಂಗಾತಿಗಳೊಂದಿಗೆ ಲಾಹೋರಿಗೆ ಹೋಗಿದ್ದರು ಅಲ್ಲಿ ನೆಹರುಗಳ ಜೀವಾಪಾಯದ ಹೊಣೆಹೊತ್ತಿದ್ದ ಪಾಕಿಸ್ತಾನ್ ಸರಕಾರವು ಕಣ್ಣುಗಣ್ಣೆಯಿಟ್ಟು ಕಾಯಬೇಕಾಗಿತ್ತು. ಮೇಜಿನ ಮುಂದೆ ಮಾತಾಡುತ್ತಾ ಕುಳಿತಲ್ಲಿಂದ ಎದ್ದು ಹೋದ ನೆಹರುಗಳು ಕೂಡಲೇ ಬರಲಿಲ್ಲ, ಕೆಲಹೊತ್ತಿನವರೆಗೂ ಅವರ ಪತ್ತೆಯೇ ಇಲ್ಲ. ಎಲ್ಲರೂ ಅತಿರೇಕ ಗಾಬರಿಯಾದರು. ಕೆಲ ಹೊತ್ತಿನಲ್ಲಿ ಶ್ರೀ ಜವಾಹಿರಲಾಲರು ಪ್ರವೇಶಿಸಿ ಹೇಳದೆ ಹೊರಟು ಹೋದುದಕ್ಕಾಗಿ ಕ್ಷಮೆ ಯಾಚಿಸುತ್ತಾ ತಾನು ಪೇಟೆಯಲ್ಲಿರುವ ತನ್ನ ಹಳೇ ಸ್ನೇಹಿತ ಮುಸಲ್ಮಾನ್ ಗೃಹಸ್ಥನೊಬ್ಬನ ಭೇಟಿಗಾಗಿ ಅವನಿದ್ದಲ್ಲಿಗೆ ಹೋಗಿ ಬಂದೆ, ಎಂದಾಗ ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.- ಸ್ವಾತಂತ್ರ್ಯ ಪೂರ್ವದ ಒಂದು ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಯಾಗಿದ್ದ ಶ್ರೀ ಗಿರಿಯವರ ಇದಿರಾಗಿ 'ಜಸ್ಟೀಸ್' ಪರವಾಗಿ ಬೊಬ್ಬಿಲಿ ರಾಜರು ನಿಂತಿದ್ದುದರಿಂದ ಅಲ್ಲಿಯ ಪ್ರಚಾರರಂಗ ಅತಿರೇಕ ಕಾವೇರಿದ್ದಿತು. ಪ್ರಚಾರಕ್ಕಾಗಿ ಶ್ರೀ ನೆಹರು ಬಂದಿದ್ದುದರಿಂದ ಕಾಂಗ್ರೆಸಿಗರ ಮೆರವಣಿಗೆ ಹೊರಟಿದ್ದಿತು. ಈ ಪ್ರಚಾರವನ್ನು ಆನೆಯಿಂದ ತುಳಿಯಿಸುವೆವೆಂದು ಬೊಬ್ಬಿಲಿ ರಾಜರ ಕಡೆಯವರು ಮೆರವಣಿಗೆಗಿದಿರಾಗಿ ಆನೆಯನ್ನು ಬಿಟ್ಟಿದ್ದರಂತೆ, ಟೋಪಿಯುದುರಿ ಹೋಗಿ, ಮೆರವಣಿಗೆಯವರೆಲ್ಲಾ ಚೆಲ್ಲಾಪಿಲ್ಲಿಯಾಗುವಾಗ ನೆಹರು ಆನೆಯ ಇದಿರಿಗೆ ನೆಗೆದರಂತೆ. ಆಗ ಆ ಆನೆಗೆ ಕೂಡಾ ಇವರು ಸಿಂಹವಾಗಿ ತೋರಿ ಅದು ಹಿಂಜರಿದಿತ್ತೆಂಬ ಕಥೆ ಕೇಳಿ ಬಂದಿತ್ತು. ಇಂತಹ ಅನ್ಯಾದೃಶ ಎದೆಗಾರಿಕೆಯನ್ನು ಜವಾಹಿರಜೀ ಪ್ರದರ್ಶಿಸಿದ್ದ ಸಂದರ್ಭಗಳು ಬಹಳವಿವೆ. ಆ ಕಾಲದಲ್ಲಿ ಶೇಕ್ ಅಬ್ದುಲ್ಲಾ ನಾಯಕತ್ವದ ಸ್ವಾತಂತ್ರ್ಯಾಂದೋಲನವನ್ನು ಮುರಿಯಲು ಕಾಶ್ಮೀರದ ಮಹಾರಾಜಾ ಸರಕಾರವು ಅಬ್ದುಲ್ಲಾರನ್ನು ಬಂಧಿಸಿ ಘೋರ ದಬ್ಬಾಳಿಕೆಯನ್ನು ಆರಂಭಿಸಿದ್ದಿತು. 'ನೋಡಿ ಬಿಡೋಣ!' ಎಂದು ನೆಹರುಜೀ ಕಾಶ್ಮೀರಕ್ಕೆ ಹೊರಟಿದ್ದರು. ಒಳಪ್ರವೇಶಿಸುವ ಸೇತುವೆಯ ಉದ್ದಕ್ಕೂ ಕಾಶ್ಮೀರದ ಪೋಲೀಸರು ಬೇಲಿ ಹೆಣೆದಂತೆ ಬೆಯನೆಟ್‌ಗಳನ್ನು ಮುಂಚಾಚಿ, ಒಳಪ್ರವೇಶಿಸುವ ಯಾರನ್ನೇ ಆದರೂ ತಡೆದಿಡಲು ನಿಂತಿದ್ದರು ಇದನ್ನು ಕಂಡು ಆವೇಶಗೊಂಡ ನೆಹರು ಆ ಬೆಯನೆಟುಗಳಿಗೆ ಎದೆ ಚಾಚಿ ದೂಡಿಕೊಂಡು ಹೋಗಿ ಒಂದೆಡೆ ಘಾಯಮಾಡಿಸಿಕೊಂಡ ದೃಶ್ಯವು ಇಂದೂ ನೆನಪಿಗೆ ಬರುವಂತಹದೇ. ಇತ್ತೀಚಿನ ವರೆಗೂ ಅವರೊಬ್ಬ ಉತ್ತಮ ಕುದುರೆ ಸವಾರ. ರಕ್ತಚಲನೆ ತುಸು ಮಾತ್ರ ಮಂದವಾದವರು ಕೂಡಾ ಹೆದರಬೇಕಾದಂತಹ ದೂರದ ಪ್ರಯಾಣ, ಏರಿಳತಗಳನ್ನು ಕೈಕೊಳ್ಳುವದೆಂದರೆ ನೆಹರುಗಳಿಗೆ ಈ ಪ್ರಾಯದಲ್ಲೂ ಅತ್ಯುತ್ಸಾಹ. ಮೊನ್ನೆ ತಾನೇ ಬೊಂಬಾಯಿಗೆ ಬಂದಲ್ಲಿ ಜವಾಹರಲಾಲ ನೆಹರು ಹೇಳಿದರು: "ಡಾಕ್ಟರರು ನನ್ನ ಮೇಲೆ ತಮ್ಮ ಬುದ್ಧಿವಂತಿಕೆ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

The Canara Mutual Assurance Co. Ltd.

ESTD 1935. H. O UDIPI.

Canara Mutual occupies a unique position of aist nction amongst the sound Life Offices in India Constituted as a Mutual Company, the entire profits are shared by the participating Policy-holders alone, there being no share-holders It has paid bonus since inception and in all the Valuations conducted on progressive ly stringent basis it has shown a surplus The Company has maintained its reputation by fair treatment For more details about this Pro gresstve Mutual Life Office, write to-day to its Head Office

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊದಿವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಯನ್ನು ಪ್ರಯೋಗಿಸುವಂತಹ ಸಂದರ್ಭವು ಈ ವರೆಗೂ ಬಂದುದಿಲ್ಲ. ಡಾಕ್ಟರರ ಆಶ್ರಯಹೊಂದಬೇಕಾಗುವ ದುರ್ದೈವಿಗಳ ಕುರಿತು ನನ್ನ ಹಾರ್ದಿಕ ಸಹಾನುಭೂತಿಯಿದೆ” ಜವಾಹಿರಲಾಲರು ಅನಾರೋಗ್ಯಕ್ಕೀಡಾಗಿ ಚಿಕಿತ್ಸೆ ಪಡೆದುದಿಲ್ಲ; ಆಯಾಸಗೊಂಡು ವಿರಾಮವನನುಭವಿಸಿದುದೂ ಇಲ್ಲ. ಇದು ಆಶ್ಚರ್ಯದ ಮತ್ತು ಆನಂದದ ವಿಷಯವಲ್ಲವೆ?

ಆವಶ್ಯಕ ನಾಯಕ

ರಾಷ್ಟ್ರೀಯ ಮತ್ತು ಜಾಗತಿಕ ವಿಶಾಲ ಭಾವನೆ, ಧೋರಣೆಗಳಂತೆಯೇ ಖಾಸಗೀ ಧೈರ್ಯ ಸಾಹಸಗಳ ವರೆಗಿನ ಎಲ್ಲಾ ಆವಶ್ಯಕ ಗುಣಗಳೂ ತುಂಬಿರುವ ಮಹಾ ಮನುಷ್ಯ ನೆಹರು. ಇದಕ್ಕನುಗುಣವಾಗಿ ಅಗಾಧ ಜ್ಞಾನಾನುಭವ ಮತ್ತು ಪ್ರತಿಭೆ ಕೂಡಾ ಇವರಲ್ಲಿವೆ ಪ್ರಭಾವಶಾಲಿ ವಾಗ್ಮಿ; ಉತ್ತಮ ವರ್ಗದ ಲೇಖಕ ಇವರು. ರಾಜಕೀಯದಲ್ಲಿ ಆತ್ಯಾವಶ್ಯವಿರುವ ಕುತಂತ್ರ ಇವರಲ್ಲಿಲ್ಲ– ಅನ್ಯಾಯಗಳನ್ನು ಕಂಡಾಗ ಇವರು ಕೆರಳುವುದು ಹೆಚ್ಚಾಯಿತು– ಅವಸರ ಜಾಸ್ತಿ, ಇತ್ಯಾದಿ ಕೆಲವು ಲೋಪದೋಷಗಳನ್ನು ಪಂಡಿತಜೀಯಲ್ಲಿ ಕಾಣಬಹುದು. ‘ಮನುಷ್ಯನೆಂದಿಗೂ ಪೂರ್ಣತೆ ಹೊಂದಲಾರ’ ಎಂಬ ಸಿದ್ಧಾಂತಕ್ಕೆ ಕೊರತೆ ಬರಬಾರದೆಂದೇ ಈ ಅಗಣ್ಯ ದೋಷಗಳು ಅವರಲ್ಲಿ ಉಳಿದುಕೊಂಡಿರಬೇಕು. ನೆಹರೂ ನಾಯಕತ್ವವು ಭಾರತಕ್ಕೀಕಾಲದಲ್ಲಿ ಜೂಕೆ ಅಗತ್ಯವೆಂಬುದನ್ನು ನಾವು ನಿತ್ಯಾನುಭವದಿಂದ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ಆಲೋಚಿಸಿ ಮುಂದಿಟ್ಟು ನಡೆಸಿಕೊಳ್ಳಲಿಕ್ಕಿದೆ. ಸ್ವಾತಂತ್ರ್ಯ ದೊರತು ಮೂರು ವರುಷ, ಮೂರು ತಿಂಗಳುಗಳಷ್ಟೇ ಆಗಿವೆ. ಈ ಅವಧಿಯಲ್ಲಿ ರಾಷ್ಟ್ರದ ವಿವಿಧ ಭಾಗಗಳಲ್ಲಿ, ವಿವಿಧ ಪಂಗಡಗಳಲ್ಲಿ, ಮತ್ತು ಸರ್ವಸಾಮಾನ್ಯವಾಗಿ ತೋರಿ ಬರುತ್ತಿರುವ ಪ್ರತ್ಯೇಕತಾ ಭಾವನೆ, ಸ್ವಾರ್ಥ ಸಂಕುಚಿತತೆಗಳಿಗೆ ಆಧಾರ ದೊರೆತರೆ, ಅವು ರಾಷ್ಟ್ರವನ್ನು ಛಿನ್ನಛಿದ್ರಗೊಳಿಸಲು ಸಾಕಾಗಬಲ್ಲುವು. ರಾಷ್ಟ್ರದೊಳಗಡೆಯಲ್ಲಿ ಇಂತಹ ಬಿರುಕು ಭಿನ್ನತೆಗಳುಂಟಾದರೆ ಈ ಕಾಲದಲ್ಲಿ ಎಲ್ಲಾ ವಿಭಾಗಗಳೂ ಅಲ್ಲಲ್ಲೇ ಪತನಕ್ಕೀಡಾಗುವುದು ಖಂಡಿತ. ಇಂತಹ ಗಂಡಾಂತರವೊದಗದಿರಬೇಕಾದರೆ ರಾಷ್ಟ್ರದ ಅಖಂಡತೆ ಸಂದೇಹಾತೀತವಿರಬೇಕು. ಸುದೃಢವಿರಬೇಕು. ಅದಕ್ಕೆ ಅಖಿಲ ರಾಷ್ಟ್ರ ಮಾನ್ಯ ಪ್ರಭಾವೀ ನಾಯಕತ್ವವೇ ಬೇಕು. ಶ್ರೀ ಜವಾಹಿರಲಾಲ ನೆಹರು ಇದ್ದಾರಾದ್ದರಿಂದ ಭಾರತಕ್ಕೆ ಅಂತಹ ನಾಯಕತ್ವವಿದೆ. ರಾಷ್ಟ್ರದ ಯಾವುದೇ ಮೂಲೆಯವರಿಗೆ, ಅಥವಾ ಯಾವುದೇ ವಿಭಾಗದವರಿಗೆ ತಮ್ಮ ಸ್ಥಳೀಯ ಅಥವಾ ಪಂಗಡ ನಾಯಕರಲ್ಲಿರದಂತಹ ಆತ್ಮೀಯತೆ ಮತ್ತು ಗೌರವಾದರಗಳು ಜವಾಹಿರಲಾಲ ನೆಹರುಗಳ ಮೇಲಿರುವುದರಿಂದಲೇ ಸಂಕುಚಿತ ಸ್ವಾರ್ಥಕ್ಕಿಂತ ರಾಷ್ಟ್ರೀಯತೆ ಹೆಚ್ಚಿನದಾಗಿ, ಸುದೃಢವಾಗಿ ಉಳಿದಿದೆ. ಎರಡನೆಯದೆಂದರೆ ಅಂತರ್ರಾಷ್ಟ್ರೀಯ ಸ್ಥಾನ ಭಾರತವೆಷ್ಟೇ ದೊಡ್ಡ ರಾಷ್ಟ್ರವಾಗಿದ್ದರೂ ಸ್ವತಂತ್ರಗೊಂಡು ಮೂರೂ ಕಾಲು ವರುಷಗಳೊಳಗೆ, ಸಮೃದ್ಧಿ ಅಥವಾ ಶಕ್ತಿಯ ಮೂಲಕ ಎಲ್ಲರ ಲಕ್ಷ್ಯವನ್ನು ಸೆಳೆಯುವ ಸ್ಥಿತಿಗೇನೂ ಬಂದಿಲ್ಲ. ಆದರೂ ಈ ಅಲ್ಪಾವಧಿಯಲ್ಲಿ ಸ್ವಾತಂತ್ರ್ಯ ಭಾರತಕ್ಕೆ ಅಂತರ್ರಾಷ್ಟ್ರೀಯ ಪ್ರಸಿದ್ಧಿ ಮತ್ತು ಗಣ್ಯಸ್ಥಾನವನ್ನು ದೊರಕಿಸಿಕೊಟ್ಟಿರುವುದು ನೆಹರೂ ನಾಯಕತ್ವ. ಭಾರತದ ಪ್ರಚಲಿತ ಸ್ಥಿತಿಯಂತೆಯೇ ಆದರ ವೈಶಿಷ್ಟ್ಯ ಮತ್ತು ಹಿರಿತನಕ್ಕನುಗುಣವಾದ ಧೋರಣೆಯನ್ನೇ ವಹಿಸಿದ್ದಾರೆ ಶ್ರೀ ಜವಾಹಿರಲಾಲರು. ಜಾಗತಿಕ ರಂಗದಲ್ಲಿ ರಾಷ್ಟ್ರ ಪಾಳಯಗಳ ಪೈಕಿ ಯಾವುದಕ್ಕೂ ಕಟ್ಟುಬೀಳದೆ. ಶಾಂತಿಸಾಧಕ ತಟಸ್ಥ ಧೋರಣೆ ವಹಿಸಿದ್ದಾರೆ. ಪ್ರಮುಖ ರಾಷ್ಟ್ರಪಾಳಯಗಳೊಳಗಿನ ಮೇಲಾಟದ ಈ ಕಾಲದಲ್ಲಿ ಜವಾಹಿರಲಾಲರ ಈ ಮಧ್ಯಗಾಮೀ ವರ್ತನೆಗೆ ಹೆಚ್ಚು ಬೆಲೆ ಬಂದಂತೆ ಕಾಣುತ್ತಿಲ್ಲವೇನೋ ನಿಜ; ಆದರದು ಬೆಲೆ ಬಾಳಲೇಬೇಕು; ಪರಿಣಾಮ ಮಾಡಲೇ ಬೇಕು. “ಕೋರಿಯದಲ್ಲಿ 38ನೇ ಅಕ್ಷಾಂಶರ ಗೆರೆ ದಾಟಿ ಸಂ. ರಾ. ಸೇನೆಗಳು ಉತ್ತರಕ್ಕೆ ಕಾಲಿಡಬಾರದ. ಕಾಲಿಟ್ಟರೆ ಚೈನವು ಆ ಹೋರಾಟದಲ್ಲಿ ಧುಮುಕಿ ಘರ್ಷಣೆ ದೊಡ್ಡದಾಗುವ ಸಂಭವವಿದೆ” ಎಂದು ಸುಮಾರು ಒಂದು ತಿಂಗಳ ಹಿಂದೆ ನೆಹರುಗಳು ಎಚ್ಚರಿಕೆ ಕೊಟ್ಟಿದ್ದರೆ, ಆ ದಿನದಿಂದ ಮೊನ್ನೆಯ ವರೆಗೂ ಆ ಕುರಿತು ಅಮೆರಿಕ, ಬ್ರಿಟನುಗಳು ಪರಿಹಾಸ್ಯ ಮಾಡಿದ್ದುವು. ಆದರೆ ನೆಹರೂ ಅರಿದ ಭವಿಷ್ಯ ಸತ್ಯವಾದ ಅನುಭವ ಮೊನ್ನೆಯಿಂದ ಅವರಿಗಾಗುತ್ತಿದೆ. ಚೈನೀ ಸೇನೆ ಕೊರಿಯಾ ಯುದ್ಧದೊಳಗೆ ಪ್ರವೇಶಿಸಿದುದು ಹೊಡೆತದ ಪೂರಕವೇ ಈಗ ತಿಳಿದುಬಂದಿದೆ. ಭದ್ರತಾ ಕೌನ್ಸಿಲಿಗಾ ಕುರಿತು ದೂರು ಬಂದಿದೆ; ಚೈನೀ ಸೇನೆಯನ್ನು ಕೊರಿಯದಿಂದ ಹಿಂದೆ ಹೋಗಬೇಕೆಂದು ಅಪ್ಪಣಿಸಲು ಭದ್ರತಾ ಕೌನ್ಸಿಲು ಮುಂದಾಗಿದೆ. ಅದು ಹಿಂದೆ ಹೋಗದಿದ್ದರೆ, ಹಿಂದೆ ದೂಡುವುದಕ್ಕೂ ಮುಂದಾಗದೆ ನಿರ್ವಾಹವಿಲ್ಲ. ಸರಿ, ಮತ್ತೆ ಆ ದೂಡಾಟ ಎಲ್ಲಿ ವರೆಗೆ ಬಂದೀತು, ಯುದ್ಧವೆಷ್ಟು ದೊಡ್ಡದಾದೀತು, ಎಂಬುದನ್ನು ಭಯ ಗೊಂದಲದೊಡನೆಯೇ ಊಹಿಸಬೇಕ. ಸಂಗತಿ, ಜವಾಹಿರಲಾಲ ನೆಹರೂ ಹೇಳಿದ್ದಲ್ಲಿಗೇ ಬಂತು! ನೆಹರೂ ಸೂಚನೆಯಂತೆ ನಡೆದುಕೊಳ್ಳುವುದುತ್ತಮವಿದ್ದಿತು, ಎಂದು ಈಗ ಹೆಚ್ಚು ಮಂದಿಗೆ ಹೊಳೆದಿರಬೇಕು. ಅಂತೆಯೇ ಕಾಲಾನುಗುಣವಾಗಿ ನೆಹರುಗಳ ಶಾಂತಿ ಸಾಧಕ ತಟಸ್ಥ ಧೋರಣೆಯೇ ಉತ್ತಮವೆಂಬ ಅನುಭವ ಎಲ್ಲರಿಗೂ ಆಗುತ್ತಾ ಹೋದೀತು; ಜಗತ್ತನ್ನೇ ಶಾಂತಿ ಪಥದಲ್ಲಿ ಮುನ್ನಡೆಸುವ ಯೋಗ್ಯತೆ ಭಾರತಕ್ಕೆ ಬಂದೀತು; ನೆಹರುಗಳಿದ್ದಾರಾದ್ದರಿಂದ ಈ ಭವ್ಯ ಭವಿಷ್ಯವೂ ಇದೆ. ಸಮತಾವಾದಿ ನೆಹರು ಭಾರತದೊಳಗಿನ ಪ್ರಗತಿ ಚಿಂತಕರಿಗೊಂದು ಭರವಸೆಯಾಗಿರುವಂತೆಯೇ, ಶಾಂತಿವಾದಿ ನೆಹರು ಜಾಗತಿಕ ಶಾಂತಿ ಚಿಂತಕರಿಗೊಂದು ಆಶ್ರಯವಾಗಿಯೂ ಇದ್ದಾರೆ.

ಶ್ರೀ. ಜವಾಹಿರಲಾಲ ನೆಹರು ಚಿರಾಯುವಾಗಲಿ.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕುಗಳೂ ವಿಟೆಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ,
ವ್ಯಾಲಕ

M. Mendosa,
Proprietor

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp: His Master's Voice,
Sir Phirozshah Mehta Road, FORT, BOMBAY.

ಟಿಬೇಟ್ ನೇಪಾಲ ಗೊಂದಲ!

ಸ್ಸೆರ್ದಾರ್ ಪಟೇಲರ ಮಾತಿನಿಂದಲೇ ಹೇಳುವದಾದರೆ «ಸುರಕ್ಷಿತವೆಂದು ಇದುವರೆಗೆ ಭಾವಿಸಲ್ಪಟ್ಟಿದ್ದ ಭಾರತದ ಉತ್ತರ ಸರಹದ್ದುಗಳೀಗ ಹೊರಗಿನ ಅಪಾಯಗಳಿಗೆ ಅಗಲವಾಗಿ ತೆರೆಯಲ್ಪಟ್ಟಿವೆ.” ಗಡಿಯಲ್ಲಿರುವ ಒಂದು ಶಾಂತ ಹಾಗೂ ಸಣ್ಣ ರಾಷ್ಟ್ರ ಟಿಬೇಟಿನೊಳಗೆ ಚೈನೀ ಕಮ್ಯೂನಿಸ್ಟ್ ಸೇನೆ ನುಗ್ಗಿ, ಅದನ್ನಿಷ್ಟರಲ್ಲೇ ವಶಪಡಿಸಿಕೊಂಡಿರುವಾಗ ಮತ್ತೊಂದು ಪುಟ್ಟ ಮತ್ತು ಯೋಧರಾಷ್ಟ್ರ ನೇಪಾಳದಲ್ಲಿ ರಾಜರ ಪಲಾಯನ ಮತ್ತು ಅಂತರ್ಯುದ್ಧ ನಡೆದಿದೆ ಇವೆರಡು ರಾಷ್ಟ್ರಗಳ ಆಂತರಿಕ ಆಗುಹೋಗುಗಳಲ್ಲೂ ಭಾರತವು ಕೈ ಹಾಕುವಂತಿಲ್ಲ; ಅಂತಹ ಲವಮಾತ್ರ ಆಸೆಯನ್ನು ಕೂಡಾ ಅದು ಇಟ್ಟುಕೊಂಡಿಲ್ಲ ಆದರೆ ಇವೆರಡೂ ಭಾರತದ ಸರಹದ್ದು ಗಡಿಗಳಾಗಿವೆ; ಈ ರಾಷ್ಟ್ರಗಳೊಳಗಡೆಯಲ್ಲಿ ಏಳುವ ಪ್ರಳಯ ತೆರೆಗಳು ಭಾರತದ ದಂಡೆಗೆ ಬಡಿಯುವಂತಹವಿವೆ; ಮತ್ತು ಹಾಗೆಯೇ ಒಳಗಡೆಗೂ ಕವಿದು ಬೀಳುವ ಅಪಾಯವಿದ್ದೇ ಇದೆ. ಅದ್ದರಿಂದಲೇ ಟಿಬೇಟ್ ಮತ್ತು ನೇಪಾಳದ ಸರಹದ್ದಾಗಿರುವ ಅತಿ ವಿಸ್ತಾರ ಸ್ಥಳದಲ್ಲಿ ಭಾರತವು ಪ್ರಬಲ ಕಹರೆಗಳನ್ನಿಡಬೇಕಾಗಿ ಬಂದಿದೆ. ಮಾತ್ರವಲ್ಲ ಅವೆರಡು ರಾಷ್ಟ್ರಗಳ, ಭಾರತದ ಮತ್ತು ಅಖಿಲ ಜಗತ್ತಿನ ಹಿತದೃಷ್ಟಿಯಿಂದ ಟಿಬೇಟ್ ವ ತ್ತು ನೇಪಾಳಗಳ ಗೊಂದಲಗಳನ್ನು ನ್ಯಾಯೋಚಿತ ವಿಧಾನಗಳಿಂದ ಶಮನಿಸುವ ಪ್ರಯತ್ನವನ್ನು ಭಾರತ ಕೈಕೊಂಡಿದೆ ಅಂತೂ ಸ್ವಾತಂತ್ರ್ಯವು ಹುಟ್ಟಿಗಾರಿಕೆಯ ಎಂತೆಂತಹ ಹೊರೆಗಳನ್ನು ತಂದೊಡ್ಡುತ್ತದೆಂಬ ಅನುಭವವು ಸ್ವತಂತ್ರ ಭಾರತಕ್ಕೆ ಮೇಲಿಂದ ಮೇಲೆ ಆಗುತ್ತಾ ಬಂದಿತ್ತು; ಈಗ ಆ ಸಂಬಂಧದ ಒಂದು ದೊಡ್ಡ ಪರೀಕ್ಷೆಯೇ ನಡೆದಿದೆ.

ಟಿಬೇಟಿನಲ್ಲಿ

ಭಾರತ ಸರಕಾರದ ಹಿತೋಪದೇಶಗಳನ್ನು ಅಲಕ್ಷ್ಯಿಸಿ, ಚೈನೀ ಕಮ್ಯೂನಿಸ್ಟ್ ಸರಕಾರವು ಟಿಬೇಟ್ ಆಕ್ರಮಣವನ್ನು ಒಂದೇ ಸವನೆ ನಡೆಸುತ್ತಿದ್ದ ಮೇಲೆ,ಟಿಬೇಟ್ ಸರಕಾರವು ಆ ಸಂಬಂಧವಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ದೂರು ಕೊಟ್ಟಿದ್ದಿತು. ಆದರೆ ಸಂ ರಾ.ಸಂಘವು ಈ ಪ್ರಶ್ನೆಯೊಳಗೆ ತಲೆಹೊಗಿಸುವ ಸಂಭವವಾಗಲೀ ಅದರ ಸಾಧ್ಯತೆಯಾಗಲೀ ಕಂಡು ಬರುವುದಿಲ್ಲ. ಭಾರತದಲ್ಲಿರುವ ಅಮೇರಿಕದ ರಾಯಭಾರಿಯಂತೂ “ಅಮೇರಿಕಕ್ಕೆ ಟಿಬೇಟಿನೊಳಗೆ ಕೈಹಾಕುವ ಇಚ್ಛೆಯಿಲ್ಲ. ಅದು ಸಂಪೂರ್ಣವಾಗಿ ಟಿಬೇಟ್ ,ಮತ್ತು ಚೈನಗಳೊಳಗಿನ ಪ್ರಶ್ನೆಯೆಂದು ನನ್ನ ರಾಷ್ಟ್ರದ ಅಭಿಪ್ರಾಯವಿದೆ” ಎಂದಿದ್ದಾರೆ ಈ ನಡುವೆ ಆವಸರದಿಂದ ಕಾರ್ಯ ಸಾಧಿಸಬೇಕೆಂದು ಉಚ್ಛಾಹಿಸಲ್ಪಟ್ಟಿದ್ದ ಚೈನೀ ಕಮ್ಯೂನಿಸ್ಟ್ ಸೇನೆಗಳು ಭರದಿಂದ ಮುಂದೊತ್ತುತ್ತಿದ್ದುವು. ಟಿಬೇಟಿನ ದಲಾಯಿಲಾಮರು ಏನನ್ನು ನಿರೀಕ್ಷಿಸಿಯೋ ರಾಜಧಾನಿ ಲ್ಹಾಸಾದಲ್ಲೇ ಉಳಿದುಕೊಂಡಿದ್ದರು. ಇದೇ ತಾ 12ರಲ್ಲಿ ಚೈನದ ರಾಜಧಾನಿ ಪೆಕಿಂಗ್ ಆಕಾಶವಾಣಿಯು “ಚೈನಾ ಮತ್ತು ಟಿಬೇಟುಗಳೊಳಗೆ ಒಂದು ಒಪ್ಪಂದವಾಯಿತು. ಗುಂಡೆಸೆತವನ್ನು ನಿಲ್ಲಿಸುವ ಅಜ್ಞೆ ಕೊಡಲಾಗಿದೆ” ಎಂದು ಘೋಷಿಸಿದೆ. ಈ ಒಪ್ಪಂದದ ವಿವರವೇನು? ಚೈನೀ ಸರಕಾರವು ಟಿಬೇಟಿನ ಯಾರೊಡನೆ ಒಪ್ಪಂದವನ್ನು ಮಾಡಿಕೊಂಡುದು? ಸಹಿ ಹಾಕಿದವರಾರು? ಎಂಬ ಕುರಿತು ಯಾವ ಪ್ರಸ್ತಾಪವೂ ಪ್ರಕಟವಾಗಿಲ್ಲ ಭಾರತ ಸರಕಾರದ ಕೊನೆಯ ಖಂಡನಾ ಪತ್ರಕ್ಕೆ ಚೈನೀ ಸರಕಾರವು ಉತ್ತರವನ್ನೇ ಕೊಟ್ಟಿರಲಿಲ್ಲ ಸಂಧಾನ ಮಾತುಕತೆಗಾಗಿ ಪೆಕಿಂಗಿಗೆ ಹೊರಟಿದ್ದ ಟಿಬೇಟಿನ ಶಿಷ್ಟಮಂಡಲಿಯು ಇವೆಲ್ಲಾ ಅಡಿಮೇಲುಗಳ ದೆಸೆಯಿಂದಾಗಿ ಅಲ್ಲಿಗೆ ಮುಂದುವರಿಸಿದುದಿಲ್ಲ. ಆದರೂ ಚೈನೀ ಸರಕಾರವು ಯಾರೊಡನೆಯೋ ಒಪ್ಪಂದ ಮಾಡಿಕೊಂಡು ಹೋರಾಟ ನಿಲ್ಲಿಸಿದ್ದೇವೆಂದು ಘೋಷಿಸಿದೆ ಅಲ್ಲಿ ಉಳಿದಿದ್ದ ಸಾಧು ಪ್ರಾಣಿಗಳಿಗೆ ಭಯಮಿಶ್ರಿತ ನಯ ಬೀರಿ ಚೈನೀ ಕಮ್ಯೂನಿಸ್ಟರು ಯಾವುದೋ ಒಂದು ವಿಧಾನದಿಂದ ಟಿಬೇಟ್ ಆಕ್ರಮಣವನ್ನು ಸಾಕಷ್ಟು ಬೇಗನೇ ಪೂರ್ಣಗೊಳಿಸಿಕೊಂಡರೆಂಬುದನ್ನು ಊಹಿಸಬಹುದು. ಎಲ್ಲಾ ಲಾಮಾರ ಸಮೇತ ಟಿಬೇಟಿನ ಸರ್ವ ಜನರ ಪ್ರಾಣ,ಸೊತ್ತುಗಳ ರಕ್ಷಣೆ, ಧಾರ್ಮಿಕ ಮಂದಿರ ಸಂಪ್ರದಾಯಗಳ ಪಾಲನೆ, ಆರ್ಥಿಕ ಸಾಮಾಜಿಕ ಜೀವ್ಮೋನ್ನತಿಗಳ ಸ್ಥಿತಿ ಸುಧಾರಣೆ ಸಂಬಂಧದ ಆಶ್ವಾಸನೆಗಳು ಚೈನೀ ಕಮ್ಯೂನಿಸ್ಟ್ ಸರಕಾರದಿಂದ ಟಿಬೇಟ್ ಜನತೆಗೆ ದೊರೆತಿವೆ.

ನೇಪಾಳ ಅಂತರ್ಯುದ್ಧ

ಟಿಬೇಟಿನಂತೆಯೇ ಹಿಮಾಲಯ ತಪ್ಪಲಿನಲ್ಲಿ ಆಯಕಟ್ಟು ಸ್ಥಳದಲ್ಲಿರುವ ನೇಪಾಳಕ್ಕೂ ಕಮ್ಯೂನಿಸ್ಟ್ ಹೊಡೆತ ಬೀಳಬಹುದೆ? ಅಣ್ಣನ ತಲೆಗೆ ಬಿದ್ದ ಕತ್ತೀ ಸುತ್ತಿಗೆ ತಮ್ಮನ ತಲೆಗೂ ಬರಬಹುದೆ? ಎಂಬ ಆತಂಕವಿದ್ದಾಗಲೇ ನೇಪಾಲದೊಳಗೆ, ಅದೃಷ್ಟ ನಿರ್ಮಾಪಕ ಆಂದೋಲನಗಳದ್ದ ವಾರ್ತೆ ಬಂದಿದೆ ಆಕಸ್ಮಿಕವಾಗಿ ಮತ್ತು ಆಶ್ಚರ್ಯಕರವಾಗಿಯೇ ಅಲ್ಲಿಯ ಆಗುಹೋಗುಗಳು ಘಟಿಸಿವೆ ನೇಪಾಳದ ರಾಜಧಾನಿ ಕತ್ಮಾಂಡ ವಿನಲ್ಲಿ ಭಾರತದ ರಾಯಭಾರಿ ಕಚೇರಿಯಿದೆ. ಶ್ರೀ ಸಿಂಹ ಭಾರತದ ರಾಯಭಾರಿಯಾಗಿ ಅಲ್ಲಿದ್ದಾರೆ; ಇದೇ ನವಂಬರ್ ತಾ 6ನೇ ಮುಂಜಾನೆ ನೇಪಾಳದ ಅರಸರಾದ ಮಹಾರಾಜಾಧಿರಾಜ ತ್ರಿಭುವನವೀರ ವಿಕ್ರಮಶಹಾ ದೇವ್, ಅವರು ಮತ್ತು ಅವರ ಸಂಬಂಧಿಕರು ಮತ್ತು ಪರಿವಾರದ ಕೆಲವರಿದ್ದ ನಾಲ್ಕು ಕಾರುಗಳು ಭಾರತದ ರಾಯಭಾರ ಕಚೇರಿಯತ್ತ ಬರುತಿದ್ದುವು ‘ಪಿಕ್ನಿಕ್’ಗೆಂದು ಮಹಾರಾಜರು ಮತ್ತು ಅವರ ಸಂಗಡಿಗರು ಅಂದು ಮುಂಜಾನೆ ಅರಮನೆಯಿಂದ ಹೊರಟಾಗ, ಅವರ ಖಾಸಗೀ ಪಹರೆಯವರಿಗೆ ಕೂಡಾ ರಾಜರ ಹಂಚಿಕೆ ಗೊತ್ತಿರಲಿಲ್ಲ ಭಾರತ ರಾಯಭಾರಿ ಕಚೇರಿ ಬಳಿಯಲ್ಲಿ ಹೋಗುತಿದ್ದಾಗಲೂ ಸೀದಾ ದೃಷ್ಟಿ ಹಿಡಿದು ಹೋಗುವಂತಿದ್ದ ಆ ಕಾರುಗಳು ಥಟ್ಟನೆ ಕಚೇರಿ ಪರಾರದೊಳಗೆ ತಿರುಗಿದಾಗ ಅಲ್ಲಿದ್ದ ಶ್ರೀ ಸಿಂಹರಿಗೂ ನೌಕರರಿಗೂ ಮಹಾರಾಜರನ್ನು ಕಂಡು ಮಹದಾಶ್ಚರ್ಯವಾಯಿತು. ನೇಪಾಲದಲ್ಲಿ ಕೆಲಕಾಲದಿಂದ ನಡೆದಿರುವ ಸ್ವಾತಂತ್ರ್ಯಾಂದೋಲನವನ್ನು ಹತ್ತಿಕ್ಕಲು ಅಲ್ಲಿಯ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಕಠಿಣ ದಬ್ಬಾಳಿಕೆ ನಡೆದಿದೆ. ಆಡಳಿತೆಯಲ್ಲಿ ಸುಧಾರಣೆಗಳನ್ನು ಜಾರಿಗೆ ತರುವ ಕುರಿತು ರಾಜರು ಮತ್ತು ಪ್ರಧಾನಿಯೊಳಗೆ ತೀವ್ರ ಭಿನ್ನಾಭಿಪ್ರಾಯಗಳು ಬಂದುದರಿಂದ, ರಾಜರಿಗೆ ಸ್ವರಕ್ಷಣಾ ಚಿಂತೆ ತಾಗಿ, ಅವರು ಈ ರೀತಿ ಉಪಾಯದಿಂದ ತಲೆತಪ್ಪಿಸಿಕೊಂಡು, ಭಾರತದ ಆಶ್ರಯ ಸೇರಿದರೆಂದು ತಿಳಿದುಬಂದಿದೆ. ಚಿಕಿತ್ಸೆ ಹೊಂದುವುದಕ್ಕಾಗಿ ಭಾರತಕ್ಕೆ ಬರಬೇಕೆಂಬ ಆತುರವನ್ನು ನೇಪಾಳದ ರಾಜರು ಪ್ರದರ್ಶಿಸಿದ್ದರಾದರೂ, ಅದಂ ಸರಕಾರದವರ್ಕೆ ಅನುಮತಿ ಕೊಟ್ಟಿರಲಿಲ್ಲ. ರಾಜರ ನಿರ್ಜೋದ್ದೇಶವು ಪ್ರತ್ಯೇಕವೆಂಬ ಕಾರಣದಿಂದಲೇ ಹೀಗೆ ಅನುಮತಿ ನಿರಾಕರಣೆಯಾಗಿದ್ದಿತು . ಮಹಾರಾಜರೊಂದಿಗೆ, ಸಿಂಹಾಸನದ ವಾರೀಸುದಾರ ರಾಜಕುಮಾರ ಮಹೇಂದ್ರ ವೀರ ವಿಕ್ರಮ ಶಹಾದೇವ್, ಮತ್ತು ಈ ರಾಜ ಕುವರರ ಹಿರಿ ಕುವರನ ಸಮೇತ ರಾಣೀವಾಸದ ಕೆಲವರು ಬಂದಿದ್ದರು. ಈ ಸುದ್ದಿ ತಿಳಿದೊಡನೆ ಪ್ರಧಾನ ಮಂತ್ರಿಗಳ ಪ್ರತಿನಿಧಿಗಳು ಮಹಾರಾಜರಿಂದ ಪಲಾಯನದ ಕಾರಣ ಕೇಳುವುದಕ್ಕಾಗಿ ತಾ. 6ರಲ್ಲಿ ಎರಡು ಬಾರಿ ಭಾರತ ರಾಯಭಾರಿ ಕಚೇರಿಗೆ ಹೋದರೂ ಮಹಾರಾಜರು ಅವರಿಗೆ ಭೇಟಿ ಕೊಡಲಿಲ್ಲವಂತೆ. ತಾ. 7ನೇ ಮುಂಜಾನೆ ಪ್ರಧಾನ ಮಂತ್ರಿಗಳು ನೇಪಾಳ ಪಾರ್ಲಿಮೆಂಟಿನ ಅವಸರದ ಸಭೆ ಕರೆದರು; ಅಂತೆಯೇ ರಾಜ್ಯದ ಸಿಂಹಾಸನಾಧಿಪ ಧನವಂತರು, ರಾಜ ಗುರುಗಳು ಮತ್ತು ಭರದಾರರಿದ್ದ ಭರಧಾರೀ ಸಭೆಯೂ ಕರೆಯಲ್ಪಟ್ಟಿತು ನೇಪಾಳದ ಘಟನೆ, ಕಾನೂನು ಮತ್ತು ಕೃತ್ಯಸಂಪ್ರದಾಯಗಳಂತೆ ಮಹಾರಾಜಾಧಿರಾಜರು ಮತ್ತು ಅವರೊಂದಿಗೆ ಹೊರಟಿದ್ದ ಅವರ ಕುಟುಂಬಿಕರು ತಮ್ಮ ಕೃತ್ಯಗಳಿಂದಲೇ ಸಿಂಹಾಸನದ ಹಕ್ಕನ್ನು ಕಳಕೊಂಡಿರುವರೆಂದೂ, ಆದರೆ ರಾಜಕುವರರ ಹಿರಿ ಕುವರನು ಮರಳಿ ಒರುವ ಸುಯೋಗವನ್ನೊಮ್ಮೆ ಒದಗಿಸಿಕೊಟ್ಟು, ಆವರು ಬಾರದಿದ್ದಲ್ಲಿ ಅವರ ನಂತರದ ಹಕ್ಕುದಾರನನ್ನು ಮಹಾರಾಜರಾಗಿ ಮಾಡಿಕೊಳ್ಳಬೇಕೆಂದೂ ಆ ಸಭೆ ತೀರ್ಮಾನಿಸಿತು. ಆದರೆ ಈ ‘ಚಾನ್ಸ್’ ಕೊಡಲ್ಪಟ್ಟ ಮಹಾ ರಾಜರ ಮೊಮ್ಮಗನನ್ನು ಕಳುಹಿಕೊಡಲು ಅವರ ತಂದೆತಾಯಿಗಳು ಮತ್ತು ಅಜ್ಜ, ನಿರಾಕರಿಸಿದ್ದರಿಂದ ಎರಡನೇ ಮೊಮ್ಮಗ ಮೂರ ವರುಷದ ಮಗನನ್ನು ಅಂದೇ ನೇಪಾಲದ ಸಿಂಹಾಸನಕ್ಕೇರಿಸಿಕೊಳ್ಳಲಾಗಿದೆ. ಸಿಂಹಾಸನ ಬಿಟ್ಟು ಬಂದ ಮಹಾರಾಜರು ನೇಪಾಲದ ಆಡಳಿತೆಯ ದಬ್ಬಾಳಿಕೆಗೆ ವಿರೋಧಿಯಾಗಿ ನೇಪಾಲದ ಜನತಾ ಬೇಡಿಕೆಗೆ ಅನುಕೂಲವಿದ್ದವರು. ಮಹಾರಾಜರ ಈ ಮನೋವೃತ್ತಿಯು ಪ್ರಧಾನ ಮಂತ್ರಿಯ ಕಣ್ಣುಗ್ಗ ಧೋರಣೆಯೊಡನೆ ಘರ್ಷಿಸಿದ ದೆಸೆಯಿಂದಲೇ ಅವರು ಪಲಾಯನ ಕೈಕೊಳ್ಳಬೇಕಾಗಿ ಬಂತು ರಾಜರ ಪಲಾಯನದ ಬೆನ್ನಲ್ಲೇ ನೇಪಾಲೀ ಕಾಂಗ್ರೆಸಿನ ಯೋಧರು ಹೋರಾಟವಾರಂಭಿಸಿ ನಾಲ್ಕಾರು ಮೈಲುದ್ದದ ರಣರಂಗದಲ್ಲಿ ಕಾದನಕೊಡುತ್ತಾ ರಾಜಧಾನಿಯ ಕಡೆಗೆ ಮುಂದೊತ್ತುತ್ತಿದ್ದಾರೆ. ರಾಜ ತ್ರಿಭುವನರ ಕಡೆಗೇನೇ ಜನತೆಯ ಒಲವಿರುವುದರಿಂದ ನೇಪಾಲೀ ಕಾಂಗ್ರೆಸ್ ಸೈನಿಕರು ಕೇವಲ ಎರಡೇ ಸಾವಿರವಿದ್ದರೂ ಅವರಿಗೆ ಆಶ್ಚರ್ಯಕರ ವಿಜಯಗಳು ದೊರೆತಿವೆ. ನೇಪಾಲದ ಬಿರ್ಗಂಜ್ ಎಂಬಲ್ಲಿಯ ಗವರ್ನರರನ್ನು ಬಿಹಾರದ ರಾಕ್ಸಾವುಲ್ ಎಂಬಲ್ಲಿ ನೇಪಾಲೀ ಹೋರಾಟಗಾರರು ಬಂಧಿಸಿಟ್ಟಿದ್ದನ್ನು ಬಿಹಾರ್ ಪೋಲೀಸರು ಬಿಡಿಸಿ ರಕ್ಷಣೆಯಿತ್ತಿದ್ದಾರೆ ನೇಪಾಲೀ ಕಾಂಗ್ರೆಸಿಗರ ಈ ಬಂಡಾಯವು ಕೂಡಾ ಭಾರತಕ್ಕೆ ಆಕಸ್ಮಿಕ ವಾರ್ತೆಯೇ. ಭಾರತ ಸರಕಾರವು ತನ್ನ ಎರಡು ವಿಮಾನಗಳನ್ನು ಕಳುಹಿ ತನ್ನ ನೇಪಾಲ ರಾಯಭಾರೀ ಕಚೇರಿಯಲ್ಲಿ ಆಶ್ರಯ ಪಡೆದಿದ್ದ ಮಹಾರಾಜರು ಮತ್ತು ಅವರ ಕುಟುಂಬವನ್ನು ನವದಿಲ್ಲಿಗೆ ತರಿಸಿಕೊಂಡಿತು. ಆಶ್ರಯಾಪೇಕ್ಷಿಸಿತ್ತಿದೆ. ತಾ. 11ರಲ್ಲಿ ಮಹಾರಾಜ

(೬ನೆಯ ಪುಟ ನೋಡಿರಿ)

For Life Assurance
CUNSULT
THE NEW GUARDIAN OF INDIA
LIFE ASSURANCE Co. LTD.
(Established 1934)
Chairman: Sri. M C T M Chidambaram Chattiyar
A Policy in this progressive Life Office is a good investment, its Agency is a valuable business connection
MANGALORE BRANCH.
K. S. R. Road,
Hampankatta, Mangalore.
HEAD OFFICE:
United India Life Building,
MADRAS 142

Our Constituents, Please Note!

The Business Hours of the LOCAL OFFICE of the CORPORATION have been changed with effect from 1st November, 1950, as follows:

On WEEK DAY .... From 10 A. M. to 2 P. M.
On SATURDAYS .... From 10 A. M. to 12 A. M.

THE
Canara Banking Corporation Ltd.
(Incorporated in India.)
Estd: 1906.
Head Office : **UDIPI,** (S. I.)

ಗುರುವಾರ, ಉಡುಪಿ, ೧೬-೧೧-೫೦

ಅಪಾಯ ವಾಸನೆ!

ಭಾರತದ ಉತ್ತರ ಗಡಿಗೆ ತಾಗಿಕೊಂಡಿರುವ ಟಿಬೇಟ್ ಮತ್ತು ನೇಪಾಳವೆರಡೂ ಇಂದು ಗೊಂದಲ ಕ್ಷೇತ್ರಗಳಾಗಿವೆ. "ಭಾರತದ ಉತ್ತರ ಸರಹದ್ದಿಗೆ ಅಪಾಯಕ್ಕೆ ಗಲವಾಗಿ ತೆರೆದುಕೊಂಡಿತು. ಆದ್ದರಿಂದ ಯಾವುದೇ ಕಡೆಯಿಂದ ಬರುವ ಸವಾಲನ್ನಾದರೂ ಇದಿರಿಸುವ ಪೂರ್ಣ ಸಿದ್ಧತೆಯಲ್ಲಿ ಭಾರತೀಯರಿರಬೇಕಾದುದು ಅನಿವಾರ್ಯ. ಭಾರತದ ಜನತೆ ಪಕ್ಷ ಪಂಗಡಗಳ ಸಂಕುಚಿತತೆಯಿಂದ ಮೇಲೇರಿ, ಒಂದುಗೂಡಿ ತಮ್ಮ ಹೊಸ ಸಂಪಾದನೆಯ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕಾದುದು ಅತ್ಯಗತ್ಯ. ಈ ಕಷ್ಟಕಾಲದಲ್ಲಿ ಪ್ರತಿಯೊಬ್ಬ ಭಾರತೀಯನ ಕರ್ತವ್ಯವೆಂದರೆ ತೊಂದರೆಗಳಿಂದ ತಪ್ಪಿಸಿಕೊಂಡೋಡುವುದಲ್ಲ, ಧೈರ್ಯಗೊಂಡು ಅವುಗಳನ್ನು ಮುಖಾಮುಖಿ ಇದಿರಿಸುವುದೇ. ಹೇಡಿತನವು ನಿಮ್ಮನ್ನಾವರಿಸಿಕೊಳ್ಳದಂತೆ ನೋಡಿಕೊಳ್ಳಿ. ಅಪಾಯವನ್ನು ಕಂಡೋಡದಿರಿ. ರಾಷ್ಟ್ರದ ಮೇಲೆ ಬರುವ ಪ್ರತಿಯೊಂದು ಅಪಾಯಕ್ಕೂ... ಯ ಸ್ವಾತಂತ್ರ್ಯಕ್ಕೆ ಸಂಪೂರ್ಣ ರಕ್ಷಣೆ ಸಲ್ಲಲಿ. ಭಾರತವೀ ದಿನ ಎಲ್ಲಾ ವಿಧದ ಅಪಾಯಗಳಿಂದಲೂ ಆವರಿಸಲ್ಪಟ್ಟಿದೆ. ಈ ಕಲಿಯುಗದಲ್ಲಿ ನಾವು ಅಹಿಂಸೆಗೆ ಪ್ರತಿಯಾಗಿ ಅಹಿಂಸೆಯನ್ನೇ ಮುಂದೊಡ್ಡುವೆವು. ಆದರೆ ಯಾರೇ ಆದರೂ ನಮ್ಮ ಮೇಲೆ ಶಕ್ತಿ ಪ್ರಯೋಗಕ್ಕಿಳಿದಲ್ಲಿ ನಾವು ಶಕ್ತಿಯಿಂದಲೇ ಅದನ್ನಿದಿರಿಸುವೆವು" ಎಂದು ಈ ಕುರಿತು ಸರ್ದಾರ್ ಪಟೇಲರು ಸ್ಪಷ್ಟ ಎಚ್ಚರಿಕೆಯಿತ್ತಿದ್ದಾರೆ. ಭಾರತದ ತಪ್ಪೇನೂ ಇಲ್ಲದೆ, ಕೈ ಹಾಕುವ ಅಧಿಕಾರಾವಕಾಶಗಳು ಕೂಡಾ ಭಾರತಕ್ಕಿಲ್ಲದೆ, ಭಾರತದ ಬಾಗಿಲ ಬಳಿಯಲ್ಲೇ ಹೊರಗಿನ ಅಪಾಯ ಜಮೆಗೊಳ್ಳುತ್ತಿರುವ ಗದ್ದಲವೀಗ ಕೇಳಿಬರುತ್ತಿದೆ. ಲೋಕದ ಪ್ರಚಲಿತ ವಾತಾವರಣದಲ್ಲಿ ಈ ಪರಿಸ್ಥಿತಿಯು ಕಡೆಗಣಿಸಲ್ಪಡುವಂತಹದಲ್ಲ; ಭಾರತಕ್ಕಿದು ಪರಕೀಯ ಘಟನೆಯೆಂದು ಭಾವಿಸಲಾಗುವಂತಹದೂ ಅಲ್ಲ. "ಸಂಧಾನ ಪ್ರಯತ್ನ ನಡೆದಿರುವಾಗ ಏಕಾಏಕಿ ಟಿಬೇಟಿನ ಆಕ್ರಮಣ ಹೂಡಿದುದು ಶೋಚನೀಯ" ಎಂದು ಭಾರತ ಸರಕಾರವು ಸಕಾರಣವಾಗಿ ಸೂಚಿಸಿದುದಕ್ಕೆ "ಪರಕೀಯ ವರ್ಚಸ್ಸಿಗೆ ಬಲಿಬಿದ್ದೇ ನೀವು ಹೀಗನ್ನುತ್ತಿರುವಿರಾದ್ದರಿಂದ ಅದು ಶೋಚನೀಯ" ಎಂದು ಚೀನೀ ಕಮ್ಯೂನಿಸ್ಟ್ ಸರಕಾರವಾಡಿದ ಮರುಮಾತು ಗಾಢ ಯೋಚನೆಗೀಡು ಮಾಡುವಂತಹದಿದೆ. "ಪರಕೀಯ ವರ್ಚಸ್ಸು ಸೋಂಕಿದೆ" ಎಂಬ ಕಾರಣವನ್ನು ಮುಂದೊಡ್ಡಿಯೇ ಕಮ್ಯೂನಿಸ್ಟ್ ಚೈನ ಟಿಬೇಟನ್ನಾಕ್ರಮಿಸಿದುದು; ಈ ಕಾರಣ ಅಥವಾ ನೆವನವನ್ನು ಯಾವ ರಾಷ್ಟ್ರದ ಮುಖದಿದಿರಲ್ಲೂ ಹಿಡಿಯಲು ಸಾಧ್ಯವಿದೆ. ಭಾರತದಂತಹ ಪಕ್ಷಾತೀತ ರಾಷ್ಟ್ರವನ್ನೂ ಹೀಗೆ ಆರೋಪಿಸಲು ಚೈನಕ್ಕೆ ಮನಸ್ಸಾಯಿತೆಂದ ಮೇಲೆ ಇನ್ನೀ ಕುರಿತು ಬೇರೆ ಉದಾಹರಣೆ ಬೇಕಾಗಿಲ್ಲ. ಇಂತಹ ನೆವನವನ್ನಾಧರಿಸಿ, ಒಂದು ರಾಷ್ಟ್ರದೊಳಗೆ ಕಾಲಿಡುವ ದುರಭ್ಯಾಸವಿರುವ ಕಮ್ಯೂನಿಸ್ಟರೇ ಟಿಬೇಟಿನಲ್ಲಿ, ಭಾರತದ ಬಾಗಿಲಲ್ಲಿ ಬಂದು ನಿಂತಿದ್ದಾರೆ. ಪೂರ್ಣ ಸ್ವತಂತ್ರ ರಾಷ್ಟ್ರವೆಂಬುದರಿಂದ ನೇಪಾಳದ ಗತಿ ಟಿಬೇಟಿನಂತಾಗಲಾರದೆಂದು ಪೂರ್ಣ ಭರವಸೆ ಕಟ್ಟಿಕೊಳ್ಳಲಾಗುವದಿಲ್ಲ; ಬರ್ಮಾದಂತಹ ಭಾರತದೊತ್ತಿನ ಇತರ ರಾಷ್ಟ್ರಗಳ ಪಾಡೂ ಇದೇ ಹಾಡು. ಅಂತೂ ತಮಗಗತ್ಯ ತೋರುವ ಯಾವ ಆಚರಣೆಗಾದರೂ ಯಾವಕಾಲದಲ್ಲೂ ತಯಾರಿರುವ—ಭಾರತದ ಸದ್ಯಸ್ಥಿತಿಯಲ್ಲಿ ವ್ಯವಹಾರೋಚಿತ-ಪ್ರಗತಿಶೀಲವೆನ್ನಬಹುದಾದ ನೆಹರೂ ಸರಕಾರದ ಧೋರಣೆಯನ್ನೂ ಸಂದೇಹ ಮತ್ತು ಜಿಗುಪ್ಸೆಯಿಂದ ಕಾಣುತ್ತಿರುವ—ಕಮ್ಯೂನಿಸ್ಟರು ಭಾರತದ ಅಕ್ಕಪಕ್ಕಗಳಲ್ಲಿ ಜಮೆಯಾಗುತ್ತಿದ್ದಾರೆ. ರಾಷ್ಟ್ರದ ಒಳಗಡೆಯ ಸ್ಥಿತಿಯಾದರೂ ಪೂರ್ಣ ಸಮಾಧಾನಕರವಾಗಿಲ್ಲ. ಹಿಂಸಾತ್ಮಕ ಆಚರಣೆಗಳಿಗಾಗಿ ಕಮ್ಯೂನಿಸ್ಟರನ್ನು ಬಲವಾಗಿ ಒತ್ತಿಟ್ಟಿರುವ ದೆಸೆಯಿಂದ ಅವರ ಪ್ರಭಾವವೀಗ ಅಡಗಿದಂತೆ ತೋರಿದರೂ ಅದು ಬೂದಿಯೊಳಗಿನ ಕೆಂಡವಾಗಿ ಉಳಿದಿದೆ ಎಂಬುದನ್ನು ಮರೆಯಬಾರದು. ಸರಹದ್ದಿನಲ್ಲಿ ಸಂಗ್ರಹವಾಗಿರುವ ಕಮ್ಯೂನಿಸ್ಟರ ಗಾಳಿಯು ಒಳಗಡೆಯ ಕಿಡಿ ಜ್ವಲಿಸಲು ಸಹಕಾರಿಯಾಗುವಂತೆ ಬೀಸುವುದು ಸಂಭವನೀಯ. ಭಾರತದೊಡನೆ ಕಮ್ಯೂನಿಸ್ಟ್ ಪಾಳಯದ ಸಂಬಂಧವಿಂತಹದಿದ್ದರೆ ಆಮೇರಿಕ ಪಾಳಯದ ಸಂಬಂಧ ಕೂಡಾ ಇದೇ ಮಾದರಿಯಲ್ಲಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಮತ್ತು ಅಂತರ್ರಾಷ್ಟ್ರೀಯ ರಂಗದಲ್ಲಿ ಭಾರತ ವಹಿಸಿರುವ ಸ್ವತಂತ್ರ ಧೋರಣೆಯು, ಅಮೇರಿಕವೇ ಮೊದಲಾದ ಆ ಕಡೆಯ ರಾಷ್ಟ್ರಗಳಿಗೆ ಅಪ್ರಿಯವಾಗಿದೆ ಎಂಬುದೀಗ ಸ್ಪಷ್ಟ. ಭಾರತದ ಶಾಂತಿ ಪ್ರೇಮ ಮತ್ತು ಸ್ವತಂತ್ರ ಧೋರಣೆಯಲ್ಲವಾಗಿದ್ದರೆ ಟಿಬೇಟ್, ನೇಪಾಳಗಳಲ್ಲಿ ಭಾರತವಿಡುವ ಹೆಜ್ಜೆಯು ಬೇರೆಯಾಗುತ್ತಿತ್ತು; ಅಮೇರಿಕ, ಬ್ರಿಟನುಗಳು ಇಂದಿಗಿಂತ ಭಿನ್ನವಾದ ಹಾದಿಗೇನೇ ಭಾರತವನ್ನು ದೂಡುತ್ತಿದ್ದುವು. ಪ್ರಪಂಚದ ಎರಡು ರಾಷ್ಟ್ರ ಪಾಳಯಗಳ ಪೈಕಿ ಯಾವ ಕಡೆಗೂ ಸೇರಿಕೊಳ್ಳದೆ ಮಧ್ಯ ಹಾದಿಯನ್ನು ಹಿಡಿದಿರುವ ದೆಸೆಯಿಂದಲೇ ಭಾರತದ ಸ್ಥಾನವನ್ನು 'ತ್ರಿಶಂಕು ಪಟ್ಟ'ಕ್ಕೆ 'ಗಬ್ಬಿಲದ ಸ್ಥಿತಿ'ಗೆ ಕೆಲವರು ಹೋಲಿಸುವಂತಾಗಿದೆ. ಭಾರತದ ಇಂದಿನ ಸ್ಥಿತಿಗತಿಗಳಿಗೆ, ಮತ್ತು ಲೋಕ ಶಾಂತಿ ಸಾಧನೆಗೆ ಅನುಕೂಲವಾಗುವ ಮಧ್ಯವರ್ತಿ ಧೋರಣೆಯನ್ನು ವಹಿಸಿದುದಕ್ಕಾಗಿ ಪ್ರಕೃತ ನೆಹರೂ ಸರಕಾರವು ಎಂತಹ ಅವಹೇಳನೆಗೀಡಾಗಬೇಕಾಗಿ ಬಂದರೂ, ತಲೆತಗ್ಗಿಸಬೇಕೆಂದಿಲ್ಲ; ಪುನರಾಲೋಚನೆ ಮಾಡಬೇಕೆಂದೂ ಇಲ್ಲ. ಲೋಕಕ್ಕೆ ಶಾಂತಿ ಬೇಕೆಂದಾದರೆ—ಸ್ವಾರ್ಥ, ಸ್ಪರ್ಧೆ, ಪೈಲಾಟಗಳಿರುವುದು ಹಾನಿಕರವೆಂದಾದರೆ—ಭಾರತ ಸರಕಾರದ ರೀತಿಯೇ ಸರಿ, ವಿಕ್ಷವೆಂದು ತಪ್ಪು. ಆದರೆ ಇಂತಹ ಏಕಾಏಕಿ ರಾಷ್ಟ್ರವು, ಅಸಹಾಯಶೂರನಾಗಿಯೂ ಇರಬೇಕಾದುದು ಅಗತ್ಯವೆಂಬುದನ್ನು ಮರೆಯಬಾರದು. ಲೋಕದ ಪ್ರಮುಖ ರಾಷ್ಟ್ರಗಳೆಲ್ಲವೂ ಎರಡು ಪಾಳಯಗಳಾಗಿ ನಿಂತಿರುವಾಗ, ಅವೆರಡನ್ನೂ ಒಲ್ಲೆನೆನ್ನುತ್ತಾ ಸ್ವತಂತ್ರ ಧೋರಣೆ ವಹಿಸಿರುವ ಭಾರತವು, ಎಲ್ಲಿಂದ ಎಂತಹ ಅಪಾಯ ಬಂದರೂ ಸ್ವಂತ ಶಕ್ತಿಯಿಂದ ಇದಿರಿಸುವಷ್ಟು ಸರ್ವಶಕ್ತವಿರಬೇಕು; ಸ್ವಾವಲಂಬಿಯಿರಬೇಕು. ಅಂತಹ ಶಕ್ತಿಯಿಲ್ಲದಿದ್ದರೆ ಮಾತ್ರ ಈ 'ಬೇರೆ ಬಿಡಾರ'ವು ಅತ್ಯಪಾಯಕರ. ಆದ್ದರಿಂದ ರಾಷ್ಟ್ರ ನಾಯಕರು ಮೇಲಿಂದ ಮೇಲೆ ಎಚ್ಚರಿಸುತ್ತಿರುವಂತೆ ಭಾರತೀಯರೆಲ್ಲರೂ ತಮ್ಮ ರಾಷ್ಟ್ರದ ಈ ಘನ ಸ್ಥಾನಮಾನವನ್ನುಳಿಸಿಕೊಳ್ಳಲು ಒಗ್ಗಟ್ಟಿನಿಂದ ಮತ್ತು ಸರ್ವಶಕ್ತಿಯಿಂದ ತಯಾರಿರಬೇಕಾದುದು ಅಗತ್ಯ.

ಸುದ್ದಿಸಾರ

ಕೊರಿಯದಲ್ಲಿ ಚೈನೀ ಕಮ್ಯೂನಿಸ್ಟ್ ಸೇನೆಯ ಪ್ರವೇಶವಾದಂದಿನಿಂದ ಬದಲಾಗಿರುವ ಯುದ್ಧಗತಿಯು ಯಥಾಪ್ರಕಾರ ಸಾಗಿದೆ. ಉತ್ತರ ಕೊರಿಯದ ಪಕ್ಷವು ಸಂಯುಕ್ತ ರಾಷ್ಟ್ರ ಸೇನೆಗಳಿಗೆ ಅಸಹ್ಯ ಪ್ರತಿಭಟನೆ ಕೊಡುತ್ತಿದೆ; ಮುಂಧಾಳಿಗಳನ್ನು ಹೂಡುತ್ತಿದೆ. ಸಂ. ರಾ. ಸೇನೆಗಳ ಕಡೆಯಿಂದ ಭಯಂಕರ ವಿಮಾನ ಧಾಳಿಗಳಾಗಿ ತಾತ್ಕಾಲಿಕವಾಗಿ ಉತ್ತರ ಕೊರಿಯನರು ಹಿಮ್ಮೆಟ್ಟಬೇಕಾಗಿ ಬಂದಲ್ಲಿಯೂ ಪುನಃ ಮುನ್ನುಗ್ಗುವ ಸಾಹಸ ಮಾಡುತ್ತಿದ್ದಾರೆ. ಮೇಲಾಗಿ ಒಳಗಡೆಯಿಂದ ಕಮ್ಯೂನಿಸ್ಟ್ ಗೊರಿಲ್ಲಾಗಳು ಹಾವಳಿ ಮಾಡುತ್ತಿವೆ.

೦೦೦೦

ಭದ್ರತಾ ಕೌನ್ಸಿಲಿನಲ್ಲಿ ಚೈನದ ಸೇನೆಗಳು ಕೊರಿಯಾ ಯುದ್ಧದಲ್ಲಿ ಪ್ರವೇಶಿಸಿದ ಸಂಬಂಧದ ಚರ್ಚೆಗಳಾಗುತ್ತಿವೆ. ಈ ಕುರಿತು ಚರ್ಚಿಸುವುದಕ್ಕೆಂದು ಭದ್ರತಾ ಸಮಿತಿಯು ಕೆಂಪು ಚೈನಕ್ಕೆ ಆಮಂತ್ರಣ ಕೊಟ್ಟಿದ್ದರೂ ಚೈನೀ ಕಮ್ಯೂನಿಸ್ಟ್ ಸರಕಾರವು ಅದನ್ನು ನಿರಾಕರಿಸಿದೆ. ಫೋರ್ಮೋಸಾ ಸಂಬಂಧದ ಅಮೇರಿಕದ ಆಕ್ರಮಣ ಧೋರಣೆಯು ಚರ್ಚೆಗವಕಾಶವಿಲ್ಲದ ಇಂತಹ ಚರ್ಚೆಗೆ ತಾವು ತಯಾರಿಲ್ಲವೆಂದು ಚೈನೀ ಕೆಂಪು ಸರಕಾರವಂದಿದೆ. "ಚೈನೀ ಜನತೆ ಸ್ವಯಂ ಪ್ರೇರಣೆಯಿಂದ ಕೊರಿಯದಲ್ಲಿ ಪ್ರತ್ಯಕ್ಷ ಪ್ರತಿಭಟನೆ ಕೊಡಲು ... ಕಿವಡ್ಡ ಕೆ ... ಕೊರಿಯದ ಪ್ರಾಮುಖ್ಯ ಉದ್ದಿಮೆ ಕೇಂದ್ರಗಳು ವೈರಿಯ ಗುಂಡಿನ ಅಪಾಯಕ್ಕೊಳಗಾಗುತ್ತಿದ್ದುವು. ಫೋರ್ಮೋಸಕ್ಕೆ 700 ಕ್ಕೂ ಮಿಕ್ಕಿದ ಅಮೇರಿಕದ ಟ್ಯಾಂಕುಗಳು ಬಂದಿವೆ; 17 ಯುದ್ಧ ಹಡಗಗಳು ಅಲ್ಲಿ ರಾಜ್ಯವಾಳುತ್ತಿವೆ; ಅಮೇರಿಕದ 13ನೇ ವಿಮಾನ ದಳಕ್ಕಾಗಿ ಒಂದು ಮುಂಭಾಗದ ರಾಣ್ಯ ತಯಾರಾಗಿದೆ. ಚೀನಾ ಮೂಲ ಭೂಮಿಯನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಫೋರ್ಮೋಸವನ್ನು ಸೇನಾ ನಿಲ್ದಾಣವಾಗಿ ಮಾರ್ಪಡಿಸುವ ಬಯಕೆಯು ಅಮೇರಿಕದ್ದೆಂಬುದಕ್ಕೆ ಇವು ನಿದರ್ಶನಗಳು" ಎಂದು ಪೆಕಿಂಗ್ ರೇಡಿಯೋ ಆರೋಪಿಸಿದೆ.

೦೦೦೦

ಅಮೇರಿಕದ ಕಾಂಗ್ರೆಸಿನ ಪ್ರತಿನಿಧಿ ಸಭೆ ಮತ್ತು 'ಸಿನೆಟ್'ನ ಮಧ್ಯಾವಧಿ ಚುನಾವಣೆಯು ಕಳೆದ ತಾರೀಕು 7ರಲ್ಲಿ ಜರಗಿತು. ಈ ಚುನಾವಣೆಯ ಪರಿಣಾಮವಾಗಿ ಅಧ್ಯಕ್ಷ ಟ್ರುಮೇನರ 'ಡೆಮೊಕ್ರೆಟಿಕ್' ಪಕ್ಷದ ಕೆಲವೇ ಸ್ಥಾನಗಳು ಕಡಿಮೆಯಾದರೂ ಒಟ್ಟಿನ ಮೇಲೆ ಅದಕ್ಕೆ ಬಹುಮತವಿದೆ. ಅಮೇರಿಕದ ಸರಕಾರೀ ಧೋರಣೆಯಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಪ್ರಕಟವಾಗಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ
ತಾರೀಕು 15--11—1950ಕ್ಕೆ
ಇಂಗ್ಲಿಷ್ ಹಾಸ್ಯಮಯ ಚಿತ್ರ ಲೊರೆಲ್ ಮತ್ತು ಹಾರ್ಡಿಯವರ
ವೇ ಔಟ್ ವೆಸ್ಟ್ Way Out West

ತಾ. 16-11-1950ರಿಂದ ಕೊಲಂಬಿಯ ವರ್ಣಚಿತ್ರ
ಬೆಂಡಿಟ್ ಆಫ್ ಶರ್‌ವುಡ್ ಫೋರೆಸ್ಟ್
ಅನಂತರ: "ಜಲತರಂಗ"

(೫ನೇ ಪುಟದಿಂದ)

ಮ ಜಕುಟುಂಬ ಸಪರಿವಾರವಾಗಿ ದಿಲ್ಲಿಯ ಪಾಲಾಮ್ ನಿಲ್ದಾಣದಲ್ಲಿಳಿಯುವಾಗ ಪ್ರಧಾನಿ ನೆಹರು ಮತ್ತಿತರ ಭಾರತ ಮಂತ್ರಿಗಳೂ ಸೇನಾನಿ ಕರ್ಯಪ್ಪನವರೇ ಮೊದಲಾದವರೂ ಅಲ್ಲಿ ಸ್ವಾಗತಕ್ಕೆ ಕಾದಿದ್ದರು. ನೇಪಾಲದ ಮಹಾರಾಜರು ಮತ್ತು ಅವರ ಕುಟುಂಬವು ನವದಿಲ್ಲಿಯಲ್ಲಿ ನಿಜಾಮರದಾಗಿದ್ದ 'ಹೈದರಾಬಾದ್ ಭವನ'ದಲ್ಲಿ ಭಾರತ ಸರಕಾರದ ಅತಿಥಿಗಳಾಗಿ ಉಳಿದುಕೊಂಡಿದ್ದಾರೆ. ಮಹಾರಾಜರು ನೇಪಾಲದ ಭಾರತ ರಾಯಭಾರಿ ಕಚೇರಿಯಿಂದ ನವದಿಲ್ಲಿಗೆ ಹೊರಟುದು ನೇಪಾಲಾ ಸರಕಾರದ ಅವಗಾಹನೆಗೆ ಬಂದಿದ್ದಿತು; ಅದರ ಹಕ್ಕಿನ ಹಾದಿಯಿಂದಲೇ ಈ ಪ್ರಯಾಣ ಸಾಗಬೇಕಾಗಿದ್ದಿತು. ಆದರೆ ಭಾರತ ಸರಕಾರವನ್ನು ಕೆಣಕುವ ಧೈರ್ಯ ನೇಪಾಲದ ಅಧಿಕಾರಿಗಳಿಗೆ ಬರಲಿಲ್ಲ. ಇಂಗ್ಲಾಂಡು, ಅಮೇರಿಕಗಳು ನೇಪಾಲದ ಸಂಬಂಧವಾಗಿ ಭಾರತ ಸರಕಾರವು ಅನುಸರಿಸುವ ಧೋರಣೆಗೆ ಪೂರ್ಣ ಬೆಂಬಲ ಕೊಡುವುದನ್ನೇ ತಮ್ಮ ಧೋರಣೆಯಾಗಿ ಕಟ್ಟಿಕೊಂಡಿವೆ. ಅತ್ತ ಒಳಗಡೆಯಲ್ಲಿ, ರಾಜ ಪಲಾಯನದಿಂದ ಉದ್ರೇಕಗೊಂಡ ನೇಪಾಲಿಗಳ ಹೊಡೆತವು ಅಲ್ಲಿಯ ಆಳಿಕೆಗೆ ಅಸಹ್ಯವಾಗುತ್ತಿದೆ. ಇಂತಹ ವಿಷಮ ಪರಿಸ್ಥಿತಿಗೊಳಗಾಗಿ ನೇಪಾಲೀ ಸರಕಾರದ ಮನಸ್ಸು ಮೃದುಗೊಂಡ ಲಕ್ಷಣಗಳು ಕಾಣುತ್ತಿವೆ. ಮಹಾರಾಜರನ್ನು ನವದಿಲ್ಲಿಗೆ ಹೋಗಲು ಬಿಟ್ಟ ನೇಪಾಲೀ ಪ್ರಧಾನಿಗಳು ಸಂಧಾನಕ್ಕಾಗಿ ತನ್ನ ಪ್ರತಿನಿಧಿಯನ್ನು ಇಂದು ನಾಳೆಯೊಳಗೆ ನವದಿಲ್ಲಿಗೆ ಕಳುಹಲಿರುವರೆಂದು ಗೊತ್ತಾಗಿದೆ. ನೇಪಾಲದ ರಾಜ—ಪ್ರಧಾನಿಗಳನ್ನು ಒಂದುಗೂಡಿಸುವ ಮತ್ತು ನೇಪಾಲದಲ್ಲಿ ಸುಧಾರಣೆಗಳನ್ನು ಜಾರಿಗೆ ತರುವ ಮಾತುಕತೆಗಳನ್ನು ಭಾರತ ಸರಕಾರವು ನವದಿಲ್ಲಿಯಲ್ಲಿ ನಡೆಸಲಿದೆ. ಪರಿಣಾಮವೇನಾಗುವುದೆಂಬುದು ಪ್ರಕೃತ ಊಹಾತೀತ. ಟಿಬೇಟಿನಂತೆ ನೇಪಾಲದ ಮೇಲೆ ತಮಗೆ ಮೇಲಧಿಕಾರವಿರದಿದ್ದರೂ ಅದೆಷ್ಟೋ ಆಸೆ ಇದರ ಮೇಲೂ ಚೈನೀ ಕಮ್ಯೂನಿಸ್ಟರಿಗೆ ಇರುವಂತಹದೇ. ಇಲ್ಲಿಯ ಇಂದಿನ ಗೊಂದಲ ವಾತಾವರಣವು, ಇದು ವರೆಗೆ ನಿರ್ಮಿಸಿದ ಆಶ್ಚರ್ಯಗಳ ಬೆನ್ನಲ್ಲೇ ಇನ್ನೆಂತಹ ಅಪಾಯಕರ ಕೌತುಕವನ್ನು ನಿರ್ಮಿಸುವುದೋ ಎಂಬ ಸಂದೇಹಕ್ಕೆಡೆಯಿದೆ. ಈ ಗಡಿ ಗೊಂದಲದ ಕುರಿತು ಆತುರ ಸೂಚಿಸುತ್ತಾ "ಭಾರತವು ಶಕ್ತಿಯನ್ನು ಶಕ್ತಿಯಿಂದಲೇ ಇದಿರಿಸುವುದು" ಎಂಬ ಎಚ್ಚರಿಕೆಯನ್ನು ಸರ್ದಾರ್ ಪಟೇಲರಿತ್ತಿದ್ದಾರೆ. ಅಂತೂ ಭಾರತದ ಉತ್ತರ ಸರಹದ್ದಿನಲ್ಲಿ ಕಟಿಪಟಿ ನಡೆದಿದೆ; ಭಾರತ ಸರಕಾರದ ತಲೆಯೊಳಗೂ ಅದರ ಪ್ರತಿಧ್ವನಿ ಘೂಂಕರಿಸುವಂತಾಗಿದೆ!

ನೋಟೀಸು

ಉಡ್ಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಪೆರಂಪಳ್ಳಿಯಲ್ಲಿರುವ ಲೋರೇಸ ಸೋಜನ ಮಗ ಮೈಕೆಲ್ ಅಬ್ರಾಂ ಸೋಜನು ಯಾ ಮೂಲ್ಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನೆಂದ್ರೆ—

ನಾನು ವಾದಿಯಾಗಿ ಪೆರಂಪಳ್ಳಿಯಲ್ಲಿರುವ ಸಾಬು ಯಾನೆ ಸಾಲ್ವೊದರ ಮಸ್ಕರೆಂಞಾನ ಮಗ ಮಿಂಗೆ ಯಾನೆ ಮಿಂಗೆಲ ಮಸ್ಕರೆಂಞಾನ ಮೇಲೆ ಉಡ್ಪಿ ಡಿ.ಎಮ್. ಕೋರ್ಟು ಕ್ರಮ ನಂಬ್ರ 384/50ನೇಗೆ ಒಂದು ದಾವೆ ಮಾಡಿರುತ್ತೇನೆ. ಆ ದ್ವೇಶದಿಂದ ಆತನು ಕಲ್ಯಾಣಪುರ ಕೆಳಪೋಸ್ಟು ಆಫೀಸಿನ ಪೋಸ್ಟುಮೇನ್ ಆದ ಇತ್ತಿ ಕರ್ನೇಲಯೆಂಬವನ ಮಳಸಂಚಿನಿಂದ ಕಳದ ಆಗೋಸ್ತು ತಿಂಗಳ ಮಧ್ಯಕಾಲದಲ್ಲಿ ರಿಜಿಸ್ಟ್ರಿ ಕಾರ್ಡು ಜ್ಯಾರಿ ನೆವನದಿಂದ ನನ್ನಿಂದ ಬರೇ ಖಾಲಿ ಕಾಗ್ದಗಳಲ್ಲಿ ಕೂಡಾ ಸುಮಾರು 4 ಯಾ 5 ಹೆಬ್ಬೆಟ್ಟು ಮುದ್ದೆರು ಪಡಕೊಂಡಿರುತ್ತಾನೆ. ಓದುಬರಹ ಗೊತ್ತಿಲ್ಲದ ಬರೇ ಹೆದ್ದನಾದ ನಾನು ನಂಬಿ ಆ ಮೇರೆಗೆ ಹೆಬ್ಬೆಟ್ಟು ಕೊಟ್ಟರೂ ಯಿತ್ತೀಚೆಗೆ ನಾನು ತಿಳಿಯುವಾಗ್ಗೆ ಅವುಗಳು ಮೇಲೆ ಹೇಳಿದ ಮಿಂಗೆ ಯಾನೆ ಮಿಂಗೆಲ್ ಮಸ್ಕರೆಂಞಾನು ಸದ್ರಿ ಇತ್ತಿ ಕರ್ನೇಲನೀಗೆ ಮಳಸಂಚಿಗೆ ತೆಕ್ಕೊಂಡು ಮಾರಾ ಹೆಬ್ಬೆಟ್ಟು ಮುದ್ದೆರು ಖಾಲಿ ಕಾಗ್ದಗಳಿಗೆ ಜಾಸ್ತಿಯಾಗಿ ಪಡದ್ದಾಗಿರುತ್ತದೆಂತ ನನಗೆ ತಿಳಿದು ಬಂದದೆ. ನಾನು ಈ ವರೇಗೂ ಯಾರಿಗೂ ಯಾವತರದ ನೋಟು, ಕರಾರು, ದಸ್ತಾವೇಜು ವಗೈರೆ ಬರಕೊಟ್ಟದ್ದೂ ಇಲ್ಲ. ಸಾಲ ವಗೈರೆ ಪಡದ್ದೂಯಿಲ್ಲ. ಹೀಗಿರುತ್ತಾ ಮೇಲೆ ಹೇಳಿದಂತೆ ಪಡಕೊಂಡ ಹೆಬ್ಬೆಟ್ಟು ಮುದ್ದೆರಿನ ಕಾಗ್ದಗಳಲ್ಲಿ ಆತ ಯಾವ ತರದಿಂದ್ಲೂ ನನಗೆ ವಿರೋಧವಾದ ರೆಕಾರ್ಡು ವಗೈರೆ ಮಾಡಿದ್ರೆ ಅಥವಾ ಬೇರೆಯವರ ಹೆಸರಲ್ಲಿ ನೋಟು, ವಗೈರೆ ಮಾಡ್ಸಿದ್ರೆ ಕೂಡಾ ಅದು ನನ್ನ ಮೇಲೆ ಬ್ಯಾಂಡ್ ಲಗತಕ್ಕದ್ದಲ್ಲವೆಂಬ ಸಂಗ್ತಿ ಯಾ ಮೂಲ್ಕ ಯಾವತ್ತೂ ಜನರೀಗೆ ತಿಳಿಸೋದಾಗಿರುದೆ.

● ಯಾ ಯಡಕ್ಕೆ ಹೆಬ್ಬೆಟ್ಟಿನ ಗುರ್ತು **ಅಬ್ರಾಂ ಸೋಜನ ರುಜು.**

ಉಡ್ಪಿ ತಾ. 13-11-50.

ಉಡುಪಿ

ಮುನಿಸಿಪಲ್ ಸ್ಪೆಶಲ್ ಸಭೆಯು:— ಇದೇ ತಾ. 11ರಲ್ಲಿ ಸಂಜೆ ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಮುನಿಸಿಪಾಲಿಟಿಯ ಮೇಲೆ ಸ್ಥಳೀಯ ಡಿ. ಮು. ಕೋರ್ಟಿನಲ್ಲಿ ಕೊಡೋಣಾದ ಡಿಕ್ರಿಗಳ ಬಾಬಿನಲ್ಲಿ ಮಂಗಳೂರು ಜಿಲ್ಲಾ ಕೋರ್ಟಿನಲ್ಲಿ ಅಪೀಲು ಮಾಡಬೇಕೆಂದು ನಿರ್ಣಯಿಸಲಾಯಿತು.

ನಂತರ ಸಾಮಾನ್ಯ ಸಭೆಯು ಜರಗಿತು. ಕೌನ್ಸಿಲಿನ ಗತವರುಷದ ಆಡಳಿತದ ಕುರಿತು ಪ್ರಕಟಿಸಲಾದ ಸರಕಾರಿ ವಿಮರ್ಶೆಯನ್ನು ರೆಕಾರ್ಡು ಮಾಡಲಾಯಿತು. ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಒಂದು ಸಾವಿರ ರೂಪಾಯಿಗಳ ಸಹಾಯ ನೀಡಲು ಆದ ಕೌನ್ಸಿಲಿನ ನಿರ್ಣಯಕ್ಕೆ ಮಂಜೂರಾತಿಯಿಲ್ಲವೆಂದು ತಿಳಿಸಿದ ಸರಕಾರಿ ಯಾದಾಸ್ತನ್ನು ರೆಕಾರ್ಡು ಮಾಡಲಾಯಿತು. ಮುನಿಸಿಪಲ್ ಶಾಲೆಗಳ ಮಕ್ಕಳ ದೇಹಾರೋಗ್ಯದ ಪರೀಕ್ಷೆಯನ್ನು ಗೌರವಾರ್ಥವಾಗಿ ಸ್ಥಳೀಯ ಡಾಕ್ಟರು ನಡೆಸುವಂತೆ ಅವರನ್ನು ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು. ಮುನಿಸಿಪಲ್ ಲೈಬ್ರರಿಯ ಫೀಸನ್ನು ತಿಂಗಳಿಗೊಮ್ಮೆ ವಸೂಲು ಮಾಡುವ ಪದ್ಧತಿಯನ್ನು ಆರು ತಿಂಗಳಿಗೊಮ್ಮೆ ವಸೂಲು ಮಾಡುವರೆ ಉಪನಿಬಂಧನೆಯ ತಿದ್ದುಪಡಿ ಮಾಡಬೇಕೆಂದಾಯಿತು.

ಹಳೆ ಪೋಸ್ಟಾಫೀಸು ಮತ್ತು ಹನುಮಾನ್ ಆಫೀಸು ರಸ್ತೆಗಳನ್ನು ಧೂಳುಹಾರದ ರಸ್ತೆಗಳನ್ನಾಗಿ ಮಾಡುವರೆ ಕರೆಯಲಾದ ಟೆಂಡರುಗಳ ಮತ್ತು ಆ ಬಾಬಿನಲ್ಲಿ ಕಂಟ್ರಾಕ್ಟರ್ ಶ್ರೀ ಐ. ರಘುರಾಮ ಸೆಟ್ಟರ ಆಕ್ಷೇಪ ಅರ್ಜಿಯ ಕುರಿತು ತುಂಬಾ ಚರ್ಚೆ ನಡೆಯಿತು. ಕೊನೆಗೆ ಶ್ರೀ ಸೆಟ್ಟರ ಅರ್ಜಿಯನ್ನು ತಿರಸ್ಕರಿಸಬೇಕೆಂದೂ ಕಡಿಮೆ ದರದ ಟೆಂಡರನ್ನು ಮನ್ನಿಸಬೇಕೆಂದೂ ಬಹುಮತದಿಂದ ತೀರ್ಮಾನಿಸಲಾಯಿತು. ಅಜ್ಜರಕಾಡು ಗಾಂಧಿ ಮೈದಾನದಿಂದ ಮುರಕಲ್ಲುಗಳನ್ನು ತೆಗೆಯಲು ಯಾರಿಗೂ ಪರವಾನಗಿ ಕೊಡಕೂಡದೆಂದಾಯಿತು. ಆದಿ ಉಡುಪಿಯಲ್ಲಿ ಸಾಂಕ್ರಾಮಿಕ ರೋಗಿಗಳ ಚಿಕಿತ್ಸೆಗಾಗಿ ಕಟ್ಟಡ ಕಟ್ಟುವ ಕೌನ್ಸಿಲಿನ ಯೋಜನೆಯನ್ನು ರದ್ದು ಮಾಡವೇಕೆಂಬ ಅಲ್ಲಿಯ ಆಸುಪಾಸಿನ ಗ್ರಾಮಸ್ಥರ ಅರ್ಜಿಯನ್ನು ಮನ್ನಿಸಲು ಅಸಾಧ್ಯವೆಂದು ಸೂಚಿಸಲಾಯಿತು. ಜನವರಿ ತಿಂಗಳಲ್ಲಿ ನಡೆಯಲಿರುವ ಉಡುಪಿ ಸಂಕ್ರಮಣ ಜಾತ್ರೆಯ ಕಾಲಕ್ಕೆ ಪೇಟೆಯ ಶುದ್ಧತೆಗಾಗಿ ಈ ಮೊದಲು ನಿಂಗಡಿಸಲ್ಪಟ್ಟ ರೂ 1100/- ಅಲ್ಲದೆ ಪ್ರತ್ಯೇಕ ರೂ. 300 ಜಾಸ್ತಿ ಸೆಂಕ್ಷನ್ ಮಾಡಲಾಯಿತು. ಮುನಿಸಿಪಲ್ ನೌಕರಿಯ ಶಾಲಾ ಕಟ್ಟಡ ಸಮಿತಿಗೆ ಮುನಿಸಿಪಲ್ ಆಫೀಸು ಕಟ್ಟಡ ನಿಧಿಯ ಹಣವನ್ನು ಕೊಡುವ ವಿಷಯದಲ್ಲಿ ತುಂಬಾ ಚರ್ಚೆ ನಡೆದು ಕೊನೆಗೆ ಬಹುಮತದಿಂದ ಕೊಡುವುದೆಂದಾಯಿತು. ಶಾಲಾ ಕಟ್ಟಡವು ಬಹು ಅಂಶ ಮುಗಿದಿದ್ದು ಉಳಿದ ಸ್ವಲ್ಪ ಕೆಲಸಮಾತ್ರ ಪೂರೈಸಲ್ಪಡುವ ಸಲುವಾಗಿ ಹಣದ ಅಡಚಣೆಯಿದೆ. ಎಂಬಿತ್ಯಾದಿ ವಿಷಯಗಳನ್ನು ಕಟ್ಟಡ ಸಮಿತಿಯ ಕಡೆಯಿಂದ ಶ್ರೀಗಳಾದ ಟಿ. ಎ. ಪೈ ಮತ್ತು ಕೆ. ನರಹರಿ ಕಾಮತರು ಕೌನ್ಸಿಲರುಗಳ ಅವಗಾಹನೆಗೆ ಖುದ್ದು ಹಾಜರಾಗಿ ನಿವೇದಿಸಿಕೊಂಡರು. ಸೆಂಟ್ರಲ್ ವಾರ್ಡಿನ 'ಬೆಟರ್‌ಮೆಂಟ್ ಟ್ಯಾಕ್ಸ್' ಎತ್ತುವಳಿಯ ಕುರಿತು ಆ ವಾರ್ಡಿನವರಿಂದ ಬಂದ ಅಪೀಲು ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಬೇಕೆನ್ನುವ ಶ್ರೀ ಕೆ. ಕೆ. ಪೈಗಳ ನಿರ್ಣಯವು ಬಹುಮತದಿಂದ ಪಾಸಾಯಿತು.

ಅಸ್ಸಾಂ ಭೂಕಂಪ ಪೀಡಿತರ ಸಹಾಯಾರ್ಥ ನಿಧಿಗೆ ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನವರು ಇದೇ ತಾ. 9ರ ಎರಡು ದೇಖಾವೆಗಳ ಉತ್ಪತ್ತಿ ರೂಪಾಯಿ 130 6 0ನ್ನು ಸಮಿತಿಗೆ ಕೊಟ್ಟಿರುವರು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸಿ ಎಸ್ ತಿಮ್ಮಪ್ಪ ಸೆಟ್ಟರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್, ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್‌ನವರು ರೂ. 151/- ರಂತೆಯೂ, ಪುತ್ತಿಗೆ, ಕಾಣಿಯೂರು, ಪೇಜಾವರ ಮಠಗಳು ರೂ. 101/- ರಂತೆಯೂ ಸಹಾಯಧನ ಕೊಟ್ಟಿರುವರು. ಸಹಾಯ ನೀಡಲಪೇಕ್ಷಿಸುವ ಮಹನೀಯರು ಶ್ರೀಗಳಾದ ಕೆ. ಜಿ ಬಲ್ಲಾಳ್, ಬಿ. ವಾಸುದೇವ ರಾವ್, ಕೆ. ನರಹರಿ ಕಾಮತರೊಡನೆ ಹಣ ಪಾವತಿಮಾಡಿ ರಶೀದಿ ಪಡೆಯಬಹುದು.

ಬೈಲೂರು—ಕಣಂಜಾರು ಇಗರ್ಜಿ ಶಾಲೆಯ ಮಕ್ಕಳು ಇದೇ ತಾ. 14ರಲ್ಲಿ ಸಮೀಪದ ಬಾವಿಯಿಂದ ನೀರುತೆಗೆಯುತ್ತಿದ್ದಾಗ ನಿಂತ ಹಲಗೆ ತುಂಡಾಗಿ, ನಾಲ್ಕು ಮಕ್ಕಳು ತುಂಬುನೀರಿದ್ದ ಆಳದ ಬಾವಿಗೆ ಬಿದ್ದಾಗ, ಶ್ರೀ ಕಾಡೂರು ದೊಂಡೊಳ್ಳಿ ಅಜ್ಜಣ್ಣ ಸೆಟ್ಟರು ಕೂಡಲೇ ಬಾವಿಗಿಳಿದು ಅತ್ಯಂತ ಸಾಹಸದಿಂದ ನಾಲ್ಕು ಮಂದಿ ಮಕ್ಕಳ ಪ್ರಾಣವುಳಿಸಿದಾರು ಸ್ತುತ್ಯವಿದೆ.

ಮಂಗಳೂರು

ಮಾನಪತ್ರ ಅರ್ಪಣೆ—ಇದೇ ತಾ. 5ರಲ್ಲು ರಾತ್ರಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಗೌಡಸಾರಸ್ವತ ಸಮಾಜದ ಕಡೆಯಿಂದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರಿಗೆ ಮಾನಪತ್ರವೊಂದು ಅರ್ಪಿಸಲಾಯಿತು. ಶ್ರೀ ಹೆಗ್ಡೆಯವರು ದೇವಸ್ಥಾನಕ್ಕೆ ವಾದ್ಯಘೋಷಗಳಿಂದ ಸ್ವಾಗತೀಕರಿಸಲ್ಪಟ್ಟ ನಂತರ ಭಾವಚಿತ್ರವೊಂದು ತೆಗೆಯಲಾಯಿತು. ರಾ. ಬ. ಡಾ ಎಮ್. ಕೇಶವ ಪೈಗಳವರ ಅಧ್ಯಕ್ಷತೆಯಲ್ಲಿ ಮಾನಪತ್ರ ಕೊಡುವ ಸಮಾರಂಭ ಜರಗಿತು. ಶ್ರೀ ಆನಂದ ಬಾಳಿಗರು ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ನಗರ್ಕಾರರು ಮಾನಪತ್ರವನ್ನು ಸಭೆಯ ಮುಂದೆ ಓದಿ ಹೆಗ್ಡೆಯವರಿಗೆ ಅರ್ಪಿಸಿದರು. ಶ್ರೀ ಹೆಗ್ಡೆಯವರು ಮಾನಪತ್ರಕ್ಕೆ ಉತ್ತರವಿತ್ತ ನಂತರ ಶ್ರೀ ವೆಂಕಟ್ರಾಯ ಕಾಮತರು ಧನ್ಯವಾದಗಳನ್ನರ್ಪಿಸಿದರು. ನಂತರ ರಾಷ್ಟ್ರಗೀತೆ ಹಾಡಲಾಯಿತು. ಆ ಮೇಲೆ ದೇವಸ್ಥಾನದಲ್ಲಿ ಪೂಜೆ ನಡೆದು ಶ್ರೀ ಹೆಗ್ಡೆಯವರಿಗೆ ಪ್ರಸಾದ ಮತ್ತು ಫಲಮಂತ್ರಾಕ್ಷತೆ ಕೊಡಿಸಲಾಯಿತು.

ದೀಪಾವಳಿ ಸಂದೇಶಗಳು! ರೈತರಿಗೆ ಸುಸಂದರ್ಭ!!

ರೈತರು ಬೆಳಸಿದ ಭತ್ತದಲ್ಲಿ ಸ್ವಂತಖರ್ಚಿನ ಬಗ್ಗೆ ಇಟ್ಟುಕೊಳ್ಳಬಹುದಾದ ಧಾನ್ಯವೆಷ್ಟು?

ರೈತರ ಉಳಿತಾಯವನ್ನು ಅಧಿಕಾರಿಗಳು ನಿರ್ಣೈಸಿ ಸಂಗ್ರಹಿಸುವ ಕ್ರಮ ಹೇಗೆ? ಇತ್ಯಾದಿ,

ರೈತರು ಮತ್ತು ತೋಟಗಾರರು

ಅಗತ್ಯವಾಗಿ ಹೊಂದಬೇಕಾದ ಅನುಭವದ ಸಲಹೆಗಳಿಗೆ

ಶ್ರೀ ಎಚ್ ಎಂ ನಾರಾಯಣ ಭಟ್,

(ಸಿರ್ಕಾ ಸಪ್ಲೈ ಆಫೀಸರರಾಗಿದ್ದ ರಾಜೆಯಿತ್ತವರು)

ಪೆರಡಾಲ P. O. ಇವರು ಬರೆದು ಪ್ರಕಟಿಸಿದ

"ದಕ್ಷಿಣ ಕನ್ನಡದಲ್ಲಿ ಧಾನ್ಯ ಸಂಗ್ರಹ"

ವೆಂಬ ಪುಸ್ತಕವನ್ನು ಪಡೆಯಿರಿ. ಈ ಪ್ರಕಟಣೆಯು ಮಾಜಿ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರ ಮತ್ತು ಶ್ರೀ ಜಿ ಕೆ. ಗೋವಿಂದ ಭಟ್ಟರ ಮುನ್ನುಡಿಯನ್ನೊಳಗೊಂಡಿದೆ.

ಬಿಡಿಪ್ರತಿ ಕೇವಲ **0-8-0.** ಮುಂಗಡವಾಗಿ ಹಣ ಕಳುಹಿಸಿದವರಿಗೆ ಟಪ್ಪಾಲು ಚಾರ್ಜು ಉಚಿತ! ನಿಮ್ಮ ನ್ಯೂಸ್ ಏಜೆಂಟರಲ್ಲಿ ವಿಚಾರಿಸಿರಿ. ಪ್ರತಿಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿವೆ.

—ಭಕ್ತ ಬ್ರದರ್ಸ್, ನ್ಯೂಸ್ ಏಜೆಂಟ್ಸ್, ಕಾಸರಗೋಡು, (ದ. ಕ.)

In the Court of the Subordinate Judge of South Kanara

O. S. No. 209/1950.

Between:-

K. M. Hegde and others— Plaintiffs

and

Naganna Shetty and others— Defendants.

To Defendants:-

7th Jalaja Shedthi, daughther of Bhagi alias Puttamma Shedthi, 13th Lalitha Shedthi, daughter of Abbakke alias Gulabi Shedthi, 15th Veerapala Shetty, son of Abbakke alias Gulabi Shedthi and 33rd Srinivasa Hegde, son of Jalaja Shedthi— All are residing in Balabettu House, Yerlapady village of Karkala Taluk, Post Bailure S. K.

Please take notice that the above named plaintiffs have instituted a suit against you for the reliefs claimed in the plaint. You are hereby summoned to appear in the above court in person or by a pleader duly instructed on the 27th day of November 1950, in default of your appearance on the day before-mentioned, the suit will be heard and determined in your absence

Sd/**K. S. Hegde,**

Advocate for Plaintiffs'

Mangalore, Dated 10-11-1950.

ರಸನಿಮಿಷ

ನೇಪಾಳದಲ್ಲಿ ಕಾಂಗ್ರೆಸಿನವರು ನುಗ್ಗಿದ ರಂತೆ

—ಭಾರತೀಯ ಕಾಂಗ್ರೆಸಲ್ಲ, ನೇಪಾಳೀ ಕಾಂಗ್ರೆಸ್ಸು. ನುಗ್ಗಿದ್ದು ವೀರಗಂಜೆಂಬ ನಗರ ದೊಳಗೆ.

oo oo oo

ಪಂಡಿತ ನೆಹರೂ ಇತ್ತೀಚೆಗೆ ಬಾರೀ ಮ ಕ್ಕಳಾಟ ಆಡುತ್ತಿದ್ದಾರೆ—ಮಕ್ಕಳೊಡನೆ.

—ಬೇರೆ ಕೆಲವು ದೇಶಗಳವರು ನಯಸ್ಕರ ಜತೆಗೆನೆ ಮಕ್ಕಳಾಟಿಕೆ ತೋರಿಸುತ್ತಾರೆ ಉ ದಾ: ಚೀನೀ ಕಮ್ಯೂನಿಸ್ಟರು.

oo oo oo

ನೇಪಾಳಿ ರಾಯಭಾರಿ ಬಿಬಿನರನ್ನು ಕಂಡ ನು (ಸುದ್ದಿ)

—ಇಂಗ್ಲಿಷಿನಲ್ಲೊಂದು ಗಾದೆ ಇದೆ. ಎ ಲ್ಲಾ ನಾಯಿಗಳಿಗೂ ಒಂದಲ್ಲ ಒಂದು ದಿನ ಇದ್ದೇ ಇದೆ—ಎಂತ.

oo oo oo

ವಿಲಿಯಮ್ ಫಾಕ್ನೇರ್ ಅಮೇರಿಕದ ಕಾದಂಬರಿಕಾರ. ಆತ ಅಮೇರಿಕದ ಕಾದಂ ಬರಿ ಸಾಹಿತ್ಯಕ್ಕೆ ಮಾಡಿದ ಸೇವೆಯನ್ನು ಮ ನ್ನಿಸಿ ಅವನಿಗೆ ಜಾಗತಿಕವಾದ ನೋಬೆಲ್ ಪಾರಿತೋಷಕವು ದೊರೆಯಿತು

—ಕರ್ನಾಟಕದ ಮಹಾ ಕಾದಂಬರೀಕ ರ್ತರಿಗೂ ಉತ್ಸಾಹ ಏರಬಹುದೆಂದು ನಿರೀ ಕ್ಷಿಸಲಾಗಿದೆ.

oo oo oo

ಪಾಕಿಸ್ತಾನದಲ್ಲಿ ಒಂದು ಹೊಸ ಪಕ್ಷ ಸ್ಥಾ ಪನೆ ಆಗಿದೆ. ಅದರ ಹೆಸರು ಆಜಾದ್ ಪಾಕಿ ಸ್ತಾನ ಪಕ್ಷ. ಇವರೂ ಜಿನ್ನಾ ಮುಸ್ಲಿಮ್ ಲೀಗಿನವರೂ ಜತೆಯಾಗಿ ಲಿಯಾಕತ್ ಪಕ್ಷ ವನ್ನು ಸೋಲಿಸಲು ಟೊಂಕ ಕಟ್ಟಿದ್ದಾರೆ.

—ಜಿನ್ನಾ—ಆಜಾದ್ ಒಟ್ಟಾದದ್ದು ಭೂಮಿ ಯ ಮೇಲೆ ಅಪೂರ್ವ ಸನ್ನಿವೇಶವೇ ಸರಿ.

oo oo oo

ಓವರ್ ಕಮ್ಯೂನಿಸ್ಟರು ಚಲಿಸುತ್ತಿರುವ ರೈಲುಬಂಡಿಯಿಂದ ಕೆಳಗೆ ಹಾರಿದರೂ ಬದು ಕಿದರಂತೆ.

ಈ ಘಟನೆ ಕಮ್ಯೂನಿಸ್ಟರು ಎಷ್ಟು ಗಟ್ಟಿ ಎಂಬುದನ್ನು ಸೂಚಿಸುವುದು.

oo oo oo

ಎಕ್ಸ್—ರೇ ಚಿಕಿತ್ಸೆಯನ್ನು ನೂರು ರೂ ಪಾಯಿ ವರಮಾನಕ್ಕಿಂತ ಕಡಿಮೆಯುಳ್ಳ ದರಿ ದ್ರರಿಗೆ ಸರಕಾರವು ಪುಕ್ಕಟೆ ಮಾಡಿಸುವ ಏರ್ಪಾಡು ಮಾಡಿದೆ.

—ಎಕ್ಸ್—ರೇ ಬೇಕಾದ ಅಧಿಕಾರಿಗಳೂ, ಎಂಜೀನಗಳೂ ಸಂಬಳ ಕಡಿಮೆ ಮಾಡಬೇ ಕೆಂದು ಮುಷ್ಕರಹೂಡಬೇಕು.

oo oo oo

ಫ್ರೆಂಚ ಕಮ್ಯೂನಿಸ್ಟ ನಾಯಕ ಥೊರೆಜ್ ಅವರನ್ನು ರಶಿಯನ್ ವಿಮಾನವೊಂದು ಪೇ ರಿಸಿನಲ್ಲಿ ಬಂದಿಳಿದು ಹಕ್ಕಿ ಕೊಂಡುಹೋ ಗಲು ಫ್ರೆಂಚ ಸರಕಾರ ಧಾರಾಳವಾಗಿ ಒಪ್ಪಿ ರುವುದಂತೆ.

—ರಶಿಯದಿಂದ ಈ ಬಗೆಯ ಕೇಳಿಕೆ ಯಾವಾಗ ಬಂದೀತೆಂದು ಭಾರತೀಯ ಸರ ಕಾರವೂ ಕುತೂಹಲದಲ್ಲಿರುವುದಂತೆ.

oo oo oo

ಬ್ರಿಟನ್ನಿನ ಶಾಂತಿಪರಿಷತ್ತಿಗೆ ಪೂರ್ವ ಯು ರೋಪಿನ ರಾಷ್ಟ್ರಗಳಿಂದ ಬಹಳ ಮಂದಿ ಬರು ವುದರಲ್ಲಿದ್ದರೂ ಬ್ರಿಟಿಷ ಸರಕಾರ ಅವರ್ಗಿಲ್ಲ ಪರವಾನಗಿ ಕೊಡಲಿಲ್ಲ.

—ಸ್ವತಃ ಅವರ ಶಾಂತಿಗೇ ಭಂಗಬಂತು.

oo oo oo

ಸಂಯುಕ್ತ ರಾಷ್ಟ್ರವು ಕೆಂಪು ಚೀನಕ್ಕೆ ಮ ನ್ನಣೆ ಕೊಡುವುದಂತೆ

—ಇದೊಂದು ಮಹೋಪಕಾರವೇ? ಆ ರೋಗ್ಯವಾಗಿ ಬದುಕಿರುವವನಿಗೆ ವೈದ್ಯರ ಸರ್ಟಿಫಿಕೇಟು ಬೇಕೆ?

oo oo oo

ಅತ್ತ ಟಿಬೇಟು ಇತ್ತ ನೇಪಾಳ. ಎಚ್ಚರಿಕೆ! ಎಚ್ಚರಿಕೆ! ಎಲ್ಲರೂ ಒಗ್ಗಟ್ಟಿನಲ್ಲಿರಬೇಕು. ನಮ್ಮ ಪಾರ್ಟಿ ಶತ್ರುಗಳನ್ನು ಮರೆತು ಹೊಸ ದಾಗಿ ಬಂದ ಸ್ವಾತಂತ್ರ್ಯವನ್ನುಳಿಸಿಕೊಳ್ಳಬೇ ಕು. (ಪಟೇಲರ ಉಪದೇಶ ಪಾಠ)

—ಅಂದರೆ ಕಾಂಗ್ರೆಸಿಗೇ ವೋಟುಕೊಡ ಬೇಕೆ?

oo oo oo

ಟಿಬೆಟ್ ತಪ್ಪಲಿನ ಲಾಮಾಗಳಿಗಿಂತ ಎಂ ಡಿಸ್ ಬಟ್ಟೆದ ಲಾಮಾ (ಒಂದು ಸಾಧುಪ್ರಾ ಣಿ; ಹೊರೆ ಹೊರುವ ಜಾತಿ) ಈಗ ಸದ್ಯ ಸಂ ತೋಷವಾಗಿದ್ದು, ತನಗೆ ಮೃಗಜಾತಿಯ ನ್ನಿತ್ತ ಭಗವಂತನನ್ನು ಸ್ತುತಿಸುವುದಂತೆ.

—ಕು. ಶಿ.

ಮಂಗಳೂರು

ಜಿಲ್ಲೆಯ ಹಿಂದುಳಿದ ವರ್ಗಗಳ ಸಂಘ ಸ್ಥಾಪನೆಯು ಇದೇ ತಾ. 5ರಲ್ಲು ಶ್ರೀ ಕೆ. ರಾಮನವರ ಅಧ್ಯಕ್ಷತೆಯಲ್ಲಿ ಸೇರಿ ದ ಸಭೆಯಲ್ಲಿ ನಡೆಯಿತು. ಹಿಂದುಳಿದ ವರ್ಗ ದವರಿಗೊಂದು ಸಂಘದ ಅವಶ್ಯಕತೆಯನ್ನೆತ್ತಿ ಹಲವರ ಭಾಷಣಗಳಾದುವು. ಜಿಲ್ಲಾ ಸಂಘ ಕ್ಕೆ ಶ್ರೀಗಳಾದ ಎಮ್. ಗಿರಿಯಪ್ಪನವರು ಅಧ್ಯಕ್ಷರಾಗಿಯೂ, ಕೆ. ರಾಮನವರು ಉ ಪಾಧ್ಯಕ್ಷರಾಗಿಯೂ, ಎನ್. ಎಸ್. ಸುವರ್ಣ ನವರು ಕಾರ್ಯದರ್ಶಿಗಳಾಗಿಯೂ, ಕೆ. ದೇ ಜಪ್ಪನವರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟನಂತರ ಸಂಘದ ನಿಯಮಾವಳಿ ತಯಾರಿಸಲು ಉಪಸಮಿತಿಯೊಂದರ ರಚನೆ ಯಾಯಿತು.

ನಿಷೇಧ ಸಭೆ—ಜಿಲ್ಲಾ ಕೆಥೋಲಿಕ್ ಸಂಘದ ಆಶ್ರಯದಲ್ಲಿ ಜರಗಿದ ಸಭೆಯಲ್ಲಿ ಮತಾಂತರಗೊಂಡ ಹರಿಜನರಿಗೆ ಶೆಡ್ಯೂಲ್ಡ ಕ್ಲಾಸಿನವರಿಗೆ ಸಿಕ್ಕುವ ರಿಯಾಯತಿಗಳನ್ನು ತೆಗೆದುದು ಅನ್ಯಾಯವಾಗಿದೆ ಮತ್ತು ಹಿಂ ದೂ ಕೋಡ್ ಮಸೂದೆಯ ಸೆಕ್ಷನ್ 78 ಮ ತ್ತು 120ರಂತೆ ಮತಾಂತರಗೊಂಡವರಿಗೆ ಹಿಂ ದಿನ ಜಾತಿಯಲ್ಲಿದ್ದಾಗಿನ ಆಸ್ತಿಪಾಸ್ತಿಗಳ ಅಧಿ ಕಾರವಿಲ್ಲದಂತಾಗುವುದನ್ನು ನಿಷೇಧಿಸುವ ನಿ ರ್ಣಯಗಳಾದುವು. ಮಂಗಳೂರು ಬಿಶೋ ಪರು ಸಭಾಧ್ಯಕ್ಷತೆ ವಹಿಸಿದ್ದು ಶ್ರೀಗಳಾದ ಯು. ಕಣ್ಣಪ್ಪ, ಎಲ್. ಸಿ. ಪಾಯಿಸ್ ಎ. ಎಮ್. ಜೋಸೆಫ್, ಎಮ್. ಎಸ್. ಶ್ರೀಪ್ಪಾ, ಡಾ। ಎ. ಎಫ್. ಕೊಯ್ಲೊ ಮೊದಲಾದವರು ಮಾತನಾಡಿದರು. ರೆ। ಫಾ। ಸಿ. ಬಿ. ಲೋ ಬೋರವರು ಧನ್ಯವಾದಗಳನ್ನರ್ಪಿಸಿದರು.

ಭಾರತ ಕಲಾಮಂದಿರವೆಂಬ ಗೋಂ ಬೆ ಮೊದಲಾದ ಆಟದ ಸಾಮಾನುಗಳ ನಿರ್ಮಾಣಮಾಡುವ ಕಲಾಮಂದಿರದ ಉ ದ್ಘಾಟನಾ ಸಮಾರಂಭವು ಇದೇ ತಾ. 8ರಲ್ಲು ಶ್ರೀ ಪಿ. ಕೆ. ನಾರಾಯಣನವರ ಅಧ್ಯಕ್ಷತೆ ಯಲ್ಲಿ ಜರಗಿತು.

ಬರ್ನಾರ್ಡ್ ಶಾ ದಿನಾಚರಣೆ— ದ. ಕ. ವಿದ್ಯಾರ್ಥಿ ಯೂನಿಯನ್ ಮತ್ತು ಜನಪದ ಕಲಾಮಂಡಳಿಯ ಆಶ್ರಯದಲ್ಲಿ ಜಾ ರ್ಜ್ ಬರ್ನಾರ್ಡ್ ಶಾರವರ ದಿನಾಚರಣೆ ಇ ದೇ ತಾ. 9ರಲ್ಲು ಸಂಜೆ ಜರಗಿತು.

ರೇಶನಿಂಗ್ ಸಲಹೆ ಸಮಿತಿಯ ಸಭೆಯು ಈಚೆಗೆ ಜರಗಿ ಹಸುಗೆಯಲ್ಲಿ ಅಕ್ಕಿಯ ಅಂಶವನ್ನು 1½ ಪಾವಿಗೆ ಏರಿಸಬೇಕೆ ನ್ನುವ, ಅಕ್ಕಿಯ ಮಿತಿಯನ್ನು ಏರಿಸಿದರೆ ಮಾತ್ರ ಕಳ್ಳಸಂತೆಯನ್ನು ತಡೆಯಲು ಸಾಧ್ಯ ವಾಗುವುದೆಂದು ಸರಕಾರದ ಗಮನಕ್ಕೆ ತರು ವ, ಬೇಸಾಯಗಾರರಿಗೆ ಸರಿಯಾದ ದಿವಾಂ ಡು ನೋಟೀಸು ಕೊಡಬೇಕೆನ್ನುವ, ಜಮೀ ನ್ದಾರರ ಸ್ವಂತ ಉಪಯೋಗಕ್ಕೆ ಬಿಡುವ ಮಿತಿ ಯನ್ನೇ ಅಕ್ಕಿಯನ್ನು ಒಕ್ಕಲುಗಳಿಗೂ ಬಿಡ ಬೇಕೆಂದು ವಿನಂತಿಸುವ ನಿರ್ಣಯಗಳಾದುವು

ಶ್ರೀ ಗೋಳ್ವಲ್ಕರರ ಆಗಮನ— ಆರ್. ಎಸ್. ಎಸ್. ಸಂಸ್ಥೆಯ ಪ್ರಧಾನರಾ ದ ಶ್ರೀ ಗೋಳ್ವಲ್ಕರರು ಇದೇ ತಾ. 5ರಲ್ಲು ಮಂಗಳೂರಿಗೆ ಆಗಮಿಸಿದರು. ಕೇಂದ್ರ ಮೈ ದಾನಿನಲ್ಲಿ ಜಿಲ್ಲೆಯ ಸುಮಾರು ಎರಡು ಸಾವಿ ರಕ್ಕೂ ಮೇಲ್ಪಟ್ಟ ಸ್ವಯಂಸೇವಕರ ರ್ಯಾಲಿ ಯೊಂದು ನಡೆಯಿತು. ಶ್ರೀ ಗೋಳ್ವಲ್ಕರ ರಿಗೆ ಸ್ವಯಂಸೇವಕರ ಚಟುವಟಿಕೆಗಳ ಪರಿ ಚಯವನ್ನು ಶ್ರೀ ಕಾರ್ಕಳ ಸದಾಶಿವರಾಯ ರು ಮಾಡಿಕೊಟ್ಟರು. ಮರುದಿನ ಬೆಳಗ್ಗೆ ಪೆಂಟಲೆಂಡ್ ಪೇಟೆಯಲ್ಲಿ ಧ್ವಜವಂದನೆಯಾ ದಾಗ ಶ್ರೀ ಗೋಳ್ವಲ್ಕರರು ಕೆಲವು ಹಿತೋ ಕ್ತಿಗಳನ್ನಾಡಿದರು. ಶ್ರೀಯುತರು ಕಾರ್ಕಳ ದಲ್ಲಿ ಆರ್. ಎಸ್. ಎಸ್. ಸಂಘದ ಕಾರ್ಯಾ ಲಯ ಕಟ್ಟಡದ ಶಂಕುಸ್ಥಾಪನೆ ಮಾಡಿದರು.

ಸಹಾಯ ಧನ—ಕಳೆದ ತಾ. 8ರಲ್ಲು ಕಲ್ಲಿಕೋಟೆಯಿಂದ ಪರ್ಯಟನ ಅಕ್ಕ, ತಕ್ಕ ರೆ ಮೊದಲಾದ ಸಾಮಗ್ರಿಗಳನ್ನು ತುಂಬಿಸಿ ಕೊಂಡು ಆಬಿದಾನ್ ದೀಪಿ ದ್ವೀಪಕ್ಕೆ ಹೋ ಗುತ್ತಿದ್ದ ಮೂರು ಧೋಣಿಗಳು ಧುಂಗುಲದ ಪೆ ಆಳವೆ ಒಳ ಹೊರಗಾಗಿಯಂದಾಗಿ ಮು ಳುಗಿದ್ದು ಇಟ್ಟಿಗೆ ನಷ್ಟವಾದರು. ಬದುಕಿದ್ದ 28 ಮಂದಿಗೆ ಆವಿದಾನ್ ದೀಪಿ ಸಹಾಯ ನಿಧಿಯಿಂದ ಜಿಲ್ಲಾ ಕಲೆಕ್ಟರರು ತಲಾ ದಿನ ಒಂದರ ಹನ್ನೆರಡಾಣೆಯಂತೆ ಆರು ದಿವಸಗ ಳ ಬಗ್ಗೆ ರೂ. 182-4-0 ಸಹಾಯಧನವಾಗಿ ಕೊಟ್ಟಿರುವರು.

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 368/1950

ಸೀತಾರಾಮ ಬಲ್ಲಾಳ —ವಾದಿ

ಮತ್ತು

ಶೀನಪ್ಪ ಸೆಟ್ಟಿ ಕೂಡಾ —ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿರು:-

3) ಅಂಣಯ್ಯ ಸೆಟ್ಟಿ, ದ್ಯಾಮು ಸೆಡ್ತಿ ರ ಮಗ. 7) ಕಾಂತಪ್ಪ ಸೆಟ್ಟಿ, 8) ರಾಮ ಸೆಟ್ಟಿ, 9) ಲಕ್ಷ್ಮಿ ಸೆಡ್ತಿ, 10 ಕಮಲ ಸೆಡ್ತಿ, ಇವರು 4ಮಂದಿ ಚಂದಕ್ಕ ಸೆಡ್ತಿರ ಮಕ್ಕಳು. 14) ಗೋಪ ಸೆಟ್ಟಿ, ಚಿಕ್ಕ ಸೆಡ್ತಿರ ಮಗ. ಉಡ್ಪಿ ತಾಲ್ಕು ಕೊರಂಗ್ರಪಾಡಿ ಗ್ರಾಮದ ಕೆಂಮಣ್ಣುರು ಎಂಬಲ್ಲಿರುವವರು.-

ಇವರೀಗೆ ಈ ಮೂಲಕ ತಿಳಿಸುವುದೇ ನೆಂದರೆ—

ವಾದಿಯು ಪ್ರತಿವಾದಿರಮೇಲೆ ಮೂಲ ಗೇಣಿ ಬಾಕಿ ಕೇಳಿ ದಾಕ್ಲುಮಾಡಿದ ಮೇಲ್ಕಂ ಡ ವ್ಯಾಜ್ಯವು ತಾ. 30-11-50ಕ್ಕೆ 3-7ರಂದ 10 ಮತ್ತು 14ನೇ ಪ್ರತಿವಾದಿರಿಗೆ ನೋಟೀ ಸು ಒಗ್ಗೆ ಯಿಟ್ಟದೆ. ಆದುದರಿಂದ ಸದ್ರಿ ವ್ಯಾ ಜ್ಯದಲ್ಲಿ ಸದ್ರಿ ಪ್ರತಿವಾದಿರಿಗೆ ಉದಾಹರಣೆ ಕೊಟ್ಟು ವ್ಯವಹರಿಸುವಂತಾದಿದ್ದಲ್ಲಿ ಮೇ ಲ್ಕಂಡ ತಾ. 30-11-50ನೇ ದಿವ್ಸ ಬೆಳಗೆ 10ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ ಲ್ಲಿ ಏಕಪ್ಕ್ಷವಾಡಿ ಸದ್ರಿವ್ಯಾಜ್ಯವು ಪೈಸಲಾಗಿ ಮಾಡಲ್ಪಡುವುದು.

P. V. Acharya

Vakil for Plaintiff

ಉಡ್ಪಿ, ತಾ. 11—11—1950

ಬೇಕು

ಕಂಪೋಸಿಟರ್ಸ್ ಮತ್ತು ಬೈಂಡರ್ಸ್ ಬೇಕಾಗಿದ್ದಾರೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ಕಂಪೋಸಿಂಗ್, ಬೈಂಡಿಂಗ್ ಮತ್ತು ಪ್ರಿಂಟಿಂಗ್ ವಿಭಾಗಗಳಲ್ಲಿ ತರಬೇತಿಗಾಗಿ ಕೆಲವು ಹುಡುಗರನ್ನೂ ತೆಗೆದುಕೊಳ್ಳಲಾ ಗುವುದು. ಹೆಚ್ಚಿನ ಮಾಹಿತಿಗೆ ವಿಚಾರಿಸು ವುದು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 54/1950

1 ಮಮ್ಮು ಸೆಡ್ತಿ, ಗಿರಿ ಸೆಡ್ತಿರ ಮಗಳು. ಮ ಮುದ್ದಂಣ ಹೆಗ್ಡೆರ ವಿಧವೆ.

2 ಅಪ್ಪಿಸೆಡ್ತಿ, 3 ಸುಂದರಿ ಸೆಡ್ತಿ ಮಮ್ಮು ಸೆಡ್ತಿರ ಮಗಳಂದಿರು

4 ವಿಠಲ, 5 ಆನಂದ, 6 ಸೀತಾರಾಮ 7 ರಾಜೀವಿ—ಮಮ್ಮುಸೆಡ್ತಿರ ನ್ಯಾನರ ಮಕ್ಕ ಳು—ಇವರ ಕ್ಷೇಮ ಬಂಕಳಕು, ತಾಯಿ 1ನೇ ಅರ್ಜಿದಾರಳು ಮಮ್ಮು ಸೆಡ್ತಿ.

ಕಾರ್ಕಳ ತಾಲ್ಕು ಕಡಂದಲೆ ಗ್ರಾಮ ಸುಳಿಮೊಗರು ಎಂಬಲ್ಲಿರುವವರು.

—ಅರ್ಜಿದಾರರು

ಮತ್ತು

1 ವೆಂಕಪ್ಪ ಹೆಗ್ಡೆ, 2 ಸೂರು ಹೆಗ್ಡೆ, ಗಿರಿ ಯಮ್ಮ ಹೆಗಡ್ತಿರ ಮಕ್ಕಳು.

3 ಶೀನ ಹೆಗ್ಡೆ, 4 ಮಹಾಬಲ ಹೆಗ್ಡೆ, 5 ನಾರಾಯಣ ಹೆಗ್ಡೆ, ಅಪ್ಪಕ್ಕ ಹೆಗಡ್ತಿರ ಮ ಕ್ಕಳು

6 ಸಂಜೀವ ಹೆಗ್ಡೆ, ಜಾಣಿ ಹೆಗಡ್ತಿರ ಮಗ

7 ಶೀತ ಹೆಗಡ್ತಿ, 8 ಕಮಲ ಹೆಗಡ್ತಿ, ಜಾಣಿ ಹೆಗಡ್ತಿರ ಮಗಳಂದಿರು.

9 ಜಲಜ ಹೆಗಡ್ತಿ, ಸೀತ ಹೆಗಡ್ತಿ ಮಗಳು ಕಾರ್ಕಳ ತಾಲ್ಕು ಹಿರಿಯಾನ ಗ್ರಾಮದ ಮಾತಿಬೆಟ್ಟು ಎಂಬಲ್ಲಿರುವವರು.

—ಯದ್ರಿರು

1ನೇ ಅರ್ಜಿದಾರಳ ಗಂಡ ಪಿಕ್ಕ ಅರ್ಜಿ ದಾರರ ತಂದೆ ಕಾರ್ಕಳ ತಾಲ್ಕು ಹಿರಿಯಾನ ಗ್ರಾಮದಲ್ಲಿ ವಾಸ್ತವಿಸಿಕೊಂಡು ಯಿದ್ದ ಗಿರಿ ಯಮ್ಮ ಹೆಗಡ್ತಿರ ಮಗ ಯಿತ್ತಲಾಗೆ ಮೃತ ಪಟ್ಟ ಮುದ್ದಂಣ ಹೆಗ್ಡೆರೀಗೆ, ಮೇಲ್ಕಂಡ ಆ ರ್ಜಿಯಲ್ಲಿ ವಿಸ್ತರಿಸಿರುವ The Vijaya Bank Ltd., Karkala ಯಿದರ F. D. No. 171/48-49ರ ಲೆಕ್ಕಕ್ಕೆ ಯಿರುವ ಅ ಲು ಬಡ್ಡಿ ರೂಪಾಯಿ 900-0-0 ಮತ್ತು ಸದರಿ ಬ್ಯಾಂಕಿನ F. D. No. 34/4-9-50ರ ಲೆಕ್ಕಕ್ಕೆ ಯಿರುವ ಅಲು ಬಡ್ಡಿ ರೂಪಾಯಿ 1850-0-0 ಮತ್ತು The Ajekar Co-operative Stores Ltd., Marane Village ಯಿದರ ಬಾಬ್ತು ನಂಬ್ರ 80ನೇ ಮೆಂಬರ್‌ಸಿಪ್‌ನ ಶೇರಿನ ರೂಪಾಯಿ 100-0-0 ಕೂಡಾ ರೂ. 2850-0-0 ಬರ ತಕ್ಕದ್ದನ್ನು ವಸ್ಸಲು ಮಾಡುವರೆ ಅರ್ಜಿದಾರ ರೀಗೆ ವಾರೀಸು ಸರ್ಟಿಫಿಕೇಟು ಕೊಡಬೇ ಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿ ನಲ್ಲಿ ಕೊಟ್ಟ ಅರ್ಜಿಯು ಸದರಿ ಕೋರ್ಟು ಮುಂದೆ ತಾರೀಕು 2-12-1950ಕ್ಕೆ ಬೆಳಗ್ಗೆ 10ಗಂಟೆಗೆ ನಿಮ್ಮ ಹಾಜರಾತಿಯ ಬಗ್ಗೆ ಯಿ ಟ್ಟಿರುವದ್ದರಿಂದ ಆ ಕುರಿತು ಆಕ್ಷೇಪಣೆಯು ಯಿರುವಲ್ಲಿ ಸದರಿ ತಾರೀಕಿನಲ್ಲಾ ಸದರಿ ಕೋ ರ್ಟು ಮುಂದೆ ಸ್ವತಹಾ ಅಥವಾ ವಕೀಲರ ಮೂಲಕ ಹಾಜರಾಗಿ ಜ್ಯಾಹೀರು ಮಾಡಿಕೊ ಳ್ಳಬಹುದೆಂತಲೂ, ತಪ್ಪಿದ್ದಲ್ಲಿ ಸದರಿ ಅರ್ಜಿ ಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿ ಸಲ್ಪಡುತ್ತದೆಂತಲೂ, ಈ ಮೂಲಕ ಕೋ ರ್ಟು ಹುಕುಂ ಮೇರೆಗೆ ನಿಮಗೆ ತಿಳಿಸೋ ಣಾಗುತ್ತದೆ.

A. N. S. Achar

Pleader for Petitioners

Karkala, ತಾರೀಕು, 8-11-50

ದಕ್ಷಿಣ ಕನ್ನಡ

ಹಿರಿಯಡ್ಕ—ತಾ. 9-11-50ರಲ್ಲಿ ಸ್ಥಳೀಯ ಆರ್ಯಸಮಾಜದ ವತಿಯಿಂದ ಗಾಂಧಿ ಮೈದಾನಿನಲ್ಲಿ ದೀಪಾವಳಿ ಹಬ್ಬ ಮತ್ತು ಋಷಿ ದಯಾನಂದ ಸರಸ್ವತಿಯ ಪರನಿರ್ವಾಣೋತ್ಸವವು ಸ್ಥಳೀಯ ಅಧ್ಯಾಪಕ ಶ್ರೀ ಗಣಪಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರಲ್ಲಿ ಶ್ರೀ ಎಚ್. ಮಹಾಬಲ ಸೆಟ್ಟಿ, ಪಂಡಿತ ಮಂಜುನಾಥ ಶೆಣೈ, ಆಯೋಪದೇಶಕ ಶ್ರೀ ಪಿ ಕೆ.ಅನಂತಯ್ಯ ಮೊದಲಾದವರು ದೀಪಾವಳಿ ಮತ್ತು ದಯಾನಂದ ಸರಸ್ವತಿಯವರು ದೇಶಕ್ಕೆ ಸಲ್ಲಿಸಿದ ಸೇವೆ ಮೊದಲಾದ ಕುರಿತು ಭಾಷಣವಿತ್ತರು, ಅಧ್ಯಕ್ಷರು ಸ್ಫೂರ್ತಿದಾಯಕ ಭಾಷಣವಿತ್ತ ನಂತರ ಧನ್ಯವಾದ ಮತ್ತು ಶಾಂತಿ ಪಾಠದೊಡನೆ ಸಭಾ ಮುಕ್ತಾಯವಾಯಿತು.

ಕಲ್ಲೂರು — ಇಲ್ಲಿ ಹೊಸತಾಗಿ ತೆರೆದ ಬೋರ್ಡು ಹೈಯರ್ ಎಲಿಮೆಂಟರಿ ಶಾಲೆಯ ಆರಂಭೋತ್ಸವವು ತಾ 6-11-50ರಂದು ಕುಂದಾಪುರ ವಕೀಲ್ ಶ್ರೀ ಬಿ ಶಿವರಾಮ ಶೆಟ್ಟಿರ ಅಧ್ಯಕ್ಷತೆಯಲ್ಲಿ ವಿಜ್ರಂಭಣೆಯಿಂದ ಜರಗಿತು. ಪ್ರಾರ್ಥನಾ ನಂತರ ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ರು ಎಡ್ವೊಕೇಟ್ ಮತ್ತು ಡಿ। ಬೋ। ಮೆಂಬರ್ ಇವರು ಈ ಊರಿಗೆ ಹೈಯರ್ ಎಲಿಮೆಂಟರಿ ಶಾಲೆಯನ್ನು ತೆರೆದುದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡನ್ನು ಕೊಂಡಾಡಿ ಊರವರ ಕರ್ತವ್ಯವನ್ನು ವಿವರಿಸಿ ಭಾಷಣವಿತ್ತರು. ನಂತರ ವರದಿವಾಚನ, ಸಭಿಕರ ಭಾಷಣಗಳು ನಡೆದ ತರುವಾಯ, ಹೈಯರ್ ತರಗತಿಯ ಉದ್ಘಾಟನೆ ನಡೆಯಿತು. ಆ ಮೇಲೆ ಸಭಾಧ್ಯಕ್ಷರು ಕಾಲೋಚಿತ ಸಾರಸ ಭಾಷಣಗಳಿಂದ ಊರವರ ಹೆತ್ತವರ ಉಪಾಧ್ಯಾಯರ ಕರ್ತವ್ಯ ವಿವರಿಸಿದರು. ಮುಖ್ಯೋಪಾಧ್ಯಾಯರು ಧನ್ಯವಾದವನ್ನಿತ್ತ ಬಳಿಕ ಸಿಹಿತಿಂಡಿ, ಉಪಹಾರವನ್ನಿತ್ತ ಬಳಿಕ ಸಭೆ ಚದರಿತು.

NOTICE

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No 102/44

R. E. P. No. 5·/50

ಖತ್ತಿಜಾಬಿ ಕೂಡಾ 2 ಜನರು—ವಾದಿಯು —ಅಪ್ಲಿಕ್ಯಾಂಟ್ ಅರ್ಜಿದಾರರು

ಮತ್ತು

ಬೀಫಾತುಂಮಾ[ಪೋತಿ] ಕೂಡಾ 3 ಜನರು —ರೈಸ್ಪೊಂಡೆಂಟ್ರು.

2ನೇ ರೈಸ್ಪೊಂಡೆಂಟ ಅಬ್ದುಲ ರಹೂಫ, ಅಬ್ದುಲ್ಲನ ಮ್ಯಾನೇಜ ಮಗ. ಗಾರ್ಡಿಯನ ತಾಯಿ ನಫೀಸಾಬಿ, ನೀಲೇಶ್ವರ 1 ಗ್ರಾಮದ ಪಟೇಲ್ ಕುಂಞ ಮಾಹಿನ್ ಕುಟ್ಟಿ ಹೆಂಡ್ತಿ, ನೀಲೇಶ್ವರ ಗ್ರಾಮ.

3ನೇ ರೈಸ್ಪೊಂಡೆಂಟಳು ಕುಂಞಾಮಿನಾ, ಅಬ್ದುಲ್ ಖಾದರ ಹಾಜಿ ಹೆಂಡ್ತಿ. ವ ನಾಲಪುರ ಪಾಟೀಲ್ ಉಮ್ಮಾಲಿ ಮಗಳು-ನೀಲೇಶ್ವರ ಗ್ರಾಮದ ಕೋಟೆಪುರ ಎಂಬಲ್ಲಿರುವವಳು

ಯಾವರೀಗೆ

ಮೇಲ್ಕಂಡ ಡಿಕ್ರಿಪ್ರಕಾರ ಅರ್ಜಿದಾರರಿಗೆ ಬರತಕ್ಕ ಡಿಕ್ರಿ ಹಣಗಳ ಕುರಿತು ರೈಸ್ಪೊಂಡೆಂಟರ ಸ್ಥಿರ ಆಸ್ತಿಗಳನ್ನು ಯೇಲಂ ಬಗ್ಗೆ ಅರ್ಜಿದಾರರ ಕಡೆಯಿಂದ ಹಾಜ್ರು ಪಡ್ಸಿರ್ಪ ಸೇಲ್ ಪೇಪರ್ಸ ಮಂಜೂರಾತಿ ಬಗ್ಗೆ ಸದ್ರಿ ಅಪ್ಲಿಕ್ಯಾಂಯು ತಾ. 25-11-1950ನೇ ವ್ಯಾದೆಗೆ ತನ್ಖಿಗೆ ನಿಶ್ಚಯ್ಸು ಯಿರ್ವದ್ರಿಂದಾ ಸದ್ರಿ ವ್ಯಾದೆಗೆ ರೈಸ್ಪೊಂಡೆಂಟರು ಹಾಜ್ರು ಆಗುವರೆ ತಪ್ಪಿದ್ದಲ್ಲಿ ಸದ್ರಿ ರೈಸ್ಪೊಂಡೆಂಟರ ಹುಜ್ರಿಶಿಪ್ಪಾ ಮೇಲ್ಕಂಡ ಅರ್ಜಿಯು ತೀರ್ಮಾನಿಸೋಣಾದೀತು.

M. K. Abdulkhader,
Advocate for Petrs.

ಕಾಸರಗೋಡು, 4-11-50.

ಕುಂಬಳೆ

ಬೆಲ್ಲ ದುರ್ಲಭ—ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ನಾರಾಯಣ ಹವಿಲ್ದಾರ್ ಅವರು ತಾ. 8ರಲ್ಲು ಸ್ಥಳೀಯ ಅಂಗಡಿಗಳಲ್ಲಿದ್ದ ಬೆಲ್ಲವನ್ನೂ ಮರುದಿನ ಪೆರ್ಲ, ಬದಿಯಡ್ಕದಲ್ಲೂ ಇರುವ ಬೆಲ್ಲವನ್ನು ಈಗಿನ ಕಾನೂನು ಮೇರೆಗೆ ಹಿಡಿದಿರುವರು. ಆದರೆ ಬೆಲ್ಲ ಉಪಯೋಗಿಸುವವರಿಗೆ ಬೆಲ್ಲ ದುರ್ಲಭವಾಗಿದೆ.

ಮೂಲ್ಕಿ—ಇಲ್ಲಿಯ ಆಸ್ಪತ್ರೆ ಬಡಜನ ನಿಧಿಯಿಂದ ಕಟ್ಟಿಸಲಾದ ಒಳರೋಗಿ ಕಟ್ಟಡದ ಪ್ರವೇಶೋತ್ಸವವು ಇದೇ ತಾ 18 ರಲ್ಲು ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ನಡೆಯುವುದು, ಇದೇ ದಿನ ಜಿಲ್ಲಾ ಗ್ರಾಮ ಯೋಗಕ್ಷೇಮ ಸಮಿತಿಯ ಸಭೆಯೂ ಮೂಲ್ಕಿಯಲ್ಲೇ ಜರಗಲಿರುವುದು.

ಮದ್ರಾಸು

ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ 4ರಲ್ಲು ಮದ್ರಾಸಿನ ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲಿನಲ್ಲಿ ಶ್ರೀ ಎಮ್. ಮರಿಯಪ್ಪ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ದ. ರಾ. ಬೇಂದ್ರೆಯವರು 'ಭಕ್ತಿ ಸಾಹಿತ್ಯ'ದ ಕುರಿತು ವಿಚಾರಪೂರ್ಣವಾದ ಭಾಷಣವಿತ್ತರು.

ತಾ 5 ಲ್ಲು ಕರ್ನಾಟಕ ಸಂಘದ ವಾರ್ಷಿಕಾಧಿವೇಶನದ ಅಂಗವಾಗಿ ಕರ್ನಾಟಕ ಪ್ರಾಂತ ರಚನೆಯ ಉಪಯೋಗ'ದ ಕುರಿತು ಭಾಷಣ ಸ್ಪರ್ಧೆ ನಡೆಯಿತು. ಶ್ರೀಗಳಾದ ಕೆ ವೈ. ಅಡಿಗ, ಟಿ. ಹನುಮಂತಪ್ಪ, ಕೆಪ್ಪನ್ ಟಿ। ಶ್ರೀನಿವಾಸಮೂರ್ತಿಯವರು ನಿರ್ಣಾಯಕರಾಗಿ ಭಾಷಣಗಾರರಲ್ಲಿ ಮೊದಲ ಬಹುಮಾನವನ್ನು ಶ್ರೀ ಎಸ್. ನಾರಾಯಣರಾಯರಿಗೂ, ಎರಡನೆ ಬಹುಮಾನವನ್ನು ಶ್ರೀ ನಾ. ಮ. ಕೊಟ್ರಬಸವಯ್ಯನವರಿಗೂ, ಮೂರನೆ ಬಹುಮಾನವನ್ನು ಶ್ರೀ ನಾಗೇಂದ್ರನವರಿಗೂ ಕೊಡಬಹುದೆಂದು ತೀರ್ಮಾನಿಸಿದರು.

ಬೊಂಬಾಯಿ

ಕನ್ನಡ ಸಾಹಿತ್ಯ ಸಮ್ಮೇಳನವು ಈ ಬಾರಿ ದಶಂಬರ ತಿಂಗಳ ತಾ. 24, 25, ಮತ್ತು 26ರಲ್ಲು ಬೊಂಬಾಯಿಯಲ್ಲಿ ರಾಷ್ಟ್ರಕವಿ ದ. ಕ. ಜಿಲ್ಲೆಯ ಶ್ರೀ ಮಂಜೇಶ್ವರ ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಜರಗಲಿರುವುದು ನಾಟಕ, ಸಂಗೀತ, ಕಾವ್ಯ, ಗಾಯನ, ನೃತ್ಯ ಮೊದಲಾದ ಕಾರ್ಯಕ್ರಮಗಳು ಸಮ್ಮೇಳನದ ಉಪಾಂಗವಾಗಿ ಏರ್ಪಡಿಸಲಾಗಿದೆ. ಭಾಗವಹಿಸಲಪೇಕ್ಷಿಸುವವರು ಸ್ವಾಗತಸಮಿತಿಯೊಡನೆ (65 ಲಕ್ಷ್ಮಿಬಿಲ್ಡಿಂಗ್, ಸರ್ ಫಿರೋಜ್‌ಶಹಾ ಮೇಥಾ ರೋಡ್, ಫೋರ್ಟು ಬೊಂಬಾಯಿ.) ಪತ್ರವ್ಯವಹಾರ ಮಾಡಬೇಕಾಗಿ ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ ಜಿ. ಆಚಾರ್ಯ ಮತ್ತು ಸೌ। ಇಂದುಮತಿಯರ ವಿನಂತಿಯಿದೆ

ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳು ಎರಡು ರೂಪಾಯಿ ಶುಲ್ಕವನ್ನು ಕೊಡಬೇಕಾಗಿದೆ. ಪ್ರತಿನಿಧಿಗಳಿಗೆ ವಸತಿವ್ಯವಸ್ಥೆ ಪುಕ್ಕಟೆಯಾಗಿ ಮಾಡಲಾಗುವುದು. ಸ್ತ್ರೀಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಭೋಜನವೆಚ್ಚ ಪ್ರತಿನಿಧಿಗಳೇ ವಹಿಸಬೇಕಾಗಿದೆ. ಪ್ರತಿನಿಧಿಗಳಾಗಿ ಹೋಗಲಿಚ್ಛಿಸುವವರು ತಮ್ಮ ಪೂರ್ಣ ಹೆಸರು, ವಿಳಾಸ ಮತ್ತು ಪ್ರತಿನಿಧಿ ಶುಲ್ಕವನ್ನು ದಶಂಬರ ತಿಂಗಳ ತಾ. 1 ರೊಳಗಾಗಿ ಸ್ವಾಗತ ಸಮಿತಿಗೆ ಮುಟ್ಟುವಂತೆ ಕಳುಹಿಸಬೇಕೆಂದು ಕಾರ್ಯದರ್ಶಿಯರ ವಿನಂತಿಯಿದೆ.

ಸಾಹಿತ್ಯಗೋಷ್ಠಿ—ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆಯುವ ಸಾಹಿತ್ಯಗೋಷ್ಠಿಗೆ ಪ್ರಿನ್ಸಿಪಾಲ್ ಶ್ರೀ ವಿ. ಕೃ. ಗೋಕಾಕರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಉತ್ತರ ಬೊಂಬಾಯಿ ಹೊಟೆಲ್ ಕಾಮಗಾರ ಯೂನಿಯನ್ ಮಹಾಸಭೆಯು ಇದೇ ತಾ. 2ರಲ್ಲು ಪರೇಲ್ ದಾಮೋದರ ಹಾಲಿನಲ್ಲಿ ಶ್ರೀ ಎಮ್. ಮಾಧವನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತಮ್ಮ ಪೂರ್ವ ಪೀಠಿಕಾ ಭಾಷಣದಲ್ಲಿ, ದ. ಕ. ಜಿಲ್ಲೆಯ ಬಡ್ಕ ಹುಟ್ಟ ಬಾಲಕರು ಬೊಂಬಾಯಿಯ ಹೊಟೇಲುಗಳಲ್ಲಿ ನೌಕರಿಗಾಗಿ ಸಿಂತು ಸಹಿಸುತ್ತಿರುವ ಕಷ್ಟಪರಂಪರೆಗಳನ್ನು ವಿವರಿಸಿ, ಅವರಿಗೆ ಮ್ಯಾಲಕರಿಂದ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದೂ ಹೇಳಿದರು. ಸಭಿಕರ ಭಾಷಣಗಳಾದ ನಂತರ ಹೊಸ ವರುಷಕ್ಕೆ ಕಾರ್ಯನಿರ್ವಾಹಕ ಮಂಡಳಿಗೆ ಶ್ರೀಗಳಾದ ಎಮ್. ಮಾಧವನ್, ಅಧ್ಯಕ್ಷ; ಎಲ್ಲಪ್ಪರಾವ್, ಉಪಾಧ್ಯಕ್ಷ, ಎಚ್. ಜಗನ್ನಾಥ ಸೆಟ್ಟಿ, ಪ್ರಧಾನ ಕಾರ್ಯದರ್ಶಿ; ವಿ. ರಘುರಾಮ ಸೆಟ್ಟಿ, ರಘುರಾಮ ಕಾಮತ್, ಅಬ್ದುಲ್ ರಹಿಮಾನ್, ಸಂಜೀವ ಸೆಟ್ಟರು ಆರಿಸಲ್ಪಟ್ಟರು.

ಸಾಂವತ್ಸರಿಕೋತ್ಸವ— ಬೊಂಬಾಯಿಯ ಜಿಲ್ಲವರ ಎಸೋಸಿಯೇಶನಿನ ಹದಿನೆಂಟನೇ ಸಾಂವತ್ಸರಿಕೋತ್ಸವವು ಇದೇ ತಾ. 19ನೆ ಆದಿತ್ಯವಾರ ಅಪರಾಹ್ನ 2-30ಕ್ಕೆ ಕೋಟೆಯೊಳಗಣ ಸರ್ ಕಾವಾಸ್ಜಿ ಜಹಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಮುಂಬಯಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ಪ್ರಮುಖ ಶ್ರೀ ದಯಾಭಾಯಿ ವಿ. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O- S- 449/1950

ಬಿ. ಮಹಾಬಲ ಹೊಳ್ಳ — ವಾದಿ

ಮಹಾಲಿಂಗ ಜೋಯಿಸ ಕೂಡಾ—ಪ್ರತಿವಾದಿರು

1ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

(1ನೇ ಪ್ರತಿವಾದಿ ಮಹಾಲಿಂಗ ಜೋಯಿಸ, ಉಪ್ಪುಂದ ಪರಮೇಶ್ವರ ಜೋಯಿಸರ ಮಗ, ಯೆಡ್ತರೆ ಗ್ರಾಮಸ್ಥ.

ವಾದಿಯು ಮೇಲ್ಕಂಡ ದಾವೆಯನ್ನು ನಿಮ್ಮ ವಗೈರೆರ ಮೇಲೆ ದಾಕಲು ಮಾಡಿರುವದ್ರಿಂದ ಸದ್ರಿದಾವೆಯು ತಾ. 25-11-50 ಕ್ಕೆ ತನ್ಖಿಗೆ ಯಿಟ್ಟಿರುವದ್ರಿಂದ ಸದ್ರಿದಾವೆಯಲ್ಲಿ ನಿಮ್ಮ ಉದಾಹರಣೆ ದಾಕಲು ಮಾಡುವಂತಾದ್ದು ಯಿದ್ದಪಕ್ಷದಲ್ಲಿ ಸದ್ರಿ ತಾರೀಕಿನ ಹಗಲು 11ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಹಾಗೆ ಹಾಜ್ರು ಆಗಲಿಕ್ಕೆ ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಮ್ಮ ಗೈರುಹಾಜರಿಯಲ್ಲಿ ಕೇಳಿ ಫೈಸಲು ಮಾಡೋಣಾದೀತೆಂತ ನೀವು ತಿಳಿದಿರತಕ್ಕದ್ದು.

B Mahabala Holla
Plaintiff

ಮೊಕ್ಕಾಂ, ಕುಂದಾಪುರ ತಾರೀಕು 7-11-50

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಪ್ರಾತಿನಿಧ್ಯರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಕೆಲವೇ ಪ್ರತಿಗಳು ಉಳಿದಿದೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು.. ಡಾಕ್ಟರ್ ಕೋಟ್ಗಲ್ ವೆಂಕಟರಾಯರು, ಎಲ್ ಐ.ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ, ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ನಿರೂಪಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ನೀಡಲಾದ ಕದೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

ತಾರೀಖು ೮-೧೦-೩೯ನೇ 'ರಾಷ್ಟ್ರಬಂಧು' ಮತ್ತು ೧೩-೧೦-೩೯ನೇ 'ನವಯುಗ' ಸಂಚಿಕೆಗಳಲ್ಲಿ ಮಾನ್ಯ ಪುತ್ತೂರು ರೆ. ಡಿ ಆಫೀಸರವರ ಪ್ರಕಟಣೆಯಲ್ಲಿ ಹೇಳಿರುವಂತೆ ಸರಕಾರೀ ಸ್ಥಳಗಳಲ್ಲಿರುವ ಮರಮಟ್ಟುಗಳನ್ನು ಕಾಪಾಡುವುದು ಹಾಗೂ ಕಳ್ಳಾಟಿಕೆಯಿಂದ ಕಡಿದುಕೊಂಡು ಹೋಗದಂತೆ ಗ್ರಾಮಸ್ಥರು ಸಹಾಯ ಮಾಡಬೇಕೆಂಬುದಾಗಿಯೂ ಹಾಗೆ ತೋರಿಸಿಕೊಡುವವರಿಗೆ ಮದ್ರಾಸು ಸರಕಾರವು ಇನಾಮು ಕೊಡುವುದಾಗಿಯೂ ಜಾಹೀರು ಪಡಿಸಿರುವುದನ್ನು ಓದಿನೋಡಿದಲ್ಲಿ ಈ ಕೆಳಗಿನ ವಿಷಯಗಳು ಸರಕಾರದ ಅವಗಾಹನೆಗೆ ಬಂದಿರುವುದಿಲ್ಲವಾಗಿ ಎಣಿಸಿ ಅವುಗಳನ್ನು ಈ ಕೆಳಗೆ ಸೂಚಿಸಲಾಗುತ್ತದೆ. ಪುತ್ತೂರು ಕಾಸರಗೋಡು ತಾಲೂಕುಗಳಲ್ಲದೆ ಕಾರ್ಕಳ, ಉಡುಪಿ, ಕುಂದಾಪುರ ತಾಲೂಕುಗಳಲ್ಲಿಯೂ ರೆವಿನ್ಯೂ ಸ್ಥಳಗಳಲ್ಲಿದ್ದ ಉತ್ತಮಜಾತಿಯ ಬೆಲೆಯುಳ್ಳ ಮರಮಟ್ಟುಗಳನ್ನು ನೇಕಡಾ ೫೦ರಷ್ಟು ಭಾಗ ಈಗಾಗಲೇ ಕಡಿದು ಮಾರಾಟವಾಗಿ ಮುಗಿದಿರುತ್ತದೆ. ಇನ್ನು ಬೆಳೆಯಲಿರುವ ಸಣ್ಣ ಸಣ್ಣ ಮರಗಳನ್ನು ಮನೆ ಮತ್ತು ಕಟ್ಟಿಗೆಯ ಸಲುವಾಗಿ ಹೇರಳವಾಗಿ ಇತ್ತೀಚೆಗೆ ಕಡಿದುದಲ್ಲದೆ ಈಗಲೂ ಕಡಿಯುತ್ತಾ ಇದ್ದಾರೆ.

ಸರಕಾರೀ ಸ್ಥಳಗಳಲ್ಲಿರುವ ಮರಗಳನ್ನು ಕಡಿಯುವುದರ ಕುರಿತು ಕೆಲವು ಕಡಿಮೆ ಸಲಿಯಲ್ಲಿ ರಿಪೋರ್ಟುಗಳು ಆಗಿರುತ್ತವೆ. ಈಗಲೂ ತನಿಖೆಯಲ್ಲಿ ಹಲವು ತಕ್ಸೀರುಗಳಿವೆ. ಆದರೆ ಈಗ ಜಾರಿಯಲ್ಲಿ ವ ನಡತೆಯಲ್ಲಿ ಫೋರೆಷ್ಟ್ ತಕ್ಸೀರುಗಳೆಂದರೆ ತನಿಖೆಮಾಡುವ ಆಫೀಸರರಿಗೆ ಒಂದು ಕಂಟಕಪ್ರಾಯವಾದವುಗಳೆನ್ನಬಹುದು. ಕಾರಣ, ಮರ ಕಡಿಯುವವರು, ಸಾಗಿಸಿದವರು, ಕ್ರಯಕ್ಕೆ ಪಡೆದವರು, ಮುಂತಾದ ಕಣ್ಣು ಸಾಕ್ಷಿಗಳು ಅಗತ್ಯ. ಹೀಗಿಲ್ಲವಾದರೆ ನ್ಯಾಯಸ್ಥಾನದಲ್ಲಿ ಅಪರಾಧಿಯ ತಪ್ಪು ಸ್ಥಾಪಿತವಾಗುವುದಿಲ್ಲ. ಕಳವು ಮಾಡುವುದನ್ನು ನೋಡಿದ ಸಾಕ್ಷಿಗಳೇ ಬೇಕೆಂಬುದು ಹಾಸ್ಯಾಸ್ಪದ, ಆದ್ದರಿಂದ ಹೀಗೂ ಒಂದು ತಕ್ಸೀರು ರುಜುವಾಯಿತೆಂದು ಮಾಡುವರೆ ಸಂಬಂಧಪಟ್ಟ ಉದ್ಯೋಗಸ್ಥರು

ಜನಮತ

ರೆವಿನ್ಯೂ ಸ್ಥಳಗಳಲ್ಲಿ ಕಳ್ಳಾಟಿಕೆಯಿಂದ ಮರ ಕಡಿಯುವ ವಿಚಾರ.

(ಕೆ. ಕೆ. ಪಿ. ರಾಮ ಪೋತುವಾಳ, ಕಾಂಗ್ರೆಸ್ ಕಾರ್ಯಕರ್ತ, ಕಾರ್ಕಳ)

ಯಾರನ್ನಾದರೂ ಗ್ರಾಮದಲ್ಲಿ ಯಾಚಿಸಿ ಅಲ್ಪ ಕಂಪೌಂಡು ಮಾಡುತ್ತೇನೆಂತ ಅವರಿಗೆ ಭರವಸೆಕೊಟ್ಟು, ಯಾರಾದರೊಬ್ಬ ನಿರಾಥಾರಿ ಮನುಷ್ಯನ ಹೆಸರಿನಲ್ಲಿ ಸಿಜವಾಗಿ ಮರದ ಮೌಲ್ಯದ ನೇಕಡಾ ೧೦ರಷ್ಟು ಕಂಪೌಂಡು ಮಾಡಿ ರಿಕಾರ್ಡು ಮುಕ್ತಾಯ ಮಾಡುತ್ತಾರೆ. ಇದರಿಂದ ಮರ ಕಳುವವರಿಗೆ ಕಂಪೌಂಡು ಆದರೂ ನೇಕಡಾ ೯೦ರಷ್ಟು ಲಾಭವುಂಟು, ಆದುದರಿಂದ ಕಳ್ಳಾಟಿಕೆಯಿಂದ ಮರಕಡಿದು ಮಾರುವವರಿಗೆ ಪ್ರೋತ್ಸಾಹವೇ ವಿನಹ ಪ್ರತಿಬಂಧಕವಾಗುವುದಿಲ್ಲ.

ಮರಕಡಿದು ಮಾರುವವರು ಗ್ರಾಮಗಳಲ್ಲಿ ಅಧ್ಯಕ್ತಿಗಳಿದ್ದು ಕೆಲವು ಪೋಲಿ ಜನರನ್ನು ಕೂಡಿಕೊಂಡು ಮರಕಡಿದು ಮಾರುವ ಉದ್ಯೋಗವನ್ನು ಸಾಂಗವಾಗಿ ನಡೆಸುತ್ತಿದ್ದಾರೆ ಅವರ ಭಯಕ್ಕಾಗಿಯೋ, ದಾಕ್ಷಿಣ್ಯಕ್ಕಾಗಿಯೋ ಗ್ರಾಮಸ್ಥರು ಸರಕಾರದ ಗಮನಕ್ಕೆ ಈ ವಿಷಯತರುವರೆ ತುಂಬಾ ಭಯ ಪಡುತ್ತಾರೆ. ಅಥವಾ ಸರಕಾರದ ಗಮನಕ್ಕೆ ತಂದರೂ ಜನರಿಂದ ಹೆಚ್ಚಿನ ಪ್ರಯೋಜನವಾಗಿ ತಪ್ಪಿತಸ್ಥರನ್ನು ಸರಕಾರವು ಅಂಕೆಯಲ್ಲಿಡುವುದಿಲ್ಲವೆಂಬುದರಿಂದ ಜನರಿಗೆ ಅದರಲ್ಲಿ ಉತ್ಸಾಹವೂ ಕಡಿಮೆಯಾಗಿದೆ ಒಂದು ವೇಳೆ ಸತ್ಯಕ್ಕಾಗಿ ಒಬ್ಬನು ಇದಿರುಬಂದು ಸಾಧಿಸಿದರೆ ಅವನ ಪರಿಸ್ಥಿತಿಯು ಕೆಟ್ಟದಾಗಿ ಅವನು ನಂತರ-ಸಹಾಯ ಮಾಡುವವರು ಯಾರೂ ಇಲ್ಲದ ಊರು ಬಿಡುವ ಸಂದರ್ಭ ಬರುತ್ತದೆ. ಆದ್ದರಿಂದ ಈ ಎಲ್ಲಾ ಸರಕಾರದ ದೌರ್ಬಲ್ಯವನ್ನು ನೋಡಿ ಕೆಲವು ಪೋಲಿ ಜನರು ರೆವಿನ್ಯೂ ಕಾಡುಗಳಿಂದ ನಿರ್ಭೀತರಾಗಿ ದಿನೇ ದಿನೇ ಹೆಚ್ಚೆಚ್ಚಾಗಿ ಮರಗಳನ್ನು ಕಡಿದು ಮಾರುತ್ತಾ ಇರುತ್ತಾರೆನ್ನಬಹುದು. ಹೀಗಾದ ಪಕ್ಷದಲ್ಲಿ ಕೇವಲ ಒಂದೆರಡು ವರ್ಷಗಳಲ್ಲಿಯೇ ಸರಕಾರದ ಅರಣ್ಯ ಸಂಪತ್ತೆಂಬುದು ಶೂನ್ಯವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ!

ಗ್ರಾಮ ಉದ್ಯೋಗಸ್ಥರು ಇಡೀ ಗ್ರಾಮದ ಎಲ್ಲಾ ಮಾಹಿತಿಯುಳ್ಳವರು. ಅದರಲ್ಲಿ ಶ್ಯಾನುಭಾಗರು ಇಡೀ ಗ್ರಾಮದಲ್ಲಿ ವರ್ಷಕ್ಕೆ ಎರಡು ಮೂರಾವರ್ತಿ ಸರ್ವೆ-ಕಲ್ಲು ಮುಂತಾದ ಅಜಮಾಸಿಗಳ ಸಂಬಂಧ ಗ್ರಾಮದ ಯಾವತ್ತೂ ಸ್ಥಳಗಳನ್ನು ಸಂದರ್ಶಿಸಿ ನೋಡುತ್ತಾರೆ ಇಷ್ಟಾದರೂ ಇತ್ತೀಚೆಗೆ ಒಂದು ವರ್ಷದಿಂದ ಕೆಲವು ಗ್ರಾಮಗಳಲ್ಲಿ ಲಕ್ಷಾಂತರ ರೂಪಾಯಿಗಳ ಬೆಲೆಯುಳ್ಳ ಸಾವಿರಗಟ್ಟಲೆ ಉತ್ತಮ ಜಾತಿಯ ಮರಗಳು ಕಡಿಯಲ್ಪಟ್ಟು ಗುತ್ತಿಗಳು ಮಾತ್ರವಿದ್ದು ಸರಕಾರದ ಗಮನಕ್ಕೆ ಬರಲಿಲ್ಲವಾಗಿ ತಿಳಿಯುತ್ತದೆ. ಇದಕ್ಕೆ ಕಾರಣವೇನು? ಒಂದನೆಯದಾಗಿ ರಿಪೋರ್ಟುಮಾಡಿದರೆ ಸರಕಾರದ ಮೇಲಾಫೀಸರರ ಬೆಂಬಲ ಕಡಿಮೆ. ಎರಡನೆಯದಾಗಿ ಪೋಲೀ ಜನರ ಉಪಟಳ ಮತ್ತು ಕೆಲವು ಗ್ರಾಮ ಉದ್ಯೋಗಸ್ಥರು ತಾವಾಗಲೀ ತಮ್ಮ ಸಂಬಂಧಿಕರಾಗಲೀ ಈ ಕಳ್ಳವ್ಯಾಪಾರಕ್ಕೆ ಕೈಹಾಕಿರುತ್ತಾರಾಗಿ ತಿಳಿಯುತ್ತದೆ. ಹೀಗೆ ಕಳ್ಳಾಟಿಕೆಯಿಂದ ಮರಗಳನ್ನು ಕಡಿಯುವವರನ್ನು ಪ್ರತಿಬಂಧಿಸುವರೆ ಸರಕಾರವು ಅಪೇಕ್ಷಿಸಿದರೆ ಕೆಲವು ಯೋಗ್ಯ ಉಪಾಯಗಳನ್ನು ಸೂಚಿಸಬಹುದು.

ಈಗ ನಮ್ಮ ಸರಕಾರದ 'ಸಸಿನೆಡುವ' ಚಳವಳಿಯಲ್ಲಿ ನಮ್ಮ ಜಿಲ್ಲೆಯ ಮಲೆನಾಡಿನಲ್ಲಿ 'ಒಂದು ಕೈಯಲ್ಲಿ ಗಿಡ, ಮತ್ತೊಂದು ಕೈಯಲ್ಲಿ ಕೊಡಲಿ' ಎಂಬ ನೀತಿಯ ನಿಷ್ಪ್ರಯೋಜಕವುಂಟಾಗಿದೆ. ಇಂತಹ ರಾಷ್ಟ್ರಘಾತಕ ಕೃತ್ಯವನ್ನು ಸರಕಾರವು ಶೀಘ್ರದಲ್ಲಿ ತಡೆಗಟ್ಟಿ ತಪ್ಪಿತಸ್ಥರು ಯಾರೇ ಆಗಿರಲಿ, ಅಂಥವರ ಮೇಲೆ ಯೋಗ್ಯಕ್ರಮ ತೆಗೆದುಕೊಂಡು, ಸರಕಾರವು ಇದೆಯೆಂಬ ಭಾವನೆಯನ್ನು ಕೂಡಾ ಮರೆತಿರುವ ಈ ಕದೀಮರಿಗೆ ಎಚ್ಚರ ಕೊಡಬೇಕು. ಇದರಿಂದಾಗಿ ನಮ್ಮ ನಾಡಿನ ವನಸಂಪತ್ತನ್ನು ಕಾಪಾಡಿದಂತಾಗುವುದು.

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.
ಡಬ್ಬಿ ಒಂದಕ್ಕೆ ರೂ. 2—0—0
ಏಜಂಟ್:—
ಶಾ ಕಂಪೆನಿ, ಮಂಗಳೂರು.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲ್‌ಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುತ್ತಿದ್ದು, ಹಳೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]
Mrs. P. DEVEE, F DS (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾಕಂಪೆನಿ, ಮಂಗಳೂರು

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು
ಪಥ್ಯ:—ಹೆರವೀಷವನ್ನ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ಹಾಪಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಧಾರ್ಮಿಗ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಬಾಯಿ ,ಕೆಮಿಸ್ಟ್, ಹಾವೇರಿ, ಬ್ಯಾಡಗಿ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಅಂತರಂಗವನ್ನು

ತಪ್ಪದೆ ಓದಿರಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಬೇಕಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

BUY INDIAN! ENCOURAGE INDIAN INDUSTRY!
ಅಮಲಕೀ ತೈಲ **AMALAKI HAIR OIL**

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.
REGD.

Highly perfumed and medicated, worth using daily by one and all keeps hair black and relieves head-ache etc.
TRADE MARK

Mnufctured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ವಾರ ಭವಿಷ್ಯ

ತಾರೀಕು 16-11-1950ರಿಂದ ತಾ. 22-11-1950ರ ವರೆಗೆ.

ಮೇಷ – ಇಂದಿನ ನಿಮ್ಮ ಪರಿಸ್ಥಿತಿಯು ಬಹಳ ಉತ್ತಮ ಸ್ಥಿತಿಗೆ ಬಂದಿರುವುದು. ರಾಜಕೀಯ ಹೊರತಾಗಿ ಇತರ ಎಲ್ಲಾ ಕಾರ್ಯರಂಗಗಳಲ್ಲೂ ವಿಜಯಲಕ್ಷ್ಮಿಯು ನಿಮ್ಮ ಪಾಲಿಗಿರುವಳು. ಗೃಹೋಪಕರಣಗಳು ಪರಿಪೂರ್ಣವಾಗಿದ್ದು ಸಂಸಾರ ಸುಖವನ್ನು ಚೆನ್ನಾಗಿ ಪಡೆವಿರಿ. ಸಂಪದ್ಭಾಗವು ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನೈದಲಿದೆ. ಅಪ್ತೇಷ್ಟರ ಬೆಂಬಲ, ಬಂಧುಮಿತ್ರರ ನೆರವು, ಗುರುಹಿರಿಯರ ಅನುಗ್ರಹವನ್ನು ಪಡೆದ ನಿಮಗೆ ತಾ. 16, 17, 18, 22 ಈ ದಿನಗಳಲ್ಲಿ ಮಿತ್ರರ ಸಮಾಗಮ, ಕಾರ್ಯವಿಜಯ, ಸುಖಲಾಭಗಳು ದೊರೆಯುವವು

ವೃಷಭ—ನಿಮಗೀ ವಾರದಲ್ಲಿ ದೈವವು ಸಂಪೂರ್ಣ ವಿಮುಖವಾಗಿರುವುದರಿಂದ 'ತಾನೊಂದು ಬಗೆದರೆ ದೈವವೊಂದೆಣಿಸಿತೆಂ'ಬ ಗಾದೆಯಂತೆ ನಿಮ್ಮ ಕಾರ್ಯಗಳೆಲ್ಲವೂ ವಿಪರೀತದಲ್ಲಿ ಪರ್ಯವಸಾನ ಹೊಂದಲಿವೆ ಸ್ತ್ರೀ ನಿಮಿತ್ತವಾಗಿ ಅಶುಭ ಅಪವಾದಗಳನ್ನು ಹೊಂದುವಿರಿ ಗೃಹತಾಪತ್ರಯಗಳು ದೇಹಾಲಸ್ಯ, ಮನೋರೋಗ ಇತ್ಯಾದಿ ಶೋಕ ಪರಂಪರೆಗಳು ನಿಮ್ಮನ್ನು ಜೀವಚ್ಛವವನ್ನಾಗಿ ಮಾಡಲಿವೆ ಆದರೂ ವಾರದ ಆದ್ಯಂತ ದಿನಗಳನ್ನು ಬಿಟ್ಟು ಮಿಕ್ಕುಳಿದ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು

ಮಿಥುನ – ದೈವಾನುಗ್ರಹವು ಸಾಕಷ್ಟಿರುವುದರಿಂದ ಆಳಾಗಿ ದುಡಿದರೆ ಅರಸಾಗಿ ಉಣಬಹುದೆಂಬಂತೆ ನೀವು ಶ್ರಮವಹಿಸಿ ಕಾರ್ಯಪ್ರವೃತ್ತರಾದರೆ ನಿಮ್ಮ ಯತ್ನವು ಸಫಲವಾಗುವುದರಲ್ಲಿ ಸಂದೇಹವಿಲ್ಲ ಮನೆಯಾಕೆಯು ಕೆಲವೊಮ್ಮೆ ಜಗಳ ಮಾಡಬಹುದಾದರೂ ಇತರ ಗೃಹತಾಪತ್ರಯಗಳು ನಿಮಗಿರಲಾರವು. ಚಂಚಲಮನಸ್ಕರಾದ ನೀವು ವಿಷಯಗಳ ಸೆಳೆತಕ್ಕೆ ಸಿಲುಕಿ ವ್ಯರ್ಥ ಧನವ್ಯಯ ಮಾಡಲಿರುವಿರಿ. ಶತ್ರುಜನರು ಪರಾಭವ ಹೊಂದುವರು ವಾರಾಂತ್ಯದ 5 ದಿನಗಳು ಶುಭದಾಯಿಗಳಾಗಿವೆ

ಕರ್ಕಟಿ— ಶ್ರಮಸಾಧ್ಯವಾದ ಕಾರ್ಯಗಳನ್ನು ಸುಲಭದಲ್ಲಿಯೇ ಕೊನೆಗಾಣಿಸುವ ಶಕ್ತಿಸಾಮರ್ಥ್ಯಗಳು ನಿಮ್ಮಲ್ಲಿರುವವು ಇಂತಹ ಕಾರ್ಯಗಳಲ್ಲಿ ಹೆಚ್ಚಿನ ಧನಪ್ರಾಪ್ತಿಯೂ ನಿಮಗುಂಟಾಗಲಿದೆ ಶತ್ರುಗಳು ಬಾಧಾಕ್ರಾಂತರಾಗುವರು ಮಕ್ಕಳಿಂದ ಧನಲಭಿಸುವ ಯೋಗವಿದೆ ಆದರೆ ನಿಮ್ಮ ಆರೋಗ್ಯವು ಬಹಳ ಹೀನಸ್ಥಿತಿಗೆ ಬರಲಿದೆ ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಮನೆಯಲ್ಲಿ ಪರಸ್ಪರ ಕಲಹಗಳು ತಲೆದೋರಲಿವೆ. ವಿದ್ಯೋಪಜೀವಿಗಳಿಗೆ ದಿನಯಾಪನೆಯು ಕಷ್ಟಸಾಧ್ಯವಾಗಲಿದೆ ವಾರಾಂತ್ಯದ 2 ದಿನಗಳು ಅನುಕೂಲವಿವೆ.

ಸಿಂಹ—ಕಳೆದ ವಾರಕ್ಕಿಂತಲೂ ಈ ವಾರದಲ್ಲಿ ನಿಮಗೆ ಆದಾಯವು ಕಡಿಮೆಯಾಗಿ ಖರ್ಚು ಹೆಚ್ಚಲಿದೆ ಆದರೂ ಹಣದ ಬಿಕ್ಕಟ್ಟು ಕಾಣಿಸಲಾರದು ತಂದೆ ಮಕ್ಕಳಲ್ಲಿ ಪರಸ್ಪರ ವೈಮನಸ್ಸು ಉಂಟಾದೀತು ಶ್ರಮಜೀವಿಗಳಿಗೆ ದಿನಯಾಪನೆಯು ಸ್ವಲ್ಪ ದುಸ್ತರವಾಗಲಿದೆ ಶತ್ರುಜನರ ಪೀಡೆಯು ಹೆಚ್ಚಲಿರುವುದು ಆದರೂ ಜನ ಬೆಂಬಲವುಳ್ಳ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ವಿಜಯವು ಲಭಿಸುವದು ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೆಯ ಲಾಭವಿದೆ ವಾರಾದಿಯ 2 ದಿನಗಳು ಸಕಲ ಕಾರ್ಯಗಳಿಗೂ ಉತ್ತಮವಾಗಿವೆ

ಕನ್ಯಾ—ಎಷ್ಟೊಂದು ಜಾಗರೂಕತೆಯಿಂದಿದ್ದರೂ ಆರೋಗ್ಯವು ಕೆಡುವುದು ಕಫವಾತ ಸಂಬಂಧವಾದ ಕಾಹಿಲೆಯು ತಲೆದೋರುವುದು ನೌಕರಿ ಜನರಿಗೆ ಅಧಿಕಾರಿಗಳ ಪೀಡೆಯುಂಟಾದೀತು ಶತ್ರುಜನರ ಹೆಚ್ಚಳಿಗಾಗಿ ಆರಂಭಿಸಿದ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವ ಎಷ್ಟೋ ಪ್ರಸಂಗಗಳು ಬರಲಿವೆ ಉತ್ಪತ್ತಿಗಿಂತ ದ್ವಿಗುಣವಾಗಿ ವ್ಯಯವಾಗುವುದರಿಂದ ಖರ್ಚಿಗಾಗಿ ಸಾಲ ಮಾಡಬೇಕಾದೀತು ವಾರಾದಿಯ 5 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ತುಲಾ—ಸದ್ಯದ ನಿಮ್ಮ ಭವಿಷ್ಯವು ಉಜ್ವಲವಿರುವದು. ಪ್ರಯತ್ನಕ್ಕಿಂತ ಅಧಿಕವಾದ ಫಲವು ಲಭಿಸುವದು ಕಳ್ಳಕಾಕರ ಮತ್ತು ನೀಚವರ್ಗದವರಿಂದ ಧನಲಾಭವಾಗುವ ಯೋಗವಿದೆ ಕೆಲವೊಮ್ಮೆ ಮನಶ್ಚಾಂಚಲ್ಯವಧಿಕವಾಗಲಿರುವದು, ಅನಿರೀಕ್ಷಿತ ಆಪತ್ತುಗಳು ಪ್ರಾಪ್ತವಾಗಿ ವ್ಯರ್ಥ ಧನವ್ಯಯವಾದೀತು ಸಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ವಾರಾಂತ್ಯದ 5 ದಿನಗಳಲ್ಲಿ ವಿಜಯ, ಮಾನ, ಲಾಭಾದಿಗಳು ಲಭಿಸುವವು.

ವೃಶ್ಚಿಕ—ದ್ರವ್ಯಾಲಭಿನ್ನಾ ದೂರವಾಗಿಲ್ಲವು ಆಕಸ್ಮಿಕ ಪ್ರಯಾಣಗಳು ಹೆಚ್ಚಲಿವೆ ದೇಹದಲ್ಲಿ ಪಿತ್ತೋದ್ರೇಕ ಪ್ರಕೋಪದಿಂದಾಗಿ ಆರೋಗ್ಯವು ಕೆಡುವುದು ಬಂಧುವರ್ಗದವರೊಡನೆ ಕಲಹವಾಗಲಿದೆ ಯಾವೊಂದು ಉದ್ಯಮದಲ್ಲೂ ವಿಜಯವು ಕನ್ನಡಿಯೊಳಗಿನ ಗಂಟಿನಂತೆಯೇ ಸರಿ ನೌಕರಿ ಜನರಿಗೂ ವಿದ್ಯಾರ್ಥಿ ವರ್ಗದವರಿಗೂ ಕಾಲವು ಪ್ರತಿಕೂಲವಾಗಿರುವದು ಹಣದ ಆದಾಯವಿದ್ದರೂ ಸ್ವೋಪಭೋಗಕ್ಕೆ ಕೊಂಚ ಮಾಡಿಕೊಳ್ಳಲಾರಿರಿ ವಾರಾಂತ್ಯದ 2 ದಿನಗಳು ಇದ್ದುದರಲ್ಲಿ ಅನುಕೂಲ.

ಧನು—ದುರ್ದೈವವು ನಿಮ್ಮನ್ನು ಪ್ರಬಲವಾಗಿ ಕಾಡುತ್ತಿರುವುದು ನಿಮ್ಮ ಯುಕ್ತಿ ಶಕ್ತಿ, ಸಾಹಸಗಳಾವವೂ ವಿಧಿಯ ಮುಂದೆ ಸಾಗಲಾರವು ಚಿಂತೆಯ ಭಾಗಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ಕಳೆಯಬೇಕಾಗುವದು ಆಕಸ್ಮಿಕ ಅಪಘಾತಗಳೊದಗುವ ಯೋಗವಿರುವುದರಿಂದ ಎಷ್ಟೊಂದು ಜಾಗರೂಕತೆಯಿಂದಿದ್ದರೂ ಸಾಲದು. ಗುರುಹಿರಿಯರಲ್ಲೂ ... ಡನೆಯೂ ಮನಸ್ತಾಪವುಂಟಾಗಲಿದೆ ವಾರಾದಿಯ 2 ದಿನಗಳು ಅಷ್ಟೊಂದು ಹಾನಿಕಾರಿಗಳಲ್ಲ

ಮಕರ—ಈ ವಾರವು ನಿಮ್ಮ ಭಾಗ್ಯಕ್ಕೆ ಅತ್ಯಂತ ಉತ್ತಮವಿರುವುದು ನಿಮ್ಮ ಯಾವತ್ತು ಸಂಕಲ್ಪಗಳೂ ಕಾರ್ಯರೂಪಕ್ಕೆ ಬರುವವು ಪ್ರತಿಯೊಂದು ಉದ್ಯಮದಲ್ಲೂ ನಿಮ್ಮ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸಲಿದೆ ನೌಕರಿ, ವ್ಯಾಪಾರ, ವ್ಯವಹಾರಗಳಲ್ಲಿ ವಿಜಯಿಗಳಾಗುವಿರಿ. ಕೆಲವೊಮ್ಮೆ ಪಿತ್ತದೋಷದಿಂದಾಗಿ ಅನಾರೋಗ್ಯವು ತಲೆದೋರಬಹುದು ಮಿತ್ರರ ಸಮಾಗಮವಾಗಲಿದೆ ತಾ 19, 20, 21ರಲ್ಲಿ ಮೃಷ್ಟಾನ್ನಭೋಜನ, ಭೋಗಲಾಭಗಳಾಗಲಿವೆ.

ಕುಂಭ—ಪೂರ್ವಾಪರಗಳನ್ನು ವಿವೇಚಿಸದೆ ದುಡುಕಿನಿಂದಾಗಿ ಕಾರ್ಯಕ್ಕೆ ಪ್ರವರ್ತಿಸಬೇಡಿರಿ ಅನರ್ಥಗಳೊದಗುವ ಸಂಭವವಿದೆ ನಿಮ್ಮ ಉದ್ಯಮಗಳು ಬಹುಮಟ್ಟಿಗೆ ಸಫಲಗಳಾಗಲಿವೆ ಹಲವು ತೆರದಿಂದ ಧನಾಗಮವಾಗುವದು. ಆರ್ಥಿಕ ಬಿಕ್ಕಟ್ಟು ಪರಿಹಾರವಾದೀತು. ಆದರೂ ಮಲವರೊಡನೆ ಮಾತುಮಾತಿಗೆ ಕಲಹ ಗೈಯ್ಯಲಿರುವಿರಿ. ಕೆಲವೊಮ್ಮೆ ಅನಿರೀಕ್ಷಿತ ಪ್ರವಾಸಗಳು ಪ್ರಾಪ್ತವಾದಾವು ಆರೋಗ್ಯವು ತೃಪ್ತಿಕರವಿರುವುದು ತಾ. 17, 18, 22 ಅನುಕೂಲ.

ಮೀನ—ಗ್ರಹರೆಲ್ಲರೂ ಪ್ರತಿಕೂಲಸ್ಥಾನಾಪನ್ನರಾಗಿರುವುದರಿಂದ ದಿನಯಾಪನೆಯು ಬಹಳ ಕಷ್ಟಸಾಧ್ಯವಾಗಲಿದೆ ಮಾತ್ರವಲ್ಲ, ದೇಹದಲ್ಲಿಯೂ ಸುಖವಿರಲಾರದು. ಆದಾಯವು ನ್ಯೂನವಾಗಿ ಖರ್ಚು ವೆಚ್ಚಗಳು ಏರುವುದರಿಂದ ಸಾಲದ ಶೂಲದಲ್ಲಿ ಸಿಲುಕುವಿರಿ ಬಂಧುಗಳೊಡನೆಯೂ ಗುರುಹಿರಿಯರೊಡನೆಯೂ ಮನಸ್ತಾಪವುಂಟಾಗುವದು. ಶತ್ರುಗಳ ಉಪಟಳದಿಂದಾಗಿ ಯಾವ ಕಾರ್ಯದಲ್ಲೂ ವಿಜಯಿಗಳಾಗಲಾರಿರಿ ಸ್ತ್ರೀ ಪುತ್ರರ ವಿರಹ ಶೋಕವು ಕೂಡಾ ಪ್ರಾಪ್ತವಾಗಲಿದೆ ತಾ 16, 19, 20, 21 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ

ಸಹಕಾರಿ ಸಂಘಗಳಿಗೆ—
... ಗಳಿಗೆ—
ವರ್ತಕರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟರುಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ
ನವಯುಗ ಪ್ರೆಸ್ ಉಡುಪಿ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ
ಶಾಂತಿಗಳ ಮೂಲ ಕಾರಣವಾದ



ವಾನಿಂಗ್ ಟೆಲ್ಲಿ ಆಯಿಲ್
ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟೆಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟೆಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟೆಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟೆಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ - ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟೆಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟೆಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟೆಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ತಲೆನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟೆಲ್ಲಿ ತೈಲದಿಂದ ಖಾತ್ರಿಗುಣವಾಗುವುದು ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ ಕಿಮ್ಮತ್ತು- ವಾನಿಂಗ್ ಟೆಲ್ಲಿ ಆಯಿಲ್ ಶೀಸೆ 1ಕ್ಕೆ ರೂ 2 8-0 ವಿ ಪಿ ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ 30-0-0 ವಾನಿಂಗ್ ಟೆಲ್ಲಿ ಕಪ್ಸೂಲ್ ಶೀಸೆ 1ಕ್ಕೆ 3 8-0 ವಿ. ಪಿ. ಬೇರೆ ಡಜನ್ ಕಪ್ಸೂಲುಗಳಿಗೆ ರೂ 42 0 0 ವಿ. ಪಿ. ಸಹಿತ ವಾನಿಂಗ್ ಟೆಲ್ಲಿ ಡ್ರಾಪರ್ ಬಾಟ್ಲಿ 1ಕ್ಕೆ ರೂ 5-0-0 ವಿ. ಪಿ. ಬೇರೆ ಒಂದು ಡಜನ್ ಡ್ರಾಪರ್ ಬಾಟ್ಲಿಗಳಿಗೆ ರೂ 60 0 0- ವಿ ಪಿ ಸಹಿತ. ವಾನಿಂಗ್ ಟೆಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1 8-0. ಡಜನ್ ಶೀಸೆಗಳಿಗೆ ರೂ 18. ವಿ ಪಿ ಮಾಫಿ

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟೆಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ, ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟೆಲ್ಲಿ ಆಯಿಲಿನಿಂದ ನಾನು ಗುಣಪಡಿಸಿದ್ದೇನೆ ಈ ತೈಲವು ಪ್ರತಿಯೊಬ್ಬರ ಎಲ್ಲ ವೇಳೆಯಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆ ಎಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ
ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ

ದಿ- ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-
ದಾಹಾನು ರೋಡು, ಬಿ. ಬಿ- ಎಂಡ್ ಸಿ- ಐ. ರೈಲ್ವೆ

The Eclipse Distributing Agency.
Dahanu Road, B. B & C I Rly,

ಬೊಂಬಾಯಿ ಸ್ಟಾಕಿಸ್ಟರು.—ಲಕ್ಷ್ಮಾವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2-

ತಾರೀಖು, ೮-೧೦-೫೦ನೇ 'ರಾಷ್ಟ್ರಬಂಧು' ಮತ್ತು ೧೩-೧೦-೫೦ನೇ 'ನವಯುಗ' ಸಂಚಿಕೆಗಳಲ್ಲಿ ಮಾನ್ಯ ಪುತ್ತೂರು ರೆ. ಡಿ. ಆಫೀಸರವರ ಪ್ರಕಟಣೆಯಲ್ಲಿ ಹೇಳಿರುವಂತೆ ಸರಕಾರೀ ಸ್ಥಗಳಲ್ಲಿರುವ ಮರಮಟ್ಟುಗಳನ್ನು ಕಾಪಾಡುವುದು ಹಾಗೂ ಕಳ್ಳಾಟಿಕೆಯಿಂದ ಕಡಿದುಕೊಂಡು ಹೋಗದಂತೆ ಗ್ರಾಮಸ್ಥರು ಸಹಾಯ ಮಾಡಬೇಕೆಂಬುದಾಗಿಯೂ ಹಾಗೆ ತೋರಿಸಿಕೊಡುವವರಿಗೆ ಮದ್ರಾಸು ಸರಕಾರವು ಇನಾಮು ಕೊಡುವುದಾಗಿಯೂ ಜಾಹೀರು ಪಡಿಸಿರುವುದನ್ನು ಓದಿನೋಡಿದಲ್ಲಿ ಈ ಕೆಳಗಿನ ವಿಷಯಗಳು ಸರಕಾರದ ಅವಗಾಹನೆಗೆ ಬಂದಿರುವುದಿಲ್ಲವಾಗಿ ಎಣಿಸಿ ಅವುಗಳನ್ನು ಈ ಕೆಳಗೆ ಸೂಚಿಸೋಣಾಗುತ್ತದೆ. ಪುತ್ತೂರು ಕಾಸರಗೋಡು ತಾಲೂಕುಗಳಲ್ಲದೆ ಕಾರ್ಕಳ, ಉಡುಪಿ, ಕುಂದಾಪುರ ತಾಲೂಕುಗಳಲ್ಲಿಯೂ ರೆವಿನ್ಯೂ ಸ್ಥಳಗಳಲ್ಲಿದ್ದ ಉತ್ತಮಜಾತಿಯ ಬೆಲೆಯುಳ್ಳ ಮರಮಟ್ಟುಗಳನ್ನು ಸೇಕಡಾ ೫೦ರಷ್ಟು ಭಾಗ ಈಗಾಗಲೇ ಕಡಿದು ಮಾರಾಟವಾಗಿ ಮುಗಿದಿರುತ್ತದೆ. ಇನ್ನು ಬೆಳೆಯಲಿರುವ ಸಣ್ಣಸಣ್ಣ ಮರಗಳನ್ನು ಮುಳಿ ಮತ್ತು ಕಟ್ಟಿಗೆಯ ಸಲುವಾಗಿ ಹೇರಳವಾಗಿ ಇತ್ತೀಚೆಗೆ ಕಡಿದುದಲ್ಲದೆ ಈಗಲೂ ಕಡಿಯುತ್ತಾ ಇದ್ದಾರೆ.

ಸರಕಾರೀ ಸ್ಥಳಗಳಲ್ಲಿರುವ ಮರಗಳನ್ನು ಕಡಿಯುವುದರ ಕುರಿತು ಕೆಲವು ಕಡಿಮೆ ಸಲೆಯಲ್ಲಿ ರಿಪೋರ್ಟುಗಳು ಆಗಿರುತ್ತವೆ. ಈಗಲೂ ತನಿಖೆಯಲ್ಲಿ ಹಲವು ತಕ್ಸೀರುಗಳಿವೆ. ಆದರೆ ಈಗ ಜಾರಿಯಲ್ಲಿರುವ ನಡತೆಯಲ್ಲಿ ಪೋಲಿಸು ತಕ್ಸೀರುಗಳೆಂದರೆ ತನಿಖೆ ಮಾಡುವ ಆಫೀಸರರಿಗೆ ಒಂದು ಕಂಟಕಪ್ರಾಯವಾದವುಗಳೆನ್ನಬಹುದು. ಕಾರಣ, ಮರ ಕಡಿಯುವವನೂ, ಸಾಗಿಸಿದವರು, ಕ್ರಯಕ್ಕೆ ಪಡೆದವರು, ಮುಂತಾದ ಕಣ್ಣು ಸಾಕ್ಷಿಗಳು ಅಗತ್ಯ. ಹೀಗಿಲ್ಲವಾದರೆ ನ್ಯಾಯಸ್ಥಾನದಲ್ಲಿ ಅಪರಾಧಿಯ ತಪ್ಪು ಸ್ಥಾಪಿತವಾಗುವುದಿಲ್ಲ. ಕಳವು ಮಾಡುವುದನ್ನು ನೋಡಿದ ಸಾಕ್ಷಿಗಳೇ ಬೇಕೆಂಬುದು ಹಾಸ್ಯಾಸ್ಪದ ಆದ್ದರಿಂದ ಹೇಗೂ ಒಂದು ತಕ್ಸೀರು ರುಜುವಾಯಿತೆಂದು ಮಾಡುವರೆ ಸಂಬಂಧಪಟ್ಟ ಉದ್ಯೋಗಸ್ಥರು

ಜನಮತ

ರೆವಿನ್ಯೂ ಸ್ಥಳಗಳಲ್ಲಿ ಕಳ್ಳಾಟಿಕೆಯಿಂದ ಮರ ಕಡಿಯುವ ವಿಚಾರ.

(ಕೆ. ಕೆ. ಪಿ. ರಾಮ ಪೋತುವಾಳ, ಕಾಂಗ್ರೆಸ್ ಕಾರ್ಯಕರ್ತ, ಕಾರ್ಕಳ)

ಯಾರನ್ನಾದರೂ ಗ್ರಾಮದಲ್ಲಿ ಯಾಚಿಸಿ ಅಲ್ಪ ಕಂಪೌಂಡು ಮಾಡುತ್ತೇವೆಂತ ಅವರಿಗೆ ಭರವಸೆಕೊಟ್ಟು, ಯಾರಾದರೊಬ್ಬ ನಿರಾಧಾರಿ ಮನುಷ್ಯನ ಹೆಸರಿನಲ್ಲಿ ನಿಜವಾಗಿ ಮರದ ಮೌಲ್ಯದ ಸೇಕಡಾ ೧೦ರಷ್ಟು ಕಂಪೌಂಡು ಮಾಡಿ ರಿಕಾರ್ಡು ಮುಕ್ತಾಯ ಮಾಡುತ್ತಾರೆ. ಇದರಿಂದ ಮರ ಕಳುವವರಿಗೆ ಕಂಪೌಂಡು ಆದರೂ ಸೇಕಡಾ ೯೦ರಷ್ಟು ಲಾಭವುಂಟು, ಆದುದರಿಂದ ಕಳ್ಳಾಟಿಕೆಯಿಂದ ಮರಕಡಿದು ಮಾರುವವರಿಗೆ ಪ್ರೋತ್ಸಾಹವೇ ವಿನಹ ಪ್ರತಿಬಂಧಕವಾಗುವುದಿಲ್ಲ.

ಮರಕಡಿದು ಮಾರುವವರು ಗ್ರಾಮಗಳಲ್ಲಿ ಅಧ್ಯಕ್ಷಿಗಳಿದ್ದು ಕೆಲವು ಪೋಲಿ ಜನರನ್ನು ಕೂಡಿಕೊಂಡು ಮರಕಡಿಯು ಮಾರುವ ಉದ್ಯೋಗವನ್ನು ಸಾಂಗವಾಗಿ ನಡೆಸುತಿದ್ದಾರೆ ಅವರ ಭಯಕ್ಕಾಗಿಯೋ, ದಾಕ್ಷಿಣ್ಯಕ್ಕಾಗಿಯೋ ಗ್ರಾಮಸ್ಥರು ಸರಕಾರದ ಗಮನಕ್ಕೆ ಈ ವಿಷಯ ತರುವರೆ ತುಂಬಾ ಭಯ ಪಡುತ್ತಾರೆ. ಅಥವಾ ಸರಕಾರದ ಗಮನಕ್ಕೆ ತಂದರೂ ಅದರಿಂದ ಹೆಚ್ಚಿನ ಪ್ರಯೋಜನವಾಗಿ ತಪ್ಪಿತಸ್ಥರನ್ನು ಸರಕಾರವು ಅಂಕೆಯಲ್ಲಿಡುವುದಿಲ್ಲವೆಂಬುದರಿಂದ ಜನರಿಗೆ ಅದರಲ್ಲಿ ಉತ್ಸಾಹವೂ ಕಡಿಮೆಯಾಗಿದೆ. ಒಂದು ವೇಳೆ ಸತ್ಯಕ್ಕಾಗಿ ಒಬ್ಬನು ಇದಿರುಬಂದು ಸಾಧಿಸಿದರೆ ಅವನ ಪರಿಸ್ಥಿತಿಯು ಕೆಟ್ಟದಾಗಿ ಅವನು ನಂತರ-ಸಹಾಯ ಮಾಡುವವರು ಯಾರೂ ಇಲ್ಲದೆ ಊರು ಬಿಡುವ ಸಂದರ್ಭ ಬರುತ್ತದೆ. ಆದ್ದರಿಂದ ಈ ಎಲ್ಲಾ ಸರಕಾರದ ದೌರ್ಬಲ್ಯವನ್ನು ನೋಡಿ ಕೆಲವು ಪೋಲಿ ಜನರು ರೆವಿನ್ಯೂ ಕಾಡುಗಳಿಂದ ನಿರ್ಭೀತರಾಗಿ ದಿನೇ ದಿನೇ ಹೆಚ್ಚೆಚ್ಚಾಗಿ ಮರಗಳನ್ನು ಕಡಿದು ಮಾರುತ್ತಾ ಇರುತ್ತಾರೆನ್ನಬಹುದು. ಹೀಗಾದ ಪಕ್ಷದಲ್ಲಿ ಕೇವಲ ಒಂದೆರಡು ವರ್ಷಗಳಲ್ಲಿಯೇ ಸರಕಾರದ ಅರಣ್ಯ ಸಂಪತ್ತೆಂಬುದು ಶೂನ್ಯವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ!

ಗ್ರಾಮ ಉದ್ಯೋಗಸ್ಥರು ಇಡೀ ಗ್ರಾಮದ ಎಲ್ಲಾ ಮಾಹಿತಿಯುಳ್ಳವರು. ಅದರಲ್ಲಿ ಶ್ಯಾನುಭಾಗರು ಇಡೀ ಗ್ರಾಮದಲ್ಲಿ ವರ್ಷಕ್ಕೆ ಎರಡು ಮೂರಾವರ್ತಿ ಸರ್ವೆ-ಕಲ್ಲು ಮುಂತಾದ ಅಜಮಾಸಿಗಳ ಸಂಬಂಧ ಗ್ರಾಮದ ಯಾವತ್ತೂ ಸ್ಥಳಗಳನ್ನು ಸಂದರ್ಶಿಸಿ ನೋಡುತ್ತಾರೆ ಇಷ್ಟಾದರೂ ಇತ್ತೀಚೆಗೆ ಒಂದು ವರ್ಷದಿಂದ ಕೆಲವು ಗ್ರಾಮಗಳಲ್ಲಿ ಲಕ್ಷಾಂತರ ರೂಪಾಯಿಗಳ ಬೆಲೆಯುಳ್ಳ ಸಾವಿರಗಟ್ಟಲೆ ಉತ್ತಮ ಜಾತಿಯ ಮರಗಳು ಕಡಿಯಲ್ಪಟ್ಟ ಗುತ್ತಿಗಳು ಮಾತ್ರವಿದ್ದು ಸರಕಾರದ ಗಮನಕ್ಕೆ ಬರಲಿಲ್ಲವಾಗಿ ತಿಳಿಯುತ್ತದೆ. ಇದಕ್ಕೆ ಕಾರಣವೇನು? ಒಂದನೆಯದಾಗಿ ರಿಪೋರ್ಟುಮಾಡಿದರೆ ಸರಕಾರದ ಮೇಲಾಫೀಸರರ ಬೆಂಬಲ ಕಡಿಮೆ ಎರಡನೆಯದಾಗಿ ಪೋಲೀ ಜನರ ಉಪಟಳ ಮತ್ತು ಕೆಲವು ಗ್ರಾಮ ಉದ್ಯೋಗಸ್ಥರು ತಾವಾಗಲೀ ತಮ್ಮ ಸಂಬಂಧಿಕರಾಗಲೀ ಈ ಕಳ್ಳವ್ಯಾಪಾರಕ್ಕೆ ಕೈಹಾಕಿರುತ್ತಾರಾಗಿ ತಿಳಿಯುತ್ತದೆ. ಹೀಗೆ ಕಳ್ಳಾಟಿಕೆಯಿಂದ ಮರಗಳನ್ನು ಕಡಿಯುವವರನ್ನು ಪ್ರತಿಬಂಧಿಸುವರೆ ಸರಕಾರವು ಅಪೇಕ್ಷಿಸಿದರೆ ಕೆಲವು ಯೋಗ್ಯ ಉಪಾಯಗಳನ್ನು ಸೂಚಿಸಬಹುದು.

ಈಗ ನಮ್ಮ ಸರಕಾರದ 'ಸಸಿನೆಡುವ' ಚಳವಳಿಯಲ್ಲಿ ನಮ್ಮ ಜಿಲ್ಲೆಯ ಮಲೆನಾಡಿನಲ್ಲಿ 'ಒಂದು ಕೈಯಲ್ಲಿ ಗಿಡ, ಮತ್ತೊಂದು ಕೈಯಲ್ಲಿ ಕೊಡಲಿ' ಎಂಬ ನೀತಿಯ ವಿಪರ್ಯಾಸವುಂಟಾಗಿದೆ. ಇಂತಹ ರಾಷ್ಟ್ರಘಾತಕ ಕೃತ್ಯವನ್ನು ಸರಕಾರವು ಶೀಘ್ರದಲ್ಲಿ ತಡೆಗಟ್ಟಿ ತಪ್ಪಿತಸ್ಥರು ಯಾರೇ ಆಗಿರಲಿ, ಅಂಥವರ ಮೇಲೆ ಯೋಗ್ಯಕ್ರಮ ತೆಗೆದುಕೊಂಡು, ಸರಕಾರವು ಇದೆಯೆಂಬ ಭಾವನೆಯನ್ನು ಕೂಡಾ ಮರೆತಿರುವ ಈ ಕಡಿಮರಿಗೆ ಎಚ್ಚರ ಕೊಡಬೇಕು. ಇದರಿಂದಾಗಿ ನಮ್ಮ ನಾಡಿನ ವನಸಂಪತ್ತನ್ನು ಕಾಪಾಡಿದಂತಾಗುವುದು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ. 3-; ಸ್ಪೆಶಲ್ ರೂ. 5-ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MIS. D. DEVEE, F DS (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾಕಂಪೆನಿ, ಮಂಗಳೂರು

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—
ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.
ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—
ಶಾ ಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಅಂತರಂಗವನ್ನು ತಪ್ಪದೆ ಓದಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all keeps hair black and relieves head-ache etc.

TRADE MARK

Maufctured by:-
Swadeshi Oushadhi Bhandara (Regd.)
KUNJAL P.O. Brahmavar, S.K.

ವಾರ ಭವಿಷ್ಯ

ತಾರೀಕು 16-11-1950ರಿಂದ ತಾ. 22-11-1950ರ ವರೆಗೆ.

ಮೇಷ — ಹಿಂದಿನ ನಿಮ್ಮ ಪರಿಸ್ಥಿತಿಯು ಬಹಳ ಉತ್ತಮ ಸ್ಥಿತಿಗೆ ಬಂದಿರುವುದು. ರಾಜಕೀಯ ಹೊರತಾಗಿ ಇತರ ಎಲ್ಲಾ ಕಾರ್ಯರಂಗಗಳಲ್ಲೂ ವಿಜಯಲಕ್ಷ್ಮಿಯು ನಿಮ್ಮ ಪಾಲಿಗಿರುವಳು. ಗೃಹೋಪಕರಣಗಳು ಪರಿಪೂರ್ಣವಾಗಿದ್ದು ಸಂಸಾರ ಸುಖವನ್ನು ಚೆನ್ನಾಗಿ ಪಡೆವಿರಿ. ಸಂಪದ್ಭಾಗ್ಯ ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನೈದಲಿದೆ. ಆಪ್ತೇಷ್ಟರ ಬೆಂಬಲ, ಬಂಧುಮಿತ್ರರ ನೆರವು, ಗುರುಹಿರಿಯರ ಅನುಗ್ರಹವನ್ನು ಪಡೆದ ನಿಮಗೆ ತಾ. 16, 17, 18, 22 ಈ ದಿನಗಳಲ್ಲಿ ಮಿತ್ರರ ಸಮಾಗಮ, ಕಾರ್ಯವಿಜಯ, ಸುಖಲಾಭಗಳು ದೊರೆಯುವವು.

ವೃಷಭ — ನಿಮಗೀ ವಾರದಲ್ಲಿ ದೈವವು ಸಂಪೂರ್ಣ ವಿಮುಖವಾಗಿರುವುದರಿಂದ 'ತಾನೊಂದು ಬಗೆದರೆ ದೈವವೊಂದೆಣಿಸಿತೆಂ', ಬ ಗಾದೆಯಂತೆ ನಿಮ್ಮ ಕಾರ್ಯಗಳೆಲ್ಲವೂ ವಿಪರೀತದಲ್ಲಿ ಪರ್ಯವಸಾನ ಹೊಂದಲಿವೆ. ಸ್ತ್ರೀ ನಿಮಿತ್ತವಾಗಿ ಅಶುಭ ಅಪವಾದಗಳನ್ನು ಹೊಂದುವಿರಿ. ಗೃಹತಾಪತ್ರಯಗಳು ದೇಹಾಲಸ್ಯ, ಮನೋರೋಗ ಇತ್ಯಾದಿ ಶೋಕ ಪರಂಪರೆಗಳು ನಿಮ್ಮನ್ನು ಜೀವಚ್ಛವವನ್ನಾಗಿ ಮಾಡಲಿವೆ. ಆದರೂ ವಾರದ ಅದ್ಯಂತ ದಿನಗಳನ್ನು ಬಿಟ್ಟು ಮಿಕ್ಕುಳಿದ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಮಿಥುನ — ದೈವಾನುಗ್ರಹವು ಸಾಕಷ್ಟಿರುವುದರಿಂದ ಆಳಾಗಿ ದುಡಿದರೆ ಅರಸಾಗಿ ಉಣಬಹುದೆಂಬಂತೆ ನೀವು ಶ್ರಮವಹಿಸಿ ಕಾರ್ಯಪ್ರವೃತ್ತರಾದರೆ ನಿಮ್ಮ ಯತ್ನವು ಸಫಲವಾಗುವುದರಲ್ಲಿ ಸಂದೇಹವಿಲ್ಲ. ಮನೆಯಾಕೆಯು ಕೆಲವೊಮ್ಮೆ ಜಗಳ ಮಾಡಬಹುದಾದರೂ ಇತರ ಗೃಹತಾಪತ್ರಯಗಳು ನಿಮಗಿರಲಾರವು. ಚಂಚಲಮನಸ್ಕರಾದ ನೀವು ವಿಷಯಗಳ ಸೆಳೆತಕ್ಕೆ ಸಿಲುಕಿ ವ್ಯರ್ಥ ಧನವ್ಯಯ ಮಾಡಲಿರುವಿರಿ. ಶತ್ರುಜನರು ಪರಾಭವ ಹೊಂದುವರು. ವಾರಾಂತ್ಯದ 5 ದಿನಗಳು ಶುಭದಾಯಿಗಳಾಗಿವೆ.

ಕರ್ಕಟ — ಶ್ರಮಸಾಧ್ಯವಾದ ಕಾರ್ಯಗಳನ್ನು ಸುಲಭದಲ್ಲಿಯೇ ಕೊನೆಗಾಣಿಸುವ ಶಕ್ತಿಸಾಮರ್ಥ್ಯಗಳು ನಿಮ್ಮಲ್ಲಿರುವವು. ಇಂತಹ ಕಾರ್ಯಗಳಲ್ಲಿ ಹೆಚ್ಚಿನ ಧನಾಪ್ತಿಯೂ ನಿಮಗುಂಟಾಗಲಿದೆ. ಶತ್ರುಗಳು ಪಾದಾಕ್ರಾಂತರಾಗುವರು. ಮಕ್ಕಳಿಂದ ಧನ ಲಭಿಸುವ ಯೋಗವಿದೆ. ಆದರೆ ನಿಮ್ಮ ಆರೋಗ್ಯವು ಬಹಳ ಹೀನಸ್ಥಿತಿಗೆ ಬರಲಿದೆ. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಮನೆಯಲ್ಲಿ ಪರಸ್ಪರ ಕಲಹಗಳು ತಲೆದೋರಲಿವೆ. ಉದ್ಯೋಗಜೀವಿಗಳಿಗೆ ದಿನಯಾಪನೆಯು ಕಷ್ಟಸಾಧ್ಯವಾಗಲಿದೆ. ವಾರಾಂತ್ಯದ 2 ದಿನಗಳು ಅನುಕೂಲವಿವೆ.

ಸಿಂಹ — ಕಳೆದ ವಾರಕ್ಕಿಂತಲೂ ಈ ವಾರದಲ್ಲಿ ನಿಮಗೆ ಆದಾಯವು ಕಡಿಮೆಯಾಗಿ ಖರ್ಚು ಹೆಚ್ಚಲಿದೆ. ಆದರೂ ಹಣದ ಬಿಕ್ಕಟ್ಟು ಕಾಣಿಸಲಾರದು. ತಂದೆ ಮಕ್ಕಳಲ್ಲಿ ಪರಸ್ಪರ ವೈಮನಸ್ಸು ಉಂಟಾದೀತು. ಶ್ರಮಜೀವಿಗಳಿಗೆ ದಿನಯಾಪನೆಯು ಸ್ವಲ್ಪ ದುಸ್ತರವಾಗಲಿದೆ. ಶತ್ರುಜನರ ಪೀಡೆಯು ಹೆಚ್ಚಲಿರುವುದು. ಆದರೂ ಜನ ಬೆಂಬಲವುಳ್ಳ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ಜಯವು ಲಭಿಸುವದು. ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೆಯ ಲಾಭವಿದೆ. ವಾರಾದಿಯ 2 ದಿನಗಳು ಸಕಲ ಕಾರ್ಯಗಳಿಗೂ ಉತ್ತಮವಾಗಿವೆ.

ಕನ್ಯಾ — ಎಷ್ಟೊಂದು ಜಾಗರೂಕತೆಯಿಂದಿದ್ದರೂ ಆರೋಗ್ಯವು ಕೆಡುವುದು. ಕಫವಾತ ಸಂಬಂಧವಾದ ಕಾಹಿಲೆಯು ತಲೆದೋರುವುದು. ನೌಕರಿ ಜನರಿಗೆ ಅಧಿಕಾರಿಗಳ ಪೀಡೆಯುಂಟಾದೀತು. ಶತ್ರುಜನರ ಹೆಚ್ಚಳಿಕೆಯಿಂದಾಗಿ ಆರಂಭಿಸಿದ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವ ಎಷ್ಟೋ ಪ್ರಸಂಗಗಳು ಬರಲಿವೆ. ಉತ್ಪತ್ತಿಗಿಂತ ದ್ವಿಗುಣವಾಗಿ ವ್ಯಯವಾಗುವುದರಿಂದ ಖರ್ಚಿಗಾಗಿ ಸಾಲ ಮಾಡಬೇಕಾದೀತು. ವಾರಾದಿಯ 5 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ತುಲಾ — ಸದ್ಯದ ನಿಮ್ಮ ಭವಿಷ್ಯವು ಉಜ್ವಲವಿರುವದು. ಪ್ರಯತ್ನಕ್ಕಿಂತ ಅಧಿಕವಾದ ಫಲವು ಲಭಿಸುವದು. ಕಲ್ಪಕಾರರ ಮತ್ತು ನೀಚವರ್ಗದವರಿಂದ ಧನಲಾಭವಾಗುವ ಯೋಗವಿದೆ. ಕೆಲವೊಮ್ಮೆ ಮನಶ್ಚಾಂಚಲ್ಯವಧಿಕವಾಗಲಿರುವದು, ಅನಿರೀಕ್ಷಿತ ಆಪತ್ತುಗಳು ಪ್ರಾಪ್ತವಾಗಿ ವ್ಯರ್ಥ ಧನವ್ಯಯವಾದೀತು. ಸಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ವಾರಾಂತ್ಯದ 5 ದಿನಗಳಲ್ಲಿ ವಿಜಯ, ಮಾನ, ಲಾಭಾದಿಗಳು ಲಭಿಸುವವು.

ವೃಶ್ಚಿಕ — ದುಃಕಾಲವಿನ್ನೂ ದೂರವಾಗಿಲ್ಲವು. ಆಕಸ್ಮಿಕ ಪ್ರಯಾಣಗಳು ಹೆಚ್ಚಲಿವೆ. ದೇಹದಲ್ಲಿ ಪಿತ್ತೋಷ್ಣ ಪ್ರಕೋಪದಿಂದಾಗಿ ಆರೋಗ್ಯವು ಕೆಡುವುದು. ಬಂಧುವರ್ಗದವರೊಡನೆ ಕಲಹವಾಗಲಿದೆ. ಯಾವೊಂದು ಉದ್ಯಮದಲ್ಲೂ ವಿಜಯವು ಕನ್ನಡಿಯೊಳಗಿನ ಗಂಟಿನಂತೆಯೇ ಸರಿ. ನೌಕರಿ ಜನರಿಗೂ ವಿದ್ಯಾರ್ಥಿ ವರ್ಗದವರಿಗೂ ಕಾಲವು ಪ್ರತಿಕೂಲವಾಗಿರುವದು. ಹಣದ ಅಡಚಣೆಯಿದ್ದರೂ ಸ್ವೋಪಭೋಗಕ್ಕೆ ಕೊರತೆ ಮಾಡಿಕೊಳ್ಳಲಾರಿರಿ. ವಾರಾಂತ್ಯದ 2 ದಿನಗಳು ಇದ್ದುದರಲ್ಲಿ ಅನುಕೂಲ.

ಧನು — ದುರ್ದೈವವು ನಿಮ್ಮನ್ನು ಪ್ರಬಲವಾಗಿ ಕಾಡುತ್ತಿರುವುದು. ನಿಮ್ಮ ಯುಕ್ತಿ, ಶಕ್ತಿ, ಸಾಹಸಗಳಾವವೂ ವಿಧಿಯ ಮುಂದೆ ಸಾಗಲಾರವು. ಖರ್ಚಿನ ಭಾಗಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ. ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ಕಳೆಯಬೇಕಾಗುವದು. ಆಕಸ್ಮಿಕ ಅಪಘಡಗಳೊದಗುವ ಯೋಗವಿರುವುದರಿಂದ ಎಷ್ಟೊಂದು ಜಾಗರೂಕತೆಯಿಂದಿದ್ದರೂ ಸಾಲದು. ಗುರುಹಿರಿಯರಲ್ಲೂ [illegible]ಡನೆಯೂ ಮನಸ್ತಾಪವುಂಟಾಗಲಿದೆ. ವಾರಾದಿಯ 2 ದಿನಗಳು ಅಷ್ಟೊಂದು ಹಾನಿಕಾರಿಗಳಲ್ಲ.

ಮಕರ — ಈ ವಾರವು ನಿಮ್ಮ ಭಾಗ್ಯಕ್ಕೆ ಅತ್ಯಂತ ಉತ್ತಮವಿರುವುದು. ನಿಮ್ಮ ಯಾವತ್ತು ಸಂಕಲ್ಪಗಳೂ ಕಾರ್ಯರೂಪಕ್ಕೆ ಬರುವವು. ಪ್ರತಿಯೊಂದು ಉದ್ಯಮದಲ್ಲೂ ನಿಮ್ಮ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸಲಿದೆ. ನೌಕರಿ, ವ್ಯಾಪಾರ, ವ್ಯವಹಾರಾದಿಗಳಲ್ಲಿ ವಿಜಯಿಗಳಾಗುವಿರಿ. ಕೆಲವೊಮ್ಮೆ ಪಿತ್ತದೋಷದಿಂದಾಗಿ ಅನಾರೋಗ್ಯವು ತಲೆದೋರಬಹುದು. ಮಿತ್ರರ ಸಮಾಗಮವಾಗಲಿದೆ. ತಾ. 19, 20, 21ರಲ್ಲಿ ಮೃಷ್ಟಾನ್ನ ಭೋಜನ, ಭೋಗಲಾಭಗಳಾಗಲಿವೆ.

ಕುಂಭ — ಪೂರ್ವಾಪರಗಳನ್ನು ವಿಮರ್ಶಿಸದೆ ದುಡುಕಿನಿಂದಾಗಿ ಕಾರ್ಯಕ್ಕೆ ಪ್ರವರ್ತಿಸಬೇಡಿರಿ. ಅನರ್ಥಗಳೊದಗುವ ಸಂಭವವಿದೆ. ನಿಮ್ಮ ಉದ್ಯಮಗಳು ಬಹುಮಟ್ಟಿಗೆ ಸಫಲಗಳಾಗಲಿವೆ. ಹಲವು ತೆರದಿಂದ ಧನಾಗಮವಾಗುವದು. ಆರ್ಥಿಕ ಬಿಕ್ಕಟ್ಟು ಪರಿಹಾರವಾದೀತು. ಆದರೂ ಹಲವರೊಡನೆ ಮಾತುಮಾತಿಗೆ ಕಲಹ ಗೈಯ್ಯಲಿರುವಿರಿ. ಕೆಲವೊಮ್ಮೆ ಅಪರೀಕ್ಷಿತ ಪ್ರವಾಸಗಳು ಪ್ರಾಪ್ತವಾದಾವು. ಆರೋಗ್ಯವು ತೃಪ್ತಿಕರವಿರುವುದು. ತಾ. 17, 18, 22 ಅನುಕೂಲ.

ಮೀನ — ಗ್ರಹರೆಲ್ಲರೂ ಪ್ರತಿಕೂಲ ಸ್ಥಾನಾಪನ್ನರಾಗಿರುವುದರಿಂದ ದಿನಯಾಪನೆಯು ಬಹಳ ಕಷ್ಟಸಾಧ್ಯವಾಗಲಿದೆ. ಮಾತ್ರವಲ್ಲ, ದೇಹದಲ್ಲಿಯೂ ಸುಖವಿರಲಾರದು. ಆದಾಯವು ಶೂನ್ಯವಾಗಿ ಖರ್ಚು ವೆಚ್ಚಗಳು ಏರುವುದರಿಂದ ಸಾಲದ ಶೂಲದಲ್ಲಿ ಸಿಲುಕುವಿರಿ. ಬಂಧುಗಳೊಡನೆಯೂ ಗುರುಜನರೊಡನೆಯೂ ಮನಸ್ತಾಪವುಂಟಾಗುವದು. ಶತ್ರುಗಳ ಉಪಟಳದಿಂದಾಗಿ ಯಾವ ಕಾರ್ಯದಲ್ಲೂ ವಿಜಯಿಗಳಾಗಲಾರಿರಿ. ಸ್ತ್ರೀ ಪುತ್ರರ ವಿರಹ ಶೋಕವು ಕೂಡಾ ಪ್ರಾಪ್ತವಾಗಲಿದೆ. ತಾ 16, 19, 20, 21 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಸಹಕಾರಿ ಸಂಘಗಳಿಗೆ—
[illegible]ಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟರುಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್ ಉಡುಪಿ.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಹಿಡಿಸಂಡ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಶೀಘ್ರವಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು- ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0 ವಾನಿಂಗ್ ಟಿಲ್ಲಿ ಕಪ್ಸುಲ್ ಶೀಸೆ 1ಕ್ಕೆ 3-8-0 ವಿ.ಪಿ.ಬೇರೆ. ಡಜನ್ ಕಪ್ಸುಲುಗಳಿಗೆ ರೂ 42-0-0 ವಿ.ಪಿ. ಸಹಿತ. ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದು ಡಜನ್ ಡ್ರಪರ್‌ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೫ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ: ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಬೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆ ಎಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.
ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ
ದಾಹಾನು ರೋಡು, ಬಿ. ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency.
Dahanu Road, B. B. & C I Rly,

ಬೊಂಬಾಯಿ ಸ್ಟಾಕಿಸ್ಟರು:—ಲಿಕ್ವವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2.

ಮಹಿಳಾ ಪುಟ

ಮನೆ ಹೆಂಗಸರ ಶಿಕ್ಷಣ

ಶ್ರೀ ಬಿ. ಗುರುರಾಜ ಉಡುಪ, ಬಿ. ಎಸ್‌ಸಿ.

ಅಮೇರಿಕಾದ ನಗರಗಳ ಹಾಗೂ ಹಳ್ಳಿಗಳಲ್ಲಿನ ಪ್ರತಿಮನೆಗಳೂ ವಿದ್ಯುಚ್ಛಕ್ತಿಯ ಒಲೆಗಳಿಂದಲೂ, ಆಹಾರವನ್ನು ರಕ್ಷಿಸಿಡುವ ಶೀತರಕ್ಷಣೆಯ ಕೋಣೆಗಳಿಂದಲೂ, ವಸ್ತ್ರ ತೊಳೆಯುವ ಯಂತ್ರಗಳಿಂದಲೂ, ವಿದ್ಯುದ್ದೀಪಗಳಿಂದಲೂ, ಪೈಪಿನ ನೀರಿನಿಂದಲೂ ಸನ್ನದ್ಧವಾಗಿವೆ. ಅಡಿಗೆಮನೆಯ ಸಾಧನಗಳೆಲ್ಲಾ ಕ್ರಮವಾಗಿ ಇಡಲ್ಪಡುತ್ತವೆ. ಈ ನಿಯಮಿತತನದಿಂದಾಗಿ ಮನೆಹೆಂಗಸರು ಹೊರಗಿನ ಇತರ ಚಟುವಟಿಕೆಗಳಲ್ಲಿ ಹೆಚ್ಚಿನ ಸಮಯವನ್ನು ವ್ಯಯಮಾಡುವಂತಾಗಿದೆ. ನಮ್ಮ ದೇಶದ ಹೆಂಗಸರಂತೆ ಸದಾ ಅಡಿಗೆಮನೆ ಮಕ್ಕಳ ಪಾಲನೆಯಲ್ಲೇ ನಿರತರಾಗಿಲ್ಲ ಇಲ್ಲಿನವರು.

ಮನೆ ಹೆಂಗಸರು ತಮ್ಮ ಬಿಡುವಿನ ಸಮಯದ ಅತ್ಯಧಿಕ ಪ್ರಯೋಜನವನ್ನು ಹೊಂದುವಂತೆ ಮಾಡಲು ಸಹಾಯಕವಾಗುವಂತೆ ಮೇರಿಲೇಂಡ್ ವಿಶ್ವವಿದ್ಯಾಲಯದವರು ಹಳ್ಳಿಗಳಲ್ಲಿ ಅಲ್ಲಲ್ಲಿ ವರ್ಷಕ್ಕೆ ಪ್ರತಿ ಐದುದಿನದ ಶಿಕ್ಷಣವನ್ನು ಕೊಡುವ ಒಂದು ಹೊಸ ವಿದ್ಯಾವಿಭಾಗವನ್ನು ತೆರೆದಿದ್ದಾರೆ. ಹದಿನೆಂಟರಿಂದ ಎಂಬತ್ತೈದು ವರ್ಷಗಳ ವರೆಗಿನ ಪ್ರಾಯದ ವಿದ್ಯಾರ್ಥಿಗಳೂ ಇಲ್ಲಿ ವಿದ್ಯಾಲಾಭವನ್ನು ಪಡೆಯುತ್ತಿದ್ದಾರೆ. ಈ ಐದು ದಿನದ ಶಿಕ್ಷಣಕ್ಕಾಗಿ ಅವರು ಹದಿನೈದುಸೆಂಟು ಕೋಲೇಜು ಫೀಯನ್ನು ಕೊಟ್ಟು ಕಾಲೇಜಿನ ಛಾತ್ರಾವಾಸಗಳಲ್ಲಿ ವಸತಿ ಮಾಡಿಕೊಂಡಿರುತ್ತಾರೆ. [illegible]ಳುಕಲು ನೆಲದಲ್ಲಿ ತೋಟಮಾಡುವ ವಿಧಾನ, ನುಡಿಕಟ್ಟುವುದು, ತರಕಾರಿ ಬೆಳೆಸುವುದು, ಶೇಖರಿಸಿಡುವುದು, ಮನೆಯ ಆಯವ್ಯಯ ಪಟ್ಟಿಯ ತಯಾರಿ, ಹೊಲಿಗೆ, ಸಾರ್ವಜನಿಕಭಾಷಣ, ಮಕ್ಕಳ ಮನೋವಿಜ್ಞಾನವೇ ಮೊದಲಾದ ಮನೆ ಹೆಂಗಸರ ಅಭಿರುಚಿಯ ಹಲವಾರು ವಿಷಯಗಳ ಅಭ್ಯಾಸ ಆ ಕೇಂದ್ರಗಳಲ್ಲಿ ನಡೆಯುವುದು.

ಈ ರೀತಿಯ ಕಲಾಶಾಲೆಯ ಆರಂಭ 1923ರಲ್ಲಾಯಿತು. ಆಗಲೂ ಅಲ್ಲಿನ ಹೆಂಗಸರು ಮನೆಯ ಹೊರಗಣ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತೋರುತ್ತಿದ್ದರೂ ಸರಿಯಾದ ಮಾರ್ಗದರ್ಶನೆಯನ್ನು ಮಾಡುವವರಾರೂ ಇದ್ದಿಲ್ಲ ಅದಲ್ಲದೆ ಟಪ್ಪಾಲಿನ ಸರಿಯಾದ ಹಂಚುವಿಕೆಯ ಏರ್ಪಾಡು ಇಲ್ಲದ್ದರಿಂದಲೂ, ಮಾರ್ಗಗಳು ಹಳ್ಳಿಗಳ ಮೂಲೆಮೂಲೆಗೆ ಮುಟ್ಟದಿದ್ದುದರಿಂದಲೂ ಅವರ ಚಟುವಟಿಕೆಗಳಿಗೆ ಮತ್ತಷ್ಟು ವಿಘ್ನ ಬರುತ್ತಿತ್ತು. ಆದರೆ ಈಗ ಎಲ್ಲಾ ಅನುಕೂಲತೆಗಳೂ ಸರಿಯಾಗಿ ಪೂರೈಸಲ್ಪಡುವುವು. ಇದರಿಂದಾಗಿ ಮನೆಮಂದಿಯ ಚಟುವಟಿಕೆಯ ರಂಗವು ವಿಸ್ತಾರವಾಗಿ ಅವರು ಮನೆಯನ್ನು ನಡೆಸುವ ಕೆಲಸ ತುಂಬಾ ಸಂತಸಮಯವೂ ಸುಗಮವೂ ಆಗಿ ಮಾರ್ಪಟ್ಟಿದೆ. ಇದಕ್ಕಾಗಿ ಅವರು ಈ ಹೊಸ ವಿಶ್ವವಿದ್ಯಾಲಯಕ್ಕಾಗಿ ತುಂಬಾ ಆಭಾರಿಗಳಾಗಿದ್ದಾರೆ.

ಈ ಶಾಖೆಯು ಪ್ರತಿವರ್ಷವೂ ಜನಾದರಣೆಯನ್ನು ಗಳಿಸುತ್ತಾ ಬಂದಿದೆ. ಆರಂಭದ ವರ್ಷದಲ್ಲಿ ಈ ವಿಭಾಗದಲ್ಲಿ ಬರೆ ೭೦೦ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದರು. ಆದರೆ ಕ್ರಮೇಣ ಹೆಚ್ಚುತ್ತಾ ಬಂದು ಈ ವರ್ಷವಂತೂ ಅಂತಹ ವಿದ್ಯಾರ್ಥಿಗಳ ಸಂಖ್ಯೆ 1200ಕ್ಕೂ ಮಿಕ್ಕಿದೆ. ಇದರಲ್ಲಿ ಇಷ್ಟರಲ್ಲೇ 1700ಮಂದಿ ಪದವೀಧರರಾಗಿದ್ದಾರೆ. ಈ ವಿಭಾಗದಲ್ಲಿ ಪದವಿಯನ್ನು ಪಡೆಯಲು ಅವರು ಈ 5ದಿನದ ಅಭ್ಯಾಸಕ್ಕೆ ಎಡೆಬಿಡದೆ ನಾಲ್ಕು ವರ್ಷದಲ್ಲಿ ಹಾಜರಿರಬೇಕು. ಇಂತಹ ವಿದ್ಯಾರ್ಥಿಗಳನ್ನು ಅಭ್ಯಾಸಕ್ಕಾಗಿ ಕಲಾಶಾಲೆಗೆ ಕಳುಹಿಸಲಿಕ್ಕಾಗಿ ಮನೆಯವರು ಉತ್ಸಾಹದಿಂ[illegible] [illegible]ಗಗಳನ್ನು ಮಾಡಲು ಸಿದ್ಧರಿದ್ದಾರೆ ಮೊಟ್ಟೆಗಳನ್ನು ಮಾರಿ ಹಣಮಾಡಿ ತಾಯಿಯನ್ನು ವಿದ್ಯಾಲಯಕ್ಕೆ ಕಳುಹಿಸಿದ ಮಗ ತನ್ನ ತಾಯಿಯು ಈ ವಿಭಾಗದಲ್ಲಿ ಪದವೀಧರಳಾಗಲು ತುಂಬಾ ಸಹಾಯಸಲ್ಲಿಸುತ್ತಾನೆ. ಅವಳ ಮನೆಗೆಲಸದ ಭಾರವನ್ನು ಆತನೇ ಹೊರುತ್ತಾನೆ. ಎಷ್ಟೋ ಗಂಡಂದಿರು ತಮ್ಮ ಮೇಲೆ ಮನೆಕೆಲಸದ ಹೊಣೆಯನ್ನು ಹೊತ್ತು ತಮ್ಮ ಹೆಂಡಂದಿರನ್ನು ಈ ವಿದ್ಯಾಲಯದ ಅಭ್ಯಾಸಕ್ಕೆ ಕಳುಹಿಸುತ್ತಾರೆ ಈ ವಿದ್ಯೆಯ ಲಾಭವನ್ನು ಪಡೆಯುವುದಕ್ಕಾಗಿ.

ಸುಸಂಸ್ಕೃತ ನಾಗರಿಕಳೂ, ತನ್ನ ಮನೆಯ ವಠಾರದ ಮುಂದಾಳುವೂ ಸ್ತ್ರೀಯು ಆಗುವಂತೆ ಅವಳನ್ನು ತರಬೇತಿ ಮಾಡುವುದು ಇಲ್ಲಿನ ಶಿಕ್ಷಣದ ಒಂದು ವಿಶೇಷ ಉದ್ದೇಶ. ದಿನವೂ ಮೇಧಾವಿಗಳ ಭಾಷಣವನ್ನೇರ್ಪಡಿಸಿ ವಿದ್ಯಾರ್ಥಿಗಳಿಗೆ ತಮ್ಮ ದೇಶದ ಹಾಗೂ ವಿಶ್ವದ ಸಮಸ್ಯೆಗಳನ್ನೂ ತಿಳಿಯಹೇಳಿ ಅವರು ಮನೆಗೆ ಹಿಂತಿರುಗಿದ ಮೇಲೆ ಈ ವಿಚಾರಗಳನ್ನು ಆಕೆ ತನ್ನ ನೆರೆಕರೆಗಳಲ್ಲಿನ ಅಭಾಗಿ ಸ್ತ್ರೀಯರ ಕೂಡೆ ಚರ್ಚಿಸಿ ಅವರಲ್ಲಿ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಜಾಗ್ರತಿಯನ್ನುಂಟು ಮಾಡುವಂತೆ ಇವರನ್ನು ಒತ್ತಾಯಪಡಿಸಲಾಗುತ್ತಿದೆ.

ಕೋಲೇಜಿನ ಸಂತಸದ ಅನುಭವಗಳೆಲ್ಲವನ್ನೂ ಈ ವಿದ್ಯಾರ್ಥಿಗಳೂ ಸವಿವರು. ಒಂದೇ ಊಟದ ಮನೆಯಲ್ಲಿ ಅವರೆಲ್ಲರೂ ಉಣ್ಣುವರು ತರಗತಿಯಲ್ಲಿ ಎಲ್ಲರೂ ಒಟ್ಟಾಗಿ ಪಾಠಕೇಳಿ ಕಾಲೇಜಿನ ಛಾತ್ರಾವಾಸಗಳಲ್ಲಿ ಒಟ್ಟಿಗೆ ಮಲಗುವರು, ಹಾಡುಹಾಡುವರು, ನಲಿವರು, ಪ್ರಕೃತಿಯ ಶುಭ್ರ ವಾತಾವರಣದಲ್ಲಿ ವಿಶ್ರಾಂತಿ ಪಡೆವರು.

ಕುರ್ಚಿ ಡೆಸ್ಕುಗಳಿಗೆ ಎಡೆಯಿರುವಂಥ ಒಂದು ಆದರ್ಶವಾದ ಅಡಿಗೆಕೋಣೆಯೇ ಇವರ ತರಬೇತಿಯ ಕೋಣೆ. Cooking ಅಧ್ಯಾಪಕಿ ಅಡಿಗ ಮಾಡುತ್ತಿರುವುದನ್ನು ವಿದ್ಯಾರ್ಥಿಗಳಾದವರು ಕುತೂಹಲಿಗಳಾಗಿ ನೋಡುತ್ತ ಸಣ್ಣವರು ದೊಡ್ಡವರೆಂಬ ಬೇಧವಿಲ್ಲದೆ ಎಲ್ಲರೂ ನೋಟ್ಸುಗಳನ್ನು ಬರೆದುಕೊಳ್ಳುವರು. "ಉತ್ತಮ ಸಂಸಾರದಲ್ಲಿ ಮನೆಯಾಕೆಯ ಕರ್ತವ್ಯವೇನು", "ಮನೆಯಾಕೆ ಮನೆಕೆಲಸಗಳಿಗೆ ಎಷ್ಟು ಸಮಯವನ್ನು ವೆಚ್ಚಮಾಡಬೇಕು," ಎಂಬಿವೇ ಮೊದಲಾದ ವಿಷಯಗಳ ಕುರಿತು ಚರ್ಚಾಕೂಟಗಳನ್ನು ಅವರು ಏರ್ಪಡಿಸುವರು ಈ ವಿಷಯದಲ್ಲಿ ಭಾಷಣಕರ್ತರನ್ನಾಗಿ ವಿದ್ಯಾಭಿಮಾನಿಗಳನ್ನು ಸೆನೆಟ್ ಸದಸ್ಯರನ್ನು ಅಥವಾ ಇನ್ನಾವ ಸರಕಾರಿ ಉದ್ಯೋಗಸ್ಥರನ್ನೂ ಆಮಂತ್ರಿಸುವುದು ರೂಢಿ

ಶ್ರೀಮತಿ ಸಾರಾ ಮುಲ್ಲಿಗನ್ ಎಂಬಾಕೆ 1923ರಿಂದ ಈ ತನಕವೂ ಈ ಅಭ್ಯಾಸಕ್ಕೆ ಪ್ರತಿವರ್ಷವೂ ಬರುತ್ತಾಳೆ. "ಸಣ್ಣ ಮಕ್ಕಳ ಕಲಾಶಾಲೆಯ ಶಿಕ್ಷಣದಷ್ಟೆ ನನಗೆ ಈ ಅಭ್ಯಾಸ ಮುಖ್ಯವಾಗಿದೆ. ಪ್ರತಿವರ್ಷವೂ ನಾನು ಹೊಸಹೊಸ ವಿಷಯಗಳನ್ನು ಕಲಿಯುತ್ತಿದ್ದೇನೆ" ಎಂದು ಅವಳು ಅಭಿಪ್ರಾಯಪಡುತ್ತಾಳೆ.

"ಮನೆಕೆಲಸವು ಒಂದು ಹೊರೆಯಲ್ಲ, ಅದೊಂದು ಸಂತಸದ ಸಾಧನ ಎಂದು ತಿಳಿಯುವಂತೆ ಈ ವಿದ್ಯಾಲಯ ತೋರಿಸಿಕೊಟ್ಟಿದೆ" ಎಂದು ಇಲ್ಲಿನ ವಿದ್ಯಾರ್ಥಿಗಳಲ್ಲಿ ಎಲ್ಲರಿಗಿಂತಲೂ ಹೆಚ್ಚು ಪ್ರಾಯದವಳಾದ 85ವರುಷದ ಮುದುಕಿ ಶ್ರೀಮತಿ ಹೆನ್ರಿ ಫ್ರೋಸ್ಟರ್ ಹೇಳಿದ ಮಾತಿನಿಂದ ಈ ವಿದ್ಯಾಲಯದ ಉದ್ದೇಶವೂ ಸಫಲತೆಯೂ ಸುಲಭವಾಗಿ ತಿಳಿಯುವುದು.

ಇದೀಗ ಅಮೇರಿಕದ ಸುದ್ದಿಯಾಯಿತು. ನಮ್ಮದೇಶದ ಹಳ್ಳಿಗಳಲ್ಲಂತೂ ವಿದ್ಯಾಪ್ರಚಾರವು, ಅದರಲ್ಲೂ ಸ್ತ್ರೀಯರಲ್ಲಿ ಬಹುಕಡಿಮೆ. ಪೇಟೆಪಟ್ಟಣಗಳಲ್ಲಂತೂ ಕಲಿತ ಸ್ತ್ರೀಯರು ಮನೆಗಳಲ್ಲಿದ್ದರೂ ಅವರಿಗೆ ಮನೆಗೆಲಸದಿಂದ ಮುಕ್ತಿಯೇ ಇಲ್ಲ, ಶ್ರೀಮಂತ ವರ್ಗದ ಕೆಲವು ಸ್ತ್ರೀಯರಿಗಂತೂ ಮನೆಗೆಲಸಕ್ಕೆ ಜನರ ನೇಮಕವಾದದ್ದರಿಂದ ಹೆಚ್ಚಿನ ಬಿಡುವು ಅವರಿಗಿರುವುದರಿಂದ ಒಂದೆರಡು ಮಹಿಳಾ ಸಭೆಗಳನ್ನು ನಗರಗಳಲ್ಲಿ ನಡೆಸಿಕೊಂಡು ಹೋಗುವುದೂ ಇದೆ. ಅಂತಹವು ಶ್ರೀಮಂತರಿಗೆ ಮಾತ್ರ ಎಲ್ಲ ಸದಸ್ಯರೂ ಅದಕ್ಕೆ ಕಾರಿನಲ್ಲೇ ಬರುವವರು ಹಾಗಾದರೆ ಮಧ್ಯಮವರ್ಗದ ಶಿಕ್ಷಣಹೊಂದಿದ ಸ್ತ್ರೀಯರಿಗೆ ನಗರಗಳಲ್ಲಿ ಹೀಗೆ ಮನೆಯ ಹೊರಗಣ ಚಟುವಟಿಕೆಗಳಲ್ಲಿ ಭಾಗವಹಿಸುವ ಯೋಗ್ಯತೆಯೇ ಇಲ್ಲವೇ? ಇಲ್ಲ. ಅದಕ್ಕಾಗಿಯೇ ಮೇಲೆಹೇಳಿದ ಮಾದರಿಯ ಶಿಕ್ಷಣಾಲಯಗಳನ್ನು ವಿಶ್ವವಿದ್ಯಾಲಯದವರು ತೆರೆಯಬೇಕು ಅಲ್ಲಲ್ಲಿ ನಗರಗಳಲ್ಲಿ. ವರ್ಷದಲ್ಲಿ ಕೆಲವೇ ದಿನಗಳ ತನಕ ಅದರಲ್ಲಿ ಅಭ್ಯಾಸ ಹೆಚ್ಚಿನ ಪ್ರಯೋಜನವನ್ನು ಅತ್ಯಲ್ಪ ಸಮಯದಲ್ಲಿ ಪಡೆಯುವಂತೆ ಪಾಠಪಟ್ಟಿಯನ್ನೂ ಇತರ ಸಲಕರಣೆಗಳನ್ನೂ ಒದಗಿಸಬೇಕು. ಅದಕ್ಕಾಗಿ ಸ್ಥಳೀಯ ಶಾಲಾ ಕೋಲೇಜುಗಳ ಕಟ್ಟಡವನ್ನೇ ಛಾತ್ರಾವಾಸಗಳನ್ನೇ ಅವುಗಳ ರಜೆಯ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳಲೂ ಬಹುದು. ಯೋಗ್ಯ ತರಬೇತಿ ಹೊಂದಿದ ಶಿಕ್ಷಕಿಯರನ್ನೂ, ಭಾಷಣಕರ್ತರನ್ನೂ ಜಾಣತನದಿಂದ ಆರಿಸುವುದೇ ಮುಖ್ಯಕೆಲಸ, ಅದಕ್ಕೆ ಖರ್ಚಿಗಾಗಿ ಸ್ವಲ್ಪ ಫೀಸನ್ನೂ ವಿದ್ಯಾರ್ಥಿಗಳಿಂದ ವಸೂಲುಮಾಡಿದರೂ ಚಿಂತಿಲ್ಲ.

ಹೀಗೆ ಸ್ತ್ರೀಯರು ತಮ್ಮ ಅಡಿಗೆಮನೆಗಳಿಂದ ಹೊರಬಂದು ಇಂತಹ ಕೇಂದ್ರಗಳಲ್ಲಿ ಅಭ್ಯಾಸಮಾಡಿ ತನ್ನಪಾಲಿನ ಸೇವೆಯನ್ನು ಸಮಾಜಕ್ಕೆ ಸಲ್ಲಿಸುವಂತಾಗಬೇಕು. ನಿರ್ಭಾಗ್ಯರಾದ, ಬಡವರಾದ ಸ್ತ್ರೀಯರ ಸ್ಥಿತಿಯನ್ನು ಸುಧಾರಿಸಲು, ಸ್ತ್ರೀಯರಿಗೆ ಸಂಬಂಧಪಟ್ಟ ಸಮಾಜದ ಇತರ ಸಮಸ್ಯೆಗಳನ್ನು ಎದುರಿಸಲು ಇಂತಹ ಅಭ್ಯಾಸವನ್ನು ಪಡೆದ ಪದವೀಧರರು ಮುಂದೆ ಬರಬೇಕು. ಆಗಲೇ ನಮ್ಮ ಸಮಾಜ ಆದರ್ಶ ಸಮಾಜವಾದೀತು!

(ಇಂಗ್ಲಿಷ್ ಲೇಖನದ ಆಧಾರದಿಂದ)

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್
English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ. 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಸೆರಗು ಹೋಗುತ್ತಿದ್ದರೆ, ಹೊಲಿಕೆಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.
ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ
ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ
ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ,
ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.
ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

ತಮ್ಮ ದೃಢ ವಿಶ್ವಾಸ ಪಾತ್ರ
ಕೆನರಾ ಬ್ಯಾಂಕ್
ಸ್ಥಾಪಿತ 1906
ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು
ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು
ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

Regd No M 3610
LICENCE No. 31
Licensed to Post without Prepayment
Estd 1921 ಸ್ಥಾಪನೆ
31ನೇ ವರ್ಷ
23-11-1950
Founder Sri A. B Shetty,
Minister for Agriculture & Veterinary
ನವಯುಗ
स्वाधीन भारत
ವರ್ಷ ೩೧
ವಾರ ೧೨
NAVAYUGA
WEEKLY
POST BOX NO. 22
UDIPI, S. K.
Vol. 31
No 12

ಊಹಾತೀತ ಭವಿಷ್ಯ

ಭವಿಷ್ಯವು ಯಾರ ಊಹೆಗೂ ನಿಲುಕದ ವಿಷಯ. ಯಾವ ನಿರ್ಧಾರಕ್ಕೂ ಎಟುಕದ ಸಂಗತಿ ಈ ಮಾತು ಪ್ರತಿಯೊಬ್ಬ ವ್ಯಕ್ತಿಗೆ ಮತ್ತು ಪ್ರತಿಯೊಂದು ರಾಷ್ಟ್ರಕ್ಕೂ ಅನ್ವಯಿಸುತ್ತದೆ

ಇದೇ ತಿಂಗಳ ತಾ 5ರ ವರೆಗೂ ನೇಪಾಳದ ಆಡಳಿತೆಯ ಶಿರಸ್ಸಾಗಿ 'ಹಿಸ್ ಮೆಜೆಸ್ಟೀ ಮಹರಾಜ' ಆಗಿದ್ದವರಿಗೆ ಅಲ್ಲಿಂದ ಹೇಳದೆ ಕೇಳದೆ ಭಾರತಕ್ಕೋಡಿ ಬರುವ ಅದೃಷ್ಟವು ಇದೇ ತಾ 15ರೊಳಗೇನೇ ಒದಗಿತು

ಕೆಲವೇ ವರುಷಗಳ ಮೊದಲು ಬ್ರಿಟಿಷರ ಸೆರೆಮನೆ ಕೈದಿಯಾಗಿದ್ದ ಶ್ರೀ ಜವಾಹರಲಾಲ ನೆಹರುಗಳು ಕಳೆದವರುಷ ಬ್ರಿಟಿಷರ ಅರಮನೆ ಅತಿಥಿಯಾಗಬೇಕಾಯಿತು

ಕಾಶ್ಮೀರದ ಸೋಲ್ಜರರು ಆರು ವರುಷಗಳಿಗೆ ಮೊದಲು ಬಯೊನೆಟ್ ತುದಿಯನ್ನು ಚಾಚಿ ತಡೆಗಟ್ಟಿದ್ದ ಶ್ರೀ ನೆಹರುಗಳಿಗೆ ಕಳೆದ ಮೂರು ವರುಷಗಳಿಂದ ಕೋವಿ ಹಿಡಿದು 'ಗೌರವರಕ್ಷೆ' ಸಲ್ಲಿಸುತಿದ್ದಾರೆ.

"ಗಲಾಟೆಗಾರರು" ಎಂದು ಭಾರತದ ಆಶ್ರಿತ ರಾಜರುಗಳು ಯಾರನ್ನು ಹೀನ ದೃಷ್ಟಿಯಿಂದ ಕಾಣುತಿದ್ದರೋ ಆ ಕಾಂಗ್ರೆಸ್ ನಾಯಕರನ್ನೇ ಈಗ ತಮ್ಮ ಮೇಲಧಿಕಾರಿಗಳು ಎಂದು ಭಯ ಭಕ್ತಿಯಿಂದ ನೋಡುತಿದ್ದಾರೆ

ರಶ್ಯದಲ್ಲಿ ಸೋವಿಯೆಟ್ ರಾಜ್ಯಭಾರ ಸ್ಥಾಪಿಸಲ್ಪಟ್ಟ ಮೇಲೆ ಕೂಡ, ಕೇವಲ ಬಂಡಾಯವೆಬ್ಬಿಸುವುದಕ್ಕಲ್ಲದೆ ಬೇರಾವುದಕ್ಕೂ ಆಗದವರೆಂದ ಬೇರೆಲ್ಲ ಕಡೆಯವರಿಂದಲೂ ಭಾವಿಸಲ್ಪಟ್ಟಿದ್ದ ಕಮ್ಯೂನಿಸ್ಟರು ಈಗ ಅನುಕ್ರಮವಾಗಿ ಒಂದೊಂದೇ ರಾಷ್ಟ್ರವನ್ನು ಸ್ವಾಧೀನಪಡಿಸಿಕೊಳ್ಳುತ್ತಾ ಬಂದಿದ್ದಾರೆ.

ಒಂದು ಕಾಲದಲ್ಲಿ ತಮ್ಮ ಒಕ್ಕಲುಗಳಾಗಿದ್ದವರು, ತಮ್ಮ ಚಾಕರಿ ಮಾಡಿದ್ದವರು, ಈಗ ತಮಗಿಂತ ಹೆಚ್ಚಿನ ಶ್ರೀಮಂತರಾಗಿ ಮೆರೆದಾಡುತ್ತಿರುವ ಅನುಭವ ಹಲವರಿಗಿದೆ; ಅಂತೆಯೇ ಒಂದು ಕಾಲದಲ್ಲಿ ತಮ್ಮ ಗುಲಾಮಗಿರಿಯಲ್ಲಿದ್ದ ರಾಷ್ಟ್ರಗಳು ಈಗ ತಮಗಿಂತ ಮೇಲ್ಮೆಯಾಗುತ್ತಿರುವ ಅನುಭವವು ಕೆಲವು ರಾಷ್ಟ್ರಗಳಿಗೂ ಆಗುತ್ತಿದೆ.

ತಮ್ಮ ವಿಲಾಸೀ ಹುಡುಗ ಲೋಕೈಕ ಮಹಾತ್ಮನಾಗುವವನೆಂಬುದನ್ನು ಮೋಹನದಾಸ ಕರಮ ಚಂದ ಗಾಂಧಿಯ ಮಾತಾಪಿತರು ಆ ಕಾಲದಲ್ಲಿ ನೆನಸಿರಲಿಕ್ಕಿಲ್ಲ ತನ್ನ ಸಂಗೀತದ ದುಡಿತದಿಂದ ಹೊಟ್ಟೆ ಹೊರಕೊಳ್ಳುತ್ತಿರುವವನಾಗ ಜಗತ್ಪ್ರಸಿದ್ಧ ನಾಟಕಕರ್ತನಾಗುವನೆಂಬುದನ್ನು ಬರ್ನಾರ್ಡ್ ಶಾರ ತಾಯಿ ಆಗ ಸ್ವಪ್ನದಲ್ಲಿ ಕೂಡಾ ಕಂಡಿರಲಿಕ್ಕಿಲ್ಲ

ಪಾಕಿಸ್ತಾನ್ ಸ್ಥಾಪನೆಯ ಪ್ರತಿಕ್ರಿಯೆಗಳು ಈಗಿನಂತಾಗಬಹುದೆಂಬುದನ್ನು ಪಾಕಿಸ್ತಾನ್ ಚಳವಳಿ ಕಾಲದಲ್ಲಿ ದಕ್ಷಿಣಭಾರತದ ಮುಸ್ಲಿಮರು ಊಹಿಸಿರಲಿಕ್ಕಿಲ್ಲ ತನ್ನ ಘೋಷಣೆಯು ತನಗಿಂತಹ ಅದೃಷ್ಟವನ್ನೊದಗಿಸಬಹುದೆಂದು ರಜಾಕಾರ್ ಚಳವಳಿ ಕಾಲದಲ್ಲಿ ಹೈದರಾಬಾದ್ ನಿಜಾಮರು ನೆನೆಸಿರುವುದು ಅಸಂಭವ

ಆ ಯುದ್ಧಾವಧಿಯಲ್ಲೇ ಅಟಂ ಬಾಂಬು ಕಾಣಿಸಿಕೊಳ್ಳಬಹುದೆಂದು ದ್ವಿತೀಯ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಹೆಚ್ಚಿನವರು ನಿರೀಕ್ಷಿಸಿರಲಿಲ್ಲ ಯುದ್ಧಾಂತ್ಯವಾದೊಡನೆ ನಡೆದ ಚುನಾವಣೆಯಲ್ಲಿ ಚರ್ಚಿಲ್ಲರಂತಹ ಪರಾಭವಕ್ಕೀಡಾಗುವರೆಂಬ ಭರವಸೆ ಕಟ್ಟಿಕೊಂಡಿದ್ದವರು ತೀರಾ ಅಲ್ಪ

ಅನಿರೀಕ್ಷಿತ ನಿಧಿ ದೊರೆತು ಅಕಸ್ಮಾತ್ ಶ್ರೀಮಂತಿಕೆಗೇರಿದವರು — ಊಹಾತೀತ ನಷ್ಟಕ್ಕೀಡಾಗಿ ಫಕ್ಕನೇ ದರಿದ್ರರಾಗಿ ಹೋದವರು — ಎಷ್ಟೋ ಮಂದಿ ಇದ್ದಾರೆ ನಿಯಂತ್ರಣಗಳ ಮತ್ತು ಕಳ್ಳಸಂತೆಯ ಈ ಯುಗದಲ್ಲಿ ಸಾಮಾನುಗಳ ಧಾರಣೆಯಲ್ಲಿ ಆಗುತ್ತಿರುವ ಆಕಸ್ಮಿಕ ಏರಿಳಿತಗಳದೆಸೆಯಿಂದ ಅಪಾರ ಲಾಭ, ಅಸಹ್ಯನಷ್ಟಗಳಿಗೀಡಾದವರಿದ್ದಾರೆ

ತನ್ನ ಪ್ರತಿಯೊಂದು ಮಹತ್ಸಾಧನೆಗೂ ಸುಮುಹೂರ್ತ ನೋಡಿಯೇ ಹೊರಡುವ ಅಭ್ಯಾಸವಿದ್ದ ಹಿಟ್ಲರನ ಸೋಲು—ಪ್ರಾರ್ಥನೆಯ ಮೇಲೆ ಅಗಾಧ ವಿಶ್ವಾಸವಿದ್ದ ಗಾಂಧಿಜೀ ಪ್ರಾರ್ಥನಾ ಸಭೆಗೆ ಬರುವಾಗಲೇ ಸಂಭವಿಸಿದ ಮರಣ—ಮನಸ್ಸಿದ್ದರೂ ಅವಧಿಯಿದೆಯೆಂಬುದರಿಂದ ತಮ್ಮ ಜೀವನಾನಂತರದ ವ್ಯವಸ್ಥೆ ಯಾವುದನ್ನೂ ಮಾಡದೆ ಹೊರಟು ಹೋದವರ ನಿವರ್ತನ—ಇವೆಲ್ಲವುಗಳಿಂದ ಭವಿಷ್ಯವು ಯಾರ ಊಹೆಗೂ ಎಟುಕುವಂತಹದಲ್ಲವೆಂಬುದು ಸ್ಪಷ್ಟವಾಗಿದೆ.

ಅಂದ ಮೇಲೆ ಮುಂದಿನ ಕ್ಷಣದಿಂದಾರಂಭಿಸಿ, ಸಮೀಪದ ಮತ್ತು ದೂರದ ಭವಿಷ್ಯದಲ್ಲಿ ಯಾರಗತಿ ಎಂತಹದಾಗಬಹುದೆಂಬುದನ್ನು ಊಹಿಸುವುದು ಅಸಾಧ್ಯ.

ಭಾರತ — ಪಾಕಿಸ್ತಾನಗಳೊಳಗಿನ ಸಂಬಂಧವು ಪೂರ್ಣ ಹಾಳಾಗಿ ಬಾಡಾಬಾಡಿ ಘರ್ಷಣೆ ಏಳಲೂ ಬಹುದು, ಗಾಢ ಮೈತ್ರಿ ಸ್ಥಾಪನೆಯಾಗಲೂ ಬಹುದು

ಟಿಬೇಟನ್ನಾಕ್ರಮಿಸಿಕೊಂಡು ಭಾರತದ ಗಡಿಗೂ ನೇಪಾಳದ ಸಮೀಪ ಮುತ್ತಲೂ ಬಂದು ನಿಂತಿರುವ ಚೀನೀ ಕಮ್ಯೂನಿಸ್ಟರಿಗೂ, ಭಾರತದೊಳಗಿನ ಕಮ್ಯೂನಿಸ್ಟರಿಗೂ ಪ್ರತ್ಯಕ್ಷ ಸಂಬಂಧ ನಿರ್ಮಾಣಗೊಂಡು ಮತ್ತು ಭಾರತ ಚೈನಾ ಗಡಿ ಘರ್ಷಣೆಗಳು ಉಂಟಾಗಿ ಕಲಹವೇಳಲೂ ಬಹುದು, ಸದ್ವ್ಯವಹಾರಗಳ ಮೂಲಕ ಇವೆರಡರೊಳಗೆ ನೆರೆಮನೇ ಸುಸಂಬಂಧ ನಿರ್ಮಾಣಗೊಂಡು ಅನ್ಯತ್ರ ಅಜೇಯ ಕೋಟೆಯಂತಾಗಲೂ ಬಹುದು

ಭಾರತದ ಇದಿರಾಗಿ ಪಾಕಿಸ್ತಾನ್, ಅಮೇರಿಕ ಪಾಳಯ ಅಥವಾ ಪಾಕಿಸ್ತಾನ್ ಕಮ್ಯೂನಿಸ್ಟ್ ಪಾಳಯ ಸೇರಿಕಟ್ಟುವಂತಾಗಿ, ಭಾರತದ ಶಾಂತಿಗುರಿಯ [illegible] ಮುರಿದು ಹೋಗಲೂ ಬಹುದು, ಅಥವಾ ಪಾಳಯ ಕಚ್ಚಾಟದ ಹಾನಿಯ ಪ್ರತ್ಯಕ್ಷಾನುಭವದಿಂದ ಮನಸ್ಸಿಗನಾಟಿ ಎಲ್ಲಾ ರಾಷ್ಟ್ರಗಳೂ ಭಾರತವನ್ನು ಅನುಕರಿಸುವ ಸಂದರ್ಭ ಬಂದರೂ ಬರಬಹುದು

ಎಂದೂ ದುರ್ಗತಿ ದುರ್ಗತಿಗೀಡಾಗದ ಅಗ್ರಗಣ್ಯ ನಾಯಕರು ಕೂಡಾ ಕಾಲಗತಿಗೀಡಾಗಿ ಪರಿಸ್ಥಿತಿ ಒದಗಬಹುದು. ಹಿಂದಿನ ಶರಚ್ಚಂದ್ರ ಬೋಸರಂತೆ, ಅಥವಾ ಇಂದಿನ ಆಚಾರ್ಯ ಕೃಪಲಾನಿಗಳಂತೆಯಾಗಿ ಯಾವ ಕಾಲದಲ್ಲೂ ಪಕ್ಷ ಬದಲಾಯಿಸಿಕೊಳ್ಳಬಹುದು. ಎಲ್ಲರೂ ಮೇಲೆ ನೋಡುತ್ತಿರುವಾಗಲೇ ಮೇಲಿನ ನಕ್ಷತ್ರಗಳ ಪೈಕಿ ಯಾವುದಾದರೂ ಯಾವ ಮುಹೂರ್ತದಲ್ಲೂ ಉದುರಿಬೀಳಬಹುದು

ಐಶ್ವರ್ಯ, ಆರೋಗ್ಯ, ಅಧಿಕಾರ, ಇವುಗಳ ಪೈಕಿ ಯಾವುದೇ ಆದರೂ ಅನಿರೀಕ್ಷಿತವಾಗಿ ಒದಗಬಹುದು, ಅನಿರೀಕ್ಷಿತವಾಗಿ ಅಡಗಲೂ ಬಹುದು. ಆದ್ದರಿಂದ ಕರ್ತವ್ಯಪಾಲನೆಯನ್ನು ಮತ್ತು ಕರ್ತವ್ಯವಾಗಿಯೇ ಇರುವ ಭವಿಷ್ಯಚಿಂತನೆಯನ್ನಲ್ಲದೆ ಬೇರಾವ ಆಸೆ, ಭರವಸೆಯನ್ನು ಕಟ್ಟಿಕೊಳ್ಳುವುದೂ ಸರಿಯಲ್ಲ


THE UNITED KARNATAK
INSURANCE COMPANY LIMITED.
United Karnatak Buildings DHARWAR.
Established 1929
ಕಳೆದ 20 ವರ್ಷಗಳಿಂದಲೂ ಸದಾ ಜನತ ಸೇವೆ ಮಾಡುತ್ತಿದೆ

ಬರುವ ನವಂಬರಿಗೆ ಚುನಾವಣೆ!

1951ನೇ ನವಂಬರ್ ತಿಂಗಳ ಉತ್ತರಾರ್ಧ ಅಥವಾ ದಶಂಬರ್ ತಿಂಗಳ ಪೂರ್ವಾರ್ಧದಲ್ಲಿ ಭಾರತದ ಸಾರ್ವತ್ರಿಕ ಮಹಾ ಚುನಾವಣೆಗಳು ನಿಶ್ಚಯವಾಗಿ ನಡೆಯುವವು, ಎಂದು ಇದೇ ನವಂಬರ್ ತಾ 11ರಲ್ಲಿ ಪಾರ್ಲಿಮೆಂಟ್ ಮೂರನೇ ಅಧಿವೇಶನವನ್ನು ಉದ್ಘಾಟಿಸುತ್ತಾ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ಜಾಹೀರು ಮಾಡಿದ್ದಾರೆ. ಈ ಮೊದಲು ಕೇಳಿಬಂದಿದ್ದ ಎಪ್ರಿಲ್, ಮೇ ಅವಧಿಯು ಸರಕಾರೀ ನಿಶ್ಚಿತಾಭಿಪ್ರಾಯವಾಗಿದ್ದರೆ ಅಧ್ಯಕ್ಷರೀಗ ಸಾರುವ ಅವಧಿಯು ಸರಕಾರದ ನಿರ್ಧಾರ.

1950ನೇ ನವಂಬರ್ ಉತ್ತರಾರ್ಧವಿದು. ಇಂದಿಗೆ ಸರಿಯಾಗಿ ಒಂದು ವರುಷವಾಗ ಕೇಂದ್ರ 'ಜನತಾ ಮಂತ್ರಿ'ಯ ಮತ್ತು ಸಂಸ್ಥಾನೀ ಶಾಸನ ಸಭೆಗಳ ಚುನಾವಣೆಗಳು ನಡೆಯುವವು. 1951ನೇ ಎಪ್ರಿಲ್ ಅಥವಾ ಮೇ ತಿಂಗಳುಗಳಲ್ಲಿ ಮಹಾ ಚುನಾವಣೆಯೆಂಬ ನಿರೀಕ್ಷೆಯು ಸುಮಾರು ನಾಲ್ಕೈದು ತಿಂಗಳುಗಳ ಮೊದಲಿನಿಂದ ಮೊನ್ನೆವರೆಗೂ ಬೆಳೆಯುತ್ತಾ ಬಂದಿದ್ದಿತು. ಆದರೆ ಚುನಾವಣೆಯು ಈ ನಿಶ್ಚಿತ ಗುರಿಯಿಂದ ಪೂರ್ಣ ಆರು ತಿಂಗಳುಗಳಿಗೆ ಮುಂದೆ ಹೋಯಿತು.

ಚುನಾವಣಾ ದಿನದ ಅವಧಿ ಬೆಳೆದುದರಿಂದ ಆಂತರ್ಯಕ್ಕೆ ಸಮಾಧಾನ ಪಡದವರು ಬಹಳ ಮಂದಿ ಇರಲಿಕ್ಕಿಲ್ಲ. ಆದರೂ ಕಾಂಗ್ರೆಸಿನ ಎದುರುವಾದಿಗಳಿಗೆ ಕಾಂಗ್ರೆಸ್ ನಾಯಕರ ಉದ್ದೇಶವನ್ನು ಆರೋಪಿಸುವ ಸಂದರ್ಭವು ಈ ಮೂಲಕ ದೊರೆಯಿತೆನ್ನಬಹುದು.

ಸುಮಾರು 18 ಕೋಟಿಯಷ್ಟು ಮತದಾರರ ಯಾದಿಗಳ ತಯಾರಿ, ಮತ್ತು ಅವಶ್ಯಕವಾದ ಇತರ ವ್ಯವಸ್ಥೆಗಳಾಗಬೇಕು—ಅಂತೆಯೇ ಚುನಾವಣೆಗಿಳಿಯುವವರಿಗೂ ಪ್ರಚಾರ ಕಾರ್ಯಗಳಿಗೆ ಸಾಕಷ್ಟು ಅವಕಾಶ ದೊರೆಯಬೇಕು—ಹೊಸತಾದ ಮತ್ತು ಪೂರ್ಣ ಹೊಣೆಗಾರಿಕೆಯುಳ್ಳ ಘಟನೆ, ಹೊಸಬರು, ಅತಿ ಹೆಚ್ಚು ಸಂಖ್ಯೆಯುಳ್ಳ ಮತದಾರ ಸಮುದಾಯ, ಹೊಸ ಹೊಸ ಹಕ್ಕುಬಾಧ್ಯತೆಗಳ ಪರಿಚಯಗಳನ್ನು ಪಡೆದಿರುವ ಶಾಸನ ಸಭೆಗಳು, ಎಂದ ಮೇಲೆ ಅತಿ ಮಹತ್ವದ ನವೀನ ರೀತಿ ನೀತಿಗಳು ಜಾರಿಯಲ್ಲಿ ಬರಬೇಕು— ಇವೆಲ್ಲ ಭಾಗಗಳಿಗೆ ಒಂದು ವರುಷದ ಅವಧಿ ಯಾವ ದೃಷ್ಟಿಯಿಂದ ನೋಡಿದರೂ ಹೆಚ್ಚಲ್ಲ.

ಆದರೆ ಈ ಬಗ್ಗೆ ಎಪ್ರಿಲ್, ಮೇ ತಿಂಗಳಲ್ಲೇ ಚುನಾವಣೆಯೆಂದು ಈ ಮೊದಲು ನಿರ್ಧಾರವಾಗಿ ಪ್ರಕಟವಾಗಿತ್ತಲ್ಲ? ನಿಜ. ಇದಕ್ಕೆ ಪ್ರಧಾನ ಮಂತ್ರಿ ಶ್ರೀ ಜವಾಹಿರಲಾಲರ ಆತುರವೇ ಮುಖ್ಯ ಕಾರಣ. ನಾಸಿಕ ಕಾಂಗ್ರೆಸ್ ಅಧಿವೇಶನದಲ್ಲಿ, ಆ ವೇಳೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ, ಬರುವ ಮೇ ತಿಂಗಳೊಳಗೆ ಚುನಾವಣೆಯೆಂಬ ಅಭಿಪ್ರಾಯ ಹೊರಬಿದ್ದುದು ಶ್ರೀ. ಜವಾಹಿರಲಾಲರ ಒತ್ತಾಯಕ್ಕಾಗಿಯೇ.

ನೆಹರೂಜೀ ಹೀಗೆ 'ಆಗ್ರಹಪಡಿಸಲು' ಕಾರಣಗಳಿದ್ದುವು. ಪರಕೀಯಾಧಿಕಾರ ತಪ್ಪಿ ಸ್ವಾಧಿಕಾರ ಸ್ಥಾಪನೆಯು ಯುಗಾಂತರವಾದರೂ ಈ ನವಯುಗದಲ್ಲೂ ಆ ಹಳೇ ಯುಗದ ಶಾಸನ ಸಭೆಗಳು ಮತ್ತು ಸರಕಾರಗಳೇ ಅಸ್ತಿತ್ವದಲ್ಲಿವೆ. ಕೇಂದ್ರದಲ್ಲಂತೂ 'ಜೋಪಾಸನಾ ಸರಕಾರ'ವನ್ನಬಹುದಾದ ತಾತ್ಕಾಲಿಕ ವ್ಯವಸ್ಥೆಯೇ ಉಳಿದಿದೆ. ಅಂತೂ ಈಗ ಜಾರಿಯಲ್ಲಿರುವುದು ಜನತಾ ರಾಜ್ಯದ ನವರಾಜ್ಯ ಶಾಸನವಾದರೂ ಅಧಿಕಾರದಲ್ಲಿರುವುದು ಆ ಶಾಸನಾನುಗುಣ ಸರಕಾರಗಳಲ್ಲ. ಮೇಲಾಗಿ ತಮ್ಮ ಆಡಳಿತೆಯ ಕುರಿತು ಜನಮತ ಹೇಗಿದೆ, ಎಂಬುದನ್ನರಿಯುವ ಕುತೂಹಲ ನೆಹರೂಗಳಿಗಿದ್ದಿರಬೇಕು, ಒಟ್ಟಿನ ಮೇಲೆ 'ಜನತಾ ರಾಜ್ಯ'ವು ತತ್ವತಃ ಮತ್ತು ಆಚಾರದಲ್ಲಿ ಆದಷ್ಟು ಬೇಗನೇ ಪೂರ್ಣತೆ ಹೊಂದಬೇಕು ಎಂಬುದೇ ನೆಹರೂಜೀಯ ಅವಸರಕ್ಕೆ ಕಾರಣ.

ಇನ್ನು ಐದಾರು ತಿಂಗಳುಗಳೊಳಗೆ ಮಹಾ ಚುನಾವಣೆ ನಡೆಸುವುದು ಕಷ್ಟವೆಂಬುದು ಕಾಂಗ್ರೆಸಿಗರಿಗೆ ಹೊಳೆದಿದ್ದಿತು; ಆ ಸಂಬಂಧದ ಕಾರ್ಯಭಾರ ವಹಿಸಿರುವ ಸಂಸ್ಥಾನೀ ಸರಕಾರಗಳ ಅಧಿಕಾರಿಗಳೂ ಮುಂದಿಟ್ಟಿದ್ದಿತು; ಚುನಾವಣಾ ಹೋರಾಟದ ಕಾರ್ಯಹೊರೆ ಮಾತ್ರವಿರುವ 'ಸಮಾಜವಾದಿ'ಗಳಂತಹ ಪಕ್ಷಗಳವರಿಗೂ ಹಾಗನ್ನಿಸಿದ್ದಿತು. ಆದರೂ ಬರುವ ಎಪ್ರಿಲ್-ಮೇಯನ್ನು ಗುರಿಯಾಗಿಟ್ಟುಕೊಂಡೇ, ಚುನಾವಣಾ ಪೂರ್ವಸಿದ್ಧತೆಗಳನ್ನು ತ್ವರೆಗೊಳಿಸಬೇಕೆಂದು ಪ್ರಧಾನಿ ನೆಹರು ಸಂಸ್ಥಾನೀ ಸರಕಾರಗಳನ್ನು ಹುರಿದುಂಬಿಸಿದ್ದರು.

ಕೆಲಸಗಳಾದರೋ ಆ ಗುರಿ ಸೇರಲು ಅನುಕೂಲವಾಗುವಂತೆ ಸಾಧ್ಯವಿದ್ದಷ್ಟು ರಭಸದಿಂದಲೇ ನಡೆದಿದ್ದುವು. ಆದರೂ ಸ್ಪಷ್ಟ ನಿರ್ಧಾರಕ್ಕೆ ಬರುವ ಸಮಯ ಸನ್ನಿಹಿತವಾದಾಗ ಎಪ್ರಿಲ್, ಮೇ ಅವಧಿಯಲ್ಲಿ ಚುನಾವಣೆಗಳನ್ನು ನಡೆಸುವುದು ಅವ್ಯವಹಾರ್ಯವೆಂದು ಖಚಿತವಾಯಿತು; ಅದರ ಒತ್ತಿಗೆ ಬರುವುದು ಮಳೆಗಾಲ. ಆದ್ದರಿಂದ ಪರಿಸ್ಥಿತಿ ಮತ್ತು ಪ್ರಕೃತಿ ಸಹಜ ಅಡ್ಡಿ, ಆತಂಕಗಳಿರದ ಬರುವ ವರುಷದ ಛಳಿಗಾಲವನ್ನೇ— 1951ನೇ ನವಂಬರ್ ಉತ್ತರಾರ್ಧದಿಂದ ದಶಂಬರ್ ಪೂರ್ವಾರ್ಧದೊಳಗಿನ ಅವಧಿಯನ್ನೇ— ಆರಿಸಿಕೊಳ್ಳಲಾಯಿತು. ಇದು ಸರಿಯಾದ ಮತ್ತು ಸಮಂಜಸವಾದ ಅವಧಿ.

"ಇಷ್ಟು ದೂರ ಹಾಕಿದುದಾಗಲಿಲ್ಲ" ಎಂದು ದೂರುವವರಾರಿರಬಹುದು? 'ಕಾಂಗ್ರೆಸ್ ಆಡಳಿತೆ ಸಾಕಾಯಿತಪ್ಪಾ!' ಎಂದು ನಾಲಿಗೆಯೊತ್ತಿನ ಮನಸ್ಸಿನಷ್ಟೇ ಹೊರಗೆಡಹುತ್ತಿರುವ ಜನರು ಇಂದು ಎಲ್ಲೆಲ್ಲೂ ಕಾಣ ಸಿಗುತ್ತಿದ್ದಾರೆ. ಇಂಥವರು, ಈ ಅವಧಿ ಹೆಚ್ಚಳಕ್ಕಾಗಿ ಒಮ್ಮೆಂದೊಮ್ಮೆಗೆ ದೂರಬಹುದು. ಆದರೂ ಇಂಥವರಲ್ಲಿ ಹೆಚ್ಚಿನವರಿಗೆ ದೃಢಾಭಿಪ್ರಾಯ— ಯೋಚನಾನಂತರದ ತೀರ್ಮಾನ —ಎಂಬುದೇ ಇರದೆ, ಅವರ ಮನಸ್ಸೆಂಬುದು ಮೇಲಿಂದ ಮೇಲೆ ಬದಲಾವಣೆಗೊಳ್ಳುವಂತಹದೇ; ಆದ್ದರಿಂದ ಅದು ಗಣಿಸಲಾಗುವಂತಹದಲ್ಲ.

ಅಖಿಲ ರಾಷ್ಟ್ರದಲ್ಲಿ ತಮ್ಮ ಪಕ್ಷವು ನಿಲ್ಲಿಸಬೇಕಾದ ಹುರಿಯಾಳುಗಳ ಅಂದಾಜನ್ನು ನಿಶ್ಚಯಿಸಿ, ಪ್ರಚಾರ ಕಾರ್ಯವನ್ನೂ ಇಷ್ಟರಲ್ಲೇ ಆರಂಭಿಸಿರುವ 'ಸಮಾಜವಾದಿ'ಗಳು ಆಯಿತೆ ಮುಂದುವರಿಸಿದ ಕಾಂಗ್ರೆಸ್ ಆಡಳಿತೆಯ ಉದ್ದೇಶವನ್ನು ಪ್ರಶ್ನಿಸಬಹುದು.

"ಕಾಂಗ್ರೆಸಿನೊಳಗೆ ಹೊಸ ಚುನಾವಣಾ ಯಂತ್ರವನ್ನು ನಿರ್ಮಿಸಬೇಕಾದರೆ ಕಾಂಗ್ರೆಸ್ ಘಟನೆಯನ್ನೇ ತಿದ್ದುಪಡಿ ಮಾಡಿಕೊಳ್ಳುವ ಅಗತ್ಯವಿದೆ. ಅದಕ್ಕಾಗಿ ಅ. ಭಾ. ಕಾಂ. ಸಮಿತಿ ಸಭೆಯನ್ನು ದಶಂಬರದೊಳಗೆ ಸೇರಿಸುವುದು ಅಸಾಧ್ಯ. ಆ ಮೇಲೆ ಕಾಂಗ್ರೆಸಿನ ಚುನಾವಣಾ ಕೆಲಸವಾರಂಭಿಸಬೇಕಾಗಿದೆಯಾದ್ದರಿಂದ ಎಪ್ರಿಲ್-ಮೇಯಲ್ಲಿ ನಡೆಯುವ ಚುನಾವಣೆಗೆ ಅದು ಪರಿಣಾಮಕಾರಿಯಾಗುವಂತಿರಲಿಲ್ಲ. ಮೇಲಾಗಿ ಈ ಅವಧಿಯು ಶಾಸನ ಸಭೆಗಳಲ್ಲಿರುವ ಕಾಂಗ್ರೆಸಿಗರಿಗೆಲ್ಲಾ 'ಬಜೆಟ್ ಚರ್ಚೆ'ಯ ಕಾಲವಾಗಿದೆ. ಆದ್ದರಿಂದ ಕಾಂಗ್ರೆಸಿಗರಿಗೆ ಅನಾನುಕೂಲತೆಯಾಗಬಾರದೆಂದೇ ಈ ಅವಧಿಯನ್ನು ಮುಂದುವರಿಸಿದುದಾಗಿದೆ. ಜತೆಯಲ್ಲಿ ಎಪ್ರಿಲ್ ಮೇ ತಿಂಗಳ ಗುರಿಯಿಟ್ಟುಕೊಂಡು ಇಷ್ಟರಲ್ಲೇ ಸಾಕಷ್ಟು ಮುಂದೊತ್ತಿರುವ ನಮ್ಮ ಕಾರ್ಯ ಮತ್ತು ಉತ್ಸಾಹವನ್ನು ಅಲ್ಲೇ ಮುರುಟುಗಟ್ಟಿಸುವ ಕುಹಕ ಬುದ್ಧಿಯೂ ಇದರಲ್ಲಿದೆ" ಎಂದು ಸಮಾಜವಾದಿಗಳು ಆರೋಪಿಸಬಹುದು.

ಆದರೆ ಈ ಮಹಾ ಚುನಾವಣೆಯಲ್ಲಿರುವ ಅಗಾಧ ಕಾರ್ಯಭಾರಗಳ ಮೇಲಿಂದ, ಒಂದು ವರುಷದ ಅವಧಿ ಬೇಕೇ ಬೇಕು ಎಂದು ಸಮಾಜವಾದಿಗಳ ಮನಸ್ಸಾಕ್ಷಿಯೂ ಹೇಳುತ್ತಿರಬಹುದು. 'ಎಪ್ರಿಲ್, ಮೇ ಎಂದರೆ ಅವಧಿ ಕಡಿಮೆಯಾಯಿತಾದ್ದರಿಂದ ಕೆಲಸ ಅವಸರದಲ್ಲಾಗಬೇಕಾಗಿದೆ' ಎಂದು ಸಮಾಜವಾದೀ ನಾಯಕರು ಸ್ವತಃ ಹೇಳಿದುದಿದೆ.

ಸ್ವಾತಂತ್ರ್ಯೋತ್ತರ ವಿದ್ಯಮಾನಗಳ ಮೇಲಿಂದ ಹೇಳುವುದಾದರೆ ಕಾಂಗ್ರೆಸಿನ ವರ್ಚಸ್ಸು ದಿನಹೋದಂತೆ ಕ್ರಮಶಃ ಕ್ಷಯಿಸುತ್ತಾ ಬಂದಿದೆ. ಈ ದೃಷ್ಟಿಯಿಂದ ಕಾಂಗ್ರೆಸ್ ಸರಕಾರಗಳು ಮಹಾ ಚುನಾವಣೆಗಾಗಿ ಅವಸರಿಸಬೇಕಿದ್ದಿತೇ ಹೊರತು ವಿಳಂಬಿಸಲು ಕಾರಣವಿಲ್ಲ. ಬರುವ ಬೇಸಿಗೆಯಲ್ಲೇ ಚುನಾವಣೆಯಾಗುತ್ತಿದ್ದರೂ ಅದಕ್ಕನುಗುಣವಾಗಿ ಅವಸರದಿಂದ ರಂಗಕ್ಕಿಳಿಯಲಾಗುವ ವಿಧಾನಗಳು ಮತ್ತು ಶಕ್ತಿ ಸಲಕರಣೆಗಳು ಕಾಂಗ್ರೆಸ್ ಸಂ-

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ, ಲಿಮಿಟೆಡ್

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ 'ಇಂಡಿಯಾ ಲೈಫ್
ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanbangad & Mercara.

B. Manjaya Hegde,
Advocate & President, District Board S. Kanara.
CHAIRMAN.

...ಯಲ್ಲಿ ಇದ್ದೇ ಇವೆ. ಆದ್ದರಿಂದ ಎಪ್ರಿ... ಮೇ ತಿಂಗಳ ಚುನಾವಣೆಗಳು ...ಂಗ್ರೆಸಿಗೆ ಕಲ್ಪನಾತೀತ ಸಂಕಟಗಳ ...ಸ್ತುತಿದ್ದುವೆಂದಾಗಲೀ, ಆ ದೆಸೆಯಿಂ...ಲೇ ಕಾಂಗ್ರೆಸು ಪರಾಭವಗೊಳ್ಳುತ್ತಿತ್ತೆಂ...ಗಲೀ ಯಾರೂ ಭಾವಿಸಲಾರರು.

ನಿಷ್ಪಕ್ಷಪಾತವಾಗಿ, ನಿರ್ವಿಕಾರ ಬು...ದ್ಧಿಯ ಆಚರಣೆಗಳು ತೋರಿಬರಲು ಬದ್ಧವಿವೆ ಮತದಾರರು ಮಾಡಬೇಕಾದ ವಿಚಾರ. ಕೊಡಬೇಕಾದ ಲಕ್ಷ್ಯ, ಇಡಬೇಕಾದ ಜಾಗರೂಕತೆ, ಎಲ್ಲಕ್ಕೂ ಚುನಾವಣೆಯ ಮೊದಲ ಕಾಲವೇ ಯೋಗ್ಯವಾದುದು.

ಆದದರಿಂದ ಮುಂಬರುವ ಮಹಾ ಸುಜ್ಞಾನಿಗಳಿದ್ದರೆ ಅವರನ್ನು ಅವಲಂಬಿಸಲಾಗುವಂತೆ ತಮ್ಮನ್ನೇ ತಿದ್ದಿಕೊಂಡು— ಸ್ವಕಾರ್ಯ ಸಾಧಿಸಿಕೊಳ್ಳುವದೊಂದೇ ಚುನಾವಣೆಗಿಳಿವ ಎಲ್ಲಾ ಪಕ್ಷಗಳ ಉದ್ದೇಶ. ಆದ್ದರಿಂದ ಈ ಪಕ್ಷಗಳಿಂದಾಗುವದು ಮತದಾರರನ್ನು ಕರೆಯುವ ಕೆಲಸ ಹೊರತು ಕಲಿಸುವ ಕೆಲಸವಲ್ಲ.

ಯಾವ ಕಾರ್ಯವೂ ನಡೆಯದಂತೆ ನೋಡುವ ಕಡೆಗೆ ಪರಮಾವಧಿ ಜಾಗರೂಕತೆಯಿರಬೇಕು. ನಾವು ಭಾರತೀಯರು, ಎಂಬುದಕ್ಕೆ ಭಂಗ ಬಾರದಂತೆ ನೋಡಬೇಕಾದಷ್ಟೇ ಲಕ್ಷ್ಯವೀಕಡೆಗೂ ಇರಬೇಕು. ಯಾಕೆಂದರೆ ಭಾರತೀಯ ಜನಸಾಮಾನ್ಯರ ಇಂದಿನ ಮನೋವೃತ್ತಿಯ ಮೇಲಿಂದ ಜಾತೀಯ ಭಾವನೆಯನ್ನು ಕೆರಳಿಸಿ ಸ್ವಕಾರ್ಯ ಸಾಧಿಸಿಕೊಳ್ಳುವುದು ಬೇರೆಲ್ಲಾ ವಿಧಾನಗಳಿಗಿಂತಲೂ ಸುಲಭವಿದೆ; ಅಂತೆಯೇ ಜನತಾರಾಜ್ಯ ಭಾರತದ ಅಸ್ತಿತ್ವಕ್ಕೆ ಮಿಕ್ಕೆಲ್ಲಕ್ಕಿಂತ ಹೆಚ್ಚು ಕುಠಾರ ಪ್ರಾಯವೆಂದರೆ ಈ ಭಾವನೆಯೇ.

ಆದ್ದರಿಂದ ಪ್ರತ್ಯೇಕ ಮತಾಧಿಕಾರ ಅಥವಾ ಕಾದಿಟ್ಟ ಸ್ಥಾನಗಳ ರಿಯಾಯತಿ ಯಾವುದೂ ಇರದ ಮುಸ್ಲಿಂ, ಕ್ರೈಸ್ತ, ಪಾರ್ಶಿ, ಸಿಖ್ಖರೇ ಮೊದಲಾದ ಅಲ್ಪಸಂಖ್ಯಾಕ ಸಮಾಜಗಳ ಪ್ರತಿನಿಧಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮುಂದೊಡ್ಡಬೇಕಾದುದು ಎಲ್ಲಾ ಪಕ್ಷಗಳವರ ಕರ್ತವ್ಯವಿದೆ. ಸಮ್ಮಿಶ್ರ ಬಹುಮತದಿಂದ ನಡೆಯುವ ಆರಿಕೆಯಲ್ಲಿ ಬಹುಸಂಖ್ಯಾಕರಿರುವ ಹಿಂದುಗಳೇ ಬಹುತೇಕವಾಗಿ ಎಲ್ಲಾ ಸ್ಥಾನಗಳನ್ನು ಪಡಕೊಳ್ಳುವಂತಾದರೆ, ರಾಷ್ಟ್ರದ ಅಹಿತಚಿಂತಕರಾದ ಪರಕೀಯರು ಮತ್ತು ಹಿತಶತ್ರುಗಳಿಂದ ಒಳಗಡೆ ಜಾತಿವಾದಿಗಳು ವಾದಿಸುತ್ತಿರುವಂತೆ ಇದು ನಿಜಕ್ಕೂ 'ಹಿಂದೂರಾಷ್ಟ್ರ'ವನ್ನಿಸೀತು ಹೊರತು 'ಜಾತ್ಯತೀತ ಜನತಾರಾಜ್ಯ'ವನ್ನಿಸದು.

ಎರಡನೆಯದಾಗಿ ತನ್ನ ಭಾವೀ ಮಹತ್ಸಾಧನೆಗಳ ಕುರಿತು ಜನತೆಗೆ ಕೊಡುವ ಭರವಸೆಗಳು ಸಂಬಂಧಪಟ್ಟ ಪಕ್ಷಗಳು ಅಧಿಕಾರಕ್ಕೆ ಬಂದರೆ ಸತ್ಯಕ್ಕೂ ಸಾಧಿಸಲಾಗುವಂತಹವಿಂಬೇಕೇ ಹೊರತು, ಚುನಾವಣೆಗಾಗಿ ಮತದಾರರ ಮನಸ್ಸನ್ನು ಮೋಹಿಸುವ ಅತಿಶಯೋಕ್ತಿಯಲ್ಲಿರಬಾರದು. ಸ್ವಪರ ವಂಚನೆಯು ಜನತೆಗಿಂತಲೂ ತಮ್ಮ ಭವಿಷ್ಯಕ್ಕೇನೇ ಹಾನಿಕರವೆಂಬುದನ್ನು ಅರಿತುಕೊಂಡು, ಎಲ್ಲಾ ಪಕ್ಷಗಳೂ ವ್ಯವಹಾರ್ಯ ಚುನಾವಣಾ ಘೋಷಣೆಗಳನ್ನೇ ಹೊಂದಿಸಬೇಕು.

ತಾತ್ಕಾಲಿಕ ಶಮನಕ್ಕಾಗಿ ವಾಗ್ದಾನಗಳನ್ನು ಮಾಡಿದ್ದ ಬ್ರಿಟಿಷರು ಕೊನೆಗೆ ವಾಕುಭಂಜಕರೆಂಬ ಅಪವಾದಕ್ಕೀಡಾದುದು— ಕ್ಷಣಿಕಾವೇಶಕ್ಕಾಗಿ ಮತ್ತು ಕಾಲೋಚಿತವಾಗಿ ಸ್ವರಾಜ್ಯ ಸುಖದ ಮಹಾಮಹಾ ಭರವಸೆಗಳನ್ನು ಆ ಕಾಲದಲ್ಲಿ ಕೊಟ್ಟಿರುವ ಕಾಂಗ್ರೆಸಿಗರು ಈಗ 'ಕರ್ತವ್ಯ ಚ್ಯುತ'ರೆಂಬ ಅಪವಾದ ಕೇಳುತ್ತಿರುವುದೇ ಮೊದಲಾದುವನ್ನು ಲಕ್ಷ್ಯಿಸಿ, ಇನ್ನು ಮುಂದೆ ಎಲ್ಲರೂ ಮಾಡಲಾಗುವಷ್ಟನ್ನೇ ಆಡಿ ತೋರಿಸುವ ಅಭ್ಯಾಸವಿಟ್ಟುಕೊಳ್ಳುವುದುತ್ತಮ.

ಇವೆಲ್ಲಾ ರೀತಿಯಿಂದ ಶುದ್ಧೀಕರಣಗೊಂಡ ಸ್ಥಿತಿಯನ್ನಾಧರಿಸಿ ನಡೆಯುವ ಚುನಾವಣೆಯಲ್ಲಿ ಯಾವ ಪಕ್ಷವೇ ಗೆದ್ದು ಬಂದರೂ ಯಾರಿಗೇನು ಆಕ್ಷೇಪ? ಶುದ್ಧ ಹಾಗೂ ಸಂಪೂರ್ಣ ಪ್ರಜಾಪ್ರಭುತ್ವವೆಂದರೆ ಹೀಗೇ ತಾನೆ?

ಒಂದು ವರುಷಾವಧಿ ಬೇಕೇ ಬೇಕು!

...ಯಿಂದ ಎಲ್ಲವನ್ನೂ ತುಲನೆಮಾಡಿ ...ನೋಡುವಾಗ ಮಹಾಚುನಾವಣೆಗೆ ಇಂದಿನಿಂದ ಪೂರ್ಣ ಒಂದು ವರುಷದ ಅವಧಿ ದೊರೆತುದು ಅತ್ಯಂತ ಸಮಾಧಾನಕರ. ವಶ್ಯಕ ಕೂಡಾ, ಯಾವ ಪಕ್ಷಸಂಗಡವು ...ಂತಹ ಪರಿಸ್ಥಿತಿಯಲ್ಲಿದ್ದರೂ, ತಮ್ಮ ...ಂಕೆಯೊಳಗಿನದಾಗಿಂದ ಅವಸರಕ್ಕೀಡಾ 'ಕೆಲಸ ಕೆಟ್ಟಿತು' ಎಂಬ ಪಶ್ಚಾತ್ತಾಪಕ್ಕೆ ಯಿರದಂತೆ ಈ ಅವಧಿಯಲ್ಲಿ ತಂತಮ್ಮ ...ತಿಯನ್ನ ಸುಧಾರಿಸಿಕೊಳ್ಳುವ ಪರಮಾವಧಿ ಪ್ರಯತ್ನ ಮಾಡಬಹುದು.

ಸ್ವರಾಜ್ಯದ ಎಲ್ಲಾ ಆಗುಹೋಗುಗಳ ಮೇಲೆ ಪೂರ್ಣ ಹೊಣೆಗಾರಿಕೆಯಿರುವ ಆ ...ಳತೆಯನ್ನು ಕಟ್ಟಿಕೊಳ್ಳಲು —ಪ್ರಾಯ...ರೆಲ್ಲರಿಗೂ ಮತಾಧಿಕಾರವಿರುವ ...ನಾವಣೆಗಳಲ್ಲ— ಆಗತ್ಯ ...ಳ್ಳ ಎಲ್ಲಾ ಶಕ್ತಿ, ಯೋಗ್ಯತೆಗಳನ್ನು ಸಂಗ್ರಹಿಸಿಕೊಳ್ಳುವ ಕೆಲಸ ಮೊದಲೇ ಆಗಬೇಕು; ಚುನಾವಣಾ ...ತರ ಆ ಕುರಿತು ಪಶ್ಚಾತ್ತಾಪ ಪಡ...ಬೇಕಾಗುವ ಅಂಶವಿರಲೇ ಬಾರದು.

ಒಮ್ಮೆ ಮತದಾನ ಮಾಡಿ, ಪ್ರತಿನಿಧಿಗಳನ್ನು ಆರಿಸಿ ಕಳುಹಿದೆವೆಂದರೆ, ಮತ್ತವರಿಗೆ ಐದು ವರುಷಗಳ ಅವಧಿಯಿದೆ. ಈ ...ವಧಿಯ ನಡುವೆ ತಮ್ಮ ಪ್ರತಿನಿಧಿಗಳನ್ನು ಕರೆಗೆಳಿಸಿಕೊಳ್ಳಬೇಕೆಂದು ಮತದಾರರು ...ಬಯಸಿದರೂ ಹಾಗೆ ಮಾಡುವ ಸಂದರ್ಭ ತೊದಗುವದು ಅತ್ಯಪರೂಪ. ಮಾತ್ರವಲ್ಲ, ಅದು ಸ್ವತಃ ಆ ಮತದಾರ ವರ್ಗಕ್ಕೇನೇ ಭೂಷಣಪ್ರಾಯವಾಗುವಂತಿಲ್ಲ.

ಶಾಸನ ಸಭೆಗಳಲ್ಲಿ ಅಥವಾ ಮಂತ್ರಿಮಂಡಲಗಳಲ್ಲಿ ಇರುವವರು ನಿದಾನಕಾಲ ಏಕಪ್ರಕಾರ ಮತದಾರರಿಗೇನೇ ಹೊಣೆಗಾರರಾಗಿರತಕ್ಕವರೇನೋ ನಿಜ. ಆದರೆ ವ್ಯವಹಾರರಂಗದಲ್ಲಿ ಒಮ್ಮೆ ಆರಿಸಿಕೊಂಡ ಪ್ರತಿನಿಧಿಗಳನ್ನು ಮಧ್ಯಾವಧಿಯಲ್ಲಿ ಮತದಾರರಿಳಿಸಿಕೊಳ್ಳುವದು ಸುಲಭಕರ ಘಟನೆಯಲ್ಲ; ಅಲ್ಲಿ ಕಹಿಭಾವನೆಗಳು, ಖಂ...

...ಚುನಾವಣೆಗೆ ಮತದಾರರೆಲ್ಲರೂ ಇಂದಿನಿಂದಲೇ ತಯಾರಾಗಬೇಕು. ಸ್ವತಂತ್ರ ಭಾರತದ ಮತದಾರರಿಗೆ, ಮತ್ತಂತೆಯೇ ಉಮೇದ್ವಾರರಿಗೆ ವಯಃಪ್ರಬುದ್ಧತೆಯ ನಿಬಂಧನೆಯಿದೆ ಹೊರತು ಬುದ್ಧಿ ಪ್ರೌಢಿಮೆಯ ನಿರ್ಬಂಧವೇನೂ ಇಲ್ಲ. ಹೀಗಾಗಿ ಕೇವಲ ಪ್ರಾಯ ಬಂದುದರಿಂದ ಚುನಾವಣೆಗಳನ್ನು ಅವರು ನಡೆಸಬಲ್ಲರು. ದ'ೂ ಬುದ್ಧಿ ಬರದುದರಿಂದಾಗಿ ಅಂಥವರು ನಡೆಸುವ ಚುನಾವಣೆಗಳು ಸಾರ್ಥಕವಾಗಲಾರವು.

ಕೇವಲ ಪದವಿ ಸಂಪಾದನೆ, ನಾಮ ಮಾತ್ರ ಯೋಗ್ಯತಾ ಸಾಧನೆಗಾಗಿ ಒಂದರಿಂದ ಐದು ವರುಷಗಳ ವರೆಗಿನ ತಂಬೇಕೀ ಅವಧಿಗಳಿವೆಯಂತೆ-- ರಾಷ್ಟ್ರದ ಪೂರ್ಣ ಸ್ವಾತಂತ್ರ್ಯ ಮತ್ತು ತದನುಗುಣವಾದ ಹಕ್ಕು ಬಾಧ್ಯತೆಗಳ ಭಾರ ಹೊರುವ ಆಡಳಿತೆಯನ್ನು ಕಟ್ಟುವಂತಹ ಮತದಾರರಾಗುವ ಮಹಾ ಯೋಗ್ಯತಾ ಸಂಪಾದನೆಗೆ ಒಂದು ವರುಷದ ಅವಧಿಯಾದರೂ ಬೇಡವೆ? ಬೇಕೇ ಬೇಕು. ಆದ್ದರಿಂದ ಇಂದಿನಿಂದಲೇ ಮತದಾರರ ಅರ್ಹತೆ ಮೂಡಿಸುವ ಪ್ರಚಾರ ಮತ್ತು ಇತರ ವ್ಯವಸ್ಥೆಗಳಾಗಬೇಕು.

ಚುನಾವಣೆಗಳಲ್ಲಿ ಪಕ್ಷ ಪಂಗಡಗಳು ಮತದಾರರನ್ನು ತಂತಮ್ಮ ಕಡೆಗೆಳೆದುಕೊಳ್ಳುವುದಕ್ಕಾಗಿ ನಡೆಸುವ ಪ್ರಚಾರವಂತೂ ಇದ್ದದ್ದೇ. ಮತದಾರರಲ್ಲಿ ಯೋಗ್ಯತೆ ತುಂಬಿಸುವ ಶಿಕ್ಷಣವೆಂದು ಇಂತಹ ಪ್ರಚಾರಗಳನ್ನು ಕಟ್ಟಿಕೊಳ್ಳಲಾಗುವುದಿಲ್ಲ. ವೋಟರು ಅಜ್ಞಾನಿಗಳಾಗಿದ್ದರೆ, ಅವರ ಅಜ್ಞಾನವನ್ನೇ ದುರುಪಯೋಗ ಪಡಿಸಿಕೊಂಡು—ವೋಟರರ ಸ್ವಬುದ್ಧಿಗೆ, ಚುನಾವಣಾ ಪಕ್ಷಗಳ ಪ್ರಚಾರವು ಒಪ್ಪುವಾಗಿ ರಾಜಕೀಯ...

ಭಾರತದ ಇಂದಿನ ಸ್ಥಾನಮಾನ-ರಾಜ್ಯಘಟನೆ—ಮತದಾರರ ಹೊಣೆಗಾರಿಕೆ ಮತ್ತು ಮತದಾನದಿಂದಾಗುವ ಪರಿಣಾಮ ಪ್ರತಿಕ್ರಿಯೆ— ರಾಷ್ಟ್ರದ ಮತ್ತು ಲೋಕದ ಹಿಂದಿನ, ಇಂದಿನ, ಮುಂದಿನ ಸ್ಥಿತಿ ಪರ್ಯಾಯಗಳು—ಯಾವ ಮಾದರಿಯ ಆಡಳಿತೆ ಬಂದರೆ ಯಾವುದು ಹೇಗಾಗಬಲ್ಲುದು—ಮುಂತಾದ ಸಾಮಾನ್ಯ ರಾಜಕೀಯ ತಿಳುವಳಿಕೆಯನ್ನು ಮತದಾರರಲ್ಲಿ ಮುಂದಾಗಿ ಮೂಡಿಸುವುದು ಅಗತ್ಯ. ಈ ಜ್ಞಾನದಾನ ಮಾಡಬಲ್ಲ ನಿಷ್ಪಕ್ಷಪಾತಿ ವಿಧಾನಗಳು ಅಸ್ತಿತ್ವದಲ್ಲಿ ಬರಬೇಕಾದುದು ಮುಖ್ಯ. ಹೀಗಾದಲ್ಲಿ ವೋಟರರ ಸ್ವಬುದ್ಧಿಗೆ, ಚುನಾವಣಾ ಪಕ್ಷಗಳ ಪ್ರಚಾರವು ಒಪ್ಪುವಾಗಿ ರಾಜಕೀಯ ಬಹುದು; ಬದಲಿಗೆ ಪೂರ್ಣ ಟೊಳ್ಳಾಗಿರುವ ಮತದಾರರ ಬುದ್ಧಿಯಾಗಿಯೇ ಪಕ್ಷ ಪಂಗಡಗಳ ಮಾತುಗಳು ಸೇರಿಕೊಂಡರೆ, ಅಲ್ಲಿ ಎಂತೆಂತಹ ಕಸಕಂಟಕಗಳು ಜಮೆಯಾಗಬಹುದೋ ಹೇಳುವುದು ಅಸಾಧ್ಯ.

ಆದ್ದರಿಂದ ಈಗ ಮುಂದಾಗಿ ಮತ್ತು ಎಲ್ಲಕ್ಕಿಂತ ಹೆಚ್ಚಿನದಾಗಿ, ಜನತೆಯನ್ನು ಬುದ್ಧಿ ಯೋಗ್ಯತೆಯ ಮಟ್ಟಿಗೆ ಸ್ವಾವಲಂಬಿಗಳಾಗುವಂತೆ ಮಾಡಬೇಕಾಗಿದೆ. ಅಂತೆಯೇ ಚುನಾವಣೆಗಿಳಿಯುವ ರಾಜಕೀಯ ಪಕ್ಷಗಳೂ ಮುಂದಾಗಿ ಗಮನಿಸಬೇಕಾದ ಕೆಲವು ನೀತಿ ಸೂತ್ರಗಳಿವೆ.

ಭಾರತವು ಜಾತ್ಯತೀತ ಜನತಾರಾಜ್ಯವಿರುವುದರಿಂದ, ಜಾತೀಯ ಭಾವನೆಯನ್ನು ಉದ್ರೇಕಿಸುವ ಅಥವಾ ಜಾತೀಯ ಪಕ್ಷಪಾತತೆಯನ್ನು ತೋರಿಸುವ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K

The Canara Mutual Assurance Co. Ltd.
ESTD 1935. H. O. UDIPI

Canara Mutual occupies a unique position of distinction amongst the sound Life Offices in India. Constituted as a Mutual Company, the entire profits are shared by the participating Policy-holders alone, there being no share-holders It has paid bonus since inception and in all the Valuations conducted on progressively stringent basis it has shown a surplus The Company has maintained its reputation by fair treatment For more details about this Progressive Mutual Life Office, write to-day to its Head Office

ಈ ಕಾಲದ ಪ್ರಸಿದ್ಧರು

ಅಪ್ರಜ್ಞಾತರಾಗಿದ್ದವರು ಸ್ಥಳ, ಕಾಲ ವಿದ್ಯಮಾನಗಳ ಪ್ರಾಮುಖ್ಯತೆಯ ದೆಸೆಯಿಂದ ಪ್ರಸಿದ್ಧಿಗೆ ಬರುವದಿದೆ. ನೇಪಾಳ, ಟಿಬೇಟುಗಳ ವಿಶೇಷ ಪರಿಸ್ಥಿತಿ ಮತ್ತು ಈಗಿನ ಅಂತರ್ರಾಷ್ಟ್ರೀಯ ಅಸಾಮಾನ್ಯ ಘಟನೆಗಳು, ಇದುವರೆಗೆ ಕತ್ತಲೆಯೊಳಗಿದ್ದ ಕೆಲವು ಮುಖಗಳನ್ನು ಬೆಳಕಿಗೆ ಹಾಕಿವೆ. ವಿಶೇಷ ವಿದ್ಯಮಾನಗಳು ಲೋಕರಂಗದಲ್ಲಿ ನಾಟಕಗಳಂತೆ ನಡೆದು ಮುಗಿಯುವವುಗಳವೆ; ಅವು ತಾತ್ಕಾಲಿಕ ಪ್ರದರ್ಶನಗಳು. ನಡೆಯುತ್ತಿರುವಷ್ಟು ಹೊತ್ತೂ ಅವುಗಳಲ್ಲಿಯ ಪಾತ್ರಧಾರಿಗಳು ಎಲ್ಲರ ದೃಷ್ಟಿಯನ್ನು ಸೆಳೆಯುತ್ತಾರೆ. ಇಂದು ಅಂತಹ ಹೊಸ ನಾಟಕ ಮತ್ತು ಹೊಸ ಹೊಸ ಪಾತ್ರಧಾರಿಗಳನ್ನು ಕಾಣುತ್ತಿದ್ದೇವೆ.

ಟಿಬೇಟ್–ನೇಪಾಲ

ಈ ದಿನ ಪ್ರಪಂಚದ ಲಕ್ಷ್ಯವನ್ನಾಕರ್ಷಿಸಿರುವ ಟಿಬೇಟ್ ಮತ್ತು ನೇಪಾಳಗಳೆರಡೂ ಸಾಮಾನ್ಯ ಸ್ಥಿತಿಯಲ್ಲಿ ತೀರಾ ಕಡೆಗಣಿಸಲ್ಪಟ್ಟಿದ್ದ ತುಂಡು ರಾಷ್ಟ್ರಗಳು; ಲೋಕದ ಗಮನ ಬೀಳದಷ್ಟು ಮರೆಯಲ್ಲಿರುವ ನೆಲೆಗಳು. ಎರಡೂ ಹಿಮಾಲಯದ ತಪ್ಪಲಲ್ಲಿವೆ. ಹಿಮಾಲಯವೆಂಬುದು ದೂರದಿಂದ ಶ್ಲಾಘನೆ ಪಡೆಯುವುದಕ್ಕಲ್ಲದೆ ಸಂಬಂಧವಿಟ್ಟುಕೊಳ್ಳಲಿಕ್ಕಾಗದಂತಹ ನೆಲೆ. ಅದರ ಎಡೆಯಲ್ಲಿ ಸಿಕ್ಕಿಕೊಂಡಿರುವ ಟಿಬೇಟ್ ಮತ್ತು ನೇಪಾಲಗಳು ಸುಗಮ ಸಂಪರ್ಕಕ್ಕೆಂತೂ ಆಗುವಂತಹವಲ್ಲ; ಶ್ಲಾಘನೆ ಗಳಿಸುವ ಯಾವುದೇ ಮಹತ್ವಿಕೆಯಾದರೂ ಅವುಗಳಲ್ಲಿಲ್ಲ. ಈ ಕಾಲದಲ್ಲಿ ಅಸಾಮಾನ್ಯ ಮತ್ತು ಅವ್ಯವಹಾರ್ಯ ಸಾಧು ಪ್ರಾಣಿಗಳನ್ನು ಬಹುದಾದ ‘ಲಾಮಾ’ಗಳ ವರ್ಚಸ್ಸಿನೊಳಗಿರುವ ತುಂಡು ಭೂಮಿ ಟಿಬೇಟು; ಒಂದು ರೀತಿಯ ಸಾತ್ವಿಕತೆ ಅಥವಾ ಜಡತೆ ತುಂಬಿರುವ ದಲಾಯಿ ಲಾಮಾ, ಲಾಮಾಗಳು ಮತ್ತವರ ಅನುಯಾಯೀ ಟಿಬೇಟ್ ಜನರು ರಾಜಕೀಯ ಚಾತುರ್ಯವಾವುದನ್ನೂ ಅರಿತವರಲ್ಲ. ಆಧುನಿಕ ಜಗತ್ತಿನೊಡನೆ ಸಂಬಂಧವಿಟ್ಟುಕೊಳ್ಳುವಷ್ಟು ವ್ಯವಹಾರ ಜ್ಞಾನವೂ ಅವರಲ್ಲಿಲ್ಲ. ಟಿಬೇಟಿನ ಮೇಲೆ ಮೂರು ಶತಮಾನಗಳಿಗೂ ಮಿಕ್ಕಿದ ಅವಧಿಯಿಂದ ತನ್ನ ಮೇಲಧಿಕಾರವಿಟ್ಟುಕೊಂಡಿದ್ದ ಚೈನಾ ಮತ್ತು ಟಿಬೇಟಿನ ನೆರೆಯಲ್ಲಿದ್ದು ಅವರೊಡನೆ ಕೆಲವೊಂದು ಹಕ್ಕು ಬಳಕೆಯಿರುವ ಭಾರತ ಇವೆರಡರ ದೆಸೆಯಿಂದಲೇ ಟಿಬೇಟಿನ ಹೆಸರು ಈ ಮೊದಲಾದರೂ ಅಂತರ್ರಾಷ್ಟ್ರೀಯ ರಂಗದಲ್ಲಿ ಕೇಳಿಬರುತ್ತಿತ್ತು; ಈ ಬಾರಿಯೂ ಹಾಗೆಯೇ.

ನೇಪಾಳದ ಘೂರ್ಖರು ಮೇಲ್ದರ್ಜೆಯ ಯೋಧಜನಾಂಗವೆನ್ನೋಣ ನಿಜ. ಆದರೆ ಭಾರತದಲ್ಲಿ ಬ್ರಿಟಿಷ್ ಆಡಳಿತೆಯಿದ್ದಾಗ, ಈ ಘೂರ್ಖ ಸಿಪಾಯಿಗಳು ಹೋಗಿನ ಯುದ್ಧರಂಗಗಳಲ್ಲಿ ತಮ್ಮ ಯೋಧತ್ವವನ್ನು ಪ್ರದರ್ಶಿಸಿ ಹೆಸರು ಗಳಿಸಿದ್ದರೇ ಹೊರತು ಸ್ವತಃ ನೇಪಾಲ ಭೂಮಿಯು ಯಾರನ್ನೂ ಆಕರ್ಷಿಸಿದುದಿಲ್ಲ. ಭಾರತದ ಬೇರೆ ಬೇರೆ ವಿಭಾಗಗಳನ್ನು ಬ್ರಿಟಿಷ್ ‘ಈಸ್ಟ್ ಇಂಡಿಯಾ ಕಂಪೆನಿ’ಯವರು ಅಂಶಾಂಶವಾಗಿ ಕಬಳಿಸಿಕೊಂಡು, ರಾಜರುಗಳೆಲ್ಲರನ್ನೂ ತಮ್ಮ ಆಶ್ರಿತರನ್ನಾಗಿ ಮಾಡಿಟ್ಟಿದ್ದರೂ ನೇಪಾಳವು ಅಂದಿನಿಂದೀವರೆಗೂ ಸ್ವತಂತ್ರವೇ ಇದೆ. ಅಕ್ಕಪಕ್ಕದ ಸ್ಥಳಗಳಲ್ಲಿಯ ಪ್ಪಳಿಸ್ಸು ಬ್ರಿಟಿಷರು ಜಯವು ಪಡೆದಿದ್ದ ಗಳ ನಂತರ ಕೂಡಾ ನಿಜವಾಗಿಯೂ ನೇಪಾಳದ ಮೇಲೆ ಅಧಿಕಾರದಲ್ಲಿ ಪಡೆದಿದ್ದರು. ಆದರೆ ಆ ಹಿಮಾಲಯದ ತಪ್ಪಲನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳುವ ಪ್ರಯಾಸಕ್ಕಂಜಿಯೇ ನೇಪಾಲವನ್ನು ಸ್ವತಂತ್ರವಾಗಿ ಬಾಳಲು ಬಿಟ್ಟಿದ್ದರೆಂಬುದನ್ನು ಮರೆಯಬಾರದು. ಈ ರೀತಿ ನೇಪಾಲವು ಪೂರ್ಣ ಕಡೆಗಣಿಸಲ್ಪಟ್ಟಿದ್ದ ಭೂಮಿ. ಆ ಭವ್ಯ ಶೂರರಾದ ಘೂರ್ಖರು ಯೋಧವರ್ಗದಲ್ಲಿ ಪಡೆದಂತಹ ಸ್ಥಾನವನ್ನು ನೇಪಾಲವು ರಾಷ್ಟ್ರಪಂಕ್ತಿಯಲ್ಲಿ ಗಳಿಸಿದ್ದಿಲ್ಲ. ಆದರೆ ಪ್ರತಿಯೊಬ್ಬನಿಗೂ ಒಂದಲ್ಲೊಂದು ದಿನವಿದ್ದೇ ಇದೆ ಎಂಬ ನಾಣ್ಣುಡಿಯಂತೆ ಇತ್ತೀಚೆಗಿನ ವಿಶೇಷ ಘಟನೆಗಳ ದೆಸೆಯಿಂದ ಟಿಬೇಟ ಮತ್ತು ನೇಪಾಳಗಳೂ ಜನಪ್ರಸಿದ್ಧಿ ಗಳಿಸಿವೆ. ಅದನುಗುಣವಾಗಿ ನೇಪಾಳದ ರಾಜಧಾನಿ ಕಟ್ಮಂಡು, ಟಿಬೇಟಿನ ರಾಜಧಾನಿ ಲ್ಹಾಸಾ, ಮತ್ತು ಬಗರ್‌ಗಂಜ್, ಭೈರ್ವ ಮೊದಲಾದ ಹೊಸ ಹೆಸರುಗಳೀಗ ಮಾಡಿಕೆಯ ನಾಮಗಳಾಗಿವೆ.

ನೇಪಾಳದ ಮಹಾರಾಜ

ತನ್ನ ಮೂವರು ಗಂಡು ಮಕ್ಕಳು ಮೊಮ್ಮಕ್ಕಳು ಮತ್ತು ರಾಣೀವಾಸದವರೊಂದಿಗೆ ನೇಪಾಳ ಸರಕಾರದ ಹಿಡಿತದಿಂದ ಉಪಾಯದಿಂದ ತಪ್ಪಿಸಿಕೊಂಡು ಕಟ್ಮಂಡುವಿನಲ್ಲಿದ್ದ ಭಾರತ ರಾಯಭಾರಿ ಕಚೇರಿಗೆ, ಮತ್ತಲ್ಲಿಂದ ನವದಿಲ್ಲಿಗೆ ಆಗಮಿಸಲು ಶಕ್ತರಾದುದರಿಂದಷ್ಟೇ ನೇಪಾಳದ ಅರಸರಾದ ಮಹಾರಾಜಾಧಿರಾಜಾ ತ್ರಿಭುವನವೀರ ವಿಕ್ರಮ ಶಾಹ ಮಹದೇವ್. ಅವರ ಹೆಸರು ಸರಿಯಾಗಿ ಕೇಳಿಬರುತ್ತಿದೆ. 44 ವರುಷ ಪ್ರಾಯದ ಈ ತ್ರಿಭುವನವೀರರು ತಾನು ತಪ್ಪಿಸಿ ಬರುವಾಗ ತನ್ನ ನಂತರದ ಪಟ್ಟದಾರ ಹಿರಿ ಮಗನನ್ನು, ಮತ್ತು ಹಿರಿಮಗನ ಹಿಂ

ಮಗನನ್ನು ಕೂಡಾ ತನ್ನೊಂದಿಗೆ ಒಯ್ದುದರಿಂದ ಅನುಕ್ರಮವಾಗಿ ನೇಪಾಳದ ಕಿರೀಟವನ್ನು ಧರಿಸಬೇಕಾಗಿದ್ದ ಎರಡು ತಲೆಗಳನ್ನೂ ತಪ್ಪಿಸಿದ್ದಾರೆ. ಕುಟುಂಬ ಸಮೇತ ಮಹಾರಾಜಾ ತ್ರಿಭುವನವೀರರು ನೇಪಾಳದ ಕಟ್ಟುನಿಟ್ಟಿನ ಕಾವಲಿನಿಂದ ನುಸುಳಿಕೊಂಡುದು ಆಶ್ಚರ್ಯಪೂರ್ಣ ಸಾಹಸವೇ. ಮಹಾರಾಜರು ನೇಪಾಳ ಬಿಟ್ಟೊಡನೆಯೇ ನೇಪಾಳೀ ಕಾಂಗ್ರೆಸಿಗರು ಅಂತರ್ಯುದ್ಧ ಹೂಡಿ ರಾಜ್ಯಕ್ರಮಣಕ್ಕೆ ತೊಡಗಿದ್ದಾರೆ. ನೇಪಾಳದಲ್ಲೀಗಲೂ ಹದಿನೆಂಟನೇ ಶತಮಾನಕ್ಕೂ ಉಚಿತವಾದ ನಿರಂಕುಶಾಡಳಿತೆಯೇ ಇದೆ. ಅಲ್ಲಿಯ ರಾಜಪಟ್ಟದಂತೆಯೇ ಪ್ರಧಾನಿಪಟ್ಟವೂ ವಾರಸುಹಕ್ಕಿನ ಪ್ರಕಾರ ಬರುವಂತಹದು. ಮಹಾರಾಜ ಮತ್ತು ಪ್ರಧಾನಿ, ಇಬ್ಬರೂ ರಾಜಕುಟುಂಬದವರೇ. ನೇಪಾಳದಲ್ಲಿ ಪ್ರಜಾ ಜವಾಬ್ದಾರೀ ಸರಕಾರ ಜಾರಿಗೆ ಬರಬೇಕೆಂದು ಅಲ್ಲಿಯ ಜನರ ಚಳವಳ ಕೆಲಕಾಲದಿಂದ ನಡೆದಿದೆ. ಟಿಬೇಟಿನೊಳಗೆ ಚೈನೀ ಕಮ್ಯೂನಿಸ್ಟರು ನುಗ್ಗಲಾರಂಭಿಸಿದೊಡನೆ ಆದರೊತ್ತಿನ ನೇಪಾಳದ ಸ್ಥಾನ ಭದ್ರತೆಗಾಗಿ ಸುಧಾರಣೆಗನ್ನು ಜಾರಿಗೆ ತರಬೇಕೆಂದು ಭಾರತ ಸರಕಾರವು ನೇಪಾಳ ಸರಕಾರವನ್ನು ಆಗ್ರಹಪಡಿಸಿದ್ದಿತು. ಮಹಾರಾಜಾಧಿರಾಜಾ ತ್ರಿಭುವನ ವೀರರು ಅಂತಹ ಸುಧಾರಣೆಗನ್ನೀಯುವುದಕ್ಕೆ ಸಿದ್ಧರಿದ್ದರು. ಆದರೆ ಪ್ರಧಾನಿಗಳ ಕಠೋರ ಹಸ್ತ ಅದಕ್ಕಡ್ಡಬಂತು; ಇನ್ನು ತನಗೆ ಸ್ಥಾನವಿಲ್ಲವೆಂದೇ ತ್ರಿಭುವನ ವೀರರು ಅಲ್ಲಿಂದ ಕಾಲ್ತೆಗೆದುದು. ಈ ರೀತಿ ಪ್ರಜೆಗೆ ಹಿತವನ್ನಿತ್ತು ಹಿಡಿಯಲು ಮತ್ತು ಅದಕ್ಕಾಗಿ ತನ್ನ ಸ್ಥಾನಮಾನಗಳನ್ನು ಬಿಟ್ಟು ಬರುವ ಮನೋಬಲವುಳ್ಳ ಮಹಾರಾಜರು ಬಹಳ ಮಂದಿ ಇರಲಾರರು. ತ್ರಿಭುವನ ವೀರರು ತನ್ನೀ ವಿಶೇಷ ಕೃತ್ಯಗಳಿಂದ ಪ್ರಸಿದ್ಧಿಗೆ ಬಂದಿರುವುದಷ್ಟೇ ಅಲ್ಲ; ತನ್ನ ಪ್ರಜೆಗಳ ಮತ್ತು ಪ್ರಜಾಪ್ರಭುತ್ವವಾದಿಗಳೆಲ್ಲರ ಗೌರವಾದರಗಳಿಗೂ ಪಾತ್ರರಾಗಿದ್ದಾರೆ.

ಪಟ್ಟದ ಕೂಸು

ತ್ರಿಭುವನ ವೀರರು ಭಾರತದ ರಾಯಭಾರಿ ಕಚೇರಿಗೆ ಸೇರಿಕೊಂಡ ಮರುದಿನವೇ ಪ್ರಧಾನ ಮಂತ್ರಿಯಿಂದ ನೇಪಾಳದ ಸಿಂಹಾಸನಕ್ಕೇರಿಸಲ್ಪಟ್ಟ ಮೂರು ವರುಷದ ಶಿಶುವು ಈಗ ಪ್ರಪಂಚದ ಲಕ್ಷ್ಯಕ್ಕೆ ಬಂದಿದೆ; ಭೂಮಿಗಿಳಿದು ಮೂರು ವರುಷವಾಗುವುದರೊಳಗೆ, ಇಷ್ಟು ಪ್ರಸಿದ್ಧಿಗೆ ಬರುವ ಸುಯೋಗವು ಮಾನವ ಜನಾಂಗದ ಚರಿತ್ರೆಯಲ್ಲೇ ಅಪೂರ್ವವೆನ್ನಬಹುದು. ನೇಪಾಲದಲ್ಲಿ ಈಗ ಪಟ್ಟಾರೂಢವಾಗಿರುವ ಶಿಶುವೆಂದರೆ ಮಹಾರಾಜಾ ತ್ರಿಭುವನವೀರರ ಹಿರಿಮಗನ ಎರಡನೇ ಮಗು. ತನ್ನ ಮೂರುಮಂದಿ ಗಂಡು ಮಕ್ಕಳನ್ನು ಮತ್ತು ಹಿರೀ ಮೊಮ್ಮಗನನ್ನು ಕಟ್ಟಿಕೊಂಡು ಹೊರಡುವಾಗ ಮಹಾರಾಜರು ಈ ಮೂರು ವರುಷದ ಕೂಸನ್ನು ಅರಮನೆಯಲ್ಲೇ ಏಕೆ ಬಿಟ್ಟುಬಂದರೋ ಗೊತ್ತಿಲ್ಲ. ತಾನು ಮತ್ತು ತನ್ನ ನಂತರದ ಕ್ರಮಾನುಗತ ವಾರೀಸುದಾರರಾದ ಇಬ್ಬರು ಬದುಕಿ ಉಳಿದರವಾಗಲೇ ನಾಲ್ಕನೇ ತಲೆಯ ಮೇಲೆ ಕಿರೀಟವಿಡುವ ಅಕ್ರಮ ವರ್ತನೆಗೆ ಪ್ರಧಾನಮಂತ್ರಿ ಹೋಗಲಾರರೆಂದು ಮಹಾರಾಜರು ಊಹಿಸಿಬಹುದೆ? ಅಥವಾ ಲಗ್ನವಾಗದವನಿಗೆ ನೇಪಾಳದ ಮಹಾರಾಜ ಗೌರವ ಸ್ವೀಕರಿಸುವ ಹಕ್ಕಿಲ್ಲದಿರುವುದರಿಂದ ಗಂಡುಬಯಿಡನಾದುವ ಎಂಟು ವರುಷದ ಮಗುವಿಗೆ ಮದುವೆಯಾಗದು— ಮದುವೆಯಾಗದೆ ಸಿಂಹಾಸನ ಸಿಗದು—ಎಂದು ಧೈರ್ಯ ಮಾಡಿಕೊಂಡು ಮಹಾರಾಜರು, ಆ ಮಗುವನ್ನು ಅಲ್ಲೇ ಬಿಟ್ಟುಬಂದರೆ? ಇಲ್ಲವೇ ಪ್ರಧಾನಿಯ ಕಠೋರ ಹೃದಯದ ಪರಿಚಯವುಳ್ಳ ರಾಜರು ತಮ್ಮ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಆಸ್ತಮ ಎಂದೆಂದಿಗೂ ಹಿಮ್ಮೆಟ್ಟುವುದು.

ಪುರೋಹಿತ ಶ್ವಾಸಹಾರೀ ಔಷಧಿಯು ಕಳೆದ ಇಪ್ಪತ್ತೆಂಟು ವರುಷಗಳಿಂದಲೂ ನುರಿತ ವೈದ್ಯರಿಂದ ಆಸ್ತಮಕ್ಕೆ ರಾಮಬಾಣವೆಂದು ಹೆಸರಾದುದು.

ಪುರೋಹಿತ ಶ್ವಾಸಹಾರೀ ಔಷಧಿಯು

3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್ ಸೀಸೆಗಳಲ್ಲಿ ರೂ. 3-8-0, ರೂ. 6/- ಮತ್ತು ರೂ. 10/- ಕಿಮ್ಮತ್ತುಗಳಲ್ಲಿ ಎಲ್ಲಾ ಪ್ರಸಿದ್ಧ ಕೆಮಿಸ್ಟರಲ್ಲಿಯೂ ಮತ್ತು ಔಷಧ ಕಾರ್ಖಾನೆ

ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ (ಎಮ್. ಎಸ್. ಎಮ್. ರೈಲ್ವೆ) ಯಲ್ಲಿಯೂ ದೊರೆಯುತ್ತದೆ.

ಪುರೋಹಿತ ಶ್ವಾಸಹಾರೀ

DR. PUROHIT PHARMACY, KOLHAPUR

ವಂಶದೊಂದು ಪಿಳ್ಳೆಯು ದೊರಕದೆ ಹೋದರೆ ವಂಶದ ಪಿತ್ರಾರ್ಜಿತಾಧಿಕಾರವನ್ನೇ ಅತ ರದ್ದುಪಡಿಸಬಹುದೆಂದು ಹೆದರಿ, ಮೂಲಕ್ಕೇನೇ ಕುಠಾರ ಬೀಳದಂತೆ ಮಾಡಲು ಉದ್ದೇಶ ಪೂರ್ವಕ ಆ ಮಗುವನ್ನು ಅಲ್ಲಿ ಬಿಟ್ಟು ಬಂದಿರಬಹುದೆ? ಯಾವುದೂ ಸ್ಪಷ್ಟವಾಗಿಲ್ಲ. ರಾಜಾಧಿ ರಾಜಾ ತ್ರಿಭುವನ ವೀರರು ಅರಮನೆ ಬಿಟ್ಟಂದಿನಿಂದ ಈ ವರೆಗೂ ಯಾವ ಜಾಹೀರು ಹೇಳಿಕೆಯನ್ನೂ ಕೊಟ್ಟಿದಿಲ್ಲ. ಈ ಜಗತ್ಪ್ರಸಿದ್ಧ ಕೂಸು ಸಿಂಹಾಸನವನ್ನಷ್ಟೇ ಅಲ್ಲ; ವಿವಾಹ ಮಂಟಪವನ್ನೂ ಏರಿ ಆಶ್ಚರ್ಯದ ಮೇಲೆ ಆಶ್ಚರ್ಯವನ್ನು ನಿರ್ಮಿಸಿದೆ. ನೇಪಾಳದ ರಾಜ ಕುಲದ ಸಂಪ್ರದಾಯಾನುಸಾರವಾಗಿ ರಾಜನಾಗುವವನು ಅವಿವಾಹಿತನಾಗಿದ್ದರೆ ಸಿಂಹಾಸನವೇರ ಕೂಡದು. ಈ ಪದ್ಧತಿಗನುಸಾರವಾಗಿ ಇದೇ ತಾ 7ರಲ್ಲಿ ರಾಜನೆಂದು ಜಾಹೀರುಪಡಿಸಿದ ಮಗುವಿನ ರಾಜಮೆರವಣಿಗೆಯನ್ನು ಅಲ್ಲಿ ಮಾಡಿರಲಿಲ್ಲ. ಆದರೆ ಆ ಮೇಲೆ ಬಂದ ವಾರ್ತೆಯಂತೆ ಈ ಶಿಶು ರಾಜನಿಗೆ ಪ್ರಧಾನ ಮಂತ್ರಿಯ ಮೊಮ್ಮಗಳೊಡನೆ ಮದುವೆಯಾಯಿತೆಂದು ತಿಳಿದು ಬರುತ್ತದೆ; ವಿವಾಹವಾದರೋ 'ಸ್ವಯಂವರ'ವಿಧಿಗನುಸಾರವಾಗಿ ಜರಗಿತಂತೆ. ವಧುವು ಸ್ವೇಚ್ಛೆಯಿಂದ ವರನನ್ನಾರಿಸಿಕೊಂಡು ವರಿಸುವುದಕ್ಕೇನೇ 'ಸ್ವಯಂವರ'ವೆಂದು ಹೆಸರು. ಮೂವತ್ತಾರು ತಿಂಗಳು ವಯಸ್ಸಿನ ಈ ರಾಜನನ್ನು ಒಲಿದು ಮದುವೆಮಾಡಿಕೊಂಡ ವಧುವಿನ ವಯಸ್ಸೆಷ್ಟು ಎಂಬುದು ಗೊತ್ತಾಗಿಲ್ಲ. ಹುಡುಗಿ ನೇಪಾಳದ ಪ್ರಧಾನ ಮಂತ್ರಿಯ ಮೊಮ್ಮಗಳಾದರೆ ವಿದೇಶ ಮಂತ್ರಿಯ ಮಗಳು. ನೇಪಾಳಿಗಳೆಲ್ಲರೂ ಹಿಂದುಗಳು; ರಾಮಭಕ್ತರು. ಕಾರ್ತಿಕ ಮಾಸದಲ್ಲಿ ಲಗ್ನವಾಗುವುದು ಅಲ್ಲಿ ನಿಷಿದ್ಧವಿದೆ. ಅಂತೂ ಎಲ್ಲವೂ ವಿನೋದಪೂರ್ಣ ಘಟನೆಗಳೇ. ಹೊರಗಿನವರಿಗೆ ತಮಾಷೆಗಳಂತೆ ತೋರಿದರೂ ನೇಪಾಳೀ ಸಂಪ್ರದಾಯಾನುಸಾರವಾಗಿ ಪಟ್ಟಕ್ಕೇರಿದವರನ್ನೇ ಅಲ್ಲಿಯ ರಾಜನಾಗಿ ಗಣಿಸಿ, ಅಲ್ಲಿರುವ ಆಡಳಿತೆಗೆ ಮನ್ನಣೆ ಕೊಡುವುದು ಮಿಕ್ಕ ರಾಷ್ಟ್ರಗಳ ಕ್ರಮಪ್ರಾಪ್ತ ಕರ್ತವ್ಯವಾಗುತ್ತದೆ. ಆದ್ದರಿಂದ ಈಗ ನೇಪಾಳದ ಗಾದಿಗೇರಿರುವ ಮೂರು ವರುಷದ ವಿವಾಹಿತ ಕೂಸಿನ ಹೆಸರಿನಿಂದ ನಡೆಯುತ್ತಿರುವ ಪ್ರಧಾನೀ ಆಡಳಿತೆಯೇ ಅನ್ಯ ರಾಷ್ಟ್ರಗಳಿಂದ ಮನ್ನಿಸಲ್ಪಡುವದೇನೋ!

ಇತರ ಪ್ರಸಿದ್ಧರು

ನೇಪಾಳದ ಒಳಾಂದೋಲನದ ದೆಸೆಯಿಂದ ಬೇರೆ ಕೆಲವು ಹೊಸ ಹೆಸರುಗಳೂ ನಿತ್ಯ ಪಠನೆಗೀಗ ದೊರೆತಿವೆ; ಹೊಸ ಹೊಸ ವ್ಯಕ್ತಿಗಳು ಆಧುನಿಕ ರಾಜಕೀಯ ರಂಗದ ಮುಂಭಾಗದಲ್ಲಿ ಕಾಣಿಸಿಕೊಂಡಿದ್ದಾರೆ. ನವಡಿಲ್ಲಿಯಲ್ಲಿರುವ ಮಹಾರಾಜರ ಪಕ್ಷಪಾತಿಯಾಗಿ ಮತ್ತು ನೇಪಾಳದ ಈಗಿನ ಆಡಳಿತೆಗೆ ವಿರೋಧವಾಗಿ ಹೋರಾಟ ಹೂಡಿರುವ ನೇಪಾಳ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಮ್. ಪಿ. ಕೊಯಿರಾಲಾ, ಅವರು ವಿಶೇಷ ಪ್ರಸಿದ್ಧರಾಗಿದ್ದಾರೆ. ನೇಪಾಳದ ಇಂದಿನ ಹೋರಾಟದ ಸೇನಾನಿ ಇವರೇ. ಆದರೂ ಶ್ರೀ ಕೊಯಿರಾಲರು ವಿಶೇಷತಃ ಬಿಹಾರಿನ ಪಾಟ್ನಾದಲ್ಲೇ ಇದ್ದುಕೊಂಡು ತನ್ನ ಚಟುವಟಿಕೆಗಳನ್ನು ಸಾಗಿಸುತಿದ್ದಾರೆ. ನೇಪಾಳದ ರಾಜರನ್ನು ಮತ್ತು ಭಾರತದ ಪ್ರಧಾನ ಮಂತ್ರಿಗಳನ್ನು ಕಾಣುವ ಉದ್ದೇಶದಿಂದ ಪಾಟ್ನಾದಿಂದ ನವಡಿಲ್ಲಿಗೆ ತನ್ನ ಕೆಲವು ಅನುಯಾಯಿಗಳೊಂದಿಗೆ ಇದೇ ತಾ 13ರಲ್ಲಿ ಹಾರಿ ಬಂದ ಶ್ರೀ ಕೊಯ್ರಾಲಾರ ವಿಮಾನದಲ್ಲಿ ನೇಪಾಳದ ಬಿರ್ಗಂಜ್ ಖಜಾನೆಯನ್ನು ವಶಪಡಿಸಿಕೊಂಡಾಗ ದೊರೆತಿದ್ದ 35 ಲಕ್ಷ ರೂಪಾಯಿಗಳಿದ್ದುವು. ನವಡಿಲ್ಲಿಯ ವಿಲ್ಲಿಂಗ್ಡನ್ ನಿಲ್ದಾಣದಲ್ಲಿ ಆ ವಿಮಾನವು ತಲಪುವಾಗ, ಪೂರ್ವ ಸೂಚನೆ ಬಂದು ಮೊದಲೇ ಅಲ್ಲಿ ಹಾಜರಿದ್ದ ಪೋಲೀಸರು ಮತ್ತು ಕಸ್ಟಮ್ಸ್ ಅಧಿಕಾರಿಗಳು ಆ ವಿಮಾನಕ್ಕೆ ಮುತ್ತಿಗೆ ಹಾಕಿ 35 ಲಕ್ಷ ರೂಪಾಯಿಗಳನ್ನು ವಶಪಡಿಸಿಕೊಂಡಿದ್ದಾರೆ. ತ್ರಿಭುವನ ವೀರರೇ ನೇಪಾಳದ ರಾಜರಿರುವುದರಿಂದ ಅವರ ಹಕ್ಕಿನ ಖಜಾನೆಯನ್ನು ಅವರಿಗೆ ಒಪ್ಪಿಸುವುದಕ್ಕಾಗಿ ತಾನು ತಂದಿದ್ದೆನೆಂದೂ, ಈ ನಿಧಿಯೀಗ ಭಾರತದ ಖಜಾನೆಯಲ್ಲಿ ಭದ್ರವಾಗಿದ್ದು ತನಗಾ ಸಂಬಂಧದ ರಶೀದಿ ದೊರೆತಿರುವುದರಿಂದ ಆ ಕುರಿತು ತನ್ನದೇನೂ ದೂರಿಲ್ಲವೆಂದೂ ಶ್ರೀ ಕೊಯಿರಾಲಾ ಅಂದಿದ್ದಾರೆ. ನೇಪಾಳದ ಕ್ರಮಬದ್ಧ ಹಕ್ಕುದಾರರ ನಿರ್ಣಯವಾದ ಮೇಲೆ ಅವರಿಗೆ ಒಪ್ಪಿಸಲಾಗುವದೆಂದು ಭಾರತ ಸರಕಾರವೀಗ ತನ್ನ ಖಜಾನೆಯಲ್ಲಿ ಈ ಹಣವನ್ನು ಅಮಾನತಿರಿಸಿದೆ. ಡಿಲ್ಲಿಯಲ್ಲಿ ನೇಪಾಳದ ರಾಯಭಾರಿಯಾಗಿರುವವರೂ ಇಂದಿನ ವಿಶೇಷ ವಿದ್ಯಮಾನಕ್ಕನುಗುಣವಾದ ಚಟುವಟಿಕೆಗಳಿಂದ ಹೆಚ್ಚಾಗಿ ಬೆಳಕಿಗೆ ಬಿದ್ದಿದ್ದಾರೆ. ಈ ರಾಯಭಾರಿಯು ನೇಪಾಳದ ಪ್ರಧಾನ ಮಂತ್ರಿಯ ತಮ್ಮ ಮತ್ತು ಮಹಾರಾಜರ ಭಾವನೆಂಟ; ನೇಪಾಳದ ಅಂತರ್ವಿವಾದದ ಯಾವ ಪಕ್ಷವನ್ನು ಕಂಡರೂ ಕಾರ್ಯಭಾರ ನಿರ್ವಹಿಸುತ್ತಿರುವವರು ರಾಜಕುಟುಂಬದವರೇ ಎಂಬುದು ಸ್ಪಷ್ಟ. ಎರಡು ಪಕ್ಷಗಳ ಶಿರಸ್ಸಾಗಿರುವ ಮಹಾರಾಜರು ಮತ್ತು ಪ್ರಧಾನಿಗಳೊಳಗೇನೇ ಕೌಟುಂಬಿಕ ಸಂಬಂಧವಿರುವುದರಿಂದ ಇದು ಮುಖ್ಯತಃ ಕುಟುಂಬ ಕಲಹವೇ ಆಗಿದೆ. ಪ್ರಧಾನೀ ಮೋಹನ್ ಶಮ್ಶೇರ್ ಜಂಗ್ ಬಹದ್ದೂರರ ಮತ್ತು ಮಹಾರಾಜಾಧಿರಾಜಾ ತ್ರಿಭುವನ ವೀರರ ಪೈಕಿ ಮೊದಲನೆಯವರ ಕೈಯಲ್ಲೇ ನೇಪಾಳದ ಅಧಿಕಾರ ಸೂತ್ರವಿರುವಾಗ, ಅವರ ಮನೋವೃತ್ತಿಯು ಹಳೇಯುಗದ ನಿರಂಕುಶಾಧಿಕಾರದ್ದಿರುವುದರಿಂದಲೇ ಇಂತಹ ಪರಿಸ್ಥಿತಿಯೊದಗಿತ. ಅಜ್ಞಾತರಾಗಿದ್ದ ಹಲವರು ಆಂದೋಲನಗಾರರಾಗಿ ತೋರಿಬಂದರು.

ಸ್ಮರಣಾರ್ಹ ವ್ಯಕ್ತಿಗಳು

ನವಂಬರ್ ತಿಂಗಳು ಜನ್ಮದಿನ ಮತ್ತು ಮರಣದಿನಗಳಿಗೂ ಪ್ರಸಿದ್ಧವಾದುದೇ. ಹಿಂದೂ ಧರ್ಮವನ್ನು ಶುದ್ಧೀಕರಿಸಿದ ಸ್ವಾಮಿ ದಯಾನಂದ ಸರಸ್ವತಿಯವರ ವಿಯೋಗದ 67ನೇ ವರ್ಧಂತಿಯು ಇದೇ ತಾ 9ರಲ್ಲಿ ಆಚರಿಸಲ್ಪಟ್ಟಿತು. ನವಡಿಲ್ಲಿಯಲ್ಲಿ ಈ ಕುರಿತು ನಡೆದಿದ್ದ ಸಮಾರಂಭದಲ್ಲಿ ಭಾಷಣವೀಯುತ್ತಾ, ಸರ್ದಾರ್ ವಲ್ಲಭಾಯಿಗಳು ಸ್ವಾಮಿ ದಯಾನಂದರು ತೋರಿಸಿದ ಹಾದಿಯನ್ನನುಸರಿಸಿ, ಈ ಕಷ್ಟಕಾಲದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಮುಂದೊತ್ತುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ನವಂಬರ್ ತಾ. 14 ಶ್ರೀ ಜವಾಹಿರಲಾಲ ನೆಹರುಗಳ 61ನೇ ಹುಟ್ಟು ಹಬ್ಬದ ದಿನ. ಅಂದು ನೆಹರುಗಳಿಗೆ 61 ವರುಷ ತುಂಬಿ (62 ಅಲ್ಲ) 62ನೇ ವರುಷ ಹಿಡಿದಿದೆ. ಆ ದಿನ ನವಡಿಲ್ಲಿಯ ಜವಾಹಿರ ನಿವಾಸಕ್ಕೆ ಮಂತ್ರಿಗಳು, ಪಾರ್ಲಿಮೆಂಟ್ ಸದಸ್ಯರು, ಕಾಂಗ್ರೆಸ್ ನಾಯಕರು ಮತ್ತು ಅಧಿಕ ಸಂಖ್ಯೆಯಲ್ಲಿ ಸಣ್ಣ ಮಕ್ಕಳೂ ಹೋಗಿ ನೆಹರೂಜೀಗೆ ಗೌರವಾದರ ಮತ್ತು ಜನ್ಮ ದಿನದ ಹಾರ ತುರಾಯಿ ಕಾಣಿಕೆಗಳನ್ನರ್ಪಿಸಿದರು. ದೇಶ ಮತ್ತು ವಿದೇಶಗಳಿಂದ ಮೂರು ಸಾವಿರಕ್ಕೂ ಮಿಕ್ಕಿದ ತಂತಿ ಮತ್ತು ಪತ್ರರೂಪದಿಂದ ಜನ್ಮದಿನದ ಶುಭಾಶಯಗಳು ಬಂದಿದ್ದುವು; ನೆಹರೂಜೀ ಅವರೆಲ್ಲರಿಗೂ ಒಟ್ಟಿಗೆ ಕೃತಜ್ಞತೆಯರ್ಪಿಸಿದ್ದಾರೆ. ನವಂಬರ್ ತಾ. 17 ಪಂಜಾಬ್ ಕೇಸರಿ ಲಾಲಾ ಲಜಪತರೈಗಳ ದಿನ. ಈ ಸ್ಮಾರಕೋತ್ಸವಕ್ಕೆ ತ್ತ ಸಂದೇಶದಲ್ಲಿ ಸರ್ದಾರ್ ವಲ್ಲಭಾಯಿಗಳೆಂದಿದ್ದಾರೆ: "ರಾಷ್ಟ್ರದ ಇಂದಿನ ಪರಿಸ್ಥಿತಿಯಲ್ಲಿ ಲಾಲಾ ಲಜಪತರೈಗಳಂತಹ ಜನವಿರುತಿದ್ದರೆ ಅವರ ಸಿಂಹ ಘರ್ಜನೆಯು ಅತ್ಯಲ್ಪಕಾಲದೊಳಗೇನೇ ರಾಷ್ಟ್ರ ಜಾಗ್ರತಿಯನ್ನು ನಿರ್ಮಿಸುತಿದ್ದಿತು. ತಮ್ಮ ಸ್ವಂತ ಕುಂದು ಕೊರತೆಗಳನ್ನು ಮರೆತುಬಿಟ್ಟು ಅನ್ಯರ ದೌರ್ಬಲ್ಯಗಳನ್ನು ತಿದ್ದಲು ಪ್ರಯತ್ನಿಸುವ ಜನರೀಗ ನಮ್ಮ ನಡುವೆ ಕಾಣಿಸುತಿದ್ದಾರೆ. ಇಂಥವರು ತಮ್ಮ ಹಿಂದಿನ ಚರಿತ್ರೆಯನ್ನು ಜ್ಞಾಪಿಸಿಕೊಳ್ಳದೆ, ಅನ್ಯರ ಚರಿತ್ರೆಗೆ ತಮ್ಮದೇ ಆದ ಬಣ್ಣ ಬಳಿಯಲು ನೋಡುತಿದ್ದಾರೆ. ತಾವು ವಿಧಾಯಕ ಸಾಹಸವೆಂದು ಕರೆಯುತ್ತಿರುವ ತಮ್ಮ ಗತಭಗ್ನಾವಶೇಷಗಳ ಮೇಲೆ, ಒಂದು ಹೊಸ ಚೌಕಟ್ಟನ್ನೇರಿಸಿಕೊಳ್ಳುವ ಸಂಕಲ್ಪವಿವರದು. ಸಾರ್ವಜನಿಕರಿಗೆ ನೆನಪು ಕಡಿಮೆ ಎಂಬ ಗಾದೆಯನ್ನಿವರು ಅವಲಂಬಿಸಿ, ತಮ್ಮಂತೆಯೇ ಜನತೆಯೂ ಗತಕಾಲದ ಆಗುಹೋಗುಗಳನ್ನು ಮರೆತಿರಬೇಕೆಂಬ ಭಾವನೆಯಲ್ಲಿದ್ದಾರೆ. ರಾಷ್ಟ್ರೀಯತೆಯ ತಳಹದಿಯನ್ನೇ ಅಡಿಮೇಲು ಮಾಡಲು ಹವಣಿಸುತ್ತಿರುವ ಈ ಜನರಿಗಾವ ಭವಿಷ್ಯ ಕಾದಿದೆ ಎಂಬ ಕುರಿತು ಲವಮಾತ್ರ ಸಂದೇಹವೂ ಇಲ್ಲ. ರಾಷ್ಟ್ರದ ಹೃದಯವು ಶುದ್ಧ ಮತ್ತು ನಿರ್ಮಲವಿದೆ, ಎಂದು ನನಗೆ ಮನದಟ್ಟಾಗಿದೆ. ಸಾರ್ವಜನಿಕ ಸೇವೆಗೆ ಈಗ ಮೊದಲಿನಷ್ಟೇ ಸುಯೋಗವಿದೆ. ನಾವು ಸಣ್ಣ ವಿಷಯಗಳಲ್ಲಿ ಹೊರಳಾಡಿಕೊಂಡಿರದೆ ಮೇಲೆದ್ದು ಬರಬೇಕು."

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲದೆ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿರುವ ಛಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊದಿವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಹುಳು ಕಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಗಾದಿಯೆತ್ತು ಕಾಣೆಯಾಗಿಯದೆ.

ಇದೇ ತಾ 11ರಲ್ಲು ನನ್ನ ಮನೆಯ ಸಮೀಪದ ಹುಲ್ಲುಗಾವಲಿನಲ್ಲಿ ಮೇಯಲು ಬಿಟ್ಟ ಬಿಳಿ ಬಣ್ಣದ, ಸುಮಾರು 1¼ ಗೇಣು ಉದ್ದದ ನೆಟ್ಟಗೆ ಕೊಂಬುಗಳಿರುವ ಬಾಯಿ ಹಲ್ಲು ಕೂಡಿ 4 ವರ್ಷ ಪ್ರಾಯದ ಕಪ್ಪು ಬಾಲದ ನನ್ನ ಗಾಡಿ ಎತ್ತು ಕಾಣೆಯಾಗಿಯದೆ, ಕಲಾಸಿ ಮಾಡಿ ಕೊಟ್ಟವರಿಗೆ ಯೋಗ್ಯ ಬಹುಮಾನ ಕೊಡಲಾಗುವದು. ಗಾಡಿ ಎತ್ತಿನ ಪತ್ತೆ ಇದ್ದವರು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸೆಟ್ಟಿಬೆಟ್ಟು ದಾಸಪ್ಪ ಹೆಗ್ಡೆ
ಪೋಸ್ಟು ಪರ್ಕಳ, ದ. ಕ.
ಹೆಗ್ಗ ತಾರೀಕು 20-11-1950

We accept
Deposits at the following rates:

Current	½%
Savings Bank	2 %
Short-Term	1½%
Fixed – 3 months	1 %
6 „	2 %
12 „	2½%
24 „	3 %

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I.)

ಗುರುವಾರ, ಉಡುಪಿ, ೨೩-೧೧-೫೦

ಆಹಾರ ಸ್ಥಿತಿ

ಕಳೆದವಾರ ಪಾರ್ಲಿಮೆಂಟಿನಲ್ಲಿ ಮತ್ತು ಮದ್ರಾಸು ಎಸೆಂಬ್ಲಿಯಲ್ಲಿ ಆಹಾರ ಪರಿಸ್ಥಿತಿಯ ಸವಿವರ ಚರ್ಚೆಗಳಾಗಿದ್ದುವು. ಪಾರ್ಲಿಮೆಂಟಿನ ಮೂರನೇ ಅಧಿವೇಶನದ ಪ್ರಾರಂಭ ಭಾಷಣದಲ್ಲಿ ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದರು ರಾಷ್ಟ್ರದ ಆಹಾರ ಬಿಕ್ಕಟ್ಟಿನ ಚಿತ್ರವನ್ನು ಮುಂದಿಟ್ಟಿದ್ದರು. ಹೇಗಿದ್ದರೂ 1952ನೇ ಮಾರ್ಚಿಯ ನಂತರ ಹೊರಗಿನಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬಾರದೆಂಬ ಸರಕಾರದ ಗುರಿಯು ಅಚಲವಿದೆ, ಎಂಬುದನ್ನು ಸ್ಪಷ್ಟಪಡಿಸಿದರು. ಸಂದ ವರುಷದಲ್ಲಿ ಮದ್ರಾಸಿನಂತಹ ಸಂಸ್ಥಾನವು ವಿಶೇಷ ಆಹಾರಾಭಾವಕ್ಕೀಡಾಗಿದ್ದಿತು. ಬಿಹಾರ್ ಸಂಸ್ಥಾನವಂತೂ ಕಳೆದ ಫೆಬ್ರವರಿಯಿಂದೀವರೆಗೂ ಬರಗಾಲದ ಪೀಡೆಗಳನ್ನೇ ಅನುಭವಿಸುತ್ತಿದೆ. 'ಆಹಾರಾಭಾವದ ದೆಸೆಯಿಂದ ಒಂದೇ ಒಂದು ಸಾವಾದರೂ ನಡೆಯಲು ನಾವಿರುವ ತನಕ ಬಿಡುವುದಿಲ್ಲ' ಎಂದಿದ್ದ ನಾಯಕರ ಮಾತನ್ನು ಬಿಹಾರು ಹುಸಿಗೊಳಿಸಿದಂತಿದೆ. ಅಲ್ಲಿ ಹೊಟ್ಟೆಗಿಲ್ಲದೆ ಸತ್ತವರ ಮರಣಪಟ್ಟಿಯನ್ನು ಜೈಪ್ರಕಾಶ್ ನಾರಾಯಣರಂತಹ ಜವಾಬ್ದಾರೀ ಮುಂದಾಳುಗಳು ಬೆಳಕಿಗೆ ಹಿಡಿದಿದ್ದಾರೆ; ಎಷ್ಟೋ ಹೃದಯವಿದ್ರಾವಕ ವಾರ್ತೆಗಳು ಅಲ್ಲಿಂದ ಕೇಳಿಬಂದಿವೆ. ಅಲ್ಪ ಮಾತ್ರ ಸುಖ ಅಥವಾ ದುಃಖವನ್ನಾದರೂ ಮಹತ್ತಾಗಿ ಗಣಿಸಿ, ಅತಿರೇಕ ಹಿಗ್ಗುವ ಅಥವಾ ಕುಗ್ಗುವ ಸಾಮಾನ್ಯ ಮನೋವೃತ್ತಿಗನುಸಾರವಾಗಿ ಬಿಹಾರಿನ ಜನತೆಯಲ್ಲಿ ಅನಗತ್ಯ ಗಲಿಬಿಲಿಯೆದ್ದಿರಬಹುದು; ಬಿಹಾರಿನ ಸ್ಥಿತಿಯ ಕುರಿತು ಅತಿಶಯೋಕ್ತಿಯ ಪ್ರಚಾರಗಳಾಗಿರಬಹುದು. ಆದರೆ ವಸ್ತುಸ್ಥಿತಿಯನ್ನೂ ಕೆಲವಂಶ ಮರೆಮಾಚುವ ಅವಶ್ಯಕತೆಯಿರುವ ಮಂತ್ರಿಗಳ ಹೇಳಿಕೆಗಳ ಮೇಲಿಂದ ಕೂಡಾ ಬಿಹಾರಿನ ಪರಿಸ್ಥಿತಿ ಶೋಚನೀಯವಿದೆ ಎಂಬುದು ಸ್ಪಷ್ಟವಾಗಿದೆ. ಮಳೆ, ಗಾಳಿ, ನೆರೆ, ಕಂಪದಂತಹ ಮಾನವನ ಅಂಕೆಮೀರಿದ ಪ್ರಕೃತಿಜನ್ಯ ಅನಾಹುತಗಳಿಂದ ರಾಷ್ಟ್ರದ ಹಲವೆಡೆಯ ಬೆಳೆ ಹಾಳಾಗಿದ್ದಿತು; ಅನಿರೀಕ್ಷಿತ ಅಡಚಣೆಗಳೊದಗಿದ್ದುವು. ಇಂತಹ ಸ್ಥಿತಿಯಲ್ಲಿ ಕೇಂದ್ರ ಹಾಗೂ ಸಂಸ್ಥಾನೀ ಸರಕಾರಗಳು ಪ್ರಸಂಗಾವಧಾನತೆಯಿಂದ ವರ್ತಿಸಿಬುವೆಂದು ಸಮಾಧಾನಪಡಲಡ್ಡಿಯಿಲ್ಲ. ಯುದ್ಧೋತ್ತರ ದುಸ್ಥಿತಿಯಂತಹ ಮನುಷ್ಯ ನಿರ್ಮಿತ ಅಡಚಣೆಗಳ ಪರಿಹಾರವೇ ಮನುಷ್ಯರಿಗೆ ಅತೀವ ಕಷ್ಟಸಾಧ್ಯವನ್ನಿಸಿರುವಾಗ, ನಿಸರ್ಗಬದ್ಧ ಗಂಡಾಂತರಗಳು ಮಾನವ ಶಕ್ತಿಗಟಕದೆ ಹೋಗುವುದೇನೂ ಹೆಚ್ಚಲ್ಲ. ಅಂತಹ ಸಂಕಷ್ಟಗಳುಳಿದಿರುವ ವರೆಗೂ, ಅವುಗಳನ್ನು ಶಮನಿಸುವ ಹೊಣೆಹೊತ್ತ ಸರಕಾರಗಳು ಎಂತಹ ಶಕ್ತಿ ಸಾಹಸ ಪ್ರದರ್ಶಿಸಿದರೂ ಅಪವಾದಗಳಿಂದ ಪಾರಾಗಲಾರವು. ಅಂತೆಯೇ ಇಂದಿನ ಆಡಳಿತೆಯು ದೂರುದೂಷಣೆಗಳಿಗೊಳಗಾಗಿದೆ ಎಂಬುದು ನಿಜವಾದರೂ ಅದು ಕಾಲೋಚಿತವಾಗಿ ಕರ್ತವ್ಯಪಾಲನೆ ಮಾಡುತ್ತಿದೆ, ಎಂಬುದನ್ನೊಪ್ಪಲೇಬೇಕು. ಅನಿರೀಕ್ಷಿತ ಗಂಡಾಂತರಗಳ ದೆಸೆಯಿಂದ ಆಹಾರದ ಕೊರತೆ ಮತ್ತಷ್ಟು ಹೆಚ್ಚಾದುದರಿಂದಲೇ ಈ ವರ್ಷ ಹೊರಗಿನಿಂದ 15ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಆಮದುಪಡಿಸಿಕೊಳ್ಳಬೇಕೆಂದು ಮೊದಲು ನಿಶ್ಚಯಿಸಿದ್ದ ಮೊತ್ತವನ್ನು 31ಲಕ್ಷ ಟನ್ನುಗಳಿಗೇರಿಸಿಕೊಳ್ಳಬೇಕಾಗಿ ಬಂತು. ಪ್ರಕೃತಿಜನ್ಯ ಅನಾಹುತಗಳು 1950ರ ಒಂದೇ ವರುಷದಲ್ಲಿ ಆರುಮಿಲಿಯ ಟನ್ನುಗಳಷ್ಟು ಧಾನ್ಯಗಳ ನಷ್ಟವೊಡ್ಡಿದುವೆಂದು ಅಂದಾಜು ಮಾಡಲಾಗಿದೆ. ಈ ಆಕಸ್ಮಿಕ ನಷ್ಟವಗದಿರುತಿದ್ದರೆ ಹಿಂದಿನ ವರುಷಕ್ಕಿಂತ ಈ ವರುಷ ಸುಮಾರು 15ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯ ಹೆಚ್ಚು ಸಂಗ್ರಹವಾಗುತಿತ್ತೆಂದು ಊಹಿಸಲಾಗಿದೆ. ಬರ್ಮದಿಂದ ಇನ್ನಷ್ಟು ಹೆಚ್ಚು ಅಕ್ಕಿಯನ್ನು ಆಮದು ಪಡಿಸಿಕೊಳ್ಳಲು, ಸಿಲೋನಿನಿಂದ ಸಾಲವಾಗಿ ಅಕ್ಕಿಪಡೆಯಲು ಮಾತುಕತೆ ವ್ಯವಹಾರಗಳಾಗುತ್ತಿವೆ. ಮದ್ರಾಸ್ ಸಂಸ್ಥಾನದಲ್ಲಂತೂ ಕಳೆದ ಮೂರು ನಾಲ್ಕು ವರುಷಗಳಿಂದ ರೇಶನ್ ಪರಿಮಾಣವು ಅನುಕ್ರಮವಾಗಿ ತಗ್ಗುತ್ತಾ ಬಂದಿದೆ. 8ಔನ್ಸ್ ಅಕ್ಕಿ, 4ಔನ್ಸು ಇತರ ಧಾನ್ಯಗಳಂತೆ ವಿತರಣೆ ಮಾಡುವುದಾದರೂ ಸಂಸ್ಥಾನದಲ್ಲಿ ಆರೇಳು ಲಕ್ಷ ಟನ್ನುಗಳನ್ನು ಧಾನ್ಯದ ಕೊರತೆ ಬರುವ ವರುಷವೂ ಕಂಡುಬರಬಹುದೆಂದು ಮದ್ರಾಸಿನ ಆಹಾರ ಮಂತ್ರಿಗಳು ಎಸೆಂಬ್ಲಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಷನ ಗಿಯ ಅಕ್ಕಿಯ ಅಂಶವನ್ನು ಇದಕ್ಕಿಂತ ಹೆಚ್ಚಿಸುವುದು ಅಸಾಧ್ಯವೆಂದು ಸರಕಾರ ತಿಳಿಸಿದೆ. ಹಳ್ಳಿ ವಲಯಗಳ ರೇಶನ್ ಕ್ರಮವನ್ನು ರದ್ದುಪಡಿಸಿ, ಕ್ರಮಬದ್ಧ ರೇಶನಿಂಗ್ ವಲಯಗಳಲ್ಲಿ ಮಾತ್ರ ಅದನ್ನು ಜಾರಿಯಲ್ಲಿಡುವ ಆಲೋಚನೆಯೂ ಸರಕಾರಕ್ಕಿದೆ.

ಒಟ್ಟಿನ ಮೇಲೆ ರಾಷ್ಟ್ರದ ಇಂದಿನ ಆಹಾರ ಸ್ಥಿತಿಚಿತ್ರವು ಆಕರ್ಷಣೀಯವಾಗಿಲ್ಲ. ಈ ನೆಲೆಯಲ್ಲಿ ನಿಂತು ನೋಡುವಾಗ 1952ನೇ ಮಾರ್ಚಿಯೊಳಗೆ ಆಹಾರ ಸ್ವಾವಲಂಬನೆಯ ಗುರಿ ಸೇರುವ ಕುರಿತು ಸಹಜವಾಗಿ ಶಂಕೆಮೂಡುತ್ತಿದೆ. ಮದ್ರಾಸ್ ಸಂಸ್ಥಾನದಲ್ಲಿ ಅಕ್ಕಿ ಬೆಳೆಯುವ ಕ್ಷೇತ್ರಗಳು ಈ ವರೆಗೂ ವರುಷದಿಂದ ವರುಷಕ್ಕೆ ಕಡಿಮೆಯಾಗುತ್ತಾ ಬಂದಿರುವುದನ್ನು ಸರಕಾರವೇ ಒಪ್ಪಿಕೊಂಡಿದೆ. ಮಿಕ್ಕ ಸಂಸ್ಥಾನಗಳ ಸ್ಥಿತಿಯೇನೂ ಈ ಮಟ್ಟಿಗೆ ಮದ್ರಾಸಿಗಿಂತ ಉತ್ತಮವಿಲ್ಲ; ಜಿಲ್ಲಾವಾರಾಗಿ, ಅಥವಾ ಊರೂರನ್ನು ನೋಡುತ್ತಾ ಹೋದರೂ ಭತ್ತ ಸಾಗುವಳೀ ಕ್ಷೇತ್ರಗಳು ಕ್ರಮಶಃ ಕಡಿಮೆಯಾಗುತ್ತಾ ಬಂದಿರುವುದನ್ನು ಅರಿಯಬಹುದು. ಈ ಕಾಲದಲ್ಲಿ ಅಧಿಕ ಬೆಲೆಯ ಭರವಸೆಯಿರುವ ಕಬ್ಬು ಮತ್ತಿತರ ಬೆಳೆಗಳ ಕ್ಷೇತ್ರ ಹೆಚ್ಚಿದಷ್ಟು ಆಹಾರಧಾನ್ಯಗಳ ಕ್ಷೇತ್ರ ವಿಸ್ತಾರಗೊಂಡಿಲ್ಲ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಸಮೇತ ಅಧಿಕಾಹಾರ ಉತ್ಪನ್ನಕ್ಕಾಗಿ ಸರಕಾರವು ವಿವಿಧ ಕಾರ್ಯಕ್ರಮಗಳನ್ನು ಕೈಗೊಂಡಿರುವುದೇನೋ ನಿಜ. ಆದರೆ ಮಹಾಯೋಜನೆಗಳು ಫಲಿಸುವಾಗ ಸಾಕಷ್ಟು ಅವಧಿ ಸಹಜವಾಗಿ ಕಳೆದು ಹೋಗುತ್ತದೆ. ಇನ್ನು ಕೆಲವೇ ವರುಷಗಳೊಳಗೆ ಭಾರತವು ಆಹಾರ ಸಮೃದ್ಧರಾಷ್ಟ್ರವಾಗುವದೆಂಬ ಭರವಸೆಯನ್ನು ಈ ಯೋಜನೆಗಳು ನಿರ್ಮಿಸಬಲ್ಲುವಾದರೂ 1952ನೇ ಮಾರ್ಚಿಯೊಳಗೆ ಆಹಾರ ಸ್ವಾವಲಂಬನೆಯನ್ನಿವು ಸಾಧಿಸುವುವೆಂಬ ಧೈರ್ಯ ಯಾರಿಗೂ ಇಲ್ಲ. "ಎಷ್ಟೆಲ್ಲಾ ಕಷ್ಟಗಳಿವೆ ಎಂಬುದು ನಮಗೆ ಗೊತ್ತಿದೆ; ಆದರೆ ದೇವರ ದಯೆಯಿಂದ ನಾವು ಅವುಗಳನ್ನು ಗೆದ್ದುಕೊಳ್ಳುವೆವು" ಎಂದು ಕೇಂದ್ರ ಸರಕಾರದ ಆಹಾರ ಮಂತ್ರಿ ಶ್ರೀ ಕೆ. ಎಮ್. ಮುನ್ಶಿಗಳು ಈ ಕುರಿತು ತಮ್ಮನ್ನು ತಾವು ಸಂತೈಸಿಕೊಂಡಿದ್ದಾರೆ. 1950ರಲ್ಲಿ 60ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯವನ್ನು ಹಾಳುಮಾಡಿದ ಗಂಡಾಂತರಗಳನ್ನೊಡ್ಡುವ ಆಕಸ್ಮಿಕ ಮಂಗೋಲ ತೋರಿಸಿದ 'ದೇವರು' ಆ ಮೇಲಿನ ಹದಿನೈದು ತಿಂಗಳುಗಳೊಳಗೆ ಆಹಾರ ಸ್ವಾವಲಂಬನೆಗೊಳಿಸುವಷ್ಟು ದಯೆಯಿಡುತ್ತಾನಾದರೆ—ಮುನ್ಶಿಯವರಂತಹ ಆಧುನಿಕ ಮಹರ್ಷಿಗಳು ತಮ್ಮ ತಪಃ ಪ್ರಭಾವದಿಂದ ದೇವರಿಂದ ಅಷ್ಟನ್ನು ಮಾಡಿಸಬಲ್ಲರಾದರೆ— ನಾವೆಲ್ಲರೂ ಕೃತಾರ್ಥರೇ! ಆದರೆ ಆಹಾರೋತ್ಪಾದನೆಯಂತಹ ಕಾರ್ಯವನ್ನು 'ದೈವಚಿತ್ತ'ಕ್ಕೆ ಬಿಟ್ಟುಕೊಟ್ಟು, ಕಣ್ಮುಚ್ಚಿ ಧ್ಯಾನಮಗ್ನರಾಗಿರದೆ, ಕಣ್ಬಿಟ್ಟು ಕಾಲವನ್ನು ನೋಡಿಕೊಳ್ಳಬೇಕಾಗಿದೆ. ಹಾಗೆ ನೋಡುವಾಗ ದೇಶದ ಪರಿಸ್ಥಿತಿ ಮತ್ತು ಸರಕಾರೀ ಯೋಜನೆಗಳು ನಿಶ್ಚಿತ ಮಾಯಿದೆಯೊಳಗೆ ನಿಶ್ಚಿತ ಕಾರ್ಯವನ್ನು ಪೂರ್ಣಗೊಳಿಸುವ ಮಾರ್ಗದಲ್ಲಿವೆಯೋ ಎಂಬ ಕುರಿತು ಸಂದೇಹ ಮೂಡುತ್ತದೆ. ಪ್ರಚಲಿತ ಆಹಾರಾಭಾವ ನಿವಾರಣೆಯ ಮಟ್ಟಿಗೆ, ಸಮಾಧಾನಕರ ಕೆಲಸಮಾಡುತ್ತಿರುವ ಸರಕಾರಗಳು, ಅಲ್ಪಾವಧಿಯೊಳಗೆ ಆಹಾರ ಸ್ವಾವಲಂಬನೆ ಸಾಧಿಸುವ ಮಟ್ಟಿಗೆ ಮಾಡದೆ ಬಾಕಿ ಬಿಟ್ಟಿರುವ ಮುಖ್ಯಾಂಶಗಳಿವೆ. ಸಾಗುವಳೀದಾರ ಜನತೆಯ ಕಷ್ಟ ನಿವಾರಣೆ ಮಾಡಿ, ಅಗತ್ಯವುಳ್ಳ ಪ್ರೋತ್ಸಾಹ, ಹಣ ಮತ್ತು ಉಪಕರಣಗಳ ಸಹಾಯ ಸಲ್ಲಿಸಿ, ಸಾಗುವಳೀ ನೆಲಗಳು ಅಧಿಕ ಬೆಳೆ ಕೊಡುವಂತೆ ಮತ್ತು ಪ್ರತಿಯೊಂದಿಂಚು ನೆಲವೂ ಸಾಗುವಳಿಯಾಗುವಂತೆ ಮಾಡಬೇಕಾದುದೇ ಸದ್ಯದ ಮುಖ್ಯ ಕೆಲಸ. ಅಂತೆಯೇ ಆಹಾರಧಾನ್ಯಗಳ ಕ್ಷೇತ್ರಗಳನ್ನು ಇತರ ಬೆಳೆಗಳು ಆಕ್ರಮಿಸದಂತೆ ನೋಡಬೇಕಾದುದೂ ಅಗತ್ಯ. ಸರಕಾರದ ಅಧಿಕಾಹಾರೋತ್ಪನ್ನ ಕಾರ್ಯಕ್ರಮಗಳು ಧಾನ್ಯೋತ್ಪಾದಕರ ಮಧ್ಯಕ್ಕಿನ್ನೂ ಸಾಕಷ್ಟಿಳಿದಿಲ್ಲ—ಅವಿನ್ನೂ ಅಲಂಕಾರ ಕೋಣೆಯಲ್ಲೇ ಇವೆ ಹೊರತು ರಂಗಭೂಮಿಗೆ ಬಂದಿಲ್ಲ-ಎಂದು ವಿಷಾದದಿಂದ ಹೇಳಬೇಕಾಗಿದೆ. ರೈತರ ಕಡೆಗೆ ಲಕ್ಷ್ಯಬೀಳಲಿ, ಎಂದು ಮತ್ತೊಮ್ಮೆ ಒತ್ತಿ ಹೇಳಬೇಕಾಗಿದೆ.

ಉಡುಪಿ

ಮುನಿಸಿಪಲ್ ವರದಿ ವಿಮರ್ಶೆ— 1949-50ನೇ ವರ್ಷದ ಉಡುಪಿ ಮುನಿಸಿಪಲ್ ಕೌನ್ಸಿಲಿನ ಆಡಳಿತೆಯನ್ನು ಮದರಾಸು ಸರಕಾರವು ವಿಮರ್ಶಿಸುತ್ತಾ ವಸೂಲಿ ಕೆಲಸ ತೃಪ್ತಿಕರವಿದೆಯೆಂದೂ ಆಡಳಿತೆ 'Fair' ಎಂದೂ ಅಭಿಪ್ರಾಯಪಟ್ಟಿರುತ್ತದೆ.

ಮೀಟಿಂಗುಗಳಿಗೆ ಕೌನ್ಸಿಲರುಗಳ ಸರಾಸರಿ ಹಾಜರಿಯು 'Poor' ಎನ್ನಲಾಗಿದ್ದು ಮುಂದೆ ಮೆಂಬರುಗಳು ಉತ್ಸಾಹದಿಂದ ನಗರಾಡಳಿತದಲ್ಲಿ ಭಾಗ ವಹಿಸುವಂತಾಗಬೇಕು, ಸ್ಥಳಾಕ್ರಮಣಗಳ ಪತ್ತೆಗಾಗಿ 'ಟೌನ್ ಸರ್ವೆ' ಜರುಗಬೇಕು. ಸೂಲಗಿತ್ತಿಯರ ಕೆಲಸವು ಇನ್ನಷ್ಟು ಜನಾದರಣೀಯವಾಗುವಂತಾಗಬೇಕು ವಾರಸಂತೆಗಳಲ್ಲದೆ ದಿನವಹಿ ತರಕಾರಿ ಮಾರ್ಕೆಟುಗಳ ನಿರ್ಮಾಣವು ಬೇಗನೆ ಆಗಬೇಕಾಗಿದೆ. ಪಟ್ಟಣದಲ್ಲಿ ಪ್ರತಿಯೊಂದು ಮನೆಗೂ ಪಾಯಿಖಾನೆಯುಂಗೊಡಿಸುವಂತೆ ಪಬ್ಲಿಕ್ ಹೆಲ್ತ್ ಆಕ್ಟನ್ನು ಜ್ಯಾರಿ ಮಾಡಬೇಕು

The Indian Life Assurance
Company Limited.
(Incorporated in Pakistan With Limited Liability)
CHIEF OFFICE FOR INDIA
Ilaco House,
Sir Pherozeshah Mehta Road,
Fort, BOMBAY.

Policy No. 51831 on the life of Mr. A. Madhava Rao.

NOTICE having been given of the LOSS of the above Policy duplicate will be issued, unless objection is lodged with the COMPANY within ONE MONTH from this date.

V. RAYMOND,
MANAGER FOR INDIA.
Dated, 20-11-50.

ಭಾಷಣ ಸ್ಪರ್ಧೆ—ಬೆಂಗಳೂರಿನಲ್ಲಿ ನಡೆಯಲಿರುವ ಮದ್ರಾಸ್ ಯುನಿವರ್ಸಿಟಿಯ ಕನ್ನಡ ಭಾಷಣ ಸ್ಪರ್ಧೆಗಾಗಿ, ಇದೇ ತಾ. 10-11-50ರಲ್ಲಿ ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಜರಗಿದ ದಕ್ಷಿಣ ಕನ್ನಡ ಮತ್ತು ಮಡಿಕೇರಿ ಕಾಲೇಜುಗಳವರ ಪೂರ್ವಭಾವೀ ಸ್ಪರ್ಧೆಯಲ್ಲಿ ಉಡುಪಿ ಎಮ್. ಜಿ. ಎಮ್. ಕಾಲೇಜಿನಿಂದ ಕಳುಹಲ್ಪಟ್ಟಿದ್ದ ಶ್ರೀ ಜಗನ್ನಾಥ ಮೂಡ್ಲಕಟ್ಟೆ ಮತ್ತು ಶ್ರೀ ವೈ. ಶಿವಣ್ಣ ಹೆಗ್ಡೆಯವರ ಪೈಕಿ ನೂ ಪಲನೆಯವರು ಪ್ರಥಮಸ್ಥಾನ ಗಳಿಸಿರುವರು. ಮಂಗಳೂರು ಗವರ್ನಮೆಂಟ್ ಕಾಲೇಜಿನ ಶ್ರೀ ಕರುಣಾಕರ ರೈಯವರಿಗೆ ದ್ವಿತೀಯ ಸ್ಥಾನ ದೊರೆತಿದೆ.

ನೆಹರೂ-ಜಯಂತಿ-ಸರಕಾರೀ ಅಧ್ಯಾಪಕರ ತರಬೇತಿ ಶಾಲೆಯಲ್ಲಿ ಶ್ರೀಮಾನ್ ಸಂಜೀವ ರಾವ್, ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜಯಂತಿಯು ಆಚರಿಸಲ್ಪಟ್ಟಿತು. ನೆಹರೂರವರ ಆದರ್ಶ ಜೀವನದ ಕುರಿತು ಶ್ರೀ ಉಗ್ರಾಣ ಕೃಷ್ಣ ರಾವ್, ಬಿ. ಎ. ಎಲ್. ಟಿ. ಇವರು ಮಾತನಾಡಿದರು.

ಉಡುಪಿ 'ರಾಷ್ಟ್ರಭಾಷಾ ಶಿಕ್ಷಣ ಶಿಬಿರ'ದ ನೇತೃತ್ವದಲ್ಲಿ ಪ್ರಥಮಾ, ಮಧ್ಯಮಾ, ರಾಷ್ಟ್ರಭಾಷಾ ಮತ್ತು ಪ್ರವೇಶಿಕಾ ಪರೀಕ್ಷೆಗೆ ಕೂತ ಎಲ್ಲ ವಿದ್ಯಾರ್ಥಿಗಳೂ ಉತ್ತೀರ್ಣರಾಗಿರುತ್ತಾರೆ. ದಶಂಬರ 1ರಿಂದ 'ಶಿಬಿರ'ದಲ್ಲಿ ಹೊಸತಾಗಿ ತೆರೆಯುವ 'ಪ್ರವೇಶಿಕಾ' ವಿಭಾಗಕ್ಕೆ ಸೇರಲಪೇಕ್ಷಿಸುವವರು ಮುನ್ಸಿಪಲ್ ಹಿಂದೂಸ್ತಾನೀ ಶಾಲೆಯಲ್ಲಿ ಸಾಯಂ 5ರ ನಂತರ ಮುಖತಃ ಭೇಟಿಯಾಗಬೇಕೆಂದು ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕುಕ್ಕಿಕಟ್ಟೆ—ತಾ. ೨೧ರಂದು ಶ್ರೀ. ಬನ್ನಂಜೆ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಭಾರತೀ ವಾಚನಾಲಯದ ಉದ್ಘಾಟನಾ ಸಮಾರಂಭ ನಡೆಯಿತು.

ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ತಾ. ೧೬-೧೧-೫೦ರ ವಿಶೇಷ ಸಭೆಯಲ್ಲಿ ಪಾಸಾದ ಠರಾವು.

ಕರ್ನಾಟಕದ ಜನಾಭಿಪ್ರಾಯದ ಒತ್ತಾಯಕ್ಕೆ ಮನ್ನಣೆ ಕೊಟ್ಟು ಇತ್ತೀಚೆಗೆ ಧಾರವಾಡದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ವಿಶ್ವವಿದ್ಯಾಲಯವನ್ನು ಅಸ್ತಿತ್ವಕ್ಕೆ ತಂದ ಅಧಿಕಾರಿಗಳನ್ನು ಅಭಿನಂದಿಸಿ, ಕರ್ನಾಟಕದ ಒಟ್ಟು ಜನಪದದ ಒಂದು ಜೀವಂತ ಅಂಗವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯನ್ನು ಭಾಷೆಯ ಅಭಿವೃದ್ಧಿಯ ದೃಷ್ಟಿಯಿಂದಲೂ, ಜಿಲ್ಲೆಯ ಸಾರ್ವತ್ರಿಕ ಕ್ಷೇಮಚಿಂತನೆಯ ದೃಷ್ಟಿಯಿಂದಲೂ, ಕರ್ನಾಟಕ ವಿಶ್ವವಿದ್ಯಾಲಯದ ಕ್ಷೇತ್ರವಾಗಿ ಪರಿಗಣಿಸಬೇಕೆಂದೂ ಈ ವಿಷಯದಲ್ಲಿ ಉಚಿತ ಕಾರ್ಯಕ್ರಮಗಳನ್ನು ಶೀಘ್ರವೇ ಕೈಕೊಳ್ಳಬೇಕೆಂದೂ, ಸಂಬಂಧಪಟ್ಟ ಮುಂಬೈ ಮದರಾಸು ಸರಕಾರಗಳಿಗೂ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮದರಾಸು ವಿಶ್ವವಿದ್ಯಾಲಯದ ಅಧಿಕಾರಿಗಳಿಗೂ ಈ ಸಭೆಯು ಮನವಿ ಮಾಡಿಕೊಳ್ಳುತ್ತದೆ.

ಪಂಚಾಯತ ಬೋರ್ಡ್,
ಗ್ರಾಮ ಕಮಿಟಿ,ಶಾಲಾ ಕಾಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ,
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ಕಾಂಗ್ರೆಸಿನ ಕನಿಕರಾರ್ಹ ಸ್ಥಿತಿ!

ಗುಲಾಮಗಿರಿಯ ಭಾರತದಲ್ಲಿ ಬಿಡುಗಡೆಯ ಉಚ್ಚಧ್ಯೇಯ ಮತ್ತು ತದನುಗುಣವಾದ ಧೈರ್ಯ, ಸಾಹಸ, ತ್ಯಾಗಗಳನ್ನು ಪ್ರದರ್ಶಿಸಿದ್ದ ಕಾಂಗ್ರೆಸು ಸ್ವತಂತ್ರ ಭಾರತದಲ್ಲಿಯೂ ಕಾಲೋಚಿತ ಧ್ಯೇಯ, ಧೋರಣೆಗಳನ್ನು ಪ್ರದರ್ಶಿಸಲಾರದೆ ಅವನತಿಗೀಡಾಗುತ್ತ ಬಂದಿರುವುದೀಗ ಬಹುಮುಖದಿಂದ ಕಂಡುಬರುತ್ತಿದೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಅರಿಮನಸ್ಸಿನ ಮಂದ ಪಕ್ಷೀಯರಾಗಿದ್ದ ಸ್ಥಾನಮಾನಗಳೇ, ಈ ಕಾಲದಲ್ಲಿ ಕಾಂಗ್ರೆಸಿಗರದಾಗಿವೆ, ಎಂದರೂ ಹೆಚ್ಚಲ್ಲ.

ಸ್ವಾತಂತ್ರ್ಯಾಂದೋಲನದ ವೇಳೆ ಅಗತ್ಯವೆನ್ನಿಸಿದ್ದ ತ್ಯಾಗ, ಸೇವೆಗಳಿಗಿಂತಲೂ ಹೆಚ್ಚಿನವು ಈ ಕಾಲದಲ್ಲಿ ಅಗತ್ಯವೆಂದು ಕಾಂಗ್ರೆಸ್ ನಾಯಕರು ಮೇಲಿಂದ ಮೇಲೆ ಸಾರುತಿದ್ದಾರಾದರೂ, ಕಾಂಗ್ರೆಸಿಗರೀಗ ದೊರೆತ ಸ್ವಾತಂತ್ರ್ಯದ ಅನುಭೋಗ ಸುಖವನ್ನು ಪಡೆಯುವ ಮೋಹಕ್ಕೆ ಬಿದ್ದಿದ್ದಾರೆ ಹೊರತು ಜನಸೇವಾಸಕ್ತರಾಗಿಲ್ಲ. ಸ್ವಾತಂತ್ರ್ಯ ಸಂಪಾದನೆಗಾಗಿ ಆ ಕಾಲದಲ್ಲಿ ದುಡಿದಿದ್ದಂತೆ, ಅಭಿವೃದ್ಧಿ ಸಾಧನೆಗಾಗಿ ಈ ಕಾಲದಲ್ಲೀನೂ ದುಡಿಯುತ್ತಿಲ್ಲ. ತಮ್ಮ ಹಿಂದಿನ ದುಡಿತ, ತ್ಯಾಗ, ಕಷ್ಟ ಸಹನೆಯ ಅಧ್ಯಾಯವನ್ನೇ ಕಾಂಗ್ರೆಸಿಗರೀಗ ಪೂರ್ಣ ಮುಗಿಸಿಕೊಂಡು ವಿರಾಮ ಸುಖ ಮತ್ತು ಅಧಿಕಾರ ಸುಖಗಳ ಬೇಟೆಯಾಡುವ ಹೊಸ ಅಂಕವಾರಂಭಿಸಿದ್ದಾರೆ.

ಇಂತಹ ಮನೋವೃತ್ತಿ ಹೊಳೆತ ಒಂದು ಸಂಸ್ಥೆಯವರು ಜನತೆಯಿಂದ ದೂರವುಳಿದುಕೊಂಡು ತಮ್ಮೊಳಗೇನೇ ಹೋರಾಟ ನಿರತರಾಗುವುದು ಸ್ವಾಭಾವಿಕ. ಇಂದು ಕಾಂಗ್ರೆಸಿಗರೊಳಗೆ ಆದಾಗುತ್ತಿದೆ.

ಇತ್ತೀಚೆಗಿನ ವರೆಗೂ 'ಕಾಂಗ್ರೆಸ್ ಸೋಶಿಯಾಲಿಸ್ಟ'ರಾಗಿ ಕಾಂಗ್ರೆಸಿನೊಳಗಡೆಯಲ್ಲೇ ಇದ್ದವರು ಕಾಂಗ್ರೆಸಿನಿಂದ ದೂರ ಹೋಗಿ, ಈಗ ಮುಖ್ಯವಾಗಿ ಕಾಂಗ್ರೆಸನ್ನು ಹಿಂದೆ ಹಾಕುವ ಸ್ಪರ್ಧೆಯಲ್ಲಿದ್ದಾರೆ. ಬೊಂಬಾಯಿಯಂತಹ ನಗರಗಳಲ್ಲಿ ಅವರ ವರ್ಚಸ್ಸು ಬಹಳವಾಗಿ ಬೆಳೆದಿದೆಯೆಂಬುದನ್ನೂ, ಸಾಮಾನ್ಯ ಜನರು ಆಹಾರಾಭಾವ ಮತ್ತಿತರ ಅಸಹ್ಯ ಅಡಚಣೆಗಳಿಗೀಡಾಗಿರುವ ಈ ಕಾಲದಲ್ಲಿ ಸೋಶಿಯಲಿಸ್ಟರು ನಡೆಸುತ್ತಿರುವ ಕಾಂಗ್ರೆಸ್ ವಿರುದ್ಧ ಮತ್ತು ಸರ್ವಸಮಾನಾಭಿವೃದ್ಧಿ ಪ್ರಚಾರಗಳು ವಿಶೇಷ ಮನಮುಟ್ಟುತ್ತಿವೆ, ಎಂಬುದನ್ನೂ ಮರೆಯಬಾರದು.

ಆಚಾರ್ಯ ಕೃಪಲಾನಿಗಳಂತಹ ಅಗ್ರಪಂಕ್ತಿಯ ಕಾಂಗ್ರೆಸ್ ನಾಯಕರು ಕಾಂಗ್ರೆಸಿನ ಸದ್ಯದ ನಾಯಕತ್ವ ಮತ್ತು ರೀತಿನೀತಿಗಳ ಮೇಲೆ ದ್ವೇಷ ಕಟ್ಟಿಕೊಂಡು 'ಕಾಂಗ್ರೆಸ್ ಡೆಮೊಕ್ರೆಟಿಕ್ ಫ್ರಂಟ್' ಎಂಬ ಪ್ರತ್ಯೇಕ ಪಂಗಡವನ್ನು ಕಟ್ಟಿಕೊಳ್ಳಲಾರಂಭಿಸಿದ್ದಾರೆ. ಈ 'ಕಾಂಗ್ರೆಸ್ ಪ್ರಜಾಸತ್ತಾ ಮುಖ'ವನ್ನು ಕಾಂಗ್ರೆಸಿನೊಳಗಡೆಯಲ್ಲೇ ರಚಿಸಿಕೊಳ್ಳಲು ತನಗೆ ಅನುಮತಿ ಕೊಡಬೇಕೆಂದು ಆಚಾರ್ಯ ಕೃಪಲಾನಿ ಕಾಂಗ್ರೆಸನ್ನು ಕೇಳಿಕೊಂಡಿರುವುದೇನೋ ನಿಜ. ಆದರೆ ಅಂತಹ ಸಮ್ಮತಿ ದೊರಕುವುದು ಅಸಂಭವ; ಇದನ್ನು ನಿರೀಕ್ಷಿಸಿ 'ಶಿಸ್ತು ಚ್ಯಾರಿಗೆ' ತಯಾರಿದ್ದುಕೊಂಡು, ಮತ್ತು ಭಾವೀ ಚುನಾವಣೆಯಲ್ಲಿ ಸ್ವತಃ ಸ್ಪರ್ಧಿಸುವ ಸಂಕಲ್ಪವಿಟ್ಟುಕೊಂಡೇ ಆಚಾರ್ಯ ಕೃಪಲಾನಿಗಳು ಹೊಸ ಪಂಗಡ ಕಟ್ಟಿಕೊಳ್ಳಲು ಹೊರಟಿರುವರೆಂಬುದು ಗಮನಾರ್ಹವಿದೆ.

ಕಾಂಗ್ರೆಸಿನೊಳಗಿನ ಅತೃಪ್ತರೆಲ್ಲರೂ ಕೃಪಲಾನಿ ಪಾಳಯ ಸೇರಿಕೊಳ್ಳುವ ಸಂಭವವಿದೆ. ಮದ್ರಾಸಿನ ಅತೃಪ್ತಾಗ್ರಗಣ್ಯ ಶ್ರೀ ಟಿ. ಪ್ರಕಾಶಮರು 'ಡೆಮೊಕ್ರೆಟಿಕ್ ಫ್ರಂಟ್'ನ ಆಂಧ್ರಪ್ರಾಂತಿಕ ಬೋರ್ಡಿನ ಸಂಘಟಕರಾಗಿದ್ದು ಕೆಲಸ ನಡೆದಿದೆ. ಕಾಂಗ್ರೆಸ್ ಅಧಿನಾಯಕ ಮಂಡಲಿಯ ತೀರ್ಮಾನಕ್ಕೆ ವಿರುದ್ಧವಾಗಿ ಶ್ರೀ ಟಿ. ಪ್ರಕಾಶಮರು ಮದ್ರಾಸಿನ ಈಗಿನ ಕೆಲವು ಮಂತ್ರಿಗಳ ಮೇಲಿನ ತನ್ನ ಹಳೇ ಆರೋಪಗಳನ್ನು ಮದ್ರಾಸ್ ಎಸೆಂಬ್ಲಿಯಲ್ಲೇ ಮುಂದೊತ್ತಿದ್ದಾರೆ. ಅವುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಮದ್ರಾಸ್ ಕಾಂಗ್ರೆಸ್ ಶಾಸನ ಸಭಾ ಪಕ್ಷವು ನಿರ್ದೇಶಿಸಿದ್ದರೂ, ಶ್ರೀ ಟಿ. ಪ್ರಕಾಶಮರು ಅದಕ್ಕೊಪ್ಪದೆ, ಮುಂದೊತ್ತಿ ಕಾಂಗ್ರೆಸ್ ಶಿಸ್ತಿನ ಗಡೆಗೆ ಉದ್ದೇಶಪೂರ್ವಕ ಆಹ್ವಾನವಿತ್ತಿರುವಂತೆ ಕಾಣುತ್ತದೆ. ಇದೇ ರೀತಿ ಆಚಾರ್ಯ ಕೃಪಲಾನಿಗಳ ಹೊಸ ಪಾಳಯಕ್ಕೆ ಇತರ ಸಂಸ್ಥಾನಗಳಿಂದಲೂ ಬೆಂಬಲ ದೊರೆತಿದೆ.

ಪಶ್ಚಿಮ ಬಂಗಾಳದಲ್ಲಿ ಡಾ। ಪಿ. ಸಿ. ಘೋಷ್, ಡಾ। ಸುರೇಶ ಚಂದ್ರ ಬೆನರ್ಜಿಗಳಂತಹ ಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳ ಸಮೇತ ಹಲವು ಕಾಂಗ್ರೆಸ್ ಶಾಸನ ಸಭಾ ಸದಸ್ಯರು ಮತ್ತು ಇತರರೆಂದು 100ಕ್ಕೂ ಮಿಕ್ಕಿದ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸನ್ನು ತ್ಯಜಿಸಿ 'ಕೃಷಿಕ ಪ್ರಜಾ ಮಜದೂರ್ ಪಾರ್ಟಿ' ಎಂಬ ಹೊಸ ಪಕ್ಷವನ್ನು ಕಟ್ಟಿಕೊಂಡಿದ್ದಾರೆ. ಬಂಗಾಳದ ವಿವಿಧ ಜಿಲ್ಲೆಗಳ ಪ್ರಮುಖ ಕಾಂಗ್ರೆಸಿಗರು ಈ ಗುಂಪಿನಲ್ಲಿದ್ದಾರೆ. ಡಾ। ಪಿ. ಸಿ. ಘೋಷರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದವರೆ; ಪಶ್ಚಿಮ ಬಂಗಾಳದ ಪ್ರಧಾನ ಮಂತ್ರಿಯಾಗಿಯೂ ಇದ್ದವರು. ಸುಭಾಸ್ ಬೋಸ್, ಶರಶ್ಚಂದ್ರ ಬೋಸರಂಥವರು ಕಾಂಗ್ರೆಸಿಗೆ ಇದಿರು ಬಿದ್ದಾಗ ಕೂಡಾ ಕಾಂಗ್ರೆಸಿಗೇನೇ ಗಟ್ಟಿಯಾಗಿ ಅಂಟಿಕೊಂಡು 'ಬಂಗಾಳದಲ್ಲಿ ಕಾಂಗ್ರೆಸ್ ಇದೆ' ಎಂದು ತೋರಿಸಿದವರು. ಇಂಥವರೆಲ್ಲರೂ ಈಗ ಕಾಂಗ್ರೆಸ್ ಬಿಟ್ಟು ಪ್ರತ್ಯೇಕ ಪಾಳಯ ಕಟ್ಟಿಕೊಂಡಮೇಲೆ ಬಂಗಾಳದಲ್ಲಿ ಕಾಂಗ್ರೆಸಿನ ಅವಸ್ಥೆ ಏನಾಯಿತೆಂಬುದನ್ನು ಊಹಿಸಬಹುದು.

ಕೃಪಲಾನಿ ಪಕ್ಷಕ್ಕೂ ಬಂಗಾಳದ ಈ ಹೊಸ ಪಕ್ಷಕ್ಕೂ ಇರುವ ಏಕ ಮಾತ್ರ ಭಿನ್ನಾಭಿಪ್ರಾಯವೆಂದರೆ ಸದ್ಯಕ್ಕೆ ಕಾಂಗ್ರೆಸಿನೊಳಗೇನೇ ಇರುವ ಪ್ರಯತ್ನವು ಆಚಾರ್ಯ ಕೃಪಲಾನಿಗಳವದ್ದಾದರೆ, ಕಾಂಗ್ರೆಸಿನ ಹೊರಗಿರುವುದೇ ಉತ್ತಮವೆಂದು ಘೋಷ ಪಕ್ಷದ ಅಭಿಮತ. ಅಂತೂ ಭಾವೀ ಮಹಾಚುನಾವಣೆಯಲ್ಲಿ ಇವೆರಡು ಪಕ್ಷಗಳೂ ಒಂದುಗೂಡುವುದು ನಿಶ್ಚಯ. ಸೋಶಿಯಲಿಸ್ಟ್ ಪಕ್ಷ ಮತ್ತೀ ಪಕ್ಷಗಳ ಸಂಯುಕ್ತ ಚುನಾವಣಾ ಮುಖಾಮುಖಿಗೆ ಕಲ್ಪವೂ ಏರ್ಪಡುವ ಸಂಭವನೀಯ.

ಈ ಪಕ್ಷಗಳು ಒಕ್ಕೂಟದಿಂದಿರಲ್ಲಿ, ಎಲ್ಲಾ ಪಕ್ಷಗಳೂ ಒಂದಾಗೂಡಿ ಇದಿರು ಬಿದ್ದು ಮುಂದಿ ತಂದೆಯ ಕನಿಕರಾರ್ಹ ಸ್ಥಿತಿಯೇ ಕಾಂಗ್ರೆಸ್ ಸಂಸ್ಥೆಯದಾಗಿಲ್ಲವೆ? ಕಾಂಗ್ರೆಸಿಗರು ಇನ್ನಾದರೂ ಕಣ್ತೆರೆಯುವುದು ಬೇಡವೆ?

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್
ಶಾಖೆ: ಶಿರ್ವ, ದ. ಕ.
ನೋಟೀಸು

ಈ ಕೆಳಗೆ ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದು ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸ್ಲು, ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲಗಳನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡ್ಸಿಕೊಂಡು ಹೋಗುವರೆ ತಪ್ಪಿದಕಾರಣ ಸದರಿಯವರು ಈಡಿಟ್ಟ ನಗಗಳನ್ನು ಇದೇ 1950ನೇ ಇಸವಿ ದಶಂಬರ ತಿಂಗಳ ತಾ 4ನೇ ಸೋಮವಾರ ಬೇಂಕಿಗೆ ಸಲ್ಲತಕ್ಕ ಅಸ್ಲು ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆಯಿದ್ದ ಪಕ್ಷದಲ್ಲಿ, ಸದರಿಯವರು ಈಡಿಟ್ಟ ನಗಗಳನ್ನು ಇದೇ 1950ನೆ ಇಸವಿ ತಾ. 9—12—50ಕ್ಕೆ ಪೂರ್ವಾಹ್ನ ಘಂಟೆ 12ಕ್ಕೆ ಯಾ ಅನಂತರ ಸಮುಗೆ ಯುಕ್ತಕಂಡ ತಾರೀಕಿನಲ್ಲಿ ಸದ್ರಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾದೀತು

ತಾರೀಕು.	ನಂಬ್ರ	ಸಾಲ ಪಡೆದವರ ಹೆಸರು ಮತ್ತು ವಿಳಾಸ	ಮೊಬಲಗು.
6-2-48	23/810	ಸಂತಾನ್ ಅರಾಂಞ, ಡಾಮಿನಿಗ್ ಅರಾಂಞರ ಮಗಳು ಮೊಟ್ಟು, ಶಿರ್ವ	45-0-0
2-3 48	23/967	ಅಂಜೆಲಿನ್ ಸಲ್ಡಾಂಞ, ಜೋಸೆಫ್ ಸಲ್ಡಾಂಞರ ಹೆಂಡತಿ ಮಕ್ಕೇರಿ ಬೈಲು ಶಿರ್ವ	150-0-0
15-5-4	23/1295	ರಾಜು ಪೂಜಾರಿ, ಗುಡ್ಡ ಪೂಜಾರಿಯ ಅಳಿಯ ನಂಗೆಟ್ಟು ಶಿರ್ವ	15-0-0
18-8-48	24/-69	ನಾರು ಪೂಜಾರಿ, ಬೈಕಲ ಪೂಜಾರಿಯ ಅಳಿಯ ಮಟ್ಟಾರು ಶಿರ್ವ	18-0-0
30-8-48	24/342	ಅಚ್ಚಣ್ಣ ಸೆಟ್ಟಿ, ಜಾನು ಸೆಟ್ಟಿಯ ಅಳಿಯ ಕಲತ್ತೂರು ಅಶ್ವತ್ಥ ಗುತ್ತು ಪಾದರು	32-0-0
3-9-48	24/385	ಆನಂದಿ ಬಾಯಿ ಮುದ್ದು ನಾಯ್ಕರ ಹೆಂಡತಿ ಅಗೋಳಿಬೈಲು, ಬಟ್ಟಾಡಿ ಶಿರ್ವ	35-0-0
7-9-48	24/395	ಪಿಯಾದ್ ಗಾಬ್ರಿಲ್, ಲೋರೆನ್ ಕಾಬ್ರೆಲರ ಮಗ ಇಗರ್ಜಿ ಬಳಿ ಶಿರ್ವ	12-0-0
28-1-49	24/970	ಅನಂತಯ್ಯ, ಆಚಾರಿ, ಲಿಂಗಪ್ಪಯ್ಯ ಆಚಾರಿ, ಮುಣಿಯಾಲ್ ಪೋಸ್ಟ್	35-0-0

ಆಫೀಸು. ಶಿರ್ವ.
ತಾರೀಕು. 22-11-50

C D'Souza-
ಏಜಂಟ್.

ಮಂಗಳೂರು

ನೆಹರು ಜನ್ಮದಿನಾಚರಣೆ— ಇದೇ ತಾ 14 ರಲ್ಲು ಮಂಗಳೂರು ಸರಕಾರಿ ಕಾಲೇಜಿನಲ್ಲಿ ಶ್ರೀ ನೆಹರುಗಳ ಜನ್ಮದಿನಾಚರಣೆಯು ಶ್ರೀ ವಿ. ಶ್ರೀನಿವಾಸ ಶರ್ಮರ ಅಧ್ಯಕ್ಷತೆಯಲ್ಲಿ ಜರಗಿತು. ನೋಬೆಲ್ ಪಾರಿತೋಷಕ ಪಡೆದ ಬರ್ಟ್ರೆಂಡ್ ರಸ್ಸೆಲ್ ಅವರನ್ನೂ ಈ ಸಭೆಯಲ್ಲಿ ಅಭಿನಂದಿಸಲಾಯಿ. ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲೂ ನೆಹರು ದಿನಾಚರಣೆ ನಡೆಯಿತು.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R- E. P. 277/50

O S- 16/48

ವಾದಿ— ದಿ. ಕಥೊಲಿಕ್ ಬ್ಯಾಂಕ್ ಲಿಮಿಟೆಡ್ ಯದರ ಸೆಕ್ರೆಟರಿ B- P. ಲೋಬೋ ಪ್ರಭು, ಮಂಗಳೂರು.

ಪ್ರತಿವಾದಿ D. R. ಜೋಶೆಫ್ ಅಂದ್ರಾದೆ

ವಾದಿ ಅರ್ಜಿದಾರನ ಕಡೆಯಿಂದ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ

D. R- ಜೊಶೆಫ್ ಅಂದ್ರಾದೆ- ಲೂವರೆನ್ಸ್ ಅಂದ್ರಾದರ ಮಗ ಉಡ್ಪಿ ತಾಲೂಕು ಕೋಡಿಗ್ರಾಮದ ಬೆಂಗ್ರೆ.

ಸದ್ರಿ ಡಿಕ್ರಿಮೇಲ ನಡ್ಸಿದ ಅಮ್ಲುಜ್ಯಾರಿಯಲ್ಲಿ ಎದ್ರಿಯ ಬಾಬ್ತು ಸ್ಥಿರಾಸ್ತಿ ಲೈಲಾಂ ಮಾಡಿಸುವಗೋಸ್ಕರ ಅಸ್ತಿ ಜಪ್ತಾಗಬೇಕೆಂತ ಮಾಡಿದ ಮೇಲ್ಕಂಡ ಅಮ್ಲುಜಾರಿಯ ತನ್ಕಿ ಬಗ್ಗೆ ತಾ. 6–12–50ಕ್ಕೆ ಮುಡೋಣಾಗಿಯದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಹಗಲು 11ಘಂಟೆಗೆ ಸ್ವತಹಾವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ಅರ್ಜಿದಾರನ ಕಡೆಯಿಂದ ತಿಳಿಯಪಡ್ಸಿಯದೆ.

G. Sanjiva Rao B.A.LL B

Pleader for Petitioner

Kundapur, Date 16-11-50

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು. ಹಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ, ರೂ. 3-; ಸ್ಪೆಶ್ಯಲ್ ರೂ. 5 ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MIS. P. DEVEE, F. DS. (N. J.)

Tollygunge CALCUTTA.

ಸ್ಟಾಕಿಸ್ಟರು ಶಯಾಕಂಪೆನಿ, ಮಂಗಳೂರು

ವಿಮಾನ ನಿಲ್ದಾಣ—ಮಂಗಳೂರಿನ ಸಮೀಪದ ಬಜಪೆಯಲ್ಲಿ ರಚಿಸಲಿರುವ ವಿಮಾನ ನಿಲ್ದಾಣದ ಸ್ಥಳವು 88 ಎಕ್ರೆ ವಿಶಾಲವಾಗಿದೆ. ಈ ಪೈಕಿ 20 ಎಕ್ರೆ ಸ್ಥಳ ಸರಕಾರದ್ದೇ ಆಗಿದೆ. ಉಳಿದ 68 ಎಕ್ರೆ ಖಾಸಗಿ ಪಟ್ಟಾದಾರರ ಸ್ವಾಧೀನವಿದೆ. ಈ 68 ಎಕ್ರೆ ಸ್ಥಳವನ್ನು ಜಿಲ್ಲಾ ಕಲೆಕ್ಟರರು ಸ್ವಾಧೀನ ಪಡಿಸಿ ಕೊಳ್ಳಬೇಕೆಂದು ಮದ್ರಾಸಿನ ಕೇಂದ್ರ ಸಾರ್ವಜನಿಕ ಖಾತೆಯ ಅಸಿಸ್ಟೆಂಟ್ ಇಂಜಿನಿಯರರು ಕಲೆಕ್ಟರರಿಗೆ ತಿಳಿಸಿದ್ದಾರೆಂದೂ, ಆ ಸ್ಥಳವನ್ನು ನೋಡಲು ಅಸಿಸ್ಟೆಂಟ್ ಎಂಜಿನಿಯರ್ ಶ್ರೀ ಬಿ. ಬಲವಂತ ರಾಯರು ಇಲ್ಲಿಗೆ ಬರುವರೆಂದೂ ತಿಳಿದು ಬರುತ್ತದೆ

ದುರ್ಘಟನೆ ಮರಣ—ಮಂಗಳೂರ ಹೊಯ್ಗೆ ಬಜಾರಿನಲ್ಲಿ ಶ್ರೀ ಫೆಲಿಕ್ಸ್ ಅಲ್ಬುಕರ್ಕರ ಹಂಚಿನ ಕಾರ್ಖಾನೆಯ ಮಾಡು ಇದೇ ತಾ 16ರಲ್ಲು ಕುಸಿದುಬಿದ್ದು ಉಂಟಾದ ಅಪಘಾತದಲ್ಲಿ ಆರು ಮಂದಿಗೆ ಜಖಂ ಆಗಿದ್ದ, ಲಕ್ಷ್ಮಿ ಎಂಬಾಕೆ ಆಸ್ಪತ್ರೆಯಲ್ಲಿ ಮರಣ ಪಟ್ಟಿದ್ದಾಳೆ.

ಜಿಲ್ಲಾ ಕಲೆಕ್ಟರರ ಹೇಳಿಕೆ—ಪತ್ರಿಕಾಪ್ರತಿನಿಧಿಗಳ ಸಾಂಪ್ರದಾಯಿಕ ಸಭೆಯಲ್ಲಿ ಜಿಲ್ಲಾ ಕಲೆಕ್ಟರರು ಈ ವಿಚಾರಗಳನ್ನು ಜಾಹೀರು ಮಾಡಿದರು. ಈ ವರುಷದಲ್ಲಿ ಸುಮಾರು ಮುಕ್ಕಾಲು ಲಕ್ಷದಷ್ಟು ಹಣವು ಬಾವಿಕೆರೆಗಳ ದುರಸ್ತಿಗಾಗಿ ಮಂಜೂರಾಗಿದೆ. ಕೆಲಸ ಮಾಡಿಸುವವರು ತಾ- 30–6–51ರೊಳಗೆ ತಮ್ಮ ಕೆಲಸ ಪೂರ್ಣಗೊಳಿಸತಕ್ಕದ್ದು. ತಾ 30–12 50 ರೊಳಗೆ ಈ ಕೆಲಸಗಳಲ್ಲಿ ಅಭಿವೃದ್ಧಿ ತೋರಿಸದವರಿಂದ ಕೊಟ್ಟ ಸಹಾಯ ದ್ರವ್ಯವನ್ನು ಹಿಂತೆಗೆದು ಕೊಳ್ಳಲಾಗುವುದು. ಚಿಕ್ಕ ಚಿಕ್ಕ ನೀರಾವರಿಗಾಗಿ ದೇರೆಬೈಲಿಗೆ ರೂ 1100- ಉಡುಪಿ ಶಿರ್ವಕ್ಕೆ ರೂ 525–ಮಂಜೂರಾಗಿದೆ. ಪನತ್ತಡಿ ಗ್ರಾಮದಲ್ಲಿ ಹುಲಿ ಹೊಡೆಯಲೆಂದು ತಂತಿಕಟ್ಟಿ ಈಡಿಟ್ಟ ಗುಂಡಿನಿಂದ ಮುತ್ತು ನಾಯಕ ಎಂಬವನು ಸತ್ತನೆಂದೂ ಕಾಡಿನಲ್ಲಿ ಈರೀತಿ ತಂತಿ ಕಟ್ಟಿಡುವುದು ಅನ್ಯಾಯವೆಂದೂ ತಿಳಿಸಿದರು.

ಪದ್ಮ ವಿಹಾರ— ಮತ್ತು ಥಿಯಾಸಫಿಕಲ್ ಸಂಘಗಳ ಸ್ಥಾಪನೆಯ ದಿನವು ಇದೇ ತಾ 17 ರಲ್ಲು ಶ್ರೀ ಕೆ ಪಿ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು.

ನಿಧನ—ಇದೇ ತಾ. 16 ರಲ್ಲು ಪಾಯರ್ ಗ್ರೇಡ್ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗಿದ್ದ ಕೊಡಿಯಾಲ್ ಗೋಪಾಲ ರಾಯರು ದಿವಂಗತರಾದರೆನ್ನಲು ವಿಷಾದವೆನಿಸುತ್ತದೆ.

ಠಕಾರಿ ನೋಟುಗಳ ತಯಾರಿಕೆಗೆ ಶಿಕ್ಷೆ—ಕರೆನ್ಸಿ ನೋಟುಗಳನ್ನು ಮಾಡಿದರೆಂಬ ಆರೋಪದ ಮೇಲೆ ಬಂಧಿಸಲ್ಪಟ್ಟ ಕಾಸರಗೋಡಿನ ಸಿನೆಮಾ ಕಂಪೆನಿ ಮಾಲಕರಾದ ಶ್ರೀ ಶಂಕರನಾರಾಯಣ ಶ್ಯಾನುಭಾಗ ಮತ್ತು ಇತರರಿಗೆ ಸೆಶ್ಯನ್ಸ್ ಜಡ್ಜರಾದ ಶ್ರೀ ಕೃಷ್ಣ ಮೂಸೆಯವರು ವಿಚಾರಣೆ ನಡಿಸಿ ಶಿಕ್ಷೆ ವಿಧಿಸಿದ್ದಾರೆ. ಶ್ರೀ ಶಾನುಭಾಗರಿಗೆ ಎರಡು ವರ್ಷ ಕಠಿಣ ಶಿಕ್ಷೆ ಮತ್ತು ಒಂದುಸಾವಿರ ರೂಪಾಯಿ ದಂಡನೆ ಮತ್ತು ದಂಡನೆತೆರಲು ತಪ್ಪಿದರೆ ಒಂಭತ್ತು ತಿಂಗಳ ಕಠಿನ ಶಿಕ್ಷೆ. ಎರಡನೇ ಆರೋಪಿ ಅದೇ ಸಿನೆಮ ಕಂಪೆನಿಯ ಉದ್ಯೋಗಿ ಅನಂತಯ್ಯ ಎಂಬವನಿಗೆ ಮೂರು ಅಪರಾಧಗಳಿಗೆ ಒಮ್ಮೆಲೇ ಅನುಭವಿಸುವ ಮೂರು ವರುಷಗಳ ಸಜೆ ವಿಧಿಸಿದ್ದಾರೆ. ಈ ತಕ್ಸೀರಿಗೆ ಸಂಬಂಧಿಸಿದ ಕಣ್ಣನ್ ಎಂಬವನು ಇನ್ನೂ ತಪ್ಪಿಸಿಕೊಂಡಿದ್ದಾನೆ. ಮಂಗಳೂರಿನಲ್ಲಿ ಪ್ರಿಂಟರ್ ಡೇನಿಯಲ್ ಅರೋನ್ಸ್ ಎಂಬವನು ಈ ಮೊಕದ್ದಮೆಯಲ್ಲಿ ಮಾಫಿ ಸಾಕ್ಷಿಯಾಗಿದ್ದಾನೆ.

ಕೂಳೂರು ಹೊಳೆಗೆ ಸೇತುವೆ—ಕೂಳೂರು ಹೊಳೆಗೆ ಸೇತುವೆ ಕಟ್ಟುವ ಕೆಲಸದ ಪೂರ್ವಸಿದ್ಧತೆ ನಡೆದಿದೆ. ಹಿರಿಯ ಅಧಿಕಾರಿಗಳೊಬ್ಬರು ಈಚೆಗೆ ಅಲ್ಲಿಗೆ ಸಂದರ್ಶನವಿತ್ತು ಕ್ಷೇತ್ರಪರೀಕ್ಷೆ ಮುಗಿಸಿರುವರು.

ಮಹಾಸಭೆ—ಮಂಗಳೂರು ಮುನಿಸಿಪಲ್ ತೆರಿಗೆದಾರರ ಸಂಘದ ಮಹಾಸಭೆಯು ಇದೇ ತಾ 26ನೆ ಆದಿತ್ಯವಾರ ಸಂಜೆ 5-30ಕ್ಕೆ ಮಂಗಳೂರು ಕೊಡಿಯಾಲ್ ಬೈಲಿನ ಬೆಸೆಂಟ್ ಮಂದಿರದಲ್ಲಿ ಜರಗಲಿರುವುದು ಸಂಘದ ವರದಿವಾಚನ ಮತ್ತು ಲೆಖ್ಖಪತ್ರಗಳ ಪರಿಶೀಲನೆ ಹೊಸಬರುಪದ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ಇತ್ಯಾದಿ ಕಾರ್ಯಕ್ರಮಗಳಾಗಲಿರುವವು.

ಎಸ್ ಆರ್ ಎಸ್. ಜೋಮರ್—ಇಲ್ಲಿಯ ಕರ್ನಾಟಕ ಸಂಘದ ಚರ್ಚಾಕೂಟವು ಶ್ರೀ ಎಸ್. ವಿ ಒಡೆಯರವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲಿಗೆ ಕಿಟ್ಟಣ್ಣ ರೈಗಳು ವರದಿಯನ್ನೋದಿದರು. ಕೊನೆಗೆ ಅಧ್ಯಕ್ಷರು "ಜಗತ್ತಿನ ಶಾಂತಿಯು ಯುನೈಟೆಡ್ ರಾಷ್ಟ್ರ ಸಂಘದಿಂದ ಸಾಧ್ಯವೇ!" ಎನ್ನುವ ಕುರಿತು ಮಾತನಾಡಿದರು.

ಚ್ಯೂಡಾಚಾರಿಯವರ ಅಧ್ಯಕ್ಷತೆಯಲ್ಲಿ ... ಜಿಲ್ಲಾ ಬೋರ್ಡು ಕಾರ್ಯಕ್ರಮಗಳೂ ಪ್ರಾರಂಭಗೊಂಡವು.

ಮೊಬಿಯುವ ಪಾಡು— ಬುನಾದಿ ಶಿಕ್ಷಣ ಪ್ರಚಾರ ಹಾಗೂ ಜಿಲ್ಲೆಯೊಳಗಿನ ಚಾರಿತ್ರಿಕ ವಿಷಯಗಳನ್ನು ಸಂಗ್ರಹಿಸುವ ಬಗ್ಗೆ 4 ಮಂದಿ ಸದಸ್ಯರು ತಾ. 9–11–50ರಿಂದ ತಾ 17–11–50ರ ತನಕ ಜಿಲ್ಲೆಗಳ ಚಾರಿತ್ರಿಕ ಸ್ಥಳಗಳ ಪ್ರವಾಸವನ್ನು ಕೈಗೊಂಡರು. ಹಳ್ಳಿಗರಿಗೆ ಕುಟಿತ್ವದ ಹಾಗೂ ಮಿಶ್ರ ಗೊಬ್ಬರದ ವಿಚಾರವಾಗಿ ಬೋಧನೆ ಕೊಟ್ಟರು. ಗಾಂಧೀಜೀಯವರಿಂದ ರಚಿತವಾದ ಬುನಾದಿ ತತ್ವವೇ ಇವರ ಪ್ರಚಾರ ಸಾಧನವಾಗಿರುತ್ತದೆ.

ಬೈಲೂರು—ಬೈಲೂರು ಗಾಂಧಿ ಸ್ಮಾರಕ ಸಂಘದವರ ವತಿಯಿಂದ ಸಾರ್ವಜನಿಕ ಬೇಡ್ಮಿಂಟನ್ ಟೂರ್ನಮೆಂಟನ್ನು ಡಿಸಂಬರ 22ಕ್ಕೆ ಆರಂಭಿಸುವವರಿದ್ದು ತತ್ಸಂಬಂಧ ಪತ್ರವ್ಯವಹಾರ ಮಾಡಲಪೇಕ್ಷಿಸುವವರು ಕಾರ್ಯದರ್ಶಿಗಳಿಗೆ ಬರೆಯಬಹುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶಿರ್ವ— ಹಿಂದೂ ಹೈಸ್ಕೂಲಿನ 'ಶಿಕ್ಷಕರ ಕೂಟ'ದವರು ಅಸ್ಸಾಮು ಸಂಕಷ್ಟ ನಿವಾರಣಾ ನಿಧಿಯ ಸಹಾಯಾರ್ಥವಾಗಿ ಇದೇ ತಾ. 16ರಲ್ಲಿ ಹಿಂದೂ ಶಾಲಾ ಭವನದಲ್ಲಿ 'ಘೋಷಯಾತ್ರೆ' ಎಂಬ ನಾಟಕವನು ಡಿಪ್ಯುಟಿ ಕಲೆಕ್ಟರ್ ಶ್ರೀ ಪಿ. ಯಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಕರ್ನಾಟಕದ ಸುಪ್ರಸಿದ್ಧ

ಬರಹಗಾರ್ತಿಯರಲ್ಲೊಬ್ಬರಾದ

ಸರಸ್ವತಿಬಾಯಿ ರಾಜವಾಡೆ

(ಗಿರಿಬಾಲೆ)ಯವರ ಅಮೂಲ್ಯ ಕೃತಿಗಳು

ಕದಂಬ

(12 ಕತೆಗಳ ಸಂಗ್ರಹ)

ಬೆಲೆ ರೂ. 1—4—0

ಪ್ರಕಾಶ

(ಸೇಟ್ ಗೋವಿಂದದಾಸರ ನಾಟಕದ ಅನುವಾದ)

ಬೆಲೆ ರೂ. 2—0 0

ಆಹುತಿ ಇತ್ಯಾದಿ ಕಥೆಗಳು

(ಕಥಾಸಂಗ್ರಹ)

ಬೆಲೆ ರೂ. 0—12—0

ಪುಣ್ಯಫಲ

(ನೀಳ್ಗತೆ)

ಬೆಲೆ ರೂ. 0—3—0

ಉಡುಪಿಯ

ಬರಹಗಾರ್ತಿಯರಲ್ಲೊಬ್ಬರಾದ

ಮಟ್ಪಾಡಿ ಕಮಲಾಕ್ಷಿಯವರ

ವತ್ಸಲಾ

(ಸುರಸ ಕಾದಂಬರಿ)

ಬೆಲೆ ರೂ. 0—8—0

ಪ್ರತಿಗಳಿಗೆ:

ನವಭಾರತ ಬುಕ್ ಡಿಪೊ, ಉಡುಪಿ

ದೀಪಾವಳಿ ಸಂದೇಶಗಳು! **ರೈತರಿಗೆ ಸುಸಂದರ್ಭ!**

ರೈತರು ಬೆಳಸಿದ ಭತ್ತದಲ್ಲಿ ಸ್ವಂತಖರ್ಚಿನ ಬಗ್ಗೆ ಇಟ್ಟುಕೊಳ್ಳಬಹುದಾದ ಧಾನ್ಯವೆಷ್ಟು?

ರೈತರ ಉಳಿತಾಯವನ್ನು ಅಧಿಕಾರಿಗಳು ನಿರ್ಣೈಸಿ ಸಂಗ್ರಹಿಸುವ ಕ್ರಮ ಹೇಗೆ? ಇತ್ಯಾದಿ.

ರೈತರು ಮತ್ತು ತೋಟಿಗಾರರು

ಅಗತ್ಯವಾಗಿ ಹೊಂದಬೇಕಾದ ಅನುಭವದ ಸಲಹೆಗಳಿಗೆ

ಶ್ರೀ ಎಚ್ ಎಂ ನಾರಾಯಣ ಭಟ್,

(ಫಿರ್ಕಾ ಸಪ್ಲೈ ಅಫೀಸರರಾಗಿದ್ದು ರಾಜೀಯಿತ್ತವರು)

ಪೆರಡಾಲ P. O ಇವರು ಬರೆದು ಪ್ರಕಟಿಸಿದ

"ದಕ್ಷಿಣ ಕನ್ನಡದಲ್ಲಿ ಧಾನ್ಯ ಸಂಗ್ರಹ"

ವೆಂಬ ಪುಸ್ತಕವನ್ನು ಪಡೆಯಿರಿ. ಈ ಪ್ರಕಟಣೆಯು ಮಾಜಿ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರ ಮತ್ತು ಶ್ರೀ ಜಿ. ಕೆ. ಗೋವಿಂದ ಭಟ್ಟರ ಮುನ್ನುಡಿಯನ್ನೊಳಗೊಂಡಿದ.

ಬಿಡಿಪ್ರತಿ ಕೇವಲ 0-8-0. ಮುಂಗಡವಾಗಿ ಹಣ ಕಳುಹಿಸಿದವರಿಗೆ ಟಪ್ಪಾಲು ಚಾರ್ಜು ಉಚಿತ! ನಿಮ್ಮ ನ್ಯೂಸ್ ಏಜೆಂಟರಲ್ಲಿ ವಿಚಾರಿಸಿರಿ. ಪ್ರತಿಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿವೆ.

—ಭಕ್ತಾ ಬ್ರದರ್ಸ್, ನ್ಯೂಸ್ ಏಜೆಂಟ್ಸ್, ಕಾಸರಗೋಡು, (ದ. ಕ.)

ದಕ್ಷಿಣ ಕನ್ನಡ

ಕುಂಬಳೆ— ಜಿಲ್ಲಾ ಕೃಷಿ ಇಲಾಖಾ ಅಫೀಸರರಾದ ಶ್ರೀ ರಾಮಣ್ಣ ರೈಯವರು ತಾ ೧೨ರಂದು ಸೀತಂಗೋಳಿ, ನಾಯ್ಕಾಪು, ಮುಂತಾದ ಸ್ಥಳಗಳ ಬಾಲ್ ಗ್ರೇಡಿಂಗಿಂದಾದ ಕೆಲಸಗಳನ್ನು ಪರಿಶೀಲಿಸಿದರು.

ಕಾಸರಗೋಡು—ತಾ. ೧೪ರಂದು ಅಪರಾಹ್ನ ಸರಕಾರೀ ಹೈಸ್ಕೂಲಿನ ಲೆಬೋರೇಟರಿಗೆ ಸಿಡಿಲುಬಡಿದು ತುಂಬಾ ಹಾನಿಯಾಗಿದೆಯೆಂದು ತಿಳಿದುಬರುತ್ತದೆ.

ಬೆಳ್ತೂರು—ತಾ 9–11–50ರಂದು ಬೆಳ್ಳೂರು ಬೋರ್ಡ್ ಬುನಾದಿ ಶಾಲೆಯಲ್ಲಿ ದೀಪಾವಳಿ ಹಬ್ಬದ ನಿಮಿತ್ತ ಕಾರ್ಯಕ್ರಮಗಳನ್ನೇರ್ಪಡಿಸಲಾಗಿತ್ತು. ಮುಂಜಾನೆ ಶ್ರೀ. ನಾರಾಯಣ ಕಡಂಬಳಿತ್ತಾಯರಿಂದ ಧ್ವಜಾರೋಹಣವೂ, ಸಂಜೆ ಶ್ರೀ. ಎಡ್ನೀರು ಲೋ



Approved from by the Govt. of Mysore Certificated by the Agent of the Govt of Cylone & Indian.

ಸ್ವೀಕಾರ ವಿಮರ್ಶೆ

ದೀಪಾವಳಿ ವಿಶೇಷಾಂಕಗಳು

ವೀಣಾ—ಸಂಪಾದಕರು: ಶಂಕರನಾರಾಯಣ ರಾಯರ ಪ್ರಕಾಶಕರ: ವೀಣಾ ಪಬ್ಲಿಷರ್ಸ್ ಲಿ; ಶಿರ್ವ. ಬೆಲೆ 8 ಆಣೆ

ಶ್ರೀಗಳಾದ ಕುಲಕರ್ಣಿ ಛಿಂಧು ಮಾಧವರ 'ಅವನು ಕೊಟ್ಟಮುತ್ತು' ಶ್ರೀ ಗೋವಿಂದ ಪೈಗಳ 'ನಿನ್ನ ಪಡಸಾಲೆಯುಲಿ' ಶ್ರೀ ಎಂ. ವಿ. ಹೆಗ್ಡೆಯವರ "ಅಬ್ಬರ ಸಪ್ತಾಹ" ಈ ಮೂರು ಬರಹಗಳು ವಿಶೇಷಾಂಕಕ್ಕೊಂದು ವಿಶೇಷ ಕಳೆಯನ್ನು ಕೊಟ್ಟವೆ.

ಜಾನಪದ—ಸಂಪಾದಕ: ನಾರಾಯಣ ರಾವ್ ಕಲ್ಲೆ. ಮಂಗಳೂರು ಬೆಲೆ 0—೧—೬

ಶ್ರೀ ಕೆ. ಕೆ. ಸೆಟ್ಟರ "ಗಾಂಧಿವಾದ ಮತ್ತು ಇತರ ವಾದಗಳ ತುಲನಾತ್ಮಕ ದೃಷ್ಟಿ" ಎನುವ ಲೇಖನವು ವಿಚಾರಣೀಯವಾಗಿರುತ್ತದೆ. ಶ್ರೀ ಈಶ್ವರರು "ಪ್ರಗತಿಶೀಲ ಸಾಹಿತ್ಯ ಚಳವಳಿ" ಶಿರೋನಾಮೆಯಿಟ್ಟುಕೊಂಡು ಬರೆದ ಲೇಖ ಅನುಭವಪೂರ್ಣವಾದುದಲ್ಲ ಉಳಿದವುಗಳು ತಕ್ಕಮಟ್ಟಿಗಿವೆಯೆನ್ನಬಹುದು.

ಪ್ರಕಾಶ—ಉಡುಪಿ, ಸಂಪಾದಕರು ಉ. ವ್ಯಾಸರಾಯರು. ಬೆಲೆ ೦—೨—೦

ಹುಟ್ಟಿದ ನಾಲ್ಕು ವರ್ಷಗಳಲ್ಲಿ ಕನ್ನಡದ ಜನಪ್ರೀತಿ ಮಾಸ ಪತ್ರಿಕೆಯಾಗಿ, ವಾರ ಪತ್ರಿಕೆಯಾಗಿ ಪ್ರಕಾಶಗೊಂಡ ಪ್ರಕಾಶದ ಈ ವಿಶೇಷಾಂಕ ಸರ್ವಾಂಗ ಸುಂದರವಾಗಿದೆ. ಎಂಬತ್ತಕ್ಕೆ ಹೆಚ್ಚು ಪುಟಗಳ ಉತ್ತಮ ವಿಚಾರವನ್ನು ಕೊಡುವುದೆಂದರೆ ಸಾಹಸವೇ. ಅದರಲ್ಲೂ ಶೀ ಲಕ್ಷ್ಮಿ, ಶ್ರೀ ಏರ್ಕಲ ಶಣ್ಯೆ, ಶ್ರೀ ಕೃಷ್ಣಪ್ಪನವರ ಬರಹಗಳು ಅತ್ಯಂತ ಯೋಗ್ಯವಾದವುಗಳಾಗಿವೆ. ಈರೀತಿಯ ಅನುಭವಪೂರ್ಣ ಬರಹಗಳನ್ನು ಪ್ರಕಾಶ ನೀಡುತ್ತಲಿರಲಿ.

ಯುಗಪುರುಷ—ಕಿನ್ನಿಗೋಳಿ, ಸಂಪಾದಕರು: ಕುಡತ್ತೂರು ಅನಂತ ಪದ್ಮನಾಭ ಉಡುಪರು ಮತ್ತು ಎಸ್. ಎಲ್. ನಾರಾಯಣ ಭಟ್ಟರು ಬೆಲೆ ೧—೦—೦

ಮೂರು ವರ್ಷಗಳನ್ನು ದಾಟಿ ನಾಲ್ಕನೆಯ ವರ್ಷಕ್ಕೆ ಪದಾರ್ಪಣ ಮಾಡುತ್ತಿದೆ ಯುಗಪುರುಷ. ನಾಲ್ಕನೆಯ ವರ್ಷದ ವಾರ್ಷಿಕ ವಿಶೇಷಾಂಕವಿದು. ತನ್ನದೇ ಆದ ಸ್ಥಾನಮಾನವನ್ನು ಗಳಿಸಿಕೊಂಡು ಜನಾದರಣೀಯವಾದ ಯುಗಪುರುಷದ ಈ ವಿಶೇಷಾಂಕವೂ ಜನಪ್ರೀತವಾಗುವದರಲ್ಲೇನು ಸಂಶಯವಿಲ್ಲ. ಶ್ರೀಗಳಾದ ಕಾರಂತ, ಗೋವಿಂದ ಪೈ, ಗೊರೂರು, ಹಿರೇಮಲ್ಲೂರ ಈಶ್ವರನ್, ರಂ. ಶ್ರೀ. ಮುಗುಳಿ, ಎಸ್. ಅನಂತ ನಾರಾಯಣ, ಮುಂತಾದ ಹಿರಿಯ ಸಾಹಿತಿಗಳ ವಿಚಾರಾತ್ಮಕ ಬರಹಗಳಿವೆ. ಪ್ರೊ. 'ಕಿಟ್ಟಿ'ಯವರ ಕಲಾತ್ಮಕ ಚಿತ್ರಗಳು ಸಂಚಿಕೆಗೆ ಕಳೆಯನ್ನು ಕೊಟ್ಟಿವೆ. "ಯೋಗಕ್ಷೇಮ" ವಿಭಾಗದಲ್ಲಿ ಕೆಲವು ಪ್ರಶ್ನೆಗಳೂ ಉತ್ತರಗಳೂ ವೈಯಕ್ತಿಕ ಟೀಕೆಗೆ ಎಡೆಗೊಟ್ಟಂತಿವೆ. ಉತ್ತಮ ಅಭಿರುಚಿಯುಳ್ಳ ಪತ್ರಿಕೆಯಾದ 'ಯುಗಪುರುಷ'ದಲ್ಲಿ ಆರೀತಿಯ ಸನ್ನಿವೇಶಕ್ಕೆ ಡೆ ಕೊಡುವುದು ಅಷ್ಟೊಂದು ಶೋಭಿಸುವುದಿಲ್ಲ. ವಿಮರ್ಶೆಯ ವಿಭಾಗವು ತೀರ ಸಪ್ಪೆಯಾಗಿರುತ್ತದೆ.

ಕರ್ಮವೀರ—ಹುಬ್ಬಳ್ಳಿ. ಸಂಪಾದಕರು: ಶ್ರೀ ಹ. ರಾ. ಪುರೋಹಿತರ, ಬೆಲೆ ರೂ ೧-೦-೦

ಕರ್ನಾಟಕದ ಆದರ್ಶವಾರ ಪತ್ರಿಕೆಯಾದ ಕರ್ಮವೀರದ ಈ ದೀಪಾವಳಿ ವಿಶೇಷಾಂಕವು ವಿಷಯ ವೈವಿಧ್ಯತೆಗಳಿಂದಲೂ, ಕಲಾಪೂರ್ಣ ಚಿತ್ರಗಳಿಂದಲೂ ಸಂಗ್ರಾಹ್ಯ ಸಂಚಿಕೆಯಾಗಿರುತ್ತದೆ. ಕಲೆ, ಸಾಹಿತ್ಯ, ಆಧ್ಯಾತ್ಮಿಕ, ಆರ್ಥಿಕ, ಹಾಸ್ಯ, ಮೊದಲಾದ ವಿಚಾರದ ಮೇಲೆ ಬರಹಗಳಿವೆ. ವಿಶೇಷ ಸಂಚಿಕೆಗಳ ಸಂಗ್ರಹವಾದ ಈ ನವಂಬರತಿಂಗಳಲ್ಲಿ ಹೊಂಟ ಉಳಿದೆಲ್ಲ ವಿಶೇಷ ಸಂಚಿಕೆಗಳಿಗಿಂತ ಕರ್ಮವೀರ ಮಿಗಿಲಾಗಿದೆ. ಇಂತಹ ಅಮೂಲ್ಯ ಕೃತಿಗೆ ರೂ ೧ ಎಂದರೆ ಬಹಳ ಕಡಿಮೆಯೆಂದೇ ಹೇಳಬೇಕು. ಕನ್ನಡ ಜನದ ಅಭಿರುಚಿಯನ್ನು ಹೆಚ್ಚಿಸಬಲ್ಲ ಕರ್ಮವೀರ ಇದಕ್ಕಿಂತಲೂ ಮಿಗಿಲಾದ ಸಂಚಿಕೆಯನ್ನು ನೀಡುತ್ತಿರಲೆಂದು ಹಾರೈಸುತ್ತೇವೆ.

ಜಯಹಿಂದ್—ಹುಬ್ಬಳ್ಳಿ ಸಂಪಾದಕರು: ಶಂ. ಬಾ. ಮನಗೋಳಿ. ಬೆಲೆ ೦ ೮—೦

ಸದಾ ವಿಚಾರಾತ್ಮಕ ಬರಹಗಳನ್ನೇ ನೀಡುತ್ತಿರುವ ಜಯಹಿಂದ್ ಸಂಚಿಕೆಯು ಈ ವಿಶೇಷ ಸಂಚಿಕೆಯಲ್ಲೂ 'ಕರ್ನಾಟಕ ಏಕೀಕರಣ ಮತ್ತು ಕ-ವಿಶ್ವವಿದ್ಯಾಲಯ' 'ಸಮಾಜದ ಸ್ವಾತಂತ್ರ್ಯ, ಒಳಜಗಳ, ವಿಮರ್ಶಕನ ಹಾದಿ, ಬೇಕನ್ನರ ತತ್ವಗಳು, ಮುಂತಾದ ವಿಚಾರಾತ್ಮಕ ಲೇಖನಗಳನ್ನು ಪ್ರಕಟಿಸಿಯದೆ. ಪ್ರತಿಯೊಂದು ಲೇಖನವೂ ಮನನೀಯವಾದುದಾಗಿರುತ್ತದೆ. ಉಳಿದ ಲೇಖನಗಳೂ ಬೌದ್ಧಿಕವಾಗಿವೆ 'ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಕಮ್ಯೂನಿಸ್ಟರ ವರ್ತನೆ' ಎನುವ ಲೇಖ, ಸ್ವತಂತ್ರವಾಗಿಲ್ಲದೆ ಇಂಗ್ಲಿಷ್ ಲೇಖನವೊಂದರ ಅನುವಾದವಾಗಿರುತ್ತದೆ. ಅದರೆ ಅನುವಾದವೆಂಬುದನ್ನು ಲೇಖಕರು ಸೂಚಿಸದಿರುವುದು ವಿಷಾದಕರ

ಚರಖಾಸಂದೇಶ—ಮಾಸ ಪತ್ರಿಕೆ ಸಂಪಾದಕರು: ಶ್ರೀ. ಹಿ. ರಾ. ಮಲ್ಯ. ಚರಖಾಸಂದೇಶ ಕಾರ್ಯಾಲಯ ಕೊಡಿಯಾಲ ಬೈಲು, ಮಂಗಳೂರು. ವಾ. ಚಂದಾ 0-12-0 ಬಿಡಿಸಂಚಿಕೆ 0-1-0

ಗಾಂಧಿ ತತ್ವಗಳೆಲ್ಲ ಪರನಮಾತ್ರದಿಂದಲೇ ಉಳಿದುಕೊಂಡಿವೆ. ಕಾರ್ಯಗತ ಆಗುವುದು ಬಹಳ ಕಡಿಮೆ. ನೂಲುವ ವಿಚಾರದಲ್ಲಿ ಮನನೀಯವಾದ ವಿಚಾರಗಳನ್ನು ಚರಖಾಸಂದೇಶ ಕೊಟ್ಟಿರುತ್ತದೆ. ಖಾದಿ, ಗಾಂಧೀತತ್ವಗಳಿಗಾಗಿಯೇ ಈ ಪತ್ರಿಕೆ ಹೊರಟಿರುತ್ತದೆ. ವಾರ್ಷಿಕ ಚಂದಾ ಕೇವಲ ಹನ್ನೆರಡಾಣೆ. ಈ ಬಗೆಯ ಮೌಲ್ಯವನ್ನು ತೆತ್ತು ಚರಖಾಸಂದೇಶದಂತಹ ಪತ್ರಿಕೆಯನ್ನು ಸ್ವದೇಶಾಭಿಮಾನಿಗಳಾದವರೆಲ್ಲ ಓದಲೇ ಬೇಕು. ಚರಖಾಸಂದೇಶ ಪ್ರಥಮ ಸಂಚಿಕೆಯಲ್ಲಿಟ್ಟುಕೊಂಡ ಧ್ಯೇಯ ಧೋರಣೆಯಿಂದಲೇ ಮುಂದೆಸಾಗಲಿ. ಕನ್ನಡದ ದೇಶದಲ್ಲಿ-ಕನ್ನಡ ಭಾಷೆಯಲ್ಲಿ ಪ್ರಚಾರವಾಗುವ ಈ ಪತ್ರಿಕೆ ಹಿಂದೀ ಪ್ರಚಾರವನ್ನು ಗಡಿಮೀರಿ ಹೊಗಳುವ ಹವ್ಯಾಸಕ್ಕೆ ಬಲಿಬೀಳದಿರಲೆಂದು ಹಾರೈಸುವದು ಅನಿವಾರ್ಯ.

—ಎಸ್ಸೆಲ್.

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಜನಮತ

ಅಳಿಯ ಸಂತಾನಿಗರ ವಿರಹಿತತೆ ಹಿಂದೂ ಕೋಡಿನಿಂದ ಎಷ್ಟರ ಮಟ್ಟಿನದ್ದು?

ಡಿಲ್ಲಿಯಿಂದ ಹಿಂದೂಕೋಡಿನ 90 ಜೆ. ಪ್ರಕರಣಕ್ಕೆ ಜೋಡಿಸಿದ ಹೊಸ ಪರ್ಯಾಕ್ಯನುಸರಿಸಿ ಅದ ವಾಚಕಗಳು ಅಳಿಯಸಂತಾನಿಗರಿಗೆ ಅನ್ವಯಿಸುವುದಿಲ್ಲವಾಗಿ ಡಿಲ್ಲಿಯಿಂದ ತಿಳಿಸಲ್ಪಟ್ಟದ್ದಾಗಿ ಪ್ರಕಟಿಸಿದ ವಿಷಯ ಅಳಿಯಸಂತಾನಿಗರಲ್ಲಿ ಉಂಟಾದ ಗೊಂದಲವನ್ನು ಬಹುಮಟ್ಟಿಗೆ ನಿವಾರಿಸಿದಿದು. ಇದರಿಂದ ಅಳಿಯ ಸಂತಾನಿಗರನೇಕರಲ್ಲಿ ಅಳಿಯ ಸಂತಾನಿಗರನ್ನೇ ಹಿಂದೂ ಕೋಡಿನಿಂದ ಪರಿಪೂರ್ಣ ರಹಿತ ಪಡಿಸಿ ಎತ್ತಾರೆಂಬ ತಪ್ಪು ಭಾವನೆಯು ಉತ್ಪನ್ನವಾಗಿರುತ್ತದೆ. ಇದಕ್ಕೆ ಅವಕಾಶವಿಲ್ಲ. ಏಕೆಂದರೆ ಹಿಂದೂ ಕೋಡಿನ ಪೀಠಿಕೆಯಲ್ಲಿ ಹಿಂದೂ ಕೋಡು ಎಲ್ಲಾ ಹಿಂದುಗಳಿಗೂ ಅನ್ವಯಿಸುವುದೆಂಬುದು ಸ್ಪಷ್ಟವಿರುತ್ತದೆ.

ಈಗ ಅಳಿಯ ಸಂತಾನಿಗರಿಗೆ ಸಿಕ್ಕುವ ವಿರಹಿತತೆಯ ಲಾಭವೆಂದರೆ ಒಬ್ಬ ವ್ಯಕ್ತಿಗೆ ಆತನ ತರವಾಡು, ಕುಟುಂಬ ಯಾ ಕವರಿನಲ್ಲಿರುವ ಹಕ್ಕು ಸಕ್ಕುಗಳ ಮಟ್ಟಿಗೆ ಮಾತ್ರ. ಅಂದ ಮೇಲೆ ಅಳಿಯ ಸಂತಾನಿಗರ ದತ್ತಸ್ವೀಕಾರದಲ್ಲಿ, ವಿವಾಹಪದ್ಧತಿ, ಗಾರ್ಡಿಯನ್ ಶಿಪ್, ವೃತನ ವಾರೀಸು ಹಕ್ಕು ಇತ್ಯಾದಿಗಳಲ್ಲಿ ಹಿಂದೂ ಕೋಡಿನ ಶರ್ತಗಳೇ ಅಳಿಯಸಂತಾನಿಗರಿಗೂ ಅನ್ವಯಿಸುತ್ತವೆ.

ಈ ಪೈಕಿ ದತ್ತಸ್ವೀಕಾರ ಕ್ರಮವು ಅಳಿಯ ಸಂತಾನ ಕ್ರಮಕ್ಕೆ ಬಹು ತೀವ್ರ ರೀತಿಯ ಮಾರ್ಪಾಟನ್ನು ತರುವುದು ಹಿಂದೂ ಕೋಡಿನಲ್ಲಿ ಗಂಡಸನ್ನು ಮಾತ್ರ ದತ್ತ ಸ್ವೀಕರಿಸುವ ಹಕ್ಕು. ಅದೇ ಹಕ್ಕು ಮಾತ್ರ ಅಳಿಯ ಸಂತಾನಿಗರಿಗೆ ಬಂದಲ್ಲಿ, ಸ್ತ್ರೀ ಮೂಲಕ ವೃದ್ಧಿಗೊಳ್ಳುವ ಕುಟುಂಬದ ಬೆಳವಣಿಗೆಗೆ ಮತ್ತೆದ ಮುಖೇನ ಅಳಿಯ ಸಂತಾನಿಗರಿಗೆ ಅವಕಾಶವಲ್ಲಿ?

ವಿವಾಹ ಪದ್ಧತಿಯ ಕುರಿತು ಕೋಡಿನ ಬದಲಾವಣೆಗಳನ್ನು ಈ ಮುಂದೆ ಈ ಪತ್ರಿಕೆಯಲ್ಲಿ ತಿಳಿಸಿರುತ್ತೇನೆ ಶಾಸ್ತ್ರೀಯ ಮತ್ತು ಸಿವಿಲ್ ವಿವಾಹಗಳ ರೀತಿನೀತಿಗನುಸರಿಸಿ, ನಮ್ಮ ಸಮಾಜದಲ್ಲಿ ಆದೆ ವಿವಾಹ ಕ್ರಮದಲಿಯೂ ಒಂದು ರೀತಿಯ ನೂತನ ಬದಲಾವಣೆ ಬರಬಹುದು. ಹಳೆಯ ವಿವಾಹಗಳು ಈ ಪೀಡನೆಗೆ ಸಿಕ್ಕಬಹುದು. ಇದೇ ರೀತಿ ಗಾರ್ಡಿಯನ್ ಶಿಫ್, ಮೃತನ ಸೊತ್ತಿನ ವಾರಿಸು ಹಕ್ಕುಗಳೂ ಕೆಲಮಟ್ಟಿನ ಬದಲಾವಣೆ ಹೊಂದುವುವು.

ಪಾಲಿನ ಮತ್ತು ಕುಟುಂಬದ ಆಡಳಿತೆಯ ಕ್ರಮವು ಮುಂದಕ್ಕೆ ಅಳಿಯ ಸಂತಾನ ಆಕ್ಟನ್ನೇ ಅನುಸರಿಸಿ ಬರುವುದಾದರೂ ಈಗ ಸಹಜವಾಗಿ ಪಾಲಿನ ಕ್ರಮದಲ್ಲಿ ತೋರಿಬರುವ ಹಲಕೆಲವು ವಿಷಯಗಳೂ ಸಂದೇಹಗಳೂ ಅಳಿಯ ಸಂತಾನ ಆಕ್ಟಿಗೆ ಸದ್ಯದಲ್ಲೇ ತಕ್ಕ ತಿದ್ದುಪಡಿಯನ್ನು ತಂದು ನಿವಾರಣೆ ಹೊಂದುವುದು ಬೇಡವೇ? ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಮಕ್ಕಳಿಲ್ಲದೆ ವೈಧವ್ಯವನ್ನು ಹೊಂದಿ 49ನೇ ವಯಸ್ಸಿನಲ್ಲಿರುವ ವಿಧವೆಯನ್ನು ಅಳಿಯ ಸಂತಾನ ಕಾಯ್ದೆಯು ಸಂತತಿ ಕವರೆಂದು ಪರಿಗಣಿಸಿ, 50 ವರುಷ ಮೀರಿದ ಪುರುಷ(ಪತಿ)ನಿರುವ ಸ್ತ್ರೀಯನ್ನು ಪ್ರಾಯಕ್ಕನುಸರಿಸಿ ಮಾತ್ರ ನಿಸ್ಸಂತಾನ ಕವರೆಂದು ಸೂಚಿಸಿ, ಈ ರೀತಿಯ ಪರಿಚ್ಛೇದವನ್ನೇಕೆ ಇಡಬೇಕು? ಸ್ತ್ರೀಗೆ 49ನೇ ವಯಸ್ಸಿಗೊಂದು ರೀತಿಯ ಹಕ್ಕು, 51ನೇ ವಯಸ್ಸಿಗೆ ಇನ್ನೊಂದು ರೀತಿಯ ಹಕ್ಕು ಯಾತಕ್ಕಾಗಿ? ಈ ರೀತಿಯ ಇತರ ಅನೇಕ ನ್ಯೂನತೆಗಳು ಅಳಿಯ ಸಂತಾನ ಆಕ್ಟಿನ ಪಾಲಿನ ಪರಿಚ್ಛೇದದಲ್ಲಿರುವುದರಿಂದ ನಮಗೆ ಈಗ ತೋರಿಬಂದ ಮೇಲಾದರೂ ನಾವು ಯುಕ್ತ ತಿದ್ದುಪಡಿಯಿಂದ ನಿವಾರಿಸಿ ಪಾಲಿನ ಎಣಿಕೆಯನ್ನು ಅತಿ ಸುಲಭ ರೀತಿಗೆ ಏತಕ್ಕೆ ತರಬಾರದು?

ಶ್ರೀ. ಬಿ. ಬಿ. ಶೆಟ್ಟಿ, ಎಡ್ವಕೇಟ್,
ಲ್ಯಾಟ್ ಹೌಸ್ ಹಿಲ್ಸ್,
ಮಂಗಳೂರು.

ಅಂತರಂಗವನ್ನು

ತಪ್ಪದೆ ಓದಿರಿ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಐವತ್ತೈದು ಮಿಲಿಯ ಜನರಿಗೆ ಆಹಾರದ ಸುವ್ಯವಸ್ಥೆ

ಬೀಜ - ಗೊಬ್ಬರ - ಉಳುಮೆಗಳೇ ಬೆಳೆಯ ಅಭಿವೃದ್ಧಿಗೆ ಆಧಾರಗಳು.

ಮಾನ್ಯ ವ್ಯವಸಾಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ.

ರಾಷ್ಟ್ರದಲ್ಲಿರುವ ಎಲ್ಲಾ ಜನರಿಗೂ ಸಾಕಷ್ಟು ಆಹಾರವನ್ನೊದಗಿಸುವುದು ಸರಕಾರದ ಬಾಧ್ಯತೆ ಎಂಬುದು ಈಗ ಸರ್ವರೂ ತಿಳಿದಿದ್ದಾರೆ. ದೇಶದಲ್ಲಿ ಬೆಳೆಯುವ ಆಹಾರವನ್ನು ಸಮನಾಗಿ ವಿತರಣೆ ಮಾಡುವುದಕ್ಕಾಗಿಯೇ ಧಾನ್ಯ ಶೇಖರಿಸುವ ಮತ್ತು ರೇಶನು ಕೊಡುವ ಯೋಜನೆಗಳು ಜಾರಿಗೆ ತರಲ್ಪಟ್ಟಿರುವವು. ಆಹಾರದ ವಿಚಾರದಲ್ಲಿ ನಮ್ಮ ದೇಶವು ಬಹಳ ವರುಷಗಳಿಂದಲೇ ಹೀನಸ್ಥಿತಿಯಲ್ಲಿತ್ತು. ಇತ್ತೀಚೆಗೆ ನಡೆದ ಪ್ರಪಂಚ ಯುದ್ಧದ ದೆಸೆಯಿಂದ ಬರ್ಮಾದಿಂದ ಬರುವ ಅಕ್ಕಿಯು ನಿಂತು ಹೋಗಲು ನಮ್ಮ ಆಹಾರದ ಕೊರತೆಯ ಬಗ್ಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕಾಗಿ ಬಂತು. ದೇಶದ ವಿಭಜನೆಯಾದ ನಂತರ ಪಾಕಿಸ್ತಾನದಿಂದ ಬರುತ್ತಿರುವ ಗೋಧಿಯ ಸರಬರಾಯಿ ಕೂಡಾ ನಿಂತಿತು.

ನಮ್ಮ ಮದರಾಸು ಪ್ರಾಂತ್ಯದಲ್ಲಿ ಸಾಗುವಳಿಯಲ್ಲಿದ್ದ ಭೂಮಿಯ ವಿಸ್ತೀರ್ಣದಲ್ಲಿ ಮುಕ್ಕಾಲು ಭಾಗದಲ್ಲಿ ಆಹಾರ ಧಾನ್ಯಗಳು ಬೆಳೆಸಲ್ಪಡುತ್ತವೆ ಸಾಮಾನ್ಯವಾಗಿ ನಾವು ಐದು ಮಿಲಿಯ ಟನ್ ಅಕ್ಕಿ ಎಂದೂ ವರೆ ಮಿಲಿಯ ಟನ್ ಜೋಳ, ರಾಗಿ ಮೊದಲಾದ ಸಣ್ಣ ಧಾನ್ಯಗಳನ್ನು ಬೆಳೆಸುತ್ತಿದ್ದೇವೆ ಯುದ್ಧದ ಮುಂಚಿನ ಕಾಲದಲ್ಲಿ ಕೂಡಾ ವರುಷಕ್ಕೆ ಐದು ಲಕ್ಷ ಟನ್ ಧಾನ್ಯವನ್ನು ಮದ್ರಾಸು ಪ್ರಾಂತ್ಯಕ್ಕೆ ತರಿಸಿಕೊಳ್ಳುತ್ತಿದ್ದರು ವರುಷಕ್ಕೆ ಶೇಕಡಾ 11ರಂತೆ ಅಂದರೆ ಸುಮಾರು 5½ ಲಕ್ಷದಂತೆ ನಮ್ಮ ಪ್ರಾಂತದ ಜನ ಸಂಖ್ಯೆಯು ಹೆಚ್ಚಾಗುತ್ತಾ ಬರುತ್ತದೆ ಈಗ ಇದು 55 ಮಿಲಿಯಕ್ಕೆ ಏರಿದೆ ಹೀಗೆ ಹೆಚ್ಚುತ್ತಿರುವ ಜನ ಸಂಖ್ಯೆಯ ಪೋಷಣೆಗೆ ಆಹಾರದ ಸರಬರಾಯಿಯೂ ಹೆಚ್ಚಾಗಬೇಕಿತ್ತು ಜನತೆಯ ಪ್ರವರ್ಧನೆಯನ್ನು ಬೇಕಾದ ಪ್ರಮಾಣಗಳಿಗೆ ಹತೋಟಿಗೆ ತಂದು ಆಹಾರೋತ್ಪಾದನೆಗೆ ತಕ್ಕಂತೆ ತರುವ ವಿಚಾರದಲ್ಲಿ ಕೇಂದ್ರ ಅಥವಾ ಪ್ರಾಂತಿಕ ಸರಕಾರಗಳು ಇನ್ನೂ ಸರಿಯಾದ ಆಲೋಚನೆ ಮಾಡಿದ್ದಿಲ್ಲ. ಕಳೆದ ಮೂರು ವರುಷಗಳಿಂದಲೂ ನಮ್ಮ ಪ್ರಾಂತದಲ್ಲಿ ಮಳೆ ಸರಿಯಾಗಿರಲಿಲ್ಲ. ಆದಕಾರಣ ಆಹಾರಕ್ಕೆ ಇನ್ನಷ್ಟು ದುರ್ಭಿಕ್ಷ ಬಂದಿದೆ. ಉತ್ತರ ಭಾರತದಿಂದ ಆಹಾರವನ್ನು ತರಿಸಿಕೊಳ್ಳೋಣವೆಂದರೆ ಅಲ್ಲಿಯು ನೆರೆ ಮತ್ತು ಭೂಕಂಪದ ಹಾವಳಿಯಿಂದ ಅದೂ ಸಾಧ್ಯನಾಗುವಂತಿಲ್ಲ. ಬರ್ಮಾ ಮುಂತಾದ ಅನ್ಯದೇಶಗಳಿಂದ ಅಕ್ಕಿ ತರಿಸಲು, ಕೊರಿಯಾ ಯುದ್ಧ ಆತಂಕವಾಗಿದೆ ಆದುದರಿಂದ ನಾವು ಆಹಾರವನ್ನು ಆದಷ್ಟು ಬೇಗನೇ ಹೆಚ್ಚಾಗಿ ಬೆಳೆಸುವುದೇ ಅತಿ ಮುಖ್ಯವಾದ ಕಾರ್ಯ.

ನೀರಾವರಿ ಕೆಲಸಗಳು

ಹೆಚ್ಚು ಆಹಾರವನ್ನು ಬೆಳೆಸಲು ಮುಖ್ಯವಾಗಿ ಹೆಚ್ಚಿಗೆ ನೀರಿನ ಸರಬರಾಯಿ ಮತ್ತು ಯಥೇಷ್ಟ ಗೊಬ್ಬರಗಳು ಬೇಕಾಗಿವೆ ಮದ್ರಾಸು ಪ್ರಾಂತದ ಸಾಗುವಳಿ ಮಾಡುವ ವಿಸ್ತೀರ್ಣದಲ್ಲಿ ಮೂರನೇ ಒಂದು ಪಾಲು ಜಾಗಕದಲ್ಲಿ ಮಾತ್ರವೇ ಸರಕಾರದ ಅಥವಾ ಖಾಸಗಿ ಕಾಲುವೆ, ಕೆರೆ ಮತ್ತು ಭಾವಿಗಳ ಮೂಲಕ ನೀರು ಹಾಯಿಸಲಾಗುತ್ತಿರುವುದು. ಉಳಿದ ಭಾಗದ ಬೆಳೆಗಳು ಸಮಯ ತಪ್ಪಿ ಹೆಚ್ಚು ಕಡಿಮೆಯಾಗಿಬರುವ ಮಳೆಯ ಮೇಲೆ ಹೊಂದಿಕೊಂಡಿವೆ. ಇದರಿಂದ ಒಂದು ಕಡೆಯಲ್ಲಿ ನೆರೆ ಹಾವಳಿಯೂ, ಮತ್ತೊಂದು ಕಡೆಯಲ್ಲಿ ಕ್ಷಾಮವೂ ಉಂಟಾಗಿ ಬೆಳೆಗಳು ಅನೇಕ ವೇಳೆ ನಾಶವಾಗುತ್ತವೆ. ತುಂಗಭದ್ರಾ ಮತ್ತು ಕೆಳ ಭವಾನಿಯಂತಹ ದೊಡ್ಡ ನೀರಾವರಿಯ ಯೋಜನೆಗಳ ನಿರ್ಮಾಣವನ್ನು ಸರಕಾರವು ಕೈಕೊಂಡಿದೆ ಮಾತ್ರವಲ್ಲದೆ, ಇನ್ನೂ ಕೆಲವು ದೊಡ್ಡ ಯೋಜನೆಗಳನ್ನು ತನಿಖೆ ಮಾಡಿ ಜಾರಿಯಲ್ಲಿ ತರುವುದಕ್ಕೂ ಏರ್ಪಾಡುಗಳನ್ನು ಮಾಡುತ್ತಿದೆ. ಇಂದಿನ ಆಹಾರದ ಕೊರತೆಯನ್ನು ಬೇಗನೆ ನಿವಾರಿಸಲು ಕೂಡಲೇ ಉಪಯೋಗಕ್ಕಾಗುವ ಸಣ್ಣ ನೀರಾವರಿ ಕೆಲಸದ ಕಾರ್ಯಕ್ರಮಗಳನ್ನು ಕೈಕೊಂಡಿದೆ ಈ ಕಾರ್ಯಕ್ರಮದಲ್ಲಿ ಕೆರೆಗಳನ್ನು ಮತ್ತು ಇತರ ಸಣ್ಣ ನೀರಾವರಿಯ ಸ್ಥಾನಗಳನ್ನು ದುರಸ್ತಿ ಮಾಡುವುದೂ, ಸರಕಾರದ ಧನ ಸಹಾಯದಿಂದ ಭಾವಿಗಳನ್ನು ತೋಡುವುದೂ ಕೂಡಿದೆ. ದಕ್ಷಿಣ ಅರ್ಕಾಟು ಜಿಲ್ಲೆಯಲ್ಲಿ 101 ಭಾವಿಗಳನ್ನು (artisian weils) ತೋಡಿಸುವ ಕೆಲಸವೂ ಪ್ರಾರಂಭವಾಗಿದೆ.

ನೀರು ಸೇದುವುದು

ಮಳೆಯಿಲ್ಲದ ನೀರಿನ ದುರ್ಭಿಕ್ಷೆಯಿಂದ ಎಣ್ಣೆಯ ಇಂಜಿನುಗಳಿಗೂ ವಿದ್ಯುಚ್ಛಕ್ತಿ ಪಂಪು ಸೆಟ್ಟುಗಳಿಗೂ ಪ್ರತಿ ಜಿಲ್ಲೆಯಿಂದಲೂ ಗಿರಾಕಿ ಬಹಳ ಹೆಚ್ಚಾಗಿವೆ. ಈ ವರುಷದಲ್ಲಿ ಕೃಷಿ ಇಲಾಖೆಯವರು 4,875 ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳಲು ಯೋಚಿಸಿರುವರು. ಈ ವರೆಗೆ ಉಪಯೋಗದಲ್ಲಿರುವ ಸಂಖ್ಯೆಯನ್ನೂ ಸೇರಿಸಿ ಒಟ್ಟಿಗೆ 7,548 ಪಂಪು ಸೆಟ್ಟುಗಳು ಒದಗಿಸಲ್ಪಡುವವು.

ಗೊಬ್ಬರ

ನಮ್ಮ ದೇಶದ ಗದ್ದೆಗಳಲ್ಲಿ ಭತ್ತದ ಬೆಳೆಯ ಉತ್ಪತ್ತಿ ಬಹಳ ಕಮ್ಮಿ. ಎಕ್ರೆ ಒಂದಕ್ಕೆ ಸರಾಸರಿ ಜಪಾನಿನಲ್ಲಿ 3,400 ರಾತ್ಲು, ಚೀನಾದಲ್ಲಿ 2,400 ರಾತ್ಲು ಭತ್ತ ಸಿಗುವಾಗ, ನಮ್ಮ ದೇಶದಲ್ಲಿ 1,200 ರಾತ್ಲು ಸಿಗುತ್ತದೆ. ಹಟ್ಟಿ ಗೊಬ್ಬರ ಹಸುರೆಲೆಯಂತಹ ಜೀವಜನ್ಯ ಗೊಬ್ಬರದೊಂದಿಗೆ ರಾಸಾಯನಿಕ ಗೊಬ್ಬರವನ್ನು ಸರಿಯಾದ ಪ್ರಮಾಣದಲ್ಲಿ ಜಮೀನಿಗೆ ಹಾಕುವುದರಿಂದ ಎಕ್ರೆ ಒಂದರ ಉತ್ಪತ್ತಿಯನ್ನು ಸೇಕಡ 20ರಿಂದ 40ರ ವರೆಗೆ ಏರಿಸಬಹುದು. ಕಳೆದ ಅನೇಕ ವರುಷಗಳಿಂದ ಭತ್ತದ ಗದ್ದೆಗಳಿಗೆ ಹಸುರೆಲೆ ಗೊಬ್ಬರವನ್ನು ಹಾಕಬೇಕೆಂದು ರೈತನನ್ನು ಪ್ರೋತ್ಸಾಹಿಸಲಾಗುತ್ತದೆ. ಹಸುರೆಲೆ ಗೊಬ್ಬರದ ಬೀಜಗಳನ್ನು ಬೇಸಾಯಗಾರರಿಗೆ ರಿಯಾಯಿತಿ ಬೆಲೆಗೆ ಒದಗಿಸಿ ಕೊಡುತ್ತಾ ಇದೆ. ಸೆಗಣಿಯನ್ನು ಬೆರಣಿ ತಟ್ಟಿ ವ್ಯರ್ಥವಾಗಿ ಹಾಳು ಮಾಡುವುದನ್ನು ಬಿಟ್ಟು, ಗೊಬ್ಬರವಾಗಿ ಉಪಯೋಗಿಸುವುದರ ಪ್ರಾಮುಖ್ಯವನ್ನು ನಮ್ಮ ರೈತರು ಸಂಪೂರ್ಣವಾಗಿ ಇನ್ನೂ ತಿಳಿದಿಲ್ಲ. ದನದ ಸೆಗಣಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಸಾರಜನಕವು (Nitrogen) ದನದ ಮೂತ್ರದಲ್ಲಿದ್ದರೂ ಆ ಮೂತ್ರವನ್ನು ಜೋಪಾಸನೆ ಮಾಡಿ ಶೇಖರಿಸಿಡುವ ಆವಶ್ಯಕತೆಯು ಸರಿಯಾಗಿ ನಮ್ಮ ರೈತರಿಗೆ ತಿಳಿದಿಲ್ಲ. ಕೃಷಿಕರೆಲ್ಲರೂ ಹಟ್ಟಿ ಗೊಬ್ಬರವನ್ನು ಯೋಗ್ಯವಾದ ರೀತಿಯಲ್ಲಿ ತಯಾರಿಸಿ ಶೇಖರಿಸಿದರೆ, ಗೊಬ್ಬರದ ಪ್ರಮಾಣವನ್ನು ಸುಲಭವಾಗಿ ಹೆಚ್ಚಿಸಲಿಕ್ಕಾದೀತು ಅಂದರೆ ಗೊಬ್ಬರವನ್ನು ಒಂದು ಗುಳಿಯಲ್ಲಿ ಹಾಕಿ ಅದಕ್ಕೆ ಬಿಸಿಲು ಮಳೆ ತಾಗದಂತೆ ಉಪಯೋಗಿಸುವ ವರೆಗೆ ಮುಚ್ಚಿಡತಕ್ಕದ್ದು. ಪ್ರತಿಯೊಬ್ಬ ರೈತನ ಮನೆಯ ಮುಂದೆ ಸುಲಭವಾಗಿ ತಯಾರಿಸಿಕೊಳ್ಳಬಹುದಾದ ಇನ್ನೊಂದು ನಮೂನೆಯ ಗೊಬ್ಬರವಿದೆ. ನಿರುಪಯೋಗವೆಂದು ಎಸೆದು ಬಿಡುವ ಕಸಕುಪ್ಪೆಗಳನ್ನೂ ಜಾನುವಾರುಗಳ ಅಥವಾ ಮನುಷ್ಯರ ಮಲ ಮೂತ್ರಗಳನ್ನೂ ಒಟ್ಟು ಹಾಕಿ ಕೊಳೆಸಿ ಕಂಪೋಸ್ಟು ಎಂಬ ಮಿಶ್ರಗೊಬ್ಬರವನ್ನು ತಯಾರಿಸಿ ಕೊಳ್ಳಬಹುದು ಇತ್ತೀಚೆಗೆ ಪಟ್ಟಣ ಮತ್ತು ಗ್ರಾಮಗಳಲ್ಲಿ ಕಂಪೋಸ್ಟು ಗೊಬ್ಬರವನ್ನು ತಯಾರುಮಾಡುವ ಚಳವಳವು ನಡೆದು ಬರುತ್ತಿದೆ ಈ ಒಕ್ಟೋಬರ ತಿಂಗಳ ಮೊದಲನೆಯ ವಾರದಲ್ಲಿ ಗಾಂಧೀ ಜಯಂತಿ ಸಂದರ್ಭದಲ್ಲಿ ಏರ್ಪಾಡಾದ ಸುಲಭ ಖರ್ಚಿನಲ್ಲಿ ಕಂಪೋಸ್ಟು ರಚಿಸುವ ಕ್ರಮವನ್ನು ಪ್ರದರ್ಶನ ಮಾಡಿ ಗ್ರಾಮಗಳಲ್ಲೆಲ್ಲಾ ಪ್ರಚಾರ ಮಾಡಿದುದರಿಂದ ಈ ಗೊಬ್ಬರದ ತಯಾರಿಕೆಯೂ ಈಗ ಜನರಿಗೆ ಹೆಚ್ಚಾಗಿ ತಿಳಿದಿರಬಹುದು. ಸಾರಜನಕದ ಪ್ರಮಾಣವು ಬಹಳ ಹೆಚ್ಚಾಗಿದ್ದು, ಅತಿ ಬೇಗನೆ ಸಸಿಗಳಿಗೆ ಸಸ್ಯಾಹಾರವನ್ನೊದ

ಪ್ರಕಟಣೆ

ಉಡುಪಿ ಡಿ ಮು. ಕೋರ್ಟಿನಲ್ಲಿ

O P. No. 44/1950

1 ಶೇಷಿ ಪೂಜಾರ್ತಿ, ಗುರುವ ಪೂಜಾರಿ ಹೆಂಡ್ತಿ,
2. ಕೊಂಬ ಪೂಜಾರಿ,
3. ಬಡಿಯ ಪೂಜಾರಿ,
4 ಗೋಪಾಲ ಪೂಜಾರಿ,
5 ರಾಧು ಪೂಜಾರ್ತಿ,
6. ಮುತ್ತಕ್ಕ ಪೂಜಾರ್ತಿ,
7. ಪದ್ಮ, } ಮ್ಯಾನರ್ರು.
8 ಜಲಜ, }
9. ಲಚ್ಚು, }

ಗುರುವ ಪೂಜಾರಿ ಮಕ್ಕಳು. ಕ್ಷೇಮ ಚಿಂತಕಳು-1ನೆ ಅರ್ಜಿದಾರಳು

ಉಡ್ಪಿ ತಾಲೂಕು ಉಪ್ಪೂರು ಗ್ರಾಮದ ಅಬ್ಬಂಣಕುದ್ರು, ಅರ್ಜಿದಾರರು.

ಯೀ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅರ್ಜಿಯು 1ನೆ ಅರ್ಜಿದಾರಳ ಗಂಡ_ಬಾಕಿ ಅರ್ಜಿದಾರರ ತಂದೆ ತಾ. 5-10-1950ರಲ್ಲಿ ಮೃತಪಟ್ಟ ಗುರುವ ಪೂಜಾರಿಯು ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಲಿಮಿಟೆಡ್, ಉಡ್ಪಿ-ಯೀ ಬ್ಯಾಂಕಿನಲ್ಲಿ ನಂ. 33/1950ನೆಗೆ ಫಿಕ್ಸೆಡ್ ಡಿಪೋಜಿಟ್‌ಯಿಟ್ಟ ಬಾಬ್ತು ರುಪ್ಯಾ 520/–ಮತ್ತು ಸದ್ರಿ ಬ್ಯಾಂಕಿನ ನಂಬ್ರ 903ನೆ ಸೇವಿಂಗ್ಸ ಬ್ಯಾಂಕ್ ಎಕೌಂಟ್ ಬಾಬ್ತು ರೂ. 110/- ಕೂಡಾ ರೂಪ್ಯಾ 630/-ನ್ನು ವಸೂಲು ಪಡಿಯುವರೆ ಮದ್ರಾಸ್ ಆಕ್ಟ 9/1949ನೇ ಪ್ರಕಾರ ತಾವು ವಾರ್ಸಿದಾರರು—ವ—ಹಕ್ಕುದಾರರೆಂತಲೂ, ತಮ್ಮ ಪೈಕಿ 2ನೆ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡ್ಸಬೇಕಾಗಿ ಸಹಾ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 9-12-1950ಕ್ಕೆ ಯಿಮೋಣಾಗಿಯದೆ ಆಕ್ಷೇಪ ಹೇಳತಕ್ಕವರುಯಿದ್ರೆ ಆ ದಿವ್ಸ 11 ಗಂಟೆಗೆ ಸದ್ರಿ ಕೋರ್ಟಿಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು— ಎಂಬ ಸಂಗ್ತಿ ಈ ಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯದೆ.

N. V. Kamath, B A ,B L.
Advocate for Petitioners.
ಉಡ್ಪಿ, 17-11-1950.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು.. ಡಾಕ್ಟರ್ ಕೋಡ್ಕಲ್ ವೆಂಕಟರಾಯರು, ಎಲ್ ಐ.ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಶುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಔಷಧಿಗಳ ತಯಾರಿಕೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಶ್ಯಾಮರಾವ್,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಕಾಶಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ [illegible] ಎಲ್ ಕಮಲಾಕ್ಷ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು

ಎಂಟು ಕೋಟಿಗೂ ಮಿಗಿಲಾದ ನಿಧಿಗಳು;

ಗಿಸಾಚ ಅಮ್ಮೋನಿಯಂ ಸಲ್ಫೇಟು ಗೊಬ್ಬರವನ್ನು ಈ ವರುಷ ಕೇಂದ್ರ ಸರಕಾರವು ನಮಗೆ ಹೆಚ್ಚಾಗಿ ಒದಗಿಸಿಯಿದೆ. ಇದನ್ನು ಭತ್ತದ ಗದ್ದೆಗಳಿಗೆ ಸಾಕಷ್ಟು ನೀರಿನ ಅನುಕೂಲತೆಯುಳ್ಳ ಒಂಭತ್ತು ಜಿಲ್ಲಾ ಜಿಲ್ಲೆಗಳಲ್ಲಿ ಹೆಚ್ಚಾಗಿ ಉಪಯೋಗಿಸುವ ಯೋಜನೆಯನ್ನು ನಮ್ಮ ಸರಕಾರದವರು ಈಗ ಕೈಗೊಂಡಿದ್ದಾರೆ. ಈ ಕೆಲಸಕ್ಕೆ ಪ್ರತ್ಯೇಕ ಉದ್ಯೋಗಸ್ಥರನ್ನು ನೇಮಿಸಲಾಗಿದೆ. ಕೃಷಿಕರಿಗೆ ಗೊಬ್ಬರವನ್ನು ಪಡೆಯಲು ಸಾಲಗಳು ಕೂಡಾ ಕೊಡಲ್ಪಡುತ್ತಿವೆ. 'ಅಮ್ಮೋನಿಯಂ ಸಲ್ಫೇಟು" ಗೊಬ್ಬರವನ್ನು 'ಸೂಪರ್ ಫೋಸ್ಫೇಟ್'ನ ಜತೆಯಲ್ಲಿ ಮತ್ತು ಹಸಿರೆಲೆ, ದನದ ಗೊಬ್ಬರ, ಕಂಪೋಸ್ಟಿನಂತಹ ಸ್ಥೂಲ ಜೀವಜನ್ಯ ಗೊಬ್ಬರಗಳ ಜೊತೆಯಲ್ಲಿ ಉಪಯೋಗಿಸುವುದು ಬಹಳ ಉತ್ತಮವೆಂದು ಪ್ರಚಾರ ಮಾಡಲಾಗುತ್ತದೆ. ಇತರ ಜಿಲ್ಲೆಗಳಲ್ಲಿ ಕೂಡಾ ಸ್ವಲ್ಪ ಮಟ್ಟಿಗೆ ರಾಸಾಯನಿಕ ಗೊಬ್ಬರಗಳನ್ನು ರೈತರಿಗ ಒದಗಿಸಿ ಕೊಡಲಾಗುತ್ತದೆ.

ಸುಧಾರಿತ ಬೀಜಗಳು

ಬೆಳೆಗಳ ಉತ್ಪತ್ತಿಯನ್ನು ಶೇಕಡ 10 ರಿಂದ 20 ರ ವರೆಗೆ ಹೆಚ್ಚಿಸಲಿಕ್ಕೆ ಸುಧಾರಿತ ಬೀಜಗಳು ಅತ್ಯಗತ್ಯ. ನಮ್ಮ ಕೃಷಿಶೋಧನಾ ಕ್ಷೇತ್ರದಲ್ಲಿ ಉತ್ಪಾದಿತವಾದ ಭತ್ತ ಮತ್ತು ಸಣ್ಣ ಧಾನ್ಯದ ಬೀಜಗಳು ಹೆಚ್ಚು ಉತ್ಪತ್ತಿಯನ್ನು ಕೊಡುವುವು. ಮಾತ್ರವಲ್ಲದೆ ಧಾನ್ಯಗಳ ಗುಣಗಳನ್ನು ಸಹ ಬಹಳ ಉತ್ತಮಗೊಳಿಸಿರುವುವು. ಕೆಲವು ಸುಧಾರಿತ ಬೀಜಗಳು ರೋಗರುಜಿಗಳಿಗೆ, ನೆರೆ ಹಾವಳಿಗೆ ಅಥವಾ ನೀರಿನ ಅಭಾವಗಳಿಗೆ ತುತ್ತಾಗದಂತೆ ನಿರೋಧಕ ಶಕ್ತಿಯುಳ್ಳದ್ದಾಗಿರುತ್ತವೆ ಭತ್ತ ಬೆಳೆಸಲ್ಪಡುವ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ 50 ರಿಂದ 60 ಭಾಗಗಳಲ್ಲಿ ಸುಧಾರಿತ ಬೀಜಗಳು ಹಬ್ಬಿರುವುವು. ಎಲ್ಲಾ ಸ್ಥಳಗಳಲ್ಲಿಯೂ ಉಪಯೋಗಿಸುವಂತೆ ರೈತರೆಲ್ಲರೂ ಕೂಡಲೇ ಪ್ರಯತ್ನಿಸಬೇಕೆಂದು ನಮ್ಮ ಅಪೇಕ್ಷೆ.

ಬಂಜರು ಭೂಮಿಗಳ ಸುಧಾರಣೆ

ಅಧಿಕ ಆಹಾರೋತ್ಪತ್ತಿಯ ಚಳವಳದಲ್ಲಿ ಬಂಜರು ಭೂಮಿಗಳನ್ನು ಉತ್ತಮಗೊಳಿಸಿ ಹೊಸದಾಗಿ ಸಾಗುವಳಿ ಮಾಡುವುದು ಒಂದು ಮುಖ್ಯ ಕಾರ್ಯವೇ ಸರಿ ಇದುವರೆಗೆ ಸಾಗುವಳಿ ಮಾಡದೆ ಇದ್ದ ಕೃಷಿಗೆ ಯೋಗ್ಯವಾದ ಜಮೀನುಗಳು ಎಲ್ಲಾ ಜಿಲ್ಲೆಯಲ್ಲಿ ಇವೆಯೆಂದು ತಿಳಿದುಬಂದಿದೆ. ಕೃಷಿ ಇಲಾಖೆಯವರ ಹತ್ತಿರ ಈಗ 234 ಉಳುವ ಯಂತ್ರ (ಟ್ರಾಕ್ಟರು) ಗಳಿರುವುವು. ಇವುಗಳಲ್ಲಿ ಕೆಲವಕ್ಕೆ ಬುಲ್‌ಡೋಸರುಗಳನ್ನು ಸೇರಿಸಿಕೊಳ್ಳುವ ಅನುಕೂಲತೆಗಳಿವೆ, ಈ ವರುಷದಲ್ಲಿ ಹೊಸತಾಗಿ 30 ಟ್ರಾಕ್ಟರುಗಳನ್ನು ತರಿಸಲಾಗುವದು. ಕಳೆದ ವರುಷದಲ್ಲಿ ಈ ಟ್ರಾಕ್ಟರುಗಳಿಂದ 44,000 ಎಕ್ರೆ ಜಮೀನನ್ನು ಹೊಸತಾಗಿ ಬೇಸಾಯಕ್ಕೆ ತರಲಾಗಿತ್ತು. ಈ ವರುಷದಲ್ಲಿ 80,000 ಎಕ್ರೆಗಳನ್ನು ಸಾಗುವಳಿಗೆ ತರಬೇಕೆಂಬುದಾಗಿ ನಿರ್ಣಯಿಸಲಾಗಿದೆ. ಈಗಿನ ಕಾಲದಲ್ಲಿ ಕೂಲಿಗಳಿಗೆ ಹೆಚ್ಚು ಸಂಬಳ ಕೊಡಬೇಕಾದ್ದರಿಂದಲೂ ಜಾನುವಾರುಗಳನ್ನು ಸಾಕುವುದು ಕಷ್ಟವಾದ್ದರಿಂದಲೂ ಈಗ ಟ್ರಾಕ್ಟರುಗಳಿಗೆ ಗಿರಾಕಿ ಬಹಳ ಹೆಚ್ಚಾಗಿದೆ.

ಸಸ್ಯರಕ್ಷಣೆ

ನಮ್ಮ ದೇಶದ ಬೆಳೆದಲ್ಲಿ ಒಂದು ಹತ್ತನೆಯ ಭಾಗ ರೋಗರುಜಿಗಳಿಗೆ ತುತ್ತಾಗಿ ನಷ್ಟವಾಗುತ್ತದೆ ಕಳೆದ ವರುಷದಲ್ಲಿ ಬೆಳೆ ರಕ್ಷಣೆ ಬಗ್ಗೆ ನೇಮಿಸಲ್ಪಟ್ಟ ಪ್ರತ್ಯೇಕ ಉದ್ಯೋಗಸ್ಥರು ಹಲವು ದೊಡ್ಡದೊಡ್ಡ ಕ್ರಿಮಿಕೀಟ ರೋಗನಿವಾರಣ ಕಾರ್ಯಕ್ರಮಗಳನ್ನು ಕೈಕೊಂಡು ಯಶಸ್ವಿಗಳಾಗಿ ರೈತರ ಮಾನ್ಯತೆಯನ್ನು ಹೊಂದಿರುವರು ಹುಳಗಳ ಕಾಟ ಮತ್ತು ರೋಗಗಳ ವಿಚಾರದಲ್ಲಿ ಅವುಗಳನ್ನು ಕಂಡಾಕ್ಷಣವೇ ರೈತರು ಸಸ್ಯರಕ್ಷಣೆಯ ಅಧಿಕಾರಿಗಳಿಗೆ ತಿಳಿಸಿ ತಕ್ಕ ನಿವಾರಣ ಮಾರ್ಗಗಳನ್ನು ಕೂಡಲೇ ಕೈಕೊಳ್ಳಬೇಕು. ಕ್ರಿಮಿನಾಶಕ ಔಷಧಿಗಳನ್ನು ಬಹಳ ರಿಯಾಯಿತಿ ದರದಲ್ಲಿ ಕೃಷಿ ಇಲಾಖೆಯವರಿಂದ ಪಡೆಯಬಹುದು ಇವರು ಮದ್ದು ಹಾಕುವುದಕ್ಕೆ 'ಸ್ಪ್ರೇಯರು' ಮತ್ತು 'ಡಸ್ಟರು' ಮೊದಲಾದ ಯಂತ್ರಗಳನ್ನು ಸಹ ಒದಗಿಸಿಕೊಡುತ್ತಾರೆ. ಇವುಗಳನ್ನು ಉಪಯೋಗಿಸುವ ಕ್ರಮ, ರೋಗರುಜಿಗಳನ್ನು ನಿವಾರಣೆ ಮಾಡುವ ವಿಧಾನ, ಇವುಗಳನ್ನು ಕೂಡಾ ಕೃಷಿ ಇಲಾಖೆಯ ಅಧಿಕಾರಿಗಳಿಂದ ತಿಳಿಯಬಹುದು.

ಧನಸಹಾಯ

'ಲಾಂಡ್ ಇಂಪ್ರೂವ್‌ಮೆಂಟ್" ಮತ್ತು 'ಎಗ್ರಿಕಲ್ಚರಿಸ್ಟ್ ಲೋನ್ಸ್" ಆಕ್ಟುಗಳ ಮೇರೆಗೆ ರೈತರಿಗೆ ಸಾಲ ಕೊಡಲಿಕ್ಕೆ ಈ ವರ್ಷದ ಬಜೆಟಿನಲ್ಲಿ 87 ಲಕ್ಷ ರೂಪಾಯಿಗಳನ್ನು ದೊರಕಿಸಲಾಗಿದೆ. ಇದಲ್ಲದೆ ಕೃಷಿ ಉಪಕರಣ ಮತ್ತು ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೆ ರೈತರಿಗೆ ಸಾಲವಾಗಿ ಒದಗಿಸುವ ಬಗ್ಗೆ 2,95,000 ರೂಪಾಯಿಗಳು ಪ್ರತ್ಯೇಕಿಸಲ್ಪಟ್ಟಿವೆ.

ಆಹಾರ ಸ್ವಾವಲಂಬನೆ— ನಮ್ಮ ಧ್ಯೇಯ

ಮದ್ರಾಸು ಸರಕಾರದ ಮೂರು ವರುಷದ ಆಹಾರೋತ್ಪತ್ತಿ ಯೋಜನೆಯ ಪ್ರಕಾರ 1948-49 ರಲ್ಲಿ ಆದ ಸರಾಸರಿ ಉತ್ಪತ್ತಿಗಿಂತ 1951-52 ರೊಳಗೆ 7, 27 ಲಕ್ಷ ಟನ್ನು ಅಕ್ಕಿ ಮತ್ತು ಸಣ್ಣ ಧಾನ್ಯಗಳ ಬೆಳೆಗಳ ಉತ್ಪತ್ತಿಯನ್ನು ಹೆಚ್ಚು ಮಾಡಬೇಕಾಗಿದೆ. ಈ ಹೆಚ್ಚು ಉತ್ಪತ್ತಿಯು ಸಕಾಲದಲ್ಲಿ ಮಳೆ, ಬೇಕಾದಷ್ಟು ಗೊಬ್ಬರ, ಉತ್ತಮವಾದ ಬೀಜ—ಇವುಗಳನ್ನು ಒದಗಿಸಿದರೆನೇ ಸಾಧ್ಯವಾಗ ಬಹುದು.

ಪೂರಕ ಆಹಾರ

ಆಹಾರ ಉತ್ಪತ್ತಿಯಲ್ಲಿನ ಕೊರತೆಗಳನ್ನು ಮತ್ತೊಂದು ವಿಧವಾಗಿಯೂ ನೀಗಬಹುದು. ಇದರಿಂದ ಪೋಷಕ ಪ್ರಮಾಣವನ್ನು ಸಹ ಹೆಚ್ಚಿಸಬಹುದು. ಇದಕ್ಕೆ ಅಧಿಕವಾಗಿ ಮೀನು, ತರಕಾರಿ, ಹಾಲು ಮೊಟ್ಟೆಗಳನ್ನು ಸೇರಿಸಬೇಕು. ಸರಕಾರದವರು ಅಧಿಕ ಮೀನು ಉತ್ಪತ್ತಿ ಹಾಗೂ, ತರಕಾರಿಗಳನ್ನು ಬೆಳೆಸುವ ಯೋಜನೆಗಳನ್ನು ಹೂಡಿರುವರು, ಅಕ್ಕಿ ಊಟಮಾಡುವವರು ಬೇರೆ ಆಹಾರವನ್ನು ತಿನ್ನಲು ಅಭ್ಯಾಸ ಮಾಡುವುದರಿಂದ ಸದ್ಯದ ಅಕ್ಕಿಯ ಕೊರತೆಯನ್ನು ಕೆಲವು ಮಟ್ಟಿಗೆ ಹೋಗಲಾಡಿಸಬಹುದು. ಸಂಸ್ಥಾನದ ಅಕ್ಕಿಯ ಅಭ್ಯಾಸದ ಕುರಿತು ಜನರೆಲ್ಲರೂ ತಿಳಿಯುವಂತೆ ಬೋಧಿಸಬೇಕು, ಗೋಧಿ ಮತ್ತು ಮುಸುಕಿನ ಜೋಳಗಳಲ್ಲಿ ಆಹಾರ ಸತ್ವಗಳು ಹೇರಳವಾಗಿವೆ. ಇವುಗಳಿಂದ ರುಚಿಕರವಾದ ತಿಂಡಿಗಳನ್ನು ಮಾಡಬಹುದಾದುದರಿಂದ ಗೋಧಿ ಮತ್ತು ಜೋಳಗಳನ್ನು ಜನಪ್ರಿಯವಾಗಿ ಮಾಡಲು ಸರ್ವಪ್ರಯತ್ನಗಳನ್ನು ನಡೆಸುವುದು ಬಹಳ ಅಗತ್ಯ.

ಉಡುಪಿಗೆ ಹೋಗಬೇಕು!   ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ ೧

1915ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಜಿಸ್ಟ್ರ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ' ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ... ಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ... ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲೆಂಡ ದೇಶದಲ್ಲಿ ... ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ... ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ... ಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ... ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ... ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಹಿಡಿಸಿರುವ ಕಲ್ಲುಗಳು ... ನೀರು ಸೋರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ... ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ'ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ... ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ... ಈ ವಾನಿಂಗ್ ಟಿಲ್ಲಿ ತೈಲದಿಂದ ಶಾಂತಿಗುಣವಾಗುವುದು ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ... ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ.ಪಿ. ಬೇರೆ ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0. ವಾನಿಂಗ್ ಟಿಲ್ಲಿ ಕೆಪ್ಸೂಲ್ ಶೀಸೆ 1ಕ್ಕೆ 3 8-0 ವಿ.ಪಿ.ಬೇರೆ. ಡಜನ್ ಕೆಪ್ಸೂಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ 60-0-0- ವಿ. ಪಿ. ಸಹಿತ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫ್.

ಪ್ರಶಂಸನಾ ಪತ್ರ:- ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ... ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ: ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ಬಿಟ್ಟುಬಿಟ್ಟ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಯೆಂದು ... ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

ದಿ- ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ-   **Teh Eclipse Distributing Agency.**

ದಾಹಾನು ರೋಡು, ಬಿ. ಬಿ- ಎಂಡ್ ಸಿ. ಐ. ರೈಲ್ವೆ.   Dahanu Road, B. B. & C I Rly,

ಬೊಂಬಾಯಿ ಸ್ಟಾಕಿಸ್ಟರು:—ಅಕ್ಕಡ್‌ವಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್‌ಲೇನ್, ಬೊಂಬಾಯಿ 2.

ವಾರ ಭವಿಷ್ಯ

ತಾರೀಕು 23-11-1950ರಿಂದ ತಾ. 29-11-1950ರ ವರೆಗೆ

ಮೇಷ—ದೈವವು ನಿಮಗೆ ತುಂಬಾ ಅನುಕೂಲವಿದೆ. ಪ್ರತಿಯೊಂದು ಉದ್ಯಮದಲ್ಲೂ ವಿಜಯಗಳಾಗುವವು. ಸಾಂಪತ್ತಿಕ ಭಾಗವು ವೃದ್ಧಿಗೊಳ್ಳಲಿದೆ. ಆಪ್ತೇಷ್ಟರು ಬಂಧು ಮಿತ್ರರೂ ಕೂಡ ನಿಮ್ಮನ್ನು ಹಿಂಬಾಲಿಸುವರು. ಮಾತ್ರವಲ್ಲ ಶತ್ರುಜನರೂ ಕೂಡ ಪಾದಾಕ್ರಾಂತರಾಗಲಿರುವರು. ವಿದ್ಯಾರ್ಥಿಗಳೂ ನೌಕರಿ ಜನರೂ ಸೇವಕ ವರ್ಗದವರೂ ಕೂಡಾ ಹೆಚ್ಚಿನ ಸೌಕರ್ಯ ಸವಲತ್ತುಗಳನ್ನು ಹೊಂದಲಿರುವರು. ರಾಜಕೀಯ ಕಾರ್ಯಗಳ ಮಟ್ಟಿಗೆ ಈ ವಾರವು ಪ್ರತಿಕೂಲವಿದೆ. ಮತ್ತು ಆರೋಗ್ಯವು ಅಷ್ಟೊಂದು ತೃಪ್ತಿಕರವಾಗಿರದು. ತಾ 23, 26, 27, 28 ಈ ದಿನಗಳಲ್ಲಿ ಸುಹೃತ್ಸಮಾಗಮ; ಭೋಗ; ಲಾಭ ವಿಜಯ ಸನ್ಮಾನಗಳು ದೊರೆಯುವವು

ವೃಷಭ—ಎಷ್ಟೊಂದು ವಿವೇಕದಿಂದ ವರ್ತಿಸಿದರೂ ಕೂಡ ನಿಮಗೀವಾರದಲ್ಲಿ ಕಷ್ಟ ನಿಷ್ಟಗಳು ತಪ್ಪಲಾರವು. ನಿಮ್ಮ ಧನಮಾನಗಳಿಗೆ ಶತ್ರುಗಳಿಂದ ಹಾನಿಯಿದೆ ಪುತ್ರರು ಭೃತ್ಯರೇ ಮೊದಲಾದವರು ನಿಮ್ಮ ಮಾತನ್ನತಿಕ್ರಮಿಸಿ ವರ್ತಿಸುವರು. ವ್ಯಾಪಾರವ್ಯವಹಾರಗಳಲ್ಲಿ ನಷ್ಟವಧಿಕವಾದೀತು. ಸ್ತ್ರೀಯರಿಂದ ಅನಿಷ್ಟಗಳು ಸಂಭವಿಸಲಿವೆ. ಅಂತ್ಯಾಪಿ ಅರ್ಧಾಂಗಿಯೂ ಕೂಡ ಪ್ರತಿಕೂಲಳಾಗಿ ವರ್ತಿಸುವಳು ಆರ್ಥಿಕ ಬಿಕ್ಕಟ್ಟಿನಿಂದಲೂ ದೇಹಾಲಸ್ಯದಿಂದಲೂ ಇತರ ಮಾನಸಿಕ ಚಿಂತೆಯಿಂದಲೂ ಸಂತಪ್ತರಾದ ನಿಮಗೆ ತಾ. 24, 25, 29 ಕೊಂಚ ಆಶಾದಾಯಿಗಳಾಗಿವೆ

ಮಿಥುನ—ಕೈಕೆಸರಾದರೆ ಬಾಯಿ ಮೊಸರಾದೀತೆಂಬಂತೆ ನೀವು ಶ್ರಮವಹಿಸಿ ದುಡಿದರೆ ಯತ್ನಕ್ಕೆ ತಕ್ಕ ಫಲವನ್ನು ಹೊಂದಲಿರುವಿರಿ. ಆದರೆ ನಿಮ್ಮ ಮನಸ್ಸು ಸದಾ ಹೆದರಿದ ಹುಲ್ಲೆಯಂತೆ ಅತೀವ ಚಂಚಲವಾಗಿರುವುದು. ಬಂಧು ಮಿತ್ರರ ನೆರವಿನಿಂದಾಗಿ ಕೆಲವೊಂದು ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಕಫವಾತ ದೋಷದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ವ್ಯಾಪಾರದಲ್ಲಿ ಆಕಸ್ಮಿಕ ನಷ್ಟವೊದಗೀತು. ಆದರೂ ಗುರ್ವನುಗ್ರಹವನ್ನು ಪಡೆದ ನಿಮಗೆ ತಾ. 23, 27, 29 ಈ ದಿನಗಳಲ್ಲಿ ಧನಲಾಭ ಆತ್ಮೋಪಭೋಗಗಳು ಲಭಿಸುವವು.

ಕರ್ಕಾಟಕ—ಎಂತಹ ಕಷ್ಟಸಾಧ್ಯವಾದ ಕಾರ್ಯವಾದರೂ ನಿಮಗದು ತೃಣಸದೃಶವೆನಿಸುವದು ನಿಮ್ಮ ಪ್ರಯತ್ನಕ್ಕಿಂತ ಅಧಿಕವಾದ ಲಾಭವು ಲಭಿಸುವುದು. ಪ್ರಬಲರಾದ ಶತ್ರುಗಳನ್ನು ಪರಾಭವಗೊಳಿಸುವ ಶಕ್ತಿಸಾಮರ್ಥ್ಯಯುಕ್ತರಾದ ನಿಮಗೆ ಕೃಷಿವ್ಯಾಪಾರಗಳಲ್ಲಿ ಹೆಚ್ಚಿನ ಫಲಲಾಭವಿದೆ. ಆರೋಗ್ಯಕ್ಕೆ ಕಫ ದೋಷದಿಂದ ಹಾನಿಯಿದೆ. ಪ್ರಯಾಣದಲ್ಲಿ ಆಕಸ್ಮಿಕ ಕಷ್ಟನಷ್ಟಗಳೊದಗುವ ಯೋಗವಿದೆ. ಕೃಹಕೃತ್ಯದಲ್ಲಿ ಸ್ವಲ್ಪ ಅವ್ಯವಸ್ಥೆಯು ತಲೆದೋರಬಹುದು ತಾ. 26, 27, 28ರಲ್ಲಿ ಆರೋಗ್ಯ ಧನಗಳಿಗೆ ಹಾನಿಯಿದೆ.

ಸಿಂಹ—ಪ್ರಕೃತಿಯೂ ಗೃಹಸುಖವೂ ಉತ್ತಮವಿರುವವು. ಬಂಧು ಮಿತ್ರರ ಸಹಕಾರವು ಸಾಕಷ್ಟಿದೆಯಾದರೂ ಕೆಲವೊಂದು ಕಾರ್ಯಗಳು ಶತ್ರುವಂಚನೆಯಿಂದ ವ್ಯರ್ಥವಾಗಲಿವೆ ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗುವದು ಮನೆಯ ಜನರ ಅನಾರೋಗ್ಯದ ಸಲುವಾಗಿ ಹೆಚ್ಚಿನ ಹಣ ವ್ಯಯಿಸಬೇಕಾಗುವುದು. ಸಮಾಜದಲ್ಲಿ ಒಳ್ಳೇ ಸ್ಥಾನಮಾನಗಳು ಲಭಿಸುವವು. ವಿದ್ಯೋಪಜೀವಿಗಳಿಗೂ ವ್ಯಾಪಾರೀ ಜನರಿಗೂ ದಿನ ಯಾಪನೆಯು ಸುಖಸಾಧ್ಯವಾಗುವದು. ವಾರದ ಅಂತ್ಯಂತ ದಿನಗಳು ಪ್ರತಿಕೂಲವಿವೆ.

ಕನ್ಯಾ—ಆಪತ್ಪರಂಪರೆಗಳು ಮೇಲಿಂದ ಮೇಲೆ ಬರುವವು. ಆಪ್ತೇಷ್ಟರ ವಿರಹ ದುಃಖಕ್ಕೀಡಾಗುವಿರಿ. ವಿಷವಹ್ನಿಗಳಿಂದಾಗಿ ಆರೋಗ್ಯಕ್ಕೆ ಬಾಧೆಯಿದೆ. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆವಿರಿ. ಕೃತ್ರಿಮ ಮಿತ್ರರು ನಿಮ್ಮನ್ನು ಮೋಸದಲ್ಲಿ ಸಿಲುಕಿಸಿ ಕಷ್ಟನಷ್ಟಗಳಿಗೆ ಗುರಿ ಮಾಡುವರು. ಗುರುಹಿರಿಯರೊಡನೆ ಕಲಹ ಮನಸ್ತಾಪಗಳುಂಟಾಗುವವು. ಅಧಿಕಾರಿ ಜನರು ತಮ್ಮ ಅಧಿಕಾರದ ದುರುಪಯೋಗವನ್ನು ಮಾಡಿ ಜನತೆಯ ನಿಂದೆಗೆ ಗುರಿಯಾದಾರು. ಆದರೂ ವಾರಾಂತ್ಯದ 3 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲವು.

ತುಲಾ—ದೈವಬಲ ಸಂಪನ್ನರಾದ ನಿಮಗೆ ಈ ವಾರವು ಬಹಳ ಅನುಕೂಲವಿರುವದು. ಏಳೂವರೆ ಶನಿಯು ನಾನಾ ರೀತಿಯಿಂದ ಪೀಡಿಸುವನಾದರೂ ಗುರ್ವನುಗ್ರಹದಿಂದ ನೀವು ಸುಖದಿಂದ ಪಾರಾಗುವಿರಿ. ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರಬಹುದು. ನಿಮ್ಮ ಉದ್ಯಮಗಳು ಸಫಲವಾಗಿ ಮುಂದರಿದು ಸಕಲ ಭೋಗವು ಸಂಪದ್ಭಾಗವು ಉತ್ತಮವೆನಿಸುವದು. ಧನ ಜನಬಲ ದೈವಾನುಗ್ರಹವನ್ನು ಪಡೆದ ನಿಮಗೆ ಚಿಂತೆಗವಕಾಶವೇ ಕಾಣಸಲೊಲ್ಲದು. ತಾ. 23, 29 ಅತ್ಯುತ್ತಮ ದಿನಗಳು.

ವೃಶ್ಚಿಕ—ಕಾಲವು ಪ್ರತಿಕೂಲವಿದೆ. ನಿಮ್ಮ ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವವು. ಆಪ್ತೇಷ್ಟರು ದೂರಸರಿವರು. ಬಂಧುಗಳಿಂದುಂಟಾದ ಪೀಡೆಯು ನಿಮ್ಮನ್ನು ಸದಾ ಚಿಂತಾಗ್ನಿಯಲ್ಲಿ ಕೆಡಹಲಿದೆ. ಹಣದ ದುರವಸ್ಥೆಯಿಂದಾಗಿ ಸಮಾಜದಲ್ಲಿ ಮಾನ ಕಾಯ್ದುಕೊಳ್ಳುವದು ಕಷ್ಟವೆನಿಸೀತು. ಅಧಿಕಾರಿ ಜನರ ಉಪದ್ರವು ದಿನೇ ದಿನೇ ಹೆಚ್ಚಲಿದೆ. ಪಿತ್ತೋಷ್ಣ ದೋಷದಿಂದ ಆರೋಗ್ಯವು ಕೆಡುವದು. ಇಷ್ಟಾದರೂ ನಿಮ್ಮ ಸ್ವಂತ ಉಪಭೋಗಕ್ಕೆ ಕಡಿಮೆ ಮಾಡಿಕೊಳ್ಳಲಾರಿರಿ. ವಾರಾದಿಯ 3 ದಿನಗಳು ಇತರ ದಿನಗಳಿಗಿಂತ ಉತ್ತಮ.

ಧನು—ತಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ಇಂದಿನ ನಿಮ್ಮ ಪರಿಸ್ಥಿತಿಯುಂಟಾಗಿದೆ. ಮೇಲಿಂದ ಮೇಲೆ ಪ್ರಾಪ್ತವಾಗತಕ್ಕ ಖರ್ಚುಗಳು ನಿಮ್ಮನ್ನು ದಂಗುಬಡಿಸಲಿವೆ. ದುಡಿಮೆಗಿಂತ ನಾಲ್ಕು ಮಡಿ ಖರ್ಚು ಕಾಣಿಸುವದು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ತೊಂದರೆಯುಂಟಾಗುವದು. ವೃಥಾಪವಾದವನ್ನು ಕೇಳಲಿರುವಿರಿ. ಪ್ರಯಾಣದಲ್ಲಿ ಕಷ್ಟನಷ್ಟ ಆಪತ್ತುಗಳೂ ಒದಗಲಿವೆ. ನಿಮ್ಮ ಸಂಕಲ್ಪಗಳು ಕನ್ನಡಿಯೊಳಗಿನ ಗಂಟಿನಂತಾಗುವುವು. ವಾರದ ಅಂತ್ಯಂತ ದಿನಗಳಲ್ಲಿ ಕಲಹ,ದೇಹಾಲಸ್ಯ,ಖರ್ಚುಗಳು ಅತಿಯಾಗಿ ಕಾಣಿಸುವವು.

ಮಕರ—ಇಂದಿನ ನಿಮ್ಮ ಶ್ರಮವು ಸಫಲವಾಗಲಿದೆ. ಯಾವ ಉದ್ಯಮದಲ್ಲೂ ನಿಮ್ಮ ನಿರೀಕ್ಷೆಗಿಂತ ಅಧಿಕವಾದ ಫಲಪ್ರಾಪ್ತಿಯಿದೆ. ವ್ಯಾಪಾರಿಗಳೂ ವಿದ್ಯೋಪಜೀವಿಗಳೂ ಸಾಕಷ್ಟು ಧನಸಂಗ್ರಹಿಸುವರು. ಸ್ತ್ರೀಯರಿಂದ ಅನಿರೀಕ್ಷಿತ ಲಾಭವಾಗುವ ಯೋಗವಿದೆ. ರಾಜಕೀಯ ಸಾಮಾಜಿಕ ರಂಗಗಳಲ್ಲಿ ಒಳ್ಳೇ ಶ್ರೇಯಸ್ಸನ್ನು ಪಡೆವಿರಿ! ಕೆಲವೊಮ್ಮೆ ಪಿತ್ತದೋಷದಿಂದ ನೇತ್ರಶೂಲೆ, ದಃಸ್ವಪ್ನಾದಿಗಳು ಕಾಣಿಸಬಹುದು. ವಾರಾಂತ್ಯದ 3 ದಿನಗಳಲ್ಲಿ ವಿಜಯ ಲಾಭ ಮಾನಗಳು ಹೆಚ್ಚಾಗಿ ಲಭಿಸುವವು.

ಕುಂಭ—ನಿಮ್ಮ ಪ್ರಯತ್ನವು ಅಧಿಕವಾದ ಫಲವನ್ನೀಯುವದು. ನಾನಾ ರೂಪದಿಂದ ಹಣವು ನಿಮ್ಮ ಕೈಸೇರಲಿದೆ. ಜನಬೆಂಬಲವೂ ಸಮಾಜದಲ್ಲಿ ಸ್ಥಾನವೂ ಪ್ರಾಪ್ತವಾಗುವದು. ಹೆಚ್ಚಿನ ನಿಮ್ಮ ಮನೋರಥಗಳು ಇಂದು ಫಲಿಸುವವು. ಕೆಲವೊಮ್ಮೆ ವಾಕ್ಕಲಹಗಳು ಅನಿವಾರ್ಯವಿವೆ. ಸದಾ ಪ್ರವಾಸದಲ್ಲಿರಬೇಕಾದೀತು. ತಣ್ಣೀರಾದರೂ ತಣಿಸಿ ಕುಡಿಯಬೇಕೆಂಬ ಗಾದೆಯಂತೆ ಯಾವ ಕಾರ್ಯದಲ್ಲೂ ಥಕ್ಕನೆ ದುಡುಕಿ ಕಾರ್ಯಹಾನಿಗೈಯ್ಯದಿರಿ. ತಾ. 23, 29 ಅನುಕೂಲ ದಿನಗಳು.

ಮೀನ—ಇಂದೀಗ ನಿಮ್ಮ ದುರ್ವಿಧಿಯು ನಿಮ್ಮನ್ನು ಬಲವಾಗಿ ಪೀಡಿಸುತ್ತಿದೆ. ಕಾರ್ಯಾರಂಭಕ್ಕೆ ಮುಂಚಿತವಾಗಿಯೇ ವಿಘ್ನಗಳೊದಗುವುದರಿಂದ ಅಲಸಿಗಳಾಗುವಿರಿ. ದಿನ ಯಾಪನೆಗಾಗಿ ಪರರೊಡನೆ ಸಾಲ ಮಾಡಬೇಕಾಗುವದು. ತನುಪೀಡೆ ಮನೋರೋಗದಿಂದ ಬಳಲಿದ ನಿಮಗೆ ಪ್ರಯಾಣದಲ್ಲಿ ನಾನಾ ದುಃಖಗಳು ಪ್ರಾಪ್ತವಾಗುವವು. ಆತ್ಮೀಯರೇ ನಿಮಗೆ ಪರಕೀಯರಾಗಿ ಪರಿವರ್ತಿಸುವರು. ತಾ: 24, 25 ಈ ಎರಡು ದಿನಗಳು। ಇತರ ದಿನಗಳಷ್ಟು ಅನಿಷ್ಟಕಾರಿಗಳಲ್ಲ

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

SOB

Highly perfumed and medicated, worth using daily by one and all keeps hair black and relieves head-ache etc.

REGD TRADE MARK

Moufctured by:-

Swadeshi Oushadhi Bhandara (Regd-)

KUNJAL P O. Brahmavar, S. K.

ನಿಮಗೆ

ಇಂಗ್ಲಿಷ್ ಕಲಿಯಬೇಕೆ?

ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ. ಪಿ. ದ್ವಾರ ರೂ. 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ, ಉಡುಪಿ

ಇವರಿಗೆ ಬರೆಯಿರಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ. ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

Estd 1921 ಸ್ಥಾಪನೆ.
31ನೇ ವರ್ಷ

30—11—1950

Founder. Sri A. B. Shetty,
Minister for Agriculture & Veterinary.

ನವ ಯುಗ

ವರ್ಷ ೩೧
ವಾರ ೧೩

NAVAYUGA
WEEKLY

POST BOX NO. 22
UDIPI, S. K.

Vol. 31
No 13

ತೆಪ್ಪದೆ ಅಳಿತ್ತೆಕೋಲು!

ತನ್ನಂತೆ ಪರರನ್ನು ಅರಿಯುವುದಲ್ಲ—ತನ್ನ ಸ್ಥಿತಿ ಮತಿ ಮಾನದಿಂದಲೇ ಪರರನ್ನು ಅಳೆಯುವ ಅಭ್ಯಾಸವು ಹೆಚ್ಚಿನವರಲ್ಲಿರುವುದರಿಂದಲೇ, ಸತ್ಯಸ್ಥಿತಿ, ಜ್ಞಾನ ಮತ್ತು ಸೌಹಾರ್ದತೆಯ ಅಭಾವವುಂಟಾಗಿದೆ.

ಆದರಲ್ಲೂ ಗುಣ ಯೋಗ್ಯತೆಗಳ ಮಟ್ಟಿಗೆ ತಮ್ಮನ್ನು ಮೀಗಿಸುವವನನ್ನು, ಆದಕ್ಕನುಗುಣವಾಗಿ ಗೌರವಿಸಲು ತಯಾರಿಲ್ಲದವರು ದೋಷ, ದುರ್ಗುಣಗಳಲ್ಲಿ ತಮ್ಮನ್ನು ಮೀಗಿಸುವವನನ್ನು, ಅಂಥವನ ಸ್ಥಿತಿಗೆ ಹೇಳಿಸಿದುದಕ್ಕಿಂತ ಹೆಚ್ಚಾಗಿಯೇ ಹಳಿಯಲು ಸಿದ್ಧರಿದ್ದಾರೆ.

ಹೀಗಾಗಿ ಜನರ ನಡುವೆ ಪರಸ್ಪರ ತಿರಸ್ಕಾರ, ದ್ವೇಷ, ಜಿಗುಪ್ಸೆ ವ್ಯಾಪಿಸಿರುವಷ್ಟು ಸಹಕಾರ, ಸೌಹಾರ್ದತೆ ನೆಲೆನಿಂತಿಲ್ಲ. ತಮಗೆ ಸಾಕಷ್ಟು ದೂರದಲ್ಲಿರುವವನ ಅಣುಮಾತ್ರ ಮಹತ್ವಿಕೆಯನ್ನಾದರೂ ಅತಿಯಾಗಿ ಗಣಿಸುವುದು—ತನ್ನ ಸಮೀಪವರ್ತಿಯ ಮಹಾತ್ಮೆಯೆಂತಹದಿದ್ದರೂ, ಅದನ್ನು ತಾತ್ಸಾರವಾಗಿ ಕಾಣುವುದು ನಮ್ಮ ಜನತೆಗೆ ಸ್ವಭಾವಬದ್ಧವಾದುದು. ಯಾವ ಜನನಾಯಕನನ್ನು ಕಂಡರೂ ಆತ ಹೊರಗೆ ಪ್ರಸಿದ್ಧಿಗಳಿಸಿದಷ್ಟು ತನ್ನ ಸ್ವಂತ ಊರಲ್ಲಿ ಕೀರ್ತಿಶಾಲಿಯಾಗಿಲ್ಲವೆಂಬುದನ್ನರಿಯಬಹುದು.

ತಮ್ಮ ಸ್ವಂತ ದೋಷ, ದೌರ್ಬಲ್ಯಗಳ ಮಾನದಿಂದಲೇ ಬೇರೆಯವರನ್ನು ಅಳೆಯುವ ಮತ್ತು ತಮ್ಮ ಕೈಗೆಟಕುವಂತಿರುವವರ ಹುಳುಕನ್ನೇ ಹೆಕ್ಕಿಕೊಳ್ಳುವ ಜನರ ಮನೋವೃತ್ತಿಯ ದೆಸೆಯಿಂದಾಗಿ ಜನರಿಗೆ ಗುಟ್ಟುಕೊಡದೆ, ಆದಷ್ಟು ದೂರದಲ್ಲಿದ್ದುಕೊಂಡು ಎಲ್ಲಕ್ಕೂ ಬಣ್ಣ ಬಳಿದು ತೋರಿಸುವವರೇ ಜನಪ್ರಿಯರಾಗುವುದು ನಮ್ಮಲ್ಲಿಯ ವಾಡಿಕೆಯೆನ್ನಬಹುದು. ಈ ಮಾತಿಗೆ ಕೆಲವು ಅಪವಾದಗಳಿರಬಹುದಾದರೂ ಇದು ಬಹುಮಟ್ಟಿಗೆ ಸತ್ಯ.

ನೆಹರೂ–ವಲ್ಲಭಾಯಿಗಳ ನಡುವೆ ಕೆಲವು ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿವೆ, ಎಂಬ ವಾರ್ತೆಯನ್ನು ಹುಳುಕುಪ್ರೇಮಿ ಪತ್ರಿಕೆಗಳಿಂದ ಪಡೆದ ಹೆಚ್ಚಿನವರು ಆ ಅಗ್ರಗಣ್ಯ ನಾಯಕರಿಬ್ಬರೊಳಗೆ ಅಧಿಕಾರಕ್ಕಾಗಿ ಸ್ಪರ್ಧೆ ನಡೆದಿರಬೇಕು ಇವರು ಒಬ್ಬರನ್ನೊಬ್ಬರು ಹಿಂದೆ ಹಾಕುವ ಮೇಲಾಟದಲ್ಲಿರಬೇಕು—ಎಂದೇನೆನಸಿಕೊಂಡಿದ್ದಾರೆ. ಇಂತಹ ಸ್ವಾರ್ಥಪೂರಿತ ಸ್ಪರ್ಧೆಗಿಂತ ಭಿನ್ನವಾದ ಅಭಿಪ್ರಾಯ ಭೇದವೆಂಬುದನ್ನೇ ಅರಿಯದವರ ನೋಟವಿದು.

ಒಬ್ಬ ಸಿರಿವಂತನಿದ್ದರೆ, ಆಸ್ತಿವಂತನಿದ್ದರೆ, ನಿಮ್ಮ ಉಳಿತಾಯ ಅಥವಾ ಆಸ್ತಿಪಾಸ್ತಿಗಳ ಮೇಲಿಂದಲೇ ನಿಮಗಾತ ಬೆಲೆ ಕಟ್ಟುತ್ತಾನೆ. ಹೊರತು, ನಿಮ್ಮಲ್ಲಿ ಬೇರೆಂತಹದಿದ್ದರೂ ಗಣಿಸಲಾರ. ಒಬ್ಬ ರಾಜಕಾರಣಿ, ಸಾಹಿತಿ, ಸಂಗೀತಗಾರ, ಚಿತ್ರಗಾರ ಅಥವಾ ಬೇರಾವುದೇ ವರ್ಗದ ಕಲಾವಿದ ಆಗಿದ್ದರೆ, ನೀವು ಎಂಥವರೇ ಇದ್ದರೂ ಆತನ ಕೆಲಸಕ್ಕಗತ್ಯವಿರುವಷ್ಟು ನಿಮ್ಮನ್ನಾತ ಗೌರವಿಸಬಹುದು; ಆದರೆ ಅವನ ಯೋಗ್ಯತೆಯ ಕೆಲವಂಶವಾದರೂ ನಿಮ್ಮಲ್ಲಿದ್ದರೆ ಮಾತ್ರ ಆತನಿಗೆ ನಿಮ್ಮೊಡನೆ ಆತ್ಮೀಯತೆ ಅಥವಾ ವಿರೋಧ ಹೊರತು ಅಂತಹದೇನೂ ಇಲ್ಲವಾದರೆ ನೀವು ಅವನಿಗೆ ಪರಕೀಯರೇ.

ಒಬ್ಬ ಪಾತ್ರಾಪಾತ್ರ, ಕಾಲಾಕಾಲ ನೋಡುವ ಗೊಡವೆಗೆ ಹೋಗದೆ ನುಗ್ಗಿ ದುಡುಕಿ ಕೆಲಸಮಾಡಿಕೊಳ್ಳುವವನಾದರೆ ನಿಮ್ಮಲ್ಲಿ ತದ್ವಿರುದ್ಧ ಸಹನೆ, ಸಾವಧಾನತೆಯಿದ್ದರೆ ಆತ ನಿಮ್ಮನ್ನು 'ಕೈಲಾಗದವ'ನೆಂದು ತಾತ್ಸಾರದಿಂದ ನೋಡುವುದೇ ಸರಿ. ಅಂತೆಯೇ ಒಬ್ಬ ಅನಗತ್ಯ ಶಂಕೆ, ಸಂದೇಹ, ಅಳುಕು ಬುದ್ಧಿಯನ್ನು ಕಟ್ಟಿಕೊಂಡವನಾದರೆ ನಿಮ್ಮ ಸಹಜೋತ್ಸಾಹ, ಸ್ವಾಭಾವಿಕ ಚಟುವಟಿಕೆಗಳನ್ನು ಕೂಡಾ ಆತ ಉದ್ಧಟತನವೆಂದೇ ಗಣಿಸುತ್ತಾನೆ.

ನೀವು 'ತಾಳಿದವ ಬಾಳಿಯಾನು' ಎಂಬ ಮಾತಿನ ಮೇಲೆ ವಿಶ್ವಾಸವುಳ್ಳವರಾದರೆ, 'ಬಲವೇ ನ್ಯಾಯ'ವೆಂಬ ನಂಬಿಕೆಯುಳ್ಳವನು ನಿಮಗೆ ಕೊಡುವ ಬಿರುದು 'ಹೇಡಿ'. ಅಂತೆಯೇ ನೀವು ಅಗತ್ಯವುಳ್ಳ ಧೈರ್ಯ ಸಾಹಸಗಳನ್ನು ಪ್ರದರ್ಶಿಸಿದರೂ ತನ್ನ ಅಂಜಿಕೆಯನ್ನೇ ನಾಗರಿಕತೆಯ ಮುಸುಕು ಹಾಕಿಕೊಂಡವನು ನಿಮಗೆಕೊಡುವ ಬಿರುದು 'ಕೇಡಿ'

ಬೆಂಗಡೆಯ ಕುತಂತ್ರ, ಚಾಡಿ, ವಂಚನೆಗಳೇ ಒಬ್ಬನ ಯೋಗ್ಯತೆಗಳಾಗಿವೆ. ಆಕುರಿತು ಜಿಗುಪ್ಸೆ ಪಡುತ್ತಾ ಅಂತಹ ಕುಹಕ ವೃತ್ತಿಗೆ ಹೇಸಿ 'ಅದು ಬಹಿರಂಗಕ್ಕೆ ಬಂದುಕೊಳ್ಳಲಿ' ಎಂದು ನೀವು ಕಾಯುವವರಾಗಿರಬಹುದು; ಆದರೆ ತನ್ನ ವಿದ್ಯೆಗೊತ್ತಿಲ್ಲದ ಒಂದೇ ಕಾರಣಕ್ಕಾಗಿ ಆತ ನಿಮ್ಮನ್ನು ನೆನಸುವುದು 'ಏನೊಂದೂ ತಿಳಿಯದ ಹೆಡ್ಡ'ನೆಂದು. ಅಂತೆಯೇ ಒಬ್ಬ ಬಹಿರಂಗವಾದಿಯಿದ್ದು, ತನ್ನ ಮುಂಗಡೆಯಲ್ಲಿರುವುದನ್ನು ಹೊರತು ಬೆಂಗಡೆಯಲ್ಲಾಗುವುದನ್ನು ಅರಿಯದಿರಬಹುದು. ನೀವು ಸಾಕಷ್ಟು ಮುಂಜಾಗರೂಕತೆಯುಳ್ಳವರಾದರೆ ಆತ ನಿಮ್ಮನ್ನು ಭಾವಿಸುವುದು ಜಡಪ್ರಾಣಿಯೆಂದೇ.

ಯಾರಾದರೊಬ್ಬನ ಬಾಲವಾಗಿದ್ದುಕೊಂಡು, ಆತ ಅಲ್ಲಾಡಿಸಿದಾಗ ಮಾತ್ರ ಅಲುಗಾಡುವ ಅಭ್ಯಾಸವಾದವನಿಗೆ ಹಾಗಿದ್ದುಕೊಳ್ಳದೆ ಮುಂಭಾಗದಲ್ಲಿ ಚಲಿಸುವವನು ಕೂಡಾ ಬಂಡಾಯಗಾರನಾಗಿ ಕಾಣುತ್ತಾನೆ. ಯಾವುದಕ್ಕೇನೇ ಆದರೂ ಇದಿರವಾದಿಯಾಗುವದೊಂದನ್ನಲ್ಲದೆ ಬೇರಾವುದನ್ನೂ ಅರಿಯದವನಿಗೆ, ತಿಸ್ನುಪ್ರೇಮದಿಂದ ಅನುಯಾಯಿತ್ವ ವಹಿಸುವವನಾದರೂ ಅಂಧಾನುಕರಣೆಯವನಾಗಿ ಕಾಣುತ್ತಾನೆ.

ಸ್ವತಃ ಹುಚ್ಚನಾಗಿದವನಿಗೆ ಮಿಕ್ಕವರ ಮಾತು ಕೃತಿಗಳು ಹುಚ್ಚು ಹುಚ್ಚಾಗಿ ತೋರುವುದರಿಂದಲೇ ಅವರು ಕೆರಳುವವನಾಗಬೇಕು; ಅಂತೆಯೇ ತಮ್ಮ ಸ್ವಾರ್ಥಮಿಶ್ರಿತ ಲೌಕಿಕ ಗುಣನಡತೆಗಳನ್ನು ಪ್ರದರ್ಶಿಸದೆ ಹೊಸ ರೀತಿಯಿಂದ ವರ್ತಿಸುವ ಆದರ್ಶವಾದಿಗಳು ಕೂಡಾ ಹಲವರಿಗೆ ಹುಚ್ಚರಾಗಿ ತೋರಬರುವದಿದೆ.

ಅಂತೂ ಸಾಮಾನ್ಯ ಮನೋವೃತ್ತಿಯೇ ಹೀಗೆ:—ತಮಗನುಕೂಲವಾಗಿ ತೋರಿಬಾರದವರು ಆಗದವರೇ. ತಮ್ಮ ಸ್ಥಿತಿ ಮತಿ ಇಲ್ಲದವರು ಅಪ್ರಯೋಜಕರು. ಹೀಗಿರುವುದರಿಂದ ತುಲನಾತ್ಮಕವಾಗಿ ನೋಡುವುದಾದರೆ ಒಬ್ಬರಿಗೊಬ್ಬರು ವಿರೋಧಿಗಳು; ಒಬ್ಬರ ದೃಷ್ಟಿಯಿಂದ ಇನ್ನೊಬ್ಬರು ನಿಷ್ಪ್ರಯೋಜಕರು.

ಜನ ಮನೋಮಟ್ಟ ಇದಕ್ಕಿಂತ ಮೇಲೇರದೆ ಒಕ್ಕಟ್ಟು, ಸಹಕಾರ, ಸಮಾನತೆ ಹೇಗೆ ಸಾಧ್ಯ?

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೀದ ಛಟ್ಟಯಾಗಿ ಎದ್ದು ಕಾಣುವುದು

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು

ಪ್ರತಿಗಳು ಸಿಗುವ ಮುಖ್ಯ ಸ್ಥಳ.—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಆಡಿತೋರಿಸುವ ಮಟ್ಟಿಗೆ ಅತ್ಯುಚ್ಚ ಆದರ್ಶ—ಮಾಡಿತೋರಿಸುವ ಮಟ್ಟಿಗೆ ತಮ್ಮ ಸ್ವಾರ್ಥಕ್ಕೆ ತೊಡಕಾಗದಷ್ಟು ಮತ್ತು ಔದಾಸೀನ್ಯಕ್ಕೆ ಭಂಗಬಾರದಷ್ಟು ಮಾತ್ರ—ಇದು ಭಾರತದಲ್ಲಿ ಅಂದಿನಿಂದೀವರೆಗೂ ಕಂಡು ಬರುತ್ತಿರುವ ಸಾಮಾನ್ಯ ದೌರ್ಬಲ್ಯ. ಮತ್ತೊಂದು ಮಹಾ ದೋಷವೆಂದರೆ ಜಾತೀಯತೆ. ಇವೆರಡು ಕೊರತೆಗಳೇ ಭಾರತಕ್ಕೊದಗಿದ ಕಷ್ಟ, ನಷ್ಟ, ಅನಾಹುತಗಳಿಗೆ ಮುಖ್ಯ ಹೇತುಗಳೆಂಬುವುದು ಸ್ಥಿತಿಗತಿಗಳ ಕಡೆಗೆ ದೃಷ್ಟಿ ಬೀರುವಾಗ ಸ್ವತಃ ಮಂದಟ್ಟಾಗುತ್ತಿದೆ.

ಆಕಾಶ ಗೋಪುರ

'ಸಂಪೂರ್ಣ ಸ್ವಾತಂತ್ರ್ಯ'ವನ್ನು ಭಾರತ ರಾಷ್ಟ್ರೀಯ ಸಭೆಯು 1929ನೇ ದಶಂಬರನಷ್ಟು ಹಳೇ ಕಾಲದಲ್ಲೇ ತನ್ನ ಗುರಿಯಾಗಿಟ್ಟುಕೊಂಡಿದ್ದಿತು. 1947ನೇ ಆಗೋಸ್ತು 15ರಷ್ಟು ತಡವಾಗಿ ಭಾರತಕ್ಕೆ ದೊರೆತುದು 'ಸಾಮ್ರಾಜ್ಯಾಂತರ್ಗತ ಸ್ವರಾಜ್ಯ'ವೇ. ಆ ಮುಹೂರ್ತದಲ್ಲೇ 'ಪೂರ್ಣ' 'ಸಂಪೂರ್ಣ' ಸ್ವಾತಂತ್ರ್ಯವಾಗಿ ಅದನ್ನು ಮಾರ್ಪಡಿಸಿಕೊಳ್ಳುವ ಅಧಿಕಾರವೇನೋ ಭಾರತೀಯರಿಗೆ ಬಂದಿದ್ದಿತೆಂಬುದು ನಿಜ. ಆದರೆ, ಆಗಲೇ ಹಾಗೆ ಪೂರ್ಣಗೊಳಿಸಿಕೊಳ್ಳುವ ಸ್ಥಿತಿಮತಿ, ಎರಡೂ ಭಾರತಕ್ಕಿರಲಿಲ್ಲವಾದ್ದರಿಂದ ಅದಾಗ ವಸ್ತುತಃ "ಪೂರ್ಣ ಸ್ವಾತಂತ್ರ್ಯ'ವಾಗಿರಲಿಲ್ಲವೆಂಬುದನ್ನು ಒಪ್ಪಬೇಕು. 1950ನೇ ಜನವರಿ 26ರಲ್ಲಿ 'ಪೂರ್ಣ ಸ್ವತಂತ್ರ ಜನತಾ ರಾಜ್ಯ' ಸ್ಥಾಪನೆಗೊಂಡು ಈಗ ಆ ಸಂಬಂಧದ ಕೆಲಸವೇನೋ ಪೂರ್ಣಗೊಂಡಿದೆ. ಆದರೆ 'ಸಂಪೂರ್ಣ ಸ್ವಾತಂತ್ರ್ಯ'ವನ್ನು ಧ್ಯೇಯವಾಗಿ ಇಟ್ಟುಕೊಳ್ಳುವಾಗ 'ಬ್ರಿಟಿಷರ ಸಂಬಂಧವನ್ನು ಕಡಿದುಕೊಂಡ...." ಎಂಬ ಸ್ಪಷ್ಟ ಶರ್ತವು ಅದಕ್ಕೆ ಜೋಡಣೆಯಾಗಿದ್ದಿತೆಂಬುದನ್ನು ಮರೆಯಲಾಗುವುದಿಲ್ಲ. ಆ ಶರ್ತವು ಈಗ ಕೂಡಾ ಅಕ್ಷರಶಃ ಪಾಲಿಸಲ್ಪಟ್ಟಿಲ್ಲ. ಸಮಾನತೆಯದಾಗಿ, ಕೇವಲ ಮೈತ್ರಿಯದಾಗಿ, ಬ್ರಿಟಿಷ್ ಸಂಬಂಧವೀಗಲೂ ಭಾರತಕ್ಕುಳಿದುಕೊಂಡಿದೆ. ಭಾರತದ "ಪೂರ್ಣ ಸ್ವತಂತ್ರ ಜನತಾ ರಾಜ್ಯ" ಬಿಲ್ಲಿಗೆ ಲೋಪ ತಟ್ಟದಂತೆ, 'ಬ್ರಿಟಿಷ್ ಕಾಮನ್‌ವೆಲ್ತ್' ಆಗಿದ್ದುದನ್ನು, ಕೇವಲ 'ಕಾಮನ್‌ವೆಲ್ತ್' ಆಗಿ ಮಾರ್ಪಡಿಸಲಾಯಿತಾದರೂ ಬ್ರಿಟಿಷ್ ಸಂಬಂಧವುಳಿದುಕೊಂಡಿದೆ. ಇಲ್ಲಿ ಅಪಮಾನಕರವಾದ ಅಥವಾ ಆಕ್ಷೇಪಕರವಾದ ಅಂಶವೇನೂ ಇಲ್ಲ; ಬದಲಿಗೆ ಸಮಾಧಾನಕರವಾದ, ಲಾಭದಾಯಕ ವಿಷಯಗಳೇ ಇವೆ ಎಂಬುದಕ್ಕಡ್ಡಿಯಿಲ್ಲ. ಆದರೆ ಇಲ್ಲಿಯ ವಾದವೆಂದರೆ ನಾವು ಬಾಯಿ ಹಾರಿಸುವುದರಲ್ಲಿ ಎಷ್ಟು ಮುಂದಿದ್ದೇವೋ ಅಷ್ಟು ಕಾರ್ಯಜಾಣರಲ್ಲ ಎಂಬುದೊಂದೇ. 'ಬ್ರಿಟಿಷ್ ಸಂಬಂಧವನ್ನು ಕಡಿದುಕೊಂಡ ಪೂರ್ಣ ಸ್ವಾತಂತ್ರ್ಯವೇ ನಮಗೆ ಬೇಕು' ಎಂದು ಇಪ್ಪತ್ತು ವರುಷಗಳ ಮೊದಲು ನಾವು ಸಾರಿದ್ದುದು ಎಷ್ಟು ಅವಸರದ ಮಾತಾಗಿದ್ದಿತು! ಹಾಗೆ ಕಂಠೋಕ್ತವಾಗಿ ಘೋಷಿಸಿದ್ದ ನಾವು ಅದನ್ನು ಗಳಿಸಿಕೊಳ್ಳುವುದರಲ್ಲಿ ಎಷ್ಟು ಹಿಂದೆಬಿದ್ದೆವು! ಅದು ದೊರಕುವಾಗಲಾದರೂ ಕಾಲಭೇದಕ್ಕನುಸಾರವಾಗಿ ನಾವು ಮೂಲದಲ್ಲಿ ಕಲ್ಪಿಸಿದುದಕ್ಕಿಂತ ಎಷ್ಟೊಂದು ಭಿನ್ನರೂಪದಲ್ಲಿತ್ತು! ಉಚ್ಚ ಆದರ್ಶವನ್ನು ಮುಂದಾಗಿ ಕಲ್ಪಿಸಿಕೊಂಡು, ಅದೆಷ್ಟೇ ದೂರವಾಗಿದ್ದರೂ ಆ ಗುರಿಯ ಕಡೆಗೆ ಹೆಜ್ಜೆಯಿಡಬೇಕಾದುದು ಅಗತ್ಯವೇನೋ ನಿಜ. ಆದರೆ ಹಾಗೆ ದೂರದ, ಕೊನೆಯ ಗಡಿಕಲ್ಲನ್ನು ನಿಶ್ಚಯಿಸುವಾಗ ಕೂಡಾ, ಕಾಲಾನುಗುಣವಾಗಿ ಆ ಗಡಿಕಲ್ಲೇ ಬೇರೇನೋ ಆಗಿಹೋಗುವಷ್ಟು ಅಂಚಿತವಿರಬಾರದು. ಕಾಲವು ತಾನಾಗಿ ನಮ್ಮನ್ನು ತಳ್ಳಿಕೊಂಡು ಹೋಗಿ ಹಾಕುವ ಒಂದು ಸರಹದ್ದನ್ನು, ನಮ್ಮ ಸ್ವಂತ ಸಾಹಸದಿಂದ ಸಾಕಷ್ಟು ಮುಂಚಿತವಾಗಿ ಸೇರುವವರಂತೆ ನಾವು ನಿಶ್ಚಯಿಸಿಟ್ಟುಕೊಳ್ಳಬೇಕೆಂದೇನು? ಹಾಗೆ ನಿರ್ಧರಿಸಿದ ಮೇಲೆ ಸ್ವತಃ ನಾವಾಗಿ ಅದನ್ನು ಮುಟ್ಟಬೇಕಾದ ಅವಧಿಯನ್ನೂ ನಿರ್ಧರಿಸಬೇಕಾದುದು ಅಗತ್ಯವಲ್ಲವೇ? ಇಂದು ನಿಜಕ್ಕೂ 'ಪೂರ್ಣ ಸ್ವಾತಂತ್ರ್ಯ'ದ ಸರಹದ್ದಿಗೆ ಸೇರುವ ನಾವು ಮೇಲ್ಗಡೆ ನಮೂದಿಸಿದ ವಿಧಾನದಿಂದ ಸೇರಿದ್ದಲ್ಲ; 'ಸಂಪೂರ್ಣ ಸ್ವಾತಂತ್ರ್ಯ'ವನ್ನು, ಅಂದು ಘೋಷಿಸಿಕೊಂಡ ಮಾದರಿಯಲ್ಲೇ ಸಾಧಿಸಿಕೊಂಡುದಲ್ಲ. ನಮ್ಮ ಹೆಚ್ಚಿನ ಧನ್ಯತೆಯ ವಿಷಯವಾಗಿರುವ ರಾಷ್ಟ್ರ ಸ್ವಾತಂತ್ರ್ಯದ ಸಂಬಂಧದಲ್ಲಿ ಕೂಡಾ ನಾವು ಬಾಯಿ ಹಾರಿಸಿದಷ್ಟು ಕೆಲಸ ಮಾಡಿಲ್ಲ, ಎಂಬುದೊಂದೇ ಇಲ್ಲಿಯ ವಾದದ ಸಾರಾಂಶ ಹೊರತು ಬೇರಲ್ಲ.

ಬಾಯಿ ಬಡುಕತನ!

ಕಾಂಗ್ರೆಸ್ ಸರಕಾರಗಳ ಆಡಳಿತೆ ಮತ್ತು ಕಾಂಗ್ರೆಸ್ ಸಂಸ್ಥೆಯ ರೀತಿನೀತಿಗಳು ದಿನಹೋದಂತೆ ಜನತೆಗೆ ಹೆಚ್ಚೆಚ್ಚು ಅಪ್ರಿಯವಾಗುತ್ತಾ ಬರುತ್ತಿವೆ ಎಂಬುದು ಕಠೋರ ಸತ್ಯ. ಇದಕ್ಕೂ ನಾವು ಮಾಡಲಾಗುವುದಕ್ಕಿಂತ ಅತಿ ಹೆಚ್ಚಿನದನ್ನು ಆಡಿತೋರಿಸಿದ್ದುದೇ ಮುಖ್ಯ ಕಾರಣವೆಂಬುದು ನಿಸ್ಸಂದೇಹ. 'ಸ್ವಾತಂತ್ರ್ಯ'ವೆಂದರೆ ಪ್ರತ್ಯಕ್ಷ ಸ್ವರ್ಗ; ಅಧಿಕಸಂಖ್ಯಾತರಾದ ಬಡಜನರ ಪಾಲಿಗೆ ಅದು ಅವಶ್ಯವುಳ್ಳದ್ದನ್ನೆಲ್ಲಾ ಒದಗಿಸುವ ಕಾಮಧೇನು; ಕರಕಂದಾಯಗಳೆಲ್ಲವೂ ಸ್ವರಾಷ್ಟ್ರ ಹಿತದೃಷ್ಟಿಯಿಂದ ಬ್ರಿಟಿಷರು ಹೇರಿರುವ ಅನ್ಯಾಯಗಳು; ಸ್ವರಾಜ್ಯದಲ್ಲಿ ಕಷ್ಟನಷ್ಟ, ಅಡಚಣೆ, ಅಪಮಾನ, ಕಾಂತವ್ಯಗಳ ಪೀಡೆಯೆಂಬುದಿಲ್ಲವೇ ಇಲ್ಲ—ಎಂಬ ಅತ್ಯಂತ ರಮ್ಯ ಚಿತ್ರವನ್ನು ಸ್ವರಾಜ್ಯಾಂದೋಲನದ ವೇಳೆ ಜನತೆಯ ಮುಂದಿಡಲಾಗಿತ್ತು. 'ಗುಲಾಮಗಿರಿಯ ಸ್ವರ್ಗಕ್ಕಿಂತ ಸ್ವತಂತ್ರ ನರಕವಾದರೂ ವಾಸಿಯಾದ್ದರಿಂದ ಆರಂಭದಲ್ಲಿ ಅಸಹ್ಯ ಆಪತ್ತುಗಳೊದಗಬಹುದಾದರೂ ಸ್ವಾತಂತ್ರ್ಯವನ್ನು ಸಾಧಿಸುವುದು ಜನ್ಮಸಿದ್ಧಹಕ್ಕೆಂಬ ಮಾದರಿಯಲ್ಲಿ ಆಗ ಜನತೆಯಲ್ಲಿ ಚೇತನ ಬರಿಸಿದ್ದೇನೂ ಇಲ್ಲ. 'ದಾಸ್ಯವು ಪ್ರತ್ಯಕ್ಷ ನರಕವಾಗಿದ್ದರೆ, ಸ್ವರಾಜ್ಯವು ಸ್ವರ್ಗಸುಖದೊಂದಿಗೇನೇ ಹುಟ್ಟುವಂತಹದು, ಎಂಬ ಆಶೆಯನ್ನೇ ಜನತೆಯಲ್ಲಿ ಬೆಳೆಯಿಸಲಾಯಿತು. ಅಸಹ್ಯ ಕಷ್ಟಗಳ ಬೆದರಿಕೆ ಬೀರಿದರೆ, ಕೇವಲ ಸ್ವಾಭಿಮಾನಕ್ಕಾಗಿ ಅಂತಹ ಸಂಕಟದಾಯಿ ಸ್ವರಾಜ್ಯ ಸಾಧನೆಯ ಹೋರಾಟಕ್ಕೆ ಜನತೆಯೇಳಲಾರದೆಂದು ಹೆದರಿ, ಆ ರೀತಿ ಜನರನ್ನು ವಂಚಿಸಿದ್ದೇನೂ ಇಲ್ಲ. ಕಾಂಗ್ರೆಸ್ ನಾಯಕರ ದೃಷ್ಟಿಪಥದಲ್ಲಿದ್ದ ಸ್ವರಾಜ್ಯವೇ ಅಷ್ಟು ಸುಖಮಯವಾಗಿತ್ತು; ಅದಕ್ಕನುಗುಣವಾಗಿ ಅವರು ಮಹಾಮಹಾ ಭರವಸೆಗಳನ್ನು ಜನತೆಗೆ ಕೊಟ್ಟಿದ್ದರು. ಆದರೆ ಈಗ? ನಿಜಕ್ಕೂ ಸ್ವತಂತ್ರಾಡಳಿತೆಯಲ್ಲಿ ಜನತೆಯ ಕಷ್ಟನಷ್ಟಗಳು ಹೆಚ್ಚಿವೆ; ಇದು ಸ್ವಾಭಾವಿಕ; ಅನಿವಾರ್ಯ. ಆದರೆ ಈ ವಾಸ್ತವಿಕತೆಯನ್ನು ಸಾರ್ವಜನಿಕರ ಮನಸ್ಸಿಗೆ ಮುಟ್ಟಿಸುವುದಾದರೂ ಎಷ್ಟು ಪ್ರಯಾಸದ ಕೆಲಸ! ಬ್ರಿಟಿಷರ ದಾಸ್ಯದ ಕಾಮಧೇನುವಾಗಿ ಬರುತ್ತದೆ ಎಂಬ ಭರವಸೆ ಅಂದು ದೊರೆತಿದ್ದ ಸ್ವರಾಜ್ಯವು ರಾಕ್ಷಸೀ ರೂಪದಿಂದ ಇಂದು ತಾಂಡವನೃತ್ಯವಾಡುತ್ತಿದೆ, ಎಂಬ ಕಹಿ ಅನುಭವ ಹೊಂದಿರುವ ಜನಸಾಮಾನ್ಯರ ಹೃದಯವೀಗ "ಸ್ವರಾಜ್ಯ, ಸ್ವರಾಜ್ಯ ಎಂದು ವಂಚನೆಗೀಡಾದೆವು" ಎಂದು ಕುದಿಯುತ್ತಿರುವುದರಲ್ಲಿ ತಪ್ಪೇನಿದೆ? ಆ ಕಾಲದಲ್ಲಿ ರಾಷ್ಟ್ರದ ಹೊಣೆಗಾರರಾಗಿದ್ದ ಬ್ರಿಟಿಷರು ಪರಕೀಯರಿದ್ದುದರಿಂದ, ಅವರಾ ರೀತಿ ಹೊಣೆ ಹೊತ್ತು ನಿಂತಿದ್ದುದೇ ತಪ್ಪೆಂಬುದು ಸ್ವತಃಸಿದ್ಧ. ಆದರೆ ಅಸ್ತಿವಾರ ಆಧರಿಸಲಾಗುವಂತಹದಲ್ಲವೆಂಬ ಮೂಲಸತ್ಯವನ್ನೇ ರಾಷ್ಟ್ರನಾಯಕರಾಗ ಅವಲಂಬಿಸಿ ತೃಪ್ತರಾಗಿರಲಿಲ್ಲ. ಅದರ ಮೇಲಿನ ಕಲ್ಲುಕಂಭ, ಮರಮುಟ್ಟು ಎಲ್ಲವೂ ಟೊಳ್ಳು ಟೊಳ್ಳೇ ಎಂದು ಸಾರಿ ಸಾರಿ ಹೇಳಿದ್ದರು. ಈಗ ಅಸ್ತಿವಾರವೇನೋ ಭದ್ರವಾದುದಿದೆ; ಹೊಸತಾಗಿದೆ. ಆದರೆ ಅದರ ಮೇಲೆ ಏರಿಸಿಕೊಂಡಿರುವ ಮರ, ಮುಟ್ಟು, ಕಲ್ಲು, ಕಂಭಗಳೆಲ್ಲವೂ ಬಹುಮಟ್ಟಿಗೆ ಮೊದಲಿನವೇ; ಆ ಕಾಲದಲ್ಲೇ ಅವು ಹುಳುಕು ಬಿದ್ದವುಗಳೆಂದ ಮೇಲೆ, ಈಗ ಅದಕ್ಕಿಂತಲೂ ಹೆಚ್ಚಿಗೆ ಹಾಳಾಗಿರಬೇಡವೆ? ಹಾಗೆಂದರೆ ಸ್ವತಂ ವಂಚನೆಯಲ್ಲವೆ? ಇಂತಹ ಪ್ರಶ್ನೆಗಳು ಸಾರ್ವಜನಿಕರ ತಲೆಯೊಳಗೆ ಸುತ್ತಾಡುವಂತಾಗಿದೆ. ಅಂದು ದೂರಾಲೋಚನೆಯಿಟ್ಟುಕೊಂಡು ವೃತ್ತಾಂತವ್ಯವರಿತು ವಾಗ್ದಾನ, ಭರವಸೆಗಳನ್ನು ಕೊಡದೆ ತಾತ್ಕಾಲಿಕ ಆವೇಶಗಳಿಗೊಳಗಾಗಿ, ಭಾವನಾಕಾಶದಲ್ಲಿ ವಿಹರಿಸಿ, ದೊಡ್ಡ ದೊಡ್ಡ ಬಾಯಿಗುಂಡುಗಳನ್ನು ಹಾರಿಸಿ ಬಿಟ್ಟುದೇ ಇಂದಿನ ಈ ಸ್ಥಿತಿಗೆ ಕಾರಣ. ರಾಷ್ಟ್ರ ವಿಭಜನೆ, ಮಹಾಮಹಾ ಜಾತೀಯ ಗೊಂದಲಗಳು, ಯುದ್ಧೋತ್ತರ ಬಂಗಾಲ ವಾತಾವರಣ—ಇಂತಹವು ಸ್ವಾತಂತ್ರ್ಯ ಕಲ್ಪನೆ ಮೂಡಿದ್ದ ಆ ಕಾಲದಲ್ಲಿ ಊಹಿಸಲಾಗದಿದ್ದ ನವೀನಾಪತ್ತುಗಳೇನೋ ನಿಜ; ರಾಷ್ಟ್ರದ ಇಂದಿನ ಕಷ್ಟ ಅಡಚಣೆಗಳಿಗೆ ಮುಖ್ಯವಾಗಿ ಇವೇ ಕಾರಣಗಳು ಎಂಬುದೂ ಸತ್ಯ. ಆದರೆ ಸ್ವಾತಂತ್ರ್ಯ ಸಾಧನೆಯ ಪ್ರಯತ್ನದ ವೇಳೆ "ಅದು ಕಲ್ಪವೃಕ್ಷವಾಗಿ ಅವತರಿಸುವಂತಹದಲ್ಲ; ಸಸಿಯಾಗಿ ಮೊಳೆಯುವಂತಹದು. ಮೊಳಕೆಯಲ್ಲೇ ಮುರುಟಿಸಿ ಬಿಡುವ ಸೊಳ್ಳೆಕೀಟಗಳ ಹಾವಳಿ ಅದಕ್ಕೆ ತಾಗಬಹುದು. ಅಂತಹ ಕಂಟಕಗಳಿಂದ ಪಾರುಮಾಡಿ ಸಸಿಯನ್ನು ಮರವಾಗಿ ಬೆಳೆಸಿಯೇ ಫಲ ಪಡೆಯಬೇಕು. ಹಾಗಾಗಲು ಸಹಜವಾಗಿ ಅವಧಿಬೇಕು; ದುಡಿಮೆ ಮತ್ತು ಸಹನೆಯಿರಬೇಕು" ಎಂಬ ನಿರೀಕ್ಷೆಯನ್ನು ಹುಟ್ಟಿಸುತ್ತಿದ್ದರೆ ಇಂದಿನ ಆಪತ್ತುಗಳೆಲ್ಲವೂ ನಿರೀಕ್ಷಿತ ಆಪತ್ತುಗಳಾಗುತ್ತಿದ್ದುವು; ಆಕಸ್ಮಿಕ ಅಪಾಯದ ಗಲಿಬಿಲಿಯೇಳದಂತಾಗುತ್ತಿದ್ದಿತು: ಸುಖವನ್ನೇ ನಿರೀಕ್ಷಿಸಿಕೊಂಡು ಬಂದು ನೋಡುವಾಗ ದುಃಖವನ್ನನುಭವಿಸಬೇಕಾಗಿ ಬಂದು "ವಂಚಿಸಲ್ಪಟ್ಟೆವು" ಎಂಬ ಪಶ್ಚಾತ್ತಾಪ ಜನತೆಯಲ್ಲಿ ಮೂಡಲು ಅವಕಾಶವೆ ದೊರೆಯುತ್ತಿದ್ದಿಲ್ಲ. ಆದರೆ ಭಾರತೀಯರ ಹುಟ್ಟು ಸ್ವಭಾವವ

ಈ ಕಡೆ ಗಮನವಿರಲಿ!

The Canara Mutual Assurance Co. Ltd.

ESTD: 1935. H. O. UDIPI.

Canara Mutual occupies a unique position of distinction amongst the sound Life Offices in India. Constituted as a Mutual Company, the entire profits are shared by the participating Policy-holders alone, there being no share-holders. It has paid bonus since inception and in all the Valuations conducted on progressively stringent basis it has shown a surplus. The Company has maintained its reputation by fair treatment. For more details about this Progressive Mutual Life Office, write to-day to its Head Office.

ನ್ನು ಬಹುದಾದ ಬಾಯಿ ಬಡಕತನ ಇಂದಿನ ಅವಸ್ಥೆಯನ್ನು ತಂದೊಡ್ಡಿದೆ. ಇದರಿಂದ ಕಾಂಗ್ರೆಸಿಗರಂತೂ ಪರಿಕಲಿಯುವುದು ಖಂಡಿತ. ಬೇರೇನಾಗಿದ್ದರೂ ಕಾಂಗ್ರೆಸಿಗರ ಹಿಂದಿನ ಬಡಾಯಿ ಇನ್ನು ಕೇಳಬಾರದಂತಾಯಿತೆಂದು ನಂಬಿಕೆಯಿಡಬಹುದು. ಆದರೆ ಕಾಂಗ್ರೆಸಿಗರ ಬಾಯಿ ಬಡುಕತನ ನಿಂತಂತೆ ಭಾರತದ ಬಡಾಯಿಗಿರಿಯೇ ನಿಂತಿತೆಂದು ಆಶಿಸಲವಕಾಶವಿಲ್ಲ. ಕಾಂಗ್ರೆಸಿಗರು ಅನುಭವಿಸಿ ಮುಗಿಸಿದುದನ್ನು ಇತರ ಪಕ್ಷಗಳವರು ಈಗ ಆರಂಭಿಸಿದಂತಿದೆ. ಜನಸಾಮಾನ್ಯರ ಸಂಕಷ್ಟ ಅಡಚಣೆಗಳನ್ನು ನಿವಾರಿಸುವ ಕುರಿತು—ಸಾಮಾಜಿಕಾರ್ಥಿಕ ಪ್ರಗತಿಸಾಧಿಸುವ ಸಂಬಂಧವಾಗಿ—ಸಮಾಜವಾದಿ ಪಕ್ಷಗಳಂಥವರು ಜನತೆಗೆ ಮಹಾಮಹಾ ಭರವಸೆಗಳನ್ನು ಕೊಡಹತ್ತಿದ್ದಾರೆ. ಒಬ್ಬರು ಸ್ವತಃ ಅನುಭವಿಸಿ ಮುಗಿಸಿದ ಕಹಿ, ಕರ್ತೋರಿಕೆಗಳಿಂದ ಪಾಠ ಕಲಿಯುವ ಹಕ್ಕು ಮತ್ತೊಬ್ಬನಿಗೂ ಇದೆಯಾದರೆ, ಅಸಾಧ್ಯಾಶ್ವಾಸನೆಗಳನ್ನು ಕೊಟ್ಟು ಕಾಂಗ್ರೆಸಿಗರೀಗ ಕೇಳಬೇಕಾಗಿಬಂದಿರುವ ದೂಷಣೆಗಳಿಂದ ಸಮಾಜವಾದಿಗಳೇ ಮೊದಲಾದವರು ಅಗತ್ಯವಾಗಿ ಪಾಠ ಕಲಿಯಬೇಕು. ಹಾಗಾಗದೆ ಹೋದರೆ ಜನತೆಯಾದರೂ ಕಣ್ಣು ತೆರೆಯಬೇಕು. ಸರ್ಕಾರ ಒಂದೊಂದೇ ಪಕ್ಷದವರು ಕೊಡುವ ಆಶೆ, ಮತ್ತು ಅದರ ಬೆನ್ನಲ್ಲೇ ನಿರ್ಮಿಸುವ ನಿರಾಶೆಗಳಿಗೆ ಬಲಿಬೀಳುತ್ತಾ ಹೋಗುವ ಹುಚ್ಚಾಟವನ್ನು ಜನರು ಇಲ್ಲಿಗೇ ನಿಲ್ಲಿಸಿಕೊಳ್ಳಬೇಕು. ಇನ್ನು ಯಾರು ಎಂತಹ ರಮ್ಯ ಕಾರ್ಯಕ್ರಮವನ್ನು ಮುಂದಿಟ್ಟರೂ, ಅದು ವ್ಯವಹಾರ್ಯವೋ ಅಲ್ಲವೋ ಎಂಬುದನ್ನು ಪರೀಕ್ಷಿಸಿಯೇ ಅಂಗೀಕರಿಸಿಕೊಳ್ಳುವ ಮನೋವೃತ್ತಿ ಜನಸಾಮಾನ್ಯರಲ್ಲಿ ಮೂಡಬೇಕು.

ಜಾತೀಯತಾ ಕಂಟಕ

ಭಾರತೀಯರ ಪಾಲಿನ ಮತ್ತೊಂದು ಮಹಾ ದುರ್ಗುಣವಾಗಿರುವ ಜಾತೀಯತಾ ಆಸಕ್ತಿಯು ಈಗಲೂ ಒಂದು ಅಪಾಯವಾಗಿ ಹೇಗೆ ಜೀವಂತವಿದೆ, ಎಂಬುದನ್ನು ಅರಿತಿರಬೇಕಾದುದು ಅಗತ್ಯ. ಭಾರತದಲ್ಲಿ ತುಂಡು ರಾಜರ ಆಡಳಿತೆಗಳಿದ್ದ ಹದಿನೆಂಟನೇ ಶತಮಾನದಲ್ಲಿ ಒಳಗಡೆಯ ಯುದ್ಧಗಳೆಷ್ಟೋ ಆಗಿರಬಹುದು. ಆದರೆ ಆಧುನಿಕ ಯುಗದಲ್ಲಿ ಭಾರತವು ಯುದ್ಧರಂಗವಾಗಿ ಮಾರ್ಪಟ್ಟಿದ್ದಿಲ್ಲ. ಇಲ್ಲಿಯೂ ರಕ್ತ ಪ್ರವಾಹ ಹರಿದುದಿದ್ದರೆ, ಅದು ಜಾತೀಯ ಗೊಂದಲಗಳಿಂದಲೇ. ಅಖಂಡ ರಾಷ್ಟ್ರವು ವಿಭಜನೆಗೊಂಡ ಅತಿ ದೊಡ್ಡ ಆಪತ್ತು ಬಂದು ಬಡಿದುದೂ ಜಾತೀಯತೆಯ ದೆಸೆಯಿಂದಲೇ. ಜಾತೀಯ ಭಾವನೆಯು ಭಾರತೀಯ ಮನೋವೃತ್ತಿಗೆ ಹಿಡಿದಿರುವ ಕಿಲುಬು; ಜಾತೀಯತೆಯೇ ಭಾರತಕ್ಕೆ ಬಡಿದಿರುವ ಮಹಾ ಶಾಪ. ಆದರೆ ಸ್ವಾತಂತ್ರ್ಯ ಸ್ಥಾಪನಾ ದಿನದ್ದವರೆಗೂ ನಾವೀ ಶಾಪವನ್ನು ಪ್ರತಿ ಸಂದರ್ಭದಲ್ಲೂ ಶಿರಸಾವಹಿಸುತ್ತಾ ಬಂದಿದ್ದೆವು ಹೊರತು ನಿವಾರಿಸಿ ಕೊಂಡುದಿಲ್ಲ. ಜಾತೀವಾರಾಗಿ ಪ್ರತ್ಯೇಕಮತದಾನ ಪದ್ಧತಿಯನ್ನು—ಆ ಮೇಲೆ ಪ್ರತ್ಯೇಕರಾಷ್ಟ್ರೀಯತೆಯನ್ನು —ಮನ್ನಿಸಿಕೊಂಡುದಾಯಿತು. ಅದಕ್ಕಿಂತ ಹೆಚ್ಚಿನ ಒಂದು ಗುರಿಯೇ [illegible]

ಮಾವಧಿ ಪರಿಣಾಮವನ್ನು ಪಡೆದಂತಾಯಿತು ಇನ್ನು ಸ್ವತಂತ್ರ ಭಾರತದಲ್ಲಿ, ಆ ವಿಷದ ಅಣುಮಾತ್ರವನ್ನೂ ಇರಗೊಡಿಸಬಾರದೆಂದು ಸಂಕಲ್ಪಿಸಲಾಗಿದೆ. ಈ ಸಂಕಲ್ಪನಾಧನೆಗನುಗುಣವಾಗಿ ರಾಜ್ಯಾಂಗ ವಿಧಾನಗಳು ರಚನೆಗೊಂಡಿವೆ. ಸರಕಾರದ ಹಾದಿಯಿಂದ ಜಾತೀಯತೆಯನ್ನು ಎತ್ತಿ ಒಡೆಯುವುದು ಈ ಕಾರಣದಿಂದ ಅಸಾಧ್ಯವಾಗಿದೆ; ಕೃಪ ಒದ್ದು ರಾಜಕೀಯ ಕ್ಷೇತ್ರದಿಂದ ಈ ಕಂಟಕವನ್ನು ಸಮೂಲ ಕಿತ್ತೆಸೆಯಲಾಯಿತೆಂಬುದು ನಿಜ. ಆದರೆ ಜನಮನೋರಂಗದಿಂದಲೂ ಅದು ಮಾಯವಾಗಿದೆಯೆ? ಆಗ ಕಳೆತ ಕೊಳ್ಳುವುದಕ್ಕೂ ಅಂತರ್ಧಾನವಾಗುವುದಕ್ಕೂ ವ್ಯತ್ಯಾಸವಿದೆ; ಭಾರತದಲ್ಲಿ ಜಾತೀಯತೆಯು ಅಂತರ್ಧಾನಹೊಂದಬೇಕೆಂದು ಇಲ್ಲಿಯ ಸಂಕಲ್ಪವಿರುವಾಗ, ಅದು ಅಡಗಿ ಕುಳಿತು ಕೊಂಡಿಲ್ಲವೆ? ಸಂದರ್ಭವೊದಗಿದಾಗಲೆಲ್ಲ ತಲೆಯೆತ್ತುವ ಸ್ಥಿತಿಯಲ್ಲಿಲ್ಲವೆ? ನಿದರ್ಶನಕ್ಕಾಗಿ 'ಪ್ರತ್ಯೇಕ ಮತದಾನ' ಪದ್ಧತಿಯನ್ನು ರದ್ದುಪಡಿಸಿಕೊಂಡಿರುವ ಶುದ್ಧ ವಾತಾವರಣವು ಹಿಂದೂ ಜಾತೀಯವಾದಿಗಳ ದೆಸೆಯಿಂದ ಹೇಗೆ ಹಾಳಾದೀತೆಂಬುದನ್ನು ಊಹಿಸಬಹುದು. ರಾಷ್ಟ್ರ ವಿಭಜನೆಯನ್ನು ಸಾಧಿಸಿದ ನಂತರ ಅದೃಶ್ಯವಾಗಿರುವ ಈ ಪ್ರತ್ಯೇಕ ಮತದಾನ ಪದ್ಧತಿಯು, ಆ ಕಾಲದಲ್ಲಿ ಹುಟ್ಟಿಕೊಳ್ಳದಿರುತ್ತಿದ್ದರೆ ಆಗ ಬಹುದಾಗಿದ್ದಂತಹ ಹಿತವೇ ಈ ಕಾಲದಲ್ಲಿ ಈ ಸತ್ಸನ್ನಾತ್ರದಿಂದ ಆಗುವಂತಿಲ್ಲ- ಪ್ರತ್ಯೇಕ ಮತದಾನದ ಹಕ್ಕನ್ನು ಆ ಕಾಲದಲ್ಲಿ ಕೊಡದಿರುತ್ತಿದ್ದರೆ, ಮುಸಲ್ಮಾನರಂತಹ ಅಲ್ಪ ಸಂಖ್ಯಾಕ ಸಮಾಜಗಳವರಿಗೆ 'ತಾವು ಬೇರೆ' ಎಂಬ ಭಾವನೆಯನ್ನು ಪೋಷಿಸಿಕೊಳ್ಳಲಾಗದೆ, ಅದು ಆಗಲೇ ಅಲ್ಲಿಯೇ ಕಡಿ ಹೋಗುತ್ತಿತ್ತು. ಆ ಬಳಿಕ ಕಾಲದ ಪ್ರತ್ಯೇಕ ಮತದಾನಕ್ಕೆ ಮುಸ್ಲಿಂ ಬೇಡಿಕೆಯು ಅದಮ್ಯವಾಗಿ ಕಂಡುಬಂದುದರಿಂದಲೋ, ಪ್ರತ್ಯೇಕತಾ ಭಾವನೆಯು ಅಷ್ಟರಿಂದಲೇ ಥಂಡಾಗೊಳ್ಳುವುದೆಂಬ ಭರವಸೆಯಿಂದಲೋ ರಾಷ್ಟ್ರನಾಯಕರು ಅದನ್ನೊಪ್ಪಿಕೊಂಡ ಮೇಲೆ, ಅದು ಪರಮಾವಧಿ ಹಾವಳಿಯನ್ನು ಮಾಡಿದ ನಂತರವೇ ಈಗ ಮುಕ್ತಾಯಗೊಂಡಿದೆ. ಜನತಾರಾಜ್ಯ ಭಾರತದ ಮೊದಲ ಚುನಾವಣೆಯಲ್ಲೇ ಅದಿಲ್ಲದಂತಾಗಿರುವುದು ನಿಜಕ್ಕೂ ಸಮಾಧಾನದ ವಿಷಯ; ಆದರೆ, ಅದಿದ್ದಷ್ಟು ಕಾಲ ಜನತೆಯ ಮನಸ್ಸಿಗೆ ಮೇಲಿಂದ ಮೇಲೆ ಒತ್ತಿದ್ದ ಮುದ್ರೆಗಳು ಇನ್ನೂ ಮಾಸಿಲ್ಲ; ಸಂಖ್ಯಾನುಸಾರವಾಗಿ ಯಾವ ಸಮಾಜಗಳವರಿಗೆ, ಎಷ್ಟು ಸ್ಥಾನ ದೊರಕಬೇಕಾಗುತ್ತದೆ, ಎಂಬ ಸರಿಯಾದ ಅಂಕೆ ಸಂಖ್ಯೆಗಳು ಆ ಪ್ರತ್ಯೇಕ ಮತದಾನದ ಪರಿಣಾಮವಾಗಿ ಎಲ್ಲರಿಗೂ ತಿಳಿದು ಹೋಗಿವೆ. ಈಗಿನ ಮಿಶ್ರ ಮತದಾನ ಪ್ರಕಾರ ಭಾವೀ ಚುನಾವಣೆಯಲ್ಲಿ ಹಿಂದಿನ ಸಂಖ್ಯಾಮಾನದಷ್ಟೇ ಮುಸ್ಲಿಮರು, ಮತ್ತಿತರ ಅಲ್ಪ ಸಂಖ್ಯಾಕರು, ಆರಿಸಲ್ಪಡದೆ ಹೋದರೆ, ಬಹು ಸಂಖ್ಯಾಕ ಸಮಾಜಗಳವರು ಈ ಅಲ್ಪ ಸಂಖ್ಯಾಕ ಸಮಾಜಗಳವರಿಗೆ ಅನ್ಯಾಯಮಾಡಿದರೆಂಬ ಅಪವಾದ ತಪ್ಪಲೆಡೆಯಿದೆ. ಭಾರತವು ಹಿಂದುಗಳ ರಾಜ್ಯವೆನ್ನುವವರ ಆರೋಪವು ಸತ್ಯವೆನ್ನಿಸುವ ಸಂಭವವಿದೆ. ಆದ್ದರಿಂದ ಕಾಂಗ್ರೆಸ್, ಸೋಶಿಯಲಿಸ್ಟ್ ಪಕ್ಷಗಳಂತಹವು ಈ ಕಡೆಗೆ ಗಮನಕೊಟ್ಟು ತಮ್ಮ ಹುರಿಯಾಳುಗಳಾಗಿ ಅಲ್ಪ ಸಂಖ್ಯಾಕ ಸಮಾಜಗಳವರನ್ನೂ ನಿಕಷ್ಟ ಸಂಖ್ಯೆಯಲ್ಲಿ ಮುಂದೊಡ್ಡಬಹುದು. ಆದರೆ ಹಿಂದೂ ಮಹಾಸಭೆ, ಆರ್. ಯಸ್. ಯಸ್ ನಂತಹ ಹಿಂದೂ ವಾದಿಗಳಿಗೆ ಕಮ್ಮಾಟವನ್ನು ಹೂಡುವ ಒಳ್ಳೇ ಕ್ಷೇತ್ರಗಳು ದೊರಕುವವೆಂಬುದನ್ನು ಅಲಕ್ಷಿಸಲಾಗುವುದಿಲ್ಲ. ಜನತಾರಾಜ್ಯ ಭಾರತವನ್ನು ಹಿಂದೂ ರಾಜ್ಯವಾಗಿ ಮಾರ್ಪಡಿಸುವ ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳಲು ಹಿಂದೂವಾದಿಗಳಿಗೆ ಭಾವೀ ಮಹಾಚುನಾವಣೆಯು ಯೋಗ್ಯಸಂದರ್ಭವಾಗಬಹುದು. ಕಾಂಗ್ರೆಸ್ ಅಥವಾ ಸಮಾಜವಾದಿ ಪಕ್ಷವು ಅಲ್ಲಲ್ಲಿಯ ಕೆಲವು ಮತದಾರ ಕ್ಷೇತ್ರಗಳಲ್ಲಿ, ಮುಸ್ಲಿಮರೇ ಮೊದಲಾದ ಅಲ್ಪ ಸಂಖ್ಯಾಕ ಸಮಾಜಕ್ಕೆ ಸೇರಿದ ಉಮೇದ್ವಾರರನ್ನು ನಿಲ್ಲಿಸಿಕೊಂಡರೆನ್ನೋಣ. ಎಲ್ಲಿ ಮುಸ್ಲಿಂ ಉಮೇದ್ವಾರಿಗಳಿರುವರೋ ಅಲ್ಲಿ ತಪ್ಪದೆ ಹಿಂದೂ ಮಹಾ ಸಭೆಯವರು ತಮ್ಮ ಉಮೇದ್ವಾರಿಗಳನ್ನು ನಿಲ್ಲಿಸಬಹುದು. ಇಂತಹ ಕ್ಷೇತ್ರಗಳಲ್ಲಿ ನಿಲ್ಲುವ ಹಿಂದೂ ಸಭಾ ಪ್ರತಿನಿಧಿಗಳಿಗೆ, ಇತರಕಡೆಗಳಿಗಿಂತ ಹೆಚ್ಚಿನ ಚಾನ್ಸ್ ದೊರೆಯುವದೆಂಬುದು ಖಂಡಿತ. ಹೇಗಾಗಿ ಯಾವುದರಲ್ಲಿ ಸೋತರೂ ಹಿಂದುಗಳಲ್ಲದವರನ್ನು ಚುನಾವಣೆಗಳಲ್ಲಿ ಸೋಲಿಸುವ ಮಟ್ಟಿಗೆ ಹಿಂದೂವಾದಿಗಳು ಗೆಲ್ಲಬಹುದು. ಆ ರೀತಿ ಕಾಂಗ್ರೆಸ್ ಮತ್ತಿತರ ಅಂತಹ ಪಕ್ಷಗಳು ಅಲ್ಲೊಬ್ಬ, ಇಲ್ಲೊಬ್ಬನಂತೆ ನಿಲ್ಲಿಸಿಕೊಳ್ಳುವ ಅಲ್ಪಸಂಖ್ಯಾಕ ಸಮಾಜಗಳವರೂ ಉದುರಿಹೋದರೆ, ಒಟ್ಟಿನ ಮೇಲೆ ಹಿಂದುಗಳೇ ಆರಿಸಿ ಬರುವಂತಾಗುವುದು. ಆಗ ಭಾರತವನ್ನು ಹಿಂದೂ ರಾಜ್ಯವಾಗಿ ಮಾರ್ಪಡಿಸಬೇಕೆಂಬ ಆತುರವಿರುವವರ ಮತ್ತು ಭಾರತವು ಹಿಂದೂ ರಾಜ್ಯವೆಂದು ಆರೋಪಿಸುವವರ ಬಯಕೆ ಕೈಗೂಡಿದಂತೆಯೇ ಸರಿ. ಇಂತಹ ಅಪಾಯವನ್ನು ಆಮಂತ್ರಿಸಿಕೊಳ್ಳುವ ಸ್ಥಿತಿಯಲ್ಲೇ ಭಾರತೀಯ ಮುಸ್ಲಿಮರ ಮನೋವೃತ್ತಿಯೂ ಇರುವುದು ಅತ್ಯಂತ ಶೋಚನೀಯ. ಭಾರತದ ಮುಸ್ಲಿಂ ನಾಯಕರು ಸಂದರ್ಭಾನುಸಾರವಾಗಿ 'ಜನತಾ ರಾಜ್ಯ ಭಾರತ'ದ ಮೇಲೆ ಗಾಢನಿಷ್ಠೆಯನ್ನು ಪ್ರದರ್ಶಿಸುವದಿದೆ. ಲೀಗ್ ಆಂದೋಲನದ ಮಾದರಿಯ ಮುಸ್ಲಿಂ ಚಳವಳಿಯೇನೂ ಈಗ ಕಂಡುಬರುವದಿಲ್ಲ. ಆದರೆ ಲೀಗ್ ಚಳವಳ ಕಾಲದ ಮುಸ್ಲಿಂ ಮನೋವೃತ್ತಿ ಈಗ ಸಂಪೂರ್ಣ ಮಾಯವಾಗಿರುವ ಸ್ಪಷ್ಟ ಚಿಹ್ನೆಯೂ ಕಂಡು ಬಂದಿಲ್ಲ. ಜನತಾರಾಜ್ಯ ಭಾರತದಲ್ಲಿ ಅತಿನಿಷ್ಠ ಮುಸ್ಲಿಮರು ಅನಿವಾರ್ಯವಾಗಿ ತಟಸ್ಥರಾಗಿದ್ದಾರೆನ್ನುವದು ಸುಲಭ—ಭಾರತದ ಅನನ್ಯ ಭಕ್ತರಾಗಿ ತ್ರಿಕರಣ ಪೂರ್ವಕವಾಗಿ ದುಡಿಯುತ್ತಿದ್ದಾರೆ, ಎನ್ನುವುದು ಕಷ್ಟ. ಇಂತಹ ಪರಿಸ್ಥಿತಿ ಜನತಾರಾಜ್ಯ ಭಾರತದ ಭವಿಷ್ಯಕ್ಕೇನೇ ಹಾನಿಕರವೆಂಬುದನ್ನು ಮರೆಯಬಾರದು. ಭಾವೀ ಮಹಾಚುನಾವಣೆಯ ಮೊದಲೇ ಹಿಂದು ಮುಸ್ಲಿಂ, ಮತ್ತಿತರ ಸಮಾಜಗಳವರೆಲ್ಲರೂ ಮನಸ್ಸಾಕ್ಷಿ ಪೂರ್ವಕ ಭಾರತ ಜನತಾರಾಜ್ಯದ ನಿಷ್ಠಾವಂತ ನಾಗರಿಕರಾಗಿ ಮಾರ್ಪಡುವಂತಾಗಬೇಕು. ಹಾಗೆ ಮಾರ್ಪಡಿಸಲಗತ್ಯವುಳ್ಳ ಅಂತರಂಗ ಬಹಿರಂಗ ಶುದ್ಧೀಕರಣ ಕಾರ್ಯಗಳು ಭರದಿಂದ ನಡೆಯಬೇಕು.-

Vijaya Bank, Ltd.,

Vijaya Cash Certificates

"Spend less and save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore**

Branches:- City Mangalore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad & Mercara

B. Manjaya Hegde,
Advocate & President, District Board S. Kanara.
CHAIRMAN.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಸಗಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ರುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಮರೆತಿದ್ದ ಋತುಸ್ರಾವವಾಗುವುದು, ಹಿಟೋರಿಗ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಜಾಸ್ತಿ ಗುಣವಾಗಿದೆ– ಬೆಲೆ, ರೂ 3; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 8- [ಪಿ. ಪಿ ಖರ್ಚು ಪ್ರತ್ಯೇಕ]

MRS. D. DEVEE, F DS. (N. J.)
Tollygunge CALCUTTA,
ಸ್ಟಾಕಿಸ್ಟರು ಕಂಪೆನಿ, ಮಂಗಳೂರು

ಯುದ್ಧ ಬೆಂಕಿ ಕ್ಷೇತ್ರಗಳು —

ಲೋಕ ವಿದ್ಯಮಾನಗಳ ಕಡೆಗೆ ಅನುಕ್ರಮವಾಗಿ, ದೃಷ್ಟಿಯೋಡಿಸುತ್ತಾ ಬಂದವರ ಕಣ್ಣಿಗೆ ನಿರಾಶೆಯ ಮೋಡವೇ ಕವಿಯುವಂತಾಗಿದೆ ದಿನಸಂದಂತೆ ಪ್ರಪಂಚದ ಸ್ಥಿತಿ ನಿರಾಶೆಯಲ್ಲಿ ಹೊಸ ಹೊಸ ಕರಿಚುಕ್ಕೆಗಳು ಮೂಡುತ್ತಿರುವಾಗ ಹಳೆಯ ಮಸಕುಗಳೆಲ್ಲವೂ ಯಥಾ ಪ್ರಕಾರ ಉಳಿದುಕೊಂಡೇ ಇರುವುದರಿಂದ, ನಿರಾಶೆಯು ಎಲ್ಲೆಡೆಯೂ ನಿಧಾನವಾಗಿ ಕರಿಛಾಯೆ ಆವರಿಸಿ ಕೊಳ್ಳುವ ಸಂಭವ ಕಾಣುತ್ತದೆ, ಒಮ್ಮೆಗೇ ಮುಸಿಬಳೆಯಲ್ಪಡುವ ಸಂಭವವೂ ಇದೆ. ಟಿಬೇಟ್, ನೇಪಾಳಗಳು ಇತ್ತೀಚೆಗೆ ಕರಟದವುಗಳು.

ಕೊರಿಯಾ ಯುದ್ಧ

ಕೊರಿಯ ಯುದ್ಧದ ಸ್ಥಿತಿಗತಿಗಳಲ್ಲಿ ಪ್ರಬಲ ಮಾರ್ಪಾಟವೇನೂ ಕಂಡು ಬಂದಿಲ್ಲವಾದರೂ ಉತ್ತರದ ಸರಹದ್ದು ವಲಯದಲ್ಲಿ ಈ ಕಡೆಯ ಸಂ. ರಾ. ಸೇನೆಗಳ ಮತ್ತು ಆ ಕಡೆಯ ಚೈನ, ಉತ್ತರ ಕೊರಿಯಾ ಕಮ್ಯೂನಿಸ್ಟ್ ಸೇನೆಗಳ, ರಭಸೋತ್ಸಾಹವು ಸಮಾನವಾಗಿ ಕುಗ್ಗಿದಂತಿದೆ. ದಕ್ಷಿಣದಿಂದ ಒಂದೇ ಸಮನೆ ಉತ್ತರಕ್ಕೆ ನುಗ್ಗಿಹೋದಾಗ ಸಂ. ರಾ. ಸೇನೆಗಳು ತೋರಿಸಿದ್ದ ತೀವ್ರತೆಯು, ಉತ್ತರಗಡೆಯಿಂದ ಚೈನೀ ಕಮ್ಯೂನಿಸ್ಟ್ ಸೇನೆ ಏಕದಂ ಬಂದು ಬಿದ್ದಾಗ ಮುರಿದು ಹೋಗಿದ್ದಿತು. ಹಾಗೆ ಒಮ್ಮೆಗೇ ನುಗ್ಗಿದಾಗ ಚೈನ್ಯದ ಕೆಂಪು ಸೇನೆಗಳು ವೈರಿಗಳನ್ನು ಹಿಂದೂಡಿದಷ್ಟು ರಭಸದಿಂದ ಆ ಮೇಲಿನ ದಿನಗಳಲ್ಲಿ ಗೆಲ್ಲುತ್ತಾ ಬರಲು ಅಶಕ್ತವಾಗಿವೆ. ಈ ರೀತಿ, ಉತ್ತರ ಕೊರಿಯದ ಗಡಿಕ್ಷೇತ್ರದಲ್ಲಿ ಇಕ್ಕಡೆಯವರೂ ಹುಸು ಜಗ್ಗಿದ್ದಾರಾದರೂ ಸಂ. ರಾ. ಸೇನೆಗಳು ಕೊನೆಯ ವಿಜಯದ ಗಡಿಮುಟ್ಟುವ ಅವಸರದಲ್ಲಿವೆ. ಸ್ವತಃ ಜನರಲ್ ಮೆಕರ್ಥರರು ಈ ಮುಕ್ತಾಯ ಸಾಹಸದ ಸೇನಾನಿತ್ವ ವಹಿಸಿರುತ್ತಾರೆಂದು ತಿಳಿದು ಬಂದಿದೆ. ಕ್ರಿಸ್‌ಮಸ್ ರಜೆಗೆ ಸೈನಿಕರನ್ನು ಊರಿಗೆ ಕಳುಹಿಸಿ ಕೊಡುವಷ್ಟು ತ್ವರ್ಯದಿಂದ ಕೊರಿಯದ ಕೆಲಸ ಮುಗಿಸುವೆನೆಂದು ಜನರಲ್ ಮೆಕರ್ಥರರು ತನ್ನ ಸೋಲ್ಜರರನ್ನು ಹುರಿದುಂಬಿಸುವುದಕ್ಕಾಗಿಯೋ ಸಮೀಪ ವಿಜಯದ ಗುಟ್ಟನ್ನರಿತೋ ಆಶ್ವಾಸನೆಯಿತ್ತಿದ್ದಾರೆ. ಕೊರಿಯದ ಕಲಹವು ಈ ಗಡಿಗೆ ಬಂದಾಗಲೇ ; ಲೋಕಯುದ್ಧವಾಗಿ ಬೆಳೆಯ ಬಹುದೆಂದಿದ್ದ ನಿರೀಕ್ಷೆಯು ಹುಸಿಗೊಳ್ಳುವ ಲಕ್ಷಣಗಳು ಕಾಣುತ್ತಿವೆ. ಕಾರಣವೆಂದರೆ ಅಮೇರಿಕದೊಡನೆ ಹೋರಾಡ ಬೇಕೆಂಬ ನವೋತ್ಸಾಹದಲ್ಲಿ ಚೀನೀ ಕಮ್ಯೂನಿಸ್ಟರಿಲ್ಲ- ಅಂತೆಯೇ ಚೈನವನ್ನು ಕಣಕುವ ಹುರುಪು ಅಮೇರಿಕಕ್ಕೂ ಇಲ್ಲ. ಚೈನದ ಸರಹದ್ದನ್ನು ಎಳ್ಳಷ್ಟು ನೋಯಿಸದೆ, ಕೊರಿಯವನ್ನು ಸಂಪೂರ್ಣವಾಗಿ ಗೆದ್ದುಕೊಳ್ಳಬೇಕೆಂದು ಅಮೇರಿಕಾನರು ಆತುರವಾಗಿದ್ದರೆ, ತಮ್ಮ ಮಂಚೂರಿಯಾ ಕಾರ್ಖಾನೆಗಳಿಗೆ ವಿದ್ಯುತ್ ಸರಬರಾಯಿ ಮಾಡುತ್ತಿರುವ ಕೊರಿಯದ ಯಾಲೂ ಹೊಳೆವಲಯವು ಅಮೇರಿಕಾನರ ಕೈಸೇರದಂತೆ ನೋಡಿಕೊಂಡರೆ ಸಾಕು, ಎಂದಿಷ್ಟೇ ಚೈನೀ ಕಮ್ಯುನಿಸ್ಟರ ಹೋರಾಟ ಹಂಬಲ. ಇಕ್ಕಡೆಯವರ ಈ ಬಯಕೆಗಳಿಗನುಗುಣವಾದ ಸ್ಥಿತಿಸಾಧ್ಯವುವೊಂದನ್ನು ನಿರ್ಮಿಸಿ, ಕೊರಿಯದ ಕೆಲಸವನ್ನು ಸುಗಮಗೊಳಿಸಬೇಕೆಂದು ಅಮೇರಿಕ, ಇಂಗ್ಲಂಡ, ಫ್ರಾನ್ಸುಗಳು ತಮ್ಮೊಳಗೆ ಆಲೋಚನೆ ನಡೆಸಿದ್ದುವು. ಚೈನಾದೊತ್ತಿನ ಕೊರಿಯದ ವಲಯವನ್ನು ಸೈನ್ಯರಹಿತ, ಶಾಂತ ಉಭಯಭಾಗವಾಗಿ ಅವಧಾನತಿರಿಸಿಕೊಳ್ಳುವ ಕುರಿತು ಆ ಮಾತುಕತೆಗಳು ನಡೆದಿದ್ದರೂ ಆ ಸಂಬಂಧದ ಒಮ್ಮತವಾಗಿಲ್ಲವೆಂದು ತಿಳಿದುಬಂದಿದೆ. ಅತ್ತ ಕೊರಿಯಾ ಯುದ್ಧದಲ್ಲಿ ಚೈನೀ ಕಮ್ಯೂನಿಸ್ಟ್ ಸೇನೆ ಕಂಡು ಒಂದೊಡನೆಯೇ ಜನರಲ್ ಮೇಕರ್ಥರರು ಆ ಕುರಿತು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಿದ್ದಂತೆ, ಅಲ್ಲಿ ತೀವ್ರ ಪರ್ಯಾಲೋಚನೆ ನಡೆದು ವಿಷಯಗಳನ್ನು ಮುಖಾಮುಖಿ ಚರ್ಚಿಸಲಿಕ್ಕಾಗಿ ಕಮ್ಯುನಿಸ್ಟ್ ಚೈನದ ಪ್ರತಿನಿಧಿಗಳನ್ನು ಅಲ್ಲಿಗೆ ಆಮಂತ್ರಿಸಿ ಕೊಳ್ಳಲಾಗಿದ್ದಿತು. ತತ್ಸಂಬಂಧವಾಗಿ ಚೈನೀ ಪ್ರತಿನಿಧಿಗಳು ಲೇಕ್ ಸಕ್ಸಸಿಗೆ ಬಂದಿದ್ದಾರೆ ಬಂದವರು ಎಲ್ಲರಿಗಿಂತ ಮೊದಲು ಭಾರತದ ಪ್ರತಿನಿಧಿಗಳನ್ನು, ಆ ಮೇಲೆ ಬ್ರಿಟಿಷ್ ಪ್ರತಿನಿಧಿಗಳೇ ಮೊದಲಾದವರನ್ನು ಸಂಧಿಸಿ ಆಲೋಚನೆ ನಡೆಸಿದ್ದಾರೆ. ಆದರೆ ಫೋರ್ಮೋಸದ ಪ್ರಶ್ನೆಯನ್ನೂ ಜತೆಯಲ್ಲೇ ಪರ್ಯಾಲೋಚಿಸುವುದಾದರೆ ಮಾತ್ರ ಕೊರಿಯದ ಪ್ರಶ್ನೆಯನ್ನು ನಾವು ಚರ್ಚಿಸಲು ತಯಾರಿದ್ದೇವೆ, ಹೊರತು ಕೇವಲ ಇದೊಂದರ ಚರ್ಚೆಗೆ ತಯಾರಿಲ್ಲವೆಂದು ಚೈನೀ ಕಮ್ಯೂನಿಸ್ಟ್ ಪ್ರತಿನಿಧಿಗಳು ಸ್ಪಷ್ಟಪಡಿಸಿದ್ದಾರೆ. ಕೊರಿಯಾ ಮತ್ತು ಫೋರ್ಮೋಸ ಎರಡನ್ನೂ ಜತೆಯಲ್ಲೇ ಚರ್ಚಿಸಲು ತಾವೆಂದಿಗೂ ಸಿದ್ಧರಿಲ್ಲವೆಂದೂ, ಫೋರ್ಮೋಸದ ಪ್ರಸ್ತಾಪವೆತ್ತಬೇಕಾದರೆ ಕೊರಿಯದಿಂದ ಚೀನೀ ಕೆಂಪು ಸೇನೆಗಳು ಹಿಂತೆಗೆದು ಕೊಳ್ಳಬೇಕೆಂದೂ ಅಮೇರಿಕದ ಹಠವಿದೆ. ಇಂತಹ ಪರಿಸ್ಥಿತಿಯಲ್ಲಿ ಲೇಕ್ ಸಕ್ಸೆಸಿನ ಮಾತುಕತೆಗಳ ಕುರಿತು ಹೆಚ್ಚಿನ ಆಶೆಕಟ್ಟಿಕೊಳ್ಳುವುದು ಅಸಾಧ್ಯವೇ ಸರಿ. ಅತ್ತ ಕೊರಿಯಾ ರಣರಂಗದಿಂದ ಬರುತ್ತಿರುವ ಕೊನೆಯ ವಾರ್ತೆಗಳ ಆಧಾರದಿಂದ, ಇಂದಲ್ಲ ಒಂದು ದಿನ ಸಂ. ರಾ. ಸೇನೆಗಳು ತಮ್ಮಿಚ್ಛೆಯ ವಿಜಯವನ್ನು ಗಳಿಸಿಕೊಳ್ಳುವುದು ಸಂಭವನೀಯವಾಗಿ ಕಾಣುತ್ತಿದೆ. ಮುಂದೇನಾಗುವುದೋ ನೋಡಲಿಕ್ಕಿದೆ

ಸಂಧಿಗ್ಧ ನೇಪಾಳ

ಇತ್ತ ನೇಪಾಲದ ಶಾಶ್ವತ ಸ್ಥಾನವಾವುದೆಂಬುದಿನ್ನೂ ಖಚಿತವಾಗಿಲ್ಲ. ಮಹಾರಾಜಾ ತ್ರಿಭುವನ ವೀರರು ಡಿಲ್ಲಿಗೋಡಿ ಬಂದೊಡನೆ, ನೇಪಾಲದ ಕಾಂಗ್ರೆಸಿಗರು ಹೂಡಿದ್ದ ಯುದ್ಧವು ಈಗ ಪರಾಭವಮುಖಿಯಾಗಿದೆ. ಆರಂಭದಲ್ಲಿ ಒಂದೊಂದಾಗಿ ಹಲವು ಸ್ಥಳಗಳನ್ನು ಆಕ್ರಮಿಸುತ್ತಾ ಮುಂದೊತ್ತಿ, ಅಲ್ಲಲ್ಲಿ ಪ್ರತಿಸರಕಾರವನ್ನು ಸ್ಥಾಪಿಸಿದ್ದ ನೇಪಾಲೀ ಕಾಂಗ್ರೆಸ್ ಸೇನೆಯ ಬೆನ್ನೆಲುಬನ್ನು ನೇಪಾಲೀ ಸರಕಾರೀ ಸೇನೆ ಮುರಿದಂತಿದೆ. ಪ್ರತಿಸರಕಾರವೂ ಕಳಚಿ ಬಿದ್ದಿದೆ. ಕಾಂಗ್ರೆಸಿಗರು ಗೊರಿಲ್ಲಾ ಯುದ್ಧ ಕೊಡುವವರಲ್ಲಿದ್ದಾರಾದರೂ ಪ್ರಚಲಿತ ಆಡಳಿತೆಯನ್ನು ಅದು ಅಣಮೇಲು ಮಾಡಿ ಹಾಕೀತೆಂದು ನೆನೆಸುವುದು ಹೆಚ್ಚಾದೀತು. ನೇಪಾಳದ ಇಂದಿನ ಸ್ಥಿತಿಗತಿಗಳಿಗೆ ಸಂಬಂಧಿಸಿದ ಕೆಲವು ಅಂತರಂಗ ಮಹಮಾಟುಗಳು ಆತುರ ನಿರ್ಮಿಸುವಂಥವುಗಳಿವೆ. ಮಹಾರಾಜರು ಭಾರತದ ಆಶ್ರಯ ಪಡೆದುದರಿಂದ ಮತ್ತು ನೇಪಾಳೀ ಕಾಂಗ್ರೆಸಿಗರು ಭಾರತವನ್ನೇ ತಮ್ಮ ಹಿನ್ನೆಲೆಯಾಗಿಟ್ಟುಕೊಂಡು ಹೋರಾಡುತ್ತಿದ್ದಾರೆಂಬುದರಿಂದ, ನೇಪಾಲದ ಪ್ರಧಾನೀ ಸರಕಾರವು ಪಾಕಿಸ್ತಾನದ ಸಹಾಯವನ್ನು ಯಾಚಿಸಿರುವುದೆಂದು ಸಾಧಾರ ವಾರ್ತೆಯಿದೆ. ಈ ಸುದ್ದಿಯನ್ನು ಪಾಕಿಸ್ತಾನದ ಅಧಿಕಾರಿಗಳಾದರೂ ಅಲ್ಲಗಳೆದಿಲ್ಲ. ಇದು ನಿಜವಾದಲ್ಲಿ ಮತ್ತು ಪಾಕಿಸ್ತಾನವು ಅಂತಹ ಅಧಿಕ ಪ್ರಸಂಗಕ್ಕೆ ಹೋದಲ್ಲಿ ನೇಪಾಳದ ವಿದ್ಯಮಾನವು ಹೊಸರೂಪು ಧರಿಸಬಹುದು. ಭಾರತ ಪಾಕಿಸ್ತಾನಗಳೊಳಗಿನ ಸಂಬಂಧ ಪೂರ್ಣ ಹಾಳಾಗಬಹುದು. ಇದಕ್ಕಿಂತಲೂ ಹೆಚ್ಚಿನ ಅಪಾಯವೆಂದರೆ ಟಿಬೇಟನ್ನು ಆಕ್ರಮಿಸಿಕೊಂಡ ಕಮ್ಯೂನಿಸ್ಟ್ ಚೈನಕ್ಕೆ ತಾಗಿಕೊಂಡೇ ನೇಪಾಳವಿರುವುದರಿಂದ, ಪಕ್ಕದಲ್ಲಿ ಹೊಂಚುತ್ತಾ ಇರುವ ಕಮ್ಯೂನಿಸ್ಟರು ನೇಪಾಲದೊಳಗೆ ನುಗ್ಗ ಬಹುದೇ ಎಂಬುದು. ಈ ಕುರಿತು ಅಮೇರಿಕವು ವಿಶೇಷ ಆತುರದಿಂದಿದೆ. ಅಮೇರಿಕ ಸರಕಾರವು ನೇಪಾಳಕ್ಕಿರುವ ಕಮ್ಯೂನಿಸ್ಟ್ ಅಪಾಯದ ಕುರಿತು ಭಾರತ ಸರಕಾರದೊಡನೆ ಅನುಭವ ಕೇಳಿದೆಯೆಂದೂ ಪ್ರಕಟವಾಗಿದೆ. ನೇಪಾಳದ ಪ್ರಚಲಿತ ವಾತಾವರಣದಂತೆಯೇ, ಆ ಸಂಬಂಧದ ಅಮೇರಿಕದ ಆಸಕ್ತಿಯೂ ಹಿತಕರವಾದುದಲ್ಲ. ಕಮ್ಯೂನಿಸ್ಟರ ಮೇಲೆ ಸಂದೇಹ ಪ್ರದರ್ಶಿಸಿ, ಅದಕ್ಕೆ ಪ್ರತಿಯಾಗಿ ಕಮ್ಯೂನಿಸ್ಟರೂ ಶಂಕೆಪಡುವಂತೆ ಮಾಡುವ ವರ್ತನೆಯಿದು. "ನೇಪಾಳದ ಮೇಲೆ ಅಮೇರಿಕವು ಅನಪೇಕ್ಷಿತ ಆಸಕ್ತಿ ತೋರಿಸುತ್ತಿರುವುದರಿಂದ, ತನ್ನ ಪ್ರಥಮ ಕೋಟೆಯನ್ನು ನಮ್ಮ ಗಡಿಯಲ್ಲಿ ಕಟ್ಟಿಕೊಳ್ಳುವಂತೆ ಅಮೇರಿಕಕ್ಕೆ ಅವಕಾಶ ಕೊಡುವುದು ರಿಪಬ್ಲಿಕ್ ಚೈನದ ರಕ್ಷಣಾ ದೃಷ್ಟಿಯಿಂದ ಅಪಾಯಕರ. ಆದ್ದರಿಂದ ಈ ಕಾರ್ಯಕ್ಕೆ ಕೈಯಿಕ್ಕಬೇಕಾಯಿತು." ಎನ್ನುತ್ತಾ ಕೆಂಪು ಚೈನಕ್ಕೆ ನೇಪಾಳ ಆಕ್ರಮಣದ ಪ್ರೇರಣೆಯನ್ನೊದಗಿಸುವ ಅಧಿಕ ಪ್ರಸಂಗವಿದು. ನೇಪಾಳದೊಡನೆ ಸ್ಥಳ, ಸಂಸ್ಕೃತಿ ಮತ್ತು ಪರಮಾಂತ ನಿಕಟ ಸಂಬಂಧವಿರುವ ಭಾರತವು ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದೆ. ನೇಪಾಳದ ಸ್ವಾತಂತ್ರ್ಯಕ್ಕೆ ಲವ ಮಾತ್ರ ಧಕ್ಕೆಯಾದರೂ ಭಾರತದಿಂದ ಬರುವಂತಿಲ್ಲ—ಅದರಲ್ಲಿ ಪ್ರಜಾಪ್ರಭುತ್ವವು ಸ್ಥಾಪನೆಗೊಳ್ಳುವುದು ಅತ್ಯಗತ್ಯ—ಮೂರು ವರುಷದ ಶಿಶು ರಾಜನಿಗೆ ನಾವು ಮನ್ನಣೆಕೊಡುವಂತಿಲ್ಲ—ಈ ಮಟ್ಟಿಗೂ ಪ್ರಜೆಗಳ ಅಭಿಮತವೇ ಮಾನ್ಯವಾಗಬೇಕು ಸಿಂಹಾಸನಾಧೀಶರೆಂದು ಪ್ರಜೆಗಳು ಒಪ್ಪಿಕೊಳ್ಳುವವರೇ ಅಲ್ಲಿರಬೇಕು—ಎಂಬುದೇ ಭಾರತ ಸರಕಾರದ ಧೋರಣೆ.

For Life Assurance
CUNSULT
THE NEW GUARDIAN OF INDIA
LIFE ASSURANCE Co. LTD.
(Established 1934)
Chairman: Sri. M. C. T. M. Chidambaram Chattiyar
A Policy in this progressive Life Office is a good investment, its Agency is a valuable business connection.
MANGALORE BRANCH: K. S. R. Road, Hampankatta, Mangalore
HEAD OFFICE: United India Life Building, MADRAS 142

ಲಕ್ಷ್ಮೀ
ಸೆಂಟಾಲ್ ಮಾತ್ರೆ
ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.
ಡಬ್ಬಿ ಒಂದಕ್ಕೆ ರೂ. 2—0—0
ಏಜಂಟ್:—
ಕಾ ಕಂಪೆನಿ, ಮಂಗಳೂರು.

—ಕೊರಿಯ ನೇಪಾಳ ಟಿಬೇಟ್

ಟಿಬೇಟಿನ ಸ್ಥಿತಿ

ಟಿಬೇಟನ್ನು ಕಮ್ಯೂನಿಸ್ಟ್ ಚೈನವು ಆಕ್ರಮಿಸಿ ಹಿಡಿದುಕೊಂಡಿರುವ ದೃಶ್ಯವು ಈಗ ಮಸಕುಮಸಕಾಗಿ ಕಾಣಿಸುತ್ತಿದೆಯಾದರೂ ಅಲ್ಲಿಯ ದಲಾಯಿಲಾಮಾರ ಅನುಮತಿಯಿಂದ ಟಿಬೇಟ್ ಮಂತ್ರಿಮಂಡಲಿ ಮತ್ತು ನ್ಯಾಯವಿಧಾಯಕ ಸಭೆಯು ಸಂಯುಕ್ತ ರಾಷ್ಟ್ರಸಂಘಕ್ಕೆ ನವಂಬರ್ ತಾ 7ರಲ್ಲಿ ಕೊಟ್ಟಿದ್ದ ದೂರು ಹಾಗೆಯೇ ಉಳಿದಿದೆ, "ಟಿಬೇಟು ಚೈನದ ಒಂದು ಭಾಗವಲ್ಲ. ಚೈನಾ ಮತ್ತು ಟಿಬೇಟುಗಳೊಳಗೆ ಆದಿಯಿಂದಲೂ ಭಾವನಾ ಸಂಬಂಧಗಳಿವೆ ಹೊರತು, ರಾಜಕೀಯ ಜೋಡಣೆಗಳಿಲ್ಲ. ಬೌದ್ಧನುಯಾಯಿಯಾಗಿ ತನ್ನ ಪಾಡಿಗೆ ತಾನು ಇದ್ದ ಟಿಬೇಟು, ಹಿಂದಿನ ಕಾಲದಲ್ಲಿ ಸ್ವರಕ್ಷಣೆಗಾಗಿ ಸಂದರ್ಭವಶಾತ್ ಭಾರತದಲ್ಲಿದ್ದ ಬ್ರಿಟಿಷರನ್ನು ಅವಲಂಬಿಸಿದ್ದಿತು. ಇಂತಹ ಶಾಂತ ಸ್ವತಂತ್ರ ಟಿಬೇಟಿನ ಮೇಲೆ ಚೈನವು ಆರಂಭಿಸಿದ ಆಕ್ರಮಣವು ಸಂಪೂರ್ಣ ಅನ್ಯಾಯವಾದ್ದಿದೆ. ಯುದ್ಧ ತರಬೇತಿಗೊಂಡಿರುವ ಜನರ ಪಾಶವಿಕ ಧಾಳಿಯನ್ನು ಶಾಂತಿಗೆ ಕಟ್ಟುಬಿದ್ದಿರುವ ಜನರು ಪ್ರತಿಭಟಿಸಿ ಗೆಲ್ಲುವ ಆಶೆ ಕಡಿಮೆಯಾದರೂ ಟಿಬೇಟು ಹೋರಾಟ ಕೊಡದೆ ಬೀಳುವಂತಿಲ್ಲ. ಅಂತರ್ರಾಷ್ಟ್ರೀಯ ಸೇನೆಗಳಿಂದ ಆಕ್ರಮಣವು ತಡೆಗಟ್ಟಲ್ಪಟ್ಟಿರುವ ಕೊರಿಯದ ಕಡೆಗೆ ಇಡೀ ಜಗತ್ತಿನ ಲಕ್ಷ್ಯವಿದ್ದಿರುವಾಗ, ಅಂತಹ ಅನ್ಯಾಯಕ್ಕೀಗ ಒಳಗಾಗಿರುವ ಒಂದು ಮೂಲೆಯ ಟಿಬೇಟನ್ನು ಕೇಳುವವರಿಲ್ಲವಾಗಿದೆ. ಲೋಕದ ಯಾವ ಮೂಲೆಯ ಸ್ವಾತಂತ್ರ್ಯವಾದರೂ ಅಪಹರಿಸಲ್ಪಡದಂತೆ, ಆಕ್ಷೇಪ ವಿನಹ ಆಕ್ರಮಣ ಸಾಗದಂತೆ ನೋಡುವದಕ್ಕಾಗಿಯೇ ಸಂ. ರಾ. ಸಂಘವಿದೆ ಎಂಬ ವಿಶ್ವಾಸದಿಂದ ಹೀಗೆ ದೂರುತ್ತೇವೆ" ಎಂದು ಟಿಬೇಟಿನ ಮೊರೆಯಿದೆ.

ಟಿಬೇಟ್ ಆಕ್ರಮಣದ ಕುರಿತು ಭಾರತ ಸರಕಾರವು ಚೈನೀ ಕೆಂಪು ಸರಕಾರಕ್ಕೆ ಬರೆದಿದ್ದ ಎರಡನೇ ಪತ್ರಕ್ಕೆ ಚೈನೀ ಸರಕಾರವು ಕೊಟ್ಟಿದ್ದ ಉತ್ತರದಲ್ಲಿ, "ತನ್ನ ಹಕ್ಕು ಬದ್ಧ ಸಾರ್ವಭೌಮಾಧಿಕಾರವನ್ನು ಚೈನವು ಟಿಬೇಟಿನ ಮೇಲೆ ಚಲಾಯಿಸದಂತೆ ಭಾರತ ಸರಕಾರವೇ ಅಡ್ಡಿ ಆಕ್ಷೇಪಗಳನ್ನು ಒಡ್ಡುತ್ತಿದೆ. ಟಿಬೇಟ್ ಆಡಳಿತಿಯನ್ನು ಚೈನದ ವಿರುದ್ಧ ಹುರಿದುಂಬಿಸಿದೆ" ಎಂದು ಆರೋಪಿಸಿದ್ದಿತು. ಅಂತೆಯೇ ಭಾರತ ಮತ್ತು ಚೈನಗಳೊಳಗಿನ ಸ್ನೇಹಾಚಾರವನ್ನು ಕೆಡಿಸಲು ಇಂಗ್ಲಂಡು ಅಮೇರಿಕಗಳು ಪ್ರಯತ್ನಿಸುತ್ತಿವೆ, ಎಂದೂ ಚೈನಾ ದೂರಿದೆ. 'ಟಿಬೇಟಿನ ಮೇಲೆ ಚೈನಕ್ಕೆ ಮಾಂಡಲಾಧಿಕಾರ, ಅಧಾರ್ತ್ ಒಳಾಧಿಕಾರವನ್ನು ಸ್ವೀಕರಿಸಲಾಗದೆ ಮೇಲಧಿಕಾರ ಮಾತ್ರವಿದೆಯೆಂಬುದನ್ನು ಭಾರತ ಸರಕಾರವು ಒಪ್ಪಿದೆ ಮತ್ತು ಒಪ್ಪುತ್ತದೆಯಾದರೂ ಸಾರ್ವಭೌಮಾಧಿಕಾರವೇ ಇದೆಯೆಂಬುವುದನ್ನು ಒಪ್ಪುವದಿಲ್ಲ" ಎಂದು ಭಾರತ ಸರಕಾರದ ಪರವಾಗಿ ಅರ್ಥ ಸ್ಪಷ್ಟೀಕರಣವಾಗಿದೆ.

ಇತರ ಸಂಗತಿ

ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಸಮ್ಮೇಳನವೊಂದು ಬರುವ ಜನವರಿ ತಿಂಗಳಾರಂಭದಲ್ಲಿ ಲಂಡನ್ನಿನಲ್ಲಿ ಸೇರಲಿರುವದೆಂದು ಪ್ರಕಟವಾಗಿದೆ. ಕಾಹಿಲೆಯಲ್ಲಿರುವ ದಕ್ಷಿಣಾಫ್ರಿಕದ ಪ್ರಧಾನಿ ಡಾ। ಮಲನ್ ಒಬ್ಬರನ್ನು ಬಿಟ್ಟು ಉಳಿದ ಎಲ್ಲಾ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಿಗಳು ಈ ಸಮ್ಮೇಳನಕ್ಕೆ ಹಾಜರಾಗಲಿದ್ದಾರೆ. ಮೈಸೂರಿನಲ್ಲಾಗ ಸೇರಲಿರುವ ವೈಜ್ಞಾನಿಕ ಸಮ್ಮೇಳನಕ್ಕಾಮಂತ್ರಣ ಪಡೆದರೂ, ಈ ಸಮ್ಮೇಳನಕ್ಕಾಗಿ ಹೋಗಲಿಕ್ಕಿರುವುದರಿಂದಲೇ ಪ್ರಧಾನಿ ನೆಹರುಗಳು ಅದನ್ನು ನಿರಾಕರಿಸಿದ್ದಾರೆ. ಕಾಮನ್‌ವೆಲ್ತ್ ಪ್ರಧಾನೀ ಸಮ್ಮೇಳನವು ಜನವರಿ 4ಕ್ಕೆ ಆರಂಭಿಸಿ ಸುಮಾರು 10 ದಿನಗಳ ವರೆಗೆ ನಡೆಯುವದೆಂದೂ ಕೊರಿಯ, ಟಿಬೇಟ್, ಕಮ್ಯೂನಿಸ್ಟ್ ಚೈನದ ಸಂಬಂಧ, ಏಸಿಯಾದ ಸಮಸ್ಯೆಗಳು ಮತ್ತಿತರ ಅಂತರ್ರಾಷ್ಟ್ರೀಯ ಪ್ರಶ್ನೆಗಳು ಅಲ್ಲಿ ಪರ್ಯಾಲೋಚಿಸಲ್ಪಡುವವೆಂದೂ ತಿಳಿದು ಬರುತ್ತದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕಳೆದವಾರ ನವದಿಲ್ಲಿಯಲ್ಲಿ ಸೇರಿ ಕಾಂಗ್ರೆಸ್ ಘಟನೆಯಲ್ಲಿ ಕೆಲವು ಪ್ರಾಮುಖ್ಯ ತಿದ್ದುಪಡಿಗಳನ್ನು ನಿರ್ಧರಿಸಿತು. ಕಾಂಗ್ರೆಸ್ ಪ್ರಾಥಮಿಕ ಸದಸ್ಯ ಹಣ ಒಂದು ರೂಪಾಯಿ. ಮತ್ತು ಅವಧಿ ಎರಡು ವರುಷಗಳೆಂದು ನಿರ್ಧರವಾಗಿದೆ. ಚುನಾವಣಾ ಯಂತ್ರ ಸಂಬಂಧವಾಗಿ ಕೇಂದ್ರ, ಪಾರ್ಲಿಮೆಂಟರೀ ಬೋರ್ಡು ಮತ್ತು ಕೇಂದ್ರ ಚುನಾವಣಾ ಸಮಿತಿಗಳ ಹಳೇ ನಿಬಂಧನೆಯನ್ನೇ ಮಾನ್ಯ ಮಾಡಿಕೊಂಡಿದೆ. ಪ್ರಾಂತಿಕ ಚುನಾವಣಾ ಸಮಿತಿಯು ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಮಹಾಸಭೆಯಲ್ಲೇ ಆರಿಸಲ್ಪಡಬೇಕೆಂದೂ ಅದರಲ್ಲಿ ಏಳಕ್ಕೆ ಕಡಿಮೆಯಾಗದಷ್ಟು ಮತ್ತು ೯ಕ್ಕೆ ಹೆಚ್ಚಾಗದಷ್ಟು ಸದಸ್ಯರಿರಬೇಕೆಂದೂ ಹೊಸ ನಿರ್ಣಯವಾಗಿದೆ. ಘಟನೆಗೆ ಬೇರೆ ಕೆಲವು ಪ್ರಾಮುಖ್ಯ ತಿದ್ದುಪಡಿಗಳನ್ನು ಸೂಚಿಸಲಾಗಿದ್ದು ಇವೆಲ್ಲವುಗಳ ಕೊನೆಯ ನಿರ್ಣಯಕ್ಕಾಗಿ ಜನವರಿ ಅಂತ್ಯದ ಮೂರು ದಿನಗಳಲ್ಲಿ ಅ. ಭಾ. ಕಾ. ಸಮಿತಿ ಸಭೆಸೇರಲಿದೆ.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp. His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ
ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ.

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಪಾತ್ರಿ ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ,
ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ,
ಮ್ಯಾಲಕ.

M. Mendosa,
Proprietor.

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp. His Master's Voice.
Sir Phirozshah Mehta Road, FORT. BOMBAY.

We accept
Deposits at the following rates:

Current	....	½%
Savings Bank	....	2 %
Short-Term	....	1½%
Fixed – 3 months	....	1 %
6 ,,	....	2 %
12 ,,	....	2½%
24 ,,	....	3 %

THE
Canara Banking Corporation Ltd.
(Incorporated in India.)
Estd: 1906
Head Office : **UDIPI, (S. I)**

ನವಯುಗ

ಗುರುವಾರ, ಉಡುಪಿ, ೩೦-೧೧-೫೦

ರಾಜಕೀಯ ಸಂತ್ರಸ್ತರು

ಭಾರತ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿ, ಕಷ್ಟನಷ್ಟಗಳನ್ನು ಅನುಭವಿಸಿದ್ದವರಿಗೆ–ಮುಖ್ಯವಾಗಿ ಕಾರಾಗೃಹ ವಾಸ ಮಾಡಿದವರಿಗೆ–ಭೂದಾನ ಮಾಡಲಾಗುವದೆಂದು ಮದ್ರಾಸ್ ಸರಕಾರವು ಪ್ರಕಟಿಸಿ, ವರುಷಗಳೇ ಕಳೆದಿವೆ. ಈ ವರೆಗೂ ಆ ಕೆಲಸ ಪೂರ್ಣವಾಗಿಲ್ಲ. ಇಷ್ಟು ವಿಳಂಬವಾಗಿರುವ ಕುರಿತು ಮತ್ತು ಭೂದಾನ ಸಂಬಂಧದ ಕಾರ್ಯಕಲಾಪಗಳ ಕುರಿತಾಗಿ ರಾಜಕೀಯ ಸಂತ್ರಸ್ತ ವರ್ಗದಲ್ಲಿ ಅಸಮಾಧಾನಗಳು ಕಂಡುಬಂದಿವೆ. ಅದೇ ರೀತಿ "ಕಾಂಗ್ರೆಸ್ ಚಳವಳಗಳಲ್ಲಿ ಸೇರಿ ಜೈಲಿಗೆ ಹೋದವರಿಗೆಲ್ಲಾ ಭೂಮಿ ಸಿಕ್ಕುತ್ತದೆಂದಾದರೆ—"ಎನ್ನುತ್ತಾ ಇತರರು ಈ ಸಂಬಂಧವಾಗಿ ಮಾಡುತ್ತಿರುವ ಟೀಕೆ, ನಿಂದೆಗಳೂ ಬಹಳವಿವೆ. "ರಾಜಕೀಯ ಸಂತ್ರಸ್ತರ ಗತಿವಿಹೀನ ಕುಟುಂಬಗಳಿಗೆ ಸರಕಾರದಿಂದ ಯೋಗ್ಯ ಜೀವನ ವ್ಯವಸ್ಥೆಗಳಾಗಬೇಕು" ಎಂಬ ಸೂಚನೆಯು ಪಾರ್ಲಿಮೆಂಟಿನಲ್ಲಿ ಕಳೆದ ಬಾರಿ ಚರ್ಚೆಗೆ ಬಂದಾಗ ಪ್ರಧಾನಿ ನೆಹರುಗಳು ಹೊರಗೆಡಹಿದ ಅಭಿಪ್ರಾಯಗಳು ಈ ಸಂದರ್ಭದಲ್ಲಿ ವಿಚಾರಾರ್ಹವಿವೆ "ನಿರ್ಗತಿಕ ರಾಜಕೀಯ ಸಂತ್ರಸ್ತರು ಮತ್ತವರನ್ನು ಅವಲಂಬಿಸಿರಬೇಕಾದವರು ರಕ್ಷಣೆಗರ್ಹರೆಂಬುದು ನಿರ್ವಿವಾದ. ಆದರೆ ಸ್ವತಃ ಕಾರ್ಯಾನಂದ, ತ್ಯಾಗಸುಖ ಮತ್ತು ಹೆಗ್ಗಳಿಕೆ ತುಂಬಿರುವ ಸ್ವಾತಂತ್ರ್ಯ ಯೋಧತ್ವಕ್ಕಾಗಿ ಉಡುಗೊರೆ ಬಯಸುವುದು ಅವರ ಘನತೆಗೇನೇ ಕುಂದು. ಇತ್ತ ಸರಕಾರವಾದರೋ ಸರಕಾರೀ ಕಾರ್ಯದೊಂದು ಅಂಗವಾಗಿ ಇಂತಹ ಸಹಾಯ ದಾನಕ್ಕಿಳಿದರೆ ಅದರಿಂದ ದ್ವೇಷಾಸೂಯೆ ನಿರ್ಮಾಣಗೊಳ್ಳಬಹುದು; ಹಲವು ತೊಂದರೆಗಳೇಳಬಹುದು; ಅನಧಿಕಾರೀ ಮಾಧ್ಯಮಗಳ ಮೂಲಕ ಈ ಸಹಾಯದಾನ ನಡೆಯುವುದೇ ವಿಶೇಷ ಪರಿಣಾಮಕಾರಿ"ಎಂದು ನೆಹರುಗಳಂದಿದ್ದರು. ಕೆಲವು ಪ್ರಾಂತಿಕ ಸರಕಾರಗಳು ರಾಜಕೀಯ ಸಂತ್ರಸ್ತರ ಸಹಾಯ ವ್ಯವಸ್ಥೆಗಳನ್ನು ಕೈಕೊಂಡಿರುವುದಕ್ಕಾಗಿ ಭಾರತದ ಮಹಾಪ್ರಧಾನಿಗಳು ಆನಂದ ವ್ಯಕ್ತಪಡಿಸಿ, ಅವು ಈ ಕಾರ್ಯವನ್ನು ಯಥಾಪ್ರಕಾರ ಮುಂದೊತ್ತಲೆಂಬ ಪ್ರೇರಣೆಯನ್ನು ಕೊಟ್ಟಿದ್ದಾರೆ. "ನಮಗೇನೂ ಜನಸಂದಣಿಯ ಮೆಚ್ಚುಗೆಯ ಘೋಷಣೆಗಳು, ಹೂಮಾಲೆಗಳು, ಅಧಿಕಾರ ಸ್ಥಾನಗಳು ದೊರೆತಿವೆ. ಆದರೆ ಸ್ವಾತಂತ್ರ್ಯ ಹೋರಾಟದ ಭಾರವು ಶ್ಲಾಘನೆ, ಪುಷ್ಪಹಾರ, ಲಾಭ-ದಾಯಗಳಾವುದೂ ಇಲ್ಲದ ಅಧಿಕ ಸಂಖ್ಯಾಕ ದೇಶಬಂಧುಗಳ ಹೆಗಲಮೇಲಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಸ್ವಾತಂತ್ರ್ಯ ಸ್ವಯಂಸೇವಕರಾಗಿ ಆ ಕಾಲದಲ್ಲಿ ಅವರನ್ನು ಸೇರಿಸಿಕೊಳ್ಳುವಾಗ ಅದಕ್ಕೆ ಪ್ರತಿಫಲವಾಗಿ ಯಾವುದೂ ದೊರೆಯಲಾರದೆಂದು ಅವರಿಗೆ ಸ್ಪಷ್ಟ ಹೇಳಲಾಗಿದ್ದಿತೆಂಬುದು ಈ ಸಂದರ್ಭದಲ್ಲಿ ನೆನಪಿರಲಿ. ನಾವು ಕೊಟ್ಟ ವಾಗ್ದಾನವೇನೂ ಇಲ್ಲವೆಂಬ ಅರ್ಥದಲ್ಲಿ ನಾನೀ ನೆನಪನ್ನು ಕೊಡುತ್ತಿರುವುದಲ್ಲ. ನಮ್ಮ ಆ ಸ್ವಾತಂತ್ರ್ಯಸಂಗ್ರಾಮವು ಯಾವ ಮಟ್ಟದಲ್ಲಿತ್ತೆಂಬುದರ ಸ್ಮರಣೆಯನ್ನಷ್ಟೇ ನಾನು ತರುತಿದ್ದೇನೆ" ಎಂದಿದ್ದಾರೆ ನೆಹರು. ಪಾರ್ಲಿಮೆಂಟ್ ಚರ್ಚೆಯ ನಡುವೆ, ಕೆಲವು ರಾಜಕೀಯ ಸಂತ್ರಸ್ತರ ಕುಟುಂಬಗಳೆಷ್ಟು ಹೀನಾವಸ್ಥೆಯಲ್ಲಿವೆ,ಎಂಬುದನ್ನು ಮನಗಾಣಿಸಲು ಗಾಂಧಿಜೀಯ ತಂಗಿ ಕೂಡಾ ಕೆಲಕಾಲ ಪಪ್ಪಡ ಮಾರಿ ದಿನ ತೆಗೆಯುತಿದ್ದ ಸಂಗತಿ ಬೆಳಕಿಗೆ ಬಂದಿದ್ದಿತು. ಶ್ರೀ ಜವಾಹಿರಲಾಲರ ಅಭಿಮತ ಮತ್ತು ಪಾರ್ಲಿಮೆಂಟಿನ ಚರ್ಚೆಗಳ ಮೇಲಿಂದ, ಭೂದಾನ ಕೊಡಲು ಮುಂದಾಗಿರುವ ಮದ್ರಾಸ್ ಸರಕಾರದ ಮತ್ತು ಭೂದಾನ ಪಡೆಯುವ ರಾಜಕೀಯ ಸಂತ್ರಸ್ತರ ಕರ್ತವ್ಯವೇನೆಂಬುದನ್ನು ಅರಿಯಬಹುದು. ಶ್ರೀ ಜವಾಹಿರಲಾಲರಂತೆ, ಯಾವ ಪ್ರತಿಫಲವನ್ನೂ ಅಪೇಕ್ಷಿಸಲಾರೆವೆಂದು ಪ್ರತಿಜ್ಞಾ ಪತ್ರಕ್ಕೆ ಸಹಿಹಾಕಿ ಸ್ವಾತಂತ್ರ್ಯ ಯೋಧರಾಗಿ ಸೇರಿ ಕಷ್ಟನಷ್ಟಗಳನ್ನು ಅನುಭವಿಸಿದ್ದವರು ಯಾಚಿಸಿಯೇ ಮದ್ರಾಸ್ ಸರಕಾರವು ಭೂದಾನ ಮಾಡಲು ಮುಂದೆ ಬಂದುದೇನೂ ಅಲ್ಲ. ಸರಕಾರವು ತಾನಾಗಿ ಈ ದಾನಕ್ಕೆ–ನೆಹರುಗಳ ಸಂತೋಷಕ್ಕೆ ಪಾತ್ರವಾಗಿರುವ ಕೆಲಸಕ್ಕೆ—ಕೈಯಿಕ್ಕಿದೆ. ಸ್ವೇಚ್ಛೆಯಿಂದ ಒಂದು ಕಾರ್ಯವನ್ನು ಆರಂಭಿಸಿದ ಮೇಲೆ, ಮತ್ತಾ ಕುರಿತು ಅಸಡ್ಡೆ, ಸಡಿಲು ವರ್ತನೆಗಳನ್ನು ತೋರಿಸಿದರದು ಕರ್ತವ್ಯ ಹೇಡಿತ್ವವನ್ನಿಸುತ್ತದೆ ಹೊರತು ಒಳ್ಳೇ ಹೆಸರು ಗಳಿಸುವಂತಿಲ್ಲ. ರಾಜಕೀಯ ಸಂತ್ರಸ್ತರಿಗೆ ಭೂದಾನದಿ ಆಶ್ವಾಸನೆ ದೊರತಂದಿನಿಂದ ಈ ವರೆಗಿನ ಅವಧಿಯಷ್ಟು ಅದನ್ನು ಕಾರ್ಯಗೊಳಿಸಲು ಬೇಕಾಗಿತ್ತೇ ಎಂಬುದೊಂದು ಸರ್ವಸಾಮಾನ್ಯ ಪ್ರಶ್ನೆ; ಇನ್ನು ಭೂದಾನ ಕಾರ್ಯದ ರೀತಿನೀತಿಗಳಲ್ಲೂ ಲೋಪದೋಷ, ರಾಗದ್ವೇಷ ಸಾಧನೆ, ಇತ್ಯಾದಿಗಳು ನಡೆದಿವೆ ಎಂಬ ದೂರುಗಳೂ ಇವೆ. ಇಂತಹ ಆರೋಪಗಳೇ ಸೋಂಕದ ಕಾರ್ಯವೊಂದಿಲ್ಲವೆಂದು ಸ್ವಸಮಾಧಾನ ತಂದುಕೊಳ್ಳುವುದಕ್ಕಿಂತ, ಈ ಲೋಪದೋಷಗಳು ಅನಿವಾರ್ಯವಲ್ಲವಾದ್ದರಿಂದ ಅವಿರಲೇ ಬಾರದು, ಎಂದು ಹಠತೊಟ್ಟು ಎಲ್ಲಿಯೂ ನ್ಯಾಯತಪ್ಪದಂತೆ ವರ್ತಿಸುವುದು ಉತ್ತಮವಿದ್ದಿತು; ಮತ್ತದು ಸಾಧ್ಯ ಕೂಡಾ. ವ್ಯವಸ್ಥಾ ವಿಧಾನಗಳ ಸವಿವರ ವಿಮರ್ಶೆಯನ್ನು ಇಲ್ಲೀಗ ನಡೆಸುವುದು ಅಸಾಧ್ಯವಾದರೂ ಕೇವಲ ಜೈಲಿಗೆ ಹೋದವರೇ ಈ ಭೂದಾನಕ್ಕೆ ಸತ್ಪಾತ್ರರು ಎಂದು ಕಟ್ಟಿಕೊಳ್ಳುವ ಬದಲಿಗೆ, 'ಸ್ವಾತಂತ್ರ್ಯ ಚಳವಳಗಳಲ್ಲಿ ಸೇರಿದುದರಿಂದ ಭವಿಷ್ಯವನ್ನು ಹಾಳುಮಾಡಿಕೊಂಡು ಹೀನಾವಸ್ಥೆಯಲ್ಲಿರುವವರಿಗೆ" ಪ್ರಥಮಸ್ಥಾನ ಕೊಡುವುದು ಅಗತ್ಯವಿತ್ತು. ಇಂತಹ ತಿದ್ದುಪಡಿ ಸೂಚನೆಯು ಅವಧಿ ಮೀರಿರುವಂತೆ ಕಾಣುತ್ತದೆ. ಆದರೂ ಸಂಸ್ಕಾರಕ್ಕೆ ಈಗ ಕೂಡಾ ಅತ್ತ ಲಕ್ಷ್ಯಕೊಡಲು ಸಾಧ್ಯವಿದೆ. ಸರಕಾರದ ವರ್ತನೆಯ ಕುರಿತು ಹೀಗನ್ನಬಹುದಾದರೆ, 'ರಾಜಕೀಯ ಸಂತ್ರಸ್ತ'ರೆಂದು ಗಣಿಸಲ್ಪಟ್ಟವರ ಮತ್ತು ತಮ್ಮನ್ನು ತಾವೇ ಹಾಗೆಂದು ನೆನಸಿಕೊಂಡವರ ವರ್ತನೆಗಳೇನೂ ನಿರ್ದೋಷವಾಗಿಲ್ಲ. "ತಮ್ಮ ಅಂದಿನ ಸೇವೆಗಾಗಿ, ಇಂದು ಬಹುಮಾನ ಅಪೇಕ್ಷಿಸುವುದರಲ್ಲಿ ಮರ್ಯಾದೆಯಿಲ್ಲ"ಎಂಬ ಜವಾಹಿರಲಾಲರ ಅಭಿಮತವನ್ನು ಈ ವರ್ಗದ ಎಲ್ಲರೂ ಶಿರಸಾವಹಿಸಿಕೊಳ್ಳುವುದು ಅಗತ್ಯ. ರಾಜಕೀಯ ಸಂತ್ರಸ್ತ ಸ್ಥಾನವನ್ನು ಮತ್ತು ತಮ್ಮ ಅಪೇಕ್ಷೆಯ ಭೂಮಿಗಳನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಕೆಲವರು ಹೂಡಿರುವ ಆಟ, ಪಿತ ಲಾಟಗಳನ್ನು ಕಾಣುವಾಗ, ಇಂಥವರೂ "ಮಾಜೀ ಸತ್ಯಾಗ್ರಹಿಗಳೇ?" ಎಂಬ ಪ್ರಶ್ನೆ ಸಹಜವಾಗಿ ಮೂಡಬೇಕು. ಸತ್ಯ, ತ್ಯಾಗ ತಿರುಳಾಗಿರುವ ಸತ್ಯಾಗ್ರಹದ ಒರೆಗಲ್ಲಲ್ಲಿ ಪರೀಕ್ಷಿಸಿಯೇ ಈ ದಾನವೆಂಬ ಶರ್ತವಿರುತಿದ್ದರೆ, ಆ ದಾನವನ್ನು ಗಳಿಸಿಕೊಳ್ಳುವುದಕ್ಕಾಗಿ ತಾವು ನಡಯಿಸಿದ ಪ್ರಯತ್ನಗಳ ದೆಸೆಯಿಂದಲೇ ಇಂದು 'ರಾಜಕೀಯ ಸಂತ್ರಸ್ತ'ರೆನ್ನಿಸಿಕೊಂಡಿರುವವರಲ್ಲಿ ಹೆಚ್ಚಿನವರು ನಾಪಾಸ್ ಆಗತಿದ್ದರೇನೋ! "ಈ ಉಡುಗೊರೆ ಪಡೆಯಲರ್ಹರು."ಎಂದು ಮಿಕ್ಕವರು ಒಪ್ಪುವ ಮಾತಂತಿರಲಿ, ಸ್ವತಃ ತಮ್ಮ ಮನಸ್ಸಾಕ್ಷಿಯೇ ಅದನ್ನೊಪ್ಪಿಕೊಳ್ಳದಂತಹ ರೀತಿಯಲ್ಲಿ ವರ್ತಿಸಿದವರಿದ್ದರೆ, ಅಂಥವರು ಬೇರೆಯವರ ದೋಷಗಳತ್ತ ಕೈತೋರಿಸುವ ಬದಲು ಆತ್ಮಶೋಧನೆ ಮಾಡಿಕೊಳ್ಳಬೇಕಾದುದು ಅಗತ್ಯ. ಇನ್ನು "ಕಾಂಗ್ರೆಸಿನಲ್ಲಿ ಜೈಲಿಗೆ ಹೋದವರಿಗೆ ಮಾತ್ರ ಈ ಭೂದಾನವೇಕೆ?" ಎಂದು ಟೀಕಿಸುವವರು,ಇದೇನೂ ಕಾಂಗ್ರೆಸ್ ಸರಕಾರದ ಸ್ವಪಕ್ಷಪಾತಿ ನವೀನ ಶೋಧನೆಯಲ್ಲ—ಸ್ವಾತಂತ್ರ್ಯ ಅಥವಾ ವಿಜಯ ಪ್ರಾಪ್ತಿಯ ನಂತರ ಅದರಲ್ಲಿ ಭಾಗವಹಿಸಿದ್ದ ಯೋಧರಿಗೆ ಸಂಭಾವನೆ ಕೊಡುವ ಪದ್ಧತಿ ಪ್ರಾಚೀನ ಕಾಲದಲ್ಲೇ ಇದ್ದದ್ದೇ—ಎಂಬುದನ್ನು ಮರೆಯಬಾರದು. 'ನಾಳೆ ಕಮ್ಯೂನಿಸ್ಟರೋ, ಹಿಂದೂ ಮಹಾಸಭೆಯವರೋ ಅಧಿಕಾರಕ್ಕೆ ಬಂದರೆ, ಅವರು ತಮ್ಮ ಚಳವಳಗಳಲ್ಲಿ ಭಾಗವಹಿಸಿದ ತಮ್ಮವರಿಗೆ ಇದನ್ನೇ ಮಾಡಲಾರರೇ" ಎಂಬಂತಹ ಅಡ್ಡ ಸವಾಲುಗಳು ಕೇಳಿಬರುತ್ತಿವೆ. ಕಾಂಗ್ರೆಸಿನ ಚಳವಳಗಾರರೆಂದಲ್ಲ—ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರೆಂದೇ ಈ ರಾಜಕೀಯ ಸಂತ್ರಸ್ತರಿಗೆ ಈ ಬಹುಮಾನ. ರಾಷ್ಟ್ರದ ಸ್ವಾತಂತ್ರ್ಯ ಚಳವಳಗಳನ್ನು ಆ ಕಾಲದಲ್ಲಿ ಹೂಡಿದ್ದುದು ಕಾಂಗ್ರೆಸ್ಸಾದುದರಿಂದಲೇ ಸಹಜವಾಗಿ ಈ ಉಡುಗೊರೆಯು ಕಾಂಗ್ರೆಸಿಗರಿಗೇನೇ ಸಲ್ಲುವಂತಾಗಿದೆ; ಇವೆಲ್ಲಾ ನ್ಯಾಯ, ಧರ್ಮ ಮತ್ತು ಸತ್ಯಸ್ಥಿತಿಯ ಕಡೆಗೆ ಲಕ್ಷ್ಯಕೊಡುವವರು ಸದ್ಬುದ್ಧಿಯಾದರೂ ಎಲ್ಲರೂ ಮಾಡಬೇಕು. ರಾಜಕೀಯ ಸಂತ್ರಸ್ತರ ಭೂದಾನದಂತಹ ಕಾರ್ಯಗಳು ಕೂಡಾ, ಎಲ್ಲಾ ವಿಧದ ಮೇಲಾಟ ಮತ್ತು ದ್ವೇಷಾಸೂಯೆಗಳಿಗೆ ಅವಕಾಶಕೊಡುವಂತಿರಬಾರದು.

ನೋಟೀಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ಉಡಿಪಿ ಮುನಿಸಿಪಲ್ ಲೋಕಲ್ ಯುನಿಟಿಗೆ ಸಂಬಂಧಪಟ್ಟ ಮದರಾಸು ಲೆಜಿಸ್ಲೇಟಿವ್ ಎಸೆಂಬ್ಲಿ ಮತ್ತು ಹಾಸ್ ಒಫ್ ಪೀಪ್ಲ್ಸಿನ ಪ್ರಿಲಿಮಿನರಿ ಓಟರರ ಪಟ್ಟಿಯನ್ನು ಈ ದಿನ(20-11-50ರಲ್ಲು) ಉಡ್ಪಿ ತಾಲೂಕು ಖಚೇರಿ, ಸಬ್ ರಿಜಿಸ್ಟ್ರರ ಆಫೀಸು, ಮತ್ತು ಪೋಲೀಸು ಸ್ಟೇಶನ್‌ಗಳಲ್ಲಿ ಹಚ್ಚಿ ಪ್ರಕಟಿಸಿರುವದಲ್ಲದೆ ಈ ಕೆಳಗೆ ನಮೂದಿಸಿದ ಸಾರ್ವಜನಿಕ ಕಟ್ಟಡಗಳಲ್ಲಿ ಸಹ ಆಯಾಯ ಲೊಕೇಲಿಟಿಗೆ ಸಂಬಂಧಪಟ್ಟ ಓಟರರ ಪಟ್ಟಿಯನ್ನು ಬಹಿರಂಗವಾಗಿ ಪ್ರಕಟಿಸಿಯದೆ.

ಎಚ್. ಜಿ. ಕೆದಿಲಾಯ,
ತಹಸಿಲದಾರ್ ಮತ್ತು ಇಲೆಕ್ಟೋರಲ್ ರಿಜಿಸ್ಟ್ರೇಶನ್ ಆಫೀಸರ್, ಉಡುಪಿ.

ಲೊಕಲಿಟಿ ಮತ್ತು ಸಾರ್ವಜನಿಕ ಕಟ್ಟಡಗಳ ವಿವರ:—

ಉಡುಪಿ

1 ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆ, 2 ಆದಿಉಡಿಪಿ ಎಯಿಡೆಡ್ ಹಾಯರ್ ಎಲಿಮೆಂಟರಿ ಶಾಲೆ, 3 ಅಂಬಲಪಾಡಿ ಎಯಿಡೆಡ್ ಹಾಯರ್ ಎಲಿಮೆಂಟರಿ ಶಾಲೆ, 4 ಮುನಿಸಿಪಲ್ ಗರ್ಲ್ಸ್ ಸ್ಕೂಲು ಕಿನ್ನಿಮೂಲ್ಕಿ, 5 ಬಡಗಬೆಟ್ಟು ಪಂಚಾಯತ ಬೋರ್ಡು, 6 ಕ್ರಿಶ್ಚಿಯನ್ ಹೈಸ್ಕೂಲು ಉಡಿಪಿ, 7 ಪನಿಯಾಡಿ ಎಲಿಮೆಂಟರಿ ಸ್ಕೂಲ್, 8 ಮುನಿಸಿಪಲ್ ಮೀನು ಮಾರ್ಕೆಟು 9 ಮುನಿಸಿಪಲ್ ಆಫೀಸು ಉಡುಪಿ, 10 ಪೂಡನಿಡಂಬೂರು ಪಂಚಾಯತ ಬೋರ್ಡು ಆಫೀಸು 11 ಬೋರ್ಡು ಹೈಸ್ಕೂಲು, ಉಡಿಪಿ, 12 ಮುನಿಸಿಪಲ್ ಲೈಬ್ರರಿ, ಉಡಿಪಿ, 13 ಪ್ರೈವೇಟ್ ಎಂಜಿನೀಯರ್ ಆಫೀಸು, ಉಡಿಪಿ.

ಕುಂದಾಪುರ

1 ಮದ್ದುಗುಡ್ಡೆ ವಾರ್ಡು–ತಾಲ್ಲೂಕ ಆಫೀಸು, ಕುಂದಾಪುರ, 2 ಹಳೆಪೋಸ್ಟು ಆಫೀಸು ವಾರ್ಡು–ಮಿಶನ್ ಶಾಲೆ, 3 ಖಾರ್ವಿಕೇರಿ ವಾರ್ಡು-ಹೂವಿನಕೆರೆ ಅಣ್ಣಪ್ಪನ ಅಂಗಡಿ, 4 ಚರ್ಚು ವಾರ್ಡು–ಮಾದ್ರಿಶಾಲೆ, 5 ಸೆಂಟ್ರಲ್ ವಾರ್ಡು–ಕುಂದಾಪುರ ಕ್ಲಬ್, 6 ಫೋರ್ಟು ವಾರ್ಡು–ಪಂಚಾಯತು ಬೋರ್ಡ್ ಆಫೀಸು, 7 ಕೋಡಿ ವಾರ್ಡು–ಕೋಡಿ ಗಣಪಯ್ಯನಾಯ್ಕರ ಹೊಟೆಲ್, 8 ಪಶ್ಚಿಮ ವಡೇರಹೋಬಳಿ ವಾರ್ಡ್–ಕೃಷ್ಣ ಹೊಳ್ಳರ ಅಂಗಡಿ, 9 ಪೂರ್ವ ವಡೇರ ಹೋಬಳಿ ವಾರ್ಡ್–ವಿಷ್ಣುಮೂರ್ತಿ ಶ್ಯಾನುಭಾಗರ ಅಂಗಡಿ.

ಹಿರಿ—ಕಿರಿ ಧೋರಣೆ

ಸಾರ್ವತ್ರಿಕ ಹೊಣೆ ಹೊತ್ತಿರುವವರು ಮತ್ತು ಸ್ವಪಕ್ಷಾಭಿವೃದ್ಧಿ ಸಾಧನೆಯ ಧ್ಯೇಯ ಮಾತ್ರವಿರುವವರೊಳಗೆ ಅಂತರ ವ್ಯತ್ಯವಿರುವಂತಹದೇ. ಮೊದಲನೆಯವರು ಎಲ್ಲವನ್ನೂ ಜತೆಯಲ್ಲಿ ಕರಕೊಂಡೇ ಮುಂದೊತ್ತಬೇಕಾಗುತ್ತದಾದ್ದರಿಂದ ನಿಧಾನವಾಗಿ ಸಾಗಬೇಕಾಗುತ್ತದೆ. ಎರಡನೆಯವರು ತಮ್ಮದನ್ನಷ್ಟೇ ಮುಂದೂಡಿಕೊಂಡು ಹೋದರಾಯಿತಾದ್ದರಿಂದ ಅವಸರದಿಂದ ನೆಗೆಯಬಲ್ಲರು.

ನೇಪಾಳದ ಗಲಭೆಗೆ ಸಂಬಂಧಪಟ್ಟ ಸರ್ವಸಂಗತಿಗಳನ್ನೂ ತುಲನೆಮಾಡಿ ನೋಡಿಕೊಳ್ಳಬೇಕಾದ ಭಾರತ ಸರಕಾರವು, ಅಲ್ಲಿಯ ಈಗಿನ ರಾಣಾ ಆಡಳಿತೆಯ ಕುರಿತು ಬದ್ಧವಿರೋಧವನ್ನು ಪ್ರದರ್ಶಿಸಿಲ್ಲ. ನೇಪಾಳದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದು ಭಾರತ ಸರಕಾರವು ಮನಃಪೂರ್ವಕವಾಗಿ ಆಶಿಸುತ್ತಿದೆಯಾದರೂ ಅದಕ್ಕಾಗಿ ಒಮ್ಮೆಗೇ ದುಡುಕದೆ ನೇಪಾಳ ಪ್ರಧಾನಮಂತ್ರಿಯು ಇಬ್ಬರು ಪ್ರತಿನಿಧಿಗಳೊಡನೆ ಅಲ್ಲಿಯ ವ್ಯವಸ್ಥೆಯ ಸಂಧಾನ ಮಾತುಕತೆಗಳನ್ನೀಗ ನಡಸುತ್ತಿದ್ದಾರೆ. ಆದರೆ ಅಂತಹ ವಿಶಾಲ ಹೊಣೆಗಾರಿಕೆಯಿರದ ನೇಪಾಲೀ ಕಾಂಗ್ರೆಸಿಗರು ಅಲ್ಲಿ ಪ್ರತ್ಯಕ್ಷ ಹೋರಾಟವನ್ನೇ ಹೂಡಿದ್ದಾರೆ.

ಸಮಾಜವಾದ ಸ್ಥಾಪನೆಯೇ ನೆಹರುಗಳ ಧ್ಯೇಯವಾಗಿದ್ದರೂ ರಾಷ್ಟ್ರದ ಇತರ ಸ್ಥಿತಿಗತಿಗಳ ಕಡೆಗೆ ಲಕ್ಷ್ಯಕೊಡುವ ಹೊಣೆ ಹೊತ್ತಿರುವ ದೆಸೆಯಿಂದಲೇ ನೆಹರೂ ಸರಕಾರವು ಆ ಕುರಿತು ಅತ್ಯಂತ ನಿಧಾನಿಯಾಗಬೇಕಾಗಿದೆ. ಆದರೆ ಅಂತಹ ಇತರ ಹೊರೆ ಭಾರವೇನೂ ಇರದ ಸಮಾಜವಾದಿ ಪಕ್ಷಗಳಂಥವರು ಈ ಕುರಿತು ತೀವ್ರಗಾಮಿತ್ವ ವಹಿಸಲು ಶಕ್ತರಾಗಿದ್ದಾರೆ.

ಕಮ್ಯೂನಿಸ್ಟ್ ಆಕ್ರಮಣದ ಕುರಿತು ಬದ್ಧವಿರೋಧವಿರುವ ಟ್ರೂಮೇನರಿಗೆ ಅದರೊಂದಿಗೇನೇ ಇತರ ಸಂಭವಗಳ ಚಿಂತೆಯೂ ಇರುವುದರಿಂದ ಕೊರಿಯಾ, ಫೋರ್ಮೋಸ, ಚೈನಾಗಳ ಸಂಬಂಧದಲ್ಲಿ ಯೋಚಿಸಿ ಹೆಜ್ಜೆಯಿಡಬೇಕೆಂದು ಅವರು ಬಗೆದಿದ್ದಾರೆ. ಆದರೆ ಕೇವಲ ಯುದ್ಧ ಸೇನಾನಿತ್ವವಿರುವ ಜನರಲ್ ಮೆಕಾರ್ಥರರು, ಕಮ್ಯೂನಿಸ್ಟರ ಕಡೆಗೆ ಎಂದಿಗೂ ಮೃದು ಮಂದ ಹೆಜ್ಜೆಯಿಡದೆ ಏಕದಂ ಮುಂದೊತ್ತಬೇಕೆಂಬ ಅಭಿಪ್ರಾಯವುಳ್ಳವರೆಂದು ಪ್ರಕಟವಾಗಿದೆ.

ಮಂತ್ರಿಮಂಡಲದ ಹೊಣೆಹೊತ್ತಿರುವ ಬ್ರಿಟನಿನ ಪ್ರಧಾನ ಮಂತ್ರಿ ಅಟ್ಲಿಗಳು ಎಲ್ಲವನ್ನೂ ತುಲನೆಮಾಡಿಕೊಂಡು ತೂಕದ ಮಾತುಗಳನ್ನಾಡುವ ಸ್ವಭಾವದವರಾಗಿರುವಾಗ, ಅಂತಹ ವಿಶಾಲ ಹೊಣೆಗಾರಿಕೆಯಿರದ ಬ್ರಿಟನಿನ ವಿದೇಶ ಮಂತ್ರಿ ಮಿ. ಬೆವಿನರು, ಈಜಿಪ್ಟಿನಿಂದ ಬ್ರಿಟಿಷ್ ಸೇನೆಗಳನ್ನು ಹಿಂದೆಗೆಯುವ ಕುರಿತು ಚಟ್ಟಮಾತುಗಳನ್ನಾಡಿ ಈಜಿಪ್ಟಿನಲ್ಲಿ ಕ್ರೋಧಾವೇಶಗಳನ್ನೆಬ್ಬಿಸಿರುವುದು ಕಂಡು ಬರುತ್ತದೆ.

ಯಾವುದೇ ಸಂಸ್ಥೆ, ಪಕ್ಷ, ಪಂಗಡಗಳಲ್ಲಾದರೂ ಸರಿಯೇ—ಯಜಮಾನ ಅಥವಾ ನಾಯಕತ್ವದ ಜವಾಬ್ದಾರಿ ಹೊತ್ತವರಿಗಿಂತ ಕೀಮೆಂಬರ ಅಥವಾ ಅನುಯಾಯಿಗಳು ಹೆಚ್ಚು ತೀವ್ರಗಾಮಿಗಳು ಮತ್ತು ದುಡುಕಿನವರಾಗಿರುವದನ್ನು ಕಾಣಬಹುದು.

ಉಡುಪಿ

ಕಲಾವೃಂದದಲ್ಲಿ — ವರ್ಷಂಪ್ರತಿ ಲಕ್ಷದೀಪೋತ್ಸವದ ಸಮಯ ನಡೆದು ಬರುತ್ತಿರುವ ಸಾಹಿತ್ಯಗೋಷ್ಠಿಯು ಈ ಬಾರಿ ಇದೇ ತಾ. 24 ಮತ್ತು 25ರಲ್ಲು ಶ್ರೀ ಚಂದ್ರೇಶ್ವರ ದೇವಸ್ಥಾನದ ಮಹಡಿಯಲ್ಲಿ ಶ್ರೀಗಳಾದ ಜಿ. ಕೆ. ಭಟ್ ಮತ್ತು ಕೆ. ಶ್ಯಾಮ ಭಟ್ಟರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರಗಿತು. ಶ್ರೀ ಅದಮಾರು ಮಠದ ಸ್ವಾಮಿಗಳವರು ಸಾಹಿತ್ಯಗೋಷ್ಠಿಯನ್ನು ಉದ್ಘಾಟಿಸಿದರು ಶ್ರೀಗಳಾದ ಕೌಲಗಿ ಶೇಷಾಚಾರ್, ಕೆ ಸುಬ್ರಾಯ ಪುರಾಣಿಕ, ವೆಂಕಟಾಚಲ ಭಟ್, ಬಿ. ಕೆ ರಾಮಕೃಷ್ಣ ರಾವ್, ಇ ಎಸ್. ಭಟ್, ಮೊದಲಾದವರು ಸಾಹಿತ್ಯದಲ್ಲಿ ಪ್ರಗತಿ, ಸಾಹಿತ್ಯದ ಬೆಳವಣಿಗೆ ಇತ್ಯಾದಿ ವಿಷಯಗಳನ್ನೆತ್ತಿ ಉಪನ್ಯಾಸಗಳನ್ನಿತ್ತರು ಶ್ರೀ ಹರಿದಾಸ ಭಟ್ಟರು ಕಾವ್ಯವಾಚನ ಮಾಡಿದರು ಶ್ರೀ ಕೆ. ಹರಿದಾಸ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಧೂಳಿನ ಹಾವಳಿ—ಮುನಿಸಿಪಾಲಿಟಿಯ ನೀರಿನ ಲೋರಿಯು ಇನ್ನೂ ತನ್ನ ಪ್ರಾಮುಖ್ಯ ಕಾರ್ಯಕ್ಕೆ ಪ್ರಾರಂಭ ಮಾಡಿಲ್ಲ. ವಾಹನ ಸಂಚಾರಗಳಿಂದಾಗಿ ರಸ್ತೆಗಳಲ್ಲಿ ಧೂಳು ಹಾರುತ್ತಲಿದೆ. ಪಾದಚಾರಿಗಳ ಸಂಕಷ್ಟ ಹೇಳತೀರದು, ಆನೆಯಮೇಲೆ ಕೂತವನಿಗೆ ನೆಲದ ಮೇಲಿನ ಸೊಳ್ಳೆಕಾಟ ತಿಳಿಯದಾಗಿದ, ಎಂಬ ಪರಿಸ್ಥಿತಿ ಒದಗಿದೆ

ಪ್ರಕಟಣೆ

ಉಡುಪಿ ಡಿ ಮು. ಕೋರ್ಟಿನಲ್ಲಿ

O-P. No. 46/1950

1 ಪ್ರಯಾಗಿ ಯಾನೆ ಸರಸ್ವತಿ ಬ್ಯಾ-ಲಕ್ಷ್ಮಿ ನಾರಾಯಣ ಕಾಮತರ ವಿಧವೆ-

2 ಆರ್ ಎ ಕಾಮತ್, 3 ಲಕ್ಷ್ಮೀಶ ಕಾಮತ್, 4 ಲಕ್ಷ್ಮೀ ಮಾಧವ ಕಾಮತ್ ಅಪ್ರಾಯ ಕಂಪ್ರಿರ ಮಕ್ಕಳು—

ಉಡ್ಪಿ ಕಸಬಾ ಕಾಡಬೆಟ್ಟು

—ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನಂದರೆ

ಮೇಲ್ಕಂಡ ಅರ್ಜಿಯ 1ನೆ ಅರ್ಜಿದಾರಳ-ಗಂಡ-ಬಾಕಿ ಅರ್ಜಿದಾರರ ಸಹೋದರ- ತಾ. 30-9-50ರಲ್ಲಿ ಸ್ವರ್ಗಸ್ಥರಾದ-ಲಕ್ಷ್ಮೀ ನಾರಾಯಣ ಕಾಮತರ ಬಾಬ್ತು ಸದ್ರಿ ಅರ್ಜಿಯ A ಸೆಡ್ಯುಲಿನಲ್ಲಿ ವಿವರ್ಸಿದ- [illegible] ವಗ್ಯೆರೆ ಆದಾಯಗಳನ್ನು ವಸೂಲು ಮಾಡುವರೆ ಆತನ ಮುಖ್ಯ ವಾರಿಸುದಾರಳಾದ 1ನೇ ಅರ್ಜಿದಾರಳ ಹೆಸರಿಗೆ-ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಮಾಡಿದ ಮೇಲ್ಕಂಡ ಅರ್ಜಿ ತಾ. 16 12-1950ಕ್ಕೆ ತನ್ನಬಗ್ಗೆ ಯಾರಿಗಾದರೂ ಯಾವದೆಯಂತಹದೂ ಆಕ್ಷೇಪ ಹೇಳತಕ್ಕವರು ಯಿದ್ರೆ ಅದಿನ್ನ 11ಗಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂತ ಸಹಾ ಈ ಮೂಲಕ ತಿಳಿಸೋಣಾಗಿದೆ.

N V. Kamath,

Advocate for Petitioners

ಉಡ್ಪಿ 27—11—50



Approved from by the Govt of Mysore Certif cated by the Agent of the Govt of Cylone & Indian

---

ಏಲಂ ನೋಟೀಸು

ದಿ ಕರ್ಣಾಟಕ ಬೇಂಕ್ ಲಿಮಿಟೆಡ್., ಉಡ್ಪಿ.

THE KARNATAKA BANK LTD., UDIPI

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ. –

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ, ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದಿದ್ದುದರಿಂದ ಸದ್ರಿಯವರಿಗೆ ಕ್ರಮದಂತೆ ರಿಜಿಸ್ಟ್ರಿ ನೋಟಿಸುಗಳನ್ನು ಕೊಟ್ಟಾಗ್ಯೂ ಕೂಡಾ ಪಾವತಿ ಮಾಡದಿದ್ದುದರಿಂದ, ಬೇಂಕಿಗೆ ಬರತಕ್ಕ ಅಸ್ಲು, ಬಡ್ಡಿ, ಖ್ಯಾವೇಜು ಮತ್ತು ಖರ್ಚು ವಗ್ಯೆರೆಯನ್ನು ಇದೇ ತಾ. 4-12-1950ನೇ ಸೋಮವಾರ ಬೇಂಕಿಗೆ ಪಾವತಿಮಾಡಿ ಅಡಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದ್ರಿ ಆಭರಣಗಳನ್ನು ತಾ. 12-12-1950ನೇ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಅಗತ್ಯಪಟ್ಟಲ್ಲಿ ಏಲಂ ಮಾಡುವ ತಾರೀಕನ್ನು ಮುಂದರಿಸಲಾಗುವುದು ತಿಳಿದಿರುವುದು

ಲೋನಿನ ನಂಬ್ರ	ಆಸಾಮಿಗಳ ಹೆಸರು ಮತ್ತು ವಿಳಾಸ	ಬ್ಯಾಂಕಿಗೆ ಬರತಕ್ಕ ಮೊಬಲಗು.
592/48	ಅನಂತಯ್ಯ ಶೇಟ್, ರಾಘವಶೇಟರ ಮಗ, ಕೋಳದಪೇಟೆ, ಉಡ್ಪಿ, ದ ಕ.	ಅಸ್ಲು ರೂ. 125– ಮತ್ತು ಇದರ ಮೇಲಣ ತಾ 6-7-49ರಿಂದ ಸೇ 7ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
2/49	ಅನಂತಯ್ಯ ಸೇಟ್, ರಾಘವಸೇಟರ ಮಗ, ಕೋಳದಪೇಟೆ, ಉಡ್ಪಿ, ದ.ಕ	ಅಸ್ಲು ರೂ 100– ಮತ್ತು ಇದರ ಮೇಲಣ ತಾ 3-1-49ರಿಂದ ವಸೂಲು ವರೆಗೆ ಸೇ. 9ರ ಸಲೆಯಲ್ಲಿ ಬಡ್ಡಿ
222/49	ಸುಬ್ಬ ಮಡಿವಾಳ, ಕಣ್ಣಪ್ಪನವರ ಮಗ, ಕುಂಜಿಬೆಟ್ಟು, ಕಲ್ಸಂಕದಲ್ಲಿ ವಾಸಿಸುವವ, ಉಡ್ಪಿ, ದ. ಕ.	ಅಸ್ಲು ರೂ.50– ಮತ್ತು ಇದರ ಮೇಲಣ ತಾ 2-5-49ರಿಂದ ಸೇ. 9ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
335/49	U K. ರಾಮಚಂದ್ರ ಸೆಟ್ಟಿಗಾರ, ನಾಗಪ್ಪಸೆಟ್ಟಿಗಾರರ ಮಗ, ಕಿನ್ನಿಮೂಲ್ಕಿ, ಉಡುಪಿ ಪೋಸ್ಟು, ದ.ಕ. ಹಾಲಿ– Bardez, Bastora Mapaca Post-Goaದಲ್ಲಿರುವವರು	ಅಸಲು ರೂ. 40– ಮತ್ತು ಇದರ ಮೇಲಣ ತಾ.28-6-49ರಿಂದ ಸೇ 9ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
365/49	ನಾರಾಯಣ ಸೆಟ್ಟಿ, ರಾಮಣ್ಣ ಸೆಟ್ಟಿ ಅಳಿಯ, ಹಿರಿಯಡ್ಕ ಗ್ರಾಮ, ಹಾಲಾಡಿ ಪೋಸ್ಟು, ಉಡ್ಪಿ ತಾಲ್ಕು, ದ ಕ	ಅಸ್ಲು ರೂ 65– ಮತ್ತು ಇದರ ಮೇಲಣ ತಾ 11-7-49ರಿಂದ ಸೇ.9ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
493/49	ಕಂಡ್ಯ ಮೂಲ್ಯ, ತಿಬಾರಮೂಲ್ಯರ ಮಗ, ಕುಂಜಿಬೆಟ್ಟು, ಶಿವಳ್ಳಿ ಗ್ರಾಮ, ಉಡ್ಪಿ-	ಅಸ್ಲು ರೂ 40 ಇದರ ಮೇಲಣ ತಾ. 17 9-49ರಿಂದ ಸೇ 9ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
678/49	ನಾಗಪ್ಪ ಸೇಟ್, ಗುರುವಸೇಟರ ಮಗ, ತೆಂಕುಪೇಟೆ, ಉಡ್ಪಿ ದ ಕ.	ಅಸ್ಲು ರೂ. 106– ಇದರ ಮೇಲಣ ತಾ 21-12-49ರಿಂದ ವಸೂಲು ವರೆಗೆ ಸೇ. 8ರ ಸಲೆಯಲ್ಲಿ ಬಡ್ಡಿ

ಬೇಂಕಿನ ಆಫೀಸು, ತೆಂಕಪೇಟೆ, ಉಡುಪಿ, ದ. ಕ. 20—11—1950

P. Madhava Rao,
AGENT.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ ಮತ್ತು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹುಳಿಖಾರ, ಕಾಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ಅಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

ಮಂಗಳೂರು

ಹೊಸ ಜಿಲ್ಲಾ ಕಲೆಕ್ಟರರು— ದ. ಕ. ಜಿಲ್ಲೆಯ ಕಲೆಕ್ಟರರಾಗಿ ನೇಮಿಸಲ್ಪಟ್ಟ ಶ್ರೀ ಎ. ಆರ್. ರಾಜರತ್ನಂ ಅವರು ಕಳದ ವಾರದಲ್ಲಿ ಚಾರ್ಜು ವಹಿಸಿರುತ್ತಾರೆ.

ವರ್ಡ್ಸ್‌ವರ್ತ್ ಕವಿಯ ಶತಮಾನೋತ್ಸವವು ಇಲ್ಲಿಯ ಸರಕಾರಿ ಕಲಾಶಾಲೆಯಲ್ಲಿ ದಿನಾಂಕ 20ರಿಂದ 22ರ ತನಕ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಪ್ರಾರಂಭ ದಿನ ಕಾಲೇಜಿನ ಪ್ರಿನ್ಸಿಪಾಲರು ಪ್ರಾಸ್ತಾವಿಕ ಮಾತುಗಳನ್ನಾಡಿದ ಮೇಲೆ ವರ್ಡ್ಸ್‌ವರ್ತ್ ಕವಿಯ ಕೆಲವು ಕವನಗಳ ರಿಕಾರ್ಡುಗಳನ್ನು ಸಭೆಗೆ ಕೇಳಿಸಲಾಯಿತು. ಪ್ರತಿಯೊಂದು ಕವನದ ಕುರಿತು ಪ್ರಿನ್ಸಿಪಾಲ್ ಎಮ್. ಐ. ಹಶೀಮಿ ಸಾಹೇಬರು ವಿವರವಾದ ಪರಿಚಯ ಮಾಡಿದರು. ಶ್ರೀಗಳಾದ ವಿ. ಐ. ಕರುಣಾಕರರಾವ್, ಗಣೇಶ ತಂತ್ರಿ, ಡಿ. ವಿ. ಸುಬ್ರಹ್ಮಣ್ಯಂ ಮತ್ತು ಯು. ಸುಮತಿಯವರು ಕವಿಯ ಜೀವನ ಹಾಗೂ ಕವನಗಳ ಕುರಿತು ಮಾತನಾಡಿದರು. ಎರಡನೆ ದಿನ ಕಲಾಶಾಲೆಯ ಸ್ನಾತಕರಲ್ಲಿ ಕೆಲವರು ಕವಿಯ ಕವನಗಳ ವೈಶಿಷ್ಟ್ಯಗಳ ಕುರಿತು ಮಾತನಾಡಿದರು. ಕೊನೆಯ ದಿನ ಪ್ರಿನ್ಸಿಪಾಲ್ ಹಶೀಮಿ ಸಾಹೇಬರು ವರ್ಡ್ಸ್‌ವರ್ತ್ ಕವಿಯ ಕವಿತೆಗಳನ್ನೋದಿ ವಿವರಿಸಿದರು.

ಸ್ಕೌಟುಗಳ ವಿಲೀನೀಕರಣ— ಭಾರತದಲ್ಲಿನ ಹಿಂದುಸ್ಥಾನ ಸ್ಕೌಟುಗಳೂ ಬೋಯ್ಸ್ ಸ್ಕೌಟುಗಳೂ ಒಂದಾಗುವ ನಿರ್ಧಾರವಾಗಿ ವಿಲೀನೀಕರಣದ ಕಾರ್ಯವು ದಿಲ್ಲಿಯಲ್ಲಿ ಈಗಾಗಲೇ ಆಗಿರುತ್ತದೆ. ಈ ವಿಲೀನೀಕರಣದ ಕಾರ್ಯವನ್ನೆಸಗುವುದಕ್ಕಾಗಿ ಇಲ್ಲಿಯ ಹಿಂದೂಸ್ಥಾನ್ ಸ್ಕೌಟು ಸಂಘದವರು ಇದೇ ತಾ. 21ರಲ್ಲು ಸಭೆಸೇರಿ ಒಂದು ಸಂಘಾನ ಸಮಿತಿಯನ್ನೇರ್ಪಡಿಸಿದರು. ಶ್ರೀಗಳಾದ ಡಾ। ಎಮ್. ಕೇಶವಪೈ, ಎಮ್. ಎಸ್. ಏಕಾಂಬರರಾವ್, ಎಮ್. ಎಸ್. ಮಾಧವ ರಾವ್, ಎಮ್. ವೆಂಕಟೇಶಪೈ, ಬಿ. ಶ್ರೀನಿವಾಸರಾವ್, ಕೆ. ಸೂರ್ಯನಾರಾಯಣ ಅಡಿಗ, ಬಸ್ತಿ ಕಾಸೀಮ ಸಾಹೇಬ್, ಶ್ರೀಮತಿ ರಾಧಾ ಎಲ್. ರಾವ್, ಶ್ರೀಮತಿ ಕಲ್ಯಾಣಿ ಶೆಟ್ಟಿಯವರು ಈ ಸಮಿತಿಯಲ್ಲಿರುವರು.

ಸ್ಕೌಟುಮೇಳ— ಗಣಪತಿ ಹೈಸ್ಕೂಲ್, ಕೆನರಾ ಹೈಸ್ಕೂಲ್ ಮತ್ತು ಬೆಸೆಂಟ್ ಹೈಸ್ಕೂಲುಗಳ ಸ್ಕೌಟುಮೇಳವೊಂದು ತಾ. 23ರಲ್ಲು ಕೆನರಾ ಹೈಸ್ಕೂಲ್ ವಠಾರದಲ್ಲಿ ಜರಗಿತು. ಸ್ಥಳೀಯ ಬಿ. ಟಿ. ಕಾಲೇಜಿನ ವಿಚಾರವಾಗಿ ತನಿಖೆ ಮಾಡುತ್ತಿರುವ ಯುನಿವರ್ಸಿಟಿ ಕಮಿಶನಿನವರು ಈ ಕಾಲದಲ್ಲಿ ಹಾಜರಿದ್ದರು. ಇವರ ಪರಿಚಯವನ್ನು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಚ್. ರಾಮರಾಯರು ಮಾಡಿದರು. ನಂತರ ಕೆಲವು ವಿನೋದಗಳಾದುವು.

ಸಮಾಜವಾದೀ ಮುಖಂಡರ ದಿಗ್ಬಂಧನ— ಸ್ವಲ್ಪ ಸಮಯದ ಹಿಂದೆ ಮೈಸೂರು ರಾಜ್ಯದ ದಾವಣಗೆರೆಯಲ್ಲಿ ಬಂಧಿತರಾಗಿದ್ದ ಸಮಾಜವಾದೀ ಮುಖಂಡ ಶ್ರೀ ಬಿ. ವಿ. ಕಕ್ಕಿಲ್ಲಾಯರನ್ನು ಮೈಸೂರು ಪೋಲೀಸರು ಸ್ಥಳೀಯ ಪೋಲೀಸರ ವಶ ಒಪ್ಪಿಸಿರುವರು. ಅವರನ್ನು ಸ್ಥಳೀಯ ಅಧಿಕಾರಿಗಳು ದಿಗ್ಬಂಧನಕ್ಕಾಗಿ ವೆಲ್ಲೂರಿಗೆ ಕಳುಹಿಸಿರುವರು.

ಶಾಲಾ ಸ್ಥಾಪಕರ ದಿನಾಚರಣೆ— ಕೆನರಾ ಹೈಸ್ಕೂಲು, ಕೆನರಾ ಗರ್ಲ್ಸ್ ಸ್ಕೂಲು, ಮೊದಲಾದ ಸಂಸ್ಥೆಗಳ ಸ್ಥಾಪಕರಾದ ದಿ। ಶ್ರೀ ಅಮ್ಮೆಂಬಳ ಸುಬ್ಬರಾಯ ಪೈಗಳ ಸ್ಮಾರಕ ದಿನವು ಈಚೆಗೆ ಕೆನರಾ ಹೈಸ್ಕೂಲಿನಲ್ಲಿ ಆಚರಿಸಲ್ಪಟ್ಟಿತು.

ಮೋಟಾರು ಅಪಘಾತಗಳು— ಇದೇ ತಾ. 17ರಲ್ಲು ಮಂಗಳೂರು ಮೈದಾನು ರಸ್ತೆಯಲ್ಲಿ ಮುನಿಸಿಪಲ್ ಸೀಮೆನ ಲಾರಿಯು ಎದುರು ನಾಲ್ಕು ವರ್ಷ ಪ್ರಾಯದ ಹುಡುಗನೊಂದು ಥಕ್ಕನೆ ಅಡ್ಡ ಹಾದುದರಿಂದ ಲಾರಿ ಅಡಿಗೆ ಬಿದ್ದು ಕಾಲುಗಳಿಗೆ ಜಖಂ ಆಗಿ ಈಗ ವೆನ್‌ಲಾಕ್ ಆಸ್ಪತ್ರೆಯಲ್ಲಿ ಶುಶ್ರೂಷೆ ಹೊಂದುತ್ತಿದೆ. ತಾ. 20ರಲ್ಲು ಸಂಜೆ ಕೂಳೂರಲ್ಲಿ ಒಂದು ಮೋಟಾರು ಕಾರು ಹೊರಡಿಸುವಾಗ ಥಕ್ಕನೆ ಹಿಂದೆಸರಿದುದರಿಂದ ಹತ್ತಿರದಲ್ಲೇ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದವನೊಬ್ಬನ ಕಾಲುಗಳಿಗೆ ಹೊಡೆದು ವಿಶೇಷ ಜಖಂ ಆಗಿ ಆಸ್ಪತ್ರೆಗೆ ಒಯ್ಯಲಾಗಿದೆ.

ರಾಜಕೀಯ ಸಂತ್ರಸ್ತರಿಗೆ ಭೂದಾನ ಸಲಹಾ ಸಮಿತಿ ಸಭೆಯು ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಸಾಧಾರಣ 22 ಮಂದಿಗೆ ಸರಾಸರಿ ಐತ್ತು ಎಕ್ರೆಗಳಷ್ಟು ಭೂಮಿಕೊಡಲಾಯಿತು. ಇನ್ನು ಸುಮಾರು 100 ಮಂದಿಯ ಅರ್ಜಿಗಳು ಬಾಕಿ ಉಳಿದಿವೆ.

ದ. ಕ. ಜಿಲ್ಲಾ ಗ್ರಾಮೋದ್ಧಾರ ಸಮಿತಿ ಸಭೆಯು ಇದೇ ತಾ. 18ರಲ್ಲು ಮೂಲ್ಕಿ ಆಸ್ಪತ್ರೆ ವಠಾರದಲ್ಲಿ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಇಲಾಖಾ ಅಧೀಸರುಗಳ ವರದಿಗಳು ಓದಿ ರಿಕಾರ್ಡು ಮಾಡಲಾದುವು. ಹೆಲ್ತ್ ಇನ್ಸ್‌ಪೆಕ್ಟರ್, ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್, ಕೋಪರೇಟಿವ್, ಪಂಚಾಯತ್ ಮತ್ತು ವಿದ್ಯಾ ಇಲಾಖೆಯ ಕೆಳತರಗತಿಯ ನೌಕರರನ್ನು ಪ್ರತಿಯೊಂದು ಫಿರ್ಕಾ ಕೇಂದ್ರದಲ್ಲೂ ನೇಮಿಸಬೇಕೆನ್ನುವ ಶ್ರೀ ಎಮ್. ಆರ್. ಪೂಂಜರ ಸೂಚನೆಯು ಮಾನ್ಯವಾಯಿತು. ಮೂಲ್ಕಿ ಬಂದರದಲ್ಲೂ ಸ್ಟೀಮರು ಕೆಲಕಾಲ ನಿಲ್ಲುವ ಏರ್ಪಾಡು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ವಿನಂತಿಸಲಾಯಿತು. ಮೂಲ್ಕಿ ಮತ್ತು ಮಂಜೇಶ್ವರ ಫಿರ್ಕಾಗಳಲ್ಲಿ ಅಲ್ಪವಾಯಿದೆಯ ಬೇಸಿಕ್ ಟ್ರೈನಿಂಗ್ ತರಗತಿಗಳನ್ನು ತೆರೆಯುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು.

ಎಮ್ಮಾಳು— ಎಂದಿನಂತೆ ನಡೆಯುವ ಸೀಮೆಯ ಕಂಬಳವು ತಾ. 11-12-50ನೇ ಸೋಮವಾರ ನಡೆಯಲಿದೆ. ಆ ಸಂಬಂಧ ಕೋಣಗಳನ್ನು ತರುವವರಿಗೆ ಸುಸ್ವಾಗತವಿದೆಯೆಂದು ಮುಖ್ಯರಾದವರು ತಿಳಿಸುತ್ತಾರೆ.

ವಂಡಾರು— ವರ್ಷಂಪ್ರತಿ ನಡೆಯುತಕ್ಕ ಶ್ರೀ ಜನದೇವತಾ ಕಂಬಳವು ತಾರೀಕು 4-12-50ನೇ ಸೋಮವಾರ ನಡೆಯಲಿದೆ.

ಶ್ರೀ ಧರ್ಮಸ್ಥಳ ದೀಪೋತ್ಸವ— ಎಂದಿನಂತೆ ಈ ವರ್ಷವೂ ಇದೇ ದಸಂಬ್ರ ತಾ. 7 ಮತ್ತು 8ರಲ್ಲಿ ದೀಪೋತ್ಸವದ ವೇಳೆ ಸರ್ವ ಧರ್ಮ ಸಮ್ಮೇಳನವೂ, ಸಾಹಿತ್ಯ ಗೋಷ್ಠಿಯೂ, ನಡೆಯಲಿರುವುದು. ತುಂಕೂರು ಜಿಲ್ಲಾ ಸಿದ್ಧಗಂಗಾ ಮಠಾಧಿಪತಿಗಳಾದ ಮತ್ತು ಸಂಸ್ಕೃತ-ಆಂಗ್ಲ ವಿದ್ಯಾಪರಿಣತರಾದ ಶ್ರೀ ಶಿವಕುಮಾರ ಸ್ವಾಮಿಗಳವರು ಅಧ್ಯಕ್ಷತೆಗೆ ದಯಮಾಡಿ ಒಪ್ಪಿರುತ್ತಾರೆ. ಮೊದಲಿನ ದಿವಸ "ಹಿಂದುಸ್ಥಾನದ ಸಂಸ್ಕೃತಿಯ ಬೆಳವಣಿಗೆಗೆ ನಮ್ಮ ಧರ್ಮದ ನೆರವು" ಎಂಬ ವಿಚಾರದಲ್ಲಿಯೂ, ಮರುದಿವಸ "ಹಿಂದಿನ ಇಂದಿನ, ಮತ್ತು ಮುಂದಿನ ಕನ್ನಡ ಸಾಹಿತ್ಯ" ವಿಚಾರದಲ್ಲಿಯೂ, ಊರು ಪರವೂರುಗಳ ಘನವಿದ್ವಾಂಸರ ಭಾಷಣಗಳಿರುವುವು. ಕೊನೆಯ ದಿವಸ ರನ್ನನ ಗದಾಯುದ್ಧವನ್ನು ನುರಿತ ವಿದ್ವಾಂಸರು ನಾಟಕವಾಡಿ ತೋರಿಸುವರು. ಇದನ್ನು ಉದ್ಘಾಟಿಸುವ ಮಹನೀಯರ ಪರಿಚಯ ಹಿಂದಿನಿಂದ ತಿಳಿಸಲಾಗುವುದು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲ್ಯ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ...ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾ ...ಗೇರಿ:— ದಾವಣಗೇರಿ ಪ್ರೆಸ್ ... ಎಲ್ ... ಶಿವಪ್ಪ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾಕಿಸ್ಟರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all keeps hair black and relieves head-ache etc.

TRADE MARK

Mnufctured by:-

Swadeshi Oushadhi Bhandara (Regd.)

KILJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಟ್ರೈಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಸನ್ನಿಮಿತ್ತ

ಪ್ರೈಮರಿ ಶಾಲೆಯ ಕೋ-ಓಪರೇಟಿವ್ ಸ್ಟೋರ್ಸಿನ ಕುರಿತು ಬೇಡದ ಪ್ರಚಾರ.

ತಾ. 9-11-50ರ ನವಯುಗದಲ್ಲಿ ಹೆಸರು ಬರೆಯಲು ಹೇಸಿಕೊಂಡ ಅನಾಮಧೇಯ ನೊಬ್ಬ ನಾಲ್ಕುಸಾಲು ಬರೆದು ತನ್ನ ತಲೆತಿರು ಕತನವನ್ನು ಜಾಹೀರಾತು ಮಾಡಿಕೊಂಡ ದ್ದನ್ನು ಕೆಲವರು ಓದಿರಬಹುದು ಆದರೆ ಸ್ಟೋರ್ಸಿನ ವಿಚಾರದಲ್ಲಿ ಆತ ಬರೆದಿರುವ ಮಾತುಗಳು ಮಾತ್ರ ತೀರ ಸುಳ್ಳಿನ ಕಂತೆ ಯಾಗಿದ್ದರಿಂದ ನಿರಾಕರಿಸುವುದು ನನ್ನ ಪ್ರಾ ಮಾಣಿಕ ಕರ್ತವ್ಯವಾಗಿದೆ. ಉದಾಹರಣೆಗೆ ಪ್ರತಿಯೊಬ್ಬನಿಗೂ ರೂ. 6-4-8ರಂತೆ ಬಿ ಲ್ಲು ಆಯಿತು ಎಂದಿಟ್ಟುಕೊಳ್ಳೋಣ ಆತ 10 ರೂಪಾಯಿ ನೋಟನ್ನು ಕೊಡುತ್ತಾನೆ, ಸ್ಟೋರ್ಸಿನ ಸಿಬಂದಿ ಆತನಿಗೆ ರೂ 3 11-4 ಹಿಂದೆ ಸಲ್ಲಿಸಬೇಕಾಗುತ್ತದೆ. ಎಲ್ಲರಿಗೂ ಚಿಲ್ಲರೆ ಪೈಗ ಳನ್ನು ಒದಗಿಸುವುದು ದುಸ್ತರವಾಗಿದೆ, ಇಂಥ ಸಂದರ್ಭದಲ್ಲಿ ಹೆಚ್ಚಾಗಿ ಸ್ಟೋರ್ಸಿನಲ್ಲಿರತಕ್ಕ ಯಾವುದಾದರೂ ಒಂದು ಪೈಯ ಬೆಲೆಯ ವಸ್ತುವನ್ನು ಕೊಟ್ಟು ಪೈಯನ್ನು ಸಲ್ಲಿಸಲಾ ಗುತ್ತಿದೆ. ಆ ವಸ್ತು ಊದುಬತ್ತಿ - ಪೆಪ್ಪರ ಮಿಂಟ್-ಬೀಡಿ ಇತ್ಯಾದಿಯಾಗಿರುತ್ತದೆ ಕೆಲ ವೆಡೆ ಪೈಯನ್ನು ಹಿಂದೆಕೊಡುವುದೇ ಇಲ್ಲ ವಂತೆ. ಹಾಗೆ ಮಾಡುವುದಕ್ಕಿಂತ ಈ ವಿನಿಮ ಯ ಚೆನ್ನಾಗಿದೆ. ಅದೂ ಅಲ್ಲದೆ ಒಂದು ಪೈ ಯ ಬಗ್ಗೆ ಆತನಿಗೆ ಕೊಡಲಾಗಿದ್ದ ಸಾಮಾನ ನ್ನೂ ಇನ್ನೆರಡು ಪೈಯನ್ನೂ ತಂದು ವಾಪಾ ಸುಕೊಟ್ಟಲ್ಲಿ ಕಾಲಾಣೆಯನ್ನೇ ಕೊಡಲಾಗು ತ್ತದೆ. ಅಥವಾ ಬರುವವರೆಲ್ಲರೂ ತಮ್ಮ ತಮ ವ್ಯವಹಾರಕ್ಕೆ ಬೇಕಾದ ಪೈಗಳನ್ನು ತಂದು ಬಿಟ್ಟರೆ ಈ ಕೊಂದರೆಯೇ ಇಲ್ಲವಷ್ಟೆ? ಹೊ ರತು ಪ್ರತಿಯೊಬ್ಬರಲ್ಲಿಯೂ ಒತ್ತಾಯದ ಬೀಡಿ ಪ್ರಚಾರ ಮಾಡಲಾಗುವುದೆಂಬುದು ದೊಡ್ಡ ಸುಳ್ಳಿನ ಕಂತೆ. ಇದನ್ನು ಬರೆದಾತ ನಿನವೂ ಧರ್ಮಾರ್ಥ ಬೀಡಿಯನ್ನು ಬಯ ಸಿದ್ದು ಅದು ದೊರೆಯದೆ ಇದ್ದುದಕ್ಕಾಗಿ ರೋಷ ಏನೋ ಹರಟಿದ್ದಾಗಿರಬೇಕು. ಆ ಅನಾ ಮಧೇಯನು ತೆರೆಯ ಮರೆಯಲ್ಲಿರುವುದ ಕ್ಕಿಂತ ಧರೆಗೆ ತನ್ನ ಮೋರೆ ತೋರಿಸುವುದೂ ಉಚಿತಲ್ಲವೆ? ಆದರೆ ಸ್ವತಂತ್ರ ಭಾರತದಲ್ಲಿ ಇಂಥ ಕ್ಷುದ್ರವಾದ ಪುರುಷರ ಸಂಖ್ಯೆ ಆದಷ್ಟು ಕಮ್ಮಿ ಯಿದ್ದರೆ ಕ್ಷೇಮ.

Dr K. Narayana Pai
Secretary

ಮಂಗಳೂರು

ಹಿಂದುಕೋಡುವ ದಿ ಅಳಿಯ ಸಂತಾನಿಗರ ಸಭೆಯು —ಇದೇ ತಾ. 23ರಲ್ಲು ಶ್ರೀ ಎ ಶಂಕರಾಳ್ವ, ಅವರ ಅಧ್ಯ ಕ್ಷತೆಯಲ್ಲಿ ಜರಗಿತು ಸಭಾರಂಭದಲ್ಲಿ ಅಧ್ಯ ಕ್ಷರು, 1934ರ ಅಳಿಯ ಸಂತಾನ ಮಸೂದೆ ಯನ್ನು ಗವರ್ನರರು ರದ್ದುಪಡಿಸಿದ ಮೇಲೆ 15ವರುಷಗಳ ನಂತರ 1949ರಲ್ಲು ಅಳಿಯ ಸಂತಾನ ಕಾನೂನು ಆಯಿತು. ಆಗಲೇ ಹಿಂ ದು ಕೋಡು ಬರುವುದೆಂದಿದ್ದುದರಿಂದ ಅ ಷ್ಟೊಂದು ಅವಸರದಿಂದ ಅಳಿಯಸಂತಾನ ಆಕ್ಟನ್ನೂ ತರುವ ಅವಶ್ಯವಿದ್ದಿಲ್ಲ ಈಗ ಅದರಿಂದಾಗಿ ಕೋರ್ಟು ವ್ಯವಹಾರಗಳೇ ತುಂಬಾ ಉಂಟಾಗಿವೆ ಇಂದೀಗ ಹಿಂದುಕೋ ಡಿನ ಪ್ರಯೋಜನವು ಅಳಿಯಕಟ್ಟಿನವರಿಗೆ ದೊರೆಯದಂತಾದರೆ ಇನ್ನು ಮುಂದೆ ನಿಜ ವಾದ ಸುಧಾರಣೆಯಾಗಲು ಎಷ್ಟು ವಿಳಂಬ ವಾಗುವುದೋ ಏನೋ? ಆದುದರಿಂದ ಈಗ ಲೇ ಹಿಂದುಕೋಡು ಅಳಿಯಕಟ್ಟಿನವರಿಗೂ ಅನ್ವಯವಾಗುವಂತೆ ಚಳವಳಿಸುವುದು ಅಗ ತ್ಯವೆಂದರು.

ಶ್ರೀ ಕೆ ಕೆ. ಸೆಟ್ಟರು ಮಾತನಾಡುತ್ತಾ ಜಿಲ್ಲೆಯಲ್ಲಿ ನಡೆದ ಸಭೆಗಳಲ್ಲೆಲ್ಲ, ಹಿಂದು ಕೋಡು ಅಳಿಯಕಟ್ಟಿನವರಿಗೂ ಅನ್ವಯಿಸ ಬೇಕೆಂದೇ ಬಹುಮತದ ಅಭಿಪ್ರಾಯವಿದ್ದಾ ಗ, ಮದ್ರಾಸು ಸರಕಾರದವರು ಯಾವ ಜನ ಮತದ ಬಲದಿಂದ ಅಳಿಯಕಟ್ಟಿನ ಆಸ್ತಿ ವಿಭಾಗ ಮತ್ತು ಆಡಳಿತದ ಕುರಿತು ಹಿಂದು ಕೋಡು ಅನ್ವಯಿಸದಂತೆ ಮಾಡಿದರೋ ತಿಳಿಯದು ಅಳಿಯಕಟ್ಟಿನವರಿಂದರೆ ಕೇವಲ ಕೆಲವೇ ದೊಡ್ಡದೊಡ್ಡ ಮನೆತನಗಳವರಲ್ಲ ಪ್ರತಿಯೊಬ್ಬ ಹೆಂಡತಿ ಮಕ್ಕಳು ಮತ್ತು ಜಾಲಗೇಣಿ ಒಕ್ಕಲಿಗೂ ಸೊತ್ತಿನ ಹಕ್ಕು ಸಂಬಂಧವಾದ ಕಾನೂನು ಅಗತ್ಯವಾಗುವ್ವು ದು ಅಳಿಯಕಟ್ಟಿನ ಜನಸಾಮಾನ್ಯರು ಹಿಂ ದುಕೋಡು ಸಂಪೂರ್ಣವಾಗಿ ಅಳಿಯಸಂತಾ ನಿಗರಿಗೂ ಅನ್ವಯಿಸಬೇಕೆಂದಿರುವರು. ಎಂ ಬುದರಲ್ಲಿ ಸಂದೇಹವಿಲ್ಲ ಮದ್ರಾಸು ಸರಕಾ ರವು ಜನಮತಕ್ಕೆ ವಿರೋಧವಾಗಿ ನಡೆದಿದೆ ಆದುದರಿಂದ ಅದರ ಧೋರಣೆಯನ್ನು ನಿಷೇ ಧಿಸಿ, ಹಿಂದು ಕೋಡು ಅಳಿಯ ಕಟ್ಟಿನವ ರಿಗೂ ಸಂಪೂರ್ಣ ಅನ್ವಯಿಸುವಂತೆ ಸಂಘ ಟಿತ ಚಳವಳಿಸುವ ಆವಶ್ಯಕತೆಯನ್ನು ಮನ ದಟ್ಟಿಯ ಹೇಳಿದರು

ಶ್ರೀಗಳಾದ ಎಮ್. ಗಿರಿಯಪ್ಪ, ಜೆ ಎ ಪುತ್ರನ್, ಕೆ. ಸಂಜೀವ ಸೆಟ್ಟಿ, ಬಿ. ದೇವಪ್ಪ ಸೆಟ್ಟಿ, ಬಿ ದೇವಪ್ಪ ಆಳ್ವ, ಬಿ. ಆರ್. ಕರ್ಕೇರ, ಬಿ ತಿಮ್ಮಪ್ಪ ಸೆಟ್ಟಿ, ಬಿ. ಮಹಾಬಲ ಸೆಟ್ಟಿ, ಬಿ ಬಿ ಸೆಟ್ಟಿ ಮೊದಲಾದವರು ತಂತ ಮ್ಮ ಅಭಿಪ್ರಾಯಗಳನ್ನಿತ್ತ ನಂತರ ಈ ಕೆಳಗಿ ನ ನಿರ್ಣಯಗಳು ಸರ್ವಾನುಮತದಿಂದ ಪಾ ಸಾದುವು

1 ಅಳಿಯ ಕಟ್ಟಿನವರಿಗೂ ಹಿಂದು ಕೋಡು ಅನ್ವಯವಾಗಬೇಕೆಂದು ಈ ಮೊದಲು ಜಿಲ್ಲೆಯಲ್ಲಿ ನಡೆದ ಹಲವು ಸಭೆಗಳಲ್ಲಿ ಮಂ ಜೂರಾಗಿರುವ ನಿರ್ಣಯವನ್ನು ಈ ಸಭೆಯು ಪೂರ್ಣ ಸಮರ್ಥಿಸುತ್ತದೆ. 2. ಮದ್ರಾಸು ಸರಕಾರದ ಕಾನೂನು ಮಂತ್ರಿ ಶ್ರೀ ಕೆ ಮಾ ಧವ ಮೆನೋನ್ ಮತ್ತು ಕೃಷಿ ಮಂತ್ರಿ ಶ್ರೀ ಎ ಬಿ ಶೆಟ್ಟಿಯೂ, ಅಳಿಯ ಕಟ್ಟಿನ ಕುಟುಂ ಬದ ಆಸ್ತಿ ವಿಭಾಗ ಮತ್ತು ಆಡಳಿತದ ಕುರಿ ತು ಹಿಂದು ಕೋಡಿ ನ ಅಳಿಯ ಸಂತಾನಿಗ ರನ್ನು ವಿಮುಕ್ತಗೊಳಿಸುವಂತೆ ಮಾಡಿ ಅದ ಕ್ಕೆ ಅಳಿಯ ಸಂತಾನಿಗರ ಬೆಂಬಲವಿರುವು ದು ಎಂಬಂತೆ ತೋರ್ಪಡಿಸಿರುವುದು ಸತ್ಯ ದೂರ್ವಾದ ಸಂಗತಿಯಿದ್ದು ಆ ಕುರಿತು ಈ ಸಭೆಯು ತೀವ್ರ ನಿಷೇಧ ಸೂಚಿಸುತ್ತದೆ. 3 ಅಳಿಯ ಕಟ್ಟಿನ ಕುಟುಂಬದ ಆಸ್ತಿ ವಿಭಾ ಗ ಮತ್ತು ಆಡಳಿತೆಯ ಕುರಿತು ಹಿಂದುಕೋ ಡಿನ ಸೆಕ್ಷನ್ 90 (ಜಿ)ಯಲ್ಲಿ, ಅಳಿಯ ಸಂ ತಾನಿಗರನ್ನು ವಿಮುಕ್ತಗೊಳಿಸಿ, ಆ ಸಂಬಂಧ ವಾಗಿ 1949ರ ಅಳಿಯ ಸಂತಾನ ಆಕ್ಟೇ ಉ ಪಯೋಗವಾಗುವುದೆಂದು ಶ್ರೀ ಎ. ಬಿ. ಶೆಟ್ಟರು ಪ್ರಕಟಿಸಿರುವ ತಿದ್ದುಪಡಿ ಅಗತ್ಯವಿಲ್ಲೆಂದೂ, ಹಿಂದುಕೋಡು ಸಂಪೂರ್ಣವಾಗಿ ಸರ್ವ ವಿಷ ಯದಲ್ಲೂ ಅನ್ವಯಿಸಬೇಕೆಂದೂ ಈ ಸಭೆ ಯು ನಿರ್ಧರಿಸುತ್ತದೆ 4 ಈ ನಿರ್ಣಯಗಳ ಪ್ರತಿಗಳನ್ನು ಮದ್ರಾಸು ಮತ್ತು ಕೇಂದ್ರ ಸ ರಕಾರದ ಮಂತ್ರಿಗಳಿಗೂ ಅಗತ್ಯವುಳ್ಳ ಎಸೆಂ ಬ್ಲಿ ಮತ್ತು ಪಾರ್ಲಿಮೆಂಟ್ ಸದಸ್ಯರಿಗೂ ಕ ಳುಹಿಸುವ ಅಧಿಕಾರ ಅಧ್ಯಕ್ಷರಿಗೆ ಕೊಡಬೇ ಕೆಂದು ನಿರ್ಧಾರವಾಯಿತು.

ಈ ನಿರ್ಣಯಗಳನ್ನು ಕೂಡಲೇ ಕಾರ್ಯ ರೂಪಕ್ಕೆ ತರುವದೆ ಮತ್ತು ಅಗತ್ಯವುಳ್ಳ ಕಾ ರ್ಯಮಾಡಲು ಮತ್ತು ಅವಶ್ಯಬಿದ್ದಲ್ಲಿ ಢಿಲ್ಲಿ ಗೆ ನಿಯೋಗ ಮಂಡಲ ಒಯ್ಯಲು ಈ ಕೆಳಗಿನ ಸ ಮಿತಿ ರಚಿತವಾಯಿತು ಶ್ರೀಗಳಾದ ಸಿ. ಮಂ ಜಯ್ಯ ಸೆಟ್ಟಿ, ಪಿ ಓಬಯ್ಯ ಹೆಗ್ಡೆ, ಕೆ ತಿ ಮ್ಮಪ್ಪ ಸೆಟ್ಟಿ, ಬಿ ದೇವಪ್ಪ ಆಳ್ವ ಎಮ್. ಗಿರಿಯಪ್ಪ, ಜೆ ಎ. ಪುತ್ರನ್, ಬಿ ಆರ್ ಕರ್ಕೇರ, ಎಚ್ ಕೆ ತಂಗಳಾಯ, ಕೆ ಕೆ. ಸೆಟ್ಟಿ, ಕೆ ಸಂಜೀವ ಸೆಟ್ಟಿ, ಬಿ ತಿಮ್ಮಪ್ಪ ಸೆಟ್ಟಿ, ಎ ಶಂಕರ ಆಳ್ವ, ಇವರು ಸಮಿತಿಯ ಸದಸ್ಯರು

ಪ್ರತಿ ತಾಲೂಕಿನಲ್ಲಿಯೂ ಹಿಂದುಕೋಡು ವಾದಿಗಳ ಸಭೆನಡೆಸಿ ಸಮಿತಿ ರಚಿಸಿ, ಸಂಘ ಟಿತ ಚಳವಳಿ ಪ್ರಾರಂಭಿಸುವ ವಿಚಾರದು ನಡೆಯುತ್ತಲಿದೆ.

---

30 ತೋಟಗಳಿಂದ ಸಂಗ್ರಹಿಸಿ ಬಂದ ಅತ್ಯುತ್ತಮವಾದ ಚಹ

ಪ್ರತಿಯೊಂದು ಬ್ರೂಕ್ ಬಾಂಡ್ ಚಹದ ಪ್ಯಾಕ್ಕೂ 30 ತೋಟ ಗಳಿಂದ ಬಂದ ತೇಯಲೆಯ ಮಿಶ್ರಣದ ಪರಿಣಾಮವಾಗಿ ಚಹದ ಶಾಶ್ವತವಾದ ಉತ್ತಮ ಗುಣವನ್ನು ನಿಶ್ಚಯಿಸುವುದು ಅಗ್ಗವಾಗಿ ಸಿಗುವ ಹೆಚ್ಚು ಉತ್ತಮವಾಗಿ ಮಿಶ್ರಣ ಮಾಡಿರುವ ಚಹವನ್ನು ಕೊಂಡು ವೃಥಾ ಏತಕ್ಕೆ ನಷ್ಟಗೊಳ್ಳಬೇಕು? ಬ್ರೂಕ್ ಬಾಂಡ್ ಚಹವು ಮಲಿನವಾಗದ ಹಾಗೆ ಪೊಟ್ಟಣದಲ್ಲಿ ಸುತ್ತಿ ಮೊಹರು ಮಾಡ ಲ್ಪಟ್ಟಿರುತ್ತದೆ.

ಗ್ಯಾರಂಟೀಯಾದ ಶುಚಿತ್ವ ಗ್ಯಾರಂಟೀಯಾದ ಶುದ್ಧತೆ

ಬ್ರೂಕ್ ಬಾಂಡ್ ಚಹಾ

BB 50/ 31 03

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾ ಯವಾದ ಬಡ್ಡಿಯಿಂದಲೂ, ಸಾಲ ದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ ಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟರುಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ,ಶಾಲಾ ಕಾಲೇಜು ಮೊದಲಾದುವುಗಳ

ಲೈಬ್ರರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ

ವಿಳಾಸ:—
ನವಭಾರತ ಪುಸ್ತಕ ಭಂಡಾರ,
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ

ಸ್ವೀಕಾರ ವಿಮರ್ಶೆ

೧ ಯುದ್ಧರಂಗದಿಂದ (ಏಳು ಯುದ್ಧಾನುಭವ ಕತೆಗಳ ಸಂಗ್ರಹ) ಲೇಖಕರು: ಶ್ರೀ ಆರ್. ಎ. ರಾವ್, ಪ್ರಕಾಶಕರು: ಸ್ವಾವಲಂಬನ ಪ್ರಕಾಶನಲಯ, ಸುಲ್ತಾನ್ ಬಝಾರ್ ಹೈದರಾಬಾದ್. (ದಕ್ಷಿಣ) ಬೆಲೆ ರೂ. ೧—೪—೦

ಯುದ್ಧರಂಗದ ಕುರಿತಾದ ಕಾಲ್ಪನಿಕ ಕತೆಗಳನ್ನು ನಾವು ಓದಿದೇವೆ. ಆದರೆ ಸಹಜವಾದ ಕತೆಗಳನ್ನು ಪ್ರಾಯಶಃ ಓದಿಲ್ಲ. (ಕನ್ನಡದಲ್ಲಿ) ಈ ಕಾರ್ಯವನ್ನು ಯೋಧರಾಗಿಯೇ ಅನುಭವವನ್ನು ಪಡೆದ ಶ್ರೀ ಎ ಆರ್. ರಾಯರು ಮಾಡಿರುತ್ತಾರೆ. ಇವುಗಳನ್ನು ಕತೆಗಳೆಂದು ಕರೆದರೂ ಸನ್ನಿವೇಶವೆಲ್ಲ ಸತ್ಯವನ್ನು ನೋವಿನಿಂದಲೂ, ವ್ಯಂಗ್ಯವಾಗಿಯೂ ಸುಖದುಃಖಗಳನ್ನು ನಿವೇದಿಸಿಕೊಳ್ಳುವಂತಹವುಗಳಾಗಿವೆ. ಜಾತೀಯತೆ, ಮೇಲುಕೀಳು, ಅಧಿಕಾರಲಾಲಸೆ ಮುಂತಾದ ವಿಚಾರಗಳು ಇಲ್ಲಿ ಸಾಕಷ್ಟು ಪುಷ್ಟಿಗೊಂಡಿವೆ ಶೈಲಿಯು ಮೋಹಕವಾಗಿಲ್ಲವಾದರೂ ಸನ್ನಿವೇಶಕ್ಕೆ ತಕ್ಕಂತೆ ಮಾರ್ಮಿಕವಾಗಿದೆ.

೨ ಫಂಟಮಾರಾ— (ಇಗ್ನೇಜಿಯೋ ಸಿಲೋನೆ ಬರೆದ ಕಾದಂಬರಿ) ಅನುವಾದಕರು: ಶ್ರೀ ಕು. ಶಿ. ಹರಿದಾಸ ಭಟ್, ಬಿ ಎ. (ಆನರ್ಸ್) ಅವರು. ಪ್ರಕಾಶಕರು ಅಂತರಂಗ ಕಾರ್ಯಾಲಯ, ಉಡುಪಿ, ಬೆಲೆ. ರೂ. ೨—೦—೦

ಫಾಸಿಸ್ಟರ ಆಳುವಿಕೆಯ ಕಾಲದಲ್ಲಿ ಇಟಲಿಯ ರೈತರ ಮೇಲಾದ ದಬ್ಬಾಳಿಕೆಯ ದಾರುಣ ಚಿತ್ರವಿದು. ಆ ಬಡರೈತರ ಮೇಲಾದ ಅನ್ಯಾಯ, ಚಿತ್ರಹಿಂಸೆ, ಅವಮಾನಗಳೇ ಅವರನ್ನು ಕ್ರಾಂತಿಯ ಪಥದಲ್ಲಿ ಮುನ್ನಡೆಸಿದವು. ಇಲ್ಲಿ ನಾವು ಕಾಣುವುದು ಸಂಸಾರದ ಇಲ್ಲವೆ ಸರಸ ಸಲ್ಲಾಪದ ಚಿತ್ರವನ್ನಲ್ಲ; ಆಳುವವರಿಗೂ ಆಳಾಗಿ ಬಾಳುವವರಿಗೂ ಆದ ಕಾದಾಟದ ಚಿತ್ರವನ್ನು! ಈ ಬಗೆಯ ರಾಜಕೀಯ ಕಾದಂಬರಿ ವಿಚಾರದೆಡೆಗೆ ಒಯ್ಯುವುದು ಸ್ವಾಭಾವಿಕ 'ಫಂಟಮಾರಾ' ಹೆಸರಾದ ಕಾದಂಬರಿ, ಉತ್ತಮ ಕಾದಂಬರಿಗಳ ಸಾಲಿಗೆ ಸೇರಿದ್ದು ಆದರೆ ಅನುವಾದ ಆಗಾಂಭೀರ್ಯವನ್ನು ತಂದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅನುವಾದಕಾರರು ಮುನ್ನುಡಿಯಲ್ಲಿ". ಕಾರಂತ, ಅ. ನ ಕೃ. ಅವರ ಕಾದಂಬರಿಗಳೇ ಕನ್ನಡದ ಪರಮಾವಧಿಯಾಗಲಾರವು, ಅವೇ ನಮ್ಮ ಮಾನ(Standard)ವಾಗಿ ಬಹುಕಾಲ ಉಳಿಯಲಾರವು, ಉಳಿಯಬಾರದು, ವಿದ್ಯುತ್ತಿನ ಯುಗದಲ್ಲಿಯೂ ಎತ್ತಿನ ಗಾಡಿಯಂತೆ ನಡೆದ ವಾಙ್ಮಯ ಈ ಪರಮಾಣು ಯುಗದಲ್ಲಿಯಾದರೂ ಕ್ಷಿಪ್ರಗತಿಯಿಂದ ಸಾಗೀತೇನೋ? ಎಂಬ ಶಂಕೆ ಉದಿಸುವಂತೆ ವಿಶ್ವ ಸಾಹಿತ್ಯದ ಇಂಥ ಕೃತಿರತ್ನಗಳು ನೆರವಾಗಲಿ" ಎನ್ನುತ್ತಾ 'ಫಂಟಮಾರಾ"ದ ಮಹತಿಯನ್ನು ಎತ್ತಿ ಹೇಳಿದಾರೆ ಶ್ರೀಮಾನ್ ಕಾರಂತರ ಚೋಮನ ದುಡಿಯಂತಹ ಒಂದು ಸುಂದರ ಚಿತ್ರವು ಕನ್ನಡ ಕಾದಂಬರಿಗಳಲ್ಲಿ ಈತನಕ ಮೂಡಿಲ್ಲ. ಆಗಲೂ ಈಗಲೂ ಮುಂದಕ್ಕೂ ಅದು ಆದರ್ಶ ಕೃತಿಯಾಗುಳಿಯುವುದರಲ್ಲಿ ಸಂದೇಹವಿಲ್ಲ ಚೋಮನು ತನ್ನ ಬದುಕಿನಲ್ಲಿ ಸಾಗುವಳಿಯೊಂದನ್ನು ಮಾಡಬೇಕೆಂದು ಹಂಬಲಿಸಿದ ಹರಿಜನ ರೈತ ತಲೆಮಾರಿನಿಂದ ಬಂದ ಸಂಪ್ರದಾಯ ಅವನಿಗೆ ಗೇಣುದ್ದದ ಭೂಮಿಯನ್ನೂ ಕೊಡದೆ ಅವನ ಬದುಕನ್ನೇ ಮಣ್ಣುಪಾಲು ಮಾಡಿತು ಚೋಮನಂತಹ ಹೊಲವುಳುವ ಹಂಬಲವನ್ನಿಟ್ಟುಕೊಂಡ ರೈತರೆಷ್ಟು ಜನ ನಮ್ಮ ಭಾರತದಲ್ಲಿ ನಿರಾಶಾವಾದಿಗಳಾಗಿ, ಧನಿಗಳ ಗುಲಾಮರಾಗಿಲ್ಲ? ಆರೀತಿಯ ಸುಂದರ ಚಿತ್ರಣವಾಗಲಿ, ಪಾತ್ರಸೃಷ್ಟಿಯಾಗಲೀ, ವಿವಿಧ ಸಮಸ್ಯೆಗಳನ್ನು ಎದುರಿಸುವ ಬಗೆಯಾಗಲೀ, ಅಷ್ಟು ಹೃದಯಸ್ಪರ್ಶಿ ಸನ್ನಿವೇಶವಾಗಲೀ, 'ಆದರ್ಶ'ವೆಂದು ತೋರಿಸಿದ ಫಂಟಮಾರಾದ (ಅನುವಾದದಲ್ಲಿ) ನಾವು ಕಾಣುವಂತಿಲ್ಲ ಕನ್ನಡಬಲ್ಲ ಜನ (ಇಂಗ್ಲಿಷ್ ಬಲ್ಲವರಾದರೂ) ಚೋಮನ ದುಡಿಯನ್ನೊತ್ತಿ ಓದಿ ಅರ್ಥಮಾಡಿಕೊಂಡಷ್ಟು- ಕಂಬನಿ ಸುರಿಸಿದಷ್ಟು- ಫಂಟಮಾರಾವನ್ನು ಓದಿ ಎಷ್ಟು ಮಾತ್ರಕ್ಕೂ ಆ ಅನುಭವವನ್ನು ಪಡೆಯಲಾರರು. ವಿದ್ಯುತ್ತಿನ ವೇಗದಿಂದ ಹರಿದ 'ಫಂಟಮಾರಾ'ದಲ್ಲಿಯ ಸನ್ನಿವೇಶವಾದರೂ ಒಂದೆರಡು ಬಾರಿ ಓದಿ ಜೀರ್ಣಿಸಿಕೊಳ್ಳುವಷ್ಟು ಸರಳವಾಗಿಲ್ಲ- ಬಾಯಾರಿದ ಗಂಟಲಿಗೆ ಕಡುಬನ್ನು ತುರುಕಿದಂತೆ! ತಮ್ಮದೆಂಬ ಸ್ವಾಭಿಮಾನದಿಂದ ವಸ್ತುಸ್ಥಿತಿಯನ್ನು ಮರೆಸಲು ಯತ್ನಮಾಡಬಾರದು. ಹೊರಗಿನಿಂದ ಬಂದ 'ವಿಶ್ವಸಾಹಿತ್ಯವನ್ನು ಕನ್ನಡದ ಜನ ಆದರದಿಂದ ಬರಮಾಡಿಕೊಳ್ಳಬೇಕು. ಅದರಿಂದ ಕನ್ನಡದ ಜನದ ಅಭಿರುಚಿ ಅನುಭವ ಹೆಚ್ಚುವದು ಮಾತ್ರ! ಆದರೆ ಬಂದದ್ದೆಲ್ಲ ಒಳ್ಳೆಯದು, ನಮ್ಮದೆಲ್ಲ ಕೆಟ್ಟದು ಎನುವ ಪರಭಾಷಾ ವ್ಯಾಮೋಹ ಬೇಡ. ಕಾರಂತ, ಅ. ನ ಕೃ. ಬರೆದ ಸಾಹಿತ್ಯ ಪೂರ್ಣವಲ್ಲವಾದರೂ ಕೆಲವಾದರೂ ಆದರ್ಶ ಸಾಹಿತ್ಯವಾಗಿ ನಿಲ್ಲಬಲ್ಲುವು! 'ಫಂಟಮಾರಾ' (ಅನುವಾದ) ಆ ಸಾಲಲ್ಲಿ ನಿಲ್ಲಲಾರದೆಂಬುದನ್ನು ವಸ್ತುಸ್ಥಿತಿಯನ್ನು ಅಂತಃಕರಣದಿಂದಾದರೂ ಒಪ್ಪಿಕೊಳ್ಳೋಣ! ಆಳವಾದ ಅಭ್ಯಾಸದಿಂದ ಕನ್ನಡದ ಶಕ್ತಿಯನ್ನು ಹೆಚ್ಚಿಸುವ ಹುಮ್ಮಸ್ಸು ಕು. ಶಿ ಯವರಲ್ಲಿದೆ ಅವರಲ್ಲಿರುವ ವಿಚಾರಲಹರಿಗಳು ಕನ್ನಡ ಜನಕ್ಕೆ ಅವಶ್ಯ ಬೇಕಾದಂಥವುಗಳು! ಅಭ್ಯಾಸಬಲದಿಂದ ಇನ್ನೂ ಒಳ್ಳೆಯ ಸಾಹಿತ್ಯ ಕನ್ನಡಕ್ಕೆ ಪೋಷಕವಾಗಿ ಅವರಿಂದ ಬರಲೆಂದು ಅತ್ಯಂತ ವಿಶ್ವಾಸದಿಂದ ಹಾರೈಸುತ್ತೇನೆ

—ಎಸ್ಸೆಲ್.

ರಸ ನಿಮಿಷ

ಅರುವತ್ತು ಸಾವಿರ ಟನ್ನು ಸಕ್ಕರೆಯನ್ನು ಇಂಗ್ಲೆಂಡಿನಿಂದ ತರಸಿಕೊಳ್ಳುತ್ತೇವೆ

(ಮುನ್ಷೀ ಭಾಷಣ)

—ಸ್ವಸಂಪೂರ್ಣತೆಗೊಂದು ಮಾದರಿಯೆ?

೦೦ ೦೦

ಕೊರಿಯಾ ಯುದ್ಧದಿಂದಾಗಿ ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಧಾರಣೆಯು ಉಬ್ಬಿ, ಲಾಭವು ಕೊಬ್ಬಿರುವುದನ್ನು ನೋಡಿ ಟ್ರೂಮನ್ 'ಅಧಿಕಲಾಭದ ಕರ' (E. P. T.) ಹೇರುತ್ತಾರಂತೆ. (ವಾಶಿಂಗ್ಟನ್ ಸುದ್ಧಿ)

—ಯುದ್ಧಗಳಿಂದ ಪ್ರಯೋಜನವಿಲ್ಲ ಎಂದವರು ಯಾರು?

೦೦ ೦೦

ಬ್ರಿಟನ್ನಿನ ಲೇಬರ್ ಸರಕಾರವು ಪಾರ್ಲಿಮೆಂಟಿನಲ್ಲಿ ಮುಂದೆ ತರುವ ಠರಾವುಗಳು ಪಾಸಾಗಬೇಕಾದರೆ ಆಸ್ಪತ್ರೆಗಳಲ್ಲಿದ್ದವರು ಸ್ಟ್ರೆಚರಿನಲ್ಲಿ ಓಡಿ ಬರಬೇಕಾಗುವುದಂತೆ

—ಇನ್ನೊಂದು ದಿನ ಆ ಸ್ಟ್ರೆಚರಿನಲ್ಲಿ ಲೇಬರ್ ಸರಕಾರಕ್ಕೇ ದಿನ ಬರುವುದೋ ಏನೋ.

೦೦ ೦೦

ದಕ್ಷಿಣ ಧ್ರುವ ಪ್ರದೇಶಕ್ಕೆ ಯಾರೂ ಯುದ್ಧ ನೌಕೆಗಳನ್ನು ಕಳಿಸಬಾರದು ಎಂದು ಬ್ರಿಟನ್—ಅರ್ಜೆಂಟಿನಾ—ಚಿಲಿ ದೇಶಗಳು ಒಪ್ಪಂದ ಮಾಡಿಕೊಂಡಿವೆಯಂತೆ:

—'ಇಲ್ಲಿಗೂ ಬಂದೆಯಾ ಜಡಶಂಕರ' ಎಂದು ಬ್ರಿಟಿಷರಿಗೆ ಯಾರಾದರೂ ಆಶ್ಚರ್ಯ ಸೂಚಿಸಿದರೆ, ಸಿಟ್ಟು ಬರುವುದಿಲ್ಲವಂತೆ

೦೦ ೦೦

ಜಾಗತಿಕ ಶಾಂತಿ ಪರಿಷತ್ತು ಲಂಡನ್ನಿನಲ್ಲಿ ನೆರವೇರದೆ 'ಕಬ್ಬಿಣದ ಪರದೆ'ಯ ಹಿಂದುಗಡೆ ವಾರ್ಸಾ ನಗರದಲ್ಲಿ ನಡೆಯುವುದಂತೆ.

—ಪರಿಷತ್ತಿನಲಿ ಎಷ್ಟು ಶಾಂತಿಭಂಗವಾದರೂ, ಪರದೆಯು ಹೊರಗಿನವರು ನೋಡಬಾರದು

೦೦ ೦೦

ಕೇರಳದ ರಾಷ್ಟ್ರಕವಿ ವಳ್ಳತ್ತೋಳ್ ಅಂತರ್ರಾಷ್ಟ್ರೀಯ ವ್ಯಕ್ತಿಯಾದರು- ಮೊನ್ನೆ ಇದೇ ಶಾಂತಿ ಪರಿಷತ್ತು ಲಂಡನಿನಲ್ಲಿ ಸೇರುವುದೆಂಬ ಭ್ರಮೆಯಿಂದ ಲಂಡನ್ನಿಗೆ ಹೋದರು. ಅಲ್ಲಿಂದ ವಾರ್ಸಾಕ್ಕೆ ವರ್ಗಾಯಿಸಿ ಕೊಂಡಿದ್ದಾರೋ ಎನ್ನುವುದು ಸಂದೇಹ

—ಆದರೆ ನಮ್ಮ ಹೈಕಮಿಶನರು ಮಾನ್ಯ ಮೆನನ್ ಅವರಿಗೆ ಸಹಾಯ ಮಾಡದೆ ಇರಲಿಕ್ಕಿಲ್ಲ,

೦೦ ೦೦

ಮದರಾಸು ವಿಶ್ವವಿದ್ಯಾಲಯಕ್ಕೆ ಇಂಗ್ಲಿಷ್ ಮಾಧ್ಯಮವೇ ಆಗಬೇಕಂತೆ.

—ಇಲ್ಲವಾದರೆ ಪ್ರಳಯವಾಗುವುದೆಂದು ಅವರಿಗೆ ಖಾತ್ರಿ ಇದೆ.

೦೦ ೦೦

ಅಸ್ಪೃಶ್ಯತೆಯನ್ನು ಆಚರಣೆಗೆ ತಂದವರಿಗೆ ಶಿಕ್ಷೆವಿಧಿಸುವ ಒಂದು ಕಾನೂನು ಜಾರಿಗೆ ಬರುವುದು,

—ಸ್ವಲ್ಪ ಕಾಲ ಕಳೆದ ಮೇಲೆ ಹೊಲೆಯರು ಬ್ರಾಹ್ಮಣರನ್ನು ಮುಟ್ಟದಿರುವ ಸನ್ನಿವೇಶ ಬಂದಾಗಲೂ ಈ ಕಾನೂನು ಅನ್ವಯಿಸುವುದೇ?

೦೦ ೦೦

ಸೋರುವ-ಪ್ರೂಫ್, ಬೆಂಕಿ-ಪ್ರೂಫ್, ಪೂರ್ವ ಬಂಧಿತ ಗೃಹಗಳಿಗೆ ದಿಲ್ಲಿಯಲ್ಲಿ ಮಳೆ ಬಂದೊಡನೆ ಸೋರಿ, ಬೆಂಕಿ ತಗಲಿದೊಡನೆ ಉರಿದು ಹೋದುವಂತೆ.

— ಎಚ್ ವಿ ಕಾಮತರಿಗೆ ಇದು ಸಂತೋಷದ ಸುಗ್ಗಿ

೦೦ ೦೦

"ಅಯ್ಯೋ, ಜನ ಅಜ್ಞಾನಾಂಧಕಾರದಲ್ಲಿ ತೊಳಲುತ್ತಿದ್ದಾರೆ"

(ಮದರಾಸೀ ನಾಯಕರ ಇಲೆಕ್ಷನ್ ಭಾಷಣ)

—ನೀವು ಬಂದರೆ ಇನ್ನಷ್ಟು ಅಂಧಕಾರವು ಅಧಿಕವಾಗುತ್ತದೆ.

(ಶ್ರೋತೃವಿನ ಸದಭಿಪ್ರಾಯ)

—ಕು. ಶಿ.

ದಿ. ವಿಜಯಾ ಬೇಂಕ್, ಲಿಮಿಟೆಡ್., ಬೈಂದೂರು (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡರೂ, ಅಸಲು-ವ-ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಇರುವುದರಿಂದಲೂ, ಕೆಲವರು ಮೃತಪಟ್ಟಿರುವರೆಂದು ನೋಟೀಸು ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟಿರುವ ಚಿನ್ನಾಭರಣಗಳನ್ನು ಇದೇ ದಶಂಬರ ತಿಂಗಳ ತಾರೀಕು 9ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ-ಯಾ-ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಬೇಂಕಿನ ಮಠಾರದಲ್ಲಿ ಹರಾಜು ಮಾಡಲಾದೀತು ತಿಳಿದಿರಲಿ.

ಸಾಲದ ಜಂಡ್ರಾ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು ರೂ. ಆ. ಪೈ
595/45-6	ಶ್ರೀ ಯು. ಮಂಜುನಾಥ ಸೇಟ್; ಸುಬ್ರಾಯ ಸೇಟರ ಮಗ, ಉಪ್ಪುಂದ	18- 0-0
691/45-6	ಶ್ರೀ ಯು ಮಂಜುನಾಥ ಸೇಟ್; ಸುಬ್ರಾಯ ಸೇಟರ ಮಗ, ಉಪ್ಪುಂದ	9- 5-0
758/45-6	ಶ್ರೀ ದೊಂಬೆ ಗಣಪತ ಸೇಟ್; ವೆಂಕಟ್ರಮಣ ಸೇಟರ ಮಗ, ಪಡುವರಿ ಗ್ರಾಮ; ಪಡುವರಿ	155- 0-0
443/46-7	ಶ್ರೀ ಸೋಳನ ದುರ್ಗ ಆಳಿವೆ ಕೋಡಿದಾರನ ಮಗ, ತಾರಾಪತಿ, ಪಡುವರಿ	83- 0-0
416/46-7	ಶ್ರೀ ಯು ಶ್ರೀನಿವಾಸ ಸೇಟ್ ರಘುನಾಥ ಸೇಟರ ಮಗ. ಉಪ್ಪುಂದ	60- 0-0
1005/16-7	ಶ್ರೀ ಪಟ್ಟಾವದ ಗೋವಿಂದ ಸೇರುಗಾರ, ಮಂಜಪ್ಪ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ ಗ್ರಾಮ, ಪಡುವರಿ.	8- 0-0
1116/46-7	ಶ್ರೀ ಬಿ. ನಾರಾಯಣ ಹೊಳ್ಳ ನಾಗಪ್ಪ ಹೊಳ್ಳರ ಮಗ, ಭೂಮ್ಯಾಲಿಕ ಬೈಂದೂರು	525-11-0
27/47-8	ಶ್ರೀ ಬೆಳ್ಳಿ ಸುಬ್ರಾಯ ಸೇರುಗಾರ; ವೆಂಕಟ್ರಮಣ ಸೇರುಗಾರರ ಮಗ, ಬಾಡ ಬೈಂದೂರು.	20- 0-0
1086/47-8	ಶ್ರೀ ಅಣ್ಣಪ್ಪ ಸೇಟ್ ನಾಗಪ್ಪ ಸೇಟರ ಮಗ, ಯಡ್ತರೆ ಗ್ರಾಮ ಬೈಂದೂರು	40- 0-0
101/49	ಶ್ರೀ ರೊಕ್ಕನ ತಿಮ್ಮಪ್ಪ ಸೇರುಗಾರ ಪರಮೇಶ್ವರ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು	22- 0-0
176/49	ಶ್ರೀ ಬಿ. ರಾಮಚಂದ್ರ ಸೇಟ್ ಶೇಷ ಸೇಟರ ಮಗ ಸೊನಗಾರಕೇರಿ ಬೈಂದೂರು	6- 0-0

ಬೈಂದೂರು
22—11—50

ಎಚ್ ರಾಜೀವ ಸೆಟ್ಟಿ,
ಏಜಂಟ್.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಹುಳು ಕಡ್ಡಿ ಮುಚ್ಚು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಭಗಿನಿ ಸಮಾಜದ ಮಾತಿಂದು ನಮ್ಮೂರಲ್ಲಿ ಒಂದು ಸಮಸ್ಯೆಯಾಗಿಯೇ ಉಳಿದಿದೆ. ಚೆನ್ನಾಗಿ ಪರ್ಯಾಲೋಚಿಸಿದರೆ ಇದೇಕೆ ಸಮಸ್ಯೆಯಾಗಿಯೇ ಉಳಿದಿದೆಯೆಂಬ ಕಾರಣವು ತಿಳಿಯುವುದಿಲ್ಲ. ಅಂದ ಮೇಲೆ ಕಾರಣಗಳಿಲ್ಲದ ಸಮಸ್ಯೆಯನ್ನು ಬಿಡಿಸುವುದು ಕಷ್ಟವಲ್ಲ.

ಭಗಿನಿ ಸಮಾಜದಿಂದ ಒಂದು ಊರಿಗೆ ಎಷ್ಟು ಪ್ರಯೋಜನವಿದೆ ಎಂಬುದನ್ನು ಹಲವರು ಅರಿತವರಾಗಿರಬಹುದು. ಆದರೂ ಇಲ್ಲಿ ನಾಲ್ಕು ಮಾತುಗಳನ್ನು ತಿಳಿಸಲು ನಾನು ಇಚ್ಛಿಸುತ್ತೇನೆ. ನಮ್ಮ ಊರಲ್ಲಿ ಬಹು ಸಂಖ್ಯಾತ ಸ್ತ್ರೀಯರಿದ್ದಾರೆ. ಇವರಲ್ಲಿ ಎಲ್ಲರೂ ಶ್ರೀಮಂತರಲ್ಲ. ಅರ್ಧಕ್ಕರ್ಧ ಸಾಮಾನ್ಯ ತರಗತಿಯವರೂ, ಮತ್ತೆ ಕೆಲವರು ಅತಿ ಹೀನ ದರಿದ್ರರೂ ಇರುವರು. ಸಾಮಾನ್ಯ ತರಗತಿಯವರಲ್ಲಿ, ತಮ್ಮ ಶಾಲಾ ಶಿಕ್ಷಣಗಳನ್ನು ಮುಗಿಸಿ ಮನೆಯಲ್ಲೇ ಸಮಯವನ್ನು ಕಳೆಯುವವರು ಬಹಳ ಮಂದಿ. ಇವರೆಲ್ಲರೂ ಕೊಂಚ ಆಲಸಿಗಳಾಗಿದ್ದರೆ, ಈ ತಪ್ಪನ್ನು ಅವರ ಮೇಲೆ ಹೊರಿಸುವುದೂ ನ್ಯಾಯವಲ್ಲ. ಇದಕ್ಕೆ ನಾವೆಲ್ಲರೂ ಹೊಣೆಯಾಗಿದ್ದೇವೆ. ಬಾಹ್ಯ ಚೆಲುವಿಕೆಯನ್ನು ಕಂಡು ಯಾರನ್ನಾದರೂ ಬುದ್ಧಿಶಕ್ತಿಯಿಂದ ಅಳೆಯಬಾರದು. ರತ್ನಗಳು ಮಣ್ಣಿನಡಿನಲ್ಲಿದ್ದಷ್ಟು ದಿನ ಅದರ ಹೊಳಪು ಬೆಳಕಿಗೆ ಬರುವುದಿಲ್ಲ. ಯಾರಲ್ಲಿ ಯಾವ ಕಲೆ, ಗುಣಗಳು ಅಡಕವಾಗಿವೆಯೆಂದು ಹೇಳಲೂ ಬರುವುದಿಲ್ಲ. ಇವರಲ್ಲಿ ಹಲವರು ಹುಟ್ಟು ಕಲಾವಿದರೂ, ಸಾಹಿತ್ಯ ಪ್ರೇಮಿಗಳೂ ಇರಬಹುದು. ಮತ್ತೆ ಕೆಲವರಿಗೆ ಗಾಯನ, ಕಸೂತಿ, ಕವಿತೆ, ಮೊದಲಾದುವುಗಳಲ್ಲಿ ಮನಸ್ಸು ತೆರೆಯಬೇಕು, ಇನ್ನು ಹಲವರು, ಸಮಾಜ ಸೇವೆ, ಆಟಗಳಲ್ಲಿ, ದೀನೋದ್ಧಾರ ಮೊದಲಾದ ಅಂಗನಸಂಗಗಳನ್ನು ಕಾಣುತ್ತಿರುವರೇನೊ. ಅನುಕೂಲತೆಯುಳ್ಳವರು, ತಮಗೆ ಅಭಿರುಚಿಯುಳ್ಳ ವಿದ್ಯೆಗಳು ಬೆಳಕನ್ನು ಕಾಣಲಿ ಎಂಬ ಹಾರೈಕೆಯಿಂದ, ಮಂಗಳೂರು, ಮದ್ರಾಸ್, ಮುಂಬೈ, ಮೊದಲಾದ ಪಟ್ಟಣಗಳಿಗೆ ಹೋಗುವುದುಂಟು. ಆದರೆ ನೂರರಲ್ಲಿ ತೊಂಭತ್ತು ಜನರಿಗೆ ಯಾವ ಅನುಕೂಲತೆಯೂ ಇಲ್ಲ. ಇವರೆಲ್ಲರ ಕಲಾಸಂಪತ್ತು,

ವನಿತಾ ವಿಭಾಗ

ನಮ್ಮೂರಲ್ಲಿ ಭಗಿನಿ ಸಮಾಜ.

ಲೇಖಕರು: ಕುಮಾರಿ ಪದ್ಮಾ, ಉಡುಪಿ.

ಮನದ ಬಯಕೆ, ಎಚ್ಚರವಿಲ್ಲದ ಬತ್ತಿಯಂತೆ, ಎಂದೂ ಪ್ರಕಾಶವನ್ನು ಕಾಣಲಾರದೆ? ಗಿಡವು ಗುಲಾಬಿಯದಾಗಿದ್ದರೂ ನೀರಲ್ಲೊಳ್ಳಿದೇಕೆ? ನೀರನ್ನು ಕಾಣದೆ ಬದುಕಬಲ್ಲುದೇನೊ? ಯಾವ ತರದ, ಪ್ರೋತ್ಸಾಹ ಬೆಂಬಲಗಳೂ ಇಲ್ಲದೆ, ಹುಟ್ಟು ವಿದ್ಯೆಯು ತಿಲಾಂಜಲಿಯನ್ನು ಪಡೆಯಬೇಕಾಗುತ್ತಿದೆ. ಇದಕ್ಕಿಂತ ಆಪತ್ತು ಬೇರೊಂದಿಲ್ಲ. ನಾಡಿನ ಸಂಪತ್ತುಗಳಲ್ಲಿ ಕಲೆಗೊಂದು ಮಹತ್ವದ ಸ್ಥಾನವಿದೆ. ಎಲ್ಲಾ ಸ್ತ್ರೀಯರು ಒಂದಾಗಿ ತಮ್ಮದೇ ಆದ ಆದೊಂದು ಸಂಸ್ಥೆಯನ್ನು ಸ್ಥಾಪಿಸಿ, ಈ ಎರಡು ತೊಡಕುಗಳನ್ನೇಕೆ ಹೋಗಲಾಡಿಸಲಾಗದು? ಯೋಗ್ಯ ಶಿಕ್ಷಕರಿಂದ ಪ್ರೋತ್ಸಾಹಿಸಲ್ಪಟ್ಟವರಾದರೆ ಮುಂದೆ ಇವರಿಂದ ಎಂತಹ ಮಹತ್ಕಾರ್ಯಗಳು ನಡೆಯಲಿಕ್ಕಿಲ್ಲ? ಮೊನ್ನೆ ಮೊನ್ನೆ ಉಡುಪಿಗೆ ಬಂದ ಮಹಾವ್ಯಕ್ತಿಗಳೊಬ್ಬರು ತಮ್ಮ ಭಾಷಣವನ್ನು ಮುಂದರಿಸುತ್ತಾ ತಾಯಂದಿರನ್ನು ಕೇಳಿಕೊಂಡರು. “ಭೂಮಿತಾಯಿ ನಮಗಿಂದು, ವಿಪುಲ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾಳೆ. ಪ್ರತಿಯೊಬ್ಬರಿಗೂ ನಿಲ್ಲಲು ನೆಲೆ, ತಿನ್ನಲು ಆಹಾರ! ಇದು ಅವಳ ವಿಶಾಲ ಹೃದಯವನ್ನೆತ್ತಿ ತೋರಿಸುತ್ತಿದೆ. ಆ ತಾಯಿಗಾಗಿ ನೀವಿಂದು ಒಂದು ರತ್ನವನ್ನು (ಉತ್ತಮ ಮಕ್ಕಳು) ಒಟ್ಟು ಕೊಡಲಾರಿರಾ? ..

ತಾಯಂದಿರೆಲ್ಲರೂ ಒಂದಾಗಿ ಏಕೆ ಪ್ರಯತ್ನಿಸಬಾರದು? ಅವರಿಗೆ ಸಂಸಾರದ ಹೊಣೆಯಿದೆಯೆಂಬುದು ನಿಜ ಆದರೆ ಭಗಿನಿ ಸಮಾಜವೆಂದೊಡನೆಯೇ ತಮ್ಮ ಎಲ್ಲಾ ಕಾರ್ಯ, ಜವಾಬ್ದಾರಿಗಳನ್ನು ಬಿಟ್ಟು ಕೊಟ್ಟು ಸಂಸ್ಥೆಯೆಂದು ಓಡಾಡಬೇಕೆಂದೆಣಿಸಿದರೆ ಅದಕ್ಕೆ ನಾವು ಹೊಣೆಯಲ್ಲ. ಸಾಯಂಕಾಲದ ಹೊತ್ತಿನಲ್ಲಿ ಸರ್ವರಿಗೂ ಕೊಂಚ ಬಿಡುವಿದೆ. ಈ ಸಮಯವನ್ನು ಅವರಿವರ ಸುದ್ದಿಯನೆತ್ತಿಕೊಂಡು ಹರಟೆಯಲ್ಲಿ ಕಳೆಯುವುದಕ್ಕಿಂತ ತಮ್ಮ ಸಂಸ್ಥೆಗೆ ಅಳಿಲ ಸೇವೆಯನ್ನಾದರೂ ಸಲ್ಲಿಸಬಾರದೇ? ಇಂತಹ ಹಲವು ತಾಯಂದಿರಿಂದಲೇ ಭಗಿನಿ ಸಮಾಜವಿಂದು ಯೋಗ್ಯ ತಳಹದಿಯನ್ನು ಕಾಣಬೇಕು. ಅಶಿಕ್ಷಿತರಾದ ಸ್ತ್ರೀಯರಿಗೆ, ವಿದ್ಯೆಯನ್ನು ಕಲಿಸುವುದರಿಂದ ಇಡೀ ಊರಿಗೆ, ದೇಶಕ್ಕೆ ಎಷ್ಟು ಪ್ರಯೋಜನವಿದೆ! ಇಂದಿನ ಹಿಂದೂಸ್ಥಾನದಲ್ಲಿ ತಾಯಂದಿರಿಗೆ ಗುರುತರ ಮತ್ತು ಸ್ವತಂತ್ರವಾದ ಹೊಣೆಯಿದೆಯೆಂಬುದು ಸಿದ್ಧವಾದ. “ಇಂದಿನ ಮಕ್ಕಳು ಮುಂದಿನ ಜನಾಂಗ”ವೆಂದು ಹಲವರು ಹೇಳಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದರಿದು “ಹೇಳುವುದಾದರೆ, ‘ಇಂದಿನ ತಾಯಂದಿರೇ, ಇಂದಿಯಾದ ಭದ್ರ ಅಡಿಗಲ್ಲು’ ಎನಬಹುದು. ಆ ತಾಯಂದಿರಿಂದು ಹಿಡು ಬರಹ ಬಾರದ, ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತು, ಪರಿಗಣಿಸಲಾರದ ಅಜ್ಞಾನಿಗಳಾಗಿದ್ದರೆ, ಸ್ವತಂತ್ರ ದೇಶವಿಂದು ಅವರಿಂದ ಏನನ್ನು ಅಪೇಕ್ಷಿಸಬೇಕು? ಈ ಕುಂದುಗಳನ್ನು ಭಗಿನಿ ಸಮಾಜವು ಹೋಗಲಾಡಿಸಲು ಶಕ್ತವಿದೆ. ಸ್ತ್ರೀಸುಲಭವಾದ ಅನೇಕ ಚಟುವಟಿಕೆಗಳನ್ನಿಟ್ಟು, ಅವರಿಗೂ ಯೋಗ್ಯ ವ್ಯಾಯಾಮ ದೊರೆಯುವುದಾದರೆ ಇಂದು ಹೆಚ್ಚುತಲಿರುವ ಅನಾರೋಗ್ಯಕ್ಕೂ ತಡೆಯನ್ನು ಹಾಕಿದಂತಾಗುವುದು. ಚಿಕ್ಕ ಮಕ್ಕಳಿಗೆ ಯೋಗ್ಯವಾದ ವ್ಯಾಯಾಮಗಳು, ಅನಾಥರಿಗೆ ಮಕ್ಕಳಿಗೆ ಹಾಲು ಹಂಚುವುದು, ಉಡುಗೆ, ತೊಡುಗೆಗಳನ್ನು ಒದಗಿಸಿಕೊಡುವುದು, ಇವು ಭಗಿನಿ ಸಮಾಜದ ಅನೇಕ ಕಾರ್ಯಕಲಾಪಗಳು!

ಭಗಿನಿ ಸಮಾಜವು ಬಹಳಷ್ಟು ಪ್ರಯೋಜನಕಾರಿಯಾಗಿದೆ ಎಂಬುದು ಈಗ ನಿರ್ವಿವಾದವಷ್ಟೆ! ಅಂದ ಮೇಲೆ ಇದನ್ನು ಸಾಧಿಸಲೇ ಬೇಕೆಂಬ ಹಠ ಮಾಡಿದರೆ ಅದೇನೂ ವಿಚಿತ್ರವಲ್ಲ. ಭಾರತದ ವೀರ ಮಹಿಳೆಯರ ಉಜ್ವಲ ಉದಾಹರಣೆಗಳು ನಮ್ಮ ಬೆನ್ನಿಗಿವೆ. ಝಾನ್ಸಿ ಲಕ್ಷ್ಮಿ! ಅಹಲ್ಯಾ ಬಾಯಿ ಹೋಳ್ಕರ್! ಚಾಂದಬೀಬಿ! ಕೈಗೆ ಕೈಕೊಟ್ಟು ಕಾದಾಡಿದ ಗೀರ ನಾರಿಯರಿವರು! ಇಂದು ಯುದ್ಧದಲ್ಲಿ ಕಾದಾಡುವ ಪ್ರಸಂಗವೇನೂ ನಮ್ಮ ಪಾಲಿಗಿಲ್ಲ. ಕೇವಲ ಬಂಧು ಭಗಿನಿಯರ ಹಿತದೃಷ್ಟಿಯಿಂದ ಚಿಕ್ಕ ಸಂಸ್ಥೆಯೊಂದರ ಸ್ಥಾಪನೆ! ಇದನ್ನು ಬೆಳೆಸಿ, ನಡೆಸಿಕೊಂಡು ಹೋಗಲಾಗದಿದ್ದರೆ ತೀರ ಕೈಯಲ್ಲಾಗದ ಅಬಲೆಯರೆಂದು ಹೇಳಿಕೊಳ್ಳಿಸುವುದರಲ್ಲಿ ನಾಚಿಕೆ, ಅಪಮಾನಗಳಿಂದೇಕೆ ಮುಖವನ್ನು ತಗ್ಗಿಸಬೇಕು? ಅದೂ ಒಂದು ಭೂಷಣವೆಂಬ ಭಾವನೆಯೇ ಮೂಡಿಬರಬೇಕಲ್ಲಾ?

ಸಾಧಿಸಲೇ ಬೇಕೆಂದೊಡನೆಯೇ ಆರ್ಥಿಕ ಪ್ರಶ್ನೆಯೇಳುವುದು ಸ್ವಾಭಾವಿಕ. ಇದೇನೂ ಅಷ್ಟೊಂದು ಗುರುತರವಾಗಿ ಕಾಣುವುದಿಲ್ಲ. ನಮ್ಮ ಉಡುಪಿ ಹೇಳಿಕೊಳ್ಳುವಷ್ಟೇನೂ ಅನಾಗರಿಕವಲ್ಲ. ಇಲ್ಲಿಯೂ ಅಲ್ಲೊಬ್ಬ ಇಲ್ಲೊಬ್ಬರಂತೆ, ಶ್ರೀಮಂತರಾದರೂ ಸಮಾಜಸೇವೆಯಲ್ಲಿ ಉತ್ಸಾಹಿತರಾದ ಮಹಾಶಯರು ಇದ್ದಾರೆ. ಅಲ್ಲದೆ ಮನಸ್ಸಿದ್ದರೆ ಮಾರ್ಗ ಉಂಟು ಎಂಬಂತೆ ಹಲವಾರು ಸಾಧನಗಳು ಇವೆ. ಗೃಹಕೈಗಾರಿಕೆಗಳ ಚಿಕ್ಕದೊಂದು ಪ್ರದರ್ಶನ, ಸದಸ್ಯರಿಂದ ಕೈಯಲ್ಲಾಗುವಷ್ಟು ವಂತಿಗೆ, ಮತ್ತು ಇಲ್ಲದಕ್ಕಿಂತಲೂ ಉತ್ತಮವಾದರೂ ಕೊಂಚ ಗಡುಸಾದ ಟಿಕೆಟಿಟ್ಟು ನಾಟಕವಾಡುವುದು ..ಮುಕ್ತ್ಯ ಇನ್ನಿತರ ದಾರಿಗಳಿವೆ.

ಭಗಿನಿಯರೆಲ್ಲರೂ ಒಂದುಗೂಡಿರಿ. ಒಕ್ಕಟ್ಟೆಂಬ ಮಂತ್ರ ನಳಿಗೆಯಿಂದ ಶಕ್ತಿಯೆಂಬ ಕಿಡಿಗಳನ್ನು ಊದಿದರೆ ಏಳುವ ಜ್ವಾಲೆಯೇ ಹಲವರ ಸಮಸ್ಯೆಯನ್ನಳಿಸುವ ಭಗಿನಿ ಸಮಾಜವಾಗಲಿ. ಸತ್ಕಾರ್ಯಗಳಿಗೆ ಯಶಸ್ಸು ಕಟ್ಟಿಟ್ಟ ಗಂಟು.

ಜನತೆಯ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ 40 ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಮೀರಿದ ಬ್ಯಾಂಕರರು

ಎಂಟು ಕೋಟಿಗೂ ಮಿಗಿಲಾದ ನಿಧಿಗಳು



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನ ಸುಖ ಶಾಂತಿಗಳ ಮೂಲ ಕಾರಣವಾದ

ಹಾರ್ಲೆಂಗ್ ಟಿಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ಹಾರ್ಲೆಂಗ್ ಟಿಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ನಮ್ಮ ಹಾರ್ಲೆಂಗ್ ಟಿಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಸಕಲ ಸರ್ವರೋಗಗಳ ಬಗ್ಗೆ ‘ದೇವಾನುಮೋದಿತ’ ಔಷಧಿ ಎಂದು ಕರೆಯಲ್ಪಡುತ್ತಿದೆ. ಹಾರ್ಲೆಂಗ್ ಟಿಲಿ ತೈಲವು ಮಾನವ ಜೀವನವನ್ನು ... ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಒಡುವಂತೆ ಶುದ್ಧ ವನಸ್ಪತಿ ... ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾರ್ಲೆಂಗ್ ಟಿಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ... ಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ಹಾರ್ಲೆಂಗ್ ಟಿಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳನ್ನು ... ತೆತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ... ಹಾರ್ಲೆಂಗ್ ಟಿಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ... ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿವಾರಣೆ ... ಇಂದೀಗವಾಗ ಈ ನಮ್ಮ ಹಾರ್ಲೆಂಗ್ ಟಿಲಿ ತೈಲವನ್ನೇ ‘ದೇವಾನುಮೋದಿತ ಔಷಧಿ’ ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ... ಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ... ಈ ಹಾರ್ಲೆಂಗ್ ಟಿಲಿ ತೈಲದಿಂದ ... ತ್ತಿ ಗುಣವಾಗುವುದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ... ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು, ... ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು:- ಹಾರ್ಲೆಂಗ್ ಟಿಲಿ ಆಯಿಲ್ ಶೀಸೆ 1ಕ್ಕೆ ರೂ 2-8-0 ವಿ.ಪಿ. ಬೇರೆ. ಡಜನ್ ಶೀಸೆಗಳಿಗೆ ವಿ.ಪಿ. ಸಹಿತ ರೂ.30-0-0 ಹಾರ್ಲೆಂಗ್ ಟಿಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ.ಪಿ. ಬೇರೆ. ಡಜನ್ ಕೆಪ್ಸುಲುಗಳಿಗೆ ರೂ 42-0-0 ವಿ.ಪಿ. ಸಹಿತ. ಹಾರ್ಲೆಂಗ್ ಟಿಲಿ ಡ್ರಪರ್ ಬಾಟ್ಲಿ 1ಕ್ಕೆ ರೂ 5-0-0 ವಿ.ಪಿ. ಬೇರೆ. ಒಂದು ಡಜನ್ ಡ್ರಪರ್ ಬಾಟ್ಲಿಗಳಿಗೆ ರೂ- 60-0-0- ವಿ. ಪಿ. ಸಹಿತ. ಹಾರ್ಲೆಂಗ್ ಟಿಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ. 1-8-0. ಡಜನ್ ಶೀಸೆಗಳಿಗೆ ರೂ. 18. ವಿ.ಪಿ ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ಹಾರ್ಲೆಂಗ್ ಟಿಲಿ ಆಯಿಲನ್ನು ಕಳೆದ ... ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ಹಾರ್ಲೆಂಗ್ ಟಿಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ... ದಿನದಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆ ದು ರಾಮನಾಥಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಶೀಸೆಯೊಂದಿಗೆ ಸುತ್ತಿವೆ.

ದಿ- ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ.

ದಾಹಾನು ರೋಡು, ಬಿ. ಬಿ- ಎಂಡ್ ಸಿ- ಐ. ರೈಲ್ವೆ.

The Eclipse Distributing Agency.

Dahanu Road, B B. & C I Rly,

ಬೊಂಬಾಯಿ ಸ್ಟಾಕಿಸ್ಟರು:—ಅಳ್ವಾಲಾ ಲಿಮಿಟೆಡ್, 25, ಓಲ್ಡ್ ಹನ ಮಾನ್ ಲೇನ್, ಬೊಂಬಾಯಿ ೨

ವಾರ ಭವಿಷ್ಯ

ತಾರೀಕು 30-11-1950ರಿಂದ ತಾ. 6-12-1950ರ ವರೆಗೆ.

ಮೇಷ—ಈ ವಾರದಲ್ಲಿ ಆರೋಗ್ಯವು ಸಾಕಷ್ಟು ತೃಪ್ತಿಕರವಿಲ್ಲದಿದ್ದರೂ ಇತರ ವಿಭಾಗದಲ್ಲಿ ಉತ್ತಮವಿರುವದು. ಉದ್ಯಮಶೀಲರು ತಮ್ಮ ಉದ್ಯೋಗದಲ್ಲಿ ಉತ್ತಮ ಫಲವನ್ನು ಪಡೆವರು. ಜನರಿಂದ ಒಳ್ಳೇ ಗೌರವಾದರವನ್ನು ಹೊಂದುವಿರಿ. ಭಿನ್ನಾಭಿಪ್ರಾಯವುಳ್ಳವರಲ್ಲಿ ಪರಸ್ಪರ ರಾಜಿಯಾಗಿ ಒಮ್ಮನಸ್ಸಿನಿಂದ ವರ್ತಿಸುವಿರಿ. ನಿಮ್ಮ ಸಂಪತ್ತಿಯು ಹೆಚ್ಚಿನಂಶವನ್ನು ಪ್ರಯಾಣ ಮತ್ತು ಆರೋಗ್ಯದ ಸಲುವಾಗಿ ವ್ಯಯಿಸಬೇಕಾಗುವದು. ಸ್ವಸ್ತ್ರೀಯೊಡನೆ ಕಲಹವಾಗುವ ಸಂಭವವಿದೆ. ವಾರಾಂತ್ಯದ 3 ದಿನಗಳು ಶುಭಸುಖ ಶಾಂತಿದಾಯಕವಾಗಿವೆ

ವೃಷಭ—ಕಷ್ಟವ್ಯಸನಗಳು ಮೇಲಿಂದ ಮೇಲೆ ಬರುತ್ತಿವೆ. ಸ್ವಯಂಸಮರ್ಥರಾದ ನೀವು ಯಾವ ಉದ್ಯಮದಲ್ಲೂ ಪ್ರವೃತ್ತರಾಗದೆ ಆಲಸಿಗರಾಗುವಿರಿ. ಒಂದೂವೆಳೆ ಕಾರ್ಯ ಪ್ರವೃತ್ತರಾದರೂ ನಿಮ್ಮ ಭಾಗಕ್ಕೆ ನಷ್ಟಸೋಲುಗಳು ತಪ್ಪಲೊಲ್ಲವು. ಅದಾವ ದುರ್ದೈವದಿಂದಲೋ ಸ್ತ್ರೀವರ್ಗವೇ ನಿಮ್ಮ ಮೇಲೆ ಮುನಿಸಿದಂತಿದೆ. ಶತ್ರುಗಳ ಪೀಡೆಯಿಂದ ಧನಮಾನ ಮಾನಕ್ಕೆ ಚ್ಯುತಿ ಇತ್ಯಾದಿಗಳುಂಟಾದಾವು. ಆರ್ಥಿಕ ಬಿಕ್ಕಟ್ಟು ಬಹುವಾಗಿ ಪೀಡಿಸಲಿದೆ. ಆದರೂ ವಾರದ ಆದ್ಯಂತ್ಯ ದಿನಗಳಲ್ಲಿ ಅನಿರೀಕ್ಷಿತ ಧನಲಾಭ ಮನಶಾಂತಿ ಲಭಿಸೀತು.

ಮಿಥುನ—ದಿನೇ ದಿನೇ ನಿಮ್ಮ ಭಾಗ್ಯರವಿಯು ಅಸ್ತವನ್ನೈತರುತ್ತಿರುವನು. ಆಪ್ತೇಷ್ಟರೂ ಬಂಧು ಜನರೂ ನಿಮ್ಮನ್ನು ಬಿಟ್ಟು ದೂರ ತೊಲಗುವರು. ಚಂಚಲ ಮನಸ್ಕರಾದ ನಿಮಗೆ ಗೃಹಕಲಹ ನೇತ್ರೋದರ ಪೀಡೆಗಳು ಮೇಲಿಂದ ಮೇಲೆ ಬಾಧಿಸಲಿವೆ. ಹಣದ ಅಡಚಣೆಯು ವಿಶೇಷವಾಗಿ ಬಾಧಿಸಲಾರದು. ವ್ಯಾಪಾರ ವ್ಯವಹಾರಗಳಲ್ಲಿ ನೆನಸದ ಕಷ್ಟಗಳು ಸಂಭವಿಸಲಿವೆ. ತಾ. 2, 3, ಈ ದಿನಗಳಲ್ಲಿ ಕರ್ತವ್ಯ ಶೀಲರಿಗೆ ವಿಜಯ ಲಾಭಗಳು ಲಭಿಸಬಹುದು.

ಕರ್ಕಾಟ—ಸದ್ಯದ ದಿನಗಳು ಬಹುಮಟ್ಟಿಗೆ ಉತ್ತಮವಿವೆ. ಮನದಲ್ಲಿ ನೆನೆದ ಕಾರ್ಯಗಳು ಶೀಘ್ರದಲ್ಲಿ ಕಾರ್ಯರೂಪಕ್ಕೆ ಬರುವವು-ಪ್ರತಿಯೊಂದು ಕಾರ್ಯದಲ್ಲೂ ವಿಜಯ ನಿಮ್ಮ ಸಾಹಸಕ್ಕೆ ಮೆಚ್ಚಿ ಒಲಿವದು. ಪೀಡಾಕಾರಿಗಳಾದ ಶತ್ರುಗಳನ್ನು ದಂಡೋಪಾಯದಿಂದ ನಿಗ್ರಹಿಸುವಿರಿ. ನಿಮ್ಮ ಸಂಪದ್ಭಾಗವು ಅತೀವ ಉತ್ತಮ ಸ್ಥಿತಿಗೆ ಬರಲಿವೆ. ಪ್ರವಾಸವು ಕಷ್ಟಕಾರಿಯಾದೀತು. ಕಫಾಧಿಕ್ಯದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ತಾ. 30, 4, 5 ಈ ದಿನಗಳಲ್ಲಿ ಸುಖಭೋಗಲಾಭಗಳು ಲಭಿಸುವವು

ಸಿಂಹ—ಈ ವಾರದಲ್ಲಿ ನಿಮಗೆ ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ಗೃಹಚ್ಛಿದ್ರದಿಂದಾಗಿ ಕುಟುಂಬದಲ್ಲಿ ಕಲಹಗಳು ತಲೆದೋರುವವು. ಶಕ್ತಿ ಮೀರಿ ದುಡಿಯುವಿರಾದರೂ ಕೈಯಲ್ಲಿ ಕಾಸೊಂದೂ ಉಳಿಯಲೊಲ್ಲದು. ಪಿತ್ತವಾತಗಳ ದೋಷದಿಂದಾಗಿ ಆರೋಗ್ಯ ಕೆಡಲಿದೆ. ಶ್ರಮಜೀವಿಗಳಿಗೂ ನೌಕರಿ ವರ್ಗದವರಿಗೂ ದುಡಿಮೆಗೆ ತಕ್ಕ ಫಲ ಲಭಿಸಲೊಲ್ಲದು ಬಂಧು ಜನರ ನೆರವು ಲಭಿಸಲೊಲ್ಲದು. ಮನೋರೋಗವು ಹೆಚ್ಚಾಗಿ ಪೀಡಿಸಲಿದೆ. ತಾ. 2, 3, 6, ಇವುಗಳಲ್ಲಿ ಸ್ವಲ್ಪ ಶಾಂತಿದಾಯಕ ದಿನಗಳು.

ಕನ್ಯಾ—ಹಿಂದಗಿಂತ ಸ್ವಲ್ಪ ಉತ್ತಮ ಸ್ಥಿತಿಗೆ ಬರಲಿರುವಿರಿ. ನಿಮ್ಮ ಶತ್ರುವರ್ಗದವರು ಶಾಂತರಾಗುವರು ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳಲಿದೆ. ದುರ್ಜನರ ಸಹವಾಸವು ನಷ್ಟಾಪಮಾನಗಳಿಗೀಡು ಮಾಡಲಿದೆ. ಆಪ್ತೇಷ್ಟರ ಮತ್ತು ಬಂಧು ಮಿತ್ರರ ವಿರಹ ದುಃಖವು ವಿಶೇಷವಾಗಿ ಬಾಧಿಸಲಿದೆ. ನೌಕರಿ ಜನರಿಗೂ ವೈದ್ಯ ವ್ಯಾಪಾರಿಗಳಿಗೂ ಶ್ರಮಕ್ಕುಚಿತವಾದ ಫಲಪ್ರಾಪ್ತಿಯಿದೆ. ಗುರು ಹಿರಿಯರೊಡನೆ ಮನಸ್ತಾಪವುಂಟಾಗುವುದು. ತಾ. 30, 4, 5 ಈ ದಿನಗಳಲ್ಲಿ ನಾನಾವಿಧ ಲಾಭ ಸಂತೋಷ ಭೋಗಗಳು ಲಭಿಸುವವು.

ತುಲಾ—ಇಷ್ಟಾನಿಷ್ಟ ಗ್ರಹರ ಬಲ ಸಾಮ್ಯವಿರುವುದರಿಂದ ಈ ವಾರದಲ್ಲಿ ನಿಮಗೆ ಹೆಚ್ಚಿನ ಹಾನಿವೃದ್ಧಿಗಳು ಸಂಭವಿಸಲಾರವು. ಶ್ರಮವಹಿಸಿ ದುಡಿಯತಕ್ಕವರಿಗೆ ಭಾಗ್ಯವೃದ್ಧಿಯೂ ನಿಶ್ಚಯವಾಗಿ ಆಗಲಿದೆ. ಆರೋಗ್ಯವೂ ಕೂಡ ಉತ್ತಮರೀತಿಯಲ್ಲಿರುವದು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಅನರ್ಥ ಪರಂಪರೆಗಳು ನಿಮ್ಮನ್ನು ಉಭಯ ಸಂಕಟದಲ್ಲಿ ಸಿಲುಕಿಸುವವು. ಕೆಲವೊಮ್ಮೆ ಆಪ್ತೇಷ್ಟರಲ್ಲಿ ಅವಿಶ್ವಾಸಗಳುಂಟಾದಾವು, ತಾ. 4, 5 ಮಾತ್ರ ಆಲಸ್ಯವ್ಯಯಕಾರಿಗಳು.

ವೃಶ್ಚಿಕ—ಪಿತ್ತೋದ್ರೇಕ ಪ್ರಕೋಪದಿಂದುಂಟಾದ ಕಾಹಿಲೆಯಿಂದಲೂ ಉದರ ಶೂಲೆಯಿಂದಲೂ ಪೀಡಿತರಾದೀರಿ. ಮಿತ್ರಜನರ ಬೆಂಬಲವು ಸಾಕಷ್ಟಿರುವುದರಿಂದ ನೀವು ಹಾಕಿದ ಕಾರ್ಯವನ್ನು ಕೊನೆಗಾಣಿಸಲು ಶಕ್ತರಾಗುವಿರಿ. ಗೃಹಸೌಖ್ಯವು ತೃಪ್ತಿಕರವಾಗಿರುವದು. ಇಷ್ಟಾರ್ಥಗಳು ಬಹ್ವಂಶ ನೆರವೇರುವವು. ಆದರೂ ಉತ್ಪತ್ತಿಗಿಂತ ಅಧಿಕವಾಗಿ ವ್ಯಯಿಸಬೇಕಾದ ದುರ್ಘಟನ ಪ್ರಸಂಗಳು ಆಗಾಗ ತಲೆದೋರುವವು. ವಾರದ ಆದ್ಯಂತ ದಿನಗಳು ಪ್ರತಿಕೂಲವಾಗಿರುವವು.

ಧನು—ಪರಿಸ್ಥಿತಿಯು ದಿನದಿಂದ ದಿನಕ್ಕೆ ಭಯಂಕರವಾಗುತ್ತಾ ಬರುತ್ತಿದೆ. ಉತ್ಪತ್ತಿ ಕಡಿಮೆಯಾದಂತೆ ಖರ್ಚು ಏರುತ್ತಿರುವುದು. ನಿಷ್ಠುರ ಮಾತು, ಅಸದ್ವರ್ತನೆ ಇವುಗಳಿಂದ ನೀವು ಜನರ ನಿಂದಾತಿರಸ್ಕಾರಗಳಿಗೆ ಗುರಿಯಾದೀರಿ. ಯಾವ ವಿಭಾಗದಲ್ಲೂ ನಿಮಗೆ ಶ್ರೇಯಸ್ಸಿನ ಮಾರ್ಗಗಳು ಸದ್ಯಕಾಣಸಲೊಲ್ಲವು ಹಣದ ಬಿಕ್ಕಟ್ಟಿನಿಂದ ಪೀಡಿತರಾದ ನೀವು ಅಸಜ್ಜನರನ್ನೂ ಒಂದೊಮ್ಮೆಗೆ ಯಾಚಿಸಬೇಕಾಗಿ ಬರಬಹುದು. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಮಕರ—ಈ ವಾರದಲ್ಲಿ ನಿಮ್ಮ ಮನೋರಥಗಳು ಬಹುಮಟ್ಟಿಗೆ ಫಲಿಸಲಿವೆ. ಕೆಲಸಕ್ಕೆ ತಕ್ಕುದಾದ ಫಲವೂ ಲಭಿಸುವದು. ಆದರೆ ನಿಮ್ಮ ಆರೋಗ್ಯಕ್ಕೆ ಮಾತ್ರ ಆಗಾಗ ಹಾನಿಸಂಭವಿಸಲಿವೆ. ವಿಶೇಷತಃ ಪಿತ್ತದೋಷವು ಬಾಧಿಸಲಿರುವದು. ಧರ್ಮ ಕರ್ಮಗಳಲ್ಲಿ ಅನಾದಾರ ಭಾವವುಂಟಾದೀತು. ಕೆಲವೊಮ್ಮೆ ಶತ್ರುಗಳ ಹಂಚಿಕೆಗೆ ಸಿಲುಕಿ ಕಷ್ಟನಷ್ಟಗೀಡಾದೀರಿ. ವಾರದ ಆದ್ಯಂತ ದಿನಗಳಲ್ಲಿ ಗೃಹಸೌಖ್ಯ ಯಾನ ಮಾನ ಇಷ್ಟಸಿದ್ಧಿಗಳ ಯೋಗವಿದೆ.

ಕುಂಭ—ಜನ್ಮದ ಗುರು ಅಷ್ಟಮದ ಶನಿ ಇವರು ನಿಮ್ಮನ್ನು ಭಯಸ್ಥಾನಚಲನೆ ದೇಹಾಲಾಸ್ಯ ಪ್ರಿಯ ಜನವಿರಹಾನಿ ದುಃಖಗಳಿಗೆ ಗುರಿಮಾಡಲಿರುವರಾದರೂ ಇತರ ವಿಭಾಗಗಳಲ್ಲಿ ಈವಾರವು ಪ್ರಶಸ್ತವಿದೆ. ನಿಮ ನಿರೀಕ್ಷೆಗಿಂತ ಹೆಚ್ಚಿನ ಫಲಾಪ್ತಿಯಾದೀತು. ನೆನೆದ ಕಾರ್ಯಗಳು ಸಿದ್ಧಿಸುವವು. ಅರಿಯೆ ಎಂದರೆ ಅರವತ್ತು ಗುಣವೆಂಬ ಗಾದೆಯಂತೆ ನೀವು ವರ್ತಿಸಬೇಕಾಗಿದೆ. ಇಲ್ಲದಲ್ಲಿ ನಿಷ್ಠುರ ಕಲಹಗಳು ಅನಿವಾರ್ಯವೇ ಸರಿ. ವಾರಾದಿಯ 4 ದಿನಗಳು ಅನುಕೂಲ.

ಮೀನ—ಹಿಂದಿಗಿಂತ ಸ್ವಲ್ಪ ಉತ್ತಮವಿದೆ. ನಿಮ್ಮ ಪರಿಸ್ಥಿತಿ ಈ ವಾರದಲ್ಲಿ, ನಿಮ್ಮ ಪ್ರಯತ್ನವು ಪೂರ್ಣವಿಫಲವಾಗುವದು. ಗೃಹಕೃತ್ಯದಲ್ಲಾವ ಕುಂದು ಕೊರತೆಗಳು ಕಾಣವು. ಆರ್ಥಿಕ ತಗಾದೆಯು ಸ್ವಲ್ಪ ಮಟ್ಟಿಗೆ ಪೀಡಿಸಲಿದೆ. ಗುರು ಕೋಪಕ್ಕೆ ಪೀಡಿತರಾದ ನಿಮಗೆ ಉತ್ಪತ್ತಿಯ ಬಹ್ವಂಶವನ್ನು ಪ್ರವಾಸಕ್ಕೂ ಮನಶ್ಶಾಂತಿಗೂ ವ್ಯಯಿಸಬೇಕಾಗಿ ಬರುವುದು. ವಾರದ ಆದ್ಯಂತ ದಿನಗಳಲ್ಲಿ ಕಾರ್ಯಹಾನಿ ಶೋಕ ಅನಿಷ್ಟಗಳೊದಗಬಹುದು.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್
English Made Easy
ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ
ಇವರಿಗೆ ಬರೆಯಿರಿ.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!
ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
"ಮನೆ-ಮದ್ದು"
ಬರೆದವರು:. ಡಾಕ್ಟರ್ ಕೋಡ್ಕಲ್ ವೆಂಕಟರಾಯರು, ಎಲ್. ಐ. ಎಮ್., ಉಡುಪಿ.
ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!
ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಶುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಔಷಧಿಗಳ ಮನೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.
ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2-0-0.
ವಿ. ಪಿ. ದ್ವಾರ 2-6-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಅಸ್ತಮ ಎಂದೆಂದಿಗೂ ಹಿಮ್ಮೆಟ್ಟುವುದು.
ಪುರೋಹಿತ ಶ್ವಾಸಹಾರೀ ಔಷಧಿಯು ಕಳೆದ ಇಪ್ಪತ್ತೆಂಟು ವರುಷಗಳಿಂದಲೂ ನುರಿತ ವೈದ್ಯರಿಂದ ಅಸ್ತಮಕ್ಕೆ ರಾಮಬಾಣವೆಂದು ಹೆಸರಾದುದು.
ಪುರೋಹಿತ ಶ್ವಾಸಹಾರೀ ಔಷಧಿಯು
3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್ ಸೀಸೆಗಳಲ್ಲಿ ರೂ. 3-8-0, ರೂ. 6/- ಮತ್ತು ರೂ. 10/- ಕಿಮ್ಮತುಗಳಲ್ಲಿ ಎಲ್ಲಾ ಪ್ರಸಿದ್ಧ ಕೆಮಿಸ್ಟರಲ್ಲಿಯೂ ಮತ್ತು ಔಷಧ ಕಾರ್ಖಾನೆ
ಡಾ। ಪುರೋಹಿತ ಫಾರ್ಮಸಿ, ಕೊಲ್ಹಾಪುರ (ಎಮ್. ಎಸ್. ಎಮ್. ರೈಲ್ವೆ) ಯಲ್ಲಿಯೂ ದೊರೆಯುತ್ತೆ



ಪುರೋಹಿತ ಶ್ವಾಸಹಾರೀ
DR. PUROHIT PHARMACY, KOLHAPUR

EDITED, PRINTED & PUBLISHED BY K H SHETTY AT THE NAVAYUGA PRESS, UDIPI, S.INDIA.

Estd. 1921 ಸ್ಥಾಪನೆ.
31ನೇ ವರ್ಷ

7-12-195

LICENCE No. 31
Licensed to Post without Prepayment

Founder: Sri A. B. Shetty,
Minister for Agriculture & Veterinary.

ನವ ಯುಗ

ವರ್ಷ ೩೧
ವಾರ ೧೪

NAVAYUGA
WEEKLY

POST BOX NO. 22
UDIPI, S. K.

Vol. 31
No. 14

ಈ ಅಧೋಗತಿಯಿಂದ ಉನ್ನತಿ?

ಭಾರತ ಜನತಾರಾಜ್ಯದ ಕುರಿತು ಭವ್ಯ ಭವಿಷ್ಯದ ಕಲ್ಪನೆಯಿಂದಿರುವುದು ಸದ್ಯ ಒಂದು ಅಭ್ಯಾಸವಾಗಿದೆ; ಮತ್ತಿದು ಅಗತ್ಯ ಕೂಡಾ. ನಮ್ಮ ನಾಯಕರು ಮೇಲಿಂದ ಮೇಲೆ ಭಾರತದ ಶುಭ್ರ, ಭದ್ರ ಭವಿಷ್ಯದ ಕುರಿತು ಮಹಾ ಮಹಾ ಆಶ್ವಾಸನೆಗಳನ್ನೀಯುತ್ತಿದ್ದಾರೆ. ಜನತೆ ಹೃದಯ ಕಳಕೊಳ್ಳದಂತೆ, ಇಂತಹ ಭರವಸೆಗಳನ್ನು ಅವರಲ್ಲಿ ತುಂಬಿಸುತ್ತಿರಬೇಕಾದುದೂ ಅಗತ್ಯವೇ.

ಆದರೆ ಭವ್ಯ ಭವಿಷ್ಯದ ಕಲ್ಪನೆ, ಮಹತ್ವಾಕಾಂಕ್ಷೆ, ಭರವಸೆ, ಇವೆಲ್ಲವೂ ವಸ್ತುಸ್ಥಿತಿಯ ತಳಹದಿಯ ಮೇಲೆ ಏರಬೇಕಾಗಿರುವ ಗೋಪುರಗಳು. ತಳಹದಿಯೇ ಕಣ್ಣು ಕುಳಿಬಿದ್ದಿದ್ದರೆ, ಮತ್ತೆ ಅದರ ಮೇಲೆ ಕಟ್ಟಡವೇರುವ ಆಶೆ ಕಡಮೆ. ಆದ್ದರಿಂದ ಭವಿಷ್ಯದ ಕುರಿತು ಸುಖಸ್ವಪ್ನಗಳನ್ನು ಕಾಣುತ್ತಿರುವಾಗ, ಕಣ್ತೆರೆದು ಸುತ್ತಲೂ ನೋಡಿಕೊಳ್ಳಬೇಕಾದುದು ಎಲ್ಲಕ್ಕಿಂತ ಮುಖ್ಯ.

ಭಾರತೀಯ ಜನತೆಯು ಪ್ರಚಲಿತ ಸ್ಥಿತಿ ಮತ್ತು ಮತಿ ಭಾವೀ ಭರವಸೆಗೆ ಯೋಗ್ಯ ತಳಹದಿಯಾಗಿರುವಂತೆ ಕಾಣುತ್ತಿಲ್ಲ. ಎಲ್ಲೆಡೆಯೂ ಕುಳಿಬಿದ್ದು ಕುಸಿದುಹೋಗಿರುವ ಶೋಚನೀಯ ದೃಶ್ಯವೇ ಕಾಣಿಸುತ್ತಿದೆ.

ಸುದೃಢ ಹಾಗೂ ಶುಭ್ರ ಭವಿಷ್ಯದ ಆಧಾರಗಳೆಂದು ಯಾವ ಗುಣ, ಯೋಗ್ಯತೆಗಳು ಭಾವಿಸಲ್ಪಟ್ಟಿದ್ದುವೋ, ಅವೆಲ್ಲವೂ ಈಗ ವಿರುದ್ಧ ಪಥಗಾಮಿಗಳಾಗಿವೆ. ಈ ಆಧಾರಗಳ ಇಂದಿನ ಸ್ಥಿತಿಯನ್ನಾಧರಿಸಿ ಹೇಳುವುದಾದರೆ ಭಾರತವು ಏಳುವ ಬದಲಿಗೆ ಬೀಳುವ ಅಪಾಯವೇ ಹೆಚ್ಚಿಗಿದೆ, ಎಂದರೆ ಅತಿಶಯೋಕ್ತಿಯಾಗಲಾರದು.

ಜಾಗತಿಕ ವಾತಾವರಣ ಮತ್ತು ಭಾರತದ ಗೃಹ ಸಮಸ್ಯೆಗಳ ಮೇಲಿಂದ ಇಂದು ಭಾರತೀಯರೆಲ್ಲರೂ ಒಕ್ಕಟ್ಟಾಗಿ ಒಮ್ಮತದಿಂದ ದೇಶದ ಅವಶ್ಯಕತೆಗಳನ್ನು ಪೂರೈಸುವದಕ್ಕಾಗಿ ಅವಿಶ್ರಾಂತ ದುಡಿಯುವುದು ಕಂಡುಬರಬೇಕಿದ್ದಿತು. ಪಕ್ಷ, ಪಂಗಡಗಳಿರುವುದು ಪ್ರಜಾಸತ್ತಾ ರಾಜ್ಯದಲ್ಲಿ ಕ್ರಮಬದ್ಧವಾಗಿದೆಯಾದರೂ ಸಾಮೂಹಿಕ ರಾಷ್ಟ್ರೀಯ ಕಾರ್ಯಗಳ ಮಟ್ಟಿಗೆ ಅವೆಲ್ಲವನ್ನೂ ಮರೆತು, ಅವೆಲ್ಲಕ್ಕಿಂತ ಮೇಲೇರಿ ಒಂದಾಗಿ ಶ್ರಮಿಸುವುದು ಅಗತ್ಯವಿದೆ. ಆದರೆ ಭಾರತದ ಜನತೆಯಲ್ಲಿ ಇಂದು ಅಂತಹ ಒಕ್ಕಟ್ಟು ಕಂಡುಬರುವದಿಲ್ಲ. ಪಕ್ಷಸ್ವಾರ್ಥ, ವ್ಯಕ್ತಿಸ್ವಾರ್ಥಗಳು ರಾಷ್ಟ್ರಹಿತವನ್ನು ಅಡಿಗೊತ್ತಿ ಮೇಲೆದ್ದು ನಿಂತಿವೆ.

ಯಾವುದೇ ನಾಯಕತ್ವವು ತಮ್ಮ ಜೀವಾವಧಿವರೆಗೂ ಸಿಂಧುವಾದುದೆಂಬ ಅಂಧಶ್ರದ್ಧೆ ಕಟ್ಟಿಕೊಳ್ಳದೆ ಕಾಲ, ಕಾರ್ಯ ವ್ಯತ್ಯಯಗಳನ್ನರಿತು, ಸ್ಥಿತಿಗತಿಗಳನ್ನು ತುಲನೆಮಾಡಿ ನೋಡಿಕೊಂಡು ಸಂದರ್ಭೋಚಿತವಾಗಿ ನಾಯಕತ್ವವನ್ನು ರಚಿಸಿಕೊಳ್ಳುವ ತಮ್ಮ ಅಧಿಕಾರವನ್ನು ಸರಿಯಾಗಿ ಪ್ರಯೋಗಿಸಲು ಜನತೆಯು ಅರಿತರೇನೇ ಪ್ರಜಾರಾಜ್ಯದ ಪ್ರಗತಿ. ಇಂತಹ ಆವಶ್ಯಕ ಗುಣವು—ಕಾಲಾನುಗುಣ ಜಾಗ್ರತಿಯು—ಹಿಂದೀ ಜನತೆಯಲ್ಲಿ ಸಾಕಷ್ಟು ಕಂಡುಬರುತ್ತಿಲ್ಲ. ಒಮ್ಮೆ ಹಿಡಿದು ಕೊಂಡರದನ್ನು ಮತ್ತೆ ಬಿಡುವ ವಿದ್ಯೆ ತಿಳಿಯದಂತಿದೆ.

ಅದೇ ರೀತಿ ಜನತೆಯು ತಮ್ಮ ಮೇಲಿಟ್ಟಿರುವ ವಿಶ್ವಾಸವು ಜನಹಿತಕಾರಿ ಕಾರ್ಯಗಳನ್ನೂ ತಮ್ಮನ್ನೂ ಜೋಡಿಸಿಟ್ಟಿರುವ ಗೊಣಸು ಹೊರತು ಜನತೆಯನ್ನು ಎಲ್ಲಿವರೆಗೂ ತಮ್ಮ ಹಿಂದೆ ಎಳೆದು ಕೊಂಡು ಹೋಗುವ ಮೂಗುದಾರವಲ್ಲವೆಂದನ್ನು ಜನನಾಯಕರು ಕೂಡಾ ಈಗ ಹೆಚ್ಚಿನಂಶ ಮರೆತಂತಿದೆ.

'ಜನತಾ ರಾಜ್ಯ'ವೆಂದ ಮೇಲೆ ಅದರ ಎಲ್ಲಾ ಲೋಪ ದೋಷಗಳಿಗೂ ತಾವೇ ಹೊಣೆಗಾರರೆಂಬುದನ್ನು ಅರಿತುಕೊಂಡು, ಅವುಗಳನ್ನು ತಿದ್ದಿ ಸತ್ಸಾಧನೆಗಳಿಗೆ ತೊಡಗಬೇಕಾದುದು ಜನತೆಯ ಆದ್ಯಕರ್ತವ್ಯ. ಆದರೀಗ ಭಾರತದ ಜನತೆ ತಮ್ಮೆಲ್ಲರದಾದ ಆ ಹಕ್ಕನ್ನು ತಮ್ಮ ಪೈಕಿ ಕೆಲವೇ ಮಂದಿಯ ವಶ ಒತ್ತೆ ಇಟ್ಟವರಂತೆ, ಅವರ ಮೇಲೆ ದೂರು ಹೊರಿಸುವದರಲ್ಲಿದೆ ಹೊರತು ತಾನು ಹೊಣೆಹೊರುವುದರಲ್ಲಿಲ್ಲ.

ಸಂಪೂರ್ಣ ಸ್ವತಂತ್ರ ಜನತಾರಾಜ್ಯದಲ್ಲಿ ತಮ್ಮ ಪಾಲಿಗೆ ಅವ್ಯಕ್ತ ಹಸ್ತ ಅಥವಾ ಭಸ್ಮಾಸುರನ ಹಸ್ತವಾಗಿವದೆಂದರೆ ತಮ್ಮ ಮತದಾನದ ಕೈಯ್ಯೇ ಎಂಬ ದಿನ್ನೂ ಭಾರತೀಯ ಮತದಾರ ಜನತೆಗೆ ಮಂದಟ್ಟಾಗಿಲ್ಲ. ತಮ್ಮ ಭವಿಷ್ಯದ ಈ ಬೀಗದ ಕೈಯನ್ನು ಧರ್ಮಾರ್ಥ ವ್ಯರ್ಥ ದೊರೆತ ಅಲ್ಪಸೊತ್ತೆಂಬಂತೆ ಹೆಂಗು ದಾಕ್ಷಿಣ್ಯಗಳನ್ನು ಹೇರುವವರ ಕೈಗೆ ಕೊಟ್ಟು ಬಿಡುವ ಸ್ಥಿತಿಯಲ್ಲಿ ಅವರಿದ್ದಾರೆ.

ಜನಪ್ರತಿನಿಧಿ ಸ್ಥಾನಗಳಿಗಾರಿಸಲ್ಪಡುವವರು ಜನತೆಯ ಸುಖದುಃಖಗಳನ್ನು ಅರಿತವರಾಗಿದ್ದು, ಜ್ಞಾನಾನುಭವವುಳ್ಳವರಿರಬೇಕಾದುದು ಪ್ರಗತಿ ಸಾಧನೆಗೆ ಅಗತ್ಯ. ಆದರೆ ತದ್ವಿರುದ್ಧವಾಗಿ ಜನತೆಯನ್ನು ಸುಲಿದೋ ಪ್ರಚಲಿತ ದುರ್ವಿಧಾನಗಳ ಮೂಲಕ ಬೆಳೆದೋ, ಪ್ರತಿಷ್ಠಾವಂತರಾಗಿರುವವರೇ ಜನಪ್ರತಿನಿಧಿ ಸ್ಥಾನಗಳಿಗೆ ಮುಂದಾಗುತ್ತಿರುವುದನ್ನೂ ಅಂಥವರಿಗೇನೇ ವಿಜಯದ ವಿಶೇಷ ಭರವಸೆಯಿರುವುದನ್ನೂ ನೋಡಬಹುದು.

ಕೇವಲ ಗುಣ, ಯೋಗ್ಯತೆಗಳನ್ನಾಧರಿಸಿ ದೊರೆಯಬೇಕಾಗಿರುವ ನೌಕರಿ, ಸ್ಥಾನಮಾನಗಳು ವರ್ಚಸ್ಸಿನ ಮೇಲಿಂದ, ಹಣ ಕಾಣಿಕೆಗಳ ಮೇಲಿಂದ ಅಪಾತ್ರಗಳಿಗೆ ಹೋಗುತ್ತಿರುವುದು ಎಲ್ಲೆಲ್ಲೂ ಅನುಭವವಾಗುತ್ತಿರುವ ಸಂಗತಿ.

ಸತ್ಯ, ನ್ಯಾಯ, ಅಹಿಂಸಾ ಸೂತ್ರಗಳನ್ನು ಅವಲಂಬಿಸಿರಬೇಕಾದ ಕಾಂಗ್ರೆಸಿಗರು ಅಸತ್ಯ, ಅನ್ಯಾಯ, ಪೀಡೆಗಳ ಮೂಲಕವಾದರೂ ಸ್ವಕಾರ್ಯ ಸಾಧಿಸಿಕೊಳ್ಳಲು ಮೇಲಾಡುತ್ತಿರುವ ದೃಶ್ಯ ಎಲ್ಲೆಲ್ಲೂ ಕಂಡುಬರುತ್ತಿದೆ.

ಲಂಚ, ಪಕ್ಷಪಾತತೆ, ಲಾಭಖೋರತನಗಳನ್ನು ದಂಡಿಸಲಿಕ್ಕಾಗಿ ಇರುವ ಅಧಿಕಾರಿಗಳು ತಾವೇ ಈ ದುರ್ಗುಣಗಳ ಆಶ್ರಯಸ್ಥಾನಗಳಾಗಿವುದು ತೋರಿಬರುತ್ತಿದೆ.

ರೈತ, ಮಜೂರರ ಹಿತಸಾಧನೆಗಾಗಿ ಇದ್ದೇನೆಂದು ಹೇಳಿಕೊಳ್ಳುವವರು, ರೈತ ಮಜೂರರ ಅಜ್ಞಾನದ ಉಪಯೋಗ ಪಡೆದುಕೊಂಡು, ಅವರನ್ನು ಅತ್ತಕಾದಿಗಿಳಿಸಿ, ಅನ್ಯರ ಸುಲಿಗೆಯ ಬದಲಿಗೆ ಅಥವಾ ಅದರ ಜತೆಯಲ್ಲಿ ತಮ್ಮ ಸುಲಿಗೆಯನ್ನಾರಂಭಿಸಿರುವುದು ಕಾಣಿಸುತ್ತಿದೆ.

ಮತ, ಧರ್ಮಗಳ ಹೆಸರಿನಿಂದ ಸಾರ್ವಜನಿಕರಂಗಕ್ಕಿಳಿದಿರುವ ಸಂಘ, ಸಂಸ್ಥೆ, ಪಕ್ಷಗಳು ತಂತಮ್ಮ ಧರ್ಮವು ಸಾರಿರುವ ಅಮೂಲ್ಯ ತತ್ವಗಳಿಗೆ ತಾವೇ ವಿರೋಧವಾಗಿ ವರ್ತಿಸುತ್ತಿರುವುದನ್ನು, ಬೋಧಿಸುತ್ತಿರುವುದನ್ನು ಕಾಣಬಹುದು.

ಸ್ವಾತಂತ್ರ್ಯವೆಂದೊಡನೆ ಸ್ವಾರ್ಥಸಾಧನೆಗೆ—ಪುಂಡಾಟಿಕೆಗೆ—ಸ್ವೇಚ್ಛಾವರ್ತನೆಗೆ—ಕೂಡಾ ಸ್ವಾತಂತ್ರ್ಯವೇ ಎಂಬ ಭಾವನೆಯಿಂದ ವರ್ತಿಸುವವರು ಎಲ್ಲೆಲ್ಲೂ ನೋಡಸಿಗುತ್ತಾರೆ.



THE UNITED KARNATAK
INSURANCE COMPANY LIMITED,
United Karnatak Buildings, DHARWAR.
Established: 1929.
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.

ಭಾರತ ಪಾಕಿಸ್ತಾನಗಳೊಳಗೆ—

ತಮ್ಮೊಳಗೆ ಯುದ್ಧವಿಲ್ಲ—ಯಾವ ಕಾರಣಕ್ಕಾಗಿಯಾದರೂ ತಾವು ಪರಸ್ಪರ ಹೋರಾಡಿ ಕೊಳ್ಳುವಂತಿಲ್ಲ—ಎಂದು ಜಾಹೀರಾಗಿ 'ಯುದ್ಧವಿಲ್ಲ' ಘೋಷಣೆ ಮಾಡಿಕೊಳ್ಳುವ ಕುರಿತು ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನ ಮಂತ್ರಿಗಳೊಳಗೆ ಕಳೆದ ಸುಮಾರು ಒಂದು ವರುಷ ನಡೆದ ಪತ್ರವ್ಯವಹಾರಗಳು ಪ್ರತ್ಯಕ್ಷ ಪರಿಣಾಮವೇನನ್ನೂ ತರಲಿಲ್ಲ. ಆದರೂ ಪ್ರಚಲಿತ ಪರಸ್ಪರ ಸ್ನೇಹಾಚರಕ್ಕೆ ಭಂಗವೊಡ್ಡದ ಸದಭಿಪ್ರಾಯಗಳನ್ನು ಇಬ್ಬರು ಪ್ರಧಾನಿಗಳೂ ಈ ಸಂದರ್ಭದಲ್ಲಿ ಹೊಂಗಿಸಲು ಶಕ್ತರಾದುದು ಆನಂದದ ಸಂಗತಿ. 'ಯುದ್ಧವಿಲ್ಲ' ಘೋಷಣೆಯ ಸೂಚನೆಯನ್ನು 1949ನೇ ದಶಂಬರದಲ್ಲಿ ಪ್ರಥಮತಃ ಭಾರತ ಪ್ರಧಾನಿಗಳು ಮುಂದಿಟ್ಟಿದ್ದರು. ಆ ಪತ್ರಕ್ಕೆ ಪಾಕಿಸ್ತಾನ್ ಪ್ರಧಾನಿಗಳ ಉತ್ತರ, ಭಾರತ ಪ್ರಧಾನಿಗಳ ಮರುತ್ತರವೆಂದು ಈ ಪತ್ರವ್ಯವಹಾರ ಚಕ್ರ ಸುತ್ತಿ 1950ನೇ ನವಂಬರದ ವರೆಗಿನ ಒಂದು ವರ್ಷವೂ ಸುತ್ತುತ್ತಾ ಬಂತು. ಅತ್ತಿಂದಿತ್ತ ಇತ್ತಿಂದತ್ತ 20 ಪತ್ರಗಳು ಓಡಾಡಿದ್ದುವು. ಪರಿಣಾಮವಾಗಿ ಒಂದು ಸ್ಪಷ್ಟ ತೀರ್ಮಾನವೇನೂ ಆಗಲಿಲ್ಲ. ಶಾಂತಿ ವಿಧಾನಕ್ಕೆ ಪ್ರತಿಜ್ಞಾಬದ್ಧವಾಗಿ ಕಟ್ಟುಬೀಳುವ ನಿರ್ಧಾರ ಹೊಂದಬೇಕೆಂಬ ಉದ್ದೇಶದಿಂದ ಆರಂಭವಾಗಿದ್ದ ಈ ಪತ್ರವ್ಯವಹಾರವು ಆ ಗುರಿಯನ್ನು ಮುಟ್ಟಲಿಲ್ಲವಾದ್ದರಿಂದ ಅದು ಪರಾಭವಗೊಂಡಿತೆನ್ನಬಹುದು. ಕೈಕೊಂಡ ಈ ಕೆಲಸವಾಗಲಿಲ್ಲವೆಂದ ಮಾತ್ರಕ್ಕೆ ತದ್ವಿರುದ್ಧ ಕಾರ್ಯವಾಗುವದೆಂಬ ಅರ್ಥವಲ್ಲ. ಶಾಂತಿ ತೀರ್ಮಾನಕ್ಕೊಂದು ಆಕಾರಕೊಡಲಾಗದಿದ್ದರೂ ತದ್ವಿರುದ್ಧವಾದುದನ್ನು ಅಂಗೀಕರಿಸಿಕೊಳ್ಳುವ ಮನಸ್ಸು ತಮಗೆಸ್ಟಕ್ಕೂ ಇಲ್ಲವೆಂಬ ಸದಿಚ್ಛೆಯನ್ನು ಇಬ್ಬರು ಪ್ರಧಾನಿಗಳೂ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಒಂದು ಸತ್ಸಾಧನೆ ಫಲಿಸಲಿಲ್ಲವೆಂದು ಪಶ್ಚಾತ್ತಾಪ ಪಡುವಾಗಲೇ ದುಸ್ಸಾಧನೆಗಿವಕಾಶವಿಲ್ಲವೆಂಬ ಸಮಾಧಾನವೂ ಮೂಡುತ್ತಿದೆ.

ಪತ್ರವ್ಯವಹಾರ ಸಾರ

"ನಮ್ಮೊಳಗಿನ ವಿವಾದಗಳನ್ನು ಇತ್ಯರ್ಥಿಸಿ ಕೊಳ್ಳುವ ವಿಧಾನವೆಂದು ಯುದ್ಧಕ್ಕೆ ಇಳಿಯುವುದನ್ನು ನಾವಿಬ್ಬರೂ ಜಾಹೀರಾಗಿ ಅಲ್ಲಗಳೆಯುವ. ನಮ್ಮನಡುವಿನ ಪ್ರಚಲಿತ ಮತ್ತು ಭಾವೀ ಜಗಳಗಳೆಲ್ಲವೂ ಶಾಂತಿ ವಿಧಾನಗಳಿಂದಲೇ ತೀರ್ಮಾನ ಹೊಂದತಕ್ಕದ್ದೆಂದು ಕಂಠೋಕ್ತವಾಗಿ ಜಾಹೀರು ಮಾಡಿಕೊಳ್ಳೋಣ" ಎಂದು ಭಾರತ ಸೂಚಿಸಿದುದಕ್ಕೆ ಪಾಕಿಸ್ತಾನವು ಆದಾಗದೆಂದೇನೂ ಹೇಳಲಿಲ್ಲ. "ಬಟ್ಟಾರೆ ವೇಳೆ ಯುದ್ಧವಿಲ್ಲ" ಎಂದಿಷ್ಟೇ ಜಾಹೀರು ಮಾಡಿಕೊಳ್ಳುವುದರಿಂದ ಆಗಬೇಕಾದ ಕೆಲಸವಾಗುವಂತಿಲ್ಲ. ನಿದರ್ಶನಕ್ಕಾಗಿ ಇಂದು ಕಾರ್ಯತಃ ಘರ್ಷಿಸಿಕೊಳ್ಳುತ್ತಿರುವ ಲೋಕದ ಪ್ರಮುಖ ರಾಷ್ಟ್ರಗಳು "ಯುದ್ಧವಿಲ್ಲ" ಘೋಷಣೆ ಹೊರಡಿಸಿಕೊಂಡ ಮಾತ್ರಕ್ಕೆ ಪರಿಸ್ಥಿತಿ ಬದಲಾಯಿಸಬಲ್ಲುದೆ? ಮೇಲಾಗಿ ಭಾರತ, ಪಾಕಿಸ್ತಾನ, ಎರಡೂ ಸಂ. ರಾ. ಸಂಘದ ಸದಸ್ಯ ರಾಷ್ಟ್ರಗಳಿರುವುದರಿಂದ ಕೇವಲ ಈ ಘೋಷಣೆಯ ಆವಶ್ಯಕತೆ ಇಲ್ಲ ಜತೆಯಲ್ಲೇ ನಮ್ಮೊಳಗಿನ ಭಿನ್ನವಿವಾದಗಳನ್ನು ತೀರ್ಮಾನಿಸಿಕೊಳ್ಳುವ ಕಾರ್ಯವಿಧಾನವೊಂದನ್ನು ಅಂಗೀಕರಿಸಿಕೊಳ್ಳಬೇಕು. ಆ ವಿಧಾನವೆಂದರೆ: 1. ಸಂಧಾನ ವ್ಯವಹಾರಗಳ ಮೂಲಕ ಜಗಳಗಳನ್ನು ತೀರ್ಮಾನಿಸಿಕೊಳ್ಳುವರೆ ಎರಡು ತಿಂಗಳುಗಳ ಅವಧಿಯಿಡಬೇಕು. 2. ಈ ದ್ವಿಮಾಸಾಂತ್ಯದಲ್ಲೂ ತೀರ್ಮಾನಹೊಂದದೆ ಉಳಿದುಕೊಳ್ಳುವ ವಿವಾದಗಳನ್ನು ಮಧ್ಯಸ್ಥಿಕೆ ಪ್ರಯತ್ನಕ್ಕೆ ಬಿಡಬೇಕು. ಮಧ್ಯಸ್ಥವ್ಯವಸ್ಥೆಗಾಗಿ ಪುನಃ ಎರಡು ತಿಂಗಳ ವಾಯಿದೆಯಿಡಬೇಕು. 3 ಈ ನಾಲ್ಕು ತಿಂಗಳಾವಧಿಯ ಎರಡು ಅಂತಸ್ತುಗಳಿಂದಲೂ ಫಲಬರಲಿಲ್ಲವೆಂದಾದರೆ, ಜಗಳಗಳ ತೀರ್ಮಾನಕ್ಕಾಗಿ ಇಕ್ಕಡೆಯವರಿಗೊಪ್ಪಿಗೆಯಿರುವ ವಿಶೇಷ ಮಾಧ್ಯಮವೊಂದಕ್ಕೆ ಅಥವಾ ಯೋಗ್ಯ ಅಂತರ್ರಾಷ್ಟ್ರೀಯ ಅಧಿಕಾರಕ್ಕೆ ಒಪ್ಪಿಸಿಕೊಡಬೇಕು ಈ ಮಧ್ಯತೀರ್ಮಾನಕರ್ತರ ತೀರ್ಪನ್ನು ಇಕ್ಕಡೆಯವರೂ ಶಿರಸಾವಹಿಸಿಕೊಳ್ಳಲು ಬದ್ಧರಿರಬೇಕು." ಎಂಬ ಸೂಚನೆಗಳು ಬಂದಿದ್ದುವು. ಈ ಒಳವಿಧಾನಗಳ ಕುರಿತು ಭಾರತ ಸರಕಾರದ ಅಭಿಮತವಿಷ್ಟೆ "ವಿವಾದಗಳನ್ನು ಬಿಡಿಬಿಡಿಯಾಗಿ ತೀರ್ಮಾನಿಸಿಕೊಳ್ಳುವ ವಿಧಾನವೇನೋ ಪ್ರಾಮುಖ್ಯವಾದುದು. ಆದರೆ ತಾವೆಂದಿರುವ 'ಯುದ್ಧವಿಲ್ಲ' ಜಾಹೀರು ನಾಮೆಯನ್ನು ಹೊರಡಿಸಿದರದು ಕೂಡಲೇ ಮೈತ್ರೀವಾತಾವರಣವನ್ನು ನಿರ್ಮಿಸುವುದು. ಆ ಮೂಲಕ ಈ ವಿವಾದಗಳ ತೀರ್ಮಾನಗಳಿಗೆ ವಿಶೇಷ ಅನುಕೂಲವಾಗುವುದು. ಇನ್ನು ಭಾರತ ಪಾಕಿಸ್ತಾನಗಳ ನಡುವೆ ಇರುವ ವಿವಾದಗಳೆಲ್ಲವೂ ಪಾಕಿಸ್ತಾನವು ಸೂಚಿಸಿದ ಆ ಕಟ್ಟುನಿಟ್ಟಿನ ವಾಯಿದೆಗಳೊಳಗೆ ಇತ್ಯರ್ಥ ಹೊಂದುವ ಮಾದರಿಯಲ್ಲೇ ಇಲ್ಲ: ನಿದರ್ಶನಕ್ಕಾಗಿ ಕಾಶ್ಮೀರದ ವಿವಾದದಲ್ಲಿ ಎರಡು ರಾಷ್ಟ್ರಗಳ ಸಾರ್ವಭೌಮಾಧಿಕಾರದ ಪ್ರಶ್ನೆಯಿದೆ ಅಂತಹ ಪ್ರಶ್ನೆಯು ಸಂಧಾನ ಮತ್ತು ಮಧ್ಯಸ್ಥಿಕೆಯ ಮೂಲಕ ಜವಾಬ್ದಾರಿ ನಾಲ್ಕು ತಿಂಗಳುಗಳೊಳಗೆ ತೀರ್ಮಾನ ಹೊಂದದಿದ್ದರೆ ತೀರ್ಮಾನಕರ್ತರ ಖಂಡಿತ ತೀರ್ಮಾನಕ್ಕೆ ಬಿಡತಕ್ಕದ್ದೆಂಬ ಶರ್ತವಿರುವುದರಿಂದ, ಮನಸಿಲ್ಲದ ಪಕ್ಷದವರು ಈ ಖಂಡಿತ ತೀರ್ಮಾನವನ್ನೇ ಪಡೆಯುವ ಬಯಕೆಯಿಂದ ಸಂಧಾನ ಮಾತುಕತೆ ಮತ್ತು ಮಧ್ಯಸ್ಥಿಕೆ ಪ್ರಯತ್ನಗಳನ್ನು ಉದ್ದೇಶಪೂರ್ವಕ ನಿಷ್ಫಲಗೊಳಿಸಬಹುದು. ಬದಲಿಗೆ 'ಶಾಂತ ವಿಧಾನ ಹೊರತು ಯುದ್ಧವಿಧಾನವಿಲ್ಲವೇ ಇಲ್ಲ" ಎಂದು ಜಾಹೀರಾಗಿ ನಿರ್ಧರಿಸಿಕೊಂಡರೆ, ಪ್ರಕೃತ ಎರಡೂ ರಾಷ್ಟ್ರಗಳ ಕೆಲವು ಪಂಗಡಗಳಲ್ಲಿ ವ್ಯಾಪಿಸಿರುವ ಅಶುದ್ಧ ವಾತಾವರಣ ತೊಲಗಬಲ್ಲುದು. ಪಾಕಿಸ್ತಾನದ ಪತ್ರಿಕೆಗಳ ಮತ್ತು ಪುಂಜಾಬು ನಾಯಕರ ಪ್ರಚಾರ ಮೂಲಕ ಅಲ್ಲಿ ಹಬ್ಬಿರುವ ಯುದ್ಧಾವೇಶಸಂಸ್ಕಾರವನ್ನು ಈ ಜಾಹೀರುನಾಮೆಯು ಶಮನಿಸಬಲ್ಲುದು''

ವಾದ-ಪ್ರತಿವಾದ

ಭಾರತ ಪಾಕಿಸ್ತಾನಗಳೆರಡೂ ಸಂ. ರಾ. ಸಂಘದ ಸದಸ್ಯ ರಾಷ್ಟ್ರಗಳಿರುವಾಗ ಪ್ರತ್ಯೇಕವಾಗಿ "ಯುದ್ಧವಿಲ್ಲ" ಘೋಷಣೆ ಹೊರಡಿಸುವ ಆವಶ್ಯಕತೆಯೇನಿದೆ ಎಂಬ ಪಾಕಿಸ್ತಾನದ ಪ್ರಶ್ನೆಗೆ ಉತ್ತರವಾಗಿ ಸಂ. ರಾ. ಸಂಘದ ಶಾಂತಿ ಘೋಷಣೆಗೆ ಕಟ್ಟುಬಿದ್ದಿರುವ ರಾಷ್ಟ್ರಗಳೇ ಪರಸ್ಪರ ಯುದ್ಧ ಧೋರಣೆ ವಹಿಸಿರುವ ಜೀವಂತ ನಿದರ್ಶನದತ್ತ ಬೆಟ್ಟುಮಾಡಿ, ಅವು ಯುದ್ಧ ತ್ಯಾಜ್ಯಮಾಡಿಕೊಂಡಲ್ಲಿ ನಿಜಕ್ಕೂ ಶಾಂತಿಯ ಕಡೆಗೊಂದು ಮುಖ್ಯ ಹೆಜ್ಜೆಯಿಟ್ಟಂತಾಗುವದೆಂದು ಭಾರತವಂದಿದೆ. ಭಾರತ ಪಾಕಿಸ್ತಾನಗಳೊಳಗಿನ ಎರಡು ಮುಖ್ಯ ಜಗಳಗಳಾಗಿರುವ ಪಂಜಾಬು ಕಾಲುವೇ ನೀರಿನ, ನಿರಾಶ್ರಿತರ ಆಸ್ತಿ ಸೊತ್ತುಗಳ ವ್ಯವಸ್ಥೆಯ ಸಂಬಂಧದ ತೀರ್ಮಾನವನ್ನು ಭಾರತ ಮತ್ತು ಪಾಕಿಸ್ತಾನಗಳು ಇಬ್ಬಿಬ್ಬರಂತೆ ನೇಮಿಸಿಕೊಳ್ಳುವ ಜಡ್ಜ ಮಂಡಲಿಗೆ ಬಿಡಬಹುದೆಂದು ಭಾರತ ಸರಕಾರವು ಸೂಚಿಸಿದ್ದರೆ, ಅವುಗಳನ್ನು ಕೊನೆಯ ತೀರ್ಮಾನಕ್ಕಾಗಿ ಅಂತರ್ರಾಷ್ಟ್ರೀಯ ನ್ಯಾಯಾಧೀಶಕೋರ್ಟಿಗೇನೇ ಬಿಡಬೇಕೆಂದು ಪಾಕಿಸ್ತಾನ್ ಸರಕಾರ ವಾದಿಸಿದೆ ಎಷ್ಟೋ ಸಹಸ್ರ ಮಂದಿಯ ಪ್ರಾಣ,ಜೀವನಕ್ಕೆ ಸಂಬಂಧಿಸಿದ ನಿರಾಶ್ರಿತ ಆಸ್ತಿಗಳ ಪ್ರಶ್ನೆಯು ಕಾಲುವೇ ನೀರ ವಿವಾದಕ್ಕಿಂತ ದೊಡ್ಡದಿರುವುದರಿಂದ ಅದನ್ನೂ ಜತೆಯಲ್ಲೇ ನ್ಯಾಯ ತೀರ್ಮಾನಗೊಳಿಸಬೇಕೆಂದು ಭಾರತ ಸರಕಾರದ ವಾದವಿದ್ದರೆ, ತಾವಂದ ಮಾದರಿಯ ತೀರ್ಮಾನಕ್ಕೆ ಕಾಲುವೇ ನೀರು, ಜುನಾಗಡ, ಕಾಶ್ಮೀರ ಮತ್ತು ಭಾರತದ ವಶವಿರುವ ಪಾಕಿಸ್ತಾನದ ಸೊತ್ತುಗಳ ವಿವಾದಗಳನ್ನೊಪ್ಪಿಸುವುದಾದರೆ ನಿರಾಶ್ರಿತರ ಆಸ್ತಿಸೊತ್ತು ಸಂಬಂಧದ ವಿವಾದವನ್ನು ಅಂತೆಯೇ ಮಾಡಲಡ್ಡಿಯಿಲ್ಲವೆಂದು ಪಾಕಿಸ್ತಾನವು ವಾದಿಸಿದೆ. ತದನುಗುಣ ಕಾರ್ಯಯೋಜನೆಯಿಂದ ಬರಿಯ 'ಯುದ್ಧವಿಲ್ಲ' ಘೋಷಣೆಯಿಂದ ಸಾಕಷ್ಟು ಫಲಬರುವಂತಿಲ್ಲವೆಂಬುದನ್ನು ಪ್ರಧಾನಿ ನೆಹರುಗಳಿಗೆ ಮನಗಾಣಿಸಲು ತನ್ನಿಂದಾಗದುದಕ್ಕಾಗಿ ಪ್ರಧಾನಿ ಲಿಯಾಖತ್ ಅಲೀಖಾನರು ನವಂಬರ್ 24 ರ ತನ್ನ ಕೊನೆಯ ಪತ್ರ

ಮೂತ್ರಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನು ಉಪಯೋಗಿಸಿದರೆ ಪದತಪ್ಪಿ ಮೂತ್ರಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 6- [ವಿ. ಪಿ ಹಸ್ಸೆರಡಾಣೆ ಪ್ರತ್ಯೇಕ.]

MIS. P. DEVEE, F. DS. (N. J.)
Tollygunge CALCUTTA,
ಸಪ್ಲೈ ಕಿಸ್ಸರು ಶಹಾಕಂಪನಿ, ಮಂಗಳೂರು

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕೋ, ಲಿಮಿಟೆಡ್

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Mangalore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

'ಯುದ್ಧವಿಲ್ಲ' ಪತ್ರವ್ಯವಹಾರ

ದಲ್ಲಿ ಸಂತಾಪ ಸೂಚಿಸಿದ್ದಾರೆ. ತಮ್ಮ ಪತ್ರವ್ಯವಹಾರಗಳು ಫಲಿಸದ ಕುರಿತು ತನ್ನ ಗಾಢನಿರಾಶೆಯನ್ನು ಮಿ. ಲಿಯಾಖತ್ ಅಲೀಖಾನರು ಸೂಚಿಸುವಾಗಲೇ "ನಾವು, ಎರಡು ಸರಕಾರಗಳು ತಮ್ಮೊಳಗಿನ ಎಲ್ಲಾ ಜಗಳಗಳನ್ನು ಶಾಂತ ವಿಧಾನಗಳಿಂದ ತೀರ್ಮಾನಿಸಿಕೊಳ್ಳುವುದು ಪರಮಾವಧಿ ಅಗತ್ಯ" ಎಂಬ ನೆಹರುಗಳ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ. "ಭಾರತ ಮತ್ತು ಪಾಕಿಸ್ತಾನಗಳೊಳಗಿನ ಒಂದು ಯುದ್ಧವು ಆ ಎರಡು ರಾಷ್ಟ್ರಗಳಿಗೂ ಊಹನಾತೀತ ಅನಾಹುತಗಳನ್ನೊಡ್ಡುವವೆಂದು ನನಗೆ ಸರಿಯಾಗಿ ಮನವರಿಕೆಯಾಗಿದೆ. ಮತ್ತೆ ಹಾಗೆಂದು ಸಾರುವುದರಲ್ಲಿ ನಾನೆಂದೂ ದಣಿದುದಿಲ್ಲ! ಶಾಂತಿಗಾಗಿ ಶ್ರಮಿಸುವುದನ್ನು ನಾನಿನ್ನೂ ಮುಂದೊತ್ತುತ್ತೇನೆ ಎಂದು ನಿಮಗೆ ಭರವಸೆ ಕೊಡುತ್ತೇನೆ" ಎಂದಿದ್ದಾರೆ ಮಿ. ಲಿಯಾಖತ್. ವ್ಯಕ್ತಿಶಃ ತಾವು ಒಟ್ಟಿಗೂಡುವುದು ತಮ್ಮ ರಾಷ್ಟ್ರಗಳ ಹಿತಕ್ಕೆ ಸಹಾಯಕಾರಿಯಾಗುವುದರಿಂದ ಬಿಡುವು ದೊರಕಿಸಿಕೊಂಡು ಮತ್ತೊಮ್ಮೆ ಕರಾಚಿಗಾಗಮಿಸಬೇಕೆಂದು ಮಿ. ಲಿಯಾಖತ್ ಅಲೀಖಾನರು ಜವಾಹಿರಲಾಲ ನೆಹರುಗಳನ್ನು ಆಮಂತ್ರಿಸಿದ್ದಾರೆ. ನೆಹರುಗಳು ಈ ಆಮಂತ್ರಣವನ್ನು ಅಂಗೀಕರಿಸಿ ಪರಿಸ್ಥಿತಿ ಅನುಕೂಲವಾದೊಡನೆ ಕರಾಚಿಗೆ ಹೋಗುವೆನೆಂದಿದ್ದಾರೆ.

ನೆಹರೂ ಹೇಳಿಕೆ

ಮೊದಲ ರಾತ್ರಿ 8 ತಾಸಿಗೆ ಲಿಯಾಖತರ ಕೊನೆಯ ಪತ್ರವನ್ನು ಪಡೆದಿದ್ದ ನೆಹರುಗಳು ನವಂಬರ ತಾ 28 ರಲ್ಲಿ ಭಾರತ ಪಾರ್ಲಿಮೆಂಟಿನ ಮುಂದೆ ತನಗೂ ಪಾಕಿಸ್ತಾನ್ ಪ್ರಧಾನಿಗಳಿಗೂ ನಡೆದ ಪತ್ರ ವ್ಯವಹಾರಗಳನ್ನು ಇಟ್ಟರು. ಪಾಕಿಸ್ತಾನ್ ಪ್ರಧಾನಿಗಳು ತನ್ನ ಪತ್ರಗಳಲ್ಲಿ ಭಾರತದ ಕುರಿತು ಮಾಡಿರುವ ಕೆಲವು ಆರೋಪಗಳಿಗೆ ಮತ್ತವರ ಕೆಲವು ವಾದಗಳಿಗೆ ನೆಹರುಗಳು ಮೈತ್ರಿಭಾವ ಮಿಶ್ರಿತ ಉತ್ತರಗಳನ್ನು ಕೊಟ್ಟಿದ್ದಾರೆ. ಭಾರತದ ಅದರಲ್ಲೂ ವಿಶೇಷತಃ ಪಶ್ಚಿಮ ಬಂಗಾಳದ ಪತ್ರಿಕೆಗಳೆಲ್ಲವೂ ಭಾರತ-ಪಾಕಿಸ್ತಾನ ಒಪ್ಪಂದದ ಪ್ರತಿಕೂಲ ಧೋರಣೆವಹಿಸಿವೆ ಎಂಬುದನ್ನು ಶ್ರೀ ಜವಾಹಿರಲಾಲರು ಅಲ್ಲಗಳೆದು ಈ ಕುರಿತು ತಾನು ವಿಷಾದ ಸೂಚಿಸುವ ಸಂದರ್ಭಗಳು ಹಿಂದೆಬಂದಿದ್ದವಾದರೂ, ಈಗ ಬಹುತೇಕವಾಗಿ ಎಲ್ಲಾ ಪತ್ರಿಕೆಗಳೂ ದಿಲ್ಲೀ ಒಪ್ಪಂದಕ್ಕೆ ಅನುಕೂಲ ಮನೋವೃತ್ತಿ ತೋರಿಸುವುದನ್ನು ಎತ್ತಿಹೇಳಿದ್ದಾರೆ. ಈ ಮಾತಿಗೆ ಅಲ್ಲೊಂದು, ಇಲ್ಲೊಂದೆಂಬಂತೆ ಅಪವಾದವಿರಬಹುದಾದರೂ ಅಷ್ಟಕ್ಕಾಗಿ ಭಾರತದ ಪತ್ರಿಕಾ ವರ್ಗವನ್ನೇ ಆರೋಪಿಸುವುದು ತಪ್ಪೆಂಬುದನ್ನು ಖಚಿತ ಪಡಿಸಿದ್ದಾರೆ. ಅಂತೆಯೇ ವ್ಯಕ್ತಿಗತವಾಗಿ ಕೆಲವರು ಅನಪೇಕ್ಷಿತ ಧೋರಣೆವಹಿಸುದುದಿದ್ದರೆ. ಅದು ಅಗಣ್ಯವೆಂಬುದನ್ನು ಮನಗಾಣಿಸಿದ್ದಾರೆ. ಜುನಗಾಡಿನಲ್ಲಿ ಭಾರತದ ಸೇನಾ ಕಾರ್ಯವೆಲ್ಲ-ಅಲ್ಲಿಯ ಜನಮತವೇ ಅಸ್ತಿತ್ವಕ್ಕೆಬಂದಿದೆಯೆಂಬುದನ್ನು ತೋರಿಸಿಕೊಟ್ಟು, ಬಂಗಾಳದ ಗಲಭೆಗಳವೇಳೆ ಪಾಕಿಸ್ತಾನದ ಗಡಿಯಲ್ಲಿ ಅತ್ಯಧಿಕ ಸಂಖ್ಯೆಯ ಹಿಂದೀ ಸೇನಾ ಚಟುವಟಿಕೆ ಕಂಡುಬಂದಿದ್ದಿತೆಂಬ ಮಿ. ಲಿಯಾಖತ್ ಅಲೀಖಾನರ ವಾದವು ಭಾರತ ಸರಕಾರದ ವರ್ತನೆಗೆ ಕಟ್ಟಿದ ತಪ್ಪು ಅರ್ಥವೆಂದು ಸ್ಪಷ್ಟೀಕರಿಸಿದ್ದಾರೆ. ಇದಿಂಗಳಿಗಳು ನಮ್ಮ ಮೇಲೆ ಬೀಳದೆ ಸ್ವಾವಾಗಿ ಕಾಶ್ಮೀರದಲ್ಲಿ ಯುದ್ಧಕ್ಕೇಳುವಂತಿಲ್ಲ. ಎಂದು ತಾನುಕೊಟ್ಟ ಪತ್ರಿಕಾ ಹೇಳಿಕೆಗ "ಪಾಕಿಸ್ತಾನಕ್ಕೆ ಭಾರತದ ಮೇಲೆ ಬೀಳುವ ಇಚ್ಛೆಯಿಲ್ಲ" ಎಂದು ಲಿಯಾಖತರು ಉತ್ತರಕೊಟ್ಟುದಕ್ಕಾಗಿ ನೆಹರುಗಳು ಆನಂದ ವ್ಯಕ್ತಪಡಿಸಿ, ಕಾಶ್ಮೀರದ ಜನತೆಗೆ ತಾವು ಕೊಟ್ಟಿರುವ ಆಶ್ವಾಸನೆಗಳಲ್ಲವುದನ್ನೂ ಭಂಗಿಸಿಕೊಳ್ಳಲಾರೆವೆಂಬ ನಿಶ್ಚಿತ ಧೋರಣೆಯನ್ನು ಪುನಃ ಖಚಿತ ಪಡಿಸಿ ಭಾರತದ ಶಾಂತಿ ಸಂಕಲ್ಪವು ಪಾಕಿಸ್ತಾನದ ಶಾಂತಿ ಸಂಕಲ್ಪಕ್ಕಿಂತ ಕಡಿಮೆಯದಲ್ಲವೆಂಬುದನ್ನು ಎತ್ತಿ ಹೇಳಿ ನೆಹರುಗಳು "ನಾವು ನೆರೆರಾಷ್ಟ್ರದೊಂದಿಗೆ ಶಾಂತಿಯಿಂದಿರುವ ಧೋರಣೆಯನ್ನು ಯಥಾ ಪ್ರಕಾರ ಮುಂದೊತ್ತುತ್ತೇವೆಂದು ಅವರಿಗೆ ಭರವಸೆ ಕೊಡುತ್ತೇನೆ" ಎಂದಿದ್ದಾರೆ

ಲಿಯಾಖತ್ ಹೇಳಿಕೆ

ಇದೇ ದಿನ ಕರಾಚಿಯಲ್ಲಿ ಪಾಕಿಸ್ತಾನ್ ಪಾರ್ಲಿಮೆಂಟಿನ ಮುಂದೆ ತಾನು ನೆಹರುಗಳೊಡನೆ ನಡೆಸಿದ ಪತ್ರವ್ಯವಹಾರಗಳನ್ನಿಡುತ್ತಾ ಮಿ. ಲಿಯಾಖತ್ ಅಲೀ ಖಾನರು 'ಭಾರತ ಪಾಕಿಸ್ತಾನಗಳ ನಡುವೆ ಉಳಿದುಕೊಂಡಿರುವ ಜಗಳಗಳು ಶಾಂತ ವಿಧಾನಗಳಿಂದ ಹೊರತು ಯುದ್ಧದಿಂದ ಇತ್ಯರ್ಥ ಹೊಂದಬಾರದು ಎಂಬ ಸೂಚನೆಯನ್ನ ಪಾಕಿಸ್ತಾನವು ಸ್ವಾಗತಿಸಿದ್ದಿತು' ಎಂದರು. "ಆದರೆ ನಾವು ಕೇವಲ ಛಾಯೆಯನ್ನವಲಂಬಿಸದೆ ಸಾರವನ್ನು ಪಡೆಯಬೇಕಾದರೆ ಬರಿಯ ಘೋಷಣೆಗಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಬೇಕಾಗಿದೆ" ಎಂದರು ಮಿ. ಲಿಯಾಖತ್. ಪಾಕಿಸ್ತಾನದೊಂದಿಗೆ ಜೋಡಣೆ ಗೊಂಡಿದ್ದ ಜುನಗಾಡು ಮತ್ತದರೊತ್ತಿನ ಇತರ ಸಂಸ್ಥಾನಗಳು ಭಾರತದ ಸೇನಾ ಸ್ವಾಧೀನದಲ್ಲುಳಿದಿರುವ ಪ್ರಶ್ನೆಯಿದೆ. ಈ ಕುರಿತು ನೇಮಕಗೊಂಡಿರುವ ಸಂಯುಕ್ತ ರಾಷ್ಟ್ರ ಸಂಸ್ಥೆಯ ಕಮಿಶನಿನ ಮೂಲಕ ಸಂಧಾನವಸಾಧ್ಯವೆಂದಾದರೆ ಅಂತರರಾಷ್ಟ್ರೀಯ ಕೋರ್ಟಿನ ಪ್ರಶ್ನಾತೀತ ತೀರ್ಮಾನಕ್ಕದನ್ನು ಬಿಟ್ಟುಕೊಡಬೇಕು. ನಿರಾಶ್ರಿತರ ಆಸ್ತಿಪಾಸ್ತಿಗಳಿಗೂ ಕಾಲುವೆ ನೀರಿಗೂ ಸಂಬಂಧವಿರುವುದರಿಂದ ನಿರಾಶ್ರಿತಾಸ್ತಿಗಳ ಪರ್ಯಾಲೋಚನೆಯ ಮೊದಲು ಕಾಲುವೆ ನೀರವಿವಾದ ಇತ್ಯರ್ಥ ಹೊಂದಬೇಕು. ರಿಜರ್ವ್ ಬೇಂಕು ಪಾಕಿಸ್ತಾನ್ ಸ್ಟೇಟ್ ಬೇಂಕಿನ ಸಂಪತ್ತನ್ನು ತಡೆದಿಟ್ಟುಕೊಂಡಿದೆ. ಪಾಕಿಸ್ತಾನಕ್ಕೆ ಸಲಬೇಕಾದ ಸ್ಟರ್ಲಿಂಗುಗಳಿಗೂ ಅದೇ ಸ್ಥಿತಿಯೊದಗಿದೆ. ಇವುಗಳ ಸಂಬಂಧವಾಗಿಯೂ ಅನ್ಯೋನ್ಯವಾಯ ಫಲಿಸದಿದ್ದರೆ ನ್ಯಾಯ ತೀರ್ಮಾನಕ್ಕೊಪ್ಪಿಸಬೇಕು. ಪಾಕಿಸ್ತಾನವು ಶಾಂತಿಗಾಗಿಯೇ ಇದೆ" ಎಂದು ಮಿ. ಲಿಯಾಖತ್ ಅಲೀಖಾನರು ಪಾಕಿಸ್ತಾನ್ ಪಾರ್ಲಿಮೆಂಟಿನಲ್ಲಿ ಅಂದಿದ್ದಾರೆ

ವಿಚಾರಾರ್ಹ ಅಂಶ

ಮೇಲಿನ ಪತ್ರವ್ಯವಹಾರಗಳ ಅವಲೋಕನದಿಂದ ಸ್ಪಷ್ಟವಾಗುತ್ತಿರುವ ಅಂಶಗಳಿಷ್ಟೆ. ಲೋಕದ ದ್ವಿಪಾಳಯಗಳೊಳಗಿನ ಘರ್ಷಣೆಯು ಕೊರಿಯಾ ಯುದ್ಧದ ಈಗಿನ ಸ್ಥಿತಿಗತಿಗಳ ದೆಸೆಯಿಂದ ಪರಮಾವಧಿ ಬಿಸಿಯೇರಿದುವಾಗ ಭಾರತ-ಪಾಕಿಸ್ತಾನಗಳೊಳಗೆ ಯುದ್ಧೋನ್ಮತ್ತತೆ ಮತ್ತು ಪ್ರತೀಕಾರ ಸಾಧನೆಯ ಹಠವಿರುತ್ತಿದ್ದರೆ, ಮಹಾ ಅಪಾಯವು ಇತ್ತ ರವಾನೆ ಹೊಂದುವ ಭೀತಿಯಿದ್ದದ್ದೇ. ಆದರೆ ಅಂತಹ ಸಮರ ಹವಣು ಭಾರತಕ್ಕಾಗಲೀ ಪಾಕಿಸ್ತಾನಕ್ಕಾಗಲೀ ಇಲ್ಲವೆಂಬುದು ಈ ಪತ್ರಗಳ ಮೂಲಕ ಸ್ಪಷ್ಟವಾದುದು ಸಮಾಧಾನದ ಸಂಗತಿ. ಆದರೆ 'ಶಾಂತಿಬೇಕು' ಎಂದಾಗ 'ಬೇಕೇ ಬೇಕು' ಎಂದು ಪುನರುಚ್ಚರಿಸುವ ಕರ್ತವ್ಯವಷ್ಟೇ ಇಲ್ಲಿ ಪಾಲಿಸಲ್ಪಟ್ಟದೆಯಾದ್ದರಿಂದ 'ಯುದ್ಧ ಬೇಡ' ಎಂದು ಕಂಠೋಕ್ತವಾಗಿ ಒಪ್ಪಿಕೊಳ್ಳುವುದಕ್ಕೂ ಈ ಮಾದರಿಯ ಒಪ್ಪಿಗೆಗೂ ವ್ಯತ್ಯಾಸವಿದೆ, ಎಂಬುದನ್ನು ಮರೆಯಬಾರದು. ಎಂತಹ ಸಂದರ್ಭವೊದಗಿದರೂ ಯುದ್ಧ ಮಾಡಲಾರೆವು ಎಂಬ ಪ್ರತಿಜ್ಞೆ ಧರಿಸಿದವರು, ತಮ್ಮೊಳಗಿನ ವಿವಾದಗಳ ತೀರ್ಮಾನಕ್ಕಾಗಿ ಕೊನೆಯ ವರೆಗೂ ಯುದ್ಧೇತರ ವಿಧಾನಗಳನ್ನೇ ಅವಲಂಬಿಸಬೇಕಾಗುವುದು. ಆದರೆ "ಯುದ್ಧವು ಅಪಾಯಕರ- ನಾವು ಸರ್ವದಾ ಶಾಂತಿ ಪ್ರಯತ್ನ ಮಾಡುತ್ತೇವೆ" ಎಂದಷ್ಟೇ ಹೇಳುವವರು "ಯುದ್ಧವನ್ನು ಅನ್ಯರು ನಮ್ಮ ಮೇಲೆ ಹೇರಿದರಾದ್ದರಿಂದ ನಾವಿಳಿಯಬೇಕಾಯಿತು" ಎಂದು ಹೇಳುವ ಸಂದರ್ಭ ಬರುವ ವರೆಗೆ ಮಾತ್ರ ಶಾಂತಿ ಸಾಧಕರಾಗಿರಬಹುದು

'ಯುದ್ಧನಾ' ಘೋಷಣೆಗೆ ಅಡ್ಡಬಂದ ಒಳ ವಿವಾದಗಳೆಂದರೆ ನಿರಾಶ್ರಿತರ ಆಸ್ತಿಸೊತ್ತುಗಳದು—ಪಂಜಾಬು ಕಾಲುವೇ ನೀರಿನದು – ಪಾಕಿಸ್ತಾನವನ್ನುತ್ತಿರುವಂತೆ ಜುನಾಗಡ ಮತ್ತು ಅದರ ಹಕ್ಕಿನ ಕೆಲವು ಸಂದಾಯಗಳದ್ದು. "ಯುದ್ಧನಾ" ನಿರ್ಧಾರವನ್ನು ಮಾಡಿಕೊಳ್ಳುವದೊಂದೇ ಭಾರತ ಸರಕಾರವು ಇಲ್ಲಿ ವಹಿಸಿದ ಧೋರಣೆಯಾದರೆ, ಕೆಲವು ಶರ್ತಗಳನ್ನು ಜೋಡಿಸಿಕೊಂಡರೇನೇ ಆ ನಿರ್ಧಾರವು ಜೀವಂತವಾಗಿರಬಲ್ಲುದೆಂಬುದು ಪಾಕಿಸ್ತಾನವು ವಹಿಸಿರುವ ಧೋರಣೆ.

'ಯುದ್ಧವಿಲ್ಲ' ಎಂದು ನಿಶ್ಚಯಿಸಿಟ್ಟುಕೊಳ್ಳುವುದೇ ಅಪಾಯಕ್ಕೊಂದು ತಡೆ; ಅದೇ ಒಂದು ಮಹಾಶರ್ತ 'ಆ ಕಡೆಗೆ ಯತ್ತ ಕಾಲಿಡಲೇ ಬಾರದು.' ಎಂದು ಸಂಕಲ್ಪಿಸಿಕೊಂಡ ಮೇಲೆಯೇ, ಅದಕ್ಕಿಂತ ಭಿನ್ನವಾದ ಇತರ ಹಾದಿಯ ಕಡೆಗೆ ನೋಡಬಹುದು. ಅಪಾಯಕರ ಹಾದಿಯತ್ತ ಕಾಲಿಡಲಾರೆವೆನ್ನುವದಕ್ಕೂ ಇನ್ನೊಂದು ಹಾದಿಯನ್ನು ನೋಡಿಕೊಂಡ ಮೇಲೆಯೇ ಅದು. ಎಂಬ ಶರ್ತ ಅನಗತ್ಯ. ಆದರೆ ಪಾಕಿಸ್ತಾನವು ಅಂತಹ ಶರ್ತವನ್ನು ಮುಂಮೊಡ್ಡುವಾಗ, ಬೇರೊಂದು ಹಾದಿಯಿರದಿದ್ದರೆ ಕಣವೇ ಹಾದಿಯಾದರೂ ಸರಿಯೇ ಎಂದು ಅದರ ಅಭಿಪ್ರಾಯವೆ?

ನಿರಾಶ್ರಿತರಾಗಿ ಭಾರತಕ್ಕೋಡಿ ಬಂದಿರುವವರ ಆಸ್ತಿಪಾಸ್ತಿಗಳು ಪಾಕಿಸ್ತಾನದಲ್ಲಿ ಉಳಿದುಕೊಂಡಂತೆ, ಪಾಕಿಸ್ತಾನಕ್ಕೋಡುವ ನಿರಾಶ್ರಿತರ ಆಸ್ತಿಪಾಸ್ತಿಗಳೇನೂ ಭಾರತದಲ್ಲಿ ಉಳಿದಿಲ್ಲ. ಆದ್ದರಿಂದ ನಿರಾಶ್ರಿತರ ಆಸ್ತೀ ವ್ಯವಸ್ಥೆಯನ್ನು ನಂತರದ ಪ್ರಶ್ನೆಯಾಗಿ ಮಾಡಬಹುದೆಂದು ಪಾಕಿಸ್ತಾನದ ಅಭಿಪ್ರಾಯ. ಬಳಿಕ ಭಾರತದ ಪೂರ್ವ ಪಂಜಾಬಿನ ಕಾಲುವೇ ನೀರು ಪಾಕಿಸ್ತಾನದ ಪಶ್ಚಿಮ ಪಂಜಾಬಿಗೆ ಹೋಗುವಂತಹದಿದ್ದು ಅದಕ್ಕೆ ತೊಡಕು ಬಂದಿರುವುದರಿಂದ ಕಾಲುವೇ ನೀರ ಇತ್ಯರ್ಥ ಮೊದಲಾಗಬೇಕೆಂದೇ ಅದರ ಅಭಿಮತ.

ಜುನಾಗಡದ ಭವಿಷ್ಯ ಅಲ್ಲಿಯ ಜನಮತದಂತೆ ನಿರ್ಣಯಿಸಲ್ಪಟ್ಟು ಕಾಲ ಕಳೆದಿದೆಯಾದರೂ ಪಾಕಿಸ್ತಾನದ ವಾಗ್ವಾದ ಈಗಲೂ ಜೀವಂತವಿದೆ.

ಇವೆಲ್ಲಾ ಭಿನ್ನಾಭಿಪ್ರಾಯಗಳು ಇದಿರುವಾಗ ಒಮ್ಮತ ಮತ್ತು ಯುದ್ಧತ್ಯಾಗ ಪ್ರತಿಜ್ಞೆ ಸಾಧ್ಯವೆ?

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ವಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಯೆ ಛಟ್ಟಿಯಾಗಿ ಎದ್ದು ಕಾಣುವುದು

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ.—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಕೊರಿಯದಲ್ಲಿ ಭೀಕರ ಪರಿಸ್ಥಿತಿ—

ಕೊರಿಯಾ ಯುದ್ಧಗತಿ ಕಳೆದ ಕೆಲವು ದಿನಗಳಲ್ಲಿ ಸಂಪೂರ್ಣ ಬದಲಾಯಿಸಿದೆ. ಕಮ್ಯೂನಿಸ್ಟ್ ಕೊರಿಯದ ವಿರುದ್ಧ ರಾಷ್ಟ್ರಗಳ ದೃಷ್ಟಿಪಥದಲ್ಲಿದ್ದ ಚಿತ್ರವು ಮಾಯವಾಗಿ ಫಕ್ಕನೇ ಮೃತ್ಯುಪತ್ರವು ಕಣ್ಣೆದುರಿಗೆ ಬಂದು ನಿಂತಂತಿದೆ. ಈ ವಿಶೇಷ ವಿದ್ಯಮಾನದ ಗರ್ಭದಲ್ಲಿ ಎಂತಹ ಲೋಕಾಪಾಯ ಹುದುಗಿದೆಯೋ ಊಹಿಸುವುದು ಅಸಾಧ್ಯ. ಆಟಂ ಬಾಂಬು ಪ್ರಯೋಗ, ದ್ವಿತೀಯ ಮಹಾಯುದ್ಧ ಜೋಸ್ಸಿಲ ಪ್ರವೇಶದಂತಹ ಅನಾಹುತ ಕಲ್ಪನೆಗಳು ಗೋಚರಿಸುತ್ತಿವೆ.

ಸ್ಥಿತಿ ಬದಲಾವಣೆ

ಕೊರಿಯಾ ಯುದ್ಧವನ್ನಾರಂಭಿಸಿದ ಉತ್ತರ ಕೊರಿಯದ ಕಮ್ಯೂನಿಸ್ಟರು ಆದಿಭಾಗದಲ್ಲಿ ವಿಜಯಗಳನ್ನುಗಳಿಸುತ್ತಾ ದಕ್ಷಿಣಕೊರಿಯದ ತುದಿವರೆಗೂ ಬಂದಾಗ, ಸಂ. ರಾ. ಸಂಘದ ರಾಷ್ಟ್ರಗಳ ಸರ್ವಸೇನಾನಿ ಜ. ಮೆಕಾರ್ಥರು ಒಂದು ಆಶ್ಚರ್ಯವನ್ನು ನಿರ್ಮಿಸಿ, ಅಡ್ಡದಾರಿಯಲ್ಲಿ ತನ್ನ ಸೇನೆಗಳನ್ನಿಳಿಸಿ, ಯುದ್ಧಗತಿಯನ್ನೇ ಬದಲಾಯಿಸಿ ಬಿಟ್ಟಿದ್ದರು; ಅಂದಿನಿಂದ ಉತ್ತರ ಕೊರಿಯದ ಕಮ್ಯೂನಿಸ್ಟರು ಒಂದೇ ಸಮನ ಹಿಂಜರಿಯುತ್ತಾ ಬಂದರು; ಸಂ. ರಾ. ಸೇನೆಗಳು ಅವರನ್ನು ಹಿಂದಟ್ಟುತ್ತಾ ಬಂದವು. ಮಧ್ಯದಲ್ಲೊಮ್ಮೆ ಯೋಚನಾ ಸಂದರ್ಭ ಒದಗಿದ್ದಿತು; ಕಮ್ಯೂನಿಸ್ಟರು ಯಾವ ಗಡಿದಾಟಿ ಆಕ್ರಮಣವನ್ನಾರಂಭಿಸಿದ್ದರೋ ಆ ಗಡಿಯನ್ನು ಸಂ. ರಾ. ಸೇನೆಗಳು ದಾಟಿ ಬದಿಯಿಂದ ಆಚೆ ಹೋಗಬೇಕೋ ಬೇಡವೋ ಎಂಬ ಪ್ರಶ್ನೆಯುದ್ಭವಿಸಿತ್ತು. ಆದರೆ ಈ ಪ್ರಶ್ನೆಯ ಕುರಿತು ಚಿಂತನೆ ಮಾಡಿದುದೆಂದರೆ ಭಾರತದಂತಹ ಶಾಂತಿಪ್ರೇಮಿ ರಾಷ್ಟ್ರಗಳೇ. ಯುದ್ಧ ಸೇನಾನಿ ಜನರಲ್ ಮೆಕಾರ್ಥರರಿಗಾಗಲೀ, ಅಮೇರಿಕ ಮತ್ತಿತರ ಸಂ. ರಾ. ಸಂಘದ ರಾಷ್ಟ್ರಗಳಿಗಾಗಲೀ ಆ ಕುರಿತು ಯೋಚಿಸುವ ಅಂಶವುಳಿದಿರಲಿಲ್ಲ. ಕೊರಿಯದ ಉತ್ತರ ಮೂಲೆಯವರೆಗೂ ನುಗ್ಗಿ ಹೋಗಿ ಕೊರಿಯ ಕಮ್ಯೂನಿಸ್ಟರನ್ನು ಪೂರ್ಣ ಸದೆಬಡಿಯುವುದಲ್ಲದೆ ಮಧ್ಯ ಪರಿಹಾರವೆಂಬುದಿಲ್ಲ ಎಂಬುದು ಅವರ ಪೂರ್ವ ನಿಶ್ಚಿತ ಸಂಕಲ್ಪವಾಗಿತ್ತು. “ಶಾಂತಿ ಪ್ರಯತ್ನಗಳೆಲ್ಲವನ್ನೂ ಮಾಡಿಕೊಳ್ಳದೆ, ೩೮ನೇ ಗಡಿಗೆರೆಯನ್ನು ಸಂ. ರಾ. ಸೇನೆಗಳು ದಾಟುವುದು ಸರಿಯಲ್ಲ. ಕಮ್ಯೂನಿಸ್ಟ್ ಚೈನವು ಯುದ್ಧದಲ್ಲಿ ಪ್ರವೇಶಿಸಿ ಸಮರ ದೊಡ್ಡದಾಗುವ ಅಪಾಯವಿದೆ” ಎಂದು ಶ್ರೀ ಜವಾಹರಲಾಲ ನೆಹರುಗಳು ಸಮಯೋಚಿತವಾಗಿ ಆ ಸಂದರ್ಭದಲ್ಲೇ ಎಚ್ಚರಿಸಿದ್ದರು. ಆದರೆ ನೆಹರುಗಳ ಹಿತೋಪದೇಶವು ಅರೆಮನಸ್ಸಿನವನ ಅಥವಾ ಅಜ್ಞಾನಿಯ ಅಂಬೋಣವಾಗಿ ಅಮೇರಿಕ ಮತ್ತಿತರ ರಾಷ್ಟ್ರಗಳಿಗೆ ಕಂಡಿತು. “ಪೂರ್ಣ ಸದೆಬಡಿಯುವವರೆಗೂ ಮುಂದುವರಿಯಬೇಕು” ಎಂದು ವಿಶೇಷಾಗ್ರಹ ಪಟ್ಟ ಹೆಗ್ಗಳಿಕೆಯು ಬ್ರಿಟನಿನದು. ಸಂ. ೩೮ನೇ ಗಡಿಗೆರೆಗೆ ಧಾವಿಸಿ ಬಂದ ತಮ್ಮ ಸೇನೆಯನ್ನು ಸಂಘಟಿಸಿಕೊಳ್ಳುವಷ್ಟೇ ಸಮಯವಲ್ಲದೆ ಅದಕ್ಕಿಂತ ಹೆಚ್ಚು ದಿನ ಜನರಲ್ ಮೆಕಾರ್ಥರರು ಆ ಸಂದರ್ಭದಲ್ಲಿ ತಡೆದು ನಿಲ್ಲಲಿಲ್ಲ. ಸಂ. ರಾ. ಸೇನೆಗಳು ಉತ್ತರ ಕೊರಿಯದ ಕಡೆಗೆ ಮಹಾಪೂರದಂತೆ ಒಂದೇ ಸಮನೆ ಹರಿದು ಹೋದವು. ದಂಡು ಮುಂದೆ ಮುಂದೆ ಸಾಗುತ್ತಾ ಬಂದಂತೆ, ಅತ್ತ ಕಾಯುತ್ತಾ ನಿಂತಿದ್ದ ಚೈನೀ ಕಮ್ಯೂನಿಸ್ಟರು ಸಹಜವಾಗಿ ಕೆರಳಿದರು. ತಾವು ಕೆರಳಿದ್ದೇವೆ ಎಂಬುದನ್ನು ಅವರೇನೂ ಗುಟ್ಟಾಗಿ ಇಡಲಿಲ್ಲ. “ನೀವು ನಮ್ಮತ್ತ ಕಡೆ ನುಗ್ಗಿ ಬರುತ್ತಿರುವಿರಿ; ನಮಗಿನ್ನು ಸುಮ್ಮಗಿರಲು ಸಾಧ್ಯವಿಲ್ಲ” ಎಂಬ ಎಚ್ಚರಿಕೆಯು ಚೈನೀ ಕಮ್ಯೂನಿಸ್ಟರಿಂದ ಸಕಾಲದಲ್ಲಿ ಬಂದಿದ್ದಿತು. ಯಾವ ಯುದ್ಧೋತ್ಸಾಹವೂ ಇಲ್ಲದೆ ಸ್ವರಕ್ಷಣಾಕಾಂಕ್ಷೆ ಮಾತ್ರವಿದ್ದರೂ ಚೈನಕ್ಕೆ ಸುಮ್ಮಗಿರಲಾಗದ ಪರಿಸ್ಥಿತಿಯದು. ಉತ್ತರ ಕೊರಿಯದ ಯಾಲೂ ಹೊಳೆ ವಲಯದ ವಿದ್ಯುತ್ ಕೇಂದ್ರಗಳಿಂದಲೇ ಚೈನದ ಮಂಚೂರಿಯಾ ಕಾರ್ಖಾನೆಗಳಿಗೆ ವಿದ್ಯುತ್ ಸರಬರಾಯಿಯಾಗಬೇಕು. ಯಾಲೂ ವಲಯವು ಅಮೇರಿಕನರ ವಶವಾದರೆ ಚೈನದ ಈ ಸೌಕರ್ಯ ನಿಂತುಹೋಗುವುದು. ಪ್ರತ್ಯಕ್ಷ ಮಂಚೂರಿಯದೊಳಗೇನೇ ಧಾಳಿ ನಡೆಸುವ ದುರುದ್ದೇಶ ಅಮೇರಿಕಾನರದೆಂದು ಕಮ್ಯೂನಿಸ್ಟ್ ಚೈನವಂದಿದೆಯಾದರೂ ಅಂತಹ ಸಾಹಸಕ್ಕೆ ಜನರಲ್ ಮೆಕಾರ್ಥರರು ಒಮ್ಮೆಗೇ ಮನಸ್ಸುಮಾಡುವುದು ಅಸಂಭವವಿದ್ದಿತು. ಆದರೆ ಮಂಚೂರಿಯ ಧಾಳಿಯ ವಿಚಾರ ಭರವಸೆ ಸ್ಪಷ್ಟವಾಗುತ್ತಿದ್ದರೆ ಮೆಕಾರ್ಥರರು ಧಾಳಿಗಗತ್ಯವುಳ್ಳ ಕಾರಣಗಳನ್ನು ನಿರ್ಮಿಸಿ ಕೊಳ್ಳುತ್ತಿದ್ದರೇನೋ! ಕೊರಿಯಾ ಯುದ್ಧದ ಅಂಗವಾಗಿಯೇ ಮಂಚೂರಿಯಾ ಯುದ್ಧವಾಗದಿರುತ್ತಿದ್ದರೂ ಕೂಡಾ ಕಾಲಾನುಗುಣವಾಗಿ ಅಲ್ಲಿ ಅಮೇರಿಕ ಮತ್ತು ಚೈನಗಳೊಳಗೆ ಘರ್ಷಣೆಯೇಳುತ್ತಿತ್ತೆಂಬುದಂತೂ ಖಂಡಿತ. ತಮ್ಮ ಮೈಮೇಲೆ ಬರುತ್ತಿರುವ ಈ ಅಪಾಯವನ್ನು ಪ್ರತ್ಯಕ್ಷ ಕಂಡೂ ಕಮ್ಯೂನಿಸ್ಟ್ ಚೈನವು ಶಾಂತವಾಗಿದ್ದೀತೆಂದು ಅಮೇರಿಕವು ಹೇಗೆ ನಿರೀಕ್ಷಿಸಿತೋ ಅರ್ಥವಾಗುವದಿಲ್ಲ. ನೆಹರುಗಳೇ ಕಡೆಗೆ ಬೆಟ್ಟು ಮಾಡಿ ತೋರಿಸಿದಾಗ “ನೆಹರು ಅನಗತ್ಯವಾಗಿ ಭಯ ಭ್ರಾಂತಿಪಟ್ಟುಕೊಂಡಿದ್ದಾರೆ” ಎಂದು ಹೇಳುವ ಅಮೇರಿಕಾನರಿಗಾವುದು ಆಧಾರವಾಗಿತ್ತೋ ತಿಳಿಯುವದಿಲ್ಲ.

ಪ್ರಚಂಡ ಸೋಲು

ಉತ್ತರ ಕೊರಿಯಕ್ಕೆ ತಾಗಿಕೊಂಡಿರುವ ಚೈನ ಮತ್ತು ರಷ್ಯದ ಗಡಿಗಳನ್ನು ನೋಯಿಸಲಾರೆವೆಂದಷ್ಟೇ ನಮನ ಅಥವಾ ಸಮಾಧಾನ ಹೇಳುತ್ತಾ ಜ|| ಮೆಕಾರ್ಥರರ ಸೇನೆಗಳು ಉತ್ತರ ಕಡೆ ಮುಂಧಾವಿಸುತ್ತಾ ಹೋದವು; ಯಾಲೂ ಹೊಳೆ ವಲಯಕ್ಕೆ ಅವು ಬಂದಾಗಲೇ ಕಮ್ಯೂನಿಸ್ಟ್ ಚೈನದ ಸೇನೆಗಳು ರಂಗಪ್ರವೇಶ ಮಾಡಿದುವು. ಕೊರಿಯಾ ಯುದ್ಧದಲ್ಲಿ ಚೈನೀ ಸೇನೆ ಪ್ರವೇಶಿಸಿದ ಕುರಿತು ಜನರಲ್ ಮೆಕಾರ್ಥರರ ದೂರು ಸಂಯುಕ್ತ ರಾಷ್ಟ್ರ ಸಂಘಕ್ಕೆ ಹೋಯಿತು - ಈ ಕುರಿತು ಹೇಳಿಕೆ ಕೊಡುವರೆ ಕಮ್ಯೂನಿಸ್ಟ್ ಚೈನಕ್ಕಾಮಂತ್ರಣ ಬಂದು ಚೈನದ ಪ್ರತಿನಿಧಿಗಳು ಸಂ. ರಾ. ಸಂಘಕ್ಕೆ ತೆರಳಿದರು. ಅಲ್ಲಿ “ಚೈನವು ಸಂ. ರಾ ಸಂಘದ ವಿರುದ್ಧ ಯುದ್ಧ ಪ್ರವೇಶ ಮಾಡಿದೆ; ಇಂತಹ ಅಪರಾಧಕ್ಕೆ ಶಿಕ್ಷೆಯನುಭವಿಸಲು ಅದು ಬದ್ಧವಿದೆ” ಎಂಬರ್ಥದ ಅಮೇರಿಕದ ಆಕ್ಷೇಪಣೆಯನ್ನನುಸರಿಸಿ ಚರ್ಚೆಗಳು ನಡೆದಿದ್ದಾಗ್ಯೂ, ಇತ್ತ ಕೊರಿಯದಲ್ಲಿ ಕಮ್ಯೂನಿಸ್ಟ್ ಸೇನೆಗಳು ಒಂದೇ ಸಮನೆ ಸಂ. ರಾ. ಸೇನೆಗಳನ್ನು ಸದೆಬಡಿಯುತ್ತಾ ಹಿಂದಕ್ಕಟ್ಟಿದುದಲ್ಲದೆ, ಕೊನೆಯದಾಗಿ ಕೋಟೆಕಟ್ಟಿ ನಿಂತು ನಿರ್ಮೂಲಿಸಿ ಬಿಟ್ಟವೆ. “ಇದೇ ಕ್ರಿಸ್ಮಸ್ ರಜೆಯಲ್ಲಿ ನಿಮ್ಮ ತಲೆಗೆ ವಿಜಯ ಮುಕುಟವೇರಿಸಿ ಬಿಡುತ್ತೇನೆ” ಎಂದು ತನ್ನ ಸೈನಿಕರಿಗೆ ಆಶ್ವಾಸನೆ ಕೊಟ್ಟು ಮೆಕಾರ್ಥರರಾರಂಭಿಸಿದ್ದ ಚಳಿಗಾಲದ ಕೊನೆಯ ಮಹಾಧಾಳಿಯು ಸಂಪೂರ್ಣ ಮುರಿದುಬಿದ್ದಿದೆ. ಸುಮಾರು ಮೂರು ಲಕ್ಷ ಚೈನೀ ಕಮ್ಯೂನಿಸ್ಟ್ ಸೇನೆಗಳು ಕೊರಿಯಾ ರಣರಂಗದಲ್ಲಿ ಹೋರಾಡುತ್ತಿರುವವೆಂದೂ ಅಗತ್ಯಬಿದ್ದರೆ ಅವುಗಳಿಗೆ ಬಂದು ಕೂಡಲು ಮತ್ತೆ 5 ಲಕ್ಷ ಸೇನೆಗಳು ಮಂಚೂರಿಯದಲ್ಲಿ ಸಿದ್ಧವಿರುವವೆಂದೂ, ಒಟ್ಟಿಗೆ ಸಾಧಾರಣ ೮ ಲಕ್ಷ ಚೈನೀ ಸೇನೆಗಳ ಅಜೇಯ ಸಮೂಹದಿದಿರು ಸ. ರಾ. ಸೇನೆಗಳ ಸಂಖ್ಯೆಯು ಮೇರುವಿನಿದಿರು ಮಣ್ಣಗುಪ್ಪೆಯಂತಾಗಿರುವುದು ಮಾತ್ರವಲ್ಲ, ಶಕ್ತಿಸಾಹಸದಲ್ಲೂ ಇವೆರಡು ಬಲಗಳೊಳಗೆ ಅದೇ ರೀತಿಯ ತಾರತಮ್ಯವಿದೆಯೆಂದೂ ತಿಳಿದು ಬಂದಿದೆ. ಕಮ್ಯೂನಿಸ್ಟ್ ಧಾಳಿಯ ಪ್ರಚಂಡತೆ ಮತ್ತು ಚಾತುರ್ಯವು ಯುಕ್ತರಾಷ್ಟ್ರ ಸೇನೆಗಳ ಕಣ್ಣಿಗೆಂತಹ ಕತ್ತಲೆ ಕವಿಯಿಸಿದ್ದಿತೆಂದರೆ, ಹಿಂದಕ್ಕೋಡುವ ಅವಕಾಶವೂ ದೊರೆಕದೆ ಕಮ್ಯೂನಿಸ್ಟ್ ಭೀತಾಳಿನ ಬಲೆಯೊಳಗೆ ಅವು ಸಿಕ್ಕಿಕೊಳ್ಳಬೇಕಾಗಿ ಬಂದಿದ್ದಿತು. ಸುಮಾರು ಒಂದು ಲಕ್ಷದಷ್ಟಿದ್ದ ಅಮೇರಿಕ ಮತ್ತಿತರ ರಾಷ್ಟ್ರದಳದವರು ಕಮ್ಯೂನಿಸ್ಟ್ ಸೇನೆಯ ಸುತ್ತುಬೇಲಿಯೊಳಗಾಗಿ ಹೆಚ್ಚಿನ ಅಂಶ ನಾಶವಾಗಬೇಕಾಗಿ ಬಂದಿದ್ದಿತು. ೩೮ನೇ ಗಡಿಗೆರೆ ದಾಟಿದ ಬೆನ್ನಲ್ಲೇ ಆದಿನ ಸಂ. ರಾ. ಸೇನೆಗಳು ವಶಪಡಿಸಿಕೊಂಡಿದ್ದ ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್ಯಾಂಗನ್ನು ಈಗ ಸಂ. ರಾ. ಸೇನೆಗಳು ಬಿಟ್ಟೋಡಿವೆ- ಅಂತೂ ಕೊರಿಯದ ಪರಿಸ್ಥಿತಿಯು ಅತ್ಯಂತ ನಿರಾಶೆಯದಾಗಿದೆ. ಅಮೇರಿಕದಂತಹ ರಾಷ್ಟ್ರಗಳ ಆಕಾಂಕ್ಷೆ, ನಿರೀಕ್ಷೆಗಳೆಲ್ಲವನ್ನೂ ಗಾಳಿಗೆ ತೂರಿದ, ಮುಂದೇನು? ಎಂಬ ಆತಂಕದ ಪ್ರಶ್ನೆಯೆದ್ದಿದೆ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೋಗ್ಯ ಬೆಲೆಯಲ್ಲಿಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co., Ltd.

H. O. UDIPI (SOUTH INDIA) ESTD: 1935.



Approved from by the Govt. of Mysore Certificated by the Agent of the Govt of Cylone & Indian.

ಆಟಂ ಬೋಂಬು?

ಈ ಸಂದರ್ಭದಲ್ಲಿ ಎಲ್ಲರ ಎದೆಯಾಳ್ದ ವರೆಗೆ ತಲುಪಿರುವ ವಿಷಯವೆಂದರೆ ಕೊರಿಯಾ ಯುದ್ಧದಲ್ಲಿ ಅಮೆರಿಕೆಯು ಆಟಂ ಬೋಂಬು ಹಾಕಬಹುದೆಂದು ಪ್ರಕಟವಾಗಿರುವ ಅಭಿಪ್ರಾಯ. ಅಮೇರಿಕಾಧ್ಯಕ್ಷ ಟ್ರುಮೇನರು ಕೊರಿಯದ ವಿಷಮಾವಸ್ಥೆಯ ದಿನದಲ್ಲೇ ಆತನ ವಿಶದೀಕರಿಸಿದೆ. ಅಮೆರಿಕದ ಈ ಆಟಂಬೋಂಬು ಬೆದರಿಕೆಯು ಕುರಿತು ರಶ್ಯ ಮತ್ತು ಚೈನಾ ಈ ವರೆಗೂ ತುಟಿ ಬಿಚ್ಚದಿರುವುದರಿಂದ ಜಗತ್ತು ಏನೇನನ್ನೋ ಕಲ್ಪಿಸಿಕೊಳ್ಳುವಂತಾಗಿದೆ. ಮುಂದೇನಾಗುವುದೋ ಎಂಬ ಎದೆ ನಡುಕವನ್ನು ಮಾನವ ಜನಾಂಗಕ್ಕೆ ಉಂಟುಮಾಡಿರುವ ವಿಷಯವಿದು.

ಆಟಂಬೋಂಬು ಬೀಳುವುದೆ?

ವಾಡಿಕೆಯ ತನ್ನ ಪತ್ರಿಕಾ ಸಮ್ಮೇಳನದ ಮುಂದೆ ಈ ಕೆಳಗಿನ ಅತ್ಯಂತ ಪರಿಣಾಮಕಾರೀ ಮಾತುಗಳನ್ನಾಡಿದ್ದರು: "ಕೊರಿಯದಲ್ಲಿ ಆಟಂ ಬೊಂಬನ್ನು ಪ್ರಯೋಗಿಸುವ ವಿಷಯ ಸದಾಕಾಲ ಅಮೆರಿಕದ ಪ್ರತ್ಯಕ್ಷ ಪರ್ಯಾಲೋಚನೆಯಲ್ಲಿದೆ. ಅದರ ಪ್ರಯೋಗವಾಗಬೇಕೋ ಎಂಬುದು ರಣರಂಗದಲ್ಲಿರುವ ಅಮೆರಿಕದ ಸೇನಾನಾಯಕರ ಪಾಲಿನದಾಗಿರುವ ಸಂಗತಿ. ಅದನ್ನು ಉಪಯೋಗಕ್ಕೆ ಹಚ್ಚುವಂತಾಗಲಾರದೆಂದು ವ್ಯಕ್ತಿಶಃ ನಾನು ಆಶಿಸುತ್ತೇನೆ. ಅಮೆರಿಕದ ಸೇನಾ ಆಯುಧಗಳಲ್ಲಿ ಅದೂ ಒಂದಾಗಿರುವುದರಿಂದ ಅದರ ಪ್ರಯೋಗಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಅನುಮತಿ ಬೇಕೆಂದಿಲ್ಲ. ಅಮೇರಿಕಕ್ಕೆ ಅದರ ಪ್ರಯೋಗ ಸ್ವಾತಂತ್ರ್ಯವಿದೆ. ಕೊರಿಯದ ಆಕ್ರಮಣವು ಜಯಶಾಲಿಯಾದರೆ, ಅದು ಯುರೋಪು ಮತ್ತು ಆಸ್ಯಾದ ಮೂಲಕ ನಮ್ಮೀ ಭೂಖಂಡಕ್ಕೂ ವ್ಯಾಪಿಸಿಕೊಳ್ಳುವದೆಂದು ನಾವು ನಿರೀಕ್ಷಿಸಬೇಕು. ಯುರೋಪಿಗೆ ಒಂದು ಮುಖ್ಯ ಸೇನಾಧಿಪತ್ಯವನ್ನು ಕೂಡಲೇ ರಚಿಸಿಕೊಳ್ಳಬೇಕು." ಅಧ್ಯಕ್ಷ ಟ್ರುಮೇನರ ಈ ಹೇಳಿಕೆಯು ಆಟಂ ಬೋಂಬಿನ ಪೂರ್ವಭಾವಿ ಆಟಂ ಬೋಂಬಾಗಿ ರಾಜಕೀಯ ರಂಗದಲ್ಲಿ ಮಹಾ ಕೋಲಾಹಲವನ್ನೆಬ್ಬಿಸಿದೆ. ಈ ಕುರಿತು ಟ್ರುಮೇನರು ಆ ಮೇಲೆ ಕೊಟ್ಟ ಸ್ಪಷ್ಟೀಕರಣವಾದರೂ ಆಟಂ ಬೋಂಬು ಪ್ರಯೋಗದ ಭೀತಿಯನ್ನು ನಿವಾರಿಸುವಂತಿರಲಿಲ್ಲ. ಅಮೆರಿಕದ ಬತ್ತಳಿಕೆಯೊಳಗಿನ ಒಂದು ಬಾಣವಾಗಿರುವ ಆಟಂ ಬೋಂಬನ್ನು ಯಾರನ್ನೂ ಕೇಳದೇನೇ ಅಮೆರಿಕವು ಸ್ವೇಚ್ಛೆಯಿಂದ ಪ್ರಯೋಗಿಸಬಲ್ಲದು. ಅದನ್ನು ಪ್ರಯೋಗಿಸುವ ಅವಶ್ಯಕತೆಯಿದೆಯೆ? ಹಾಕುವದಾದರೆ ಎಲ್ಲಿ ಮತ್ತು ಹೇಗೆ? ಎಂಬುದು ರಣರಂಗದಲ್ಲಿದ್ದು ವಿಶ್ವಯುದ್ಧೋಪಕರಣಗಳ ಪ್ರಯೋಗಾಧಿಕಾರ ಪಡೆದಿರುವ ಅಮೆರಿಕದ ಸೇನಾನಿಗಳಿಗೇನೇ—ಅಂದರೆ ಜನರಲ್ ಮೆಕಾರ್ಥರರಿಗೇನೇ—ಮೀಸಲಿರುವ ವಿಷಯ. ಆದರೆ ಆಟಂ ಬೋಂಬು ಪ್ರಯೋಗಕ್ಕೆ ಕಾನೂನು ಮೂಲಕ ಪರವಾನಗಿ ದೊರೆಯಬೇಕಾಗಿದೆ; ಅಂತಹ ಅನುಮತಿಯನ್ನು ಈ ವರೆಗೆ ಕೊಟ್ಟಿಲ್ಲವೆಂದು ಟ್ರುಮೇನರು ಸ್ಪಷ್ಟಪಡಿಸಿದ್ದಾರೆ. ಮೂರನೇ ಲೋಕಯುದ್ಧವೆನ್ನುವಾಗ ಸಹಜವಾಗಿ ಮನುಷ್ಯ ಬೆದರಬೇಕಾಗಿದ್ದರೆ, ಅದು ಆಟಂ ಬೋಂಬುಳ್ಳದ್ದಾಗುವದೆಂಬುದರಿಂದ ಮತ್ತೂ ಪಾಲು ಭೀತಿ ವ್ಯಾಪಿಸಿಕೊಂಡಿದೆ. ಈಗಲಂತೂ ಕೊರಿಯಾ ಯುದ್ಧದಲ್ಲೇ ಆಟಂ ಪ್ರಯೋಗವಾಗುವ ಸಂಭವವುಂಟೆಂದಾದೊಡನೆ ಲೋಕದ ಭಯ ಮತ್ತು

ಆಟ್ಲಿ—ಟ್ರುಮನ್ ಭೇಟಿ

ಕೊರಿಯಾ ಯುದ್ಧದೊಳಗೆ ಪ್ರವೇಶಿಸಿದ ಚೈನವನ್ನು ಅಪರಾಧಿಯಾಗಿ ಗಣಿಸಬೇಕೆಂಬ ಅಮೆರಿಕದ ಸೂಚನೆಯನ್ನು ಭದ್ರತಾ ಕೌನ್ಸಿಲಿನಲ್ಲಿ ತನ್ನ ವಿಶೇಷ ಮತಾಧಿಕಾರ ಪ್ರಯೋಗಿಸಿ ರಶ್ಯವು ಹುಸಿಗೊಳಿಸಿದೆ. ಸಂ. ರಾ. ಸಂಘಕ್ಕೇನೇ ವಿರೋಧಿಯಾಗಿ ವರ್ತಿಸಿ ಕಮ್ಯೂನಿಸ್ಟ ಚೈನವು ತನ್ನೀ ಅಪರಾಧಕ್ಕೆ ಶಿಕ್ಷೆಯನ್ನನುಭವಿಸುವ ಸ್ಥಾನದಲ್ಲಿದೆ, ಎಂದು ಅಮೆರಿಕವು ಚೈನದ ಮೇಲೆ—ಚೈನವನ್ನು ಪದೆಬಡಿಯುವ ದುರುದ್ದೇಶ ಸಾಧನೆಗೆ ಅಮೆರಿಕವು ತೊಡಗಿದೆ, ಎಂದು ರಶ್ಯ ಚೈನಗಳು ಅಮೆರಿಕದ ಮೇಲೆ—ರಶ್ಯವು ಕೊರಿಯದಲ್ಲಿ ಆಕ್ರಮಣಗಾರರಿಗೆ ಸಹಾಯ ಸಲ್ಲಿಸಲು ಬಗೆದಿದೆ ಎಂದು ಅಮೆರಿಕವು ರಶ್ಯದ ಮೇಲೆ—ಹೂಡಿದ್ದ ಆಪಾದನೆಗಳು ಸಂ. ರಾ. ಸಂಘ ಕ್ಷೇತ್ರದಲ್ಲಿ ಅಸ್ತ್ರ, ಪ್ರತ್ಯಸ್ತ್ರಗಳಂತೆ ಸುತ್ತುತ್ತಿವೆ. ಆದರೆ ಇವೆಲ್ಲಾ ವಹಿವಾಟುಗಳನ್ನು ಅಡಿಗೆ ಹಾಕಿ, ಮೇಲೆದ್ದು ನಿಂತು, ಪ್ರಪಂಚವನ್ನು ತೀಕ್ಷ್ಣವಾಗಿ ತಿವಿದು ನೋಡುತ್ತಿರುವ ಪ್ರಶ್ನೆಗಳೆಂದರೆ ಆಟಂಬೋಂಬು ಪ್ರಯೋಗ ಮತ್ತು ತೃತೀಯ ಮಹಾಯುದ್ಧ ಸಂಭವ. ಆಟಂ ಬೋಂಬು ಸಂಬಂಧದ ಟ್ರುಮೇನರ ಹೇಳಿಕೆ ಕೇಳಿದೊಡನೆಯೇ ಬ್ರಿಟನಿನ ಪ್ರಧಾನ ಮಂತ್ರಿ ಮಿ. ಆಟ್ಲೆಯವರು ಈ ವಿಷಯ ವಿದ್ಯಮಾನವನ್ನು ಲಕ್ಷಿಸಿ, ಅತಿ ವಿಶೇಷ ಮತ್ತು ಅತ್ಯವಸರದ ಪರ್ಯಾಲೋಚನೆಗಾಗಿ ಸ್ವತಃ ಟ್ರುಮೇನರ ಭೇಟಿಗೆ ಕಳೆದ ತಾ. ೪ರಲ್ಲಿ ವಾಷಿಂಗ್ಟನ್ನಿಗೆ ಹೊರಟಾಗಿದೆ. ತಾ. ೪ರಲ್ಲಿ ಆಟ್ಲೆ ಟ್ರುಮೇನ್ ಮಾತುಕತೆಗಳಾರಂಭಿಸಿದುವೆಂದು ತಿಳಿದುಬಂದಿದೆ. ಭಾರತದ ಪ್ರಧಾನಿ, ಕೆನಡಾದ ಪ್ರಧಾನಿಗಳನ್ನೂ ಈ ಸಮ್ಮೇಳನಕ್ಕೆ ಆಮಂತ್ರಿಸಿಕೊಳ್ಳಲಾಗುವದೆಂಬ ವದಂತಿಯಿದ್ದರೂ ಅದು ಸುಳ್ಳೆಂದು ನಂಬಲಾಗಿದೆ. ಕಾಮನ್‌ವೆಲ್ತ ರಾಷ್ಟ್ರಗಳಿಗೆ ಈ ಸಮ್ಮೇಳನದ ವಿವರಗಳನ್ನು ತಿಳಿಸುತ್ತ ಹೋಗುವರೆಂಬುದೊಂದು ಸತ್ಯ. ಕೊರಿಯಾ ಮತ್ತು ಚೈನದಂತಹ ಪೌರ್ವಾತ್ಯ ರಾಷ್ಟ್ರಗಳ ಸಂಬಂಧದ ಈ ಬಿಕ್ಕಟ್ಟು ಮಧ್ಯಸ್ಥಿಕೆಯಿಂದ ತೀರ್ಮಾನ ಹೊಂದಲು ಸಾಧ್ಯವಿದ್ದರೆ, ಅಂತಹ ಮಧ್ಯಸ್ಥಿಕೆಗೆ ಹೇಳಿಸಿದ ಜನ ಜವಾಹಿರಲಾಲ ನೆಹರುಗಳೆಂಬುವದರಿಂದ ಟ್ರುಮೇನರ ದೃಷ್ಟಿ ಈ ಪಟ್ಟಿಗೆ ಭಾರತದ ಮೇಲಿದೆ, ಎಂದು ಅಮೆರಿಕದ ಸೆನೆಟರರೊಬ್ಬರು ಬಹಿರಂಗ ಪಡಿಸಿದ್ದಾರೆ. ನಿಜಕ್ಕೂ ಅಮೆರಿಕದ ಉಗ್ರಾವತಾರವನ್ನು ಶಕ್ಯವಿದ್ದಷ್ಟು ಶಾಂತಗೊಳಿಸಲು ಹೋಗಿರುವ ಮಿ. ಆಟ್ಲಿಗ

(೭ನೆಯ ಪುಟ ನೋಡಿರಿ)

THE MAHATMA GANDHI MEMORIAL COLLEGE TRUST
UDIPI, S. K.

Sealed tenders will be received by the undersigned up to 4 P. M. on 20-12-1950 for the work of constructing college buildings for the Mahatma Gandhi Memorial College at Sagri, Udipi, South Kanara.

Rates may be quoted for the following items of work:-

Approximate Quantity	Particulars of work	Rate
	Earth work excavation in hard gravelly soil	
27,099 C Ft per 100 C. Ft,	Coarsed Rubble second sort in cement mortar 1:8 in foundation and basement.	
473 C. Ft. per 100 C Ft.	Coarsed Rubble 1st sort in cement mortar 1:4	
48743 C. Ft. per 100 C. Ft.	Laterite dressed stone in cement mortar 1:6	
1526 C. Ft. per 100 C. Ft.	Brick in cement mortar 1:4	
3356 C. Ft. per 1 C. Ft.	Reinforced concrete work.	
35919 sq. Ft. per 100 Sq. Ft.	Roofing with Mangalore tiles over Bhogi reepers 1½ X 1½ including chunam border etc. complete.	
1148 Rft. per R ft.	Setting ridges and valley in lime mortar 1:2.	
49068 S Ft. per Sq ft.	Plastering with lime mortar 2 coats ½" thick and whitewashing 2 coats.	
987 Sq. ft. per 100 Sq. ft	Plastering with cement mortar 1:3 (½" thick.)	
23181 Sq ft. per 100 Sq. ft.	Flooring with concrete in laterite metal in cement mortar 3" thick 1:4:8 and plastering over with cement mortar ½" thick 1:4 and thread lined.	
3875 Sq ft. per 100 Sq ft.	Pointing with cement mortar 1:3	
11796 Sq. ft. per 100 Sq ft.	Painting with greay paint 2 coats for doors and windows	
3017 cft. per C. ft.	Countrywood wrought and put up.	
1896 Sq ft. per Sq. ft.	Countrywood doors with pannelled shutters and overhead ventilators inclusive of holdfast wind appliances furniture etc. complete.	
1900 Sq ft. per Sq. ft.	Countrywood windows with pannelled shutters inclusive of holdfasts furniture, etc., complete.	
920 S. ft. per S ft.	Countrywood ventilators over doors and windows.	
	Providing glazed shutters for windows.	

Cement and iron will be supplied departmentally and actual cost recoverd from the bills

A deposit of Rs 2,500/- should be made at the time of tendering and after acceptance of the tender another Rs. 2,500/- should be deposited as earnest money for the due fulfillment of the contract The earnest money deposit of the unsuccessful tender will be returned immediately after the tenders are settled.

The work should be commenced within a fortnight after executing a proper agreement with the undersigned.

The work should be upto the standard of the M.D.S.S. and shouldbe half-completed by February, 1951 andfully completed by the end of April 1951.

Tenders will be opened in the presence of the tenderers on 20-12 1950 at 5 P. M. or on any subsepuent dateby the under signed.

The undersigned reserves the right to reject any or all the tenders without assigning any reason for so doing.

Tenders made will not be allowed to be withdrawn or altered

Every tenderer is expected before quoting his rates to inspect the site of the proposed work and also the quarries for materials.

In every case the material should comply with the Madras Detailed Standard Specifications of the P. W. D.

Dr. T. M. A. Pai,
Correspondent & Treasurer.

We accept
Deposits at the following rates:

Current	....	½%
Savings Bank	....	2 %
Short-Term	....	1½%
Fixed – 3 months	....	1 %
6 „	....	2 %
12 „	....	2½%
24 „	....	3 %

THE
Canara Banking Corporation Ltd.
(Incorporated in India)
Estd: 1906.
Head Office : UDIPI, (S. I)

ನವಯುಗ

ಗುರುವಾರ, ಉಡುಪಿ, ೭-೧೨-೫೦

ಆಟಂ ಬೋಂಬು?!

ಕೊರಿಯ ಯುದ್ಧದಲ್ಲಿ ತಮಗೆ ಆಗುತ್ತಿರುವ ಪ್ರಬಲ ಪರಾಭವದ ದೆಸೆಯಿಂದ ಆಟಂ ಬೋಂಬು ಪ್ರಯೋಗಕ್ಕೆ ಮನಸ್ಸು ಕೊಡುವಷ್ಟೂ ಅಮೇರಿಕದ ತಲೆ ಹಾಳಾಗಿದೆ, ಎಂಬ ವರ್ತಮಾನ ವಾಕ್ಯದಿಂದ ಅಮೇರಿಕದ ಧೋರಣೆಯ ಕಡೆಗೆ ಶಾಂತಿ ಪ್ರೇಮಿಗಳೆಲ್ಲರೂ ಎಂತಹ ಜಿಗುಪ್ಸೆ ತಾಳಿರುವರೆಂಬುದು ಈ ಅನಾಹುತ ಚಿಂತನೆ ಮಾಡುತ್ತಿರುವವರ ಗೋಚರಕ್ಕೆ ಬಂದಿರಲಾರದು. "ಪ್ರಳಯ ಚೆಂಡನ್ನು ಪ್ರಯೋಗಿಸುವುದು ಪ್ರಪಂಚದ ಹಿತಕ್ಕಾಗಿ" ಎಂದು ಹೇಳಿಯೂ ವಂಚಿಸಲಾಗುವಷ್ಟು ಲಘುತ್ವವು ಈ ಕಾಲದ ಜನಮತದಲ್ಲಿಲ್ಲ. ಕೊರಿಯಾದಂತಹ ಸ್ಥಳೀಯ ಸಮರದಲ್ಲೂ ಪ್ರಯೋಗಿಸುವ ಯೋಚನೆ ಮಾಡುವಷ್ಟು ಆಟಂ ಬೋಂಬು ಸುಲಭಸಾಧ್ಯವೆ? ಕಳೆದ ಮಹಾಯುದ್ಧಾಂತ್ಯ ಭಾಗದಲ್ಲಿ ಜಪಾನಿನ ಮೇಲೆ ಅದನ್ನು ಪ್ರಯೋಗಿಸಿದ ಅಮೇರಿಕದ ವರ್ತನೆಯು ಸಾಕಷ್ಟು ನಿಷೇಧಿಸಲ್ಪಟ್ಟಿಲ್ಲವೆಂಬುದನ್ನು ಒಪ್ಪಬೇಕು, ಅಂತಹ ಮಹಾ ಅನ್ಯಾಯವನ್ನು ಲೋಕಮತವು ಕ್ಷಮಿಸಿದುದು ನಿಜಕ್ಕೂ ಶೋಚನೀಯ. ಆದರೆ ಅದು ಲೋಕಯುದ್ಧ. ಪೂರ್ವ ಸೂಚನೆಯೇನೂ ಇರದೆ ಅಲ್ಲಿ ಆಟಂ ಬೋಂಬಿನ ಪ್ರಯೋಗವಾಗಿದ್ದಿತು. ಅದರೊಂದಿಗೆ ಲೋಕ ಕಂಟಕ ಮಹಾ ಯುದ್ಧವು ಮುಗಿದು ಹೋದ ಸಂತೋಷವು ಈ ಬೋಂಬು ಪ್ರಯೋಗದ ದುಃಖವನ್ನು ಮರೆಮಾಡಿದ್ದಿತು. ಆದರೆ ಕೊರಿಯ ಯುದ್ಧವು ಅಂತಹದಲ್ಲ. ಅದು ದಕ್ಷಿಣೋತ್ತರ ಕೊರಿಯಗಳ ನಡುವೆ ಆರಂಭಿಸಿದ್ದ ಪಾಲುಗಾರರೊಳಗಿನ ಕಲಹ. ನ್ಯಾಯ ಪಕ್ಷಪಾತಿಯೆಂಬ ಬಿಲ್ಲೆ ಹಚ್ಚಿಕೊಂಡು ಸಂ. ರಾ. ಸಂಘವು ಅದರಲ್ಲಿ ಪ್ರವೇಶಿಸಿರುವುದಾದರೂ ಅದು ಕೊರಿಯಾ ಯುದ್ಧ ಹೊರತು ಜಾಗತಿಕ ಯುದ್ಧವಲ್ಲ. ಲೋಕದ ಪ್ರಮುಖ ಪ್ರಶ್ನೆಗಳು ಅದರೊಳಗೆ ಸೇರಿಹೋಗಿಲ್ಲ; ಲೋಕದ ಎಲ್ಲಾ ರಾಷ್ಟ್ರಗಳು ಅದರಲ್ಲಿ ಭಾಗಿಗಳಾಗಿಲ್ಲ. ರಶ್ಯವೆಂತೂ ದೂರವಿದೆ, ಕಮ್ಯೂನಿಸ್ಟ್ ಚೈನ ಕೂಡಾ ಕಮ್ಯೂನಿಸ್ಟ್ ಕೊರಿಯದ ಜತೆಗೂಡಿ ಬಹಿರಂಗ ಯುದ್ಧ ಪ್ರವೇಶ ಮಾಡಿಲ್ಲ. ತನ್ನ ಸಲಕರಣೆಗಳಿಗೆ ಧಕ್ಕೆಯೊಡ್ಡುವಂತೆ ತನ್ನ ಗಡಿಗೆ ಸಂ. ರಾ. ಸೇನೆಗಳು ಬಂದುವೆಂದಾಗ ಮೇಲೆ ಸ್ವಸಂರಕ್ಷಣಾದೃಷ್ಟಿಯಿಂದ ಚೈನವು ಅಲ್ಲಿಗೆ ಸೇನೆ ಕಳುಹಿಸಬಹುದು. ಚೈನಕ್ಕೊದಗಿರುವ ಅಪಾಯವನ್ನು ಗುರುತಿಸಿ ಚೈನೀ ನಾಗರಿಕರು ಸ್ವಯಂ ಪ್ರೇರಣೆಯಿಂದ ಸ್ವಸಂರಕ್ಷಣೆಗೆ ನಡು ಬಗಿದರೆಂದೇ ಕಮ್ಯೂನಿಸ್ಟ್ ಚೈನಾ ಸರಕಾರವನ್ನುತ್ತಿದೆ. ಇದು ಸತ್ಯವಲ್ಲವೆಂಬುದು ನಿಜವಾದರೂ, ತಾನು ಸೇನೆ ಕಳುಹಿಸಿ ಯುದ್ಧಭಾಗಿಯೆನ್ನಿಸಿಕೊಳ್ಳಬಾರದೆಂಬಷ್ಟು ಸಮರ ಭೀತಿ ಅಥವಾ ಅಪವಾದ ಭೀತಿಯಾದರೂ ಚೈನಕ್ಕಿದೆ. ಉತ್ತರ ಕೊರಿಯವನ್ನು ಪ್ರತಿಭಟಿಸುವವರು ತಾವೆಂದೂ ಅಮೇರಿಕ ಮತ್ತಿತರ ರಾಷ್ಟ್ರಗಳು ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತಿರುವಂತೆ, ಉತ್ತರ ಕೊರಿಯದೊಡನೆ ಸಹಕರಿಸುವವರು ತಾವೆಂದು ಕಮ್ಯೂನಿಸ್ಟ್ ಚೈನವೇನೂ ಅಭಿಮಾನದಿಂದ ಹೇಳಿಕೊಳ್ಳುತ್ತಿಲ್ಲ. ಉತ್ತರ ಕೊರಿಯವನ್ನು ಅಪರಾಧಿಯೆಂದು ತೀರ್ಮಾನಿಸಿರುವ ಸಂಯುಕ್ತ ರಾಷ್ಟ್ರಸಂಘದ ಕಡೆಗೆ ಇಷ್ಟಾದರೂ ಗೌರವ ಬುದ್ಧಿ ಚೈನಕ್ಕಿದೆ. ಇಂತಹ ವಾತಾವರಣದಲ್ಲಿ ಯಾರ ಮೇಲೆ ಎಂತಹ ದ್ವೇಷಾಸೂಯೆಯಿದ್ದರೂ ಪ್ರತ್ಯಕ್ಷ ವೈರಿಯೆಂದು ಸಂ. ರಾ. ಸಂಘವು ಕಂಠೋಕ್ತವಾಗಿ ಸಾರಲು ಸಾಧ್ಯವಿರುವುದು ಉತ್ತರ ಕೊರಿಯವನ್ನು ಮಾತ್ರ. ಇಷ್ಟು ಸಣ್ಣ ವೈರತ್ವದ ಸಾಧನೆಗಾಗಿ—ಇಂತಹ ಸ್ಥಳೀಯ ಯುದ್ಧದಲ್ಲಿ—ಆಟಂ ಬೋಂಬಿನ ಸ್ಮರಣೆ ಬಂದ ಅಮೇರಿಕದ ಹೃದಯವೆಷ್ಟು ಕಲುಷಿತವಿರಬೇಕು! ಮಾನುಷತ್ವದ ಮಾತು ಹಾಗಿರಲಿ; ಸಂ. ರಾ. ಸಂಘದ ಕೆಲವು ರಾಷ್ಟ್ರಗಳ ಸೇನೆಗಳನ್ನು ಕಟ್ಟಿಕೊಂಡು ಉತ್ತರ ಕೊರಿಯದಂತಹ ಸಣ್ಣ ರಾಷ್ಟ್ರದ ಮೇಲೆ ಬಿದ್ದು ಕೈ ಸಾಗದೆ, ಆಟಂ ಬೋಂಬು ಧ್ಯಾನದ ದೌರ್ಬಲ್ಯವನ್ನು ತೋರಿಸಲು ಅಮೇರಿಕಕ್ಕೆ ನಾಚಿಕೆಯಾಗುವುದಿಲ್ಲವೆ? ತನಗಿಂತ ದುರ್ಬಲನಾದವನೊಡನೆ ಕುಸ್ತಿ ಹಿಡಿದಿದ್ದರೂ ಉರುಳಿಸಲಾರದೆ ಅಡಿಗೆ ಬಿದ್ದು, ಅಲ್ಲಿಂದಲೇ ಚೂರಿಯಿಂದ ತಿವಿಯಲು ಮನಸ್ಸು ಮಾಡುವವನೂ ಒಬ್ಬ ಜಟ್ಟಿಯೇ? ಕೊಲೆ ಗಡುಕನಲ್ಲವೆ? ಅಮೇರಿಕವಾದರೋ ತಾನೇ 'ಜಗಜಟ್ಟಿ' ಯೆನ್ನುತ್ತಿದೆ. ಆಟಂ ಬೋಂಬಿನ ಚಿಂತನೆ ಮಾಡಿರುವ ಅಮೇರಿಕವು ಮಾನುಷತ್ವ, ಪೌರುಷ, ಇವೆರಡರ ದೃಷ್ಟಿಯಿಂದಲೂ ತೀರಾ ಕೆಳಕೆಯ ಸ್ಥಾನಕ್ಕಿಳಿದಿದೆ.

ಪ್ರತಿಷ್ಠೆಯೊಂದೇ ಲೋಕದ ಸರ್ವಸ್ವವೆಂಬಷ್ಟು ಅಹಂಭಾವ ಅಮೇರಿಕದ್ದೆಂಬುದಕ್ಕೆ ಇದೊಂದು ಒಳ್ಳೇ ನಿದರ್ಶನ. ಕಮ್ಯೂನಿಸ್ಟ್ ಚೈನವು ಸ್ವರಕ್ಷಣಾದೃಷ್ಟಿಯಿಂದ ತನ್ನ ಸೇನೆಗಳನ್ನು ಅಲ್ಲಿ ರಂಗಕ್ಕಿಳಿಸಿತು; ತನ್ನ ಇರಸ್ತಿಕೆ, ಸೌಕರ್ಯಗಳೆಡೆಗೆ ಕತ್ತರಿ ಹಾಕಿಕೊಂಡೇ ಸಂ. ರಾ. ಸೇನೆಗಳು ತನ್ನನ್ನು ಸಮೀಪಿಸುತ್ತಿವೆ. ಎಂದು ಚೈನಾ ಬೆದರಲು ಕಾರಣಗಳಿವೆ. ಉತ್ತರಕೊರಿಯದ ಮೇಲಲ್ಲದೆ, ಚೈನದೊಡನೇನೂ ಯುದ್ಧ ಹೂಡಿರದ ಸಂ. ರಾ. ಸಂಘಕ್ಕೆ ಚೈನದ ಈ ಸಾಧಾರ ಸಂದೇಹವನ್ನು ನಿವಾರಿಸಲು ಸಾಧ್ಯವಿದ್ದಿತು. ಚೈನದ ಗಡಿಯೊತ್ತಿನ ಕೊರಿಯದ ಪ್ರದೇಶವನ್ನು ಸೇನಾ ಸ್ಪರ್ಶವಿಲ್ಲದ ಶಾಂತ ನಡು ಪ್ರದೇಶವಾಗಿ ಅವಮಾನತರಿಸಿ ಕೊಳ್ಳುವ ವ್ಯವಸ್ಥೆ ಮಾಡಬಹುದಿದ್ದಿತು. ಈ ವಿಧಾನಕ್ಕೆ ಬ್ರಿಟನ್ ಮತ್ತು ಫ್ರಾನ್ಸುಗಳು ಸಮ್ಮತಿಸಿರುವವಾದರೂ ಅಮೇರಿಕವು ಒಪ್ಪಿಲ್ಲವೆಂದು ತಿಳಿದು ಬಂದಿದೆ. ಅಂದ ಮೇಲೆ ಶಾಂತ ವಿಧಾನವು ಇದ್ದರೂ ಚೈನದ ಮೇಲಿನ ವೈರಸಾಧನೆ ಮತ್ತು ಸ್ವಪ್ರತಿಷ್ಠೆಗಾಗಿಯೇ ಅಮೇರಿಕವೀರೀತಿ ದುಡುಕುತ್ತಿದೆ ಎಂಬುದು ಸ್ಪಷ್ಟ. ಹೀಗೆ ವೈಮೇಲೇರಿ ಬರುವ ದೊಡ್ಡವನನ್ನು ಬಲಶಾಲಿ ಇದಿರುವಾದಿಯು ಹಿಂದೂಡಿಬಿಟ್ಟಾಗ ದೊಡ್ಡವನಿಗೆ ಆ ಅಲ್ಪಾಪಮಾನವೂ ಮಹತ್ತಾಗುವದಿದೆ; ಅದಷ್ಟೇ ದೊಡ್ಡದೆನ್ನಿಸಿದರೂ ಅಮೇರಿಕದ ಈ ದುರಭಿಮಾನದ ರಕ್ಷಣೆಗಾಗಿ ಆಟಂ ಬೋಂಬು ಪ್ರಯೋಗಿಸುವುದನ್ನು ಲೋಕವೆಂದಿಗೂ ಕ್ಷಮಿಸುವಂತಿಲ್ಲ. ಮೇಲಾಗಿ, ಅಮೇರಿಕದ ಆಟಂ ಬೋಂಬಿಗೆ ಏಶ್ಯಾದ ರಾಷ್ಟ್ರಗಳೇ ಗುರಿಯಾಗಿರುವುದೇಕೆ, ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತಿದೆ. ಕಳೆದ ಮಹಾಯುದ್ಧದಲ್ಲಿ ಮಿತ್ರಪಕ್ಷಗಳು ಹಿಟ್ಲರನ ಕಾಲಡಿಯಲ್ಲಿ ಜಜ್ಜಲ್ಪಡುತ್ತಿದ್ದಾಗ ಕೂಡಾ ಜರ್ಮನಿಯ ಮೇಲೆ ಆಟಂ ಬೋಂಬು ಎಸೆದುದಿಲ್ಲ; ಆದರೆ ಜಪಾನ್ ಸೋಲುತ್ತಾ ಬಂದ, ತನ್ನಂತೆ ಮುಕ್ತಾಯವಾಗುತ್ತಿರುವ ಯುದ್ಧವನ್ನು ಥಟ್ಟನೇ ನಿಲ್ಲಿಸಿಬಿಡುವದಕ್ಕಾಗಿ ಜಪಾನಿನ ಎರಡು ನಗರಗಳ ಮೇಲೆ ಎರಡು ಆಟಂ ಬೋಂಬುಗಳನ್ನು ಹಾಕಿ ಅಲ್ಲಿಯ ಪ್ರಳಯವನ್ನು ಕಣ್ಣು ತುಂಬಾ ನೋಡಿದ್ದಾಯಿತು; ಲಕ್ಷಾವಧಿ ನಿರ್ದೋಷಿ ಜಪಾನ್ ಜನರು ಅದರ ದುಷ್ಪರಿಣಾಮಗಳನ್ನು ಹಲವು ವರುಷಗಳ ವರೆಗೂ ಅನುಭವಿಸುವಂತೆ ಮಾಡಿ ಆಯಿತು. ಇಲ್ಲಿ ಯುದ್ಧ ವಿಜಯ ಸಾಧನೆಗಿಂತಲೂ ಆಟಂ ಬೋಂಬು ಪ್ರಯೋಗದ ಅನುಭವ ದೊರಕಿಸಿಕೊಳ್ಳುವುದೇ ಅಮೇರಿಕದ ಮುಖ್ಯ ಗುರಿಯಾಗಿತ್ತೆಂಬುದನ್ನು ಮರೆಯಬಾರದು. ಇಂತಹ ಅನುಭವ ಸಂಪಾದನೆಯು ಲಕ್ಷಾವಧಿ ಮನುಷ್ಯ ಪ್ರಾಣಗಳ ನಾಶದ ಮೂಲಕವೇ ಆಗಬೇಕಾಗಿರುವಾಗ ಏಶ್ಯಾದ ಕರಿ ಜನರೇ ಈ ಪ್ರಯೋಗಾಹುತಿಯಾಗಬಲ್ಲ ಜಂತುಗಳೆಂದೇ ಜಪಾನನ್ನು ಆರಿಸಿಕೊಂಡುದಲ್ಲವೇ? ಈಗ ಮತ್ತೊಂದು ಏಶ್ಯಾ ರಾಷ್ಟ್ರ ಕೊರಿಯದ ಮೇಲೆ ಕಣ್ಣು ಬಿದ್ದಿದೆ. ಇಂತಹ ಬುದ್ಧಿಯು ಅಮೇರಿಕಕ್ಕೆ ಎಂದಿಗೂ ಹಿತಕರವಾಗದು. ಆಟಂ ಬೋಂಬನ್ನೆಸೆಯುವುದಾದರೆ, ಚೈನದ ಮಂಚೂರಿಯವನ್ನೇ ಗುರಿಯಾಗಿ ಆರಿಸುವುದೂ ಸಂಭವನೀಯ. ಎಲ್ಲಿಯೇ ಇರಲಿ, ಆಟಂ ಬೋಂಬಿನೊಂದಿಗೇನೇ ತೃತೀಯ ಜಾಗತಿಕ ಯುದ್ಧವೂ ಸ್ಫೋಟಗೊಳ್ಳುವುದು; ಲೋಕ ಪ್ರಳಯದ ದುರ್ಮುಹೂರ್ತವೇ ಆದಾಗುವುದು. ಭಂಡವಾಳಶಾಹೀ ರಾಷ್ಟ್ರ ಅಮೇರಿಕದ ಹುಸಿ ಗೌರವ ಪಾಲನೆಗಾಗಿ ಪ್ರಪಂಚವಿಂತಹ ಅನಾಹುತಕ್ಕೀಡಾಗಬೇಕೆ? ಲೋಕವೀ ಕಡೆಗೆ ಕಣ್ಣು ತೆರೆಯಬೇಕಾದುದು ಅಗತ್ಯ.

ಅರವಿಂದ ಘೋಷ್ ವಿಯೋಗ

ಆಧುನಿಕ ಮಹರ್ಷಿ— ಅದ್ವಿತೀಯ ಆಧ್ಯಾತ್ಮವಾದಿ — ಅರವಿಂದ ಘೋಷರು ಪಾಂಡಿಚೆರಿಯ ಆಶ್ರಮದಲ್ಲಿ ವಿಧಿವಶವಾದರೆಂದು ಈಗ ತಾನೆ ತಿಳಿದುಬಂದಿದೆ. ಅರವಿಂದ ಘೋಷ್ ತನ್ನ ಜೀವನದ ಆದಿಭಾಗದಲ್ಲಿ ಭಾರತ ಸ್ವಾತಂತ್ರ್ಯ ಸಾಧನೆಯ ಉಜ್ವಲ ಕ್ರಾಂತಿಕಾರನಾಗಿದ್ದವರು. ಆ ಮೇಲೆ ಪಾಂಡಿಚೆರಿಗೆ ಹೋಗಿ ಆಶ್ರಮವಾಸಿಯಾಗಿ ನೆಲಸಿ, ತನ್ನ ತಪೋಬಲದಿಂದ ಮಾನವೀಯತೆಯ ಅಂತಗಳನ್ನು ಜೀರ್ಣಿಸಿಕೊಂಡು, ದೈವಿಕತೆಯನ್ನು ತುಂಬಿಸಿಕೊಂಡವರು- ಲೌಕಿಕ ಅಂಧಕಾರದಲ್ಲಿ ಒಂದು ಬೆಳಕಾಗಿದ್ದವರು— ಮಾಯವಾದರು!

ದಿವಂಗತ
ಎಂ. ಆರ್. ಪೂಂಜರು

ಮೂಲ್ಕಿ ರಾಮಕೃಷ್ಣ ಪೂಂಜರು ಇದೇ ತಾ. ೪ರಲ್ಲಿ ಹೃದಯಸ್ತಂಭನದಿಂದ ಇಹಯಾತ್ರೆ ಮುಗಿಸಿದರೆನ್ನಲು ಅತ್ಯಂತ ವಿಷಾದಿಸುತ್ತೇವೆ. ಶ್ರೀ ಎಂ. ಆರ್. ಪೂಂಜರು ಕೊಯಮುತ್ತೂರಿನ ವಾಟರ್ ಪ್ರೋಲ್ಸ್‌ನಲ್ಲಿರುವ ತನ್ನ ಪುತ್ರ ಶ್ರೀ ಮೋಹನ ಪೂಂಜರನ್ನು ನೋಡಿಕೊಂಡು ಅಲ್ಲಿಂದ ಮರಳುವ ಸಿದ್ಧತೆಯಲ್ಲಿರುವಾಗಲೇ ಆಕಸ್ಮಾತ್ ಹೃದಯಕ್ರಿಯೆ ನಿಂತು ವಿಧಿವಶರಾದರೆಂದು ತಿಳಿದು ಬಂದಿದೆ. ಶ್ರೀ ರಾಮಕೃಷ್ಣ ಪೂಂಜರ ಆಯುಷ್ಯ ಸುಮಾರು 62 ವರುಷ.

ಮೂಲ್ಕಿ ರಾಮಕೃಷ್ಣ ಪೂಂಜರು ಪ್ರಸಿದ್ಧರು; ಜಿಲ್ಲೆಗೆ ಸುಪರಿಚಿತರು. ಅಸಾಮಾನ್ಯ ಬುದ್ಧಿವಂತ, ಕಾರ್ಯಪಟು, ಪ್ರತಿಷ್ಠಾವಂತ, ಸಾರ್ವಜನಿಕ ಸೇವಕನಾಗಿ, ದ. ಕ. ಜಿಲ್ಲೆಯ ಮುಂದಾಳುಗಳಲ್ಲೊಬ್ಬನಾಗಿ ಕೀರ್ತಿಗಳಿಸಿದ್ದಾರೆ. ಪ್ರಸಿದ್ಧ ಮನೆತನದಲ್ಲಿ ಜನಿಸಿ, ಸುಶಿಕ್ಷಿತರಾಗಿ ವಿವಿಧ ಸಾರ್ವಜನಿಕ ರಂಗಗಳಲ್ಲಿ ದುಡಿದು ಶ್ರೀ ಎಮ್. ಆರ್. ಪೂಂಜರು ಮಾಡಿಟ್ಟಿರುವ ದಾಖಲೆ ದೊಡ್ಡದು. ಆ ಕಾಲದಲ್ಲಿ ಮಂಗಳೂರು ತಾಲೂಕು ಬೋರ್ಡಿನ ಅಧ್ಯಕ್ಷನಾಗಿ ಪ್ರಶಂಸನೀಯ ಕಾರ್ಯಗಳನ್ನು ಮಾಡಿದ್ದರು. ಜಿಲ್ಲಾ ಬೋರ್ಡಿನ ಸದಸ್ಯತ್ವ—ಎಸ್. ಕೆ. ಸಿ. ಡಬ್ಲ್ಯು. ಸ್ಟೋರ್ಸಿನ ಡೈರೆಕ್ಟರ್‌ಶಿಪ್—'ಫ್ಲೋಡರ್ ಕಮಿಟಿ' ಮೆಂಬರಿಕೆ—ಫಿರ್ಕಾ ದೇವ

ಪ್ರೆಸಿಡೆಂಟ್ ಕಮಿಟಿ ಕಾರ್ಯದರ್ಶಿ— ಪ್ರಾಂತ್ಯ ಕಾಂಗ್ರೆಸ್ ಕಮಿಟಿ ಅಧ್ಯಕ್ಷತನ ಇತ್ಯಾದಿ ಹಲವು ಜವಾಬ್ದಾರಿ ಸ್ಥಾನಗಳನ್ನು ಸಮರ್ಥತೆಯಿಂದ ನಿರ್ವಹಿಸಿದ್ದವರು ಶ್ರೀ ಪೂಂಜರು. ಗಾಂಧಿಜೀಯ ವಿಧಾಯಕ ಕಾರ್ಯಕ್ರಮಗಳಲ್ಲಿ ಇವರಿಗೆ ವಿಶೇಷಾಸಕ್ತಿಯಿದ್ದಿತು. ಪಾನ ನಿಷೇಧ ಪ್ರಚಾರ ಸಮಿತಿಯ ಅಧ್ಯಕ್ಷನಾಗಿ ದ. ಕ. ಜಿಲ್ಲೆಯಲ್ಲೆಲ್ಲಾ ಪಾನ ನಿಯಂತ್ರಣ ಡಂಗುರವನ್ನು ಬಾರಿಸಿದ್ದರು. ಹರಿಜನೋದ್ಧಾರಕ್ಕಾಗಿ ಬಹು ಮುಖದಿಂದ ದುಡಿದಿದ್ದಲ್ಲದೆ, ಬಪ್ಪನಾಡು ದೇವಸ್ಥಾನದ ಟ್ರಸ್ಟಿಯಾಗಿದ್ದು, ಅಲ್ಲಿ ಹರಿಜನರಿಗೆ ಮುಂದಾಗಿ ಪ್ರವೇಶ ಕೊಡಿಸಿದ್ದರು. ಮೂಲ್ಕಿ ಗ್ರಾಮಾಭಿವೃದ್ಧಿ ಕೇಂದ್ರದ ಸಂಚಾಲಕನಾಗಿ ಶ್ರೀ ಎಂ. ಆರ್. ಪೂಂಜರು ಮಾಡುತ್ತಿದ್ದ ಹಳ್ಳಿ ಸುಧಾರಣಾ ಕಾರ್ಯಗಳು ಪ್ರಶಂಸನೀಯವಾದವು. ಮೂಲ್ಕಿ ಬೋರ್ಡ್ ಹೈಸ್ಕೂಲಿನ ಸ್ಥಾಪಕ ಕಾರ್ಯಕರ್ತರವರು; ಮಂಗಳೂರಿನ 'ವಿದ್ಯಾರ್ಥಿನಿ ಭವನ'ದ ಸ್ಥಾಪನೆ, ಪೋಷಣೆಯಲ್ಲಿ ಗಣ್ಯ ಭಾಗವಹಿಸಿದವರು. ರಾಷ್ಟ್ರೀಯ ಭಾವನೆಯವರಿದ್ದು, ಸತತ ಖಾದಿಧಾರಿಯಾಗಿ, ಸಾದಾ ನಡೆನುಡಿಗಳಿಂದ ಜನತೆಯೊಡನೆ ಹೊಕ್ಕು ಬಳಕೆಯಿಟ್ಟುಕೊಂಡು, ಅಧಿಕ ಸಂಖ್ಯಾಕ ಅನುಯಾಯಿಗಳಿಗೆ ಮೇಲ್ಪಂಕ್ತಿಯಾಗಿದ್ದಂತೆಯೇ ಸಮಾನ ಪಂಗ್ತಿಯವರಿಗೆ ಅನುಕರಣೀಯ ಗೃಹಸ್ಥನಾಗಿದ್ದವರು. ಹಳ್ಳಿ ವಿವಾದಗಳ ನ್ಯಾಯ ತೀರ್ಮಾನಕರ್ತನಾಗಿ ಶ್ರೀ ಎಂ. ಆರ್. ಪೂಂಜರು ಸ್ಮರಣೀಯ ಕೀರ್ತಿ ಗಳಿಸಿದ್ದಾರೆ; ಚಿರ ಕೃತಜ್ಞತಾರ್ಹ ಕಾರ್ಯಗಳನ್ನು ಸಾಧಿಸಿದ್ದಾರೆ.

ಶ್ರೀ ಎಮ್. ಆರ್. ಪೂಂಜರ ವಿಯೋಗದಿಂದ ದಕ್ಷಿಣ ಕನ್ನಡದ ಓರ್ವ ಮುಂದಾಳು—ಶಕ್ತಿ, ಯೋಗ್ಯತೆಗಳಿದ್ದ ಕಾರ್ಯಕರ್ತ—ಸ್ಥಿತಿಗತಿಗಳ ಗಾಢಜ್ಞಾನ, ವ್ಯವಹಾರ ಚಾತುರ್ಯ, ಚುರುಕು ಸೂಕ್ಷ್ಮ ಬುದ್ಧಿಯಿದ್ದ ಮೇಧಾವಿ— ಓರ್ವ ಅಗ್ರ ನಾಗರಿಕ ಕಳೆದುಹೋದಂತಾಯಿತು. ಜಿಲ್ಲೆಯ ಅಗ್ರಪಂಗ್ತಿಯ ಒಂದು ಸ್ಥಾನ ಖಾಲಿಬಿತ್ತು. ಆ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಆಪ್ತೇಯರಿಗೆ ಸಹಸಂತಾಪ ಸೂಚಿಸುತ್ತೇವೆ.

ಪಂಚಾಯತ ಬೋರ್ಡು,

ಗ್ರಾಮ ಕಮಿಟಿ,ಶಾಲಾ ಕೋಲೇಜು

ಮೊದಲಾದುವುಗಳ

ಲೈಬ್ರರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ

ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

ನವಭಾರತ ಪುಸ್ತಕ ಭಂಡಾರ,

ಉಡುಪಿ ಅಥವಾ

ನವಯುಗ ಪ್ರೆಸ್, ಉಡುಪಿ.

[ಒನೇ ಪುಟದಿಂದ ಮುಂದರಿಸಿದ್ದು]

ಈ ನೆಹರುಗಳತ್ತ ನೋಡುತ್ತಿರಬಹುದು. 38ನೇ ಗಡಿಗೆರೆಯ ಮುಹೂರ್ತ ಬಂದಿದ್ದ ಆ ಕಾಲದಲ್ಲೇ ಇಂದಿನ ಭವಿಷ್ಯವನ್ನಾಡಿದ್ದ, ನೆಹರುಗಳು ಕೊರಿಯಾ ಸಂಬಂಧದ ಶಾಂತ ಭವಿಷ್ಯಗಾರನಾಗಿ ಈ ಕಾಲದಲ್ಲಾದರೂ ಸಂಬಂಧಪಟ್ಟವಾಗಿ ತೋರಿ ಬರುವದು ಸ್ವಾಭಾವಿಕ. ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದಲ್ಲಿ ಇದೇ ತಾ. 3ರಲ್ಲಿ ಸ್ವೀರಾ ಭಾಷಣವೀಯುತ್ತಾ ಪ್ರಧಾನಿ ಶ್ರೀ ಜವಾಹರಲಾಲ ನೆಹರುಗಳು ಸದ್ಯದ ಅತಿಭೀಕರ ಜಾಗತಿಕ ಬಿಕ್ಕಟ್ಟನ್ನು ಪ್ರಸ್ತಾಪಿಸುತ್ತಾ ಹೇಳಿದ್ದರು: "ಈ ಅತಿಭೀಕರ ಬಿಕ್ಕಟ್ಟಿನಲ್ಲಿ ಜಗತ್ತಿನ ಮುಂದಿರುವ ದೊಡ್ಡ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಲಿರುವ ಏಕಮಾತ್ರ ಹಾದಿಯಾಗಿ ನನಗೆ ಕಾಣುತ್ತಿರುವುದೆಂದರೆ ಗಾಢ ಆಸಕ್ತಿ ಮತ್ತು ಅತಿಹೆಚ್ಚಿನ ದಯೆ, ರಿಯಾಯತಿಗಳ ಸ್ಫೂರ್ತಿಯಿಂದ ಸಾಗಬೇಕಾದುದೇ. ಲೋಕದ ಭವಿಷ್ಯ ಅಥವಾ ಭಾವೀ ಸುಖ, ದುಃಖ ಇಲ್ಲವೇ ಅನಾಹುತಕ್ಕೆ ಸಂಬಂಧಿಸಿರುವ ದೊಡ್ಡ ಪ್ರಶ್ನೆಗಳವು. ಯಾವದೊಂದು ರಾಷ್ಟ್ರ ಅಥವಾ ಅವುಗಳಲ್ಲಿ ಅತಿದೊಡ್ಡ ಎಲ್ಲಾ ರಾಷ್ಟ್ರಗಳಾದರೂ ಈ ದಿನ ಲೋಕ ಘಟನೆಗಳ ಸಂಪೂರ್ಣ ನಿರ್ದೇಶಕತ್ವ ವಹಿಸಿವೆ, ಎಂಬ ಕುರಿತು ನನಗೆ ಅನುಮಾನ ಇದೆ. ಅವು ಅಷ್ಟು ಸಿಕ್ಕುಗಟ್ಟಿ ಹೋಗಿರುವ ಮತ್ತು ಅಷ್ಟು ದೊಡ್ಡವುಗಳಿರುವ ಪ್ರಶ್ನೆಗಳು. ಈ ಕುರಿತು ಯಾವುದಾದರೂ ವಿಶಿಷ್ಟ ಸೂಚನೆಯನ್ನು ಮುಂದಿಡುವ ಬದಲಿಗೆ ಸ್ವಪ್ರತಿಷ್ಠೆ ಅಥವಾ ಸಿಟ್ಟಿಗೆ ಬಲಿಬೀಳದೆ ಶಾಂತಿ ಸ್ಫೂರ್ತಿಯಿಂದ ಸದ್ಯವಹಾರಕ್ಕಿಳಿಯುವುದೊಂದೇ ಇಲ್ಲಿರುವ ಉಪಾಯವೆಂದು ಸೂಚಿಸುತ್ತೇನೆ". ಅಟ್ಲೀ ಟ್ರೂಮೆನ್ ಸಂಭಾಷಣೆಯಲ್ಲಿ ಭಾಗವಹಿಸಲು ವಾಷಿಂಗ್ಟನಿಗೆ ಬರಬೇಕೆಂಬ ಪ್ರತ್ಯಕ್ಷ ಪ್ರತ್ಯಕ್ಷ ಆಮಂತ್ರಣವಾವುದೂ ತನಗೆ ಬಂದಿಲ್ಲವೆಂದೂ ಬರುವ ಸಂಭವವಿಲ್ಲವೆಂದೂ ತಾನದನ್ನು ನಿರೀಕ್ಷೆಯಲ್ಲಿಲ್ಲವೆಂದೂ ನೆಹರೂ ಸ್ಪಷ್ಟಪಡಿಸಿದ್ದಾರೆ. ಅಂತೂ ಕೊರಿಯಾ ಯುದ್ಧಸ್ಥಿತಿಯಿಂದಾಗಿ ಲೋಕಾಪಾಯವತ್ತ ಪ್ರಳಯಸ್ಫೋಟ ಸನ್ನಿಹಿತವಾದಂತಿದೆ. ಇಂತಹ ಅಸಾಮಾನ್ಯ ಸನ್ನಿವೇಶದಲ್ಲಿ ನೆಹರುಗಳ ಅಭಿಮಾನಾಗ್ರಣಿ ಸೌಹಾರ್ದತೆ ತೋರಿಬಂದು ಲೋಕವು ಶಾಂತಿಯುಸಿರನ್ನು ಬಿಡುವಂತೆ ಮಾಡುವ ವರದಹಸ್ತ ಎಲ್ಲಿಂದಾದರೂ ಮೇಲೇಳಲಾರದೆ?

ಉಡುಪಿ

ನೇಮಕ— ಉಡುಪಿಯ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯರು ವೃಂದಾವನದ ವೈಷ್ಣವ ಥಿಯೊಲೋಜಿಕಲ್ ಯೂನಿವರ್ಸಿಟಿಯ ಸಿನೇಟ್ ಮೆಂಬರರಾಗಿ ನೇಮಕ ಹೊಂದಿರುತ್ತಾರೆ.

ಭಾಷಣಗಳು—ಯಾದವಗಿರಿ ಕಾಲೇಜಿನ ಪ್ರಿನ್ಸಿಪಾಲ್ ವಿದ್ಯಾವಾಗೀಶ ಚಂದ್ರಶೇಖರ ಶಾಸ್ತ್ರಿಗಳು ಇದೇ ತಾ. 3ರಲ್ಲು ಬೆಳಗ್ಗೆ ಸ್ಥಳೀಯ ಸಂಸ್ಕೃತ ಕಾಲೇಜಿನಲ್ಲ ಸಂಸ್ಕೃತ ವಿದ್ಯಾಭ್ಯಾಸ ಮತ್ತು ಕರ್ನಾಟಕ ಏಕೀಕರಣದ ಅವಶ್ಯಕತೆಯ ಕುರಿತು ಭಾಷಣವಿತ್ತರು. ಅದೇ ದಿನ ಸಂಜೆ ಕಲಾವೃಂದದಲ್ಲೂ ಶ್ರೀಯುತರು ಕರ್ನಾಟಕ ಪ್ರಾಂತರಚನೆಯ ಜರೂರಾತಿಯ ಕುರಿತು ಉಪನ್ಯಾಸವಿತ್ತರು. ಎಡ್ವೊಕೇಟ್ ಶ್ರೀ ಬಿ. ವಾಸುದೇವ ರಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕಾಣೂರು ಮಠದ ಶ್ರೀ ವಿದ್ಯಾವಾರಿಧಿ ತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಉಡುಪಿ ಸನಾತನಧರ್ಮ ಪ್ರಕಾಶಿನೀ ಸಭೆಯ ಆಶ್ರಯದಲ್ಲಿ ಇದೇ ತಾ. 2ರಲ್ಲು ವಸಂತ ಮಹಲಿನಲ್ಲಿ ಶ್ರೀ ಪೇಜಾವರ ಸೀತಾರಾಮಾಚಾರ್ಯರು ಹಿಂದೂ ಧರ್ಮದ ಕುರಿತು ಭಾಷಣವಿತ್ತರು. ಶ್ರೀ ಶೀರೂರು ಮಠದ ಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು.

The Catholic Bank Ltd., Udipi.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೋಲ್ಕಾಣಿಸಿದ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮ ಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ ಕೆಲವು ಆಸಾಮಿಗಳು ಊರಿನಲ್ಲಿ ಇಲ್ಲವೆಂತಲೂ ಕೆಲವರು ಪಡೆದುಕೊಂಡು ವಸೂಲುಕೊಡದೆ ಇರುವುದರಿಂದಲೂ ಸದರಿಯವರಿಗೆ ಮತ್ತು ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸಪಡಿಸುವುದೇನೆಂದರೆ ಸದರಿಯವರು ಈಡಿಟ್ಟಿರುವ ನಗಗಳನ್ನು ಇದೇ ತಾರೀಕು 14-12-1950ರ ಒಳಗೆ ಬಿಡಿಸಿಕೊಳ್ಳದೆ ಇದ್ದಲ್ಲಿ ತಾರೀಕು 16-12-1950ನೇ ಶನಿವಾರ ಘಂಟೆ 12-30ಕ್ಕೆ ಯಾ ಬ್ಯಾಂಕಿನ ಯುಕ್ತ ಕಂಡ ಮುತದ ದಿನಗಳಲ್ಲಿ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡುವುದು.

J L	ತಾರೀಕು	ಹೆಸರು ಮತ್ತು ವಿಳಾಸ.	ಮೊಬಲಗು ರೂ ಆ ಪೈ
24/867	9 11-1948	M. D. ಹಸದುಲ್ಲ Co ಸೇಠ್ ಇಸ್ಮಾಯಿಲ್ ಸಾಹೇಬ್ ಮಿಶನ್ ಕಂಪೌಂಡು ಉಡುಪಿ	75-0-0
24/873	10-11-1948	B. ವಾಸು ಹೆಗ್ಡೆ ನಾರಾಯಣ ಹೆಗ್ಡೆ ಅಳಿಯ ಕಾಡಬೆಟ್ಟು ಉಡುಪಿ	40-0-0
24/1219	17-1 -1949	ಚಂದು ಸೆಟ್ಟಿ ಕಂಟ್ರಾಕ್ಟರ್ ಉಡುಪಿ P. O.	15-0-0
24/1209	17-1 -1949	ರಾಮಚಂದ್ರ ರಾವ್ ವಾಮನ್ ರಾಯರ ಮಗ ಬನ್ನಂಜೆ ಉಡುಪಿ	65-0-0
24/1269	24-1 -1949	ಅಬ್ದುಲ್ ಮಜೀದ್, ಮಹಾರ್ ಸಾಹೇಬರ ಮಗ ಉಡುಪಿ ಪೋಸ್ಟು	50-0-0
24/1331	2-2 -1949	ಶೀನ ಆಚಾರಿ ಗುರುವಾಯ ಆಚಾರಿ ಮಗ ಅಂಬಲಪಾಡಿ ಉಡುಪಿ	25-0-0

UDIPI,
4-12-1950

Agent,
Catholic Bank Ltd, Udipi.

ಜುಲ್ಮಾನೆ ಪ್ರಕರಣಗಳು — ಸಟ್ಟಾ ಆಟಕ್ಕೆ ಸಂಬಂಧಿಸಿದ ಕೇರುಬೀದಿಯ ರತ್ನಾಕರ ಪೈ ಮತ್ತು ಶೇಷಗಿರಿ ಪೈಗಳಿಗೆ ರೂ. 20 ಮತ್ತು 45 ಜುಲ್ಮಾನೆ ವಿಧಿಸಲಾಯಿತು. ಜಿಂಕ್ ತಗಡುಗಳನ್ನು ಕಳ್ಳಪೇಟೆಯ ದರದಲ್ಲಿ ಮಾರಾಟ ಮಾಡಿದ ತಪ್ಪಿಗೊಳಗಾದ ರಥಬೀದಿಯ ಸುಬ್ರಾಯ ಕಲ್ಕೂರರಿಗೆ ರೂ. 300 ದಂಡನೆ ಇಲ್ಲವೇ ಮೂರು ತಿಂಗಳ ಸಕ್ರಮ ಶಿಕ್ಷೆ ಅನುಭವಿಸಬೇಕೆಂಬು ತೀರ್ಪು ಕೊಡಲಾಯಿತು.

ಪರ್ಕಳ ಇದೇ ತಾ. 1ರಲ್ಲು ಉಡುಪಿ ತಾಲೂಕು ಮರಾಟ ಸಮಾಜದ ಸಭೆಯು ಪರ್ಕಳ ಮೈದಾನಿನಲ್ಲಿ ಮಿಜಾರಿನ ಶ್ರೀ ಎಮ್. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಅಣ್ಣಯ್ಯನಾಯಕ್, ಅಪ್ಪು. ಎಮ್. ನಾಯಕ್, ಮೊದಲಾದವರು ಸಂಘದ ಉದ್ದೇಶ, ಕಾರ್ಯಕಲಾಪಗಳ ಕುರಿತು ಮಾತನಾಡಿದರು,

---

ನೋಟೀಸು

ಆರೂರು ಗ್ರಾಮದಲ್ಲಿರುವ ವಾಸುದೇವ ಭಟ್ಟರ ಮಗ, ರಾಮಚಂದ್ರ ಭಟ್ಟನಾದ ನಾನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದು ಏನೆಂದರೆ ನಾನು ನನ್ನ ಸ್ವಂತ ಮನೆಗೆ ಲಗ್ತುಯಿರುವ ನನ್ನ ಕಟ್ಟೋಣದಲ್ಲಿ ನಡೆಸಿಕೊಂಡು ಬಂದಿರುವ ಚಿಲ್ಲರೆ ಜೀನ್ಸಿ ಅಂಗಡಿ ವ್ಯಾಪಾರವನ್ನು ಕಳೆದ ನವಂಬ್ರ ತಿಂಗಳ ತಾ. 27ನೇಗೆ ಕೈಡು ಮಾಡಿರುತ್ತೇನೆ. ನನ್ನ ಮಗ ಭೋಜರಾಜ ಭಟ್ಟನು ಅವನ ಸ್ವಂತಕ್ಕೆ ಆರೂರು ವಿಷ್ಣುಮೂರ್ತಿ ದೇವಸ್ಥಾನದ ಹೆಬ್ಬಾಗಿಲಿನಲ್ಲಿ ಒಂದು ಚಿಲ್ಲರೆ ಜೀನ್ಸು ಅಂಗಡಿ ತೆರೆದಿರುತ್ತಾನೆ. ಸದ್ರಿ ಅಂಗಡಿ ವ್ಯಾಪಾರದ ಸಂಬಂಧವಾಗಲೀ ಯಾತರ ಸಂಬಂಧವಾಗಲೀ ಸದ್ರಿ ಭೋಜರಾಜ ಭಟ್ಟನು ಏನಾದರೂ ಲೇವಾದೇವಿ ನಡೆಸಿದರೆ ಯಾ ಸಾಲಮಾಡಿದರೆ ಅಂಥಾ ಲೇವಾದೇವಿಗೆ ಯಾ ಸಾಲಕ್ಕೆ ನಾನಾಗಲೀ ನನ್ನ ಸ್ವತ್ತುಗಳಾಗಲೀ ಕುಟುಂಬದ ಸೊತ್ತುಗಳಾಗಲೀ ಹೊಣೆಯಲ್ಲ.

ಆರೂರು ರಾಮಚಂದ್ರ ಭಟ್ಟ,
ತಾ. 5—12—50

ನೋಟೀಸು

ಉಡುಪಿ ತಾಲ್ಲೂಕು ತೆಂಕನಿಡಿಯೂರು ಗ್ರಾಮದಲ್ಲಿರುವ ಅನಂತಯ್ಯನವರ ಮಗ ಟಿ. ಪದ್ಮನಾಭಯ್ಯನು ಈ ಮೂಲಕ ತಿಳಿಯಪಡಿಸುವದೇನೆಂದ್ರ;-

ತೆಂಕನಿಡಿಯೂರು ನಂಸಿಂಪ ಶ್ಯಾನುಭಾಗರ ವಿಧವೆ, ಮುಕ್ತಾಬಿಗೆ ಆಗಾಗ್ಯ ಸ್ವಸ್ಥಚಿತ್ತಯಿಲ್ಲದೆಯಿರುವ ಶೀತಮ್ಮನವರಿಗೆ ನನ್ನ ತಂದೆ ಸದ್ರಿ ಅನಂತಯ್ಯನ ಕವಲಿನ ಕುಟುಂಬದವರು ಸವಿಾಪದ ಉತ್ತರ ಭಾದ್ಯಸ್ತರಾಗಿದ್ದು (Nearest reversioners) ಸದ್ರಿ ಶೀತಮ್ಮನ ಸವಸ್ತ್ರಕಾಲದ ನಂತ್ರ ಅವರ ಸಮಸ್ತ ಸ್ಥಿರ ಚರಸೊತ್ತುಗಳಿಗೆ ನಾವು ಸಂಪೂರ್ಣ ಹಕ್ಕುದಾರರಾಗಿರುತ್ತೇವೆ. ಅಂಥಾ ನಮ್ಮ ಹಕ್ಕಿಗೆ ಮೋಸಕೊಟ್ಟು ತಾವು ಅಕ್ರಮ ಲಾಭಹೊಂದಬೇಕೆಂಬ ದುರಾಲೋಚನೆಯಿಂದ ನಮ್ಮ ದ್ವೇಷಿಕರು ಸದ್ರಿ ಶೀತಮ್ಮನಿಂದ ನಕಲಿ ದಸ್ತಾವೇಜುಗಳನ್ನು ಬರಿಸಿಕೊಳ್ಳುವರೇ ಉದ್ಯುಕ್ತರಾಗಿರುವದಾಗಿ ನಾವು ತಿಳಿಯುತ್ತೇವೆ ಆ ರೀತಿ ದಸ್ತಾವೇಜುಗಳನ್ನು ಬರೆಕೊಡಲಿಕ್ಕಾಗಲೀ, ಸದ್ರಿ ಸೊತ್ತುಗಳನ್ನು ಪರಭಾರೆ ಮಾಡಲಿಕ್ಕಾಗಲೀ ಸದ್ರಿ ಶೀತಮ್ಮಗೆ ಯಾವ ತರದ ಎಷ್ಟನ್ನೂ ಸ್ವಾತಂತ್ರ್ಯ ಹಕ್ಕಿಲ್ಲಾ. ಯಿ ವಿನಹ ಸದ್ರಿ ಶೀತಮ್ಮಗೆ ಸದ್ರಿ ಸ್ಥಿರಸೊತ್ತುಗಳನ್ನು ಪರಭಾರೆ ಮಾಡುವ ಗರ್ಜ, ವ ಅವಶ್ಯ ಕೂಡಾ ಯಿರುವುದಿಲ್ಲಾ. ಈ ಕಾರಣಗಳಿಂದ ಯಾರಾದರೂ ಸದ್ರಿ ಶೀತಮ್ಮನಿಂದ ಬರ್ಸಿಕೊಳ್ಳಬಹುದಾದ ಯಾವತ್ತು ದಸ್ತಾವೇಜುಗಳಾಗ್ಲೀ, ಪರಭಾರೆ ಸಾಧನಗಳಾಗ್ಲೀ ನಮ್ಮ ಕುಟುಂಬದ ನ್ಯಾಯವಾದ ಹಕ್ಕಿಗೆ ವಿರೋಧವಾಗಿ ಸಿಂಧಾಗತಕ್ಕದ್ದಲ್ಲಾ ಮತ್ತು ಅವುಗಳು ನಮ್ಮ ಮೇಲೆ ಬಿದ್ದಪಡಿಸತಕ್ಕವುಗಳೂ ಅಲ್ಲ ಎಂಬ ಸಂಗ್ತಿಯನ್ನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗುತ್ತದೆ.

T Padmanabhaya
ತೆಂಕನಿಡಿಯೂರು, 5-12-50

ಮಂಗಳೂರು

ಮಂಗಳೂರಲ್ಲಿ ಮಂತ್ರಿ ಗೋಪಾಲ ರೆಡ್ಡಿಗಳು—ಮದ್ರಾಸು ಸರಕಾರದ ಆರ್ಥಿಕ ಮಂತ್ರಿಗಳಾದ ಮಾನ್ಯ ಬಿ ಗೋಪಾಲರೆಡ್ಡಿಯವರು ಕಳೆದ ತಾ. 27ರಲ್ಲು ಸಂಜೆ ಮಂಗಳೂರಿಗೆ ಆಗಮಿಸಿ ಕದ್ರಿಗುಡ್ಡೆಯ ಕರ್ನಾಟಕ ಪೊಲಿಟೆಕ್ನಿಕ್ ಶಾಲೆಯನ್ನು ಸಂದರ್ಶಿಸಿದರು. ಈ ಕಾಲದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಅಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಸಿ ಆರ್. ಪೂಂಜ ಮೊದಲಾದವರಿದ್ದರು. ಅದೇ ದಿನ ರಾತ್ರಿ ಮಂತ್ರಿಗಳು ಡಾ| ಯು. ಪಿ. ಮಲ್ಯ ಮೊದಲಾದವರೊಂದಿಗೆ ಜ್ಯೋತಿ ಚಲಚ್ಚಿತ್ರ ಮಂದಿರಕ್ಕೆ ಹೋಗಿ ಸಿನೆಮಾ ನೋಡಿದರು. ಗೌರವಾರ್ಥವಾಗಿ ಟೋಕೀಸ್ ಸಂಸ್ಥೆಯವರು ಅಸಾವರ್ ಸಹಾಯ ನಿಧಿಗೆ ರೂ. 150/- ಸಹಾಯ ಧನವೆಂದು ಮಂತ್ರಿಗಳಿಗೆ ಕೊಟ್ಟರು.

ಮೋಟಾರ್ ಮಾಲಿಕರ ಸಂಘದ ಉದ್ಘಾಟನೆ—ಮರುದಿವಸ ಮಂತ್ರಿಗಳು ಮೋಟಾರ್ ಮಾಲಿಕರ ಸಂಘದ ಉದ್ಘಾಟನೆಯನ್ನು ಪಿ. ವಿ. ಪೈ ಮೋಟಾರ್ ಗೆರೇಜಿನಲ್ಲಿ ಜರಗಿಸಿದರು. ಆ ಸಭೆಗೆ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಅಧ್ಯಕ್ಷರಾಗಿದ್ದರು ಮಂತ್ರಿಗಳು ಧ್ವಜಾರೋಹಣ ಮಾಡಿದ ನಂತರ ಪ್ರಾರ್ಥನೆಯಾಗಿ ಮೋಟಾರ್ ಮಾಲಿಕರ ಸಂಘದ ಅಧ್ಯಕ್ಷ ಶ್ರೀ ಪಂಡಿತ ದತ್ತಾತ್ರೇಯರಾಯರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಜನಾರ್ಧನ ಕಾಮತರು ಮಂತ್ರಿಗಳಿಗೊಂದು ಮನವಿಯನ್ನರ್ಪಿಸುತ್ತಾ ಮೋಟಾರ್ ಸಾರಿಗೆಯ ಸಂಕಷ್ಟಗಳನ್ನು ಅವರ ಗಮನಕ್ಕೆ ತಂದರು. ಮುಖ್ಯವಾಗಿ ತಮ್ಮ ಸಂಘವನ್ನು ಮನ್ನಿಸಬೇಕೆಂದೂ 100ಮೈಲುಗಳೊಳಗೆ ಮೂರು ಸಂಕಾಂಗಳಿಗೆ ತೆರಿಗೆ ಕೊಡುವ ದೌರ್ಭಾಗ್ಯ ಹೋಗಬೇಕೆಂದೂ ಕೇಳಿಕೊಂಡರು. ನಂತರ ಶ್ರೀಗಳಾದ ಪಿ. ಆರ್. ಪೂಂಜರೂ, ವಿ. ಎಸ್. ಕುಡ್ವರೂ ಮೋಟಾರ್ ಸಾರಿಗೆಯಲ್ಲಿ ಜಿಲ್ಲೆಗೆ ಬೇಕಾದ ವಿಚಾರಗಳನ್ನೂ ಸರಕಾರದ ತೆರಿಗೆಯ ತಕರಾರುಗಳನ್ನೂ ಮಂತ್ರಿಗಳ ಮುಂದಿಟ್ಟರು. ಅಧ್ಯಕ್ಷರ ಭಾಷಣವಾಗಿ ಮಂತ್ರಿಗಳು ತಮ್ಮ ಭಾಷಣದಲ್ಲಿ ಈ ಹೊಸ ಸಂಘವನ್ನು ಸ್ವಾಗತಿಸಿದರು ಇಂತಹ ಸಂಘಗಳಿಂದ ಸಾರ್ವಜನಿಕ ಹಿತವಾಗುವುದೆಂಬ ತಮ್ಮ ನಂಬುಗೆಯನ್ನು ವ್ಯಕ್ತಪಡಿಸಿದರು. ಈ ಜಿಲ್ಲೆಗಾಗಿ ಸರಕಾರವೇನೂ ಮಾಡಿಲ್ಲವೆಂದು ಹೇಳಬೇಡಿ. ಈ ಐದುವರುಷಗಳಿಂದ ಏನಾಗಿದೆಯೆಂದು ತಿಳಿದುಕೊಳ್ಳಿರಿ. ಮುಂದೇನು ಬೇಕೆಂಬುವದನ್ನು ತಿಳಿಸಿರಿ, ಎಂದು ಮಂತ್ರಿಗಳು ಕೇಳಿಕೊಳ್ಳುತ್ತಾ ಸರಕಾರದ ಆರ್ಥಿಕ ವಿಚಾರವನ್ನೂ ವಿವರಿಸಿದಲ್ಲದೆ ಮೂರು ಸರಕಾರಗಳಿಗೆ ತೆರಿಗೆ ಕೊಡುವ ವಿಚಾರವಾಗಿ ಕೊಡಗು-ಮೈಸೂರು ಸರಕಾರಗಳೊಂದಿಗೆ ಮಾತನಾಡಿ ತಕ್ಕ ವ್ಯವಸ್ಥೆ ಮಾಡುವೆನೆಂದರು.

ಬಳಿಕ ಮಂತ್ರಿಗಳು ಕಲೆಕ್ಟರರ ಕಚೇರಿಯಲ್ಲಿ ಕೆಲವರಿಗೆ ಭೇಟಿಯಿತ್ತರು. ಅನಂತರ ಜಿಲ್ಲಾ ಬೋರ್ಡು ಸಭಾ ಭವನದಲ್ಲಿ ಜಿಲ್ಲೆಯ ಪ್ರಯಾಣಿಕ ಸಂಘದವರಿತ್ತ ಮನವಿಯನ್ನು ಸ್ವೀಕರಿಸಿದರು.

ಅಪರಾಹ್ನ ಮಂತ್ರಿಗಳು ಮಂಗಳೂರಿನ ವೆಬ್‌ಸ್ಟರ್ ಮಾರ್ಕೆಟನ್ನು ಸಂದರ್ಶಿಸಿ ಅಲ್ಲಿನ ಸ್ಥಿತಿಗತಿಗಳನ್ನು ತಿಳಿದುಕೊಂಡರು. ಸಂಜೆ ಜಿಲ್ಲಾ ವಾಣಿಜ್ಯ ಸಂಘದ ಕಚೇರಿಗೆ ಭೇಟಿಯಿತ್ತರು. ಶ್ರೀ ಪಿ ಆರ್. ಶೆಟ್ಟಿಯವರು, ವ್ಯಾಪಾರಿಗಳ ಕೆಲವು ಸಂಕಷ್ಟಗಳನ್ನು ಮಂತ್ರಿಗಳ ಮುಂದಿಟ್ಟು- ಮುಖ್ಯವಾಗಿ ಬೇಂಕುಗಳಿಗೆ ಸಂಬಂಧಿಸಿ ಒಂದು ವಿಚಾರವನ್ನು ಮಂತ್ರಿಗಳ ಗಮನಕ್ಕೆ ತಂದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ನವಭಾರತದ ರಚನೆಯಲ್ಲಿ ವಣಿಜರ ಪಾತ್ರವು ಚಿಕ್ಕದಲ್ಲವೆಂಬುದಾಗಿ ಹೇಳುತ್ತ ಅವರೆಲ್ಲ ನಿಸ್ವಾರ್ಥದಿಂದ ಮುಂದೆ ಬರಬೇಕೆಂದರು. ಶ್ರೀ ದೇವಿದಾಸ ಗಿರಿಧರಲಾಲರು ಧನ್ಯವಾದಗಳನ್ನರ್ಪಿಸಿದರು.

ತ್ರಿಸಂಧ್ಯಾಕಾಲಕ್ಕೆ ಮಂತ್ರಿಗಳು ಗವರ್ನ್‌ಮೆಂಟ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ, ಭಾರತದ ಭವಿಷ್ಯತ್ತಿಗಾಗಿ ಎಲ್ಲರೂ ದುಡಿಯಬೇಕೆಂದರು. ಪ್ರಿನ್ಸಿಪಾಲರು ಸ್ವಾಗತ ಭಾಷಣಮಾಡಿ ವರದಿಯನ್ನೊಪ್ಪಿಸಿದರು. ಬಹುಮಾನ ವಿತರಣೆಯಾದನಂತರ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಕಾಲೇಜಿನ ಸ್ವಸ್ತಿವಾಚನ ಮಾಡಿದರು. ಶ್ರೀಮತಿ ಉಷಾ ಬೋಳಾರರು ಧನ್ಯವಾದಗಳನ್ನರ್ಪಿಸಿದ ನಂತರ ರಾಷ್ಟ್ರಗೀತೆ ಹಾಡಲಾಯಿತು. ವಾರ್ಷಿಕೋತ್ಸವದ ವಿನೋದಾವಳಿಗಳು ಮರುದಿನ ಸಂಜೆಯಿಂದ ಅಪರರಾತ್ರಿಯತನಕ ಜರಗಿದವು.

ಧರ್ಮಸ್ಥಳ ಸಂದರ್ಶನ—ಮಂತ್ರಿಗಳು ತಾ 29ರಲ್ಲು ಬೆಳಿಗ್ಗೆ ಹಂಪನಕಟ್ಟೆಯಲ್ಲಿ ಬಸ್‌ಸ್ಟೇಂಡನ್ನು ಸಂದರ್ಶಿಸಿಕೊಂಡು ಧರ್ಮಸ್ಥಳಕ್ಕೆ ಹೋದರು

ಬಂಟ್ವಾಳದಲ್ಲಿ ಸಾರ್ವಜನಿಕ ಸಭೆಯೊಂದು ಡಾ| ಯು ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಲ್ಲಿನ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ ವೆಂಕಟೇಶ ಬಾಳಿಗರು ಸ್ವಾಗತ ಭಾಷಣಮಾಡಿ ಮನವಿಯೊಂದನ್ನು ಅರ್ಪಿಸಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಚಲಿತ ರಾಜಕೀಯ ವಿಚಾರಗಳನ್ನೂ ಚುನಾವಣೆ ಕಾಲದಲ್ಲಿ ನಾಗರೀಕರು ವಹಿಸತಕ್ಕ ಧೋರಣೆಯನ್ನೂ ವಿವರಿಸಿದರು. ಶ್ರೀ ಪಾಂಡುರಂಗ ಬಾಳಿಗರು ಅಭಿನಂದಿಸಿದರು. ಅಲ್ಲಿಂದ ಉಜ್ರೆಗೆ ಪ್ರಯಾಣ ಬೆಳೆಸಿದಾಗ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಮತ್ತು ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಮೊದಲಾದವರು ಮಂತ್ರಿಗಳಿಗೆ ಸುಸ್ವಾಗತವನ್ನು ಬಯಸಿದರು. ಉಜ್ರೆ ಹೈಸ್ಕೂಲನ್ನೂ ಬುನಾದಿ ಟ್ರೈನಿಂಗ್ ಶಾಲೆ ಮತ್ತು ಗುರುಕುಲ ಶಾಲೆಯನ್ನೂ ಮಂತ್ರಿಗಳು ಸಂದರ್ಶಿಸಿದರು. ಉಜ್ರೆ ಶಾಲೆಯಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಮಂತ್ರಿಗಳಿಗೊಂದು ಮನವಿಯನ್ನೊಪ್ಪಿಸಿ ಮಲೆನಾಡಿನ ವಿದ್ಯಾಭ್ಯಾಸಕ್ಕೆ ಸರಕಾರ ಹೆಚ್ಚಿನ ಸವಲತ್ತು ಕೊಡಬೇಕೆಂದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಮಲೇರಿಯಾ ಭತ್ಯೆಯೇ ಮೊದಲಾದುವುಗಳನ್ನು ಕೊಡುವಲ್ಲಿ ಪರ್ಯಾಲೋಚಿಸಲಾಗುವುದೆಂದರು. ಅಲ್ಲಿಂದ ಧರ್ಮಸ್ಥಳಕ್ಕೆ ಹೋದಾಗ ಶ್ರೀ ಮಂಜಯ್ಯ ಹೆಗ್ಡೆಯವರು ದೇವಸ್ಥಾನದ ಮರ್ಯಾದೆಯಂತೆ ಸ್ವಾಗತಿಸಿ ದೇವಸ್ಥಾನದ ಪಕಾರಗಳಿಗೊಯ್ದು ತೋರಿಸಿಕೊಂಡು ಬಂದರು. ನಂತರ ಮಂತ್ರಿಗಳು ಮಂಗಳೂರಿಗೇನೇ ವಾಪಾಸು ಬಂದರು. ಸಂಜೆ ಜಿಲ್ಲಾ ಬೋರ್ಡಿಗೆ ಹೋದಾಗ ಅವರನ್ನು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಸ್ವಾಗತಿಸಿ ಸರಕಾರವು ಈ ಜಿಲ್ಲೆಗಾಗಿ ಮಾಡಿದ ಕಾರ್ಯಗಳನ್ನು ಸ್ಮರಿಸಿ ಮುಂದೆ ಮಾಡಬೇಕಾದುವುಗಳನ್ನು ಸೂಚಿಸಿದರು. ಮಂತ್ರಿಗಳು ತಮ್ಮ ಉತ್ತರದಲ್ಲಿ ಸರಕಾರದ ಕೆಲಸವನ್ನು ಸ್ಮರಿಸಿದುದಕ್ಕೆ ಸಂತೋಷಗೊಂಡು, ಸರಕಾರದ ಆರ್ಥಿಕ ಸ್ಥಿತಿಗತಿಯನ್ನು ಬೋರ್ಡಿನ ಮುಂದಿಟ್ಟರು. ಸಂಸ್ಥಾನದ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಸರಕಾರವು ಒಂದಿಷ್ಟೂ ಅಸಡ್ಡೆ ಮಾಡಿಲ್ಲವೆಂದೂ ಅದರಂತೆ ನಿಮ್ಮ ಪಾಲಿನ ಸಹಾಯ ನೀವು ಪಡೆಯುತ್ತಿರುವಿರೆಂದೂ ತಿಳಿಸಿದರು. ಅಲ್ಲಿಂದ ಮಂತ್ರಿಗಳು ಲೇಡೀಸ್ ಕ್ಲಬ್ಬಿಗೆ ಭೇಟಿಯಿತ್ತರು. ಮಂತ್ರಿಗಳು ಕೆಥೋಲಿಕ್ ಕ್ಲಬ್ಬಿಗೆ ಸಂದರ್ಶನವಿತ್ತಾಗ ಜರಗಿದ ಸಭೆಯಲ್ಲಿ ಅವರು ಮಾತನಾಡುತ್ತಾ ರಾಜಕೀಯದಲ್ಲಿ ಧಾರ್ಮಿಕ ವಿಚಾರಗಳು ಸೇರಿಕೊಂಡಲ್ಲಿ ಆಗುವ ಅವಾಂತರಗಳನ್ನು ವಿವರಿಸಿದರು. ಅಲ್ಲದೆ ಹರಿಜನರಿಗೆ ಕೊಡುವ ಸವಲತ್ತು ಹಿಂದುಗಳಲ್ಲವರು ಹಿಂದುಳಿದವರೆಂಬ ವಿಚಾರವಾಗಿಯಲ್ಲದೆ ಅನ್ಯಥಾ ಅಲ್ಲ. ಆದ್ದರಿಂದ ಈ ವಿಚಾರದಲ್ಲಿ ತಾವುಗಳು ಈಗಿನಂತೆಯೇ ತೃಪ್ತರಾಗಬೇಕೆಂದರು.

ದಕ್ಷಿಣ ಕನ್ನಡ ವಿದ್ಯುತ್—ಮೈಸೂರು ಸರಕಾರದಿಂದ ವಿದ್ಯುಚ್ಛಕ್ತಿ ಕೊಂಡು ಕೊಳ್ಳುವುದಕ್ಕೋಸ್ಕರ ಮದ್ರಾಸು ಸರಕಾರವು ಒಂದು ಯೋಜನೆಯನ್ನು ಮಂಜೂರು ಮಾಡಿದೆ. ಇದಕ್ಕೆ ಪ್ರಥಮದಲ್ಲಿ ರೂ 48-32 ಲಕ್ಷ ವೆಚ್ಚವಿದ್ದು, 10 ವರ್ಷಗಳಲ್ಲಿ ಅದು 82-05 ಲಕ್ಷಕ್ಕೇರುವುದು ವಿದ್ಯುಚ್ಛಕ್ತಿಯನ್ನು ದಕ್ಷಿಣ ಕನ್ನಡಜಿಲ್ಲೆಯ ಕುಂದಾಪುರ, ಉಡುಪಿ, ಮಂಗಳೂರುಗಳಿಗೆ ಸರಬರಾಯಿ ಮಾಡಲಾಗುವುದು.

ಮೇಲಿನ ಯೋಜನೆಯನ್ನು ಮದ್ರಾಸು ಸರಕಾರವು ಮಂಜೂರು ಮಾಡಿದ್ದರೂ ಮದ್ರಾಸು, ಮೈಸೂರು ಸಂಸ್ಥಾನಗಳೊಳಗೆ ಆ ಒಪ್ಪಂದ ಪೂರ್ತಿಯಾಗಲಿಲ್ಲ ಆದರೆ ಆ ಜಿಲ್ಲೆಗೆ ಆರುಸಾವಿರ ಕಿಲ್ಲೋವಾಟ್ ಶಕ್ತಿಯನ್ನೊದಗಿಸಲು ಮೈಸೂರು ಒಪ್ಪಿರುವುದೆಂದು ಮದ್ರಾಸು ಎಸೆಂಬ್ಲಿಯಲ್ಲಿ ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳು ಹೇಳಿದರು.

ಕಳ್ಳಸಂತೆಗಾಗಿ ಮೋಸ, ಒಳಸಂಚುಗಳ ಮೊಕದ್ದಮೆ—ಕಳ್ಳಸಂತೆ ನಿರೋಧಕ ಶಾಖೆಯ ಸಬ್ ಇನ್ಸ್‌ಪೆಕ್ಟರ್ ಶ್ರೀ ಬಿ ವೆಂಕೋಬರಾಯರಿಂದ ಪತ್ತೆಯಾಗಿ ಈಗ ಮಂಗಳೂರಲ್ಲಿ ಸ್ಪೆಶಲ್ I ಕ್ಲಾಸ್ ಮಜಿಸ್ಟ್ರೇಟ್ ಶ್ರೀ ಬಿ. ನಾರಾಯಣ ಹೆಗ್ಡೆಯವರ ಕೋರ್ಟಿನಲ್ಲಿ ನಡೆಯುತ್ತಿರುವ ಸರಕಾರದ ಕಬ್ಬಿಣದ ಗಾಡಿ ಪಟ್ಟೆ ಇತ್ಯಾದಿಗಳ ಮೊಕದ್ದಮೆಯಲ್ಲಿ ಇದುವರೆಗೆ ಪ್ರೋಸಿಕ್ಯೂಶನ್ ಪರವಾಗಿ 75 ಸಾಕ್ಷಿ ವಿಚಾರಣೆ ನಡೆದು 800 ದಾಖಲೆಗಳು ಹಾಜರು ಮಾಡಲ್ಪಟ್ಟಿವೆ. ಇನ್ನೂ ನೂರಾರು 25 ಮಂದಿ ಸಾಕ್ಷಿಗಳ ವಿಚಾರಣೆ ಬಾಕಿಯಿದೆ ಪ್ರೋಸಿಕ್ಯೂಶನ್ ಪರ ಸ್ಪೆಶಲ್ ಪ್ರೋಸಿಕ್ಯೂಟರ್ ಶ್ರೀ ಬಿ. ಗಂಗಾಧರ ದಾಸರೂ ಆರೋಪಿಗಳ ಕಡೆಯಿಂದ ರಾ|ಬ| ಎನ್. ಸುವರ್ಣ, ಶ್ರೀಗಳಾದ ಕೆ. ವೈ. ಪೂಜಾರಿ, ಕೆ. ಎನ್. ರೈ ಮತ್ತು ಜನಾಬ್ ಯುಸಫ್ ಅವರೂ ವಾದಿಸುತ್ತಿರುವರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ಮಂತ್ರಿಗಳ ಸಂದರ್ಶನ—ಕಳೆದ ತಾ. 28ರಲ್ಲು ಮದ್ರಾಸು ಸರಕಾರದ ಅರ್ಥ ಸಚಿವ ಶ್ರೀ ಗೋಪಾಲರೆಡ್ಡಿಯವರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನವನ್ನು ಸಂದರ್ಶಿಸಿದಾಗ ಭವನದ ಸುಪರಿಂಟೆಂಡೆಂಟ್ ಶ್ರೀ ಬಿ. ಬಿ. ಸೆಟ್ಟರು ಸುಸ್ವಾಗತವನ್ನಿತ್ತರು. ವಿದ್ಯಾರ್ಥಿ ಯೂನಿಯನ್ನಿನ ಜತೆಕಾರ್ಯದರ್ಶಿಗಳಾದ ಎಮ್. ಕಿಟ್ಟಣ್ಣ ರೈ ಮತ್ತು ಬಡಗಬೆಟ್ಟು ಸುಂದರ ಹೆಗ್ಡೆಯವರು ಪುಷ್ಪಮಾಲಿಕೆಗಳನ್ನು ಮಂತ್ರಿಗಳಿಗೆ ಅರ್ಪಿಸಿದರು. ವಿದ್ಯಾರ್ಥಿಗಳ ಗುಣ ನಡತೆಯ ಕುರಿತು ಮಂತ್ರಿಗಳು ನಾಲ್ಕು ಮಾತುಗಳನ್ನಾಡಿದರು.

ಬೈಲೂರು—ಇದೇ ತಾ. 3 ನೇ ಆದಿತ್ಯವಾರ ಬೈಲೂರು ಗಾಂಧೀ ಕ್ಲಬ್ಬಿನಲ್ಲಿ ಡಾ| ವೆಂಕಟ್ರಾವ್ ಕೊರಡ್ಕಲ್ಲರ ಅಧ್ಯಕ್ಷತೆಯಲ್ಲಿ ಸಭೆ ಜರಗಿ 'ಹೆತ್ತವರ ಜವಾಬ್ದಾರಿ' ಎಂಬ ವಿಷಯದ ಕುರಿತು ಭಾಷಣಗಳಾದುವು. ಡಾ ಎ. ಕೆ. ಸುಬ್ಬರಾಯರು ಈ ಕುರಿತು ಅಮೂಲ್ಯ ಸೂಚನೆಗಳನ್ನು ಕೊಟ್ಟರು.

ಶಿರ್ವ—ಉಡುಪಿ ತಾಲೂಕಿನ ಹಿರಿಯೂರಾಗಿದ್ದು ಬಹುಮುಖದ ಅಭಿವೃದ್ಧಿ ಪಡೆದಿರುವ ಶಿರ್ವಮಂಚಕಲ್ಲಿನಲ್ಲಿ ಇದೇ ತಾ. 1-12-50 ರಲ್ಲಿ ಸಬ್‌ಪೋಸ್ಟಾಫೀಸು ತೆರೆಯಲ್ಪಟ್ಟಿತು. ಈ ಸಮಾರಂಭಕ್ಕಾಗಿ ಸಭೆ, ಭಾಷಣಗಳು ಮತ್ತು ಚಹಾ ಸತ್ಕಾರಗಳಾದ್ದುವು.

ನೋಟೀಸು
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No 595/1949

ದಿ. ಯುನೈಟೆಡ್ ಬಾಸೆಲ್ ಮಿಶ್ಶನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಎಸೋಸಿಯೇಶನ್, ರೆಪ್ರೆಸೆಂಟೆಡ್ ಬ್ಯಾ ಇಟ್ಸ್ ಡಿಸ್ಟ್ರಿಕ್ಟ್ ಟ್ರಿಜರರ್ ಎಂಡ್ ಸೆಕ್ಯುಲರ್ ಏಜಂಟ್ Rev. T. Rossel —ವಾದಿ

ಮತ್ತು

ಡೇವಿಡ್ ರೋಬರ್ಟ್ಸ್ ಕೂಡಾ —ಪ್ರತಿವಾದಿಸು

ಇವರೊಳಗೆ

18ನೇ ಪ್ರತಿವಾದಿ ಮುಸ್ತಾಫ್ ಬ್ಯಾರಿಪ್ಪಡಿ ಅಂದುಬ್ಯಾರಿ ಮಗ ಕಾಸರಗೋಡು ತಾಲೂಕು ಆಕ್ಕತ್ತ ಮೈಲ್ ಗ್ರಾಮದ ನೆಲ್ಲಿಕುಂಜೆಯಲ್ಲಿ ವಾಸ

ಮೇಲ್ಕಂಡ ವ್ಯಾಜ್ಯದ ಪ್ಲೇಂಟನಲ್ಲಿ ವಿವರಿಸಿದ ಆಸ್ತಿ ಸ್ವಾಧೀನತೆ ಬಗ್ಗೆ ಕೂಡಾ ದಾಖಲು ಮಾಡಿದ ಸದರೀ ವ್ಯಾಜ್ಯವು ತಾರೀಕು 19 12 50ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿದೆ. ಆಕುರಿತು 18ನೇ ಪ್ರತಿವಾದಿಯ ಆಕ್ಷೇಪ ಇದ್ದಲ್ಲಿ ಸದರೀ ತಾರೀಕಿನಲ್ಲಿ ಹ್ಯಾಜರು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸುವದಾಗುತ್ತದೆ.

K. Ganesh Rao
ವಾದಿಕಡೆ ವಕೀಲ್,

ಕಾಸರಗೋಡು, ತಾ. 29-11-50

Notice
ಕುಂದಾಪುರ ಡಿ. ಮು. ಕೋರ್ಟಿನ
ಕ್ರಮ ನಂಬ್ರ 459/[illegible]

ರಾಮ ಕೃಷ್ಣ ಸೇಟ್ —ವಾ[illegible]
ಗಿರಿಜಾ ಬಾಯಿ ಕೂಡಾ —ಪ್ರತಿವಾದಿ

ಕುಂದಾಪುರ ಕಸಬೆಯಲ್ಲಿರುವ ಮಂಜುನಾ[illegible] ಶೇಟರ ವಿಧವೆ, ಗಿರಿಜ ಬಾಯಿ(1ನೇ ಪ್ರತಿವಾ[illegible]ಗೆ ಈ ಮೂಲಕ ತಿಳಿಯಪಡಿಸುವದೇನೆಂದ[illegible]

ವಾದಿ ಭಾವಾ ಸ್ಥಳಗಳ ಸ್ವಾಧೀನತೆ [illegible] ಟ್ಟುವಳ್ಳಿ ವಗೈರೆ ನಿವೃತ್ತಿ ಕೇಳಿ ಜರಗಿ[illegible] ಮೇಲಣ ದಾವೆ ತಾ. 13-12-50ಕ್ಕೆ ತನ್ನಿ[illegible] ಇಡೋಣಾಗಿಯದೆ. ಆ ದಿವಸದಲ್ಲಿ 1ನೇ [illegible]ತಿವಾದಿಕಡೆಯಿಂದ ಆಕ್ಷೇಪವಿದ್ದಲ್ಲಿ ಸ[illegible] ತಾರೀಕಿನಲ್ಲಿ ಕೋರ್ಟಮುಂದೆ ಹ್ಯಾಜೀ[illegible] ಮಾಡಿಕೊಳ್ಳತಕ್ಕದೆಂಬ ಸಂಗತಿ ಈ ಮೂ[illegible] ತಿಳಿಸೋಣಾಗಿಯದೆ.

(By order of the Cou

A. N. Rao
Advocate for Plaint[illegible]

Coondapoor 28-11-50



ಮಂಗಳೂರು

ಔತಣ ಸತ್ಕಾರ—ಜಿಲ್ಲಾ ಟೀಚರ್ಸ್ ಗಿಲ್ಡಿನವರು ಕಳೆದ ತಾ. 25ರಲ್ಲು ದಕ್ಷಿಣ ಭಾರತ ಅಧ್ಯಾಪಕ ಸಂಘದ ಅಧ್ಯಕ್ಷರಾದ ಶ್ರೀ ನಟರಾಜರನ್ನೂ, ಅವರ ಜತೆಯಲ್ಲಿದ್ದ ವಿದ್ಯಾಖಾತೆಯ ಡಿಪ್ಯುಟಿ ಡ್ಯಾರೆಕ್ಟರ್, ಶ್ರೀ ಶಂತಾನ ಕೃಷ್ಣ ನಾಯ್ಡು, ಪಚ್ಚಿಯಪ್ಪಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ತಂಪಸ್ ಮತ್ತು ಶಾಲೆಗಳ ಇನ್ಸ್‌ಪೆಕ್ಟ್ರೆಸ್ ಶ್ರೀಮತಿ ಕಮಲಾಬಾಯಿಯವರಿಗೊಂದು ಔತಣವಿತ್ತರು. ಗಿಲ್ಡಿನ ಅಧ್ಯಕ್ಷರು ಸ್ವಾಗತ ಭಾಷಣ ಮಾಡಿದ ಬಳಿಕ ಅತಿಥಿಗಳು ಅಧ್ಯಾಪಕರ ಘನತೆಯನ್ನು ಅವರೇ ಹೆಚ್ಚಿಸಿಕೊಳ್ಳುವಂತೆ ಶ್ರಮಿಸಬೇಕೆಂದರು.

ದ. ಕ ಜಿಲ್ಲಾ ಬೋರ್ಡಿನ ಸಭೆಯು—ಕಳೆದವಾರ 29ರಲ್ಲು ಉಪಾಧ್ಯಕ್ಷ ಶ್ರೀ ಡೆನಿಸ್ ಪಿಂಟೊ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಸಾರ್ವಜನಿಕ ಆರೋಗ್ಯದ ಕಾಯಂ ಕಮಿಟಿಗೆ ಶ್ರೀಮತಿ ಪ್ರಫುಲ್ಲಾ ಹೆಗ್ಡೆಯವರ ಸ್ಥಾನದಲ್ಲಿ ಶ್ರೀ ಧರಣಪ್ಪ ಅಧಿಕಾರಿಗಳು ಸರ್ವಾನುಮತದಿಂದ ಆರಿಸಲ್ಪಟ್ಟರು.

ಕಾರ್ಕಳ ಬೋರ್ಡ್ ಹ್ಯಾಸ್ಕೂಲಿನಲ್ಲಿ ಫಾರ್ಮ್ IIIರಲ್ಲಿ ಒಂದು ಹೆಚ್ಚಿನ ವಿಭಾಗ, ಪುತ್ತೂರು ಹ್ಯಾಸ್ಕೂಲಿನಲ್ಲಿ ಫಾರ್ಮ್ IVರಲ್ಲಿ ಒಂದು ಹೆಚ್ಚಿನ ವಿಭಾಗ, ಕೋಟೇಶ್ವರ ಹ್ಯಾಸ್ಕೂಲಿನಲ್ಲಿ 1950-51ರಲ್ಲಿ ಫಾರ್ಮ್ Vನ್ನೂ ತೆರೆಯುವುದು, ಅಥವಾರು ಹ್ಯಾಸ್ಕೂಲಲ್ಲಿ 1951-52ರಲ್ಲು ಫಾರ್ಮ್ Vನ್ನೂ ತೆರೆಯುವುದು, ಹಿರಿಯಡ್ಕ ಹ್ಯಾಸ್ಕೂಲಲ್ಲಿ 1951-52ರಲ್ಲು ಫಾರ್ಮ್ Vನ್ನೂ ತೆರೆಯುವುದು ಇದೇ ರೀತಿ ಸಾಳ್ಯದಲ್ಲಿಯೂ ತೆರೆಯುವುದು ಇವುಗಳನ್ನೆಲ್ಲಾ ಮಂಜೂರು ಮಾಡಲಾಯಿತು.

ಪಂಜ ಮತ್ತು ಬೆಳ್ಳಾರೆ ಇವುಗಳಲ್ಲಿ ಎಲ್ಲಿ ಹ್ಯಾಸ್ಕೂಲು ತೆರೆಯಬಹುದೆಂಬ ಪ್ರಶ್ನೆಯನ್ನು ಕೆಲವು ಶರ್ತಗಳನ್ನು ಪೂರೈಸುವುದಾದರೆ ಎರಡೂ ಕಡೆಗಳಲ್ಲಿ ಹ್ಯಾಸ್ಕೂಲು ತೆರೆಯಬಹುದೆಂಬದಾಗಿ ತೀರ್ಮಾನಿಸಲಾಯಿತು. ಶರ್ತಗಳು ಈ ಕೆಳಗಿನಂತಿವೆ—ಸ್ಥಳವಂದಿಗರು ಈ ಕೆಳಗಿನವುಗಳನ್ನೂ ಒದಗಿಸಬೇಕು-ಕಟ್ಟಡ ಹಾಗೂ ಬೆಂಚು, ಕುರ್ಚಿ ಇತ್ಯಾದಿ ಅಗತ್ಯವುಳ್ಳ ಸಾಮಾನುಗಳು, ವಿಜ್ಞಾನ ಅಭ್ಯಾಸಕ್ಕೆ ಬೇಕಾದ ಉಪಕರಣಗಳು, ಆಟಕ್ಕೆ ಬೇಕಾದ ಸ್ಥಳ, ಜಾತಿಭೇದವಿಲ್ಲದ ಹೊಕ್ಕುಲು ಏರ್ಪಾಡು ಮತ್ತು ನಗದಿ ರೇವಣಾತಿ ರೂ 5000/ ಬರುವ ಮೇ ತಿಂಗಳ ತಾ 15 ರೊಳಗೆ ಇವನ್ನೆಲ್ಲ ಒದಗಿಸಿದರೆ ಜೂನ್ ಆರಂಭದಿಂದಲೇ ಶಾಲೆ ತೆರೆಯಬಹುದೆಂದೂ ಈ ಬಗ್ಗೆ ವಿದ್ಯಾಧಿಕಾರಿಗಳಿಗೆ ಬರೆದುಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಕೋಟೇಶ್ವರ ಶಾಲೆಗೆ ಮಹಾತ್ಮಾಗಾಂಧಿ ಸ್ಮಾರಕವಾಗಿ ತಾನು ಒಂದು ಕಟ್ಟಡ ಕಟ್ಟಿಸಿ ದಾನ ಕೊಡುವುದಾಗಿಯೂ ಒಂದು ಗಾಂಧೀಜಿಯವರ ಪ್ರತಿಮೆ ಇಡುವುದಾಗಿಯೂ ಶ್ರೀ ಬಿಜಾಡಿ ವೆಂಕಟ್ರಮಣನವರು ತಿಳಿಸಿದ್ದಕ್ಕೆ ಒಪ್ಪಿಗೆ ಕೊಡಲಾಯಿತು.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರ ಪ್ರವಾಸ—ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಮಿಜಾರು ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಅಲ್ಲಿಂದ ಮೂಲ್ಕಿಗೆ ಪ್ರಯಾಣ ಬೆಳೆಸಿದರು. ಆಸ್ಪತ್ರೆ ಬಡವರ ನಿಧಿಯ ಸಮಿತಿಯವರು ಹೊಸತಾಗಿ ಕಟ್ಟಿಸಿದ ಒಳರೋಗಿಗಳ ಕೊಠಡಿಯ ದಾನವನ್ನು ಬೋರ್ಡಿನ ಪರವಾಗಿ ಸ್ವೀಕರಿಸಿ, ಜಿಲ್ಲಾ ಕಲೆಕ್ಟರಿಂದ ಉದ್ಘಾಟಿಸಲ್ಪಟ್ಟ ಆ ಕೊಠಡಿಯ ಪ್ರಾರಂಭೋತ್ಸವದಲ್ಲಿ ಭಾಗಿಗಳಾದರು. ನಂತರ ಮೂಡಬಿದ್ರೆಗೆ ಆಗಮಿಸಿ ಇಬ್ಬರ ದೂರುಗಳನ್ನು ಆಲಿಸಿ, ಮಂಗಳೂರಿಗೆ ತೆರಳಿದರು

ಹಾಕ್ಕಿ ಪಂದ್ಯಾಟ—ಆಲ್ಬುಕರ್ಕ್ ಸ್ಮಾರಕ ಹಾಕ್ಕಿ ಪಂದ್ಯಾಟದ ಮೊದಲನೆ ಆಟವು ಕಳೆದ ತಾ. 28ರಲ್ಲು ಪೋಲೀಸು ಪರೇಡ್ ಬಯಲಿನಲ್ಲಿ ನಡೆದು ಮಂಗಳೂರು ಸ್ಪೋರ್ಟ್ಸ್ ಕ್ಲಬ್ಬಿನವರು ಕಂಕನಾಡಿ ಟೀಮನ್ನು ಸೋಲಿಸಿರುವರು. ಗೆದ್ದವರು ಒಂದು ಗೋಲನ್ನು ಹೊಡೆದಿದ್ದರು.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಕುಂದಾಪುರ.
ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಅಸಲು ವ ಬಡ್ಡಿ ಸಹಿತ ಬಹಳ ಕಾಲದಿಂದ ಬಾಕಿ ಮಾಡಿಕೊಂಡಿದ್ದು ಸದ್ರಿಯವರಿಗೆ ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟದ್ದು, ಕೆಲವರಿಗೆ ಜ್ಯಾರಿಯಾಗಿಯೂ, ಕೆಲವರಿಗೆ ಜ್ಯಾರಿಯಾಗದೆ ಮೃತಪಟ್ಟಿರುವರೆಂದು ವಾಪಾಸು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 14-12-'50ನೇ ಗುರುವಾರ ಹಗಲು ಗಂಟೆ 3ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತತೋರುವ ಇತರ ಯಾವುದೇ ದಿನಗಳಲ್ಲಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
286/7-8	ಶ್ರೀ ಕುಪ್ಪಯ್ಯ ಭಟ್ಟ, ಕೃಷ್ಣ ಭಟ್ಟರ ಮಗ, ಗುಲ್ವಾಡಿ ಗ್ರಾಮ, ಸೌಕೂರು, ಪೋಸ್ಟು ಕಂಡ್ಲೂರು.	160-0-0
328/7-8	ಶ್ರೀ ಕುಪ್ಪಯ್ಯ ಭಟ್ಟ, ಕೃಷ್ಣಭಟ್ಟರ ಮಗ, ಗುಲ್ವಾಡಿ ಗ್ರಾಮ, ಪೋಸ್ಟು ಕಂಡ್ಲೂರು.	90-0-0
312/7-8	ಶ್ರೀ ಕೆ. ಸನ್ನಯ್ಯ ಶೇರಿಗಾರ, ಪುರುಷಯ್ಯ ಸೇರಿಗಾರನ ಮಗ, ರಿಟೈರ್ಡ್ ಪೋಸ್ಟುಮೇನ್, ಕುಂದಾಪುರ.	150-0-0
368/7-8	ಶ್ರೀ ರಾಮಚಂದ್ರ ಪಡಿಯಾರ, ವಿಟ್ಟಪ್ಪಪಡಿಯಾರರ ಮಗ, ಮರವಂತೆಗ್ರಾಮ, ಪೋಸ್ಟು ಕಿರಿಮಂಜೇಶ್ವರ	250-0-0
389/7-8	ಶ್ರೀ ರಾಮಚಂದ್ರ ಪಡಿಯಾರ, ವಿಟ್ಟಪ್ಪಪಡಿಯಾರರ ಮಗ, ಮರವಂತೆಗ್ರಾಮ, ಪೋಸ್ಟು ಕಿರಿಮಂಜೇಶ್ವರ.	250-0-0
426/7-8	ಶ್ರೀ ರಾಮಚಂದ್ರ ಪಡಿಯಾರ, ವಿಟ್ಟಪ್ಪಪಡಿಯಾರರ ಮಗ, ಮರವಂತೆಗ್ರಾಮ, ಪೋಸ್ಟು ಕಿರಿಮಂಜೇಶ್ವರ.	200-0-0
557/6-8	ಶ್ರೀ ರಾಮಚಂದ್ರ ಪಡಿಯಾರ, ವಿಟ್ಟಪ್ಪಪಡಿಯಾರರ ಮಗ, ಮರವಂತೆಗ್ರಾಮ, ಪೋಸ್ಟು ಕಿರಿಮಂಜೇಶ್ವರ.	100-0-0
741/7-8	ಶ್ರೀ ಅನಂತಪದ್ಮನಾಭ ಕಲ್ಕೂರ, ಶಂಕರನಾರಾಯಣ ಕಲ್ಕೂರರ ಮಗ, ಹಂಗೆದೇವಸ್ಥಾನ, ಹಂಗವಳ್ಳಿಗ್ರಾಮ, ಪೋಸ್ಟು ಬೆಳ್ವೆ.	50-0-0
764/7-8	ಶ್ರೀ ಸುಬ್ಬಣ್ಣ ಸೆಟ್ಟಿ, ಅಣ್ಣಪ್ಪಸೆಟ್ಟಿ ಅಳಿಯ, ಕೆಡೂರು ಹಾಡಿಮನೆ, ಅಲ್ಬಾಡಿ, ಪೋಸ್ಟು ಹಾಲಾಡಿ.	90-0-0
115/8-9	ಶ್ರೀ ಮಹಲಿಂಗಸೆಟ್ಟಿ, ಪರೇಲ ಮಂಜಯ್ಯಸೆಟ್ಟಿ ಅಳಿಯ, ಆನಗಳ್ಳಿ ಗ್ರಾಮ, ಪೋಸ್ಟು ಕುಂದಾಪುರ.	100-0-0
267/8-9	ಶ್ರೀ ರಾಮುಶೇಟ್, ಪುತ್ತುಶೇಟರ ಮಗ, ಚಿನಿವಾರ, ಕುಂದಾಪುರ.	252-0-0
303/8-9	ಶ್ರೀ ವೆಂಕಟ್ರಮಣ ಭಟ್ಟ, ಶೇಷಭಟ್ಟರ ಮಗ, ದೇವಲಕುಂದ ಗ್ರಾಮ, ಪೋಸ್ಟು ಹಕ್ಲಾಡಿ.	140-0-0
304/8-9	ಶ್ರೀ ವೆಂಕಟ್ರಮಣಭಟ್ಟ, ಶೇಷಭಟ್ಟರ ಮಗ, ದೇವಲಕುಂದ ಗ್ರಾಮ, ಪೋಸ್ಟು ಹಕ್ಲಾಡಿ	40-0-0
336/8-9	ಶ್ರೀ ಆತ್ರಾಡಿ ಅಣ್ಣಪ್ಪ ಸೆಟ್ಟಿ, ಚಿಕ್ಕಯ್ಯ ಸೆಟ್ಟಿ ಅಳಿಯ, ಆತ್ರಾಡಿ ಪೋಸ್ಟು ವಂಡ್ಸೆ.	90-0-0
344/8-9	ಶ್ರೀ ಮಾಣಿಬೈಲು ಮಹಾಬಲಸೆಟ್ಟಿ, ಮಾದಯ್ಯಸೆಟ್ಟಿ ಅಳಿಯ, ಮಾಣಿಬೈಲು ಕರ್ಕುಂಜೆ ಗ್ರಾಮ, ಪೋಸ್ಟು ಕರ್ಕುಂಜೆ.	100-0-0
349/8-9	ಶ್ರೀ ಎ. ನಾರಾಯಣ ಸೆಟ್ಟಿ, ನಂದ್ಯಪ್ಪ ಸೆಟ್ಟಿ ಮಗ, ವಕೀಲ್ಸ್, ಕ್ಲಾರ್ಕ್, ಕುಂದಾಪುರ.	20-0-0
475/8-9	ಶ್ರೀ ಸೂರ್ಯಣ್ಣ ಸೆಟ್ಟಿ, ರಾಮಣ್ಣ ಸೆಟ್ಟಿ ಅಳಿಯ, ಮೊಗೆಬೆಟ್ಟು, ಬೇಳೂರು ಗ್ರಾಮ, ಪೋಸ್ಟು ಕೋಟ.	10-0-0
627/8-9	ಶ್ರೀ ಎ. ನಾರಾಯಣ ಸೆಟ್ಟಿ, ವಕೀಲ್ಸ್ ಕ್ಲಾರ್ಕ್, ಕುಂದಾಪುರ.	60-0-0

Coondapur, ೬0-11-'50.

K. Nandyappa Shetty,
Agent, Coondapur.

ಪ್ರಕಟಣೆ
ಪಡುಬಿದ್ರೆ ಕಂಬಳ

ವರ್ಷಂಪ್ರತಿ ಜರಗತಕ್ಕ ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ಇದೇ ಬರುವ ತಾರೀಕು 20-12-1950ನೇ ಬುಧವಾರ ದಿವಸ ಜರಗಿಸಬೇಕಾಗಿಯೂ ಹೆಚ್ಚಿನ ಜತೆ ಓಟದ ಕೋಣಗಳಗನ್ನು ಬರಮಾಡಿಸ ಬೇಕಾಗಿಯೂ ನಿಶ್ಚೈಸಿದ್ದೇವೆ. ಮಹಾಜನರ ಉತ್ತೇಜನದ ಸಲುವಾಗಿ ಏಳು ಕೋಲು ನಿಶಾನಿಗೆ ನೀರು ಹಾರಿಸಿ ಹಲಗೆಯಲ್ಲಿ ಪ್ರಥಮ ಬಂದ ಕೋಣಗಳಿಗೂ ಹಗ್ಗದಲ್ಲಿ ಪ್ರಥಮ ಬಂದು ಜಯಶೀಲನಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನು ಬಹುಮಾನ ಕೊಡುವುದಾಗಿಯೂ ಆಲೋಚಿಸಿದ್ದೇವೆ. ಆದಪ್ರಯುಕ್ತ ಮಹಾಶಯರೆಲ್ಲರೂ ತಮ್ಮ ಯಾ ಬಂಧುಮಿತ್ರರ ಓಟದ ಕೋಣಗಳ ಸಮೇತ ದಯಮಾಡಿ ಬಂದು ಸದ್ರಿ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುವ,

ತಮ್ಮ ಅಗಮನಾಭಿಲಾಷಿ,
ಬೋಳ ಮಂಜಯ್ಯ ಶೆಟ್ಟಿ.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
R- E. P- 427/1949
O. S 174/47

ಮಹಾಬಲ ಸೆಟ್ಟಿ —ಅರ್ಜಿದಾರ

1 ನಾಗಮ್ಮ ಹೆಗ್ಗಡ್ತಿ ರುಕ್ಮಿಣಿ ಸೆಡ್ತಿರ ಮಗಳು, 2 ವೀರಣ್ಣ ಸೆಟ್ಟಿ, ಅಂತಯ್ಯ ಸೆಟ್ರ ಅಳಿಯ —ಎದ್ರಿರು

1ನೇಯವಳು ಕುಂದಾಪುರ ತಾಲ್ಲು ಅಲಬಾಡಿ ಗ್ರಾಮದ ಕೆಜಾಡಿಯಲ್ಲಿಯೂ 2ನೇಯವನು ಬೇಳೂರು ಗ್ರಾಮದ ಭಟ್ರ ಮಕ್ಕಿಯಲ್ಲಿಯೂ ಇರುತ್ತಾರೆ.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

ಮೇಲಿನ ಅಮಲ್ದಾರಿಯಲ್ಲಿ ಸ್ಥಿರಾಸ್ತಿ ಏಲಂ ಬಗ್ಗೆ ಅರ್ಜಿದಾರನೇ ದುಸ್ತಿಹಾರು ದಾಕಲು ಮಾಡಿರುತ್ತಾನೆ. ಸದ್ರಿ ದುಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಅಮಲ್ದಾರಿಯನ್ನು ತಾರೀಕು 15—12—1950ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪವಿದ್ದರೆ ಆ ದಿನ ಹಗಲು 11ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

By order of the Court
Y. Tejappa Shetty
Advocate for Petitioner.
Coondapoor, 28-11-1950

ಬಾಗ್ಯಾತು ಹಿತ್ಲು ಮನೆ ಕಟ್ಟೋಣದ ಮಾರಾಟದ
ನೋಟೀಸು

ಉಡುಪಿ ಟೌನಿನ ಮಧ್ಯೆ ಮಸೀದಿ ರೋಡಿನ ಬದಿಯಲ್ಲಿರುವ ಬಾಗ್ಯಾತು 28ಸೆಂಟ್ಸು ವಿಸ್ತಾರದ ಹಿತ್ಲು ಸ್ಥಳ. ಇದರಲ್ಲಿರುವ ಹಂಚು ಚಾವಣಿಯ ಇಲೆಕ್ಟ್ರಿಕ್ ಫಿಟ್ಟಿಂಗಿನ ಮನೆ, ಹಟ್ಟಿಕೊಟ್ಟಿಗೆ, ಬಾವಿ, ತೆಂಗು ಮಾವು ವಗೈರೆ ಕೂಡಿರುವ ಸರ್ವಾಧಿಯ ಮಾರಾಟಕ್ಕಿದೆ. ಇದು ಈ ಕೆಳಗಿನ ವಿಳಾಸದಾರರೊಬ್ಬರ ಸಂಪೂರ್ಣ ಹಕ್ಕಿನದ್ದಾಗಿ ಎಲ್ಲಾ ವಿಧದ ಸಾಲ, ಜವಾಬ್ದಾರಿ ಹಂಗಾಧೀನ ವಗೈರೆಯಿಂದ ಪೂರ್ಣ ವಿರಹಿತವಾಗಿದೆ. ಕ್ರಯಕ್ಕೆ ಪಡಕೊಳ್ಳುವರೆ ಅಪೇಕ್ಷಿಸುವವರು ಅಗತ್ಯವುಳ್ಳ ರಿವಾಜಿನ ಅನುಭವದ ಬಗ್ಗೂ ಕ್ರಯಕ್ಕೆ ಪಡಕೊಳ್ಳುವ ಅತ್ಯಧಿಕವಾದ ಮೌಲ್ಯದ ಬಗ್ಗೆ ಸಹಾ ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಎಲ್ಲಾ ಅನುಭವವು ಗೊತ್ತಾಗುತ್ತದೆ.

R- P. Hirebet,
C o W H Brady & Co-, Ltd.,
Mukhinery Dept .
Post Box No 26,
BOMBAY 1.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಟ್ಸಿರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಸ್ವೀಕಾರ-ವಿಮರ್ಶೆ

೧ ಜೀವನ ಗೀತಾಂಜಲಿ (ಗೀತಗಳು-ವಚನ ಕವನಗಳು) ಲೇಖಕರು: ಎಂ. ವರ್ಧಮಾನ ಹೆಗ್ಡೆ, 'ವಿಶಾರದ' ಇವರು. ಮಹಾವೀರ ಗ್ರಂಥಮಾಲೆಯ ಸಪ್ತಮ ಪುಷ್ಪ ಪ್ರಕಾಶಕರು: ಶ್ರೀವೀರ ಸೇವಾ ಸಂಘ, ಧರ್ಮಸ್ಥಳ. ಬೆಲೆ ರೂ. ೧-೮-೦

ಮಾನವನಿಗೆ ದಾರಿದ್ರ್ಯ, ಬಡತನ, ಆಘಾತಗಳಿಲ್ಲ ಬದುಕಿನಲ್ಲಿ ಒಂದು ಸಂಪತ್ತೆಂದೇ ಹೇಳಬೇಕು. ಇಂತಹ ಅನುಭವಗಳಿಂದ ಹಸ್ಸಾದ ಮನಸ್ಸಿನ ಫಲವಾಗಿಯೋ ಏನೋ ಜೀವನ ಗೀತಾಂಜಲಿ ಹೊರಹೊಮ್ಮಿದೆ ಪ್ರತಿಯೊಂದು ಕವಿತೆಯಲ್ಲೂ ಆಧ್ಯಾತ್ಮಿಕ ತೇಜಸ್ಸಿದೆ; ಮಾನಸಿಕ ಯಾತನೆಯ ನಾದವಿದೆ. 'ಹಳ್ಳಿಯ ಬಾಳು ಬೆಲ್ಲದಂತೆ ಸವಿ' 'ಹರಿಜನ ಭಂಧು' 'ಸಂತವಾಣಿ' 'ಸಂತ ಸತ್ಪುರುಷರಿಗೆ' 'ಬಡವರ ಗೋಳು' 'ಕಬ್ಬಿಗರ ಅಂತರಂಗದ ವಾಣಿ' 'ಕುಟಿಲ ಜಗತ್ತು' 'ಜೀವನದೀಪ್ತಿ' ಮುಂತಾದ ಕವಿತೆಗಳು ಅತ್ಯಂತ ಮನೋಹರಗಳಾಗಿಯೂ ಹೃದಯಸ್ಪರ್ಶಿಗಳಾಗಿಯೂ ಇರುತ್ತವೆ. ಜೀವನದ ನಾನಾ ಮುಖದ ವೈಚಿತ್ರ್ಯಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಕವಿಗಳ ಭಾವನೆಗೆ ಶೈಲಿಯು ಪೋಷಕವಾಗಿ, ಸರಳವಾಗಿ ಬಂದಿರುತ್ತದೆ. ಇಷ್ಟನ್ನು ಹೇಳುವಾಗ ಸೂಚ್ಯವಾಗಿ ಒಂದೆರಡು ಮಾತು ಮೊದಲಿನ 'ಗೀತ'ಗಳ 55 ಕವಿತೆಗಳ ಕುರಿತು ಹೇಳಲೇ ಬೇಕಾಗಿದೆ. ಈ ಆವೃತ್ತಿ ದು ಕವಿತೆಗಳನ್ನು ಸಿನೇಮಾ ಪದ್ಯಗಳ ಧಾಟಿಯಲ್ಲಿ ಬರೆಯಲಾಗಿದೆ. ಕನ್ನಡದ ಭಾವನಾತ್ಮಕ ಗೀತೆಗಳು ಹಿಂದೀ ಸಿನೇಮಾ ಪದ್ಯಗಳ ಧಾಟಿಗೆ ಏನೇನೂ ಹೊಂದಿಕೆಯಾಗುವುದಿಲ್ಲ. ಭಾವಕ್ಕೆ ಧಾಟಿಯು ತಡೆಯಾಗಿ ನೀರಸವಾಗಿ ತೋರುತ್ತದೆ. ಮುಂದೆ ಈ ಮೋಹವನ್ನು ಪೂರ್ತ ತೊರೆದರೆ ಒಳ್ಳಿತು. ಎಂ. ವರ್ಧಮಾನ ಹೆಗ್ಡೆಯವರು ಮುಂದಕ್ಕೂ ಇಂತಹ ಉತ್ತಮ ಕೃತಿಗಳನ್ನು ರಚಿಸುವಂತೆ ಜನ ಪ್ರೋತ್ಸಾಹಿಸಬೇಕು. 'ಜೀವನಗೀತಾಂಜಲಿ' ಸಂಗ್ರಾಹ್ಯ ಕವಿತಾಸಂಗ್ರಹ.

೨. ಜಪಾನು ಬೆಳಕು-(೧೨ ಕತೆಗಳು) ಲೇಖಕರು: ಶ್ರೀ ಕುಡ್ಪಿ ವಾಸುದೇವ ಶೆಣೈ ಪ್ರಕಾಶಕರು ಪ್ರಭಾತ ಪ್ರಿಂಟರ್ಸ್ ಲಿಮಿಟೆಡ್, ಮಂಗಳೂರು. ಬೆಲೆ ರೂ. ೧-೦-೦

'ಜಪಾನ್ ಬೆಳಕು' ನಗು ಬರಹಗಳ ಸಂಗ್ರಹ. ಕಥಾವಸ್ತುವೂ-ಮಾತಿನ ಮೋಡಿಯೂ ವಿಚಿತ್ರರೀತಿಯದು. ಈ ಬಗೆಯ ಸನ್ನಿವೇಶ ಸಂದರ್ಭಗಳನ್ನು ಆಗಾಗ ನಾವು ಅಲ್ಲಿ ಇಲ್ಲಿ ಕಾಣಬಹುದು. ವಿನೋದ ವಿವೇಕದಿಂದ ಕೂಡಿದ್ದರೆ ನಿಜವಾಗಿಯೂ ಅಕೃತಿ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಶ್ರೀ ಶೆಣೈಯವರು ಇಂತಹ ಚಿತ್ರಗಳನ್ನು ರಚಿಸುವದರಲ್ಲಿ ಮೇಲಾದವರು. ಅವರ ದೃಷ್ಟಿಕೋನ ತೀಕ್ಷ್ಣವಾಗಿದೆ. ನಾಲ್ಕು ಜನದ ಎದುರು ಗಂಭೀರವಾಗಿ ಓದುತ್ತೇವೆ ಎಂದರೆ ಆಗದು. ನಡು ನಡುವೆ 'ತಿಸಕ್ಕನೆ' ಹಲ್ಕಿರಿದು ನಗಬೇಕಾಗುತ್ತದೆ. 'ಜಪಾನ್ ಬೆಳಕು' 'ಗಾಳಿ' 'ಶಾಂತಿ ಮತ್ತು ಅವಳ ಮೋಡಿ' 'ಘಟಂಗರು' 'ಸರ್ವಂಕಾವ್ಯಮಯಂಜಗತ್' ಉತ್ತಮವಾದ ವಿಡಂಬನಾತ್ಮಕ ಕತೆಗಳು. ವಿನೋದಲಹರಿಯೊಡನೆ ವಿಚಾರದ ಕಿಡಿಯನ್ನು ಹಾರಿಸುವ ಈ ಕೃತಿಯ ಉಪಯೋಗವನ್ನು ಎಲ್ಲರು ಪಡೆಯುವಂತಾಗಲಿ.

೩ 'ಕಿರಣ'—ದೀಪಾವಳಿ ಸಂಚಿಕೆ: ಸಂಪಾದಕರು: ಶ್ರೀ ಯು. ಆರ್. ರಾವ್, ಅದ್ಮಾರು ಮಠದ ಓಣಿ, ಉಡುಪಿ. ಬೆಲೆ, ೦—೮—೦

ಇಪ್ಪತ್ತೆರಡು ಪುಟ ಜಾಹಿರಾತುಗಳಿಂದಲೂ, ಸುಮಾರು ಇಪ್ಪತ್ತು ಬಾಲಿಶವಾದ ಬರಹಗಳಿಂದಲೂ ಕೂಡಿದ ಅರುವತ್ತು ಪುಟದ ಈ ದೀಪಾವಳೀ ವಿಶೇಷ ಸಂಚಿಕೆಯಲ್ಲಿ ಓದಬಹುದಾದ ಒಂದೆರಡು ಅನುವಾದಗಳೂ ಇವೆ.

೪ ದಕ್ಷಿಣ ಕನ್ನಡದಲ್ಲಿ ಧಾನ್ಯ ಸಂಗ್ರಹ— ಲೇಖಕ ಮತ್ತು ಪ್ರಕಾಶಕರು ಎಚ್. ಎಲ್. ನಾರಾಯಣ ಭಟ್ಟರು, ಪೆರಾಜೆ ಪೋ. ದ. ಕ. ಬೆಲೆ: ರೂ. ೦-೮-೦

ಸ್ವಾತಂತ್ರ್ಯ ಸಿಕ್ಕಿದಮೇಲೆ ದೇಶದಲ್ಲಿ ಹೊಸ ಕಾನೂನು ಮಾಡುವುದೂ ಹೊಸ ಮಸೂದೆ ತರುವುದೂ ಮತ್ತೆ ಅದನ್ನು ಅಲ್ಲಗಳೆಯುವುದೂ ನಮ್ಮ ಸರಕಾರದ ವೈಶಿಷ್ಟ್ಯವೆನ್ನಬೇಕು ಅದರಲ್ಲೂ ಮದ್ರಾಸು ಸರಕಾರ ಬೇರೆಲ್ಲಾ ಪ್ರಾಂತಕ್ಕಿಂತ ತಾನು ಮಹಾ ಬುದ್ಧಿಶಾಲಿಯೆಂದು ಪ್ರದರ್ಶನ ಮಾಡುವುದಕ್ಕೋ ಏನೋ ವರ್ಷಕ್ಕೆ ನೂರಾರು ಕಾಯಿದೆಗಳನ್ನು ತಯಾರಿಸುವುದೂ ಅದು ಅಧಿಕಾರಿಗಳಿಗೆ ತಿಳಿದು, ಜನತೆಯ ಗಮನಕ್ಕೆ ಬರುವ ಮೊದಲೇ ರದ್ದುಗೊಳಿಸುವುದೂ ಪರಿಪಾಠವಾಗಿ ಹೋಗಿದೆ. ಎಲ್ಲವಿಧದಿಂದಲೂ ಕಡೆಗಣಿಸಲ್ಪಟ್ಟ ದ. ಕನ್ನಡದ ಪಾಲಿಗೆ ಎಲ್ಲವೂ ಕಲಿಯುಲೊಂದು ಭಾರವೇ ಆಯಿತು. ವಿಪುಲವಾದ ಈ ಕಾಯಿದೆಗಳಿಂದ ಜನರಿಗೆ ಅದರ ಮೇಲೆ ತಾತ್ಸಾರ ಹುಟ್ಟುವುದು ಸ್ವಾಭಾವಿಕ. ಕೆಲವೊಮ್ಮೆ ಕಾಯಿದೆಗಳು ನಿಜವಾಗಿಯೂ ಜನಹಿತಕಾರಿಯಾಗಿದ್ದರೂ ಅಧಿಕಾರಿಗಳ ಅಜಾಗ್ರತೆಯಿಂದಲೋ— ಸ್ಥಿತಿವಂತರ ಕೈವಾಡದಿಂದಲೋ ಸಾಮಾನ್ಯ ಜನಕ್ಕೆ ಅದರಲ್ಲೂ ಹಳ್ಳಿಯ ರೈತನಿಗೆ ಅದರ ಲಾಭ ಸಿಕ್ಕುತ್ತಿಲ್ಲ 'ಸ್ವಾತಂತ್ರ್ಯ' ಬಂದರೆ ನಮಗೇನಾಯ್ತು? ಎನ್ನುತ್ತಾರೆ ಅವರು. ಈ ವರೆಗೆ ಧಾನ್ಯಸಂಗ್ರಹದ ಕುರಿತು ಇದ್ದ ಕ್ರಮದಲ್ಲಿ ತುಸು ಬದಲಾವಣೆಯನ್ನು ಮಾಡಿದೆ ಸರಕಾರ. ಈ ಕ್ರಮವು ಆಚರಣೆಯಲ್ಲಿ ಬಂದರೆ ರೈತನು ಕೊಂಚ ಚೇತರಿಸಿಯಾನು. ಸರಕಾರ ಏನೇ ಕಾನೂನು ಮಾಡಿದರೂ ಧನಿಗಳು ಜಬರದಸ್ತು ಮಾಡಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಾರೆ. ಅಂದರೆ ರೈತನಿಗೆ ನಿಜವಾದ ಕಾನೂನು ಹೇಗೆ ತಿಳಿಯಬೇಕು? ಅಂತಲೆ ನೂತನ ಕಾಯಿದೆಯನ್ವಯ ಆತನು ತನ್ನ ಸಂಸಾರಕ್ಕೂ ಸಾಗುವಳಿಗೂ, ಮಿಕ್ಕ ಅವಶ್ಯಕ ಕೆಲಸಗಳಿಗೂ ಎಷ್ಟನ್ನು ಉಳಿಸಿಕೊಳ್ಳಬಹುದು—ಧನಿಗೆಷ್ಟು ಕೊಡಬೇಕು?—ಎಷ್ಟು ಸಂಗ್ರಹಿಸಿಡಬೇಕು?—ಒಯ್ಯುವಾಗ ಯಾವರೀತಿಯ ಜಾಗ್ರತೆ ವಹಿಸಬೇಕು?—ಎನ್ನುವ ಸೂಚನೆ-ಸಲಹೆಗಳನ್ನು ಸರಳವಾದ ಭಾಷೆಯಲ್ಲಿ-ಬರೆದಿರುತ್ತಾರೆ ಶ್ರೀ ಭಟ್ಟರು. ಈ ಪುಸ್ತಕ ರೈತರಿಗೆ- ಧನಿಗಳಿಗೆ ಮಾತ್ರವಲ್ಲದೆ ಅಧಿಕಾರಿಗಳಿಗೂ ಅತ್ಯಂತ ಉಪಯುಕ್ತವಾದ ಪುಸ್ತಕ. ಸರಕಾರ ಮಾಡಿದ ಸುಧಾರಣೆಯು ಆಚರಣೆಗೆ ಬರುವಲ್ಲಿ ಇದು ತುಂಬ ಸಹಕಾರಿಯಾಗಬಲ್ಲುದು. ಉಪಯುಕ್ತವಾದ ಈ ಪುಸ್ತಕವನ್ನು ಲಲಿತವಾಗಿ ಬರೆದು ಕೊಟ್ಟು ಹಳ್ಳಿಯ ಬಡರೈತರಿಗೆ ತುಂಬ ಉಪಕಾರ ಮಾಡಿದ್ದಾರೆ ಲೇಖಕರು. ಸಾಮಾನ್ಯ ಜನರಿಗೂ ಇದರ ಅವಶ್ಯಕತೆಯಿರುವದರಿಂದ ಬೆಲೆಯನ್ನು ಕೊಂಚ ಇಳಿಸಬಹುದಾಗಿತ್ತು. ದ. ಕನ್ನಡದ ಪ್ರತಿಯೊಬ್ಬವ್ಯಕ್ತಿಯೂ ಇದನ್ನು ಪಡದುಕೊಂಡು ನ್ಯಾಯವಾದ ಮಾರ್ಗದಲ್ಲಿ ನಿರ್ಭೀತನಾಗಿ ಬದುಕುವದಕ್ಕೆ ಯತ್ನಿಸಬೇಕು.

೫ ಪುಷ್ಪ (ಮಾಸಪತ್ರಿಕೆ) ಸಂಪಾದಕ ಮತ್ತು ಪ್ರಕಾಶಕರ: ಶ್ರೀ ಎಂ. ವಿ. ಹೆಗ್ಡೆ, ಶಿರ್ವ, ವಾ. ಚಂದಾ ರೂ ೩—೦—೦ ಬಿಡಿ ಸಂಚಿಕೆ ೦—೪—೦

ಪುಷ್ಪದ ಹಿಂದಿನ ಸಂಚಿಕೆಗಳ ಕುರಿತೂ, ಮುಂದಿನ ಕುರಿತೂ ಸಂಪಾದಕರೇ ಬರೆದಿರುತ್ತಾರೆ. ಪತ್ರಿಕೆಯ ವಿಷಯವಾಗಿ ನಾವು ಹೇಳಬಹುದಾದ ಕುಂದು ಕೊರತೆಯನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದಾರೆ. ಪುಷ್ಪವಿಲ್ಲಿ ನವೀನ ಮಾರ್ಗದಲ್ಲಿ ಹೊರಬಂದಿರುವ ಅಂಶವನ್ನು ಶ್ಲಾಘಿಸಲೇ ಬೇಕು. ಸುಪ್ರಸಿದ್ಧ ವಿಡಂಬನಕಾರರೂ ರಾಜಕೀಯ ಬರಹಗಾರರೂ ಆದಶ್ರೀ ಎಂ.ವಿ.ಹೆಗ್ಡೆಯವರ ಸಂಪಾದಕತ್ವದಲ್ಲಿ ಪು ಪ್ಪ ಕನ್ನಡ ನಾಡಿನ 'ಮಾದರಿ' ಪತ್ರಿಕೆಯಾಗುವದೆನ್ನುವದರಲ್ಲಿ ಸಂದೇಹವಿಲ್ಲ. ಸಾಮಾನ್ಯ ಜನರಿಗೂ ಪ್ರಿಯವಾಗುವ ಒಂದೆರಡು ಲಘುಬರಹಗಳನ್ನೂ ಕೊಡುವಂತಾದರೆ ಒಳ್ಳಿತು.

— ಎಸ್ಪೆಲ್

ಪ್ರಕಟಣೆ

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 397/1950

R. J A. 2223/1950

1 ಮಂಜಕ್ಕ ರೈ ಬಂಟಪ್ಪ ಶೆಟ್ರ ಅಳಿಯನ ದ್ವಾಕೆ ರೈತಿ ಮಗ.

2 ರೇವತಿ, 3 ಉಮಾವತಿ ಅಂತಕ್ಕ ಹೆಂಗ್ಸಿನ ಮಕ್ಕಳು.

ಎಲ್ಲರೂ ಕಾಸರಗೋಡು ತಾಲೂಕು ಮಂಗಲ್ಪಾಡಿ ಗ್ರಾಮದ ಸೋಂತಾಡಿಯಲ್ಲಿರುವವರು. —ವಾದಿರು

ಮತ್ತು

1 ಬಂಟಪ್ಪ ಶೆಟ್ಟಿ, ದುಗ್ಗಪ್ಪ ಭಂಡಾರಿಗಳ ಅಳಿಯನ ಅಬ್ಬಕ್ಕೆ ಹೆಂಗ್ಸಿನ ಮಗ.

2 ಅಜ್ಜಕ್ಕ ದೇಯಿಂಞ ಹೆಂಗ್ಸಿನ ಮಗಳು ವ ಬಂಟಪ್ಪ ಶೆಟ್ರ ಸೊಸೆ ಮತ್ತು ಪರೇಲ್ ದೇವಪ್ಪ ಮಲ್ಲಿಯವರ ಹೆಂಡ್ತಿ.

3 ವಿಶ್ವನಾಥ ಮಲ್ಲಿ 2ನೇ ಪ್ರತಿವಾದಿ ಅಜ್ಜಕ್ಕ ಮಗ ಮತ್ತು ದೇವಪ್ಪ ಮಲ್ಲಿಯವರ ಮಗ

ಎಲ್ಲರೂ ಮಂಗಳೂರು ತಾಲ್ಲೂಕು ಕುಂಜತ್ತಬೈಲು ಗ್ರಾಮದಲ್ಲಿರುವವರು.

—ಪ್ರತಿವಾದಿರು

ಇವರೊಳಗೆ-

ಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿಯು ವಾದಿ ಪ್ರತಿವಾದಿರ ತವರು ಕುಟುಂಬದ ಆಸ್ತಿಗಳ ಪೈಕಿ ಮಂಗಲ್ಪಾಡಿ ಗ್ರಾಮದ ರೀಸರ್ವೆ ನಂಬ್ರ 79/6ನೇ ಸ್ಥಳವನ್ನು 3ನೇ ಪ್ರತಿವಾದಿಗೆ ತಾರೀಕು 22-6-50ರಲ್ಲು ರೂಪಾಯಿ 1500/-ಕ್ಕೆ ಅಕ್ರಮವಾಗಿ ಕ್ರಯವಿಕ್ಕಿ ಕೊಟ್ಟಿರುತ್ತಾರೆ. ಸದ್ರಿಸ್ಥಳವನ್ನು ಹುಟ್ಟುವಳಿ ಸಮೇತ ಸ್ವಾಧೀನ ಪಡೆಯುವ ಬಗ್ಗೆ ವಾದೀರು ತವರು ಕುಟುಂಬದ ಎಲ್ಲಾ ಮೆಂಬರ್ರ ಕಡೆಯಿಂದ ಕೂಡಾ C. P. C. ಯ ಓರ್ಡರ್ 1ರೂಲು 8ಮೇರೆಗೆ ಸಹಾ ದಾಕಲ್ಲು ಮಾಡಿದ ಸದ್ರಿವ್ಯಾಜ್ಯವು ತಾರೀಕು 5 12-50ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆದ್ದರಿಂದ ಈ ವ್ಯಾಜ್ಯದಲ್ಲಿ ವಾದಿರು ಮತ್ತು ಪ್ರತಿವಾದಿರ ತವರು ಕುಟುಂಬದ ಮೆಂಬರರ ಪೈಕಿ ಯಾರಾದರೂ ಆಕ್ಷೇಪ ಹೇಳುವವರಿದ್ದರೆ ಅಂಥವರು ಬಂದು ಈ ದಾವೆಯಲ್ಲಿ ಕಕ್ಷಿ ಸೇರಿ ಅವರವರ ಆಕ್ಷೇಪಗಳನ್ನು ಹೇಳಿಕೊಳ್ಳಬಹುದೆಂಬ ಸಂಗ್ತಿ ಈ ಮೂಲ್ಕ ತಿಳಿಸೋದಾಗಿಯದೆ.

B. S. Kakkilaya
Advocate for Plaintiffs
Kasaragod, 30-11-50.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ವಾಕಿಸ್ಟರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವಿಲ್ಲದೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರ್ಮಿಕ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಚಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ... ಎಲ್ ... ಕೆಮಿಸ್ಟ್, ಹಾವೇರಿ, ಬ್ಯಾಡಗಿ

ಭಾರತದ ಭಾವಿ ಕ್ರಿಕೆಟ್ ಪಂದ್ಯಾಟಗಳು

ಲೇಖಕರು: ಭಾಸ್ಕರ ಸೆಟ್ಟಿ, ಬಸ್ರೂರು

ಭಾರತದ ದೇಶದ ಕ್ರೀಡಾರಂಗ ಇಂದು ಕೊಂಚ ಬೆಳೆಯುತ್ತಿದೆಯಾದರೂ, ಕೀರ್ತಿಶಾಲಿ ಯಾಗುತ್ತಿದೆಯಾದರೂ, ಭವಿಷ್ಯದ ಕುರಿತು ಆಲೋಚಿಸುವಾಗ ಸ್ವಲ್ಪ ಮಟ್ಟಿಗೆ ಬೇಸರವೂ ಆಗುತ್ತದೆ. ಸಮರ್ಥರಾದ ಆಟಗಾರರ ಕೊರತೆಯು ಎಲ್ಲೆಡೆಯಲ್ಲೂ ಕೇಳಿ ಬರುತ್ತಲಿದೆ. ನುರಿತ ಆಟಗಾರರು ಕ್ರೀಡಾರ್ಂಗದಿಂದ ನಿವೃತ್ತರಾಗುವ ಸುದ್ದಿಯೂ ಕೆಲವರನ್ನು ನಿರಾಶೆಗೊಳಿಸಿದೆ. ಆದುದರಿಂದ ಆ ಸ್ಥಾನವನ್ನು ತುಂಬಬಲ್ಲ ಉತ್ಸಾಹೀ ತರುಣರನ್ನು ಆರಿಸುವದು ಜಾಣತನದ್ದಾಗಿರುತ್ತದೆ. ನಮ್ಮ ದೇಶದ ಶಕ್ತಿಯನ್ನು ನಿರೀಕ್ಷಿಸುವ ಈ ರಂಗದಲ್ಲಿ ಮುಂದೆ ಬರುವವರಿಗೆ ತಕ್ಕ ಪ್ರೋತ್ಸಾಹ, ಸಹಕಾರ ಅವಶ್ಯವಾಗಿ ಕೊಡಬೇಕಾಗಿದೆ.

ಭಾರತದ ಆಟಗಾರರಲ್ಲಿ ಸಮರ್ಥರೆಂದು ನಾಮಾಂಕಿತರಾದ ವಿಜಯ ಮಾಧವಜೀ ಮರ್ಚಂಟ ಇವರು ಬರುವ ವರ್ಷದಿಂದ ತಮ್ಮ ಪದವಿಯಿಂದ–ಕ್ರೀಡಾರಂಗದಿಂದ ನಿವೃತ್ತರಾಗುವರೆಂದೂ ಪಂದ್ಯಾಟಗಳಲ್ಲಿ ಭಾಗವಹಿಸುವುದಿಲ್ಲವೆಂದೂ ಹೇಳಿಕೆಯನ್ನಿತ್ತಿದ್ದಾರೆ ಅಂತರ್ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಇವರು ಕ್ರೀಡಾಂಗದಿಂದ ಹೊರಬರುವದರಿಂದ ಭಾರತದ ಕ್ರೀಡಾಂಗಕ್ಕೆ ಮಹಾ ನಷ್ಟವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಹಾಗೆಯೇ ಇನ್ನೊಬ್ಬ ಪ್ರಸಿದ್ಧ ಆಟಗಾರರಾದ ಲಾಲಾ ಅಮರನಾಥರಿಗೆ 40ರ ಗಡಿ ದಾಟಿತು. ಆವರು ಇನ್ನು ಹೆಚ್ಚು ಕಾಲ ಕ್ರೀಡಾರಂಗದಲ್ಲಿ ಭಾಗವಹಿಸುವಂತಿಲ್ಲ. ಇಂತಹ ಪ್ರಭಾವೀ ವ್ಯಕ್ತಿಗಳ ಹೊರಬರುವಿಕೆಯಿಂದ ಕ್ರಿಕೆಟ್ ಪಂದ್ಯಾಟದ ಶಕ್ತಿ ಹ್ರಾಸವಾಗಬಹುದೆ? ಎಂಬ ಶಂಕೆ ಸರ್ವಸಾಮಾನ್ಯ ಎಲ್ಲರಲ್ಲೂ ಮೂಡಿದೆ.

ನುರಿತ ಆಟಗಾರರಾದ ಮರ್ಚಂಟ, ಅಮರನಾಥ, ನಾಯ್ಡು ಇವರ ಸ್ಥಾನವನ್ನು ಭರ್ತಿಗೊಳಿಸಲು ನಮ್ಮಲ್ಲಿ ನುರಿತ ತರುಣರುವರೇ ಎಂಬುದು ಒಂದು ವಿಚಾರಾರ್ಹ ಅಂಶ 'ಇಲ್ಲ'ವೆಂದು ಒಂದೇ ಮಾತಿಗೆ ಹೇಳುವುದು ಸೂಕ್ತವಲ್ಲ. ಏಕೆಂದರೆ ನೂರು ಮಿಲಿಯ ಗಂಡಸರುಳ್ಳ ನಮ್ಮ ದೇಶದಲ್ಲಿ—ಇಂತಹ ಉತ್ಸಾಹೀ ತರುಣರು ಇಲ್ಲವೆಂಬುದು ನಂಬತಕ್ಕ ಅಂಶವಲ್ಲ. ಏಕೆಂದರೆ ಇಂದು ಈ ಬಗೆಯ ಪಂದ್ಯಾಟಗಳ ಮಹತಿಯನ್ನು ನಮ್ಮ ದೇಶದ ಜನ ಚೆನ್ನಾಗಿ ಅರಿತುಕೊಂಡಿದ್ದಾರೆ ಅಂತರ್ರಾಷ್ಟ್ರೀಯ ಪಂದ್ಯಾಟದಲ್ಲೂ ನಮ್ಮ ಪಂಗಡಗಳು ಸಮ ಸಮವಾಗಿ ಆಡಿದ್ದುಂಟು! ಬೇರೆ ದೇಶದ ಆಟಗಾರರೂ ನಮ್ಮ ಪಂಗಡವನ್ನು ಆದರಭಾವದಿಂದ ನೋಡುತ್ತಲಿರುವರು ಈಗ ನಮ್ಮಲ್ಲೂ ಹೈಸ್ಕೂಲ್, ಕಾಲೇಜುಗಳ ವಿದ್ಯಾರ್ಥಿಗಳು ಮಾತ್ರವಲ್ಲದೆ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳೂ ಈ ಕ್ರಿಕೆಟ್ ಪಂದ್ಯಾಟದಲ್ಲಿ ಹೆಚ್ಚಿನ ಉತ್ಸುಕತೆ ವಹಿಸಿರುವುದನ್ನು ನಾವು ಕಾಣಬಹುದು. ಏಳೆಂಟು ವರ್ಷಗಳ ಬಾಲಕರೂ ಗೋಡೆಯ ಮೇಲೆ ಮಸಿಯ ಮೂರು ವಿಕೆಟ್‌ಗಳನ್ನು ಬಿಡಿಸಿಕೊಂಡು ಹಡೆ ಕೊಂತಳಿಕೆಯನ್ನು ಬ್ಯಾಟನ್ನಾಗಿ ಮಾಡಿ, ಆಡುವದನ್ನು ನೋಡಿದರೆ ಕ್ರಿಕೆಟ್ ಎಷ್ಟು ವ್ಯಾಪಕತೆಯನ್ನು ಹೊಂದಿದೆ ಎಂಬುದು ನಮಗರ್ಥವಾಗದೇ?

ಈ ಬಗೆಯಲ್ಲಿ ಉತ್ಸಾಹ ಕೆರಳಿಸಿದ ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಧಾನ್ಯ ಕೊಡುವುದು ದೇಶದ ಕೀರ್ತಿಯ ದೃಷ್ಟಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ನ್ಯಾಯವೇ ಆಗಿರುತ್ತದೆ ಅಂತಹ ಆಟದಲ್ಲಿ ಅತ್ಯಂತಾಸಕ್ತಿಯುಳ್ಳವರಿಗೆ ತಕ್ಕ ಪ್ರೋತ್ಸಾಹವನ್ನೂ-ತರಬೇತಿಯನ್ನೂ ಕೊಡುವುದು ಕ್ರಿಕೆಟ್ ಕಂಟ್ರೋಲರ್ ಬೋರ್ಡಿನವರು ಮಾಡಬೇಕಾದ ಮುಖ್ಯ ಕಾರ್ಯವೆಂದು ನಾನೆಣಿಸುತ್ತೇನೆ ಅವರಿಂದ ಈದಿಶೆಯಲ್ಲಿ ನಿರ್ದೇಶನ ಸಿಕ್ಕಿದರೆ ನಮ್ಮ ದೇಶದ ಕ್ರಿಕೆಟ್ ಕ್ರೀಡಾರಂಗವು ಉನ್ನತ ಸ್ಥಿತಿಯನ್ನು ಹೊಂದುವದರಲ್ಲಿ ಸಂದೇಹವಿಲ್ಲ

ಈಗಿನ ಪಸಿದ್ಧ ಕ್ರಿಕೆಟ್ ಆಟಗಾರರೆಂದರೆ ದೊಡ್ಡ ದೊಡ್ಡ ಪಟ್ಟಣಗಳ ಕ್ರಿಕೆಟ್ ಕ್ಲಬ್ಬಿನವರು ಮಾತ್ರ ಸಣ್ಣ ಸಣ್ಣ ನಗರಗಳಲ್ಲಿರಬಹುದಾದ ಗಣ್ಯ ಆಟಗಾರರನ್ನು ಕೇಳುವವರಿಲ್ಲ. ಹಳ್ಳಿಯ ಯುವಕರಲ್ಲಿಯೂ ನಾಗರಿಕರನ್ನು ಮೀರಿಸುವ ಶಕ್ತಿ, ಸಾಮರ್ಥ್ಯಗಳಿದ್ದರೂ ಅವನ್ನು ಬೆಳೆಸತಕ್ಕ ಪ್ರೋತ್ಸಾಹವಿಲ್ಲದೆ ಅಲ್ಲೇ ನಾಶಹೊಂದುತ್ತದೆ.

ಈ ನ್ಯೂನತೆಯನ್ನು ಹೋಗಲಾಡಿಸಲು ಮಾರ್ಗವಿಲ್ಲವೆಂತಲ್ಲ ಮದ್ರಾಸು ಪ್ರಾಂತದ ಗವರ್ನರರು ಹೇಳಿದಂತೆ ಜಿಲ್ಲೆಗಳನ್ನು ತಾಲೂಕುಗಳ ಮೇಲೆ ವಿಭಾಗಿಸಬೇಕು ಪ್ರಥಮತಃ ತಾಲೂಕು ತಾಲೂಕಿನೊಳಗೆ ಪಂದ್ಯಾಟವನ್ನೇರ್ಪಡಿಸಿ, ಅಲ್ಲಿ ಉತ್ತಮ ರೀತಿಯಲ್ಲಿ ಆಡಿದವರನ್ನು ಜಿಲ್ಲಾ ಪಂದ್ಯಾಟಕ್ಕೆ ಕಳಿಸಬೇಕು ಜಿಲ್ಲಾ ಪಂದ್ಯಾಟಗಳಲ್ಲಿ ಜಯಶೀಲರಾದವರನ್ನು ಪ್ರಾಂತ್ಯದ ಪಂದ್ಯಾಟಗಳಿಗೆ ಆಹ್ವಾನಿಸಬೇಕು. ಹಾಗೆಯೆ ಇತರ ಕೇಂದ್ರಗಳಲ್ಲೂ ತರಬೇತಾದವರಿಗೆ ಅಂತರ್ರಾಷ್ಟ್ರೀಯ ಪಂದ್ಯಾಟಕ್ಕೆ ಆರಿಸುವ ಏರ್ಪಾಡಾಗಬೇಕು. ಈ ರೀತಿಯ ಪ್ರೋತ್ಸಾಹ, ಪ್ರಭಾವೀ ಮುನ್ನಡೆ, ನಿರ್ದೇಶನವಿದ್ದರೇ ಕ್ರಿಕೆಟ್ ಪಂದ್ಯಾಟವು ಸುಧಾರಿಸಬಹುದು.

ಮುಂದಿನ ಪ್ರಮುಖ ಆಟಗಾರರಾಗುವ ಯೋಗ್ಯತೆ-ಕಾರ್ಯದಕ್ಷತೆಯನ್ನು ಮದ್ರಾಸಿನ ಬಿ. ಸಿ. ಆಳ್ವ, ಮುಂಬಯಿಯ ಸಿ. ಎಲ್. ಮಂತ್ರೀಕಾರ್, ಬಂಗಾಳದ ಪಂಕಜರ್ರೈ, ರಾಜೇಂದ್ರನಾಥ, ಮುಂತಾದವರಲ್ಲಿ ನಾವು ಕಾಣಬಹುದಾಗಿದೆ. ಮುಂದೆ ಆವರಿಗೆ ಪಂದ್ಯಾಟದಲ್ಲಿ ಭಾಗವಹಿಸಲು ಅವಕಾಶವನ್ನು ಕೊಡಬೇಕು ಮುಂದೆ ಮುಂಬಯಿಯಲ್ಲಿ ನಡೆಯಲಿರುವ ಭಾರತ ಮತ್ತು ಕಾಮನವೆಲ್ತ್ ಕ್ರಿಕೆಟ್ ಪಂದ್ಯಾಟದಲ್ಲಿ ಮೇಲಿನವರನ್ನು ಆಹ್ವಾನಿಸಿ ಭವಿಷ್ಯ ನೋಡಬಹುದು.

ಜಗತ್ತಿನಲ್ಲಿ ಕ್ರಿಕೆಟ್ ಪಂದ್ಯಾಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ ಆಸ್ಟ್ರೇಲಿಯಾ ದೇಶ ಇದೇ ರೀತಿಯ ತರಬೇತಿಯನ್ನು ಮಾಡುತ್ತಿರುವದನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬಹುದು. ಜನಸಂಖ್ಯೆಯಲ್ಲಿ ಕಡಿಮೆಯುಳ್ಳ ಆಸ್ಟ್ರೇಲಿಯಾ ಪರಾಕ್ರಮಶಾಲಿಗಳಾದ ಆಟಗಾರರನ್ನು ನಿರ್ಮಿಸುತ್ತಿರುವಾಗ ವಿಪುಲವಾದ ಜನಸಂಖ್ಯೆಯುಳ್ಳ ಭಾರತಕ್ಕೆ ಉತ್ಸಾಹೀ ತರುಣರ ಕೊರತೆಯಾದೀತೆ? ಎಂದೂ ಇಲ್ಲ ನಮ್ಮಲ್ಲಿ ತರುಣ ಆಟಗಾರರಿಲ್ಲವೆಂಬುದು ನಂಬತಕ್ಕ ಮಾತಲ್ಲ! ಮುಖ್ಯವಾಗಿ ಅವರನ್ನು ಮುಂದೆ ತರುವ ವಿಚಾರದಲ್ಲಿ ಯತ್ನ ನಡೆಯಲಿಲ್ಲ. ಅದು ಶೀಘ್ರ ನಡೆಯಬೇಕು. ಹೀಗೆ ತರುಣ ಆಟಗಾರರನ್ನು ಆರಿಸಿ ತರಬೇತಿ ಕೊಟ್ಟಲ್ಲಿ ನಮ್ಮ ದೇಶ ಕ್ರಿಕೆಟ್ ಪಂದ್ಯಾಟದಲ್ಲಿ ಅಗ್ರಗಣ್ಯಸ್ಥಾನವನ್ನು ಹೊಂದುವದರಲ್ಲಿ ಸಂದೇಹವಿಲ್ಲ. ಈ ದಿಶೆಯಲ್ಲಿ ಸರಿಯಾದ ನಿರ್ದೇಶನ-ಪ್ರೋತ್ಸಾಹ-ಸಹಕಾರ-ಸಂಬಂಧಿಸಿದವರು ನೀಡಿಯಾರೆಂದು ಕುತೂಹಲಿಗರಾದ ಕ್ರಿಕೆಟ್ ಆಟಗಾರರು ಆಶಿಸ ಬಹುದೆ?

BUY INDIAN! ENCOURAGE INDIAN INDUSTRY!

ಆಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves head. ache etc.

REGD TRADE MARK

Mnufctured by:-

Swadeshi Oushadhi Bhandara (Regd)

KUJAL P. O. Brahmavar, S K

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯೆಯಾಗಿದ್ದರೆ, . ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಟು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸಂಧಾನ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕೊಳ್ಳಬೇಕು ಮೊದಲ ದಿವಸ ಮಾತ್ರ ಮಧ್ಯಾಹ್ನ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಶರೂ   ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ.—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟೆ ಫಾರ್ಮಸಿ, ಧಾರವಾಡ.-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್ ನಂಜುಂಡೇಶ್ವರ ವರ್ತಕ ದಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ತಮ್ಮ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಲಿಮಿಟೆಡ್

ಸ್ಥಾಪಿತ 1906

ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರು ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ. ಮೂತ್ರ ಕೃಚ್ಛ್ರ, ಮೂತ್ರದೊಡನೆ ಧಾತು ಹೋಗುವುದು. ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು. ತೊಡೆ ಸಂದಿನಲ್ಲಿ ನೋವು ಕಾಲು ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು. ಶರೀರದಲ್ಲಿ ಉಷ್ಣತೆ, ಸ್ವಪ್ನ ಸ್ಖಲನ ಇವೆಲ್ಲಾ ಶೀಘ್ರವಾಗಿ ಗುಣಹೊಂದುವುವು

ಡಬ್ಬಿ ಒಂದಕ್ಕೆ ರೂ 1—0—0

ಏಜಂಟ—

ಶಾ ಕೇಶನಿ ಮಂಗಳೂರು.

ಮುಲ್ಕಿ ಬ್ಯಾಂಕ್,

ಲಿಮಿಟೆಡ್, ಮುಲ್ಕಿ.

192 ನೆ ಇಸ್ವಿಯಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S K

ವಾರ ಭವಿಷ್ಯ

ತಾರೀಕು 7-12-1950ರಿಂದ ತಾ. 13-12-1950ರ ವರೆಗೆ.

ಮೇಷ—ಬುದ್ಧಿ ಚಾತುರ್ಯ ಕಾರ್ಯಪಟುತ್ವ ಕೂಡ ನಿಮ್ಮ ಹುಟ್ಟುಗುಣವಾಗಿರುವುದು. ಈವಾರದಲ್ಲಿ ನಿಮ್ಮ ಆರೋಗ್ಯವು ಬಹುತೇಕ ಉತ್ತಮಗೊಳ್ಳುವದಲ್ಲದೆ ಸಾಂಪತ್ತಿಕ ಸ್ಥಿತಿಯೂ ಕೂಡ ಹೆಚ್ಚಿನಂಶ ಸುಧಾರಣೆಯಾಗಲಿದೆ. ವಿಪಕ್ಷೀಯರ ನಾಶದಿಂದಲೂ ಗೃಹಕೃತ್ಯದಲ್ಲಿ ನಡೆಯಲಿರುವ ಸತ್ಕಾರ್ಯಗಳಿಂದಲೂ ಮನಸ್ಸಿಗೆ ನೆಮ್ಮದಿಯಿದೆ. ಆದರೂ ನಿಮ್ಮಾಕೆಗೆ ನಿಮ್ಮ ವರ್ತನೆಯು ಸರಿದೋರದ ಕಾರಣ ಪರಸ್ಪರ ವೈಮನಸ್ಸುಂಟಾದೀತು. ತಾ. 7, 12, 13 ಈ ದಿನಗಳು ಲಾಭ ಮತ್ತು ಸಂತಸದಾಯಿಗಳಿವೆ.

ವೃಷಭ—ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಮುಂಚಿಗಿಂತ ಸುಧಾರಿಸಲಿದೆ. ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲಿರುವಿರಿ. ನೌಕರಿ ವ್ಯಾಪಾರಾದಿಗಳಲ್ಲಿ ನಿಮ್ಮ ಇಷ್ಟಸಿದ್ಧಿ ಫಲಿಸುವದು. ಆದರೆ ಆರೋಗ್ಯವು ಸರಿಯಿರಲೊಲ್ಲದು. ದೇಹದಲ್ಲಿ ಕಾರ್ಯದೌರ್ಬಲ್ಯಗಳು ಕಾಣಿಸುವವು. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆಯಬೇಕಾಗುವದು. ಗುರುಹಿರಿಯರ ಆಗ್ರಹಕ್ಕೆ ಗುರಿಯಾದೀರಿ. ರಾಜಕೀಯ ಕ್ಷೇತ್ರದಲ್ಲಿ ಜಯವು ದುರ್ಲಭವಿದೆ. ಅಧಿಕಾರಿ ಜನರ ಪ್ರಕೋಪಕ್ಕೆ ಸಿಲುಕುವ ಕಾರ್ಯಗಳು ನಿಮ್ಮಿಂದ ಜರಗಲಿವೆ. ವಾರಾದಿಯ 3 ದಿನಗಳು ಬೇರೆ ದಿನಗಳಿಗಿಂತ ಲೇಸು.

ಮಿಥುನ—ಸಜ್ಜನರ ಸ್ನೇಹವೂ ಅಧಿಕಾರಿಗಳ ಅನುಗ್ರಹವೂ ನಿಮಗೆ ಚೆನ್ನಾಗಿರುವುದು. ನಿಮ್ಮ ಉದ್ಯಮದಲ್ಲಿ ಶ್ರಮಕ್ಕೆ ತಕ್ಕ ಫಲಪ್ರಾಪ್ತಿಯಿರುವದಾದರೂ ಖರ್ಚು ಅಧಿಕವಾಗುವುದರಿಂದ ಸ್ವಲ್ಪ ಹಣದ ತಗಾದೆಗೆ ಸಿಲುಕುವಿರಿ. ಅರಿಜನರ ಪೀಡೆಯು ಅಧಿಕವಾಗುವುದು. ಶಸ್ತ್ರಾದಿಗಳಿಂದ ದೇಹದಲ್ಲಿ ಗಾಯಾದಿಗಳುಂಟಾಗುವ ಸಂಭವವಿದೆ. ಸ್ತ್ರೀಜನರಿಂದ ಕಷ್ಟ ನಷ್ಟ ಅಪವಾದಗಳು ಪ್ರಾಪ್ತವಾಗುವ ಯೋಗವಿರುವುದರಿಂದ ಸ್ವಲ್ಪ ಜಾಗರೂಕರಾಗಿರಿ. ತಾ. 8, 9, 10; 11, ಆರೋಗ್ಯ ಸುಖಲಾಭ ಕಾರಿಗಳು.

ಕರ್ಕಟ—ಒಮ್ಮಿಂದೊಮ್ಮೆಗೇ ಗ್ರಹಗತಿಯಿಂದಾಗಿ ಹೆಚ್ಚಿನ ಗ್ರಹರು ನಿಮಗೆ ಪ್ರತಿಕೂಲರಾಗಿ ಈವಾರ ನಿಲ್ಲಲಿರುವುದರಿಂದ ನಿಮ್ಮ ಸದ್ಯದಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ನಿಷ್ಫಲಗಳಾದಾವು. ದೇಹಾಲಸ್ಯದ ನಿಮಿತ್ತ ಅಧಿಕ ಧನವ್ಯಯವಾದೀತು. ಗೃಹಕೃತ್ಯದಲ್ಲಿ ಅವ್ಯವಸ್ಥೆ ಗುರುಹಿರಿಯರ ಮನಸ್ತಾಪ ಇತ್ಯಾದಿಗಳಿಂದ ಶೋಕಾಕುಲಿತರಾದ ನಿಮಗೆ ಆಕಸ್ಮಿಕ ಪರ್ಯಟನಗಳಿಂದ ಕಷ್ಟ ನಷ್ಟಗಳು ಹೆಚ್ಚಬಹುದು. ವಾರಾಂತ್ಯದ 4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಸಿಂಹ—ಇಂದಿನ ಗ್ರಹಸ್ಥಿತಿಯಲ್ಲಿ ನಿಮ್ಮ ಮನೋರಥಗಳು ಆನಾದರದಿಂದ ನೆರವೇರುವ ಚಿಹ್ನೆಗಳು ಕಾಣಿಸುತ್ತಿವೆ. ನಿಮ್ಮ ಸಾಹಸ ಶಕ್ತಿಗನುಕೂಲವಾಗಿ ದೈವವು ಪಯೊಬೋರುವುದರಿಂದ ನೌಕರಿವಾಣಿಜ್ಯ ರಾಜಕೀಯ ಕ್ಷೇತ್ರಾದಿಗಳಲ್ಲಿ ನಿಮ್ಮ ಪ್ರಯತ್ನವು ಸಂಪೂರ್ಣ ಸಫಲವಾಗಲಿದೆ ನಿಮ್ಮ ಸಾಂಪತ್ತಿಕ ಸ್ಥಿತಿಯು ಬಹಳ ಉತ್ತಮ ಸ್ಥಿತಿಗೆ ಬರಲಿದೆ. ಇಷ್ಟಾದರೂ ಮನೆಯಲ್ಲಿ ಹೆಂಡತಿ ಮಕ್ಕಳು ನಿಮ್ಮ ಮನಸ್ಸಿಗೆ ನೋವನ್ನುಂಟುಮಾಡಲಿರುವರು ತಾ. 7, 12, 13, ಈ ದಿನಗಳು ಇಷ್ಟದಾಯಿಗಳಿವೆ.

ಕನ್ಯಾ—ಸದ್ಯ ನಿಮ್ಮ ಆಯವ್ಯಯಗಳು ಸಮತೂಕದಲ್ಲಿರುವುದರಿಂದ ದಿನಯಾಪನೆಯು ದುಸ್ತರವಾಗುವದು. ನಿಮ್ಮ ದುಡಿಮೆಯ ಬಹ್ವಂಶವು ನಿಮ್ಮ ಮತ್ತು ಕುಟುಂಬದವರ ಆರೋಗ್ಯದ ನಿಮಿತ್ತ ವ್ಯಯವಾಗಲಿದೆ. ಶತ್ರುಗಳ ಪೀಡೆಯಿಂದಾಗಿ ಮನೋರೋಗಕ್ಕೆ ಗುರಿಯಾದೀರಿ. ಸ್ವಜನರ ವಿಯೋಗ, ದೇಶಾಟನ, ಅಧಿಕಾರಿಗಳ ಪೀಡೆ ಇವುಗಳಿಂದ ಸಂತಪ್ತರಾದ ನಿಮಗೆ ತಾ. 8, 9, ಈ ದಿನಗಳಲ್ಲಿ ಧನಪ್ರಾಪ್ತಿ ವಿಜಯ ಗೃಹಸುಖಗಳು ದೊರೆವವು.

ತುಲಾ—ಕಾಲವು ಸ್ವಲ್ಪ ಪ್ರತಿಕೂಲವಿದೆ. ಮನಸ್ಸಾಂಚಲ್ಯದ ದೆಸೆಯಿಂದಾಗಿಯೂ ಶತ್ರುಗಳ ಪೀಡೆಯಿಂದಲೂ ಕಾರ್ಯವನ್ನು ಸಾಧಿಸದೆ ಮಧ್ಯದಲ್ಲಿ ಕೈಬಿಟ್ಟು ಕಷ್ಟನಷ್ಟಗಳಿಗೆ ಪಾತ್ರರಾಗುವಿರಿ. ಕೃತ್ರಿಮ ಮಿತ್ರರ ಮೋಸದ ಬಲೆಯಲ್ಲಿ ಸಿಲುಕಿ ಪಶ್ಚಾತ್ತಾಪಕ್ಕೆ ಗುರಿಯಾಗುವ ಸಂಭವವಿದೆ. ವಿಪತ್ಪರಂಪರೆಗಳು ಮೇಲಿಂದ ಮೇಲೆ ಪ್ರಾಪ್ತವಾಗುವವಾದರೂ ಗುರ್ವನುಗ್ರಹವೊಂದು ನಿಮ್ಮ ಮೇಲೆ ಪರಿಪೂರ್ಣವಿರುವುದರಿಂದ ಈ ಅಪಾಯಗಳನ್ನು ಉಪಾಯದಿಂದ ಪಾರುಗಾಣಿಸುವಿರಿ. ತಾ. 7, 10, 11 ಈ ದಿನಗಳು ಹೆಚ್ಚಿನ ಅನಿಷ್ಟದಾಯಿಗಳಲ್ಲ.

ವೃಶ್ಚಿಕ—ಇಂದಿನ ದಿನಗಳಲ್ಲಿ ಸುದೈವಿಗಳೆಂದರೆ ನೀವೇ ಸರಿ. ನೀವೀ ವಾರದಲ್ಲಿ ಎಂಥಹ ಮಹತ್ಕಾರ್ಯವನ್ನಾದರೂ ಅನಾಯಾಸದಿಂದ ಅಚಿರದಲ್ಲಿ ಸಾಧಿಸಲು ಶಕ್ತರಿರುವಿರಿ. ಹಿಂದಿನ ಸಾಲಾದಿಗಳಿಂದ ಮುಕ್ತರಾಗಿ ಸಾಕಷ್ಟು ಧನಸಂಗ್ರಹಿಸಲು ಶಕ್ತರಾದ ನಿಮಗೆ ಬಂಧುಜನರಿಂದ ಆಗಾಗ ಪೀಡಾನಿಷಗಳು ಸಂಭವಿಸುವಂತಿವೆ. ನೀಚ ಜನರಿಂದಲೂ ಸ್ತ್ರೀಯರಿಂದಲೂ ಧನಲಾಭವಾಗುವ ಯೋಗವಿದೆ. ಶ್ರಮಜೀವಿಗಳಿಗೆ ದುಡಿಮೆಗಿಂತ ಅಧಿಕವಾದ ಫಲ ಪ್ರಾಪ್ತಿಯಿರುವುದು. ತಾ. 8, 9, 12, 13 ಈ ದಿನಗಳಲ್ಲಿ ಭೋಗ್ಯ ವಿಜಯ, ಲಾಭಗಳಿವೆ.

ಧನು—ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಕಳಕೊಂಡ ನೀವು ಯಾವ ಉದ್ಯಮದಲ್ಲಿ ಪ್ರವೃತ್ತರಾಗಲೂ ಸ್ವಯಂ ಅಸಮರ್ಥರಿರುವಿರಿ. ಜನತೆಯ ಅವಹೇಳನ ಅನಾದರಗಳಿಗೆ ಗುರಿಯಾದೀರಿ. ಮಾತ್ರವಲ್ಲ ವಿದ್ಯಾಕೀರ್ತಿಗಳಿಗೂ ಹಾನಿತಟ್ಟುವುದು. ಪಿತ್ತೋದ್ರೇಕಪ್ರಕೋಪದಿಂದ ದೇಹಾರೋಗ್ಯವು ಕೆಡಲಿದೆ. ಹಣದ ತಗಾದೆಯಿಂದ ಮರ್ಯಾದೆಯನ್ನುಳಿಸಿಕೊಳ್ಳುವದು ಬಹುಕಷ್ಟವಾದೀತು. ದಿನಯಾಪನೆಯೂ ದುಸ್ತರವಾಗುವದು. ಆದರೂ ತಾ. 7, 10, 11 ಈ ದಿನಗಳಲ್ಲಿ ದೈಹಿಕ ಸುಖಕ್ಕವಕಾಶವಿದೆ.

ಮಕರ—ಹಿಡಿದ ಕಾರ್ಯಗಳಿಗೆ ವಿಘ್ನ ವಿಡಂಬರಗಳು ಬಾರದೆಲ್ಲಿ ನಿಮ್ಮ ಉತ್ಸಾಹಶಕ್ತಿಯು ದಿನೇ ದಿನೇ ಅಧಿಕವಾಗುವುದು. ಅಂತೆಯೇ ಇಂದು ನಿಮ್ಮ ಉದ್ಯಮಗಳಲ್ಲಿ ಪ್ರಗತಿಯು ಕಾಣಿಸುವುದರಿಂದ ಉತ್ಸಾಹದಿಂದ ಕಾರ್ಯವನ್ನು ಮುಂದರಿಸುವಿರಿ, ತಕ್ಕ ಫಲವು ಲಭಿಸುವದು. ಖರ್ಚಿನ ಸಲುವಾಗಿ ಯೋಚಿಸ ಬೇಕಾಗಿಲ್ಲ. ಬಂಧುಗಳ ಸಹಕಾರ ಮಿತ್ರ ಜನರ ಬೆಂಬಲ ಇವುಗಳಿಂದ ಕೂಡಿದ ನಿಮಗೆ ಸಮಾಜದಲ್ಲೂ ಒಳ್ಳೇ ಗೌರವ ಲಭಿಸುವದು. ಗೃಹ ಸುಖವು ಉತ್ತಮವಿರುವುದು. ತಾ. 10, 11 ಬಿಟ್ಟು ಇತರ ದಿನಗಳು ಶ್ರೇಯೋದಾಯಿಗಳಿವೆ.

ಕುಂಭ—ಕಷ್ಟಪಟ್ಟು ದುಡಿಯುತಕ್ಕ ನಿಮ್ಮ ಇಷ್ಟಾರ್ಥವು ತಾನಾಗಿ ಸಿದ್ಧಿಸುವದು. ಉದ್ಯಮದ ಸಲುವಾಗಿ ಮುಂಚೆ ಸ್ವಲ್ಪ ಧನ ವ್ಯಯಿಸಬೇಕಾಗಿ ಬಂದರೂ ಮುಂದೆ ಉತ್ತಮ ಫಲಲಭಿಸಲಿದೆ. ಕೆಲವೊಮ್ಮೆ ದುಡುಕಿನಿಂದ ಮುಂದರಿದು ಗುರುಹಿರಿಯರ ಕೋಪಕ್ಕೆ ಗುರಿಯಾದೀರಿ. ಪಿತ್ತದೋಷದಿಂದ ನಿದ್ರಾಭಾವ, ದುಃಸ್ವಪ್ನಗಳು ಕಾಣಿಸಬಹುದು. ಪಶುಭೃತ್ಯಾದಿ ಪರಿಜನರಿಂದ ಕೂಡಿದ ಸಂಸಾರವು ನಿರಾಮಯವಾಗಿರುವುದು ತಾ. 7, 12, 13 ಈ ದಿನಗಳಲ್ಲಿ ಅತಿವ್ಯಯ ಆಲಸ್ಯಗಳು ಕಾಣಿಸಬಹುದು.

ಮೀನ—ಕಳೆದ ವಾರಕ್ಕಿಂತ ಈ ವಾರವು ಉತ್ತಮವೆನಿಸೀತು. ಆರ್ಥಿಕಭಾಗದಲ್ಲಿ ನೀವು ನಿಶ್ಚಿಂತರಾಗಿರುವಿರಿ ಪ್ರತಿಯೊಂದು ಕಾರ್ಯವೂ ನಿಮ್ಮ ಸಾಹಸಕಾರ್ಯಗಳಿಂದಾಗಿ ಕೊನೆಯೊಂದುವವು. ಹಣದ ಲೇವಾದೇವಿ ನಿಮಿತ್ತ ವಾಕ್ಕಲಹಕ್ಕವಕಾಶವಿದೆ. ಮಾತ್ರವಲ್ಲ ಮಿತಭಾಷಿಗೂ ಕೂಡ ಕಲಹವು ತಪ್ಪಿದ್ದಲ್ಲ. ಪ್ರಯಾಣಕ್ಕೀ ಕಾಲವು ಪ್ರತಿಕೂಲವಿದೆ. ತನುಪೀಡೆ ಮನೋರೋಗಗಳು ಆಗಾಗ ಬಾಧಿಸುವವು. ವಾರಾಂತ್ಯದ 4 ದಿನಗಳು ಇಷ್ಟಪ್ರದಗಳಿರುವವು.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್, ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ ಪಿ ದ್ವಾರ ರೂ 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!
ಮನೆಯೊಂದರಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೊಡ್ಕಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.
ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!
ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಶುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.
ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2-0-0.
ವಿ. ಪಿ. ದ್ವಾರ 2-6-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. 212/1950

ಚಾರಾರು ಬಟ್ಟಪ್ಪ ರೈ —ವಾದಿ.

ಮತ್ತು

ಶಿವಣ್ಣ ಪೊಳ್ಳ, ಗೋವಿಂದ ಪೊಳ್ಳರ ಮಗ, ಕಾಸರಗೋಡು ತಾಲೂಕು ನೆತ್ರಾಜೆ ಗ್ರಾಮದ ಆಲಂಕೂಡ್ಲು ಎಂಬಲ್ಲಿರುವವರು,

—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಪ್ರತಿವಾದಿಯು ತಾರೀಕು 22-9-1947 ರಲ್ಲಿ ರೂ. 125/-ಕ್ಕೆ ಬರಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಖರ್ಚುವೇಜನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 18-12-1950ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಗಳಿದ್ದರೆ ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಹಗಲು ಘಂಟೆ 11ಕ್ಕೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವುದು.

K. Shankar Rao,
Advocate for Plaintiff.
ಕಾಸರಗೋಡು, ತಾ. 27-11-1950

Edited, Printed & Published By K. H. Shetty At The Navayuga Press, Udipi, S. India.

LICENCE No. 31
Licensed to Post without Prepayment

Estd 1921 ಸ್ಥಾಪನೆ
31ನೇ ವರ್ಷ

14—12—1950

Founder: Sri A. B. Shetty,
Minister for Agriculture & Veterinary.

ನವ ಯುಗ

ವರ್ಷ ೩೧
ವಾರ ೧೫

NAVAYUGA
WEEKLY

POST BOX NO. 22
UDIPI, S. K.

Vol. 31
No. 15

ಗತವೈಭವದ ಅಥವಾ ವೈರದ ಧ್ಯಾನ ಮತ್ತು ಭಾವೀ ಕಲ್ಪನೆಗಳ ಉಯ್ಯಾಲೆಯಲ್ಲಿ ಹಿಂದುಮುಂದಾಗುತ್ತಿರುವಂತೆ ಪ್ರಸಂಗೋಚಿತ ಧೋರಣೆ ವರ್ತನೆಗಳಿಗೆ ಕಟ್ಟು ಬೀಳುವ ಅಭ್ಯಾಸವು ಜನತೆಯಲ್ಲಿ ಕಡಿಮೆಯಿರುವುದೇ ಸದ್ಯದ ಹೆಚ್ಚಿನ ಭಾವನಾ ಗೊಂದಲಗಳಿಗೆ ಹೇತುವೆಂಬುದು ಸ್ವತಃ ಸಿದ್ಧ.

ಭಾರತದ ಪುರಾತನ ಸಂಸ್ಕೃತಿ, ಗತ ವೈಭವಗಳ ಸ್ಮರಣೆಯು ಮತ್ತು ಭಾವೀ ವನಾವಶ್ಯಕತೆಗಳಿಗೆ ಧಕ್ಕೆಬಿದ್ದು ದೈನಂದಿನ ಅಸಹ್ಯ ಸಂಕಟಗಳನ್ನನುಭವಿಸುತ್ತಿರುವಾಗ ಕಾಂಗ್ರೆಸ್ ಆಡಳಿತೆಯ ಕಡೆಗೆ ಅಸಂತೃಪ್ತಿ ಹುಟ್ಟಿರುವುದು ಕಂಡು ಬರುತ್ತಿದೆ. ಆದರೆ ಈ ಅಸಮಾಧಾನ ಕೂಡಾ ಪ್ರಚಲಿತ ಸ್ಥಿತಿಗತಿಗಳ ಸರಿಯಾದ ಜ್ಞಾನಾನುಭವದಿಂದ ಹುಟ್ಟಿರದೆ ಗತಕಾಲದ ಸುಖಸಂತೋಷಗಳ ಆಶೆಯ ಮೇಲಿಂದಲೇ ಹುಟ್ಟಿಕೊಂಡಿದೆ, ಎಂಬುದನ್ನು ಮರೆಯಬಾರದು.

ಡ ಬೇಕಾದರೆ ಇನ್ನೆಷ್ಟು ದಶಮಾನಗಳು ಕಳೆಯ. ಬೇಕೋ!

ಸುಮಾರು ಇನ್ನೂರು ವರುಷಗಳ ವರೆಗೆ, ತಾವೆಂತಹ ಅಧಿಕಾರ ವೈಭವಗಳನ್ನು ಅನುಭವಿಸಿದ್ದರೂ, ಅದನ್ನು ಬಿಟ್ಟು ಕೊಡುವುದನ್ನು ಅನಿವಾರ್ಯಗೊಳಿಸಿದ ಸಂದರ್ಭವೊದಗಿದೊಡನೆಯೇ ಬ್ರಿಟನರು ಧೋರಣೆ ಬದಲಾಯಿಸಿ, ಭಾರತದಿಂದ ಕಾಲ್ತೆಗೆಯುವ ಪ್ರಸಂಗಾವಧಾನತೆ ತೋರಿಸಿದಷ್ಟು ಸುಲಭದಲ್ಲಿ ಮತ್ತು ಸುಗಮವಾ ಪ್ಪಿಗೆಯೇ. ಒಬ್ಬ ಕಷ್ಟವನೆಂದೊಮ್ಮೆ ಗಣಿಸಲ್ಪಟ್ಟರೆ ಸರಿ—ಮತ್ತೆ ಅವ ಎಂತಹ ಬದಲಾವಣೆಗೊಂಡರೂ ಕೇಳುವವರಿಲ್ಲ.

ಜನತಾರಾಜ್ಯ ಭಾರತ ಸ್ಥಾಪನೆಯಾಗಿರುವ ಪ್ರಚಲಿತ ಸ್ಥಿತಿಯನ್ನು ಗಮನಕ್ಕೆ ತಾರದೇನೇ, ಪರಕೀಯರದಾಗಿದ್ದು ಕೆಲವೇ ಮಂದಿ ಮೇಲ್ವರ್ಗದವರ ಕೈಯಲ್ಲಿದ್ದ ಆಡಳಿತೆಯನ್ನು ಅನ್ಯಭಾವನೆಯಿಂದಲೇ ಟೀಕಿಸುವ ಗತಕಾಲದ ಮನೋವೃತ್ತಿ

ಹಿಂದುಮುಂದಿನದಿರಲಿ—ಇಂದು?

ಸೌಭಾಗ್ಯಗಳ ಚಿಂತನೆಯ ಸುಖಸ್ವಪ್ನವನ್ನು ನಾವು ಕಾಣುತ್ತಿರುವಂತೆ ಪ್ರಚಲಿತ ಸ್ಥಿತಿಗತಿಗನ ಗುಣವಾದ ಧೋರಣೆ ವರ್ತನೆಗಳನ್ನು ವಹಿಸುತ್ತಿಲ್ಲ. ಹಿಂದಿದೆ; ಮುಂದಿದೆ; ಆದರೆ ಇಂದು ಇರಬೇಕಾದಂತೆ ಇರುವೆವೇ ಎಂಬ ಕಡೆಗೆ ಮಾತ್ರ ಸಾಕಷ್ಟು ಗಮನವಿಲ್ಲ.

ನಮ್ಮ ಧರ್ಮಗ್ರಂಥಗಳು, ಧಾರ್ಮಿಕಾಚರಣೆಗಳೇ ಮೊದಲಾದುವುಗಳ ಮಟ್ಟಿಗೆ, ಅವು ಒಂದಾನೊಂದು ಕಾಲದಲ್ಲಿದ್ದ ಮಾದರಿಯನ್ನೇ ಹೆಗ್ಗಳಿಕೆಯಿಂದ ಮತ್ತು ಭಕ್ತಿಪೂರ್ವಕ ಜ್ಞಾಪಿಸಿಕೊಳ್ಳುತ್ತಿದ್ದೇವೆ ಹೊರತು, ಇಂದು ಅವುಗಳ ರೂಪ ಹೇಗಾಗಿದೆ, ಆಚರಣೆಯಲ್ಲಿ ಅವು ಹೇಗಿವೆ, ಎಂಬುದರ ಕಡೆಗೆ ಲಕ್ಷ್ಯವಿಲ್ಲ.

ರಾಷ್ಟ್ರದ ನಾಯಕತ್ವದ ಮಾತು ಕೂಡಾ ಹೀಗೇನೇ. ಸ್ಥಿತಿಗತಿಗಳ ಗಾಢಪರಿಶೀಲನಾನಂತರವೂ ಈಗಿನ ನಾಯಕತ್ವವು ಕಾಲೋಚಿತವಾದುದೆಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೇನೋ ನಿಜ. ಆದರೆ ರಾಷ್ಟ್ರವು ಇಂದಿನ ನಾಯಕತ್ವವನ್ನು ನಿಷ್ಠೆಯಿಂದ ಅನುಕರಿಸುತ್ತಿರುವುದು ತುಲನಾತ್ಮಕ ವಿಚಾರ ವಿಮರ್ಶೆಗಳ ಪರಿಣಾಮವಾಗಿಯೇ ಅಲ್ಲ; ಅಂಧಾನುಕರಣೆ ಮತ್ತು ನಾಯಕಪೂಜೆಯ ಮೇಲಿಂದ. ರಾಷ್ಟ್ರದ ಈಗಿನ ಆಗುಹೋಗುಗಳಿಗೆ ಹೇಳಿಸಿದವರೆಂಬ ವಿಚಾರದಿಂದಲ್ಲ—ಒಂದು ಕಾಲದಲ್ಲಿ ರಾಷ್ಟ್ರೀಯ ಹೋರಾಟಗಾರರಾಗಿ ರಾಷ್ಟ್ರಸೇವೆ ಮಾಡಿದವರೆಂಬ ಭಕ್ತಿ ವಿಶ್ವಾಸದಿಂದಲೇ ಈಗಿನ ನಾಯಕರ ಆರಾಧನೆ ನಡೆದಿದೆ.

ಸದ್ಯ ಸ್ಥಿತಿಯಲ್ಲಿ ಜನತೆಯ ನಿತ್ಯ ಜೀ

ಕಾಂಗ್ರೆಸ್ ಆಡಳಿತೆಯ ಕಡೆಗೆ ಜನಸಾಮಾನ್ಯರಲ್ಲಿ ಇಂತಹ ಅತೃಪ್ತಿ ಹರಡಿದ್ದರೂ ಭಾವೀ ಚುನಾವಣೆಯಲ್ಲಿ ಮತ್ತೊಮ್ಮೆ ಗೆಲ್ಲುವ ಭರವಸೆಯು ಕಾಂಗ್ರೆಸಿಗರಲ್ಲಿರಲು ಕಾರಣವೆಂದರೆ ತಮ್ಮ ಗತಕಾಲದ ಮಹತ್ಕಾರ್ಯಗಳನ್ನು ಚಿರಕಾಲ ನೆನಪಿನಲ್ಲಿಟ್ಟುಕೊಳ್ಳುವ ಅಭ್ಯಾಸವು ಜನತೆಯದೆಂದು ಅವರಿಗೆ ತಿಳಿದಿರುವುದೇ. ಮಹಾಯುದ್ಧದಲ್ಲಿ ಇಂಗ್ಲಾಂಡನ್ನು ರಕ್ಷಿಸಿದ ಬೆನ್ನಲ್ಲೀ ಚರ್ಚಿಲ್ಲರನ್ನು ಅಧಿಕಾರದಿಂದ ಇಳಿಸಿಕೊಂಡ ಬ್ರಿಟಿಷ್ ಮತದಾರರ ಪ್ರಸಂಗಾವಧಾನತೆಯು ಹಿಂದೀ ಮತದಾರರಲ್ಲಿ ಮೂಡ

ಗಿ ಭಾರತದ ಯಾವ ಪಕ್ಷವೇ ಆದರೂ ಕಾಲೋಚಿತ ಬದಲಾವಣೆಗೊಂಡೀತೆಂದು ನಿರೀಕ್ಷಿಸುವುದು ಅಸಾಧ್ಯ.

ನಮ್ಮ ಜನಜೀವನ ಕ್ಷೇತ್ರದಲ್ಲಿ ಮಾತ್ರವೇ—ನಮ್ಮ ಸಾಹಿತ್ಯ, ನಟಕ ರಂಗಗಳಲ್ಲಿ ಕೂಡಾ ಸಜ್ಜನ ನಾಯಕನೂ ಖಲನಾಯಕನೂ, ಆದಿಯಿಂದ ಅಂತ್ಯದವರೆಗೂ ಆಯಾ ವರ್ಗದ ನಾಯಕರಾಗಿಯೇ ಉಳಿಯ ಬೇಕು ಹೊರತು ಮಧ್ಯದಲ್ಲಿ ಪರಿವರ್ತನೆ ಅಥವಾ ಸುಧಾರಣೆ ಹೊಂದುವ ಪರಿಪಾಠವೇ ಇಲ್ಲ. ಒಮ್ಮೆ ಹೇಗೋ ಒಳ್ಳೆಯವನೆಂದು ಹೆಸರು ಗೊಂಡರಾಯಿತ.—ಮತ್ತಾತ ಏನೇ ಮಾಡಿದರೂ ಒ

ಯು ಈಗಲೂ ಉಳಿದುಕೊಂಡಿರುವುದನ್ನು ಕಾಣಬಹುದು.

ಒಂದೊಮ್ಮೆಗೆ ಸ್ವತಂತ್ರ ಭಾರತವು ಯುದ್ಧಭಾಗಿಯಾಗಬೇಕಾಗಿ ಬಂದರೆ ಜನರು ತಮ್ಮ ಮೈಮೇಲೆ ಬಂದ ಈ ಹೋರಾಟದಲ್ಲಿ ತಾವು ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಬೇಕು ಹೇಗೆ ಎಂಬುದನ್ನು ಚಿಂತಿಸುವದಕ್ಕಿಂತ ರಾಮಾಯಣ ಮಹಾಭಾರತಗಳ ಮಹಾಯುದ್ಧಗಳಿಂದಾರಂಭಿಸಿ ಶಿವಾಜಿ, ಪ್ರತಾಪಸಿಂಗ್, ಸಿಪಾಯಿ ಹೋರಾಟಗಳ ವರೆಗಿನ ತಮ್ಮ ಗತಕಾಲದ ಯುದ್ಧಕೀರ್ತಿಗಳನ್ನು ಸ್ಮರಿಸ ಹತ್ತುವರೇನೋ!

ಹಳ್ಳೀ ವಾತಾವರಣವನ್ನು ಕಂಡರೆ ಅಲ್ಲಿ ದೊಡ್ಡ ಮನೆತನಗಳ ಗತವೈಭವವೇ ಈಗಲೂ ಪ್ರಾಮುಖ್ಯತೆ ಪಡೆದಿರುವುದನ್ನೂ ಪ್ರಚಲಿತ ಸತ್ಕಾರ್ಯಗಳಿಗಿಂತ ಹೆಚ್ಚಾಗಿ ಪರಂಪರಾಗತ ಸ್ಥಾನಮಾನಗಳೇ ಮನ್ನಿಸಲ್ಪಡುತ್ತಿರುವುದನ್ನೂ ಕಾಣಬಹುದು.

ಜನಜೀವನದ ಪ್ರತಿಯೊಂದು ಆಗುಹೋಗುಗಳಲ್ಲೂ ಪ್ರಚಲಿತ ಕಾರ್ಯ ಅಥವಾ ಸಂದರ್ಭಕ್ಕೆ ಸಂಬಂಧವೇ ಇಲ್ಲದ ಉಪಕಾರ ಅಥವಾ ಅಪಕಾರ ಭಾವನೆಗಳ ಕೈವಾಡವಿರುವುದು ತೋರಿಬರುತ್ತಿದೆ.

ಹಿಂದುಮುಂದಿನ ಸಂಗತಿಗಳನ್ನು ಬುದ್ಧಿಗೆ ಮಾತ್ರ ಹೊರತು ಹೃದಯಕ್ಕೆ ತಾಗಿಸಿಕೊಳ್ಳದೆ ನಿರ್ವಿಕಾರ ಮನಸ್ಸಿನಿಂದ ಪ್ರಚಲಿತ ಕಾರ್ಯಗಳಲ್ಲಿ ಮಗ್ನರಾಗುವ ಅಭ್ಯಾಸ ಜನತೆಯಲ್ಲಿ ಮೂಡಿದರೆ ಜನಜೀವನದ ದೊಡ್ಡ ಕೊರತೆ ನಿವಾರಣೆಗೊಂಡಂತೆಯೇ ಸರಿ.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲವನ್ನು ಇರುವುದಲ್ಲದೆ ಮೂಲದಲ್ಲಿ ಸರಳವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾರ್ಗಗಳ ರೂಪದಲ್ಲೇನ ಛಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ **0—12—0.**

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಶ್ರೀ ಅರವಿಂದ ಘೋಷ್

ಈ 1950ನೇ ದಶಂಬರ್ ಐದನೇ ತಾರೀಕಿನ ಮುಂಜಾನೆ ಒಂದು ತಾಸು ಮುವತ್ತು ನಿಮಿಷವೆಂಬುದು ಜಗದ್ಬಿಂಬವೊಂದು ಅಸ್ತಮಿಸಿದ ಮುಹೂರ್ತ. ಶ್ರೀ. ಅರವಿಂದ ಘೋಷ್— ಲೌಕಿಕದಲ್ಲೂ ದೈವಿಕ ಜೀವಿಯಾಗಿದ್ದು ಲೋಕವನ್ನೇ ತನ್ನ ಸಾಲಿಗೆ ಕರೆದುಕೊಳ್ಳುವ ತಪಸ್ಸನ್ನಾಚರಿಸುತ್ತಿದ್ದ ಮಹರ್ಷಿ—ಈ ಮುಹೂರ್ತದಲ್ಲಿ ನಿರ್ಯಾಣಹೊಂದಿದರು. ಅರವಿಂದ ಘೋಷ್ ಇನ್ನಿಲ್ಲ; ಆತ್ಮಪ್ರಕಾಶಗೊಂಡು ಎಲ್ಲವನ್ನೂ ಬೆಳಗಿಸುವಂತಿದ್ದ ಒಂದು ಬೆಳಕು....ಅದು ನಂದುವಂತಹದಲ್ಲ...ಆದರೆ ಅದರ ಬುರುಡೆಯೋ ಮತ್ತಾವುದೋ ಒಡೆದುಹೋಯಿತು. ದಿಲ್ಲಿಯ ಕಡೆಗೆ, ಅಥವಾ ಮದ್ರಾಸಿನ ಕಡೆಗೆ ನೋಡುವಂತೆ ಪಾಂಡಿಚೆರಿಯ ಕಡೆಗೆ ನೋಡುವ ಸ್ಥಿತಿಮತಿಯಲ್ಲಿ ಈಗ ನಾವಿಲ್ಲ; ನಾವಾ ಮಟ್ಟಕ್ಕೆ ಬಂದಿಲ್ಲವಾದ್ದರಿಂದಲೇ ಹಾಗಿಲ್ಲ; ಕಾನೂನು ಕಲಮುಗಳನ್ನು ಅಭ್ಯಾಸಿಸಬೇಕಾದಂತೆ ಗೀತಾಧ್ಯಾಯಗಳನ್ನು ಪಠಿಸುವ ಅವಶ್ಯಕತೆ ಈಗಿಲ್ಲ ತಾನೆ? ಆ ಮೇಲ್ಮಟ್ಟಕ್ಕೇರಲಾಗಲಿಲ್ಲವೆನ್ನಬೇಕು ಹೊರತು, ಅದೇ ಕೆಳಮಟ್ಟವಾದ್ದರಿಂದ ಅದಕ್ಕಿಳಿಯಲೊಲ್ಲೆವೆನ್ನುವವರು ಯಾರಿದ್ದಾರೆ? ಅಂತಹ ಲೋಕೋನ್ನತಿಕೆಗಳಿಸಿದ್ದ ಶ್ರೀ. ಅರವಿಂದ ಘೋಷ್ ಕಾಯ ಬಿಟ್ಟರು.

ಲೋಕದ ದುರ್ದಸೆ

ವಾಸ್ತವಿಕ ಜಗತ್ತಿನಲ್ಲಿ ಒಂದು ತುದಿಯಲ್ಲಿ ದೇವತ್ವ ಮತ್ತೊಂದು ತುದಿಯಲ್ಲಿ ರಾಕ್ಷಸತ್ವ ನಿಂತು ಬಲವಾಗಿ ಎಳೆದಾಡಿಕೊಳ್ಳುತ್ತಿರುವುದೂ ಈ ಎಳೆದಾಟದಲ್ಲಿ ಎರಡನೆಯದೇ ಗೆಲ್ಲುತ್ತಾ ಹೋಗುತ್ತಿರುವುದೂ ಈಗ ಕಂಡುಬರುತ್ತಿರುವ ಶೋಚನೀಯ ದೃಶ್ಯ; ಭೀಕರ ಅನುಭವ. ಆಟಂ ಬೋಂಬು, ಹೈಡ್ರೋಜನ್ ಬೋಂಬುಗಳ ತಯಾರಿ ವರೆಗೂ ಈ ಕಡೆಯ ಮನುಷ್ಯಬುದ್ಧಿ ಮತ್ತು ಪ್ರಯತ್ನ ಅದ್ಭುತವಾಗಿ ಬೆಳೆದಿದೆ. ಲೋಕನಾಶವನ್ನು ಸಾಧಿಸುವಾಗಲೂ ಲೋಕಹಿತ ಸಾಧನೆಯೆಂದು ಹೇಳಿಕೊಳ್ಳುವಷ್ಟು ಹೃದಯ ಪ್ರಗತಿಗೊಂಡಿದೆ; ಮಾನವ ಜನಾಂಗವೇ ಮುಖ್ಯವಾಗಿ ಈ ರಂಗದಲ್ಲಿದೆ. ತದ್ವಿರುದ್ಧ ಕ್ಷೇತ್ರವಾದ ಹೃದಯಶುದ್ಧತೆ, ಆತ್ಮಬಲ ಪ್ರಯೋಗ ರಂಗದಲ್ಲಿ ಬಹಳ ಮಂದಿಯಿಲ್ಲ; ಲೋಕದ ಮೇಲೆ ಈ ಕಾಲದಲ್ಲಿ ಬೀರಬೇಕಾದಷ್ಟು ಪ್ರಭಾವವು ಈ ಕಡೆಯಿಂದ ಬೀಳಲವಕಾಶವಿಲ್ಲ. ಹೀಗಾಗಿ ಪ್ರಪಂಚವಿಂದು ಆತ್ಮಬಲದ ಬದಲಿಗೆ ಪಶುಬಲದ ಕಡೆಗೆ—ಉನ್ನತಿಯ ಬದಲು ಅವನತಿಯತ್ತ—ವಾಲಿದೆ ಎಂಬುದು ಸ್ಪಷ್ಟ. 1949ನೇ ಜನವರಿಯಿಂದ 1950ನೇ ದಶಂಬರದ ವರೆಗಿನ ಮೂರು ವರುಷಗಳತ್ತ ನೋಡಿದರೆ ಸಾಕು—ಮೂವರು ಮಹಾತ್ಮರು ಅವಧಿ ಮುಗಿಸಿಕೊಂಡರು: ಮಹಾತ್ಮಾ ಗಾಂಧಿ, ರಮಣ ಮಹರ್ಷಿ, ಅರವಿಂದ ಘೋಷ್. ಆಟಂ ಬೋಂಬು ತಜ್ಞ ವಿಜ್ಞಾನಿಯೊಬ್ಬನು ಮರಣಗೊಂಡರೆ ಆತನ ಕಾರ್ಯವನ್ನು ಮುಂದೊತ್ತುವ ಇತರರು ಇದ್ದೇ ಇದ್ದಾರೆ. ವ್ಯಕ್ತಿ ಕಳೆದುಹೋಗಿ ಕಾರ್ಯ ಬಾಕಿಬಿತ್ತೆನ್ನುವ ಸ್ಥಿತಿ ನಿಜಕ್ಕೂ ಇಲ್ಲ ಆದರೆ ಆತ್ಮಬಲದ ಶೋಧಕ ಬೋಧಕರಾದ ಗಾಂಧಿ, ರಮಣ, ಅರವಿಂದರಂಥವರು ಬಿಟ್ಟ ಸ್ಥಾನಕ್ಕೇರುವವರು ಸತ್ಯಕ್ಕೂ ಕಾಣಿಸುತ್ತಿಲ್ಲ. ಹೀಗಾಗಿ ಲೋಕದ 'ದೇವಮಂದಿರ' ಅನುಕ್ರಮವಾಗಿ ಖಾಲಿಬೀಳುತ್ತಾ ಜರಿದು ಬೀಳುತ್ತಲೇ ಬರುವಾಗ, ಅದರ 'ಕಸಾಯಿ ಗೃಹ' ವಿಸ್ತಾರಗೊಳ್ಳುತ್ತಲೇ ಬರುತ್ತಿದೆ. ಪ್ರಪಂಚವೆತ್ತ ಸಾಗುತ್ತಿದೆ ಎಂಬುದರ ಸ್ಪಷ್ಟ ಅನುಭವವಾಗುತ್ತಿದೆ. ಮಹರ್ಷಿ ಅರವಿಂದ ಘೋಷ್ ನಿರ್ಯಾಣಗೊಂಡಿರುವ ಈ ಅವಧಿಯಲ್ಲಾದರೂ, ನಾವು ಬದುಕಿರುವ ಪ್ರಪಂಚವೆಷ್ಟು ಹಾಳು ಎಂಬ ಕಡೆಗೆ ಲಕ್ಷ್ಯಬೀಳಲೇ ಬೇಕು. ಆವ ತಗ್ಗಿಗೋ ಸಿಳೆಯುತ್ತಿರುವ ಪ್ರವಾಹದಲ್ಲಿ ನಾವೊಂದು ಆಧಾರವಾಗಿ ಹಿಡಿದುಕೊಂಡು ಪಾರಾಗಲು ಆಗುವಂತಿದ್ದ ಅರವಿಂದ ಘೋಷ್‌ರಂಥವರೂ ತಪ್ಪಿಹೋಗುತ್ತಿರುವಾಗ, ಇನ್ನೇನು, ನಮಗೆ ಪತನವೇ ಗತಿಯೋ ಎಂಬ ಭೀತಿ ಮೊಳೆಯುತ್ತಿದೆ.

ಅರವಿಂದ್- ಪೂರ್ವಾರ್ಧ

ಅರವಿಂದ್ ಘೋಷ್ 1872ರಲ್ಲಿ ಕಲ್ಕತ್ತದಲ್ಲಿ ಜನ್ಮ ತಾಳಿದ್ದರು. ಪ್ರಾಥಮಿಕ ವಿದ್ಯಾಭ್ಯಾಸದ ನಂತರ ಅವರ ಶಿಕ್ಷಣವೆಲ್ಲಾ ಇಂಗ್ಲಾಂಡಿನಲ್ಲೇ ಆಯಿತು. ಕೇಂಬ್ರಿಜ್ಜಿನ ಸೈಂಟ್ ಪಾವುಲ್ಸ್ ಮತ್ತು ಕಿಂಗ್ಸ್ ಕಾಲೇಜುಗಳಲ್ಲಿ ಕಲಿತರು. ಅನುಕೂಲತೆಗಳು ಐ. ಸಿ. ಯಸ್. ಅಧಿಕಾರಿವರ್ಗದತ್ತ ಮುಂತಳ್ಳುತ್ತಿದ್ದಾಗ, ಅದೃಷ್ಟವು ದೇಶಸೇವೆಗಾಗಿ ಎಳೆದುಕೊಂಡ ಕೆಲವೇ ಮಂದಿ ಭಾರತೀಯರಲ್ಲಿ ಶ್ರೀ ಅರವಿಂದ ಘೋಷರೊಬ್ಬರು. 1890ರಲ್ಲಿ ಐ. ಸಿ. ಯಸ್.ನ ಪ್ರವೇಶಿಕಾ ಜಾಹೀರು ಪ್ರವೇಶ ಸ್ಪರ್ಧೆಯಲ್ಲಿ ಜಯಶಾಲಿಯಾದ ಶ್ರೀ ಅರವಿಂದ ಘೋಷರು, ಕುದುರೆ ಸವಾರಿಯ ನಾಮಮಾತ್ರ ಪರೀಕ್ಷೆಗೆ ನಿಲ್ಲದೆ ಉದ್ದೇಶಪೂರ್ವಕ ಹಿಂದೆ ಬಿದ್ದರು. ಸಿವಿಲ್ ಸರ್ವಿಸಿಗೆ ಸೇರಬಾರದೆಂಬ ನಿರ್ಧಾರದಿಂದಲೇ ಅವರಾ ಪರೀಕ್ಷೆಗೆ ತಪ್ಪಿಸಿಕೊಂಡದ್ದೆಂದು ತಿಳಿದುಬಂದಿದೆ. 1893ರಲ್ಲಿ ಇಂಗ್ಲಾಂಡಿನಿಂದ ಮರಳಿ ಬಡೋದೆಯ ಮಹಾರಾಜಾ ಸಯಾಜಿರಾವ್ ಗಾಯಕವಾಡರ ಆಶ್ರಯದಲ್ಲಿ ಕೆಲಕಾಲ ಬಡೋದೆಯ ಆಡಳಿತಾಧಿಕಾರಿಯಾಗಿ ಅನುಭವ ಸಂಪಾದಿಸಿದರು. ಆ ಮೇಲವರು ವಿದ್ಯಾಕ್ಷೇತ್ರಕ್ಕೆ ಕಾಲಿಟ್ಟರು; ಬಂಗಾಳಾ ರಾಷ್ಟ್ರೀಯ ಕಾಲೇಜಿನ ಪ್ರಿನ್ಸಿಪಾಲರಾದರು. ಈ ಶತಮಾನದ ಆದಿಭಾಗದಲ್ಲಿ ಪ್ರಿನ್ಸಿಪಾಲ್ ಹುದ್ದೆಯಿಂದ ನೇರಾಗಿ ರಾಜಕೀಯಕ್ಕೆ ಧುಮುಕುವುದು ಬಂಗಾಳದ ಒಂದು ನಾಡಿಕೆಯೇ ಆಗಿತ್ತೆನ್ನಬಹುದು. ಅಂತೆಯೇ ಅಂದಿನ ಭಾರತದಲ್ಲಿ ದೇಶಾಭಿಮಾನಕ್ಕೆ ಹೊಂದಿಕೆಯಾಗುವ ಕಾರ್ಯಕ್ಷೇತ್ರವಿದ್ದುದಾದರೆ ಪತ್ರಿಕೋದ್ಯಮ. ಭಾರತದ ಪ್ರಸಿದ್ಧ ದೇಶಭಕ್ತ ಪಂಙ್ತಿಯತ್ತ ನೋಡಿದರೆ, ಅಲ್ಲಿದ್ದವರು ಮತ್ತಿರುವವರು ಹೆಚ್ಚಾಗಿ ಮೊದಲು ವಕೀಲರಾಗಿದ್ದವರು ಅಥವಾ ಶಿಕ್ಷಣವೃತ್ತಿ ಇಲ್ಲವೇ ಡಾಕ್ಟರೀ ವೃತ್ತಿಗಳವರು. ಇವರೆಲ್ಲರನ್ನೂ ಅವರ ಖಾಸಗೀ ಉದ್ಯಮರಂಗದಿಂದ ದೇಶಸೇವಾ ಕ್ಷೇತ್ರಕ್ಕೆ ದಾಟಿಸಿದ ಸೇತುವೆಯೇ ಪತ್ರಿಕೋದ್ಯಮ. ಪ್ರತಿಭಾನ್ವಿತ ಅರವಿಂದ ಘೋಷರು 'ವಂದೇ ಮಾತರಂ' ಪತ್ರಿಕೆಯ ಪ್ರಥಮ ಸಂಪಾದಕರಾದರು. ಸಂಪಾದಕ ಅರವಿಂದ ಘೋಷರದು ಸಿಡಿಲ ಘರ್ಜನೆಯಾಗಿತ್ತು; ಅವರ ವ್ಯಕ್ತಿತ್ವವು ಮಿಂಚಿನಂತೆ ಝಳಪಿಸುಗೊಂಡಿತ್ತು. ಬ್ರಿಟಿಷ್ ಸರಕಾರವು ಈ ಘೋಷರನ್ನು ಹಿಂಸಾತ್ಮಕ ಕ್ರಾಂತಿಗಾರನೆಂದು ಅರ್ಥಮಾಡಿಕೊಂಡಿತು. ಭಾರತದಲ್ಲಿ ರಾಷ್ಟ್ರೀಯತಾ ಸ್ಫೂರ್ತಿ ಮತ್ತು ಸ್ವಾತಂತ್ರ್ಯದಾಹವನ್ನು ಕೆರಳಿಸಿದ ಬಂಗಾಳಾ ವಿಭಜನೆಯ ಕಾಲವದು; ಈ ವಿಭಜನೆಯ ಪ್ರತಿಕ್ರಿಯೆಯಾಗಿದ್ದ ಪ್ರಸಿದ್ಧ ಅಲೀಪುರ ಬೋಂಬು ಮೊಕದ್ದಮೆಯಲ್ಲಿ ಶ್ರೀ ಅರವಿಂದ ಘೋಷರು ಅಪಾದಿತರಾಗಿ ದೀರ್ಘಾವಧಿ ಬಂಧನದಲ್ಲಿರಬೇಕಾಯಿತು; ಬೋಂಬು ಮೊಕದ್ದಮೆಯ ಭೀಕರಾರೋಪಿ ಅರವಿಂದ ಘೋಷರು ಏಕಾಂತವಾಸ ಬಂಧನದಲ್ಲಿದ್ದ ಆ ಅವಧಿಯೇ ಮಹರ್ಷಿ ಅರವಿಂದ ಘೋಷರ ನಿರ್ಮಾಣಕಾಲವಾಯಿತು. ಹೊರಗಿನ ಪ್ರಪಂಚದಿಂದ ಪ್ರತ್ಯೇಕಿಸಲ್ಪಟ್ಟ ಏಕಾಕಿ ಅರವಿಂದ ಘೋಷರು ಬೇರಾರನ್ನೂ ಮಾತಾಡಿಸಲಿಕ್ಕಿಲ್ಲದೆ ತನ್ನ ಆತ್ಮವನ್ನೇ ತಾನು ಮಾತನಾಡಿಸಹತ್ತಿದರು; ಅವರಲ್ಲಿ ಒಳದೃಷ್ಟಿ ಮೂಡಿತು; ತನ್ನನ್ನು ತಾನು ಅರಿತುಕೊಂಡರು. ಧ್ಯಾನ ಮತ್ತು ಯೋಗಾಭ್ಯಾಸದಲ್ಲಿ ಮಗ್ನನಾದರು. ಗೀತೆ ಮತ್ತು ಉಪನಿಷತ್ತುಗಳನ್ನು ಅಭ್ಯಾಸಿಸಿ, ಅವುಗಳ ಸಾರವನ್ನು ಗ್ರಹಿಸಿಕೊಂಡರು. ವಿಚಾರಣಾನಂತರ ಆರೋಪಮುಕ್ತರಾಗುವಾಗ ಶ್ರೀ ಅರವಿಂದ ಘೋಷರು ಬೇರೆಯೇ ಮನುಷ್ಯನಾಗಿದ್ದರು. ಐ. ಸಿ. ಯಸ್. ಪರೀಕ್ಷೆಯಲ್ಲಿ ಸುಲಭದಿಂದ ಉದ್ದೇಶಪೂರ್ವಕ ತಪ್ಪಿಸಿಕೊಳ್ಳುವಂತೆ ಮಾಡಿದ ಅದೊಂದು ಸ್ಫೂರ್ತಿ—ಮುಂದೆ ಪಾಂಡಿಚೆರಿಯ ಸನ್ಯಾಸಿಯಾಗಿ ಲೌಕಿಕ ದೈವಿಕಗಳ ನಡುವಿನ ಕದ ತೆರೆಯಿಸಿದ ಈ ಶಕ್ತಿ—ಇವು ಅರವಿಂದರಲ್ಲಿ ಸಾಕ್ಷಾತ್ಕರಿಸಿದುದು ಬಂಧನ ಗೃಹದೊಳಗೆ ಏಕಾಂತವಾಸದಲ್ಲಿದ್ದ ಅವಧಿಯಲ್ಲೇ. ನ್ಯಾಯಸ್ಥಾನದಲ್ಲಿ ವಾದಿಸಿ ಅಲಿಪುರ ಬೋಂಬು ಮೊಕದ್ದಮೆಯಿಂದ ಶ್ರೀ ಅರವಿಂದ ಘೋಷರನ್ನು ಬಿಡುಗಡೆ ಮಾಡಿಸಿದವರು ಆಗ ವಕೀಲರಾಗಿದ್ದ ದೇಶಬಂಧು ಸಿ. ಆರ್. ದಾಸರು. ಅರವಿಂದ ಘೋಷ್, ಸಿ. ಆರ್. ದಾಸ್—ಈ ಇಬ್ಬರು ದೇಶಭಕ್ತರ ಉಜ್ವಲ ಜೀವನ ಚರಿತ್ರೆ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

MRS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಡಾಕಂಪೆನಿ, ಮಂಗಳೂರು

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—
ಶಾ ಕಂಪೆನಿ, ಮಂಗಳೂರು

ಕೆಳಲ್ಲೂ ಸೇರಿಕೊಳ್ಳುತ್ತ ಪ್ರಾಮುಖ್ಯತೆಯು ತಲೆದೋರುವ ಘಟನಾ ವೈಶಿಷ್ಟ್ಯವು ಧುದಾಗಿದೆ. ಜೈಲು ವಸತಿಯೆಂಬುದು ನಾಯಕರಾಯುಧಗಳ ಸಾಣೆ ಮಣೆ, ಅಲ್ಲಿ ವಸತಿಯಲ್ಪಟ್ಟ ನಂತರವೇ ಈ ಆಯುಧಗಳು ಹೆಚ್ಚು ಕೆಲಸಕ್ಕೆ ಬಿದ್ದಿವೆ. ಅನ್ಯಾದೃಶ್ಯ ಒಂದು ವಿದ್ಯುತ್ ಪ್ರವಾಹವು ನರನಾಡಿಗಳಲ್ಲಿ ಪ್ರವಹಿಸುವಂತಿದ್ದ ಅರವಿಂದ ಘೋಷರು ಅಲ್ಲಿಂದ ಹೊರಳಿದ ಮೇಲೆ ಮತ್ತಷ್ಟು ತೀಕ್ಷ್ಣವಾಗಿ ಕಂಡು ಬಂದುದರಲ್ಲಿ ಸೋಜಿಗವೇನೂ ಇಲ್ಲ. ಒಂದು ಇಂಗ್ಲಿಷ್, ಮತ್ತೊಂದು ಬಂಗಾಳಿ, ಹೀಗೆ ಎರಡು ವಾರಪತ್ರಿಕೆಗಳ ಸಂಪಾದಕನಾಗಿ ಅರವಿಂದ ಘೋಷರು ತನ್ನ ಕ್ರಾಂತಿರಸ ಇಷ್ಟ್ಯಾಡಿ ಹುರುಪಿನಿಂದ ಎರಡು ಕಾಲುವೆಗಳ ದ್ವಾರಾ ಹರಿಯಿಸುತಿದ್ದಾಗ, ಸರಕಾರವಾದರೋ ಅವರನ್ನು ಬಂಧಿಸಿಡಲು ಹೊಂಚುತ್ತಲೇ ಇತ್ತು. ಕೊನೆಗೊಮ್ಮೆ 1910ರಲ್ಲಿ ರಾಜದ್ರೋಹದ ಅಪಾದನೆಯ ಮೇಲೆ ಕ್ರಾಂತಿಕಾರ ಅರವಿಂದ ಘೋಷರನ್ನು ಕೈದುಮಾಡಲು ವಾರಂಟು ಹೊರಟಿತು. ಆಗಿನ ಬ್ರಿಟಿಷ್ ಭಾರತದ ಸ್ಪರ್ಶ ಕೂಡಾ ಅಸಹ್ಯವಾಗಿ ತೋರಿ ಶ್ರೀ ಅರವಿಂದರು ಅಲ್ಲಿಂದ ಹೊರಬಿದ್ದು ಬಂಗಾಳದಲ್ಲಿ ಫ್ರೆಂಚ್ ವಸಾಹತಾಗಿದ್ದ ಚಂದ್ರನಾಗೋರನ್ನು ಸೇರಿಕೊಂಡರು. ಅಲ್ಲಿಂದ ಸೀದಾ ಪಾಂಡಿಚೆರಿಗೆ ಬಂದವರು ಕೊನೆಯ ವರೆಗೂ ಅಲ್ಲೇ. ಶ್ರೀ ಅರವಿಂದ ಘೋಷ್ ಪಾಂಡಿಚೆರಿಯಲ್ಲಿ ಪ್ರಥಮತಃ ಕಾಲಿಟ್ಟುದು 1910ನೇ ಎಪ್ರಿಲ್ 4ರಲ್ಲಿ. ರಾಜಕೀಯ ಕ್ರಾಂತಿವಾದಿ ಅರವಿಂದ ಘೋಷರು ಆಧ್ಯಾತ್ಮವಾದಿ ಮಹರ್ಷಿ ಅರವಿಂದ ಘೋಷರಾಗಿ ರೂಪಾಂತರಗೊಳ್ಳುವಾಗ ಕೊಟ್ಟ ಪ್ರಥಮ ಜೀವನದ ವಿದಾಯ ಸಂದೇಶ—ತನ್ನ ಘನೋಜ್ವಲ ಜೀವನ ಚರಿತ್ರೆಯ ಮೊದಲ ಭಾಗವನ್ನು ಮುಗಿಸಿಕೊಳ್ಳುವಾಗ ಒರೆದ ಸಮಾಪ್ತಿ ವಚನ—ಎನ್ನಬಹುದಾದ, ಮಾತುಗಳನ್ನು ಅರವಿಂದರು ಆ ಸಂದರ್ಭದಲ್ಲಿ ದಿಲೀಪ್ ಕುಮಾರ ರೋಯಿಗೆ ಬರೆದಿದ್ದರು: "ಲೋಕ ಸುಖವನ್ನು ನನ್ನ ಯೋಗದ ಮೂಲಕ ಒಂದು ಕಾಲಕ್ಕಾದರೂ ಬದಲಾಯಿಸಬೇಕೆಂಬುದೇ ನನ್ನ ಸಂಕಲ್ಪ. ನಶ್ವರತೆಯನ್ನು ಹೊಂದಿಸುವ ಎಲ್ಲಾ ಪಾಪಗಳನ್ನೂ ವಿಸರ್ಜಿಸಿಕೊಳ್ಳುವಂತೆ ಮಾನವೀಯತೆಯ ಮೂಲಭೂತ ಸ್ವಭಾವಗಳನ್ನೂ ಚಲನವಲನಗಳನ್ನೂ ಬದಲಾಯಿಸುವ ಇಚ್ಛೆ ನನ್ನದಿದೆ. ಈ ಗುರಿ ಮತ್ತು ಮನೋವೃತ್ತಿಯನ್ನಿಟ್ಟುಕೊಂಡೇ ನಾನು ಆದಿಯಿಂದಲೂ ಯೋಗದತ್ತ ಮುಖ ಮಾಡಿದೆ. ಮತ್ತು ನನ್ನ ಯೋಗ ತಪಸ್ಸನ್ನು ಇಲ್ಲಿ ಮುಂದುವರಿಸುವಂತೆ ಅಂತರಾತ್ಮನ ಕರೆಯು ನನ್ನನ್ನು ಒತ್ತಾಯಿಸಿದ್ದರಿಂದಲೇ ನಾನು ಪಾಂಡಿಚೆರಿಗೆ ಬಂದುದು."

ಅರವಿಂದ್— ಉತ್ತರಾರ್ಧ

ಪಾಂಡಿಚೆರಿಗೆ ಬಂದ ಮೇಲೆ ಶ್ರೀ ಅರವಿಂದರು ಯೋಗಧ್ಯಾನದಲ್ಲೇ ಲೀನರಾಗಿ ನಾಲ್ಕು ವರುಷಗಳ ವರೆಗೂ ಏಕಾಂತವಾಸದಲ್ಲಿದ್ದರು. ಕಠೋರ ತಪಸ್ಸನ್ನಾಚರಿಸಿದ್ದರು. ಆಶ್ರಮದ "ಮಾತೆ"ಯಾಗಿ ಅಂದಿನಿಂದೀ ವರೆಗೂ ಪೂಜಿಸಲ್ಪಡುತ್ತಿರುವ ಮಹಿಳೆಯೊಡನೆ ಶ್ರೀ ಅರವಿಂದ ಘೋಷರ ಸಂಬಂಧವುಂಟಾಯಿತು. 1920ರಲ್ಲಿ ಈ ಮಾತೆ ಮತ್ತು ಪಾಲ್ ರಿಚಾರ್ಡರ ಸಹಕಾರದೊಂದಿಗೆ ತನ್ನ 43ನೇ ಜನ್ಮದಿನದಲ್ಲಿ "ಆರ್ಯ" ಎಂಬ ಪತ್ರಿಕೆಯನ್ನು ಪಾಂಡಿಚೆರಿ ಆಶ್ರಮದಿಂದ ಹೊರಡಿಸಹತ್ತಿ ಏಳು ವರುಷಗಳ ವರೆಗೆ ಅದನ್ನು ನಡೆಯಿಸಿದರು. 1931ರಲ್ಲಿ ಅದರ ಪ್ರಕಟಣೆ ನಿಂತುಹೋಯಿತು. 'ಆರ್ಯ' ಪತ್ರಿಕೆಯಲ್ಲಿ ಅರವಿಂದರು ಬರೆಯುತ್ತಿದ್ದ ತಾತ್ವಿಕ ಲೇಖನಗಳು ಲೌಕಿಕ ಜಗತ್ತಿಗೆ ಅವ್ಯಕ್ತಧಾರೆಗಳಂತಿದ್ದವು. 'ದೈವಿಕ ಜೀವನ' 'ವೇದದ ಗುಟ್ಟು' 'ಗೀತಾಪ್ರಬಂಧಗಳು' 'ಸಾಮಾಜಿಕ ಅಭಿವೃದ್ಧಿಸೂತ್ರ' 'ಮಾನವೀಯ ಒಕ್ಕಟ್ಟಿನ ಮಾದರಿ' 'ಭಾವೀ ಕವಿತ್ವ' 'ಭಾರತೀಯ ಸಂಸ್ಕೃತಿಯ ಸಮರ್ಥನೆ' 'ಯೋಗಸಾರ' ಮೊದಲಾದ ಲೇಖನಗಳನ್ನು ಅರವಿಂದರು ಬರೆದಿದ್ದರು. "ಈಶಾ" ಮತ್ತು "ಕೇನಾ" ಉಪನಿಷತ್ತುಗಳಿಗೆ ಅವರು ಟಿಪ್ಪಣಿಗಳನ್ನು ಬರೆದಿದ್ದರು. ಪೌರ್ವಾತ್ಯ ಮತ್ತು ಪಾಶ್ಚಾತ್ಯ ತತ್ವವಿಧಾನಗಳ ಅಪಾರ ಜ್ಞಾನಾನುಭವ ಮತ್ತು ಅಗಾಧ ಯೋಗಾಭ್ಯಾಸ ಬಲದಿಂದ ಶ್ರೀ ಅರವಿಂದ ಘೋಷ್ ಸಾಕ್ಷಾತ್ ಆಧ್ಯಾತ್ಮ ಬಿಂಬವಾಗಿದ್ದರು; ದೈವಿಕ ಜೀವಿಯಾಗಿ ಮಾರ್ಪಟ್ಟಿದ್ದರು. ಶಾಸ್ತ್ರ, ಉತ್ಸಾಹ, ಗುರು, ಕಾಲ, ಇವುಗಳ ಸಮ್ಮಿಶ್ರ ಪ್ರಯತ್ನದ ಫಲವಾಗಿಯೇ ಯೋಗಿ ಸಿದ್ಧಿ ಹೊಂದಬೇಕೆಂದು ಅರವಿಂದ ಮತ; ಅವರು ಅಂತಹ ಸಿದ್ಧಿ ಪಡೆದಿದ್ದರು. ವ್ಯಕ್ತಿಶಃ ತಾನು ಸಂಸಾರಬಂಧನದಿಂದ ಮುಕ್ತನಾಗಬೇಕು—ತಾನೊಬ್ಬ ಅಮರ ಬ್ರಹ್ಮತ್ವ ಗಳಿಸಿದರಾಯಿತು—ಇಂದು ಅಥವಾ ಅಲ್ಲಿ ಅದು ಸಿದ್ಧಿಸಿದರಾಯಿತು—ಎಂಬಂತಹ ಋಷಿ ಶ್ರೀ ಅರವಿಂದ ಘೋಷರಾಗಿರಲಿಲ್ಲ. ಇಂದು ಮತ್ತಲ್ಲಿಯೇ ಮಾನವ ವರ್ಗಕ್ಕೆ ದೈವಿಕ ಜೀವನವೊದಗಬೇಕೆಂಬುದೇ ಅವರ ಸಂಕಲ್ಪವಾಗಿತ್ತು. ಸುಸ್ಫೂರ್ತಿ, ಅತ್ಯುನ್ನತ ಬುದ್ಧಿಮತ್ತೆ ಮತ್ತು ಅತಿಮಾನುಷ್ಯತ್ವದ ಮೂಲಕ ಮಾನವ ಜೀವನವನ್ನು ಭೌತಿಕಾಸ್ತಿತ್ವದಿಂದ ಕ್ರಮಶಃ ಮೇಲೇರಿಸುತ್ತ ದೈವಿಕ ಜೀವನದೆಡೆಗೆ ಕೊಂಡಿಸುವ ಸ್ವರ್ಗದ ಏಣಿಯೇ ಶ್ರೀ ಅರವಿಂದ ಘೋಷ್ ಜಗತ್ತಿನೆದುರು ಒಡ್ಡಿದ್ದ ಸಾಧನ. ಸ್ವಾಭಾವಿಕ ಮತ್ತು ದೈಹಿಕ ಪ್ರತಿಜ್ಞೆಗಳನ್ನು ಹದಕ್ಕೆ ತಂದುಕೊಳ್ಳುವ ಮತ್ತು ಬಾಹಿರವಾಗಿ ಇಡುವ ಸಂಕಲ್ಪ ಸ್ಫುರಣೆ—ಕೆಳಮಟ್ಟದ ಎಲ್ಲಾ ಚಲನವಲನಗಳನ್ನೂ ಬಿಟ್ಟುಬಿಡುವ ವಿಸರ್ಜನೆ—ತನ್ನ ಮತ್ತು ತನ್ನಂತೆಲ್ಲರ ಜ್ಞಾನ, ತಿಳುವಳಿಕೆ ಮತ್ತು ಚಲನವಲನಗಳನ್ನು ದೈವಿಕತೆ ಮತ್ತು ಶಕ್ತಿಯಾಧೀನಗೊಳಿಸುವ ಶರಣತ್ವ—ಇವು ಮೂರು ಅರವಿಂದರ ಮೂಲ ಮಂತ್ರಗಳು. ಸುಮಾರು ನಲ್ವತ್ತು ವರುಷಗಳಿಂದ ಪಾಂಡಿಚೆರಿಯ ಆಶ್ರಮವಾಸಿಯಾಗಿದ್ದ ಈ ಆಧುನಿಕ ಬ್ರಹ್ಮರ್ಷಿಯು ಕಳೆದ ಸುಮಾರು ಇಪ್ಪತ್ತು ವರುಷಗಳಿಂದ ಜಗದ್ಗುರುವಾಗಿ ಮನ್ನಣೆ ಹೊಂದಲಾರಂಭಿಸಿದ್ದರು. ಜಗತ್ತಿನ ಎಲ್ಲಾ ರಾಷ್ಟ್ರಗಳಿಂದಲೂ ಮಹರ್ಷಿ ಅರವಿಂದರ ದರ್ಶನಕ್ಕಾಗಿ ಪಾಂಡಿಚೆರಿಗೆ ಯಾತ್ರಿಕರು ಬರುವದಿದ್ದಿತು. ಪ್ರಪಂಚದ ಎಲ್ಲಾ ಕಡೆಯವರೂ ಸೇರಿರುವ ಪಾಂಡಿಚೆರಿ ಆಶ್ರಮವಾಸಿ ಅರವಿಂದ ಶಿಷ್ಯರ ಸಂಖ್ಯೆಯೇ ಸುಮಾರು 800ರ ವರೆಗಿದೆ. ಆದರೆ ಹೊರಗಿನಿಂದ ದರ್ಶನಾಕಾಂಕ್ಷಿಯಾಗಿ ಬಂದವರಂತೆಯೇ ಆಶ್ರಮವಾಸಿಗಳಿಗೆ ಕೂಡಾ ಅರವಿಂದರ ಭೇಟಿಯಾಗುವುದು ಅತ್ಯಪೂರ್ವವಾಗಿ—ವರುಷಕ್ಕೊಂದು ಅಥವಾ ಎರಡು ಬಾರಿ ಮಾತ್ರ. ವರುಷಾವಧಿ ಭೇಟಿಯು ನಿಶ್ಚಿತ ದಿನ ನೋಡಿಕೊಂಡೇ ದರ್ಶನಾಕಾಂಕ್ಷಿಗಳು ಹೊರಡುವ ಸಂಪ್ರದಾಯ ಇತ್ತೀಚೆಗೆ ಆಗಿದ್ದಿತು. ಆದರೂ ಮಹರ್ಷಿ ಅರವಿಂದರು ಪತ್ರಗಳ ಮೂಲಕ ತನ್ನ ಆಶ್ರಮವಾಸಿಗಳೊಂದಿಗೆ ಮತ್ತು ಭಕ್ತರೊಂದಿಗೆ ಸದಾ ನಿಕಟ ಸಂಬಂಧವಿಟ್ಟುಕೊಂಡಿದ್ದರು. ಕೇವಲ ಸಂಬಂಧಪಟ್ಟ ವ್ಯಕ್ತಿಯನ್ನು ಉದ್ದೇಶಿಸಿ ಸಂದರ್ಭಾನುಗುಣವಾಗಿ ಬರೆದವುಗಳಾಗಿದ್ದರೂ ಅರವಿಂದರ ಅಂತಹ ಪತ್ರಗಳೆಲ್ಲವೂ ವೇದವಾಕ್ಯಗಳಂತೆ ಸರ್ವೋಪಯೋಗಕ್ಕೆ ಬರುವ, ಉತ್ಕೃಷ್ಟಾದರ್ಶ ದಾಖಲೆಗಳಾಗಿ ಅಮರತ್ವ ಗಳಿಸಿವೆ. ಅಂತರ್ಮುಖಿ ಆತ್ಮಚಿಂತಕನು ಬಾಹ್ಯಜೀವಿಯಾಗಿರುವದಕ್ಕಿಂತ ಬರಹ ಜೀವಿಯಾಗಿರುವುದೇ ಅತನ ಏಕಾಗ್ರತೆಗೆ ಅನುಕೂಲ. ಶ್ರೀ ಅರವಿಂದರು ಬರಹಜೀವಿಯಾಗಿದ್ದರು; ಲೇಖನಿಯೇ ಈ ಆಧುನಿಕ ಬ್ರಹ್ಮರ್ಷಿಯ ಬ್ರಹ್ಮದಂಡವಾಗಿದ್ದಿತು. ಲೋಕವನ್ನು ತನ್ನ ಸಾಲಿಗೆಳೆದುಕೊಳ್ಳುವ ಪ್ರಯತ್ನವನ್ನಲ್ಲದೆ ಪ್ರಾಪಂಚಿಕ ವೈರಾಗ್ಯವನ್ನೇನೂ ತಾಳಿರದ ಶ್ರೀ ಅರವಿಂದ ಘೋಷರ ಕಣ್ಣು ಪ್ರಚಲಿತ ಆಗುಹೋಗುಗಳ ಕಡೆಗೆ ತೆರೆದುಕೊಂಡೇ ಇತ್ತು. 'ಸಂಯುಕ್ತ ರಾಷ್ಟ್ರ ಸಂಘ'ಕ್ಕೆ ಶ್ರೀ ಅರವಿಂದ ಘೋಷ್ ತನ್ನ ಅನುಮೋದನೆ ಕೊಟ್ಟಿದ್ದರು. ಕಳೆದ ಲೋಕ ಮಹಾಯುದ್ಧದ ಕುರಿತ "ಮನುಷ್ಯರು ಪ್ರಗತಿ ಹೊಂದುವ ಮತ್ತು ತನ್ನೊಳಗಿನ ಬೆಳಕಿಗನುಗುಣವಾಗಿ ಬಾಳುವ ಮತ್ತು ಅದಕ್ಕವಕಾಶ ದೊರಕಿಸಿಕೊಳ್ಳುವ ಸ್ವಾತಂತ್ರ್ಯವನ್ನು ದೋಚಿಸಿಕೊಳ್ಳುವುದಕ್ಕಾಗಿ, ಸತ್ಯ ಬೆಳವಣಿಗೆ ಸ್ಫೂರ್ತಿ ಬೆಳವಣಿಗೆಗೆ ಹೊಂದುವುದಕ್ಕಾಗಿ, ಇರುವ ಒಂದು ಹೋರಾಟ" ಎಂದು ಶ್ರೀ ಅರವಿಂದರೆಂದಿದ್ದರು. ದೇವತೆ ಮತ್ತು ರಾಕ್ಷಸಗಳೊಳಗಿನ ಯುದ್ಧವೆಂದೇ ಶ್ರೀ ಅರವಿಂದ ಘೋಷ್ ಅದಕ್ಕರ್ಥ ಕಟ್ಟಿದ್ದರು. ಭಾರತದ ವಿಭಜನಾ ಪೂರ್ವ ಗೊಂದಲ ಮತ್ತು ಭೀಕರ ಜೀವನದ ದುಸ್ಥಿತಿಯ ಕರಿಕಾಲದಲ್ಲಿ ಮಹರ್ಷಿ ಅರವಿಂದ ಘೋಷ 1948ನೇ ಜುಲಾಯಿಯಲ್ಲಿ ಒಂದು ಆಶಾದಾಯಿ ಸಂದೇಶವಿತ್ತಿದ್ದರು: "ಕೆಲವು ಸಾಧ್ಯತೆಗಳು ಆವಿರ್ಭವಿಸಬೇಕಾದರೆ ಇಂತಹುದನ್ನು ತೀರಿಸಿಕೊಂಡೇ ಹೊಸ ಉತ್ತಮ ಜಗತ್ತು ಮೂಡಿ ಬರಬೇಕಾದರೆ— ಇವೆಲ್ಲವೂ ನಡೆಯಬೇಕಾದುದು ಆಗತ್ಯವೆಂಬುದನ್ನು ನಾವು ಮನಗಾಣುವುದೇ ಸಾಕು. ಇಷ್ಟು ದೂರದ ಇನ್ನೊಂದು ಕಾಲಕ್ಕೆ ಮುಂದುವರಿಸಿಡುವಂತಹವಲ್ಲ. ಆದರೆ ನಾವು ಆಗಿನ ನವ ಜಾಗೃತಿಯಲ್ಲಿರುವ ಹೊಸ ಜಗತ್ತು ಈಗಿನದರಲ್ಲಿ ಮಾತ್ರ ಬೇರೆಯಾಗಿ ಹಳೇ ಜಗತ್ತಿನ ತಿರುಳನ್ನೇ ಒಳಗೊಂಡವಾಗಿ ಇರಬೇಕು, ಅದು ಒಳಗಡೆಯಿಂದ ಹುಟ್ಟಬೇಕು ಹೊರತು ಹೊರಗಿನಿಂದಲ್ಲ. ಪಾಂಡಿಚೆರಿಯ ಅರವಿಂದಾಶ್ರಮವೆಂಬ ಆ 'ನವ ಸ್ವರ್ಗ ಮತ್ತು ಹೊಸ ಜಗತ್ತಿನ ಮಹಾದ ತೊದಲ್ನುಡಿಯ ಮಹದಾಕಾಂಕ್ಷೆಯಿಂದ, ಪೂರ್ವಭಾವೀ ಮೊದಲಗೆರೆ'ಯೆಂದೇ ಮಹರ್ಷಿ ಅಭಿಮತಾನುಸಾರ ಭಾವಿಸಲ್ಪಟ್ಟಿದ್ದಿತು. ನಡುರಾತ್ರಿಯ ಗಾಢಾಂಧಕಾರದಲ್ಲಿ ಶಾಂತಚಿತ್ತನಾಗಿ ಕುಳಿತುಕೊಂಡು ಅರವಿಂದ ಮಹರ್ಷಿಗಳು ಪತ್ರಗಳನ್ನು ಬರೆಯುವ ವಾಡಿಕೆಯಿದ್ದಿತು. ಲೋಕವು ಅಂಧಕಾರದಲ್ಲಿರುವಾಗ ಜಾಗೃತರಾಗಿದ್ದವರು ಅರವಿಂದರೇ!

ನಿರ್ಯಾಣ ತಪಃಪ್ರಭಾವ

ದಶಂಬರ ತಾ. 5ನೇ ಮಂಗಳವಾರ ಅತಿಮುಂಜಾನೆ ತಾಸು 1-30ಕ್ಕೆ ಆಶ್ರಮದ ತನ್ನ ಸಿದ್ಧಿಕೋಣೆಯಲ್ಲೇ ಶ್ರೀ ಅರವಿಂದ್ ಘೋಷ್ ಪರದೇವೈಕ್ಯಗೊಂಡರು. ಆಶ್ರಮದ ಮಾತೆ ತಾಸು 3-30ಕ್ಕೆ ಈ ಸುದ್ದಿ ಕೊಡುವವರೆಗೂ ತಮ್ಮ ಪಾಲಿಗೂ ಜಗತ್ತಿನ ಗುರುವಿನ ವಿಯೋಗವಾಗುವದೆಂಬುದನ್ನು — ಕನಸಲ್ಲೂ ಆ ಮುಹೂರ್ತದಲ್ಲಿ ಅದನ್ನು ಕೇಳುವೆವೆಂಬುದನ್ನು— ಆಶ್ರಮವಾಸಿಗಳು ನಿರೀಕ್ಷಿಸಿರಲಿಲ್ಲ. ಅರವಿಂದರ ವಿಯೋಗವಾರ್ತೆ ಮಿಂಚಿನಂತೆಯೇ ಭಾರತವನ್ನೆಲ್ಲಾ ಹಾರಿ ಬಿತ್ತು; ಜಗತ್ತೇ ಒಮ್ಮೆ ಆ ಕಡೆ ದೃಷ್ಟಿಯಿರಿಸಿ ನೋಡಿತು. ಎಲ್ಲಾ ಪ್ರಮುಖರು ಮಹರ್ಷಿವಿಯೋಗಕ್ಕಾಗಿ ಸಂತಾಪ ಸೂಚಿಸಿದ್ದಾರೆ. ನಿರ್ಯಾಣ ಹೊಂದುವ ಹದಿನೈದು ದಿನಗಳ ಮೊದಲಿನಿಂದಲೂ ಮೂತ್ರಪಿಂಡಗಳ ಯಾತನೆಯಿಂದ ಅರವಿಂದರ ಆರೋಗ್ಯ ನೆಟ್ಟಗಿರಲಿಲ್ಲವಾದರೂ ಮರಣವು ಆಕಸ್ಮಿಕ್ ಆಗಿದ್ದಿತು. ಆ ದಿನ ಅಪರಾಹ್ನವೇ ಶವಸಮಾಧಿಯೆಂದು ನಿಶ್ಚಯವಾಗಿದ್ದರೂ, ಶವ ಕುಂದಾಗೊಳ್ಳದೆ ಇದ್ದುದರಿಂದ ಕೆಡದೆ ಹಾಗೆಯೇ ಇಡಬೇಕಾಗಿ ಬಂತು. ಅರವಿಂದರು ದೇಹ ಬಿಟ್ಟ 62ತಾಸುಗಳ ನಂತರ ಶವವನ್ನು ಪರೀಕ್ಷಿಸಿದ ಡಾಕ್ಟರರು 'ಅದು ಯಥಾಪ್ರಕಾರವಿದೆ; ಮರಣದ ಲಕ್ಷಣವೇ ಕಾಣಿಸುತ್ತಿಲ್ಲ' ಎಂಬುದರಿಂದ ಇನ್ನೂ ಮೂರು ದಿನಗಳವರೆಗೆ ಹಣತೆಗೆಯುವ ಪ್ರಶ್ನೆ ಮುಂದೆ ಹೋಯಿತು. ಗಭೀರ ಶಾಂತತೆ ಮತ್ತು ಮೌನವ್ಯಾಪಿಸಿರುವ ಪಾಂಡಿಚೆರಿ ಆಶ್ರಮದ ಕೋಣೆಯಲ್ಲಿ ಒಂದೆಡೆ ಬುದ್ಧನ ಚಿತ್ರ, ರಾಜಿಕ ತ್ರಿಪದಿ, ಕೋಣೆ ತುಂಬಾ ಪುಷ್ಪಗಳು ಹರಡಿವೆ; ಆಶ್ರಮವಾಸಿಗಳೇ ತಯಾರಿಸಿದ ಕಲ್ಲಿನ ಸಮಾಧಿಪೆಟ್ಟಿಗೆ ಸಿದ್ಧವಿದೆ. ಶುಭ್ರ ಬಿಳಿಸಿಲ್ಕನ್ನು ಹೊದೆಯಿಸಿ, ಮರದ ಮಂಚದ ಮೇಲೆ ಮಲಗಿಸಿದ್ದ ಅರವಿಂದರ ಮುಖವು 'ಮಹರ್ಷಿ ಗಾಢ ನಿದ್ರೆಯಲ್ಲಿದ್ದಾರೆ' ಎನ್ನುವಂತಿದೆ; ಹೊರತು 'ಜೀವ ಬಿಟ್ಟಿದ್ದಾರೆ' ಎನ್ನುವಂತಿಲ್ಲ! ಭಾರತದ ವಿವಿಧ ಕಡೆಗಳಿಂದ ಮತ್ತು ವಿದೇಶಗಳಿಂದ ಅರವಿಂದರ ಕೊನೆಯ ದರ್ಶನಕ್ಕಾಗಿ ಸಹಸ್ರಾಗಟ್ಟಲೆ ಜನರು ಪಾಂಡಿಚೆರಿಗೆ ಬಂದಿದ್ದರು. ದೀಪವಾರಿದ ಬೆನ್ನಲ್ಲೇ ಅದರ ಬಾಳುಡೆ ತಣ್ಣಗಾಗಲೊಲ್ಲದು; ಮಹಾಯೋಗಿ ಅರವಿಂದರ ಪ್ರಾಣಪಕ್ಷಿ ಹಾರಿಹೋದರೂ ಯೋಗಬಿಸಿ ತಾಗಿದ್ದ ಆ ದೇಹ ಕೆಲದಿನಗಳವರೆಗೆ ತಣ್ಣಗಾಗಲಿಲ್ಲ. ಕೊನೆಗೆ ಅದೇ ತಾ. 9ನೇ ಅಪರಾಹ್ನ 5 ತಾಸಿಗೆ ಪಾಂಡಿಚೆರಿ ಆಶ್ರಮದಂಗಳದಲ್ಲಿ ದೊಡ್ಡ ಮರವೊಂದರ ಅಡಿಯಲ್ಲಿ ಅರವಿಂದರ ಸಮಾಧಿ ನಡೆಯಿತು. ಶ್ರೀ ಅರವಿಂದ ಘೋಷರು ಹೊರಟು ಹೋದರು. ತನ್ನ ಸಂಕಲ್ಪವಾಗಿದ್ದ 'ದೈವಿಕ ಜೀವನ'ವನ್ನು ಮಾನವ ಜಗತ್ತಿಗಿನ್ನೇ ಇಳಿಸಿ ತರುವದಕ್ಕಾಗಿಯೇ ಏನೋ! ಹಾಗಾಗಲಿ!

ಮಂತ್ರಿಗಳ ಮೇಲಿನ ಆರೋಪ—

ಮದ್ರಾಸಿನ ಕೆಲವು ಮಂತ್ರಿಗಳ ಮೇಲೆ ಶ್ರೀ. ಟಿ. ಪ್ರಕಾಶಂರು ತಯಾರಿಸಿದ್ದ ಕಾಂಗ್ರೆಸ್ ರಂಗದಲ್ಲಿ ದೀರ್ಘಾವಧಿ ಪ್ರಚಾರ ಪಡೆದಿದ್ದ ಆರೋಪಗಳು ಈಗ ಮದ್ರಾಸ್ ಎಸೆಂಬ್ಲಿಯಲ್ಲೇ ಶ್ರೀ. ಟಿ. ಪ್ರಕಾಶಂರಿಂದ ಮಂಡಿಸಲ್ಪಟ್ಟು ಚರ್ಚಿಸಲ್ಪಡುತ್ತಿವೆ. ಬಾಬು ರಾಜೇಂದ್ರಪ್ರಸಾದರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ, ಅವರ ಅವಗಾಹನೆಗೆ ತರಲ್ಪಟ್ಟದ್ದು. ಆ ಮೇಲೆ ಡಾ| ಪಟ್ಟಾಭಿಗಳ ಅಧ್ಯಕ್ಷಾವಧಿಯಲ್ಲಿ ಕಾರ್ಯದರ್ಶಿ ಶ್ರೀ. ಶಂಕರರಾವ್ ದೇವರ ವಿಚಾರಣೆಗೊಳಗಾಗಿದ್ದ ಅಪಾದನೆಗಳಿವು. ನಂತರ ನೆಹರೂ–ವಲ್ಲಭಭಾಯಿ–ಪ್ರಸಾದ್ ಸಮಿತಿಯು ಶ್ರೀ. ಟಿ. ಪ್ರಕಾಶಂ ಮತ್ತು ಪ್ರಧಾನಿ ಕುಮಾರಸ್ವಾಮಿ ರಾಜಾರಿಂದ ಜತೆ ಪರಿಶೀಲನೆ ನಡೆಯಿಸಿ, ವರದಿಯನ್ನು ಪಡೆದು ಈ ಅಧ್ಯಾಯವು ಅಲ್ಲಿಗೇ ಮುಗಿಯತಕ್ಕದ್ದೆಂದು ತೀರ್ಮಾನಿಸಿದ್ದ ಆರೋಪಗಳಿವು. ಕಾಂಗ್ರೆಸ್ ರಂಗದಲ್ಲಿ ಇಂತಹ ತೀರ್ಪಿಗೊಳಗಾಗಿ ಮುಗಿದಿದ್ದ ಆರೋಪಗಳನ್ನು ಶ್ರೀ. ಟಿ. ಪ್ರಕಾಶಂರು ಮದ್ರಾಸ್ ಎಸೆಂಬ್ಲಿಯಲ್ಲೇ ಮಂಡಿಸಿದರು. ಹಾಗೆ ಮಾಡಕೂಡದೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸೂಚಿಸಿದ್ದರೂ ಗಣಿಸದೆ ಇದಿರೊಡ್ಡಿದರು. ತನ್ನ ಆಜ್ಞೋಲ್ಲಂಘನೆ ಮಾಡಿದುದಕ್ಕೆ ಕಾರಣ ಕೊಡಬೇಕೆಂದು ಕಾಂ. ಕಾರ್ಯಕಾರೀ ಸಮಿತಿಯು ಈಗ ಶ್ರೀ. ಟಿ. ಪ್ರಕಾಶಂರನ್ನು ಕೇಳಿಕೊಂಡಿದ್ದು ಪ್ರಕಾಶಂರ ಉತ್ತರ ಬಂದೊಡನೆ ತಕ್ಕ ಕಾರ್ಯಕ್ರಮ ಕೈಕೊಳ್ಳಲಿರುವದೆಂದು ತಿಳಿದು ಬಂದಿದೆ. ಈ ನಡುವೆ ಶ್ರೀ. ಟಿ. ಪ್ರಕಾಶಂರು "ಕೆಲವು ಮಂತ್ರಿಗಳ ಮೇಲಿನ ಆಪಾದನೆಗಳ ಕುರಿತು ತನಿಖೆ ಮಾಡಲು ಈ ಎಸೆಂಬ್ಲಿಯ ಐದು ಜನ ಸದಸ್ಯರ ಸಮಿತಿಯನ್ನು ನೇಮಿಸತಕ್ಕದ್ದು" ಎಂದು ತಾನು ಕಳೆದ ಎಸೆಂಬ್ಲಿ ಅಧಿವೇಶನದಲ್ಲಿ ಸೂಚನೆ ತಂದು, ಅವೆಲ್ಲವನ್ನೂ ವಿವರಿಸಿ ಆಗಲೇ ಮೂರೂವರೆ ತಾಸುಗಳ ಭಾಷಣವಿತ್ತಿದ್ದರು. ಇದೇ ಡಿಸೆಂಬರ ತಾ. 6ರಲ್ಲಿ ಅದನ್ನೇ ಮುಂದುವರಿಸಿ ಪುನಃ ಒಂದೂವರೆ ತಾಸುಗಳ ಭಾಷಣವಿತ್ತಿದ್ದರು. ಶ್ರೀ. ಟಿ. ಪ್ರಕಾಶಂರ ಸೂಚನೆಯನ್ನು ಶ್ರೀ. ಕೆ. ಆರ್. ಕಾರಂತರು ಅನುಮೋದಿಸಿದ್ದರು. ಆರೋಪಕ್ಕೊಳಗಾದ ಮಂತ್ರಿಗಳ ಉತ್ತರ, ಶ್ರೀ. ಕಾರಂತರ ಪ್ರತ್ಯುತ್ತರ, ಸದಸ್ಯರ ಅಭಿಪ್ರಾಯ ಪ್ರಕಟಣೆಗಳ- ಡಿ. ತಾ. 6ರಿಂದ 9ರ ವರೆಗಿನ ನಾಲ್ಕು ದಿನಗಳ ವರೆಗೂ ಪ್ರಕಾಶಂ ಸೂಚನೆಯ ಮೇಲೆ ಸುದೀರ್ಘ ಹಾಗೂ ಆಕರ್ಷಣೀಯ ಮತ್ತು ವಿಚಾರೋದ್ದೀಪಕ ಚರ್ಚೆಗಳಾದವು. ಅಲ್ಲಿಗೇ ಮುಗಿಯದೆ ಎಸೆಂಬ್ಲಿಯ ಇನ್ನೊಂದು 'ಅನಧಿಕಾರೀ ವಿಷಯಗಳ ದಿನ'ಕ್ಕೆ ಅದು ಮುಂದುವರಿಸಲ್ಪಟ್ಟಿದೆ.

ಆಪಾದನಾ ಪಟ್ಟಿ

ಶ್ರೀ ಟಿ. ಪ್ರಕಾಶಂರು ಒಟ್ಟು ಐದು ತಾಸುಗಳ ತನ್ನ ಭಾಷಣದಲ್ಲಿ ಮದ್ರಾಸ್ ಮಂತ್ರಿಗಳ ಪೈಕಿ ಕೆಲವರ ಮೇಲಿನ ತನ್ನ ಆಪಾದನೆಗಳನ್ನು ಸವಿವರವಾಗಿ ತಿಳಿಸಿದ್ದರು. ಅವರು ಮತ್ತು ಶ್ರೀ ಎಸ್. ಸೋಮಪ್ಪನವರು ಪಾಲುಗಾರರಾಗಿ ಸ್ಥಾಪಿಸಿ, ಅವರು ಮಂತ್ರಿಯಾದ ಮೇಲೆ ತನ್ನ ಅವಿಭಕ್ತ ಸಹೋದರನಿಗೆ, ಮೆನೇಜಿಂಗ್ ಏಜೆಂಟ್ ಹುದ್ದೆಯನ್ನು ಕೊಟ್ಟಿರುವ 'ರಾಯಲಸೀಮಾ ಟೆಕ್ಸ್‌ಟೈಲ್' ಮಿಲ್ಸ್‌ಗೆ 10 ಲಕ್ಷ ರೂಪಾಯಿಗಳ ಸರಕಾರೀ ಸಾಲವನ್ನು ಮಂಜೂರು ಮಾಡಿದ ಮತ್ತು ಪ್ರಕಾಶಂ ಮಂತ್ರಿಮಂಡಲಿಯನ್ನು ಕಿತ್ತೆಸೆಯುವ ಪ್ರಯತ್ನ ಮಾಡಿದ್ದ ಕೆಲವು ಎಂ. ಎಲ್. ಎ.ಗಳು ಸ್ಥಾಪಿಸಿಕೊಂಡ 'ಮೋಹನ್ ಇಂಡಸ್ಟ್ರೀಸ್'ಗೆ 1 ಲಕ್ಷ ರೂ. ಮತ್ತು ಅಂತಹ ಮತ್ತೊಂದು ಕಂಪೆನಿ 'ರಾಧಾಕೃಷ್ಣ ವೆಜಿಟೇಬಲ್ ಆಯಿಲ್ ಪ್ರೊಡಕ್ಟ್ಸ ಲಿಮಿಟೆಡ್, ಕಾಮಿಂಡಿ' ಇದಕ್ಕೆ ರೂ. 1,25000 ಸಾಲಗಳನ್ನು ಕೊಟ್ಟ ಆಪಾದನೆಗಳು ಈಗ ರೆವಿನ್ಯು ಮಂತ್ರಿಯಾಗಿರುವ, ಆಗ ಉದ್ದಿಮೆ ಮಂತ್ರಿಯಾಗಿದ್ದ ಶ್ರೀ. ಎಚ್. ಸೀತಾರಾಮ ರೆಡ್ಡಿ ಮತ್ತು ಅರ್ಥ ಮಂತ್ರಿಯಾಗಿರುವ ಶ್ರೀ. ಬಿ. ಗೋಪಾಲ ರೆಡ್ಡಿಗಳ ಮೇಲೆ– ಗುಂಟೂರು ಮುನ್ಸಿಪಲ್ ಮಾರ್ಕೆಟನ್ನು ಕಂಟ್ರಾಕ್ಟಿಗೆ ಕೊಡುವುದರಲ್ಲಿ, ಟೆನಾಲಿ ಮುನ್ಸಿಪಲ್ ಅಧ್ಯಕ್ಷ ಚುನಾವಣೆಯಲ್ಲಿ, ಬಂಗೋಲೆ ಮುನ್ಸಿಪಲ್ ಅಧ್ಯಕ್ಷ ಚುನಾವಣೆಯಲ್ಲಿ ಪ್ರತ್ಯಕ್ಷ ಕೈ ಹಾಕಿ ಒಳಸಂಚು ನಡಿಸಿದ ಆರೋಪ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ. ಚಂದ್ರಮೌಳಿಯವರ ಮೇಲೆ– ಶ್ರೀ. ಎ. ಬಿ. ಶೆಟ್ಟರ ಭಾವನೆಂಟನಿದ್ದು 'ಬರ್ನಾರ್ಡ್ ಇನ್‌ಸ್ಟಿಟ್ಯೂಟ್ ಓಫ್ ರೇಡಿಯೋಲಜಿ'ಯ ಅಧಿಕಾರಿಯಾಗಿರುವ ಡಾ|. ಕೆ. ಎಮ್. ರೈಗಳಿಂದ ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ರೇಡಿಯಮ್ ಸೂಜಿಗಳ ದುರ್ವಿನಿಯೋಗವಾಗಿತ್ತೆಂಬ ಆಪಾದನೆ ಬಂದಿದ್ದು ಡಾ| ಟಿ. ಯಸ್. ಯಸ್. ರಾಜನ್ ಮತ್ತಿತರರು, ತನಿಖೆ ನಡೆಸಿ, ಈ ವರ್ತನೆಯನ್ನು ಖಂಡಿಸಿದ್ದರೂ ಸರಕಾರವು ಈ ಅಧಿಕಾರಿಯ ಮೇಲೆ ಯಾವ ಕಾರ್ಯಕ್ರಮವನ್ನೂ ಕೈಕೊಳ್ಳಲಿಲ್ಲವೆಂಬ ಆರೋಪ ಈಗ ಕೃಷಿ ಮಂತ್ರಿಯಾಗಿರುವ, ಆಗ ಆರೋಗ್ಯ ಮಂತ್ರಿಯಾಗಿದ್ದ ಶ್ರೀ ಎ. ಬಿ. ಶೆಟ್ಟರ ಮೇಲೆ—ದೇಸಾಯಿಗಾರನಾಗಿದ್ದ ಸಿಟ್ಟೆಪಲ್ಲಿ ಅಪ್ಪಯ್ಯ ಎಂಬವನು ಹಿಂಡೀ ಗೊಬ್ಬರವನ್ನು ಪಡೆದು 40000 ರೂಪಾಯಿ ಗಳಿಸುವಂತೆ ಮಾಡಿದ್ದ ಆರೋಪ ಈಗ ಕಾನೂನು ಮಂತ್ರಿಯಾಗಿರುವ, ಆಗ ದೇಸಾಯಿ ಮಂತ್ರಿಯಾಗಿದ್ದ ಶ್ರೀ ಕೆ. ಮಾಧವ ಮೆನನರ ಮೇಲೆ—ಪ್ರಕಾಶಂ ಮಂತ್ರಿ ಮಂಡಲಕ್ಕೆ ವಿರುದ್ಧವಿದ್ದ ಪತ್ರಿಕಾಕರ್ತ ಶ್ರೀ ರಮಾನಾಥ ಗೋಯೆಂಕರಿಗೆ ಒಳಸಂಚಿನಿಂದ ಮತ್ತು ಅಕ್ರಮವಾಗಿ 244 ಟನ್ ಉಕ್ಕನ್ನು ಕೊಡಿಸಿದುದು, ಮಂತ್ರಿ ಸೀತಾರಾಮ ರೆಡ್ಡಿಗಳ ಮಾವನಿಗೆ ಕ್ರಮಬಾಹಿರವಾಗಿ ಸಿಮೆಂಟ್ ಪರ್ಮಿಟ್ ಕೊಡಿಸಿದುದು; ತನ್ನ ಸಂಬಂಧಿಕರಿದ್ದ ತ್ರಿಪುರ ಸುಂದರಿ ಬಸ್ ಸರ್ವಿಸಿಗೆ ಅನುಮತಿ ಕೊಟ್ಟದ್ದೇ ಮೊದಲಾದ ಆರೋಪಗಳು ಸಾರ್ವಜನಿಕ ಖಾತೆಯ ಮಂತ್ರಿ ಶ್ರೀ ಭಕ್ತವತ್ಸಲಮರ ಮೇಲೆ ಮತ್ತಂತಹದೇ ಆರೋಪ ಹರಿಜನ ಮಂತ್ರಿ ಶ್ರೀ ಕೂರ್ಮಯ್ಯನವರ ಮೇಲೆ– ಇದ್ದುವು. ಶ್ರೀ ಟಿ. ಪ್ರಕಾಶಂರು ತನ್ನ ಆರೋಪಗಳಿಗೆ ಸಂಬಂಧಿಸಿದ ವ್ಯಕ್ತಿ ಸಂದರ್ಭ ಮತ್ತು ಸಂಗತಿಗಳನ್ನು ನಿದಾಕ್ಷಿಣ್ಯವಾಗಿ, ಸವಿವರವಾಗಿ ಮಂಡಿಸಿದ್ದರು.

ಶ್ರೀ. ಕೆ. ಆರ್. ಕಾರಂತರು ಪ್ರಕಾಶಂ ಸೂಚನೆಯನ್ನು ಅನುಮೋದಿಸಿದರು. ತನಗೆ ಯಾರ ಮೇಲೂ ದುರ್ಭಾವನೆಯಿರದೆ, ಸಂಸ್ಥಾನದ ಆಡಳಿತೆಯ ಶುದ್ಧೀಕರಣೇಚ್ಛೆ ಮಾತ್ರವಿದೆ, ಎಂಬುದನ್ನು ಸ್ವೀಕರಿಸಿ, ಪ್ರಕಾಶಂ ಆಪಾದನೆಗಳನ್ನು ಅನುಕ್ರಮವಾಗಿ ಅನುಮೋದಿಸಿದರಾದರೂ ಶ್ರೀ. ಎ. ಬಿ. ಶೆಟ್ಟರ ಮೇಲಿನ ಆರೋಪದ ಪ್ರಸ್ತಾಪಕ್ಕೆ ಶ್ರೀ ಕಾರಂತರು ಹೋಗಲಿಲ್ಲ. ಸದಸ್ಯರು ವ್ಯಕ್ತಿತ್ವಗಳನ್ನು ನೋಡುವ ಬದಲಿಗೆ ಸಂಸ್ಥಾನದ ಸಾರ್ವಜನಿಕ ಹಿತದ ಕಡೆಗೆ ಲಕ್ಷ್ಯಕೊಟ್ಟು, ಸಪ್ರತಿನಿಧಿ ಸ್ಥಾನಕ್ಕನುಗುಣವಾಗಿ ನ್ಯಾಯವನ್ನೆತ್ತಿ ಹಿಡಿದು ಈ ಆಪಾದನೆಗಳ ವಿಚಾರಣೆಗಾಗಿ ಒಂದು ಸಿಲೆಕ್ಟ ಕಮಿಟಿಗೊಪ್ಪಿಸುವಂತೆ ಮಾಡಬೇಕೆಂದು ಕೇಳಿಕೊಂಡರು.

ಮಂತ್ರಿಗಳ ಉತ್ತರ

ಆರೋಪಕ್ಕೊಳಗಾದ ಮಂತ್ರಿಗಳೂ ಸಾಧಾರಣವಾಗಿ, ಸ್ಫೂರ್ತಿ ಮತ್ತು ಉದ್ವೇಗ ಪೂರ್ವಕ ಉತ್ತರಗಳನ್ನು ಕೊಟ್ಟಿದ್ದರು. ಸಂಬಂಧಿಸಿದ ಸಚಿವರಾದ ಭಕ್ತವತ್ಸಲಂ, ಕೂರ್ಮಯ್ಯ, ಸೀತಾರಾಮ ರೆಡ್ಡಿ, ಚಂದ್ರಮೌಳಿ, ಶೆಟ್ಟಿ, ಇವರೆಲ್ಲರೂ ತಂತಮ್ಮ ಮೇಲಿನ ಆಪಾದನೆಗಳನ್ನು ಕಂಠೋಕ್ತವಾಗಿ ಅಲ್ಲಗಳೆದರು. ಶ್ರೀ ಟಿ ಪ್ರಕಾಶಂರು ಆಪಾದನೆಗಳಿಗಾಧಾರವೆಂದು ತೋರಿಸಿದ ಪುರಾವೆಗಳ ಹುಳುಕನ್ನು ಎತ್ತಿ ತೋರಿಸಿ ನಿರಪರಾಧಿತ್ವಕ್ಕೆ ಬೇಕಾಗುವ ಆಧಾರಗಳನ್ನು ಕೊಟ್ಟು ಮಂತ್ರಿಗಳು ಸ್ವಕ

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices

Head Office:—**Kadri Road, Mangalore.**

Branches:- City-Manglaore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.



Approved from by the Govt. of Mysore Certificated by the Agent of the Govt of Cylone & Indian.

—ಶ್ರೀ ಎ. ಬಿ. ಶೆಟ್ಟರ ಸ್ಪಷ್ಟ ಉತ್ತರ

ನ ಮಾಡಿಕೊಂಡರು. ಈ ಚರ್ಚೆಯ ವೇಳೆ ಹಲವು ಖಾಸಗೀ ಸಂಬಂಧಗಳು, ಅಧಿಕಾರಾರೂಢ ಕಾಂಗ್ರೆಸ್ ಪಕ್ಷದೊಳಗಡೆಯಲ್ಲೇ ಇರುವ ಭಿನ್ನಭೇದ, ದ್ವೇಷಾಸೂಯೆಗಳು ಬೆಳಕಿಗೆ ಬಂದುವೆನ್ನಬಹುದು. ವಿರುದ್ಧ ಪಕ್ಷದ ಸದಸ್ಯರಿಗೂ ಇತರರಿಗೂ ಬಿರುಕಗಳೆಡೆಯಿಂದ ಇಣುಕುವ ಸುಸಂದರ್ಭವೊದಗಿದ್ದಿತು. ಪ್ರಕಾಶಮರ ಆರೋಪಗಳಂತೆಯೇ ಮಂತ್ರಿಗಳ ಉತ್ತರಗಳೂ ಅತ್ಯಂತ ಸ್ಪಷ್ಟ ವಾಣಿಗಳಲ್ಲಿದ್ದುವು. ಪ್ರಕಾಶಂ ಮತ್ತು ಅವರ ಹಿಂಬಾಲಕರನ್ನೇ ಅವು ಆರೋಪಿಸಿದ್ದುವು. ಸಾಧ್ಯವಿದ್ದಷ್ಟು ಕಠೋರ ಶಬ್ದಗಳನ್ನೇ ಎಲ್ಲರೂ ಬಳಸಿಕೊಂಡಿದ್ದರೆನ್ನಬಹುದು.

ಶ್ರೀ ಎ. ಬಿ. ಸೆಟ್ಟರ ಉತ್ತರ

ತನ್ನ ಮೇಲಿನ ಆರೋಪಗಳಿಗೆ ಉತ್ತರವಾಗಿ ಕೃಷಿ ಮಂತ್ರಿ ಶ್ರೀ ಎ. ಬಿ. ಸೆಟ್ಟರು ಮಾಡಿದ ಭಾಷಣ: "ಸ್ವಾಮಿ, ಶ್ರೀ ಅಧ್ಯಕ್ಷರೇ, ಶ್ರೀ ಪ್ರಕಾಶಮರಿಂದ ಮುಂದೆ ಬಂದಿರುವ ಆಪಾದನೆಗಳ ಪೈಕಿ ಅತ್ಯಂತ ಕ್ಷುಲ್ಲಕವಾದುದು, ಅವರು 'ರೇಡಿಯಂ ಸೂಜಿಗಳ ಅಪವಾದ'ವೆಂದು ಕರೆಯುವ ಹಂಚಿಕೆ ಹೂಡಿರುವುದಕ್ಕೆ ಸಂಬಂಧಿಸಿದೆ. ಅಪವಾದವೊಂದನ್ನು ಹೇಗೆ ನಿರ್ಮಿಸಬಹುದೆ, ಮತ್ತದನ್ನು ಯಾವ ರೀತಿ ಸಜೀವವಾಗಿ ಇಡಬಹುದು ಎಂಬುದನ್ನು ಈ ರೇಡಿಯಂ ಅಪವಾದ ಸಂಬಂಧವಾಗಿ ಒಂದು ಸಣ್ಣ ಗುಂಪಿನವರು ಮೇಲಿಂದ ಮೇಲೆ ದುರುದ್ದೇಶಪೂರ್ವಕ ನಡೆಸಿರುವ ಪ್ರಚಾರಗಳು. ಪ್ರತಿಕ್ರಿಯಿಸಿನೆ ಅಪವಾದಗಳನ್ನೇ ತಮ್ಮ ಮೂಗಾಳಿಯಾಗಿ ಮಾಡಿಕೊಂಡಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ಅಂಥವರು ಬದುಕುವುದು, ಹೊಟ್ಟೆ ತುಂಬಿಸಿಕೊಳ್ಳುವುದು, ಕೊಬ್ಬಿ ಬೆಳೆಯುವುದು ಪೃಥ ಶ್ವಾದಗಳನ್ನು ಧಂಸಿಯೇ. ಅದರ ಗುಬ್ಬನಲ್ಲಿ, ಆ ಧೀಸುಗಳಲ್ಲಿ ಅಥವಾ ಕುಟುಂಬ ಜೀವನದೊಳಗಡೆಯಲ್ಲಿ ಜನರು ಅಪವಾದದಾಟಗಳನ್ನಾಡಿದರೆ ಅದು ದೊಡ್ಡದಲ್ಲ. ಒಬ್ಬ ದೊಡ್ಡ ಮನುಷ್ಯನೇ ಅಪವಾದಕೋರನಾಗಿ ವರ್ತಿಸುತ್ತಾನಾದರೆ, ಮತ್ತು ತಾನು ರೂಪಿಸಿಕೊಳ್ಳುವ ಸಂಗತಿಗಳಲ್ಲದಿದ್ದರೂ ಅಂತಹ ಅಪವಾದ ಪ್ರಕಟಣೆಗೆ ಈ ಸಭಾಸ್ಥಾನವನ್ನು ಉಪಯೋಗಿಸಿಕೊಳ್ಳುತ್ತಾನಾದರೆ, ಅವನೊಂದು ಸಾರ್ವಜನಿಕ ಕಂಟಕವಾಗಿ ಪರಿಣಮಿಸುತ್ತಾನೆ. ನಮ್ಮ ಗೌರವಾರ್ಹ ಸ್ನೇಹಿತ ಶ್ರೀ ಪ್ರಕಾಶಮರು ತಾನು 'ರೇಡಿಯಂ ಅಪವಾದ'ವೆಂದು ಕರೆದಿರುವಂತಹ ವಿಷಯಕ್ಕೆ ತನ್ನ ಘನವಾದ ಹೆಸರನ್ನು ಎರವಾಗಿ ಕೊಟ್ಟದು ದುರ್ದೈವವೇ ಸರಿ. ಸ್ವಾಮೀ, ಸರಕಾರದ ಓರ್ವ ಜವಾಬ್ದಾರೀ ಗಝೆಟೆಡ್ ಅಧಿಕಾರಿಯ ಹೆಸರನ್ನೆಳೆದು, ಅವರ ಮೇಲೆ ಭೀಕರ ಆಪಾದನೆಯನ್ನು—ನೈತಿಕ ದುರಾಚಾರವನ್ನು ಹೊಂದಿಸುವ ಆರೋಪವನ್ನು—ಹೇರುವುದು ಇವರಿಗೆ ಸರಿ ಕಂಡಿತು. ತಾನು ಸ್ವತಃ ಈ ಸಭೆಯಲ್ಲಿ ಸ್ವಸಮರ್ಥನೆ ಮಾಡಿಕೊಳ್ಳಲಾರದ ಸಾರ್ವಜನಿಕ ಸೇವಕನೊಬ್ಬನ ಗುಣನಡತೆಗೆ ಮೇಲೆ ಕಳಂಕ ಹಚ್ಚುವ ಮೂಲಕ ಇವರು ಪಾರ್ಲಿಮೆಂಟರೀ ಪದ್ಧತಿ ಸೂತ್ರಗಳಿಗೆ ವಿರುದ್ಧ ಹೋಗಿರುವರೆಂದು, ತಮ್ಮ ಅನುಮತಿಗೊಳಗಾಗಿ ನಾನು ಹೇಳಬಹುದೇ ಸ್ವಾಮೀ; ಇವರಂತಹ ದೊಡ್ಡ ನಾಯಕ, ಇವರಂತಹ ದೊಡ್ಡ ಶಾಸನ ಸಭಾಸ್ಥಿತ, ನಾವೀಗ ಹೊಂದಿರುವ ಹೊಸ ಪ್ರಜಾಸತ್ತಾತ್ಮಕ ಎಸೆಂಬ್ಲಿಯ ಮುಂದೆ ಆರೋಗ್ಯಕರ ಮಾಡಿಕೆಗಳನ್ನು ಮುಂಡಿಸುವುದೆಂದರೆ, ಹೀಗೆಯೇ ಏನು?

ಶ್ರೀ ಪ್ರಕಾಶಮರಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೊಪ್ಪಿಸಲ್ಪಟ್ಟಿದ್ದ 'ಸ್ಪಷ್ಟೀಕೃತ ಆರೋಪ'ಗಳ ಒಂದು ಪ್ರತಿಯು ಕೆಲವು ದಿವಸಗಳ ಮೊದಲು ಅವರಿಂದಲೇ ಪತ್ರಿಕಾ ವರದಿಗಾರರಿಗೆ ಹಂಚಲ್ಪಟ್ಟಿದ್ದಿತು; ಅದೇ ಆರೋಪದ ಪ್ರತಿಗಳು ನಿನ್ನೆ ಈ ಸಭೆಯ ಸದಸ್ಯರಿಗೆ ಸಹಾ ವಿತರಣೆಯಾಗಿರುವುದನ್ನು ನಾನು ಕಂಡಿದ್ದೇನೆ. ಈ ಸೂಚನೆಯ ಮಾನ್ಯ ಸೂಚಕರು ಆಪಾದನೆಗಳನ್ನು ಸಮರ್ಥಿಸಿ ಹಾಗೂ ಗೋಯೆಂಕ ಮತ್ತು ಮಚಾಷೀ ಸೋಮಪ್ಪರ ಹೆಸರುಗಳನ್ನು ಮೇಲಿಂದಮೇಲೆ ಉಚ್ಚರಿಸಿ ಐದು ತಾಸುಗಳ ಭಾಷಣವನ್ನು ಇತ್ತಿದ್ದಾರೆ. ಆದರೆ ಈ ಆಪಾದನೆಯು—ಅತ್ಯಂತ ಗಂಭೀರಾರೋಪವು—ಕೇವಲ ಆರೋಪವಾಕ್ಯಗಳೊಡನೆ ಮಂಡಿಸಲ್ಪಟ್ಟಿತು. ಠರಾವಿನ ಮಾನ್ಯ ಅನುಮೋದಕರು ಈ ಆಪಾದನೆಯನ್ನು ಅನುಮೋದಿಸಿ ಏನನ್ನು ಹೇಳುವರೆಂಬುದನ್ನು ಕೇಳಲು ನಾನು ಕಾಯುತ್ತಿದ್ದೆ. ಸ್ವಾಮಿ, ಅವರು ಒಂದೂ ಮಾತನ್ನಾಡಿದರೂ ಈ ವಿಷಯದ ಕುರಿತು ದೀರ್ಘ ಮೌನವನ್ನು ವಹಿಸಿದ್ದರು. ನಾನು ಶ್ರೀ ಕಾಳೆ[illegible]ನ್ನು ಹಲವು ವರುಷಗಳಿಂದ ಬಲ್ಲೆ. ನಾನವರನ್ನು ಸರಿಯಾಗಿ ಬಲ್ಲೆ. ಅವರು ಸದಾ ಯಥಾರ್ಥವಾದಿ; ಅತ್ಯಂತ ಸ್ಪಷ್ಟವಾದಿ, ಅವರಲ್ಲಿ ಧೈರ್ಯದ ಅಭಾವವಿದೆಯೆಂದು ಯಾರೂ ಹೇಳುವಂತಿಲ್ಲ. ಇಂತಹ ಒಬ್ಬ ವ್ಯಕ್ತಿಯು, ತನ್ನ ನಾಯಕನಿಂದ ಮುಂದಿಡಲ್ಪಟ್ಟ ಒಂದು ಠರಾವನ್ನು ಅನುಮೋದಿಸುವಾಗ,—ಸ್ವಾಮೀ—ಆ ಠರಾವಿನ ಸೂಚಕನು ಮಂಡಿಸಿದ ಎಲ್ಲಾ ಆರೋಪಗಳಲ್ಲೂ ಇವನು ಸಹಭಾಗಿಗಳೆಂದೇ ತಿಳಿದುಕೊಳ್ಳಬೇಕಾಗುತ್ತದೆ. ಹೀಗಿದ್ದೂ, ಈ ಆಪಾದನೆಯ ಕುರಿತ ಅವರೇನನ್ನೂ ಹೇಳಲಿಲ್ಲವೇಕೆ ಸ್ವಾಮಿ? ಇದರಲ್ಲೇನೂ ಸಾರವಿಲ್ಲವೆಂದು ಅವರು ನೆನೆಸಿದರೆ? ತನ್ನ ಸ್ವಂತ ಜಿಲ್ಲೆಯಿಂದಲೇ ಬಂದಿರುವ ನನ್ನ ಕಡೆಗೆ ನೋಡಿ ಅವರು ಹೀಗೆ ಮಾಡಿರಬಹುದೆ? ಅಥವಾ ಸಮಯದ ಅಭಾವದಿಂದ ಹೀಗಾಯಿತೆ? ಈ ವಿಷಯದ ಕುಂ

(೬ನೇ ಪುಟ ನೋಡಿರಿ)

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟು, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ

ಎಂ. ಮೆಂಡೋಸ, ಮಾಲಕ   M Mendosa, Proprietor

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp His Master's Voice
Sir Phirozshah Mehta Road, FORT, BOMBAY

We accept
Deposits at the following rates:

Current	....	½%
Savings Bank	....	2 %
Short-Term	....	1½ %
Fixed – 3 months	....	1 %
6 „	....	2 %
12 „	....	2½ %
24 „	....	3 %

THE
Canara Banking Corporation Ltd.
(Incorporated in India)
Estd: 1906.
Head Office : **UDIPI, (S. I)**

ಗುರುವಾರ, ಉಡುಪಿ, ೧೪-೧೨-೫೦

ಲೋಕ ಸ್ಥಿತಿ

ಕೊರಿಯಾ ಯುದ್ಧದಲ್ಲಿ ಕಮ್ಯೂನಿಸ್ಟರ ಕೈ ಮೇಲಾಗಿರುವುದು—ಅಮೆರಿಕಾಧ್ಯಕ್ಷ ಟ್ರುಮೇನರ ತಲೆಯಲ್ಲಿ ಆಟಂ ಸಿಡಿತವಾರಂಭಿಸಿದುದು—ಬ್ರಿಟಿಷ್ ಪ್ರಧಾನಿ ಅಟ್ಲೀಗಳು ವಾಷಿಂಗ್ಟನ್ನಿಗೋಡಿದುದು—ಏಸ್ಯಾ ರಾಷ್ಟ್ರಗಳು ಕೊರಿಯಾ ಯುದ್ಧ ತೀರ್ಮಾನಕ್ಕಾಗಿ ವಿಶೇಷಾಸಕ್ತಿ ವಹಿಸಿರುವುದು—ಇವೇ ಮೊದಲಾದ ವಿದ್ಯಮಾನಗಳಿಂದ ಪ್ರಪಂಚ ವಾತಾವರಣವೀಗ ಬದಲಾಯಿಸಿದೆ; ಬಿಸಿಯೇರಿದೆ. ಐದು ದಿನಗಳ ಪರಿಯಂತರ ಆರು ಬಾರಿ ಒಟ್ಟಾಗಿ ಅಟ್ಲೀ ಟ್ರುಮೇನರು ಒಮ್ಮತದಿಂದ ಹತ್ತು ಸೂಚನೆಗಳ ಕಾರ್ಯಕ್ರಮವೊಂದನ್ನು ತಯಾರಿಸಿ ಕೊಂಡರೆಂದು ಪ್ರಕಟವಾಗಿದೆ. "ದೂರ ಪ್ರಾಚ್ಯದಲ್ಲಿ ಅಥವಾ ಯುರೋಪಿನಲ್ಲಿ ಆಕ್ರಮಣವನ್ನು ಸಮರ್ಥಿಸುವ ಅಥವಾ ಅದನ್ನು ಬಹುಮಾನಿಸುವ ಯೋಜನೆಯೆಂಬುದಿಲ್ಲವೇ ಇಲ್ಲ. ಆದರೆ ಕೊರಿಯಾ ಕಲಹವನ್ನು ಸಂಧಾನ ವ್ಯವಹಾರಗಳ ಮೂಲಕ ಇತ್ಯರ್ಥಿಸುವ ವಿಧಾನವನ್ನಂಗೀಕರಿಸಲು ತಯಾರಿದ್ದೇವೆ. ವಿದೇಶ ಸಂಬಂಧ ಧೋರಣೆಯಲ್ಲಿ ಅಮೆರಿಕ ಮತ್ತು ಇಂಗ್ಲೆಂಡುಗಳು ಸಂಪೂರ್ಣವಾಗಿ ಏಕ ಧೋರಣೆ ವಹಿಸುತ್ತವೆ. ಇವೆರಡು ರಾಷ್ಟ್ರಗಳಲ್ಲೂ ಸಾಧ್ಯವಿದ್ದಷ್ಟು ತ್ವರೆಯಲ್ಲಿ ಸೇನಾನುಕೂಲತೆಗಳೆಲ್ಲವನ್ನೂ ಹೆಚ್ಚಿಸಿಕೊಳ್ಳಬೇಕು. ಶಸ್ತ್ರಾಸ್ತ್ರಗಳ ತಯಾರಿಯನ್ನು ಅಧಿಕಗೊಳಿಸಬೇಕು. ಕಚ್ಚಾ ಮಾಲುಗಳ ಅಂತರ್ರಾಷ್ಟ್ರೀಯ ಕೊರತೆಯನ್ನು ತಪ್ಪಿಸುವ ಕುರಿತು ಇವರಿಬ್ಬರೊಳಗೆ ಒಮ್ಮತವಾಗಿದೆ. ಕಮ್ಯೂನಿಸ್ಟ್ ಚೈನಕ್ಕೆ ಭದ್ರತಾ ಕೌನ್ಸಿಲಿನಲ್ಲಿ ಸ್ಥಾನಕೊಡಬೇಕೆಂಬ ಬ್ರಿಟನ್ನಿನ ಮತ್ತು ಕೊಡಕೂಡದೆಂಬ ಅಮೆರಿಕದ ಅಭಿಪ್ರಾಯ ವ್ಯತ್ಯಾಸಗಳು ಇವೆರಡು ರಾಷ್ಟ್ರಗಳ ಸರ್ವ ಸಮಾನ ಧೋರಣೆಗಳ ಸಮರ್ಥನೆಗಾಗಿ ಜತೆ ಪ್ರಯತ್ನ ಕೈಕೊಳ್ಳುವುದಕ್ಕಾವ ವಿಧದಿಂದಲೂ ಅಡ್ಡ ಬರುವಂತಿಲ್ಲ ಘೋಷಿಸಿದ ಪ್ರಶ್ನೆಯು ಶಾಂತವಿಧಾನಗಳಿಂದ ತೀರ್ಮಾನಹೊಂದತಕ್ಕದ್ದು. ಉತ್ತರ ಆಟ್ಲಾಂಟಿಕ್ ಒಪ್ಪಂದ ರಾಷ್ಟ್ರಗಳೆಲ್ಲವೂ ತಮ್ಮ ರಕ್ಷಣಾ ಸಿದ್ಧತೆಯನ್ನು ರಭಸದಿಂದ ಹೆಚ್ಚಿಸಿಕೊಳ್ಳಬೇಕು - ಆಟಂ ಬಾಂಬನ್ನು ಉಪಯೋಗಿಸುವ ಅವಶ್ಯಕತೆಯೆಂದಿಗೂ ಬೀಳಲಾರದೆಂದಾಶಿಸಿ, ವಾತಾವರಣವನ್ನು ಬದಲಾಯಿಸುವ ಘಟನೆಗಳು ನಡೆದಲ್ಲಿ ಮಿ. ಅಟ್ಲೀಗಳಿಗದನ್ನು ತಿಳಿಸಿಕೊಳ್ಳುವೆನೆಂದು ಟ್ರುಮೇನರು ಅಟ್ಲೀಗಳಿಗೆ ಆಶ್ವಾಸನೆಯಿತ್ತಿದ್ದಾರೆ" ಎಂಬದೇ ಅಟ್ಲೀ ಟ್ರುಮೇನ್ ಒಡಂಬಡಿಕೆಯ ಸಾರ. ಪ್ರತಿಯೊಂದು ಅಪಾಯ ಸಂದಿಯಲ್ಲೂ ಏಕರಥದಲ್ಲಿದ್ದ ಅಮೆರಿಕ ಬ್ರಿಟನುಗಳು ಈ ಬಾರಿಯೂ ಜತೆಬಿಟ್ಟಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದ್ದರಿಂದ ಅಟ್ಲೀ ಟ್ರುಮೆನ್ ಒಪ್ಪಂದವೆಂಬುದಾವ ಹೊಸತನ್ನೂ ನಿರ್ಮಿಸಿಲ್ಲ. ಈ ಬಾರಿ ಬ್ರಿಟಿಷ್ ಪ್ರಧಾನಿ ಅಟ್ಲೀಗಳು ಆವಸರದಿಂದ ಟ್ರುಮೇನರ ಭೇಟಿಗೆ ಹಾರುವಾಗ, ಅನಿರೀಕ್ಷಿತ ಸಂಭವಕ್ಕೊಳಗಾಗಿ ತಲೆಕೆಡಿಸಿಕೊಂಡಂತಿರುವ ಟ್ರುಮೇನರ ಬುದ್ಧಿಯನ್ನು ಯಥಾಸ್ಥಿತಿಯಲ್ಲಿಡುವುದಕ್ಕಾಗಿಯೇ ಈ ಪಯಣವೆಂದು ನಿರೀಕ್ಷಿಸಲಾಗಿತ್ತು. ಅದು ಕೆಲವಂಶ ಸತ್ಯವೆನ್ನಿಸಿದೆ. ಆಟಂ ಬಾಂಬು ಪ್ರಯೋಗದ ಆಲೋಚನೆಯನ್ನು ಟ್ರುಮೇನರು ಒಂದು ಹೆಜ್ಜೆ ಹಿಂದೂಡಿಕೊಂಡಿದ್ದಾರೆ; "ಆಟಂ ಬಾಂಬು ಪ್ರಯೋಗ ಸ್ವಾತಂತ್ರ್ಯ ಅಮೆರಿಕದ್ದೇ" ಎಂದಿದ್ದ ಟ್ರುಮೇನರು ಅಂತಹ ಸಂದರ್ಭ ಬಂದರೆ ಅಟ್ಲೀಗಳಿಗೆ ತಿಳಿಸಿಕೊಳ್ಳುವೆನೆಂಬ ಆಶ್ವಾಸನೆಯಿತ್ತಿದ್ದಾರೆ. ಯುರೋಪು ಮತ್ತು ಏಸ್ಯಾಗಳ ಮೇಲಿನ ಯಾವುದೇ ಕಮ್ಯೂನಿಸ್ಟ್ ಧಾಳಿಯನ್ನಾದರೂ ತಡೆಗಟ್ಟುವ ಸಂಕಲ್ಪವನ್ನು ಅಟ್ಲೀ ಟ್ರುಮೇನರು ದೃಢಪಡಿಸಿಕೊಂಡರಲ್ಲದೆ, ತಾವು 'ಆಕ್ರಮಣ'ವೆಂದು ಭಾವಿಸುವ ಕೃತ್ಯಗಳ ಕಡೆಗಿನ್ನು ಯಾವ ರಿಯಾಯಿತಿಯನ್ನೂ ತೋರಿಸಲಾರೆವೆಂದು ಭುಜ ಚಪ್ಪರಿಸಿಕೊಂಡಿದ್ದಾರೆ. ಇದು ಗಂಭೀರ ಹೆಜ್ಜೆಯಾಗಿ ತೋರುವಾಗಲೇ, ಕೊರಿಯಾ ಯುದ್ಧದ ತೀರ್ಮಾನಕ್ಕೆ ಸಂಧಾನ ವಿಧಾನವನ್ನಂಗೀಕರಿಸಲು ತಾವು ಸಿದ್ಧರಿರುವೆವೆಂದು ತೋರಿಸಿಕೊಂಡ ಮೃದುತ್ವವೂ ಇಲ್ಲದೆ. ಅಂತೂ, ಸಂದರ್ಭಾತಿರೇಕಗಳಿಂದ ಅಮೆರಿಕವು ಉದ್ವೇಗಗೊಂಡು ಅತಿರೇಕಾಚರಣೆ ಕೈಕೊಳ್ಳುವ ಬದಲಿಗೆ ತಮ್ಮ ನಿಶ್ಚಿತ ಹಾದಿಯಲ್ಲಿ ದೃಢ ಹೆಜ್ಜೆಗಳನ್ನಿಡುತ್ತಾ ಅಮೆರಿಕ ಬ್ರಿಟನುಗಳು ಜತೆಗೂಡಿ ಸಾಗುವಂತೆ ಅಟ್ಲೀ-ಟ್ರುಮೇನ್ ಮಾತುಕತೆ ಸಾಧಿಸಿತು. ಲೋಕದ ದಾವಾಗ್ನಿ ಅಕಸ್ಮಾತ್ ಹತ್ತಿಕೊಳ್ಳದಂತೆ, ಸಾಧಾರಣ ರೀತಿಯ ಶಮನೋಪಾಯವೊಂದು ನಡೆಯಿತೆಂದು ಸಮಾಧಾನ ಪಡಬಹುದು.

ಅತ್ತ ಅಮೆರಿಕದ ಉದ್ವೇಗ ಬಿಸಿಗಿಂತೆ ಹೆಸರು ಬಿದ್ದಿರುವಾಗ, ಇತ್ತ ಕೊರಿಯದ ಕಮ್ಯೂನಿಸ್ಟರ ದಾಳಿನ ಕಡೆಗೆ 'ತಡೆಯಿರಿ' ಎನ್ನುವ ಕೈ ಕೂಡಾ ಮೇಲೆದ್ದಿದೆ. 38ನೇ ಗಡಿಗೆರೆಯನ್ನು ದಾಟಿ ದಕ್ಷಿಣಕ್ಕೆ ಕಾಲಿಡಬಾರದೆಂದು ಕಮ್ಯೂನಿಸ್ಟ್ ಚೈನಾ ಮತ್ತು ಕಮ್ಯೂನಿಸ್ಟ್ ಕೊರಿಯವನ್ನು ಭಾರತ ಮತ್ತು ಏಸ್ಯದ ಇತರ ಹನ್ನೆರಡು ರಾಷ್ಟ್ರಗಳು ವಿಜ್ಞಾಪಿಸಿಕೊಂಡಿವೆ. ಸಂ.ರಾ. ಸೇನೆಗಳು ಎಲ್ಲವನ್ನೂ ಕಳಕೊಂಡು 38ನೇ ಗೆರೆಯಿಂದ ದಕ್ಷಿಣಕ್ಕೆಷ್ಟೋ ಓಡಿಬಂದಿವೆ. ಇವುಗಳನ್ನಟ್ಟಿಸಿ ಕೊಂಡು ಬರುತ್ತಿರುವ ಕಮ್ಯೂನಿಸ್ಟ್ ಸೇನೆಗಳು ಏಸ್ಯಾ ರಾಷ್ಟ್ರಗಳ ಸಾವಧಾನ ಮಂತ್ರವನ್ನಾಲಿಸಿ 38ನೇ ಗಡಿಗೆರೆಯಲ್ಲಿ ತಡೆದುವಾದರೆ ಆಶೆಗವಕಾಶವಿದೆ. ಅತ್ತ ಸಂಯುಕ್ತ ರಾಷ್ಟ್ರ ಸಂಘವಲಯದಲ್ಲಿ ಭಾರತದ ಮುಂದಾಳುತ್ವದಲ್ಲಿ ಏಸ್ಯಾ ರಾಷ್ಟ್ರಗಳು 'ಕೊರಿಯದ ಗುಂಡು ಹಾರಾಟ ನಿಲ್ಲಿಸುವಿಕೆ' ಪ್ರಯತ್ನದಲ್ಲಿವೆ. ಈ ಸಂಬಂಧದ ಮಾತುಕತೆಗಳಿಗಾಗಿ ಪೂರ್ಣ ಸಮಾನತೆಯಿಂದಾದರೆ ರಶ್ಯಾ, ಅಮೆರಿಕ, ಬ್ರಿಟನುಗಳೊಂದಿಗೆ ದುಂಡುಮೇಜು ಸಮ್ಮೇಳನವೊಂದರಲ್ಲಿ ಭಾಗಿಯಾಗಲು ತಾನು ತಯಾರಿದ್ದೇನೆಂದು ಕಮ್ಯೂನಿಸ್ಟ್ ಚೈನಾ ಸೂಚಿಸಿದೆ. ಮಹಾ ಲೋಕ ಪ್ರಳಯದ ಪೀಠಿಕೆಯಂತಿರುವ ಕೊರಿಯ ಕಲಹದ ಶಾಂತತೀರ್ಮಾನಕ್ಕಾಗಿ ಇಕ್ಕಡೆಯವರ ಮನೋವೃತ್ತಿಯೂ ಒಂದಲ್ಲೊಂದು ವಿಧಾನದಿಂದ ಅನುಕೂಲವಾದಾಗ ಸಂಧಾನವೇಕೆ ಸಾಧಿಸಲೊಲ್ಲದು? ಭಾರತ ಮತ್ತಿತರ ಏಸ್ಯಾ ರಾಷ್ಟ್ರಗಳು ಈ ಸಂಬಂಧವಾಗಿ ಸಾಧ್ಯವಿರುವ ಸರ್ವ ಪ್ರಯತ್ನಗಳನ್ನೂ ನಿರ್ವಂಚನೆಯಿಂದ ಮಾಡುತ್ತಿರುವಾಗ ಇವುಗಳ ತೀರ್ಮಾನವನ್ನು ಆಕ್ಷೇಪ ವಿನಹಾ ಶಿರಸಾವಹಿಸಿಕೊಳ್ಳುವ ಒಪ್ಪಿಗೆಯನ್ನು ಇಕ್ಕಡೆಯವರೂ ಕೊಡಬಾರದೇಕೆ?

[೫ನೇ ಪುಟದಿಂದ]

ತು ಅವರು ಹೇಳುವುದೇನು, ಎಂಬುದನ್ನು ತಿಳಿಯುವ ಇಚ್ಛೆ ನನಗಿದೆ.

ಈಗ ಸ್ವಾಮೀ, ಆ ಆರೋಪಗಳಾದರೂ ಯಾವುವು? ಎಕ್ಸ್‌ರೇ ಇನ್‌ಸ್ಟಿಟ್ಯೂಟಿನ ರೇಡಿಯಮ್ ಸೂಜಿಗಳನ್ನು ಡಾ| ರೈಗಳು ತನ್ನ ಖಾಸಗೀ ಕೆಲಸಗಳಿಗಾಗಿ ತನ್ನ ಸ್ವಂತ ಮನೆಯಲ್ಲಿ ಉಪಯೋಗಿಸಿದರೆಂಬುದು ಒಂದನೇ ಆರೋಪ. ಈ ಸಂಗತಿಯ ಕುರಿತು ತನಿಖೆ ನಡೆಯಿಸಿ ವರದಿಯೊಪ್ಪಿಸುವಂತೆ ಆಗ ಪ್ರಧಾನ ಮಂತ್ರಿಯಾಗಿದ್ದ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ಡಾ| ರಾಜನರನ್ನು ಕೇಳಿಕೊಂಡಂತೆ, ಡಾ| ರಾಜನರ ವರದಿಯಲ್ಲಿ ಡಾ| ರೈಗಳು ಅಪರಾಧಿಯೆಂದಿದ್ದರೂ ಜನರಲ್ ಹೊಸ್ಪಿಟಲಿನಿಂದ ರೂ- 1 ಲಕ್ಷ ಮೌಲ್ಯದ ರೇಡಿಯಮ್ ಸೂಜಿಗಳು ಕಾಣೆಯಾಗಿದ್ದರೂ ಕೂಡಾ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡುದಿಲ್ಲವೆಂಬುದು ಎರಡನೇ ಆರೋಪ. ಇಲ್ಲಿ ನನ್ನ ಮೇಲಿನ ಆರೋಪವಾದರೂ ಏನು?

ಎಸೆಂಬ್ಲಿಯಲ್ಲಿ

ಶ್ರೀ ಎ. ಬಿ. ಶೆಟ್ಟರು ಡಾ| ರೈಗಳ ಭಾವನೆಂಟ. ಇದೇ ನನ್ನ ಅಪರಾಧದ ತಿರುಳು ಮತ್ತು ಮುಂಭಾಗ.

ಈ ರೇಡಿಯಂ ಮುಳ್ಳು ಅಪವಾದದ ಚರಿತ್ರೆಯ ಒಳಗಡೆಗೀಗ ತುಸು ಇಣುಕುವುದು ಅಗತ್ಯ; ಯಾಕೆಂದರೆ ಈ ಕುರಿತು ಬಹಳ ಮಾತುಗಳಾಗಿವೆ ಸ್ವಾಮೀ, ಈ ಪ್ರಚಾರದ ಹಿನ್ನೆಲೆಯಲ್ಲಿರುವ ಅದೇ ಸಣ್ಣ ಗುಂಪಿನವರಿಂದ 'ಸ್ವತಂತ್ರ' ಮತ್ತು 'ಬ್ಲಿಟ್ಸ್'ನಂತಹ ಪತ್ರಿಕೆಗಳ ಉದಾರೀ ಕಲಮುಗಳಲ್ಲಿ ಈ ಕುರಿತು ಬೇಕಾದಷ್ಟು ಪ್ರಕಟಿಸಲ್ಪಟ್ಟಿದೆ; ಮತ್ತು ಎಸೆಂಬ್ಲಿ, ಕೌನ್ಸಿಲುಗಳ ಪ್ರಶ್ನೆಗಳೊಳಗಿನ ವಿಷಯವಾಗಿಯೂ ಇದು ಬಂದಿದೆ.

ಸ್ವಾಮೀ, 1946ರಲ್ಲಿ 700 M. grs. ರೇಡಿಯಮ್ ಸೂಜಿಗಳನ್ನು ಕೊಂಡುಕೊಳ್ಳುವರೆ ಸರಕಾರದ ಮಂಜೂರಾತಿ ದೊರೆತಿದ್ದಿತು. ಆದಕ್ಕಾಗಿ ಮೌಲ್ಯ ಸೂಚನೆಗಳನ್ನು (ಕೊಟೇಶನ್ಸ್) ಕೇಳಲಾಯಿತು. ಅಮೆರಿಕದ ಎರಡು ಕಂಪೆನಿಗಳಿಂದ ಕೊಟೇಶನ್ಸ್‌ಗಳು ಬಂದಿದ್ದು, ಅವೈಕೆ ಅಗ್ಗವಾದುದನ್ನೆ ಜನರಲ್ ಹೊಸ್ಪಿಟಲಿನ ಆಗಿನ ಸುಪರಿಂಟೆಂಡೆಂಟ್ ಮೇಜರ್ ಶಪ್ಪರ್ಡರು ಶಿಫಾರಸು ಮಾಡಿದುದನ್ನು ಸರ್ಜನ್ ಜನರಲರು ಅಂಗೀಕರಿಸಿಕೊಂಡರು. ರೇಡಿಯಮ್ ಸೂಜಿಗಳು ಬಂದಾಗ, ಆ ಪಾರ್ಸೆಲಿನೊಂದಿಗಿದ್ದ ಸರ್ಟಿಫಿಕೇಟುಗಳ ಕಟ್ಟನ್ನು ಸಂಬಂಧಪಟ್ಟ ಡಾಕ್ಟರೀ ತಜ್ಞರ ಕೈಗೆ ಕೊಡಲಾಯಿತು; ಪರಬರಾಯಿಯು ಸೂಚೀ ಪತ್ರಾನುಗುಣವಾಗಿ ಸರಿಯಿದೆ, ಎಂದವರು ತಿಳಿಸಿದರು, ಸರ್ಟಿಫಿಕೇಟುಗಳ ಕಟ್ಟಿನಲ್ಲಿ ಶುದ್ಧತಾ ಸರ್ಟಿಫಿಕೇಟು ಇಲ್ಲವೆಂಬುದು ಅವರು ಕಂಡುಹಿಡಿಯುವಾಗ ಕೆಲಕಾಲ ಹೋಯಿತು. ಬರ್ನಾರ್ಡ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್ ಡಾ| ರೈಗಳ ಇಚ್ಛಾನುಸಾರ ಅವರು ಆಟೋ-ಫೋಟೋ ಗ್ರಾಫ್‌ಗಳನ್ನು ತೆಗೆದರು, ರೇಡಿಯಮಿಗೆ 'ಎಕ್ಸ್‌ಪೋಶರ್' ಅಪಾಯಕರ ಉದ್ಯಮವಾದ್ದರಿಂದ ಆಟೋ—ಫೋಟೋಗ್ರಾಫ್‌ಗಳನ್ನು ತೆಗೆಯಲು ಅವರಿಗೆ ಕೆಲವು ವಾರ ಹಿಡಿಯಿತು. ಶುದ್ಧತೆ ಸರ್ಟಿಫಿಕೇಟುಗಳಿಲ್ಲ ಮತ್ತು ಸೂಜಿಗಳಲ್ಲಿ ಕೆಲವು ದೋಷಗಳು ಕಂಡುಬಂದಿವೆ ಎಂದು ಅವರು ಡೈರೆಕ್ಟರ್ ಡಾ| ರೈಗಳಿಗೆ ವರದಿ ಮಾಡಿದೊಡನೆಯೇ ಶುದ್ಧತೆ ಸರ್ಟಿಫಿಕೇಟುಗಳನ್ನು ಕಳುಹಿಲ್ಲವೆಂಬುದನ್ನೂ ಮುಳ್ಳುಗಳಲ್ಲಿ ದೋಷಗಳಿರುವುದನ್ನೂ ನಮೂದಿಸಿ ಡಾ| ರೈಗಳು ಸಂಬಂಧಪಟ್ಟ ಅಮೆರಿಕದ ಕಂಪೆನಿಗೆ ಬರೆದರು. ಈಗ, ಆ ಮುಳ್ಳುಗಳಲ್ಲಿದ್ದ ದೋಷವಾದರೂ ಯಾವುದು? ಆ ಸೂಜಿಗಳಲ್ಲಿ ಇದ್ದ ರೇಡಿಯಮ್ ಉಪ್ಪಿನ ಗುಣ ಅಥವಾ ಪರಿಮಾಣದಲ್ಲಿ ಏನೂ ತಪ್ಪಿರಲಿಲ್ಲ. ಆದರೆ ಆ ಸೂಜಿಗಳಲ್ಲಿ ರೇಡಿಯಮನ್ನು ವಿವರಣೆಮಾಡಿ ಹಾಕಿದ್ದುದು ಮಾತ್ರ ಸರಿಯಾಗಿರಲಿಲ್ಲ. ದೋಷವಿದ್ದುದು ಅಷ್ಟೆ. ಸರಿ, ಡಾ| ರೈಗಳ ಮೇಲೆ ವೈರ ಸಾಧಿಸಲು ಮತ್ತವರನ್ನು ತೊಂದರೆಗೀಡುಮಾಡಲು ಸದಾಕಾಲವೂ ಕಾಯುತ್ತಿದ್ದ ಮೂವರು ಅಥವಾ ನಾಲ್ವರು ಈ ಪರಿಸ್ಥಿತಿಯನ್ನು ಕೂಡಲೇ ಕೈಗೆತ್ತಿಕೊಂಡರು. ಜನರಲ್ ಹೊಸ್ಪಿಟಲ್ ಮತ್ತು ಬರ್ನಾರ್ಡ್

ಮಹಾತ್ಮಾಗಾಂಧಿ ಮೆಮೊರಿಯಲ್ ಕಾಲೇಜಿಗೆ ಶಕ್ತಿಮೀರಿ ಸಹಾಯಮಾಡಿರಿ.

ಶ್ರೀ ಪಿ. ಬಿ. ಶೆಟ್ಟರ ಸ್ವಸಮರ್ಥನೆ

ಇನ್‌ಸ್ಟಿಟ್ಯೂಟಿನ ಆಡಳಿತವನ್ನು ಟೀಕಿಸುವ ಕೆಲವು ವಾರ್ತೆಗಳು ಅದೊಂದು ವರ್ಗದ ಪತ್ರಿಕೆಗಳಲ್ಲಿ ಬರಹತ್ತಿದುವು. ರೇಡಿಯಮ್ ಮುಳ್ಳುಗಳನ್ನು ಪಡಕೊಂಡ ಸಂಬಂಧದ ಕೆಲವು ಅಪಾಕಾಟಗಳೂ ಆದುವು. ಕೆಲವು ಆರೋಪಗಳನ್ನೊಳಗೊಂಡ ಅನಾಮಧೇಯ ಮತ್ತು ವಿಧ್ವಂಸಾವಧಾರಿ ಪತ್ರಗಳು ಪ್ರಾಯಶಃ ಶ್ರೀ ಓ. ಪಿ. ರೆಡ್ಡಿಯಾರರಿಗೂ ಬಂದಿರಬೇಕು. ಹೀಗಾಗಿ, ಅವರು ಜನರಲ್ ಹಾಸ್ಪಿಟಲ್ ಮತ್ತು ಬರ್ನಾರ್ಡ್ ಇನ್ಸ್ಟಿಟ್ಯೂಟ್‌ನ ತನಿಖೆ ನಡೆಸಲು ತನ್ನ ಸಹವರ್ತಿ ಆರೋಗ್ಯ ಮಂತ್ರಿಗಳನ್ನು ಕಳುಹಲು ಬಗೆದರು; ಮತ್ತು ಡಾ| ರಾಜನರೊಡನೆ ಈ ಕಾರ್ಯದಲ್ಲಿ ಸಹಕರಿಸುವಂತೆ ನನಗೂ ಬರೆದರು. ಡಾ| ರಾಜನರು ಜನರಲ್ ಹಾಸ್ಪಿಟಲಿನ ತನಿಖೆಗೆ ಹೋದಾಗ ನಾನು ಅವರೊಂದಿಗೆ ಹೋಗಿದ್ದೆ. ಆದರವರು ಬರ್ನಾರ್ಡ್ ಇನ್‌ಸ್ಟಿಟ್ಯೂಟಿಗೆ ಹೋಗುವಾಗ ವೈಯಕ್ತಿಕ ಕಾರಣಗಳಿಗಾಗಿಯೇ ನಾನವರೊಂದಿಗೆ ಹೋಗಲಿಲ್ಲ. ಇವೆರಡು ಸಂಸ್ಥೆಗಳ ತನಿಖೆ ವರದಿಗಳನ್ನು ಡಾ| ರಾಜನರು ಆಗ ಪ್ರಧಾನಿಯಾಗಿದ್ದ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರಿಗೆ 1948ನೇ ಮೇ ತಿಂಗಳಲ್ಲಿ ಒಪ್ಪಿಸಿದರು. "ಜನರಲ್ ಹಾಸ್ಪಿಟಲಿನ ಎಕ್ಸ್‌ರೇ ಸಂಬಂಧದ ಬಹುತೇಕವಾಗಿ ಎಲ್ಲಾ ಗೊಂದಲಗಳಿಗೆ ಮತ್ತು ಆ ಸಂಬಂಧದ ದೂರುಗಳಿಗೆ ಉದ್ಯಮ ಸ್ಪರ್ಧೆಯು ಮತ್ಸರವೇ ಹೇತು" ಎಂಬುದೇ ಡಾ| ರಾಜನರು ಮಾಡಿದ ಸಾಮಾನ್ಯ ಶೋಧನಾತ್ಮಕ ನಿರ್ಣಯ. ರೇಡಿಯಂ ಸೂಜಿಗಳ ವಿಷಯವಾಗಿ ಅವರು ತನ್ನ ವರದಿಯಲ್ಲಿ ಹೇಳುವುದಿಷ್ಟೆ: "ತರಿಸಲ್ಪಟ್ಟ ಆಸ್ಪತ್ರೆಯಲ್ಲಿ ದಾಸ್ತಾನಿರಿಸಲ್ಪಟ್ಟಿರುವ ರೇಡಿಯಮ್ ಸೂಜಿಗಳ ಶುದ್ಧತಾ ಸರ್ಟಿಫಿಕೇಟು ದಾಸ್ತಾನಿಗಿನ್ನೂ ದೊರೆತಿಲ್ಲವೆಂದು ನಾನು ತಿಳಿದೆ. ಡಾಕ್ಟರರೇ ತಜ್ಞನಿದನ್ನು ಕಂಡು ಹಿಡಿದು ಡೈರೆಕ್ಟರರ ಗಮನಕ್ಕೆ ತಂದಿದ್ದರೆಂಬುದನ್ನು ಕೂಡಾ ನಾನು ತಿಳಿದುಕೊಂಡೆ." ನಾನಿಲ್ಲಿ ಮೊದಲೇ ಹೇಳಿದಂತೆ ಶುದ್ಧತಾ ಸರ್ಟಿಫಿಕೇಟು ಬಂದಿಲ್ಲ ಮತ್ತು ಮುಳ್ಳುಗಳಲ್ಲಿ ಕೆಲವು ದೋಷಗಳಿವೆ ಎಂಬುದು ಕಂಡುಬಂದ ಕೂಡಲೆ ಸಂಬಂಧಪಟ್ಟ ಕಂಪೆನಿಗೆ 'ಏರ್‌ಮೈಲ್'ನ ಮೂಲಕ ತಿಳಿಸಲಾಯಿತು. ಮತ್ತು ಸುದೀರ್ಘ ಪತ್ರವ್ಯವಹಾರಗಳ ನಂತರ ಆ ಕಂಪೆನಿಯವರು ತಮ್ಮ ಸ್ವಂತ ವೆಚ್ಚದಿಂದ ದೋಷಿ ಮುಳ್ಳುಗಳನ್ನು ಸರಿಪಡಿಸಲೊಪ್ಪಿಕೊಂಡರು. ಡಾ| ಶೆಟ್ಟಿಗಳೇ ಕಾರ್ಯವನ್ನು ಕೈಕೊಂಡುದು ಡಾ| ರಾಜನರು ಬರ್ನಾರ್ಡ್ ಇನ್‌ಸ್ಟಿಟ್ಯೂಟಿನ ವಿಚಾರಣೆಗೆ ಹೋಗುವ ಹಲವು ತಿಂಗಳುಗಳಿಗೆ ಮೊದಲೇ. ಪತ್ರಿಕಾ ಕಲವುಗಳಲ್ಲಿ ಪ್ರಕಟಗೊಂಡಿದ್ದ ವ್ಯಂಗ್ಯತೆ ಮತ್ತು ಸಂದೇಹಗಳೆಲ್ಲವೂ ಸರಕಾರದ ಅಮೂಲಾಗ್ರ ಪರಿಶೋಧನೆಗೊಳಗಾಗಿದ್ದವು; ಮತ್ತು ಬರ್ನಾರ್ಡ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್ ಅಥವಾ ಜನರಲ್ ಹಾಸ್ಪಿಟಲಿನ ಸುಪರಿಂಟೆಂಡೆಂಟ ಈ ವಹಿವಾಟುಗಳಲ್ಲಿ ಯಾವುದೇ ದುರುದ್ದೇಶ ಅಥವಾ ದುರ್ಭಾವನೆಯಿಂದಿದ್ದರೆಂಬ ಪ್ರಶ್ನೆಯೇ ಇಲ್ಲವೆಂದು ಸರಕಾರಕ್ಕೆ ಸಮಾಧಾನವಾಗಿದೆ. ತದನುಗುಣವಾದ ಪ್ರಥಮ ಪತ್ರಿಕಾ ಹೇಳಿಕೆಯನ್ನು ಸರಕಾರವು, ಪ್ರಧಾನಿ ಶ್ರೀ ಓ. ಪಿ. ಆರ್. ರೆಡ್ಡಿಯಾರರ ಅಭಿಮತಾನುಸಾರವಾಗಿ 1949ನೇ ಫೆಬ್ರವರಿ 16ರಲ್ಲಿ ಕೊಟ್ಟಿದ್ದಿತು. ಡಾ| ರಾಜನರು ಆರೋಗ್ಯಖಾತೆಯನ್ನು ತೆಗೆದುಕೊಂಡಮೇಲೆ ಅವರೇ ವಿಷಯಗಳ ಕುರಿತ ಮತ್ತೊಮ್ಮೆ ಲಕ್ಷ್ಯಪೂರ್ವಕ ಪರಿಶೀಲನೆ ನಡೆಸಿ 1949ನೇ ಒಕ್ಟೋಬರ್ 7ರಲ್ಲಿ ಈ ಕೆಳಗಿನ ಅಭಿಪ್ರಾಯಗಳ ಎರಡನೇ ಪತ್ರಿಕಾ ಹೇಳಿಕೆಯನ್ನು ಹೊರಡಿಸಿದರು: "ಈ ವಹಿವಾಟುಗಳ ಯಾವ ಭಾಗವಾದರೂ ಅನುಚಿತ ರೀತಿಯಲ್ಲಿರುವ ಅಥವಾ ಸಂಬಂಧಪಟ್ಟ ಅಧಿಕಾರಿಗಳ ಮರೆ ಮಾಜಲು ನೋಡಿದ ಪ್ರಶ್ನೆಯೇ ಇಲ್ಲಿಲ್ಲ; ಆದರೆ ಸರಬರಾಯಿಯು ಪೂರ್ವನಿಶ್ಚಿತ ಮಾದರಿಯಲ್ಲಿರಲಿಲ್ಲವಾದ್ದರಿಂದ ಸೂಜಿಗಳನ್ನು ದುರಸ್ತಿಗೊಳಿಸುವ ಸರ್ವ ಪ್ರಯತ್ನಗಳೂ ನಡೆದಿವೆ". ಸಂಬಂಧಪಟ್ಟ ಕಂಪೆನಿಯು ಇಷ್ಟರಲ್ಲೇ ಆರು ಸೂಜಿಗಳನ್ನು ಸರಿಗೊಳಿಸಿದ, ಅಲ್ಲದೆ ತಮ್ಮ ಸ್ವಂತ ವೆಚ್ಚದಿಂದಲೇ ಉಳಿದ ದೋಷೀ ಮುಳ್ಳುಗಳನ್ನು ಪುನರ್ರಚಿಸಿಕೊಡಲೊಪ್ಪಿದೆ.

ತಾನ ಡಾ| ಶೆಟ್ಟಿಗಳ ವಿರುದ್ಧವಾಗಿ ತಂದಿರುವ ಅಪವಾದನೆಯಲ್ಲಿ ಡಾ| ಶೆಟ್ಟಿಗಳು ಅಪರಾಧಿಗಳೆಂಬುದನ್ನು ಡಾ| ರಾಜನರ ವಿಚಾರಣೆಯು ತೋರಿಸಿದೆ, ಎಂದು ಕರಾವಿನ ಮಾನ್ಯ ಸೂಚಕರು ಅಂದಿದ್ದಾರೆ. ಡಾ| ಶೆಟ್ಟಿಗಳಿಂದ ರೇಡಿಯಮ್ ಮುಳ್ಳುಗಳ ದುರುಪಯೋಗವಾಗಿದೆ ಎಂಬುದನ್ನು ಸೂಚಿಸುವ ಒಂದೇ ಒಂದು ಶಬ್ದ ಅಥವಾ ಅವ್ಯಕ್ತ ಸೂಚನೆ ಕೂಡಾ ಡಾ| ರಾಜನರ ವರದಿಯಲ್ಲಿಲ್ಲ. ಡಾ| ಶೆಟ್ಟಿಗಳನ್ನು ಅಂತಹ ಅಪರಾಧಿಯೆಂದು ಸಮರ್ಥಿಸಿರುವುದಾವುದೂ ಆಧಾರ ದಾಖಲೆಗಳಲ್ಲಿಲ್ಲ. ಡಾ| ಶೆಟ್ಟಿಗಳಲ್ಲಿ ತನ್ನದೇ ಆದ ರೇಡಿಯಂ ಸೂಜಿಗಳ ಸಂಗ್ರಹವಿದೆ, ಆಸ್ಪತ್ರೆಯ ಮುಳ್ಳುಗಳನ್ನು ತೆಗೆದೊಯ್ಯುವ ಅವಶ್ಯಕತೆಯೇ ಅವರಿಗಿಲ್ಲ; ಮಾತ್ರವಲ್ಲ, ಡಾ| ಶೆಟ್ಟಿಗಳಿಗಾಗಲೀ ಬೇರಾರಿಗೇ ಆಗಲೀ ಆ ಸಂಸ್ಥೆಯಿಂದ ರೇಡಿಯಮ್ ಮುಳ್ಳುಗಳನ್ನು ತೆಗೆದೊಯ್ಯುವುದು ಸಾಧ್ಯವೂ ಇಲ್ಲ. ಸೂಜಿಗಳು ಸಂಬಂಧಪಟ್ಟ ತಜ್ಞ ಡಾಕ್ಟರರ ಅಂಕೆಯೊಳಗಿರುವವುಗಳಾಗಿದ್ದು ಡಾ| ಶೆಟ್ಟಿ ಮತ್ತು ಇವರೊಳಗೆ ಜಗಿತೋಪ ಪ್ರೇಮ ಸಂಬಂಧವೇನೂ ಇಲ್ಲ. ರೇಡಿಯಮ್ ಕವಾಟು ಮತ್ತು ರೇಡಿಯಮ್ ಕೋಣೆ, ಇವೆರಡರ ಬೀಗದ ಕೈಗಳಿರುವುದೂ ಈ ಡಾಕ್ಟರರ ಕೈಯಲ್ಲೇ. ಜನರಲ್ ಹಾಸ್ಪಿಟಲಿನ ಶಿರಸ್ತೇದಾರರಿಗೆ ದೈನಂದಿನ ರೇಡಿಯಂ ಪಾವತಿ ಮತ್ತು ದೈನಂದಿನ ಜಮಾರಿಜಿಸ್ಟ್ರಿಯಂತಹ ತಪಾಸಣೆಗಳು ಮತ್ತು ಮರುತಪಾಸಣೆಗಳು ಇದ್ದೇ ಇವೆ. ರೇಡಿಯಮ್ ಕವಾಟಿನ ಕಳ್ಳಸಲಿಗೆ ಮಾಡದೆ ಯಾರೊಬ್ಬನಿಗೂ ಎಕ್ಸ್‌ರೇ ಇನ್‌ಸ್ಟಿಟ್ಯೂಟ್‌ನಿಂದ ಸೂಜಿಗಳನ್ನು ತೆಗೆಯಲು ಸಾಧ್ಯವಿಲ್ಲ. ಆರೋಪಿತ ಅಪರಾಧದ ತಪ್ಪಿಗಾರನೆಂದು ಕಂಡುಬಂದಲ್ಲಿ ಯಾವ ವ್ಯಕ್ತಿಯನ್ನಾದರೂ ಹಾಗೆಯೇ ಬಿಡುವವರು ಶ್ರೀ ರಾಮಸ್ವಾಮಿ ರೆಡ್ಡಿಯಾರರೆಂದಿಗೂ ಅಲ್ಲ.

ಇತರ ಆಪಾದನೆಗಳ ಜತೆಯಲ್ಲಿ ಈ ಆಪಾದನೆಗಳು 1949ನೇ ಜುಲಾಯಿಯಷ್ಟು ಹಿಂದೆಯೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮುಂದಿಡಲ್ಪಟ್ಟಿದ್ದುವು. ಒಂದೂವರೆ ವರುಷಗಳು ಸಂದಿವೆಯಾದರೂ, ಈ ಸಭೆಯ ಮುಂದೆ ತಾನು ಡಾ| ಶೆಟ್ಟಿಗಳ ವಿರುದ್ಧವಾಗಿ ತಂದಿರುವ ಅಪವಾದನೆಯನ್ನು ಸಿದ್ಧಪಡಿಸುವ ಯಾವುದೇ ಸಂಗತಿಯನ್ನು ಸಂಗ್ರಹಿಸುವುದಕ್ಕಾಗಲಿ, ಯಾವುದೇ ಸಾಕ್ಷ್ಯವನ್ನು ದೊರಕಿಸಿಕೊಳ್ಳುವುದಕ್ಕಾಗಲೀ ಶ್ರೀ ಪ್ರಕಾಶಮರಿಂದ ಸಾಧ್ಯವಾಗಿಲ್ಲ. ಶ್ರೀ ಪ್ರಕಾಶಮರಿಗೆ ಸುದ್ದಿಕೊಟ್ಟವರಾರು ಎಂಬುದನ್ನು ತಿಳಿಯುವ ಇಚ್ಛೆ ನನಗಿದೆ. ಅವರು ಶ್ರೀ ಪ್ರಕಾಶಮರಿಗೆ ಕೊಟ್ಟ ಸಾಕ್ಷ್ಯ ರುಜುವಾತುಗಳಾವುವು? ಅವರು ಸಾಕ್ಷ್ಯದ ಒಂದು ತುಣುಕನ್ನಾದರೂ ಈ ಸಭೆಯ ಮುಂದೇಕೆ ಇಟ್ಟಿಲ್ಲ? ಈ ಮಾದರಿಯ ಒಂದು ಘೋರ ಆರೋಪವನ್ನು ಮಾಡುವಾಗ ನನ್ನ ಮಾನ್ಯ ಮಿತ್ರರು ಆರೋಪಗಳ ಆಧಾರಗಳನ್ನು ಸ್ಪಷ್ಟ ಮಾಡಿಕೊಳ್ಳಬೇಕಿದ್ದಿತು. ತಾನು ಕೂಡುವ ಹೇಳಿಕೆಗಳ ಸಂಗುರಿ ಮತ್ತು ಸತ್ಯದ ಜವಾಬ್ದಾರಿಯನ್ನು ಅವರು ಹೊರಲೇಬೇಕು. ಒಂದು ಕಾಲದಲ್ಲಿ ಈ ಸಂಸ್ಥಾನದ ಪ್ರಧಾನಿತ್ವವನ್ನು ವಹಿಸಿದ್ದ ಶ್ರೀ ಪ್ರಕಾಶಮರಂತಹ ವ್ಯಕ್ತಿಯಿಂದ ನಾವು ಕನಿಷ್ಠ ಪಕ್ಷ ಇಷ್ಟನ್ನಾದರೂ ನಿರೀಕ್ಷಿಸಬೇಕು. ನಾವೆಲ್ಲರೂ ಗರ್ವಂಟಿಯ 'ಡೋನ್ ಕ್ವಿಕ್ಸೋಟಿನ ಪರಾಕ್ರಮ'ವನ್ನು ಮಹದಾಸಕ್ತಿಯಿಂದ ಓದಿದವರಿದ್ದೇವೆ. ಡಾನ್ ಕ್ವಿಕ್ಸೋಟ್ ತನ್ನ ವೈಲಕ್ಷಣಗಳನ್ನು ಎದ್ದುತೋರುವ ಚಾತುರ್ಯದ ನಿಸ್ಸಾರವಾದ ವ್ಯಕ್ತಿತ್ವವಿದ್ದವ. ಶ್ರೀ ಪ್ರಕಾಶಮರ ಗುಳ್ಳೆಗಳನ್ನೊಡೆಯುವ 'ಸಂಚೋ ಪಾನ್ಝಾ'ದಂತಹದೇನೂ ಇಲ್ಲ. ಶ್ರೀ ಕೆ. ಆರ್. ಕಾರಂತರು ಸಾಂಚೋಪಾನ್ಝಾದಿಂದ ಭಿನ್ನವಾದ ಅಚ್ಚಿನವರಿದ್ದಾರೆ. ಸ್ವಾಮೀ, ನಾನು ಕಾಣುತ್ತಿರುವಂತೆ ಇದು ಕೇವಲ ಕೆಸರೆರಚುವಿಕೆ. ಅಮೇರಿಕದಲ್ಲಿದು 'ಒಡೆ ಯುಕ್ತಿ ಕೌಶಲ್ಯ' ಎಂದು ಕರೆಯಲ್ಪಡುತ್ತದೆ. ಕೊನೆಯ ಪಕ್ಷ ಎಲ್ಲಿಗಾದರೂ ತಾಗೀತೆಂಬ ಆಶೆಯಿಂದಲೇ ತನ್ನ ಎದುರಾಳಿಯ ಮೇಲೆ ಕೆಸರೆರಚುವವರಿದ್ದಾರೆ. ನನ್ನ ಮಾನ್ಯ ಮಿತ್ರರಾದರೋ ಈ ಸರಕಾರದ ಓರ್ವ ಜವಾಬ್ದಾರೀ ಅಧಿಕಾರಿಗೆ—ಒಬ್ಬ ನಾಗರಿಕ ಸೇವಕನಿಗೆ, ಕಠೋರ ತಪ್ಪನ್ನು ಮಾಡಿದ್ದಾರೆ. ತನ್ನೀ ಆರೋಪಗಳನ್ನು ಹಿಂತೆಗೆದುಕೊಂಡು ಸಂತಾಪ ಸೂಚಿಸುವಂತೆ ಅವರನ್ನು ಕೇಳಿಕೊಳ್ಳುತ್ತೇನೆ. ನಾನೀಗೌರವಾನ್ವಿತ ಸಭೆಯನ್ನು ವಿಜ್ಞಾಪಿಸಿಕೊಳ್ಳುತ್ತೇನೆ ಸರಿಯಾದ ಬುದ್ಧಿಯುಳ್ಳ ಯಾವ ವ್ಯಕ್ತಿಯಾದರೂ ಅನುಸರಿಸಬೇಕಾದ ಮರ್ಯಾದೆಯ ವಿಧಾನವೆಂದರೆ ಇದೊಂದೇ.

ಈಗ ಸ್ವಾಮೀ, ನವಂಬರ್ 17ರ ಲಾಲಾ ಲಜಪತರಾಯ್ ಸ್ಮಾರಕದಿನದ ಸಂದರ್ಭದಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರಿತ್ತ ಸಂದೇಶದ ಒಂದು ಭಾಗದ ಕಡೆಗೆ ಶ್ರೀ ಪ್ರಕಾಶಮ್ ಮತ್ತು ಶ್ರೀ ಕಾರಂತರ ಲಕ್ಷ್ಯವನ್ನು ನಾನು ಎಳೆಯಬಹುದೆ? ಅದು ಹೀಗಿದೆ: "ತಮ್ಮ ಸ್ವಂತ ಕುಂದುಕೊರತೆಗಳನ್ನು ಮರೆತೇ ಬಿಟ್ಟು ಅನ್ಯರ ದೌರ್ಬಲ್ಯಗಳನ್ನು ತಿದ್ದಲು ಪ್ರಯತ್ನಿಸುವ ಜನರು ಈ ದಿನ ನಮ್ಮ ನಡುವೆ ಇದ್ದಾರೆ. ಇಂಥವರು ತಮ್ಮ ಗತಕಾಲದ ಚರಿತ್ರೆಯನ್ನು ಮರೆತಿರುತ್ತಾರೆ; ಗಾದೆಯಾಗಿರುವ 'ಸಾರ್ವಜನಿಕರಿಗೆ ಜ್ಞಾಪಕ ಕಡಿಮೆ'ಯೆಂಬುದನ್ನೇ ಇವರು ಅವಲಂಬಿಸುವಂತಿದೆ. ತಮ್ಮಂತೆಯೇ ಜನತೆಯೂ ಗತಚರಿತ್ರೆಯನ್ನು ಮರೆತ, ತಮ್ಮ ಮೇಲೆ ವಿಶ್ವಾಸವಿಡುತ್ತಾರೆಂದೇ ಇಂಥವರು ನಂಬುತ್ತಾರೆ".

ಪಡುಬಿದ್ರಿ ಕಂಬಳ

ತಿದ್ದುಪಡಿ.

ತಾ. 20–12–50ನೇ ಬುಧವಾರವೆಂದು ನಿಶ್ಚಯಿಸಿದ್ದ ಪಡುಬಿದ್ರಿ ಕಂಬಳವು ಒಂದು ದಿನ ಮುಂಚಿತವಾಗಿ ಅಂದರೆ ತಾ. 19–12–50ನೇ ಮಂಗಳವಾರ ಜರಗುವುದು.

ಹೆಚ್ಚಿನ ಜತೆ ಓಟದ ಕೋಣಗಳನ್ನು ಬರಮಾಡಿಸಬೇಕಾಗಿಯೂ ನಿಶ್ಚಯಿಸಿದ್ದೇವೆ. ಮಹಾಜನರ ಉತ್ತೇಜನದ ಸಲುವಾಗಿ ಏಳು ಕೋಲು ನಿಶಾನಿಗೆ ನೀರು ಹಾರಿಸಿ ಹಲಗೆಯಲ್ಲಿ ಪ್ರಥಮ ಬಂದ ಕೋಣಗಳಿಗೂ ಹಗ್ಗದಲ್ಲಿ ಪ್ರಥಮ ಬಂದು ಜಯಶೀಲವಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನು ಬಹುಮಾನ ಕೊಡುವುದಾಗಿಯೂ ಆಲೋಚಿಸಿದ್ದೇವೆ. ಆದಪ್ರಯುಕ್ತ ಮಹಾಶಯರೆಲ್ಲರೂ ತಮ್ಮ ಬಂಧುಮಿತ್ರರ ಓಟದ ಕೋಣಗಳ ಸಮೇತ ದಯಮಾಡಿ ಬಂದು ನಮ್ಮ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುವ,

ತಮ್ಮ ಆಗಮನಾಭಿಲಾಷಿ,
ಬೋಳ ಮಂಜಯ್ಯ ಶೆಟ್ಟಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಖು 17–12–1950 ರಿಂದ

ದೇವ್ ಆನಂದ್, ಕಿಶೋರ್ ಸಾಹು, ಕಾಮಿನಿ ಕೌಶಲ್, ಲೀಲಾ ಚಿಟ್ನಿಸ್, ಕಕ್ಕು

ಇವರೆಲ್ಲರ ಹೆಸರು ಕೇಳಿದರೇನೆ ಒಂದು ನಮೂನೆ
ಇನ್ನು ಇವರೆಲ್ಲರೊಂದಾಗಿ ಚಿತ್ರದಲ್ಲಿ ಬಂದರೆ
ಅದೊಂದು ವಿಶಿಷ್ಟ—

ನಮೂನ

ಬರುವ ಚಿತ್ರ—ಜೆಮಿನಿಯವರ "ಮಂಗಮ್ಮ"

For Life Assurance

CONSULT

THE NEW GUARDIAN OF INDIA

LIFE ASSURANCE CO LTD.

(Established 1934)

Chairman Sri M. C. T. M. Chidambaram Chattiyar

A Policy in this progressive Life Office is a investment its Agency is a valuable business connection

MANGALORE BRANCH:
K. S. R. Road,
Hampankatta, MANGALORE

HEAD OFFICE:
United India Life Building,
MADRAS 142

ಸಾಹಿತ್ಯ ಸಮ್ಮೇಲನ ಮುಂಬಯಿ

ಕಲಾಪ್ರದರ್ಶನ

ಮುಂಬಯಿಯಲ್ಲಿ ಸೇರಲಿರುವ ಸಾಹಿತ್ಯ ಸಮ್ಮೇಲನದ ಅಂಗವಾಗಿ ಕಲಾಪ್ರದರ್ಶನ ನಡೆಯಲಿದೆ. ಕನ್ನಡ ಕಲಾವಿದರು ತಮ್ಮ ತಮ್ಮ ಕಲಾಕೃತಿಯನ್ನು ಪ್ರದರ್ಶನಕ್ಕೆ ಡಿಸೆಂಬರ ತಾ ೧೮ ರೊಳಗೆ ಪ್ರದರ್ಶನದ ಕಾರ್ಯದರ್ಶಿಗಳಿಗೆ ಕಳಿಹಿಸಿಕೊಡಬಹುದು. ಮೆಚ್ಚುಗೆಯನ್ನು ಪಡೆದ ಚಿತ್ರಕ್ಕೆ ಬಹುಮಾನ ಕೊಡುವ ಏರ್ಪಾಟಿದೆ.

ಪ್ರಕಾಶಕರಲ್ಲಿ ಬಿನ್ನಹ

ಪ್ರಕಾಶಕರಾಗಲೀ ಸಂಪಾದಕರಾಗಲೀ ತಮ್ಮ ತಮ್ಮ ಪ್ರಕಟನೆಗಳನ್ನು ಕಳಿಸಿ ಕೊಟ್ಟಲ್ಲಿ ಪ್ರದರ್ಶನದಲ್ಲಿಡಲಾಗುತ್ತದೆ. ವಿಕ್ರಯವಾಗಿ ಬಂದ ಹಣವನ್ನು ಆಯಾಯ ಪ್ರಕಾಶಕರಿಗೇನೇ ತಲುಪಿಸಲಾಗುತ್ತದೆ. ಈ ಸಂದರ್ಭದಲ್ಲಿ ಪುಸ್ತಕ ಪತ್ರಿಕೆಗಳ ಪ್ರಕಾಶಕರು ಸಹಕರಿಸುವರಾಗಿ ನಂಬಲಾಗಿದೆ.

ಪ್ರತಿನಿಧಿಗಳಲ್ಲಿ—

ಪ್ರತಿನಿಧಿ ಶುಲ್ಕ ರೂ ೩ ನ್ನು ಕಳಿಸಿ ಹೆಸರನ್ನು ರಿಜಿಸ್ಟ್ರಿ ಮಾಡುವ ಅವಧಿಯನ್ನು ಡಿಸೆಂಬರ ೮ ನೆಯ ತಾರೀಕಿನ ವರೆಗೆ ಮುಂದುವರಿಸಲಾಗಿದೆ. ಸಮ್ಮೇಲನ ನಡೆಯುವ ಕಾಲದಲ್ಲಿ ಮುಂಬಯಿಯಲ್ಲಿ ಛಳಿವಿಪರೀತವಾಗಿರುವದರಿಂದ ಬೆಚ್ಚಗಿನ ಸಾಮಗ್ರಿಯನ್ನು ಮುಂದಾಗಿ ತಂದು ಕೊಳ್ಳುವದು ಉಚಿತವೆಂದು ಸೂಚಿಸಲಾಗಿದೆ.

ಮಹಿಳಾಗೋಷ್ಠಿ

ಮಹಿಳಾ ಗೋಷ್ಠಿಗೆ ಸೊಲ್ಲಾಪುರದ ಶ್ರೀಮತಿ ಜಯದೇವಿ ಬಾಯಿ ಲಿಗಾಡೆಯವರು ಅಧ್ಯಕ್ಷರಾಗಿಯೂ, ಎಸ್. ಎನ್. ಡಿ. ಟಿ ಹೈಸ್ಕೂಲಿನ ಪ್ರಿನ್ಸಿಪಾಲರಾದ ಶ್ರೀಮತಿ ಸೀತಾಬಾಯಿ ಅಣ್ಣಿಗೇರಿಯವರು ಸ್ವಾಗತಾಧ್ಯಕ್ಷರಾಗಿಯೂ ಸೌ. ಪದ್ಮಾವತಿ ಬೆಳವಡಿ ಮತ್ತು ಸೌ ಕಮಲಾ ರಾವ್ ಅವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಪತ್ರಿಕೋದ್ಯೋಗಿಗಳ ಸಮ್ಮೇಲನ

ಪತ್ರಿಕೋದ್ಯೋಗಿಗಳ ಸಮ್ಮೇಲನಕ್ಕೆ ಸಂಯುಕ್ತ ಕರ್ನಾಟಕದ ಸಂಪಾದಕರಾದ ಶ್ರೀ ಹ. ರಾ. ಪುರೋಹಿತರು ಅಧ್ಯಕ್ಷರಾಗಿಯೂ, ಕಾಮರ್ಸ್ ಪತ್ರಿಕೆಯ ಸಂಪಾದಕರಾದ ಶ್ರೀ ಆರ್. ವಿ. ಮೂರ್ತಿಯವರು ಸ್ವಾಗತಾಧ್ಯಕ್ಷರಾಗಿಯೂ ಗ್ಲೋಬ ಏಜನ್ಸಿಯ ಶ್ರೀ. ಪಿ. ಎಸ್. ಜಿ. ರಾವ್ ಅವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಪ್ರಧಾನ ಕಾರ್ಯದರ್ಶಿ,
೩೪ ನೆಯ ಕನ್ನಡ ಸಾಹಿತ್ಯ ಸಮ್ಮೇಲನ
೭೫, ಲಕ್ಷ್ಮೀ ಬಿಲ್ಡಿಂಗ್ ಸರ್. ಪಿ. ಎಮ್ ರೋಡ್, ಮುಂಬಯಿ ೧.

ಉಡುಪಿ

ಮುನಿಸಿಪಲ್ ಸಭೆಯು ಇದೇ ತಾ 9 ರಲ್ಲು ಸಂಜೆ ಶ್ರೀ ಎಚ್. ಎನ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಸಭಾರಂಭದಲ್ಲಿ ಶ್ರೀಅರವಿಂದರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯವಾಯಿತು. ಮುನಿಸಿಪಲ್ ಮೆನೇಜರ್ ಶ್ರೀ ಕೆ. ರಾಘವೇಂದ್ರ ಕಾಮತರನ್ನು ತಾತ್ಕಾಲಿಕ ಕಮಿಶನರಾಗಿ ನೇಮಿಸಲಾಗಿದೆ ಎಂದು ಸೂಚಿಸಿದ ಸರಕಾರಿ ಆರ್ದರನ್ನು ರಿಕಾರ್ಡು ಮಾಡುವಾಗ ಅವರನ್ನು ಇನ್ನು ಮೂರು ವರ್ಷದ ವರೆಗೆ ಉಡುಪಿಯಲ್ಲೇ ಕಮೀಶನರಾಗಿ ಇರಗೊಡಿಸಬೇಕೆಂದು ಸರಕಾರವನ್ನು ವಿನಂತಿಸಲಾಯಿತು. ಸೆಂಟ್ರಲ್ ಬಾರ್ಡಿನ ಟೌನ್ ಪ್ಲಾನಿಂಗ್ ಸ್ಕೀಮಿನಂತೆ ಕೊಡೋಣಾದ ಟೇಕ್ಸು ನೋಟೀಸುಗಳ ಮೇಲೆ ಮಾಡಲಾದ ಅಪೀಲು ಅರ್ಜಿಗಳ ಇತ್ಯರ್ಥದ ಕುರಿತು ಕೌನ್ಸಿಲಿನಲ್ಲಿ ತುಂಬಾ ಚರ್ಚೆ ನಡೆದು ಕೊನೆಗೆ ಆ ದಿನದ ಸಭೆಯಲ್ಲಿಯೇ ಇತ್ಯರ್ಥಿಸಲಾದುವು.

ತಾಲೂಕು ಆಹಾರ ಸಮಿತಿ ಸಭೆಯು ಇದೇ ತಾ 9 ರಲ್ಲು ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಪಿ. ಎನ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ಸಪ್ಲೈ ಆಫೀಸರರು ಆಹಾರ ಧಾನ್ಯಗಳ ವರದಿಯನ್ನು ಓದಿದರು. ನಂತರ ಬೆಲ್ಲದ ಕಂಟ್ರೋಲ್ ಕುರಿತು ವಿಚಾರವಿನಿಮಯ ನಡೆಯಿತು. ಕೊನೆಗೆ ಅಕ್ಕಿ ಭತ್ತ ಪ್ರೊಕ್ಯೂರ್ ಮೆಂಟನಂತೆ ಬೆಲ್ಲವನ್ನೂ ಸಂಗ್ರಹಿಸಿ ಅಧಿಕೃತ ಏಜಂಟರ ಮೂಲಕ ಒಪ್ಪಿದ ವಿತರಣೆಯಾಗಬೇಕೆಂದೂ ಇಲ್ಲವೆ ಕಂಟ್ರೋಲ್ ತೆಗೆದು ಹಾಕಬೇಕೆಂದೂ ಸರಕಾರವನ್ನೂ ಪ್ರಾರ್ಥಿಸಲಾಯಿತು. ಬಳಿಕ ಆಹಾರ ಉತ್ಪಾದನಾ ಕಮಿಟಿ ಸಭೆಯೂ ಜರಗಿತು ತಾಲೂಕ-ಪ್ರೊಹಿಬಿಶನ್ ಎಡ್ವೈಸರಿ ಕಮಿಟಿ ಸಭೆಯೂ ತತ್ಪೂರ್ವದಲ್ಲಿ ಜರಗಿತು. ಪ್ರೊಹಿಬಿಶನ್ ಸಂಬಂಧಿಯ ಹಾಲತವಾಲೆಗಳನ್ನು ಡಿಪ್ಯೂಟಿ ಪ್ರೊಹಿಬಿಶನ್ ಆಫೀಸರರು ನಿವೇದಿಸಿದರು.

ಪೀಪ್ಲ್ಸ ಲೆಬೋರೇಟರಿ

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್ ಕಮಿಟಿಯು ಕಾಲೇಜ್ ಕಟ್ಟಡವನ್ನು ಜೂನಿನೊಳಗೆ ಪೂರೈಸುವ ಉದ್ದೇಶದಿಂದ ರಭಸದಿಂದ ಕೆಲಸ ನಡೆಸುತ್ತಲಿದೆ. ಸಾರ್ವಜನಿಕರೂ ಸ್ವಯಂ ಕೆಲಸಗಾರರಾಗಿ ದುಡಿಯುತ್ತಿರುವುದು ಪ್ರಶಂಸನೀಯವಾದ ಅಂಶ. 'ತನು, ಮನ; ಧನ'ಗಳಿಂದ ಕಾಲೇಜ್ ನಿರ್ಮಾಣ ನಿರ್ದಿಷ್ಟಕಾಲದಲ್ಲಿ ಆಗಿಯೆ ಆಗುತ್ತದೆಂಬುದನ್ನು ಸಮಿತಿಯು ಈವರೆಗೆ ಸಾಧಿಸಿದ ಪ್ರಗತಿಯಿಂದ ನಾವು ಊಹಿಸಬಹುದಾಗಿದೆ.

ಕಾಲೇಜಿನ ಲೆಬಾರೇಟರಿಗಾಗಿ ತಗಲುವ ರೂ 30000 ವನ್ನು ತಲಾ ಒಂದರ ಒಂದು ರುಪಾಯಿಯಂತೆ ಮೂವತ್ತು ಸಾವಿರ ಜನರಿಂದಲೇ ಸಂಗ್ರಹಿಸಿ, ಪೀಪ್ಲ್ಸ ಲೆಬೋರೇಟರಿ ಎಂದು ಹೆಸರಿಸುವ ಘನ ಉದ್ದೇಶವನ್ನಿಟ್ಟು ಕೊಂಡಿದೆ. ಈ ಯೋಜನೆಯಿಂದ-ಸಾಮಾನ್ಯ ಜನರು ತಮ್ಮ ಕಾಲೇಜಿಗೆ ವಿಶ್ವಾಸದ ಕೊಡುಗೆಯನ್ನು ನೀಡಬಹುದಾಗಿದೆ. ಮದ್ರಾಸಿನ ಅರ್ಥಮಂತ್ರಿ ಬಿ. ಗೋಪಾಲ ರೆಡ್ಡಿಯವರು ಕೂಡಾ ಒಂದು ರುಪಾಯಿ ಕಳಿಸಿರುತ್ತಾರೆ. ಹೆಚ್ಚಿನ ವಿವರ ಮುಂದ್ಕೆ ಕೊಡಲಾಗುವುದು.

The Pangal Nayak Bank Ltd., Katapadi.

ದಿ. ಪಾಂಗಾಳ ನಾಯಕ್ ಬೇಂಕ್ ಲಿ., ಕಟಪಾಡಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಿಜಿಸ್ಟ್ರೀ ನೋಟೀಸು ಕೊಟ್ಟಾಗ್ಯೂ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರಿನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಐವೇಜುಗಳನ್ನು ಇದೇ ತಾರೀಕು 18-12-1950ನೇ ಸೋಮವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಎಲ್ಲಾ ಚಿನ್ನಾಭರಣಗಳನ್ನು ಇದೇ ತಾರೀಕು 19-12-1950ನೇ ಮಂಗಳವಾರ ಮಧ್ಯಾಹ್ನ ಗಂಟೆ 3ಕ್ಕೆಯಾ ಬೇಂಕಿಗೆ ಯುಕ್ತತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಅಥವಾ ಸದ್ರಿ ಬೇಂಕಿನ ಇನ್ನಿತರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ತಿಳಿದಿರಲಿ.

ಲೋನು ನಂಬ್ರ	ಈಡಿಟ್ಟವರ ಹೆಸರು ಮತ್ತು ವಿಳಾಸ.
339/48	ರಾಮಣ್ಣ ಸೆಟ್ಟಿ, ದೂಮಣ್ಣ ಸೆಟ್ರ ಅಳಿಯ, ಕಾವೇರಿಸೆಡ್ಡಿ ಮನೆ, ಗುಡ್ಡೆ, ಪಾಂಗಾಳ ದ. ಕ.
1754/48	ತಂಗು ಪೂಜಾರ್ತಿ, ಅಮ್ಮು ಪೂಜಾರ್ತಿ ಮಗಳು, ಕೋಟೆ ಗ್ರಾಮ, ಕಟಪಾಡಿ, ದ. ಕ.
1862/48	ಕಾಳು ಪೂಜಾರಿ, ಸುಬ್ಬ ಪೂಜಾರಿ ಅಳಿಯ, ಮಟ್ಟು ಗ್ರಾಮ, ಕಟಪಾಡಿ, ದ. ಕ.
650/49	ಶೇಕ್ ಇಬ್ರಾಹಿಮ್ ಸಾಹೇಬ, ಶಾಬು ಸಾಹೇಬರ ಮಗ, ಕೋಟೆ ಗ್ರಾಮ, ಕಟಪಾಡಿ, ದ. ಕ.
574/48, 1865/48, 1847/49, 29/49 203/50 ಮತ್ತು 473/50	ಕೆ. ಜನಾರ್ಧನ ಆಚಾರ್ಯ, ವಾಸ್ತೇವ ಆಚಾರ್ಯರ ಮಗ, ಕೋಟೆಗ್ರಾಮ, ಕಟಪಾಡಿ, ದ. ಕ.
1236/49 ಮತ್ತು 1238/49	ಅಲ್ಬರ್ಟ್ ಮಾರ್ಟಿಸ್, ಅಂತೋನಿ ಮಾರ್ಟಿಸರ ಮಗ, ಶಂಕರಪುರ, ದ. ಕ.
1851/49	ಲೀಪಿಹೊಲ್ತಿ, ಕಾಳಿಹೊಲ್ತಿ ಮಗಳು, ಏಣಗುಡ್ಡೆ ಗ್ರಾಮ, ಕಟಪಾಡಿ, ದ. ಕ.

Office of the Bank
Katapadi S. K.
Dated 11—12—1950

P. S. Nayak,
AGENT.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O S. No 495/1945
R. I A 921/1950

ಮಹಮ್ಮಂದ್ ಯೂನೆ ಮಹಮ್ಮದ ಬ್ಯಾರಿ —ವಾದಿ, ಅರ್ಜಿದಾರ.

ಕಾಪೂರ ದೂಣಕ್ಕರಿ ಕುಂಞ್ಞಾದ ಮಗಳು ಕಾಸರಗೋಡು ತಾಲೂಕು ತೆಂಕು ತ್ರಿಕರ್ಪೂರ ಗ್ರಾಮದ ವೈಕಾಡ ವೈಲ್ ಎಂಬಲ್ಲಿರುವವಳು —ಪ್ರತಿವಾದಿಳು ರ‍ೆಸ್ಪಾಂಡೆಂಟಳು

ಪ್ರಿಲಿಮಿನರಿ ಡಿಕ್ರಿ ಕರ್ಣಪ್ರಕಾರ ಆಸ್ತಿಗಳು ಮಾರಾಟದ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ದಾಖಲ್ಲ ಮಾಡಿದ ಅರ್ಜಿಯು ತಾರೀಕು 21-12-1950ಕ್ಕೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Sd/. P. Ahmad
Advocate Pltff.

ಕಾಸರಗೋಡು 8-12-50

ಪ್ರಕಟಣೆ

ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿ ಕಟಪಾಡಿ ದ. ಕ. ಈ ಸಮಿತಿಯ ಆಡಳಿತೆಯಲ್ಲಿ ಪೂಜಾದಿ ವೈದೀಕ ಕಾರ್ಯಗಳನ್ನು ಮಾಡುವ ಬಗ್ಗೆ ನೇಮಕ ಮಾಡಿದ್ದ ಶ್ರೀ ಕೆ. ರಾಮಾನಂದ ಎಂಬವರು ಆಡಳಿತೆಯ ಶಿಸ್ತು ನಿಯಮಗಳಿಗೆ ಅವಿಧೇಯರಾಗಿ ವರ್ತಿಸಿದ್ದರಿಂದ ಆಡಳಿತೆ ಸಭೆಯ ನಿರ್ಣಯದ ಮೇರೆಗೆ ಸದ್ರಿಯವರನ್ನು ತಾ 29 10-1950ರಲ್ಲು ಸಮಿತಿಯ ಉದ್ಯೋಗದಿಂದ ತೆಗೆದು ಹಾಕಲಾಗಿದೆ. ಸಮಿತಿಯ ದೇವಸ್ಥಾನದ ಪರವಾದ ವರಾಡವಂತಿಗೆ, ಪೂಜಾ ಮೌಲ್ಯ, ಹರಿಕೆಕಾಣಿಕೆ ವಗೈರೆಗಳನ್ನು ಸದ್ರಿಯವರ ವಶ ಯಾರೂ ಕೊಡಬಾರದೆಂದು ಈ ಮೂಲಕ ತಿಳಿಸಿಯದೆ,

ಆಡಳಿತ ಕಮಿಟಿಯ ಅನುಮತಿಮೇರೆ
ಯು ಧಾದ್,
ಗೌರವ ಕಾರ್ಯದರ್ಶಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಮಿತ್ವ:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ದಮ್ಮು ಹೋದರೆ ತಿರುಗಿ ಬಾರದು
ಕಳೆದ ೩೮ ವರ್ಷದಮ್ಮಿಗೆ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ
ಪುರೋಹಿತ-ಶ್ವಾಸಹಾರಿ

ದಕ್ಷಿಣ ಕನ್ನಡ
ಮಂಗಳೂರು

ಶ್ರೀ ಗೀತಾಜಯಂತಿ— ಶ್ರೀ ಗೀತಾಮಂದಿರದ ವಾರ್ಷಿಕೋತ್ಸವವು ಗೀತಾಜಯಂತಿಯೊಂದಿಗೆ ಡಾ। ಎಮ್. ಶೇಷಗಿರಿ ಪೈಗಳ ಅಧ್ಯಕ್ಷತೆಯಲ್ಲಿ ಇದೇ ತಾ. 20ರ ಸಂಜೆ ಜರಗಲಿರುವುದು. ಮದ್ರಾಸಿನ ಸರಸ್ವತಿ ಸಂಘದ ಸ್ವಾಮಿ ಲಕ್ಷ್ಮಣಾನಂದಜಿ ಯವರು ಗೀತಾ ಪ್ರವಚನಮಾಡಲಿರುವರು. ಹರಿಕಥಾ ಕಾಲಕ್ಷೇಪದ ವ್ಯವಸ್ಥೆಯೂ ಮಾಡಲಾಗಿದೆ.

ಬೆಲ್ಲದ ಮಾರಾಟ— ಮಂಗಳೂರು ನಗರದಲ್ಲಿ 11ರೇಶನ್ ಅಂಗಡಿಗಳಲ್ಲಿ ಬೆಲ್ಲ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಕಾರ್ಡುದಾರರು ಈ ಪೈಕಿ ಯಾವ ಅಂಗಡಿಯಿಂದಲೂ ಬೆಲ್ಲ ಕೊಂಡುಕೊಳ್ಳಬಹುದಾಗಿದೆ.

ಕಲೆಕ್ಟರರಿಗೆ ಮನವಿ— 1944ರ ವರೆಗಾಯಿತ್ತು ಸಂಟ್ರಲ್ ಮತ್ತು ಕುರಿಯಗ ಲ್ಲಿ ಅಕ್ಕಿ ಒಪ್ಪಿಸುವ ಡಿಪೋಗಳಿದ್ದವು. ಈ ಅವನ್ನು ರದ್ದುಗೊಳಿಸಿ ಅಲ್ಲಿ ಹಾಕುತಿದ್ದವರು ಬಂಟ್ವಾಳಕ್ಕೆ 9-10 ಮೈಲು ಹೋಗಿ ಅಕ್ಕಿ ಒಪ್ಪಿಸುವ ಕಷ್ಟಕ್ಕೊಳಗಾಗಿದ್ದಾರೆ. ಆದುದರಿಂದ ಹಿಂದಿನ ರೀತಿಯ ವ್ಯವಸ್ಥೆಯನ್ನೇ ಮಾಡಿಕೊಡಬೇಕಾಗಿ ಆ ಗ್ರಾಮಸ್ಥರು ಜಿಲ್ಲಾ ಕಲೆಕ್ಟರರಿಗೆ ಮನವಿ ಮಾಡಿದ್ದಾರೆ.

ಮಂಗಳೂರು—ಮಂಗಳೂರು ನಗರದ ಸುತ್ತುಮುತ್ತಲಿನ ಗ್ರಾಮಗಳ ರೈತರು ನಗರದ ಪ್ರಧಾನ ರಸ್ತೆಗಳಲ್ಲಿ ಜಯಘೋಷ ಮಾಡುತ್ತಾ ಮೆರವಣಿಗೆಯಿಂದ ಕಲೆಕ್ಟರರ

ಕಚೇರಿಗೆ ಹೋಗಿ ತಮ್ಮ ಸಂಕಷ್ಟಗಳು ಮತ್ತು ಬೇಕುಬೇಕಾದ ಸುಧಾರಣೆಗಳನ್ನು ತಿಳಿಸುವಂತಹ ಮನವಿಯೊಂದನ್ನು ಮದ್ರಾಸು ಪ್ರಧಾನರಿಗೆ ಕಳುಹಿಸಿದ ಪ್ರತಿಯೊಂದನ್ನು ಕಲೆಕ್ಟರರಿಗೆ ಒಪ್ಪಿಸಿದರು.

ಮೂಲ್ಕಿ—ಮೂಲ್ಕಿ ಕೇಂದ್ರದ ಶಾಲೆಗಳ ಮಕ್ಕಳ ಆಟದ ಹಬ್ಬವು ಸ್ಥಳೀಯ ಬೋರ್ಡು ಹೈಸ್ಕೂಲಿನ ಆಟದ ಬಯಲಿನಲ್ಲಿ ಇದೇ ತಾ 16ನೇ ಶನಿವಾರ ಅಪರಾಹ್ಣ 3ಗಂಟೆಗೆ ಆಚರಿಸಲ್ಪಡುವುದು. ವಿದ್ಯಾರ್ಥಿಮಾನಿಗಳು ಬಂದು ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿಯವರ ವಿನಂತಿಯಿದೆ.

ಕುಂಬಳೆ—ಅಸ್ಸಾಂ ಸಂಕಷ್ಟ ನಿವಾರಣಾ ನಿಧಿಗೆ ಸ್ಥಳೀಯ ವಿಜಯ ಲಕ್ಷ್ಮಿ ಟಾಕೀಸಿನವರು ಇದೇ ತಾ. 3ರ ದೇಣಿಗೆಯಲ್ಲಿ ಸಂಗ್ರಹವಾದ ರುಪಾಯಿ1800/ನ್ನು ಸಹಾಯಧನವಾಗಿ ಕೊಟ್ಟಿರುತ್ತಾರೆ. ಸದ್ರಿ ಥಿಯೇಟರಿನಲ್ಲಿ ತಹಶಿಲ್ದಾರ್ ಶ್ರೀ ಸೂರ್ಯನಾರಾಯಣನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ಎಮ್. ಆರ್. ಪೂಂಜರು ಆ ಕಾಲ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಹಿರೇಬೆಟ್ಟು— ಪಟ್ಲ ಮಠ ಶ್ರೀ ಗಣಪತಿ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಿಂಗಳ ತಾ. 16ರಲ್ಲು ಪ್ರಾಯಸ್ಥರಿಗಾಗಿ ರಾತ್ರಿ ಶಾಲೆಯೊಂದು ತೆರೆಯಲ್ಪಟ್ಟಿದೆ. ಈಗಾಗಲೇ 26ಮಂದಿ ದಾಖಲಾಗಿರುವರು.

ಕಾರ್ಕಳ— ಇಲ್ಲಿಯ ಆಯುರ್ವೇದಿಯ ಚಿಕಿತ್ಸಾ ಸಂಸ್ಥೆಯಾಗಿರುವ ಡಾ। ಕೆ. ಸಿ. ಕೆ. ಉಪಾಧ್ಯಾಯರ ಶ್ರೀ ಕೃಷ್ಣ ಫಾರ್ಮಸಿಯಲ್ಲಿ ಇದೇ ತಾ 6ರಲ್ಲು ಧನ್ವಂತರಿ ಜಯಂತಿಯು ಉಡುಪಿಯ ಡಾ। ಎಸ್. ಆರ್ ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀಗಳಾದ ಬಿ. ಶಾಮರಾಯ ಸೆಟ್ಟಿ, ಡಿ. ವೆಂಕಟೇಶ ಭಟ್, ಬಿ. ಎಚ್. ಆಚಾರ್, ಕವಿ. N. ಉಪಾಧ್ಯಾಯ ಮೊದಲಾದವರು ಸಮಯೋಚಿತ ಮಾತುಗಳನ್ನಾಡಿದರು. ವಿದ್ವಾನ್ ಕೆ ನಂಜುನಾಥಯ್ಯ ಶ್ರೀ ಕೆ. ಕೆ. ಪುರಾಣಿಕರ ಪಕ್ಕವಾದ್ಯಗಳೊಂದಿಗೆ ವಿದ್ವಾನ್ ಬೆಳ್ಳೆ ಅನಂತರಾಮ ಉಪಾಧ್ಯಾಯರ ಸುಸ್ರಾವ್ಯ ಸಂಗೀತ ಕಚೇರಿ ನಡೆಯಿತು.

ಧರ್ಮಸ್ಥಳ—ದೀಪೋತ್ಸವದ ವೇಳೆ ವರ್ಷಂಪ್ರತಿಯೂ ಜರಗುವ ಸರ್ವಧರ್ಮ ಸಮ್ಮೇಳನವು ಈ ಬಾರಿ ಇದೇ ತಾ. 7 ಮತ್ತು 8ರಲ್ಲು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು. ಮೈಸೂರಿನ ಸಿದ್ಧಗಂಗಾ ಕ್ಷೇತ್ರದ ಮಠಾಧಿಪತಿ ಕುಮಾರ ಸ್ವಾಮಿಯವರು ಎರಡು ದಿವಸಗಳ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಎಸ್ ಧರಣೇಂದ್ರಯ್ಯ, ಎಮ್. ಜಿ ನಂಜುಂಡಾರಾಧ್ಯ, ಅ. ನ. ಕೃಷ್ಣರಾಯ್, ಎನ್. ಎಸ್. ಕಿಲ್ಲೆ, ಕೆ. ಸಿ. ವೆಂಕಪ್ಪಸೆಟ್ಟಿ, ಶಿವರಾಮ ಕಾರಂತ, ಎಸ್. ಕೃಷ್ಣಭಟ್ಟ, ಬಿ. ಶಂಕರ ಭಟ್, ಸ್ವಾಮಿದಾಸ ಮೊದಲಾದವರು ಉಪನ್ಯಾಸವಿತ್ತರು. ಎರಡನೆ ದಿನದ ಸಾಹಿತ್ಯ ಸಮ್ಮೇಲನವನ್ನು ಸಬ್ ಜಡ್ಜ್ ಶ್ರೀ ಸದಾಸಿವಯ್ಯನವರು ಉದ್ಘಾಟಿಸಿದರು. ಬಿ ಎಸ್. ರಾಜಯ್ಯಂಗಾರ್, ಮತ್ತು ಪಾರ್ಟಿಯವರ ಸಂಗೀತ ಕಚೇರಿಯು ಸಿ. ಕೆ. ನಾಗರಾಜ ರಾಯರ ನೇತೃತ್ವದಲ್ಲಿ ಬೆಂಗಳೂರಿನ ಯುನೈಟೆಡ್ ಆರ್ಟಿಸ್ಟ್‌ನವರ ಗದಾಯುದ್ಧ ನಾಟಕವೂ ಸಾಂಗವಾಗಿ ನಡೆಯಿತು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S 459/1949

ವಾದಿ— B N. ರೆಬೆಲ್ಲೊ

ಮತ್ತು

ಪ್ರತಿವಾದಿರು— N. ಚಂದಪ್ಪ ಹೆಗ್ಡೆ ಕೂಡಾ

ಇವರೊಳಗೆ

ಸದ್ರಿ 4 ನೇ ಪ್ರತಿವಾದಿ;— ಇಗ್ನೇಶಿಯಸ್ ಮಾರ್ಟಿಸ್—ಬಸ್ರೂರು ಮಾರ್ಟಿಸರ ಮಗ—ಉಡುಪಿ ತಾಲೂಕು ಉಪ್ಪಿನಕುದ್ರು ಗ್ರಾಮ ಇವರಿಗೆ—

ವಾದಿಯು ಹಿರಿಯ ಪಿಲಿಪ್ ಫೆರ್ನಾಂಡಿಸರು ತಾರೀಕು 9-11-1905 ರಲ್ಲು ಬರೆದಿಟ್ಟ ವೀಲುನಾಮೆ ಪ್ರಕಾರ ಹರಿಯಾಯದ ಮೇರೆ ತಾರೀಕು 17-5-1872 ನೇ ಮೂಲಗೇಣಿ ಚೀಟಿಗೆ ಕಾರಣವಾದ ಆಸ್ತಿಗಳನ್ನು ನೀವು ಕೂಡಾ ಪ್ರತಿವಾದಿರು ಕಳೆದ ತಾರಣ ಸಂವತ್ಸರದಲ್ಲಿ ಸ್ವಾಧೀನರಾಗಿ ಅನುಭವಿಸಿದ್ದ ಬಾಬ್ತು ಬಾಕಿ ಕೊಡುವಿಕೆ ಐವೇಜನ್ನು ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಮೊಕದ್ದಮೆಯು ತಾರೀಕು 18-12-50 ಕ್ಕೆ ಮುಲ್ತವಿದ್ದರಿಂದ ಅದಿವ್ಸ ಪೂರ್ವಾಹ್ನ 15 ಘಂಟೆಗೆ ಹಾಜರ್ಪಾಗಿ ಜ್ವಾಹೀರು ಮಾಡಿಕೊಳ್ಳಬಹುದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಬಹುದು.

K Ramakrishna Rao.
Vakil for Plaintiff

ಉಡುಪಿ, ತಾರೀಕು 6-12-50

ಯಂತ್ರ ಸಾಮಗ್ರಿ

ಸಣ್ಣ ದೊಡ್ಡ ಉದ್ಯೋಗಗಳಿಗೆ ಬೇಕಾದ ಇಂಜಿನ್, ರೈಸಮಿಲ್, ಟೈಲ್ ಮಿಲ್, ಆಯಿಲ್ ಮಿಲ್ ವಗೈರೆಗಳ ಬಗ್ಗೆ ಉತ್ಕೃಷ್ಟಸಂಗ್ರಹ

The Vijay Engineering Co. Ltd., Bombay—10

ಪ್ರಾಮಾಣಿಕ ದೃಢ ವಿಶ್ವಾಸ ಪಾತ್ರ

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಕುಟುಂಬದ ಬ್ಯಾಂಕರರು ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ದಿ ಹಿರಿಯಡ್ಕ ಯೆಜ್ಯುಕೇಶನಲ್ ಸೊಸೈಟಿ,
ರಿಜಿಸ್ಟರ್ಡ್ ನಂಬ್ರ 8/1950.

ಸದ್ರಿ ಸೊಸೈಟಿಯು 30-9-50ಕ್ಕೆ ಅಂತ್ಯವಾಗುವ ವರದಿಯ ವರ್ಷದಲ್ಲಿ ಹಿರಿಯಡ್ಕ ಕೇಂದ್ರದ ವಿದ್ಯಾರ್ಥಿಗಳಿಗೆ ಪ್ರೌಢಶಿಕ್ಷಣದ ವ್ಯವಸ್ಥೆಯ ಬಗ್ಗೆ ಒಂದು ಹೈಸ್ಕೂಲನ್ನು ಸ್ಥಾಪಿಸಿರುತ್ತದೆ. ಸದ್ರಿ ಸೊಸೈಟಿಗೆ ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಅವರ ಹೆಸರುಗಳ ಮುಂದುಗಡೆ ವಿವರಿಸಿದಂತೆ ಧನಸಹಾಯವಿತ್ತು ಮೆಂಬರರಾಗುವ ಆಶ್ವಾಸನೆ ಮೇರೆಗೆ ರಿಜಿಸ್ಟ್ರಿ ಮಾಡಲ್ಪಟ್ಟಿರುತ್ತದೆ. ವಾಗ್ದಾನ ಮತ್ತು ವಸೂಲಿಯ ವಿವರವು ಈ ಕೆಳಗಿನಂತಿರುತ್ತದೆ

ಶ್ರೀಗಳಾದ	ರೂ	ಶ್ರೀಗಳಾದ	ರೂ.
1 ಶ್ರೀ ಶ್ರೀ ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳವರು "ವಿದ್ಯಾವಲ್ಲಭ" ಪುತ್ತಿಗೆ ಮಠ	15000	21 ದುಗ್ಗಪ್ಪ ಶೆಟ್ಟಿ	505
2 ಮರ್ಣೆಡಿ ಜಗನ್ನಾಥ ಹೆಗ್ಡೇರು	501	22 ಮಾಣ್ಯಾ ತಿಮ್ಮಾಪುರಿ ಅಂತಯ್ಯ ಶೆಟ್ಟಿ	505
3 ಕೆ. ನರಸಿಂಹ ಕಾಮತ್	505	23 ಪರೀಕ ಕೃಷ್ಣಯ್ಯ ಶೆಟ್ಟಿ	505
4 ಬಿ. ವಿಠಲಹೆಗ್ಡೇರು	501	24 ಬಡಗಬೆಟ್ಟು ಬಾಬಹೆಗ್ಡೇರು	251
5 ಬಿ. ಚಂದಯ್ಯ ಹೆಗ್ಡೇರು	505	25 ಕೊಲ್ಲಾರು ಬೊಮ್ಮಯ್ಯ ಶೆಟ್ಟಿ	255
6 ಕೆದಿಂಜೆ ಹೊನ್ನಯ್ಯ ಹೆಗ್ಡೇರು	501	26 ಜಗನ್ನಾಥಶೆಟ್ಟಿ ಕೊಲ್ಲಾರು	250
7 ಕೆ. ಮಹಾಬಲ ಹೆಗ್ಡೇರು	505	27 ಶ್ರೀಮತಿ ಅಕ್ಕು ಯಾನೆ ಸೀತಮ್ಮ ಹೆಗ್ಗಡ್ತಿ ಹಿರೇಬೆಟ್ಟು	501
8 ಟಿ. ರಮಾನಾಥ ಪೈಗಳು	505	28 ಅತ್ರಾಡಿ ವೆಂಕಯ್ಯ ಹೆಗ್ಡೇರು	251
9 ಅಂಜಾರು ಮಂಜಯ್ಯ ಹೆಗ್ಡೇರು	250	29 ಕೊಲ್ಲಾರು ಭೋಜರಾಜಶೆಟ್ಟಿ	251
10 ಮುತ್ತೂರು ಮಹಾಬಲಹೆಗ್ಡೇರು	505	30 ಎ. ವಿಶ್ವನಾಥ ಶಾಸ್ತ್ರಿಯವರು	251
11 ಯಚ್ ಸದಾಶಿವರಾವ್	250	31 ಪುತ್ತಿಗೆ ಮೊಯಿದಿನಕುಟ್ಟಿಸಾಹೇಬರು	501
12 ಶ್ರೀಮತಿ ಸುಶೀಲಾಬಾಯಿ ಮೋಹನ್	251	32 ಪುತ್ತಿಗೆ ಅಬ್ದುಲ್ ಕರೀಮ್ ಸಾಹೇಬರು	251
13 ಎಚ್. ಶೀನಪ್ಪ	251	33 ಕಣಂಜಾರು ಶೀನಪ್ಪಹೆಗ್ಡೇರು	251
14 ಎ. ಜಗಂಜೀವ ಆಳ್ವರು	501	34 ಬೈರಂಜೆ ಅಂತಯ್ಯ ಶೆಟ್ಟಿ	505
15 ಬ್ರಹ್ಮಾವರ ಮುತ್ತಣ್ಣ ಮನೆಯವರಿಂದ	501	35 ಯಚ್. ಕೆ. ಅನಂತಯ್ಯ	251
(ಹಂಚು 501ರೂಪಾಯಿ ಬೆಲೆಯದ್ದು)		36 ಅಳುಗ್ಗೆಲು ಶ್ರೀನಿವಾಸಯ್ಯ	251
16 ಹಿರೇಬೆಟ್ಟು ಅಕ್ಕು ಯಾನೆ ಸೀತಮ್ಮ ಹೆಗ್ಗಡ್ತಿರ ಬಗ್ಗೆ ವಕೀಲ್ ತಿಮ್ಮಪ್ಪ ಹೆಗ್ಡೇರು	501	37 ಶೀ ಶ್ರೀ ಶಾಣೀರು ಮಠದ ಶ್ರೀಮದ್ ವಿದ್ಯಾಸಮುದ್ರತೀರ್ಥ ಶ್ರೀಪಾದಂಗಳವರು	501
17 ಮಾಂಬೆಟ್ಟು ನಾರಾಯಣಹೆಗ್ಡೇರು	505	38 ಬಸ್ತಿ ದೇವರಾಯ ಪೈಗಳು	250
18 ಬಾಳ್ಕಟ್ಟಬೀಡು ರುಕ್ಮಿಣಿಹೆಗ್ಗಡ್ತಿ	505	39 ಕಾಪ್ಯಾಡಿ ಶೇಖರಶೆಟ್ಟಿ	505
19 ಬಾಳ್ಕಟ್ಟಬೀಡು ಪ್ರೇಮಣಿ ಹೆಗ್ಗಡ್ತಿ	505	40 ಚೆಪ್ಪೇಲಿ ಸುಬ್ಬಯ್ಯಹೆಗ್ಡೇರು	501
20 ಲಕ್ಷ್ಮೀನಾರಾಯಣಾಚಾರ್ಯ ಅಂಜಾರು ಮಠ	505	41 ಹಿಂತಿಬೆಟ್ಟು ವಾದಿರಾಜಹೆಗ್ಡೇರು	251
		42 ವೆಂಕಟೇಶ ಮಲ್ಯರು	501
		43 ಬಸ್ತಿ ಶ್ರೀನಿವಾಸ ಪೈಗಳು	255

ಜುಮ್ಲಾ ವಾಗ್ದಾನ ರೂ: 31852-0-0

ತಾ 30-9-50ಕ್ಕೆ ಅಂತ್ಯವಾಗುವ ವರದಿಯ ವರ್ಷದಲ್ಲಿ ಸೊಸೈಟಿಯ ಜಮಾ ಖರ್ಚುಗಳ ತಪಶೀಲು ಈ ಕೆಳಗಿನಂತಿರುತ್ತದೆ.

ಜಮಾ

30-9-50ಕ್ಕೆ ಸದ್ರಿ ಮೇಲ್ಕಾಣಿಸಿದ ಮೆಂಬರರಿಂದ ಜಮಾ ರೂಪಾಯಿ	10194- 8 0
ಸೊಸೈಟಿಯ ಮೆಂಬರರು ಕೆಲವರಿಂದ ಠೇವಣಿಯ ಜಮಾ ,,	4180-11-0
ಜುಮ್ಲಾ	14375- 3-0

ಖರ್ಚು

ಹೈಸ್ಕೂಲ್ ಕಟ್ಟಡ ಕಟ್ಟಿಸುವ ಜವಾಬ್ದಾರಿ ಬಗ್ಗೆ ದ. ಕ. ಜಿಲ್ಲಾ ಬೋರ್ಡಿನಲ್ಲಿ ಡಿಪೋಜಿಟಾಗಿ ಇಟ್ಟ ಐವೇಜು.	10000- 0-0
ಹೈಸ್ಕೂಲ್ ಉಪಯೋಗದ ಫರ್ನಿಚರ್ ಮತ್ತು ಇತರ ಸಾಮಾನುಗಳು, ರಿಜಿಸ್ಟ್ರಿ ಖರ್ಚು, ಪ್ರಯಾಣ ಖರ್ಚು ಕೂಡಾ ಜಮ್ಲಾ ಖರ್ಚು ರೂ.	4288- 9 6
ಬೇಂಕಿನಲ್ಲಿ ಶಿಲ್ಕು ,,	65- 2-0
ಕೈಯಲ್ಲಿ ಶಿಲ್ಕು ,,	21- 7-6
ಜುಮ್ಲಾ	14375- 3-0

ದಿ ಯೆಜ್ಯುಕೇಶನಲ್ ಸೊಸೈಟಿಯ ಅರ್ಜಿಯಂತೆ ಮಾನ್ಯ ದ. ಕ. ಜಿಲ್ಲಾ ಬೋರ್ಡಿನವರು ಹೈಸ್ಕೂಲಿಗೆ ಕಟ್ಟಡ ಮಾಡಿಸಿಕೊಡುವ ಶರ್ತದ ಮೇಲೆ ಕಳೆದ ಜೂನ್ ತಿಂಗಳಲ್ಲಿ ಹೈಸ್ಕೂಲನ್ನು ಪ್ರಾರಂಭಿಸಿರುತ್ತಾರೆ. ಈ ವಿಚಾರದಲ್ಲಿ ಸೊಸೈಟಿಯ ಬೇಡಿಕೆಯನ್ನು ಮನ್ನಿಸಿ ಹೈಸ್ಕೂಲಿಗೆ ಒಪ್ಪಿಗೆಯನ್ನಿತ್ತ ಮಾನ್ಯ ಡಿಸ್ಟ್ರಿಕ್ಟ ಬೋರ್ಡಿನವರಿಗೂ ವಿದ್ಯಾ ಇಲಾಖೆಯ ಅಧಿಕಾರಿಗಳಿಗೂ ಸೊಸೈಟಿಯು ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತದೆ. ಅಲ್ಲದೆ ಸೊಸೈಟಿಯ ಅಧ್ಯಕ್ಷರಾದ ಉಡುಪಿ ಶ್ರೀಕೃಷ್ಣ ದೇವಸ್ಥಾನದ ಪರ್ಯಾಯದಲ್ಲಿ ತೇಜೋಮಯ ಯತಿವರ್ಯರಾದ ಶ್ರೀ ಪುತ್ತಿಗೆ ಮಠದ ಶ್ರೀಶ್ರೀ ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳು "ವಿದ್ಯಾವಲ್ಲಭ" ಸ್ವಾಮಿಯವರ ನೇತೃತ್ವದಲ್ಲಿ ಸ್ವಾಮಿಜಿಯವರ ಉದಾರಹಸ್ತದ ಕೃಪಾಕಟಾಕ್ಷದಿಂದ ಸದ್ರಿ ಸೊಸೈಟಿಯು ದೀರ್ಘಾಯುವಾಗಿ ಬಾಳಿ ಅದರ ಉದ್ದೇಶವನ್ನು ಯಶಸ್ವಿಯಾಗಿ ಪೂರೈಸಗೊಳಿಸಲೆಂದು ಹಾರೈಸುತ್ತದೆ ಮತ್ತು ಇತರ ಸಾರ್ವಜನಿಕರೂ ವಿದ್ಯಾದಾನದ ಮಹತ್ಕಾರ್ಯಕ್ಕೆ ಉದಾರಹಸ್ತದಿಂದ ಧನಸಹಾಯವಿತ್ತು ಪ್ರೋತ್ಸಾಹಿಸಬೇಕಾಗಿ ಹಿರಿಯಡ್ಕ ಯೆಜ್ಯುಕೇಶನಲ್ ಸೊಸೈಟಿಯು ವಿನಂತಿಮಾಡಿಕೊಳ್ಳುತ್ತದೆ

ತಾ 30-9 50 ರ ಅನಂತರದ ವಾಗ್ದಾನ ವಗೈರೆ ತಪ್ಸೀಲನ್ನು ಮುಂದಕ್ಕೆ ಪ್ರಕಟಿಸಲಾಗುವುದು

ಹಿರಿಯಡ್ಕ

B Chandaya Hegde,
ಕಾರ್ಯದರ್ಶಿ.

ಏಲಂ ನೋಟೀಸು

ಉಡುಪಿ ಶ್ರೀ ಕಾಣಿಯೂರು ಮಠದ ಬಾಬ್ತು ಮರಗಳು, ಕಟ್ಟಿಗೆ ಉಪಯೋಗದ ಕಾಡನ್ನು ಸಹಾ ಈ ಕೆಳಗೆ ವಿವರಿಸಿದಂತೆ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ.

ಕಾಡು ವಾ ಮರ ಯುರುವ ಗ್ರಾಮ	ಸರ್ವೆ ನಂಬ್ರ ವ ವಿಸ್ತೀರ್ಣ	ಮರಗಳ ವಿವರ	ಸ್ಥಳ ವಾ ತಾರೀಖು
1) ಪುತ್ತೂರು ತಾಲೂಕು ಕಾಣಿಯೂರು ಗ್ರಾಮ	25 2-4-128	ಸಾಗುವಾನಿ ಮರಗಳು 20	ಪುತ್ತೂರು ತಾಲ್ಲೂಕು ಕಾಣಿಯೂರು ಗ್ರಾಮದ ಕಾಣಿಯೂರು ಮಠದಲ್ಲಿ ತಾ. 5-11-50ಕ್ಕೆ ಅಪರಾಹ್ನ ಘಂಟೆ 2-30ಕ್ಕೆ
2) ಉಡುಪಿ ತಾಲೂಕು ಮಣಿಪುರ ಗ್ರಾಮ	161ರಲ್ಲಿ 4ಎಕ್ರೆ ವಿಸ್ತೀರ್ಣ	ಕಾಡುಜಾತಿ ಕರಿ ಮರ ವಗೈರೆ ಕಟ್ಟಿಗೆ ಉಪಯೋಗದ ಮರಗಳು ಮಾತ್ರ	ಮಣಿಪುರ ಗ್ರಾಮದ ಸದ್ರಿ ಸ್ಥಳದಲ್ಲಿ ತಾ. 7-1-51ಕ್ಕೆ ಅಪರಾಹ್ನ ಘಂಟೆ 2-30ಕ್ಕೆ
3) ಉಡುಪಿ ತಾಲೂಕು ಬೆಳ್ಳೆಗ್ರಾಮ	195ರಲ್ಲಿ / 1 10ಎಕ್ರೆ ವಿಸ್ತೀರ್ಣ	ಡಿ.	ಬೆಳ್ಳೆಗ್ರಾಮದ ಸದ್ರಿ ಸ್ಥಳದಲ್ಲಿ ತಾ. 8-1-51ಕ್ಕೆ ಅಪರಾಹ್ನ ಘಂಟೆ 2-30ಕ್ಕೆ

1) ಏಲಂ ಶರ್ತಗಳನ್ನು ಏಲಂ ನಡಿಯುವ ಆಯಾಯ ಸ್ಥಳದಲ್ಲಿ ಏಲಂ ನಡಿಸುವ ಮುಂಚೆ ಹೇಳೋಣಾಗುತ್ತದೆ. ಅದರಂತೆ ಏಲಂದಾರರು ನಡಿಯತಕ್ಕದ್ದು.

2) ಕಾರಣಾಂತರದಿಂದ ಸದ್ರಿ ಏಲಮನ್ನು ರದ್ದುಪಡಿಸುವದೇ ಸದ್ರಿ ಏಜಂಟರಿಗೆ ಸಂಪೂರ್ಣ ಅಧಿಕಾರವಿರುತ್ತದೆ.

ತಾ. 5-12-50, ಬಿ. ಅನಂತಕೃಷ್ಣಾಚಾರ್ಯ,
ಮೊಕ್ಕಾಂ ಮಂಗ್ಳೂರು ಕಾಣಿಯೂರು ಮಠದ ಜನರಲ್ ಏಜಂಟ್

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.



Highly perfumed and medicated, worth using daily by one and all keeps hair black and relieves head-ache etc.

TRADE MARK

Mnufcture d by:-

Swadeshi Oushadhi Bhandara (Regd.)

KUJAL P. O. Brahmavar, S. K.

ಸ್ವೀಕಾರ-ವಿಮರ್ಶೆ

೧ ಉದಯ (ರಾಷ್ಟ್ರೀಯ ವಾರಪತ್ರಿಕೆ) ಸಂಪಾದಕರು ಎಂ. ಎಸ್. ಶ್ರೀನಿವಾಸ ರಾವ್ ಬೆಂಗಳೂರು 2, ವಾ ಚಂದಾ ರೂ 7

ಮೈಸೂರಿನ ರಾಜಕೀಯದ ಕುರಿತಾದ ಟೀಕೆ ಟಿಪ್ಪಣಿಗಳೇ ಈ ಪತ್ರಿಕೆಯ ವೈಶಿಷ್ಟ್ಯ. ಅಲ್ಲಿಯ ರಾಜಕಾರಣಿಗಳಿಗೆ 'ಉದಯ' ಸರಿಯಾದ ಮಾರ್ಗದರ್ಶನ ಮಾಡುತ್ತಲಿದೆ.

2 Third Annual Report of the working of **The Bombay union of journalists** ಮುಂಬಯಿಯ ಪತ್ರಿಕಾ ಕರ್ತರ ಸಂಘದ ಮೂರನೆಯ ವರ್ಷದ ವರದಿ.

ಪತ್ರಿಕೋದ್ಯೋಗಿಗಳು ಸಾಂಘಿಕವಾಗಿ ಸಾಧಿಸಿದ ಕಾರ್ಯಕಲಾಪಗಳನ್ನು ಇಲ್ಲಿ ಕೊಡಲಾಗಿದೆ. ಮುಂಬಯಿಯ ಪತ್ರಿಕಾ ಕರ್ತರು ಒಂದುಗೂಡಿ ಉತ್ತಮ ಆದರ್ಶವನ್ನಿಟ್ಟುಕೊಂಡು ಮುಂದೆ ಸಾಗುತ್ತಲಿದ್ದಾರೆ: ಹೀಗೆ ಒಂದು ಸಂಘ ಕೆಲಸ ಮಾಡುವದರಿಂದ ಪತ್ರಿಕಾ ಕರ್ತರ ಜೊತೆ— ಯೋಗಕ್ಷೇಮ—ಸರಕಾರದೊಡನೆ ಸಂಪರ್ಕ ಮೊದಲಾದವುಗಳನ್ನು ವಿಮರ್ಶಿಸುವದಕ್ಕೆ ತುಂಬ ಅನುಕೂಲವಾಗುತ್ತದೆ. ಈ ವರದಿಯಲ್ಲಿ ವರ್ಷದಿಂದ ವರ್ಷಕ್ಕೆ ಕಾಣುವ ಪ್ರಗತಿಯು ಕಾರ್ಯದರ್ಶಿಗಳಾದ ಯು. ಜಿ. ರಾವ್, ಸಾಮ್ಯುವೆಲ್ ಕಾಸ್ಟಲಿನೋರವರ ಕಾರ್ಯದಕ್ಷತೆಯನ್ನು ಸೂಚಿಸುತ್ತದೆ.

3 **Bulletin** (ಇಂಗ್ಲಿಷ್) ಸಂಪಾದಕ ಮತ್ತು ಪ್ರಕಾಶಕರು ಕೆ. ಗೋಪಾಲನ್, ಸೆಕ್ರಿಟರಿ ಇಂಡಿಯನ್ ಸೆಂಟ್ರಲ್ ಕೋಕನಟ್ ಕಮಿಟಿ ಎರ್ನಾಕುಳಂ. ಬಿಡಿ ಪ್ರತಿ 0-0-6. ವಾ. ಚಂದಾ 0-6-0 ಆಣೆ.

ತೆಂಗಿನ ಮರವೆಂದರೆ 'ಕಲ್ಪವೃಕ್ಷ'ವೆನುವ ಕಲ್ಪನೆಯುಂಟು. ತೆಂಗಿನ ಮರದ ಪ್ರತಿಯೊಂದು ಭಾಗವೂ ಎಷ್ಟು ಉಪಯೋಗಕಾರಿಯೆಂಬುದನ್ನು Bulletin ನಿಂದ ನೀವು ತಿಳಿದುಕೊಳ್ಳಬಹುದು. ಅದರ ಹುಟ್ಟು ಬೆಳವಣಿಗೆ ಪಸ್ತು, ಆದಾಯ ಎಲ್ಲ ವಿಭಾಗಗಳ ಮೇಲೂ ವಿಚಾರಾತ್ಮಕ ಸಲಹೆಗಳಿವೆ. ಇದರ ಬೆಲೆಯೂ ತೀರ ಕಡಿಮೆ. ತೆಂಗಿನ ತೋಟದ ವ್ಯವಸಾಯಿಗಳು ಇದರ ಲಾಭವನ್ನು ಅವಶ್ಯವಾಗಿಯೂ ಪಡೆಯಬೇಕು.

4 ಮಿತ್ರ (ದ್ವಿತೀಯ ವರ್ಷದ ವಿಶೇಷ ಸಂಚಿಕೆ; ಸಂಪಾದಕರು: ಗುಂಡ್ಡ ಸುಬ್ಬರಾವ್, ಎಂ. ಎಸ್. ರಾಮರಾವ್ ಅಂಚೆ ಕಟ್ಟೆ, ಕೆ. ಅಚ್ಯುತ ರಾವ್, ಕರಿಮನೆ. ಶಾಂತಿಗ್ರಾಮ, ಜಯಪುರ [ಮೈಸೂರು]

ಮಲೆನಾಡಿನ ಅಭಿವೃದ್ಧಿಯನ್ನೂ ಸುಧಾರಣೆಯನ್ನೂ ಬಯಸುವ ಈ 'ಮಿತ್ರ' ನಿಜವಾಗಿಯೂ ಮಲೆನಾಡಿನ ಮಿತ್ರನೇ ಆಗಿರುತ್ತಾನೆ. ಮಲೆನಾಡಿನ ಆರಣ್ಯ ಸಂಪತ್ತೂ ಅಲ್ಲಿನ ಜನದ ಸ್ಥಿತಿಯು ಯಾವುದೇ ದೇಶಪ್ರೇಮಿಯ ಮನ ನೋಯಿಸದೆಯಿರದು. ನಮ್ಮದೇ ಸರಕಾರ ಬಂದಮೇಲೂ ಮಲೆನಾಡಿನ ಸುಧಾರಣೆ, ಯೋಜನೆಯಲ್ಲೇ ಕೂತಿರುವುದು ಶೋಚನೀಯ. ಮಲೆನಾಡಿನ ಕುರಿತಾಗಿ ಬರೆದ 'ಮಲೆನಾಡಿನ ಅಭಿವೃದ್ಧಿ ಯೋಜನೆ' 'ಶ್ರೀ ಪಿ. ಎಚ್. ಕೃಷ್ಣರಾಯರ ಭಾಷಣ' 'ಆಹಾರ ನಿಯಂತ್ರಣ...' 'ನೂಲುವ ಮಂಡಲಿಗಳ ಯೋಜನೆ' 'ಮಲೆನಾಡಿನ ಅಭಿವೃದ್ಧಿ' ಮುಂತಾದ ಬರಹಗಳು ಅತ್ಯಮೂಲ್ಯವಾಗಿವೆ. ಮಲೆನಾಡಿನ ಏಳಿಗೆಗೆ ಅಹರ್ನಿಸಿ ದುಡಿಯುತ್ತಿರುವ ಶ್ರೀಭಿಡೆಯವರ ಕಾರ್ಯಕ್ಕೆ ಮಿತ್ರ ಬೆಂಬಲಿಗನಾಗಿರಲಿ!

5 **Speeches by Netaji Subhas Chandra Bose** (ಇಂಗ್ಲಿಷ್) ಪ್ರಕಾಶಕರು ಅಜಾದ ಪಬ್ಲಿಕೇಶನ್ಸ್ ಆಕ್ಟ್ರೀಯ ಜನರಲ್ ಏಜೆನ್ಸಿ, 34 ನರಸಿಂಹರಾಜರೋಡ್, ಬೆಂಗಳೂರು 2 ಬೆಲೆ 0-12-0

ಭಾರತದೇಶದ ಸ್ವಾತಂತ್ರ್ಯದ ಕೀರ್ತಿ ಮಹಾತ್ಮ ಗಾಂಧೀಜಿಯವರಿಗೆಷ್ಟು ಸಲ್ಲುತ್ತದೋ ನೇತಾಜಿಗೂ ಅಷ್ಟೇ ಸಲ್ಲಬೇಕು. ಬ್ರಿಟಿಷರ ಕಪಿಮುಷ್ಟಿಯಿಂದ ಮುಕ್ತಗೊಳ್ಳುವದೊಂದೇ ಸ್ವಾತಂತ್ರ್ಯದ ದಾರಿಯೆಂದು ನೇತಾಜಿ ಯೋಚಿಸಿ, ಕ್ರಾಂತಿ ಪಥದಲ್ಲಿ ಮುನ್ನಡೆದರು, ಅವರ ಅನುಯಾಯಿಗಳಾಗಿ ಅರುವತ್ತು ಸಾವಿರ ಜನ ದೇಶಕ್ಕಾಗಿ ತ್ಯಾಗಮಾಡಲು ಕೈ ತೊಟ್ಟರು. ಗಾಂಧೀಜಿಯ ಅಹಿಂಸಾವಾದಕ್ಕೆ ಇದು ವಿರುದ್ಧವಾದರೂ ಬ್ರಿಟಿಷರನ್ನು ದಿಗಿಲುಗೊಳಿಸಿ, 'ಸ್ವಾತಂತ್ರ್ಯ ಕೊಟ್ಟು ನಾವು ಹೋಗುವುದಂಲ್ಲೇ ಕ್ಷೇಮ_' ಎನುವ ಭಾವನೆ ನೇತಾಜಿಯಿಂದಾಯಿತು. ಭಾರತದ ದೇಶದ ಜನದ ಸ್ವಾತಂತ್ರ್ಯಾಭಿಲಾಷೆಯ ಕಿಚ್ಚನ್ನು ನೇತಾಜಿ ತೋರಿಸಿದರು. ಹಲವಾರು ಜಾತಿಗಳಿಂದ ಕೂಡಿದ ಸ್ವಾತಂತ್ರ್ಯವೀರರ ಈ ಕೂಟ ನೇತಾಜಿಯವರ ಧುರೀಣತ್ವದಲ್ಲಿ ಒಂದೇ ಕುಟುಂಬವೆಂದು ಭುಜಕ್ಕೆ ಭುಜಕೊಟ್ಟು ಹೋರಾಡಿತು. ನೇತಾಜಿ 1945ರಲ್ಲಿ "...... In my power to serve the interests of 38 Crores of my Country men and fight for their liberation. I appeal to you, in conclusion to cherish the same optimism as myself and to believe, like myself that the darkest how always preceds the dawan. India shall be free and before long!...... you give me your blood, I shall get you freedom this is the demand of liberty." ನುಡಿದ ಈ ವೀರಘೋಷ 1947ರಲ್ಲಿ ಸತ್ಯವಾಯಿತು. ಆದರೆ ನೇತಾಜಿಯನ್ನು ನೋಡುವ ಸೌಭಾಗ್ಯ ಸ್ವತಂತ್ರ ಭಾರತಕ್ಕಿಲ್ಲ. ಅವರ ದೇಶಪ್ರೇಮ_ ತ್ಯಾಗ_ ಮುನ್ನೋಟ ಅಸದೃಶವಾದುದು! ಈ ಪುರುಷನ ಸಂದೇಶದಂತಿರುವ ಈ ಪುಸ್ತಕ ಇಷ್ಟರಲ್ಲೇ ಎರಡನೇ ಆವೃತ್ತಿಯನ್ನು ಕಂಡುದರಲ್ಲಿ ಆಶ್ಚರ್ಯವೇನಿಲ್ಲ. ಪ್ರತಿಯೊಬ್ಬ ದೇಶಪ್ರೇಮಿಯೂ ಆಗಿ ಹೋದ ಭಾರತದ ವೀರ ಯೋಧನ ಉಜ್ವಲವಾದ ಈ ಘೋಷವನ್ನು ಓದಲೇಬೇಕು!

—ಎಸ್ಸೆಲ್

ವಿವಿಧ ಪಾತ್ರೆಗಳು

ಯಾವತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ-ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ವಾರದ ಹರಟೆ

'ಯು. ವಿ.'

ಪ್ರಿಯ ವಾಚಕರೇ,

ನೀವು ವಾರ ಪತ್ರಿಕೆಗಳಲ್ಲಿ, ವಾರದ ಕತೆ ಓದಿರಬಹುದು, ವಾರದ ಭವಿಷ್ಯ ನೋಡಿರಬಹುದು. ವಾರದ ಹರಟೆ ಕೇಳಿರಬಹುದೇ? ಇಲ್ಲ. ಕೇಳಿರಲಿಕ್ಕಿಲ್ಲ. ನಿಮಗೆ ಇಷ್ಟವಿದ್ದರೆ ವಾರಕ್ಕೊಂದು ಅರ್ಧ ತಾಸು ನಿಮ್ಮೊಡನೆ ಸ್ವಲ್ಪ ಹರಟೆ ಹೊಡೆಯಬೇಕೆಂದು ನಾನು ನಿಶ್ಚಯಿಸಿದ್ದೇನೆ. ವಿಷಯ ಯಾವುದೆಂದು ಕೇಳಬೇಡಿ. ವಿಷಯವೆಂದಿಟ್ಟುಕೊಂಡು ಬರೆದರೆ ಅದನ್ನಾರೂ ಹರಟೆ ಎನ್ನುವದಿಲ್ಲ. ಬರೆಯುತ್ತಾ ಹೋದಂತೆ ವಿಷಯಗಳು ತಾವಾಗಿ ಬರುತ್ತವೆ. ವಿಶೇಷ ತಾಪತ್ರಯವಿಲ್ಲದೆ ಅರ್ಧತಾಸು ಕುಳಿತುಕೊಂಡು ಕೇಳುವವರಿದ್ದರೆ ವಿಷಯಕ್ಕೇನು ಕಡಿಮೆ? ಈಗ ವಿಷಯ ವಿದೆಯಲ್ಲವೇ ಸಾವಿರ. ಕೊರಿಯಾ ಯುದ್ಧವಿದೆ. 'ಎ' ಮತ್ತು 'ಸಿ' ಬಾಂಬುಗಳಿವೆ ಯು. ಎನ್ ಸಂಘವಿದೆ. ನಮ್ಮ ಬಿ. ಎನ್. ರಾಯರಿದ್ದಾರೆ. ದೇಶದೊಳಗೂ ನೇಪಾಳವಿದೆ. ಕಾಶ್ಮೀರವಿದೆ. ಎಚ್ ವಿ. ಕಾಮತರಿದ್ದಾರೆ ಆಹಾರ ಸಮಸ್ಯೆಯಿದೆ. ಕೃಪಲಾನಿಯವರ ಫ್ರಂಟ್ ಇದೆ. ಚುನಾವಣೆಯಿದೆ. ಹೀಗೆ ನಮಗೆ ಮಾತಾಡಲಿಕ್ಕೆ ಸಮಯವಿದ್ದರೆ ವಿಷಯಕ್ಕೆ ತಾಪತ್ರಯವಿಲ್ಲ. ದೇಶ ವಿದೇಶಗಳ ಮಹತ್ತಿನ ಪ್ರಶ್ನೆಗಳಲ್ಲದೆ ನಮ್ಮ ನಿಮ್ಮ ಸುಖ ಕಷ್ಟಗಳಿವೆ. ತಾಪತ್ರಯಗಳಿವೆ ದೇವರ ದಯಿಂದ ಯಾವ ವಿಷಯದಲ್ಲಿ ಹರಟೆ ಹೊಡೆಯುವುದೆಂದು ಯೋಚಿಸುವ ಪ್ರಶ್ನೆ ಬರಲಿಕ್ಕಿಲ್ಲ. ಮುಖ್ಯತಃ ನಾನು ಮೊದಲೇ ಹೇಳಿದಂತೆ ನಾನು ಬರೆಯುತ್ತಿರುವ ಈ ತಲೆಬುಡವಿಲ್ಲದ ಗೊಡ್ಡು ಹರಟೆಯನ್ನು ಓದಲಿಕ್ಕೆ ನೀವು ಇಷ್ಟಪಡಬೇಕು. ನಮ್ಮ ಸಂಪಾದಕರಿಗೆ ಈ ಹರಟೆ ಇದ್ದರೂ ಸ್ವಲ್ಪ ಸಮಯನಿರಲಿ ಅನ್ನಿಸಬೇಕು. ಹಾಗಿದ್ದರೆ ನಾನು ಬರೆಯುತ್ತೇನೆ'

ನಾನೂ ಒಬ್ಬ ನವಯುಗದವನೇ-ಕಳೆದ ಶತಮಾನದಲ್ಲಿ ಹುಟ್ಟಿದವನಾದರೂ ನವಯುಗದವನೆಂಬ ಭಾವನೆ ನನ್ನಲ್ಲಿದೆ. ನಿಮಗೆ ಯಾವ್ಯಾವ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಆತುರವಿದೆ ಎಂಬುದು ನನಗೆ ಕೆಲವು ಮಟ್ಟಿಗೆ ತಿಳಿದಿದೆ. ಆದುದರಿಂದ ನಿಮಗೆ ಬೇಕಾದ ವಿಚಾರಗಳಲ್ಲಿಯೇ ನನ್ನ ಹರಟೆಯನ್ನು ಮುಂದುವರಿಸುತ್ತೇನೆ. ಸಾರ್ವಜನಿಕವಾದ ಯಾವುದಾದರೊಂದು ಹೊಸ ವಿಚಾರದಲ್ಲಿ ನಮ್ಮ ಹರಟೆ ಮುಂದುವರಿಸಬೇಕೆಂದು ನೀವ್ಯಾರಾದರೂ ಇಷ್ಟಪಡುವುದಾದರೆ ನೀವು ನನಗೆ ತಿಳಿಸಬಹುದು. ಅದು ನಾನು ಅರಿತಿರುವ ವಿಚಾರವಿದ್ದರೆ ಕೂಡಲೇ ಈ ಕಮಿನಲ್ಲಿ ಉತ್ತರ ಕೊಡುತ್ತೇನೆ. ಆದರೆ ಕೆಲವು ಪತ್ರಿಕೆಗಳಲ್ಲಿ ಈಗ ಪ್ರಾರಂಭವಾದಂತೆ ಇದು ಪ್ರಶ್ನೋತ್ತರ ಕ್ರಮದಲ್ಲಿರಬಾರದು.

ಪ್ರಶ್ನೆ ಕೇಳಿದವನ ಹೆಸರು ಮತ್ತು ವಿಳಾಸವನ್ನು ನಾನು ಪ್ರಕಟಿಸಲಾರೆ. ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇನೆಂದು ಭರವಸೆ ಕೊಡಲಾರೆ. ಕೇಳುವ ಪ್ರಶ್ನೆಗಳು ಯಥಾರ್ಥದ ಪ್ರಶ್ನೆಗಳಾಗಿರಬೇಕು. ನಮ್ಮ ಹರಟೆಯಲ್ಲಿ ಭಾಗವಹಿಸುವವರೆಲ್ಲರಿಗೂ ಪ್ರಯೋಜನಕರವಾಗಿರಬೇಕು. ಹೀಗಿದ್ದರೆ ಮಾತ್ರ ನಾನು ಅದಕ್ಕೆ ಉತ್ತರ ಕೊಡಲು ಪ್ರಯತ್ನಿಸುವೆನು. ಪ್ರಶ್ನೆಗೆ ಉತ್ತರವೆಂದು ಪ್ರತ್ಯೇಕ ಬರೆಯದಿದ್ದರೂ ಆ ವಿಷಯವನ್ನು ನಮ್ಮ ಹರಟೆಯಲ್ಲಿ ಸೇರಿಸುವೆನು. ನನಗೆ ಬರೆಯಬಿಚ್ಛಿಸುವವರು ಯು. ವಿ., C/O ನವಯುಗ, ಉಡುಪಿ, ಬರೆಯಬಹುದು. ಶ್ರೀ. ಯು. ವಿ. ಯಾರಾಗಿರಬಹುದೆಂಬ ಶೋಧೆಗೆ ಮಾತ್ರ ನೀವು ಹೋಗಬಾರದಾಗಿ ಪ್ರಾರ್ಥನೆ ನಾನು ಹಳ್ಳಿಯಲ್ಲಿರುವವನಾದುದರಿಂದ ನಿಮ್ಮ ಪ್ರಶ್ನೆಗಳಿಗೆ ಕೂಡಲೇ ಉತ್ತರ ದೊರೆಯಲಾರದು. ಆದರೂ ಈ ಹರಟೆ ಕಲಮನ್ನು ನೀವು ಓದುತ್ತಾ ಇದ್ದರೆ ಕ್ರಮೇಣ ದೊರೆದೀತು ನೀವೇನಾದರೂ ನಿಮ್ಮ ಹೆಸರು ವಿಳಾಸ ಪ್ರಿಂಟಿನಲ್ಲಿ ಕಾಣಬೇಕೆಂದು ಪ್ರಶ್ನೆ ಕೇಳುವವರಲ್ಲ, ನಾನಾದರೂ ಕೂಡಾ ಸ್ವಾರಸ್ಯದ ಉತ್ತರಕೊಡುವುದರಲ್ಲಿ ನಿಪುಣನೆಂದು ಉತ್ತರಕೊಡುವವನಲ್ಲ. ಏನೋ ನನ್ನ ಈ ಹರಟೆಯಿಂದ ಯಾರಿಗಾದರೂ ಪ್ರಯೋಜನ ಸಿಕ್ಕುವುದಾದರೆ ಸಿಕ್ಕಲಿ ಎಂಬ ಉದ್ದೇಶದಿಂದ ಇದನ್ನು ಪ್ರಾರಂಭಿಸಿದ್ದೇನೆ- ಇದರಿಂದ ನನಗೇನು ಪ್ರಯೋಜನ ಅಂತೀರಾ? ಹರಟೆ ಹೊಡೆಯುವವರಿಗೆ ಕೇಳುವವರು ಸಿಕ್ಕುವುದೇ ಪ್ರಯೋಜನ. ಇದನ್ನು ಕೇಳಿ ನಿಮಗೆ ಪ್ರಯೋಜನವಿದೆ ಎಂದು ತಿಳಿದರೆ ಸಂತೋಷ- ಅಷ್ಟೇ. ನಾನು ಯಾವ ಪಂಥದವನೂ ಅಲ್ಲ. ಪ್ರಚಾರಕನೂ ಅಲ್ಲ. ಹೀಗೆಯೇ ಸುಮ್ಮನಿರುವಾಗ ಗೊರಕೆ ಹೊಡೆಯದಿರುವಾಗ ಹರಟೆಯನ್ನಾದರೂ ಹೊಡೆಯುವಾ ಎಂದಿಷ್ಟೇ ನನ್ನ ಉದ್ದೇಶ.

ಹರಟೆ ಎಂದ ಮಾತ್ರಕ್ಕೇ ಯಾರಿಗೂ ಬೇಡವಾದ ವಿಚಾರವನ್ನೇ ಮಾತಾಡುತ್ತೇನೆಂದು ಎಣಿಸಬೇಡಿರಿ. ಕೊರಿಯಾ ಫೋರ್ಮೋಸಾ ಈ ವಿಚಾರವದಿಲ್ಲದ್ದರೂ ಸದ್ಯದಲ್ಲಿ ನಮ್ಮ ದೇಶದಲ್ಲಿ ಅನೇಕ ನೂತನ ವಿಚಾರಗಳು ಬರಲಿವೆ. ಉದಾಹರಣೆಗಾಗಿ ನಮಗೆ ಹಿಂದುಗಳಿಗೆಲ್ಲಾ ಒಂದು ಕೋಡು ಬರಲಿಕ್ಕಿದೆ ಎಂಬುದು ನಿಮಗೆಲ್ಲರಿಗೂ ಗೊತ್ತಿದೆಯಷ್ಟೆ. ಇದು ಯಾವರೀತಿಯ ಕೋಡು. ಇದರಿಂದ ಯಾರಿಗೇನು ಪ್ರಯೋಜನ, ಇದರ ಪರಿಣಾಮವೇನು, ಈ ಎಲ್ಲಾ ವಿಚಾರ ನಮಗೆ ಯಾರು ಹರಟೆ ರೂಪವಾಗಿ ಬಿಡಿಸಿ ಹೇಳುವರು? ಇಂಗ್ಲಿಷ್ ಪತ್ರಿಕೆಗಳಲ್ಲಿ ಬಂದ ವರ್ತಮಾನವನ್ನು ಕನ್ನಡದಲ್ಲಿ ರೂಪಾಂತರಿಸಿ ನಮ್ಮ ಪತ್ರಿಕೆಯಲ್ಲಿ ಹಾಕುತ್ತಾರನ್ನಿ! ಅದರ ಒಳಗುಟ್ಟು ನಮಗೆ ಅರ್ಥವಾಗುವಂತೆ ಯಾರು ವಿವರಿಸಿ ಹೇಳುತ್ತಾರೆ? ಒಂದುವೇಳೆ ನಮಗೆ ಅರ್ಥವಾಗದಿದ್ದರೆ ನಾವು ಯಾರ ಹತ್ತಿರ ಕೇಳಬೇಕು. ಇದನ್ನೆಲ್ಲಾ ವಿವರಿಸಿ ಹರಟೆ ಹೊಡೆಯುವವರೊಬ್ಬರಿದ್ದರೆ ಒಳ್ಳೆಯದಲ್ಲವೆ? ಇಡೀ ದೇಶದ ಹಿಂದುಗಳಿಗೆಲ್ಲಾ ಅನ್ವಯಿಸಬೇಕಾಗಿರುವ ಈ ಕೋಡು ನಮ್ಮ ಅಳಿಯ ಸಂತಾನಿಗರಿಗೂ ಅನ್ವಯಿಸಬೇಕೋ ಬೇಡವೋ? ಅನ್ವಯಿಸಿದರೆ ಏನು ಪ್ರಯೋಜನ? ಅನ್ವಯಿಸದಿದ್ದರೆ ಏನು ಪರಿಣಾಮ? ಇದರ ವಿಷಯ ತಿಳಿಯ ಬೇಕೆಂದಿರುವವರು ಯಾರ ಕೂಡೆ ಕೇಳಬೇಕು? ಹಳ್ಳಿಗಳಲ್ಲಿ ಸೀದಾ ಪದ್ಧತಿ ಬೇಡವೆನ್ನುತ್ತಾರೆ ಕೆಲವರು. ಹಳ್ಳಿಗಳಲ್ಲಿಯೂ ಸೀದಾ ಪದ್ಧತಿ ಬೇಕೆನ್ನುತ್ತಾರೆ ಹಲವರು. ಈ ವಿಚಾರವನ್ನೆಲ್ಲಾ ನಮ್ಮ ಕೂಡೆ ಹರಟೆ ಹೊಡೆಯುವವರು ಇರುವುದು ಒಳ್ಳೆಯದಲ್ಲವೆ? ಹೀಗೆ ಅದು ಇದು ಎಂ. ಓ. ವಿಚಾರದಲ್ಲಿ ನಮ್ಮ ಹರಟೆ ಮುಂದುವರಿಯಬೇಕು. ಈ ಭಾಗ ನಿಮಗೆ ರುಚಿಸುವುದು ಎಂದು ನನ್ನ ಭಾವನೆ ಈ ಉದ್ದೇಶಗಳಿಂದೆಲ್ಲಾ ಹೊರಟಿದ್ದೇನೆ ನೇಗಾಗುತ್ತಿದೆ ನೋಡುವಾ,

ಪ್ರೀತಿ ಇರಲಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಳುಕು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳೆಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.   ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಕಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ರಸನಿಮಿಷ

ಚುನೀಲಾಲ್ ಅವರು 'ಸ್ವರ್ಗ' ಚಿತ್ರ ನೋಡನೋಡುತಿದ್ದಂತೆಯೇ ಸ್ವರ್ಗಲೋಕಕ್ಕೈದಿದರು [ವಾರ್ತೆ]

—ತಮ್ಮ ತಯಾರಿಯ ಚಿತ್ರ ಅವರಿಗೆ ಅಷ್ಟು ನಿರಾಶೆ ಉಂಟುಮಾಡಿರಬೇಕು.

○○ ○○ ○○

ಅಂದು 'ಸರ್ಗಮ್'ವನ್ನು ದಿಲ್ಲಿಯಲ್ಲಿ ಮೊದಲ ಸಾರಿಗೆ ಪ್ರದರ್ಶಿಸಿದ್ದರು.

—ಪ್ರಥಮ ಚುಂಬನಂ ....

○○ ○○ ○○

ಅಟ್ಲೀ ದೊರೆಗಳು ವಾಶಿಂಗ್ಟನ್ನಕ್ಕೆ ಧಾವಿಸಿದರು

—ಕೋಣನೆರಡುಂ ಹೋರೆ ಗಿಡಕ್ಕೆ ಮೃತ್ಯು ಎಂಬ ಗಾದೆ ಇಂದಿನ ಬ್ರಿಟನ್ನಿಗೆ ಅನ್ವಯಿಸದೆ ಹಾಗೆ ಮಾಡಲು..... ...

○○ ○○ ○○

ಟ್ರೂಮನ್: ಅಟಂ ಬಾಂಬು ಕೊರಿಯದಲ್ಲಿ ಹಾಕೋಣವೆ?

ಅಟ್ಲೀ: ಬೇಡ, ಬೇಡ, ರಶಿಯಾದ ಕೈಯಲ್ಲೂ ಇದ್ದರೆ?

ಟ್ರೂಮನ್: ಇದ್ದರೇನಾಯಿತು ಮೊದಲು ಹಾಕುವವರು ನಾವಲ್ಲವೇ?

ಅಟ್ಲೀ: ಅದು ಹೇಗೆ ಗೊತ್ತು? ಅಲ್ಲದೆ ನಿಮಗೇನು, ಇಷ್ಟು ದೂರ ಇದ್ದೀರಿ. ಯುದ್ಧದ ಬಿಸಿ ತಗಲುವುದಿಲ್ಲ ರಶಿಯವರ ಏಟಿಗೆ ತುತ್ತಾಗಬೇಕು ನಾವು, ಬ್ರಿಟನಿನವರು.

ಟ್ರೂಮನ್: ನೀವು ಭಯವನ್ನು ಬಿಡಬೇಕು ರೂಸ್‌ವೆಲ್ಟ್ ಹೇಳಲಿಲ್ಲವೆ 'ಭಯದಿಂದಲೂ ಸ್ವಾತಂತ್ರ್ಯ' ಪಡೆಯಬೇಕು

ಅಟ್ಲೀ [ಸ್ವಗತ] ನಿಮ್ಮ ಮನೆಗೆ ಬೆಂಕಿ ಬೀಳುವಾಗ ತಾನೇ ನಿಮಗೆ ಅನುಭವವಾಗುವುದು

ಟ್ರೂಮನ್ ಎಸ್. ಮಾಸ್, ಅಟ್ಲಿ, ಕಾಸು ಖರ್ಚಿಲ್ಲದೆ ರಾಯರ ಪತ್ರ ಮಾಡುವೆನೆಂದೆಯಾ? ಉಳಿಲಿಕ್ಕಿಲ್ಲದೆ ಸಾಯುವುದಕ್ಕಿಂತ ವೀರಸ್ವರ್ಗವನ್ನು ಪಡೆಯುವುದು ಮೇಲಲ್ಲವೆ?

○○ ○○ ○○

ಇಜಿಪ್ಟ ಬ್ರಿಟಿಷರನ್ನು ಹೊರದಬ್ಬುವ ಯೋಚನೆಯಲ್ಲಿದೆ.

—ಈಗ ಬ್ರಿಟಿಷ ಸಾಮ್ರಾಜ್ಯ ಸಿಂಹವನ್ನು ಕಂಡು ಫುಟಬಾಲಿನಮೇಲೆ ಕರುಣೆಬಂದಂತೆ ದಯೆ ಉಂಟಾಗುವುದು.

ಎಲ್ಲಾ ರಾಷ್ಟ್ರಗಳನ್ನೂ ಸಂ. ರಾ. ಸಂಘಕ್ಕೆ ಸೇರಿಸಿ

(ರಾಯಭಾರಿಗಳೊಬ್ಬರ ಸಮಸ್ಯಾ ಪರಿಹಾರ ಸೂಚನೆ)

—ಹಾಗೆ ಮಾಡಿದರೆ ಮಾತ್ರ ಯುದ್ಧ ಬರುವುದಿಲ್ಲವೆಂದು ಹವಣಿಸೆ ಅವರಿಗೆ.

○○ ○○ ○○

ಪೂನೆಯಲ್ಲಿ ಗೃಹಿಣಿಯರೆಲ್ಲ ಸಭೆಸೇರಿ ತಮ್ಮ ಮೂಲ ಭೂತ ಹಕ್ಕುಗಳನ್ನು ಕಾಪಾಡಲು ರಣವು ಮುಂದೆ ತರುವರಂತೆ.

—ಗೃಹಸ್ಥರೂ ಹಾಗೆಯೇ ಮಾಡಬೇಕು; ಅಥವಾ ಪತ್ನಿಯರನ್ನು ಕಾಡಿಸುವ ತಮ್ಮ 'ಮಾನವೀಯ ಹಕ್ಕಿಗೆ' ಭಂಗ ಬಂದಿರುವುದನ್ನು ಸಂ. ರಾ ಸಂಘಕ್ಕೆ ತಿಳಿಸಬೇಕು.

○○ ○○ ○○

ಉಡುಪಿಯ ನಗರ ಸಭೆಯವರು ಊರಿನ ಜನರಲ್ಲಿ ಅನ್ಯಾಯ ಕಡಿಮೆಯಾಗಬೇಕೆಂದು ರಾತ್ರಿ ಹೊತ್ತಿಗೆ ದೀಪಹಚ್ಚದೆಯೂ, ಹಗಲು ಹೊತ್ತಿಗೆ ಧೂಳು ಕುರುಕಿಸಿಯೂ ಕಣ್ಣು ಕತ್ತಲೆ ಬರಿಸುತ್ತಿದ್ದಾರೆ.

○○ ○○ ○○

"ನೀರು ಹಾಕಲು ಗತಿ ಇಲ್ಲದವರು ತಾವು ಹಾಕುತ್ತಾರೋ?" ಎಂಬುದು ಜಗಲಿ ಹಾರದವ ಗಗನ ಹಾರಿಯಾನೇ?'ಗಾದೆಯ ಆಧುನಿಕ ರೂಪಾಂತರ

○○ ○○ ○○

ಭಾರತೀಯ ಟೀಮಿನವರು ಕ್ರಿಕೆಟ್ ಆಟದಲ್ಲಿ ಸೋತು ಹೋದರು.

—ಸೋಲು, ಶ್ರೀ ಇಪ್ಪತ್ತೊಂದನೆಯ ಶತಮಾನದ ಗೆಲುವಿಗೆ ಸೋಪಾನ

— ಕು. ಶ್ರೀ.

ವಾರ ಭವಿಷ್ಯ

ತಾರೀಕು 14-12-1950ರಿಂದ ತಾ. 20-12-1950ರ ವರೆಗೆ.

ಮೇಷ — ಉದ್ಯೋಗದಲ್ಲಿ ಪ್ರಗತಿಯಿದೆ. ಆಪ್ತೇಷ್ಟರ ಮತ್ತು ಬಂಧುಮಿತ್ರರ ನೆರವು ಚೆನ್ನಾಗಿರುವುದು ಸಮಾಜದಲ್ಲಿ ಒಳ್ಳೇ ಸ್ಥಾನಮಾನಾದಿಗಳು ಲಭಿಸಲಿವೆ. ಶತ್ರುಗಳು ಪರಾಜಿತರಾಗುವರು. ಪಶು ಸುತ, ಭೃತ್ಯಾದಿ ಗೃಹಪರಿವಾರಗಳಲ್ಲಿ ಯಾವತರದ ನ್ಯೂನತೆಯೂ ಇಲ್ಲದಿರುವುದರಿಂದ ಗೃಹ ಸುಖವು ಉತ್ತಮವಾಗಿ ಲಭಿಸಲಿದೆ. ಆದರೆ ವ್ಯವಹಾರದಲ್ಲಿ ಹಣದ ನಿಮಿತ್ತವಾಗಿ ಕಲಹಗಳುದ್ಭವಿಸುವವು. ಅನಿರೀಕ್ಷಿತವಾದ ವ್ಯಸನಕ್ಕೆ ಗುರಿಯಾಗಲಿರುವಿರಿ. ತಾ. 14, 15, 19, 20 ಈ ದಿನಗಳಲ್ಲಿ ಮಹಾಸುಖ, ಲಾಭ, ಮಿತ್ರಸಮಾಗಮವಾಗಲಿದೆ.

ವೃಷಭ — ನೀವೆಷ್ಟೇ ಮಿತವ್ಯಯಿಗಳಾದರೂ ಈ ವಾರದಲ್ಲಿ ನಿಮ್ಮ ಖರ್ಚು ಉತ್ಪತ್ತಿಗಿಂತ ದ್ವಿಗುಣವಾಗಲಿದೆ. ಹಣದ ಬಿಕ್ಕಟ್ಟು ಬಹುವಾಗಿ ಪೀಡಿಸುವುದು. ಶ್ವಾಸ ಸಂಬಂಧವಾದ ರೋಗದಿಂದಾಗಿ ದೇಹದೌರ್ಬಲ್ಯ ಕ್ಷೀಣತೆ ಮೊದಲಾದವು ಕಾಣಿಸಿಕೊಳ್ಳಲಿವೆ. ನಿಮ್ಮ ವರ್ತನೆಯು ಕೈಹಿಡಿದಾಕೆಗೂ ಸರಿದೋರದ ಕಾರಣ ಕಲಹಪ್ರಿಯಳಾಗುವಳು. ಗೃಹಶಾಪತ್ರಯಗಳು ಹೆಚ್ಚಲಿವೆ. ಆದರೂ ವಾರಾದಿಯ 5ದಿನಗಳಲ್ಲಿ ಆಕಸ್ಮಿಕವಾಗಿ ಸ್ತ್ರೀ ಮೂಲಕ ಧನ ಪ್ರಾಪ್ತಿಯಾಗುವ ಯೋಗವಿದೆ. ಮೇಲ್ಗಂಡ ಅನಿಷ್ಟಗಳು ಹೆಚ್ಚಿಗೆ ಪೀಡಿಸಲಾರವು.

ಮಿಥುನ—ಸದ್ಯ ನಿಮ್ಮಭಾಗಕ್ಕೆ ಗುರುವೊಬ್ಬನನ್ನುಳಿದು ಇತರ ಎಲ್ಲಾ ಗ್ರಹರೂ ಪ್ರತಿಕೂಲರಾಗಿರುವ ಕಾರಣ ನಿಮ್ಮ ಆರೋಗ್ಯ ಆರ್ಥಿಕ ಪರಿಸ್ಥಿತಿಗಳು ತುಂಬಾ ಕೆಡಲಿವೆ. ಮಿತ್ರವರ್ಗದವರಲ್ಲಿ ಮನಸ್ತಾಪ ಆಪ್ತೇಷ್ಟರ ವಿರಹ ಸ್ತ್ರೀಯರಿಂದ ಅನಿಷ್ಟಗಳು ಪ್ರಾಪ್ತವಾಗಬಹುದು. ಶತ್ರುಗಳು ಪ್ರತೀಕಾರಾಸಕ್ತರಾಗುವರು. ಆದರೂ ಸುರಗುರುಗಳ ಅನುಗ್ರಹದಿಂದ ವಾರಾಂತ್ಯದ 4ದಿನಗಳಲ್ಲಿ ಸ್ವಲ್ಪ ಸುಖೇಷ್ಟಗಳನ್ನು ಕಾಣುವಿರಿ.

ಕರ್ಕಟಕ—ಹಿಂದಿಗಿಂತಲೂ ಇಂದಿನ ದಿನಗಳು ಸ್ವಲ್ಪ ಉತ್ತಮವೆನಿಸುವವು. ಶಕ್ತಿಸಾಧ್ಯವಾದ ಕಾರ್ಯಗಳಲ್ಲಿ ಉತ್ತಮವಾದ ಫಲ ಲಭಿಸುವದು. ಆರೋಗ್ಯಕ್ಕೆ ಕಫದೋಷದಿಂದ ಹಾನಿಯಿರುವದು. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ಆರ್ಥಿಕ ತಗಾದೆಗೆ ಸಿಲುಕಲಾರಿರಿ. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಸದಾ ಚಿಂತಾಕುಲಿತರಾಗುವಿರಿ. ವಾರಾಂತ್ಯದ 2ದಿನಗಳಲ್ಲಿ ಇಷ್ಟವಸ್ತುಗಳ ಲಾಭ, ಸುಖಗಳಿವೆ.

ಸಿಂಹ — ಉದ್ಯೋಗದಲ್ಲಿ ಒಳ್ಳೆ ಪ್ರಗತಿಯನ್ನೈದುವಿರಿ. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನು ಹೊಂದುವಿರಿ. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಮುಂದಿಟ್ಟಹೆಜ್ಜೆಯನ್ನು ಹಿಂತಿರುಗಿಸುವ ಪ್ರಸಕ್ತಿ ಬರಲಾರದು. ಸಿಂಹವನ್ನು ಕಂಡ ಜಿಂಕೆಗಳಂತೆ ಶತ್ರುಗಳು ದೂರ ಸರಿವರು. ಆದರೂ ಮನೆಯಲ್ಲಿ ತಂದೆ ಮಕ್ಕಳಲ್ಲಿ ಗಂಡ ಹೆಂಡಿರಲ್ಲಿ ಮತಭೇದದಿಂದಾಗಿ ಕಲಹಗಳುಂಟಾದಾವು. ವಾರಾದಿಯ 2ದಿನಗಳು ಅನುಕೂಲವಾಗಿವೆ.

ಕನ್ಯಾ—ಕಾಲವು ಸ್ವಲ್ಪ ವೈಪರೀತ್ಯಕ್ಕೆ ಬಂದಿರುವದು ಕಫ, ವಾತಗಳ ಪ್ರಕೋಪದಿಂದಾಗಿ ಆರೋಗ್ಯವು ನೆಟ್ಟಗಿರಲಾರದು, ಹಣದ ಬಿಕ್ಕಟ್ಟು ದಿನೇ ದಿನೇ ಪ್ರಬಲವಾಗುತ್ತಾ ಬರಲಿದೆ. ಮನೋರೋಗದಿಂದಾಗಿ ನಿಮಗೆ ಸುಖಶಾಂತಿಗಳು ದುರ್ಲಭವೆನಿಸುವವು. ಆದರೂ ಬಂಧುಗಳು, ಮಿತ್ರರು ಇವರ ಸಹಕಾರದಿಂದಾಗಿ ವಾರಾದಿಯ 5ದಿನಗಳಲ್ಲಿ ಇಷ್ಟಗಳನ್ನೇ ಸ್ವಲ್ಪ ಅಧಿಕವಾಗಿ ಕಾಣಲಿರುವಿರಿ.

ತುಲಾ—ನಿರುದ್ಯೋಗದಿಂದ ಮುಕ್ತರಾಗುವಿರಿ. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಖರ್ಚಿನ ಸಲುವಾಗಿ ಚಿಂತಿಸಬೇಕಾಗಿಲ್ಲ. ಆರೋಗ್ಯವೂ ಉತ್ತಮವಾಗಲಿದೆ. ನೌಕರಿ ಜನರಿಗೆ ಅಧಿಕಾರಿಗಳಿಂದ ಪೀಡೆಯುಂಟಾದೀತು. ಸಂಸರ್ಗ ದೋಷಕ್ಕೆ ಸಿಲುಕಿ ಕಷ್ಟ, ನಷ್ಟ, ಅಪವಾದಗಳಿಗೆ ಗುರಿಯಾಗುವಿರಿ. ಏಳೂವರೆ ಶನಿಯ ದೆಸೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ವಾರಾಂತ್ಯದ 4ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ವೃಶ್ಚಿಕ—ಕಾಲವು ಅನುಕೂಲವಾಗಿರುವುದು ನಿಮ್ಮ ಬಯಕೆಗಳು ಅನಾಯಾಸದಿಂದ ನೆರವೇರಲಿವೆ. ಸಂಪದ್ಭಾಗವು ತುಂಬಾ ವೃದ್ಧಿ ಹೊಂದಲಿದೆ. ಪರಸ್ತ್ರೀಯರಿಂದಲೂ ನೀಚಜನರಿಂದಲೂ ಕುಟುಂಬಿಕರಿಂದಲೂ ಧನ ಲಭಿಸುವ ಯೋಗವಿದೆ. ಆರೋಗ್ಯವು ಉತ್ತಮವಿರುವದು. ನಿಮ್ಮ ಅಭಿವೃದ್ಧಿಯನ್ನು ಕಂಡು ಮತ್ಸರದಿಂದಲೋ ಎಂಬಂತೆ ಬಂಧುಜನರ ಆಗ್ರಹಕ್ಕೆ ಗುರಿಯಾದೀರಿ. ತಾ. 19, 20 ಅತ್ಯುತ್ತಮವಿವೆ.

ಧನು— ಇಂದಿನ ಪರಿಸ್ಥಿತಿಯಲ್ಲಿ "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬಂತೆ ನೀವೊಂದುದ್ದೇಶದಿಂದ ಕಾರ್ಯಾರಂಭಿಸಿದರೆ ಅದು ಮತ್ತೊಂದು ಅನೀಪ್ಸಿತ ಫಲದಲ್ಲಿ ಕೊನೆಗೊಂಡೀತು. ಆದ್ದರಿಂದ ಈ ಸಮಯವನ್ನು ಬಹಳ ಕಷ್ಟದಲ್ಲಿ ಕಳೆಯಬೇಕಾಗುವದು. ಆರೋಗ್ಯದಲ್ಲಾಗಲೀ, ಆರ್ಥಿಕದಲ್ಲಾಗಲೀ, ಸಂಸಾರದಲ್ಲಾಗಲಿ ಸುಖವಿಲ್ಲದ ನಿಮಗೆ ವಾರಾದಿಯ 2ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲ

ಮಕರ— ಇಂದೀಗ ನಿಮ್ಮ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕಷ್ಟಮಯವಾಗುತ್ತಾ ಬರುತ್ತಲಿದೆ. ದುಡಿಮೆಗಿಂತ ದ್ವಿಗುಣವಾದ ಖರ್ಚುಗಳು ಪ್ರಾಪ್ತವಾಗುವವು. ಆರೋಗ್ಯಕ್ಕೆ ಅಷ್ಟೊಂದು ಹಾನಿಯಿರದಿದ್ದರೂ ಗೃಹಕೃತ್ಯದಲ್ಲಿ ಸುಖವಿರದು ಆಪ್ತೇಷ್ಟರ ಸಹಕಾರವು ಸಾಕಷ್ಟಿದ್ದರೂ ಶತ್ರುಜನರ ಪೀಡೆಯು ಕಡಿಮೆಯಾಗುವಂತಿಲ್ಲ. ಶ್ರಮಕ್ಕೆ ತಕ್ಕ ಫಲಪ್ರಾಪ್ತಿಯು ಕಾಣಿಸಲಾರದು. ತಾ. 17, 18ರಲ್ಲಿ ವಿಜಯ, ಲಾಭ, ಸುಖಗಳು ಲಭಿಸುವವು.

ಕುಂಭ—ನೀವು ಏಕಾಕಿಯಾಗಿ ಯಾವ ಕಾರ್ಯವನ್ನು ಸಾಧಿಸುವ ಸ್ಥೈರ್ಯ ಧೈರ್ಯಗಳು ನಿಮ್ಮಲ್ಲಿಲ್ಲದ್ದರಿಂದ ಮಿತ್ರವರ್ಗದ ಸಹಾಯವನ್ನು ಯಾಚಿಸುವಿರಿ. ಕೈಗೊಂಡ ಕಾರ್ಯಗಳಲ್ಲಿ ನಿಮ್ಮ ಇಚ್ಛೆಯಂತೆ ಫಲಲಭಿಸುವದು ಹೆಚ್ಚಿನ ಕಾರ್ಯಗಳಲ್ಲಿ ವಿಜಯವನ್ನು ಪಡೆವಿರಿ. ಆರೋಗ್ಯಕ್ಕೆ ಕೊಂಚ ಧಕ್ಕೆಯುಂಟಾಗಬಹುದು, ರಾಜಕೀಯ ಕ್ಷೇತ್ರದಲ್ಲಿ ಫಲವು ತೃಪ್ತಿಕರವಿರಲಾರದು. ತಾ. 14, 15, 19, 20 ಉತ್ತಮವಿವೆ.

ಮೀನ—ಸುರಗುರುಗಳು ವ್ಯಯಗತರಾದರೂ ನಿಮ್ಮ ಇಂದಿನ ವ್ಯವಹಾರಗಳಲ್ಲಿ ಫಲಪ್ರಾಪ್ತಿಯು ಉತ್ತಮವಾಗಿರುವುದು. ಸಂಕಷ್ಟಗಳು ಅನಾಯಾಸದಿಂದ ಸಿದ್ಧಿಸುವವು. ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಹಣದ ಅಡಚಣೆಯು ದೂರಾಗುವದು. ಆದರೂ ವಾತ್ಸಲ್ಯವು ಅನಿವಾರ್ಯವಿದೆ. ಆಪ್ತ ಬಂಧುಗಳ ವಿಯೋಗವುಂಟಾದೀತು. ತಾ. 17, 18ರಲ್ಲಿ ಭೋಗ್ಯಲಾಭಗಳು ಉತ್ತಮವಿವೆ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಬೆಟಗೇರಿ

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರೆ ಸ್ಟೋರ್ಸ್ ಎಲ್ ಕದಲಬಾಳ ಕೆಮಿಸ್ಟ್, ಹಾವೇರಿ ಬ್ಯಾಡಗಿ

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದರಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೋಡ್ಬಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

ನಿಮಗೆ

ಇಂಗ್ಲಿಷ್ ಕಲಿಯಬೇಕೆ?

ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ

ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ ಪಿ ದ್ವಾರ ರೂ 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,

ನವಭಾರತ ಪುಸ್ತಕ ಭಂಡಾರ,

ಉಡುಪಿ

ಇವರಿಗೆ ಬರೆಯಿರಿ.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C. 776 50

ರಾಮ ದೇವರು ಹಂದೆ — ವಾದಿ

ಮಂಜುನಾಥ ಭಟ್ಟ — ಪ್ರತಿವಾದಿ

ಉಡುಪಿ ತಾಲ್ಲೂಕು ಬನ್ನಾಡಿ ಗ್ರಾಮದಲ್ಲಿರುವ ನಾಗಪ್ಪ ಭಟ್ಟರ ಮಗ ಮಂಜುನಾಥ ಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಪ್ರತಿವಾದಿಯಿಂದ ವಾದಿಗೆ ಡಿ. ನೋಟಿನ ಮೇಲೆ ಬರಾ ಅಸಲು ಬಡ್ಡಿ ಅವೇಜಿನ ವಸೂಲೀ ಬಗ್ಗೆ ವಾದಿ ಜರಗಿಸಿದ ಮೇಲಣ ದಾವೆ ತಾ. 21-12-50ಕ್ಕೆ ತನ್ನಿಗೆ ಇಡೋಣ ಗಿದೆ. ಆ ದಿವಸ ಪ್ರತಿವಾದಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗದೆ ಇದ್ದಲ್ಲಿ, ಆತನ ಗೈರು ಹಾಜ್ರಿಯಲ್ಲಿ ಸದ್ರಿ ದಾವೆ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತೆಂಬ ಸಂಗತಿ ಈ ಮೂಲಕ ಪ್ರತಿವಾದಿಗೆ ತಿಳಿಸೋಣಾಗಿದೆ.

(By order of the court)
A. N. Rao,
Advocate for Plff.
Coondapoor, 3-12-50

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment
Estd. 1921 ಸ್ಥಾಪನೆ
31ನೇ ವರ್ಷ
21-12-1950
Founder: Sri A. B. Shetty,
Minister for Agriculture & Veterinary.
ನವ ಯುಗ
ವರ್ಷ ೩೦
ವಾರ ೧೬
NAVAYUGA
WEEKLY
POST BOX NO. 22
UDIPI, S. K.
Vol. 31
No. 16

ಸರ್ದಾರರ ಜೀವನಾದರ್ಶ

ಸರ್ದಾರ್ ವಲ್ಲಭಾಯಿ ಪಟೇಲರು ತನ್ನ 76ನೇ ವಯಸ್ಸಿನಲ್ಲಿ ಇದೇ 15ನೇ ಶುಕ್ರವಾರ [ಪೂರ್ವಾಹ್ನ ತಾಸು 9-37ಕ್ಕೆ ಬೊಂಬಾಯಿಯಲ್ಲಿ ಇಹಯಾತ್ರೆ ಮುಗಿಸಿ ಕೊಂಡರು.

ಈ ಸುದ್ದಿಯನ್ನು ನಿರೀಕ್ಷಿಸುವ ಮತ್ತು ಸಹಿಸುವ ಸ್ಥಿತಿಯಲ್ಲಿ ನಾವಿರಲಿಲ್ಲ. ವೃದ್ಧಾಪ್ಯದ ದೆಸೆಯಿಂದ ದೀರ್ಘಾವಧಿಯಿಂದಲೂ ನಿಶ್ಶಕ್ತರಾಗಿದ್ದರೂ ಮೊನ್ನೆ ಮುಂಜಾನೆ ಅಕಸ್ಮಾತ್ ಹೊರಟು ಹೋಗುವರೆಂದು ನಾವಾರೂ ನಿರೀಕ್ಷಿಸಿದ್ದಿಲ್ಲ. ಸ್ವತಂತ್ರ ಭಾರತಕ್ಕೆ ಸರ್ದಾರರು ಅನಿವಾರ್ಯವಾಗಿರುವ ಈ ಕಾಲದಲ್ಲೇ ಅವರ ವಿಯೋಗವು ನಮಗೆ ಅಸಹ್ಯವಾಗಿದೆ.

ಆದರೂ ಸರ್ದಾರರು ಇನ್ನಿಲ್ಲ. ಕಾಲಾನುಗುಣವಾದುದನ್ನೇ ಪ್ರಾವು ಮಾಡುತ್ತಿಲ್ಲ; ಇದಕ್ಕೆ ಪ್ರತಿಯಾಗಿ ನಮಗೆ ಬೇಡವಾದುದನ್ನು ಕಾಲವೂ ಮಾಡುತ್ತಿದೆ. ಸರ್ದಾರರು ಕಾಲಾಧೀನರಾದರು.

ಭಾರತೀಯರ ಸರಾಸರಿ ಆಯುಷ್ಯ ಇಪ್ಪತ್ತೆರಡೋ ಏನೋ. ಈ ಮಾನದಿಂದ ಅಳೆಯುವಾಗ ಎಪ್ಪತ್ತರ ಗಡಿದಾಟುವ ವರೆಗೂ ಇಲ್ಲೇ ನಿಂತು ಬಿಡುವವರು ಬಹುಸಂಖ್ಯೆಯಲ್ಲಿರುವುದು ನಮ್ಮ ಅಗ್ರಗಣ್ಯ ನಾಯಕರ ಪಂಗ್ತಿಯಲ್ಲೇ ಎಂಬ ಸಮಾಧಾನ ಮೂಡುತ್ತಿದೆ. ಸರ್ದಾರ್ ಪಟೇಲರ ಪ್ರಾಯ 76

ಹೀಗಾಗುವಾಗ ಸರ್ದಾರರು ಹೊರಟು ಹೋದುದು ದೇಶದ ಮಟ್ಟಿಗೆ ಅಪಕ್ವ ಕಾಲದಲ್ಲಿ; ಅಕಾಲದಲ್ಲೇ. ಆದರೆ ಸ್ವತಃ ಅವರ ಪ್ರಾಯದ ಮಟ್ಟಿಗೆ ಪಕ್ವಾವಸ್ಥೆಯಲ್ಲಿ; ಸಕಾಲದಲ್ಲೇ. ಭಾರತೀಯ ಜನಸಾಮಾನ್ಯರು, ತಮ್ಮ ಸೇವಕರನ್ನು ಸಮಾಧಾನ ಪೂರ್ವಕ ಬೀಳ್ಕೊಡುವ ಪಕ್ವಾವಸ್ಥೆಗೆ ಎಂದಾದರೂ ಬಂದಾರೆಂದು ನಿರೀಕ್ಷಿಸುವುದು ಸದ್ಯಸ್ಥಿತಿಯಲ್ಲಿ ಅಸಾಧ್ಯ; ಎಂತಹ ಮಹಾ ಮನುಷ್ಯನಾದರೂ ಚಿರಂಜೀವಿಯಲ್ಲವೆಂಬುದೂ ನಿಜವೇ. ಅಂದಮೇಲೆ ಸರ್ದಾರ್ ವಿಯೋಗದಂತಹ ವೇದನೆಯನ್ನು ಅನುಭವಿಸಲು ನಾವು ಬಾಧ್ಯರಿದ್ದೇವೆ.

ಸರ್ದಾರರಿಂದ ನಮಗಿನ್ನು ದೊರೆಯುವುದೆಂದರೆ ಈ ವಿಯೋಗವ್ಯಸನ ಮಾತ್ರವೇನು? ಅವರೀವರೆಗೆ ಮಾಡಿದುದೆಲ್ಲವೂ ಸುಳ್ಳು—ದಶಂಬರ್ 15ನೇ ಮುಂಜಾನೆ ಮಾಡಿದುದೊಂದು ಮಾತ್ರ ಸತ್ಯವೇನು? ಇಲ್ಲ; ನಿಜಕ್ಕೂ ಹಾಗಲ್ಲ.

ವಲ್ಲಭಾಯಿ ಪಟೇಲ್, ಜೀವಂತ ಪಕ್ಷಗೊಂಡಮೇಲೆ ದೇಹ ಧಾರಿಯಾಗಿದ್ದಂತೆಯೇ ದೇಶಧಾರಿಯೂ ಆಗಿದ್ದರು. ಮೊನ್ನೆ ದೇಹಧಾರಿ ಪಟೇಲ್ ಕಳೆದು ಹೋದರೂ ದೇಶಧಾರಿ ಪಟೇಲ್ ಉಳಿದಿದ್ದಾರೆ. ನಮ್ಮ ನಡುವೆ ಚಿರಂಜೀವಿಯಾಗಿರುವ ಪಟೇಲರೆಂಥವರು? ನಾವು ಅವರನ್ನು ಅನುಕರಿಸಬೇಕಾದುದಾವುದರಲ್ಲಿ? ನೋಡೋಣ.

ಪ್ರಸಿದ್ಧ ಕ್ರಿಮಿನಲ್ ವಕೀಲನಾಗಿದ್ದ ವಲ್ಲಭಾಯಿ ಉಜ್ವಲ ದೇಶಭಕ್ತ ಸರ್ದಾರ್ ಆಗಿ ಮಾರ್ಪಟ್ಟಿದ್ದರು. ನಮ್ಮ ನಿಮ್ಮ ಮಾತೇನು—ಪ್ರಥಮ ವಲ್ಲಭಾಯಿಯಂತಹ ಸಾವಿರ ಮಂದಿಯನ್ನು ಹಾಕಿದರೂ ದ್ವಿತೀಯ ವಲ್ಲಭಾಯಿಗೆ ಸಾಟಿಯಾಗುವಂತಿಲ್ಲ. ಯಾರು, ಎಂತಹ ಸ್ಥಿತಿಯಲ್ಲಿದ್ದರೂ ಪ್ರಗತಿ ಮಾರ್ಪಾಟಹೊಂದುವ ಹಕ್ಕು ಮತ್ತು ಸಾಧ್ಯತೆಯಿದ್ದೇ ಇದೆ, ಎಂಬುದನ್ನು ಇದರಿಂದ ಅರಿತುಕೊಳ್ಳಬಹುದು.

ಏನೇ ಬಂದರೂ ಲೆಕ್ಕಿಸದ, ನಿರ್ಲಿಪ್ತ, ಮನಸ್ಸಿನಿಂದ ಹಿಡಿದ ಕಾರ್ಯವನ್ನು ಸಾಧಿಸುವ ಏಕಾಗ್ರತೆಯು ಸರ್ದಾರ್ ವಲ್ಲಭಾಯಿಗಳದಾಗಿದ್ದಿತು; ವಕೀಲ ವಲ್ಲಭಾಯಿ ಕೋರ್ಟಿನಲ್ಲಿ ಒಂದು ಮೊಕದ್ದಮೆಯ ಪರವಾಗಿ ವಾದ ಹೂಡಿರುವಾಗಲೇ ಅವರ ಪತ್ನಿ ತೀರಿಹೋದ ತಂತಿ ಬಂತಂತೆ; ವಾದಕ್ಕೆ ನಿಂತಲ್ಲೇ ನಡುವೆ ಸರ್ದಾರರದನ್ನು ಓದಿ ಕೊಂಡು, ಏನೂ ನಡೆದಿಲ್ಲವೆಂಬಂತೆ ಯಥಾ ಪ್ರಕಾರ ತನ್ನ ವಾದವನ್ನು ಮುಂದುವರಿಸಿದರಂತೆ. ವಿಶಾಲ ಪ್ರಪಂಚದ ಬಹುವಿಧ ಸಮಸ್ಯೆಗಳ ನಡುವೆ ಸಿಕ್ಕಿರುವ ಮನುಷ್ಯನು, ಪ್ರತಿಯೊಂದು ಸಂದರ್ಭದಲ್ಲೂ ಹತ್ತು ಹಲವು ವಿಚಾರಗಳನ್ನು ಮನಸ್ಸಿಗೆ ಹಚ್ಚಿಕೊಂಡಲ್ಲಿ ಕೈಕೊಂಡ ಕಾರ್ಯದಲ್ಲಿ ತಲ್ಲೀನತೆಗೊಳ್ಳುವುದು ಅಸಾಧ್ಯ. ನಿರ್ಲಿಪ್ತ ಬುದ್ಧಿಯ ಕಾರ್ಯನಿಷ್ಠೆಯೆಂದರೇನೆಂಬುದನ್ನು ಸರ್ದಾರ್ ವಲ್ಲಭಾಯಿಗಳಿಂದ ಕಲಿಯಬೇಕು.

ಸರ್ದಾರರು ಉಕ್ಕಿನ ಮನುಷ್ಯ; ಆಕಾಶ ಮತ್ತು ದಿಸೆಗಳೇ ಕಳಚಿ, ಕುಸಿದು ತಲೆ ಮೇಲೆ ಬೀಳುವಂತಿದ್ದ ಭಯಂಕರ ಆಪತ್ತುಗಳಲ್ಲಿ ಕೂಡಾ ಎದೆಗೆಡದೆ, ಅಭೇದ್ಯ ಸಂಕಲ್ಪದಿಂದ ಪ್ರತಿಯೊಂದು ಸಂದರ್ಭದಲ್ಲೂ ಜಯ ಪತಾಕೆಯನ್ನು ಹಾರಿಸಿದವರು. ರಾಷ್ಟ್ರ ವಿಪತ್ತು ಎಂತಹದಿದ್ದರೂ, ರಾಷ್ಟ್ರದ ವೈರಿಯಾರೇ ಇದ್ದರೂ, ಪಡೆದು ನಿರ್ಮೂಲಿಸುವುದೊಂದನ್ನಲ್ಲದೆ, ಬೇರಾವುದನ್ನೂ ಅವರು ಗಣಿಸಿದವರಲ್ಲ; ಅನ್ಯಾಯ ಮತ್ತು ತಪ್ಪು ತಡೆಗಳೆದಿರಲ್ಲಿ ಹೇಗಿರಬೇಕೆಂಬುದನ್ನು ಕಲಿಯಬೇಕು ಸರ್ದಾರರಿಂದಲೇ.

ಕೆಲಸಕ್ಕೆ ಬಾರದ ಒಂದೇ ಒಂದು ಮಾತು—ಮಾತಿನಲ್ಲಿ ತೋರಿ ಬಂದು ಕಾರ್ಯತಃ ಕಾಣಿಸದ ಒಂದೇ ಒಂದು ಸಂಗತಿ—ತಾನಾಡಿದುದನ್ನು ಅಥವಾ ಮಾಡಿದುದನ್ನು ಹಿಂತೆಗೆದು ಕೊಂಡ ಅಥವಾ ತಪ್ಪಿಗಾಗಿ ಕ್ಷಮೆಯಾಚಿಸಿದ ಒಂದೇ ಒಂದು ಸಂದರ್ಭ—ಸರ್ದಾರ್ ವಲ್ಲಭಾಯಿಗಳ ಜೀವನದಲ್ಲಿಲ್ಲ, ಮನುಷ್ಯನ ಮಾತು ಕೃತಿಗಳ ನಡುವೆ, ಎಂತಹ ಸಂಬಂಧವಿರಬೇಕು, ಎಂಬುದನ್ನು ಕಲಿಯ ಬೇಕು ಸರ್ದಾರರಿಂದಲೇ. ಯಾವ ಯೋಚನೆ, ಚಿಂತನೆ, ತಿದ್ದುಪಡಿಯಾದರೂ ಮಾತು ಕೃತಿಗಳ ಆರಂಭ ಪೂರ್ವದಲ್ಲಿ ಹೊರತು ಆರಂಭಾನಂತರವಲ್ಲವೆಂಬ ಪಾಠವನ್ನೊರೆಯ ಬೇಕು ವಲ್ಲಭಾಯಿ ಜೀವನದಿಂದಲೇ.

ತನ್ನ ಕೈ ತಪ್ಪು ಮಾಡಿದರೆ ಕೈ ಕತ್ತರಿಸಿಕೊಳ್ಳುವಂತಹ ಕಠೋರ ಶಿಸ್ತು ನಿಷ್ಠೆಗೆ ವಲ್ಲಭಾಯಿಗಳೊಂದು ಮಾದರಿ.

ರಾಷ್ಟ್ರದ ಅಧಿಕಾರ ಮತ್ತು ನಾಯಕತ್ವದ ಘನತೆ ತುಂಬಿದ್ದಂತೆಯೇ, ಗಾಂಧೀ ನೆಹರುಗಳ ಹಿಂಬಾಲಕತ್ವ ಮತ್ತು ಅನುಯಾಯಿತ್ವದ ನಮ್ರತೆಯೂ ತುಂಬಿದ್ದ ಸರ್ದಾರರು ಅಂಸುತನ, ಅತ್ತನವೆರಡರ ಮಟ್ಟಿಗೂ ಉಚ್ಚಾದರ್ಶ.

ಮೃತ್ಯುಶಯ್ಯೆಯಲ್ಲಿ ಪವಡಿಸಲು ಢಿಲ್ಲಿಯಲ್ಲಿ ವಿಮಾನವೇರುವಾಗ ಕೂಡಾ, ತನ್ನ ಪಾಲಿನ ಸರಕಾರೀ ಕೆಲಸಗಳನ್ನು ನೋಡಿಕೊಂಡು ಸ್ವಂತ ಊರಿಗೆ ಬಂದು, ಶಾಂತವಾಗಿ ಸೌಖ್ಯವಾಗಿ ಕೊನೆಯ ಉಸಿರನ್ನೆಳೆದ ಸರ್ದಾರ್ ಪಟೇಲರ ಜೀವನದಂತೆಯೇ ಮರಣವೂ ಒಂದು ಉತ್ತಮ ಮಾದರಿ!



THE UNITED KARNATAK
INSURANCE COMPANY LIMITED,
United Karnatak Buildings, DHARWAR.
Estabished: 1929.
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.



ನಮ್ಮನ್ನಗಲಿದ ಸರ್ದಾರ್

ಸರ್ದಾರ್ ವಲ್ಲಭಾಯಿ ಪಟೇಲ್ ಇನ್ನಿಲ್ಲ. ನವಭಾರತದ ನಿರ್ಮಾಣಕರ್ತ ಮತ್ತು ರಕ್ಷಕ—ಭಾರತದ ಬಿಸ್ಮಾರ್ಕ್—ಗುಜರಾಥಿನ ಮುಕುಟರಹಿತ ಪ್ರಭು—ಉಕ್ಕಿನ ಮನುಷ್ಯ-ವಲ್ಲಭಾಯಿಯ ಇಹಯಾತ್ರೆ ಮುಗಿಯಿತು. ಸರ್ದಾರರಿಂದ ಮಾತ್ರ ಬಗೆಹರಿಸಲು ಸಾಧ್ಯವೇನೋ ಎಂಬಂತಹ ಎಷ್ಟೋ ಸಮಸ್ಯೆಗಳು ಉಳಿದಿರುವ ಈ ಕಾಲದಲ್ಲಿ ಭಾರತವು ಸರ್ದಾರರನ್ನು ಕಳಕೊಳ್ಳುವುದೆಂದರೇನು? ಎಂದು ಥಟ್ಟನೆ ಪ್ರಶ್ನಿಸಬೇಕಾಗುತ್ತದೆ. ಭಾರತವು ಬಾಳಬೇಕಾಗಿರುವಾಗ ಸರ್ದಾರರನ್ನು ಸಾಯಲು ಬಿಡಬಹುದೇ, ಎಂಬಂತಹ ಆಗ್ರಹವೇಳುತ್ತಿದೆ ಆದರೂ ಸರ್ದಾರರನ್ನು ತಾ. 15-12-50ನೇ ಶುಕ್ರವಾರ ಪೂರ್ವಾಹ್ನ 9-37ಕ್ಕೆ ಭಾರತವು ಕಳಕೊಂಡುದು ನಿಜ. ಎಪ್ಪತ್ತಾರರ ಮುದಿಪ್ರಾಯದಲ್ಲಿ ಅವರು ನಮ್ಮನ್ನಗಲಿರುವುದು ಸತ್ಯ. ಇದರ ಅರ್ಥವೇನು? ಸ್ವತಂತ್ರ ಭಾರತದ ಜನನದಿಂದೀ ವರೆಗೂ ಏನೆಲ್ಲಾ ಆಗಿಹೋಯಿತು! ಮಾನವನ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯದ ಮಹಾಲಾಭವು ಸಾಟಿಯಿಲ್ಲದುದೇನೋ ನಿಜ; ಆದರೆ ಗಳಿಕೆ ಮಾತ್ರದರ ಉಳಿಸುವಿಕೆಗಾಗಿ ಎಂತೆಂತಹ ನಷ್ಟಗಳನ್ನನುಭವಿಸಿದರೂ ಸಹ್ಯವೆಂಬುದೂ ಸತ್ಯವೇ. ಆದರೆ ಆ ಸ್ವಾತಂತ್ರ್ಯದ ರಕ್ಷಣೆಗೆ ಅತ್ಯಗತ್ಯವಿರುವುದನ್ನು ಕಳಕೊಳ್ಳುವುದು ಕೂಡಾ ಸಹನೀಯವೇ? ಕಾಲಗತಿ! 1948ನೇ ಜನವರಿ ಕೊನೆಯ ಶುಕ್ರವಾರದಲ್ಲಿ ರಾಷ್ಟ್ರಪಿತನನ್ನು ಕಳಕೊಂಡೆವು; 1950ನೇ ಡಿಸೆಂಬರ ಮಧ್ಯ ಶುಕ್ರವಾರದಲ್ಲಿ ರಾಷ್ಟ್ರರಕ್ಷಕನನ್ನು ಕಳಕೊಂಡೆವು. ಈ ಮೂರು ವರುಷಾವಧಿಯ ಆರಂಭದ ಮತ್ತು ಅಂತ್ಯದ ತುದಿಗಳಲ್ಲಿ ಇವೆರಡು ಮಹಾ ಗೋರಿಕಲ್ಲುಗಳು ಬಿದ್ದಿದ್ದರೆ ಮಧ್ಯದಲ್ಲೆಲ್ಲಾ ಜಾತೀಯ ಗಲಭೆಗಳು, ಅಸ್ಸಾಮ್ ಭೂಕಂಪದಂತಹ ಅನಾಹುತಗಳು, ಆಹಾರಾಭಾವದಂತಹ ಆಪತ್ತುಗಳು ಇನ್ನೂ ಎಷ್ಟೋ ಗಂಡಾಂತರಗಳು ತುಂಬಿದ್ದುವು. ಬಾಪೂಜೀಯ ನಿಧನದಿಂದಾರಂಭಿಸಿದ ಆಪತ್ಪರಂಪರೆಗಳು ಸರ್ದಾರರ ನಿಧನದೊಂದಿಗೆ ಮುಗಿದುಹೋದುವೆಂಬ ಭರವಸೆಯನ್ನಾದರೂ ನಾವು ಇಟ್ಟುಕೊಳ್ಳಬಹುದೇ? ಸ್ವಾತಂತ್ರ್ಯದ ಆದಿಭಾಗದ ಮೂರು ವರುಷಗಳು, ಎಲ್ಲಾ ಆಪತ್ತುಗಳನ್ನು ಅನುಭವಿಸಿ ಮುಗಿಸುವ ಅವಧಿಯಾಯಿತೆಂದೂ, ಇಲ್ಲಿಂದ ನಮ್ಮ ಸುಖಜೀವನಕ್ಕಾರಂಭವೆಂದೂ ನಾವು ಆಶಿಸಬಹುದೇ? ಏಕೆಂದರೆ ಗಾಂಧೀ ವಲ್ಲಭಾಯಿಗಳಂಥವರ ವಿಯೋಗ ದುಃಖವನ್ನು ಸಹಿಸುವಷ್ಟು ಸಹನೆ ನಮ್ಮಲ್ಲಿದೆ; ದೇಶವಿಭಜನೆಯಲ್ಲಿ ಮುಗ್ಗರಿಸದೆ ಎಡೆದು ನಿಲ್ಲುವ ಶಕ್ತಿ ನಮ್ಮಲ್ಲಿದ್ದಿತು; ಲಕ್ಷಾವಧಿ ಮಂದಿ ನಿರಪರಾಧಿ ಬಂಧುಭಗಿನಿಯರ ಕೊಲೆ, ಸ

ತಿದ್ದ ವಿಷಮ ಸಂದರ್ಭಗಳಲ್ಲಿ ಸಮಸ್ಯಾನಿವಾರಕ ದೃಢಚಿತ್ತದಿಂದಿದ್ದ ಚಿಕಿತ್ಸಕ—ಸರ್ದಾರ್ ಇನ್ನಿಲ್ಲ. ಜಾತೀಯತಾ ಗೊಂದಲದ, ಆಶ್ರಿತಾ ರಾಜ್ಯಗಳ ಸಮಸ್ಯೆಯ, ಅರಾಜಕತೆಯ ರಂಪಾಟದ, ಅಳಿಡತೆಯ ಬಿಕ್ಕಟ್ಟಿನ, ಕಾರ್ಮೋಡಗಳು ಕವಿದಾಗಲೆಲ್ಲಾ ಅವುಗಳನ್ನು ಭೇದಿಸಿ ಸ್ವತಂತ್ರ ಭಾ

ರ್ವಹಾರಗಳು ನಡೆದಾಗಲೂ ಬೀದು ಹೋಗದ ಎದೆ ನಮಗಿದೆ; ಭೂಕಂಪ, ನೆರೆ, ಬಿರುಗಾಳಿ, ಗೊಂದಲ ಅಭಾವಗಳೆಲ್ಲವನ್ನೂ ಒಟ್ಟೊಟ್ಟಿಗೆ ಅನುಭವಿಸಿಯೂ ಕುಸಿದುಹೋಗದೆ, ಇದ್ದೇವೆ. ಇವೆಲ್ಲವೂ ಅಗಾಧ ಸಂಕಟಗಳು ಅಸಹ್ಯ ಆಪತ್ತುಗಳು. ಇಷ್ಟನ್ನೆಲ್ಲಾ ಅನುಭವಿಸಿರುವ ಭಾರತೀಯರಿಗೆ, ಇವು ಗಿಂತ ಕಡಿಮೆಯವುಗಳು ಗಣ್ಯ ಕಷ್ಟ ನಷ್ಟಗಳಾಗುವಂತಿಲ್ಲ; ಇವುಗಳಿಗಿಂತ ಕಚ್ಚಿನ ಆಪತ್ತುಗಳು ಇರುವಂತಿಲ್ಲ. ಅಂದ ಮೇಲೆ ಇನ್ನು ಆಪತ್ತೆಂಬುದು ಏನೇ ಒಂದರೂ ಲಗು; ಈ ದೃಷ್ಟಿಯಿಂದಲೂ ಇನ್ನು ನಮಗೆ ಸುಖ, ಅಭಿವೃದ್ಧಿ ಅನಿವಾರ್ಯ. ಈ ಮೂರು ವರುಷಗಳು ನಮ್ಮನ್ನು ಹಲವು ಅಗ್ನಿ ಪರೀಕ್ಷೆಗಳಿಗೆ ದೂಡಿದವು; ಅಗಾಧ ಆಪತ್ತುಗಳನ್ನು ತಂದೊಡ್ಡಿದುವು. ಇನ್ನು ಮುಂದಿನದು ಅಭಿವೃದ್ಧಿ ಯುಗವೆಂದು ಭಾವಿಸಿಕೊಳ್ಳೋಣ. ಆದರೆ ಆಪತ್ತಿನಂತೆ, ಅಭಿವೃದ್ಧಿಯು ತಾನಾಗಿ ಒದಗಿಬರುವಂತಹುದಲ್ಲ; ಅದು ಸಾಧಿಸಲ್ಪಡುವಂತಹದು. ಅಂತಹ ಸಾಹಸಿಗಳು ನಾವಾಗಬೇಕು- ಇನ್ನು ಹಾಗಾಗದಿರುವುದೆಂದರೂ ಹೇಗೆ? ರಷ್ಯದ ಪಾಲಿಗೆ ಆಪತ್ತೆಂತಹ ದೊದಗಿದರೂ ಅದನ್ನು ನಿವಾರಿಸಬಲ್ಲ ಉಕ್ಕಿನ ಮನುಷ್ಯ—ಶ್ರೀ ಜವಾಹಿರಲಾಲ ನೆಹರು ಅಂದಂತೆ, ಮಿಕ್ಕವರು ಗೊಂದಲದೊಳಗಿದೆ ಗೊಂದಲಿಗಳಾಗಿ ಪೇಚಾಡು

ರತದ ರಾಜಕೀಯ ಗಗನವನ್ನು ಬೆಳಗಿಸಿದ್ದ ರವಿ ಈಗ ಅಸ್ತಮಿಸಿದ್ದಾನೆ. ಇನ್ನು ಜನತೆ ಸ್ವಯಂಪ್ರಕಾಶದಿಂದಲೇ ಬೆಳಗಬೇಕು. ಒಬ್ಬ ಮೂಲ ಸರ್ದಾರನು ಕಳೆದುಹೋಗಿ ಬಾಕಿ ಬೀಳುವ ಕಾರ್ಯಗಳನ್ನು ಪೂರೈಸುವುದಕ್ಕಾಗಿ ಇನ್ನು ಎಲ್ಲರೂ ಶಕ್ತ್ಯಾನುಸಾರ ಸರ್ದಾರರೇ ಆಗಬೇಕು. ಓರ್ವ ಸರ್ದಾರನ ಸ್ಥಾನಕ್ಕೆ ಜನತಾ ಸರ್ದಾರರು ಬರಬೇಕು. ಇನ್ನು ಆಗಬೇಕಾದುದು ಇದೇ.

ಪಟೇಲ್ ಜೀವನ

ವಲ್ಲಭಾಯಿಗಳು ಹುಟ್ಟಿದುದು ಗುಜರಾತಿನ ನಾಡಿಯಾಡಿನಲ್ಲಿ; 75 ವರುಷಗಳ ಹಿಂದೆ ಒಕ್ಟೋಬರ 31ರಲ್ಲಿ. ಅವರ ಹುಟ್ಟು ಕೃಷಿಕ. ವಲ್ಲಭಾಯಿ ಪಟೇಲರ ತಂದೆ ಜಾವೇರಭಾಯಿ ಪಟೇಲರು ಓರ್ವ ಸಾಮಾನ್ಯ ಪಟ್ಟಾದಾರ ರೈತನಿದ್ದರು. ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟವೆಂದು ಗಣಿಸಲ್ಪಟ್ಟಿರುವ 1857ರ ಸಿಪಾಯಿ ಹೋರಾಟದಲ್ಲಿ ಭಾಗವಹಿಸಿದವರು ಜವೇರಭಾಯಿ ಪಟೇಲರು. ಇವರಿಗೆ ಆರು ಗಂಡು, ಒಂದು ಹೆಣ್ಣು ಮಕ್ಕಳಿದ್ದರೆಂದು ತಿಳಿದುಬರುತ್ತದೆ. ಆ ಪೈಕಿ ಹಿರಿಯನೇ ಕೇಂದ್ರ ಎಸೆಂಬ್ಲಿ ಅಧ್ಯಕ್ಷನಾಗಿ, ತನ್ನ ಅಸಾಮಾನ್ಯ ಧೈರ್ಯ ಸ್ಥೈರ್ಯ ಮತ್ತು ದೇಶಸೇವಾ ಸ್ಫೂರ್ತಿಯಿಂದ ಪ್ರಸಿದ್ಧರಾಗಿದ್ದ ವಿಟ್ಠಲಭಾಯಿ ಪಟೇಲರು.

ವಲ್ಲಭಾಯಿಗಳು ತಾಲ್ಲೂಕಿನ ಮಗನಾ ಡಿಯಾಡ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗ ವಿದ್ಯಾರ್ಥಿರಂಗದಲ್ಲಿ ಹುಡುಗ ವಲ್ಲಭಾಯಿಯ ಸ್ವಾತಂತ್ರ್ಯ ಪ್ರೇಮ ಮತ್ತು ಚಳವಳ ನಾಯಕತ್ವವು ಸಂದರ್ಭಾನುಸಾರ ರೂಪುಗೊಂಡು ತೋರಿಬಂದಿದ್ದಿತು. ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದೊಡನೆ, ಆ ಕಾಲದಲ್ಲಿದ್ದ 'ಡಿಸ್ಟ್ರಿಕ್ಟ್ ಪ್ಲೀಡರ್ ಪರೀಕ್ಷೆ ಕೊಟ್ಟು ವಕೀಲರಾದರು. ಎಳೇ ತರುಣ ವಲ್ಲಭಾಯಿ ಗೋಧ್ರಾದಲ್ಲಿ ವಕಾಲತನ್ನಾರಂಭಿಸಿದರು. ಕ್ರಿಮಿನಲ್ ವ್ಯವಹಾರಣೆಗಳಲ್ಲಿ ಇವರಿಗಿದ್ದ ಅಭಿರುಚಿ ಸಿವಿಲ್ ವ್ಯಾಜ್ಯಗಳಲ್ಲಿರಲಿಲ್ಲ. ಗೋಧ್ರಾದಲ್ಲಿದ್ದಾಗ, ಮತ್ತು ಮೇಲೆ ಅಹಮ್ಮದಾಬಾದಿಗೆ ಬಂದು ವಕಾಲತನ್ನು ತೊಡಗಿದಾಗ ವಲ್ಲಭಾಯಿ ಪಟೇಲರು ಕ್ರಿಮಿನಲ್ ವಕೀಲನಾಗಿ ವಿಶೇಷ ಪ್ರಸಿದ್ಧಿ ಗಳಿಸಿದ್ದರು. ಆ ಮೇಲೆ ಬ್ಯಾರಿಸ್ಟರ್ ಆಗುವ ಬಯಕೆಯಿಂದ ಲಂಡನಿಗೆ ಹೋಗಿ ಅವಿಶ್ರಾಂತ ಅಭ್ಯಾಸ ಬಲದಿಂದ ಉಮೇದ್ವಾರಿಗಳ ಪೈಕಿ ಪ್ರಥಮ ತರಗತಿಯಲ್ಲಿ ಸರ್ವಪ್ರಥಮ ಬಂದರು. ನಾಜೋಕಿನ ಚಲ್ಲಣ, ಕೋಟು, ತುಸು ಓರೆಯಾದ ಹ್ಯಾಟು ಧರಿಸಿದ, ವಿಶಾಲೋಜ್ವಲ ನೇತ್ರಗಳ ಕುಳ್ಳ ಭವ್ಯ ತರುಣ ವಕೀಲ ವಲ್ಲಭಾಯಿಗಳನ್ನು ಆಗ ಕಂಡಿದ್ದವರು ಆ ಮೇಲಿನ ದೇಶಭಕ್ತ ವಲ್ಲಭಾಯಿಗಳನ್ನು ಅವರೇ ಇವರೆಂದು ಗುರುತಿಸುವುದು ಅಸಾಧ್ಯವಿದ್ದಿತು. ಗಾಂಧಿಜಿಯ ಸಂಪರ್ಕವುಂಟಾಗುವ ವರೆಗೂ ವಲ್ಲಭಾಯಿ ಪಟೇಲರು ಅಹಮ್ಮದಾಬಾದಿನ ಒಬ್ಬ ಸಮರ್ಥ ಹಾಗೂ ವಿಜಯೀ ಕ್ರಿಮಿನಲ್ ವಕೀಲನೇ ಇದ್ದರು. ದಕ್ಷಿಣಾಫ್ರಿಕದಲ್ಲಿ ಸತ್ಯಾಗ್ರಹ ತತ್ವಗಳನ್ನು ಪ್ರಯೋಗಿಸಿ, ಅಲ್ಲಿಂದ ಭಾರತಕ್ಕೆ ಮರಳಿದ್ದ ಗಾಂಧಿಜೀ ಅಹಮ್ಮದಾಬಾದಿನಲ್ಲಿ ಸತ್ಯಾಗ್ರಹ ಆಶ್ರಮವನ್ನು ಆಗ ತಾನೇ ಸ್ಥಾಪಿಸಿ

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.

H. O. **UDIPI** (SOUTH INDIA) ESTD: **1935.**

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್:—

ಶಾ ಕಂಪೆನಿ, ಮಂಗಳೂರು.

ಹೋಟಿದ್ದರು. ಆಗ ಭಾರತೀಯ ಸಾರ್ವಜನಿಕ ಜೀವನಕ್ಕೆ ಹೊಸ ಹೊಸ ವಿಷಯವಾಗಿದ್ದ ಸತ್ಯಾಗ್ರಹ ತತ್ವಸಾರಗಳನ್ನು ಸಾಧ್ಯವಿದ್ದಷ್ಟು ಹೆಚ್ಚು ಜನರ ನಡುವೆ ಪ್ರಸರಿಸುವ ಇಚ್ಛೆ ಗಾಂಧೀಜಿಯವರಾಗಿತ್ತು. ಅದಕ್ಕಾಗಿ ಅವರು ಅಹಮ್ಮದಾಬಾದಿನ ಗುಜರಾತ್ ಕ್ಲಬ್ಬಿಗೆ ಒಂದೆರಡು ಸಲ ಕಾರ್ಯದರ್ಶಿಯಾಗಿ ಪಟೇಲರು ಮಾತ್ರ ತನ್ನ ಆರೋಗ್ಯ ರಕ್ಷಣೆ, ಸ್ವಾಭಾವಿಕ ಗುಣವಾಗಿ ಪ್ಲೇಗ್ ಪೀಡಿತರ ರಕ್ಷಣೆಗಾಗಿ ದುಡಿದರು; ನಿಶ್ಶಂಕೆಯಿಂದ ಸಂಚರಿಸಿದರು.

ಗಾಂಧೀ ಸಂಬಂಧ

ಈ ರೀತಿ ಸಣ್ಣ ಕ್ಷೇತ್ರದಲ್ಲಾದರೂ ದರು. ವಿಜ್ಞಾಪನೆ, ಪ್ರಾರ್ಥನೆಗಳೆಲ್ಲವೂ ಹುಸಿಗೊಂಡ ವೇಳೆ, ಗಾಂಧೀತತ್ವಾನುಸಾರವಾಗಿ ವಲ್ಲಭಾಯಿ ಪಟೇಲರ ನಾಯಕತ್ವದಲ್ಲಿ ಸತ್ಯಾಗ್ರಹವಾರಂಭಿಸಿತು. ಅದೇ ಭಾರತೀಯ ಪ್ರಥಮ ಸತ್ಯಾಗ್ರಹ ಹೋರಾಟ. ಹ್ಯಾಟು, ಬಲ್ಲಾಣಗಳನ್ನು ಮೂಲೆಗೆಸೆದು ಸಾದಾ ಧೋತಿ, ಶರ್ಟುಗಳನ್ನು

ಭಾರತ ಸೇನಾನಿ ನಿರ್ಮಾಪಕ ರಕ್ಷಕ

ಧರಿಸಿದರು...

ಛೇಟಿ ಕೊಟ್ಟಿದ್ದರು. ಆದರೆ, ಆಗಿನ ವಕೀಲ್ ವಲ್ಲಭಾಯಿ ಇಂತಹ 'ಠಗಳೆ'ಗಳಿಗೆ ಕಿವಿಗೊಡುವ ಮನುಷ್ಯನಾಗಿರಲಿಲ್ಲ. ಈಗ ಪಾರ್ಲಿಮೆಂಟ್ ಅಧ್ಯಕ್ಷನಾಗಿರುವ ಶ್ರೀ ಮಾವಳಂಕರ್ ಮುಂತಾದವರೊಂದಿಗೆ ಆ ಕಾಲದಲ್ಲಿ ಅಹಮ್ಮದಾಬಾದ್ ಕ್ಲಬ್ಬಿನ ಸದಸ್ಯನಾಗಿದ್ದ ವಲ್ಲಭಾಯಿ ವಕೀಲ್, ಗಾಂಧಿಜಿ ಕ್ಲಬ್ಬಿಗೆ ಬರುವಾಗ ಒಂದೆಡೆ ಕುಳಿತು 'ಬ್ರಿಜ್ಜ್' ಆಡುವುದರಲ್ಲೇ ತಲ್ಲೀನರಾಗಿದ್ದರು; ಪತ್ನಿಯ ಮರಣವಾರ್ತೆಯ ತಂತಿ ಬಂದಾಗ, ಕೋರ್ಟಿನ ತನ್ನ ವಾಗ್ವಾದಕ್ಕೆ ಒಂದು ಮಿನಿಟಿನ ಮಟ್ಟಿಗಾದರೂ ತಡೆಹಾಕಿಕೊಳ್ಳದ ಈ ಕ್ರಿಮಿನಲ್ ವಕೀಲ, ಗಾಂಧಿಯಂಥವರು ಒಂದರೆಂದು ತನ್ನ ಕೆಲಸ ಬಿಡುವಂತಿದೆಯೆ? ಕೊನೆಗೆ ವಲ್ಲಭಾಯಿಗಳಂತೆಯೇ ಗಾಂಧೀಭಕ್ತರಾದ ಶ್ರೀ ಮಾವಳಂಕರರಂಥವರು ಗಾಂಧೀ ಭಾಷಣ ಕೇಳುವುದಕ್ಕಾಗಿ ಆಟ ಬಿಟ್ಟೆದ್ದರೆ, ವಲ್ಲಭಾಯಿಗಳು ಅವರಿಗೆ ಪರಿಹಾಸ್ಯ ಮಾಡುವದಿದ್ದಿತು. ಹರಿಟೆ ಹೊಡೆಯಲು ಬಂದ ಉಭ್ರಮಿ ಗಾಂಧಿಯನ್ನೂ, ಅದನ್ನೂ ಕೇಳುವದಕ್ಕಾಗಿ 'ಬ್ರಿಜ್' ಆಟದಂತಹ ಮನರಂಜಕ ಕಾರ್ಯಕ್ರಮವನ್ನು ಬಿಟ್ಟೇಳುವ ತನ್ನ ಸಹವರ್ತಿಗಳನ್ನೂ ವಲ್ಲಭಾಯಿ ಗೇಲಿಮಾಡುವದಿದ್ದಿತು. ಸುಮಾರು ಎರಡು ವರುಷಗಳ ವರೆಗೆ ವಲ್ಲಭಾಯಿಗಳು ಗಾಂಧೀಗಾಳಿಯನ್ನೂ ಸೋಂಕಲು ಬಿಡದೆ ದೂರವುಳಿದಿದ್ದರು. ಆದರೆ ತನಗೆ ಸರಿಕಂಡ ಕೆಲಸಕ್ಕೆ ತನ್ನನ್ನೇ ಸಮರ್ಪಿಸಿಕೊಳ್ಳುವ ಏಕಾಗ್ರತಾಬುದ್ಧಿಯವನನ್ನು, ಅವನ ಅದೊಂದೇ ಯೋಗ್ಯತೆಯು ಎಲ್ಲಿಂದೆಲ್ಲಿಗೊಯ್ಯಬಲ್ಲುದೆಂಬುದಕ್ಕೆ ಸರ್ದಾರರ ಜೀವನವೊಂದು ಉತ್ತಮ ನಿದರ್ಶನ. ಅವರು ಸಮರ್ಥ ಮತ್ತು ನಿಷ್ಠಾವಂತ ವಕೀಲನಷ್ಟೇ ಆಗಿದ್ದಾಗಲೇ ಅಹಮ್ಮದಾಬಾದ್ ಮುನ್ಸಿಪಾಲಿಟಿಯ ಸದಸ್ಯನಾದರು. ಅದರ 'ಆರೋಗ್ಯ ರಕ್ಷಣಾ ಸಮಿತಿ'ಯ ಅಧ್ಯಕ್ಷಸ್ಥಾನವು ಇವರಿಗೆ ದೊರೆಯಿತು. ವಲ್ಲಭಾಯಿ ಪಟೇಲರನ್ನು ಸೇವಾಜೀವಿಯಾಗಿ ಮಾರ್ಪಡಿಸಿದ ಪ್ರಥಮ ಗೌರವ ಸಲ್ಲಬೇಕು ಈ 'ಸೆನಿಟರಿ ಕಮಿಟಿ' ಅಧ್ಯಕ್ಷ ಹುದ್ದೆಗೆ. ಆಗಲೇ ಅಹಮ್ಮದಾಬಾದ್ ನಗರದಲ್ಲಿ ಭೀಕರ 'ಪ್ಲೇಗು' ವ್ಯಾಪಿಸಿಕೊಳ್ಳಬೇಕೆ? ಪ್ಲೇಗು ಹಾವಳಿಯು ಅಹಮ್ಮದಾಬಾದಿನ ಕೋರ್ಟುಗಳನ್ನು ಶಾಲೆಗಳನ್ನು ಬಾಗಿಲು ಹಾಕಿಸಿತು; ಇಡೀ ನಗರದ ಜನವಲನವನ್ನೇ ನಿಲಿಸಿಬಿಟ್ಟಿತು.

ಪೀಡಿತರ ಸೇವೆಗಿಳಿದು, ಅದರ ಅನುಭವಾಗಿದ ಮೇಲೆಯೇ ಗಾಂಧೀಜಿಯ ಜನಸೇವಾ ಚಟುವಟಿಕೆಗಳಲ್ಲಿ ವಲ್ಲಭಾಯಿಯವರಿಗೆ ಆಸಕ್ತಿ ಮೊಳೆತುದು. ಗುಜರಾತ್ ಸಭೆಯ ಅಧ್ಯಕ್ಷಸ್ಥಾನಕ್ಕೆ ಗಾಂಧೀಜೀ ಆಮಂತ್ರಿಸಲ್ಪಟ್ಟು ಅಹಮ್ಮದಾಬಾದಿಗೆ ಬಂದಾಗಲೇ ಗಾಂಧೀ ಪಟೇಲರ ಮುಖಾಮುಖಿ ಪರಿಚಯ ಮತ್ತು ಸಂಬಂಧವಾರಂಭ. ರಾಜಕೀಯದಲ್ಲಿ ಸತ್ಯಾಗ್ರಹದ ಸ್ಥಾನವನ್ನು ಮತ್ತು ಭಾರತ ಜನಜೀವನದಲ್ಲಿ ಗಾಂಧೀಜಿಯ ಮಹಾತ್ಮೆಯನ್ನು ಅರಿತುಕೊಳ್ಳಲು, ದೂರದರ್ಶಿ ಮತ್ತು ತುಲನಾತ್ಮಕ ಬುದ್ಧಿಯ ಪಟೇಲರು ಮತ್ತೆ ತಡ ಮಾಡಲಿಲ್ಲ. ಆಗಲೇ, ಗಾಂಧಿಯವರ ಸತ್ಯಾಗ್ರಹ ತತ್ವಗಳನ್ನು ವ್ಯವಹಾರ ಕ್ಷೇತ್ರದಲ್ಲಿ ಪ್ರಯೋಗಕ್ಕೆ ಹಚ್ಚುವ, ಮತ್ತು ಮೂಲಕ ವಲ್ಲಭಾಯಿಗಳನ್ನು ವೀರ ಸತ್ಯಾಗ್ರಹಿಯಾಗಿ ಮಾರ್ಪಡಿಸುವ ಸುವರ್ಣ ಸಂದರ್ಭವೊದಗಿತು. 1918ರಲ್ಲಿ ಅಖಿಲ ಗುಜರಾತಿನಲ್ಲಿ—ಅದರಲ್ಲೂ ವಿಶೇಷತಃ ಖೈರಾ ಜಿಲ್ಲೆಯಲ್ಲಿ—ಬರಗಾಲ ವ್ಯಾಪಿಸಿಕೊಂಡಿತು ಅಲ್ಲಿ ರೂಪಾಯಿಗೆ ನಾಲ್ಕಾಣೆಯಷ್ಟೂ ಬೆಳೆ ಬೆಳೆಯಲಿಲ್ಲವಾದರೂ, ಸರಕಾರೀ ಅಧಿಕಾರಿಗಳು ರೂಪಾಯಿಗೆ ಇಪ್ಪತ್ತಾಣೆಯಂತೆ ಬೆಳೆ ಬಂದಿದೆ ಎಂಬ ವ್ಯತಿರಿಕ್ತಾಭಿಪ್ರಾಯ ಸೂಚಿಸುತ್ತಾ ತೀರ್ವೆಯಲ್ಲಿ ಪೈಶಗ್ಗಿಸಲೊಪ್ಪದೆ ಕಠೋರ ರೀತಿಯಿಂದ ವಸೂಲಿಗೆ ತೊಡಗಿ ತೊಟ್ಟು, ವಲ್ಲಭಾಯಿಗಳು ಸಾಮಾನ್ಯ ಜನರ ನಡುವೆ ರಾತ್ರಿ, ಹಗಲು ತಿರುಗಾಡಿ ದುಡಿದುದನ್ನು ಮೊದಲ ಬಾರಿ ಕಂಡುದಿಲ್ಲಿಯೇ. ಸ್ವಾವಲಂಬನೆ, ಕಷ್ಟಸಹನೆ, ತ್ಯಾಗಬಲದಿಂದಲೇ ಜನರು ತಮ್ಮ ಸಂಕಷ್ಟಗಳನ್ನು ನಿವಾರಿಸಿಕೊಳ್ಳಬೇಕೆಂಬ ಪಾಠವು ಪ್ರಥಮತಃ ಮುಂದಿಟ್ಟುದುದು ಖೈರಾ ಸತ್ಯಾಗ್ರಹದಲ್ಲೇ. ಆ ನಂತರ ಸಂಘಟನೆಯ ಅನುಭವವನ್ನು ದೊರಕಿಸಿಕೊಡುವ ಸಂದರ್ಭವೂ ಪಟೇಲರಿಗೊದಗಿಬಂತು. ಅಹಮ್ಮದಾಬಾದ್ ಮಿಲ್ ಮಜೂರರ ಪ್ರಚಂಡ ಮುಷ್ಕರವನ್ನು ಅವರು ಜಯಶೀಲವಾಗಿ ನಡೆಸಿದರು. ಇಷ್ಟರಲ್ಲೇ ಕಾಂಗ್ರೆಸಿನಲ್ಲಿ ಪಟೇಲರು ಗಣ್ಯಸ್ಥಾನವೊಂದನ್ನು ಗಳಿಸಿದ್ದರು. ನಾಗಪುರದ 'ಸಿವಿಲ್ ಲೈನ್'ನ ಮುಂಭಾಗದಲ್ಲಿ ರಾಷ್ಟ್ರಧ್ವಜಧಾರಿ ಮೆರವಣಿಗೆ ಹೋಗದಂತೆ ಸರಕಾರವು ಅತಂಕಿಸಿದಾಗ, ಅದು ಅಖಿಲರಾಷ್ಟ್ರದ ಅಭಿಮಾನದ ಪ್ರಶ್ನೆಯಾಗಿ ಬೆಳೆಯಿತು; ಪಟೇಲ್ ಸಹೋದರರು ಕಾಂಗ್ರೆಸಿನಿಂದ ಈ ಧ್ವಜ ಸತ್ಯಾಗ್ರಹದ ನಾಯಕರಾಗಿ ನೇಮಕಗೊಂಡು ಅದನ್ನು ಸಂಘಟಿತ ರೀತಿಯಿಂದ ನಡೆಸಿದರು. ಕೊನೆಗೆ ಈ ವಿವಾದವು ಒಪ್ಪಂದ ಮೂಲಕ ಮುಕ್ತಾಯಗೊಂಡಿತು. 'ನಾಗಪುರ ಧ್ವಜ ಸತ್ಯಾಗ್ರಹ'ವೆಂಬ ಸ್ಫುಟ ಹೆಸರಿನಿಂದ ಸ್ವಾತಂತ್ರ್ಯ ಹೋರಾಟ ಚರಿತ್ರೆಯಲ್ಲಿ ಅದೊಂದು ಸ್ಥಾನ ಪಡೆಯಿತು. ಗಾಂಧಿಜೀಯೊಂದಿಗೆ ಸಂಬಂಧ ಜೋಡಣೆಯಾದಂದಿನಿಂದ, ಪಟೇಲರು ದಿನದಿಂದ ದಿನಕ್ಕೆ ಗಾಂಧೀ ಅನುಯಾಯಿತ್ವದಲ್ಲಿ ಹತ್ತಿರ ಹತ್ತಿರವಾಗುತ್ತಾ ಬಂದಿದ್ದರು. ಗಾಂಧಿಜೀ ನಾಯಕತ್ವದ ಅಸಹಕಾರ ಚಳವಳದಲ್ಲಿ ಧುಮುಕಿ ಕಾಯಿದೇ ಭಂಗದ ಪ್ರಚಂಡ ಸಿದ್ಧತೆಯ ಮೂಲ ಕಾರ್ಯಕರ್ತನಾಗಿದ್ದರು. ಆದರೆ ಕಾಯಿದೇ ಭಂಗವನ್ನಾರಂಭಿಸುವ ಹೊತ್ತಿಗೆ ಚೌರಿಚೌರಾ ಗಲಭೆ ನಡೆದುದರಿಂದ ಅಷ್ಟರಲ್ಲೇ ಮಹಾತ್ಮರಾಗಿದ್ದ ಗಾಂಧಿಜೀ ಆಗೊಮ್ಮೆ ಹೆಜ್ಜೆ ಹಿಂದಿಡಬೇಕಾಯಿತು; ಬೆನ್ನಲ್ಲೇ ಮಹಾತ್ಮಾ ಗಾಂಧಿಯವರ ದಸ್ತಗಿರಿಯಾಗಿ ಅವರು ಆರು ವರುಷಗಳ ಸಜೆಗೀಡಾದರು. ಆ ವೇಳೆ ಕಾಂಗ್ರೆಸಿಗರ ಮನಸ್ಸು ಅಸಹಕಾರದಿಂದ ಜಾರಿ, ಶಾಸನ ಸಭಾ ಕಾರ್ಯಕ್ರಮಗಳ ಮೇಲೆರಗಿತು. ಇದು ಖಾದಾ ಮಾಡಿ ಮನೋವೃತ್ತಿಯ ಸರ್ದಾರರಿಗೆ ಅಸಹ್ಯವಾಗಿ, ಅವರು ಆಗಿನ ಕಾಂಗ್ರೆಸಿನಿಂದ ದೂರ ಹೋಗಿ ವಿಧಾಯಕ ಕಾರ್ಯಕ್ರಮಗಳಲ್ಲಿ ಮಗ್ನರಾದರು. ಆಗಲೇ ಅಹಮ್ಮದಾಬಾದ್ ನಗರ ಸಭಾಧ್ಯಕ್ಷನಾಗಿ ಉಪಯುಕ್ತ ಕಾರ್ಯಗಳನ್ನು ಸಾಧಿಸಿದರು.

ಬಾರ್ಡೋಲಿ ಸತ್ಯಾಗ್ರಹ

ಆದರೆ ಅವರು ಕಾಂಗ್ರೆಸಿನಿಂದ ಬಹುಕಾಲ ದೂರಉಳಿಯಲಿಲ್ಲ; ಕೇವಲ ಗುಜರಾಥ್ ಪ್ರಮುಖನಾಗಿಯೂ ಉಳಿಯಲಿಲ್ಲ. ಅವರನ್ನು ಅಖಿಲ ಭಾರತದ ಅಗ್ರಪಂಕ್ತಿಯ ನಾಯಕನಾಗಿ—ಸರ್ದಾರನಾಗಿ—ಮಾಡಿದ ವ್ಯಾಪಕ ಹಾಗೂ ಚಿರಸ್ಮರಣೀಯ ಘಟನೆ ಬಾರ್ಡೋಲಿಯಲ್ಲಿ ನಡೆಯಿತ. ಸರದಿ ಪ್ರಕಾರ ಬಾರ್ಡೋಲಿಯಲ್ಲಿ 'ಭೂ ಸೆಟ್ಲ್‌ಮೆಂಟ್' 1928ರಲ್ಲಿ ನಡೆಯಿತು. ಈ ಸೆಟ್ಲ್‌ಮೆಂಟಿನ ಅರ್ಥವೆಂದರೆ 20°/. ರಷ್ಟು ತೀರ್ವೆ ಏರಿಸುವುದೇ. ಇದು ಬಾರ್ಡೋಲಿ ಸಾಗುವಳಿಗಾರರಿಗೆ ಅಸಹ್ಯವಾಗಿದ್ದರೂ, ಆದರೆ ಸರಕಾರವೇನ್ನನ್ನೂ ಕೇಳಲಿಲ್ಲ. ಸರಿ, ವಲ್ಲಭಾಯಿ ಪಟೇಲರ ಧುರೀಣತ್ವದಲ್ಲಿ 'ಬಾರ್ಡೋಲಿ ಕರನಿರಾಕರಣಾ ಚಳವಳವಾರಂಭಿಸಿತು. ಆಗ ಇಡೀ ತಾಲೋಕಿನ ಎಲ್ಲಾ ಜನರೂ, 'ಸೈತೀರ್ವೆಕೊಡುವಂತಿಲ್ಲ' ಎಂಬ ಶಪಥದ ಮಟ್ಟಿಗೆ ಸ್ವತಃ ತನ್ನಷ್ಟೇ ದೃಢ ಬುದ್ಧಿಯವರಾಗುವಂತೆ ಸಂಘಟಿಸಿದ ವಲ್ಲಭಾಯಿ ಪಟೇಲರ ಅದ್ಭುತ ಶಕ್ತಿ ಬ್ರಿಟಿಷ್ ಸರಕಾರವನ್ನು ದಂಗುಬಡಿಸಿತು; ಭಾರತದ ಪ್ರತಿಯೊಂದು ತಾಲೂಕಿಗೊಬ್ಬ ಸರ್ದಾರನಿದ್ದು ಬಂದರೆ ತಮ್ಮ ಸಾಮ್ರಾಜ್ಯ ಉರು

"ಬೇರೆ ಶಾಸ್ತ್ರಗಳನ್ನೇಕೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೀದ ಛಟ್ಟೆಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ —

ನವಯುಗ ಪ್ರೆಸ್ ಉಡುಪಿ, ದ. ಕನ್ನಡ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ವಿವಿಧ ಪಾತ್ರೆಗಳು



ಯಾವತರ, ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನು ... ಆಗಿ ಯಾಚೆಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಪಾರಾಲಯ,
ರಥಬೀದಿ, ಉಡುಪಿ

ಳ ಬಾಳಲು ದಿನವೆಷ್ಟು ಬೇಕು, ಎಂದು ಬ್ರಿಟಿಷರು ಹೆದರಿಹೋದರು. ಶೀರ್ವ ಕೊಡುವವರಿಲ್ಲ; ಏಲಮಿಗಿಟ್ಟ ಆಸ್ತಿ ಪಾಸ್ತಿಗಳನ್ನು ವಹಿಸಿಕೊಳ್ಳುವವರಿಲ್ಲ; ದಬ್ಬಾಳಿಕೆಗೆ ಹೋದ ಅಧಿಕಾರಿಗಳಿಗೆ ಕುಡಿಯಲು ನೀರೂ ಸಿಕ್ಕಲೊಲ್ಲದು. ಜಪ್ತಿ ಮಾಡಿದ ಜಾರಿಗಿದ್ದ ಕರಾಚಿ ಕಾಂಗ್ರೆಸಿನ ಅಧ್ಯಕ್ಷನಾಗಿ 1931ರಲ್ಲಿ ದುಡಿದುದು–1932ರಲ್ಲಿ ಮತ್ತೊಮ್ಮೆ ಆರಂಭಿಸಿದ ಕಾಯಿದೇ ಭಂಗದಲ್ಲಿ ಭಾಗವಹಿಸಿ ಪುನಃ ಜೈಲು ಪಾಲಾದುದು– ಆ ಮೇಲೆ ಕಾಂಗ್ರೆಸು ಶಾಸನ ಸಭಾ ಕಾರ್ಯರಂಗಕ್ಕಿಳಿದಾಗ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡ್ರ ಭಾರತದೊಂದಿಗೆ ಜೋಡಣೆಗೊಳಿಸಿದುದೇ. ಸಾಮ, ದಾನ, ಭೇದ, ದಂಡೋಪಾಯಗಳಿಂದ, ಸರದಿ ಬಂದಾಗ ಮಿಂಚು ವೇಗದಿಂದ ಈ ಸಂಸ್ಥಾನಗಳೆಲ್ಲವನ್ನೂ ಅಖಿಲ ಭಾರತದ ಬಗಲೊಳಗೆ ಸೇರಿಸಬಲ್ಲ ಸರ್ದಾರರೊಬ್ಬರಿಲ್ಲದಿರುತ್ತಿದ್ದರೆ, ಸಂಸ್ಥಾನೀ ಸಮಸ್ಯೆಯೆಂಬುದು ಭಾರತದ ದ ಇತ್ತೀಚೆಗೆ ಮೂರು ವಾರಗಳಿಂದ ಈಚೆಗೆ ಪ್ರಕೃತಿ ಮತ್ತಷ್ಟು ಕೆಡುತ್ತ ಬಂದಿದ್ದಿತು; ಅವರು ಬಹಳ ನಿತ್ರಾಣಗೊಂಡಿದ್ದರು. ಡಾಕ್ಟರರ ಸಲಹೆಯಂತೆ ದಿಲ್ಲಿಯ ಶೀತಹವೆಯ ಬದಲಿಗೆ ಬೊಂಬಾಯಿಯ ಮಿತ ಹವಾಮಾನದಲ್ಲಿ ಆರೋಗ್ಯ ಸಾಧಿಸಲಿಕ್ಕೆಂದು ಸರ್ದಾರ್

ದೇಹಾರೋಗ್ಯ ಲೆಕ್ಕಿಸದೆ ದೇಶಾರ್ಯ ಮಾಡಿದರು

ಸೊತ್ತುಗಳನ್ನು ಸಾಗಿಸಲು ಅಧಿಕಾರಿಗಳು ಹೊರಗಿನಿಂದ ಪಠಾಣರನ್ನು ತರಬೇಕಾಯಿತು. ವಲ್ಲಭಾಯಿಗಳ ಮಾತೇ ಅಲ್ಲಿ ಕಾನೂನೂ ಮತ್ತು ವೇದವಚನವಾಗಿದ್ದಿತು. ಸರಕಾರವು ಆ ಸೋತು, ಇಬ್ಬರು ಇಂಗ್ಲಿಷ್ ಅಧಿಕಾರಿಗಳಿಂದ ಪುನರ್ವಿಚಾರಣೆಯ ಶಾಸ್ತ್ರ ನೆರವೇರಿಸಿ, 25°/. ರಷ್ಟು ಏರಿಸಿದ್ದ ತೀರ್ವೆಯನ್ನು ಕೇವಲ 6¾°/. ಯೊಳಗೆ ಎಂದು ತಗ್ಗಿಸಿಕೊಂಡಿತು. ಬಾರ್ಡೋಲಿ ಹಂಥವನ್ನು ಗೆದ್ದು ಕೊಟ್ಟದಕ್ಕಾಗಿ, ಮಹಾತ್ಮಾ ಗಾಂಧಿಯವರು ವಲ್ಲಭಾಯಿಗಳಿಗೆ ದಾನ ಮಾಡಿದ್ದ ಬಿರುದೇ 'ಸರ್ದಾರ್'. ಅಂದು ಇಡೀ ದೇಶವನ್ನು ವಿಶೇಷ ರೀತಿಯಿಂದ ಆಕರ್ಷಿಸಿಕೊಂಡ ಸರ್ದಾರರು, ಆ ಮೇಲೆ ಕೊನೆಯ ವರೆಗೂ ರಾಷ್ಟ್ರೀಯ ಕಾರ್ಯಗಳಲ್ಲಿ ಅನುಕ್ರಮವಾಗಿ ಬೆಳೆಯುತ್ತಾ ಹೋದರಲ್ಲದೆ ಹಿಂದೆ ಬಿದ್ದ, ತಪ್ಪಿ ಬಿದ್ದ ಇಲ್ಲವೇ ಪರಾಭವಗೊಂಡ ನಿದರ್ಶನವೇ ಇಲ್ಲ.

ಸೇನಾನಿ ಮತ್ತು ನಾಯಕ

ಅಂದಿನಿಂದ ಅಂತ್ಯದ ವರೆಗಿನ ಸರ್ದಾರ್ ಪಟೇಲರ ಕಾರ್ಯಕಲಾಪ ಮತ್ತು ಜೀವನ ಕೂಡಾ ಭಾರತ ರಾಷ್ಟ್ರ ಜೀವನದ ಒಂದು ಅಂಗವಾಗಿಯೇ ಇದೆ; ಸಾರ್ವಜನಿಕರ ಪುಣ್ಯಸ್ಮರಣೆಗಳಾಗಿ—ಹೆಗ್ಗಳಿಕೆಯ ಮತ್ತು ಅಭಿಮಾನದ ದ್ಯೋತಕಗಳಾಗಿ—ಅವು ಚಿರನೂತನವಿವೆ. 1930ರ ಉಪ್ಪಿನ ಕಾಯಿದೇ ಭಂಗದಲ್ಲಿ ಅವರು ಅಗ್ರಭಾಗ ವಹಿಸಿ ಜೈಲು ಸೇರಿದುದು– 'ಮೂಲ ಭೂತ ಹಕ್ಕು'ಗಳ ನಿರ್ಣಯ ಮಂಡಿಸಿದ ಅಧ್ಯಕ್ಷನಾಗಿ, ಪ್ರತಿಯೊಂದು ಪ್ರಾಂತ್ಯದ ಕಾಂಗ್ರೆಸ್ ಚಟುವಟಿಕೆಗಳನ್ನು ಅತಿ ಸಮರ್ಥ ರೀತಿಯಿಂದ ಸಾಗಿಸಿ, ನಿಂದಾಸ್ಥಿತಿಗಳನ್ನು ಕಡೆಗಣಿಸಿ ಕಠಿಣ ಹಸ್ತದಿಂದ ಶಿಸ್ತು ಪಾಲನೆ ಮಾಡಿದುದು– 1942ರ 'ಕ್ವಿಟ್ ಇಂಡಿಯಾ' ಚಳವಳದಲ್ಲಿ ಪುನಃ ಜೈಲು ಪಾಲಾದುದು–ಇವೆಲ್ಲವೂ ಸರ್ವಶ್ರುತ ವಿಷಯಗಳು. 1946ರಲ್ಲಿ ಸ್ಥಾಪನೆಗೊಂಡ 'ಮಧ್ಯಾವಧಿ ಕೇಂದ್ರ ಸರಕಾರ'ದ ಗೃಹ ಸಚಿವನಾಗಿದ್ದು, ಅಧಿಕಾರ ಮುದ್ರೆ ಸಂಬಂಧದ ಮಾತುಕತೆ ಮತ್ತು ವ್ಯವಸ್ಥೆಗಳಲ್ಲಿ ಸರ್ದಾರ್ ಪಟೇಲರು ವಹಿಸಿದ್ದ ಭಾಗವು ಅತ್ಯಂತ ಪ್ರಾಮುಖ್ಯವಾದುದು. ದ್ವಿರಾಷ್ಟ್ರ ತತ್ವಕ್ಕೆ ಬದ್ಧ ವಿರೋಧಿಯಿದ್ದು, ನಂ. 1ನೇ ವೈರಿಯೆಂದು ಮುಸ್ಲಿಂ ಲೀಗಿನಿಂದ ಗಣಿಸಲ್ಪಟ್ಟಿದ್ದರೂ ಪ್ರಸಂಗಾವಧಾನಿ ಮತ್ತು ವ್ಯವಹಾರ್ಯ ದರ್ಶನೆಯ ಸರ್ದಾರರು, ಪಾಕಿಸ್ತಾನ್ ರಚನೆಗೊಪ್ಪಿಗೆ ಕೊಡುವ ಮೂಲಕ ಅನಿವಾರ್ಯವಾದುದನ್ನು ಅಂಗೀಕರಿಸಿಕೊಂಡರು. ಭಾರತದ ಉಪ ಪ್ರಧಾನಿಯಾದರು. ಅದರೊಂದಿಗೆ ಆರಂಭಿಸಿದ್ದ ಭೀಕರ ಜಾತೀಯ ಗೊಂದಲಗಳನ್ನು ಮತ್ತು ಅರಾಜಕತೆಯನ್ನು ದಮನಿಸಿ ಕಾನೂನು ಮತ್ತು ವ್ಯವಸ್ಥೆಯನ್ನು ಪಾಲಿಸಿದ ಕೀರ್ತಿ ಸರ್ದಾರ್ ವಲ್ಲಭಾಯಿಗಳದು. ಸರ್ದಾರರ ಚತುರೋಪಾಯ ಪೂರ್ಣತೆಗೊಂದು ಪ್ರತ್ಯುಜ್ವಲ ದಾಖಲೆಯೆಂದರೆ, ಗೃಹ ಮತ್ತು ಸಂಸ್ಥಾನಗಳ ಮಂತ್ರಿ ಸ್ಥಾನದಿಂದ ಭಾರತದೊಳಗಿನ 600ಕ್ಕೂ ಮಿಕ್ಕಿದ ಸಂಸ್ಥಾನಗಳನ್ನು ಕೇಂದ್ರ ಅಸ್ತಿತ್ವವನ್ನೇ ನೂರಾರು ಕಡೆಗಳಲ್ಲಿ ಕುಗ್ಗಿಸುವ ಕಂಟಕವಾಗಿ ಬೆಳೆಯಲು ಸಾಧ್ಯವಿದ್ದಿತು. ಆದರೆ ಸರ್ದಾರರಿದ್ದರು; ಭಾರತದ ಅಖಂಡತ್ವವನ್ನು ಉಳಿಸಿ, ಸರ್ವವ್ಯಾಪಿ, ಸಶಕ್ತ ಕೇಂದ್ರವನ್ನು ಅವರು ನಿರ್ಮಿಸಿಕೊಟ್ಟರು. ವಿವಿಧ ರೂಪಿ ಆಂದೋಲನಗಳನ್ನು, ಅರಾಜಕತೆಗಳನ್ನು ಕಠಿಣ ಹಸ್ತದಿಂದ ನಿರ್ಮೂಲಿಸಿ ರಾಷ್ಟ್ರವನ್ನು—ನವೋದಿತ ಸ್ವಾತಂತ್ರ್ಯವನ್ನು–ಉಳಿಸಿಕೊಟ್ಟ ಮಹಾ ನಾಯಕನೇ ಸರ್ದಾರ್ ವಲ್ಲಭಾಯಿ ಪಟೇಲ್.

ಮುಗಿಯಿತು!

ಹೆಸರೆತ್ತಿ ಹೇಳಬಹುದಾದ ಕಾಯಿಲೆಯಿರದಿದ್ದರೂ ಅವಿಶ್ರಾಂತ ಪರಿಶ್ರಮ ಮತ್ತು ಪ್ರಾಯದ ಒತ್ತಡದಿಂದ ಸರ್ದಾರ್ ವಲ್ಲಭಾಯಿಗಳು ಕೆಲಕಾಲದಿಂದ ದೈಹಿಕವಾಗಿ ನಿತ್ರಾಣ ಮನುಷ್ಯನಾಗಿದ್ದರು. ಹೋದಲ್ಲೆಲ್ಲಾ ಕುಳಿತುಕೊಂಡೇ ಭಾಷಣ ಮಾಡುವಷ್ಟು ಕಾಲಬಲ ಕುಸಿದಿದ್ದಿತು. "ನಾನು ಆಯುಷ್ಯದ ಅಪರಾಹ್ನದಲ್ಲಿದ್ದೇನೆ. ಇನ್ನುಳಿದಿರುವುದು ಸ್ವಲ್ಪ ಕಾಲ ಮಾತ್ರ; ಕೊನೆಯ ವರೆಗೂ ನನ್ನ ಪಾಲಿನ ಸೇವೆಯನ್ನು ಸಲ್ಲಿಸಿಯೇ ಹೋಗುವೆ. ಆದರೆ, ಕಷ್ಟಾರ್ಜಿತ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಭವ್ಯ ಭವಿಷ್ಯವನ್ನು ಕಟ್ಟಿಕೊಳ್ಳುವ ಜವಾಬ್ದಾರಿ ನಿಮ್ಮದೇ. ಮರೆಯಬೇಡಿ, ಇದನ್ನೆಂದಿಗೂ ಮರೆಯದಿರಿ" ಎಂದು ತನ್ನ ಕೊನೆಗಾಲದ ಭಾಷಣಗಳಲ್ಲೆಲ್ಲಾ ಸರ್ದಾರರು ಭಾರತೀಯ ಜನತೆಯನ್ನು ಎಚ್ಚರಿಸುತ್ತಾ ಬಂದಿದ್ದುದು ಈ ಸಂದರ್ಭದಲ್ಲಿ ನೆನಪಾಗುತ್ತಿ

ಟೇಲ್ ಇದೇ ತಾ. 12ರಲ್ಲಿ ದಿಲ್ಲಿಯಿಂ ಬೊಂಬಾಯಿಗೆ ಬಂದರು. ಅವರೆಷ್ಟು ತ್ರಾಣಿಯಾಗಿದ್ದರೆಂದರೆ, ದಿಲ್ಲಿಯ ವಿ ಗ್ಡನ್ ವಿಮಾನ ನಿಲ್ದಾಣಕ್ಕೆ ಸರ್ದಾ ನ್ನು ತಂದ ಕಾರು ವಿಮಾನದ ಪಕ್ಕದ ರೆಗೂ ಹೋಗಿ, ಅಲ್ಲಿಂದ ವಿಮಾನದೊ ಗಡೆಗೆ ಒಂದು ಕುರ್ಚಿಯಲ್ಲಿ ಅವರ ಹೊತ್ತು ತರಬೇಕಾಯಿತು. ಇಂತಹ ತಿಯಲ್ಲಿ ಕೂಡಾ ಸರ್ದಾರರು ತನ್ನ ಸರದ ಆಫೀಸು ಕಾರ್ಯಗಳನ್ನು ತೀ ಯೇ ಹೊರಟಿದ್ದರೆಂಬುದು ತಿಳಿದು ಬರು ದೆ. ಸರ್ದಾರರು ತಮ್ಮನ್ನಗಲಿ ದೂರ, ಹು ದೂರಕ್ಕೆ ಹೋಗುತ್ತಿದ್ದಾರೆಂಬುದನ್ನು ಸಂದರ್ಭದಲ್ಲಿ ಅರಿಯದೆ, ಕೆಲವು ವಾ ಳ ವಿಶ್ರಾಂತಿಗಾಗಿ ಹೊರಟಿದ್ದಾರೆಂದಷ್ಟೆ ತಿಳಿದುಕೊಂಡಿದ್ದ ಅಧ್ಯಕ್ಷ ಪ್ರಸಾದ ಪ್ರಧಾನಿ ನೆಹರು, ರಾಜಾಜಿ ಮತ್ತು ಮಂತ್ರಿಗಳೂ ಪ್ರಮುಖಾಧಿಕಾರಿಗಳೂ ಧ್ಯರೂ ಬೀಳ್ಕೊಡಲು ನಿಲ್ದಾಣಕ್ಕೆ ಬಂ ದ್ದರು. ನೆಹರು ಮತ್ತು ರಾಜಾಜಿ ಸರ್ದಾ ರರೊಂದಿಗೆ ವಿಮಾನದೊಳಕ್ಕೂ ಹೋ ಕೆಲ ಹೊತ್ತು ಮಾತಾಡಿದ್ದರು. ಚಿರ ಯೋಗಕ್ಕೆ ತಯಾರಾಗಿದ್ದ ಸರ್ದಾರರ ತ್ಮಕ್ಕೆ ಆ ಮುಹೂರ್ತದಲ್ಲೇ ಹೇಗ ತ್ತೋ– ತನ್ನ ಸಂಗಾತಿಗಳು ವಿದಾ ವಂದನೆ ಕೊಟ್ಟಾಗ ಸರ್ದಾರರಿಗೆ ದುಃ ವೃಕ್ಕಿ ಬಂತು. ವಿಮಾನವು ಬೊಂ ಯಿ ನಿಲ್ದಾಣದಲ್ಲಿಳಿದಾಗ, ಮೊರಾರ್ಜಿ ದೇಸಾಯಿ, ಯಸ್. ಕೆ. ಟೀಲ್ ಮತ್ತಿತರ ಪ್ರಮುಖರು ಹಾ ದ್ದರು. ದೇಹದಲ್ಲಿ ತೀರಾ ಕುಗ್ಗಿ ಹೋ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD

ಎಲ್ಲ ಕಡ್ಡಿ ಮದ್ದು ಅಂಗಡಿಗಳಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Manglaore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad &Mercara.

B. Manjaya Hegde,

Advocate & President, District Board S. Kanara.

CHAIRMAN.



ದ ಮು
ಹೋದರೆ
ತಿರುಗಿ
ಬಾರದು

ಕಳೆದ ೨೮ ವರ್ಷದಿಂದಲೂ ಪ್ರಸಿದ್ಧ ಡಾಕ್ಟರರ ಔಷಧದ ಉಪಾಯ

ಪುರೋಹಿತ-ಶ್ವಾಸಹಾರಿ



ಡಾ. ಪುರೋಹಿತ ಫಾರ್ಮಸಿ

ಕೊಲ್ಹಾಪುರ. (ಎಸ್. ಎಮ್. ಸಿ.)

ದ್ದ ಸರ್ದಾರರು ಸ್ವಾತಂತ್ರ್ಯೋತ್ತರ ಯುಗದ ಪ್ರಧಾನ ಶಿಲ್ಪಿಯಾಗಿರುವುದು ಎಲ್ಲರಿಗೂ ಮುಖ್ಯವಾಗಿದ್ದರೂ ತೋರಿ ಬಂದಿದ್ದಿತು. ಆದರೆ ಪ್ರಮುಖರ ವಂದನೆಗಳಿಗೆ ಪ್ರತಿವಂದನೆ ಸಲ್ಲಿಸಿದರಷ್ಟೇ ಹೊರತು, ಯಾರೊಡನೆಯೂ ಮಾತಾಡುವ ಸ್ಥಿತಿಯಲ್ಲಿ ಸರ್ದಾರರಿರಲಿಲ್ಲ. ಇಷ್ಟೆಯೂ ವಿಮಾನದಿಂ ಧೆ ಮಹಾದೇವಿಗಳಿಗೂ ಸಿಡಿಲೆರಗಿದಂತಾಗಿತ್ತು. ಅ [illegible] ಕವಿದು ಕೊಂಡಿತು - ಭಾರತ ಪಾರ್ಲಿಮೆಂಟಿನಲ್ಲಿ "ಸ್ವಾತಂತ್ರ್ಯ ಸಂಗ್ರಾಮದ ನಮ್ಮ ಸೇನಾನಿಗಳ ಮಹಾಸೇನಾನಿ, ನವಭಾರತ ನಿರ್ಮಾಪಕ ಮತ್ತು ಸಂರಕ್ಷಕನನ್ನು ಕಳೆಕೊಂಡೆವು" ಎಂದು ಗದ್ಗದ ಕಂಠದಿಂದ ರೋದಿಸಿ ಲ್ ದೇಹದ ಕೊನೆಯ ಪ್ರಯಾಣವಾರಂಭಿಸಿತು. "ರಘುಪತಿ ರಾಘವ ರಾಜಾರಾಮ್" ಸಾಮೂಹಿಕ ಭಜನೆಯ ಮತ್ತು ಪುರೋಹಿತರ ವೇದಘೋಷಗಳ ನಡುವೆ, ಸರ್ದಾರರ ದೇಹವು ಬಿರ್ಲಾ ಭವನದೊಳಗಿಂದ ಹೊರಬಂದ, ಈ ಸಂದರ್ಭಕ್ಕಾಗಿ ಸಜ್ಜುಗೊಳಿಸಿದ್ದ ಒಂದು ಕೋವಿ ಮೋಟಾ ಣಿಸುತ್ತಿದ್ದವು. ಎತ್ತರ ಗೋಡೆಗಳಿಂದ ಆವರಿಸಲ್ಪಟ್ಟಿರುವ ಸೋನಾಪುರ ಸ್ಮಶಾನ ಭೂಮಿಯನ್ನು ಮುಟ್ಟುವಾಗ ತಾಸು 7-20 ಆಗಿತ್ತು; ಈ ವಲಯದ ಗಿಡ ಮತ್ತು ಮರಮಾಡುಗಳಲ್ಲಿ ಇಂಚು ಬಿಡದೆ ಜನ ತುಂಬಿಹೋಗಿದ್ದರು. ಸ್ಮಶಾನ ಭೂಮಿಗೆ ತಲುಪಿದೊಡನೆ ಜನ

ದೇಶವನ್ನು ಉಳಿಸಿ ತಾನು ಹೊರಟು ಹೋದರು!

ದ ಆರಿಗೆ ಸರ್ದಾರರನ್ನು ತಂದು ಕುರ್ಚಿಯಲ್ಲಿಟ್ಟುಕೊಂಡೆ. ಆದರೆ ತನ್ನ ವಿಶ್ರಾಂತಿಗೃಹ ಬಿರ್ಲಾ ಭವನಕ್ಕೆ ಮುಟ್ಟಿದಾಗ, ಹೊರಿಸಿಕೊಳ್ಳಲೊಪ್ಪದೆ ಕೆಲವು ಹೆಜ್ಜೆ ತಾನೇ ನಡೆದು ಹೋದರೆಂದು ತಿಳಿದು ಬಂದಿದೆ. ಸರಿ; ಆ ದಿನ ರಾತ್ರಿ ಸುಖ ನಿದ್ರೆ ಬಂತು; ಉಲ್ಲಾಸಿಯಾಗಿ ಕಂಡು ಬಂದರು; ತಾ. 13 ಮತ್ತು 14ರಲ್ಲೂ ಹಾಗೆಯೇ; ಸುಧಾರಿಸುತ್ತಾ ಬಂದಂತೆ ತೋರಿತು. ಬೊಂಬಾಯಿಯ ಶಾಂತ ಹವೆ ಸರ್ದಾರರನ್ನು ರಕ್ಷಿಸಿ ಕೊಡುವಂತೆ ತೋರಿತು; ಡಾಕ್ಟರರು ಸಮಾಧಾನ ಪ್ರದರ್ಶಿಸಿದ್ದರು. ಆದರೆ ತಾ. 15 ಹಿಡಿಯುವ ರಾತ್ರಿ ತಾಸು 1ಕ್ಕೆ ಅವರ ಪರಿಸ್ಥಿತಿ ಅಕಸ್ಮಾತ್ ಇಳಿಮುಖವಾಯಿತು. ತಾಸು 3ಕ್ಕೊಂದು ಎದೆ ನೋವು ಬಡಿದು ಸರ್ದಾರರಿಗೆ ಸ್ಮೃತಿ ತಪ್ಪಿತು. ಡಾಕ್ಟರರು ಬಂದರು; 'ಒಕ್ಸಿಜನ್' ಪ್ರಯೋಗ ನಡೆಯಿತು. ಭಾರತ ಸರಕಾರಕ್ಕೆ ಸುದ್ದಿ ಕೊಡಲಾಯಿತು. ಘಂಟೆ 8ಕ್ಕೆ ಸರ್ದಾರರಿಗೆ ಸ್ಮೃತಿ ಬಂದು ಒಂದು ಗ್ಲಾಸು ನೀರು ಕೇಳಿದರು. ಹಲವು ವರುಷಗಳಿಂದಲೂ ತಂದೆಯ ಪಕ್ಕದಲ್ಲೇ ಇದ್ದ ಮಗಳು ಮಣಿಬೆನ್ ಪಟೇಲ್ ಬಾಯಿಗೆ ಹಿಡಿದ ಕೊನೆಯ ನೀರನ್ನು ಸರ್ದಾರರು ಚೀಪಿದರು. ಆ ಮೇಲೆ ಕೆಲವೇ ಮಿನಿಟುಗಳು, ಸರ್ದಾರರು ದಿಂಬಿನಲ್ಲೇ ದಕ್ಷಿಣಕ್ಕೆ ಮುಖ ಹೊರಳಿಸಿ ಊರ್ಧ್ವ ಶ್ವಾಸ ಬಿಡಹತ್ತಿದರು; ಗಂಗಾ ತುಳಸೀಜಲವನ್ನು ಬಾಯಿಗೆ ಬಿಡುತ್ತಿದ್ದಂತೆಯೇ ಬರಬರುತ್ತಾ ನಾಡೀ ಚಲನೆ ಮಂದವಾಗ ಹತ್ತಿತು. ಸರಿಯಾಗಿ ತಾಸು 9-37ಕ್ಕೆ ಸರ್ದಾರ್ ಪಟೇಲರ ಪ್ರಾಣ ಹೋಯಿತು. ಏಕಮಾತ್ರ ಪುತ್ರಿ ಸದಾ ಜತೆಗಾತಿ ಕಾರ್ಯದರ್ಶಿ ಮಣಿಬೆನ್ ಪಟೇಲ್, ಏಕಮಾತ್ರ ಪುತ್ರ ದಯಾಭಾಯಿ ಪಟೇಲ್, ಸೊಸೆ ಮೊಮ್ಮಕ್ಕಳು ಮತ್ತು ಕೆಲವು ಪ್ರಮುಖರು ಸುತ್ತ ಬಳಸಿದ್ದಂತೆ ಸರ್ದಾರರು ಶಾಂತವಾಗಿ ನೆಮ್ಮದಿಯಿಂದ ಪ್ರಾಣ ಬಿಟ್ಟರು. ತುಟಿಗಳ ನಡುವಿನ ತುಳಸೀ ದಳವೊಂದು ಸರ್ದಾರರು ಶವವಾದರೆಂಬುದನ್ನು ತಿಳಿಸುತ್ತಿತ್ತು—ಅದಲ್ಲವಾದರೆ ಕೊನೆಯ ಕೆಲವು ತಾಸುಗಳ ಪ್ರಾಣಾವಧಿ ಯಾತನೆಯನ್ನು ಅನುಭವಿಸಿದ ಚಿಹ್ನೆಯನ್ನಾಗಲೀ ಶ್ವಾಸ ನಿಂತ ಲಕ್ಷಣವನ್ನಾಗಲೀ ತೋರಿಸುವಂತಹದು ಆ ಮುಖದಲ್ಲಿರಲಿಲ್ಲ; ಅದಷ್ಟು ಗಂಭೀರವಾಗಿತ್ತು.

ಅನಂತರ—

ಸರ್ದಾರ ಪಟೇಲ ವಿಯೋಗ ವಾರ್ತೆಯು ಆಕಾಶವಾಣಿ, ತಂತಿ, ಟೆಲಿಫೋನ್‌ಗಳ ಮೂಲಕ ಒಮ್ಮೆಗೇ ಭಾರತದ ಮೂ ಪ್ರಧಾನಿ ನೆಹರೂಗಳು, ತನ್ನ ಅನಾರೋಗ್ಯವನ್ನು ಕಡೆಗಣಿಸಿ ಹೊರಟ ಅಧ್ಯಕ್ಷ ರಾಜೇಂದ್ರ ಪ್ರಸಾದ್, ಮಂತ್ರಿ ರಾಜಾಜಿ, ಕಾಂಗ್ರೆಸ್ ಅಧ್ಯಕ್ಷ ಟಂಡನ್ ಮತ್ತಿತರರೊಂದಿಗೆ ಕೂಡಲೇ ವಿಮಾನ ಹತ್ತಿ ಬೊಂಬಾಯಿಗೆ ಧಾವಿಸಿ ಬಂದರು. ಅಲ್ಲಿ ಬಿರ್ಲಾಭವನದೊಳಗೆ ಕಾಲಿಟ್ಟು, ಶಾಂತ ಚಿರನಿದ್ರೆಯಲ್ಲಿ ಮಲಗಿದ್ದ ತನ್ನ ಬಂಧುವನ್ನು ಕಂಡೊಡನೆ ನೆಹರೂಗಳು ದುಃಖಾವೇಗದಿಂದ ಒಮ್ಮೆ ಸ್ತಬ್ಧರಾಗಿ ನಿಂತ ದೃಶ್ಯವು ಇಡೀ ಲೋಕದ ಸಹಾನುಭೂತಿಯನ್ನು ಆಕರ್ಷಿಸಿಕೊಳ್ಳುವಷ್ಟು ಹೃದಯಸ್ಪರ್ಶಿಯಿದ್ದಿತು. ದುಃಖಪೀಡಿತ ರಾಷ್ಟ್ರವನ್ನು ಪ್ರತಿನಿಧಿಸುವಂತಿದ್ದ ಶೋಕ ಪ್ರತಿಬಿಂಬ ನೆಹರು ನಿಧಾನವಾಗಿ ಕಾಲೆಳೆಯುತ್ತಾ ಶವವಾದ ತನ್ನ ಜೀವಾವಧಿ ಬಂಧುವಿನ ಕಾಲ ಬಳಿಗೆ ಬಂದು ಎರಡೂ ಕೈಗಳನ್ನೆತ್ತಿ ಪ್ರಣಾಮಮಾಡಿದರು; ತುಂಬಿಬಂದ ಕಣ್ಣುಗಳೊಡನೆ ಮೂರು ಮಿನಿಟು ಮೌನವಾಗಿ ಅಲ್ಲೇ ನಿಂತು, ಆ ಮೇಲೆ ಮೆಲ್ಲಗೆ ಬದಿಗೆ ಸರಿದರು. ರಾಜಾಜಿಯ ಗಲ್ಲಗಳಲ್ಲಿ ಕಂಬನಿ ಧಾರೆಗಟ್ಟಿ ಸುರಿಯುತ್ತಿತ್ತು; ನೆಹರುಗಳು ಅವರನ್ನು ಕೊಂಡೊಯ್ದು ಸೋಫಾದಲ್ಲಿ ಕುಳ್ಳಿರಿಸಿದರು. ಪಂಡಿತ ಗೋವಿಂದ ವಲ್ಲಭ ಪಂತರಂತೂ ಸರ್ದಾರರ ಶವವು ಕಣ್ಣಿಗೆ ಬಿದ್ದೊಡನೆ ತಾಯಿಯನ್ನು ಕಳೆಕೊಂಡ ಚಿಕ್ಕ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು.

ಅಂದು ಅಪರಾಹ್ನ 5-15ಕ್ಕೆ ಶವ ಮೆರವಣಿಗೆ ಹೊರಡುವ ಮೊದಲು ಕಡಿಮೆಯೆಂದರೂ 5 ಲಕ್ಷ ಮಂದಿ ಸರ್ದಾರರ ಕೊನೆಯ ದರ್ಶನಕ್ಕಾಗಿ ಬಿರ್ಲಾ ಭವನಕ್ಕೆ ಬಂದಿದ್ದರು. ಕೆಲವರು ಅಳುತ್ತಿದ್ದರೆ, ಇನ್ನು ಕೆಲವರು ಅಳುವುದಕ್ಕೂ ಅಸಾಧ್ಯವಾಗುವಷ್ಟು ಶೋಕ ಮಂಕು ಹಿಡಿದು ಹೋಗಿದ್ದರು. ಬಿರ್ಲಾ ಭವನದ ಮೂರು ಮೈಲು ವಿಸ್ತಾರಕ್ಕೂ ಹೋಗಿ ಬರುವ ಜನ ಸಂದಣಿಯ ಮತ್ತು ವಾಹನಗಳ ವ್ಯವಸ್ಥೆಯು ಪೋಲೀಸರಿಗೆ ಅತ್ಯಂತ ಪ್ರಯಾಸಕ್ಕಿಟ್ಟುಕೊಂಡಿತು. ಬಿರ್ಲಾಭವನವಂತೂ ದುಃಖ ಸಮುದ್ರದ ನಡುವಿನ ನಡುಗಡ್ಡೆಯಂತೆ ತೋರುತಿತ್ತು — ತಲೆತಗ್ಗಿಸಿಕೊಂಡು ರೋದಿಸುತ್ತಾ ನಿಂತಿದ್ದ ಜನಸಂದಣಿಯ ಮುತ್ತಿಗೆಯ ಮಧ್ಯೆ ಮಂತ್ರಿಗಳ, ಮಿಲಿಯಾಧೀಶರು, ರಾಜರು, ವಿವಿಧ ವರ್ಗದ ಅಧಿಕಾರಿಗಳ, ಎಲ್ಲಾ ಜಾತಿಮತಗಳ ಜನಸಾಮಾನ್ಯರು ಸರ್ದಾರರಿಗೆ ಕೊನೆಯ ಗೌರವ ಸಲ್ಲಿಸಲು ಅಲ್ಲಿ ನೆರೆದಿದ್ದರು.

ಅಪರಾಹ್ನ 5½ ಘಂಟೆಗೆ ಮೆರವಣಿಗೆ ಬಿರ್ಲಾಭವನದಿಂದ ಹೊರಟಿತು. ಸರ್ದಾರರನ್ನಿರಿಸಲ್ಪಟ್ಟಾಗ, ಸೈನಿಕರು ಮತ್ತು ಸಶಸ್ತ್ರ ಪೋಲೀಸರು ನೇಟಾಗಿ ನಿಂತು ವಿದಾಯ ವಂದನೆ ಸಲ್ಲಿಸಿದರು. ಆ ಮಹಾ ಸಮುದಾಯದಲ್ಲಿ ಎಳ್ಳು ಬಿದ್ದರೆ ಸದ್ದಾಗುವಂತಹ ಮೌನವು ಆ ಮುಹೂರ್ತದಲ್ಲಿ ವ್ಯಾಪಿಸಿಕೊಂಡಿತು. ಎಲ್ಲರೂ ಗಾಢ ಶೋಕ ಮತ್ತು ಕೃತಜ್ಞತಾ ಭಾವದಿಂದ ತಲೆಬಾಗಿಸಿದ್ದರು. ಕೆಲವರಂತೂ ಗೋಳೋ ಎಂದು ಅತ್ತುಬಿಟ್ಟರು. ಕರಿಕೋಟು ಪಟ್ಟಿ ಧರಿಸಿದ್ದ ಪೋಲೀಸು ದಳ ಮತ್ತು ಮೋಟಾರು ಸೈಕಲ್ ದಳ ಮುಂಭಾಗದಲ್ಲಿ ಹೊರಟಿತು; ಅದರ ಹಿಂದೆ ಬಂಡಿ ಸಾಗಿತ್ತು; ಬಂಡಿಯಲ್ಲಿ ಹಣೆ ತುಂಬ ಚಂದನ ಲೇಪಿಸಿ, ಮಧ್ಯದಲ್ಲಿ ಕುಂಕುಮ ತಾಗಿಸಿದ್ದ, ದೇಹಕ್ಕೆಲ್ಲಾ ಬಿಳಿ ವಸ್ತ್ರ ಹೊದಿಸಿದ್ದ ಸರ್ದಾರರ ಕಾಯ ಹೂಮಾಲೆರಾಶಿಗಳ ನಡುವೆ ಮಲಗಿತ್ತು. ಅದರ ಹಿಂದೆ ಅಧ್ಯಕ್ಷ ಪ್ರಸಾದ್, ಪ್ರಧಾನಿ ನೆಹರು, ರಾಜಾಜಿ ಇದ್ದ ದೊಡ್ಡ ಮೋಟಾರು—ಅದನ್ನನುಸರಿಸಿ ಸೇನೆ, ನಾವೆ ಮತ್ತು ವಿಮಾನ ಬಲಗಳ ಯೋಧರು—ಬೆನ್ನಲ್ಲಿ ವಿದೇಶೀ ವ್ಯವಹಾರಾಧಿಪತಿಗಳು ಪ್ರಮುಖ ಅಧಿಕಾರಿಗಳು, ಪತ್ರಿಕಾವಾಲರು, ಕಾಂಗ್ರೆಸಿಗರು ಮತ್ತಿತರರು....ಸಂತಾಪ ಗಂಭೀರತೆಯಿಂದ ಸಾಗಿದ್ದರು. ಮೂರು ವಿಮಾನಗಳು ದೇವತೆಗಳ ಸಾನ್ನಿಧ್ಯ ವಹಿಸಿ ಬಂದವೇನೋ ಎಂಬಂತೆ ಸರ್ದಾರರು ಚಿರನಿದ್ರೆಗೆ ಸಂದ ಬಿರ್ಲಾ ಭವನಕ್ಕೆ ಸುತ್ತು ತೆಗೆದು, ಮೆರವಣಿಗೆಯನ್ನು ಅನುಕರಿಸಿಕೊಂಡು ಮೆಲ್ಲಗೆಯಲ್ಲಿ ಹಾರಾಡುತ್ತಾ, ಆಗಾಗ ಸರ್ದಾರ್ ಶವದ ಮೇಲೆ ಪುಷ್ಪವೃಷ್ಟಿಗರೆಯುತ್ತಿದ್ದುವು. ಒಂದು ಮೈಲುದ್ದದ ಮೆರವಣಿಗೆ ಮುಂದೆ ಹೋಗಿ ಕಾಂಗ್ರೆಸ್ ಭವನದೆದುರು ತುಸು ನಿಂತು ದೇಶ ಸೇವಕರುಗಳ ವಿದಾಯ ವಂದನೆ ಮತ್ತು ಪುಷ್ಪಹಾರ ಸ್ವೀಕರಿಸಿ ಮುಂದುವರಿಯಿತು. ಇಷ್ಟು ವರೆಗೆ ಬಂಡಿಯೇರಿ ಬಂದಿದ್ದ ರಾಜೇಂದ್ರ ಪ್ರಸಾದ್ ಮತ್ತು ನೆಹರೂಗಳು ಅಲ್ಲಿಂದ ಸ್ಮಶಾನ ಭೂಮಿಯ ವರೆಗೆ ಶವಬಂಡಿಯ ಮುಂಗಡೆ ಕಾಲ್ನಡೆಯಲ್ಲಿ ಸಾಗಿದ್ದರು. (ಪುತ್ರಿ ಪುತ್ರ ಮಣಿಬೆನ್ ಮತ್ತು ದಯಾಭಾಯಿ ಶವಬಂಡಿಯ ಇಕ್ಕಡೆಗಳಲ್ಲಿ ಗೊಂಬೆಗಳಂತೆ ಚಲಿಸುತ್ತಿದ್ದರು. ಬಿರ್ಲಾಭವನದಿಂದ ನಾಪಿಯನ್ ಸಮುದ್ರ ರಸ್ತೆ, ಗೋವಾಲಿಯಾ ಟ್ಯಾಂಕ್ ರಸ್ತೆ, ಭೂಲೇಶ್ವರ, ಕಲ್ಬಾದೇವಿ ರಸ್ತೆ, ಪ್ರಿನ್ಸೆಸ್ ಸ್ಟ್ರೀಟ್, ಇವುಗಳನ್ನು ದಾಟಿ ಸೋನಾಪುರ ಸ್ಮಶಾನ ಭಾಗದ ಕ್ವೀನ್ಸ್ ರೋಡಿಗೆ ಬಂತು. ದಾರಿಯುದ್ದಕ್ಕೂ ಅಸಂಖ್ಯಾತ ಜನಸಂದಣಿ ನೆರೆದು ಹೂ ಚೆಲ್ಲುತ್ತಿತ್ತಲ್ಲದೆ ಗೋಳಾಡುವ ಮುಖಗಳು ಎಲ್ಲೆಲ್ಲೂ ಕಾ ನಾಯಕರೇ ಹೆಗಲುಕೊಟ್ಟು ಬಂಡಿಯಲ್ಲಿದ್ದ ಶವವನ್ನು ಹೊತ್ತುತಂದು ಚಿತೆಯ ಮೇಲಿಟ್ಟರು. ವಲ್ಲಭಭಾಯಿಗಳ ಅಣ್ಣ ವಿಠ್ಠಲಭಾಯಿಗಳನ್ನು ಸುಟ್ಟಿದ್ದ ಸ್ಥಳದ ಸಮೀಪದಲ್ಲೇ ಗಂಧದ ಚಿತೆ ರಚನೆಗೊಂಡಿದ್ದಿತು. ಅದರಮೇಲೆ ಹಾಸಿದ್ದ ಬಿಳೀ ಹೊದಿಕೆಯ ಮೇಲೆ ಸರ್ದಾರ್ ಶವವು ಅವರ ಪ್ರಾಣಾವಧಿ ಸಂಗಾತಿಗಳಾದ ಧುರೀಣರ ಕೈಯಿಂದಲೇ ತಾಸು 7-25ಕ್ಕೆ ಇರಿಸಲ್ಪಟ್ಟಿತು. ಹಾಜರಾಗಿದ್ದ ಗವರ್ನರರುಗಳೇ ಮೊದಲಾದವರಿಂದ ಕಳುಹಲ್ಪಟ್ಟಿದ್ದ ಹೂದಂಡೆಗಳು ಅಲ್ಲಿ ಚಿತೆಗೆ ಅರ್ಪಿಸಲ್ಪಟ್ಟವು. ಪ್ರಸಾದ್, ನೆಹರು, ರಾಜಾಜಿ, ಬೊಂಬಾಯಿ ಮತ್ತು ಮದ್ರಾಸು ಗವರ್ನರರು; ಹಾಜರಿದ್ದ ಮುಖ್ಯಮಂತ್ರಿಗಳು ಮತ್ತಿತರ ಮಂತ್ರಿಗಳು ಭಕ್ತಿಪೂರ್ವಕ ಸರ್ದಾರರ ಪಾದಸ್ಪರ್ಶ ಮಾಡಿದರು. ಸೇನಾಧಿಪತಿ ಜನರಲ್ ಕರ್ಯಪ್ಪ, ನಾವೆಯ ಅಧಿಪತಿ ಎಡ್ಮಿರಲ್ ಪೇರಿ, ವಿಮಾನಾಧಿಪತಿ ಏರ್ ಮಾರ್ಶಲ್ ಮುಕರ್ಜಿಗಳು ಹಾಜರಾಗಿ ಸೆಲ್ಯೂಟ್ ಕೊಟ್ಟು ನಿಂತರು. ತಂತಮ್ಮ ದಳಗಳ ಪರವಾಗಿ ಹೂದಂಡೆಗಳನ್ನು ಅರ್ಪಿಸಿದರು. ಸರ್ದಾರರ ಸೊಸೆ ಮತ್ತು ಮೊಮ್ಮಗ ಚಿತೆಗೆ ಮೂರು ಸುತ್ತು ತೆಗೆದ ಮೇಲೆ ದಯಾಭಾಯಿ ತುಪ್ಪ, ಮತ್ತು ಪರಿಮಳ ದ್ರವ, ಧೂಪಾದಿಗಳನ್ನು ಚೆಲ್ಲಿ ಚಿತೆಗೆ ಬೆಂಕಿ ಕೊಟ್ಟಾಗ, ಅಲ್ಲಿ ಸುತ್ತುವರಿದಿದ್ದವರೆಲ್ಲರೂ ಕಣ್ಣೀರು ಸುರಿಸುತ್ತಾ ಹಿಂದೆ ಸರಿದರು. ಈಚೆ ಪಕ್ಕಕ್ಕೆ ಮುಖ ತಿರುಗಿಸಿ ನಿಂತಾಗ ಜವಾಹರಲಾಲ ನೆಹರು ಅಳುತ್ತಿದ್ದುದು ಕಾಣಿಸಿತ್ತು. ಚಿತೆಯುರಿಯುತ್ತಿದ್ದಂತೆ ರಾಜಾಜಿ ಮತ್ತು ರಾಜೇಂದ್ರ ಪ್ರಸಾದರ ಶೋಕೋದ್ಗಾರ ಭಾಷಣಗಳಾದುವು. ಅಧ್ಯಕ್ಷ ರಾಜೇಂದ್ರರು ನೆಹರುಗಳನ್ನು ಮಾತಾಡಲು ಹೇಳಿದಾಗ ದುಃಖಾವೇಗದಿಂದ ಅವರಿಗೆ ಮಾತಾಡಲಾಗಲಿಲ್ಲ. ಮುಂದೆ ಹೋಗಿ ಚಿತೆಗೆ ಒಂದು ಹಿಡಿ ಧೂಪ ಚೆಲ್ಲಿ ಹಿಂದಿರುಗಿದರು.

ಸರ್ದಾರರ ದೇಹ ಬೂದಿಯಾಯಿತು. ರಾಜ್ಯಗೌರವದೊಂದಿಗೆ ಅಂತ್ಯಕ್ರಿಯೆ ನಡೆಸುವುದಕ್ಕಾಗಿ ಆ ಬೂದಿಯ ಸಂಚಗಳು [illegible] ಕಳುಹಲ್ಪಡುವವೆಂದು ತಿಳಿದು ಬಂದಿದೆ;

ಭಾರತವಿಡೀ ರೋದಿಸುತ್ತಿದೆ. ಕಣ್ಣೀರಿನೊಂದಿಗೆ ರೋದಿಸುತ್ತಿದೆ. 'ಅಯ್ಯೋ!' 'ಹಾ' ಸ್ವರಪ್ರವರ ಧ್ವನಿಗಳು ಬಹುವಿಧದಿಂದ ಕೇಳುತ್ತಿವೆ. ಲೋಕದ ಎಲ್ಲಾ ರಾಷ್ಟ್ರಗಳ ನಾಯಕರೂ 'ಭಾರತದ ಬಿಸ್ಮಾರ್ಕ'ನ ನಿಧನಕ್ಕಾಗಿ ಹೃದಯಸ್ಪರ್ಶಿ ಶೋಕ ಸಂದೇಶಗಳನ್ನಿತ್ತಿದ್ದಾರೆ. ಭಾರತದ ಸರ್ದಾರ್ ಇನ್ನಿಲ್ಲ!

We accept
Deposits at the following rates:

Current	....	½%
Savings Bank	....	2 %
Short-Term	....	1½ %
Fixed – 3 months	....	1 %
6 „	....	2 %
12 „	....	2½ %
24 „	....	3 %

THE
Canara Banking Corporation Ltd.
(Incorporated in India.)
Estd: 1906.
Head Office : **UDIPI, (S. I.)**

ಗುರುವಾರ, ಉಡುಪಿ, ೨೧-೧೨-೫೦

ಕೊರಿಯಾ ಯುದ್ಧ—

ಕೊರಿಯಾ ಯುದ್ಧಗತಿ ಮತ್ತು ಸಂಬಂಧದ ಮಾತುಕತೆಗಳು ಲೋಕವನ್ನು ಎಲ್ಲಿಗೆ ಕೊಂಡೊಯ್ಯುವವೋ ನಿಶ್ಚಯವಾಗಿ ಹೇಳುವುದು ಅಸಾಧ್ಯ. ಪರಿಸ್ಥಿತಿಯು ವಿಷಮಾವಸ್ಥೆಗೇರಿದಂತೆ, ಹಾಗೆಯೇ ಉಳಿದುಕೊಂಡಿದೆ ಹೊರತು, ಸುಧಾರಿಸುವ ಲಕ್ಷಣಗಳೇನೂ ಕಾಣಿಸುತ್ತಿಲ್ಲ. ಕೊರಿಯದಲ್ಲಿ ಒಂದೇ ಸವನೆ ಸಂಯುಕ್ತ ರಾಷ್ಟ್ರದ ಸೇನೆಗಳು ಹಿಮ್ಮೆಟ್ಟುತ್ತಿದ್ದಾಗ—ಅಟಂಬಾಂಬಿನ ಪ್ರಸ್ತಾಪಬಂದಾಗ—ಮಹಾಪಾಯ ಸನ್ನಿಹಿತವಾದ ಅಪಶಕುನಗಳು ತೋರಿಬಂದುವು; ಅವೀಗಲೂ ಉಳಿದಿವೆಯಾದರೂ ತುಸು ಸಮಯ ಕಳೆದಿರುವುದರಿಂದ ಆದಿಭಾಗದ ಭಯಗೊಂದಲಗಳು ಈಗ ಸ್ವಲ್ಪ ಕಡಿಮೆಯಾಗಿವೆ; ಆದರೆ ಅಪಾಯ ನಿವಾರಣೆಯಾಯಿತೆಂಬ ಹೊಸ ಭರವಸೆಯೇನೂ ಕಾಣಿಸುತ್ತಿಲ್ಲ. ಪ್ರತ್ಯಕ್ಷ ರಣರಂಗದಲ್ಲೂ ಹೀಗೆಯೇ—ಕೆಲಕಾಲದಿಂದ ಸಂ. ರಾ. ಸೇನೆಗಳು ಹಿಂದೋಡಿ ಬರುತ್ತಲೇ ಇವೆ. ಆದರೀಗ ವಾಡಿಕೆಯ ಮಟ್ಟಕ್ಕೆ ಬಂದುದರಿಂದ ಆದಿ ಭಾಗದಲ್ಲಿದ್ದ ದಿಗಿಲು ಕ್ರಮಶಃ ಕಡಿಮೆಯಾಗಿದೆ. ವಿಜಯ ಸಾಧಿಸುತ್ತಾ ಕೊರಿಯದ ಉತ್ತರ ಮೂಲೆಗೆ ಹೋಗಿದ್ದ ಸಂ. ರಾ. ಸೇನೆಗಳನ್ನು ಇದಿರುಗಡೆಯಿಂದ ಕವಿದುಬಂದ ಮಹಾಪೂರದಂತೆ ಚೈನೀ ಕಮ್ಯೂನಿಸ್ಟ್ ಸೇನೆಗಳು ರಭಸದಿಂದ ಹಿಂತಳ್ಳಿದಾಗ ಕಾಲು ಜಾರಿಹೋದ ಸಂ. ರಾ. ಸೇನೆಗಳು ಈಗ ದಕ್ಷಿಣ ಮೂಲೆಯಲ್ಲಿ ಕಾಲೂರುವ ಅಭ್ಯಾಸವನ್ನು ಮಾಡುತ್ತಿವೆ ಕಮ್ಯೂನಿಸ್ಟ್ ಸೇನೆಗಳಿಗೆ ಪ್ರತಿಭಟನೆ ಕೊಡಹತ್ತಿವೆ. ಆದರೂ ಕಮ್ಯೂನಿಸ್ಟ್ ಸೇನೆಗಳು ಇವರಿಗೆ ಮೇಲ್ಕೈಯಾಗಿಯೇ ಇದ್ದು, ಹವಾಂಗ್‌ಹಂಗಿನಂತಹ ಆಯಕಟ್ಟಿನ ನಗರಗಳನ್ನು ವಶಪಡಿಸಿಕೊಳ್ಳುತ್ತಾ ಮುಂದೊತ್ತಿ ಬರುತ್ತಿವೆ. ವಿರೋಧಿಗಳನ್ನು ಸೋಲಿಸುವುದಷ್ಟೇ ಅಲ್ಲ—ಕೊರಿಯ ಬಿಟ್ಟು ಸುರಕ್ಷಿತವಾಗಿ ಓಡಿಹೋಗುದಂತೆ ನೋಡಿ ಸದೆಬಡಿಯಬೇಕೆಂ ಇಚ್ಛೆಯನ್ನು ಕಮ್ಯೂನಿಸ್ಟ್ ಸೇನೆಗಳ ಕಟ್ಟಿಕೊಂಡಂತಿದೆ. 38ನೇ ಗಡಿಗೆರೆಯನ್ನು ದಾಟಿ ದಕ್ಷಿಣಕ್ಕೆ ಕಾಲಿಡಬಾರದೆಂ ಆಸ್ಯ ರಾಷ್ಟ್ರಗಳ ವಿಜ್ಞಾಪನೆಯನ್ನು ಕೊರಿಯದ ಕಮ್ಯೂನಿಸ್ಟ್ ದಳಗಳ ಮನ್ನಿಸಿಲ್ಲ.

ಅಮೆರಿಕದ ಧೋರಣೆ

ಅಮೆರಿಕದ ನಾಯಕರು ಬಹಿರಂಗವಾಗಿ ಏನನ್ನೇ ಘೋಷಿಸುತ್ತಿದ್ದರೂ ರಶಾ ಮತ್ತದರ ಕಮ್ಯೂನಿಸ್ಟ್ ಪಾಳಯವು ನಾಗೆ ಸರ್ವವ್ಯಾಪ್ತವಾಗುವ ಹಾದಿಗೆಂದಿಗೂ ಬರುವಂತಿಲ್ಲವೆಂಬುದನ್ನು ನಿರ್ಧರಿಸಿಕೊಂಡು ತಮ್ಮೀ ವಿರೋಧಿಗಳ ಬಲವನ್ನು ಮುರಿಯುವ ವಿಶೇಷ ಪ್ರಯತ್ನಕ್ಕೆ ಇಳಿದಿದ್ದಾರೆ. ಸ್ವರಕ್ಷಣೆಗಾಗಿ ಅಮೆರಿಕ ಆರ್ಥಿಕ ಮತ್ತು ಔದ್ಯೋಗಿಕ ಶಕ್ತಿ ಸರ್ವಸ್ವವನ್ನೂ ಸಂಘಟಿಸಿಕೊಳ್ಳುವ ಕಾರ್ಯಕ್ರಮವನ್ನು ಅಧ್ಯಕ್ಷ ಟ್ರೂಮೆನರು ಘೋಷಿಸಿದ್ದಾರೆ. ಅಮೆರಿಕವು ಮಹಾ ಗಂಡಾ

ಇನ್ನು?

ಕಳೆದು ಹೋದ ಸರ್ದಾರ್ ವಲ್ಲಭಭಾಯಿ ಪಟೇಲರು ಭಾರತಕ್ಕೆ ಏನಾಗಿದ್ದರು—ಅವರಿಲ್ಲದ ಅನುಭವವು ಭಾರತಕ್ಕೆ ಎಂತಹದಾಗಿದೆ—ಎಂಬುದು ಈ ಸೂತಕದ ದಿನಗಳಲ್ಲೇ ಅಡಿ ತೋರಿಸಲಾಗುವ ವಿಷಯವಲ್ಲ. ಸ್ವತಂತ್ರ ಭಾರತಾಕಾಶದ ಸೂರ್ಯಚಂದ್ರರಂತೆ, ಭಾರತ ಸ್ವಾತಂತ್ರ್ಯ ರಥದ ಎರಡು ಚಕ್ರಗಳಂತೆ, ಇದ್ದ ನೆಹರೂ ವಲ್ಲಭಭಾಯಿ ಜತೆಯಲ್ಲಿ ಒಂದು ಕಳೆದು ಹೋಗಿದೆ. ವಿಶೇಷವಾಗಿ ನಮ್ಮ ಲಕ್ಷ್ಯಕ್ಕೆ ಬರುವ ಪ್ರತಿಯೊಂದು ವಿಯೋಗದ ಸಂಬಂಧದಲ್ಲೂ 'ತುಂಬಿ ಬರಲಾರದ ನಷ್ಟ' ಎನ್ನುವದೊಂದು ವಾಡಿಕೆ. ಸರ್ದಾರರ ವಿಯೋಗವು ಇಷ್ಟೇ ಅಲ್ಲ; ಅಖಿಲ ಭಾರತ ಆಡಳಿತ ಯಂತ್ರದ ಚಲನಶಕ್ತಿಯಾಗಿ ಪಟೇಲರ ಸರ್ದಾರತನ ತುಂಬಿದ್ದಿತೆಂಬುದು ನಿರ್ವಿವಾದ. ಆದೀಗ ಕಳೆದು ಹೋಗಿದೆ, ಹಿಂದಾವ ಸಂದರ್ಭದಲ್ಲೂ ಅತ್ತಿರದ ನೆಹರುಗಳಿಗೆ ಈ ಬಾರಿ ಸರ್ವಾಣವಾಗಿ ಆಳು ಬಂತೆಂದ ಮೇಲೆ ಭಾರತವೊಮ್ಮೆಗೆ ಅನಾಥವಾಯಿತೆಂದೇ ಅರ್ಥ.

ಸ್ವತಂತ್ರ ಭಾರತದ ಕೇಂದ್ರ ಸರಕಾರದ ಮಾತ್ರಮೂಲಕ ಅಖಿಲ ಸಂಸ್ಥಾನೀ ಸರಕಾರಗಳ ಕಾರ್ಯಾಧಿಕಾರ ಸರ್ದಾರರ ಕೈಯಲ್ಲಿತ್ತು. ಗಾಂಧೀ ನೆಹರುಗಳ ತತ್ವ ಮತ್ತು ಧೋರಣೆಗಳು ಅಷ್ಟೇ ವಿಶಾಲ ರೂಪಗಳಲ್ಲಿ ಪಟೇಲರಲ್ಲಿ ಕಾಣಿಸುತ್ತಿರಲಿಲ್ಲವೇನೋ ನಿಜ. ಆದರೆ ಅವೇ ತತ್ವ ಧೋರಣೆಗಳಿಗೆ ಕಟ್ಟು ಬಿದ್ದಿದ್ದ—ಗಾಂಧೀ ನೆಹರುಗಳ ನಿಷ್ಠಾವಂತ ಅನುಯಾಯಿಯಾಗಿದ್ದ—ಸರ್ದಾರ್ ವಲ್ಲಭಭಾಯಿಗಳು, ವ್ಯವಹಾರ ಮಟ್ಟಕ್ಕಿಳಿಸಿಕೊಳ್ಳುವದಕ್ಕಾಗಿಯೇ ಆ ತತ್ವ|ಧೋರಣೆಗಳನ್ನು ಕಿರಿದುಗೊಳಿಸಿಕೊಂಡಿದ್ದರೆಂಬುದು ಸ್ಪಷ್ಟ. ತತ್ಪರಿಣಾಮವಾಗಿ ಒಳ್ಳೇ ಆಗಿದೆ. ಅವು ಕೇವಲ ಆದರ್ಶವಾಗಿಯೇ ಪುಸ್ತಕಾಕಾರದಿಂದ ದೂರವುಳಿಯುವ ಬದಲಿಗೆ, ಅದೆಂದು ಪರಿಮಾಣದಲ್ಲಿ ಮತ್ತು ವಿರುದ್ಧವಲ್ಲದ ವಿಧಾನದಿಂದ ಆಚರಣೆಯಲ್ಲೇ ಬರುವಂತಾಗಿದೆ; ಭವಿಷ್ಯವನ್ನು ಚಿತ್ರಿಸಿಟ್ಟುಕೊಂಡಂತಾಗದು, ತದನುಗುಣವಾಗಿ ಬಾಳುತ್ತಾ ಹೋಗಬೇಕು, ಎನ್ನುವವರಾಗಿದ್ದರು ಸರ್ದಾರ್. ತನ್ನ ಜೀವನದಲ್ಲಿ ಗುರಿಯ ಕಡೆಗಿನ ನೋಟವನ್ನೇ ಪ್ರಾಮುಖ್ಯವಾಗಿ ಇಟ್ಟುಕೊಳ್ಳದೆ, ಆ ಕಡೆಯ ಹಾದಿಯನ್ನು ಸಂಗೊಳಿಸಿ ಸಾಗುವದನ್ನೇ ಅವರು ಮುಖ್ಯತಃ ಗಮನಿಸಿದ್ದರು, ಇಂದು, ಇಲ್ಲಿ, ಆಗ ಬೇಕಾದುದನ್ನೇ ಅವರು ತಪ್ಪದೆ ಮಾಡುತ್ತಿದ್ದರು. ರಾಷ್ಟ್ರಹಿತದೃಷ್ಟಿಯಿಂದ ಅಗತ್ಯವೆಂದು ತೋರಿದ ಕಾರ್ಯಕ್ಕೆ ಕೈಯಿಕ್ಕಿದ ಮೇಲೆ ಮಾತ್ರ ಅದಕ್ಕೆ ಅಡ್ಡ ಬರುವ ಯಾರನ್ನೇ ಆದರೂ, ಯಾವುದನ್ನೇ ಆದರೂ, ಕಡಹಾಕುವ ಧಿಟ್ಟತನ ಅವರದಾಗಿತ್ತು; ರಾಷ್ಟ್ರಹಿತವನ್ನು ಶೋಧಿಸಿ ತಿಳಿಯುವುದರಲ್ಲಾಗಲೀ, ಸಾಧಿಸಿ ಗೆಲ್ಲುವುದರಲ್ಲಾಗಲೀ ಅವರರೆಂದೂ ತಪ್ಪಿಬಿದ್ದುದಿಲ್ಲ. ಆದ್ದರಿಂದಲೇ ಎಂತಹ ಅನಿರೀಕ್ಷಿತ, ಅಪಾಯಕರ ಆಪತ್ತುಗಳೊದಗಿದರೂ, ಅವುಗಳನ್ನು ಇದಿರಿಸಬಲ್ಲ ಈ 'ಬಿಸ್ಮಾರ್ಕ್' ಇದ್ದಾನೆ ಎಂಬ ಧೈರ್ಯವಿದ್ದಿತು; ಎಂತಹ ಸಂದರ್ಭವೇ ಒದಗಲಿ, ಭಾರತದ ಭವಿಷ್ಯವು ಸರ್ದಾರರ ಕೈಯಲ್ಲಿ ಭದ್ರವಾಗಿದೆ. ಎಂಬ ಭರವಸೆಯಿದ್ದಿತು. ಅಂತಹ ಮನುಷ್ಯ ಕಳೆದು ಹೋಗಿದ್ದಾರೆ. ಪಕ್ಷ, ಪಂಗಡ, ಜಾತಿಮತಭೇದವಿಲ್ಲದೆ, ಭಾರತೀಯರಾದವರೆಲ್ಲರ ಪಾಲಿನ ವಿಶ್ವಾಸದಾತನೂ ಈಗ ಹೊರಟು ಹೋಗಿದ್ದಾನೆ ಎಂತಹ ಪ್ರಗತಿಪೂರ್ಣ ಭವಿಷ್ಯವೊದಗಬೇಕಾದರೂ ಅದು ಬರಬೇಕು ಭಾರತದ ವರ್ತಮಾನಕಾಲದ ಬೆನ್ನುಹಿಡಿದೇ; ಎಂತಹ ಮೇಲಂತಸ್ತು ಏರಬೇಕಾದರೂ ಅದನ್ನೇರಿಸಿಕೊಳ್ಳಲು ಬೇಕು ಸ್ವತಂತ್ರ ಭಾರತದ ಭದ್ರ ತಳಹದಿಯೇ. ಎಲ್ಲರಿಗೂ ಬೇಕಾಗಿದ್ದ ಈ ಭದ್ರತೆಯ ನಿರ್ಮಾಣಕರ್ತ, ಅಸಾಧಾರಣ ಸಂಘಟನಾಶಕ್ತ, ಪ್ರಮಾದ ಪರಾಭವವನ್ನರಿಯದ ಮಹಾನಾಯಕ, ಹೊರಟು ಹೋಗಿದ್ದಾನೆ. ಸರ್ದಾರ್ ವಲ್ಲಭಭಾಯಿಗಳು ಮಾಡಿದ ಅಪರಾಧ ಮತ್ತು ಜನತಾದ್ರೋಹವೆಂದರೆ ಇದೊಂದೇ—ಹಲವು ವಿಧದ ಆಪತ್ತುಗಳಿಗೀಗ ಸಿಕ್ಕಿಕೊಂಡಿರುವ ರಾಷ್ಟ್ರವನ್ನು ಪಾರು ಮಾಡಲು ನಿಲ್ಲದೆ, ನಮ್ಮ ನಡುವಿನಿಂದ ಈ ರೀತಿ ನುಸುಳಿಕೊಂಡುದೊಂದೇ!

ಆದರೆ ಅನಿವಾರ್ಯ! ಜನತಾ ರಾಜ್ಯ ಸ್ಥಾಪನೆಯಾಗಿ ವರುಷ ತುಂಬುವುದರೊಳಗೇನೇ ಜನತೆಯ ಪಾಲಿನ ಕರ್ತವ್ಯಗಳನ್ನು ಜಯಶೀಲವಾಗಿ, ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದ ಕೈ ಈ ರೀತಿ ಕಾಣೆಯಾದುದರಲ್ಲಿ ಒಂದು ಅರ್ಥವಿದೆ; ಇನ್ನು ಕರ್ತವ್ಯ ನಿರ್ವಹಣಾ ಹೊಣೆ ಜನತೆಯದೆಂಬುದೇ ಆ ಅರ್ಥ. ನಾಯಕರ ಸರದಿ ಮುಗಿದು, ಜನತೆಯ ಸರದಿ ಆರಂಭಿಸಿದ ಯುಗಾಂತರ ಸೂಚನೆಗಾಗಿಯೇ ಸರ್ದಾರರು ಹೊರಟು ಹೋದರು. ತನ್ನ ನಂತರದವಂಗೆ ಮಾದರಿ ಹಾಕಿಟ್ಟೇ ಅವರು ಹೋಗಿದ್ದಾರೆ; ಇನ್ನು ಜನತಾ ಸರ್ದಾರರ ಪರ್ಯಾಯ; ಜನತೆಯೇ ಸರ್ದಾರರಾಗಿ ಜನತಾ ರಾಜ್ಯವು ಪೂರ್ಣತೆಗೊಳ್ಳುವಂತೆ ಇನ್ನಾದರೂ ಸಾಧಿಸಲಿ!

ತಿದ್ದುಪಡಿ

ತಾ. ೧೪-೧೨-೫೦ನೇ ಗುರುವಾರ ನವಯುಗ ಸಂಚಿಕೆಯ ೧೧ನೇ ಪುಟದಲ್ಲಿ ಅಚ್ಚಾದ ಉಡುಪಿ ಶ್ರೀ ಕಾಣಿಯೂರು ಮಠದ ಜಾಹೀರಾತುಗಳು, ಕಟ್ಟಿಗೆ ಉಪಯೋಗದ ಕ ನ್ನು ಸಹ ಏಲಂ ಹಾಕುವ ಪ್ರಕಟಣೆಯು "(1) ಪುತ್ತೂರು ತಾಲೂಕು ಕಾಣಿಯೂರು ಗ ಮ ಸರ್ವೆ ನ ವಿಸ್ತೀರ್ಣ 25/2-4-12 ಸಾಗುವಾನಿ ಮರಗಳು 20, ಪುತ್ತೂರು ಲ್ಲು ಕಾಣಿಯೂರು ಗ್ರಾಮದ ಕಾಣಿಯೂರು ಮ ದಲ್ಲಿ ತಾ. 5-11-50ಕ್ಕೆ ಅಪರಾಹ್ನ ಘಂ 2-30ಕ್ಕೆ" ಎಂದು ಪ್ರಕಟವಾಗಿದ್ದನ್ನು **5-1-51**ಕ್ಕೆ ಎಂದು ತಿದ್ದಿಕೊಳ್ಳಬೇಕ ಸೂಚನೆ.

ಜೀವವಿಮೆಗಾಗಿ
ವಿಚಾರಿಸಿರಿ
ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1934)
ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾ
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 14
ಮದ್ರಾಸು.

—ಶಾಂತಿ ತೀರ್ಮಾನ ಹೇಗೆ?

ತರಕ್ಕೊಳಗಾಗಿದೆ, ಎನ್ನುತ್ತಾ ರಾಷ್ಟ್ರದ 'ಅ ವಸರಾವಶ್ಯಕ ಸ್ಥಿತಿ'ಯನ್ನು ಟ್ರುಮೇನ್ ಪ್ರಸ್ತಾಪಿಸಿದ್ದಾರೆ. "ಸೋವಿಯೆಟ್ ಯೂ ನಿಯನಿನ ಆಡಳಿತೆಗಾರರಿಂದ ನಿರ್ಮಾಣ ಗೊಂಡ ಮಹಾಪಾಯವೀಗ ಅಮೆರಿಕಕ್ಕೆ ಒದಗಿದೆ. ಸಾಧ್ಯವಿದ್ದಷ್ಟು ಬೇಗನೇ ಅಮೆ ರಿಕದ ಪ್ರತ್ಯಕ್ಷ ಸೇನಾಬಲವನ್ನು 3,500,000ರಷ್ಟಕ್ಕೆ ಹೆಚ್ಚಿಸಿಕೊಳ್ಳುವಂ ತೆ ನಾನು ನಿರ್ದೇಶಿಸಿದ್ದೇನೆ. ಇನ್ನೊಂದು ವರುಷದೊಳಗೆ ಅಮೆರಿಕದ ವಿಮಾನಗಳು ಈಗಿರುವುದರ ಐದುಪಾಲಷ್ಟು, ಹೋ ರಾಟ ವಾಹನಗಳು ಈಗಿನ ನಾಲ್ಕು ಪಾಲಷ್ಟು ಅಧಿಕಗೊಳ್ಳುವವು. ಇವು ನ ಮ್ಮ ಸ್ವಂತ ಸೇನೆಗಳಿಗಾಗಿ ಮಾತ್ರವಿಲ್ಲ; ಸ್ವಾತಂತ್ರ್ಯ ರಕ್ಷಣೆಯ ಶಸ್ತ್ರಾಗಾರವೇ ಇವುಗಳಾಗುವವು ಸ್ವತಂತ್ರ ಜಗತ್ತು ಮತ್ತು ರಶ್ಯದ ನಡುವೆ ಶಾಂತ ವಿಧಾನಗ ಳಿಂದ ತೀರ್ಮಾನ ಹೊಂದುವದಸದಳವಾ ಗಿರುವಂತಹ ಘರ್ಷಣೆಗಳೇನೂ ಇಲ್ಲ. ಇ ನ್ನು ಕೂಡಾ ಮಹಾಯುದ್ಧವನ್ನು ತಪ್ಪಿ ಸುವ ಪ್ರತಿಯೊಂದು ಗೌರವಾರ್ಹ ವಿಧಾ ನವನ್ನೂ ನಾವು ಕೈಕೊಳ್ಳುತ್ತಾ ಹೋಗುತ್ತೇವೆ. ಆದರೆ ನಾವು ಸೋತು ಮಣಿಯುವ ಗೊಡವೆಗೆ ಹೋ ಗುವಂತಿಲ್ಲ' ಎಂದು ಅಮೆರಿಕಾಧ್ಯಕ್ಷ ಟ್ರು ಮೇನರಂದಿದ್ದಾರೆ. ಸೋವಿಯೆಟ್ ರಶ್ಯ ದ ವಿದೇಶ ಮಂತ್ರಿ ಅಂಡ್ರೇಯ್ ವಿಶಿನ್ಸ್ಕಿ ಯವರ ಮಾತು ಇದಕ್ಕಿಂತ ಹೆಚ್ಚು ಶಾಂ ತಿ ಪ್ರೇಮದಿಂದ ತುಂಬಿದೆ. "ಯುದ್ಧವು ಅನಿವಾರ್ಯವಲ್ಲ ಎಂಬ ಟ್ರುಮೇನ- ಅಭಿ ಪ್ರಾಯವು ನನಗೊಪ್ಪಿಗೆಯಿದೆ. ಜನತೆ ಯ -ಯಥಾರ್ಥ ಮತ್ತು ವ್ಯವಹಾರವಾದಿ ಎಲ್ಲಾ ಜನತೆಯ '-ಯುದ್ಧವನ್ನೇ ಅಪೇಕ್ಷಿ ಸುವುದಿಲ್ಲ. ಯುದ್ಧದಿಂದ ಲಾಭ ಸಂಪಾ ದಿಸಿಕೊಳ್ಳುವ ಮತ್ತು ಲೋಕವನ್ನೇ ಆ ಕ್ರಮಿಸಿಕೊಳ್ಳುವ ಆಶೆಯಿರುವವರು ಮಾತ್ರ ಯುದ್ಧಾಪೇಕ್ಷಿಗಳಿದ್ದಾ ರೆ. ಇಂತಹ ಜನರು ಯಥಾಸ್ಥಿತಿಯಲ್ಲಿ ಲ್ಲವೆಂದೇ ನನ್ನ ಅಭಿಪ್ರಾಯ." ಎಂದು ವಿಶಿನ್ಸ್ಕಿಯವರಂದಿದ್ದಾರೆ. ಶಾಂತಿಕಾಮಿ ಗಳಂತಹ ಅಪರಾಧಕರ್ತರು ಅಮೆರಿಕದ ನಾಯಕರೆಂಬುದು ಖಚಿತವಾಗುವಂತೆ ವಿ ಶಿನ್ಸ್ಕಿಯವರು ಅಮೆರಿಕದ ಧೋರಣೆಯ ನ್ನು ಖಂಡಿಸಿದರಾದರೂ ಅಮೆರಿಕದ ಜನ ತೆಗೆ "ಬರುವ ವರುಷದಲ್ಲಿ ಶಾಂತಿ, ಸುಖ, ಕಲ್ಯಾಣವೊದಗಲಿ" ಎಂಬ ಶುಭಾ ಶಯವನ್ನಿತ್ತಿದ್ದಾರೆ "ರಶ್ಯವು ಯುದ್ಧವ ನ್ನು ಆರಂಭಿಸೀತೆಂಬ ಕುರಿತು ನನಗೆ ಬಹ ಳ ಅನುಮಾನವಿದೆ" ಎಂದು ಬ್ರಿಟಿಷ್ ವಿ ದೇಶಮಂತ್ರಿ ಬೆವಿನರು ಕಾಮನ್ಸ್ ಸಭೆ ಯಲ್ಲಿ ಹೇಳಿದ್ದಾರೆ. "ಜಾಗತಿಕ ರಂಗದ ಲ್ಲಿ ಭಾರತವು ವಹಿಸಿರುವ ಹೊಸಪಾತ್ರ ವೆಂಬುದು ಆಸ್ಯಾ ನಾಯಕತ್ವದ ಒಂದು ಅಮೋಘ ಸಂಗತಿ" ಎಂದೂ ಬೆವಿನರಂದಿ ದ್ದಾರೆ. ಹೀಗಿದ್ದರೂ ಇಂದೇ ಮಹಾಯು ದ್ಧವೆಂಬಂತೆ, ಅಮೇರಿಕಾಧ್ಯಕ್ಷರು 'ರಾ ಷ್ಟ್ರೀಯ ಅವಸರಾವಶ್ಯಕ ಸ್ಥಿತಿ"ಯನ್ನು ಘೋಷಿಸಿ; ಸರ್ವಸೇನಾ ಸಂಗ್ರಹ ಸಂಘ ಟನೆಗಾಗಿ, ಹೊಸಾಧಿಕಾರ ಸ್ಥಾನವೊಂದ ನ್ನು ನಿರ್ಮಿಸಿರುವುದೂ, ಕಮ್ಯೂನಿಸ್ಟ ಲೋಕ ವಿಜಯದ ಅಪಾಯವನ್ನು ದಿರಿಸ ಲು ಸೊಂಟಕಟ್ಟಿಸಿಲ್ಲಬೇಕೆಂದು ಅಮೆರಿಕಕ್ಕೆ ಕರೆ ಕೊಟ್ಟಿರುವುದೂ ಭಯೋತ್ಪಾದಕ ವಿದೆ.

ಸಂಧಾನ ಪ್ರಯತ್ನ

ಇವೆಲ್ಲಾ ವಿಶೇಷ ಗೊಂದಲಗಳ ಉಗ ಮ ನೆಲೆ ಕೊರಿಯವನ್ನು ಶಾಂತ ವಿಧಾನ ಗಳಿಂದ ಶಮನಿಸಬೇಕೆಂದು ಭಾರತ ಮತ್ತಿ ತರ ಆಸ್ಯಾ ರಾಷ್ಟ್ರಗಳು ಸಂ. ರಾ. ಸಂಘ ದ ಕ್ಷೇತ್ರಗಳಲ್ಲಿ ಶ್ಲಾಘನೀಯ ಪ್ರಯತ್ನ ಗಳನ್ನು ಮಾಡುತ್ತಿವೆ. ಕೊರಿಯ ಯು ದ್ಧ ಸ್ಫೋಟಗೊಂಡಂದಿನಿಂದ ಈ ವರೆಗೂ ಒಮ್ಮೆ ಆ ಕಡೆಯವರಿಗೆ, ಮತ್ತೊಮ್ಮೆ ಈ ಕಡೆಯವರಿಗೆ ಹಿತೋಪದೇಶ ಕೊಡುವ ಸಂದರ್ಭಗಳು ಭಾರತಕ್ಕೊದಗಿದ್ದುವು. ಜಗಳ ನಿರತ ಬಾಳೆಯಗಳೆರಡು ಪೈಕಿ ಯಾವ ಕಡೆಗೂ ಸೇರಿಕೊಳ್ಳದೆ ನಿಷ್ಪಕ್ಷ ಪಾತವಾಗಿ ವರ್ತಿಸುವ ಮಧ್ಯಸ್ಥಗಾರನ ಪಾಲಿಗೆ ಸ್ವಾಭಾವಿಕವಾಗಿ ಒದಗುವ ಪರಿ ಸ್ಥಿತಿಯಿದು ಭಾರತದ ಈ ಸ್ಥಿತಿಯನ್ನು ಕಂಡು 'ಅನಿಶ್ಚಿತ ಧೋರಣೆ" ಎಂದು ವ್ಯಂ ಗ್ಯವಾಗಿ ಟೀಕಿಸಿದ್ದ ಅಮೆರಿಕಾಂಗ್ಲರಿಗೆ ನೆಹರುಗಳಂತಹ · ಸತ್ಯವಾದಿಯೆಂಬುದು ಕೊರಿಯದ ಇಕ್ಕಡೆಯವರೂ ಅವರವರ ಉಚಿತ ಸ್ಥಾನದಲ್ಲಿದ್ದರೆ ಕಲಹವಿಲ್ಲ. ಪೂ ರ್ವ ನಿಶ್ಚಿತ ಉಚಿತ ಸ್ಥಾನವೆಂದರೆ 38 ನೇ ಗಡಿಗೆರೆಯ ಆಚೆ ಮತ್ತೀಚೆ ಈ ಗೆರೆ ಯನ್ನು ಉತ್ತರ ಕೊರಿಯದ ಕಮ್ಯೂನಿ ಸ್ಟರು ಪ್ರಥಮತಃ ಈಚೆ ದಾಟಿ ಬಂದಾಗ ಲೂ, ಆ ಮೇಲೆ ಸಂ. ರಾ. ಸೇನೆಗಳು ಅ ಚೆ ದಾಟಿ ಹೋಗುವಾಗಲೂ, ಕಮ್ಯುನಿ ಸ್ಟರು ಮತ್ತೊಮ್ಮೆ ಈಚೆ ದಾಟಿ ಬರುವಾ ಗಲೂ "ಹಾಗೆ ಮಾಡಬೇಡಿ" ಎಂದು ಭಾರತ ಸರಕಾರವು ಸದಿ ಪ್ರಕಾರ ಅವ ರಿಗೂ ಇವರಿಗೂ ಹೇಳಿದ್ದಿತು. ಅವರೂ ಕೇಳಲಿಲ್ಲ; ಇವರೂ ಒಪ್ಪಲಿಲ್ಲ ಈ ಸಂ ಯುಕ್ತರಾಷ್ಟ್ರಕೂಟದಲ್ಲಿ ಭಾರತದ ಮುಂ ದಾಳುತ್ವದಲ್ಲಿ 13 ಆಸ್ಯಾ ರಾಷ್ಟ್ರಗಳ ಸಂ ಧಾನ ಸೂಚನೆ ಸುಳಿದಾಡುತ್ತಿದೆ. "ಕೊ ರಿಯದಲ್ಲಿ ಪ್ರಥಮತಃ ಗುಂಡು ಹಾರಾಟ ನಿಲ್ಲಬೇಕು ಆ ಮೇಲೆ ಸಂಯುಕ್ತ ರಾ ಷ್ಟ್ರಸಂಘದ ತಜ್ಞ ಮತ್ತು ಉದ್ದೇಶಕ್ಕನು ಸಾರವಾಗಿ ಅಲ್ಲಿಯ ವಿವಾದಗಳನ್ನು ತೀ ರ್ಮಾನಿಸಿಕೊಳ್ಳಬೇಕು"ಎಂದರ್ಥದ 13 ಆಸ್ಯಾ ರಾಷ್ಟ್ರಗಳ ಸೂಚನೆಯ ಚರ್ಚೆಗೆ ರಶ್ಯದ ವಿರೋಧವಿದ್ದರೂ ಸಂ. ರಾ. ಸಂ ಘದ "ರಾಜಕೀಯ ಸಮಿತಿ"ಯು ಅದರ ಪರಿಶೀಲನೆಯನ್ನು ಸ್ವೀಕರಿಸಿದೆ. ಆದರೆ ದೂರಪ್ರಾಚ್ಯ ರಾಷ್ಟ್ರಗಳ ಎಲ್ಲಾ ಸಮಸ್ಯೆ ಗಳ ಒಂದಂಗವಾಗಿ ಕೊರಿಯದ ಹೋ ರಾಟ ಸ್ತಬ್ಧತಾ ಸೂಚನೆಯನ್ನು ಅಂಗೀ ಕರಿಸಬಹುದಲ್ಲದೆ, ಅದೊಂದನ್ನೇ ಚ ರ್ಚಿಸಲು ಎಷ್ಟಕ್ಕೂ ಸಿದ್ಧರಿಲ್ಲವೆಂದು ಕ ಮ್ಯುನಿಸ್ಟ್ ಚೈನದ ಪ್ರತಿನಿಧಿಗಳು ಸ್ಪಷ್ಟ ಪಡಿಸಿದ್ದಾರೆ. ಕೆಂಪು ಚೈನವನ್ನು ಮನ್ನಿ ಸಿರೆಂದು, ಫೊರ್ಮೋಸ ಮತ್ತು ಕೊರಿ ಯದಲ್ಲಿರುವ ಅಮೆರಿಕನ್ ಸೇನೆಗಳನ್ನು ಹಿಂದೆಗೆದುಕೊಳ್ಳುವ ತಮ್ಮ ಶರ್ತವನ್ನು ಒಪ್ಪಿಕೊಂಡರೆ ಮಾತ್ರ ಕೊರಿಯದಲ್ಲಿರು ವ ತಮ್ಮ ಸ್ವಯಂಸೇವಕರನ್ನು ಹಿಂದೆ ಕ ರೆಯಬಹುದಲ್ಲದೆ ಅನ್ಯಥಾ ಅಸಾಧ್ಯವೆಂದು ಕಮ್ಯುನಿಸ್ಟ್ ಚೈನಾದ ಪ್ರತಿನಿಧಿಗಳಂದಿ ದ್ದಾರೆ. ಕೆಂಪು ಚೈನದ ಈ ಶರ್ತವು ಅ ಮೆರಿಕಕ್ಕೆ ಸಹ್ಯವಾಗದೆಂಬುದು ಸ್ಪಷ್ಟ. ಚೈನಾ ಪ್ರತಿನಿಧಿಗಳಂತೂ ಸ. ರಾ. ಸಂ ಘದ ರಾಜಕೀಯ ಸಮಿತಿಯಲ್ಲಿ ಮೇಲಿನ ಸೂಚನೆಯು ಚರ್ಚಿಸಲ್ಪಡುವ ವರೆಗೆ ನಿ ಲ್ಲದೆ ಲೇಕ್‌ಸಕ್ಸೆಸಿನಿಂದ ಹೊರಟಿದ್ದಾರೆ. ಹೀಗಾಗಿ ಕೊರಿಯ ಯುದ್ಧವು ಸಂಧಾನ ಮೂಲಕ ತೀರ್ಮಾನ ಹೊಂದಬಹುದೆಂ ಬ ಆಶೆಗೆ ಅವಕಾಶವಿಲ್ಲ.

ಪ್ರಕಟಣೆ

The Bombay Life Assurance Company Limited.

ದಿ ಬಾಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಶ್ರೀ ಮಣ್ಣ ಭಟ್ಟೀಲಸೆಟ್ಟರ ನಂಬ್ರ 39450 ನೆ ಪಾಲಿಸಿಯು ಕಳೆದುಹೋದುದರಿಂದ ಕೆಳ ಗೆ ಸೂಚಿಸಿದ ತಾರೀಕಿನಿಂದ ಒಂದು ತಿಂಗ ಳೊಳಗಾಗಿ ಆಕ್ಷೇಪಗಳೇನೂ ಬಾರದಿದ್ದಲ್ಲಿ ಸದ್ರಿಯವರಿಗೆ ದ್ವಿಪ್ರತಿ ಪೊಲಿಸಿಯನ್ನು ಕೊ ಡಲಾಗುವುದೆಂದು ಈ ಮೂಲಕ ಜಾಹೀರು ಮಾಡೋಣಾಗಿಯದೆ,

(Sd) K. Balasubramanyam.
Manager & Actuary

ಬೊಂಬಾಯಿ, 12-12-50.

ಹೆಚ್ಚಿನ ಬೆಳೆಗಳ ಬಗ್ಗೆ

ನೀರಿನ ಇಂಜಿನ್ ಪಂಪು

ಕೆರೊಸಿನ ಹಾಗೂ
ಡಿಝುಲ್ ಟೈಪ

ಮಾಹಿತಿ ಬಗ್ಗೆ ಇಂದೇ ಬರೆಯಿರಿ.

The Vijay Engineering Co. Ltd., BOMBAY 10

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು **21--12—1950** ರಿಂದ

ಜೆಮಿನಿ ಚಿತ್ರ—

ಮಂಗಮ್ಮ ಶಪಥಂ

ವಸುಂಧರಾ, ರಂಜನ್, ಕೃಷ್ಣನ್ ಮಧುರಂ

ವಿ. ಸೂ: ಈ ಚಿತ್ರದ ಮಟ್ಟಿಗೆ ಸಮಯ ಬದಲಾವಣೆ ಗಮನಿಸಿರಿ.

ಸಂಜೆ ಘಂ. 5-30, ರಾತ್ರಿ ಘಂ 9-30ಕ್ಕೆ

THE UDIPI BANK LIMITED, UDIPI.

ಜಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನ ಪಡುಬಿದ್ರೆ ಬ್ರಾಂಚಿನಲ್ಲಿ ಅಡವಿಟ್ಟ ನಗಗಳ ಈಡಿನ ಮೇಲೆ ಪಡಕೊಂಡ ಸಾಲಗಳ ಬಾಬ್ತು, ಅಸಲು ವ್ಯಾಜು ಬಡ್ಡಿ ವ ಇತರ ಖರ್ಚುಗಳನ್ನು ಕ್ಲಪ್ತವ್ಯಾದೆಗೆ ಸಲಾಯಿಸದೆ ಇದ್ದುದರಿಂದ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಜ್ಯಾರಿಯಾದರೂ, ವ್ಯಾಜು ಅಸಲು ಕೊಡದೆಯಿದ್ದುದರಿಂದಲೂ, ಸದರಿ ಲೋನುಗಳ ಬಾಬ್ತು ಈಡಿಟ್ಟ ನಗಗಳನ್ನು ಇದೇ ಬರುವ ತಾ 23-12-'50ನೇ ಶನಿ ವಾರ ಹಗಲು ಗಂಟೆ 11ಕ್ಕೆ ಬ್ಯಾಂಕಿನ ಉಡ್ಪಿ ಆಫೀಸಿನ ವಠಾರದಲ್ಲಿ ಬಹಿರಂಗ ವಾಗಿ ಏಲಂ ಮಾಡಲಾಗುವುದು. ಯಾವ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೇ ಮುಂದುವರಿಸಲಾಗುವುದು

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಐವೇಜು
97/49	ಸಿಜಿನ ಶೆಟ್ಟಿ, ರುಕ್ಮ ಶೆಟ್ಟಿ ಅಳಿಯ, ಸಾಂತೂರು ತೋಡುಮನೆ, ಸಾಂತೂರು ಗ್ರಾಮ, ಪಿಲಾರ ಪೋಸ್ಟು	25 0 0
279/49	ನಾರಾಯಣ ಶೆಟ್ಟಿ, ಸುಬ್ಬಯ್ಯ ಶೆಟ್ಟಿಯವರ ಮಗ, ಯಲ್ಲೂರು, ತೆಂಕಗ್ರಾಮ, ಎರ್ಮಾಳ್ ಪೋಸ್ಟು	150 0 0
17/50	ಲಕ್ಷ್ಮ ಶೆಟ್ಟಿ, ಫಕೀರ ಶೆಟ್ಟಿಯ ಮಗ, ಮೂಡು ಮನೆ, ಫಲಿಮಾರು ಪೋಸ್ಟು.	105 0 0

UDIPI
Date 18-12-'50

C. Narayana Kamath.
Agent

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾ ಯವಾದ ಬಡ್ಡಿಯಿಂದಲೂ, ಸಾಲ ದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ ಯನ್ನು ಮಾಡುತ್ತಿರುವುದು

The Moolky Bank Ltd., Moolky, S K



Approved from by the Govt. of Mysore
Certificated by the Agent of the Govt of Ceylone & Indian.

ದಕ್ಷಿಣ ಕನ್ನಡ

ಮಂಗಳೂರು

ಸರದಾರ ಪಟೇಲರ ನಿಧನದ ವಾರ್ತೆಯು ನಗರದಲ್ಲಿ ಹಬ್ಬಿದೊಡನೆ ಶಾಲಾ ಕಾಲೇಜುಗಳು ಕೋರ್ಟು ಕಚೇರಿಗಳೂ ಮುಚ್ಚಲ್ಪಟ್ಟವಲ್ಲದೆ ದುಃಖಸೂಚನೆಗಾಗಿ ಧ್ವಜವನ್ನು ಅರ್ಧಕಂಬದಲ್ಲಿ ಹಾರಿಸಲಾಗಿತ್ತು. ಸಂಜೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ದುಃಖಸೂಚಕ ಸಭೆಯು ಡಾ| ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ಶೆಟ್ಟಿ, ಎಸ್. ಎಸ್. ಕಿಲ್ಲೆ, ಪಿ. ಕೆ. ನಾರಾಯಣ ಮೊದಲಾದವರು ಸರದಾರರ ಜೀವನದ ಪ್ರಮುಖ ಘಟನೆಗಳನ್ನೆತ್ತಿ ಮಾತ ನಾಡಿದರು. ದುಃಖಸೂಚಕ ಠರಾವನ್ನು ಅಧ್ಯಕ್ಷರು ಓದಿದ ಮೇಲೆ ಸಭಿಕರು ಎದ್ದು ನಿಂತು ಅದನ್ನು ಮನ್ನಿಸಿದರು.

ಪಾನ ನಿರೋಧ ಕಾರ್ಯ—ಪಾನ ನಿರೋಧ ಶಾಖೆಯ ಡಿಪ್ಯುಟಿ ಕಮಿಶನರ ರಾದ ಶ್ರೀ ಆರ್. ಸುಬ್ಬರಾಯರು ಇದೇ ತಾ 8ರಲ್ಲಿ ಸ್ಥಳೀಯ ಕಾಂಗ್ರೆಸ್ ಕೆಲಸಗಾರರ ನ್ನು ಕಂಡು ವಿಚಾರವಿನಿಯಮ ಮಾಡಿದರು. ಶ್ರೀಗಳಾದ ಕೆ. ಕೆ. ಶೆಟ್ಟಿ, ಬಿ. ಬಿ. ಶೆಟ್ಟಿ, ಬಿ. ಎಸ್. ಭಾಸ್ಕರ ರೈ, ದೇವಪ್ಪ ಕರ್ಕೇರ, ಎಚ್ ಕೆ. ತಿಂಗಳಾಯ ಮೊದಲಾದವರು ಕೆಲವು ಸೂಚನೆಗಳನ್ನಿತ್ತರು.

ಅಖಿಲ ಭಾರತದ ಮೆಡಿಕಲ್ ಸಂಘದ -ಜಿಲ್ಲಾ ಶಾಖೆಯ ವಾರ್ಷಿಕೋತ್ಸವವು ಈಚೆಗೆ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷದ ಚುನಾವಣೆ ನಡೆದು ಡಾ| ಎ. ಜಿ. ನಂಬಿಯಾರರು ಅಧ್ಯಕ್ಷರಾಗಿಯೂ, ಡಾ| ಎಮ್. ಉಮೇಶ ರಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ನಗರ ಸಭೆಯು ಈಚೆಗೆ ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿದಾಗ ಅಬ್ಕಾರಿ ತೆರಿಗೆಯನ್ನು 1951ನೆ ಎಪ್ರಿಲ್ ಒಂದನೆ ತಾರೀಕಿನಿಂದ ಜಾರಿಗೆ ತರುವಂತೆ ಸರಕಾರವನ್ನು ಕೇಳಿಕೊಳ್ಳುವ, 1949-50ರಲ್ಲಿ ಸೇಕಡಾ 95ರಷ್ಟು ತೆರಿಗೆ ವಸೂಲು ಮಾಡಿದ್ದಕ್ಕಾಗಿ 14 ಮಂದಿ ಬಿಲ್ ಕಲೆಕ್ಟರರಿಗೆ ರೂಪಾಯಿ .382-8-0ನ್ನು ಬೋನಸ್ಸಾಗಿ ಹಂಚುವ, ನೆಬ್ಸ್ಸನ್ ಮಾರ್ಕೆಟಿನಲ್ಲಿ ಹೊರಗೆ ಮಾರಾಟಮಾಡುವವರು ಬಿಸಿಲಿಗಾಗಿ ತಾವೇ ಚಪ್ಪರ ಹಾಕಿಕೊಳ್ಳಬಹುದೆಂಬ, ನುಸಿಗಳ ನಾಶ, ಆನೆಕಾಲು ರೋಗದ ತಡೆಗಾಗಿ ಆರೋಗ್ಯ ಖಾತೆಯ ಡೈರೆಕ್ಟರರು ಸೂಚಿಸಿದ 40,200|-ದ ಒಂದು ಯೋಜನೆಯನ್ನು ಮಂಜೂರು ಮಾಡುವ ನಿರ್ಣಯಗಳಾದುವು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಿಜಿಸ್ತ್ರಿ ನೋಟೀಸು ಕೊಟ್ಟಾಗ್ಯೂ ಬಾಕಿಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ತ್ರಿ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಐವೇಜುಗಳನ್ನು ಇದೇ ತಾರೀಕು 23-12-50ನೇ ಶನಿವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಆಡವಿಟ್ಟ ಚಿನ್ನಾಭರಣಗಳನ್ನು ಇದೇ ತಾ 26-12-50ನೇ ಮಂಗಳವಾರ ಮಧ್ಯಾಹ್ನ ಗಂಟೆ 3ಕ್ಕೆ ಯಾ ಬೇಂಕಿಗೆ ಯುಕ್ತತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ತಿಳಿದಿರಲಿ.

ಲೋನು ನಂಬ್ರ	ಈಡಿಟ್ಟವರ ಹೆಸರು ಮತ್ತು ವಿಳಾಸ.
134/45-6	ತಿಮ್ಮಪ್ಪ ಪೂಜಾರಿ, ಶಾಂತರ ಪೂಜಾರಿಯವರ ಅಳಿಯ ಶಿರ್ಲಾಡಿ ಗ್ರಾಮ.
660/46-7	ಜಿ. ಮಹಾಬಲ ಶೆಟ್ಟಿ, ಪರಮೇಶ್ವರಿ ಶೆಡ್ತಿಯವರ ಮೊಮ್ಮಗ ಬೋಳ ಗ್ರಾಮ
623/47-8	ಪಿ. ಕೆ. ಬಲ್ಲಾಳ ಪಟೇಲ್, ಕುಕ್ಕಟೆ ಗ್ರಾಮ.
825/47-8	ಬಮ್ಮು ಶೆಟ್ಟಿ ವರದಯ ಶೆಟ್ರ ಮಗ, ನಂದಿಕೂರು ಗ್ರಾಮ.
373/48-9	ಕೆ. ಸುಬ್ರಾಯ ಶಾಮಯ್ಯನವರ ಮಗ, ಕೆರೆಬೆಟ್ಟು ಗ್ರಾಮ
413/48-9 & 169/49-50	ಜೆ ಕಾಡ್ಯ ಸುವರ್ಣ ಶೌಡ ಪೂಜಾರಿಯವರ ಅಳಿಯ ಕಾರ್ಕಳ ಕಸಬೆ
611/48-9	ಕೆ. ರಾಮಯ ಹೆಗ್ಡೆ ಪದ್ಮನಾಭ ಹೆಗ್ಡೇರ ಮಗ ಸಾಹುಕಾರ ಬೈಲೂರು.
884/48-9	ಯಮ್. ಸಿ. ಚಿನ್ನಪ್ಪ ಪೂವಣಿ ಕೋಟಿ ಪೂವಣಿಯವರ ಅಳಿಯ ಹಿರಿಯಂಗಡಿ, ಕಾರ್ಕಳ.
55/49-50	ಸಿ. ಮಂಜಯ್ಯ ಹೆಗ್ಡೆ ಪಳ್ಳಿಗ್ರಾಮದ ಪೆಜಕೊಡಂಗ
56/49-50	ಅಬ್ದುಲ್ ಖಾದರ್ ಕುಂವರ ಬ್ಯಾರಿಗಳ ಮಗ, ಸಾಲ್ಮರ ಕಾರ್ಕಳ.

Office of the Bank Karkala, 18-12-1950 } **K. Gopalkrishna Shetty,** Agent

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ- ಉದರಶೂಲೆ, ಕಟಿಶೂಲೆ, ಕೈಕಾಲುಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪ್ರೋ ಕುಂಜಾಲು, ದ ಕ.

ಇವರ **'ಧನ್ವಂತರೀ ಮಾತ್ರೆ'ಗಳು** ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ಜಿಲ್ಲಾ ಬೋರ್ಡಿನ ಮನವಿ: ಮದ್ರಾಸಿನಲ್ಲಿ ಜರಗಿದ ಜಿಲ್ಲಾ ಬೋರ್ಡುಗಳ ಚೇಂಬರಿನ ಸಭೆಗೆ ನಮ್ಮ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಹೋಗಿದ್ದರು. ಆಸಮಯ ಅವರು ಚೇಂಬರಿನ ಇತರ ಸದಸ್ಯರೊಡನೆ ಮದ್ರಾಸಿನ ಮುಖ್ಯಮಂತ್ರಿಗಳನ್ನೂ, ಇತರ ಮಂತ್ರಿಗಳನ್ನೂ ಕಂಡು ಜಿಲ್ಲಾ ಬೋರ್ಡುಗಳ ಆಡಳಿತೆಯ ಕೆಲವು ಸಮಸ್ಯೆಗಳನ್ನೂ ಅವರ ಮುಂದಿಟ್ಟರು.

ಗ್ರಂಥ ಉದ್ಘಾಟನಾ ಸಮಾರಂಭ ಕಳೆದ ತಾ 25ರಲ್ಲಿ ಮಂಗಳೂರಿನ ಸೈಂಟ್ ಎಲೋಶಿಯಸ್ ಕಲಾಶಾಲೆಯ ಕರ್ನಾಟಕ ಸಂಘದ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು ಎಂಬ ದಿವಂಗತ ಮುಳಿಯ ತಿಮ್ಮಪ್ಪಯ್ಯ ರಚಿತ ಗ್ರಂಥವನ್ನು ಮದ್ರಾಸು ಪ್ರೆಸಿಡೆಂಟ್ ಕಾಲೇಜಿನ ನಿವೃತ್ತ ಪಂಡಿತರಾದ ಶ್ರೀ ಸೇಡಿಯಾಪು ಸೀತಾರಾಮಾಚಾರ್ಯರು ಉದ್ಘಾಟಿಸುತ್ತಾ ತಿಮ್ಮಪ್ಪಯ್ಯನವರ ಜೀವನ, ಅವರು ಕನ್ನಡಕ್ಕೆ ಸಲ್ಲಿಸಿದ ಸೇವೆ, ಅವರ ಪಾಂಡಿತ್ಯ, ಕವಿತಾ ಶಕ್ತಿ ಮೊದಲಾದುವುಗಳನ್ನು ಚಲೋದಾಗಿ ತಿಳಿಸಿದರು. ಸಂಘದ ಅಧ್ಯಕ್ಷ ಶ್ರೀ ಜಿ. ಕೆ. ಭಟ್ಟರು, ತಿಮ್ಮಪ್ಪಯ್ಯನವರ ಸ್ಮಾರಕ ಗ್ರಂಥವೊಂದನ್ನೂ ಆದಷ್ಟು ಬೇಗನೆ ಕನ್ನಡಿಗರ ನೆರವು ಒದಗಿದರೆ ಇದೇ ಸಂಘದ ಆಶ್ರಯದಲ್ಲಿ ಪ್ರಕಟಿಸುವ ಆಶಯವನ್ನು ಹೇಳಿದರು.

ಸಕ್ಕರೆ ದರ ನಿರ್ಣಯ—ಸನ ಸ್ಟಿಪುರದಿಂದ ಬಂದ ಸಕ್ಕರೆ ದರವನ್ನೂ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರು 40 ತೊಲೆಯ ಒಂದು ರಾತ್ಲಿಗೆ ಈ ರೀತಿಯಾಗಿ ನಿಶ್ಚಯಿಸಿರುವರು. ಮಂಗಳೂರಿನಲ್ಲಿ 0-7-1; ಬಂಟ್ವಾಳ, ಕಾರ್ಕಳ, ಪುತ್ತೂರು, ಬೆಳ್ತಂಗಡಿ, ಮೂಲ್ಕಿ, ಉದ್ಯಾವರ, ಕಾಸರಗೋಡು ಮತ್ತು ಮೂಡಬಿದ್ರೆ, 0-7-4; ಹೊಸದುರ್ಗ, ಉಡುಪಿ 0-7-5 ಮತ್ತು ಕುಂದಾಪುರ 0-7-6

ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿ ಸ್ಮಾರಕ ಸಮಿತಿಯ ಕಾರ್ಯ ನಿರ್ವಾಹಕ ಮಂಡಳಿಯು ಕಳೆದ ತಿಂಗಳ ತಾ 12ರಲ್ಲಿ ಸೇರಿದ ತನ್ನ ಪ್ರಥಮ ಸಭೆಯಲ್ಲಿ ನಿರ್ಣಯಿಸಿದಂತೆ ಸ್ಮಾರಕ ನಿಧಿಗೆ ಕನಿಷ್ಠ ರೂಪಾಯಿ 4000|. ವನ್ನಾದರೂ ಸಂಗ್ರಹಿಸಬೇಕೆಂದೂ ಈ ನಿಧಿಸಂಗ್ರಹ ಕಾರ್ಯವನ್ನು 31-5-1951 ರೊಳಗಾಗಿ ಪೂರೈಸಬೇಕೆಂದೂ ಹಾಗೂ ಸ್ಮಾರಕ ಕಾರ್ಯಕ್ರಮವನ್ನು ಕೀರ್ತಿಶೇಷರ ತಾ 22-8-1951 ರ ವಾರ್ಷಿಕ ಪುಣ್ಯತಿಥಿ ಸಮಾಪೂರ್ತಿಯಲ್ಲಿ ಯಥಾ ಸೌಕರ್ಯ ನಿರ್ವಹಿಸಬೇಕೆಂದೂ ಮತ್ತೂ ಈ ನಿಧಿಸಂಗ್ರಹ ಕಾರ್ಯ ಭಾಗದಲ್ಲಿ ಮಹಾಜನರು ತಮ್ಮ ಹೃತ್ಪೂರ್ವಕ ಬೆಂಬಲವನ್ನು ನೀಡಿ ಸಹಭಾಗಿಗಳಾಗುವಂತೆ ವಿಜ್ಞಾಪಿಸಲಾಗಿದೆ ನಿಧಿಗೆ ರೂಪಾಯಿ 101|-ರ ಮೇಲೆ ದಾನಮಾಡಿದವರ ಹೆಸರುಗಳನ್ನು ಶಾಶ್ವತ ಇರಗೊಡಿಸುವಲ್ಲಿ ಅಮೃತ ಶಿಲೆಯಲ್ಲಿ ಕೆತ್ತಿಸುವ ವ್ಯವಸ್ಥೆ ಮಾಡಲಾಗುವುದೆಂದೂ ನಿರ್ಣಯಿಸಲ್ಪಟ್ಟಿದೆ.

ಉಡುಪಿ

ಸರದಾರ ಪಟೇಲರ ನಿಧನ ವಾರ್ತೆ ಉಡುಪಿಯಲ್ಲಿ ತಿಳಿದೊಡನೆ ವ್ಯಾಪಾರಿಗಳೆಲ್ಲರೂ ಹರತಾಳವನ್ನಾಚರಿಸಿದರು. ಶಾಲೆಗಳು ಮುಚ್ಚಲ್ಪಟ್ಟವು. ಸರಕಾರಿ ಆಫೀಸುಗಳಲ್ಲಿ ಧ್ವಜಗಳನ್ನು ಅರ್ಧ ಕಂಬಗಳಲ್ಲಿ ಹಾರಿಸಲಾಗಿತ್ತು. ತಾ 17 ರಲ್ಲಿ ಸಂಜೆ ಉಡುಪಿ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಸಾರ್ವಜನಿಕ ಸಭೆಯು ಅಜ್ಜರಕಾಡು ಮೈದಾನದಲ್ಲಿ ವಕೀಲ್ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಜಾಪಕ್ಷದ ಶ್ರೀ ಯು. ಆರ್. ಆಚಾರ್ಯರು ಮತ್ತು ಶ್ರೀ ಎಮ್. ವಿ. ಹೆಗ್ಡೆಯವರು ವೀರ ಸರದಾರರ ಆದರ್ಶಗಳನ್ನೆತ್ತಿ ಭಾಷಣವಿತ್ತರು. ನಂತರ ದುಃಖ ಸೂಚಕ ನಿರ್ಣಯವಾಗಿ ಮೌನಪ್ರಾರ್ಥನೆಯೊಂದಿಗೆ ಸಭಾಂತ್ಯವಾಯಿತು. ಅಂತೆಯೇ ಸ್ಥಳೀಯ ಕಲಾವೃಂದದಲ್ಲೂ ದುಃಖ ಸೂಚಕ ಸಭೆ ಜರಗಿತು. ಸ್ಥಳೀಯ ಸಂಸ್ಕೃತ ಕಾಲೇಜಿನಲ್ಲೂ ಪ್ರಿನ್ಸಿಪಾಲ್ ಶ್ರೀ ಬಾಲಗಿರೀಶಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶೋಕ ಪ್ರದರ್ಶಿಸುವ ಗೊತ್ತುವಳಿಯಾಯಿತು.

ದಿವಂಗತ

ಶ್ರೀ ರಾಮನಾಯ್ಕರಿಗೆ ಶ್ರದ್ಧಾಂಜಲಿ

ಕಳೆದ ತಾ. 5ರಲ್ಲಿ ರಾತ್ರಿ ದೈವಾಧೀನರಾದ ಶ್ರೀ ರಾಮನಾಯ್ಕರು ನಮ್ಮ ಜಿಲ್ಲೆಗೆ ಪರಿಚಿತರು. ಕೆಲಕಾಲದಿಂದ ಉದರ ವ್ಯಾಧಿಯಿಂದ ಬಳಲಿ ಮೊನ್ನೆ ತಾನೆ ನಮ್ಮನ್ನಗಲಿದ ಶ್ರೀ ನಾಯ್ಕರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ.

ಶ್ರೀ ನಾಯ್ಕರು 16-5-1890ರಲ್ಲಿ ಜನಿಸಿ, ಉಡುಪಿ ತಾಲೂಕಿನ ಕೊಕ್ಕರ್ಣೆಯಲ್ಲಿದ್ದು ರೋಗಪೀಡಿತ ಬಡ ಜನತೆಗೆ ಉಚಿತ ಸಲಹೆ, ಚಿಕಿತ್ಸೆಗಳನ್ನಿತ್ತು ಬಡವರ ಪ್ರೀತಿಗೆ ಪಾತ್ರರಾಗಿದ್ದರು. ಕರ್ನಾಟಕದ ಹಿರಿಯ ಆಯುರ್ವೇದಾನುಭವಿಗಳಲ್ಲಿ ಶ್ರೀನಾಯ್ಕರು ಒಬ್ಬರು. ವೈದ್ಯಕೀಯದಲ್ಲೆಷ್ಟು ಆಳವಾಗಿ ಅಭ್ಯಾಸಮಾಡಿದ್ದರೋ ಅಷ್ಟೇ ಅಭ್ಯಾಸವನ್ನು ಸಾಹಿತ್ಯದಲ್ಲೂ ಮಾಡಿರುವರು. ಆದರೆ ಅವರ ಕೃತಿಗಳು ಅಚ್ಚಾದುದಿಲ್ಲ. ಅವರಿಗೆ ಹಲವು ಭಾಷೆಗಳ ಪರಿಜ್ಞಾನವಿತ್ತು.

ಕರ್ನಾಟಕ ಫಾರ್ಮಸಿಯಲ್ಲಿ 1935ರಲ್ಲಿ ಡಾ| ಧಾಮಲೆP H. D.(London) ಅವರು ಸಂಶೋಧಕರಾಗಿದ್ದಾಗ ಶ್ರೀ ನಾಯ್ಕರು ಸುಪರಿಂಟೆಂಡೆಂಟರಾಗಿದ್ದರು. ತಮ್ಮ ಔಷಧಿಗಳನ್ನು ಮೈಸೂರಲ್ಲಿ ಪ್ರದರ್ಶಿಸಿ, ಬಹುಮಾನ ಪ್ರಶಸ್ತಿಗಳನ್ನು ಪಡೆದಿದ್ದಲ್ಲದೆ ಶ್ರೀ ಮಹಾರಾಜರನ್ನು ಸಂಧಿಸಿ ಅವರೊಡನೆಯೂ ಸಂಭಾಷಿಸಿದ್ದರು. ಅವರು ಬರೆದ ಸಾವಿರಾರು ಪುಟದ ಆಯುರ್ವೇದ ಕೃತಿಗಳು ಅಚ್ಚಾಗದೆ ಉಳಿದಿವೆ. ಶ್ರೀಯುತರು ಎಷ್ಟು ಜ್ಞಾನಿಗಳೋ ಅಷ್ಟೇ ಮೃದುಹೃದಯಿಗಳು ಮತ್ತು ಪರೋಪಕಾರಿಗಳು.

ಕೆ. ರಘುನಾಥ ಶ್ರೀಧರ ಪ್ರಭು
ಸ್ವದೇಶಿ ಔಷಧ ಭಂಡಾರ, ಕುಂಜಾಲು ದ. ಕ.

ಹೆಡಿಯೂರು—ಸರ್ದಾರ್ ಪಟೇಲರ ನಿಧನಕ್ಕಾಗಿ ಇದೇ ತಾ. 16ರಲ್ಲಿ ಹರತಾಳ ವಾಚರಿಸಲಾಯಿತು. ಸಂಜೆ ಶ್ರೀ ಎ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ದುಃಖಸೂಚಕ ಸಭೆಜರಗಿ ದಿವಂಗತರ ಆತ್ಮಕ್ಕೆ ಶಾಂತಿ ದೊರೆಯುವಂತೆ ಪರಮಾತ್ಮನನ್ನು ಪ್ರಾರ್ಥಿಸಲಾಯಿತು.

ಪಡುಪಣಂಬೂರು—ಈ ಕೇಂದ್ರದ ಮಕ್ಕಳ ವರ್ಷಾವಧಿ ಕ್ರೀಡೋತ್ಸವವು ಇದೇ ತಾ. 16ರಲ್ಲಿ ಮಂಗಳೂರು ರೇಂಜ್ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಭೂಪಾಲಶೆಟ್ಟರು ಧ್ವಜಾರೋಹಣ ಮಾಡಿದರು. ಶ್ರೀಗಳಾದ ಪಿ. ಸಂಜೀವಹೆಗ್ಡೆ, ಜಿ. ಮಹಾಬಲಶೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಕುಂಬಳೆ— ಸರದಾರ ಪಟೇಲರ ವಿಯೋಗದ ನಿಮಿತ್ತ ತಾ. 16ರಲ್ಲಿ ಹರತಾಳ ವಾಚರಿಸಲಾಯಿತು.

ಬೈಲೂರು— ಇದೇ ತಾ. 16ರಲ್ಲಿ ಸರದಾರ ಪಟೇಲರ ನಿಧನದ ಸಲುವಾಗಿ ಬೈಲೂರಲ್ಲಿ ಹರತಾಳವಾಚರಿಸಲಾಯಿತು. ಅಂದು ಸಂಜೆ ಡಾ| ಎ. ಕೆ. ಎಲ್. ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ದುಃಖಸೂಚಕ ನಿರ್ಣಯವಾಯಿತು. ಶ್ರೀಗಳಾದ ನಾರಾಯಣ ರಾವ್ ಕಲ್ಲೆ, ಎಮ್. ಎನ್. ಶ್ಯಾನುಭಾಗ, ನಾರಾಯಣ ಶೆಟ್ಟಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ರಸನಿಮಿಷ

ಇಂಡಿಯಾ ಸರಕಾರದವರು ಒಂದು ಬಣ್ಣದ ಕಾರ್ಖಾನೆ ತೆರೆಯುತ್ತಾರಂತೆ

—ತಮ್ಮ ಯೋಜನೆಗಳಿಗೂ, ೧೯೫೨ರೊಳಗೆ ಸ್ವಸಂಪೂರ್ಣವಾಗುವುದಕ್ಕೂ, ಚುನಾವಣೆಗೂ ಇದರಿಂದ ತುಂಬಾ ಸಹಾಯವಾದೀತೆಂದು ಎಣಿಸಲಾಗಿದೆ

೦೦ ೦೦ ೦೦

ಶ್ರೀ– ಶ್ರೀಮತಿ– ದೇವಿ– ಸೌಭಾಗ್ಯವತಿ– ಇವುಗಳಲ್ಲಿ ಯಾವುದಾಗಬಹುದು ಎಂಬ ಕುರಿತು ದೊಡ್ಡ ಹೂರಿ ಎದ್ದಿದೆ

—ಶ್ರೀ ಸೌದೇ|| ಇಂಥವರು ಎಂದರೆ ಯಾರು? ಆಕ್ಷೇಪಿಸುವ ಹಾಗಿಲ್ಲ ಎಂದು ಒಬ್ಬರು ಸೂಚಿಸುತ್ತಾರೆ.

೦೦ ೦೦ ೦೦

ಭಾರತೀಯರು ಭಾರೀ ಗಾಳಿಬುದ್ಧಿಯವರು (Airminded) ಆಗಿದ್ದಾರಂತೆ,

—ವಿಮಾನಗಳು ಪತ್ತೆಇಲ್ಲದೆ ಕಳೆದುಹೋಗಲು ಇದು ಕಾರಣವಾದೀತೆ?

೦೦ ೦೦ ೦೦

ಸಿಂಗಾಪುರದಲ್ಲಿ 'ಅಡವಿಯ ಹುಡುಗಿ'ಯ ಸಲುವಾಗಿ ಸಿಡಿಮದ್ದು ಉಪಯೋಗಿಸಲಾಯಿತು; ಸಾವಿರಾರು ಜನ ನೊಂದರು, ಕೆಲವು ಜನ ಸತ್ತರು.

—ಜಗತ್ತಿನಲ್ಲಿನ್ನೂ ವೀರಯೋಧತನ (Chivalry) ಉಳಿದಿದೆ. ಬಿಳಿಯರಲ್ಲಿನ್ನೂ ಹೆಮ್ಮೆ ಅಳಿದಿಲ್ಲ.

ಪ್ರಕಾಶಂ ಅವರು ತಾನೊಂದು ಕಾಲ ಸಾಕಿ ಸಲಹಿದ ಮಂತ್ರಿಗಳನ್ನೇ ಈಗ ಖಂಡಿಸುತ್ತಿದ್ದಾರೆ,

—ಇವರಂಥ 'ಸತ್ಯಸಂಧ'ರಿಗೆ ರಾಜಕೀಯವು ಸರಿಯಾದ ಜಾಗವಲ್ಲ. ಅರವಿಂದಾಶ್ರಮ ಅಥವಾ ರಮಣಾಶ್ರಮ. ಎರಡರಲ್ಲೂ ಜಾಗ ಖಾಲಿಯಾಗಿದೆ.

೦೦ ೦೦ ೦೦

ಯುಕ್ತರಾಷ್ಟ್ರ ಸಂಘವು ಜಾಗತಿಕ ಕ್ರಿಮಿನಲ್ ನ್ಯಾಯಾಲಯವನ್ನು ರಚಿಸಲು ಒಪ್ಪಿಗೆ ಕೊಟ್ಟಿತು,

—'ಕಳ್ಳನ ಗುಟ್ಟು ಕಳ್ಳನಿಗೇ ಗೊತ್ತು' ಎಂಬಂತೆ ಸ್ಟಾಲಿನ್– ಟ್ರೂಮನ್– ಅಟ್ಲಿಯವರೇ ಇದರ ನ್ಯಾಯಾಧೀಶರಾಗಬೇಕು ಎಂದು ಅಮೇರಿಕದಲ್ಲಿ ಒಂದು ಗಾಳಿಸೂಚನೆ ಇದೆಯಂತೆ.

೦೦ ೦೦ ೦೦

'ಲೇಕ್ ಸಕ್ಸೆಸ್' (ಯಶಸ್ವೀ ಸರೋವರ)ದಲ್ಲಿ ಯಾರೂ ಕುಡಿಯಬಾರದು ಎಂದು ಅಮೇರಿಕದ ಕುಡುಕರಲ್ಲದವರ ಸಂಘ ಒತ್ತಾಯಿಸುತ್ತಿದೆಯಂತೆ.

—ಹಾಗೆ ಮಾಡಿದರೆ ರಾಷ್ಟ್ರಪ್ರತಿನಿಧಿಗಳು ಯುಕ್ತರಾಷ್ಟ್ರ ಸಂಘದಲ್ಲಿ ಭಾಷಣಕೊಡುವುದು ಹೇಗೆ?

೦೦ ೦೦ ೦೦

ಕೊರಿಯದಲ್ಲಿ ಚೆಂಗಿಜ್‌ಖಾನನ ಮಂಗೋಲ ಅಶ್ವಾರೋಹಿಗಳು ಬಂದಿರುವರಂತೆ,

—ಅಮೇರಿಕನ್ನರು 'ಡಂಕರ್ಕ್' ಮಾಡಿ ಜಪಾನಿಗೆ ಹೊರಟುದಕ್ಕೂ ಇದಕ್ಕೂ ಬಾದರಾಯಣ ಸಂಬಂಧವೂ ಇಲ್ಲವಂತೆ.

೦೦ ೦೦ ೦೦

ದಿಲ್ಲಿಯಲ್ಲಿ ಕೊಂಕಣ ಸಂಘದವರು ತಯಾರಿಸಿದ ದೋಸೆ ಇತರ ಎಲ್ಲಾ ಭಕ್ಷ್ಯಗಳನ್ನು ಗೆದ್ದಿತಂತೆ.

—ಇಲ್ಲಿಂದ ಯಾರಾದರೂ ದಿಲ್ಲಿಗೆ ಹೋಗಬಹುದೆ?

೦೦ ೦೦ ೦೦

ಕ. ಸಾ. ಸಮ್ಮೇಳನವು ಮುಂಬಯಿಯಲ್ಲಿ ಜರಗುವುದು.

—ಮುಂಬಯಿಯಲ್ಲಿ 'ಝಂಡಾ ಊಂಚಾ ರಹೇ ಹಮಾರಾ' ಎಂದು ಕನ್ನಡಿಗರು ವೈನವಿರಿದ್ದು ಹಾಡುವರೆ?

೦೦ ೦೦ ೦೦

ಸಮ್ಮೇಳನದಲ್ಲಿ ಹೊಸ 'ಬೇಕು'ಗಳ ಪಟ್ಟಿಯೊಂದನ್ನು ಅಧ್ಯಕ್ಷರು ಸೃಷ್ಟಿಮಾಡುವರು.

—ಪ್ರಗತಿಶೀಲರು 'ಬೇಡ'ದ ಪಟ್ಟಿ ಸೃಷ್ಟಿಸುವುದಿಲ್ಲವಂತೆ.

೦೦ ೦೦ ೦೦

"ನಮಗೆ ವಿಶ್ವಕೋಶ ಬೇಕು, ಟೈಪ್‌ರೈಟರ್ ಬೇಕು, ಹಿಂದಿಯೂ ಬೇಕು, ಅಸೆಂಬ್ಲಿಯಲ್ಲಿ ಹೆಚ್ಚು ಜಾಗಬೇಕು, ಏಕೀಕರಣ ಬೇಕು."

(ಭಾಷಣ)

—'ನಮಗೆ ಬೋನಸ್ ಕೂಡಲೇ ಬೇಕು, ಎಂಬ ಕಮ್ಯೂನಿಸ್ಟ್ ಸ್ಲೋಗಾನಿಗೂ ಇದಕ್ಕೂ ಸಂಬಂಧ ಇರಲಾರದಲ್ಲವೆ?

—ಕು. ಶಿ.

ಬೇಕಾಗಿದ್ದಾರೆ

'ನವಯುಗ' ವಾರಪತ್ರಿಕೆಗೆ ಚಂದಾದಾರರನ್ನು ಸೇರಿಸಲಿಕ್ಕೂ ಜಾಹೀರಾತುಗಳನ್ನು ಸಂಗ್ರಹಿಸಲಿಕ್ಕೂ ಸಂಬಳ ಯಾ ಕಮಿಶನಿನ ಮೇಲೆ ಇಬ್ಬರು ಒರ್ಗನೈಝರರು ಬೇಕಾಗಿದ್ದಾರೆ, ಹೆಚ್ಚಿನ ಮಾಹಿತಿಗೆ ಮುಖತಃ ಮಾತನಾಡಬಹುದು ಯಾ ಬರೆಕೊಳ್ಳಬಹುದು.

ಮೆನೇಜರ್, 'ನವಯುಗ', ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ|| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ|| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಸ್ವೀಕಾರ–ವಿಮರ್ಶೆ

೧ ಡಾ|| ಹರ್ಡೀಕರರೊಂದಿಗೆ– (ವಜ್ರಮಹೋತ್ಸವ ಕಾಣಿಕೆ) ಪ್ರಕಾಶಕರು: ಡಾ|| ಹರ್ಡೀಕರರ ವಜ್ರಮಹೋತ್ಸವ ಸಮಿತಿ, (ಕರ್ನಾಟಕ ಶಾಖೆ) ಹುಬ್ಬಳ್ಳಿ ಬೆಲೆ: ರೂ. ೧–೦–೦

ಡಾ|| ಹರ್ಡೀಕರರ ಷಷ್ಟ್ಯಬ್ದಪೂರ್ತಿಯ ಕಾಲಕ್ಕೆ ಅವರ ಮಿತ್ರರೂ ಸಹೋದ್ಯೋಗಿಗಳೂ ಭಕ್ತಿಪುರಸ್ಸರವಾಗಿ ಸಮರ್ಪಿಸಿದ ಕಾಣಿಕೆ. ಶ್ರೀಗಳಾದ ಜವಾಹರಲಾಲ್ ನೆಹ್ರೂ, ರಾಜಾಜಿ, ಪಟೇಲ್, ರಾಜೇಂದ್ರ ಪ್ರಸಾದ್ ಮೊದಲಾದ ಹಿರಿಯರ ಸಂದೇಶಗಳೂ, ಹರ್ಡೀಕರರ ಇತರ ಮಿತ್ರರ ಅನುಭವಪೂರ್ಣ ಬರಹಗಳೂ ಇರುತ್ತವೆ. ದೇಶಸೇವೆಗೆ ಬದ್ಧಕಂಕಣರಾದ ಮಾನ್ಯ ಹರ್ಡೀಕರರ ಶಿಸ್ತು, ಸಂಘಟನೆಯಿಂದ ಕೂಡಿದ ಜೀವನಾವಲೋಕನವನ್ನು ಮಾಡಲಾಗಿದೆ.

ಕಾಂಗ್ರೆಸ್ಸಿನ ಹಿರಿಯ ವ್ಯಕ್ತಿಗಳಲ್ಲಿ ಹರ್ಡೀಕರರೂ ಒಬ್ಬರು. ರಾಷ್ಟ್ರೀಯ ಸೇವಾದಳದ ಸಿಪಾಯಿಗಳೂ, ದಳಪತಿಗಳೂ ಆಗಿ ತರುಣರಲ್ಲಿ ಶಿಸ್ತು ಜಾಗೃತಿಯನ್ನುಂಟುಮಾಡಿದರು. ಎಲ್ಲವನ್ನೂ ಸದ್ದಿಲ್ಲದೆ ಸಾಧಿಸುವ ಮಹಾ ಮೇಧಾವಿ. ಪ್ರಾಮಾಣಿಕತನದಿಂದ ಸಂಸ್ಥೆಯೊಂದಿಗೆ ದುಡಿಯುವ ಕಲೆಯನ್ನು ಹರ್ಡೀಕರರ ವ್ಯಕ್ತಿತ್ವದಿಂದ ಕಲಿಯಬೇಕು. 'ಅವರು ಅಧಿಕಾರಿಗಳಾಗಿ ಬರಬೇಕಾಗಿತ್ತು' ಎಂದು ಹಲವು ಮಿತ್ರರು ಡಾ|| ಹರ್ಡೀಕರರ ಕುರಿತು ಆಡಿದ್ದಾರೆ. ಅಧಿಕಾರಿಗಳಾಗಿಬರುತಿದ್ದರೆ ಹರ್ಡೀಕರರ ಸೇವಾ ಕಾರ್ಯವನ್ನು ಮಾಡಬಲ್ಲ ನಿಸ್ವಾರ್ಥ ವ್ಯಕ್ತಿ ಇನ್ನೊಬ್ಬ ಸಿಗುವುದು ಕಷ್ಟ. ತಿರುಗಿ ಹರ್ಡೀಕರರನ್ನು ದಳಪತಿಯೆಂದು ಕಾಂಗ್ರೆಸ್ ಅಧ್ಯಕ್ಷರು ಜಾಹೀರು ಮಾಡಿದಂತವನ್ನು ನಾವು ಶ್ಲಾಘಿಸಬೇಕಾಗಿದೆ. ಕಾಂಗ್ರೆಸಿನಲ್ಲಿ ಇಂತಹ ಒಬ್ಬಿಬ್ಬ ಆದರ್ಶ ವ್ಯಕ್ತಿಗಳು ಇನ್ನೂ ಇರುವುದು ಭಾಗ್ಯವೆಂದೇ ಹೇಳಬೇಕು. ಇಂತಹ ಕೃತಿಯನ್ನು ನೀಡಿದ ವಜ್ರಮಹೋತ್ಸವ ಸಮಿತಿಯ ಕಾರ್ಯ ಅಭಿನಂದನೀಯ.

೨ ಪುರಂದರದಾಸರ ಕೀರ್ತನೆ–ಪ್ರಕಾಶಕರು: ಮಾಮಂಜೆ ಗೋವಿಂದರಾವ್ ಅಂಡ್ ಸನ್ಸ್, ಶ್ರೀ ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ. ಬೆಲೆ ರೂ. ೮–೦ ೦

ಸದಾ ತಾತ್ವಿಕ, ಧಾರ್ಮಿಕ, ವಿಷಯಗಳನ್ನು ಪ್ರಕಟಿಸಿ ಜ್ಞಾನ ವಿಕಸನ ಕಾರ್ಯವನ್ನು ಮಾಡುತ್ತಿರುವ ಶ್ರೀ ಮಧ್ವಸಿದ್ಧಾಂತ ಗ್ರಂಥಾಲಯದವರು, ಪುರಂದರ ದಾಸರ ಪದ್ಯಗಳ ೫ ಭಾಗಗಳನ್ನು ಇಲ್ಲಿ ಕೊಟ್ಟಿರುತ್ತಾರೆ. ದಾಸ ಸಾಹಿತ್ಯಗಳಲ್ಲಿ ಪುರಂದರ ದಾಸರ ಕೀರ್ತನೆಗಳು ಮೇಲಾದವು. ಅತ್ಯಂತ ಜನಪ್ರೀತವಾದವುಗಳು. ಸಾಮಾನ್ಯ ಜನರಿಗೂ ಅರ್ಥವಾಗುವಷ್ಟು ಸರಳವಾದ ಸುಂದರವಾದ ದಾಸರ ಕೀರ್ತನೆಗಳ ಕುರಿತು ವಿಮರ್ಶೆ ಬೇಕಾಗಿಲ್ಲ. ದಾಸರ ಎಲ್ಲ ಪದ್ಯಗಳನ್ನು ಒಂದು ಸಂಗ್ರಹವಾಗಿ ಕೊಡುವುದು ಸಾಹಸವೂ, ಕಷ್ಟವೂ ಆಗಿರುತ್ತದೆ. ಇಷ್ಟು ದೊಡ್ಡ ಸಂಗ್ರಹ ಇಷ್ಟು ಸ್ಪಷ್ಟವಾಗಿ, ಸುಂದರ ಮುದ್ರಣದೊಂದಿಗೆ, ನ್ಯಾಯವಾದ ಬೆಲೆಯಲ್ಲಿ ಪ್ರಾಯಃ ಈವರೆಗೆ ಬಂದಿಲ್ಲ. ಇಂತಹ ಕೃತಿಗಳನ್ನು ಪ್ರತಿಯೊಬ್ಬರೂ ಕೊಂಡುಕೊಂಡು ಮಕ್ಕಳಿಗೂ, ಮಿತ್ರರಿಗೂ, ಅಭ್ಯಾಸಿಗಳಿಗೂ ಅವುಗಳನ್ನು ಒಂದು ಧಾರ್ಮಿಕ ಸೇವೆಯೆನ್ನಬಹುದು. ಲೈಬ್ರರಿಗಳಲ್ಲೂ, ವಾಚನಾಲಯಗಳಲ್ಲೂ, ಇಂತಹ ಕೃತಿರತ್ನ ಇರುವದರಿಂದ ದಾಸರ ಪದಗಳ ವ್ಯಾಪಕತೆಗೆ ತುಂಬ ಅನುಕೂಲವಾಗಬಹುದು, ವಿದ್ಯಾ ಇಲಾಖೆಯವರೂ, ಗ್ರಾಮ ಪಂಚಾಯತ ವಾಚನಾಲಯಗಳವರೂ, ಸಂಘದ ಸಂಸ್ಥೆಗಳವರೂ ಇದನ್ನು ಶಿಫಾರಸು ಮಾಡಿ ಹೆಚ್ಚು ಹೆಚ್ಚು ಪ್ರಸಾರವಾಗುವಂತೆ ಮಾಡಬೇಕು.

ಅನುಕ್ರಮಣಿಕೆಯು, ಪದ್ಯಗಳನ್ನು ಹುಡುಕುವ ವಿಚಾರದಲ್ಲಿ ತುಂಬ ಕೆಲಸಕ್ಕೆ ಬರುವಂತಾಗಿದೆ. ಮೊದಲಿಂದ ಕೊನೆಯ ತನಕವೂ ಅಂದರೆ ಕ್ರಮ ಅಧ್ಯಾಯಗಳ ಪರಿಚಯ ಅಷ್ಟವಸಾಲೆಯ ಕ್ರಮದಂತೆ ಕೊಡುತ್ತಿದ್ದರೆ ಬೇಕಾದ ಪದ್ಯಗಳನ್ನು ಹುಡುಕುವ ಕೆಲಸ ಅನುಕೂಲವಾಗುತ್ತಿತ್ತು. ಹಾಗೆಯೇ ಪದ್ಯ ಸಂಖ್ಯೆಯನ್ನು ಕೊಡುವದಕ್ಕಿಂತ ಪುಟಸಂಖ್ಯೆಯೇ ಹೆಚ್ಚು ಅನುಕೂಲ. ಇಷ್ಟು ದೊಡ್ಡ ಸಂಗ್ರಹದಲ್ಲಿ ದಾಸರ ಜೀವನದ ಕುರಿತು ಎರಡು ಪುಟಗಳನ್ನು ಮೀಸಲಾಗಿಟ್ಟಿದ್ದರೆ, ಅದಕ್ಕೆ ಪರಿಪೂರ್ಣತೆ ಬರುತ್ತಿತ್ತು. ಈ ಸಲಹೆಯನ್ನು ಮುಂದಿನ ಆವೃತ್ತಿಯಲ್ಲಿ ತಂದರೆ ಓದುಗರಿಗೂ, ಅಭ್ಯಾಸಿಗಳಿಗೂ ತುಂಬ ಅನುಕೂಲವಾಗಬಹುದು.

ಕಠಿಣವಾದ ಬರಿಗಳ ಪ್ರಕಾಶನ ಕಾರ್ಯವನ್ನೇ ಧ್ಯೇಯವನ್ನಾಗಿಟ್ಟುಕೊಂಡವರಿಗಿಂತ ಜ್ಞಾನವಿಷಯಕವಾದ ಧಾರ್ಮಿಕ ಸಂಗ್ರಹವನ್ನೇ ಪ್ರಕಾಶಗೊಳಿಸುವ ಶ್ರೀ ಮ. ಸಿ. ಗ್ರಂಥಮಾಲೆಯವರು ಅಭಿನಂದನಾರ್ಹರು.

— ಎಸ್ಸೆಲ್

ಪ್ರಕಟಣೆ

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 411/1950

R- I. A. 2443/1950

1 ಮಂಜಪ್ಪ ರೈ, ಬಂಟಪ್ಪ ಶೆಟ್ರ ಅಳಿಯ ಮದ್ಯಾಕೆ ರೈತಿ ಮಗ.

2 ರೇವತಿ } ಅಂತಕ್ಕ ಹೆಂಗ್ಸಿನ
3 ಉಮಾವತಿ } ಮಕ್ಕಳು

ಎಲ್ಲರೂ ಕಾಸರಗೋಡು ತಾಲೂಕು ಮಂಗಲ್ಪಾಡಿ ಗ್ರಾಮದ ಸೊಂಕಾಡಿಯಲ್ಲಿರುವವರು. —ವಾದಿರು, ಅರ್ಜಿದಾರರು.

ಮತ್ತು

1 ಬಂಟಪ್ಪ ಸೆಟ್ಟಿ, ದುಗ್ಗಪ್ಪ ಭಂಡಾರಿಗಳ ಅಳಿಯ ಮ ಅಬ್ಬಕ್ಕ ಹೆಂಗ್ಸಿನ ಮಗ.

2 ದೇರಮ್ಮ ಹೆಂಗ್ಸು, ದೇಯಿ ಹೆಂಗ್ಸಿನ ಮಗಳು

ನಂಬ್ರ 1ನೆಯವರು ಮಂಗಳೂರು ತಾಲೂಕು ಕುಂಜತ್ತಬೈಲು ಗ್ರಾಮದಲ್ಲಿಯೂ, ನಂಬ್ರ 2ನೇಯವರು ಮಂಗಳೂರು ತಾಲೂಕು ಇರಾ ಗ್ರಾಮದಲ್ಲಿಯೂ ಇರುವವರು.

ಇವರೊಳಗೆ

ಮೇಲ್ಕಂಡ ವ್ಯಾಜ್ಯದ ವಾದಿರ ಮತ್ತು 1ನೇ ಪ್ರತಿವಾದಿಯ ಕವರುಕುಟುಂಬದ ಅವರ್ಣದ ಪಕ್ಕಿನವ್ವಾದ ಮಂಗಲ್ಪಾಡಿ ಗ್ರಾಮದ ರೀ. ಸರ್ವೆನಂಬ್ರ 208/9ನೇ ಸ್ಥಳವನ್ನು 1ನೇ ಪ್ರತಿವಾದಿಯು ತಾ. 5-10-1943 ರಲ್ಲಿ ಮಂಜಪ್ಪ ಎಂಬವರಿಗೆ ಟ್ರಾನ್ಸ್‌ಫರ್ ಮಾಡಿಕೊಟ್ಟಿದ್ದು ಸ್ವಾಧೀನದಲ್ಲಿಯಿಂದ 2ನೇ ಪ್ರತಿವಾದಿ ದೇರಮ್ಮ ಹೆಂಗ್ಸಿಗೆ ಸದ್ರಿನದ್ದನ್ನು ಹುಟ್ಟುವಳಿ ಸಹಿತ ಸ್ವಾಧೀನ ಸರಿಕೊಳ್ಳುವರೆ ವಾದಿರು ಅವರ ಮತ್ತು 1ನೇ ಪ್ರತಿವಾದಿಯ ಕವರಿನ ಎಲ್ಲಾ ಮೊಬಲಿಕೆಯಿಂದ ಕೂಡಾ C P C ಯ 1ರೂಲು 8ಮೇರೆಗೆ ಸಹಾ ದಾಖಲುಮಾಡಿದ ಸದ್ರಿ ವ್ಯಾಜ್ಯವು ತಾರೀಖು 8-1 1951ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದಲ್ಲಿ ವಾದಿರು ಮತ್ತು 1ನೇ ಪ್ರತಿವಾದಿಯ ಕವರು ಕುಟುಂಬದ ಮೊಬಲರ ಪೈಕಿ ಯಾರಾದರೂ ಆಕ್ಷೇಪವೇಳುವವರಿದ್ದರೆ ಅಂಥವರು ಮೇಲ್ಕಂಡ ತಾರೀಖಿನಲ್ಲಿ ಕೋರ್ಟಿನ ಮುಂದೆ ಆಕ್ಷೇಪಗಳನ್ನು ಹೇಳಿಕೊಳ್ಳಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿರುತ್ತದೆ

Sd B S Kakkilaya
Advocate for Plaintiffs

Kasargod, 12-12-1950.

'ಮಾನವ ಜಾತಿಗೆ ಬೇಕಾದ ಕವಿ ವರ್ಡ್ಸ್‌ವರ್ತ್'

ಕಳೆದ ವಾರ ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ನಡೆದ ವರ್ಡ್ಸ್‌ವರ್ತ ಶತಮಾನೋತ್ಸವದಲ್ಲಿ ಪ್ರಿನ್ಸಿಪಾಲ ಶ್ರೀ ಸುಂದರರಾಯರ ಉಪನ್ಯಾಸ

ಬುದ್ಧಿಶಕ್ತಿಯಿಂದಜನಿಸಿದ ದುರಂತ

"ಮಾನವ ಜನಾಂಗವು ಇಂದು ಗಂಡಾಂತರದಲ್ಲಿದೆ. ಮಾನವನ ಸಮಸ್ಯೆಗಳು ಮನುಷ್ಯನ ಬುದ್ಧಿಶಕ್ತಿಯಿಂದ ಅವನ ಅವಿವೇಕಿತೆ, ಮೌಢ್ಯ, ಮುಂತಾದುವುಗಳಿಂದ—ಜನಿಸಿರಬಹುದಾದರೂ ಅದಕ್ಕೆ ಬೇಕಾದ ಪರಿಹಾರವಿಧಾನವನ್ನು ಕಂಡು ಕೊಳ್ಳಲು ನಾವು ಬರೇ ಬುದ್ಧಿ ಶಕ್ತಿಯನ್ನೊಂದೇ ನಂಬಿದರೆ ಸಾಲದು. ಬೌದ್ಧಿಕವಾದ ಆವಿಷ್ಕಾರಗಳಿಂದಲೂ, ನವನವ ಸಂಶೋಧನೆಗಳಿಂದಲೂ ಮನುಷ್ಯನ ದರ್ಪ ಮೇರೆ ಮೀರಿದೆ. ತನ್ನಳವಿಗೆ ಪಾರವಿಲ್ಲವೆಂಬ ಎಂಟೆದೆಯಿಂದ, ತನ್ನ ಮೇಲೆ ತಾನೇ ತಂದುಕೊಂಡಿರುವ ದುರಂತವನ್ನೂ ಎಣಿಸದೆ ಮನುಷ್ಯನು ಸರ್ವನಾಶದ ಹಾದಿಯಲ್ಲಿ ಓಡುತಿದ್ದಾನೆ. ಮಾನವ ನಾಗರಿಕತೆಯ ಈ ಉತ್ಕಟಕಾಲದಲ್ಲಿ ಮನುಷ್ಯನು ಮನುಷ್ಯನನ್ನು ಕಾಣುವ ನೋಟ ಬೇರಾಗಬೇಕು; ವರ್ತನೆ ಹೊಸದಾಗಬೇಕು "ಮಾನವ ಜಾತಿ ಹಾಳಾದರೇನು" ಎಂಬ ತ್ವೇಷವನ್ನೂ ಮಾನವ ದ್ವೇಷವನ್ನೂ ಬದಿಗೊತ್ತಿ "ಒಳ್ಳಿತನ್ನೆಸಗುತಿರುವ ಮಹಾಶಕ್ತಿ"ಯನ್ನೇ ದೇವರೆಂದು ಭಾವಿಸಿ ವರ್ಡ್ಸ್‌ವರ್ತನಂತೆ ನಾವೂ ಹೊಸ ಬಗೆಯ ಮಾನವ ವಾದದ ಅಧ್ವರ್ಯುಗಳಾಗತಕ್ಕದು. ಮನುಷ್ಯ, ದೇವರ, ನಿಸರ್ಗ ಈ ಮೂರು ಅಭಿನ್ನವಾದ ಶಕ್ತಿಗಳ ಸಮನ್ವಯದಿಂದ ಮಾನವ ವಾದದ ನವಮನ್ವಂತರವು ತೆರೆಯ ಬೇಕು. ಅಂದರೇನೇ ನಮ್ಮಿದಿರಿನ ದುರಂತವು ಮಾಯವಾದೀತು.

ಜನತೆಯ ಕವಿ

"ವರ್ಡ್ಸ್‌ವರ್ತ ಜನತೆಯ ಕವಿ. ಸಾಮಾನ್ಯ ಜನರಲ್ಲಿ ಅವನಿಗಿದ್ದ ಅನುಕಂಪ ಬಹಳ ಹೆಚ್ಚು. ತನ್ನ ಲೋಕ, ಜಿಲ್ಲೆಯ ರೈತರು, ಕಾರ್ಮಿಕರು ಮೊದಲಾದವರ ನೋವು ನಲಿವುಗಳನ್ನೂ, ಸೂಕ್ಷ್ಮವಾಗಿ ಅವಲೋಕಿಸಿ ಅಜರಾಮರವಾಗಿ ಚಿತ್ರಿಸಿದ ಜಾಣ್ಮೆ ವರ್ಡ್ಸ್‌ವರ್ತನದು. ಅವನು ಮಾನವ ಹೃದಯದ ಕವಿ. ಜನಜೀವನದಲ್ಲಿ ಅನುದಿನವೂ, ಕ್ಷಣ ಕ್ಷಣವೂ ಗುಂಯ್ಗುಡುತಿರುವ ದುಃಖತೋಷಗಳನ್ನೂ ಮಂಜುನಂಜುಗಳನ್ನೂ ಉನ್ನಯನಗಾಗಿ ಮಾಡಿ (Sublimate) ವ್ಯಕ್ತಿ ಪ್ರಮಾಣದಲ್ಲಿರುವಂಥವನ್ನು ಶಕ್ತಿಗಳಾಗಿ ಪರಿವರ್ತಿಸಿ, ಮಾನವ ಗೌರವಕ್ಕೆ ತಳಹದಿಯಾಗಿರುವುದು ವರ್ಡ್ಸ್‌ವರ್ತ ತನ್ನ ಕಾವ್ಯದ ಮೂಲಕ ಸಾಧಿಸಿದ ಮಹೋದ್ದೇಶವಾಗಿದೆ. ಚಿಕ್ಕದೊಂದೇ, ನಮ್ಮದಲ್ಲವೆಂದೂ, ಬೇಡವೆಂದೋ ನಾವು ಕಡೆಗಣಿಸುವ ಸನ್ನಿವೇಶಗಳು ಕವಿಯ ಕಣ್ಣಿಗೆ ಮಾನವ ಜನಾಂಗದ ಆಗುಹೋಗುಗಳನ್ನು ನಿರ್ಣಯಿಸುವ ಶಕ್ತಿಯುಳ್ಳವಾಗಿ, ಅವನ ಕವಿತೆಯ ಪಾಕದಲ್ಲಿ ಇಳಿದು ನಮ್ಮನ್ನು ಮನದಣಿಯೆ ನಸಿಸುತ್ತಿವೆ. ಸಾಮಾನ್ಯವಾದ 'ಡೆಫೋಡಿಲ್' ಹೂ ಕವಿಯ ಹೃದಯಕ್ಕೆ ಚಿದಾನಂದ ಬ್ರಹ್ಮಾನಂದಗಳಿಗೆ ಸಾಕ್ಷಿಯಾಗಿ ನಿಲ್ಲುವುದು. ಸಾಮಾನ್ಯಳಾದೊರ್ವ ರೈತ ಹೆಣ್ಣುಮಗಳ ಜನಪದ ಗೀತದೊಂದು ನುಡಿ ಅರೇಬಿಯಾ ಮರುಭೂಮಿಯ ಏಕಾಂತ ಸನ್ನಿವೇಶದಲ್ಲಿ ಇನಿದನಿಯಿಂದ ಹಾಡುವ ಪಕ್ಷಿಯ ಗಾನವನ್ನು ನೆನಪಿಗೆ ತಂದು ಚಿರಕಾಲವೂ ಕವಿಮನವನ್ನು ನಲಿಸುವ ಶಕ್ತಿಯಾಗುವುದು.

ಕಾವ್ಯವಸ್ತು

"ಒಂದನೆಯದಾಗಿ ವರ್ಡ್ಸ್‌ವರ್ತ ದುಃಖ ನೋವುಗಳ ಕುರಿತು ಬರೆದ 'ಹಾಳುಮನೆ' 'ಮುಳ್ಳು' 'ಮಾರ್ಗರೆಟಳ ದುಃಖ' ಎಂಬ ಕವಿತೆಗಳನ್ನೂ; ಎರಡನೆಯದಾಗಿ ಪ್ರೇಮ, ಸ್ವಾಮಿನಿಷ್ಠೆಗಳ ಕುರಿತು ಬರೆದ "ಬೆಪ್ಪು ಹುಡುಗ" "ಹುಚ್ಚು ತಾಯಿ" ಎಂಬ ಕವಿತೆಗಳನ್ನೂ ಆತ ಮಕ್ಕಳ ಮೇಲೆ ರಚಿಸಿದ 'ಲುಸಿಗ್ರೇ', 'ವಿ ಆರ್ ಸೆವೆನ್' 'ಲುಯಿಸಾ'ಮೊದಲಾದುವನ್ನೂ ಬೆಳಕಿಗೆ ಬಾರದೆ ಎಲೆಮರೆಯ ಕಾಯಂತೆ ಬಾಳಿದರೂ ಮಾನವ್ಯವನ್ನೊಂದಿಷ್ಟೂ ಮುಸುಳಿಸದೆ ಮೆರೆಯುವ ಜನತಾ ಜನಾರ್ದನನ ಪ್ರತಿನಿಧಿ ಕವಿತೆಗಳಾದ "ಲೀಚ್‌ಗೆದರರ್" ಮತ್ತು 'ಮೈಕೋಲ್' ಗಳನ್ನೂ, ಓದಿ ಅದರ ಆನಂದವನ್ನು ಸವಿಯುವ ಅಧಿಕಾರ ಜಗತ್ತಿಗೇ ಸಂದುದು.

ಕವಿಯ ಸಂದೇಶ

"ಮನುಷ್ಯನ ಹೃದಯವು ಎಷ್ಟು ಉನ್ನತವಾದುದು ಎಂಬುದನ್ನು ಕವಿಯು ದನಿ ಎತ್ತಿ ಹಾಡಿದ್ದಾನೆ. ಆದರ ನೋಟವನ್ನು ಮುಂದಣವರೂ ಪಡೆಯಲೆಂದು—ಇಂದು ನೂರು ವರುಷ ಕಳೆದರೂ—ತೋಳೆತ್ತಿ ಕರೆಯುತಿದ್ದಾನೆ. ಅವನ ಆಹ್ವಾನವನ್ನು ಮನ್ನಿಸಿದರೇನೆ ಮಾನವ ಜನಾಂಗವು ಉಳಿದೀತು, ಇಲ್ಲವೋ ಅಳಿದೀತು. ಮಾನವ ಸಭ್ಯತೆಯಿಂದು ತಾನು ನೆಯ್ದ ಬಲೆಗೆ ತಾನೇ ಬಿದ್ದು ಒದ್ದಾಡುತ್ತಿದೆ. ಅದನ್ನರಿಯದೆ ರೋಗಾಣುವನ್ನೇ ಪಥ್ಯವೆಂದೂ, ಮಿಥ್ಯೆಯೇ ಶಾಶ್ವತ ಸತ್ಯವೆಂದೂ, ತಾನು ಅದೃಷ್ಟ ಶಕ್ತಿಗಳ ನಿಯಾಮಕನೆಂದೂ, ಪೊಳ್ಳು ದರ್ಪದಿಂದ ವಿನಾಶದ ಹಾದಿಯಲ್ಲಿ ಅವಸರದಿಂದ ಕಾಲು ಹಾಕುತಿದೆ. ಮನುಷ್ಯನನ್ನು "ಇವನೊಬ್ಬ ತೀರ ಮನುಷ್ಯ, ಬೇರೇನೂ ಅಲ್ಲ" ಎಂಬ ಸರಳದೃಷ್ಟಿಯಿಂದ ನೋಡುವುದನ್ನು ಬಿಟ್ಟು, ಈತ ಕರಿಯ ಈತ ಬಿಳಿಯ, ಈತ ವಿಲಾಯತಿಯ ಹಿರಿಯ ಆತ ಏಶಿಯದ ಕಿರಿಯ, ಅವನು ಶತ್ರು ನಾನು ಮಿತ್ರ—ಎಂಬ ಶಕಖಂಡವಾದ ನೋಟದಿಂದ, ಒಡೆದಗಾಜಿನ ಮೂಲಕ, ನೋಡುತ್ತಿರುವುದರಿಂದಲೇ ಕೊರಿಯದ ಹೋರಾಟ, ಅಮೇರಿಕದ ಆಟಂ-ಆಟ ಬ್ರಿಟನ್ನಿನ ತಟವಟಗಳನ್ನು ನಾವು ಈಕ್ಷಿಸಬೇಕಾಗಿ ಬಂದಿದೆ. ಪ್ರೇಮ, ತಿಳುವು, ದೂರದರ್ಶಿತ್ವಗಳು ತಮ್ಮಲ್ಲಿಲ್ಲದಿರುವಾಗ ಮಾನವ ಸಮಸ್ಯೆಗಳನ್ನು ನಾವು ಬಗೆಹರಿಸಿಯೇವು ಎಂಬುದು ಸುಳ್ಳು" ಎಂದು ಹೇಳಿದರು.

ಕವಿಯ ವೀಣೆ ನಮಗೆ ಬೇಡವೆ?

ಆ ಮೇಲೆ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾದ ಶ್ರೀಮಾನ್ ಶಿವಾನಂದ ಕಾಮತರು ವರ್ಡ್ಸ್‌ವರ್ತ ಕವಿಯ ವೀಣೆಗೆ ಸೌಂದರ್ಯ, ದರ್ಶನ, ಸರಳತೆ ಎಂಬ ಮೂರು ತಂತಿಗಳೆಂದೂ ಇವುಗಳ ಮಿಡಿತದಿಂದ ಕವಿಯು ನಮ್ಮ ಮನಮೋಹಿಸುವಂಥ ನಿಸರ್ಗವನ್ನು ತೆರೆ ತೆರೆಯಾಗಿಯೂ ನೂರ್ಮಿಕವಾಗಿಯೂ ಸೃಜಿಸಿ ನವಬ್ರಹ್ಮನಾದನೆಂದೂ, ಮಾನವ ನಿಸರ್ಗದ ಚಿರಂಜೀವವೂ, ನಿತ್ಯನೂತನವೂ ಆದ ಸಂಬಂಧವನ್ನು ನಾವು ಪುನರಪಿ ಬೆಳೆಯಿಸಿಕೊಂಡಲ್ಲಿ ಎಂಥ ಪಾಶವೀ ಶಕ್ತಿಯಾದರೂ ಅದಕ್ಕೆ ಮಣಿಯುವುದೆಂದೂ ವಿಶ್ವಾಸವನ್ನು ವ್ಯಕ್ತಪಡಿಸಿದರು. ಶ್ರೀಯುತ ಕಾಮತ್ ಅವರ ಅಭಿಪ್ರಾಯದಲ್ಲಿ ವರ್ಡ್ಸ್‌ವರ್ತ ಒಂದುನೂರು ವರುಷ ಹಿಂದೆ ಕೈ ಎತ್ತಿ ತೋರಿಸಿದ ಸೂರ್ಯಾಸ್ತದ ಬೈಗುಗೆಂಪು ನಮಗೀಗ ಕಾಣಿಸದಿರಲು ಕಾಶ್ಮೀರದಲ್ಲಿ ಹರಿಯುವ ನೆತ್ತರ ಹೊಳೆಯ ಕೆಂಡಗೆಂಪೇ ಕಾರಣವಂತೆ.; ಕೊರಿಯಾ ರಂಗದಲ್ಲಿ ಸುರಿಯುವ ತುಪಾಕಿ ತೋಟಗಳ ಕರ್ಕಶ ಧ್ವನಿಯ ನಡುವೆ ವರ್ಡ್ಸ್‌ವರ್ತನ ಕೋಗಿಲೆಯ ಪಂಚಮದಿಂಚರವು ನಮ್ಮ ಕಿವಿಗೆ ಕೇಳಿಸುವುದಿಲ್ಲವಂತೆ. ಅಮೇರಿಕ ರಶಿಯಗಳ ಪ್ರತಿನಿಧಿಗಳ ಬೊಬ್ಬಾಟದಿಂದಾಗಿ, ವರ್ಡ್ಸ್‌ವರ್ತನು ವ್ಯಾವರ್ಣಿಸಿರುವ 'ಕಲಕಲನೆ ಹರಿವ ತೊರೆಗಳ ಮಂಜುಳ ನಿನಾದವೂ' ನಮಗಿಂದು ಬೇಡವಾಗಿದೆಯಂತೆ, ಇದು ಎಂಥ ವಿಪರ್ಯಾಸ! ಎಷ್ಟು ಅವಿವೇಕ? ಮಾನವ ನಿಸರ್ಗಗಳ ಐಕ್ಯದ ಚಿರಂತನ ಸತ್ಯವನ್ನು ಒಪ್ಪಿಕೊಳ್ಳುವುದರ ಬದಲು ಈ ರೀತಿ ಸರ್ವನಾಶದ ಹಾದಿಯನ್ನು ಅಪ್ಪಿಕೊಳ್ಳುವ ಮಂದಮತಿ ಎಂದು ಅಳಿದೀತು? ಎಂದು ಕಾಮತರು ಉದ್ಗಾರವೆತ್ತಿದರು.

"ಮೈಕೇಲ್" ನಾಟಕ ದೃಶ್ಯ

'ಮೈಕೇಲ್' ಒಬ್ಬ ಕುರುಬ; ಮುದುಕಿಯಾದ ಹೆಂಡತಿಯನ್ನು ಕಟ್ಟಿಕೊಂಡು ಇಂಗ್ಲೆಂಡಿನ ಲೇಕ್ ಜಿಲ್ಲೆಯಲ್ಲಿ ಸ್ವತಂತ್ರವಾದ ಬಾಳುವೆಯನ್ನು ನಡೆಯಿಸುವ ಸರಳ ಜೀವಿಯಾತ; ಅವನಿಗೊಬ್ಬ ಮಗ; ಹೊಸ ಸುಧಾರಣೆಯ ಸುಳಿಯಲ್ಲಿ ಸಿಲುಕಿ ಮಗನು ಶಹರುವಾಸಿಯಾಗುತ್ತಾನೆ; ಮುದಿ ತಂದೆತಾಯಿಗಳು ಕೊರಗುತ್ತಾರೆ—ಇಷ್ಟು ಕವಿಬರೆದ ಮೈಕೇಲ್ ಎಂಬ ಖಂಡ ಕಾವ್ಯದ ವಸ್ತು. ಮರ್ಮಸ್ಪರ್ಶಿಯಾಗಿ, ಸರಳ ಪದಗಳಲ್ಲಿ, ನಿರಾಭರಣ ಸುಂದರವಾಗಿ ಬರೆದಿರುವ ಈ ಕವಿತೆಯಲ್ಲಿ ನಾಟಕೀಯವಾದ ಅಂಶವನ್ನಾಯ್ದು ಕಾಲೇಜಿನ 'ನಾಟ್ಯಕೂಟ'ದವರು ಒಂದು ನಾಟಕ ದೃಶ್ಯವನ್ನು ನಿರ್ಮಿಸಿ ಅದನ್ನು ಶತಮಾನೋತ್ಸವದಂದು ಪ್ರದರ್ಶಿಸಿದರು. ಕಥೆಗೆ ತಕ್ಕುದಾದ ಹಿನ್ನೆಲೆಯನ್ನು ನಾಡಿನ ಉದೀಯಮಾನ ಚಿತ್ರ ಕಲಾವಿದ 'ಕಿಟ್ಟಿ'ಯವರು ಬರಿಯ ಚಾಕುನೀರಿನಿಂದಲೂ, ಬ್ರಶ್ಶಿನಿಂದಲೂ, ಎಳೆದುಕೊಟ್ಟು, ಲೇಕ್ ಜಿಲ್ಲೆಯನ್ನು ನಮ್ಮ ಕಣ್ಣಮುಂದೆ ತಂದಿದ್ದರು. ವಿದ್ಯಾರ್ಥಿ ನಿರ್ದೇಶಕರಾದ ಶ್ರೀ ಶಿವಳ್ಳಿ ಹೆಗ್ಡೆಯವರ ನೇತೃತ್ವದಲ್ಲಿ ಇದನ್ನು ರಂಗಭೂಮಿಯಲ್ಲಿ ಮಾತಿಲ್ಲದೆ ಚೆನ್ನಾಗಿ ಆಡಿತೋರಿಸಿದರು. ಉಚಿತವಾದ ಪೋಷಾಕಿನಿಂದಲೂ, ರಂಗಪರಿಕರಗಳಿಂದಲೂ, ದೃಶ್ಯವು ಮನಮೋಹಕವಾಗಿಯೂ ಯಶಸ್ವಿಯಾಗಿಯೂ ನಡೆಯಿತು. ಮೈಕೇಲ್ ಪಾತ್ರದಲ್ಲಿ ಶ್ರೀ ಶ್ಯಾನುಭೋಗರೂ, ಮೈಕೇಲ್ ಮಗನ ಪಾತ್ರದಲ್ಲಿ ಶ್ರೀ ರಾಜಶೇಖರ ಶೆಟ್ಟಿಯೂ ಉತ್ತಮವಾಗಿ ವರ್ತಿಸಿದರು. ನಡನಡುವೆ ವಿದ್ಯಾರ್ಥಿಗಳಿಂದ ವರ್ಡ್ಸ್‌ವರ್ತ ಕವಿಯ ಕಾವ್ಯವಾಚನ ನಡೆಯಿತು. ಅಲ್ಲದೆ ಬ್ರಿಟಿಷ್ ಕೌನ್ಸಿಲಿನವರ ಕೃಪೆಯಿಂದ ದೊರೆತ 'ಗಾನನೋಸೆ'ಗಳ ಕರ್ಣಾನಂದ ಗೀತವೂ, ಕೊನೆಗೆ ಬಂದ "ಲೇಕಜಿಲ್ಲೆ"ಯ ಚಿತ್ರ ಪಟವೂ ಶತಮಾನೋತ್ಸವಕ್ಕೆ ಕಳಸವಿಟ್ಟಂತಾದುವು.

—ಓರ್ವ ಪ್ರೇಕ್ಷಕ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No 47/1950

ರಾಧಾ ಯಾನೆ ಶಾಂತಾ ಬ್ಯಾ-ನರಸಿಂಹ ಗಣಪತಿ ಭಟ್ಟರ ವಿಧವೆ, ಬೊಂಬ್ಯಾಯಲ್ಲಿರುವವಳು. —ಅರ್ಜಿದಾರಳು,

ಸದರಿ ಅರ್ಜಿದಾರಳ ಗಂಡ ತಾ. 3-5-48 ರಲ್ಲಿ ಮೃತಪಟ್ಟ ನರಸಿಂಹ ಗಣಪತಿಭಟ್ಟರು ದಿ ಎಂಪಾಯರ್ ಆಫ್ ಇಂಡಿಯಾ ಲೈಫ್ ಎಶ್ಶೂರನ್ಸ್ ಕಂಪೆನಿಯಲ್ಲಿ ಪಡೆದ ನಂಬ್ರ 226133ನೇ ಪೊಲಿಸಿಯ ಬಾಬ್ತು ಬಹರೂಪಾಯಿ 1500/-ನ್ನು ವಸೂಲು ಮಾಡುವರೆ ತಾನು ಹಕ್ಕುದಾರಳೆಂತಲೂ ಆ ಕುರಿತು ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಸಹಾ ಸದರಿ ಅರ್ಜಿದಾರಳು ಬರಕೊಂಡ ಮೇಲ್ಕಂಡ ಅರ್ಜಿಯು ತಾ 6-1-1951ಕ್ಕೆ ಇಡೋಣಾಗಿಯದೆ. ಈ ವಿಷಯದಲ್ಲಿ ಯಾರದ್ದು ಆಕ್ಷೇಪಿಸುವವರು ಇದ್ದರೆ ಸದರಿ ತಾರೀಕಿನ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸೋಣಾಗಿಯದೆ.

M. Damodar Kamath,
Advocate for Petitioner.

ಉಡುಪಿ, ತಾರೀಖು 11-12-1950

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ತಮ್ಮ ದೃಢ ವಿಶ್ವಾಸ ಪಾತ್ರ -

ಕೆನರಾ ಬ್ಯಾಂಕ್

ಸ್ಥಾಪಿತ 1906

ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು

ಐವತ್ತು ಸಹಸ್ರಕ್ಕೆ ಕುಟುಂಬವ ಬ್ಯಾಂಕರರು

ಎಂಟು ಕೋಟಿಗೂ ಮಿಗಿಲಾದ ನಿಧಿಗಳು.

ವಾರದ ಹರಟೆ

'ಯು. ವಿ.'

ಪ್ರಿಯ ವಾಚಕರೇ,

ಕಳೆದ ವಾರ 'ವಾರದ ಹರಟೆ' ಎಂದು ಎರಡು ಕಲವಿಗೆ ಬೇಕಾದಷ್ಟು ನಾನು ನವಯುಗಕ್ಕೆ ಬರೆದು ಕಳುಹಿಸಿದ್ದೆ. ಅದನ್ನು ಸಂಪಾದಕರು ಸ್ವೀಕರಿಸಿ ಪ್ರಕಟಿಸಿದ್ದಾರೆ. ನನಗೆ ಬಹಳ ಸಂತೋಷವಾಯಿತು. ನನ್ನ ವಾಚಕರೊಡನೆ ನಾನು ವಾರಕ್ಕೆ ಅರ್ಧತಾಸು ಹರಟೆ ಹೊಡೆಯುವುದು ಅವರಿಗೆ ಇಷ್ಟವಿದೆ ಎಂದಾಯಿತು. ಈ ಸಾರೆ ಯಾವ ವಿಷಯದಲ್ಲಿ ಹರಟೆ ಹೊಡೆಯುವುದೆಂದು ನಾನು ಯೋಚಿಸಲಿಲ್ಲ. ಸದ್ಯದಲ್ಲೇ ನಮ್ಮ ಪಾರ್ಲಿಮೆಂಟಿನಲ್ಲಿ ಬರಲಿರುವ ಹಿಂದೂ ಕೋಡು ಏನೆಂಬುದರ ವಿಷಯ ಈ ಸಲ ಮಾತಾಡುವಾ ಎಂದಿದ್ದೇನೆ. ನವಯುಗದ ವಾಚಕರು ಹರಟೆಯ ವಿಷಯ ಸೂಚಿಸುವ ವರೆಗೆ ನಾನೇ ವಿಚಾರ ಹುಡುಕಬೇಕಾಗಿದೆ, ಇರಲಿ.

ಹಿಂದೂ ಕೋಡೆಂದರೆ ನಮ್ಮ ಭಾರತದಲ್ಲಿರುವ ಹಿಂದುಗಳೆಲ್ಲರೂ ಒಂದೇ ಕಾನೂನನ್ನು ಅನುಸರಿಸಬೇಕೆಂದು ಯೋಜನೆಯಿದೆ. ಅದು ಹೇಗಿರಬೇಕೆಂದು ಪಾರ್ಲಿಮೆಂಟಿನವರು ಚರ್ಚಿಸಿ ನಿರ್ಣಯಿಸಬೇಕು. ಈಗ ನಮ್ಮಲ್ಲಿ ಒಂದೊಂದು ಪ್ರದೇಶದ ಜನರು ಒಂದೊಂದು ವಿಧದ ಕಾನೂನನ್ನು ಅನುಸರಿಸುತ್ತಿದ್ದಾರೆ. ಹಿಂದೂ ಕಾನೂನಿನಲ್ಲಿ ಮುಖ್ಯವಾಗಿ ಎರಡು ಕ್ರಮವಿದೆ, ಮಿತಾಕ್ಷರ ಮತ್ತು ದಾಯಭಾಗ ಎಂದು. ಬಂಗಾಳದ ಹಿಂದುಗಳು ದಾಯಭಾಗ ಕ್ರಮವನ್ನೂ ಮಿಕ್ಕುಳಿದ ಪ್ರಾಂತ್ಯಗಳ ಹಿಂದುಗಳು ಮಿತಾಕ್ಷರ ಕ್ರಮವನ್ನೂ ಅನುಸರಿಸುತ್ತಾರೆ. ಮಿತಾಕ್ಷರ ಕ್ರಮವನ್ನು ಅನುಸರಿಸುವವರಲ್ಲಿಯೂ ಕೆಲವು ಉಪಭಾಗಗಳಿವೆ. ಬೆನಾರಿಸ್, ಮಿಥಿಲಾ, ಮಹಾರಾಷ್ಟ್ರ, ದ್ರಾವಿಡ, ಮಯೂಖ ಇತ್ಯಾದಿ-ಸ್ಥಳೀಕ ಪದ್ಧತಿಯನ್ನು ಅನುಸರಿಸುವ ಹಿಂದುಗಳು ಬೇರೆಯೇ ಇದ್ದಾರೆ. ಉದಾಹರಣೆಗಾಗಿ ದಕ್ಷಿಣಕನ್ನಡ, ಮಲಬಾರು, ಕೊಚ್ಚಿ-ತಿರುವಾಂಕೂರಿನ ಕೆಲವು ಹಿಂದುಗಳು ಬೇರೆ ಎಲ್ಲಿಯೂ ಪ್ರಚಾರದಲ್ಲಿರದ ಅಳಿಯಕಟ್ಟನ್ನು ಅನುಸರಿಸುತ್ತಾರೆ. ಒಬ್ಬನು ಮೃತನಾದ ನಂತರ ಅವನ ಆಸ್ತಿ ಯಾರಿಗೆ ಯಾವ ರೀತಿಯಲ್ಲಿ ಹೋಗುತ್ತದೆ? ಎಂಬುದೊಂದು ಪ್ರಶ್ನೆ. ಒಂದು ಕುಟುಂಬದಲ್ಲಿರುವವರ ಪರಸ್ಪರ ಹಕ್ಕುಗಳು ಈ ಎರಡು ಪ್ರಶ್ನೆಗಳಲ್ಲಿ ಒಂದೊಂದು ಕಡೆ ಒಂದೊಂದು ರೀತಿಯ ಕ್ರಮವಿದೆ. ಸ್ತ್ರೀಯರಿಗೆ ಈ ವರೆಗೆ ಹೆಚ್ಚಿನ ಅಧಿಕಾರವಿರಲಿಲ್ಲ. ಸ್ತ್ರೀಯು ಆಸ್ತಿಯನ್ನು ಹೊಂದಲೂ ಸ್ವತಂತ್ರವಾಗಿ ಅನುಭವಿಸಲೂ ಅರ್ಹಳಲ್ಲವೆಂಬ ಅಭಿಪ್ರಾಯವೇ ಎಲ್ಲಾ ಕಡೆಯಲ್ಲಿಯೂ ಇತ್ತು. ಕಾಲವು ಹೋದಂತೆ ನಮ್ಮ ಅಭಿಪ್ರಾಯಗಳು ಬದಲಾವಣೆಯಾದವು. ಸ್ತ್ರೀಯರಿಗೂ ಪುರುಷರಂತೆಯೇ ಹಕ್ಕು ಸ್ವಾತಂತ್ರ್ಯಗಳು ದೊರೆಯಬೇಕೆಂಬ ಅಭಿಪ್ರಾಯಕ್ಕೆ ಸಾಕಷ್ಟು ಮನ್ನಣೆ ದೊರೆಯಿತು. ಮಿತಾಕ್ಷರ ಕ್ರಮಕ್ಕಿಂತಲೂ ದಾಯಭಾಗದ ಕ್ರಮವೇ ಹೆಚ್ಚು ಸುಧಾರಣೆಯ ಕ್ರಮವೆಂದು ನಮ್ಮ ಧುರೀಣರು ಕಂಡರು. ದಾಯಭಾಗ ಕ್ರಮವನ್ನೇ ಆಧಾರವಾಗಿಟ್ಟುಕೊಂಡು ಎಲ್ಲಾ ಕಡೆಯ ಹಿಂದುಗಳಿಗೂ ಅನ್ವಯಿಸುವಂತೆ ಒಂದು ಹೊಸ ಕಾನೂನನ್ನು ನಿರ್ಮಿಸಬೇಕೆಂದು ಸರಕಾರದವರು ಮನಗಂಡರು.

ಯು. ಎನ್. ಸಂಘದಲ್ಲಿ ಈಗ ಭಾರತದ ಪ್ರತಿನಿಧಿಯಾಗಿ ಕೆಲಸಮಾಡುತ್ತಾ ಎಲ್ಲರ ಕೀರ್ತಿ ಮನ್ನಣೆಯನ್ನು ಪಡೆಯುತ್ತಿರುವ ನಮ್ಮ ಬಿ. ಎನ್. ರಾಯರಿದ್ದಾರಲ್ಲವೇ, ಬೆನಗಲ್ ನರಸಿಂಗರಾಯರು. ಬೆನಗಲ್ ಎಂದರೆ ಕುಂದಾಪುರ ತಾಲೋಕಿನ ಒಂದು ಹಳ್ಳಿ. ಸರ್. ಬಿ. ಎನ್. ರಾಯರು ನಮ್ಮ ಜಿಲ್ಲೆಯವರು ಎಂಬುದು ಅಭಿಮಾನದ ಮಾತು. ಅವರು ಐ. ಸಿ. ಎಸ್. ಪಾಸಾಗಿದ್ದರು. ಕಲ್ಕತ್ತಾ ಹೈಕೋರ್ಟಿನ ಜಡ್ಜರಾಗಿದ್ದರು. ಅವರ ಅಧ್ಯಕ್ಷತೆಯಲ್ಲಿ ದೇಶದ ಎಲ್ಲಾ ಹಿಂದುಗಳಿಗೂ ಮೆಚ್ಚಿಗೆ ದೊರೆಯುವ ರೀತಿಯ ಒಂದು ಕಾನೂನನ್ನು ಸೂಚಿಸಲಿಕ್ಕಾಗಿ ಅನೇಕ ಪಂಡಿತರಿಂದ ಕೂಡಿದ ಒಂದು ಕಮಿಟಿ ನಿಯಮಿಸಲ್ಪಟ್ಟಿತು. ಈ ಕಮಿಟಿ ದೇಶದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿ ಸಾಮಾನ್ಯವಾಗಿ ಎಲ್ಲರೂ ಒಪ್ಪುವ ರೀತಿಯ ಒಂದು ಮಸೂದೆಯನ್ನು ತಯಾರಿಸಿತು. ಇದೆಲ್ಲಾ ನಮಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕುವುದಕ್ಕಿಂತ ಮೊದಲೇ ಆದದ್ದು. ಏಕೆ ಹೇಳಿದೆನೆಂದರೆ 'ಹಿಂದೂ ಕೋಡು ಮಸೂದೆ ಈ ಕೋಂಗ್ರೆಸು ಅಧಿಕಾರಕ್ಕೆ ಬಂದ ನಂತರವೇ ಹುಟ್ಟಿದ್ದು' ಎಂದು ನಿಮ್ಮಲ್ಲಿ ಕೆಲವರ ಅಭಿಪ್ರಾಯವಿರಬಹುದು. ವಿಷಯ ಹಾಗಲ್ಲ. ಇಡೀ ದೇಶದ ಹಿಂದುಗಳಿಗೆಲ್ಲಾ ಒಂದೇ ರೀತಿಯ ಕಾನೂನಾಗಬೇಕೆಂದು ನಮ್ಮ ಧುರೀಣರು ಮೊದಲೇ ಯೋಚಿಸಿದ್ದರು. ಮೊದಲಿನ ಸರಕಾರದ ಆಶ್ರಯದಲ್ಲಿ ತಯಾರಾದ ಮಸೂದೆಯನ್ನೇ ಅಲ್ಪ ಸ್ವಲ್ಪ ವ್ಯತ್ಯಾಸಮಾಡಿ ಕೋಂಗ್ರೆಸು ಸರಕಾರದವರು ಪಾರ್ಲಿಮೆಂಟಿನ ಮುಂದೆ ತರುತ್ತಿದ್ದಾರೆ ಅಷ್ಟೆ. ಅನೇಕ ಶತಮಾನಗಳಿಂದ ಸ್ಥಳೀಕ ಕ್ರಮ ಅಥವಾ ಪದ್ಧತಿಯನ್ನು ಅನುಸರಿಸುತ್ತಿದ್ದ ಜನರು -'ನಮ್ಮ ಕ್ರಮವೇ ನಮಗೆ ಇನ್ನು ಮುಂದೆಯೂ ಆದೀತು ನಮಗೆ ಯಾವ ಸುಧಾರಣೆಯೂ ಅಗತ್ಯವಿಲ್ಲ' ಎನ್ನುತ್ತಾರೆ ನಿಜ. ಆದರೆ ನಮ್ಮ ಪ್ರದೇಶದ ಹೊರಗೂ ದೇಶವಿದೆ; ಹಿಂದುಗಳೂ ಇದ್ದಾರೆ. ನಾವೆಲ್ಲರೂ ಒಂದೇ ರೀತಿಯ ಕ್ರಮದಲ್ಲಿರಬೇಕು ಎನ್ನುವ ಭಾವನೆಯಿರುವವರು ಯಾರೂ ಈ ಹೊಸ ಯೋಜನೆಗೆ ಅಡ್ಡ ಬರುವುದಿಲ್ಲ. ಹೀಗಾಗಿ ಈ ಮಸೂದೆ ಪಾರ್ಲಿಮೆಂಟಿನ ಮುಂದೆ ಸದ್ಯವೇ ಬರಲಿಕ್ಕಿದೆ. ಸರ್. ಬಿ. ಎನ್. ರಾಯರ ಕಮಿಟಿಯವರು ತಯಾರಿಸಿಟ್ಟಿರುವ ಮಸೂದೆಗೂ ಈಗ ಪಾರ್ಲಿಮೆಂಟಿನ ಮುಂದೆ ಬರಲಿರುವ ಮಸೂದೆಗೂ ಬಹಳ ವ್ಯತ್ಯಾಸವಿದೆ. ಮಸೂದೆಗೆ ಅಲ್ಲಲ್ಲಿಯ ಜನರು ಪ್ರತಿಭಟಿಸಿದಂತೆ ಅದು ಸುಧಾರಣೆ ಹೊಂದುತ್ತಾ ಬಂದಿದೆ. ಇದನ್ನು ಈಗಿರುವ ರೂಪಕ್ಕೆ ತಂದವರು ನಮ್ಮ ಸರಕಾರದ ನ್ಯಾಯಸಚಿವರಾದ ಶ್ರೀ ಅಂಬೆಡ್ಕರರು. ಅವರು ಮೊದಲು ಮುಂಬಾಯಿಯ ಲಾ ಕೊಲೇಜಿನಲ್ಲಿ ಪ್ರೊಫೆಸರರಾಗಿದ್ದರು. ಅವರು ಈ ಮಸೂದೆಯನ್ನು ರೂಪಗೊಳಿಸಲಿಕ್ಕೆ ಶತಪ್ರಯತ್ನ ಮಾಡಿರುತ್ತಾರೆ. ಸಾವಿರ ಜನರ ಬೈಗಳನ್ನು ಕೇಳಿದ್ದಾರೆ. ಸಾವಿರ ಜನರ ಪ್ರೀತಿಯನ್ನು ಗಳಿಸಿದ್ದಾರೆ. ಹೌದು. ಹರಿಜನರು. ಆದರೇನಾಯಿತು? ಅದಕ್ಕಾಗಿ ನಾವು ಹೆಮ್ಮೆಪಡಬೇಕಲ್ಲದೆ ಅಸೂಯೆಪಡುವುದಲ್ಲ. ಹೇಗೂ ಬರುವ ಪಾರ್ಲಿಮೆಂಟಿನಲ್ಲಿ ಮಸೂದೆ ಬರುತ್ತದೆ. ಕ್ರಮೇಣ ಮಂಜೂರಾಗುತ್ತದೆ. ನಮ್ಮ ಜಿಲ್ಲೆಯವರೇ ಆದ ಮಲ್ಯರೂ, ಕಾಮತರೂ ಅಲ್ಲಿ ಇದ್ದಾರೆ. ಎಲ್ಲರಿಗೂ ಬೇಕಾದಂತೆ ಆದೀತೆನ್ನಿ. ಇದೆಲ್ಲಾ ಹೇಳಿದೆನಲ್ಲಾ, ಆದರೆ ಬಿಲು ಕೋಡಾದರೆ ಪರಿಣಾಮವೇನೆಂದು ಇಲ್ಲಿ ಹೇಳಲಿಲ್ಲ. ಮಾತುವುದೇನು? ತಾಸು ಅರ್ಧವಾಯಿತು ನೋಡಿ. ದೇವರು ನಡೆಸಿದರೆ ಇದೇ ವಿಷಯ ಬರುವ ವಾರವೂ ಮುಂದುವರಿಸುತ್ತೇನೆ, ನಿಮಗೆ ಬೇಸರವಿಲ್ಲವಷ್ಟೆ? ನಮಸ್ಕಾರ.

ಪ್ರೀತಿ ಇರಲಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ತೊಡುವಾಗಿದ್ದರೆ,...,ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉದುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ. ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

30

ದೊಡ್ಡ ಕಪ್ಪುಗಳಷ್ಟು ಚಹ ಪ್ರತಿಯೊಂದು 2 ಔನ್ಸ್ ಪೊಟ್ಟಣದಲ್ಲಿ

ಪೊಟ್ಟಣಗಳಲ್ಲಿ ಕಟ್ಟಿರುವ ಚಹಗಳು ಪೇಟೆಯಲ್ಲಿ ಅಗ್ಗವಾಗಿ ಕಾಣಬಹುದು. ನೀವು ಬ್ರೂಕ್ ಬಾಂಡ್ ಚಹವನ್ನು ಕೊಂಡಷ್ಟೇ ಅದರ ನಿಮಗೆ ಅಧಿಕ ಪ್ರತಿಫಲ ದೊರೆಯುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಟಣವು 30 ದೊಡ್ಡ ಕಪ್ಪುಗಳಿಗಾಗುವಷ್ಟು ಚಹವನ್ನು ಒಳಗೊಂಡಿರುತ್ತವೆ. ಪ್ರತಿಯೊಂದು ಪೊಟ್ಟಣವೂ ಮಲಿನವಾಗದ ಹಾಗೆ ಕಾಪಾಡಲ್ಪಟ್ಟಿರುವುದಲ್ಲದೆ ಗುಣ ಮತ್ತು ರುಚಿಗಳಲ್ಲಿಯೂ ಕೂಡ ಭರವಸೆ ಕೊಡಲ್ಪಟ್ಟಿರುತ್ತವೆ.

ಬ್ರೂಕ್ ಬಾಂಡ್ ಚಹಾ

BB/SO LOT/10A

ವಾರ ಭವಿಷ್ಯ

ತಾರೀಕು 21-12-1950ರಿಂದ ತಾ. 27-12-1950ರ ವರೆಗೆ.

ಮೇಷ—ಯಾರಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಸ್ವಯಂ ದುಡಿಯುವ ಶಕ್ತಿಯುಳ್ಳ ನಿಮಗೆ ಈ ವಾರದಲ್ಲಿ ಒಳ್ಳೆಯ ಫಲ ಲಾಭವಿರುವುದು. ಗುರುಹಿರಿಯರೂ ಬಂಧುವರ್ಗವೂ ನಿಮಗನುಕೂಲವಾಗಿರುವುದು. ಶತ್ರುಗಳು ಸಮೀಪ ಸೋಂಕಲಾರರು. ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆವಿರಿ. ಪ್ರತಿಯೊಂದು ವರ್ಗದವರಿಗೂ ಕಂತವನ್ನು ಉದ್ಯೋಗದಲ್ಲಿ ಉತ್ತಮ ಫಲ ಲಭಿಸುವದು. ಲೇವಾದೇವಿಯಲ್ಲಿ ಜಾಗರೂಕರಾಗಿರಿ. ವ್ಯರ್ಥ ವಿಪ್ಪುರಕ್ಕೆ ಸಿಲುಕುವ ಸಂಭವವಿದೆ. ತಾ. 24, 25 ಈ ದಿನಗಳಲ್ಲಿ ಸುಖಲಾಭಗಳು ಉತ್ತಮವಿವೆ.

ವೃಷಭ—ಗ್ರಹ ಬಲವು ತೀರ ದುರ್ಬಲವಿದೆ. ಪ್ರಯತ್ನಪಟ್ಟು ದುಡಿಯುವವರಿಗೂ ನಿರೀಕ್ಷಿಸಿದ ಫಲವು ಲಭಿಸದ ಕಾರಣ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವರು. ಆತ್ಮೀಯರೂ ಪರಕೀಯರಾಗಿ ಪರಿವರ್ತಿಸುವರು. ಆದಕಾರಣ ನೀವು ತುಂಬಾ ಚಿಂತೆಗೊಳಗಾಗುವಿರಿ. ಆರೋಗ್ಯವೂ ಕೂಡ ಕೆಡುವ ಲಕ್ಷಣಗಳು ಕಾಣಿಸುತ್ತವೆ. ಕೆಲವೊನ್ನು ಆಕಸ್ಮಿಕವಾಗಿ ಪರಧನ ತತ್ರಾಪಿ ಸ್ತ್ರೀಧನ ಪ್ರಾಪ್ತಿಯ ಯೋಗವಿದೆ. ತಾ. 24, 25 ಬಿಟ್ಟು ಉಳಿದ ದಿನಗಳು ಸಾಕಷ್ಟು ಉತ್ತಮವಿವೆ.

ಮಿಥುನ—ದುರ್ವಿಧಿಯು ನಿಮ್ಮನ್ನು ಪ್ರಬಲವಾಗಿ ಪೀಡಿಸುತ್ತಿರುವುದು. ಚಿನ್ನವನ್ನು ಮುಟ್ಟಿದರೂ ಮಣ್ಣಾಗಿ ಪರಿವರ್ತಿಸುವದು. ಆಪ್ತೇಷ್ಟರೆಂಬವರೇ ನಿಮಗೆ ಕಾಣಿಸಲೊಲ್ಲರು. ಶತ್ರುಗಳ ಪೀಡೆಯಿಂದ ವ್ಯರ್ಥ ಧನವ್ಯಯವಾಗುವದಲ್ಲದೆ ಮಾನಕ್ಕೆ ಕೂಡ ಹಾನಿತಗಲುವ ಸಂಭವವಿದೆ. ಮಾತ್ರವಲ್ಲ ಜನತೆಯ ನಿಂದಾಪವಾದಗಳಿಗೆ ಗುರಿಯಾದೀರಿ. ದೇಹಾಲಸ್ಯವು ಕಾಣಿಸಿಕೊಂಡೀತು. ಆದರೂ ಬೃಹಸ್ಪತಿಯ ಪೂರ್ಣಾನುಗ್ರಹವು ನಿಮ್ಮನ್ನು ಹಲವಾರು ವಿಪತ್ತುಗಳಿಂದ ಪಾರುಗಾಣಿಸಲಿದೆ. ತಾ. 24, 25 ಸುದಿನಗಳು.

ಕರ್ಕಟ—ಅಳಾಗಿ ದುಡಿದರೆ ಅರಸನಾಗಿ ಉಣಬಹುದೆಂಬಂತೆ ಗ್ರಹಸ್ಥಿತಿಯು ನಿಮಗಾತೆರನಾದ ಅನುಕೂಲವನ್ನೊದಗಿಸಿದೆ. ನಿಮ್ಮ ಪರಿಶ್ರಮವು ಎಳ್ಳಷ್ಟೂ ನಿಷ್ಫಲವಾಗದು. ಸಂಪದ್ಭಾಗವೂ ಅಭಿವೃದ್ಧಿಗೊಳ್ಳಲಿದೆ. ಶತ್ರುಜನರೂ ಮಿತ್ರರಾಗುವರು. ಆದರೇನು ಗೃಹಕೃತ್ಯದಲ್ಲಿ ನಿಮಗೆ ಸ್ವಲ್ಪವೂ ಸುಖವಿರದು. ಮಾತ್ರವಲ್ಲ ಆರೋಗ್ಯವೂ ಕೆಡಲಿರುವದು. ಆಕಸ್ಮಿಕ ಪ್ರವಾಸಗಳು ಗಂಟುಬೀಳಲಿವೆ. ತಾ. 24, 25 ಹೊರತಾಗಿ ಮಿಕ್ಕದಿನಗಳು ಲಾಭ ಸಂತಸದಾಯಿಗಳಾಗಿವೆ.

ಸಿಂಹ—ದೈವ ಪೌರುಷಗಳೆರಡರ ಅನುಕೂಲ್ಯವು ನಿಮಗೊದಗಲಿರುವುದರಿಂದ ಸದ್ಯದ ದಿನಗಳು ನಿಮಗೆ ಒಳ್ಳೆಯ ಫಲವೀಯಲಿವೆ. ಯಾವಕಾರ್ಯವೇ ಇರಲಿ ಅದು ನಿರ್ವಿಘ್ನದಿಂದ ಕೊನೆಹೊಂದುವದು. ಶತ್ರುಗಳೂ ಕೂಡ ನಿಮ್ಮ ಕಾರ್ಯ ಕುಶಲತೆಯನ್ನು ಕಂಡು ಮೂಗಿನ ಮೇಲೆ ಬೆರಳಿಡುವ ಪ್ರಸಂಗಬರಲಿದೆ ಇಷ್ಟೆಲ್ಲ ಇದ್ದರೂ ಗೃಹಛಿದ್ರ ದೆಸೆಯಿಂದಾಗಿ ಮನಸ್ಸಿಗೆ ಶಾಂತಿಯಿರದು. ಹಲವೊಮ್ಮೆ ವ್ಯರ್ಥ ಧನವ್ಯಯವಾದೀತು. ವಾರಾದಿಯ 5 ದಿನಗಳು ಇಷ್ಟಪ್ರದಗಳು.

ಕನ್ಯಾ—ಈವಾರವು ನಿಮ್ಮ ಭಾಗಕ್ಕೆ ಉತ್ತಮವಾಗಿಲ್ಲವು. ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟಗಳೇ ತಲೆದೋರುವವು. ಬಂಧುಮಿತ್ರರ ಸಹಾಯದಿಂದಾಗಿ ಹಲವಾರು ವಿಪತ್ತುಗಳಿಂದ ಪಾರಾಗುವಿರಿ. ಆದರೂ ಹಣದ ತಾಪತ್ರಯವು ನಿಮಗೆ ತಪ್ಪಲಾರದು. ಕಫದೋಷದಿಂದಾಗಿ ಆರೋಗ್ಯ ಕೆಡುವದು. ಶ್ರಮಪಟ್ಟು ದುಡಿದರೂ ಫಲವು ನಿರೀಕ್ಷಿಸಿದಂತೆ ಲಭಿಸದು. ಪ್ರಿಯಜನರ ವಿಯೋಗದಿಂದ ದುಃಖಭಾಗಿಗಳಾಗುವಿರಿ. ವಾರಾಂತ್ಯದ 4 ದಿನಗಳಲ್ಲಿ ಕೊಂಚನೆಮ್ಮದಿ ಲಾಭಗಳಿವೆ.

ತುಲಾ—ನಿಮ್ಮ ಪ್ರಯತ್ನವು ಸಫಲವಾದೀತು. ಖರ್ಚಿಗೆ ತಕ್ಕಷ್ಟು ಉತ್ಪತ್ತಿ ಇರೋಣದರಿಂದ ಹಣದ ಅಡಚಣೆಯುಂಟಾಗದು. ಉಷ್ಣಜ್ವರ ಹೊಟ್ಟೆನೋವು ಇತ್ಯಾದಿಗಳು ಅಗಾಗ ಕಾಣಿಸಿಕೊಳ್ಳಬಹುದು. ನೌಕರಿ ಜನರಿಗೆ ಮೇಲಧಿಕಾರಿಗಳಿಂದ ತೊಂದರೆಯುಂಟಾಗಲಿದೆ. ಶನಿಯ ಕಾಟದಿಂದಾಗಿ ಅನಿರೀಕ್ಷಿತ ವಿಪತ್ತುಗಳು ಪ್ರಾಪ್ತವಾಗುವವು. ಆದರೂ ವಾರಾಂತ್ಯದ 2 ದಿನಗಳಲ್ಲಿ ನಿಮ್ಮ ಮನೋರಥಗಳು ನಿರರ್ಗಲವಾಗಿ ನೆರವೇರುವವು. ಜನರ ಗೌರವಾದರಗಳನ್ನು ಪಡೆವಿರಿ.

ವೃಶ್ಚಿಕ—ವ್ಯರ್ಥ ಸಮಯವನ್ನು ಹಾಳುಮಾಡದಿರಿ. ನಿಮ್ಮ ಪರಿಶ್ರಮವು ನಿರೀಕ್ಷೆಗಿಂತ ಅಧಿಕವಾಗಿ ಫಲವನ್ನು ತಂದು ಕೊಡಲಿದೆ. ಆತ್ಮೀಯರು ವಿರೋಧಿಗಳಾದರೂ, ಶತ್ರುಗಳೇ ಮಿತ್ರರಾಗಿ ಪರಿವರ್ತಿಸುವರು. ಸಾಂಪತ್ತಿಕ ಭಾಗವು ಅತ್ಯುತ್ತಮವಿದೆ. ಮಹತ್ಕಾರ್ಯವು ಕೂಡ ನಿಮ್ಮ ಧೈರ್ಯ ಸಾಹಸಗಳ ಮುಂದೆ ತೃಣವಾಗಿ ಕಾಣಿಸುವದು. ಗೃಹಕೃತ್ಯದಲ್ಲಿ ಪೂರ್ಣ ಸುಖವನ್ನು ಪಡೆವಿರಿ. ವಾರಾದಿಯ 3 ದಿನಗಳು ಅತ್ಯುತ್ತಮವಿವೆ.

ಧನು—ನಿಮ್ಮ ದುರ್ದೈವವು ವಿಶೇಷವಾಗಿ ನಿಮ್ಮನ್ನು ಕಾಡಲಿದೆ. ಕಾರ್ಯಾರಂಭಕ್ಕೆ ಮುಂಚಿತವಾಗಿಯೇ ವಿಘ್ನಗಳುಪಸ್ಥಿತವಾಗುವುದರಿಂದ ಯಾವ ಕೆಲಸವನ್ನೂ ಆರಂಭಿಸದೆ ನಿರುದ್ಯೋಗಿಗಳಂತಾಗುವಿರಿ. ಜನರ ತಿರಸ್ಕಾರ ಅವಹೇಳನಗಳಿಗೆಗುರಿಯಾಗಿ ಸದಾ ಚಿಂತಾಮಗ್ನರಾದ ನಿಮಗೆ ಒಂದೆಡೆ ಸಂಸಾರದ ತಾಪತ್ರಯ ಇನ್ನೊಂದೆಡೆ ಹಣದ ಬಿಕ್ಕಟ್ಟು ಮತ್ತೊಂದೆಡೆ ಶರೀರಾಲಸ್ಯ ಈ ತೆರನಾದ ವಿಪತ್ಪರಂಪರೆಗಳು ಸ್ವಪ್ನದಲ್ಲೂ ಕೂಡಾ ಸುಖವನ್ನು ಕೊಡಲೊಲ್ಲವು. ವಾರಾದಿಯ 5 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ಮಕರ—ಸತ್ಕಾರ್ಯ ಸದಾಚಾರ ಸಂಪನ್ನರಾದ ಸಜ್ಜನ ವೃಂದಕ್ಕೀವಾರವು ಮಿಶ್ರಫಲದಾಯಿಯಾಗಿರುವುದು. ಖರ್ಚಿಗೆ ತಕ್ಕಷ್ಟು ದುಡಿಯುವಿರಿ. ಗೃಹತಾಪತ್ರಯಗಳು ಬಹುಮಟ್ಟಿಗೆ ಕಡಿಮೆಯಾಗುವವು. ಆದರೆ ದೇಹದಲ್ಲಿ ಸುಖವಿಂದು ಆಕಸ್ಮಿಕ ಅವಘಡಗಳೂ ಪ್ರಾಪ್ತವಾಗಬಹುದು. ಶತ್ರುಗಳು ಶಾಂತರಾಗುವರು. ಬಂಧುಮಿತ್ರರ ಸಹಕಾರವು ತೃಪ್ತಿಕರವಿರುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ವಿಜಯಲಾಭವಿದೆ. ವಾರಾಂತ್ಯದ 4 ದಿನಗಳಲ್ಲಿ ಲಾಭಸಂಭವಾದಿಗಳು ಲಭಿಸುವವು.

ಕುಂಭ—ನಿಮ್ಮ ಜನ್ಮಸ್ಥಪು ದ್ವಾದಶಗಳಲ್ಲಿ ಗುರು ಶನಿ ಕುಜರು ನಿಂತಿರುವುದರಿಂದ ಧನನಾಶ ಪರ್ಯಟನ ರೋಗಾದಿಯಾದ್ಯನಿಷ್ಟಗಳು ನಿಮಗೆ ಅನವರತವೂ ತಪ್ಪಿದ್ದಲ್ಲವು. ಪ್ರಕೃತ ನಿಮ್ಮ ಉದ್ಯೋಗದಲ್ಲಿ ಅಧಿಕವಾದ ಫಲವು ಲಭಿಸುವದು. ಸಮಾಜದಲ್ಲಿ ಸ್ಥಾನಮಾನಗಳೂ ಲಭಿಸುವವು. ಹಿಡಿದ ಕಾರ್ಯವು ನಿರಾತಂಕವಾಗಿ ಕೊನೆಹೊಂದುವದು. ಪಿತ್ತದೋಷದಿಂದಾಗಿ ಆರೋಗ್ಯ ಕೆಡಲಿದೆ. ಗೃಹಸುಖಕ್ಕಾವ ಕೊರತೆಯೂ ಇರಲಾರದು. ವಾರಾಂತ್ಯದ 2 ದಿನಗಳನುಕೂಲ.

ಮೀನ—ಈವಾರದಲ್ಲಿ ಹೆಚ್ಚಿನ ಕಾಲವನ್ನು ಪರ್ಯಟನದಲ್ಲಿ ಕಳೆವಿರಿ. ನಿಮ್ಮ ಶ್ರಮಕ್ಕೆ ತಕ್ಕುದಾದ ಧನ ಲಾಭವಿದೆ. ದುಡಿದ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಿ. ಮಿತ ಭಾಷಿಗಳಿಗೂ ಕೂಡ ಕೆಲವೊಮ್ಮೆ ವಾಕ್ಕಲಹವು ಪ್ರಾಪ್ತವಾದೀತು. ರಾಜಕೀಯ ಕ್ಷೇತ್ರದಲ್ಲಿ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಂತಿರುವದು. ನೌಕರಿ ಜನರಿಗೆ ಉದ್ಯೋಗದಲ್ಲಿ ಭಡತಿಯುಂಟಾದೀತು. ವಾರಾದಿಯ 3 ದಿನಗಳಲ್ಲಿ ವಿಜಯ ಲಾಭ ಗೃಹಸುಖವನ್ನು ಪಡೆವಿರಿ.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ,
ಉಡುಪಿ
ಇವರಿಗೆ ಬರೆಯಿರಿ.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2-0-0.
ವಿ. ಪಿ. ದ್ವಾರ 2-6-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5-0-0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ, ಭಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರಸ್ಸ್ ಆರ್ ಎಲ್ ಕಮಲಾಪುರ, ಶಿಮೊಗ್ಗ, ಹಾವೇರಿ, ಬ್ಯಾಡಗಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಕಪ್ಪಿ ಋತುಸ್ರಾವವಾಗುತ್ತದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು ಕಹಾಳಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618
LICENCE No. 31
Licensed to Post without Prepayment
ಸ್ಥಾಪನೆ 1921 ಸ್ಥಾಪನ
31ನೇ ವರ್ಷ
28-12-1950
Founder: Sri A. B. Shetty,
Minister for Agriculture & Veterinary

ನವಯುಗ

ವರ್ಷ ೩೦ ವಾರ ೧೭
NAVAYUGA
WEEKLY
POST BOX NO. 22
UDIPI, S. K.
Vol. 31
No. 17

ಸ್ವಾತಂತ್ರ್ಯ-ಸ್ವಾಭಿಮಾನ

ಸ್ವಾತಂತ್ರ್ಯ ಮತ್ತು ಸುಖ ಜತೆಗೂಡಿರುವ ಸಂದರ್ಭಗಳು ಅಪರೂಪ; ಸ್ವಾಭಿಮಾನ ಮತ್ತು ವಿಲಾಸೀ ಜೀವನ ಒಂದೆಡೆಯಲ್ಲಿ ಒಟ್ಟಿಗೆ ಕಾಣಿಸಿಕೊಳ್ಳುವುದು ಅಸಾಧ್ಯ. ಅದಿದ್ದಲ್ಲಿ ಇದಿಲ್ಲ—ಇದಿದ್ದಲ್ಲಿ ಅದಿಲ್ಲ.

ಸ್ವಾತಂತ್ರ್ಯವಿದ್ದಲ್ಲಿ ಶ್ರಮ, ಹೊಣೆಗಾರಿಕೆ ಇರಲೇ ಬೇಕು. ಸ್ವಾತಂತ್ರ್ಯ ಆದಿಭಾಗದಲ್ಲಂತೂ ಸಹಿಸಲಾರದಷ್ಟು ದುಡಿಮೆ, ಹೊರಲಾರದಷ್ಟು ಜವಾಬುದಾರಿಕೆ ಮೈಮೇಲೆ ಬರುವುದು ಸ್ವಾಭಾವಿಕ. ಅಂದ ಮೇಲೆ ಸ್ವಾತಂತ್ರ್ಯ ಮತ್ತು ಸುಖ ಒಟ್ಟೊಟ್ಟಿಗೆ ಒದಗಬೇಕೆಂದು ಬಯಸಿದರಾಗದು. ಒದಗೀತೆಂದು ನಿರೀಕ್ಷಿಸಿದರಾಗದು.

ಸ್ವಾಭಿಮಾನವಿದ್ದಲ್ಲಿ ಅದರ ಜೋಪಾಸನೆಗಾಗಿ ತನ್ನ ಸ್ಥಾನಮಾನಗಳಿಗೆ ಯಾವ ರೀತಿಯಲ್ಲೂ ಲೋಪ ತಟ್ಟದಂತೆ ನೋಡುವ ಜಾಗರೂಕತೆ ವಹಿಸಬೇಕಾಗುತ್ತದೆ. ಅಪಮಾನ, ಆತಂಕಗಳನ್ನು ಪ್ರತಿಭಟಿಸಬೇಕಾಗುತ್ತದೆ. ಇಂತಹ ಜೋಪಾಸನೆ ಮತ್ತು ಪ್ರತಿಭಟನೆಗೆ ವಿಚಾರೀ ಜೀವನದ ಅಗತ್ಯವಿದೆ; ವಿಲಾಸೀ ಜೀವನವು ಇದಕ್ಕೆ ಬದ್ಧ ವಿರೋಧ.

ಈ ರೀತಿ ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ರಕ್ಷಣೆಯೆಂಬುದು ಅತ್ಯಂತ ಕಷ್ಟದ ಮತ್ತು ಹೊಣೆಗಾರಿಕೆಯುದಾಗಿರುದಾಗಿರುವಾಗ ಇವುಗಳ ಗೊಡವೆಯಿಲ್ಲದವನ ಪಾಲಿಗೆ ಪರಾವಲಂಬನೆ ಮತ್ತು ವಿಲಾಸೀ ಜೀವನವು ಸುಖಕರವಾದುದು; ಸುಗಮವಾದುದು.

ಆದರೂ ಮಾನುಷ್ಯತ್ವವಿರುವವರೆಲ್ಲರೂ, ಪ್ರಯಾಸದ ಮತ್ತು ಸಂತೋಷದ ಈ ಎರಡು ವಿಭಾಗಗಳ ಪೈಕಿ ಮೊದಲನೆಯದನ್ನೇ ಆರಿಸಿಕೊಳ್ಳುವರೆಂಬುದು ನಿರ್ವಿವಾದ. ಒಂದನೆಯದು ಕಟುಕಷಾಯ; ಎರಡನೆಯದು ಸಿಹಿ ವಿಷ.

ಬ್ರಿಟಿಷರ ಆಳಿಕೆಯಿದ್ದಾಗ ಭಾರತವನುಭವಿಸಿರದ ಅಗಾಧ, ಅಪಾರ ದುಃಖ ನಷ್ಟಗಳು ಸ್ವಾತಂತ್ರ್ಯದನಂತರ ದೊರೆತವು. ಆದರೆ ಈಗಿನ ದುಃಖದ ಬದಲಿಗೆ ಆಗಿನ ಸುಖವೇ ಆಗಬಹುದಿತ್ತೆಂದು ವಿಚಾರಿಗಳಾರೂ ಬಯಸುವಂತಿಲ್ಲ.

ಲೋಕ ವಾತಾವರಣವು ಪೂರ್ಣ ಹಾಳಾಗಿ, ಇನ್ನೊಂದು ಮಹಾಯುದ್ಧದ ಭೀತಿಯಿದ್ದಿರುವ ಈ ಕಾಲದಲ್ಲಿ ಪ್ರಮುಖ ರಾಷ್ಟ್ರಗಳ ಹಾವಳಿಯಿದಿರು ಸಣ್ಣ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವವೆಂಬ ಭರವಸೆ ಸರ್ವಥಾ ಇಲ್ಲ. ಆದರೂ ನಾಳೆ ಅನಾಹುತವನ್ನನುಭವಿಸಿ ಕಳಕೊಳ್ಳಬೇಕಾಗಿರುವ ಸ್ವಾತಂತ್ರ್ಯವನ್ನು, ಇಂದೇ ತನಗಿಂತ ಬಲಶಾಲಿ ರಾಷ್ಟ್ರವೊಂದಕ್ಕೊಪ್ಪಿಸಿಕೊಟ್ಟು ಬಂದಿರುವ ಅಪಾಯವನ್ನು ತಪ್ಪಿಸಿಕೊಳ್ಳುವ ಇಚ್ಛೆಯು ಯಾವ ದುರ್ಬಲ ರಾಷ್ಟ್ರಕ್ಕೂ ಇಲ್ಲ. ಸ್ವಾತಂತ್ರ್ಯ ಮತ್ತೂ ಸ್ವಾಭಿಮಾನ ಕಳಕೊಳ್ಳುವದಕ್ಕಿಂತ ದೊಡ್ಡದಾದ ಅನಾಹುತವೇ ಬೇರಿಲ್ಲವೆಂಬುದರಿಂದ ಅವುಗಳ ರಕ್ಷಣೆಗಾಗಿ ಪ್ರಾಣಾವಧಿ ಹೋರಾಡುವುದು ರಾಷ್ಟ್ರಧರ್ಮವಾಗಿದೆ.

ಸ್ವಾತಂತ್ರ್ಯ ಮತ್ತು ಸ್ವಾಭಿಮಾನ ಸ್ಫೂರ್ತಿಯೊಂದಲ್ಲವಾದರೆ ಮಹಾತ್ಮಾ ಗಾಂಧಿಯವರು ಬ್ಯಾರಿಸ್ಟರ್ ಮರಣ ಹೊಂದುತ್ತಿದ್ದರು; ವಲ್ಲಭಭಾಯಿಯವರು ವಕೀಲರಾಗಿಯೇ ಸಾಯುತ್ತಿದ್ದರು. ನೇತಾಜಿ, ಭಗತ್‌ಸಿಂಗ್, ಮತ್ತಿತರ ಎಷ್ಟೋ ಮಂದಿ ಜೀರೋನೋ ಆಗಿ ಮುಗಿಯುತ್ತಿದ್ದರು.

ಎಂತಹ ಆರ್ಥಿಕ, ಸಾಮಾಜಿಕ, ಮಾನಸಿಕ ಸ್ಥಿತಿಯಲ್ಲೇ ಇರಲಿ—ಬೇರಾವ ಮಟ್ಟದಲ್ಲಿ ಎಷ್ಟೇ ಕುಸಿದಿರಲಿ—ಮನುಷ್ಯರಾದವರು ಒಂದಲ್ಲೊಂದು ರೀತಿಯಿಂದ ತಂತಮ್ಮ ಸ್ಥಿತಿ, ಮತಿ, ಗತಿಗನುಸಾರವಾಗಿ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಕ್ಕಾಗಿ ಒದ್ದಾಡುತ್ತಿರುವುದನ್ನು ಕಾಣಬಹುದು. ಕುಳಿತುಣ್ಣುವ ಸುಖವಿರುವ ಪಂಜರದಿಂದ ತಪ್ಪಿಸಿಕೊಂಡು ತಿರುಗಾಡಿ ಹೊಟ್ಟೆ ತುಂಬಿಸುವ ಪ್ರಯಾಸವನ್ನು ಅನುಭವಿಸಲು ಮೃಗ, ಪಕ್ಷಿಗಳು ನಡೆಸುವ ಒದ್ದಾಟವನ್ನು ನೋಡಬಹುದು.

ಯಾವ ವರ್ಗದ ಜೀವನವನ್ನೇ ನೋಡಿದರೂ ಅದು ಮುಖ್ಯತಃ ಸ್ವಾತಂತ್ರ್ಯ ಮತ್ತು ಸ್ವಾಭಿಮಾನವನ್ನೇ ಗಣಿಸುತ್ತದೆ. ಕೇವಲ ದುರ್ಬಲರಿಗೆ ಬಾಳುವೆಗಾಗಿ ಇವುಗಳನ್ನು ಒತ್ತೆಯಿಡಬೇಕಾಗಿ ಬರುವುದರಿಂದಲೇ, ಅಂಥವರು ಅಷ್ಟರ ಮಟ್ಟಿಗೆ ಮಾನುಷತ್ವ ಕೂಡ ಕಳಕೊಂಡಿರುತ್ತಾರೆ.

ಹಿರಿಯ, ಕಿರಿಯ, ಬಡವ, ಬಲ್ಲಿದ ಮನುಷ್ಯನನ್ನಿಸುತ್ತಿದ ಈ ಮಾನವ ಪಕ್ಷದ ಚಿತ್ತ ಕಡಿಸು, ಮಾತಿ, ಸ್ಥಿತಿಗಳನ್ನು ಅವಲಂಬಿಸಿಯೇ. ಅದರಿಂದ ಮಾನುಷ್ಯದ ಮೂಲ ಮುದ್ರೆಗಳಾದ ಸ್ವಾತಂತ್ರ್ಯ ಮತ್ತು ಸ್ವಾಭಿಮಾನಗಳನ್ನು ಬೆಳೆಸಿಕೊಳ್ಳುವ ಮೂಲಕವೇ ಮನುಷ್ಯ ಪ್ರಗತಿಹೊಂದಬೇಕು.

ಈ ಸ್ವಾತಂತ್ರ್ಯ—ಸ್ವಾಭಿಮಾನಗಳು ಮಿತಿಮೀರಿ, ವಿಕಾರವಾಗಿ ಬೆಳೆದೇ ಆಕ್ರಮಣ— ದುರಭಿಮಾನಗಳೆನ್ನಿಸುತ್ತವೆ. ಲೋಕಮಹಾಯುದ್ಧಗಳಿಂದಾರಂಭಿಸಿ, ಜಾಗತಿಕ ಕಲಹ. ಮೇಲಾಟಗಳ ವರೆಗಿನ ಎಲ್ಲಾ ದೊಡ್ಡ ಸಣ್ಣ ಘರ್ಷಣೆಗಳಿಗೂ ಆಕ್ರಮಣ, ದುರಭಿಮಾನಗಳೇ ಕಾರಣ.

ಇಂತಹ ಸ್ವಾತಂತ್ರ್ಯಾಭಿಮಾನಗಳು ಒಂದು ಕಡೆ ಬಾಳುವೆಗಾಗಿ ಪರಾವಲಂಬನೆ ಗುವಷ್ಟು ಕುಂದಾಗಿ ಕರೆವಾಗ, ಮತ್ತೊಂದು ಕಡೆ ಪರಾಕ್ರಮ ನಡೆಸುವಷ್ಟು ಬೆಳೆಯುವುದೇ ಹೆಚ್ಚು. ಕಡಿಮೆ ಪ್ರಮಾಣದಲ್ಲಿ ಚಿಕ್ಕ ದೊಡ್ಡ ಕಲಹಗಳಿಗೆ ಹೇತು.

ಮಾನುಷ್ಯದ ಮೂಲ ಸ್ವಾತಂತ್ರ್ಯ ಸ್ವಾಭಿಮಾನದಲ್ಲೇ; ಸ್ವಾತಂತ್ರ್ಯಾಭಿಮಾನಗಳ ರಕ್ಷಣೆಯಾಗುವುದು ದುಃಖ, ಕಷ್ಟ ಸಹನೆಯ ಮೂಲಕವೆ; ಮನುಷ್ಯನಾಗಬೇಕು ಒದ್ದಾಡಿಯೇ ಎಂಬುದು ಇದರ ಒಳ ಮಾತು. ಮನುಷ್ಯನು ಕರ್ಮಜೀವಿ.

ಅದ್ದರಿಂದಲೇ 'ನಿಷ್ಕಾಮ ಕರ್ಮ', ಕಾರ್ಯತತ್ಪರತೆಯು ಮಾನವ ಧರ್ಮವಾಗಿದೆ. ವಿಮುತ್ತಗಳು, ಇಳಿತಭರಗಳ ಈ ಪ್ರಪಂಚದಲ್ಲಿ ಕರ್ಮಜೀವಿಯಾದ ಮನುಷ್ಯನು ಕರ್ಮಾನುಸಾರ ಬರುವ ಎಲ್ಲವನ್ನೂ ಸಹಜವೆಂದು ಬಗೆಯಬೇಕು ಜೀವಧರ್ಮ ಹೊಣೆಯೊಂದಿಗೆ. ಅವನನ್ನು ಸಬೇಕು, ಅಷ್ಟೆ.

ಪ್ರಕಟಣೆ

East & West
INSURANCE CO. LTD.
Bombay.

ಈಸ್ಟ್ ಎಂಡ್ ವೆಸ್ಟ್
ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ
ಸ್ಥಾಪನೆ: 1913
ಪುರಾತನ ಮತ್ತು ಸುಧಾರಿತ ಕಂಪೆನಿಗಳಲ್ಲೊಂದು.

ಇವರು ತಮ್ಮ ಮಂಗಳೂರು ರಾಜ್ಯವನ್ನು ಮತ್ತು ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಮತ್ತು ಇಡೀ ಮೈಸೂರು ಸ್ಟೇಟಿನ ಚೀಫ್ ಏಜಂಟರುಗಳಾಗಿ
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಪೋಸ್ಟು ಶಿರ್ವ, ದ. ಕ.
ಇವರನ್ನು ನೇಮಿಸಿರುವ ಸಂಗ್ತಿ ತಿಳಿಸುವರೆ ಸಂತೋಷಪಡುತ್ತಾರೆ.

ಪೋಲಿಸಿ ಹೋಲ್ಡರರು, ವಿಮಾ ಇಳಿಸುವವರು, ಏಜೆಂಟ್ ಮತ್ತು ಸ್ಪೆಶಲ್ ಏಜಂಟರಾಗಲಿಚ್ಛಿಸುವವರು, ಮೇಲಿನ ಚೀಫ್ ಏಜಂಟರೊಡನೆಯಾ ಅವರ ಪಡುಬಿದ್ರಿ ಶಾಖೆಯೊಡನೆ ವ್ಯವಹಾರ ನಡೆಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಕಳೆದು ಹೋದ 1950—

1950ನೇ ಇಸವಿ ಕಳೆದುಹೋಗುತ್ತಿದೆ; ಇನ್ನು ಮೂರೇ ದಿನ—ಆ ಮೇಲೆ 1951ನೇ ಇಸವಿ. ಪ್ರಪಂಚವು ಮತ್ತೊಮ್ಮೆ ಹೊಸವರುಷಕ್ಕೆ ಕಾಲಿಡುತ್ತಿದೆ; ಹೊಸ ದಶಮಾನವನ್ನೇ ಪ್ರವೇಶಿಸುತ್ತಿದೆ.

ಲೋಕದ ಶಾಂತಿದೂತ ಮಹಾತ್ಮಾ ಕ್ರಿಸ್ತನ ಶಕದಲ್ಲಿ 1950ರೊಂದಿಗೆ 39 ಸುವರ್ಣೋತ್ಸವ ಸಂಧಿಗಳು ಕಳೆದು ಹೋದುವು. 39 ಅರ್ಧ ಶತಮಾನಗಳು ಉರುಳಿ ಹೋದುವು. ಜಗತ್ತು ಒಂದು ಪ್ರಾಮುಖ್ಯ ಸರಹದ್ದನ್ನೇ ದಾಟುತ್ತಿದೆ; ಹೊಸಕ್ಷೇತ್ರವನ್ನು ಪ್ರವೇಶಿಸುತ್ತಿದೆ.

ಸಾಗಿ ಬಂದ ಸುದೀರ್ಘ ಪಥದಲ್ಲಿ ಹಿಂದೆ ನೋಡುವಾಗ, ಮಾನವ ಜನಾಂಗವು ಎಂತಹ ಪ್ರಗತಿ ಬದಲಾವಣೆಗೊಳ್ಳುತ್ತಾ ಬಂತೆಂಬುದನ್ನು ಆ ದೃಶ್ಯ ತೋರಿಸುತ್ತಿದೆ. ಅದನ್ನಿಲ್ಲಿ ವರ್ಣಿಸುವುದು ಅಸಾಧ್ಯ. ಹಲವು ವಿಧದ ಆಡಳಿತೆಗಳು, ಧರ್ಮ, ಪಂಥಗಳು, ಸಂಪ್ರದಾಯ ನಾಗರಿಕತೆಗಳು ಈ ಸುಧೀರ್ಘ ಚಲಚಿತ್ರದ ಒಂದೊಂದೇ ದೃಶ್ಯಗಳಂತೆ ತೋರಿ ಅಡಗಿದುವು. ಆದರ ಒಂದು 'ರೀಲು' ಈ.ಗ ತಾನೇ ಮುಗಿಯುತ್ತಿದೆ.

ಲೋಕದಲ್ಲಿ ಲೋಕವೊಂದನ್ನು ಬಿಟ್ಟು ಮತ್ತಾವುದೂ ಶಾಶ್ವತವಲ್ಲ, ಎಂಬ ಅನುಭವವು ಈ ಹಿನ್ನೋಟದಿಂದ ಸ್ವತಃ ಆಗುತ್ತಿದೆ. ಆಯಾಯ ಕಾಲದಲ್ಲಿ ಪ್ರಾಮುಖ್ಯತೆ ಗಳಿಸುವವುಗಳಿರಬಹುದು; ಆದರೆ ಕಾಲಮತ್ತು ಕ್ಷೇತ್ರ, ಎರಡರ ವ್ಯಾಪನೆಯ ಮಟ್ಟಿಗೂ ಲೋಕ ಪ್ರಾಮುಖ್ಯತೆ ಗಳಿಸಿರುವದಂತಹದಾವುದೂ ಇಲ್ಲ.

'ಬದಲಾವಣೆ' ಯೆಂಬುವುದು ಈ ಪ್ರಂಚದ ಅಂತಸ್ಸತ್ವವಾದ ಬಾಳುವೆಯೇ ಆಗಿದೆ ಹೊರತು ಬೇರಲ್ಲವೆಂಬುದಕ್ಕೆ ಎಲ್ಲವೂ ನಿದರ್ಶನಗಳಾಗಿಯೇ ಇವೆ. ಕಾಲೋಚಿತ ಮಾರ್ಪಾಟಿದ್ದೇ ಇದೆ, ಎಂಬುದೇ ಸರ್ವತ್ರ ಕಂಡು ಬರುವ ಸಂಗತಿ.

ಪ್ರಗತಿಗಾಮಿಯಿರಬಹುದ ; ಅವನತಿಗಾಮಿಯಿರಬಹುದು- ಎಂತಹದೇ ಇದ್ದರೂ ಬದಲಾವಣೆಯೆಂಬುದಿರುವಂತಹದೇ. ಲೋಕದಲ್ಲಿದ್ದ ಮೇಲೆ ಬದಲಾಗುತ್ತಲೇ ಇರಬೇಕು; ಹಾಗೆ ಮಾರ್ಪಾಟ ಹೊಂದಲೊಪ್ಪದಂತಹದು ಕಾಲಗತಿಯೊಂದಿಗೆ ಮುಂದೆ ಸಾಗಲೊಲ್ಲದೆ ಹಿಂದೆ ಬೀಳುವಂತಹದೇ.

ಈ ಬದಲಾವಣೆಗಳಾದರೋ ಕ್ಷಿಪ್ರಗತಿಯಿಂದ ಸಾಗಿವೆ. ಎಲ್ಲಾ ವಿಧಾನಗಳು ಮತ್ತು ಭಾವನೆಗಳು ಕೂಡಾ ತೀವ್ರಗಾಮಿಗಳಾಗಿವೆ. ದಂತ, ನಖಗಳಿಂದ ಪರಚಿಕೊಳ್ಳುವದರಲ್ಲೇ ಇದ್ದ ಹೋರಾಟ ವಿಧಾನವು ಕ್ರಮಶಃ ಸುಧಾರಿಸುತ್ತಾ ಬಂದು ಆಟಂ ಬೋಂಬಿನೆತ್ತರ ವರೆಗೆ ಬೆಳೆದು ಬಂದಿದೆ. ನೆರೆಕರೆಯವರೊಳಗೆ ಮಾತ್ರವಿದ್ದ ಸಂಬಂಧವು ಲೋಕದ ಆ ಮೂಲೆ ಮತ್ತೀ ಮೂಲೆಗಳ ನಡುವೆ ವ್ಯಾಪಿಸಿಕೊಳ್ಳುವಷ್ಟು ಹೆಚ್ಚಿದೆ. ಮಾನವನ ಗುಣನಡತೆ, ಉಡುಗೆ ತೊಡುಗೆಗಳಲ್ಲೂ ಅಂದಿನಿಂದ ಇಂದಿಗೆ ಇಷ್ಟೇ ವ್ಯತ್ಯಾಸಗಳಾಗಿವೆ.

1950 —ಪ್ರಾಮುಖ್ಯಾವಧಿ—ಪ್ರಪಂಚ ನಾಟಕದ ಒಂದು ಅಂಕ- ಮುಗಿಯುತ್ತಿರುವ ಈ ಸಂದರ್ಭದಲ್ಲಿ ಲೋಕವೆಷ್ಟು ಬದಲಾಯಿಸಿಹೋಗಿದೆ, ಎಂಬುದನ್ನು ನೆನಸುವಾಗ ದಂಗು ಬಡಿಯಲೇ ಬೇಕು; ಇನ್ನೇನೆಲ್ಲಾ ಸಂಭವಿಸಲಿರುವುದೋ ಎಂಬ ನಿರೀಕ್ಷೆಯಿಂದ ಕೊಡಹಿಕೊಂಡು ತಯಾರಾಗಿ ನಿಲ್ಲಲೇ ಬೇಕು.

ಇಸವಿ ಪ್ರಧಾನವೆಂಬುದಿದೆಯೇನೋ, ಎಂದು ನೆನೆಸಲಾಗುವಷ್ಟು ಮಹತ್ವವನ್ನು 1950ನೇ ಇಸವಿ ಸಾಧಿಸಿದ್ದಿತು. ಪ್ರಪಂಚದ ಮತ್ತು ಭಾರತದ ಪಾಲಿಗೆ ವಿಶೇಷ ಘಟನೆಗಳನ್ನು ತಂದೊಡ್ಡಿದ 1950 ಮಹತ್ವಿಕೆಯ ಮಟ್ಟಿಗೆ ಹಿಂದಿನ ಬೇರಾವ ಇಸವಿಯನ್ನಾದರೂ ಸ್ಪರ್ಧಿಸಿ ಗೆಲ್ಲುವಂತಹದೇ ಇದ್ದಿತು.

ಇಡೀ ಪ್ರಪಂಚದ ದೃಷ್ಟಿಯಿಂದ ಈಗ ಅತ್ಯಗತ್ಯವಾಗಿರುವುದು ಶಾಂತಿ—ಯುದ್ಧ ತ್ಯಾಗ. ಆದರೆ 1950ರಲ್ಲಿ ಯುದ್ಧ ಭೀತಿ ವ್ಯಾಪಿಸಿದ್ದಂತೆ ಹಿಂದೆಂದೂ ಹರಡಿದ್ದಿಲ್ಲ. ಜತೆಯಲ್ಲೇ 1950ರಲ್ಲಿ ಶಾಂತಿ ಉಪದೇಶ ಕೇಳ ಬಂದಷ್ಟು ಆ ಮೊದಲೆಂದೂ ಕೇಳಿಬಂದುದಿಲ್ಲ. ಅರ್ಥಾತ್ ಮಾತು—ಕೃತಿಗಳೊಳಗೆ, ಉಪದೇಶ—ಆಚರಣೆಗಳ ನಡುವೆ ಅಂತರವನ್ನು ತಂದೊಡ್ಡಿದ, ಪರಸ್ಪರ ಹೋರಾಟವನ್ನೇ ನಿರ್ಮಿಸಿದ್ದ ಇಸವಿ 1950.

ಲೋಕಶಾಂತಿ ಸ್ಥಾಪನೆಗಾಗಿ ಇರುವ ಸಂಯುಕ್ತ ರಾಷ್ಟ್ರ ಸಂಘದಲ್ಲಿ, ಜಗತ್ತಿನ ವಿವಿಧ ರಂಗಗಳ ವಿವಿಧ ರೂಪಿ ವಿವಾದಗಳು ಕೂಲಂಕುಶ ಮತ್ತು ತೀವ್ರ ಚರ್ಚೆಗೊಳಗಾಗಿದ್ದುದು ಈ ವರುಷದಲ್ಲೇ; ಅಂತೆಯೇ ಇನ್ನೊಂದು ಲೋಕಯುದ್ಧದ ಪೀಠಿಕೆಯಂತಿರುವ ಕೊರಿಯ ಯುದ್ಧ ಸ್ಫೋಟಗೊಂಡುದೂ ಇದೇ ಇಸವಿಯಲ್ಲಿ.

ಒಂದು ಕಡೆಯಿಂದ ಅಮೇರಿಕದ- ಮತ್ತೊಂದು ಕಡೆಯಿಂದ ರಶ್ಯದ ವರ್ಚಸ್ಸು ಪ್ರಪಂಚದ ಎಲ್ಲಾ ರಾಷ್ಟ್ರಗಳ ಮೇಲೂ ವ್ಯಾಪಿಸುತ್ತಾ ಬಂದು, ಮಾದರಿಯ ಸಾಮ್ರಾಜ್ಯ ಹಿತಗಳಿಗೆ ಜಗತ್ತು ಬಲಿಬಿದ್ದುದು ಹೆಚ್ಚಾಗಿ 1950ರಲ್ಲೇ.

ಈರೀತಿ ಜಾಗತಿಕ ಅಪಾಯಗಳು ಸ್ಪಷ್ಟವಾಗಿ ರೂಪುಗೊಂಡುದು ಈಗ ತಾನೇ ಕಳೆದು ಹೋಗುತ್ತಿರುವ ಈ ವರುಷದಲ್ಲಿ. ಅಂತೆಯೇ ಅನಿರೀಕ್ಷಿತವಾಗಿ ಆಕಸ್ಮಿಕವಾಗಿ ವಿದ್ಯಮಾನಗಳನ್ನು ಅಡಿಮೇಲು ಗೊಳಿಸಿ ಆಶ್ಚರ್ಯ ನಿರ್ಮಿಸಿದ ಹೆಗ್ಗಳಿಕೆಯೂ 1950ಕ್ಕೇನೇ ಸಲ್ಲುತ್ತಿದೆ.

ಲೋಕಯುದ್ಧ ಕಾಲದ ವರುಷಗಳನ್ನು ಬಿಟ್ಟರೆ, ಶಾಂತಿ ಕಾಲದ ಇಸವಿಗಳ ಪೈಕಿ 1950ನೇ ವರುಷವು ಸಾಧಿಸಿದಂತಹ ಆಶ್ಚರ್ಯಾದ್ಭುತಗಳನ್ನು ಬೇರಾವುದೂ ನಿರ್ಮಿಸಿಲ್ಲವೆನ್ನಬಹುದು. ಕೊರಿಯದಲ್ಲಿ ಕಮ್ಯೂನಿಸ್ಟ್ ಧಾಳಿ ಮತ್ತು ಪ್ರಥಮ ವಿಜಯವು ಅನಿರೀಕ್ಷಿತವಾಗಿದ್ದಂತೆಯೇ; ಸ. ರಾ. ಸೇನೆಗಳ ಪ್ರತಿಧಾಳಿ ಮತ್ತು ಪ್ರತಿ ವಿಜಯವೂ ಅಷ್ಟೇ ಆಶ್ಚರ್ಯಕರವಿದ್ದಿತು. "ಈ ಕ್ರಿಸ್‌ಮಸ್ ರಜೆಗಾಗಿ ನಿಮ್ಮನ್ನು ವಿಜಯದುಂದುಭಿಯೊ ದಿಗೆ ಮನೆಗೆ ಕಳುಹಿಕೊಡುವೆ"ನೆಂದು ತ ನ್ನ ಸೋಲ್ಜರಿಗೆ ಮಾತು ಕೊಟ್ಟಿದ್ದ ಜ ನರಲ್ ಮೆಕರ್ಥರರು ಸ್ವಪ್ನದಲ್ಲೂ ಊ ಹಿಸಿರದಂತಹ ಪ್ರಚಂಡ ಪರಾಭವವನ್ನು ಒಮ್ಮೆಗೇ ತಂದೊಡ್ಡಿದ ಅದ್ಭುತವೂ ಈ ವ ರುಷದ್ದೇ. "ಆಟಂ ಬೋಂಬು ಬೀಳುವ ದು ಅಸಂಭವವಲ್ಲ" ಎಂಬಂತಹ ದೊಡ್ಡ ಭೀತಿ ಮತ್ತು ಕೆಲವು ಆಕಸ್ಮಿಕಗಳು ಹುಟ್ಟಿ ಕಾಣಿಸಿದ ವರುಷವಿದು.

ಭಾರತಕ್ಕಂತೂ 1950ನೇ ಇಸವಿಯ ಲ್ಲಾದ ಆಕಸ್ಮಿಕಗಳು ಅತಿಹೆಚ್ಚಿನವು-ಹಿಂ ದಿನ ವರುಷಗಳಲ್ಲಾದ ರಾಷ್ಟ್ರ ವಿಭಜ ಜಾತೀಯ ಗೊಂದಲಗಳಂತಹ ಆಪತ್ತು ಳು ದೊಡ್ಡವಿದ್ದರೂ ಸಂಪೂರ್ಣ ಅನಿ ಕ್ಷಿತವಿರಲಿಲ್ಲ. ಆದರೆ 1950ರಲ್ಲಾದ ಸ್ಸಾಮ್ ಭೂಕಂಪ, ಸರ್ದಾರ್ ವಲ್ಲಭ ಯಿಗಳ ನಿಧನದಂತಹ ಗಂಡಾಂತರಗ ಪೂರ್ವಸೂಚನೆ ಕೊಡದೆ ಮಿಂಚಿನಂತೆರ ದ್ದುವು.

ಲೋಕಸಾಹಿತಿ ಬರ್ನಾರ್ಡ್‌ಶಾರನ್ನು ವಿಭೂತಿಪುರುಷ ಅರವಿಂದ ಘೋಷರನ್ನು ಭಾರತದ ಬಿಸ್ಮಾರ್ಕ್ ಸರ್ದಾರ್ ಪಟೇ ರನ್ನು ಮುಕ್ತಾಯಗೊಳಿಸಿದ ವರುಷ 195

ವಿನಾಶೋಪಕರಣಗಳ ತಯಾರಿ ಲ್ಲಿ, ವ್ಯಾಪಾರ ವಹಿವಾಟು ಸಂಬಂಧ ಲ್ಲಿ, ಟಿಬೇಟ್, ನೇಪಾಳಗಳದಂತಹ ರಾ ಗಳ ಅದೃಷ್ಟ ಬದಲಾವಣೆಯಲ್ಲಿ, 19 ರ ಕಾರುಬಾರು ಹೆಚ್ಚಿನದೇ.

ಭಾರತದ ಪಾಲಿಗೆ 1950ರೊಂದಿಗೆ ಪಾಯದ ಅವಧಿಯೂ ಮುಗಿಯಿತೆಂ ನಂಬಲು ಅವಕಾಶವಿದೆ. 1947ನೇ ಗೋಸ್ತು 15ರಲ್ಲಿ ಬಂದ ಸ್ವರಾಜ್ಯದೊ ದಿಗೇನೇ ಒದಗಿದ್ದು, ಈವರೆಗೂ ವಿವಿ ಕಾರಗಳಿಂದ ಕಾಣಿಸುತ್ತಿದ್ದ ಶನಿಪಿ ಡೆಯು ಈ ವರುಷದೊಂದಿಗೆ ಕಳೆದು ಹೋ ಗುತ್ತಿರಬೇಕು.

ಸ್ವಾತಂತ್ರ್ಯ ಜಾಗ್ರತಿಯನ್ನು ಹುಟ್ಟಿ ರಾಷ್ಟ್ರಪಿತ ಗಾಂಧಿಜೀ, ಅದರೊಂದಿಗೇ ಸ್ವಾತಂತ್ರ್ಯ ಸಾಧನೆಗಾಗಿ ಜಾತೀಯ ಕ್ಯತೆ ಮತ್ತು ಸರ್ವಸಮಾನತೆಯನ್ನ ಬೋಧಿಸಿದ್ದರು; ಆದರೆ ತನ್ನ ಬೋ ಯಂತೆ ಐಕ್ಯತೆಯು ಅನ್ಯ ವಿಧಾನಗಳ ಸ್ಥಾಪಿಸಲ್ಪಡದಿದ್ದುದನ್ನು ಗಮನಿಸಿ, ಪ್ರಾಣವನ್ನೇ ಬಲಿಯಾಗಿ ಕೊಡುವ ಲಕವೇ ಅದನ್ನು ಸಾಧಿಸಿದರು; ಅವೆ ವಿವಿಧ ಗಂಡಾತರಗಳಿದಿರಲ್ಲಿ ರಾಷ್ಟ್ರ ತಂತ್ರ್ಯವನ್ನು ರಕ್ಷಿಸುವ ಹೊಣೆ ಹೊ ಸರ್ದಾರ್ ಪಟೇಲರು, ತಾವಿದ್ದು ನಿ ಸಿದನ್ನೂ ಹೊಸ ಹೊಸ ಆಪತ್ತು ಹುಟ್ಟಿಕೊಳ್ಳುತ್ತಿರುವುದನ್ನು ಲಕ್ಷಿ ಅವುಗಳು ಸಮೂಲ ನಾಶವಾಗಲೆಂ

ಪ್ರಧಾನ ಕಾರ್ಯಾಲಯ: ಉಡುಪಿ.. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

Vijaya Bank, Ltd.,

Vijaya Cash Certificates

"Spend less and Save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%.

Rules on application at any of our following Offices.

Head Office:—**Kadri Road, Mangalore.**

Branches:- City-Manglaore, Kaup, Coondapur, Byndoor Karkala, Brahmavar, Kasaragod, Puttur, Bombay, Udipi Kanhangad &Mercara.

B. Manjaya Hegde,
Advocate & President, District Board S. Kanara.
CHAIRMAN.

ಕಾಲಿಡುತ್ತಿರುವ 1951

ಕ್ಕಾಗಿಯೇ ತಾನು ಕೊಟ್ಟು ಹೋದರೇನೋ, ಎಂದು ಊಹಿಸಬಾರದೇಕೆ? ರಾಷ್ಟ್ರಪಿತನ ಮರಣವು ರಾಷ್ಟ್ರಶುದ್ಧೀಕರಣವನ್ನು ಸಾಧಿಸಿದಂತೆಯೇ ರಾಷ್ಟ್ರರಕ್ಷಕನ ಸಾವು ರಾಷ್ಟ್ರಪಾಲನೆಯನ್ನು ಸರಿಗೊಳಿಸೀತೆಂದು ನಿರೀಕ್ಷಿಸಬಾರದ?

ಹಾಗಾದಲ್ಲಿ ಭಾರತದ ಪಾಲಿನ ಆಪತ್ತುಗಳ ಅವಧಿಯು 1950ರೊಂದಿಗೆ ಮುಕ್ತಾಯಗೊಂಡಿತೆಂದೇ ನೆನೆಸಬಹುದು. 1951ರೊಂದಿಗೆ ಸುಖ, ಸುರಕ್ಷಿತತೆ, ನೆಮ್ಮದಿಯ ಅಧ್ಯಾಯಾರಂಭವೆಂದೂ ಆಶಿಸಬಹುದು.

ಭಾರತದ ಪಾಲಿನ ಸರ್ವ ಪ್ರಥಮ ಪ್ರಶ್ನೆಯಾಗಿರುವ ಆಹಾರ ಸಮಸ್ಯೆ, ಲೋಕದ ಪ್ರಬಲ ರಾಷ್ಟ್ರಗಳ ಪಾಲಿಗೆ ಪ್ರಾಮುಖ್ಯದ್ದಿರುವ ಆಕ್ರಮಣ ಸಮಸ್ಯೆ, ಇವೆಲ್ಲವೂ ಇನ್ನು ಬಗೆಹರಿಯಲಾರದ ಸರಹದ್ದು 1950 ಎಂದೇ ಭಾವಿಸಿ 1951 ರಿಂದ ಎಲ್ಲವೂ ಸುಖ ಮತ್ತು ಪ್ರಗತಿಯತ್ತ ಮುಖಮಾಡುವವೆಂದು ಭಾವಿಸಬಹುದ?

ಒಂದು ಅಂಕವನ್ನೇ ಮುಗಿಸಿಕೊಂಡು ಹೊಸ ಅಂಕಕ್ಕೆ ಕಾಲಿಡುವಾಗ, ಈ ನವಾಧ್ಯಾಯದ ಮೊದಲ ವರುಷವು ಏನೇನನ್ನು ತರಬಹುದು–ಯಾವಾವುದನ್ನು ತರಬೇಕು–ಎಂಬ ನಿರೀಕ್ಷೆ ಮತ್ತು ಆಸೆ ಮೊಳೆಯುವುದು ಸ್ವಾಭಾವಿಕ. ಹೇಗಾಗಬಹುದು?

ಬೇರಾವುದು ಹೇಗಾದರೂ ಲೋಕದಾಪ್ಪಾಗ್ನಿ ಹಬ್ಬಿಸುವ ಅಗ್ನಿಕುಂಡದಂತಿರುವ ಕೊರಿಯ ಯುದ್ಧವು 1951ರ ಆದಿಭಾಗದಲ್ಲಿ ಯಾವ ರೀತಿಯಿಂದಾದರೂ ಮುಕ್ತಾಯಗೊಳ್ಳಲು ಬದ್ಧವಿದೆ. ಕಾಶ್ಮೀರ ಯುದ್ಧದಂತೆ ಅವಮಾನಿತಗೊಳಿಸಲ್ಪಡುವ ಅದೃಷ್ಟವು ಕೊರಿಯದ ಯುದ್ಧಕ್ಕಿಲ್ಲವಾದ್ದರಿಂದ ಅದು ಒಂದೋ ಹಾಗೆ, ಇಲ್ಲವೇ ಹೀಗೆ 1951ರಲ್ಲೇ ಮುಗಿಯಬೇಕು. ಲೋಕಶಾಂತಿ ಅಥವಾ ಲೋಕಸಮರದ ಸಂಭವವು ಕೊರಿಯ ಸಮರ ಮುಕ್ತಾಯದ ರೀತಿನೀತಿಯನ್ನೇ ಅವಲಂಬಿಸಿದೆ. ಆದ್ದರಿಂದ ತೃತೀಯ ಜಾಗತಿಕ ಯುದ್ಧವು ಶೀಘ್ರದಲ್ಲಿದೆಯೋ ಇಲ್ಲವೋ ಎಂಬುದನ್ನು ನಿಶ್ಚಯಾತ್ಮಕವಾಗಿ ತಿಳಿಸುವ ವರುಷ 1951. ಒಂದೊಮ್ಮೆಗೆ ಈ ವರುಷದಲ್ಲೇ ಲೋಕ ಮಹಾಯುದ್ಧ ಸ್ಫೋಟಗೊಂಡರೂ ಆಶ್ಚರ್ಯಕ್ಕೆಡೆಯಿಲ್ಲ.

ಪ್ರಚಲಿತ ಸ್ಥಿತಿಗತಿಗಳ ಮೇಲಿಂದ ಕೊರಿಯ ಸಂಗ್ರಾಮವು ಕಮ್ಯುನಿಸ್ಟ್ ವಿಜಯದೊಂದಿಗೆ ಮಂಗಳವಾಗುವದೆಂಬಂತೆ ತೋರುತ್ತಿದೆ. ಆದರೆ ಕೆಲವು ದಿನಗಳ ಮೊದಲು ಸಂ. ರಾ. ಸೇನೆಗಳ ವಿಜಯಾವಧಿ ಸಮೀಪಿಸಿತೆಂಬ ಭರವಸೆ ಮೂಡಿದ್ದಾಗಲೇ, ಪರಿಸ್ಥಿತಿ ಒಮ್ಮೆಗೇ ಸಂಪೂರ್ಣ ಅಡಿಮೇಲಾಗಿ ಹೋದುದನ್ನು ನೆನಸಿದರೆ, ಯಾವುದನ್ನೂ ಖಂಡಿತವಾಗಿ ಊಹಿಸಿಟ್ಟುಕೊಳ್ಳುವುದು ತಪ್ಪು.

'ಕೊರಿಯದಲ್ಲಿ ಕಮ್ಯುನಿಸ್ಟರು ವಿಜಯಗಳಿಸಿದರೆ ಅಖಿಲ ಯುರೋಪಿಗೆ, ಮತ್ತು ಅಖಿಲ ಜಗತ್ತಿಗೇನೇ ಕಮ್ಯುನಿಸ್ಟ್ ಆಕ್ರಮಣದ ಅಪಾಯವಿದೆ' ಎಂದು ಅಮೆರಿಕವು ಸಾರುತ್ತಿರುವದರಲ್ಲಿ ವಿರುದ್ಧಾರ್ಥ ಸತ್ಯವಿದೆ. ಕೊರಿಯದ ಅಪಜಯವು ಅಟಂ ಬಾಂಬು ಹಾಕುವಷ್ಟು, ಇಲ್ಲವೇ ತಮಗನುಕೂಲವಾದ ಇತರ ಕಡೆಗಳಲ್ಲಿ ಕಮ್ಯುನಿಸ್ಟರ ಮೇಲೆ ಬೀಳುವಷ್ಟು ಅಮೆರಿಕದ ತಲೆಯನ್ನು ಕೆಡಿಸಬಹುದು. ಆಗ ಲೋಕಯುದ್ಧವಾರಂಭಿಸಿದಂತೆಯೇ. ಸದ್ಯಸ್ಥಿತಿಯಲ್ಲಿ ಈ ಮಹಾಯುದ್ಧದ ಕೊನೆಯ ಪರಿಣಾಮವಾಗಿ ಕಮ್ಯುನಿಜಮ್ ಲೋಕವ್ಯಾಪಿಯಾಗುವುದೂ ಸಂಭವನೀಯವೇ.

ಬದಲಿಗೆ, ಯಾವುದಾದರೊಂದು ಅದ್ಭುತ ನಡೆದು ಸಂ. ರಾ. ಸೇನೆಗಳೇ ಕೊರಿಯದಲ್ಲಿ ಗೆಲ್ಲುವಂತಾದರೆ, ಆ ಯುದ್ಧದಲ್ಲೀ ವರೆಗೂ ಪ್ರತ್ಯಕ್ಷ ಭಾಗಿಯಾಗಿರದ ರಶ್ಯವು ತಲೆಕೆಡಿಸಿಕೊಳ್ಳುವಂತಹ ಅವಮಾನಕ್ಕೇನೂ ಈಡಾಗದು; ಕೊರಿಯದ ಪರಾಭವಕ್ಕೆ ಪ್ರತೀಕಾರಮಾಡಲು ದುರಭಿಮಾನದಿಂದ ಅದು ಬೇರೆ ಕಡೆಗಳಲ್ಲಿ ದುಡುಕುವಂತಿಲ್ಲ. ಆದರೆ ಹೀಗಾಗಬೇಕಾದರೂ ಸಂ. ರಾ. ಸೇನೆಗಳು ಅಲ್ಲಿಯ ರಶ್ಯಾ ಸರಹದ್ದಿಗೆ ಸಾಕಷ್ಟು ದೂರದಲ್ಲೇ ಇರಬೇಕು. ವಿಜಯಮಂಕು ಸೋಂಕಿದ ಮೇಲೆ ಅಮೆರಿಕಾನರು ಇಂತಹ ಮುಂಜಾಗರೂಕತೆ ವಹಿಸುವವರಲ್ಲ. ಚೈನಾ ಸರಹದ್ದಿಗೆ ಸಾಕಷ್ಟು ದೂರ ನಿಲ್ಲದ ಅತಿರೇಕಾಚರಣೆಯ ಫಲವೇ ಸಂ. ರಾ. ಸೇನೆಗಳು ಈಗ ಅನುಭವಿಸುತ್ತಿರುವ ಪರಾಭವ.

ಅಂತೂ ಮಹಾಯುದ್ಧದ ಅಪಾಯ ಬೇಳದಿರಬೇಕಾದರೆ ಕೊರಿಯ ಯುದ್ಧವು ಅಲ್ಲೇ ಶಾಂತ ಪರ್ಯವಸಾನಗೊಳ್ಳಬೇಕು; ಇಲ್ಲವೇ ಯಾವ ವಿಜಯದತ್ತವೂ ಕೇಳದೆ ಇದ್ದಲ್ಲೇ ಸಾಯಬೇಕು. ಸದ್ಯಸ್ಥಿತಿಯಲ್ಲಿ ಇವೆರಡರಂತಾಗುವುದೂ ಅಸಂಭವವಿದ್ದಂತಿದೆ. ಎಂದಾದರೊಂದು ದಿನ ಯಾವುದಾದರೊಂದು ಕಡೆಯ ವಿಜಯದಲ್ಲೇ ಪರ್ಯವಸಾನಗೊಳ್ಳಬೇಕಾದ್ದರಿಂದ, ಆ ದಿನದಿಂದಲೇ ಪ್ರಪಂಚವು ಮತ್ತೊಂದು ಮಹಾಯುದ್ಧದ ಕಡೆಗೆ ಹೆಜ್ಜೆಯಿಡಬಹುದೇನೋ ಎಂದು ಆತುರದಿಂದ ನಿರೀಕ್ಷಿಸುತ್ತಿರಬೇಕು.

ಇಲ್ಲಿ ಒಂದು ಮಾತನ್ನು ಮರೆಯಲಾಗುವದಿಲ್ಲ. ಒಳಾಂದೋಲನ ಮತ್ತು ಮೌನ ಒತ್ತಡಗಳ ಮೂಲಕವೇ ಕಮ್ಯುನಿಜಮ್ ಲೋಕದ ಎಲ್ಲಾ ರಾಷ್ಟ್ರಗಳಲ್ಲೂ ಸಾವಧಾನವಾಗಿ ಮತ್ತು ಭದ್ರವಾಗಿ ವ್ಯಾಪಿಸಿಕೊಳ್ಳುತ್ತಿದ್ದು, ಇದೇ ಪರಿಮಾಣಾನುಸಾರವಾಗಿ ಸಾಗಿದರೂ ಇನ್ನು ಕೆಲವೇ ವರುಷಗಳಲ್ಲಿ ಅದು ಲೋಕ ವಿಜಯಿಯಾಗುವ ಸಂಭವವಿರುವಾಗ, ಇದಕ್ಕಿಂತ ಅಪಾಯಕರವಾದ ಮತ್ತು ವಿಜಯಭರವಸೆ ಖಚಿತವಿರದ ಲೋಕಮಹಾಯುದ್ಧವನ್ನು ರಶ್ಯವೆಂದಿಗೂ ಬಯಸುತ್ತಿಲ್ಲ.

ಆದರೆ, ಜನತೆಯಲ್ಲಿ ಅತ್ಯಧಿಕ ಸಂಖ್ಯೆ ಕರಿರುವ ಬಡವರ ರಾಜ್ಯವಾದ ಕಮ್ಯೂನಿಜಮನ್ನು ತರುವೆವೆಂದು ಎಲ್ಲೆಡೆಯ ಬಡವರನ್ನೂ ಮೋಹಿಸಲು ರಶ್ಯದ ಹಸ್ತಕರಿರುವ ಕಮ್ಯುನಿಸ್ಟರಿಗೆ ಸಾಧ್ಯವಿರುವಂತೆ, ತಮ್ಮ ಭಂಡವಾಳಶಾಹೀ ಧೋರಣೆಯು ಲೋಕ ಜನಪ್ರಿಯವಾಗುವಂತೆ ಮಾಡಲು ಅಮೆರಿಕಾನರಿಗೆ ಯಾವವಿಧದಿಂದಲೂ ಸಾಧ್ಯವಿಲ್ಲ ಆದ್ದರಿಂದ ಲೋಕವನ್ನು ಸ್ವಪಕ್ಷಗಳಿಗೆ ಸೇರಿಸಿಕೊಳ್ಳುವ ಮಾದರಿಯಲ್ಲೇ ತಾವೂ ಸೇರಿಸಿಕೊಳ್ಳುವೆವೆಂದರೆ — ಆ ಸ್ಪರ್ಧೆಯಲ್ಲಿ ರಶ್ಯವನ್ನು ಹಿಂದೆ ಹಾಕಬಹುದೆಂದರೆ — ಅದು ಅಮೆರಿಕದ ಕೈಯಿಂದಾಗುವಂತಿಲ್ಲ. ಅಂದಮೇಲೆ ರಶ್ಯವನ್ನು ಯುದ್ಧಮೂಲಕ ಬಗ್ಗಬಡಿಯುವದೊಂದೇ ಅಮೆರಿಕದ ಮಾರ್ಗ. ಆದ್ದರಿಂದ ಅಮೆರಿಕವೇ ಇಂದು ಸತ್ಯಶ್ಯ ಯುದ್ಧಾಕಾಂಕ್ಷಿ ರಾಷ್ಟ್ರ.

ಇಕ್ಕಡೆಯವರೊಳಗಿನ ಈ ಸ್ಪರ್ಧೆ ನಿಂತು, ಆಯಾ ದೇಶದ ಜನಮತವು ಪೂರ್ಣ ಸ್ವತಂತ್ರವಾಗಿ ಏನನ್ನು ಬಯಸುತ್ತದೋ ಆ ಮಾದರಿಯ ಆಡಳಿತೆಯನ್ನು ಅಲ್ಲಲ್ಲಿ ಸ್ಥಾಪಿಸುವುದಕ್ಕೆ ಎರಡು ಕಡೆಯವರೂ ಒಪ್ಪಿ, ನೆರವಾದರೇನೇ ಲೋಕದ ಶಾಂತಿ, ಸುರಕ್ಷಿತತೆ ಸಾಧ್ಯ. ಇಲ್ಲವಾದರೆ ಇನ್ನೊಂದು ಲೋಕಯುದ್ಧ ನಿಶ್ಚಯ. ಇವೆರಡರಲ್ಲಿ ಯಾವುದು ಮತ್ತು ಹೇಗೆ, ಯಾವಾಗ ಎಂಬುದು ಬಹುಶಃ 1951ರಲ್ಲೇ ಸ್ಪಷ್ಟವಾಗಲಿದೆ.

ಭಾರತದ ಪಾಲಿಗಂತೂ 1951ನೇ ಇಸವಿ ಎರಡುರೀತಿಗಳಿಂದ ಅತ್ಯಂತ ಮಹತ್ವದುದು:- ಪ್ರಾಪ್ತವಯಸ್ಕರಿಗೆಲ್ಲಾ ಮತಾಧಿಕಾರ ಬಂದಿರುವ ನವರಾಜ್ಯ ಶಾಸನದನ್ವಯ ಸಾರ್ವತ್ರಿಕ ಮಹಾಚುನಾವಣೆಯು ಈ ಇಸವಿ ಮುಗಿಯುವುದರೊಳಗೆ ನಡೆಯಲಿರುವುದೊಂದು. ಬಹುಶಃ ಕವಾಗಿ ಈ ಇಡೀ ವರುಷ ಮಹಾಚುನಾವಣೆಯ ಕೂಗು ಮತ್ತು ಕೋಲಾಹಲಗಳೇ ಕೇಳಬರಬಹುದು. ಜನತಾ ರಾಜ್ಯ ಭಾರವನ್ನು ಜನತೆಯೇ ಹೊತ್ತುವ ಪ್ರಥಮ ಮಹಾ ಸಂದರ್ಭವಿದಾಗಿರುವುದರಿಂದ ಇದರ ಪ್ರಾಮುಖ್ಯತೆ ಅತಿ ಹೆಚ್ಚಿನದು.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್—

For Life Assurance

CONSULT

THE NEW GUARDIAN OF INDIA

LIFE ASSURANCE CO LTD.

(Established 1934)

Chairman Sri M. C. T. M. Chidambaram Chettiyar

A Policy in this progressive Life Office is a investment its Agency is a valuable business connection.

MANGALORE BRANCH. K. S. R. Road. | HEAD OFFICE. United India Life Building.

The Canara Banking Corporation Ltd.,

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡುಹೋಗದೆ ಇದ್ದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸು ಸದ್ರಿಯವರು ಪತ್ತೆಯಿಲ್ಲದವರು ಎಂದು ವಾಪಾಸು ಬಂದುದರಿಂದ ಈ ಮೂಲಕ ಅವರಿಗೂ ಅವರ ವಾರಿಸ್ದಾರರಿಗೆ ತಿಳಿಸುವುದೇನೆಂದರೆ ಸದ್ರಿ ನಗಗಳ ಬಾಬ್ತು ಅಸಲು, ಬಡ್ಡಿ, ಬಡ್ಡಿಯ ಬಡ್ಡಿ, ಇತರ ಮತ್ತು ಈ ನೋಟೀಸುಗಳ ಖರ್ಚು ಅಲ್ಲದೆ ಮುಂದಿನ ವಸೂಲಿ ವರೆಗಿನ ಬಡ್ಡಿ ಸಮೇತ ತಾ. 20-1-1951 ಒಳಗೆ ಬ್ಯಾಂಕಿಗೆ ತಂದುಕೊಟ್ಟು ಬಿಡಿಸಿಕೊಂಡು ಹೋಗಬೇಕು. ಹಾಗೆ ಕೊಂಡುಹೋಗಲಿಕ್ಕೆ ತಪ್ಪಿದರೆ ಸದ್ರಿ ನಗಗಳನ್ನು ತಾ. 27-1-1951ನೇ ಶನಿವಾರ ಮಧ್ಯಾಹ್ನ ಒಂದು ಗಂಟೆಗೆ ಯಾ ಬ್ಯಾಂಕಿಗೆ ಯುಕ್ತತೋರುವ ಇತರ ದಿನಗಳಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಸದ್ರಿ ಏಲಂನಿಂದ ಹುಟ್ಟಿಬಂದ ಹಣದಲ್ಲಿ ಏಲಂ ಖರ್ಚು ಕಳೆದು ಬಾಕಿ ಉಳಿಯುವ ಹಣವನ್ನು ಸದ್ರಿಯವರ ಲೆಕ್ಕಕ್ಕೆ ಜಮಾ ಮಾಡಿ ನಂತರ ಸದ್ರಿಯವರ ಮೇಲೆ ಇನ್ನೂ ಬಾಕಿಯಾಗಬಹುದಾದ ಹಣಕ್ಕೆ ಅಗತ್ಯವುಳ್ಳ ವ್ಯವಹಾರ ನಡೆಸಲಾಗುವುದು. ಆ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ಹಾನಿಗಳಿಗೆ ಕೂಡಾ ಸದ್ರಿಯವರು ಜವಾಬ್ದಾರರಾಗಿರುತ್ತಾರೆ.

ಬಂಡ್ವಾಳ ನಂಬ್ರ 1 ಸಾಲದ ನಂಬ್ರ 210/49 ಹೆಸರು: ಮಲ್ಪೆ ನೆರೆಯಲ್ಲಿರುವ ಲಿಡಿಯಾ ಅಮ್ಮಣ್ಣಾಳ ಮಗಳು ವಿಕ್ಟೋರಿಯಾ ಅಮ್ಮ ಅಸಲು ರೂಪಾಯಿ 500/–

ಬಂಡ್ವಾಳ ನಂಬ್ರ 2 ಸಾಲದ ನಂಬ್ರ 575/49 ಹೆಸರು: ಮಲ್ಪೆ ಕೊಳದಲ್ಲಿರುವ ಗುರುವ ಮರಕಾಲನ ಮಗ ಅಪ್ಪ ಮರಕಾಲ ಅಸಲು ರೂಪಾಯಿ 15/–

ಟಿ. ಅನಂತರಾಮ ಕಲ್ಯಾರ,
ಏಜಂಟ್.

1952ನೇ 'ಎಪ್ರಿಲಿನೊಳಗೆ ಅಂದರೆ 1951ರಲ್ಲಾಗುವ ಮುಖ್ಯ ಬೆಳೆಗಳಿಂದಲೇ ದೇಶವು ಆಹಾರ ಸ್ವಾವಲಂಬನೆಗೊಳ್ಳಬೇಕೆಂಬ ಗುರಿಯು ಸಿದ್ಧಿಸತಕ್ಕ ಅವಧಿಯಿದೆ. ಈ ಅವಧಿಯ ನಂತರ, ಹೊರ ದೇಶಗಳಿಂದ ಆಹಾರಧಾನ್ಯಗಳನ್ನು ಆಮದು ಪಡಿಸಿಕೊಳ್ಳುವದಿಲ್ಲ, ಎಂಬ ಶಪಥವಿರುವುದರಿಂದ ಇದು ಮಹಾ ಪರೀಕ್ಷೆಯ ಅವಧಿಯೂ ಆಗಿದೆ.

ಅಂತೂ ಭಾರತದ ಆಹಾರ ಮತ್ತು ಅಧಿಕಾರ ಸ್ವಾವಲಂಬನೆ, ಎರಡನ್ನೂ ಸಾಧಿಸಬೇಕಾದ ಇಸವಿ 1951. ಜನತೆಯ ಪಾಲಿನ ಪರೀಕ್ಷಾವರುಷವೇ ಇದು. ಅದ್ದರಿಂದ ಇದು ಅತ್ಯಂತ ಪ್ರಾಮುಖ್ಯ ಕಾಲವೆಂಬುದು ನಿರ್ವಿವಾದ. ಆಹಾರ ಮತ್ತು ಅಧಿಕಾರ, ಇವೆರಡರಲ್ಲೂ ಈ ನಿಶ್ಚಿತಾವಧಿಯಲ್ಲಿ ಭಾರತೀಯ ಜನತೆ ಸ್ವಸಂಪೂರ್ಣತೆಗೊಂಡರೆ ಮತ್ತೆ ನಿರಾಶೆಗೆಡೆಯಿಲ್ಲ.

ರಾಜಕೀಯರಂಗದಲ್ಲೂ ಕೆಲವೊಂದು ಪ್ರಾಮುಖ್ಯ ಬದಲಾವಣೆಗಳನ್ನು ನಿರೀಕ್ಷಿಸಿದರೆ ಹೆಚ್ಚಾಗದು. ಸರ್ದಾರ್ ವಲ್ಲಭಾಯಿಗಳು ಕಳೆದುಹೋದುದರಿಂದ, ತಮ್ಮ ಬೇಳೆಯನ್ನು ಮೊದಲಿಗಿಂತ ಹೆಚ್ಚು ಬೇಯುವಂತಿಲ್ಲವೆ,, ಎಂದು ಆಚೆ ಕಡೆಯಿಂದ ಪಾಕಿಸ್ತಾನಿಗಳು, ಒಳಗಡೆಯಿಂದ ಸಮಾಜವಾದಿಗಳೇ ಮೊದಲಾದವರು ಹಾರೈಸುತಿದ್ದಾರೇನೋ. ಇವರ ಆಶೆ ಸದ್ಯ ಫಲಿಸುವ ಸಂಭವವಿಲ್ಲವಾದರೂ ವಜ್ರಮುಷ್ಟಿಯ ಸರ್ದಾರರಿಲ್ಲದುದರ ಪರಿಣಾಮವು ಕ್ರಮಶಃ ಆದರೂ ತೋರಿಬರುವುದು ಸಂಭವನೀಯ.

ಸರ್ದಾರರ ಅಭಾವದಿಂದ ಆಗಲು ಸಾಧ್ಯವಿರುವ ಸತ್ಪರಿಣಾಮವೆಂದರೆ ಕಾಂಗ್ರೆಸ್ ಮತ್ತು ಸಮಾಜವಾದಿಗಳ ಮಿಲನ. ಪಟೇಲರ ಕಟ್ಟುಗ್ರ ಶಿಸ್ತು ಮತ್ತು ಖಂಡತುಂಡ ಧೋರಣೆ ವರ್ತನೆ ಹಾಗೂ ಮುಷ್ಟಿಬಿಗಿತದ ಕಡೆಗೆ ವಿರುದ್ಧ ಭಾವನೆ ವಹಿಸಿಯೇ ಸಮಾಜವಾದಿಗಳಂತಹ ಉಗ್ರಗಾಮಿಗಳು ನೆಹರೂ ಸರಕಾರಕ್ಕೆ ಬಹುದೂರ ಉಳಿದಿದ್ದರು. ಸರಕಾರೀ ನಾಯಕ ನೆಹರು ತಮ್ಮ ಮಂತ್ರಿಯ ತುದಿ ಹಿಡಿಯುವ ಜನ—ಆದರೆ ವಲ್ಲಭಾಯಿಗಳು ಅವರನ್ನು ಕೆಡಿಸಿಯೋ, ನಿಸ್ಸಹಾಯಕರಾಗಿ ಮಾಡಿಟ್ಟೋ ತಮ್ಮಿಚ್ಛೆಬಂದಂತೆ ಯಂತ್ರಚಾಲು ಮಾಡುತಿದ್ದಾರೆ—ಎಂಬುದೇ ಸಮಾಜವಾದಿಗಳಂಥವರ ದೂರಾಗಿದ್ದಿತು. ಈಗ ಸರ್ದಾರ್ ಪಟೇಲ್ ಹೊರಟುಹೋಗಿರುವದರಿಂದ ಕಾಂಗ್ರೆಸ್ ಮತ್ತು ಸಮಾಜವಾದೀ ನಾಯಕರು ಒಂದೇ ಛತ್ರದಡಿಯಲ್ಲಿ ನಿಲ್ಲುವರೋ ಎಂಬುದನ್ನು ಕಾಣಬೇಕು.

ಎಲ್ಲಕ್ಕಿಂತ ಹೆಚ್ಚು ಆತುರದ ಪ್ರಶ್ನೆಯೆಂದರೆ, ಮೊದಲೇ ಬುಡದಿಂದ ತುದಿಯ ವರೆಗೂ ಸಡಿಲುಬಿದ್ದಂತಿರುವ ಆಡಳಿತಯಂತ್ರದ ಅತ್ಯಂತ ಭದ್ರವಾಗಿದ್ದ ಮೂಲ ಕೀಲು ಸರ್ದಾರರು ಕೂಡಾ ಈಗ ಇಲ್ಲವಾಗಿರುವಾಗ ಆಡಳಿತೆಯ ಅನಿವಾರ್ಯ ಬಿಗುಮಾನವುಳಿಯುವುದೋ, ಇಲ್ಲವೋ ಎಂಬುದು. ಅಂತಹ ತಪ್ಪು ಸಂಭವಿಸದಂತೆ ನೆಹರುಗಳಂತಹ ರಾಷ್ಟ್ರನಾಯಕರು ವಿಶೇಷ ಪ್ರಯತ್ನಪಡುವರೆಂದೂ ಜನತೆ ಅವರಿಗೆ ಸರ್ವಶಕ್ತಿಯಿಂದ ಬೆಂಬಲವಾಗುವದೆಂದೂ ಹಾರೈಸಬೇಕಾಗಿದೆ.

1950ರ ಘಟನೆಗಳಿಂದ ದೊರೆತ ಪಾಠ, ಅನುಭವಗಳ ಬಲದಿಂದ 1951ನ್ನು ಸುಖ, ಶಾಂತಿ, ಪ್ರಗತಿದಾಯಿ ವರುಷವಾಗಿ ಮಾರ್ಪಡಿಸಲು ಅದನ್ನು ಕಳೆದು ಇದನ್ನು ಪ್ರವೇಶಿಸೋಣ

ಸರ್ದಾರರ ಸ್ಥಾನಕ್ಕಾರು?

ಭಾರತದ ಉಪಪ್ರಧಾನಿ ಮತ್ತು ಗೃಹಮಂತ್ರಿಯಾಗಿದ್ದ ಸರ್ದಾರ್ ಪಟೇಲರ ವಿಯೋಗದಿಂದ ಕೇಂದ್ರ ಭಾರತದ ದ್ವಿತೀಯ ಪ್ರಾಮುಖ್ಯ ಹುದ್ದೆಯೇ ಖಾಲಿಬಿದ್ದಿದೆ. ಭಾರತೀಯ ಜನತೆಯ ಪ್ರೀತಿ ವಿಶ್ವಾಸಾರ್ಹತೆಯ ಮಟ್ಟಿಗೆ ಮತ್ತು ಅಧಿಕಾರದ ಮಟ್ಟಿಗೆ ಶ್ರೀ ಜವಾಹರಲಾಲರಿಗೆ ಎರಡನೆಯವರಾಗಿದ್ದ ಸರ್ದಾರ್ ಪಟೇಲರೀಗ ಕಳೆದುಹೋಗಿದ್ದಾರೆ. ಸರ್ದಾರರ ಅಸಾಧಾರಣ ವರ್ಚಸ್ಸು,ಸ್ವತಃ ಅವರ ಸ್ವಭಾವ, ಅಭ್ಯಾಸ, ತ್ಯಾಗ, ಧೈರ್ಯ, ಸ್ಥೈರ್ಯ, ಶಕ್ತಿ ಸಾಹಸಗಳಿಂದಲೇ ಬಂದುದು ಹೊರತು ಸ್ಥಾನಬಲದಿಂದ ಒದಗಿದುದಲ್ಲ; ಆದ್ದರಿಂದ ಸರ್ದಾರ್ ತೂಕದ ಇನ್ನೊಬ್ಬ ವ್ಯಕ್ತಿಯನ್ನು ಆ ಸ್ಥಾನಕ್ಕೇರಿಸಿಕೊಳ್ಳಬಹುದೆಂದಾಗದು; ಆದರೆ ಉಪಪ್ರಧಾನಿ ಪಟ್ಟ ಮತ್ತು ಗೃಹಮಂತ್ರಿ ಹುದ್ದೆಯು ತುಂಬಿಸಿಕೊಳ್ಳಲಾಗುವಂತಹದಿದೆ. ಸರ್ದಾರರು ಕಳೆದುಹೋದ ದೆಸೆಯಿಂದ ಕಾಣೆಯಾದ ಒಬ್ಬ ಮಹಾಮನುಷ್ಯನನ್ನು ಇನ್ನೇನು ಮಾಡಿದರೂ ಬದಲಿ ಸಂಪಾದನೆ ಮಾಡಿಕೊಳ್ಳುವುದಸಾಧ್ಯ; ಆದರೆ ಅವರು ಬಿಟ್ಟು ಹೋದ ಮಂತ್ರಿ ಸ್ಥಾನವನ್ನು ತುಂಬಿಸಿಕೊಳ್ಳುವುದು ಮಾತ್ರ ಸಾಧ್ಯ. ಈ ಮಂತ್ರಿಸ್ಥಾನಕ್ಕೆ ಇನ್ನು ಯಾರು?

ರಾಜಾಜಿಯೆ?

ಉಪಪ್ರಧಾನಿ ಪಟೇಲರು ಹೋಗಿ ದಿನಗಳು ಸಂದರೂ ಭಾರತ ಮಂತ್ರಿ ಮಂಡಲದ ಅವರ ಸ್ಥಾನಕ್ಕಿಂಥವರೇ ಎಂದು ನಿಶ್ಚಯವಾಗಿ ತಿಳಿದು ಬಂದಿಲ್ಲ. ಶ್ರೀ ಸಿ. ರಾಜಗೋಪಾಲಾಚಾರಿಯವರು ಆ ಸ್ಥಾನಕ್ಕೆ ಬರಬಹುದೇನೋ ಎಂದು ಡಿಲ್ಲಿಯ ರಾಜಕೀಯ ಒಳ ವಹಿವಾಟುಗಳ ಕಡೆಗಿನ ಕಣ್ಣಿಲ್ಲದ ಹಳ್ಳಿಯವರು ಕೂಡಾ ತಾವಾಗಿ ಊಹಿಸಿದ್ದರು. ಯಾವ ದೃಷ್ಟಿಯಿಂದ ನೋಡಿದರೂ, ಇರುವ ಮುಂದಾಳುಗಳ ಪೈಕಿ ರಾಜಾಜಿಯೇ ಸರ್ದಾರರ ಸ್ಥಾನಕ್ಕೆ ಬರಲು ಅರ್ಹರು; ಸೂಕ್ಷ್ಮ ದೂರ ದೃಷ್ಟಿ ಮತ್ತು ಚಾತುರ್ಯದ ಮಟ್ಟಿಗೆ ಆಚಾರ್ಯರನ್ನು ಸರಿಗಟ್ಟುವವರು ಬೇರಿಲ್ಲವೆಂಬ ಪ್ರತೀತಿಯಿದೆ. ಅವರದು ವಿದೇಶಗಳಲ್ಲೂ ಕೀರ್ತಿಗಳಿಸಿರುವ ಮೆದುಳು. ಗಾಂಧಿಜೀ, ತನ್ನ 'ಮನಸಾಕ್ಷಿಯ ಪಹರೆಗಾರ' ಎಂದು ಕರೆದಿದ್ದ ರಾಜಾಜಿ, ದೀರ್ಘಾವಧಿ ಮಹಾತ್ಮರ ನಿಕಟಾನುವರ್ತಿಯಾಗಿದ್ದ ನಾಯಕ. ಭಾರತದಲ್ಲಿ ಗಾಂಧೀ ಯುಗವಾರಂಭಿಸಿದಂದಿನಿಂದ ಈ ವರೆಗೂ ರಾಷ್ಟ್ರದ ಪ್ರಾಮುಖ್ಯ ರಾಜಕೀಯ ವಹಿವಾಟುಗಳಲ್ಲಿ ಗಣ್ಯಭಾಗವಹಿಸುತ್ತಾ ಬಂದವರು. ಅನಿವಾರ್ಯವಾದುದನ್ನು ಸಕಾಲದಲ್ಲಿ ಸಾಧಿಸುವ ಮಟ್ಟಿಗೆ—ಸಮಸ್ಯೆಗಳ ಜಡಪಿನೊಳಗಡೆಯಿಂದ ತೀರ್ಮಾನವನ್ನು ಕಂಡುಹಿಡಿಯುವ ಮಟ್ಟಿಗೆ—ಅನ್ಯರ ಕಣ್ಣಿಗೆ ಅಗೋಚರವಾದ ದೂರದ ಸಂಭವಗಳನ್ನು ಇದ್ದಲ್ಲೇ ಕಾಣುವ ಮಟ್ಟಿಗೆ— ರಾಜಾಜಿಯನ್ನು ಸರಿಗಟ್ಟಬಲ್ಲವರು ಬೇರಿಲ್ಲ. ಅವರ ಮೆದುಳು ಮತ್ತು ಸಂಗ್ರಹ ಎರಡೂ ದೊಡ್ಡವು. ಮದ್ರಾಸ್ ಪ್ರಾಂತ್ಯದ ಪ್ರಧಾನ ಮಂತ್ರಿಯಾಗಿ ಜಯಶೀಲ ಆಡಳಿತೆ ನಿರ್ವಹಿಸಿದ ಅನುಭವ ಅವರಿಗಿದೆ; ಸ್ವತಂತ್ರ ಭಾರತದ ಪ್ರಥಮ ಹಿಂದೀ ಗವರ್ನರ್ ಜನರಲ್ ಆಗಿ ಆಳಿದವರವರು. ಕಾಂಗ್ರೆಸ್ ನಾಯಕರ ಪೈಕಿ ಬುದ್ಧಿಯಲ್ಲಿ ಹೇಗೋ ಪ್ರಾಯದಲ್ಲೂ ಹಾಗೆಯೇ ಹಿರಿಯ. ರಾಜಾಜಿಯ ಇವೆಲ್ಲ ಯೋಗ್ಯತೆಗಳನ್ನು ಕಂಡೇ ಶ್ರೀ ಜವಾಹರಲಾಲ ನೆಹರುಗಳು ಅವರನ್ನು ಖಾತೆರಹಿತ ಮಂತ್ರಿಯಾಗಿ ತನ್ನ ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡಿದ್ದಾರೆ. ಎಲ್ಲಕ್ಕೂ ಆಗುವ ಸವ್ಯಸಾಚಿಯೆಂಬುದರಿಂದಲೇ ಯಾವುದೇ ಒಂದು ಇಲಾಖೆಗೆ ಅವರನ್ನು ಕಟ್ಟಿಹಾಕದೆ ಕೇವಲ ಮಂತ್ರಿಯಾಗಿ ಇಟ್ಟುಕೊಂಡಿದ್ದಾರೆ ತನ್ನ ಅನುಯಾಯಿಗಳಾದ ಮಿಕ್ಕ ಮಂತ್ರಿಗಳ ಮೇಲಿರುವುದಕ್ಕಿಂತ ಹೆಚ್ಚು ವಿಶ್ವಾಸ, ಗೌರವಾದರಗಳು ನೆಹರುಗಳಿಗೆ ರಾಜಾಜಿಯ ಮೇಲಿವೆ ಎಂದು ನಂಬಲು ಎಡೆಯಿದೆ. ಎದೆಗಾರಿಕೆ, ಘನತೆ, ಖಾಡಾಖಾಡಿತ್ವ, ಸಂಘಟನೆ, ದಮನಶಕ್ತಿಗಳ ಮಟ್ಟಿಗೆ ವಲ್ಲಭಾಯಿಗಳ ಸರ್ದಾರ್‌ತನ ಮೀರುವವರು ಪ್ರಕೃತ ಅಗ್ರಗಣ್ಯ ನಾಯಕರ ಪೈಕಿ ಯಾರೂ ಕಾಣುವದಿಲ್ಲ; ಇದ್ದವರಲ್ಲಿ ಈ ಯೋಗ್ಯತೆಗಳ ಮಟ್ಟಿಗೆ ರಾಜಾಜಿಯನ್ನು ಮೀರಿಸುವವರು ಬೇರಿರಬಹುದಾದರೂ, ಬುದ್ಧಿವಂತಿಕೆ, ತುಲನಾತ್ಮಕ ಬುದ್ಧಿ; ವಿವೇಚನಾ ಶಕ್ತಿಯಲ್ಲಿ ಎಲ್ಲರನ್ನೂ ಮೀರಿಸುವರು ರಾಜಾಜಿ, ಇವೆಲ್ಲಾ ಸಂಗತಿಗಳ ಮೇಲಿಂದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಭಾರತದ ಗೃಹ ಮಂತ್ರಿ ಮತ್ತು ಸಂಸ್ಥಾನಗಳ ಸಚಿವನಾಗಿ ನೇಮಿಸಲ್ಪಟ್ಟರೆ ಆಶ್ಚರ್ಯವೇನೂ ಇಲ್ಲ.

ಸ್ಪರ್ಧೆಯಿದೆಯೆ?

ಈರೀತಿ ದೇಶವೇ ನಿಶ್ಚಯಿಸಿಟ್ಟುಕೊಂಡಂತಿರುವ ರಾಜಾಜಿಯ ನೇಮಕವನ್ನು ದೇಶನಾಯಕ ನೆಹರು ಈ ವರೆಗೂ ಮಾಡಿಕೊಂಡಿಲ್ಲವೇಕೆ, ಎಂಬ ಪ್ರಶ್ನೆಯಿದೆ. ಮೊದಲನೆಯದಾಗಿ ಯಾವುದೇ ಮಂತ್ರಿ ಮಂಡಲದಲ್ಲಿ 'ಉಪ ಪ್ರಧಾನಿ' ಹುದ್ದೆಯಿರಬೇಕೆಂದಿಲ್ಲ; ಭಾರತದ ಯಾವ ಸಂಸ್ಥಾನೀ ಮಂಡಲಿಯಲ್ಲಾದರೂ ಉಪಪ್ರಧಾನಿಯಿಲ್ಲ. ಲೋಡ್ ವೇವೆಲರು ಕಾಂ

ಭಾರತದಲ್ಲಿ ಕ್ಷಯರೋಗ ಮುದ್ರೆಯ ಮಾರಾಟದ ಚಳವಳ

(ಭಾರತದ ಕ್ಷಯರೋಗ ಸಂಘ ಹೊಸದಿಲ್ಲಿ–ಇವರ ನೇತೃತ್ವದಲ್ಲಿ)

ಕ್ಷಯರೋಗ:—

ನಮ್ಮ ದೇಶದಲ್ಲಿ ಈ ರೋಗವು ಪ್ರತಿ ಇತರ ಮನೆಯಲ್ಲಿ ಅಧಿಕ ಸಂಖ್ಯೆಯ ಮರಣಕ್ಕೆ ಗುರಿಯಾಗುವಂತೆ ಹೊಡೆಯುತ್ತಿದೆ! ಅದು ನಿಮ್ಮನ್ನೂ ನಿಮಗೆ ಪ್ರಿಯರಾದವರನ್ನೂ ಅಥವ ಸಮೀಪದಲ್ಲಿರುವವರನ್ನೂ ಹೊಡೆಯುವುದಾಗಿದ್ದರೆ ದಿಗಿಲು ಎಷ್ಟೆಂದು ಊಹಿಸಿ! ! ಆದರೆ ಆಧುನಿಕ ವಿಜ್ಞಾನ ಶಾಸ್ತ್ರದಲ್ಲಿ ಅದಕ್ಕೆ ಹಿಂತಿರುಗಿ ಹೊಡೆಯಲುಳ್ಳ ಹಲವಾರು ಆಯುಧಗಳಿವೆ! ! !

ಕ್ಷಯರೋಗದ ಮುದ್ರೆ ಸುಲಭವಾದ ಆದರೆ ಪರಿಣಾಮಕಾರಿಯಾದ ಒಂದು ಆಯುಧ!

ಮುದ್ರೆಯ ಮಾರಾಟದ ಚಳವಳದಲ್ಲಿ ನಮ್ಮೊಡನೆ ಸೇರಿ ಒಂದಾಣೆಯ ಮುದ್ರೆಗಳನ್ನು ಕೊಳ್ಳಿರಿ!!

ಅವು ಈ ಸಂದೇಶವನ್ನು ಸಾರುತ್ತಿವೆ:—

ಕ್ಷಯರೋಗವನ್ನು ಧ್ವಂಸಮಾಡಿ!!!

ನಿಮ್ಮ ಸ್ಥಳೀಯ ಪೋಸ್ಟ್ ಆಫೀಸುಗಳಿಂದ ಅಥವ ಮದ್ರಾಸ್ ಕ್ಷಯರೋಗ ಸಂಘದ ಗೌರವಾರ್ಥ ಕಾರ್ಯದರ್ಶಿಗಳಿಂದಾಗಲಿ, ಆರೋಗ್ಯ ಶಾಖಾಧಿಕಾರಿ, ರಿಪ್ಪನ್ ಬಿಲ್ಡಿಂಗ್ಸ್, ಮದ್ರಾಸ್ 3 ಇವರಿಂದಾಗಲಿ, ಮುದ್ರೆಗಳನ್ನು ಪಡೆಯಬಹುದು.

ಈ ಸ್ಥಳ: ಕೆನರಾ ಬ್ಯಾಂಕ್, ಲಿಮಿಟೆಡ್, ಇವರ ಸೇವಾದಾನ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಶುಕ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಗೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD

ಎಲ್ಲಾ ಕಡೆ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ರಾಜಾಜಿ ಬರಲಿಕ್ಕೇನು?

ಗ್ರೆಸ್—ಲೀಗುಗಳ ಸಂಯುಕ್ತ ಮಧ್ಯಗಾಲಾವಧಿ ಮಂತ್ರಿ ಮಂಡಲವನ್ನು ಆ ಕಾಲದಲ್ಲಿ ಸ್ಥಾಪಿಸಿಕೊಂಡಾಗ ಈ ಮಂಡಲಿಗೆ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗಳನ್ನೇರ್ಪಡಿಸಿದ್ದರು, ಅಧ್ಯಕ್ಷನಾಗಿ ಗವರ್ನರ್ ಜನರಲ್ ಲೋರ್ಡ್ ವೇವೆಲರೇ ಇದ್ದಾಗ ಉಪಾಧ್ಯಕ್ಷನಾಗಿ ಪ್ರಮುಖ ಪಕ್ಷ ಕಾಂಗ್ರೆಸಿನ ನಾಯಕ ನೆಹರುರವರನ್ನು ಅವರು ನೇಮಿಸಿದ್ದರು. ಈ ಉಪಾಧ್ಯಕ್ಷ ಪದವು ಅರ್ಥಶೂನ್ಯವಾದುದೆಂದೂ, ತಮಗಿರದ ಹೆಚ್ಚಿನ ಅಧಿಕಾರವೇನೂ ಉಪಾಧ್ಯಕ್ಷನಿಗಿಲ್ಲವೆಂದೂ ಆಗ ಲೀಗ್ ಸದಸ್ಯರು ಆಕ್ಷೇಪಿಸಿದ್ದುದು ನೆನಪಾಗುತ್ತಿದೆ. ಅಧ್ಯಕ್ಷನ ಗೈರುಹಾಜರಿಯಲ್ಲಿ, ಅಧ್ಯಕ್ಷತನದ ಕಾರ್ಯ ಹೊಣೆಯು ಈ ಉಪಾಧ್ಯಕ್ಷನದಾಗುತ್ತದೆ ಹೊರತು ಇತರ ಸಂದರ್ಭಗಳಲ್ಲಿ ವಿಶೇಷವೇನೂ ಇಲ್ಲ. ಪ್ರಧಾನಿಯ ನಂತರ ಒಬ್ಬ ಉಪಪ್ರಧಾನಿಯಿರುವುದರಲ್ಲೂ ಇಷ್ಟೇ ಅರ್ಥ. ಇಷ್ಟಕ್ಕಾಗಿ ಇದೊಂದು ಹೊಸ ಹುದ್ದೆಯಿರುವ ಅಗತ್ಯವೇ ಇಲ್ಲ. ಆದರೆ ಸ್ವತಂತ್ರ ಭಾರತ ಸರಕಾರದಲ್ಲಿ ಸರ್ದಾರ್ ಪಟೇಲರಿಗಿರುವ ವಿಶೇಷ ಸ್ಥಾನವನ್ನು ಗುರುತಿಸುವುದಕ್ಕಾಗಿ—ಮಿಕ್ಕ ಮಂತ್ರಿಗಳಿಗಿಂತ ವಲ್ಲಭಾಯಿಗಳು ಹೆಚ್ಚಿನವರಿದ್ದು ನೆಹರುರವರಿಗೆರಡನೆಯವರಾಗಿದ್ದಾರೆಂಬುದನ್ನು ತೋರಿಸುವುದಕ್ಕಾಗಿ—ಡೆಪ್ಯುಟಿ ಪ್ರಧಾನಿ ಹುದ್ದೆ ರಚನೆಗೊಂಡಿದ್ದಿತು ಸರ್ದಾರರೊಂದಿಗೆ ಅದೂ ಕಳೆದು ಹೋಯಿತೇ ಉಳಿಯುವುದೇ ಎಂಬುದು ಮೊದಲನೇ ಪ್ರಶ್ನೆ. ಎಲ್ಲರ ನಿರೀಕ್ಷೆ ಮತ್ತು ವಾಸ್ತವಿಕತೆ ಹೇಗಿದ್ದರೂ, ರಾಜಾಜಿಯನ್ನು ಉಪಪ್ರಧಾನಿಯಾಗಿ ನೇಮಿಸುವುದು ಮಂತ್ರಿಗಳಿಗೆಲ್ಲ ಸಮ್ಮತವೇ ಎಂಬುದು ಆ ಮೇಲಿನ ಪ್ರಶ್ನೆ. ಉಪಪ್ರಧಾನ ಕುದುರೆಯೇರಬಲ್ಲ ಸರ್ದಾರರಿಲ್ಲವಾದ್ದರಿಂದ ಆ ಹುದ್ದೆಯನ್ನೇ ರದ್ದು ಪಡಿಸಿಕೊಂಡರೂ, ಎಲ್ಲಕ್ಕಿಂತ ಪ್ರಾಮುಖ್ಯವಾದ ಗೃಹ ಮಂತ್ರಿ ಸ್ಥಾನವನ್ನು ಮನ್ನಾ ಪಡಿಸಿಕೊಳ್ಳಲಾಗುತ್ತದೆಯೆ? ಹಲವು ಪ್ರಾಮುಖ್ಯ ಗೃಹ ಸಮಸ್ಯೆಗಳುಳಿದುಕೊಂಡಿವೆ. ಸಂಸ್ಥಾನಗಳ ಸಂಬಂಧದಲ್ಲೂ ಹೊಸ ಹೊಸ ಘಟನೆಗಳೇಳುವುದು ಸ್ವಾಭಾವಿಕ. ಅಂಥ ಮೇಲೆ ಈ ಗೃಹ ಮತ್ತು ಸಂಸ್ಥಾನ ಖಾತೆಗಳಿಗೇಕೆ ಇನ್ನೂ ನೇಮಕವಿಲ್ಲ? ಆರೋಗ್ಯ ಸಂಪಾದನೆಗೆಂದು ಸರ್ದಾರ್ ಪಟೇಲರು ಬೊಂಬಾಯಿಗಾಗಿ ಡಿಲ್ಲಿ ಬಿಡುವಾಗಲೇ ಅವರ ಕೈಯಲ್ಲಿದ್ದ ಗೃಹ ಮತ್ತು ಸಂಸ್ಥಾನಗಳ ಖಾತೆಗಳನ್ನು ತಾತ್ಕಾಲಿಕವಾಗಿ ನಿರ್ವಹಿಸುವಂತೆ ನೆಹರು ರಾಜಾಜಿಯನ್ನು ಕರೆದಿದ್ದರೆಂದೂ ಆದರೆ ವೈರಾಗ್ಯಪ್ರಿಯ ರಾಜಾಜಿಯೇ ತನಗದು ಬೇಡವೆಂದು ನಿರಾಕರಿಸಿದ್ದರೆಂದೂ ತಿಳಿದುಬರುತ್ತದೆ. ಸರ್ದಾರರಿರುವಾಗ ಹೀಗನ್ನುವ ರಾಜಾಜಿಗೆ ಹಲವು ಕಾರಣಗಳಿದ್ದಿರಬಹುದು; ಆದರೆ ಸರ್ದಾರರಿಲ್ಲದೆ ನೆಹರು ಅಶುಬುದ್ಧಿಯ ಅನಾಥರಂತಾಗಿರುವ ಈ ಕಾಲದಲ್ಲಿ ಆಚಾರ್ಯರು ಆವರ ಭಾರದಲ್ಲಿ ಪಾಲು ಹಂಚಿಕೊಳ್ಳಲೊಪ್ಪುವುದು ಖಂಡಿತ. ಇದು ವರೆಗೆ ಪಟೇಲರ ಕೈಯಲ್ಲೇ ಸರ್ದಾರರದಾಗಿದ್ದ ಖಾತೆಗಳಿವೆ. ಸರ್ದಾರರ ಖಾತೆಯು ಗೃಹಸಂಬಂಧದ ಕಾಗದಪತ್ರಗಳನ್ನು ನೋಡಿಕೊಳ್ಳುವಂತೆ ನೆಹರು ರಾಜಾಜಿಗೆ ಹೇಳಿದ್ದಾರೆಂಬಂತಹ ಊಹಾಪೋಹಗಳೂ ಇವೆ. ಮಂತ್ರಿಯನ್ನು ನೇಮಿಸಿಕೊಳ್ಳುವ ಅಧಿಕಾರವು ಪ್ರಧಾನ ಮಂತ್ರಿಯದಿರುವುದರಿಂದ ನೆಹರೂ ಇಚ್ಛೆಯನ್ನು ಭೇದಿಸುವಂತಹದಾವುದೂ ಮುಂದೆ ಬರಲಾರದು. ಅವರೂ ರಾಜಾಜಿಯ ನೇಮಕವು ಸ್ಪರ್ಧಾತೀತವಾಗಿಲ್ಲವೆಂಬ ಪದಂತಿಯಿದೆ.

ಅಜಾದರೇನಂತೆ?

ಮಂತ್ರಿಮಂಡಲದಲ್ಲಿರುವವರು, ನಾಯಕವರ್ಗದವರೆಲ್ಲರೂ ಆದರ್ಶ ಸ್ವಾರ್ಥತ್ಯಾಗಿಗಳೆಂದೇ ಲೆಕ್ಕಕೊಂಡರೂ ಸರ್ದಾರ್ ನಿಧನದಿಂದ ತೆರವಾದ ಘನಸ್ಥಾನವು ತಮಗೆ ದೊರೆತರಾದೀತೆಂಬ ಆಸೆಯಿಲ್ಲದವರ ಕೇಂದ್ರ ಮಂತ್ರಿಗಳಲ್ಲಿರಲಾರರು. ರಾಜಾಜಿಯ ನಂತರ ಕೇಳಬರುತ್ತಿರುವ ಹೆಸರೆಂದರೆ ಮೌಲಾನಾ ಅಜಾದರದು. ಸ್ಥಾನಮಾನಗಳಿಗಾಗಿ ಸ್ಪರ್ಧಿಸುವವರಲ್ಲೊಬ್ಬನೆಂದು ಇದ ವರೆಗೆ ಗಣಿಸಲ್ಪಟ್ಟಿರದ ಮೌಲಾನರು— ರಾಜಾಜಿಯು ದುರದೃಷ್ಟದಿಂದೆಂಬಂತೆ— ಈ ಸ್ಥಾನಕ್ಕೊಬ್ಬ ಹುರಿಯಾಳಾಗಿದ್ದಾರೆಂಬ ಪದಂತಿಯಿದೆ. ರಾಜಾಜಿಯನ್ನು ಸೇರಿಸಿಕೊಳ್ಳುವಾಗ ಮಂತ್ರಿಮಂಡಲದಲ್ಲಿ ಅವರಿಗೆ ಮೂರನೇ ಸ್ಥಾನವೆಂದು ಜವಾಹರಲಾಲನೆಹರು ನಿಶ್ಚಯಿಸಿದ್ದರಂತೆ. ಆ ಮೇರೆಗೆ ಪಾರ್ಲಿಮೆಂಟಿನ ಮಂತ್ರಿ ಆಸನ ಪಂಗ್ತಿಯಲ್ಲಿ ನೆಹರು, ವಲ್ಲಭಾಯಿಗಳಾದ ಮೇಲೆ, ಮೂರನೆಯವರಾಗಿ ರಾಜಾಜಿ ಮಂಡಿಸಬೇಕಿದ್ದಿತು. ಆದರೆ ಅಲ್ಲಿ ಕಂಡು ಬರುತ್ತಿದ್ದುದು ಮೌಲಾನಾ ಅಜಾದರೇ. ಈ ರೀತಿ ತಾನು ಮೂರನೆಯವನಾಗಿದ್ದಾಗ, ಖಾಲಿಯಾದ ಎರಡನೆಯವನ ಸ್ಥಾನದತ್ತ ಸೇರಲು ತಾನೇ ಹಕ್ಕುದಾರನೆಂದು ಮೌಲಾನರು ಭಾವಿಸಿಕೊಂಡಿದ್ದರದು ಪೂರ್ಣ ತಪ್ಪೆನ್ನಲಾಗುವದಿಲ್ಲ. ತನ್ನ ಸಹೃದಯೀ ಮುಸ್ಲಿಂ ಬಂಧುವಿನ ಮನಸ್ಸು ಈ ಕಾರಣದಿಂದ ನೋಯುವಂತಿದ್ದ

(೬ನೇ ಪುಟ ನೋಡಿರಿ)

ಮಾರಾಟಕ್ಕಿದೆ.

ತಾಲೂಕು ಕಚೇರಿ ಎದುರು ಕೇಂದ್ರ ಸ್ಥಾನದಲ್ಲಿ, ವ್ಯಾಪಾರಕ್ಕೂ, ಉಳಕೊಳ್ಳುವುದಕ್ಕೂ ಅನುಕೂಲವಾಗಿರುವ ಆರ್. ಎ. ಸೈಮನ್ಸರ ಮಾಳಿಗೆ ಕಟ್ಟೋಣವೂ, ಅದರ ಹಿಂದಕ್ಕಿರುವ ಮನೆಯೂ ಮಾರಾಟಕ್ಕಿದೆ ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

H. Beniston P. Simons,
Near Taluk Office,
UDIPI.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp. His Master's Voice,
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟು, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಆಗಿ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ.

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಖಾತ್ರಿ ಟಾನಿಕ್ಕುಗಳೂ ವಿಟಮಿನ್ ಆಹಾರ ವಸ್ತುಗಳೂ, ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ

ವಿ. ಸೂ: ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗಳಿಗೆ ಇಂದೇ ಬರೆಯಿರಿ.

ಎಂ. ಮೆಂಡೋಸ, ಮ್ಹಾಲಕ. — M. Mendosa, Proprietor.

THE NATIONAL GENERAL STORES

Importers, Exporters, Dispensing Chemists & Druggists,
GENERAL MERCHANTS & COMMISSION AGENTS,
8A Mherwan Buildings, Opp: His Master's Voice,
Sir Phirozshah Mehta Road, FORT, BOMBAY.

We accept
Deposits at the following rates:

Current	½%
Savings Bank	2 %
Short-Term	1½%
Fixed - 3 months	1 %
6 „	2 %
12 „	2½%
24 „	3 %

THE
Canara Banking Corporation Ltd.
(Incorporated in India.)
Estd: 1906.
Head Office : UDIPI, (S. I.)

ಗುರುವಾರ, ಉಡುಪಿ, ೨೮-೧೨-೫೦

ಹಳ್ಳೀ ಹಸುಗೆ ರದ್ಧತಿ

ಹಳ್ಳಿಗಳಲ್ಲಿ 'ರೇಶನಿಂಗ್' ತೆಗೆದು ಹಾಕಿದರು—ಎಂಬ ವಾರ್ತೆಯು ಗ್ರಾಮವಾಸಿಗಳಲ್ಲಿ ವಿಶೇಷ ಆತುರ, ಚಟುವಟಿಕೆಗಳನ್ನು ನಿರ್ಮಿಸಿದೆ. ರಾಷ್ಟ್ರದ ಇಂದಿನ ಪ್ರಾಮುಖ್ಯ ಪ್ರಶ್ನೆಯೇ ಆಹಾರ ಸಮಸ್ಯೆಯೆಂಬುದು ನಿರ್ವಿವಾದ. ಅದರಲ್ಲೂ ಹಳ್ಳಿಗಳಲ್ಲಿ ಇದರ ಪ್ರಭಾವ ಮತ್ತು ಉದರ ಸಂಬಂಧದ ಪ್ರಲಾಪ ಸರ್ವವ್ಯಾಪಿಯಿದೆ. ಆದ್ದರಿಂದಲೇ 'ಹಳ್ಳೀ ಹಸುಗೆ ಪದ್ಧತಿ ರದ್ದಾಯಿತು' ಎಂಬ ವಾರ್ತೆಯು ಅತ್ಯಂತ ಪ್ರಾಮುಖ್ಯ ಸುದ್ದಿಯಾಗಿ ಹಳ್ಳೀ ಜನ ಜೀವನವನ್ನೇ ಒಮ್ಮೆಗೊಂದಿಷ್ಟು ಬದಲಾಯಿಸಿದೆ. ಹಸುಗೇ ರದ್ಧತಿಯ ಹಿತಾಹಿತದ ಕುರಿತು ಗ್ರಾಮಸ್ಥರಲ್ಲಿ ಏಮ್ಮತವಿರುವಂತಿಲ್ಲ; ಹಸುಗೇ ಪದ್ಧತಿಯನ್ನು ತೆಗೆದು ಹಾಕಿದ ಮೇಲೆ, ಆಹಾರ ಸ್ಥಿತಿಯು ಹಾಳಾಗದಂತೆ ನೋಡುವ ವಿಶೇಷ ಜಾಗರೂಕತೆಯನ್ನು ಸರಕಾರವು ವಹಿಸದಿದ್ದರೆ ಈ ರದ್ಧತಿಯು ಸುಖವನ್ನೊದಗಿಸಬಹುದೆಂದು ಭರವಸೆ ಪಡುವುದು ಅಸಾಧ್ಯ. ಹೀಗಿದ್ದರೂ ಒಟ್ಟಿನ ಮೇಲೆ, ಅತ್ಯಧಿಕ ಸಂಖ್ಯೆಯ ಹಳ್ಳಿಗರು ಈ ಹಸುಗೇ ರದ್ಧತಿಯನ್ನು ಸ್ವಾಗತಿಸುತಿದ್ದಾರೆಂಬುದು ನಿಜ. ಹಳ್ಳೀ ಹಸುಗೆಯು ಬದುಕಿರುವಾಗ ಅದು ಹಳ್ಳಿಗಂಗೆ ಕೊಟ್ಟಿದ್ದ ಉಪದ್ರವಗಳ ಅನುಭವವೇ ಹಳ್ಳಿಗರು ಅದರ ಸಾವನ್ನು ಹಾರೈಸುವಂತೆ ಮಾಡಿದೆ, ಹೊರತು ಅದರ ಸ್ಥಾನಕ್ಕೆ ಬರುವಂತಹ ವ್ಯವಸ್ಥೆಯು ಸುಖಕರವಾದೀತೆಂಬ ವಿಶ್ವಾಸದಿಂದೇನೂ ಅಲ್ಲ.

ಭಾರತದ ಎಲ್ಲಾ ಸಂಸ್ಥಾನಗಳ ಆಹಾರ ಮಂತ್ರಿಗಳ ಸಮ್ಮೇಳನವು ಕೇಂದ್ರ ಆಹಾರ ಮಂತ್ರಿ ಶ್ರೀ ಕೆ. ಎಮ್., ಮುನ್ಶಿಗಳ ನೇತೃತ್ವದಲ್ಲಿ ಮೊನ್ನೆ ಬೊಂಬಾಯಿಯಲ್ಲಿ ಸೇರಿದಾಗ, ಹಳ್ಳೀ ಹಸುಗೆ ಬರ್ಖಾಸ್ತುಗೊಳಿಸುವ ಕುರಿತು ಅಲ್ಲಿ ಸವಿವರ ಚರ್ಚೆ ನಡೆದಿತ್ತೆಂದು ತಿಳಿದುಬಂದಿದೆ. ಮದ್ರಾಸ್ ಸರಕಾರವಂತೂ ಆ ಸಮ್ಮೇಳನದ ಪೂರ್ವಭಾವಿಯಾಗಿ 'ಹಳ್ಳೀ ಹಸುಗೆ ರದ್ಧತಿ'ಯ ಕುರಿತು ತನಗಿರುವ ಆಸಕ್ತಿಯನ್ನು ಜಾಹೀರು ಮಾಡಿದ್ದಿತು. ಆದರೆ ಬೊಂಬಾಯಿ ಸಮ್ಮೇಳನವು ಈ ಸಂಬಂಧವಾಗಿ ಅಖಿಲ ಭಾರತ ಧೋರಣೆಯೊಂದನ್ನು ರೂಪಿಸಲು ಅಸಮರ್ಥವಾಯಿತು. ಗ್ರಾಮಾಂತರಗಳ ಆಹಾರ ಹಸುಗೇ ರದ್ಧತಿಯ ಅಧಿಕಾರವನ್ನು ಆಯಾಯ ಸಂಸ್ಥಾನೀ ಸರಕಾರಗಳಿಗೇನೇ ಅಲ್ಲಿ ಬಿಟ್ಟು ಕೊಡಲಾಯಿತು. ಪ್ರಚಲಿತ ಆಹಾರ ವ್ಯವಸ್ಥೆಯನ್ನು ಬಲವಾಗಿ ಕುಲುಕಿಸುವಂತಾಗದಿದ್ದರೆ ಸರಿ, ಹೊರಗಿನಿಂದ ಹೆಚ್ಚಿನ ಆಹಾರಾಮದುಗಳನ್ನು ಅಪೇಕ್ಷಿಸದಿದ್ದರಾಯಿತು, ಸಂಸ್ಥಾನೀ ಸರಕಾರಗಳು ತಮ್ಮ ಹೊಣೆಗಾರಿಕೆಯಿಂದ ತಮ್ಮ ಸಂಸ್ಥಾನದೊಳಗಡೆ ಗ್ರಾಮದ ಹಸುಗೇ ಪದ್ಧತಿಯನ್ನು ತೆಗೆದು ಹಾಕಿಕೊಳ್ಳಬಹುದು, ಎಂದು ಬೊಂಬಾಯಿ ಸಮ್ಮೇಳನವು ನಿರ್ಧರಿಸಿದ್ದಿತು. ಅದಕ್ಕನುಸಾರವಾಗಿ ಮದ್ರಾಸ್ ಸರಕಾರವು ಹಳ್ಳೀ ವಲಯಗಳ ರೇಶನಿಂಗ್ ಪದ್ಧತಿಯನ್ನು ಅನುಕ್ರಮವಾಗಿ ರದ್ದುಪಡಿಸಲು ನಿರ್ಧರಿಸಿದೆ. ಉಳಿತಾಯದ ಜಿಲ್ಲೆಗಳು—ಕೊರತೆ ಬೀಳುವ ಜಿಲ್ಲೆಗಳು—ಸಂಪೂರ್ಣವಾಗಿ ಹೊರಗಿನ ಆಮದುಗಳನ್ನೇ ಅವಲಂಬಿಸಿರುವ ಜಿಲ್ಲೆಗಳು, ಎಂದು ಜಿಲ್ಲಾವಾರು ತರಗತಿಗಳನ್ನು ಮಾಡಲಾಗುವದು. ಈ ಪೈಕಿ ಉಳಿತಾಯದ ಜಿಲ್ಲೆಗಳಲ್ಲಿ ಹಳ್ಳೀ ರೇಶನ್ ರದ್ದಾದರೂ ಧಾನ್ಯ ಸಂಗ್ರಹ ಕ್ರಮವು ಯಥಾಪ್ರಕಾರ ಸಾಗುವುದು; ಅಭಾವವಿರುವ ಜಿಲ್ಲೆಗಳಲ್ಲಿ ಧಾನ್ಯ ಸಂಗ್ರಹಿಸುವುದನ್ನು ಹಳ್ಳೀ ಹಸುಗೆ ರದ್ಧತಿಯೊಂದಿಗೇನೇ ರದ್ದುಪಡಿಸಿಕೊಳ್ಳಲಾಗುವುದು. ಕೊರತೆಯಿರುವ ಭಾಗಗಳು ಸ್ವಾವಲಂಬನಾ ಸುಧಾರಣೆಗೊಂಡು, ಹಸುಗೆ ರದ್ಧತಿಗವಕಾಶವೊದಗಿಸುವ ವರೆಗೂ ಅಂತಹ ಕ್ಷೇತ್ರಗಳಿಗೆ ಹೊರಗಿನಿಂದ ಆಹಾರ ಧಾನ್ಯಗಳ ಸರಬರಾಯಿಯಾಗುವುದು. ಈ ನಿಯಮಾನುಸಾರವಾಗಿ, ಅತಿ ಹೆಚ್ಚಿನ ಅಭಾವವಿರುವ ಮಲಬಾರು ಮತ್ತು ನೀಲಗಿರಿ ಜಿಲ್ಲೆಗಳಲ್ಲಿ 'ಹಸುಗೇ ಕ್ರಮ'ವನ್ನು ಈಗಿನಂತೆ ಇನ್ನೂ ಊರ್ಜಿತದಲ್ಲಿಡಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯನ್ನು ಆಹಾರ ಸ್ವಾವಲಂಬಿ ಜಿಲ್ಲೆಯೆಂದು ಗಣಿಸಲಾಗಿದೆ. ಇಲ್ಲಿಗೆ ಹೊರಗಿನ ಧಾನ್ಯ ಆಮದಾಗಲೀ, ಇಲ್ಲಿಂದ ಹೊರಗೆ ರಫ್ತಾಗಲೀ ನಡೆಯದು—ಹಳ್ಳೀ ಹಸುಗೆ ರದ್ದಾಗುವುದು. ಕ್ರಮಬದ್ಧ ಹಸುಗೇ ಕ್ಷೇತ್ರಗಳಾಗಿರುವ ಎಲ್ಲೆಡೆಯ ನಗರಗಳಲ್ಲೂ ಹಸುಗೆಯುಳಿಯುವುದು. ಮುನಿಸಿಪಾಲಿಟಿಗಳಿರುವ ಎಲ್ಲಾ ಕ್ಷೇತ್ರಗಳನ್ನೂ ಕ್ರಮಬದ್ಧ ಹಸುಗೇ ಕ್ಷೇತ್ರಗಳಾಗಿ ಗಣಿಸಲಾಗುವುದು. ಈ ನವವ್ಯವಸ್ಥೆಗನುಸಾರವಾಗಿ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಮಂಗಳೂರು ಮತ್ತು ಉಡುಪಿಯನ್ನು ಬಿಟ್ಟರೆ, ಮಿಕ್ಕೆಲ್ಲಾ ಕಡೆಗಳಲ್ಲೂ ಹಸುಗೇ ನಿರ್ಬಂಧ ರದ್ದಾಗುವುದು. ರದ್ಧತಿ ಪುನರ್ವ್ಯವಸ್ಥೆಯು ಜನವರಿಯಲ್ಲಿ ಆರಂಭಿಸಿ, ಫೆಬ್ರವರಿಯಲ್ಲಿ ಪೂರ್ಣಗೊಳ್ಳಲಿದೆ. ಸರಕಾರವೀ ಕುರಿತು ಅತ್ಯಂತ ಜಾಗರೂಕತೆಯಿಂದ ಹೆಜ್ಜೆಯಿಡಬೇಕೆಂದು ಸಂಕಲ್ಪಿಸಿದೆ. ಹಳ್ಳೀ ಹಸುಗೇ ಬರ್ಖಾಸ್ತಿಗೆ ಅಗತ್ಯ ಬೀಳುವ ಸ್ಥಿತಿಗತಿ ಮತ್ತು ಅಂಕೆಸಂಖ್ಯೆಗಳನ್ನು ಸಂಗ್ರಹಿಸಿಕೊಳ್ಳುವಂತೆ ಮದ್ರಾಸ್ ಸರಕಾರವು ಪ್ರತಿಯೊಂದು ಜಿಲ್ಲಾ ಕಲೆಕ್ಟರರಿಗೆ ಆಜ್ಞಾಪಿಸಿದ್ದು ಆ ಸಂಬಂಧದ ಕೆಲಸಗಳಾಗುತ್ತಿವೆ.

ಮದ್ರಾಸಿನ ಆಹಾರ ಮಂತ್ರಿಗಳೇ ಹೇಳಿರುವಂತೆ, ಆಹಾರ ಹಸುಗೆಯ ದೆಸೆಯಿಂದ ಸರಕಾರವು ಕೇಳಿರುವ ದೂರುಗಳು ಅತಿರೇಕ, ಹಾಗೂ ಅನ್ಯೋನ್ಯ ಸಂಬಂಧವಿಲ್ಲದವುಗಳೇ. ಸರಿಯಾಗಿ ಧಾನ್ಯ ಸಂಗ್ರಹಿಸಿಕೊಳ್ಳದೆ ಕಳ್ಳಸಂತೆ ವಹಿವಾಟುಗಳಿಗೆ ಆಸ್ಪದವೀಯುತ್ತಾರೆ ಎಂಬ ದೂರು ಒಂದು ಕಡೆಯಿಂದ ಬರುವಾಗ, ಸರಕಾರೀ ಅಧಿಕಾರಿಗಳ ಧಾನ್ಯ ಸಂಗ್ರಹ ವಿಧಾನಗಳ ಕಠೋರತೆಯು ಅಸಹ್ಯವಿದೆಯೆಂಬ ಆರೋಪ ಮತ್ತೊಂದೆಡೆಯಿಂದ ಇದ್ದೇ ಇದೆ. ಸರಕಾರೀ ಧೋರಣೆಯು ಲಗುವಾಯಿತೆನ್ನುವವರಿರುವಾಗಲೇ ಅದು ಬಿಗುವಾಯಿತೆನ್ನುವವರೂ ಇದ್ದೇ ಇದ್ದಾರೆ; ಸರಕಾರದ ಧೋರಣೆ, ವರ್ತನೆಗಳು ಸರಿಯಾಗಿವೆ, ಎಂದು ಶ್ಲಾಘಿಸುವವರು ಮಾತ್ರ ಇಲ್ಲವೆನ್ನಬಹುದು. ಹಳ್ಳೀ ಹಸುಗೆಯನ್ನು ಕಿತ್ತುಹಾಕಿ, ಸರಕಾರವಿಂತಹ ಕತ್ತರೀ ದೂರುಗಳಿಂದ ಪಾರಾಗುವಂತಾಯಿತೆಂಬುದು ನಿಜ. ಇಷ್ಟರಲ್ಲೇ ಆಗಿರುವ ಸಂಗ್ರಹಗಳಿಂದ, ಮತ್ತು ಇನ್ನು ವಂತಿಗೇ ವಿಧಾನದಿಂದ ಎತ್ತಬಹುದಾದ ಧಾನ್ಯಗಳಿಂದ ಕೆಲವೇ ನಗರಗಳ ಹಸುಗೆಯನ್ನು ಪೂರೈಸುವ ಹೊಣೆಯನ್ನಷ್ಟೇ ನಿರ್ವಹಿಸಿ, ಗ್ರಾಮಗಳ ಭವಿಷ್ಯವನ್ನು ಗ್ರಾಮಸ್ಥರ ಕೈಯಲ್ಲೇ ಬಿಡುವ ಈ ಹೊಸ ಹೆಜ್ಜೆಯ ಮೂಲಕ ಸರಕಾರದ ತಲೆಯ ಮೇಲಿನ ಭಾರವೇನೋ ಇಳಿಯಿತು. ಆದರೆ ಹಳ್ಳೀ ಹಸುಗೆ ರದ್ಧತಿಯು ಸರ್ವಸಾಮಾನ್ಯ ಹಿತವನ್ನು ಸಾಧಿಸಿತು—ಸಾರ್ವತ್ರಿಕ ಸುಖಸಂತೋಷವನ್ನು ಒದಗಿಸಿತು—ಎಂದಾಗಬೇಕಾದರೆ ಕೆಲವು ಪ್ರಾಮುಖ್ಯ ಸತ್ಪರಿಣಾಮಗಳು ಕಂಡುಬರಬೇಕು. ಮುಂದಿನ ಮಳೆಗಾಲ ದಾಟುವ ವರೆಗೂ ಹಳ್ಳಿಯಲ್ಲಿ ಯಾರೊಬ್ಬರೂ ಉಪವಾಸ ಬೀಳದಂತೆ—ಆಹಾರ ಧಾನ್ಯಗಳ ಕಳ್ಳಸಂತೆ ವ್ಯಾಪಾರ ಮತ್ತು ಅಮಿತ ಧಾರಣೆಯಾಗದಂತೆ—ಸಾಕಷ್ಟು ಆಹಾರ ಧಾನ್ಯಗಳು ಗ್ರಾಮವಹಿವಾಟು ರಂಗದಲ್ಲಿ ಕಂಡುಬರಬೇಕು. 1952ನೇ ಆದಿ ಭಾಗದಲ್ಲಿ ರಾಷ್ಟ್ರವು ಆಹಾರ ಸ್ವಾವಲಂಬಿಯಾಗುವಂತೆ ಅಧಿಕಾಹಾರ ಬೆಳವಣಿಗೆಗೆ ಕೃಷಿಕರಲ್ಲಿ ಸ್ಫೂರ್ತಿತುಂಬುವಂತಾಗಬೇಕು. ಇಂತಹ ಪ್ರಗತಿಯನ್ನು ಸಾಧಿಸುವಂತಿದ್ದರೆ ಮಾತ್ರ ಸದ್ಯದ ಬದಲಾವಣೆಯಿಂದ ಹಿತವಾದೀತು. ಬದಲಿಗೆ ಆಹಾರ ಧಾನ್ಯಗಳ ದಾಸ್ತಾನಿರುವ ಈ ಕಾಲದಲ್ಲಿ ಎಲ್ಲರೂ ಮನಸ್ವೇಚ್ಛೆ ಉಂಡಾಡುವಂತೆ—ಇದುವರೆಗೆ ಕಷ್ಟವಾಗಿದ್ದ ಅಕ್ಕಿ ಬತ್ತ ಮಜೂರಿಯ ದುಡಿಮೆಯು ಇನ್ನು ಸುಲಭದಲ್ಲೊದಗುವಂತೆ—ತಾತ್ಕಾಲಿಕ ಸುಖಗಳನ್ನಷ್ಟೇ ಸಾಧಿಸಿ, ಆಹಾರ ಧಾನ್ಯಗಳು ದುಂದುವ್ಯಯವಾಗುವಂತೆ ಮಾಡಿ ಕೊನೆಯ ಅವಧಿಯಲ್ಲಿ, ವಿಶೇಷತಃ ಮಳೆಗಾಲದಲ್ಲಿ, ಕೆಲವೇ ಮಂದಿ ಕಳ್ಳಸಂತೆಯಿಂದ ಹಣಗಳಿಸಿ, ಸಾಮಾನ್ಯ ಬಹಜನರು ಉಪವಾಸ ಬೀಳುವಂತಾದರೆ ಮಾತ್ರ ಈ ಹೊಸ ಹೆಜ್ಜೆಯು ಜನತೆಯ ಪಾಲಿಗೊಂದು ಮಹಾಶಾಪವಾಗಿ ಪರಿಣಮಿಸಬಹುದು. ಸರಕಾರವು ಅಗತ್ಯವುಳ್ಳ ಜಾಗರೂಕತೆ ವಹಿಸಿ, ಹಾಗಾಗದಂತೆ ನೋಡಿಕೊಳ್ಳುವದೆಂದು ಹಾರೈಸುತ್ತೇವೆ.

ಮೆನೇಜರರ ನೋಟೀಸು

ನಾವು ವರ್ಷಕ್ಕೊಂದು ವಾರ ರಜೆ ಪಡೆವ ಪದ್ಧತಿಯಂತೆ ಬರುವ ವಾರದ (ತಾರೀಕು 4—1—1951ರ) 'ನವಯುಗ' ಸಂಚಿಕೆಯು ಹೊರಡುವುದಿಲ್ಲ. ತಾ. 11-1-1951ರ ಸಂಚಿಕೆಯು ಕ್ರಮಪ್ರಕಾರ ಪ್ರಕಟವಾಗುವುದು. ಮುಂದೆ 'ನವಯುಗ'ದಲ್ಲಿ ಸಾಧ್ಯವಾದಷ್ಟು ಸುಧಾರಣೆಗಳನ್ನು ಮಾಡಲಾಗುವುದು.

—ಮೆನೇಜರ್

[೫ನೇ ಪುಟದಿಂದ ಮುಂದರಿಸಿದ್ದು]

ರೆ ಅಂತಹದಾಗದಂತೆ ನೆಹರು ಜಾಗರೂಕತೆ ವಹಿಸುವವರೇ. ಮೌಲಾನಾ ಆಜಾದರು ಘನವ್ಯಕ್ತಿ; ಆದರೆ ಗೃಹಖಾತೆಯಂತಹ ಸಮಸ್ಯಾತ್ಮಕ ಹೊಣೆಗಾರಿಕೆಯನ್ನು ಹೊರಲು ಸಮರ್ಥರೆನ್ನಲಾಗುವುದಿಲ್ಲ. ಹಾಗಾದರೆ ಹೇಗೆ? ಮೌಲಾನಾ ಆಜಾದರನ್ನು ಈಗಿನಂತೆಯೇ ಸುಲಭದ ವಿದ್ಯಾಮಂತ್ರಿಯಾಗಿಯೇ ಇಟ್ಟು, ಮರ್ಯಾದೆಗಾಗಿ ಉಪಪ್ರಧಾನ ಮಂತ್ರಿಯಾಗಿ ಮಾಡಿ, ರಾಜಾಜಿಯನ್ನು ಗೃಹ ಮತ್ತು ಸಂಸ್ಥಾನಗಳ ಸಚಿವನನ್ನಾಗಿ ಮಾಡುವರೆ? ಉಪಪ್ರಧಾನಿಯಾಗುವವನು ನೆಹರೂ ಗೈರುಹಾಜರಿಯಲ್ಲಿ ಪ್ರಧಾನಿಯಾಗಿ ಕೆಲಸ ಮಾಡಬೇಕಾಗಿದೆ; ಲಂಡನಿನಲ್ಲಿ ಸೇರಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಧಾನಿ ನೆಹರೂಗಳು ಜನವರಿ ತಾ. 2ಕ್ಕೆ ಲಂಡನಿಗೆ ಹೋಗಲಿದ್ದಾರೆ; ಅವರಿಲ್ಲದ ಅವಧಿಯಲ್ಲಿ ಭಾರತದ ಪ್ರಧಾನ ಮಂತ್ರಿಯ ಭಾರ ಹೊತ್ತು ನಿಲ್ಲಲು ಸ್ಥೂಲ ಪ್ರಕೃತಿ ಮತ್ತು ಸ್ವಭಾವದ ಮನುಷ್ಯ ಮೌಲಾನರಿಂದಾದೀತೆ? ಇವೆಲ್ಲಾ ಪ್ರಶ್ನೆ ಪರ್ಯಾಲೋಚನೆಗಳು ಈಗ ಸುಳಿದಾಡುತ್ತಿವೆ. ಹೊಸ ವರುಷದ ಎರಡನೇ ದಿನದಲ್ಲಿ ದೇಶ ಬಿಡಬೇಕಾಗಿರುವ ಶ್ರೀ. ಜವಾಹಿರಲಾಲ ನೆಹರೂಗಳು ಸರ್ದಾರರದಾಗಿದ್ದ ಖಾತೆಗಳಿಗಾರುಗತಿ, ಎಂಬುದನ್ನು ಈ ದಿನಗಳಲ್ಲೇ ಪ್ರಕಟಿಸಬಹುದು.

ಅಧಿಕಾರರಂಗದ ಮಾತು ಹೀಗಾಯಿತು. ಈ ಕಾಲದಲ್ಲಿ ಶಾಸನ ಸಭಾ ಕಾರ್ಯಕ್ರಮಗಳೇ ಪ್ರಾಮುಖ್ಯವಿರುವಾಗ, ಎಲ್ಲಾ ಪ್ರಾಂತಿಕ ಕಾಂಗ್ರೆಸ್ ಸರಕಾರಗಳನ್ನು ಮತ್ತು ಪಕ್ಷಗಳನ್ನು ಶಿಸ್ತುಬದ್ಧ ಹಿಡಿತದಲ್ಲಿಟ್ಟುಕೊಂಡು, ಎಲ್ಲಿಯೂ ಎಂದೂ ಹಾದಿ ತಪ್ಪದಂತೆ ನಡೆಸುತ್ತಿದ್ದ ಸರ್ದಾರರೀಗ ಕಾಣೆಯಾಗಿರುವುದರಿಂದ ಇನ್ನು ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಅಧ್ಯಕ್ಷನಾರು, ಎಂಬ ಪ್ರಶ್ನೆಯಿದೆ. ಅಂತಹ ನ್ಯಾಯನಿಷ್ಠುರಿ ಸರ್ದಾರರಿರುವಾಗಲೂ ಕ್ರಮಶಃ ಸಡಿಲುಬೀಳುತ್ತಾ ಬಂದಿರುವ ಕಾಂಗ್ರೆಸ್ ಪಕ್ಷಗಳು ಇನ್ನು ಹೇಗಾಗುವವೋ ಎಂಬ ಭೀತಿಯೇಳುತ್ತಿದೆ. ಒಬ್ಬ ಸರ್ದಾರರನ್ನು ಕಳಕೊಳ್ಳುವ ಮೂಲಕ ಹಲವನ್ನು ಕಳಕೊಂಡೆವು; ಹಲವರೊಂದಾಗಿಯಾದರೂ ಆ ಒಬ್ಬನ ಕಾರ್ಯವನ್ನು ನಿರ್ವಹಿಸುವುದು ಅಸಾಧ್ಯವೆ? ನಿರ್ವಹಿಸುವುದು ಬೇಡವೆ?

ದ. ಕನ್ನಡ
ಮಂಗಳೂರು

ಗೋಸಂರಕ್ಷಣೆ— ಇದೇ ತಾ. [illegible]ರಲ್ಲಿ ಮಂಗಳೂರಿನ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕಸಭೆಯು ಜನಾಬ್ ಎಮ್. ಅಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಗೋಹತ್ಯಾ ನಿವಾರಣೆ ಹಾಗೂ ಸಂರಕ್ಷಣೆಗಳ ಕುರಿತು ಕೇರಳದಿಂದ ಬಂದಿದ್ದ ಶ್ರೀ ಕಂಡೊ[illegible]ವರು ಭಾಷಣವಿತ್ತರಲ್ಲದೆ ಗೋವುಗಳನ್ನು ಮಾಂಸಕ್ಕಾಗಿ ಕಡಿಯುವುದನ್ನು ನಿಲ್ಲಿಸಬೇಕೆಂದು ಮದ್ರಾಸು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು. ಗೋಸಂರಕ್ಷಣೆ ಹಾಗೂ ಗೋಹತ್ಯಾ ನಿವಾರಣೆಗಾಗಿ ಎರಡು [illegible]ಟಿಗಳ ರಚನೆಯಾಯಿತು

ವಿಮಾನ ನಿಲ್ದಾಣ— ಮಂಗಳೂರಲ್ಲಿ ವಿಮಾನ ನಿಲ್ದಾಣದ ಕಾರ್ಯವು ಮುಂದಿನ [illegible]ಗಳಿಂದ ಆರಂಭವಾಗುವುದೆಂದು ಪ್ರಕಟಿಸಿದೆ. ಏಳುಲಕ್ಷ ರೂಪಾಯಿಗಳ ಈ ಕೆಲಸ ಪೂರೈಕೆಗೆ ಎರಡು ವರುಷ ಬೇಕಾಗಬಹುದಂತೆ.

ನಗರ ಸಭೆಯ ವಿಶೇಷ ಸಭೆಯು ಇದೇ ತಾ. 19ರಲ್ಲಿ ಶ್ರೀ ಎಲ್. ಸಿ. ಪಾಯಿ[illegible] ಅಧ್ಯಕ್ಷತೆಯಲ್ಲಿ ಜರಗಿದಾಗ 1950-51ನೇ [illegible]ದ ಮುಂಗಡ ಪತ್ರ ಚರ್ಚಿಸಲ್ಪಟ್ಟಿತು. ಆ ಸಂದರ್ಭದಲ್ಲಿ ಭಾಷಣಮಾಡಿದ ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ, ಬಿ. [illegible]. ಭಾಸ್ಕರ ರೈ, ಎಸ್. ನರ್ಸಪ್ಪಯ್ಯ ಮೊದಲಾದವರು ಆರೋಗ್ಯಖಾತೆಯು ನಗರ[illegible]ಯ ಉದ್ದೇಶಗಳಿಗೆ ವಿರೋಧವೆಂಬಂತೆ ವರ್ತಿಸುವುದು ಶೋಚನೀಯವೆಂಬುದನ್ನು ಸದಸ್ಯರ್ನಗಳೊಂದಿಗೆ ತಿಳಿಸಿದರು.

ಪ್ರಗತಿಮಂಡಲದ ಉದ್ಘಾಟನೆ ಕಳೆದ ತಾ. 17ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಹಸ್ತದಿಂದ ನಡೆಯಿತು. ಡಾ। ಎಮ್. ಎಸ್. ಶಾಸ್ತ್ರಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು. ಕಾರ್ಯದರ್ಶಿ ಎಮ್. ರಾಮಪ್ಪನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಅಡಿಗರು ತಮ್ಮ [illegible]ಣದಲ್ಲಿ ಮಂಡಳಿಯು ಬರೇ ಭಾಷಣಗಳನ್ನು ಮಾಡಿಸುವುದರಲ್ಲೇ ತೃಪ್ತಿಪಡದೆ ಸಾಮಾಜಿಕ ಕಾರ್ಯವೆಸಗಬೇಕೆಂದು ಸೂಚಿಸಿದರು. ಶ್ರೀ ಕೆ. ಶಿವರಾಮ ಕಾರಂತರು ಮಾತನಾಡುತ್ತ ಜನತೆಯ ಸುಧಾರಣೆಮಾಡುವವರು ಜನತೆಯ ಜಾಡ್ಯವನ್ನು ತಿಳಿಯ[illegible]

ಬೇಕಾಗಿದ್ದಾರೆ

[illegible]ರೂರು ವಿಷ್ಣುಮೂರ್ತಿ ಎಯಿಡೆಡ್ [illegible]ಮೆಂಟರಿ ಶಾಲೆಯಲ್ಲಿ ಯೋಗ್ಯ ರೀತಿ[illegible] ವೇತನದಲ್ಲಿ ಕೆಲಸಮಾಡುವರೆ [illegible]ಯರ್ ಗ್ರೇಡ್ ತರಬೇತಾದ ಉಪಾಧ್ಯಾಯ[illegible]ಮ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಕೆಳಗಿನ [illegible]ಕ್ಕೆ ಬರೆದು ಯಾ ಮುಖತಃ ಭೆಟ್ಟಿಯಾಗಿ ತಿಳಿದುಕೊಳ್ಳಬಹುದು.

[illegible]ಂ. ಪಟ್ಟಾಭಿರಾಮರಾವ್, ಟೀಚರ್ [illegible]ರ್, ಶ್ರೀ ವಿಷ್ಣುಮೂರ್ತಿ ಎಯಿಡೆಡ್ [illegible]ಲಿಮೆಂಟರಿ ಶಾಲೆ, ಆರೂರು, ಪೋಸ್ಟು [illegible]ಲು, ದ. ಕ.

ಯಂತ್ರ ಸಾಮಗ್ರಿ

[illegible] ದೊಡ್ಡ ಉದ್ಯೋಗಗಳಿಗೆ [illegible]ದ ಇಂಜಿನ್, ರ್‍ಯಾಕಮಿಲ್, [illegible]ಮಿಲ್, ಆಯಿಲ್ ಮಿಲ್ [illegible]ಗಳ ಬಗ್ಗೆ ಉತ್ಕೃಷ್ಟಸಂಗ್ರಹ.

Vijay Engineering Co. Ltd.,
Bombay—10

ಬೇಕೆಂದೂ ತ್ರೀ[illegible] ದೇಶದಲ್ಲೇ ಮಾಡಿದ [illegible]ಕೆ ಕೈಗಾರಿಕೆ ಒಲ್ಲೆ ಮಾಡಿದರೆ ಸರಿಯಾಗದೆಂದೂ ಹೇಳಿದರು. ಅಲ್ಲದೆ ಮಾದರಿಯ ಮನು ಸ್ವಾನುಭವದಿಂದಲೇ ಕಾರ್ಯನಡೆಸಬೇಕೆಂದೂ ಅದಕ್ಕೆ ಬೇಕಾದ ಅಭ್ಯಾಸ ಅಗತ್ಯವೆಂದೂ ತಿಳಿಸಿದರು. ನಂತರ ಅಧ್ಯಕ್ಷರ ಭಾಷಣವಾಗಿ ಪಟೇಲರ ನಿಧನಕ್ಕೆ ದುಃಖ ಸೂಚಿಸಲಾಯಿತು.

ಅಖಿಲಭಾರತ ಚರಕಾ ಸಂಘದ ಸಂಘಟಕರಾದ ಶ್ರೀ ಎನ್. ಆರ್. ಸೋಹಾನಿ ಮತ್ತು ಕನುಗಾಂಧಿಯವರು ಇದೇ ತಾ. 21ರಲ್ಲಿ ಮಂಗಳೂರಿಗೆ ಬಂದರು. ಸಂಜೆ ಕೊಡಿಯಾಲಬೈಲಿನ ಬೆಸೆಂಟ್ ಮಂದಿರದಲ್ಲಿ ಚರಕಾಸಂಘದ ಪಿಚಾರವಾಗಿ ಶ್ರೀ ಸೋಹಾನಿಯವರು ಭಾಷಣವಿತ್ತರು. ಶ್ರೀ ಎಚ್. ನಾರಾಯಣರಾಯರು ಅತಿಥಿಗಳನ್ನು ಸ್ವಾಗತಿಸಿದರು.

ಜಿಲ್ಲಾ ಆಹಾರ ಸಮಿತಿ ಸಭೆಯು ಇದೇ ತಾ. 21ರಲ್ಲಿ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿತು. ಜಿಲ್ಲಾ ಪೂರೈಕೆ ಅಧಿಕಾರಿಗಳು ಇದೇ ತಾ. 16ರಲ್ಲಿ ಜಿಲ್ಲೆಯಲ್ಲಿರುವ ಆಹಾರ ಧಾನ್ಯಗಳ ತಪಶೀಲನ್ನು ತಿಳಿಸಿದರು. ಹಳ್ಳಿಗಳಲ್ಲಿ ರೇಶನ್ ರದ್ದುಗೊಳಿಸಬೇಕೆಂಬ ಡಾ। ಎಚ್. ವಿ. ಅಡಪ್ಪರ ನಿರ್ಣಯ ಪಾಸಾಯಿತು.

ಹಿರಿಯಡಕ— ಇಲ್ಲಿಯ ಹೈಸ್ಕೂಲ್ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ಇದೇ ತಾ. 22ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರು ನೆರವೇರಿಸಿದರು. ಶ್ರೀ ಪುತ್ತಿಗೆ ಮಠದ ಚಿಕ್ಕ ಪೀಠಾಂಕಿತ ಶ್ರೀಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮಕ್ಕಳಿಂದ ದೇವತಾ ಪ್ರಾರ್ಥನೆ, ಸ್ವಾಗತ ಗೀತೆಯಾದೊಡನೆ ಸರ್ದಾರ ಪಟೇಲರ ನಿಧನದ ಬಗ್ಗೆ ದುಃಖ ಸೂಚಿಸಲಾಯಿತು. ಶಾಲಾ ಹೆಡ್ಮಾಸ್ತರ್ ಶ್ರೀ ಅನಂತಕೃಷ್ಣ ಸಾಮುಗರು ಸಭಾಧ್ಯಕ್ಷ ಮೊದಲಾದವರಿಗೆ ಹೂವಿನ ಮಾಲೆಗಳನ್ನರ್ಪಿಸಿದರು. ಹಿರಿಯಡಕ ಎಜ್ಯುಕೇಶನಲ್ ಸೊಸೈ[illegible]ಟಿಯ ಕಾರ್ಯದರ್ಶಿ ಡಾ। ಚಂದಪ್ಪ ಹೆಗ್ಗಡೆಯವರು ಸ್ವಾಗತ ಭಾಷಣಮಾಡಿದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಮಾತನಾಡುತ್ತ ಬರುವ ಎಪ್ರಿಲ್ ಯಾ ಮೇ ತಿಂಗಳೊಳಗಾಗಿ ಕಟ್ಟೋಣ ಕೆಲಸವು ಪೂರ್ಣವಾಗಬೇಕೆಂದು ಸೂಚಿಸಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಪೊಳಲಿಬೆಟ್ಟು ರಾಮರಾವ್, ಶ್ರೀ ಬಿ ಎಸ್ ಭಾಸ್ಕರ ರೈ, ಪಂಡಿತ ಸುಬ್ರಹ್ಮಣ್ಯಾಚಾರ್ಯರೇ ಮೊದಲಾದವರು ಸಾಂದರ್ಭಿಕ ಮಾತುಗಳನ್ನಾಡುತ್ತಾ ಕಟ್ಟಡ ಪೂರ್ಣತೆಗೆ ಸರ್ವರೂ ಶಕ್ತಿಮೀರಿ ಧನಸಹಾಯ ನೀಡಬೇಕೆಂದು ವಿನಂತಿಸಿದರು. ಶ್ರೀ ಅಂತಪ್ಪ ಶೆಟ್ಟಿಯವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಹಾಜರಿದ್ದವರೆಲ್ಲರಿಗೂ ಸಿಹಿತಿಂಡಿ ಹಣ್ಣು ವಿತರಣೆಯಾಯಿತು. ಸಮಾರಂಭದ ಪೂರ್ವದಲ್ಲಿ ಶ್ರೀ ಪುತ್ತಿಗೆ ಮಠದಲ್ಲಿ ಜಿಲ್ಲಾಧಿಕಾರಿಗಳಿಗೂ ಇತರರಿಗೂ ಸಭಾಧ್ಯಕ್ಷರು ಟೀಪಾರ್ಟಿ ವ್ಯವಸ್ಥೆಮಾಡಿದ್ದರು.

ಶಿರ್ವ— ಸಂಚ್ಯಾರ್ಟ್ ಜೋರ್ಜಿನ ಸಭಾಭವನದಲ್ಲಿ [illegible] ತಾ. 22-12-50ರಲ್ಲಿ ಶ್ರೀ ಯುಸ್. ಅಂಜಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸೇರಿ ಸರ್ದಾರ್ ವಲ್ಲಭಭಾಯಿ ಪಟೇಲರ ನಿಧನದ ಬಗ್ಗೆ ದುಃಖಸೂಚಕ ಠರಾವನ್ನು ಮಂಜೂರು ಮಾಡುವ, ಗ್ರಾಮಸ್ಥರಿಗೆ ಹೆಚ್ಚಿನ ಆವಶ್ಯಕತೆಯಿದ್ದ ಶಿರ್ವ ಸೂಡಿಗಳ ರಸ್ತೆ ಕಡಿಸುವರೆ ಹಣ ಮಂಜೂರು ಮಾಡುವ ಮೊದಲಾದ ನಿರ್ಣಯಗಳೊಂದಿಗೆ ಸಭೆ ಮುಕ್ತಾಯವಾಯ್ತು.

ಮೂಲ್ಕಿ— ಇಲ್ಲಿಯ ಸರಕಾರಿ ಬುನಾದಿ ತರಬೇತಿ ವಿದ್ಯಾಲಯದಲ್ಲಿ ವಿದ್ಯಾರ್ಥಿ ಸಮಾಜದಿಂದ ಪೂಜ್ಯ ಸರ್ದಾರ್ ಪಟೇಲರ ನಿಧನ ಬಗ್ಗೆ ಇದೇ ತಾ. 16ರಲ್ಲಿ ದುಃಖಸೂಚಕ ಸಭೆಯು ಜರಗಿತು. ಸಾರ್ವಜನಿಕ ಸಭೆಯು ಅದೇ ದಿನ ಸಂಜೆ ಶ್ರೀ ಇ. ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು

ಹಾಲಾಡಿ— ಸರದಾರ ಪಟೇಲ ನಿಧನದ ಸಲುವಾಗಿ ದುಃಖ ಪ್ರದರ್ಶಿಸುವ ಸಭೆಯು ಇದೇ ತಾ 16ರಲ್ಲಿ ಸ್ಥಳೀಯ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಶ್ರೀ ಕೆ. ರಾಮಕೃಷ್ಣ ಅಡಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಹಾಲಾಡಿ ಮಹಾಬಲ ಸೆಟ್ಟಿ, ಹಿರಿಯಣ್ಣ, ಹನುಮಂತ ಪ್ರಭು ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಬೈಕಂಪಾಡಿ— ಇಲ್ಲಿಯ ಬೋರ್ಡ್ ಮುಸ್ಲಿಂ ಶಾಲೆಗಾಗಿ ಬೋರ್ಡಿನಿಂದ ಹೊಸತಾಗಿ ಕಟ್ಟಿಸಿದ ಶಾಲಾ ಕಟ್ಟಡದ ಪ್ರವೇಶೋತ್ಸವವು ಇದೇ ತಾ. 17ರ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಬಿ ಮಂಜಯ್ಯ ಹೆಗ್ಗಡೆಯವರ ನೇತೃತ್ವದಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಜನಾಬ್ ಸಿ. ಖಾದರ್ ಸಾಹೇಬರು ಶಾಲಾ ವರದಿಯನ್ನೋದಿದರು. ನಂತರ ಸರ್ದಾರ್ ಪಟೇಲರ ನಿಧನದ ಬಗ್ಗೆ ಸಂತಾಪಸೂಚಿಸಲಾಯಿತು. ಶ್ರೀಗಳಾದ ಬಿ. ಎಸ್. ಭಾಸ್ಕರ ರೈ, ಎಸ್. ಡಿ. ಲೋಬೋ, ಪಿ. ಶ್ರೀನಿವಾಸ ರಾವ್, ಓ. ರಾಮರಾವ್ ಮೊದಲಾದವರು ಶಾಲೆಯ ಅಭಿವೃದ್ಧಿಯನ್ನು ಬಯಸಿ ಮಾತನಾಡಿದರು

ಹೆರ್ಗ[illegible]— ನವಜೀವನ ಹೈಸ್ಕೂಲಿನ ವಾರ್ಷಿಕೋತ್ಸವ ತಾ 7-1-51ಕ್ಕೆ ಶ್ರೀ [illegible] ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿಯೂ ತಾ. 6-1-51ಕ್ಕೆ [illegible] ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಶ್ರೀ [illegible] ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿಯೂ ಜರಗುವವು.

ಉಡುಪಿ

ಗೀತಾ ಜಯಂತಿ — ಉಡುಪಿಯ ಸನಾತನಧರ್ಮ ಪ್ರಕಾಶಿನೀ ಸಭೆಯ ಆಶ್ರಯದಲ್ಲಿ ಇದೇ ತಾ. 20ರಲ್ಲಿ ಸಂಜೆ ಗೀತಾ ಜಯಂತಿ ಮಹೋತ್ಸವವು ಪುತ್ತಿಗೆ ಮಠದ ಹಿರಿಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಮಠದ ವಸಂತ ಮಂಟಪದಲ್ಲಿ ಜರಗಿತು. ಪ್ರಕಾಶಿನೀ ಸಭೆಯ ಅಧ್ಯಕ್ಷ[illegible] ಮಠದ ಚಿಕ್ಕಸ್ವಾಮಿಗಳವರು ಸ್ವಾಗತ ಭಾಷಣ ಮಾಡಿದರು. ಪೇಜಾವರ ಮಠದ ಸ್ವಾಮಿಗಳವರೂ ಹಾಜರಿದ್ದರು. ಶ್ರೀಗಳಾದ [illegible]. ಎಸ್. ಬಾಲಸುಬ್ರಹ್ಮಣ್ಯ ಅಯ್ಯರ್, [illegible] ಕೇಶವಾಚಾರ್ಯ ಮೊದಲಾದವರು ಗೀತಾ ಸಂದೇಶದ ಕುರಿತು ಭಾಷಣವಿತ್ತರು.

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲ್ ಹಳೇ ವಿದ್ಯಾರ್ಥಿಗಳ ಸಂಘದ [illegible]

[illegible]

The Canara Mutual
Assurance Company Limited.
UDIPI. (S. India)

Good Wishes.

We thank all our Policy-holders, Agents, Medical Examiners and well-wishers for their co-operation and wish them a happy, peaceful and prosperous life in the **New Year.**

B Vaikunta Baliga,
Chairman
BOARD OF DIRECTORS

ದೋಷ ಎಲ್ಲರಲ್ಲೂ ಇದೆ. ಆದರೆ ಅದನ್ನು ಸಾಧಿಸಿದರೆ ಮಾತ್ರ ಮನುಷ್ಯನು ಜನತೆಯ ಕಣ್ಣೆದುರು ಒಬ್ಬ ಮಹಾಮೋಸಿ. ಇಲ್ಲವಾದರೆ ಎಲ್ಲರೂ ನಿರ್ದೋಷಿಗಳೇ
ಆದಕ್ಕಾಗಿ
ಫಿಲ್ಮಿಸ್ತಾನದವರ
ನಿರ್ದೋಷ್
ರೆಹನಾ, ಶ್ಯಾಮ್, ಕುಲದೀಪ್.
ತಾರೀಕು **30--12—1950** ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಬರುವ ಚಿತ್ರ: — ದಿಲ್-ಕೀ-ದುನಿಯಾ



Approved from by the Govt of Mysore
Certificated by the Agent of the Govt of Cylone & Indian.

ತಾವು ನನ್ನನ್ನು ಈ ಅಜ್ಞತನದ ಮಣೆಯ ಲ್ಲಿ ಕೂರಿಸಿಯೂ ನಾನಿಲ್ಲಿ ಕೂಯಿಯೂ ಇದ್ದ ಮೇಲೆ, ಕನ್ನಡ ಸಾಹಿತ್ಯದ ಭವಿಷ್ಯವನ್ನು ಕುರಿತು ಎರಡು ಮಾತುಗಳನ್ನು ನಾನು ಹೇಳ ಬೇಕೆಂದು ತಾವು ನಿರೀಕ್ಷಿಸಿದರೆ ತಮ್ಮ ತಪ್ಪಲ್ಲ. ಆ ನಿರೀಕ್ಷೆಯನ್ನು ಸಲಿಸದಿದ್ದರೆ ನನ್ನ ತಪ್ಪು. ಆ ಕಾರಣ ಆ ಭವಿಷ್ಯ ಹೇಗೆ ಇದ್ದೀತೆಂಬ ಶಕುನವನ್ನಲ್ಲ, ಹೇಗೆ ಇದ್ದರೆ ಲೇಸೆಂಬ ಬಯಕೆಯನ್ನು ಕುರಿತು, ಕೇಳಿರಿ ಕೇಳದಿರಿ, ಊದುವ ಶಂಖವನ್ನು ಊದಿಬಿಡುತ್ತೇನೆ.

Poets are the unacknowledged legislators of the world ಅಂತೆ. ನೋಡಿ, ಕವಿಗಳ ಹೊಣೆಗಾರಿಕೆ ಎಷ್ಟು ಮೇಲಾಗಿದೆ, ಎಷ್ಟು ಹಿರಿದಾಗಿದೆ, ಎಷ್ಟು ಗಡುಸಾಗಿದೆ! ಕವಿಗಳು ಮಾಡಲಾಗದುದನ್ನು ಕೂಡ ಮಾಡಿಯೇ ಬಿಡುವರಂತೆ—

ಕಟ್ಟುಗೆ ಕಟ್ಟಿದಿರ್ಕೆ ಕಡಲಂ ಕಪಿ
ಸಂಹತಿ, ವಾಮನಕ್ಷಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ,
ಹರನಂ ನರನಿಕ್ಕಿ ಗಂಟಲಂ।
ಮೆಟ್ಟುಗೆ ಮೆಟ್ಟದಿರ್ಕೆ; ಕವಿಗಳ್
ಕೃತಿಬಂಧದೊಳೆತ್ತಿ ಕಟ್ಟಿದರ್
ಮುಟ್ಟಿದರಿಕ್ಕಿ ಮೆಟ್ಟಿದಂದೇನಳವಗ್ಗಳವೋ
ಕವೀಂದ್ರರಾ! ॥ ಲೀಲಾವತಿ, ೧. ೧೧ ॥

ಮಹಾ ಕೃತಿಗಳು ಪ್ರಪಂಚದ ಭಾಗ್ಯದಿಂದ ತಾನೆ ಹುಟ್ಟಲಾಪವಲ್ಲದೆ ಅವನ್ನು ಬೆಲೆಗೊಟ್ಟು ಕೊಳಲೊ ಮಾಡಿಸಲೊ ಅಳವಲ್ಲವಂತೆ—

ಬೆಲೆಯಿಂದೆಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ
ನೋಳ್ಪಂ।
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ ಮನೋಜನಂ
ಕೌಮುದಿಯಂ॥ ಅರ್ಧ ನೇಮಿ ಪುರಾಣ, ೧. ೪೫॥

ಆ ಕಾರಣ ತನ್ನ ಇಷ್ಟು ಅಸಾಧಾರಣವಾದ ಸಂಗನ್ನು ಹೊಣೆಯನ್ನು ಕವಿ ಚೆನ್ನಾಗಿ ಮನವರಿಸಿ, ಮನ್ನಿಸಿ ತನ್ನ ಉದ್ಯಮದಲ್ಲಿ, ವ್ಯವಸಾಯದಲ್ಲಿ ತನ್ನ ದೃಷ್ಟಿಯನ್ನಾದರೂ ತಾರಾಪಥದಲ್ಲಿ ನಟ್ಟಿರಬೇಕು; ಆ ಉಚ್ಚೈಸ್ತರವನ್ನು ಮುಟ್ಟಲಿ, ಮುಟ್ಟದಿರಲಿ, ಅದಕ್ಕಿಂತ ಒಂದು ಅಂಗುಲ ಕೆಳಗಿಳಿಸಬಾರದು. ಆ ತಕ್ಕಂತೆ ಹುರಿದುಂಬಿಸುವಂತೆ ಆಂಗ್ಲ ಕವಿ ಬ್ರೌನಿಂಗನ (Browning) ಈ ಮಾತುಗಳಿಂದ ಸಂದರ್ಭೋಚಿತವಾಗಿ ಎರಡೇ ಪದಗಳನ್ನು ಮಾರ್ಪಡಿಸಿ ಹೇಳುತ್ತೇನೆ, ಕೇಳಿ—

'But try,' I urge, 'the trying
shall suffice;
The aim, if reached or not,
makes great the life:
Try to be Shakespeare,
and leave the rest to God!'

ಲೋಕದ ಆಯಾ ಪ್ರಧಾನ ಭಾಷೆಗಳ ಅಮೌಲ್ಯಕವಾದ ಗ್ರಂಥಗಳನ್ನು (ಎಲ್ಲವನ್ನಲ್ಲ, ಶ್ರೇಷ್ಠವಾದುದನ್ನು ಮಾತ್ರ) ಕನ್ನಡದಲ್ಲಿ ಅನುವಾದಿಸಬೇಕು. ಆಯಾ ಗ್ರಂಥದ ಮೂಲದಲ್ಲಿರುವ ಪಾತ್ರಗಳ, ಸ್ಥಾನಗಳ ಇತ್ಯಾದಿ ಹೆಸರುಗಳನ್ನು ಇದ್ದಕ್ಕಿದ್ದಂತೆ ಕಾಪಾಡಬೇಕಲ್ಲದೆ, ಅವನ್ನು ಮಾರ್ಪಡಿಸಬಾರದು. ಪದ್ಯ ಗ್ರಂಥಗಳನ್ನು ಕನ್ನಡ ಪದ್ಯದಲ್ಲಿ ಅಲ್ಲ, ಗದ್ಯದಲ್ಲಿ ಭಾಷಾಂತರಿಸಬೇಕು. ಏಕೆಂದರೆ ಪದ್ಯದಲ್ಲಿ ಭಾಷಾಂತರಿಸುವಲ್ಲಿ ಭಾಷಾಂತರಕಾರನ ಕೈಚಳಕ ಹೇಗೂ ಹದ ತಪ್ಪದಿರದು. ಹಾಗಾದರೆ ಅದೊಂದು ಹೊಸತೇ ಕೃತಿಯಾಗಬಹುದಲ್ಲದೆ ಮೂಲಕೃತಿಗೆ ಮುಖ್ಯಮುಕ್ಕಿಯಾಗಿರುವ ಮಟ್ಟಕ್ಕೆ ಮುಳುವೇ ಸರಿ. ಆ ಕಾರಣವೇ ಆಂಗ್ಲ ಇತ್ಯಾದಿ ಪಾಶ್ಚಾತ್ಯ ಭಾಷೆಗಳಲ್ಲಿ ಈವರೆಗೆ ಇದ್ದ ಗ್ರೀಕ, ಲಾತೀನ ಹಾಗೂ ಇತರ ಭಾಷೆಗಳ ಕಾವ್ಯಗಳ ಪದ್ಯಾನುವಾದಗಳನ್ನು ವಿಶ್ವಸನೀಯವಾದ ಅನುವಾದಗಳೆಂದು ಒಪ್ಪಲಾರದೆ, ಕಳೆದ ೫೦-೬೦ ವರ್ಷಗಳಿಂದ ಯಥಾಶಬ್ದವಾದ ಗದ್ಯಾನುವಾದಗಳನ್ನು ಮಾಡಿಕೊಂಡದೆ."

"ಬರಹಗಾರರು ತಂತಮ್ಮ ಗುರಿಯಿಂದ ಕದ್ದೊಳಲದೆ, ಧಾವತಿಸದೆ ವಿಶ್ರಮಿಸದೆ, Without haste without rest, ಜಾಗ್ರತೆಯಾಗಿ ನಿಧಾನವಾಗಿ, ಸಮಾತ್ಮನಾಗೇಯುತ್ತ ಕೆಲಸದ ಹಾದಿಯಲ್ಲಿ ಸಾಗುತ್ತಲಿದ್ದರೆ, ನಮ್ಮ ಕನ್ನಡ ಸಾಹಿತ್ಯವೂ ಜಗತ್ತಿನ ಉತ್ತಮೋತ್ತಮವಾದ ಸಾಹಿತ್ಯಗಳ ಜೊಣೆಯಲ್ಲಿ ನಿಲ್ಲಬಲ್ಲುದು, ಬಾಳಬಲ್ಲುದು. ಆ ಬಗೆ ಎಲ್ಲಕ್ಕೂ ಮೇಲಾಗಿ ಬರಹದಲ್ಲಿ ಹುರುಳಿರಬೇಕು. ತಿರುಳಿರಬೇಕು, ಕರುಳಿರಬೇಕು, ಸಾಕಷ್ಟು ಮುರುಳೂ ಇರಬೇಕು. ಅಂದರೆ ಆ ಬರಹ ಅಜರಾಮರವಾಗಿ ಬದುಕುತ್ತದೆ. ಅಂಥಾ ಸಾಹಿತ್ಯವು ನಮ್ಮ ಕನ್ನಡನಾಡಿನಲ್ಲಿ ಎಂದೆಂದಿಗೂ ಅವಿರತವಾಗಿ ಹುಟ್ಟುತ್ತಲೇ ಇರಲಿ, ಉತ್ತರೋತ್ತರವಾಗಿ ಬೆಳೆಯುತ್ತಲೇ ಬರಲಿ, ಯಾವ ಹಳಗಾಲದಲ್ಲೊ ತೊಟ್ಟು ತೊಟ್ಟಾಗಿ ಹುಟ್ಟಿ, ಹಳ್ಳಕೊಳ್ಳವಾಗಿ ಬೆಳೆದು, ಕಾವೇರಿಯಂತೆ ಮಹಾ ನದಿಯಾಗಿ ವಿಪುಲವಾಗಿ ಹರಿದು ಬಂದ ನಮ್ಮ ಸಾಹಿತ್ಯ ಮತ್ತೂ ಮತ್ತೂ ವಿಶಾಲವಾಗಿ ವಿಶ್ವಸಾಹಿತ್ಯದ ಮಹೋದಧಿಯಲ್ಲಿ, ಆ ಸಾಹಿತ್ಯ ರತ್ನಾಕರದಲ್ಲಿ, ಸಂರಿಯಲಿ ಎಂಬುದೇ ನನ್ನ ಹೃದಯದ ಏಕಮಾತ್ರವಾದ ಉತ್ಕಂಠೆ, ದೇವರಲ್ಲಿ ನನ್ನ ಏಕಮಾತ್ರವಾದ ಪ್ರಾರ್ಥನೆ. ತಥಾಸ್ತು."

"ಕನ್ನಡ ಸಾಹಿತ್ಯವನ್ನು ಪ್ರಪಂಚದ ಮುಂದಿನಲ್ಲಿ ಮುಂದಿನದಾದ ಯಾವ ಭಾಷೆಗೂ ಯಾವ ಸಾಹಿತ್ಯಕ್ಕೂ ಹಿಂದೆಬೀಳದಂತೆ ಉತ್ತರೋತ್ತರವಾಗಿ ಬೆಳೆಸಲಿ!"

೩೪ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಆಸ್ಥಾನ ಕವಿ ಮಂ. ಗೋವಿಂದ ಪೈಗಳವರ ವೀರ ಸಂದೇಶ!

"ಕನ್ನಡ ಸಾಹಿತ್ಯ ಪರಿಷತ್ತು – ಕನ್ನಡಕೋಶವನ್ನು ನಿರ್ಮಿಸತೊಡಗಿದೆ, ವಿಶ್ವಕೋಶವನ್ನು ನಿರ್ಮಿಸಬೇಕೆಂಬ ಯೋಜನೆಯನ್ನು ತನ್ನ ಗುರಿಯಾಗಿ ಇಟ್ಟುಕೊಂಡದೆ. ಇವೆರಡೂ ಕೆಲಸಗಳಿಗೆ ಲಕ್ಷಗಟ್ಟಲೆಯ ಹಣ ಬೇಕು. ಇದು ಎಲ್ಲಿಂದ ಬರಬೇಕು? ಕಣ್ಣೂ ಕೈಗಳನ್ನು ಎತ್ತಿ ಆಕಾಶಕ್ಕೆ ತೋರಿಸುವುದಲ್ಲದೆ ಬೇರೆ ಉತ್ತರವಿಲ್ಲ. ಕೊಡಲಾಪರು ಹೇರಳವಿದ್ದಾರೆ, ಆವರಲ್ಲಿ ಕೊಡುವವರು ಎಷ್ಟು? ಕೊಡುವ ಮನಸ್ಸಿದ್ದರೆ, ಕೊಡುವವರು ಕೊಟ್ಟರೆ, ಹಲವು ಬಲ್ಲವರ ಒಡಗೂಟದಿಂದ ತಾನೆ ನೆರವೇರಬೇಕಾದ ಈ ಕೆಲಸಗಳು ಆ ಒಗ್ಗಟ್ಟನನ್ನು ಪೂರ್ಣವಾಗಿ ಸಂಪಾದಿಸುವ ತನಕ ಕೊಂಚ ದುಸ್ಸಾಧ್ಯವೆನಿಸಬಹುದಾದರೂ, ಅವು ಸರ್ವಥಾ ಅಸಾಧ್ಯವಲ್ಲ. ಕನ್ನಡಕ್ಕೆ ಒಂದು ಅಂಸ್ಥಾನವಿದೆ, ಮೂರು ವಿಶ್ವವಿದ್ಯಾಲಯಗಳಿವೆ ಮಾತ್ರವಲ್ಲ, ಕನ್ನಡ ನಾಡಿನಲ್ಲಿ ಎಷ್ಟೋ ಲಕ್ಷಪತಿಗಳೂ ಇದ್ದಾರೆ. ಆವರೆಲ್ಲ ಮನಸ್ಸು ಮಾಡಿದರೆ, ಈ ಕೋಶಗಳ ನಿರ್ಮಾಣವೆಂದರೆ ಕೇವಲ ಎಡಗೈಯಾಟ ತಾನೆ."

ಕನ್ನಡ ಲಿಪಿಯ ಸುಧಾರಣೆಯನ್ನು ಕೂಡಲೇ ಕೈಕೊಳ್ಳಬೇಕು ಎಂಬಷ್ಟರ ಒತ್ತಾಯವೂ ಇಲ್ಲ, ಅದಷ್ಟು ಅವಶ್ಯಕತೆಯದೂ ಅಲ್ಲ, ಅಷ್ಟು ಅವಶ್ಯವೋ ಎಂಬುವಾದರೂ ಇನ್ನೂ ತೀರುಪಡಿಯಾಗಿಲ್ಲ. ಆತ ಏವ ಆ ಪ್ರಶ್ನೆ ಇನ್ನೂ ತಳುವಬಹುದು. ರಾಷ್ಟ್ರೀಯ ದೃಷ್ಟಿಯಿಂದ ಕನ್ನಡಕ್ಕೆ ಹಿರಿಯಕ್ಕನಾಗತಕ್ಕ ಹಿಂದೀ ಭಾಷೆಯಕ್ಷ ಲಿಪಿಯನ್ನು ಸ್ವೀಕರಿಸಿದ, ಹಿರಿಯಕ್ಕನ ಚಾಳಿ ಮನೆಯ ಮಕ್ಕಳಿಗೆಲ್ಲಾ ಎಂಬ ನ್ಯಾಯದಿಂದ ತಾನೇ, ನಾವೂ ಆ ಚಾಳಿಗೆ ಕೈ ಹಚ್ಚಬಾರದು. ಎಂದಿಗೆ ಅನಿವಾರ್ಯವೆನಿಸುತ್ತದೊ, ಎಂದಿಗೆ ಕಾಲಯಾಪನೆ ಜಕ್ಷಮ್ಯವೆನಿಸುತ್ತದೊ, ಅಂದಿಗೆ ಪ್ರವರ್ತಿಸಿದರೆ ಸಾಕು. ಆದರೆ ನಮಗೆ ಟಾಯ್ಪ್‌ರಾಯ್ಟರುಗಳು ಬೇಡವೇ? ಈಗಣ ಕನ್ನಡ ಲಿಪಿಗೆ ತಕ್ಕಂತೆ ಅವನ್ನು ಮಾಡಲಿಕ್ಕೆ ಬರುತ್ತಿದೆಯೇ? ಎನ್ನುವಿರಾ? ಕೇಳಿ, ಮೈಸೂರಿನ ರಾಜಾರಾಮ ಅಗ್ರಹಾರದಲ್ಲಿ ಶ್ರೀ ಕೆ. ಅನಂತಸುಬ್ಬರಾಯ ಎಂಬವರಿದ್ದಾರೆ. ಅವರು ಕಳೆದ ೨೦ ವರ್ಷದಿಂದ ತಮ್ಮ ಜೀವಮಾನವನ್ನೆಲ್ಲ ಆ ಬಗ್ಗೆ ವಿನಾಶಲಾಗಿಸಿ ಮಾದರಿಯದೊಂದು ಟಾಯ್ಪ್‌ರಾಯ್ಟರನ್ನು (type-writer) ನಿರ್ಮಿಸಿರುತ್ತಾರೆ. ಆದರಲ್ಲಿ ಲಿಪಿಯ ಬದಲಾವಣೆಯೇ ಇಲ್ಲ. ಅಕ್ಷರಗಳು ಈಗ ಇದ್ದಕ್ಕಿದ್ದಂತೆ ಚೊಕ್ಕವಾಗಿ ಮೂಡಿಬರುತ್ತವೆ. ಅಸಹಾಯರಾದ ಅವರಿಗೆ ಉದಾರ ಮನಸ್ಸಿನಿಂದ ತಕ್ಕ ಪ್ರೋತ್ಸಾಹವಿತ್ತು ಅವರಿಂದ ಆ ಕೆಲಸವನ್ನು ಪೂರಯಿಸಿದರೆ, ಕನ್ನಡ ಲಿಪಿಗೂ ಲಿಪಿಕಾರರಿಗೂ ಆ ಸಂಶೋಧಕರಿಗೂ ತುಂಬ ಉಪಕಾರವಾಗುತ್ತದೆ. ಕನ್ನಡ ಸರಕಾರದವರೂ ಕನ್ನಡನಾಡಿನ ಶ್ರೀಮಂತರೂ ಹಾಗೆ ಮಾಡಬಾರದೇ?

ವರ್ಷೇ ವರ್ಷೇ ಅಲ್ಲಲ್ಲಿ ನಡೆಯತಕ್ಕ ಸಾಹಿತ್ಯ ಸಮ್ಮೇಲನದ ಜತೆಯಲ್ಲಿ ಕನ್ನಡ ನಾಡಿನ ವೈಜ್ಞಾನಿಕ ಸಮ್ಮೇಲನವನ್ನು ಕರೆಯುತ್ತಿರಬೇಕು, ಇದು ಮುಂದಣ ಪ್ರತಿವಾರ್ಷಿಕ ಸಾಹಿತ್ಯ ಸಮ್ಮೇಲನವನ್ನು ಕರೆಯಿಸುವ ಆಯಾ ಸ್ಥಳವಂದಿಗರಿಗೆ ಮಾಡುವ ಸೂಚನೆ, ಅವರಲ್ಲಿ ಮಾಡುವ ವಿಜ್ಞಾಪನೆ ಅಷ್ಟೆ. ಇಂದಿನ ಯುಗವೆಂದರೆ ಯಂತ್ರದ ಯುಗ, ವಿಜ್ಞಾನದ (science) ಯುಗ, ವಿವಿಧ ಬಾಂಬುಗಳ (bombs) ಯುಗ. ಈ ಯುಗದಲ್ಲಿ ನಾವು ಹತ್ತು ಮಂದಿಯ ಜತೆಯಲ್ಲಿ ಇರಬೇಕಲ್ಲದೆ, ಬೆಕ್ಕಿನ ಬಿಡಾರ ಬೇರೆಯಂತೆ ಲೋಕದಿಂದ ಪೃಥಕ್ಕಾಗಿ ಪಿಂಗಡವಾಗಿ ಇದ್ದಿರಲಾರೆವು. ಹಾಗೂ ಆ ಹತ್ತು ಮಂದಿ ವಿಜ್ಞಾನದಲ್ಲಿ ವಿಚಕ್ಷಣರಾಗಿದ್ದು ಅವರ ನಡುವೆ ನಾವೂ ಅವರಂತೆಯೇ ಸ್ವತಂತ್ರರಾಗಿ ತಲೆಯನ್ನು ಮೇಲೆತ್ತಿ ಬಾಳಬೇಕಾದರೆ ನಮಗೆ ಸಾಹಿತ್ಯ ನೆರವಾಗದು, ವಿಜ್ಞಾನ ಬೇಕು, ವಿಜ್ಞಾನವಲ್ಲದೆ ಅನ್ಯ ಗತಿಯಿಲ್ಲ. ಈ ಕಾರಣ ನಮ್ಮಲ್ಲಿ ಸಾಹಿತ್ಯ ಹತ್ತುವವರು ಸಾಹಿತ್ಯವನ್ನು ಹೇಗೋ ಹಾಗೆ ವಿಜ್ಞಾನ ಹತ್ತುವವರು ವಿಜ್ಞಾನವನ್ನು ಆಶ್ರಯಿಸಬೇಕು. ಹಾಗೆ ಎರಡೂ ದಾರಿಗಳಿಂದ ನಮ್ಮ ಜನ ಮುಂದರಿಸಬೇಕು. ಎರಡರಲ್ಲಿಯೂ ಜೊಣೆಯನ್ನು ಸೇರಬೇಕು. ಈಗ ವಾಡಿಕೆಯಲ್ಲಿರುವ ವಿಧಾನಗಳವೇ ಅಲ್ಲ. ಮತ್ತೂ ಅದ್ಭುತವೂ ಮತ್ತೂ ಉಪಯುಕ್ತವೂ ಆದ ನಾವೆಗಳನ್ನೂ ವಿಮಾನಗಳನ್ನೂ ಕಟ್ಟಬೇಕು. ಹಾಗೂ ಮಿಕ್ಕವರು ಅಣುಬಾಂಬುಗಳನ್ನು (atom bombs) ಮಾಡುತ್ತಾರಾದರೆ, ನಾವು ಅಣಿಷ್ಠ ಬಾಂಬುಗಳನ್ನು (ಅಣಿಷ್ಠ =Superlative of ಅಣು = atom) ಕಂಡುಕೊಳ್ಳಬೇಕು, ಇತರ ದೇಶಗಳ ನಿರಪರಾಧಿ ಜನರನ್ನು ಕೇವಲ ಆಟಕ್ಕಾಗಿ ಲಕ್ಷಶಃ ಕೊಲ್ಲಲಿಕ್ಕಲ್ಲ; ಬರೇ ಭೂಕ್ಷುಧೆಯಿಂದ (land-hunger) ಧನ ಪಿಪಾಸೆಯಿಂದ ನಮ್ಮ ಮಾತೃಭೂಮಿಯ ಮೇಲೆ ಕೈಮಾಡಲೆಳಸುವ ನೃಶಂಸರಾದ ನರಪಿಶಾಚಿಗಳ ಹುಟ್ಟಡಗಿಸಲಿಕ್ಕೆ ತಾನೆ. ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ, ಸಾಹಿತ್ಯ ಸಮ್ಮೇಲನಗಳನ್ನು ಸರಕಾರದವರು ಜರುಗಿಸಲಿ, ಜರುಗಿಸದಿರಲಿ, ವೈಜ್ಞಾನಿಕ ಸಮ್ಮೇಲನಗಳನ್ನಾದರೂ ಕೇಂದ್ರ ಸರಕಾರದವರಾಗಲಿ, ಆಯಾ ಪ್ರಾಂತಿಕ ಸರಕಾರದರಾಗಲಿ ಕರೆಯಿಸುತ್ತಿರಬೇಕು. ಅವರು ತಮ್ಮ ಕರ್ತವ್ಯದಲ್ಲಿ ವಿಮುಖರಾದರೆ, ಆಯಾ ನಾಡಿನವರಾದರೂ ನೆರಸಬೇಡವೇ?

ಇಲ್ಲಿಗೆ ನನ್ನ ಭಾಷಣ ಮುಗಿಯಿತು. ಇನ್ನು ಎರಡೇ ಮಾತು.

ನಾನು ಎರಡು ತಾಯಂದಿರ ಕೂಸು. ಕೊಂಕಣಿ ನನ್ನ ಹೆತ್ತ ತಾಯಿ, ಕನ್ನಡ ಸಾಕುತಾಯಿ, ನನ್ನನ್ನು ಸಾಕಿದ ತಾಯಿ. ಕೊಂಕಣಿಯಲ್ಲಿ ಹೆಸರಿಗೆ ತಕ್ಕಷ್ಟರ ಸಾಹಿತ್ಯವಿದ್ದರೆ ಸಾಕಿತ್ತು, ಫ್ರಾನ್ಸ್ (France) ದೇಶದ ಪ್ರೊವಾಂಸ್ (Provence) ಎಂಬ ತೆಂಕಣ ಜಿಲ್ಲೆಯವನಾದ Frederic Mistral (ಫ್ರೆಡರಿಕ್ ಮಿಸ್ತ್ರಾಲ್) ಎಂಬ ಕವಿ ಫ್ರೆಂಚ ಭಾಷೆಯಲ್ಲಿ ವಿಪುಲವೂ ಜಗದ್ವಿಖ್ಯಾತವೂ ಆದ ಸಾಹಿತ್ಯವಿದ್ದರೂ ಅದರಲ್ಲಿ ರಚಿಸದೆ ಅದರಿಂದ ಭಿನ್ನವಾದ ತನ್ನ ತಾಯಿನುಡಿಯಾದ ಪ್ರೊವೆಂಸಾಲ್ (Provencal) ಭಾಷೆಯಲ್ಲಿ ತಾನೆ ತನ್ನ ಕೃತಿಗಳನ್ನು ರಚಿಸಿದಂತೆ, ನಾನೂ ನನ್ನ ತಾಯ್ನುಡಿಯಲ್ಲಿ ತಾನೆ ರಚಿಸುತಿದ್ದೆನೇನೋ. ಆದರೆ ತಾಯಿಯ ಮೊಲೆಯಲ್ಲಿ ಹಾಲಿಲ್ಲ, ಕೊಂಕಣಿಯಲ್ಲಿ ಸಾಹಿತ್ಯವಿಲ್ಲ. ಆಕೆ ಆ ಬಗ್ಗೆ ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಈ ದಾಯಿಯಾದರೆ ಪಯಸ್ವಿನಿ. ಎಷ್ಟು ಕಾಲದಿಂದ ಎಷ್ಟೋ ಕವಿಗಳನ್ನು ಊಡಿಸಿಯೂ ಮತ್ತೂ ಬತ್ತದ, ದೇವರ ದಯೆಯಿಂದ ಸರ್ವದಾ ಬತ್ತಬಾರದ, ಸದಾಸ್ನುಹಿ. ತನ್ನ ಮೊಲೆಯನ್ನು ಆಕೆ ತಾಯಿಗೂ ಮಿಕ್ಕ ಆಳ್ತೆಯಿಂದ ನನಗೆ ಉಣಿಸಿದಳು. ಆಕೆಯ ಆ ಅಕ್ಕರೆಯ ಸಾಲವನ್ನು ಏಳೇಳು ಜನ್ಮಕ್ಕೂ ತೆತ್ತು ತೀರಿಸಲಾರೆ. ತಾಯಿ, ನೀನು ನನ್ನಲ್ಲಿ ಇಟ್ಟ ಮಮತೆಗೂ ನಾನು ನಿನಗೆ ಸಲ್ಲಿಸುತ್ತಿರುವ ಪ್ರತಿ ಮಮತೆಗೂ ಸರ್ವಥಾ ಏಣೆಯಿಲ್ಲ. ನೀನು ನನಗೆ ಕರುವಿ ಎಂದರೆ ಅಮೃತದಂಥಾ ಮೊಲೆಹಾಲು, ನಾನು ನಿನಗೆ ಕರುವೆನೆಂದರೆ ನನ್ನ ಕಾಲುಂಗುಟವನ್ನು ಕೂಡಾ ತೊಳೆಯ ಸಾಲದ ಕಣ್ಣೀರು. ಬೇರೆ ಏನಿದೆ ನನ್ನಲ್ಲಿ? ಅವ್ವಾ, ಅದರಿಂದ ತಾನೆ ತೃಪ್ತಳಾಗು.

ನಾನು ಬೋಧಕನಲ್ಲ, ಸಾಧಕ, ಆಜೀವ ಶ್ರಾವಕ, ಕೇಳುವಾತನಲ್ಲದೆ ಕೇಳಿಸುವಾತನಲ್ಲ, ಪರರಿಂದ ಕಲಿಯತಕ್ಕವನಲ್ಲದೆ ಪರರಿಗೆ ಕಲಿಸತಕ್ಕವನಲ್ಲ. ಈ ಭಾಷಣವನ್ನು ಕೇಳಿರುವಲ್ಲಿ ಆ ತತ್ತ್ವವನ್ನು ದಯಮಾಡಿ ಮರೆಯಬಾರದಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಹಾಗೂ ಇಷ್ಟು ಒಲ್ಮೆಯಿಂದ, ಇಷ್ಟು ತಾಳ್ಮೆಯಿಂದ ನನ್ನ ಭಾಷಣವನ್ನು ಕೇಳಿರುವ ಬಗ್ಗೆ ತಮಗೆ ತುಂಬ ಕೃತಜ್ಞನಾಗಿರುತ್ತೇನೆ.

ಶ್ರೀ ದೇವರು ತಮಗೆಲ್ಲರಿಗೂ ಒಳ್ಳೇದು ಮಾಡಲಿ! ಕನ್ನಡ ಭಾಷೆಯನ್ನು, ಕನ್ನಡ ಸಾಹಿತ್ಯವನ್ನು ಪ್ರಪಂಚದ ಮುಂದಿನಲ್ಲಿ ಮುಂದಿನದಾದ ಯಾವ ಭಾಷೆಗೂ ಯಾವ ಸಾಹಿತ್ಯಕ್ಕೂ ಹಿಂದೆಬೀಳದಂತೆ ಉತ್ತರೋತ್ತರವಾಗಿ ಬೆಳೆಸಲಿ! ಕನ್ನಡಿಗರಿಗೆ ಕನ್ನಡತನವೆಂತೋ ಭಾರತತನವೂ ಅಂತೇ ಎರಡು ಕಣ್ಣುಗಳಂತೆ ಅಭಿನ್ನವಾಗಿರುವಂತೆ ಹರಸಲಿ! ನಮ್ಮ ಭಾರತ ಮಾತೆಯ ಅಖಂಡವಾದ ಐಕ್ಯಶ್ರೀಯೂ ಸ್ವಾತಂತ್ರ್ಯಸೌಭಾಗ್ಯವೂ ಆಚಂದ್ರಾರ್ಕವಾಗಿ ಬಾಳುವಂತೆ ಅನುಗ್ರಹಿಸಲಿ!

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಪೆಸಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

30

ದೊಡ್ಡ ಕಪ್ಪುಗಳಷ್ಟು ಚಹ ಪ್ರತಿಯೊಂದು 2 ಔನ್ಸ್ ಪೊಟ್ಟಣದಲ್ಲಿ

ಪೊಟ್ಟಣಗಳಲ್ಲಿ ಕಟ್ಟದಿರುವ ಚಹಗಳು ಬೆಲೆಯಲ್ಲಿ ಅಗ್ಗವಾಗಿ ಕಾಣಬಹುದು. ನೀವು ಬ್ರೂಕ್ ಬಾಂಡ್ ಚಹವನ್ನು ಕೊಂಡದ್ದೇ ಆದರೆ ನಿಮಗೆ ಅಧಿಕ ಪ್ರತಿಫಲ ದೊರೆಯುವುದು. ಪ್ರತಿಯೊಂದು 2 ಔನ್ಸ್ ಪೊಟ್ಟಣವು 30 ದೊಡ್ಡ ಕಪ್ಪುಗಳಿಗಾಗುವಷ್ಟು ಚಹವನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪೊಟ್ಟಣವೂ ಮಲಿನವಾಗದ ಹಾಗೆ ಕಾಪಾಡಲ್ಪಟ್ಟಿರುವುದಲ್ಲದೆ ಗುಣ ಮತ್ತು ಬೆಲೆಗಳಲ್ಲಿಯೂ ಕೂಡ ಭರವಸೆ ಕೊಡಲ್ಪಟ್ಟಿರುತ್ತದೆ.

ಬ್ರೂಕ್ ಬಾಂಡ್ ಚಹ

DB/50 LOT 104

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

"ಜೀವನದ ವಿವಿಧ ಕ್ಷೇತ್ರಗಳಲ್ಲಿಯಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಮಾನವನ ದೃಷ್ಟಿ ಮಲಿನವಾಗಿದೆ.

೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮುಂಬಯಿ ಸಾಹಿತ್ಯಗೋಷ್ಠಿಯ ಅಧ್ಯಕ್ಷ ಶ್ರೀ ವಿ. ಕೃ. ಗೋಕಾಕರ ಭಾಷಣದಿಂದ

ಸಾಹಿತ್ಯ ಹಾಗೂ ನವ್ಯತೆ

"ಸಾಹಿತ್ಯಸೃಷ್ಟಿಯು ಇಂದು ನಮ್ಮಲ್ಲಿ ವಿಪುಲ ಆದರೆ ಆದರ ಜೊತೆಯಾಗಿ ವಿಮರ್ಶೆಯು ಬೆಳೆದುಬಂದಿಲ್ಲ ಆಳವಾದ ಹೃದಯಾನುಭವವೊಂದೇ ಸಾಹಿತ್ಯಕ್ಕೆ ಸಾಕಾಗಲಾರದು. ಸಾಹಿತ್ಯದ ತಿರುಳು ಬೆಳೆಯಬೇಕಾದರೆ ಹೃದಯಾನುಭವಕ್ಕೆ ವಿವೇಕದ ಜೊತೆ ಬೇಕು ನಾಡಿನ ಜನತೆಯಲ್ಲಿದ್ದ ಪ್ರತಿಭೆ ವಿವಿಧರೂಪಗಳನ್ನು ತಾಳಿ ಸೌಂದರ್ಯವನ್ನು ಸೂರೆಗೆಯ್ಯುತ್ತದೆ. ಜನತೆಯಲ್ಲಿದ್ದ ವಿವೇಕವು ಆ ಸೌಂದರ್ಯವನ್ನು ಸುಂದರತರವಾಗಿಸುತ್ತದೆ. ಈ ವಿವೇಕದ ಜೊತೆಯಿಲ್ಲದ ಪ್ರತಿಭೆಯು ಸಂಪೂರ್ಣ ಸಫಲವಾಗಲಾರದು. ಪ್ರತಿಭೆಯು ಅಭಿಷಿಕ್ತ ಸಮ್ರಾಟ; ವಿವೇಕವು ಈ ಸಮ್ರಾಟನ ಮಂತ್ರಿಶ್ರೇಷ್ಠ. ಸಮ್ರಾಟನ ವೈಭವಕ್ಕೆ ಈ ಮಂತ್ರಾಲೋಚನೆ ಅಗತ್ಯ.

ದೃಷ್ಟಿ ವಿಶಾಲವಾಗಬೇಕಾದರೆ ಕುತೂಹಲ, ಸಹಾನುಭೂತಿ, ಸಹೃದಯತೆಗಳಿಲ್ಲದೆ ಸಾಧ್ಯವಿಲ್ಲ 'ಬೆಕ್ಕೆ! ಬೆಕ್ಕೆ ಎಲ್ಲಿಹೋಗಿದ್ದೆ?' ಎಂದು ಆಂಗ್ಲ ಕವಿಯೊಬ್ಬ ಪ್ರಶ್ನೆ ಮಾಡುತ್ತಾನೆ 'ಲಂಡನ್ನಿಗೆ ಹೋಗಿದ್ದೆ, ರಾಣಿಯನ್ನು ನೋಡಲೆಂದು!' ಎಂದು ಬೆಕ್ಕು ಹೇಳುತ್ತದೆ. ಕವಿ ಕೇಳುತ್ತಾನೆ, "ಹಾಗಾದರೆ ಏನು ನೋಡಿದೆ?" ಬೆಕ್ಕು ಉತ್ತರ ಕೊಡುತ್ತದೆ, "ಸಿಂಹಾಸನದ ಬುಡದಲ್ಲಿ ಅಡಗಿ ಕುಳಿತ ಇಲಿಯನ್ನು ನೋಡಿದೆ!" ಇಲಿಯನ್ನು ಕಂಡೊಡನೆ ಬೆಕ್ಕಿನ ಕಣ್ಣಿಗೆ ರಾಣಿ ಮರೆಯಾದಳು. ನಮ್ಮ ಸ್ವಭಾವದಲ್ಲಿಯೇ ಒಂದು ಪೆಟ್ಟಿನ ಕ್ರಾಂತಿಯಾಗದ ಹೊರತು ದೃಷ್ಟಿಯಲ್ಲಿ ಮಾರ್ಪಾಟಾಗಲಾರದು.

ವಿಶಾಲವಾದ ವಿಮರ್ಶೆಯನ್ನು ಬಿಟ್ಟುಬಿಡೋಣ. ಪೂರ್ವಾಪರ ವಿಚಾರವಿಲ್ಲದೆ ಸಿದ್ಧಾಂತಗಳ ಆರೋಪದ ಮಾಡುವ ದೃಷ್ಟಿ ಅದು. ಆದರೆ ವಿಮರ್ಶೆಯಲ್ಲಿ ಪವಿತ್ರ ದೃಷ್ಟಿಯೊಂದೇ ಸಾಲದು. ತನಗೆ ಪ್ರಿಯವಲ್ಲದ ತತ್ತ್ವಗಳನ್ನೂ ತಂತ್ರಗಳನ್ನೂ [illegible] ಪದ್ಧತಿಗಳನ್ನು ಸಹ ತಿಳಿದುಕೊಳ್ಳುವ ಕುತೂಹಲವು ವಿಮರ್ಶಕನಲ್ಲಿರಬೇಕಾಗುತ್ತದೆ. ಅನುಭಾವ, ಬುದ್ಧಿವಾದ, ವಿಶ್ವದ ಸಂಸ್ಕೃತಿಗೆ ಸಲ್ಲಿಸುವ ಕಾಣಿಕೆಯನ್ನು ತೂಗಿ ನೋಡಬೇಕಾಗುತ್ತದೆ [illegible] ವೇದವನ್ನು ಘೋಷಿಸಿದ ಮಂತ್ರದ್ರಷ್ಟಾರ ಕನ್ಸ, ಪ್ರಾಚೀನದ ಹಳಗನ್ನಡದ ಕವಿಜನವನ್ನು ತೊಟ್ಟು ಅಧ್ಯಾತ್ಮ, ಬಾರ ಮುಂದಿನ ಪಾವನಗಂಗೆಯಾಗಿ ಹರಿದ ಜಾನಪದ ಕಾವ್ಯ, ಸುಭಾಷ್ಯವಾದ ರಾಮಾಯಣ, ಭಕ್ತಿಕೇಂದ್ರಿತ ಬುಟ್ಟಿಗಳು, ಪರಂಪರೆಯ ಕೇವಲವೇ ಮೂರ್ತಿಮಂತವಾಗಿ ನಿಂತ ಕಥನಕಾವ್ಯ,— ಈ ವಿವಿಧ ತಂತ್ರಗಳನ್ನೂ ರೀತಿಗಳನ್ನೂ ತಿಳಿದುಕೊಳ್ಳುವ ಹವಣಿಕೆಬೇಕು.

ಸಾಹಿತ್ಯ ಪ್ರಕಾರಗಳು ವಿವಿಧವಾಗಿರುವವಲ್ಲದೆ ಒಂದೊಂದು ಪ್ರಕಾರದಲ್ಲಿಯೂ ಸಣ್ಣಪುಟ್ಟ ಭೇದಗಳನ್ನು ನಾವು ಕಾಣಬಹುದು. ಸಾಮಾಜಿಕ ನಾಟಕಗಳನ್ನೂ ಗೀತನಾಟಕಗಳನ್ನೂ ಒಂದೇ ಮಾದರಿಯ ಅಳತೆಗೋಲಿನಿಂದ ನಾವು ಅಳೆಯಲಾರೆವು ಚನ್ನಬಸವನಾಯಕ ಒಂದು ವಿಧದ ಕಾದಂಬರಿಯಾದರೆ ಮುಗಿದಯುದ್ಧ ಇನ್ನೊಂದು ಮಾದರಿಯದಾಗುತ್ತದೆ. ಅಲ್ಲದೆ ನವೀನಸಾಹಿತ್ಯಪ್ರಕಾರಗಳೂ ಹುಟ್ಟುತ್ತಿರುತ್ತವೆ. ಗದ್ಯ—ಪದ್ಯಗಳ ಹೊಸಬಿನ ಸಮ್ಮಿಶ್ರಣದಿಂದ ವಚನ ಸಾಹಿತ್ಯವು ಹುಟ್ಟಿತು. ಸಂಗೀತ-ಕಾವ್ಯಗಳ ಸಮ್ಮಿಲನದಿಂದ ದಾಸರಕೂಟದ ಗೀತೆಗಳು ಮೈದಳೆದವು. ದೃಶ್ಯಕಾವ್ಯ-ಭಾವಗೀತಗಳ ವಿಧಾನಗಳು ಬೆರೆತಾಗ 'ನಾಟ್ಯಭಟ' ಕಳೆಯೊಸುತ್ತದೆ. ಜ್ಯೋತಿರ್ವಿದನು ತಾನು ಗುರುತಿಸಿದ ನಕ್ಷತ್ರಗಳಷ್ಟೇ ನಕ್ಷತ್ರಮಂಡಳವೆಂದು ಗೆರೆ ಎಳೆಯಲಾರ, ನೂತನ ನಕ್ಷತ್ರಗಳು ಅವನನ್ನು ಬೆರಗುಗೊಳಿಸದೆ ಬಿಡುವುದಿಲ್ಲ. ಕ್ಷಿತಿಜವೂ ಸತ್ಯಸೃಷ್ಟಿಯಲ್ಲಿಯ ಕವಿಸಮಯ ಮಾತ್ರ ಅದರ ಹಿಂದೆ ಅನಂತತೆಯು ಸಂಕೇತವಾಗಿ ಧುಮುಕುತ್ತಿರುತ್ತದೆ.

ಜೀವನದ ವಿವಿಧ ಕ್ಷೇತ್ರಗಳಲ್ಲಿಯಂತೆ ಸಾಹಿತ್ಯಕ್ಷೇತ್ರದಲ್ಲಿಯೂ ಮಾನವನ ದೃಷ್ಟಿ ಇಂದು ಮಲಿನವಾಗಿದೆ. ಅಗಲಿಸ್ಸಿಕೆಯೂ ಸ್ವಾಮಿ ಭಾವವಾಗಿ ಜೀವನವನ್ನು ಹದಗೆಡಿಸುತ್ತದೆ. ಕಲ್ಪನೆಯ 'ಬಣ್ಣ'ಕ್ಕಿಂತ ರಾಜಕೀಯ 'ಬಣ್ಣ'ವೇ ಸಾಹಿತ್ಯದಲ್ಲಿ ಪೆಚ್ಚಾಗತೊಡಗಿದೆ. ವ್ಯಕ್ತಿಯು ಯಾರೇ ಇರಲಿ, ಯಾವ ಸಂಗದಕ್ಕನೇ ಸೇರಿರಲಿ, ಯಾವುದೊಂದು ವಿಶಿಷ್ಟ ತತ್ತ್ವವನ್ನೇ ವಿವೇಚಿಸಲಿ, ಈ ಮಾತುಗಳಿಂದ ಅಡ್ಡದಾರಿ ಹಿಡಿಯದೆ ವಿಮರ್ಶೆಯು ನೇರವಾಗಿ ಸಾಹಿತ್ಯಗುಣವನ್ನು ಗ್ರಹಿಸಿ ತನ್ನ ಕಾರ್ಯವನ್ನು ಮುಂದುವರಿಸಬೇಕಾಗಿದೆ. ನಿಲ್ದಾಣ ಕಚೇರಿಯಲ್ಲಿ ಟಿಕೇಟು ಕೊಡುವ ಮಾಸ್ತರರಿರುತ್ತಾರೆ. ಈ ಮಾಸ್ತರರು ಸಾಮಾನ್ಯತಃ ಕಲೆಯನ್ನೇ ಮೇಲಕ್ಕೆತ್ತುವದಿಲ್ಲ. ಹಾಗೆ ಮಾಡಲು ಅವರಿಗೆ ವೇಳೆಯೂ ಇರುವದಿಲ್ಲ. ಚಾಚಿದ ಕೈ, ಅದರಲ್ಲಿದ್ದ ಹಣ, ಇಷ್ಟರೊಡನೆ ಮಾತ್ರ ಅವರ ಸಂಬಂಧ. ತಿವಿಗೆ ಬಿದ್ದ ಊರಿನ ಹೆಸರಿಗೆ ಚಾಚಿದ ಕೈಯಲ್ಲಿದ್ದ ಹಣ ಸರಿಹೋಗುತ್ತಿದೆಯೋ ಇಲ್ಲವೋ ಎಂಬುವೇ ಅವರ ಲಕ್ಷ್ಯ. ಆ ಕೈಯಾರದು, ಅದರಮೇಲೆ ಎಷ್ಟು ಗೆರೆಗಳವೆ, ಆ ಕೈತೋಳನ್ನು ಮುಚ್ಚಿದ ಕೋಟು ಉಡ್ಡಯವೋ ಅರಳೆಯದೋ,—ಇದನ್ನೆಲ್ಲ ಅವರು ವಿಚಾರ ಮಾಡುವುದಿಲ್ಲ. ಸಳಿಗೆಯನ್ನು ತೋರಿಸಿ, ಕತ್ತಲೆಯೊಳಗೆ ನುಗ್ಗಿ ಕೆಲವರು ಬಂದರು ಸಹ [illegible] ಹಾಗು ಹಿಡಿದುಕೊಂಡ ಹಣಕ್ಕೆ ಇರುವ ಸಂಬಂಧ [illegible]

[illegible]

ಕರಿಸಿ ನಕ್ಕಕೆ ತಿಳಿಸ ಸ್ಥಾನವನ್ನು ತೋರಿಸುತ್ತಾನೆ. ಉತ್ತಮ ವಿಮರ್ಶಕನಲ್ಲಿ ಈ ಶಾಸ್ತ್ರೀಯ ದೃಷ್ಟಿ ಬಹು ಪ್ರಮುಖವಾಗಿ ಕಂಡುಬರುತ್ತದೆ. ಅನಾಮಧೇಯ ಗ್ರಂಥಗಳ ಒಂದು ವಾಚನಾಲಯವೆಂದು ವಿಮರ್ಶಕನು ಸಾಹಿತ್ಯವೆಡೆಗೆ ನೋಡುತ್ತಾನೆ. ಆ ಗ್ರಂಥದಲ್ಲಿ ಮಿಡಿಯುತ್ತಿರುವ ಜೀವವನ್ನು ವಿಮರ್ಶಕನು ಎತ್ತಿ ತೋರಿಸುತ್ತಾನೆ. ಆ ಜೀವವು ವಿಮರ್ಶಕನಿಗೆ ಪ್ರಿಯವಾಗದ ತತ್ತ್ವದಲ್ಲಿ ಶ್ರದ್ಧೆಯಿಟ್ಟಿರಬಹುದು. ಆ ಶ್ರದ್ಧೆಯಿಂದ ಹರಿದುಬರುವ ಕಲಾನುಭವ ಜೀವನಾನುಭವಗಳೇ ವಿಮರ್ಶಕನ ಲಕ್ಷ್ಯಗಳಾಗುತ್ತವೆ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಹುಟ್ಟಿಯೂ ಸಾಹಿತಿಯು ವಿಶ್ವದೃಷ್ಟಿಯನ್ನು ಪಡೆಯಬಲ್ಲ. ವಿಮರ್ಶಕನ ಜೀವನವೂ ದ್ವಿಮುಖವಾಗಿರಬೇಕಾಗುತ್ತದೆ. ತನ್ನ ಯುಗದ ರೀತಿ-ನೀತಿ, ತತ್ತ್ವ—ಸತ್ತ್ವಗಳು ಅವನಿಗೆ ಪ್ರಿಯವಾಗಿದ್ದರೂ ಇನ್ನೊಂದು ರೀತಿಯಿಂದ ಅವನ ದೃಷ್ಟಿ ಕಾಲದಷ್ಟು ಪ್ರಾಚೀನವೂ ವಿಶ್ವವಿಶಾಲವೂ ಆಗಿರಬೇಕಾಗುತ್ತದೆ. ಒಂದು ಕನ್ನಡಿಯಲ್ಲಿ ಪ್ರ

ತಿಬಿಂಬಿತವಾದ ತನ್ನ ರೂಪವನ್ನು ತಾನೇ ನೋಡುತ್ತ ನಿಂತಿರುವ ಅನಂತತೆಯೆಂದರೆ ಸೌಂದರ್ಯವೆಂದು ಖಾಲಿಲ್ ಗಿಬ್ರಾನ್ ಎಂಬ ಕವಿ ಸಾರಿದ್ದಾನೆ. ಉತ್ತಮ ವಿಮರ್ಶೆಯು ಇಂಥ ಸೌಂದರ್ಯದೆದುರು ಹಿಡಿದ ಇನ್ನೊಂದು ಕನ್ನಡಿ. ಅದರಲ್ಲಿ ತನ್ನ ಅಂಗಾಂಗಗಳ ಚೆಲುವೆಲ್ಲ ಚಾಚೂ ತಪ್ಪದೆ ವ್ಯಕ್ತವಾಗಿರುವದನ್ನು ಕಂಡು ಸೌಂದರ್ಯವು ತನ್ನಷ್ಟಕ್ಕೆ ತಾನೆ ಪ್ರೀತವಾಗುತ್ತದೆ; ತನ್ನ ಕೊರತೆಗಳು ಕೆಲವು ಕಂಡುಬಂದರೆ ಅವುಗಳನ್ನು ತುಂಬಿಕೊಳ್ಳುತ್ತದೆ.

ವಿಶ್ವಜೀವನವನ್ನು ಸರಿಯಾಗಿ ತಿಳಿಯದೆ ವ್ಯಕ್ತಿಯು ಚೆನ್ನಾಗಿ ಬಾಳಲಾರ. ಆದರೆ ವ್ಯಕ್ತಿಯಲ್ಲಿ ಮೊದಲು ಬುದ್ಧಿ ನಿಷ್ಠತೆ ಬೇಕು. ಅದಿಲ್ಲದೆ ಹೋದರೆ ಬರಿ ಒಂದು ಘಟಾಕ್ಷಿಯನ್ನು ಹಾರಿಸಿದರೂ ಹಾರಿಹೋಗುವ ಹಕ್ಕಿಯಂತೆ ಹೃದಯಸಂಪನ್ನತೆಯಿದ್ದರೂ, ವ್ಯಕ್ತಿಯು ಅಜ್ಞನಾಗುತ್ತಾನೆ. ಬುದ್ಧಿನಿಷ್ಠನಾದ ಹೃದಯಶೂನ್ಯನು ಒಂದು ಗಿಣಿಯನ್ನು ಹೊಕ್ಕ ಮಾರ್ಜಾಲನಂತೆ, ಒಳಗೆ ಹೋದ ಮೇಲೆ ದಾರಿತಪ್ಪಿ ಸುತ್ತುತ್ತಿರುವ ಒಂದು ಚಕ್ರದ ಮೇಲಿಂ. ಇನ್ನೊಂದು ಚಕ್ರಕ್ಕೆ ಹಾರಿ ಜೀವ ಉಳಿಸಿಕೊಳ್ಳಬೇಕಾದರೆ ಆ ಬೆಕ್ಕಿಗೆ ಸಾಕುಬೇಕಾಗಿ ಹೋಗುತ್ತದೆ. ಅದಕ್ಕೆ ಶಾಂತಿಯೇ ಇಲ್ಲ. ಸಾತ್ವಿಕತೆಯಿಲ್ಲದ ಜೀವತತ್ತ್ವವಿಲ್ಲದ ಬೀಜಗಾಳಿನಂತೆ. ತನ್ನಲ್ಲಿದ್ದ ಸತ್ಯ-ಸೌಂದರ್ಯಗಳಿಂದ ಅದು ಅನ್ನವಾಗಬಹುದು; ಆದರೆ ತಾನೇ ಸಸಿಯಾಗಿ ವೃಕ್ಷವಾಗಿ ಬೆಳೆದು ಜೀವನ ಸಫಲತೆಯನ್ನು ಪಡೆಯಲಾರದು. ಪ್ರೀತಿ ಸಹಾನುಭೂತಿಗಳಿಲ್ಲದ ಜೀವ ಒಂದು ನಾಚಿಕೆಗಿಡ; ಮುಟ್ಟಲು ಮುದುಕ. ಇಂಥ ಜೀವದ ಸುಖದುಃಖಗಳೆರಡೂ ಸಂಕುಚಿತವಾದುವು. ಅದರ ಅನುಭವ ತೀರ ಸಣ್ಣದು ಅದಕ್ಕೆ ಪ್ರಘಾತ ತಪ್ಪಿದ್ದಲ್ಲ. ವಿಕೃತಗೊಂಡರೆ ರಾಮತೀರ್ಥರು ಹೇಳಿದ ನಾಯಿಯ ದೈವವೂ ಅದಕ್ಕೆ ಕಟ್ಟಿಟ್ಟದ್ದೇ. ಮಂಗಳೋಪಾಸನೆಯಿಲ್ಲದ ಜೀವಕ್ಕೆ ಔಚಿತ್ಯದ ಅನುಭವವಿರಲಾರದು. ವ್ಯಕ್ತಿತ್ವದ ಅನಂತ ಶೈಲುಗಳು ಅದಕ್ಕೆ ಗೊತ್ತಿರಲಾರವು. ವಿಶ್ವದ ಬಹು ಮುಖತೆಯ ಅರಿವು ಅದಕ್ಕಿರಲಾರದು. ಭರತೇಶನ ಯೋಗ-ಭೋಗಗಳ ಸಮನ್ವಯ ಅದಕ್ಕೆ ಹೊಳೆದಿರಲಾರದು. ಉಳಿದ ನಾಲ್ಕು ಅಮೃತ ತತ್ತ್ವಗಳನ್ನು ಅನುಭವಿಸಿ 'ಮಂಗಳ'ದ ದರ್ಶನವನ್ನು ಪಡೆಯದೆ ಇದ್ದ ಜೀವ ಮಹಾಕಾಲಿಯನ್ನು ಅರಿತಿರಲಾರದು. ಇಂಥ ಜೀವ ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದ ವರೆಗೆ ಬಂದು ನಿಲ್ಲಬಹುದು; ವಿರಾಟ್ಸ್ವರೂಪ ದರ್ಶನದ ದಿವ್ಯಾನುಭವ ಅದಕ್ಕಿಲ್ಲ. ಇನ್ನು ಶ್ರೀಕೃಷ್ಣನನ್ನು ಅರಿತರೂ ಅವನ ವಿರಾಟ್ ಸ್ವರೂಪವನ್ನು ಕಾಣದ ಕಣ್ಣಿಗೆ ಪೂರ್ಣತೆ ಎಲ್ಲಿ?

ಇಂದು ಭಾರತದಲ್ಲಿ ಒಂದು ಜಾನಪದವನ್ನು ನಾವು ಕಟ್ಟುತ್ತಿದ್ದೇವೆ. ವೇದಕಾಲದಲ್ಲಿ ನಮ್ಮ ನಾಡು ಸಾಂದ್ರ ಸಮಾಜದ ವ್ಯೂಹರಚನೆಯ ಅರಿವಿಲ್ಲದೆ ನಿಸರ್ಗಕ್ಕೆ ಸಮೀಪವಾಗಿ ಬಾಳಿ ಪ್ರತೀತಗಳ ಭಾಷೆಯೊಂದನ್ನು ಪ್ರಚಾರಕ್ಕೆ ತಂದಿತು. ಅದರ ವಿಚಾರ ಪದ್ಧತಿಯೆಲ್ಲ ಪ್ರತೀತಮಯವಾಗಿತ್ತು. ಯಜ್ಞ-ವೆಂದರೆ ಕರ್ಮಕಾಂಡದ ಬರಿ ಒಂದು ಉಪಾಧಿಯಲ್ಲ; ಆತ್ಮನ ಸಮರ್ಪಣ ಭಾವವೂ ಅದರಲ್ಲಿ ಅಡಕವಾಗಿತ್ತು. ರಾಮಾಯಣ ಮಹಾಭಾರತಗಳ ಕಾಲದಲ್ಲಿ ಕೆಲವೊಂದು ಮಾನವೀಯ ಸ್ವಭಾವಗಳ ಆದರ್ಶ ಇಲ್ಲವೆ ಮಾದರಿಗಳನ್ನು ಎದುರಿಗಿಟ್ಟುಕೊಂಡು ಭಾರತವು ಬಾಳಿತು. ರಾಮಚಂದ್ರ, ಭೀಷ್ಮ, ಧರ್ಮ, ಸೀತಾ, ದ್ರೌಪದಿ,—ಈ ಆದರ್ಶ ಚಿತ್ರಣಗಳೆಲ್ಲ ಜನತೆಯ ಜೀವನಕ್ಕೆ ಉಜ್ವಲ ಪಡಿಯಚ್ಚುಗಳಾದವು. ಚತುರ್ವರ್ಣಗಳ ಮಾದರಿಗಳು ಕಣ್ಣು ಮುಂದೆ ಸುಳಿದವು. ಈ ಆದರ್ಶ ಪ್ರಿಯತೆಯು ಮುಂದೆ ಬರಿ ಒಂದು ಪರಂಪರೆಯಾಗಿ ಚತುರ್ವರ್ಣಗಳು ನೂರೆಂಟು ಜಾತಿಗಳಾಗಿ ಸಮಾಜವು ಅವನತಿಗಿಳಿಯಿತು. ಒಂದು ಸಾವಿರ ವರುಷ ಬಾಳುವಷ್ಟು ಅದರ ಶೃಂಖಲೆಗಳು ಬಿಗಿಯಾದವು. ಈಗೊಂದು ಶತಮಾನದಿಂದ ಪಡುವಣದ ಗಾಳಿಬೀಸಿ ಕ್ರಾಂತಿಯ ಕಾಲ ಬಂದಿದೆ. ಇಂದಿನ ಯುಗ ಬುದ್ಧಿಯ ಯುಗ, ವ್ಯಕ್ತಿತ್ವದ ಯುಗ, ತನ್ನರಿವೇ ಗುರುವಾಗುವ ಯುಗ. ಈ ಯುಗದ ಬುದ್ಧಿಪ್ರಧಾನತೆಗೆ ಜರ್ಮನಿಯಲ್ಲಿ ಒಂದು ಆಸುರೀ ಅಹಂಕಾರವು ಜೊತೆಯಾಯಿತು. ಈ ಎಲ್ಲ ವಿಡ್ರೂಪಗಳನ್ನು ನಾವಿಂದು ಬದಿಗೊತ್ತಬೇಕಾಗಿದೆ. ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಪ್ರಜಾಪ್ರಭುತ್ವವು ಭಾರತದಲ್ಲಿ ಇಂದು ಪ್ರಗತಿಪರ ಹೆಜ್ಜೆಯೆಂದು ತೋರದೆ ಇರಲಾರದು. ಪ್ರಜಾಪ್ರಭುತ್ವವು ಕ್ರಮೇಣ ಸಮಾಜವಾದದ ಕೆಲವೊಂದು ಅಂಶಗಳನ್ನು ಸೇರಿಸಿಕೊಂಡು ಒಂದು ಸುವರ್ಣ ಮಧ್ಯಮವಾಗಿ ಪರಿಣಮಿಸಬಹುದು. ಡೆನ್ಮಾರ್ಕ್, ಸ್ವೀಡನ್ ಮೊದಲಾದ ದೇಶಗಳಲ್ಲಿ ಇಂಥ ರಾಜ್ಯಪದ್ಧತಿಯೇ ಪ್ರಚಾರದಲ್ಲಿದೆ.

ಸಾಹಿತಿಯು ಕಾಣುವ ಆದರ್ಶ ಸಮಾಜದಲ್ಲಿ ಪ್ರತಿಯೊಬ್ಬ ಮಾನವನು ತನ್ನ ಮನುವಾಗುವುದಿಲ್ಲ. ಸ್ವತಂತ್ರನಾಗಿಯೂ ಸಹ ಅವನು ಒಂದೇ ಒಂದು ದೈವಿಕ ಸೂತ್ರದ ಉದಾಹರಣೆಯಾಗುತ್ತಾನೆ. ಏಕೆಂದರೆ ಎಲ್ಲ ಮಾನವರ ಅಂತಃಸ್ಫುರಣದಲ್ಲಿದ್ದ ಶಕ್ತಿ ಒಂದೇ ಆಗಿದೆ. ನಾಸ್ತಿಕವಾದದಿಂದ ಪುರುಷೋತ್ತಮ ಪ್ರಜ್ಞೆಯವರೆಗೆ ಮಾನವನು ತನ್ನ ಸ್ವಭಾವಕ್ಕೆ ಒಗ್ಗುವಂತೆ ತನ್ನ ಶ್ರದ್ಧೆಯನ್ನು ಮಾರ್ಪಡಿಸಿಕೊಳ್ಳಬಹುದು. ವಿಜ್ಞಾನವು ತನ್ನ ದಾರಿಯಲ್ಲಿಯೇ ಮುಂದುವರಿದು ದೇವರನ್ನು ಅಲ್ಲಗಳೆದರೂ ವಿಜ್ಞಾನದ ದೈವಿಕತೆಯನ್ನು ನಾವು ಅಲ್ಲಗಳೆಯುವ ಕಾರಣವಿಲ್ಲ. ವಿಜ್ಞಾನದ ಸತ್ಯ ನಿಷ್ಠುರತೆಗೆ ಒಮ್ಮೆಲೊಮ್ಮೆ ಪರಿಶಕ್ತತೆಯ ಕಾಲ ಬಂದೀತು ನವ್ಯ ಯುಗದಲ್ಲಿ ಸಮಾಜಶಾಸ್ತ್ರವು ಮಾನವೀಯ ದುಃಖದ ಬೇರನ್ನೇ ಗುರುತಿಸಿ ಕಿತ್ತೊಗೆಯಲು ಹವಣಿಸುವದು, ಅರ್ಥಶಾಸ್ತ್ರವು ಸಕಲರಿಗೂ ಒಂದು ಸಹಜ ಸುಂದರವಾದ, ನಿರಾಡಂಬರವಾದ ಜೀವನವನ್ನು ಕಲ್ಪಿಸಿಕೊಟ್ಟು ಅವರವರ ಶಕ್ತಿಗನುರೂಪವಾದ ಕಾರ್ಯವನ್ನೂ ಉಚಿತ ವಿಶ್ರಾಂತಿಯನ್ನೂ ಒದಗಿಸಿಕೊಡುವುದು. ಶಿಕ್ಷಣಕ್ರಮವು ಅಂತಃಸ್ಫೂರ್ತಿಗೆ ದಾರಿ ಮಾಡಿಕೊಡುವುದು. ರಾಜಕಾರಣವು ರಾಷ್ಟ್ರಗಳನ್ನು ಸ್ಪರ್ಧಿಸುವ ರಾಕ್ಷಸರೆಂದು ತಿಳಿಯದೆ ವಿಕಾಸೋನ್ಮುಖ, ಸಾಂಘಿಕ ಆತ್ಮಗಳೆಂದು ತಿಳಿಯುವದು. ನವ್ಯ ಸಾಹಿತ್ಯವೂ ಈ ನವ್ಯ ಸಮಾಜದ ಶ್ರುತಿಯಾಗುವುದು, ಚಿತ್ರಣ-ರೂಪಣವಾಗುವದು, ಭಾಷ್ಯವಾಗುವದು. ಜೀವನದ ವಿವಿಧ ಕ್ಷೇತ್ರಗಳಲ್ಲಿ ಒಗುಮಿಗುವ ಇಂಥ ತೇಜಸ್ಸನ್ನು ಸಾಹಿತ್ಯವು ಇಂದು ಹುಟ್ಟಿಸಬೇಕಾಗಿದೆ.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ—ಉದರಶೂಲೆ, ಕಟಿಶೂಲೆ, ಮೈಕೈಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪೋ ಕುಂಜಾಲು, ದ. ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೀಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲದಲ್ಲಿ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಛಟ್ಟೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara.

ಖಂಡಿತ ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿಹಸಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ. 3-; ಸ್ಪೆಶ್ಯಲ್ ರೂ. 5-ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)

Tollygunge CALCUTTA,

ಬ್ರೈರು ಶಹಾಕಂಪೆನಿ, ಮಂಗಳೂರು

ಬೇಕಾಗಿದ್ದಾರೆ

'ನವಯುಗ' ವಾರಪತ್ರಿಕೆಗೆ ಚಂದಾದಾರರನ್ನು ಸೇರಿಸಲಿಕ್ಕೂ ಜಾಹೀರಾತುಗಳನ್ನು ಸಂಗ್ರಹಿಸಲಿಕ್ಕೂ ಸಂಬಳ ಯಾ ಕಮಿಶನಿನ ಮೇಲೆ ಇಬ್ಬರು ಒರ್ಗನೈಝರರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಮುಖತಃ ಮಾತನಾಡಬಹುದು ಯಾ ಬರಕೊಳ್ಳಬಹುದು.

ಮೆನೇಜರ್, 'ನವಯುಗ', ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಈ ಅವಸ್ಥೆ ನಿರ್ಮಾಣವಾಗಬಾರದೆಂಬುದಕ್ಕೆ ಒಳಿತು ಬಿಗಿಹಿಡಿದುಕೊಳ್ಳುವ ಪ್ರಯತ್ನಕ್ಕೆ ಮುಂದುವರಿಸಬೇಕಾಗಿದೆ. ಆದರೆ ಅದು ಸದ್ಯ ಅವರ ಕಡೆಗೆ ಬರುತ್ತಿಲ್ಲವಂತೆ. ಅದೂ ಒಂದು ಆಶೆಯು. ಇನ್ನೊಮ್ಮೆ ಮಾತಾಡುವ. ಮೊನ್ನೆ ಮುಂಬಾಯಿಯಲ್ಲಿ ನಮ್ಮ ಧುರೀಣರಾದ ಸರದಾರ ಪಟೇಲರು ತೀರಿ ಹೋದರು. ಸದ್ಯಕ್ಕೆ ಇದೇ ದೊಡ್ಡ ವಿಚಾರ. ಅವರು 1875ರಲ್ಲಿ ಹುಟ್ಟಿದ್ದರು. 75 ವರ್ಷ ಬಾಳಿ, 1950ರಲ್ಲಿ ತೀರಿಕೊಂಡರು. ನಮ್ಮ ದೇಶದಲ್ಲಿ 75 ವರ್ಷ ಬದುಕಿ ಮರಣಹೊಂದಿದವರನ್ನು ಅಕಾಲ ಮರಣದಿಂದ ಹೋದರು ಎನ್ನುವ ಸಂಭವವಿಲ್ಲ. ಮುಕ್ಕಾಲು ಶತಮಾನ ಬದುಕಿ ತನ್ನ ದೇಶದ ಜನರ ಅಖಂಡ ಸೇವೆಯನ್ನು ಮಾಡಿ ಹೊರಟುಹೋಗುವವರನ್ನು ಪುಣ್ಯಾತ್ಮರೆನ್ನಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಡುವುದಕ್ಕಿಂತಲೂ ಅದು ದೊರೆತನಂತರ ಅದನ್ನು ನಿರ್ವಹಿಸುವುದು ಕಷ್ಟ. ಪಟೇಲರು ದೇಶದ ಸ್ವಾತಂತ್ರ್ಯಕ್ಕಾಗಿ 30 ವರ್ಷ ಹೋರಾಡಿದರು. ಅದು ದೊರೆತನಂತರ ಅದನ್ನು ಮೂರು ವರ್ಷದ ವರೆಗೆ ಅನುಭವಿಸಿ ಹೋದರು. ಅವರು ಬದುಕಿದ್ದರೆ ಇನ್ನೂ ಹತ್ತು ವರ್ಷ ಬದುಕಬಹುದಿತ್ತು ನಿಜ. ಅವರು "ಉಕ್ಕಿನ ಮನುಷ್ಯ"ನಾಗಿದ್ದರೂ ಮನುಷ್ಯನಲ್ಲವೆ? ಅವರಿಗೂ ವಿಶ್ರಾಂತಿ ಬೇಡವೆ? ನಾನು ಹೇಳುವುದಾದರೆ ಅವರಿಗೆ ಬೇಕಾದಷ್ಟು ವಿಶ್ರಾಂತಿ ನಾವು ಕೊಡಲಿಲ್ಲ. ಅವರು ಸಾಕಷ್ಟು ವಿಶ್ರಾಂತಿ ಹೊಂದಬೇಕೆಂದು ವೈದ್ಯರು ಎಷ್ಟು ಹೇಳಿಕೊಂಡರೂ ಮಿಕ್ಕವರು ಅವರಿಗೆ ವಿಶ್ರಾಂತಿ ಕೊಡಲಿಲ್ಲ. ಅವರಂತೂ ತನ್ನ ಜೀವ ಉಳಿಸಿಕೊಳ್ಳಬೇಕೆಂದು ಯೋಚಿಸಿಕೊಳ್ಳಲೂ ಇಲ್ಲ. ಅವರು ಮೊನ್ನೆ ಡಿಲ್ಲಿಯಿಂದ ಮುಂಬೈಗೆ ಹೊರಟಾಗ, ಅವರಿಗೆ ತನ್ನ ಅವಸಾನ ಸಮೀಪಿಸಿದೆ ಎಂದು ತಿಳಿದಿತ್ತು. ತನ್ನನ್ನು ನೋಡಲಿಕ್ಕೆ ಬಂದಿದ್ದ ಅಧ್ಯಕ್ಷ ಪ್ರಸಾದರೊಡನೆ ಅವರು ಹೇಳಿದ್ದರಂತೆ, "ಬಾಪು! ಜವಹರ್‌ಲಾಲರು ಹೊರುವ ಹೊರೆ ಇನ್ನಷ್ಟು ಭಾರವಾಯಿತು" ಎಂದು. ತನ್ನನ್ನು ನೋಡಲಿಕ್ಕಾಗಿ ಬಂದಿದ್ದ ಅನೇಕ ಅಧಿಕಾರಿಗಳ ಕೂಡೆ ಏನೂ ಮಾತಾಡದೆ "ನಾನು ಹೋಗಿ ಬರುತ್ತೇನೆ" ಎಂದು ಹೇಳುವಂತೆ ಕೈಮುಗಿದು ಪ್ರಣಾಮ ಮಾಡಿದರಂತೆ. ತಾನು ಕೈಗೊಂಡ ಕಾರ್ಯಗಳನ್ನೆಲ್ಲಾ ನಿರ್ವಹಿಸಿ ಸಂತೋಷದಿಂದ "ತನಗೆ ಹೋಗಲಿಕ್ಕೆ ಅಪ್ಪಣೆಕೊಡಿ" ಎಂದು ಹೇಳಿ ಹೊರಡುವ ಧೀರನಂತೆ ಅವರ ಮರಣವಾಯಿತು. ಈ ದೇಶವು ಮರುಗುತ್ತಿದೆ ನಿಜ. ಆದರೆ ಸಹಜವಾಗಿ ನೋಡಿದರೆ ನಾವು ಅವರ ಜೀವನಕ್ಕೆ ಅಸೂಯೆಪಡಬೇಕು. ಆರೀತಿಯ ಮರಣ ನಮಗೆ ದೊರಕಲಿ ಎಂದು ನಾವು ಹಾರೈಸಬೇಕು. ಅವರ ಗುಣಕಥನ ನಾನು ಇಲ್ಲಿ ಮಾಡುವುದಿಲ್ಲ. ಗಾಂಧಿಯವರ, ಜವಹರಲಾಲರ, ಪಟೇಲರ ಗುಣಕಥನ ಮಾಡಬೇಕಾದುದಿಲ್ಲ. ಅವರ ಜೀವನದಲ್ಲಿ ಅವರು ತೋರಿಸಿದ ಸಾಹಸ, ಅವರು ಸಾಧಿಸಿದ ಕಾರ್ಯ ಪ್ರತಿಯೊಬ್ಬ ಭಾರತೀಯನಿಗೂ ಗೊತ್ತಿದೆ.

ಪಟೇಲರು ಹೇಳಿದಂತೆ ಜವಹರಲಾಲರು ಹೊರುತ್ತಿರುವ ಹೊರೆ ಇನ್ನಷ್ಟು ಭಾರವಾಯಿತು. ಜವಹರಲಾಲರು ಇನ್ನೊಬ್ಬನನ್ನು ಆಧರಿಸಿಕೊಂಡಿರುವವರು, ಮಹಾಧೀರನಾದರೂ ಸಂದಿಗ್ಧಕಾಲಗಳಲ್ಲಿ ಹೇಗೆ ವರ್ತಿಸಬೇಕು ಎಂದು ಅವರು ಇನ್ನೊಬ್ಬನ ಕೂಡೆ ಕೇಳುತ್ತಿರುತ್ತಾರೆ. ಗಾಂಧೀಜಿಯವರಿರುವಾಗ ಅವರು ಗಾಂಧೀಜಿಯವರನ್ನು ಆಧರಿಸಿಕೊಂಡಿದ್ದರು. ತಾನು ರಥವನ್ನು ನಡೆಸಿಕೊಂಡು ಅರ್ಜುನನಿಂದ ಶ್ರೀ ಕೃಷ್ಣನು ಹೇಗೆ ಯುದ್ಧ ಮಾಡಿಸುತ್ತಿದ್ದನೋ ಹಾಗೆ ಗಾಂಧೀಜಿಯವರು ಜವಹರ್‌ಲಾಲರಿಗೆ ರಥಿಕರಾದ್ದರು. ಗಾಂಧೀಜಿಯವರು ತೀರಿಹೋದ ನಂತರ ಜವಹರಲಾಲರು ತಂದೆಸತ್ತ ಮಗನಂತೆ ಅತ್ತುಬಿಟ್ಟರು. ಅನಂತರ ತನ್ನ ದೊಡ್ಡಣ್ಣನಂತಿದ್ದ ಪಟೇಲರನ್ನು ಬಿಗಿಯಾಗಿ ಹಿಡಿದುಕೊಂಡಿದ್ದರು.

[illegible] ಹರಟೆ

(ಯು. ವಿ.)

ಪಟೇಲರು ಕೂಡಾ ಜವಹರಲಾಲರನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು ಮತ್ತು ಬಹಳ ಗೌರವದಿಂದ ಕಾಣುತ್ತಿದ್ದರು. ಕಳೆದವರ್ಷ ಕಲ್ಕತ್ತೆಯಲ್ಲಿ ಮಾತನಾಡುತ್ತಾ ಪಟೇಲರು ಹೇಳಿದ್ದರು "ರಾತ್ರಿಯಲ್ಲಿ ಬೆಳಕು ಕೊಡುವವ ಚಂದ್ರ; ನಕ್ಷತ್ರಗಳಲ್ಲ. ನಾವೆಲ್ಲರೂ ನಕ್ಷತ್ರಗಳು. ಜವಹರ್‌ಲಾಲ ಚಂದ್ರ. ನಾವು ಅವನ ಪ್ರಭೆಯಿಂದಲೇ ಕಾಣಿಸಿಕೊಳ್ಳುತ್ತಿದ್ದೇವೆ" ಎಂದು. ಪಟೇಲರ ನಂತರ ಜವಹರಲಾಲರಿಗೆ ಹತ್ತಿರದ ಅಣ್ಣನೆಂದರೆ ರಾಜಾಜಿಯವರು. ಪಟೇಲರಷ್ಟು ಶಕ್ತಿ ಅವರಿಗೆ ಇದೆ ಎಂದು ನಾನು ಹೇಳಲಾರೆ. ಆದರೆ ಅವರಿಗೆ ಸಾಕಷ್ಟು ಯುಕ್ತಿ ಇದೆ. ಪ್ರಾಮಾಣಿಕತೆ ಇದೆ. ಸ್ಥೈರ್ಯವಿದೆ. ಪಟೇಲರ ಸ್ಥಾನದಲ್ಲಿ ಕೆಲಸ ಮಾಡಲು ಇನ್ನು ರಾಜಾಜಿಗಳಲ್ಲದೆ ಮತ್ತಾರಿದ್ದಾರೆ?

ಆದರೆ ರಾಜಾಜಿಯವರಿಗೂ ಪ್ರಾಯ ಸಂದಿತು. ಪ್ರಾಣ ಇರುವ ತನಕವೂ ಹೋರಾಡಿರಿ ಎಂದು ನಾವು ಹೇಳುವುದು ಸರಿಯಲ್ಲ. 70 ವರ್ಷ ದಾಟಿದ ನಂತರವೂ ಅವರಿಗೆ ನಾವು ವಿಶ್ರಾಂತಿಕೊಡುವುದು ಬೇಡವೆ? ಮೊನ್ನೆ ಮುಂಬೈಯಲ್ಲಿ ಪಟೇಲರ ಸ್ಮಶಾನಕಾರ್ಯದ ವೇಳೆ ನಮ್ಮ ರಾಷ್ಟ್ರಪತಿ ಟಂಡನರು ಹೇಳಿದ ಮಾತನ್ನು ನಾವು ಮರೆಯಬಾರದು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಒಬ್ಬೊಬ್ಬರೆ ದೇಶವನ್ನು ಬಿಟ್ಟು ಹೋಗುತ್ತಿದ್ದಾರೆ. ಅವರ ಕಾರ್ಯವನ್ನು ಯುವಕರು ವಹಿಸಿಕೊಂಡು ನಿರ್ವಹಿಸಿಕೊಳ್ಳಲು ಸಿದ್ಧರಾಗಿರಬೇಕೆಂದು ಅವರು ಹೇಳಿದರು. ಗಾಂಧೀಜಿಯವರು ಒಬ್ಬ ಮಹಾ ಪುರುಷ; ಏಕೆಂದರೆ ಸತ್ಯಾಗ್ರಹವೆಂಬ ಒಂದು ದೊಡ್ಡ ಆಯುಧವನ್ನು ನಮ್ಮ ದೇಶಕ್ಕೆ ತೋರಿಸಿಕೊಟ್ಟವರು ಅವರು. ಆ ಆಯುಧವನ್ನು ನಿರ್ಭೀತಿಯಿಂದ ಉಪಯೋಗಿಸಿ ಅದರ ಮಹತ್ವವನ್ನು ಕಾರ್ಯತಃ ಜನರಿಗೆ ತೋರಿಸಿಕೊಟ್ಟ ಮಹಾಪರಾಕ್ರಮಿ ಪಟೇಲರು. ಆಯುಧವನ್ನು ಉಪಯೋಗಿಸುವ ಯೋಧರಿಲ್ಲದಿದ್ದರೆ ಅದನ್ನು ಸೃಷ್ಟಿಸಿದ ಯೋಗಿ ಏನು ಮಾಡಬಹುದು? ಬಾರ್ಡೋಲಿಯಲ್ಲಿ ಸತ್ಯಾಗ್ರಹದ ಆಯುಧವನ್ನು ಬಹಳ ದಕ್ಷತೆಯಿಂದ ಉಪಯೋಗಿಸಿ ಗೆದ್ದು ಬಂದವರೇ ಪಟೇಲರು. 'ಸರದಾರ'ರಾದರು. ಅವರ ಧೈರ್ಯ, ಸ್ಥೈರ್ಯ, ಕಾರ್ಯದಕ್ಷತೆ ಮುಂತಾದ ಗುಣಗಳನ್ನು ಭಾರತವು ಎಂದೂ ಮರೆಯಲಾರದು.

ಈ ವರ್ಷ ನಮ್ಮ ದೇಶದಿಂದ ಅಗಲಿದ ಇಬ್ಬರು ಮಹಾ ಪುರುಷರು ಯಾರೆಂದರೆ ರಮಣ ಮಹರ್ಷಿಗಳು ಮತ್ತು ಅರವಿಂದ ಘೋಷರು. ಇವರಿಬ್ಬರೂ ರಾಜಕೀಯ ರಂಗದಲ್ಲಿ ಸೇರಿ ಕಾದಾಡಿದವರಲ್ಲವಾದ್ದರೂ ಜನರ ಜೀವನವನ್ನು ಉತ್ತಮ ತರಗತಿಗೆ ತರಲಿಕ್ಕಾಗಿ ಸಾಧಿಸಿದವರು. ಈ ಮಹಾ ಪುರುಷರ ಜೀವನವನ್ನು ನಾವು ಓದಬೇಕು, ತಿಳಿದುಕೊಳ್ಳಬೇಕು. ಸಾಧ್ಯವಿದ್ದಷ್ಟು ಮಟ್ಟಿಗೆ ಅನುಸರಿಸಬೇಕು. ಶ್ರೀಮಾನ್ ಪತ್ರಿಕೆಗಳನ್ನು ಓದಿಕೊಂಡಿರುವವರಿಗೆ ಈ ವಿಷಯಗಳೆಲ್ಲಾ ಗೊತ್ತಿವೆ. ಅದಕ್ಕಾಗಿ ನಾನು ಪತ್ರಿಕೆಗಳನ್ನು ನೀವು ಯಾವಾಗಲೂ ಓದುತ್ತಿರಬೇಕು ಎಂದು ಹೇಳುತ್ತೇನೆ. ಕ್ರಮವಾಗಿ ಎಡೆಬಿಡದೆ ಓದುತ್ತಿರಬೇಕಲ್ಲದೆ ಎಲ್ಲಾದರೊಂದು ದಿನ ಆಕಸ್ಮಾತ್ತಾಗಿ ಸಿಕ್ಕಿದ ಪತ್ರಿಕೆಯನ್ನು ಓದಿ ಪ್ರಯೋಜನವಿಲ್ಲ. ದೇಶ ವಿದೇಶಗಳಲ್ಲಿ ನಡೆಯುತ್ತಿರುವ ಮಹಾ ಕಾರ್ಯಗಳನ್ನು ಅರಿಯದವನೊಬ್ಬನು ಯಾವುದಾದರೊಂದು ವಿದ್ಯೆಯಲ್ಲಿ ತಾನು ಮಹಾ ಪಂಡಿತನೆಂದು ಹೇಳಿಕೊಂಡು ಪ್ರಯೋಜನವಿಲ್ಲ. ಅದರಿಂದ ಪ್ರಿಯ ವಾಚಕರೇ, ಎಡೆಬಿಡದೆ ನೀವು ಒಂದಲ್ಲ ಒಂದು ವರ್ತಮಾನ ಪತ್ರಿಕೆಯನ್ನು ತರಿಸಿಕೊಂಡು ಓದುತ್ತಿರಬೇಕು. ಇದಕ್ಕಾಗಿ ತೆರುವ ಹಣ ನಿಮಗೆ ನಷ್ಟವಲ್ಲ. ತಿಳಿಯಿತೇ. ಮುಂದಿನ ವಿಚಾರ ಬರುವ ಸಂಚಿಕೆಯಲ್ಲಿ. ನಮಸ್ಕಾರ,

ಪ್ರೀತಿಯರವಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊರಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಛೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮಧ್ಯಾಹ್ನ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ, ಗದಗ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಜಾಹೀರು ಪ್ರಕಟಣೆ

ಪಯ್ಯನಾಡು ತಾಲೂಕು, ಕೋಟೆಪದಿ(?) ಗ್ರಾಮ ತ್ರಿಕ್ಕೈಪತ್ತೆ ಎಂಬಲ್ಲಿರುವ ನೈಲಾಡಿ ಸುಬ್ರಾಯಭಟ್ಟರ ಮಗ ವೆಂಕಟೇಶ ಭಟ್ಟನು ಸರ್ವಜನರಿಗೂ ಜಾಹೀರು ಮುಖೇನ ತಿಳಿಸುವುದೇನೆಂದರೆ ನಾನು ನನ್ನ ಹೆಂಡತಿ ತಂದೆ ಉಡ್ಪಿ ತಾಲೂಕು ಕೊಡವೂರು ಗ್ರಾಮದಲ್ಲಿರುವ ಕುದ್ರು ಮಂಜುನಾಥ ಭಟ್ಟರ ಮಗ ರಾಮಕೃಷ್ಣ ಭಟ್ಟರ ಹತ್ತಿರ ಊರಿನಲ್ಲಿ ಆಸ್ತಿ ತೆಗೆದುಕೊಳ್ಳಬೇಕು ಎಂತ 1942ನೆ ಇಸವಿಯಲ್ಲಿ ಹಣವನ್ನು ಕೊಟ್ಟಿರುತ್ತೇನೆ. ಅದಕ್ಕೆ ಅವರು ತಾ. 16-2-1945ರಲ್ಲಿ ಮೂಡುತೋನ್ಸೆ ಗ್ರಾಮದಲ್ಲಿ ಈ ಕೆಳಗೆ ಕಾಣಿಸಿರುವ ಆಸ್ತಿಗಳನ್ನು ತೆಗೆದುಕೊಂಡಿದ್ದಾರೆ. ಅದು ಹೇಗೆಂದರೆ ನನ್ನ ಒಪ್ಪಿಗೆಯೂ ಇಲ್ಲದೆ ಅವರ ಸ್ವಬುದ್ಧಿಯಿಂದ ಆ ಆಸ್ತಿಗೆ ಒಂದನೇ ಪಕ್ಷನ್ನು ಅವರ ಹೆಸರಿಗೆ ಸೇರಿಸಿ ಕ್ರಯಕ್ಕೆ ಪಡಕೊಂಡಿದ್ದಾರೆ. ಆ ಮೇಲೆ ನನಗೆ ತಿಳಿದು ಅವರ ಹತ್ತಿರ ಹೀಗೆ ಮಾಡಿರುವುದು ಯಾಕೆ ಎಂತ ಕೇಳಿದರೆ ಸದ್ರಿ ಆಸ್ತಿಯ ಸಂಬಂಧವಾಗಿ ಕೆಲವು ವ್ಯವಹಾರ ಉಂಟು. ಅದು ತೀರ್ಮಾನವಾದ ನಂತರ ನಾನು ನಿನಗೆ ಆಸ್ತಿಯ ಸಂಪೂರ್ಣ ಹಕ್ಕನ್ನು ಬಿಟ್ಟುಕೊಡುತ್ತೇನೆ ಎಂತ ಹೇಳಿದರು. ಅದಕ್ಕೆ ನಾನು ವಿಶ್ವಾಸವಿಟ್ಟು ನಂಬಿ, ಸುಮ್ಮನೆ ಇರುವವರೆಗೆ ಈಗ ವ್ಯವಹಾರ ತೀರ್ಮಾನವಾಗಿ ಆಸ್ತಿ ಸ್ವಾಧೀನ ಸಿಕ್ಕಿತು. ಸ್ವಾಧೀನ ಸಿಕ್ಕಿದ ನಂತರ ನಾನು ಹೋಗಿ ಸದ್ರಿಯವರ ಹತ್ತಿರ ಸದ್ರಿ ಆಸ್ತಿಯ ನಿಮ್ಮ ಒಂದನೇ ಪಕ್ಷನ್ನು ಬಿಟ್ಟುಕೊಡಿ; ಇನ್ನು ನಾನು ನೋಡಿಕೊಳ್ಳುತ್ತೇನೆ ಎಂತ ಕೇಳಿದ್ದಕ್ಕೆ ನೀನು ಹೋಗು ನಾನು ಕೂಡಲೇ ಸದ್ರಿ ಆಸ್ತಿಯ ನನ್ನ ಒಂದನೇ ಪಕ್ಷನ್ನು ರಿಲೀಜ ಮಾಡಿ ಕಳುಹಿಸಿಕೊಡುತ್ತೇನೆ ಎಂತ ಹೇಳಿದರು. ಅದಕ್ಕಾಗಿ ಆಗಬಹುದು ಎಂತ ಹೊರಟು ಬಂದೆ. ಈಗ ಒಂದು ವರುಷ ಆಗುತ್ತಾ ಬಂತು. ಈ ವರೆಗೂ ಯಾವ ವಿಲೇವಾರು ಇಲ್ಲ. ರಿಜಿಸ್ಟ್ರಿ ಪತ್ರ ಹಾಕಿದರೆ ಅದಕ್ಕೆ ಅವರ ಉತ್ತರವೇ ಇಲ್ಲ. ಅದಕ್ಕಾಗಿ ಇನ್ನು ಮೇಲೆ ನನ್ನ ಹೆಸರ ಸದ್ರಿ ಆಸ್ತಿ ಸಂಬಂಧವಾಗಿ ಅವರು ಸದ್ರಿ ಆಸ್ತಿಯನ್ನು ಅಡವೋ ಕ್ರಯವೋ, ಮತ್ತೆ ಯಾವ ತರದಿಂದಲೂ ಪರಾಧೀನ ಮಾಡಲಿಕ್ಕೆ, ಸದ್ರಿ ಮಂದಿಗೆ ಸ್ವತಂತ್ರ ಅನುಭವಿಸಲಿಕ್ಕೆ ಅಧಿಕಾರ ಇಲ್ಲ. ಹಾಗೆ ಈ ... ಇದರ ಸಂಬಂಧ ಮಾಡಿದ ... ಅನಗತ್ಯವಲ್ಲ. ಸದ್ರಿ ಆಸ್ತಿ ಸಂಬಂಧದಲ್ಲಿ ಸದ್ರಿಯವರಿಗೆ ಯಾವ ತರದ ಹಕ್ಕು ಇಲ್ಲ. ಎಲ್ಲಾ ಹಕ್ಕು ನನ್ನದಾಗಿರುತ್ತದೆ. ಒಕ್ಕಲಿಗರ ಸಾಧನ ಇರುವ ಭೂಮಿಯ ಗೇಣಿಯನ್ನು ನನ್ನ ಹೆಸರ ಸದ್ರಿಯವರಿಗೆ ಕೊಡತಕ್ಕದ್ದಲ್ಲ. ಹಾಗೆ ಕೊಟ್ಟರೂ ನೀವು ನನಗೆ ಜವಾಬ್ದಾರರಾಗಬೇಕಾದೀತು. ನಮ್ಮ ನಮ್ಮ ಒಳಗಿನ ಜಗ್ಗಳವು ತೀರ್ಮಾನವಾಗುವ ತನಕ ಮೇಲೆ ಕಾಣಿಸಿದ ರೀತಿಯಲ್ಲಿ ಎಲ್ಲವರು ತಿಳಿದು ಇರತಕ್ಕದ್ದು ಎಂತ ತಿಳಿಸಿದ ಜಾಹೀರು ಪ್ರಕಟಣೆ.

ಮೂಡುತೋನ್ಸೆ ಗ್ರಾಮದಲ್ಲಿರುವ ಸದ್ರಿ ಆಸ್ತಿಯ ವಿವರ

		ಎ. ಸೆ.
1	ನಂಜ	2-42
2	ಬಾಗಾಯ್ತು	0-50
3	ನಂಜ	1-48
4A	ಬಾಗಾಯ್ತು	2-60
5	ಬಾಗಾಯ್ತು	0-48
6	- ಡಿ	0-10
7	- ಡಿ -	0-12
8	- ಡಿ -	0-12
1	ಬಾಗಾಯ್ತು	1-59
2	ಪುಂಜ	0- 4
3	ಬಾಗಾಯ್ತು	0- 4
4	- ಡಿ -	1 17

ಈ ಆಸ್ತಿಗಳು ಆಗಿರುತ್ತವೆ

ಎನ್. ವೆಂಕಟೇಶಭಟ್ಟನ ರುಜು.

7—12—1950

ವಾರಭವಿಷ್ಯ

ತಾರೀಕು 28-12-50 ರಿಂದ ಶ್ರೀ ತಾರೀಕು 3-1-51ರ ವರೆಗೆ.

ಮೇಷ—ಗ್ರಹಬಲವು ತೃಪ್ತಿಕರವಿರುವುದರಿಂದ ಈ ವಾರದಲ್ಲಿ ನಿಮ್ಮ ಕಾರ್ಯಗಳು ಯಶಸ್ವಿಯಾಗಿ ಕೊನೆಗಾಣುವವು. ಆರೋಗ್ಯಕ್ಕೆ ಯಾವ ಹಾನಿಯೂ ಸಂಭವಿಸದು. ನೌಕರಿ ವಾಣಿಜ್ಯ ವ್ಯವಹಾರಕ್ಷೇತ್ರಗಳಲ್ಲಿ ನಿರೀಕ್ಷೆಗಿಂತ ಅಧಿಕವಾದ ಫಲವು ಲಭಿಸುವದು. ಗೃಹಕಾಪತ್ರ್ಯಗಳಿಂದ ಮುಕ್ತರಾಗುವಿರಿ. ಆದರೂ ಕೆಲವೊಮ್ಮೆ ಆರ್ಥಿಕ ಸಂಬಂಧವಾದ ವ್ಯವಹಾರದಿಂದ ಕಲಹ ನಿಷ್ಠುರ ವ್ಯಸನಾದಿಗಳಿಗೆ ಗುರಿಯಾಗುವ ಸಂಭವವಿದೆ. ವಾರಾಂತ್ಯದ 4 ದಿನಗಳು ಸುಖಲಾಭದಾಯಕಗಳಿವೆ.

ವೃಷಭ—ಕಾರ್ಯಸಾಧನೆಗೆ ಬೇಕಾದ ಧೈರ್ಯ ಸಾಹಸಗಳು ನಿಮ್ಮಲ್ಲಿಲ್ಲದ ಕಾರಣ ಹಲವಾರು ನಿಮ್ಮ ಸಂಕಲ್ಪಗಳು ಮನಸ್ಸಿನಲ್ಲೇ ಉಳಿಯುವವು. ಮಿತ್ರ ಮಿತ್ರರಾಗಲೀ ಬಂಧುಬಾಂಧವರಾಗಲೀ ನಿಮ್ಮ ಸಹಾಯಕ್ಕೆ ಒದಗಲೊಲ್ಲರು, ವಿರೋಧಿಗಳಿಂದ ಪರಾಭವವುಂಟಾದೀತು ಮಾತ್ರವಲ್ಲ ದೇಹಾಲಸ್ಯದಿಂದ ನಿಶ್ಶಕ್ತಿ ಹೆಚ್ಚುವದು. ವ್ಯರ್ಥ ಖರ್ಚುಗಳಿಗೆ ಸಿಲುಕಿದ ನಿಮಗೆ ಪರರೊಡನೆ ಸಾಲಮಾಡಬೇಕಾಗಿ ಬರುವದು. ವಿದ್ಯೋಪಜೀವಿಗಳಿಗೂ ವಣಿಗ್ ಜನರಿಗೂ ಶ್ರಮಕ್ಕೆ ತಕ್ಕ ಫಲ ಲಭಿಸೀತು. ತಾ. 28, 2, 3 ಈ ದಿನಗಳಲ್ಲಿ ಕೆಲವೊಂದು ನಿಮ್ಮ ಮನೋರಥಗಳು ಸಫಲಗಳಾಗುವವು.

ಮಿಥುನ—ದ್ರವ್ಯವು ನಿಮ್ಮನ್ನು ಬಹುವಾಗಿ ಪೀಡಿಸುವದೀ ಕಾಲದಲ್ಲಿ ಆದರೂ ಭಾಗ್ಯಗತನಾದ ಗುರುವು ಪೂರ್ಣ ದೃಷ್ಟಿಯಿಂದ ನೋಡುತ್ತಿರುವುದರಿಂದ ಬಹುತೇಕ ವಿಪತ್ತುಗಳಿಂದ ನಿಮ್ಮನ್ನು ಪಾರುಮಾಡುವನು. ನಿಮ್ಮ ಮನೆಯವರೇ ನಿಮಗೆ ಪ್ರತಿಕೂಲರಾಗುವರು. ಉದ್ಯೋಗದಲ್ಲಿ ಉಳಿತಾಯವು ಕಾಣಿಸಲೊಲ್ಲದು. ಶತ್ರು ಜನರ ಉಪಟಳವು ದಿನೇ ದಿನೇ ಹೆಚ್ಚಲಿದೆ. ವಿಜಾತೀಯರೊಡನೆ ಕಲಹವಾಗುವದು. ಮಾತ್ರವಲ್ಲ ದೇಹಪ್ರಕೃತಿಯೂ ಕೂಡ ಕೆಡಲಿದೆ. ಈ ದುಃಖಪರಂಪರೆಗಳ ನಡುವೆ ತಾ. 29, 30ರಲ್ಲಿ ಕೊಂಚ ಇಷ್ಟಪ್ರಾಪ್ತಿಗವಕಾಶವಿದೆ.

ಕರ್ಕಟ—ಎಷ್ಟೊಂದು ಜಾಗರೂಕತೆಯಿಂದಿದ್ದರೂ ಈ ವಾರದಲ್ಲಿ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಕಷ್ಟವಾಗುವದು. ಪಿತ್ಥಕಫದೋಷವು ಅಧಿಕವಾಗುವದು ಆದರೂ ಕರ್ಮಠರಾದ ನೀವು ಕೈಕೊಂಡ ಕಾರ್ಯಗಳಲ್ಲಿ ವಿಜಯವನ್ನು ಸಂಪಾದಿಸುವಿರಿ. ಪ್ರಬಲರಾದ ಶತ್ರುಗಳನ್ನು ಇದಿರಿಸುವ ಧೈರ್ಯಸಾಹಸಗಳು ನಿಮಗೆ ಲಭಿಸಲಿವೆ. ವಿದ್ಯೋಪಜೀವಿಗಳಿಗೂ ವೈದ್ಯ ಜನರಿಗೂ ಸೇವಕವರ್ಗದವರಿಗೂ ಈ ವಾರವು ಅನುಕೂಲವಾಗಿಯೇ ಪರಿಣಮಿಸಲಿದೆ. ತಾ 28, 31, 1 ಈ ದಿನಗಳು ಭೋಗಲಾಭ ವಿಜಯದಾಯಿಗಳಿವೆ.

ಸಿಂಹ—ಅಸಹಾಯಶೂರರಾದ ನಿಮಗೆ ಪ್ರತಿಯೊಂದು ಉದ್ಯಮದಲ್ಲೂ ವಿಜಯವು ಕಟ್ಟಿಟ್ಟ ಗಂಟಿನಂತಿರುವದು. ಎಂತಹ ಕಷ್ಟಸಾಧ್ಯವಾದ ಕಾರ್ಯವಾದರೂ ನಿಮ್ಮ ಭಾಗಕ್ಕೆ ತೃಣಸಮವೆನಿಸುವದು. ಒಳ್ಳೇ ವಾಕ್ಪಟುಗಳಾದ ನಿಮಗೆ ಜನಬಲವು ಸಾಕಷ್ಟು ಲಭಿಸುವದು. ಆಪ್ತೇಷ್ಟರ ಸಹಕಾರವೂ ಉತ್ತಮವಾಗಿರುವದು. ಆದರೂ ಗೃಹಕೃತ್ಯದ ವಿಚಾರದಲ್ಲಿ ಅವ್ಯವಸ್ಥೆಗಳು ಹೆಚ್ಚುವದರಿಂದ ಮನೋನೆಮ್ಮದಿಗೆ ಭಂಗವುಂಟಾದೀತು ತಾ. 29, 30, 2, 3 ಈ ದಿನಗಳು ವಿಜಯಲಾಭ ಸುಖದಾಯಿಗಳಾಗಿವೆ.

ಕನ್ಯಾ—ನಿಮ್ಮ ಶ್ರಮಕ್ಕೆ ತಕ್ಕ ಫಲ ಲಭಿಸುವದಾದರೂ ಖರ್ಚು ಅತಿಯಾಗುವದರಿಂದ ಹಣದ ಬಿಕ್ಕಟ್ಟಿಗೆ ಸಿಲುಕುವಿರಿ ಆರೋಗ್ಯವು ಸಾಕಷ್ಟು ತೃಪ್ತಿಕರವಿದ್ದರೂ ಮನೋರೋಗವು ದಿನೇದಿನೇ ಪ್ರಬಲವಾಗುತ್ತಾ ಬರಲಿರುವದು. ಹೆಂಡತಿ ಮಕ್ಕಳ ವಿರಹ ಆಪ್ತೇಷ್ಟರ ವಿಯೋಗ ದುಃಖಕ್ಕೆ ಗುರಿಯಾಗಲಿರುವಿರಿ. ರಾಜಕೀಯ ಕ್ಷೇತ್ರದಲ್ಲೂ ಸಾಮಾಜಿಕ ರಂಗದಲ್ಲೂ ಪರಾಜಯ ಹೊಂದುವಿರಿ. ಆದರೂ ಮಿತ್ರ ಜನರ ಬಂಧುವರ್ಗದವರ ಸಹಕಾರವುಳ್ಳ ನೀವು ತಾ 28, 31, 1 ಈ ದಿನಗಳನ್ನು ಸುಖದಿಂದ ಕಳೆವಿರಿ.

ತುಲಾ—ಇಷ್ಟಾನಿಷ್ಟ ಗ್ರಹದಲ್ಲಿ ಬಲ ಸಾಮ್ಯವಿರುವುದರಿಂದ ನಿಮಗೀ ವಾರದಲ್ಲಿ ಸುಖದುಃಖ ಲಾಭನಷ್ಟಗಳು ಸಮತೂಕದಲ್ಲಿ ನಿಲ್ಲಲಿವೆ. ದುರ್ಜನರ ಸಂಸರ್ಗದಿಂದ ಜನಾಪವಾದಕ್ಕೂ ನಷ್ಟಕ್ಕೂ ಗುರಿಯಾದೀರಿ. ಉದರ ಶೂಲೆಯು ನಿಮ್ಮನ್ನು ಆಗಾಗ ಪೀಡಿಸಲಿದೆ. ಪರಿಚಾರಭೃತ್ಯಾದಿ ಗೃಹಪರಿವಾರವು ಪರಿಪೂರ್ಣವಾಗಿರುವುದರಿಂದ ಸಾಂಸಾರಿಕ ತಾಪತ್ರಯದಿಂದ ಮುಕ್ತರಾಗಿ ಸುಖದಿಂದ ಕಾಲ ಕಳೆವಿರಿ. ಆರ್ಥಿಕ ಭಾಗದಲ್ಲಿ ಸುಧಾರಣೆ ಹೊಂದುವಿರಿ. ತಾ. 31 ಮತ್ತು 1 ಈ ದಿನಗಳಲ್ಲಿ ಅತಿವ್ಯಯ ಆಲಸ್ಯಗಳು ಕಾಣಿಸಿಕೊಳ್ಳುವವು

ವೃಶ್ಚಿಕ—ಸುರಗುರುವು ಪ್ರತಿಕೂಲನಾದರೂ ಇತರ ಗ್ರಹಬಲವು ಉತ್ತಮವಿರುವುದರಿಂದ ಈ ವಾರದಲ್ಲಿ ನಿಮ್ಮ ಮನಸ್ಸಂಕಲ್ಪಗಳು ಸಫಲವಾಗುವುದರಲ್ಲಿ ಸಂದೇಹವಿಲ್ಲವು. "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಲೋಕೋಕ್ತಿಯಂತೆ ಕಾರ್ಯದಲ್ಲಿ ಪ್ರವೃತ್ತರಾಗಿರಿ. ಆವ ತೆರನಾದ ವಿಘ್ನಗಳೂ ನಿಮ್ಮನ್ನು ಬಾಧಿಸಲಾರವು. ನಿಮ್ಮ ಸಂಪದ್ಭಾಗವು ಉತ್ತಮ ಸ್ಥಿತಿಗೆ ಬರಲಿರುವದು. ದೇಹ ಮನಸ್ಸುಗಳಿಗೆ ಸುಖಶಾಂತಿಗಳು ಲಭಿಸುವವು. ತಾ. 29, 30, 31, 1, ಈ ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖಲಾಭ ಸಂತೋಷಗಳಿವೆ.

ಧನು—ಗುರುವಿನಲ್ಲಿ ಬೊಕ್ಕೆ ಎದ್ದಂತೆ ಆಪತ್ತುಗಳ ಮೇಲೆ ವಿಪತ್ತುಗಳು ಬರುವವು. ಒಂದೆಡೆ ಗೃಹ ತಾಪತ್ರಯಗಳು ಪೀಡಿಸುತ್ತಿರುವಲ್ಲಿ ಇನ್ನೊಂದೆಡೆ ಅಧಿವ್ಯಾಧಿಗಳು ತಲೆಎತ್ತಿದಂತೆ ನಾಡಲಿವೆ. ಜನಾಪವಾದಕ್ಕೆ ಸಿಲುಕುವ ಸಂಭವವಿದೆ. ದುಃಖಶೋಕಾದಿಗಳಿಂದ ಪೀಡಿತರಾದ ನಿಮ್ಮ ಚಿತ್ತವು ಗಾಳಿಗೆದುರಾಗಿಟ್ಟ ದೀಪದಂತೆ ಅತೀವ ಚಂಚಲವಾದೀತು. ಸಂಕಲ್ಪಕ್ಕಿಂತ ಮುಂಚಿತವಾಗಿ ವಿಘ್ನಗಳುಪಸ್ಥಿತವಾಗುವವು. ಆದರೂ ವಾರಾಂತ್ಯದ 4 ದಿನಗಳು ಮೇಲೆ ಹೇಳಿದಷ್ಟು ಕಷ್ಟದಾಯಕಗಳಾಗಲಾರವು.

ಮಕರ—ನಿಮ್ಮ ದ್ವಿದ್ವಾದಶಗಳಲ್ಲಿ ಕುಳಿತ ಗುರುಶುಕ್ರರು ಹೊರತಾಗಿ ಇತರ ಗ್ರಹರೆಲ್ಲರೂ ಪ್ರತಿಕೂಲರಾಗಿರುವರು. ಆದಕಾರಣ ಈ ವಾರದಲ್ಲಿ ನಿಮಗೆ ಜನತೆಯೊಡನೆ ವಿನಾ ಕಾರಣ ಕಲಹ ವೈರಗಳುಂಟಾಗುವವು. ಪ್ರಯಾಣದಲ್ಲಿ ಅನಿಷ್ಟಗಳು ಪ್ರಾಪ್ತವಾಗಲಿವೆ ಆರೋಗ್ಯವೂ ಸರಿಯಿರಲೊಲ್ಲದು. ಉದ್ಯೋಗದಲ್ಲಿ ಫಲಪ್ರಾಪ್ತಿಯು ತೃಪ್ತಿಕರವಿದ್ದುದರಿಂದ ಅನುದಿನದ ಖರ್ಚಿಗಾಗಿ ಚಿಂತಿಸಬೇಕಾಗಿಲ್ಲ. ಗೃಹತಾಪತ್ರಯಗಳು ಕಡಿಮೆಯಾಗುವವು. ತಾ. 28, 2, 3, ಈ ದಿನಗಳಲ್ಲಿ ಧನಲಾಭ ವಿಜಯಭೋಗಗಳು ಲಭಿಸುವವು.

ಕುಂಭ—ಆರ್ಥಿಕ ಭಾಗವು ಅತೃಪ್ತಿಕರವಿರುವುದು ಸನ್ಮಿತ್ರರ ಬೆಂಬಲದಿಂದ ಬಹ್ವಂಶ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಸ್ತ್ರೀಸಂಭೋಗಕ್ಕೇನೂ ಕಡಿಮೆಯಾಗದು. ಆದರೆ ಆಕಸ್ಮಿಕ ಪ್ರಯಾಣ ಅನಿರೀಕ್ಷಿತವಾದ ಖರ್ಚುವೆಚ್ಚಗಳು ಸ್ಥಾನ ಚಲನೆ ವಾತಸಂಬಂಧವಾದ ದೇಹಾಲಸ್ಯಗಳು ಆಗಾಗ ಪ್ರಾಪ್ತವಾಗಲಿವೆ. ಸ್ತ್ರೀಯರೊಡನೆ ವಿನಾ ಕಾರಣ ಕಲಹಗಳುಂಟಾದಾವು, ವಾರಾದಿಯ 3 ದಿನಗಳಲ್ಲಿ ಧನಪ್ರಾಪ್ತಿ ಗೃಹಸುಖ ವಿಜಯಾದಿ ಇಷ್ಟಗಳನ್ನೇ ಪಡೆವಿರಿ.

ಮೀನ—ಉದ್ಯಮಶೀಲರಾದ ನಿಮಗೆ ನಿಮ್ಮ ಪ್ರಯತ್ನಕ್ಕಿಂತಲೂ ಮಿಗಿಲಾದ ಲಾಭವು ಲಭಿಸುವದು. ಉಚ್ಚಗತ ಅಂಗಾರಕನು ನಿಮ್ಮ ಆರ್ಥಿಕ ಸಂಪತ್ತನ್ನು ವೃದ್ಧಿಗೊಳಿಸಲಿರುವನು. ವ್ಯವಹಾರ ಕ್ಷೇತ್ರದಲ್ಲಿ ಯಾವೊಂದು ಎಡರುತೊಡರುಗಳಿಲ್ಲದೆ ನಿರಾತಂಕವಾಗಿ ಮುಂದುವರಿವಿರಿ. ಆದರೂ ಎಷ್ಟೇ ಹಿತಮಿತಭಾಷಿಗಳಾಗಿದ್ದರೂ ನಿಮ್ಮ ಭಾಗಕ್ಕೆ ಕಲಹವು ಅನಿವಾರ್ಯವಿದೆ. ದೇಹಾಲಸ್ಯ ಮನೋರೋಗಗಳೂ ಕೆಲವೊಮ್ಮೆ ಕಾಣಿಸಿಕೊಂಡಾವು. ತಾ. 29, 30, 31, 1 ಈ 4 ದಿನಗಳು ಸುಖಲಾಭಕಾರಿಗಳಿವೆ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೨ ಆಣೆ.

ಮಾಲಕರು:—ಚಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಬಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ಬಿಜಾಪುರ—
ಮುನವಳ್ಳಿ ಸಿದ್ಧಲಿಂಗಪ್ಪ ಧಾರವಾಡಕರ ಬಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ [illegible] [illegible] [illegible], [illegible], [illegible] ಬ್ಯಾಡಗಿ

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೊಡ್ಲಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಖಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಖಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರ ಸಾಮಾನ್ಯ ಎಲ್ಲಾ ಖಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು, ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

ನಿಮಗೆ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಕೊಡ್ಲಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ. ಪಿ ದ್ವಾರ ರೂ 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್ ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.